# KARNATAKA-KAVI-CHARITE

# ಕರ್ಣಾಟಕ ಕವಿಚರಿತೆ

---

## VOLUME I

(To the end of the 14th Century)

ಪ್ರಥಮ ಸಂಪುಟ

(14 ನೆಯ ಶತವಾನದ ಕೊನೆಯವರೆಗೆ)


BY

Praktana Vimarsa Vichakshana, Rao Bahadur

**R. Narasimhacharya,** M.A., M.R.A.S.

*Honorary Correspondent of the Government of India*

*Archaeological Department*

*Late Director of Archaeological Researches in Mysore*

*Author of*

*Karnataka-Kavi-Charite, Volumes II and III, Nitimanjari*

*Parts I and II, Sasana Padya Manjari, Nagegadalu, &c.*

Revised Edition

ತಿದ್ದಿದ ಮುದ್ರಣ

**Bangalore:**

PRINTED AT THE BANGALORE PRESS

1924



*Copyright Registered.*]


[*Price Rs. 4*

# CONTENTS.

## I. ವಿಷಯಸೂಚಿಕೆ.

### I. Alphabetical List of Poets.

### ಈ ಸಂಪುಟದಲ್ಲಿ ಹೇಳಿರುವ ಕರ್ಣಾಟಕ ಕವಿಗಳ ವರ್ಣಾನುಕ್ರಮವಾದ ಹೆಸರುಗಳು.

* ಈ ಗುರುತಿರುವ ಕವಿಗಳು ಶಾಸನಗಳನ್ನು ಬರೆದಿದ್ದಾರೆ.


| ಹೆಸರು | | ಕಾಲ | ಪುಟ |
|---|---|---|---|
| ಅಂಬಿಗರ ಚೌಡಯ್ಯ | ಸು. | 1160 | 191 |
| ಅಗ್ಗಳ | | 1189 | 284 |
| * ಅಚರಾಜ | | 1104 | 116 |
| ಅಜಗಣ್ಣ | ಸು. | 1160 | 193 |
| ಅತಿರಸಿಕ ಕರ್ಣಾಭರಣ ಬುಧವರ | ಸು. | 1165 | 250 |
| ಅಭಿನವಚಂದ್ರ | ಸು. | 1400 | 444 |
| ಅಭಿನವಪಂಪ | ಸು. | 1100 | 100 |
| ಅಭಿನವಮಂಗರಾಜ | | 1398 | 438 |
| ಅಭಿನವಶ್ರುತಮುನಿ | ಸು. | 1365 | 422 |
| ಅಮುಗಿದೇವಯ್ಯ | ಸು. | 1160 | 194 |
| ಅಮೃತನಂದಿ | ಸು. | 1300 | 408 |
| ಅರಿವಿನ ಮಾರಿತಂದೆ | ಸು. | 1160 | 206 |
| ಅರ್ಹದ್ದಾಸ | ಸು. | 1300 | 400 |
| ಅವಸರದ ಕೇರಣ್ಣ | ಸು. | 1160 | 208 |
| ಅಷ್ಟಭಾಷಾ ಕವೀಶ್ವರ ಶಿವದಾಸ | ಸು. | 1165 | 252 |
| ಆಸಗ | ಸು. | 945 | 39 |
| ಆಂಡಯ್ಯ | ಸು. | 1235 | 366 |
| ಆಚಣ್ಣ | ಸು. | 1195 | 299 |
| ಆದಯ್ಯ | ಸು. | 1150 | 203 |
| ಆದಿಪಂಪ | | 941 | 30 |
| ಆಯತವರ್ಮ | ಸು. | 1400 | 440 |
| ಆಯ್ದುಕ್ಕಿಯ ಮಾರಯ್ಯ | ಸು. | 1160 | 191 |
| ಆರ್ಯಸೇನ | ಸು. | 1331 | 409 |
| ಇತರ ವಚನಕಾರರು | | | 201 |
| * ಈಶ್ವರಾರ್ಯ | | 1275 | 396 |
| ಉದಯ | | | 11 |
| ಉದಯಾದಿತ್ಯ | ಸು. | 1150 | 159 |
| ಉದ್ಭಟ | | | 223 |
| ಉರಿಲಿಂಗದೇವ | ಸು. | 1170 | 265 |
| ಉರಿಲಿಂಗ ಪೆದ್ದಿ | ಸು. | 1180 | 275 |
| ಏಕೋರಾಮಿ ತಂದೆ | | | 215 |
| ಏಚಮ | | 1041 | 74 |
| ಏಲೇಶ್ವರದ ಕೇತಯ್ಯ | ಸು. | 1150 | 203 |
| ಕಂತಿ | ಸು. | 1100 | 110 |
| ಕನಕಚಂದ್ರ | ಸು. | 1300 | 408 |
| * ಕಪ್ಪಣಭಟ್ಟ | | 1032 | 74 |
| ಕಮಲಭವ | ಸು. | 1235 | 361 |
| * ಕಮಳಾದಿತ್ಯ | | 978 | 50 |
| ಕರ್ಣಪಾರ್ಯ | ಸು. | 1140 | 139 |
| * ಕರ್ಪರಸ | | 1084 | 96 |

| ಹೆಸರು | | ಕಾಲ | ಪುಟ |
|---|---|---|---|
| * ಕಲ್ಲಯ್ಯ | | 1206 | 328 |
| ಕಲ್ಯಾಣದ ವಚನ ಭಂಡಾರಿ ಶಾಂತರಸ | ಸು. | 1160 | 207 |
| ಕಲಿದೇವಯ್ಯ | ಸು. | 1160 | 194 |
| ಕವಿಕಾಮ | ಸು. | 1200 | 305 |
| ಕವಿಕಾಳಿದಾಸ | | 1147 | 157 |
| ಕವಿತಾವಿಲಾಸ | ಸು. | 1100 | 113 |
| * ಕವಿನಾಗದೇವ | | 1224 | 345 |
| ಕವಿಪರಮೇಷ್ಠಿ | ಸು | 550 | 4 |
| ಕವಿಪುಟ್ಟಣಾಂಕ ಪಂಡಿತ | ಸು. | 1380 | 426 |
| * ಕವಿಮಲ್ಲ | | 1057 | 78 |
| ಕವಿಮಲ್ಲ | ಸು. | 1400 | 443 |
| * ಕವಿರಾಜ ರಾಜ | | 930 | 29 |
| * ಕವಿರಾಜ ಸಂಕಣ್ಣ | | 1287 | 399 |
| ಕವಿರಾಮ | ಸು. | 1170 | 198 |
| ಕವಿವ್ಯಾಸ | ಸು. | 900 | 26 |
| ಕವೀಶ್ವರ | | | 14 |
| ಕಾಳವ್ವೆ | ಸು. | 1160 | 196 |
| ಕೀರ್ತಿವರ್ಮ | ಸು. | 1125 | 129 |
| * ಕುಪ್ಪಟೂರ ಚಿಮ್ಮರ ವಾಸುದೇವ | | 1189 | 288 |
| ಕುಮಾರ ಪದ್ಮರಸ | ಸು. | 1180 | 277 |
| ಕುಮುದೇಂದು | ಸು. | 1275 | 392 |
| ಕೆರೆಯಪದ್ಮರಸ | ಸು. | 1165 | 245 |
| ಕೆರೆಯ ಪದ್ಮರಸನನ್ನು ಸ್ತುತಿಸಿದ ಕನ್ನಡ ಕವಿಗಳು | | | 250 |
| ಕೇಶವದೇವ | | 1189 | 288 |
| ಕೇಶವರಾಜ | ಸು. | 1180 | 268 |
| ಕೇಶವರಾಜ ಚಮೂಪ | ಸು. | 1195 | 297 |
| ಕೇಶವವರ್ಣಿ | | 1359 | 415 |
| ಕೇಶಿದಂಡನಾಯಕ | ಸು. | 990 | 62 |
| ಕೇಶಿಯಣ್ಣ | ಸು. | 1200 | 319 |
| ಕೇಶಿರಾಜ | ಸು. | 1260 | 385 |
| ಕೊಂಡಗೂಳಿ ಕೇಶಿರಾಜ | ಸು. | 1160 | 185 |
| ಕೋಲಶಾಂತಯ್ಯ | ಸು. | 1160 | 192 |
| ಗಜಾಂಕುಶ | ಸು. | 1000 | 72 |
| ಗಜೇಶ ಮಸಣಯ್ಯ | ಸು. | 1160 | 195 |
| ಗುಣನಂದಿ | ಸು. | 900 | 22 |
| ಗುಣವರ್ಮ. ವಿಚಾರಂ | | | 23 |
| ಗುಣವರ್ಮ I | ಸು. | 900 | 23 |
| ಗುಣವರ್ಮ II | ಸು. | 1235 | 356 |
| ಗುಪ್ತಮಂಚಣ್ಣ | ಸು. | 1160 | 209 |
| ಗುರುದೇವ | ಸು. | 1350 | 413 |
| ಗೌರಾರ್ಯ | ಸು. | 1270 | 390 |
| ಘಟ್ಟಿವಾಳಯ್ಯ | ಸು. | 1160 | 189 |
| ಚಂದ್ರ | | | 15 |
| ಚಂದ್ರಕೀರ್ತಿ | ಸು. | 1400 | 442 |
| ಚಂದ್ರಭಟ್ಟ | | 1067 | 82 |
| ಚಂದ್ರಭಟ್ಟ | ಸು. | 1000 | 73 |
| ಚಂದ್ರರಾಜ | ಸು. | 1079 | 89 |
| ಚಕ್ರಪಾಣಿರಂಗನಾಥ | ಸು. | 1195 | 296 |
| ಚಾವಣ | ಸು. | 1180 | 268 |
| ಚಾವುಂಡರಾಯ | | 978 | 46 |
| ಚಾವುಂಡರಾಯ | ಸು. | 1150 | 163 |
| * ಚಿದಾನಂದಕವಿ | | 1234 | 354 |
| ಚೆನ್ನಬಸವ | ಸು. | 1160 | 177 |
| ಚೇರೆಯ ಅಲ್ಲಾಳಬುಧ | | 1249 | 380 |
| ಚೌಂಡರಸ | ಸು | 1300 | 403 |
| ಜಗದ್ವಳ ಸೋಮನಾಥ | ಸು. | 1150 | 164 |
| ಜಗದಾರಾಧ್ಯ ನಾಗಿದೇವ | ಸು. | 1165 | 251 |
| * ಜನ್ನ | | 1209 | 328 |
| ಜಯಬಂಧು | | | 12 |

| ಹೆಸರು | ಕಾಲ | ಪುಟ |
|---|---|---|
| ಜಯಬಂಧುನಂದನ | ಸು. 800 | 16 |
| ಜಯವರ್ಮ | ಸು. 1250 | 381 |
| ಜಿನಾಚಾರ್ಯ | ಸು. 1400 | 447 |
| ಜೇಡರ ದಾಸಿಮಯ್ಯ | ಸು. 1040 | 201 |
| ಡಕ್ಕೆಯ ಬೊಮ್ಮಣ್ಣ | ಸು. 1160 | 208 |
| ತಿಪ್ಪಕೋಜ | 1169 | 252 |
| *ತ್ರಿವಿಕ್ರಮಪಂಡಿತ | 1188 | 283 |
| ತುರುಗಾಹಿ ರಾಮಣ್ಣ | ಸು. 1160 | 209 |
| ತ್ರಿದಾಮರಾಜ | 1085 | 98 |
| ದಾಮೋದರ | 1249 | 380 |
| ದಾವರಸ | ಸು. 1165 | 252 |
| ದಾಸೋಹದ ಸಂಗಣ್ಣ | ಸು. 1160 | 209 |
| ದಿವಾಕರಣಂದಿ | 1062 | 79 |
| ದುರ್ಗಸಿಂಹ | ಸು. 1145 | 149 |
| ದುರ್ವಿನೀತ | ಸು. 600 | 12 |
| ದೇವಕವಿ | ಸು. 1200 | 314 |
| * ದೇವಪಾರ್ಶ್ವ | 1174 | 267 |
| * ದೇವಭದ್ರಮುನಿ | 1161 | 216 |
| ದೇವರಸಪಂಡಿತ | ಸು. 1165 | 251 |
| ದೇವೇಂದ್ರ ಮುನಿ | ಸು. 1200 | 320 |
| ದೊಡ್ಡರನಾಚಯ | 1189 | 288 |
| ದೋರಾಂಬುಧಿಯ ರಾಮಣ್ಣ | ಸು. 1165 | 250 |
| ನಗೆಯ ಮಾರಿತಂದೆ | ಸು. 1160 | 207 |
| ನಯವರ್ಮ | ಸು. 1250 | 381 |
| ನಯಸೇನ | 1112 | 117 |
| ನರಹರಿತೀರ್ಥ | 1281 | 396 |
| ನವಿಲ್ಗುಂದದಮಾದಿರಾಜ | ಸು. 1300 | 408 |
| ನಾಗಚಂದ್ರ | ಸು. 1100 | 99 |
| ನಾಗದೇವ | 1217 | 338 |
| ನಾಗರಾಜ | 1331 | 409 |
| ನಾಗವರ್ಮ, ವಿಚಾರಂ | | 52 |
| ನಾಗವರ್ಮ I | ಸು. 990 | 54 |
| ನಾಗವರ್ಮ II | ಸು. 1145 | 144 |
| ನಾಗವರ್ಮಾಚಾರ್ಯ | ಸು. 1070 | 87 |
| ನಾಗಾರ್ಜುನ | | 11 |
| ನಾಚಿರಾಜ | ಸು. 1300 | 406 |
| ನಾರಾಯಣಭಟ್ಟ | ಸು. 1040 | 74 |
| ನಿಂಬಾಣದ ಗಣೇಶ್ವರ | ಸು. 1160 | 198 |
| ನಿಜಗುಣದೇವ | ಸು. 1160 | 193 |
| ನೀಲಕಂಠಶಿವಾಚಾರ್ಯ | ಸು. 1400 | 444 |
| ನೀಲಮ್ಮ | ಸು. 1160 | 198 |
| ನುಲಿಯಚಂದಯ್ಯ | ಸು. 1160 | 193 |
| ನೃಪತುಂಗನು ಹೇಳುವ ಪೂರ್ವದ ಕನ್ನಡಕವಿಗಳು | | 10 |
| ನೃಪತುಂಗ | 814–877 | 17 |
| * ನೃಸಿಂಹಕವಿ | 1382 | 426 |
| ಪೇಮಿಚಂದ್ರ | ಸು. 1170 | 255 |
| ಪಂಡಿತ | | 14 |
| ಪಂಡಿತಾರಾಧ್ಯ | | 215 |
| ಪದ್ಮಣಾಂಕ | ಸು. 1385 | 433 |
| ಪದ್ಮಪ್ರಭ | ಸು. 1300 | 407 |
| ಪ್ರಭಾಚಂದ್ರ | ಸು. 1300 | 408 |
| ಪ್ರಭುದೇವ | ಸು. 1160 | 180 |
| ಪ್ರಸಾದಿ ಭೋಗಣ್ಣ | ಸು. 1160 | 206 |
| ಪಾಲ್ಕುರಿಕೆ ಸೋಮನಾಥ | ಸು. 1195 | 291 |
| * ಪಾರ್ಶ್ವಪಂಡಿತ | 1205 | 322 |
| ಪುಷ್ಪದಂತ | ಸು. 1350 | 414 |
| ಪೂಜ್ಯಪಾದ | ಸು. 600 | 5 |
| ಪೊನ್ನ | ಸು. 950 | 39 |
| ಪೋಲಾಳ್ವದಂಡನಾಥ | ಸು. 1224 | 344 |
| ಬಂಧುವರ್ಮ | ಸು. 1200 | 309 |

| ಹೆಸರು | ಕಾಲ | ಪುಟ |
|---|---|---|
| ಬಳಭದ್ರದೇವ | ಸು. 1067 | 82 |
| ಬಸವ | ಸು. 1160 | 173 |
| ಬಹುರೂಪಿ ಚೌಡಯ್ಯ | ಸು. 1160 | 210 |
| ಬ್ರಹ್ಮ | ಸು. 1079 | 89 |
| ಬ್ರಹ್ಮದೇವ | 1320 | 409 |
| ಬ್ರಹ್ಮಶಿವ | ಸು. 1125 | 131 |
| * ಬಾಚಣ್ಣ | 1188 | 283 |
| ಬಾಚಿಕಾಯಕದಬಸವಪ್ಪ | ಸು. 1160 | 196 |
| ಬಾಲಚಂದ್ರ | ಸು. 1170 | 253 |
| ಬಾಲಚಂದ್ರ (?) | 1282 | 397 |
| * ಬಾಳಚಂದ್ರಕವಿಕಂದರ್ಪ | 1204 | 321 |
| ಬಾಳಚಂದ್ರ ಪಂಡಿತ | 1273 | 390 |
| ಬಾಹುಬಲಿ ಪಂಡಿತ | 1352 | 414 |
| ಬಾಹೂರ ಬೊಮ್ಮಣ್ಣ | ಸು. 1160 | 205 |
| ಬಿಜ್ಜಯನಾಯಕ | 1172 | 265 |
| ಬಿಜ್ಜಳದೇವಿ | ಸು. 1160 | 196 |
| ಬಿಬ್ಬಬಾಚಯ್ಯ | ಸು. 1150 | 202 |
| ಬೂಚಿರಾಜ | 1173 | 266 |
| ಬೇರೆ ಅಂಕಿತಗಳು | | 210 |
| ಬೊಪ್ಪಣಪಂಡಿತ | ಸು. 1180 | 279 |
| ಭಲ್ಲಟ | | 224 |
| ಭೀಮಕವಿ | 1369 | 423 |
| ಮಂಗರಾಜ. ವಿಚಾರಂ | | 416 |
| ಮಂಗರಾಜ I | ಸು. 1360 | 417 |
| ಮಡಿವಳ ಮಾಚಯ್ಯ | ಸು. 1160 | 182 |
| ಮಧುರ | ಸು. 1385 | 427 |
| * ಮಧುಸೂದನದೇವ | 1147 | 155 |
| ಮನಸಂದನುಾರಿತಂದೆ | ಸು. 1160 | 206 |
| ಮೆನಸಿಜ | ಸು. 1000 | 72 |
| ಮನುಮುನಿಗುಮ್ಮಟದೇವ | ಸು. 1160 | 196 |
| ಮರುಳ ಸಿದ್ಧ | | 215 |
| ಮರುಳುದೇವ | ಸು. 1160 | 197,200 |
| ಮಲ್ಲಿಕಾರ್ಜುನ | ಸು. 1245 | 369 |
| ಮಲ್ಲಿಕಾರ್ಜುನ ಪಂಡಿತಾರಾಧ್ಯ | ಸು. 1160 | 213 |
| * ಮಲ್ಲಿಕಾರ್ಜುನಭಟ್ಟ | 1102 | 114 |
| * ಮಲ್ಲಿದೇವ | 1104 | 116 |
| * ಮಲ್ಲಿನಾಥ | 1062 | 80 |
| ಮಲ್ಲಣ | | 223 |
| ಮಹಾದೇವಭಟ್ಟ | 1144 | 144 |
| ಮಹಾದೇವಿ | ಸು. 1160 | 190 |
| ಮಹಾದೇವಿಯಕ್ಕ | ಸು. 1160 | 187 |
| ಮಹಾಪ್ರಭು ಕೇಶಿರಾಜ | 1124 | 129 |
| ಮಹಾಬಲಕವಿ | 1254 | 381 |
| ಮಾದರ ದೂಳಯ್ಯ | ಸು. 1150 | 205 |
| ಮಾದಿರಾಜ | 1123 | 128 |
| * ಮಾದಿರಾಜ | 1229 | 347 |
| ಮಾದಿರಾಜಮುನಿ | ಸು. 1140 | 144 |
| * ಮಾಳೆಯ | 1192 | 289 |
| * ಮುಖ್ಯಪಂಡಿತ | 1147 | 157 |
| ಮುನಿಚಂದ್ರ | 1229 | 346 |
| ಮೆರೆಮಿಂಡಯ್ಯ | ಸು. 1100 | 202 |
| ಮೇಘಚಂದ್ರ | 1148 | 159 |
| ಮೈದುನರಾಮಯ್ಯ | ಸು. 1160 | 197 |
| ಮೋಳಿಗೆಯ ಮಾರಯ್ಯ | ಸು. 1160 | 189 |
| ಮೌಕ್ತಿಕಕವಿ | ಸು. 1120 | 128 |
| ಯಶಶ್ಚಂದ್ರ | ಸು. 1300 | 407 |
| ರಟ್ಟಕವಿ | ಸು. 1300 | 400 |
| ರನ್ನ | 993 | 62 |
| * ರವಿನಾಗಭಟ್ಟ | 929 | 28 |
| ರಾಘವಾಂಕ | ಸು. 1165 | 235,250 |

| ಹೆಸರು | ಕಾಲ | ಪುಟ |
|---|---|---|
| * ರಾಜವಲ್ಲಭ | 1067 | 82 |
| ರಾಜಾದಿತ್ಯ | ಸು. 1120 | 122 |
| * ರಾಮದೇವ | ಸು. 1180 | 276 |
| ರುದ್ರಭಟ್ಟ | ಸು. 1180 | 269 |
| ರೇಚಣಮಂತ್ರಿ | 1174 | 268 |
| ರೇಣುಕಾಚಾರ್ಯ | | 215 |
| ರೇವಣಸಿದ್ಧ | | 215 |
| ರೇವಾಕೋಟ್ಯಾಚಾರ್ಯ | ಸು. 1180 | 282 |
| ಲೋಕಪಾಲ | | 15 |
| * ವಜ್ರ | 1393 | 438 |
| ವಾದಿ ಕುಮುದಚಂದ್ರ | ಸು. 1100 | 113 |
| ವಾಸುದೇವ | ಸು. 1200 | 320 |
| ವಿಮಲ | | 11 |
| ವಿಶ್ವೇಶ್ವರಾಚಾರ್ಯ | | 216 |
| ವಿಷ್ಣುದಂಡಾಧಿಪ | 1130 | 137 |
| ವೀರಣಂದಿ | 1153 | 168 |
| ವೀರಶೈವಸಂಡಿತತ್ರಯ | | 211 |
| ವೀರಶೈವಾಚಾರ್ಯಪಂಚಕ | | 214 |
| ವೃತ್ತವಿಲಾಸ | ಸು. 1160 | 169 |
| ಶಂಕರವಿಬುಧ | 1150 | 163 |
| ಶಂಖವರ್ಮ | ಸು. 1100 | 99 |
| ಶರಣಕವಿ | ಸು. 1165 | 252 |
| ಶಾಂತಿನಾಥ | 1068 | 83 |
| * ಶಾಂತಿನಾಥ | 1165 | 217 |
| ಶಾಂತಿವರ್ಮ | ಸು. 1160 | 168 |
| ಶ್ಯಾಮಕುಂದಾಚಾರ್ಯ | ಸು. 650 | 10 |
| * ಶಾರದಿನಾಥಪಂಡಿತ | 1174 | 268 |
| ಶಿವಕವಿದೇವ | ಸು. 1340 | 413 |
| ಶಿವಯೋಗಿದೇವ | ಸು. 1160 | 199 |
| ಶಿವಲೆಂಕಮಂಚಣ್ಣ | ಸು. 1160 | 212 |
| ಶಿಶುಮಾಯಣ | ? 1233 | 349 |

| ಹೆಸರು | ಕಾಲ | ಪುಟ |
|---|---|---|
| ಶೀಲವಂತಯ್ಯ | ಸು. 1160 | 199 |
| ಶ್ರೀಧರಾಚಾರ್ಯ | 1049 | 75 |
| ಶ್ರೀಪತಿಪಂಡಿತ | ಸು. 1160 | 212 |
| ಶ್ರೀವರ್ಧದೇವ | ಸು. 650 | 7 |
| ಶ್ರೀವಿಜಯ | | 13 |
| ಶ್ರೀವಿಜಯದಂಡನಾಥ | ಸು. 915 | 27 |
| * ಶ್ರೀ ವಿಜಯರ್ ದಶ ಕೀರ್ತಿದೇವರ್ | 1234 | 353 |
| ಶುಭಚಂದ್ರ | ಸು. 1200 | 321 |
| ಸಕಲೇಶಮಾದರಸ | ಸು. 1150 | 166 |
| ಸಗರದ ಬೊಮ್ಮಣ್ಣ | ಸು. 1160 | 208 |
| ಸಮಂತಭದ್ರ | ಸು. 400 | 1 |
| ಸಮುದಾಯದ ಮಾಘಣಂದಿ | ಸು. 1260 | 388 |
| ಸ್ವಯಂಭುರುದ್ರ | ಸು. 1200 | 320 |
| * ಸರಣ | ಸು. 1195 | 299 |
| * ಸಾಂತಮಹಂತ | 1137 | 137 |
| ಸಿಂಗದೇವ | 1197 | 305 |
| ಸಿದ್ಧರಾಮ | ಸು. 1160 | 183 |
| ಸಿಮ್ಮಲಿಗೆಯ ಚೆನ್ನಯ್ಯ | ಸು. 1160 | 195 |
| ಸುಂಕದ ಬಂಕಣ್ಣ | ಸು. 1160 | 210 |
| ಸುಕರಸುಕವಿಕಂಠಾಭರಣ | ಸು. 1145 | 155 |
| ಸುಮನೋಬಾಣ | ಸು. 1150 | 161 |
| ಸೇನಬೋವ ಮಾದಿಮಯ್ಯ | 1098 | 99 |
| ಸೈಗೊಟ್ಟ ಶಿವಮಾರ | ಸು. 800 | 17 |
| ಸೊಡ್ಡಳ ಬಾಚರಸ | ಸು. 1160 | 187 |
| * ಸೋಮನಾಥಪಂಡಿತ | 1234 | 352 |
| ಸೋಮರಾಜ | 1222 | 338 |
| ಹಂಪೆಯ ಮಾದಿರಾಜ | ಸು. 1100 | 113 |
| ಹಂಪೆಯ ರಾಮಿತಂದೆ | ಸು. 1165 | 251 |

| ಹೆಸರು | ಕಾಲ | ಪುಟ |
|---|---|---|
| * ಹಂಸದೇವ | 1161 | 216 |
| ಹಂಸರಾಜ | ಸು. 1140 | 139 |
| ಹಡಸದ ಅಪ್ಪಣ್ಣ | ಸು. 1160 | 196 |
| ಹರಭಕ್ತ | ಸು. 1250 | 381 |
| ಹರಿಪಾಲ | ಸು. 1140 | 138 |
| * ಹರಿಯಣ್ಣ | 1075 | 88 |
| * ಹರಿಹರಸೂರಿ | 1194 | 290 |
| ಹರಿಶ್ಚಂದ್ರಾದಿಗಳು. ವಿಚಾರಂ | | 219 |
| ಹರಿಶ್ಚಂದ್ರಾದಿಗಳು ಸ್ತುತಿಸುವ ಪೂರ್ವಕವಿಗಳು | | 222 |
| ಹರೀಶ್ವರ | ಸು. 1165 | 224 |
| ಹಲಾಯುಧ | | 224 |
| ಹಸ್ತಿಮಲ್ಲ | 1290 | 399 |
| ಹಾವಿನಹಾಳ ಕಲ್ಲಯ್ಯ | ಸು. 1150 | 204 |
| ಹುಲಿಗೆರೆಯಮಾಯಿದೇವ | ಸು. 1165 | 250 |

# CONTENTS.

## II. ವಿಷಯಸೂಚಿಕೆ.

### II. Alphabetical List of Works.

### ಈ ಸಂಪುಟದಲ್ಲಿ ಹೇಳಿರುವ ಕರ್ಣಾಟಕ ಗ್ರಂಥಗಳ ವರ್ಣಾನುಕ್ರಮವಾದ ಹೆಸರುಗಳು.


| ಹೆಸರು | ಪುಟ | ಹೆಸರು | ಪುಟ |
|---|---|---|---|
| ಅಕ್ಕಗಳ ಪೀಠಿಕೆ | 187 | ಕಬ್ಬಿಗರಕಾವ | 367 |
| ಅಕಾರಾದಿ ವೈದ್ಯನಿಘಂಟು | 408 | ಕರಣಹಸುಗೆ | 178 |
| ಅಜಿತಪುರಾಣ | 65 | ಕರ್ಣಾಟಕಕಲ್ಯಾಣಕಾರಕ | 165 |
| ಅಂಜನಾಚರಿತ್ರೆ | 350 | ಕರ್ಣಾಟಕಭಾಷಾಭೂಷಣ | 147 |
| ಅನಂತನಾಥಪುರಾಣ | 334 | ಕವಿರಾಜಮಾರ್ಗ | 18 |
| ಅನಾಮಯಸ್ತೋತ್ರಟೀಕೆ | 413 | ಕಾದಂಬರಿ | 59 |
| ಅಭಿನವ ದಶಕುಮಾರಚರಿತೆ | 404 | ಕಾರ್ತಿಕೇಯಾನುಪ್ರೇಕ್ಷಾಟೀಕೆ | 321 |
| ಅಭಿನವ ನಿಘಂಟು | 439 | ಕಾಲಜ್ಞಾನ | 179,185,187,189,197,198 |
| ಅಮರಕೋಶಟೀಕೆ | 406 | ಕಾಲಜ್ಞಾನವಚನ | 176,180 |
| ಅಮಿತಗತಿಶ್ರಾವಕಾಚಾರಟೀಕೆ | 416 | ಕಾವನಗೆಲ್ಲ | 367 |
| ಅರ್ಧನೇಮಿ | 263 | ಕಾವ್ಯರತ್ನ | 119 |
| ಅಶ್ವಶಾಸ್ತ್ರ | 445 | ಕಾವ್ಯಸಾರ | 371 |
| ಅಷ್ಟಾವರಣಸ್ತೋತ್ರದ ತ್ರಿವಿಧಿ | 185 | ಕಾವ್ಯಾವಲೋಕನ | 146 |
| ಆಚಾರಸಾರಟೀಕೆ | 168 | ಕಿರಾತ | 385 |
| ಆತ್ಮಲಿಂಗಪ್ರಣವಸಂಯೋಗಸ್ಥಲದ ತ್ರಿವಿಧಿ | 199 | ಕುಮುದೇಂದುರಾಮಾಯಣ | 383 |
| ಆದಿಪುರಾಣ | 33,399 | ಕುಸುಮಾವಳಿ | 315 |
| ಇಷ್ಟಲಿಂಗಸ್ತೋತ್ರ | 213 | ಕ್ಷೇತ್ರಗಣಿತ | 127 |
| ಉದಯಾದಿತ್ಯಾಲಂಕಾರ | 160 | ಖಗೇಂದ್ರಮಣಿದರ್ಪಣ | 418 |
| ಉದ್ಭಟಕಾವ್ಯ | 340 | ಗಜಶಾಸ್ತ್ರ | 17 |
| ಉದ್ಯೋಗಸಾರ | 397 | ಗಣಸಹಸ್ರನಾಮ | 214 |
| ಕಂತಿಹಂಪನ ಸಮಸ್ಯೆಗಳು | 110 | ಗತಪ್ರತ್ಯಾಗತ | 40 |
| ಕನ್ನಡಗೀತಿಗಳು | 197 | ಗದಾಯುದ್ಧ | 63 |
| ಕನ್ನಡರತ್ನಕರಂಡಕ | 441 | ಗಿರಿಜಾಕಲ್ಯಾಣ | 227 |

| ಹೆಸರು | ಪುಟ | ಹೆಸರು | ಪುಟ |
|---|---|---|---|
| ಗುಮ್ಮಟಸ್ತುತಿ | 432 | ತತ್ಪಾರ್ಥತಾತ್ಪರ್ಯವೃತ್ತಿ | 255 |
| ಗುರುಸ್ತೋತ್ರ | 199 | ತತ್ಪಾರ್ಥಸೂತ್ರವೃತ್ತಿ | 80 |
| ಗುಹೇಶ್ವರವಚನ | 181 | ತ್ರಿಪುರದಹನಸಾಂಗತ್ಯ | 352 |
| ಗೊಮ್ಮಟಸಾರಟೀಕೆ | 416 | ತ್ರಿಷಷ್ಟಿಲಕ್ಷಣಮಹಾಪುರಾಣ | 47 |
| ಗೊಮ್ಮಟಸ್ತುತಿ | 280 | ತ್ರೈಲೋಕ್ಯಚೂಡಾಮಣಿಸ್ತೋತ್ರ | 136 |
| ಗೋವೈದ್ಯ | 130 | ದೀಕ್ಷಾಬೋಧೆ | 247 |
| ಘಟಚಕ್ರದವಚನ | 177 | ದ್ರವ್ಯಸಂಗ್ರಹಸೂತ್ರಟೀಕೆ | 390 |
| ಚಕ್ರೇಶ್ವರ ಚರಿತ್ರ | 62 | ಧರ್ಮನಾಥಪುರಾಣ | 415,429 |
| ಚಂದ್ರಚೂಡಾಮಣಿ ಶತಕ | 88 | ಧರ್ಮಪರೀಕ್ಷೆ | 170 |
| ಚಂದ್ರನಾಥಾಷ್ಟಕ | 128,360 | ಧರ್ಮಾಮೃತ | 119 |
| ಚಂದ್ರಪ್ರಭಚರಿತೆ | 75 | ನಾಚಿರಾಜೀಯ | 406 |
| ಚಂದ್ರಪ್ರಭಪುರಾಣ | 13,285 | ನಿರ್ಗುಣಾನಂದಲೀಲೆ | 198 |
| ಚಾರಿತ್ರಸಾರಟೀಕೆ | 408 | ನಿರ್ವಾಣಲಕ್ಷ್ಮೀಪತಿನಕ್ಷತ್ರಮಾಲಿಕೆ | 281 |
| ಚಾವುಂಡರಾಯಪುರಾಣ | 47 | ನೀತಿಕಂದಗಳು | 281 |
| ಚಿತ್ರಹಸುಗೆ | 127 | ನೂರೊಂದುಪಾದಗದ್ಯ | 390 |
| ಚಿಂತಾಮಣಿ ಪ್ರತಿಪದ | 438 | ನೇಮಿನಾಥಪುರಾಣ | 141,262,383 |
| ಚೂಡಾಮಣಿ | 7 | ಪಂಚತಂತ್ರ | 152 |
| ಚೆನ್ನಬಸವಸ್ತೋತ್ರದ ರಗಳೆ | 295 | ಪಂಚಪರಮೇಷ್ಠಿಗಳ ಬೊಲ್ಲಿ | 391 |
| ಚೋಳಪಾಲಕಚರಿತ | 385 | ಪಂಚರತ್ನ | 295 |
| ಛತ್ತೀಸರತ್ನಮಾಲೆ | 136 | ಪದಮಂತ್ರಗೋಪ್ಯ | 179 |
| ಛಂದೋಂಬುಧಿ | 56 | ಪದಾರ್ಥಸಾರಟೀಕೆ | 389 |
| ಜಗನ್ನಾಥವಿಜಯ | 272 | ಪದ್ಮರಾಜಪುರಾಣ | 434 |
| ಜಾತಕತಿಲಕ | 76 | ಪಂಪರಾಮಾಯಣ | 105 |
| ಜ್ಞಾನಸಾರ | 88 | ಪಂಪಾಶತಕ | 231 |
| ಜಶೇಂದ್ರಮಾಲಾಟೀಕೆ | 416 | ಪರಮಾಗಮಸಾರ | 442 |
| ಜಿನಸಂಹಿತಾಟೀಕೆ | 113 | ಪರಮಾತ್ಮಪ್ರಕಾಶಿಕಾಟೀಕೆ | 253 |
| ಜಿನಸ್ತುತಿ | 254 | ಪರಶುರಾಮಚರಿತ | 62 |
| ಜಿನಾಕ್ಷರಮಾಲೆ | 45 | ಪ್ರತಿಷ್ಠಾಕಲ್ಪಟೀಕೆ | 113 |
| ಜೀವಸಂಬೋಧನೆ | 312 | ಪ್ರಬೋಧಚಂದ್ರ | 385 |
| ಜ್ಞೆನಗಣಿತಸೂತ್ರೋದಾಹರಣ | 127 | ಪ್ರಸಾದಸಂಪಾದನೆ | 198 |
| ತತ್ತ್ವರತ್ನಪ್ರದೀಪಿಕೆ | 255 | ಪಾರ್ಶ್ವನಾಥಪುರಾಣ | 324 |

| ಹೆಸರು | ಪುಟ |
|---|---|
| ಪ್ರಾಭೃತ | 10 |
| ಪ್ರಾಭೃತಕತ್ರಯಟೀಕೆ | 253 |
| ಪುಣ್ಯಾಸ್ರವ | 411 |
| ಪುರಾಣಚೂಡಾಮಣಿ | 43 |
| ಪುರಾಣತಿಲಕ | 65 |
| ಪುಷ್ಪದಂತಪುರಾಣ | 357 |
| ಬಸವಗೀತ | 213 |
| ಬಸವಪುರಾಣ | 424 |
| ಬಸವಸ್ತೋತ್ರದತ್ರಿವಿಧಿ | 184 |
| ಬಾಲಗ್ರಹಚಿಕಿತ್ಸೆ | 320 |
| ಬೆಡಗಿನವಚನ | 182 |
| ಭಕ್ತ್ಯಾನಂದಲೀಲೆ | 198 |
| ಭರತಶಾಸ್ತ್ರ | 75 |
| ಭಾರತ | 27,36 |
| ಭೀಮಕವೀಶ್ವರರಗಳೆ | 423 |
| ಭುವನೈಕರಾಮಾಭ್ಯುದಯ | 40 |
| ಭೃಂಗಿದಂಡಕ | 423 |
| ಭೃಂಗಿಸ್ತವಟೀಕೆ | 413 |
| ಮಂಗಾಭಿಧಾನ | 439 |
| ಮದನತಿಲಕ | 91 |
| ಮದನವಿಜಯ | 367 |
| ಮಂತ್ರಗೋಪ್ಯ | 177,179,181,183 |
| ಮಂತ್ರಮಹತ್ತದಕಂದ | 186 |
| ಮಂತ್ರಮಾಹಾತ್ಮ್ಯ | 180 |
| ಮನ್ಮಥವಿಜಯ | 443 |
| ಮರುಳುದೇವರಕಂದ | 200 |
| ಮರುಳುದೇವರ ವಚನ | 200 |
| ಮಲೆಯರಾಜಸ್ತೋತ್ರಟೀಕೆ | 413 |
| ಮಲ್ಲಿನಾಥಪುರಾಣ | 108 |
| ಮಲ್ಲಣಸ್ತೋತ್ರಟೀಕೆ | 413 |
| ಮಹಿಮ್ನಸ್ತೋತ್ರಟೀಕೆ | 413 |

| ಹೆಸರು | ಪುಟ |
|---|---|
| ಮಾಘಣಂದಿಯ ಶ್ರಾವಕಾಚಾರ | 389 |
| ಮಾಳವೀಮಾಧವ | 139 |
| ಮಿಶ್ರಸ್ತೋತ್ರದತ್ರಿವಿಧಿ | 184 |
| ಮಿಶ್ರಾರ್ಪಣ | 178 |
| ಮುಡಿಗೆಯ ಅಷ್ಟಕ | 234 |
| ಮೋಕ್ಷಪ್ರಾಭೃತಟೀಕೆ | 408 |
| ಯಶೋಧರಚರಿತೆ | 332 |
| ಯೋಗಾಂಗತ್ರಿವಿಧಿ | 188 |
| ರಕ್ಷಾಶತಕ | 224,451 |
| ರಟ್ಟಮತ | 402 |
| ರಟ್ಟಸೂತ್ರ | 402 |
| ರನ್ನಕಂದ | 71 |
| ರಸಕಲಿಕೆ | 269 |
| ರಸವಿವೇಕ | 308 |
| ರಾಜಯೋಗದ ವಚನ | 177 |
| ರಾಮಕಥೆ | 40 |
| ರಾಮಚಂದ್ರಚರಿತಪುರಾಣ | 105 |
| ರಾಮಾಯಣ | 114 |
| ರುದ್ರಭಾರತದಸೃಷ್ಟಿ | 179 |
| ಲೀಲಾವತಿ | 127,258 |
| ಲೋಕೋಪಕಾರ | 163 |
| ವಚನಗಳು | 167,183-84,187-196,201-210, 212,214,265,275 |
| ವರ್ಧಮಾನಪುರಾಣ | 268,301 |
| ವಸ್ತುಕಬಸವಪುರಾಣ | 413 |
| ವಸ್ತುಕೋಶ | 148 |
| ವ್ಯವಹಾರಗಣಿತ | 124 |
| ವ್ಯವಹಾರರತ್ನ | 127 |
| ವಿಂಶತಿಪ್ರರೂಪಣೀಟೀಕೆ | 407 |
| ವಿಕ್ರಮಾರ್ಜುನವಿಜಯ | 36 |
| ವೀರಭದ್ರವಿಜಯ | 296 |

| ಹೆಸರು | ಪುಟ |
|---|---|
| ವೀರೇಶಚರಿತ | 139 |
| ವೀರೇಶ್ವರಚರಿತೆ | 235 |
| ವೇದಭಾಷ್ಯ | 381 |
| ಶಬ್ದಮಣಿದರ್ಪಣ | 386 |
| ಶರಣುಬಸವರಗಳೆ | 296 |
| ಶರಭ ಚಾರಿತ್ರ | 235 |
| ಶರಭ ಲೀಲೆ | 296 |
| ಶಾಂತಿಪುರಾಣ | 43 |
| ಶಾಂತೀಶ್ವರಪುರಾಣ | 363 |
| ಶಾಸ್ತ್ರಸಾರ | 173 |
| ಶಾಸ್ತ್ರಸಾರಸಮಚ್ಚಯಟೀಕೆ | 389 |
| ಶಿವಾರತ್ನವಚನ | 176 |
| ಶಿವಗಣದರಗಳೆಗಳು | 232 |
| ಶಿವಮಾರಮತ | 17 |
| ಶಿವಾಕ್ಷರಮಾಲೆ | 224 |
| ಶೀಲವಂತಯ್ಯನತ್ರಿವಿಧ | 199 |
| ಶೀಲಸಂಪಾದನೆ | 293 |
| ಶ್ರೀಚಿತ್ರಮಾಲೆ | 385 |
| ಶ್ರೀಪದಾಶೀತಿ | 304 |
| ಶೂದ್ರಕ | 24 |
| ಶೂನ್ಯಸಂಪಾದನೆ | 181 |
| ಶೃಂಗಾರರತ್ನಾಕರ | 308 |
| ಶೃಂಗಾರಸಾರ | 340 |
| ಷಟ್ಸ್ಥಲಜ್ಞಾನಚಾರಿತ್ರ | 180 |
| ಷಟ್ಸ್ಥಲವಚನ | 175,177 |
| ಷಡಕ್ಷರಕಂದ | 186 |
| ಸಂಸ್ಕೃತಸಹೋದರಿ | 367 |
| ಸಗುಣಲೀಲೆ | 198 |
| ಸಜ್ಜನಚಿತ್ತವಲ್ಲಭಟೀಕೆ | 422 |
| ಸದ್ಗುರುರಗಳೆ | 295 |
| ಸಮಯಪರೀಕ್ಷೆ | 133 |
| ಸಮಾಧಿಶತಕಟೀಕೆ | 159 |
| ಸಹಜಾತ್ಮಪ್ರಕಾಶಟೀಕೆ | 408 |
| ಸಹಸ್ರಗಣನಾಮ | 294 |
| ಸ್ತನಶತಕ | 305 |
| ಸ್ಮರತಂತ್ರ | 328 |
| ಸ್ಯಯಂಭುರುದ್ರ ವಚನ | 320 |
| ಸಾನಂದಚರಿತ್ರ | 277 |
| ಸಾರತ್ರಯಟೀಕೆ | 416 |
| ಸಾಹಸಭೀಮವಿಜಯ | 68 |
| ಸಿಂಹಸ್ಯಾಯೋಪಗಮನ | 319 |
| ಸಿದ್ಧರಾಮಪುರಾಣ | 243 |
| ಸಿದ್ಧಾಂತಸಾರಟೀಕೆ | 408 |
| ಸುಕುಮಾರಚರಿತ | 84 |
| ಸುಭದ್ರಾಹರಣ | 385 |
| ಸೂಕ್ತಿಸುಧಾರ್ಣವ | 370 |
| ಸೂಪಶಾಸ್ತ್ರ | 16 |
| ಸೃಷ್ಟಿಯವಚನ | 182,188 |
| ಸೊಬಗಿನಸುಗ್ಗಿ | 367 |
| ಸೋಮನಾಥಚರಿತೆ | 241 |
| ಸೋಮಾರಾಧ್ಯಶತಕ | 293 |
| ಸೋಮೇಶ್ವರಶತಕ | 293 |
| ಹಯಶಾಸ್ತ್ರ | 90 |
| ಹರಲೀಲೆ | 223 |
| ಹರಿಚಾರಿತ್ರ | 344 |
| ಹರಿವಂಶ | 23 |
| ಹರಿವಂಶಾಭ್ಯುದಯ | 310 |
| ಹರಿಶ್ಚಂದ್ರಕಾವ್ಯ | 238 |
| ಹರಿಹರಮಹತ್ತ್ವ | 235 |
| ಹಲಾಯುಧಸ್ತೋತ್ರಟೀಕೆ | 413 |
| ಹಾಡುಗಳು | 397 |

# Introduction.

## The Dravidian Languages.

Kannada belongs to the group of languages known as the Pancha-Drāviḍa, the other languages included in this group being Tamil, Telugu, Malayāḷam, and Tuḷu. Indian Pandits have included Mahrāṭhi and Gujarāti* in the Pancha-Drāviḍa; but philologists, recognizing that they, like other Indo-Aryan vernaculars of the North such as Bengāli and Sindhi, are mainly derived from Sanskrit, place them in the Gauḍa group of languages.

The term Drāviḍa is very old, being found in such ancient works as the Mahābhārata and those of Parāśara, Manu, Varāhamihira and Kumārila-Bhaṭṭa.

The region where the Dravidian languages are spoken is the whole of Peninsular India from the Vindhya mountains and the river Narmadā in the north to Cape Comorin in the south, excluding Orissa in the east and the Gujarāti and the Mahrāṭhi Districts in the west, and the northern half of Ceylon. Further to the north Dravidian dialects are spoken by small tribes in the Central Provinces and Chōta Nagpur, and even up the banks of the Ganges at Rājmahāl. Finally there is a Dravidian dialect in the far north-west, in Baluchistan.

Philologists include in the group of Dravidian languages not only the five languages of Southern India mentioned

* This is probably due to a few special points of similarity between these languages and the Dravidian group

"In Northern vernaculars the masculine and neuter genders have been confounded, and in some, such as Bengali and Oriya, the difference between masculine and feminine nouns is also blotted out. In Mahrāṭhi and Gujarāti, on the other hand, three genders are distinguished and the neuter is a living gender just as in Dravidian tongues.

Northern Indo-Aryan vernaculars have developed in a country where the home speech was Kolarian, while the substratum over which Gujarāti and Mahrāṭhi have spread, was Dravidian."—Dr. Sten Konow.

above but also Kuḍagu, Tuda, Kota, Baḍaga, Gōṇḍi, Kui, Kurukh and Malto or Rājmahāli. They have thus extended the general signification of the term Dravida, as also the territorial limits of the Dravidian languages as far north as the confines of Bengal. They also recognize Dravidian affinities in the Brāhūī, a language of Baluchistan, outside India itself, and trace the Dravidian race beyond the Indus—thus proving that the Dravidians entered India from the north-west just like their successors, the Aryans.

The total number of speakers of these languages is, in round numbers, about sixty-four millions.

The Dravidian languages have to be looked upon as an isolated family. The attempt to connect them with other linguistic families outside India is now generally recognized as a failure. The same is the case with the attempts made to show a closer connection of these languages with the Indo-European family.

The following are the main characteristics of the Dravidian forms of speech which distinguish them from the languages of the Indo-European family :—

" In the Dravidian languages all nouns denoting inanimate substances and irrational beings are of the neuter gender. The distinction of male and female appears only in the pronouns of the third person, in adjectives formed by suffixing the pronominal terminations, and in the third person of the verb. In all other cases the distinction of gender is marked by separate words signifying ' male ' and ' female '. Dravidian nouns are inflected, not by means of case-terminations, but by means of suffixed postpositions and separate particles. Dravidian neuter nouns are rarely pluralized. Dravidian languages use postpositions instead of prepositions. Dravidian adjectives are incapable of declension. It is characteristic of these languages in contradistinction to Indo-European, that wherever practicable, they use as adjectives the relative participles of verbs, in preference to nouns of quality or adjectives properly so called. A peculiarity of the Dravidian dialects is the existence of two pronouns of the first person plural, one inclusive of the person addressed, the other exclusive. The Dravidian languages have no passive voice, this

being expressed by auxiliary verbs signifying 'to suffer', etc. Unlike the Indo-European, they prefer the use of continuative participles to conjunctions. The Dravidian verbal system possesses a negative as well as an affirmative voice. It is a marked peculiarity of the Dravidian languages that they make use of relative participial nouns instead of phrases introduced by relative pronouns. These participles are formed from the various participles of the verb by the addition of a formative suffix. Thus 'the person who came' is in these languages literally 'the who came'. Finally, in the Dravidian languages the governing word is invariably placed after the word governed, in consequence of which the nominative always occupies the first place in the sentence, and the one finite verb the last."

Of the Dravidian languages of Southern India, Tamil, Kannada, Telugu and Malayāḷam are cultivated in the sense of having alphabets, grammars and literatures of their own; while the remaining dialects, *viz.*, Tuḷu, Kuḍagu, Tuda, Kota and Baḍaga are uncultivated, inasmuch as these have not even an alphabet of their own. All these uncultivated dialects are closely related to Kannada and may be looked upon as dialects of that language.

Of the cultivated languages, *viz.*, Tamil, Kannada, Telugu and Malayāḷam, the claim of Malayāḷam to be considered as a distinct member of the Dravidian group is questioned by some philologists. Dr. Caldwell regards Malayāḷam as a very ancient offshoot of Tamil. Of the remaining languages—Tamil, Telugu and Kannada—which are all related to one another by essential and distinctive grammatical characteristics, the affinities between Tamil and Kannada are closer and far more deep-seated than those between Tamil and Telugu. It is true that many of the roots and grammatical forms in Tamil and Telugu are identical; but they are so disguised, altered and corrupted by inflexional and dialectic changes peculiar to Telugu that they require the ingenuity of a clever philologist to discover their original and common form. On the other hand, the coincidences in the vocabularies and grammars of Tamil and Kannada are so great that in most cases words and grammatical forms of the one language may, without the least change, be transferred to the other. A few examples are given below to make this statement clear: —

| *Tamil* | *Kannada* | *Telugu* | |
|---|---|---|---|
| ivar | ivar | vīru | These persons |
| āgādu | āgadu | kādu | It is not |
| ural | oral | rōlu | Mortar |
| uḷ | oḷ | lō | In (locative suffix) |

## The Kannada Language.

The region in which the Kannada language is now spoken comprises the west of the Nizam's Dominions, parts of Central Provinces and Berar, the southern Districts of the Bombay Presidency, the whole of Mysore and Coorg, and the Madras Districts bordering these countries on the north, west and south. Kannada dialects are spoken in the Nilgiris, and the language has been taken by immigrants to Madura.

The numbers of the races speaking Kannada and its dialects are estimated at about eleven millions.

As regards the range and principal seats of the language in the 9th century we learn from Nripatunga's *Kavirājamārga* that Kannada was spoken and cultivated in the portion of the country extending from the Kāvēri as far as the Godavari and that the seat of pure Kannada was the region lying within Kisuvoḷal, Kopaṇa, Puligere and Onkunda.

The derivation of Karnāṭa and Kannada is uncertain. Dr. Gundert proposed *Kar Nāḍu*, "the black country", as the original form of Karṇāṭa, in allusion to the black cotton soil which characterises the plateau of the Southern Dekhan in which the language is spoken. Other scholars have suggested that Karṇāṭa is derived from *Karu Nāḍu* "the elevated country", with reference to the height of the plateau above the sea level. Indian grammarians have expressed the opinion that Kannada is a *tadbhava* or corrupt form of Karṇāṭa, though it is more likely that the latter is a Sanskritised form of the original Kannada.

The name Karnāṭa occurs as early as the sixth century in Varāhamihira's *Bṛihatsamhitā*, and its mention in Sōmadēva's *Kathāsaritsāgara*, probably due to its being mentioned in his source, *viz.*, the *Paiśāchi Bṛihatkathā* of Guṇāḍhya, carries it further back to the earliest centuries of the Christian era. It

also occurs in the form Kannaḍar in the Tamil poem named *Śilappadikāram* which is supposed to go back to the second century A.D., and in the form Karunāḍagan in the Vēḷvikuḍi plates (*c.* 770) of the Pāṇḍya king Śaḍaiyan Parāṇtaka. The Sanskrit poet Rājaśēkhara (*c.* 900) refers in his *Kāvyamīmāmsā* to the mannerisms of the Karnāṭas in reading their books.

According to Caldwell, the term Karnāṭaka was at first a generic denomination of the plateau of the Southern Dekhan. He goes on to remark—

"Karnāṭaka has now got into the hands of foreigners who have given it a new and entirely erroneous application. When the Muhammadans arrived in Southern India, they found that part of it with which they first became acquainted—the country above the Ghats, including Mysore and part of Telingāna—called the Karnāṭaka country. In course of time, by a misapplication of terms, they applied the same name, the Karnāṭak or Carnatic, to designate the country below the Ghats, as well as that which was above. The English have carried the misapplication a step further, and restricted the name to the country below the Ghats, which never had any right to it whatever. Hence the Mysore country, which is properly the Carnatic, is no longer called by that name by the English, and what is now geographically termed 'the Carnatic' is exclusively the country below the Ghats on the Coromandel Coast, including the whole of the Tamil country and the District of Nellore only in the Telugu country."

The Kannada country and language are of great antiquity. The Kannada country was once under the rule of such ancient dynasties of kings as the Maurya, the Andhra, the Kadamba and the Ganga. According to Jaina accounts, when a great twelve years' famine occurred during the reign of the Maurya Emperor Chandragupta, the Jaina community under the leadership of the Śrutakēvali Bhadrabāhu migrated to the Punnāṭa kingdom in the south of Mysore; and the emperor Chandragupta, having abdicated, accompanied Bhadrabāhu as his disciple to Śravaṇa Beḷgoḷa where, on the death of his preceptor, he lived for some years. Three inscriptions of the time of Aśōka, the grandson of Chandragupta, are found in the Chitaldrug District of the Mysore State. Banavāsi, the ancient capital of the Kadambas, to the

north-west of Mysore, is mentioned in the Ceylonese Buddhist Chronicle *Mahāvanso* as a city to which a Buddhist missionary was sent in the third century B.C. Both this city and Punnāṭa are named by Ptolemy in the second century A.D. A few more points about the antiquity of the Kannada country have already been mentioned when speaking of the term Karnāṭa.*

With regard to the antiquity of the Kannada language, one or two points may be mentioned. According to Jaina tradition, Brāhmi, the daughter of Ṛishabhadēva, the first Tīrthankara, invented eighteen alphabets, including, among others, Kannada. Recently a curious inscription of about the ninth century was found in a Jaina temple in the Deoghar Fort containing specimens of different alphabets mostly Dravidian.† Among the papyri belonging to the second century A.D., discovered at Oxyrhyncus in Lower Egypt, there is one which contains a Greek play or farce, based upon the story of a Greek girl carried off to the coast of India and rescued by her brother, in which there occur some Indian words which, according to Dr. Hultzsch, are Kannada.¶

## The Alphabet.

The written character which is common to Kannada and Telugu and which spread over the south and was carried even to Indo-China and Java is derived from the Brāhmi, the parent of all the modern alphabets of India. As most of the Brāhmi letters agree with the northern Semitic characters of the early part of the ninth century B.C., some scholars are of opinion that it is likely that Hindu traders, about 800 B.C., borrowed north-Semitic letters to write their own language, and that Hindu scholars arranged and developed them into alphabetical systems suitable to express the requirements of the Sanskrit speech. There are likewise some scholars who, on the other hand, think that the Brāhmi alphabet is a national invention of very great antiquity.

The Kannada alphabet, like those of the other Dravidian languages, contains a few characteristic letters which are not

* For further details see Introduction to Vol. II, pp. 1-4.

† *Report on the Hindu and Buddhist Monuments*, Northern Circle, for 1918, p. 19.

¶ *Mysore Archæological Report* for 1904.

found in the Sanskrit alphabet. These are short e (ಎ) and o (ಒ); ḷ (ಋ), ṛ (ಌ) and ḷ (ಎ). Of these, ṛ and ḷ are still in use in Tamil and Malayāḷam, as also in the Baḍaga dialect. Ḷ disappeared from Kannada literature about the thirteenth century and from Telugu literature a few centuries earlier, while ṛ was disused in Kannada after the eighteenth, though still in use in Telugu. In Kannada the places of ಌ and ಎ have now been taken by ḷ (ಋ) and r (ರ) respectively. The regular use of these now obsolete letters in manuscripts helps us to some extent in fixing the age of Kannada works.

## The Vocabulary.

Kannada, in common with the cognate languages of the South, recognizes four classes of words as in current use for literary purposes—*tatsama*, pure Sanskrit words; *tadbhava*, Sanskrit words changed to suit the language; *dēśya*, indigenous words; and *grāmya*, provincialisms. To these, a later classification adds *anyadēśya*, foreign words. The *dēśya* class alone represents the pure language of the country, the real Kannada as distinguished from what has been imported from Sanskrit or other sources.

The Kannada vocabulary, though pretty sufficient for ordinary purposes, has to borrow from Sanskrit for expressing abstract ideas of philosophy, science and religion. Several of the Jaina authors, who were advocates of purism in the use of Kannada, have condemned the practice of introducing unnecessary Sanskrit words into Kannada composition. They denounce the practice as the mark of an imperfect education. Nripatunga compares it to an unnatural union with an old woman; Nayasēna to the mixing up of ghee and oil; and Nāgavarma to the stringing of pearls along with peppercorns. There were even a few authors who attempted to write works in Kannada without the admixture of Sanskrit words in order to show that the use of Sanskrit is not indispensable for Kannada composition. Yet later poets continued the indiscriminate introduction of pure and corrupt forms of Sanskrit words, so that we now find a large percentage of Sanskrit words in the Kannada language.

## The Three Stages of the Language.

There are three stages or periods of the language, *viz.*, Pūrvada Halagannada or the Primitive Old Kannada, Halagan-

nada or Old Kannada, and Hosagannada or Modern Kannada. This Primitive Old Kannada is said to have been the language of Banavāsi and to have continued in use to the end of the seventh century. This appears to answer to the 'Palagannada' of Nripatunga. This was succeeded by Halagannada which remained in use to about the 14th century, being followed in its turn by Hosagannada. These three stages are not separated from one another by hard and fast lines of demarcation: their boundaries may and do overlap one another. Yet each period is characterized by certain grammatical peculiarities which are not commonly found in others. Geographical separation of the Kannada-speaking communities and contact with people speaking various non-Dravidian languages have given rise to dialectic peculiarities such as are found in what are called Dharwar Kannada, Mangalore Kannada and Mysore Kannada.

## Antiquity of the Literature.

Kannada literature is of considerable antiquity. The earliest work extant is a treatise on poetics called *Kavirājamārga* by Nripatunga or Amōghavarsha, the Rāshtrakūṭa king who ruled from 814 to 877. But there are references in this work which enable us to place the rise of Kannada literature much farther back. Nripatunga mentions many Kannada authors that preceded him, one of these being Durvinīta, most probably the Ganga king of that name who ruled at the close of the sixth century. Kannada inscriptions make their appearance from about the sixth century. Besides the authors named by Nripatunga, Śyāmakundāchārya appears to have written in Kannada in about 650. Bhaṭṭākalanka mentions a voluminous Kannada commentary named *Chūḍāmaṇi*, containing 96,000 *granthas*, on the *Tattvārthamahāśāstra*. From inscriptions we learn that the author of this work was Śrīvardhadeva and that he was praised by Dandi, who probably lived at the close of the seventh century. This voluminous work of the seventh century presupposes the existence of an earlier literature and a wide-spread cultivation of the language. Further, Amritasāgara, a Jaina Tamil poet, who flourished before the eleventh century, states in his *Yāpparungalakkārigai*, a work on prosody, that there existed in the Kannada language a work on prosody named *Guṇagānkiyam* and that the Tamil work adopted some of its characteristics, one of which

was addressing the rules to a woman. Unfortunately the name of the author is not given, nor has the work come down to us. It is very probable that this author dedicated his work to the Eastern Chālukya king Vijayāditya III (844-888) who had the distinctive epithets Guṇaga, Guṇagānka and Gunake-nalla. This would be the earliest work on prosody in Kannada. It will thus be seen that the literature of Kannada is of far greater antiquity than that of any other Indian vernacular, except perhaps that of Tamil.

## Classes of Poets.

Kannada poets may be roughly classed as Jainas, Vīraśaivas and Brāhmanas. There are also authors of other sects, but their number is comparatively small. The earliest cultivators of the language for literary purposes were the Jainas and down to the twelfth century, we have, with very few exceptions, only Jaina authors. For about three centuries after that period, we have along with them a few Brāhmana writers and a pretty large number of Vīraśaiva authors, and from about the 15th century date numerous Brāhmanical and Vīraśaiva works. There were, however, during these later periods, some compositions by the Jainas, but most of the literature of later times originated with the other sects. The leading characteristic of the Jaina earlier works is that they are *champu-kāvyas*, or poems in a variety of composite metres interspersed with paragraphs in prose, though in works of a later period the *sāngatya* and *shaṭpadi* metres are largely used as in Brāhmanical and Vīraśaiva works. The earlier Vīraśaiva works are mostly in the form of *vachana* or poetical prose and occasionally in the *ragaḷe* and *tripadi* metres. The most recent compositions of all the sects are mostly in the form of *yakshagānas* or rustic dramas interspersed with songs and some in prose only. There were also some female authors such as Kanti, Mahādēviyakka, Śṛingāramma, Honnamma, etc.

## Extent and Range of the Literature.

Kannada literature is of vast extent and range. Bhaṭṭākalanka (1604) in his introduction to the *Śabdānuśāsana* remarks that in Kannada are written numerous works on *śabdāgama*, *yuktyāgama* and *paramāgama* as well as numberless books of poetry, the drama, rhetoric and the fine arts. A survey of

Kannada literature brings to view not only *kāvyas*, works on poetics, prosody and grammar, and lexicons, but also works bearing on biography, local history and philosophy, and a respectable number of works on medicine, veterinary science, mathematics, astrology, and other sciences and arts. Besides, there are innumerable Kannada inscriptions written in excellent *kāvya* style.

## Patronage of the Language and Literature.

From the earliest times Kannada language and literature have prospered under the fostering care of kings and nobles. Among the patrons may be mentioned the Gangas, the Rāshṭrakūṭas, the Western and Eastern Chālukyas, the Hoysaḷas, the Kākatīyas, the Raṭṭas of Saundatti, the Śilāhāras of Karāḍ, the Kongāḷvas, the Changāḷvas, the Tuḷuva kings, the Chauṭas, and the kings of Vijayanagara and Mysore; as also the Pālegārs or chiefs of Ummattūr, Nuggehalli, Sugaṭur, Piriyapaṭṭaṇa, Hadināḍu, Bēlūr, Chikkanāyakanhalli, Mudigere, Bijjavara, Ikkēri, and Kaḷale. Besides these kings and chiefs, ministers, generals and other officers subordinate to them and many minor chiefs have also encouraged literary men. It is also worthy of note that not a few of the above-mentioned kings, chiefs and high personages have themselves written works in Kannada and have thus enriched the stock of Kannada literature.*

## The Karnataka-Kavicharite or Lives of Kannada Poets.

As stated in the Introduction to the previous edition of this volume (p. 6), the method adopted in treating of the poets is as follows:—

Generally, in the life of each poet the following details are given:—his name; the names of his works; details of his life with reference to his country, parentage, caste, religion, spiritual preceptor, patron, titles, etc.; his time with discussion where necessary; the poets who mention him; the poets mentioned by him; the verses in which his poetical skill, etc., are referred to; detailed examination of his works with occasional literary criticisms; and illustrative extracts from the works.

* For detailed information see Introduction to Vol. II, pp. 8-15.

## The First Volume.

The first volume of the Karṇāṭaka-Kavicharite was published so far back as 1907. As the copies had been exhausted, it was thought desirable to issue a new edition with corrections and additions. Accordingly the work of revision was undertaken more than a year ago and this improved and enlarged edition has been brought out. Besides several new authors, those mentioned in Appendix I of the first edition and in the first forty-two pages and Appendix III of the second volume have been included in the present work. A number of works not noticed before, such as the *Sukumāracharite* of Śāntinātha (p. 83), the *Muḍigeya-ashṭaka* of Harīśvara (p. 234), the *Śrīpadāśīti* of Āchaṇṇa (p. 304) and so forth, has been added. Several Vīraśaiva authors of *vachanas*, not known before, have been included (pp. 201-210), as also a pretty good number of them noticed imperfectly in volume II (pp. 183-200). The number of poets dealt with in the previous edition is about 230, while that in the present edition is about 280. Among the poets, about 40 are composers of inscriptions. According to sects about 95 of the poets are Jainas, 90 Vīraśaivas, 45 Brāhmanas, and 50 others. It is worthy of notice that six of the authors are women. The Introduction, too, has been revised and enlarged. The Supplement to the previous edition has been left out as the majority of the authors and works mentioned in it has been included in volumes II and III. Whatever is left over will appear as a Supplement to the third volume.

Several gentlemen have very kindly helped me with criticisms and notes in the revision of the work. The help rendered by Mr. Santavirarya of the Nisani-maṭha of Davangere, however, deserves special mention. With very few exceptions, Vīraśaiva authors of *vachanas* do not give their names but only *ankitas* or dedicatory words consisting of the names of their favourite deities. Consequently it is not possible to make out the authors of particular *vachanas* unless we know definitely that such and such authors used such and such *ankitas*. Mr. Santavirarya was fortunate in coming across a palm-leaf manuscript of 3222 *vachanas*, copied in 1747, which gives the names of the authors along with their *vachanas*, as also, in most cases, the number of the *vachanas* composed by each. With the help of this manuscript, kindly

lent by him, it has been possible to make several corrections and additions in the portion relating to Vachanakāras (pp. 189-210). I am also obliged to Mr. Chennamallappa, Halasangi, Bijapur District, for having brought to my notice the Bijapur inscription noticed on page 449, which was probably composed by the poet Nāgachandra who, as we know, was connected with Bijapur.

A few words have to be said about other criticisms that have appeared in some journals and papers. In the Kannada *Parishat-patrike* for January 1922 (pp. 280-282) Mr. B. N. Krishna Murti states that the name of Guṇasēna-paṇḍita, who appears to have been a Kannada scholar also, is not found in both the volumes of the Karnāṭaka-Kavicharite. His name has not been included simply because there is no evidence to show that he wrote in Kannada. There has been a long controversy in the issues of the same journal about the author of the *Kavirājamārga* in which Mr. N. S. Rajapurohit has taken a leading part. But it has not produced any useful result. This is not the place to enter into an examination of the merits and demerits of the controversy; this much may, however, be said about it. It is inexplicable why a Jaina king, Nripatunga, should be so particular about appropriating the words occurring in a verse of the Bhagavadgītā for his titles (Journal for July 1923, p. 124). Mr. Rajapurohit's statement that Nripatunga had the title Śrīvijaya has no basis to stand upon. The verse, Kāvyāvalōkana 78, on which he relies for proof, does not help him, inasmuch as the title Śrīvijaya does not occur in it, the meaning of the first portion, *vīraśrī vijayana key-sārc* being "on the goddess of victory coming into the possession of Arjuna (Vijaya)". Pandit T. N. Subbaraya Sastri has in the *Prabuddha-Karnāṭaka* (Dipavali issue of the year Dundubhi, pp. 5-16) tried to prove that Kumāra-vyāsa was a contemporary of Harīśvara (*c.* 1165), relying on certain statements made in the modern work *Chōrabasavacharite* (1763). But this single statement made in it that Rāghava (*c.* 1165), Bhīmakavi (1369), the minister Lakkaṇa (1428) and Harīśvara (*c.* 1165) were seated together at Hampe is quite enough to show how much credence can be given to the work for chronological purposes. The Vīraśaiva editors of the *Vibhākara* (30th June 1922) and the *Vīraśaivadharmaprakāśike* (July 1922) have made some ungracious remarks about me, no doubt, under a misapprehension. They attribute motives to me

and are pleased to say that being a man of a different faith I suppressed the names of Vīraśaiva authors of *vachanas* simply because I was envious of their fame. I can only say that the question of faith has no place in the republic of letters and that no Vīraśaiva writer has worked as hard as myself for revealing to the world the wealth of Vīraśaiva literature in Kannada. I did not give the names of some Vachanakāras because I did not know them, but I did not omit to give their *ankitas*. If I had come across the manuscript obtained by Mr. Santavirarya at the time of writing the second volume, I should have very gladly given the names.

Lastly, I would make a remark about Mr. Tirumalatatacharya's article in the *Parishatpatrike* for October 1922 (pp. 171-184) where he seems to think that the word *baredam* (wrote) at the end of an inscription refers to the composer. This is not necessarily so, unless we have some further clue as to his authorship. *Baredam* by itself simply refers to the writer or copyist. Consequently Gurubhakta-Rāchayya, Rāvapayya and Pratikantha-Kāmarāja, mentioned as authors, are mere copyists.

I am fully conscious that this edition is not quite free from mistakes; but I have endeavoured to make it as accurate as possible. I now offer it as a tribute to the Kannadigas with the hope that it will meet with their appreciation and support. I earnestly hope that the third volume, which is still in the press, will be out soon.

I have to express my deep debt of gratitude to His Highness the Maharaja of Mysore for gracious permission to dedicate this work to him.

It only remains for me to express my thanks to scholars and the press for their appreciative notices of the Second Volume of the Lives of Kannada Poets, and to the authorities of the Mysore University for sanctioning a grant-in-aid of Rs. 500 towards the printing charges of this revised edition.

I have also to thank the Superintendent of the Bangalore Press for the promptness and care with which the Volume has been printed.

BANGALORE,
*1st March 1924.*

R. NARASIMHACHARYA.

# ಅವತರಣಿಕೆ.

## ಪಂಚದ್ರಾವಿಡ.

ಕನ್ನಡಭಾಷೆ ಪಂಚದ್ರಾವಿಡವೆಂದು ಪ್ರಖ್ಯಾತವಾಗಿರುವ ಭಾಷೆಗಳಲ್ಲಿ ಒಂದಾಗಿದೆ. ಈ ಭಾಷಾವರ್ಗಕ್ಕೆ ತಮಿಳು, ತೆಲುಗು, ಮಲೆಯಾಳ. ತುಳು ಇವೂ ಸೇರಿವೆ. ನಮ್ಮ ದೇಶದ ಪ್ರಾಚೀನಪಂಡಿತರು ಮರಾಠಿ, ಗುಜರಾತಿ ಎಂಬ ಭಾಷೆಗಳನ್ನೂ ಕೂಡ ದ್ರಾವಿಡಭಾಷಾವರ್ಗಕ್ಕೆ ಸೇರಿಸಿದ್ದಾರೆ. ಆದರೆ ಈ ಭಾಷೆಗಳು ಸಂಸ್ಕೃತಜನ್ಯವಾದುದರಿಂದ ಈಗಿನ ಭಾಷಾತತ್ವಜ್ಞರು ಇವುಗಳನ್ನು ಏತಜ್ಜಾತೀಯವಾದ ಬಂಗಾಳಿ, ಸೈಂಧವಿ ಇನೇ ಮೊದಲಾದ ಗೌಡಭಾಷಾವರ್ಗಕ್ಕೆ ಸೇರಿಸುತ್ತಾರೆ.

## ದ್ರಾವಿಡಭಾಷೆಗಳ ಪ್ರಾಚೀನತೆ.

ದ್ರಾವಿಡಭಾಷೆಗಳು ಬಹಳ ಪುರಾತನವಾದುವು. ದ್ರಾವಿಡ ಎಂಬ ಶಬ್ದವು ಮಹಾಭಾರತದಲ್ಲಿಯೂ ಮನು. ಪರಾಶರ, ವರಾಹಮಿಹಿರ, ಕುಮಾರಿಲಭಟ್ಟ ಇವರುಗಳ ಗ್ರಂಥಗಳಲ್ಲಿಯೂ ದೊರೆಯುತ್ತದೆ. ಕ್ರಿ. ಪೂ. 6 ನೆಯ ಶತಮಾನದಲ್ಲಿ ಹುಟ್ಟಿದ ಬಹಿಸ್ತಾನ್ ಶಾಸನದ ಭಾಷೆ ವ್ಯಾಕರಣ ಮರ್ಯಾದೆಯಲ್ಲಿ ದ್ರಾವಿಡ ಭಾಷೆಗಳನ್ನು ತಕ್ಕಮಟ್ಟಿಗೆ ಹೋಲುವುದೆಂದು ಕೆಲವರು ಪಾಶ್ಚಾತ್ಯ ಪಂಡಿತರು ಬರೆದಿದ್ದಾರೆ.

## ದ್ರಾವಿಡಭಾಷೆಗಳು ಪ್ರಚಾರದಲ್ಲಿರುವ ಪ್ರದೇಶಗಳು.

ಮರಾಠಿ. ಗುಜರಾತಿ, ಓಡ್ರಿ ಈ ಭಾಷೆಗಳು ಪ್ರಚಾರದಲ್ಲಿರುವ ಭಾಗಗಳನ್ನು ಬಿಟ್ಟು ವಿಂಧ್ಯಪರ್ವತದಿಂದ ಕನ್ಯಾಕುಮಾರಿಯವರೆಗೆ ಇರುವ ಉಳಿದ ಭಾಗ; ಮಧ್ಯಪ್ರಾಂತ; ಜೋಟಾನಾಗಪುರ; ಗಂಗಾತೀರದ ರಾಜಮಹಾಲ್; ಬೆಲೂಚಿಸ್ಥಾನ; ಸಿಂಹಳದ್ವೀಪದ ಉತ್ತರಾರ್ಧ—ಈ ಪ್ರದೇಶಗಳಲ್ಲಿ ದ್ರಾವಿಡ ಭಾಷೆಗಳು ಪ್ರಚಾರದಲ್ಲಿವೆ.

## ಪಂಚದ್ರಾವಿಡಗಳಲ್ಲದ ಇತರ ದ್ರಾವಿಡಭಾಷೆಗಳು.

ಮೇಲೆ ಹೇಳಿದ ಪಂಚದ್ರಾವಿಡ ಭಾಷೆಗಳಲ್ಲದೆ ಈ ವರ್ಗಕ್ಕೆ ಸೇರಿದ ಕೊಡಗು, ತುದ, ಬಡಗ, ಕೋತ ಮುಂತಾದ ಕೆಲವು ಕ್ಷುಲ್ಲಕಭಾಷೆಗಳೂ ದಕ್ಷಿಣ ಹಿಂದೂದೇಶದಲ್ಲಿ ಅಲ್ಲಲ್ಲಿ ವ್ಯವಹಾರದಲ್ಲಿವೆ. ಇವಲ್ಲದೆ ಹಿಂದೂದೇಶದ ಉತ್ತರ ಪ್ರಾಂತಗಳಲ್ಲಿ ಬಳಕೆಯಲ್ಲಿರುವ ಗೋಂಡಿ, ಕುಇ, ಕುರುಖ್, ಮಲ್ತೋ

ಅಥವಾ ರಾಜಮಹಾಲಿ ಎಂಬ ಭಾಷೆಗಳೂ ಬೆಲೂಚಿಸ್ಥಾನದ ಒಂದು ಭಾಗದಲ್ಲಿ ಪ್ರಚಾರದಲ್ಲಿರುವ ಬ್ರಾಹೂಈ ಎಂಬ ಭಾಷೆಯೂ ದ್ರಾವಿಡಭಾಷಾವರ್ಗಕ್ಕೆ ಸೇರಿದುವೆಂದು ಭಾಷಾತತ್ವಜ್ಞರು ನಿರ್ಣಯಿಸಿದ್ದಾರೆ. ದ್ರಾವಿಡರು ಆರ್ಯರಂತೆ ವಾಯವ್ಯದಿಕ್ಕಿನಿಂದ ಹಿಂದೂದೇಶಕ್ಕೆ ಪ್ರವೇಶಮಾಡಿದರು ಎಂಬುದಕ್ಕೆ ಈ ಬ್ರಾಹೂಈ ಭಾಷೆ ಸಾಕ್ಷಿಯಾಗಿದೆ ಎಂದೂ ಹೇಳುತ್ತಾರೆ.

## ದ್ರಾವಿಡಭಾಷೆಗಳನ್ನು ಆಡುವವರ ಸಂಖ್ಯೆ.

ದ್ರಾವಿಡಭಾಷೆಗಳನ್ನು ಮಾತನಾಡುವ ಜನರ ಸಂಖ್ಯೆ ಸುಮಾರು ಆರು ಕೋಟಿಯೂ ನಾಲ್ವತ್ತು ಲಕ್ಷವೆಂದು ತಿಳಿಯಬರುತ್ತದೆ.

## ದ್ರಾವಿಡರ ನಾಗರಿಕತೆ.

ದ್ರಾವಿಡರು ಆರ್ಯರ ಆಗಮನಕ್ಕೆ ಮೊದಲೇ ನಗರಗಳನ್ನು ಕಟ್ಟಿ, ರಾಜತಂತ್ರಗಳಲ್ಲಿ ಕೂಡಿದಮಟ್ಟಿಗೆ ನಿಪುಣರಾಗಿ, ಕೃಷಿವಾಣಿಜ್ಯಗಳನ್ನು ತಿಳಿದು, ಹಡಗುಗಳ ಮೇಲೆ ಇತರ ದೇಶೀಯರೊಡನೆ ವ್ಯಾಪಾರಗಳನ್ನು ನಡಸುತ್ತ ಇದ್ದಂತೆ ತಿಳಿಯಬರುತ್ತದೆ. ಇದರಿಂದ ಇವರಿಗೆ ಎಷ್ಟುಮಟ್ಟಿಗೆ ನಾಗರಿಕತೆ ಇದ್ದಿತೆಂಬುದನ್ನು ಊಹಿಸಬಹುದಾಗಿದೆ.

## ದ್ರಾವಿಡ ಗೌಡ ಭಾಷಾವರ್ಗಗಳ ಪರಸ್ಪರ ಭೇದಗಳು.

ದ್ರಾವಿಡ ಭಾಷೆಗಳು ಇತರ ಭಾಷಾವರ್ಗಗಳಿಗೆ ಸಂಬಂಧಿಸದ ಒಂದು ಪ್ರತ್ಯೇಕ ಭಾಷಾವರ್ಗವಾಗಿವೆ ಎಂದೂ, ಈ ವರ್ಗಕ್ಕೂ ಹಿಂದೂದೇಶದ ಹೊರಗಣ ಭಾಷಾವರ್ಗಗಳಿಗೂ ಹಾಗೆಯೇ ಸಂಸ್ಕೃತವೇ ಮೊದಲಾದ ಭಾಷೆಗಳನ್ನು ಒಳಕೊಂಡಿರುವ ಇಂದೋಯೂರೋಪಿಯನ್ ಭಾಷಾವರ್ಗಕ್ಕೂ ಸಂಬಂಧವನ್ನು ಕಲ್ಪಿಸಲು ಮಾಡಿದ ಪ್ರಯತ್ನಗಳು ಫಲಕಾರಿಯಾಗಿಲ್ಲ ಎಂದೂ, ಕೆಲವರು ಪಾಶ್ಚಾತ್ಯಪಂಡಿತರು ಅಭಿಪ್ರಾಯಪಡುತ್ತಾರೆ.

ದ್ರಾವಿಡಭಾಷೆಗಳಲ್ಲಿ ಕೆಲವು ಸಂಸ್ಕೃತಪದಗಳೂ ಸಂಸ್ಕೃತಭಾಷಾನುಸಾರವಾದ ಕೆಲಕೆಲವು ಪ್ರಯೋಗವಿಶೇಷಗಳೂ ದೊರೆತರೂ, ಭಾಷೆಗಳ ಪರಸ್ಪರ ಸಂಬಂಧವನ್ನು ನಿರ್ಣಯಿಸಲು ಮುಖ್ಯಸಾಧನವಾದ ವ್ಯಾಕರಣವನ್ನು ಪರಿಶೀಲಿಸಿ ನೋಡಿದಲ್ಲಿ, ಸಂಸ್ಕೃತಭಾಷಾಮಾರ್ಗಕ್ಕೂ ದ್ರಾವಿಡಭಾಷಾಮಾರ್ಗಕ್ಕೂ ಸಂಬಂಧವಿಲ್ಲವೆಂಬುದು ವ್ಯಕ್ತವಾಗುತ್ತದೆ.

ಮರಾಠಿಯೇ ಮೊದಲಾದ ಗೌಡಭಾಷೆಗಳಲ್ಲಿ ಸಂಸ್ಕೃತಜನ್ಯವಲ್ಲದ ಅಲ್ಪಸ್ವಲ್ಪ ಸ್ವತಂತ್ರಶಬ್ದಗಳಿದ್ದರೂ ವ್ಯವಹಾರಕ್ಕೆ ಬೇಕಾದ ಶಬ್ದಗಳೆಲ್ಲಾ ಪ್ರಾಯಿಕವಾಗಿ ಸಂಸ್ಕೃತಜನ್ಯವಾಗಿಯೇ ಇವೆ. ಅಲ್ಲದೆ ಆ ಭಾಷೆಗಳಲ್ಲಿ ಲಿಂಗನಿರ್ಣಯ, ಸಂಧಿ, ಪ್ರತ್ಯಯಸಂಯೋಜನ ಇವೇ ಮುಂತಾದ ವ್ಯಾಕರಣಪ್ರಕ್ರಿಯೆಗಳು

ಸಂಸ್ಕೃತ ವ್ಯಾಕರಣ ಮರ್ಯಾದೆಯನ್ನು ಅನುಸರಿಸಿವೆ. ದ್ರಾವಿಡಭಾಷೆಗಳಲ್ಲಾ ದರೋ ಹೀಗಿಲ್ಲ. ಇವುಗಳಲ್ಲಿ ಸಂಸ್ಕೃತಜನ್ಯವಾದ ಕೆಲಕೆಲವು ಶಬ್ದಗಳು ಸೇರಿದ್ದರೂ ವ್ಯವಹಾರಕ್ಕೆ ಬೇಕಾದ ಶಬ್ದಗಳು ಪ್ರಾಯಿಕವಾಗಿ ಸ್ವತಂತ್ರವಾಗಿವೆ. ಅಲ್ಲದೆ ವ್ಯಾಕರಣಮರ್ಯಾದೆಯೂ ಸಂಸ್ಕೃತದಿಂದ ಬಹಳಮಟ್ಟಿಗೆ ಭಿನ್ನವಾಗಿದೆ— ಈ ಭಾಷೆಗಳಲ್ಲಿ ಲಿಂಗವು ಅರ್ಥವನ್ನು ಅನುಸರಿಸುತ್ತದೆ; ಸಂಧಿಕ್ರಮವು ಬೇರೆ ಯಾಗಿದೆ; ನಾಮಪದಗಳಲ್ಲಿ ಏಕವಚನ ಬಹುವಚನವೆರಡರಲ್ಲಿಯೂ ಒಂದೇ ವಿಧವಾದ ವಿಭಕ್ತಿಪ್ರತ್ಯಯಗಳು ಸೇರುತ್ತವೆ; ಗುಣವಾಚಕಗಳಿಗೆ ತರತಮ ಭಾವ ವಿಲ್ಲ: ಸಂಬಂಧಾರ್ಥಕ ಸರ್ವನಾಮವಿಲ್ಲ; ಕರ್ಮಣಿ ಪ್ರಯೋಗವು ವಿಶೇಷ ವಾಗಿಲ್ಲ; ಕ್ರಿಯೆಗಳಿಗೆ ನಿಷೇಧರೂಪವಿದೆ: ಕೃತ್ತದ್ಧಿತ ಪ್ರತ್ಯಯಗಳು ಬೇರೆಯಾ ಗಿವೆ. ಉತ್ತಮಪುರುಷದ ಸರ್ವನಾಮಕ್ಕೆ ಇದಿರಲ್ಲಿರುವವರನ್ನು ಸೇರಿಸಿ ಕೊಳ್ಳುವ ಮತ್ತು ಸೇರಿಸಿಕೊಳ್ಳದ ಎರಡು ಬಗೆಯ ಬಹುವಚನಗಳಿವೆ.

## ದಕ್ಷಿಣ ಹಿಂದೂದೇಶದ ದ್ರಾವಿಡಭಾಷೆಗಳು.

ದಕ್ಷಿಣ ಹಿಂದೂದೇಶದಲ್ಲಿ ಪ್ರಚಾರದಲ್ಲಿರುವ ತಮಿಳು, ತೆಲುಗು, ಕನ್ನಡ, ಮಲೆಯಾಳ, ತುಳು, ತುದ, ಬಡಗ, ಕೋತ, ಕೊಡಗು ಎಂಬ ದ್ರಾವಿಡ ಭಾಷೆ ಗಳಲ್ಲಿ ತಮಿಳು, ತೆಲುಗು, ಕನ್ನಡ ಮಲೆಯಾಳ—ಈ ನಾಲ್ಕು ಭಾಷೆಗಳಿಗೂ ವರ್ಣಮಾಲೆಗಳೂ, ವ್ಯಾಕರಣಗಳೂ ಗ್ರಂಥಗಳೂ ಇವೆ. ಆದುದರಿಂದ ಇವು ಗಳನ್ನು ಗ್ರಾಂಥಿಕಭಾಷೆಗಳು ಎನ್ನಬಹುದು. ಉಳಿದ ಭಾಷೆಗಳಿಗೆ ಸ್ವತಂತ್ರ ವಾದ ವರ್ಣಮಾಲೆಗಳು ಕೂಡ ಇಲ್ಲ. ಅವು ಕೇವಲ ವ್ಯಾವಹಾರಿಕ ಭಾಷೆಗ ಳಾಗಿವೆ. ಅವುಗಳಲ್ಲಿ ಕೆಲಭಾಷೆಗಳ ಪುಸ್ತಕಗಳನ್ನು ಇತರ ದ್ರಾವಿಡಭಾಷಾ ಲಿಪಿಗಳಲ್ಲಿ ಬರೆವ ಮತ್ತು ಮುದ್ರಿಸುವ ಪದ್ಧತಿಯಿದೆ. ಈ ಭಾಷೆಗಳೆಲ್ಲಾ ಕನ್ನ ಡದ ಆಭಾಸಗಳೆಂದು ತಿಳಿಯಬರುತ್ತದೆ.

## ಗ್ರಾಂಥಿಕ ದ್ರಾವಿಡಭಾಷೆಗಳು.

ತಮಿಳು, ತೆಲುಗು, ಕನ್ನಡ, ಮಲೆಯಾಳ ಎಂಬ ಗ್ರಾಂಥಿಕ ದ್ರಾವಿಡ ಭಾಷೆಗಳಲ್ಲಿ ಮಲೆಯಾಳವು ತಮಿಳಿನ ಆಭಾಸವಾಗಿ ಹುಟ್ಟಿ ಬಹಳ ಕಾಲಕ್ಕೆ ಹಿಂದೆ ಯೇ ಸ್ವತಂತ್ರ ಭಾಷೆಯಾಯಿತೆಂದು ಕೆಲವರು ಹೇಳುತ್ತಾರೆ. ಉಳಿದ ಮೂರು ಭಾಷೆಗಳೂ ಶಬ್ದರೂಪದಲ್ಲಿಯೂ ವ್ಯಾಕರಣಮರ್ಯಾದೆಯಲ್ಲಿಯೂ ವಿಶೇಷವಾದ ಸಂಬಂಧವುಳ್ಳವುಗಳಾಗಿವೆ. ಆದರೂ ಕನ್ನಡಕ್ಕೂ ತಮಿಳಿಗೂ ಇರುವಷ್ಟು ಹೋಲಿಕೆಗಳು ಕನ್ನಡಕ್ಕೂ ತೆಲುಗಿಗೂ ಇಲ್ಲ. ಅನೇಕ ಶಬ್ದಗಳೂ ಅನೇಕ ವ್ಯಾಕರಣ ಪ್ರಕ್ರಿಯೆಗಳೂ ಕನ್ನಡ ತಮಿಳುಗಳಲ್ಲಿ ಒಂದೇ ಆಗಿವೆ. ತೆಲುಗಿನಲ್ಲಿ ಇಂಥ ಸಾಮ್ಯಗಳು ಕಡಮೆ. ಈ ಭಾಷೆಗೆ ಅಸಾಧಾರಣವಾದ ಅಕ್ಷರಪಲ್ಲಟವೇ

ಮುಂತಾದ ಮಾರುಪಾಡುಗಳಿಂದ ಅನೇಕ ಸಂಧರ್ಭಗಳಲ್ಲಿ ಮಾತುಗಳ ಸ್ವರೂಪವನ್ನು ಗೊತ್ತುಮಾಡುವುದೇ ಕಷ್ಟವಾಗುತ್ತದೆ. ಈ ಯಂಶವನ್ನು ತೋರಿಸುವುದಕ್ಕಾಗಿ ಕೆಲವು ಉದಾಹರಣಗಳು ಕೆಳಗೆ ಕೊಟ್ಟಿವೆ:—

| | | | | | |
|---|---|---|---|---|---|
| **ತಮಿಳು** | ಇವರ್ | ಆಗಾದು | ಊರಲ್ | ಉಳ್ | ಅದೈ |
| **ಕನ್ನಡ** | ಇವರ್ | ಆಗದು | ಒರಲ್ | ಒಳ್ | ಅದಂ |
| **ತೆಲುಗು** | ವೀರು | ಕಾದು | ರೋಲು | ಲೋ | ದಾನಿ |

## ಕನ್ನಡಭಾಷೆ.

ತಮಿಳರು ತಮ್ಮ ಭಾಷೆಯ ಹೆಸರಾದ ತಮಿಳ್ ಎಂಬ ಶಬ್ದವು 'ಮಧುರ ಎಂಬ ಅರ್ಥವುಳ್ಳದೆಂದು ಹೇಳುತ್ತಾರೆ. ಹಾಗೆಯೇ ತೆಲುಗರೂ ತೆನುಗು ಎಂಬ ಶಬ್ದವು ಮಾಧುರ್ಯವಾಚಿಯೆನ್ನುವರು. ಕನ್ನಡಶಬ್ದದ ವ್ಯುತ್ಪತ್ತಿ ಮುಂದೆ ವಿವರಿಸಲ್ಪಡುವುದು. ತಮಿಳಲ್ಲಿ ಅಗಸ್ತ್ಯಋಷಿಗಳೂ, ತೆಲುಗಿನಲ್ಲಿ ಕಣ್ವಋಷಿಗಳೂ ಆದಿಕವಿಗಳಾಗಿ ಗ್ರಂಥ ನಿರ್ಮಾಣ ಮಾಡಿದಂತೆ ಪ್ರತೀತಿಯಿದೆ. ಆದರೆ ಕನ್ನಡಿಗರು ತಮ್ಮ ಭಾಷೆಗೆ ಆವ ಋಷಿಯೂ ಪ್ರವರ್ತಕನಾಗಿದ್ದಂತೆ ಹೇಳುವುದಿಲ್ಲ.

## ಕನ್ನಡಭಾಷೆಯ ಪ್ರಚಾರದ ಹಿಂದಣ ಮತ್ತು ಈಗಿನ ಪ್ರದೇಶಗಳು.

ಒಂಬತ್ತನೆಯ ಶತಮಾನದಲ್ಲಿ ಕನ್ನಡ ಭಾಷೆ ಕಾವೇರಿಯಿಂದ ಗೋದಾವರಿಯವರೆಗೂ ಪ್ರಚಾರದಲ್ಲಿದ್ದಿತೆಂದೂ ಕಿಸುವೊಳಲ್, ಕೊಪಣನಗರ, ಪುಲಿಗೆರೆ, ಒಂಕುಂದ ಇವುಗಳ ಮಧ್ಯಪ್ರದೇಶವೇ ತಿರುಳುಗನ್ನಡದ ನೆಲೆಯೆಂದೂ ನೃಪತುಂಗನ (814–877) ಕವಿರಾಜಮಾರ್ಗದಿಂದ[1] ತಿಳಿಯುತ್ತದೆ ಆದಿಪಂಪನು (941) "ಪುಲಿಗೆಜಿಯ ತಿರುಳ ಕನ್ನಡದೊಳ್" ತನ್ನ ಗ್ರಂಥವನ್ನು ಬರೆದುದಾಗಿ ಹೇಳಿದ್ದಾನೆ

ಈಗ ಕನ್ನಡ ಭಾಷೆ—ಮೈಸೂರು ಸಂಸ್ಥಾನ, ಕೊಡಗು, ಮುಂಬಯ್ ಆಧಿಪತ್ಯದ ದಕ್ಷಿಣ ಜಿಲ್ಲೆಗಳು, ಹೈದರಾಬಾದ್ ಸಂಸ್ಥಾನದ ಪಶ್ಚಿಮಭಾಗ. ಮೈಸೂರು ಕೊಡಗು ಇವುಗಳ ಉತ್ತರ ಪಶ್ಚಿಮ ದಕ್ಷಿಣ ದಿಕ್ಕುಗಳಲ್ಲಿರುವ ಮದರಾಸ್ ಆಧಿಪತ್ಯದ ಜಿಲ್ಲೆಗಳು, ಮಧ್ಯಪ್ರಾಂತ ಬೀರಾರ್ ಇವುಗಳ ಕೆಲಭಾಗಗಳು, ದಕ್ಷಿಣಮಧುರಾ ಜಿಲ್ಲೆ:—ಈ ಪ್ರದೇಶಗಳಲ್ಲೆಲ್ಲಾ ಪ್ರಚಾರದಲ್ಲಿದೆ. ಕನ್ನ

---

1. ಕಾವೇರಿಯಿಂದಮಾ ಗೋ। ದಾವರಿವರಮಿರ್ದ ನಾಡದಾ ಕನ್ನಡದೊಳ್ ॥
ಭಾವಿಸಿದ ಜನಪದಂ ನಸು। ಧಾವಳಯನಿಲೀನನಿಶದನಿಷಧ ವಿಶೇಷಂ ॥
ಅದಱೊಳಗಂ ಕಿಸುವೊಟಲಾ। ವಿದಿತಪುರಾಕೊಪಣನಗರದಾ ಪುಲಿಗೆಜಿರಾ ॥
ಸದಭಿಸ್ತುತಮೊಂಕುಂ। ದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್ ॥

ಡದ ಆಭಾಸಗಳಾದ ತುದ, ಬಡಗ, ಕೋತ ಎಂಬ ಉಪಭಾಷೆಗಳು ನೀಲಗಿರಿ ಯಲ್ಲಿ ವ್ಯವಹಾರದಲ್ಲಿವೆ.

## ಕನ್ನಡ ಭಾಷೆಯನ್ನು ಆಡುವವರ ಸಂಖ್ಯೆ.

ಕನ್ನಡ ಭಾಷೆಯನ್ನು ಮಾತನಾಡುವ ಜನರ ಸಂಖ್ಯೆ ಸುಮಾರು ಒಂದು ಕೋಟಿಯೂ ಹತ್ತು ಲಕ್ಷವೆಂದು ತಿಳಿಯಬರುತ್ತದೆ.

## ಕರ್ನಾಟ ಎಂಬ ಶಬ್ದದ ವ್ಯುತ್ಪತ್ತಿ.

ಕರ್ನಾಟ ಎಂಬ ಶಬ್ದದ ವ್ಯುತ್ಪತ್ತಿಯ ವಿಷಯದಲ್ಲಿ ಭಿನ್ನಾಭಿಪ್ರಾಯ ಗಳಿವೆ. ಕೇಶವವರ್ಣಿ (1359) ಎಂಬ ಜೈನಪಂಡಿತನು ಭೇದನಾರ್ಥಕವಾದ ಕರ್ಣಧಾತುವಿನಿಂದ ಹುಟ್ಟಿತೆಂದು ಭಾವಿಸಿ ದಿವ್ಯಭಾಷೆಯಿಂದ ಬೇರೆಯಾಗಿ ವ್ಯವಹಾರದಲ್ಲಿರುವ ಭಾಷೆಯಾದ ಕಾರಣ ಇದಕ್ಕೆ ಕರ್ಣಾಟ ಎಂಬ ಹೆಸರು ಬಂದಿದೆ ಎಂದು ಹೇಳುತ್ತಾನೆ. ವಿಶ್ವಗುಣಾದರ್ಶ ಎಂಬ ಸಂಸ್ಕೃತ ಗ್ರಂಥವನ್ನು ಬರೆದ ವೆಂಕಟಾಧ್ವರಿ (ಸು. 1700) ಕರ್ಣಗಳಲ್ಲಿ ಅಟನ ಮಾಡುವುದರಿಂದ (ಎಂದರೆ ಎಲ್ಲರ ಕಿವಿಗಳಲ್ಲಿಯೂ ಬಿದ್ದು ಪ್ರಸಿದ್ಧವಾದುದರಿಂದ) ಇದಕ್ಕೆ ಕರ್ಣಾಟ ವೆಂಬ ಹೆಸರುಂಟಾಯಿತೆಂದು ಹೇಳುತ್ತಾನೆ. ಈ ಎರಡು ವ್ಯುತ್ಪತ್ತಿಗಳೂ ಕವಿಕಲ್ಪನೆಯೆಂದು ಹೇಳಬಹುದು ಡಾಕ್ಟರ್ ಗುಂಡರ್ಟ್ ಎಂಬವನು ಈ ಶಬ್ದವು **ಕರ್ + ನಾಡು** (ಕರಿಯ ಮಣ್ಣಿನ ದೇಶ) ಎಂಬ ಪದಗಳಿಂದ ಬಂದಿರ ಬೇಕೆಂದು ಅಭಿಪ್ರಾಯಪಡುತ್ತಾನೆ ಇನ್ನು ಕೆಲವರು **ಕರು + ನಾಡು** (ಎತ್ತರ ವಾದ ದೇಶ) ಎಂಬ ಪದಗಳಿಂದ ಬಂದಿದೆ ಎನ್ನುತ್ತಾರೆ ಕೇಶಿರಾಜನೂ ಭಟ್ಟಾ ಕಳಂಕನೂ ಕನ್ನಡ ಎಂಬುದು ಕರ್ನಾಟ ಎಂಬುದರ ಅಪಭ್ರಂಶವೆಂದು ಹೇಳಿ ದ್ದಾರೆ. ಆದರೆ ಕರ್ನಾಟ ಎಂಬುದು ಕನ್ನಡ ಎಂಬ ಮೂಲಪದದ ಸಂಸ್ಕೃತ ರೂಪವೆಂದು ಹೇಳಲಿಕ್ಕೂ ಅವಕಾಶವುಂಟು.

## ಕರ್ನಾಟ ಎಂಬ ಶಬ್ದದ ಪೂರ್ವಪ್ರಯೋಗಗಳು.

ಆರನೆಯ ಶತಮಾನದ ಆದಿಭಾಗದಲ್ಲಿದ್ದ ವರಾಹಮಿಹಿರನು ತನ್ನ ಬೃಹ ತ್ಸಂಹಿತೆಯಲ್ಲಿ ಕರ್ನಾಟ ಎಂಬ ಹೆಸರನ್ನು ಹೇಳಿದ್ದಾನೆ ಸೋಮದೇವನ ಕಥಾ ಸರಿತ್ಸಾಗರದಲ್ಲಿ ಈ ಶಬ್ದವು ಬರುವುದರಿಂದ ಅವನ ಮೂಲಗ್ರಂಥವಾದ ಗುಣಾ ಢ್ಯನ ಬೃಹತ್ಕಥೆಯಲ್ಲಿಯೂ ಅದು ಇದ್ದಿರಬೇಕು. ಹಾಗಿದ್ದಪಕ್ಷದಲ್ಲಿ ಈ ಶಬ್ದದ ಪ್ರಯೋಗವು ಕ್ರಿಸ್ತಶಕ ಒಂದನೆಯ ಅಥವಾ ಎರಡನೆಯ ಶತಮಾನದಲ್ಲಿ ಸಿಕ್ಕಿ ದಂತಾಯಿತು. ಸುಮಾರು ಎರಡನೆಯ ಶತಮಾನದಲ್ಲಿ ರಚಿತವಾದ ಶಿಲಪ್ಪದಿ ಗಾರಂ ಎಂಬ ತಮಿಳು ಕಾವ್ಯದಲ್ಲಿ **ಕನ್ನಡರ್** ಎಂಬ ಶಬ್ದವೂ ಶಡೈರ್ಯ ಪರಾಂ

ತಗ್ಗ ಎಂಬ ಪಾಂಡ್ಯರಾಜನು ಸುಮಾರು 770 ರಲ್ಲಿ ಕೊಟ್ಟ ವೇಳ್ವಿಕುಡಿ ತಾಮ್ರ ಶಾಸನದಲ್ಲಿ ಕರುನಾಡಗ (ಕರ್ಣಾಟಕ) ಎಂಬ ಶಬ್ದವೂ ದೊರೆಯುತ್ತನೆ. ಸುಮಾರು 900 ರಲ್ಲಿದ್ದ ರಾಜಶೇಖರನೆಂಬ ಸಂಸ್ಕೃತಕವಿ ತನ್ನ ಕಾವ್ಯವಿಮಾಮಾಂಸೆಯಲ್ಲಿ ಕರ್ಣಾಟರು ಓದುವ ರೀತಿಯನ್ನು ನಿರೂಪಿಸಿದ್ದಾನೆ.

## ಕರ್ಣಾಟಕ ಎಂಬ ಹೆಸರಿನ ವಿಪರೀತಾರ್ಥ.

ಪೂರ್ವದಲ್ಲಿ ಕರ್ಣಾಟಕ ಎಂಬುದು ದಕ್ಷಿಣ ಹಿಂದೂದೇಶದ ಎತ್ತರವಾದ ಪ್ರಾಂತಕ್ಕೆ ಹೆಸರಾಗಿದ್ದಿತು. ಈಚೆಗೆ ವಿದೇಶಿಗಳ ಕೈಗೆ ಸಿಕ್ಕಿ ವಿಪರೀತಾರ್ಥವನ್ನು ಹೊಂದಿತು. ಮಹಮ್ಮದೀಯರು ಮೊದಲು ಮೊದಲು ದಕ್ಷಿಣ ಹಿಂದೂದೇಶಕ್ಕೆ ಬಂದಾಗ ಮೈಸೂರು, ತೆಲುಗುದೇಶದಲ್ಲಿ ಸ್ವಲ್ಪಭಾಗ ಇವುಗಳನ್ನು ಒಳಕೊಂಡ ಘಟ್ಟದ ಮೇಗಣ ದೇಶಕ್ಕೆ ಕರ್ಣಾಟಕ ಎಂಬ ಹೆಸರು ಇದ್ದಿತು. ಕಾಲಕ್ರಮದಲ್ಲಿ ಅವರು ಈ ಹೆಸರನ್ನು ಘಟ್ಟದ ಕೆಳಗಣ ದೇಶಕ್ಕೂ ಕೊಟ್ಟರು. ತರುವಾಯ ಇಂಗ್ಲಿಷರು ಕರ್ಣಾಟಿಕ್ ಎಂಬ ಹೆಸರನ್ನು ಆ ಹೆಸರಿಗೆ ಸಂಬಂಧವೇ ಇಲ್ಲದ ಘಟ್ಟದ ಕೆಳಗಣ ದೇಶಕ್ಕೆ ಮಾತ್ರ ಇಟ್ಟರು. ಈಗ ಕರ್ಣಾಟಿಕ್ ಎಂಬುದು ಪೂರ್ವದ ಅರ್ಥವನ್ನು ಕಳೆದುಕೊಂಡು ತಮಿಳುದೇಶ ತೆಲುಗುದೇಶದಲ್ಲಿ ನೆಲ್ಲೂರು ಜಿಲ್ಲೆ ಇವುಗಳನ್ನು ಒಳಕೊಂಡು ಪೂರ್ವಸಮುದ್ರತೀರದಲ್ಲಿರುವ ಘಟ್ಟದ ಕೆಳಗಣ ಪ್ರಾಂತಕ್ಕೆ ಮಾತ್ರ ಅನ್ವಯಿಸುತ್ತದೆ.

## ಕನ್ನಡನಾಡಿನ ಪ್ರಾಚೀನತೆ.

ಕನ್ನಡನಾಡು ಬಹುಕಾಲಕ್ಕೆ ಹಿಂದೆಯೇ ಪ್ರಸಿದ್ಧವಾಗಿದ್ದಂತೆ ತಿಳಿಯಬರುತ್ತದೆ. ಇದು ಹಿಂದೆ ಮೌರ್ಯರು, ಆಂಧ್ರರು, ಕದಂಬರು, ಗಂಗರು ಮೊದಲಾದ ಪುರಾತನ ರಾಜವಂಶಗಳಿಗೆ ಸೇರಿದ ಅರಸುಗಳ ಆಳಿಕೆಗೆ ಒಳಪಟ್ಟಿದ್ದಿತು. ಮೌರ್ಯ ರಾಜನಾದ ಚಂದ್ರಗುಪ್ತನ ಆಳಿಕೆಯಲ್ಲಿ ದ್ವಾದಶವಾರ್ಷಿಕ ಕ್ಷಾಮವುಂಟಾಗಲು ಶ್ರುತಕೇವಲಿಯಾದ ಭದ್ರಬಾಹುವೆಂಬ ಜೈನಗುರು ಜೈನಸಂಘದೊಡನೆ ಮೈಸೂರು ದೇಶದ ದಕ್ಷಿಣದಲ್ಲಿರುವ ಪುನ್ನಾಟರಾಷ್ಟ್ರಕ್ಕೆ ಪ್ರಯಾಣಮಾಡಿದಾಗ ಚಂದ್ರಗುಪ್ತನು ರಾಜ್ಯವನ್ನು ತ್ಯಜಿಸಿ ಭದ್ರಬಾಹುವಿಗೆ ಶಿಷ್ಯನಾಗಿ ಅವನೊಡನೆ ತಾನೂ ಹೊರಟು ಶ್ರವಣಬೆಳ್ಗೊಳಕ್ಕೆ ಬಂದು ಅಲ್ಲಿ ತನ್ನ ಗುರು ಗತಿಸಲು ತಾನು ಅಲ್ಲಿಯೇ ನಿಂತು ತಪಸ್ಸುಮಾಡುತ್ತಿದ್ದು ಕೆಲವು ಕಾಲದಮೇಲೆ ಸತ್ತನೆಂದು ಜೈನ ಗ್ರಂಥಗಳಲ್ಲಿ ಹೇಳಿದೆ. ಚಂದ್ರಗುಪ್ತನ ಮಮ್ಮಗನಾದ ಅಶೋಕನ ಮೂರು ಶಾಸನಗಳು ಮೈಸೂರು ಸಂಸ್ಥಾನದ ಚಿತ್ರದುರ್ಗ ಜಿಲ್ಲೆಯಲ್ಲಿವೆ. ಅಲ್ಲದೆ ಅಶೋಕನು ಕನ್ನಡನಾಡಿನಲ್ಲಿ ಕದಂಬರಾಜರ ರಾಜಧಾನಿಯಾಗಿದ್ದ ಬನವಾಸಿಗೆ ಒಬ್ಬ ಬೌದ್ಧಮತೋಪದೇಶಕನನ್ನು ಕಳುಹಿಸಿದಂತೆ ಮಹಾವಂಶವೆಂಬ ಬೌದ್ಧ

ಗ್ರಂಥದಲ್ಲಿ ಬರೆದಿದೆ. ಕ್ರಿಸ್ತಶಕ ಎರಡನೆಯ ಶತಮಾನದಲ್ಲಿದ್ದ ಟಾಲಮಿ ಎಂಬ ಪಂಡಿತನು ಪುನ್ನಾಟ, ಬನವಾಸಿ ಇವುಗಳ ಹೆಸರನ್ನು ಹೇಳಿದ್ದಾನೆ. ಕನ್ನಡ ನಾಡಿನ ಪ್ರಾಚೀನತೆಯನ್ನು ಸೂಚಿಸುವ ಇನ್ನೂ ಕೆಲವು ಅಂಶಗಳು ಕರ್ಣಾಟ ಶಬ್ದದ ಪೂರ್ವಪ್ರಯೋಗಗಳನ್ನು ತಿಳಿಸುವ ಸಂದರ್ಭದಲ್ಲಿ ಹಿಂದೆಯೇ ಉಕ್ತವಾಗಿವೆ.[1]

## ಕನ್ನಡಭಾಷೆಯ ಪ್ರಾಚೀನತೆ.

ಕನ್ನಡನುಡಿ ಬಹಳ ಪುರಾತನವಾದುದು. ಪ್ರಥಮತೀರ್ಥಂಕರನಾದ ಋಷಭದೇವನ ಕುಮಾರಿ ಬ್ರಾಹ್ಮಿ ಎಂಬವಳು ಕನ್ನಡವೇ ಮೊದಲಾದ ಹದಿನೆಂಟು ಲಿಪಿಗಳನ್ನು ನಿರ್ಮಿಸಿದಂತೆ ಜೈನರಲ್ಲಿ ಇತಿಹಾಸವಿದೆ. ಕೆಲವು ವರ್ಷಗಳಿಗೆ ಹಿಂದೆ ದೇವಘಡದ ಕೋಟೆಯಲ್ಲಿರುವ ಒಂದು ಜಿನಾಲಯದಲ್ಲಿ ದ್ರಾವಿಡಲಿಪಿಗಳನ್ನೇ ವಿಶೇಷವಾಗಿ ಒಳಕೊಂಡ, ಸುಮಾರು ಒಂಬತ್ತನೆಯ ಶತಮಾನದಲ್ಲಿ ಹುಟ್ಟಿದ, ಒಂದು ವಿಚಿತ್ರವಾದ ಶಾಸನವು ಸಿಕ್ಕಿತು.[2] ಈಳಗಣ ಈಜಿಪ್ಟಿನಲ್ಲಿಯು ಆಕ್ಸಿರಿಂಕಸ್ ಎಂಬ ಸ್ಥಳದಲ್ಲಿ ದೊರೆತ ಕ್ರಿಸ್ತಶಕ ಎರಡನೆಯ ಶತಮಾನವಲ್ಲಿ ರಚಿತವಾದ ಒಂದು ಗ್ರೀಕ್ ನಾಟಕದಲ್ಲಿ ಕೆಲವು ಕನ್ನಡಶಬ್ದಗಳು ದೊರೆಯುತ್ತವೆ.[3]

## ಕನ್ನಡದ ವರ್ಣಮಾಲೆ.

ಹಿಂದೆ ಕನ್ನಡಕ್ಕೂ ತೆಲುಗಿಗೂ ಹುದವಾಗಿ ದಕ್ಷಿಣ ಹಿಂದೂದೇಶದಲ್ಲಿ ಮಾತ್ರವಲ್ಲದೆ ಇಂಡೋಚೈನ, ಯವದ್ವೀಪ ಮುಂತಾದ ಪ್ರಾಂತಕ್ಕೂ ವ್ಯಾಪಿಸಿದ ಈ ಲಿಪಿ ಹಿಂದೂದೇಶದಲ್ಲಿಯು ಈಗಿನ ಎಲ್ಲಾ ಲಿಪಿಗಳಂತೆಯೇ ಮಾತೃಕೆಯಾದ ಬ್ರಾಹ್ಮೀಲಿಪಿಯಿಂದ ಹುಟ್ಟಿದೆ. ಬ್ರಾಹ್ಮೀಲಿಪಿಯ ಹಲವು ಅಕ್ಷರಗಳು ಕ್ರಿಸ್ತ ಪೂರ್ವ ಒಂಬತ್ತನೆಯ ಶತಮಾನದ ಉತ್ತರ ಸೆಮಿಟಿಕ್ ಅಕ್ಷರಗಳೊಡನೆ ಹೋಲುವುದರಿಂದ, ಸುಮಾರು ಕ್ರಿಸ್ತಪೂರ್ವ ಎಂಟನೆಯ ಶತಮಾನದಲ್ಲಿ ಹಿಂದೂ ವರ್ತಕರು ತಮ್ಮ ಭಾಷೆಯನ್ನು ಬರೆವುದಕ್ಕೆ ಆ ಸೆಮಿಟಿಕ್ ಅಕ್ಷರಗಳನ್ನು ತೆಗೆದುಕೊಂಡಿರಬಹುದೆಂದೂ. ತರುವಾಯ ಆ ಅಕ್ಷರಗಳನ್ನು ಹಿಂದೂ

---

1. ಪುಟ 5. ಇನ್ನು ಹೆಚ್ಚು ವಿಷಯಗಳನ್ನು ತಿಳಿಯಬೇಕಾದರೆ ದ್ವಿತೀಯಸಂಪುಟದ ಆವತರಣಿಕೆಯ 1–4 ಪುಟಗಳನ್ನು ನೋಡಿ.

2. *Report on the Hindu and Buddhist Monuments*, Northern Circle, for 1918, p. 19.

3. ಡಾಕ್ಟರ್ ಹುಲ್ಟ್ಸ್ ಎಂಬ ಪಂಡಿತನು ಆ ನಾಟಕದ ಕೆಲವು ವಾಕ್ಯಗಳನ್ನು ಈ ರೀತಿಯಾಗಿ ಓದ ತ್ತಾನೆ—ಟೇರೆ ಕೊಂಚ ಮಧುಪಾತ್ರಕ್ಕೆ ಹಾಕಿ; ಪಾನಂ ಬೇರೆತ್ತಿ ಕಟ್ಟಿ ಮಧುವಂ ಬೆರೆತ್ತನೆನ್. *Mysore Archæological Report*, 1904.

ಪಂಡಿತರು ಸಂಸ್ಕೃತಭಾಷೆಯನ್ನು ಬರೆಯಲು ಅನುಕೂಲಿಸುವಂತೆ ತಿದ್ದಿ ಕ್ರಮ ಪಡಿಸಿ ವರ್ಣಮಾಲೆಗಳನ್ನು ಏರ್ಪಡಿಸಿರಬಹುದೆಂದೂ, ಕೆಲವರು ಪಾಶ್ಚಾತ್ಯ ಪಂಡಿತರು ಅಭಿಪ್ರಾಯಪಡುತ್ತಾರೆ. ಆದರೆ ಇನ್ನು ಕೆಲವರು ಬ್ರಾಹ್ಮೀಲಿಪಿ ಹಿಂದೂದೇಶದಲ್ಲಿ ಬಹಳ ಕಾಲಕ್ಕೆ ಹಿಂದೆ ಹಿಂದುಗಳಿಂದಲೇ ನಿರ್ಮಿತವಾದುದು ಎನ್ನುತ್ತಾರೆ.

ದ್ರಾವಿಡ ಲಿಪಿಗಳಲ್ಲಿ ಕನ್ನಡವೂ ತೆಲುಗೂ, ಹಾಗೆಯೇ ತಮಿಳೂ ಮಲೆಯಾಳವೂ ಬಹಳಮಟ್ಟಿಗೆ ಹೋಲುತ್ತವೆ. ಈಗ ಕನ್ನಡ ಲಿಪಿಗೂ ತಮಿಳು ಲಿಪಿಗೂ ಸಂಬಂಧವಿರುವಂತೆ ಕಾಣುವುದಿಲ್ಲ. ಆದರೆ ಈ ಎರಡು ಭಾಷೆಗಳಲ್ಲಿರುವ ಪ್ರಾಚೀನ ಶಾಸನಗಳನ್ನು ಪರೀಕ್ಷಿಸಿ ನೋಡಿದರೆ ಈ ಎರಡು ಲಿಪಿಗಳಿಗೂ ಇರುವ ಸಾದೃಶ್ಯವು ವಿಶದವಾಗುತ್ತದೆ. ಈ ದ್ರಾವಿಡ ಲಿಪಿಗಳು ಒಂದೊಂದೂ ಕಾಲಕ್ರಮದಲ್ಲಿ ನಾನಾ ಕಾರಣಗಳಿಂದ ರೂಪಾಂತರವನ್ನು ಹೊಂದುತ್ತ ಬಂದು ಈಗಿನ ಆಕೃತಿಯನ್ನು ಪಡೆದಿವೆ ಎಂದು ಶಾಸನಗಳಿಂದ ನಿರ್ಣಯಿಸಬಹುದಾಗಿದೆ.

ದ್ರಾವಿಡ ವರ್ಣಮಾಲೆಗಳಲ್ಲಿ, ಸಂಸ್ಕೃತ ವರ್ಣಮಾಲೆಯಲ್ಲಿಲ್ಲದ ಎ, ಒ, ಳ, ಱ, ಟ ಎಂಬ ಐದು ಅಕ್ಷರಗಳುಂಟು. ಈ ಐದಕ್ಷರಗಳೂ ತಮಿಳು, ಮಲೆಯಾಳ ಈ ಭಾಷೆಗಳಲ್ಲಿ ಈಗಲೂ ಬಳಕೆಯಲ್ಲಿವೆ. ತೆಲುಗಿನಲ್ಲಿ ಟ ಕಾರವು ಬಹಳ ಕಾಲಕ್ಕೆ ಹಿಂದೆಯೇ ನಷ್ಟವಾಗಿ ಹೋದಂತೆ ಕಾಣುತ್ತದೆ; ಱ ಕಾರವು ಮಾತ್ರ ಈಗಲೂ ಪ್ರಚಾರದಲ್ಲಿದೆ. ಕನ್ನಡದಲ್ಲಿ ಟ ಕಾರವು ಸುಮಾರು 13 ನೆಯ ಶತಮಾನದವರೆಗೂ ಪ್ರಚಾರದಲ್ಲಿದ್ದು ತರುವಾಯ ನಷ್ಟವಾದಂತೆಯೂ ಅದರ ಸ್ಥಾನದಲ್ಲಿ ಱಕಾರವು ಉಪಯೋಗಕ್ಕೆ ಬಂದಂತೆಯೂ ತಿಳಿಯುತ್ತದೆ. ಱ ಕಾರವು ಸುಮಾರು 18 ನೆಯ ಶತಮಾನದ ವರೆಗೂ ಇದ್ದಿತು. ಬಳಿಕ ಅದರ ಸ್ಥಾನದಲ್ಲಿ ರೇಫವು ಪ್ರಯೋಗಕ್ಕೆ ಬಂದಿತು.

ಕನ್ನಡ ಭಾಷೆಯ ಪ್ರಾಚೀನ ವ್ಯಾಕರಣಗಳಲ್ಲಿ ಜಟಿ, ಕುಳ, ಕ್ಷ್ಮ ಎಂದು ಳಕಾರದಲ್ಲಿ ಮೂರು ಭೇದಗಳನ್ನು ಹೇಳಿ ಇವು ಪ್ರಾಸಕ್ಕೂ ಯಮಕಕ್ಕೂ ಸಲ್ಲವು ಎಂದು ನಿಷೇಧಿಸಿರುವಂತೆ ತೋರುತ್ತದೆ. ಅದರೂ 12 ನೆಯ ಶತಮಾನದಲ್ಲಿಯೇ ಒಬ್ಬಿಬ್ಬರು ಕವಿಗಳು[1] ಈ ನಿಯಮವನ್ನು ಉಲ್ಲಂಘಿಸಿ ಗ್ರಂಥರಚನೆ ಮಾಡಿದುದಾಗಿ ತಿಳಿಯಬರುತ್ತದೆ. 13 ನೆಯ ಶತಮಾನದಲ್ಲಿ ಕೇಶಿರಾಜನು ಈ ನಿಯಮ ಭಂಗವು ದೋಷವೆಂದು ಹೇಳಿ ಪ್ರಯೋಗಾನುಕೂಲ್ಯಕ್ಕಾಗಿ ಟಕಾರ ವಿರುವ ಶಬ್ದಗಳ ಒಂದು ಪಟ್ಟಿಯನ್ನು ಕೊಟ್ಟಿದ್ದಾನೆ ಭಟ್ಟಾಕಳಂಕನು (1604)

1. ನೋಡುವೊಡೊಂದಕ್ಷರಮದು ಮೂಡ ವೊಡುಚ್ಚಾರಣೆಗರಿದು ಮೂಜುಂ ತೆಜನಂ।
ಕೂಡೆ ಕವಿತತಿ ವಿಚಾರಿಸ। ಬೇಡದಜುಂ ಜಟಿಕುಳಕ್ಷ್ಮಳಂಗಳನಿದಜಕೂಳ್॥

ಈ ನಿಯಮವು ಅವಶ್ಯವಾಗಿ ಅನುಸರಿಸಬೇಕಾದುದೆಂದು ಅಭಿಪ್ರಾಯಪಡುವುದಿಲ್ಲ. ಱಕಾರ ರೇಫಗಳ ವಿಷಯದಲ್ಲಿಯೂ ಹಿಂದಣ ನೈಯಾಕರಣರು ಈ ನಿಯಮವನ್ನು ವಿಧಿಸಿದ್ದಾರೆ. ಆಧುನಿಕನಾದ ಭಟ್ಟಾಕಳಂಕನು ಮಾತ್ರ ಈ ನಿಯಮೋಲ್ಲಂಘನವು ದೋಷಾವಹವಲ್ಲವೆಂದು ಅಭಿಪ್ರಾಯಪಡುವಂತೆ ತೋರುತ್ತದೆ. ಆದರೂ ಪೂರ್ವಕವಿಗಳು ಪ್ರಾಯಿಕವಾಗಿ ಱಟಕುಳಕ್ಷಗಳ ಮತ್ತು ರೇಫಱಕಾರಗಳ ಪ್ರಾಸನಿಯಮವನ್ನು ಉಲ್ಲಂಘಿಸಿಲ್ಲ. ಆಧುನಿಕ ಕವಿಗಳಲ್ಲಿ ಹಲವರು ಈ ನಿಯಮಗಳನ್ನು ಬಹಳ ಮಟ್ಟಿಗೆ ಉಲ್ಲಂಘಿಸಿದ್ದಾರೆ. ಱಕಾರ ಱಕಾರಗಳ ಕ್ರಮವಾದ ಪ್ರಯೋಗವು ಗ್ರಂಥಗಳ ಕಾಲವನ್ನು ನಿರ್ಣಯಿಸುವುದಕ್ಕೆ ತಕ್ಕಮಟ್ಟಿಗೆ ಸಹಕಾರಿಯಾಗುತ್ತದೆ.

## ಕನ್ನಡ ಶಬ್ದಗಳು.

ಕನ್ನಡದಲ್ಲಿ ಸಾಮಾನ್ಯ ವ್ಯವಹಾರಕ್ಕೆ ಸಾಕಾಗುವಷ್ಟು ದೇಶ್ಯಶಬ್ದಗಳು ಇವೆ. ಆದರೂ ಶಾಸ್ತ್ರವಿಚಾರಗಳನ್ನು ಅಚ್ಚಗನ್ನಡ ಪದಗಳಿಂದಲೇ ನಿರ್ವಹಿಸುವುದು ಸಾಧ್ಯವಲ್ಲ; ಸಂಸ್ಕೃತ ಶಬ್ದಗಳ ಸಹಾಯವು ಬೇಕಾಗುತ್ತದೆ. ಪೂರ್ವಕಾಲದ ಕನ್ನಡ ಕವಿಗಳು ತಮ್ಮ ಗ್ರಂಥಗಳಲ್ಲಿ ಅವಶ್ಯವಾದ ಕಡೆಯಲ್ಲಿ ಸಂಸ್ಕೃತ ಪದಗಳನ್ನು ಮಿತವಾಗಿ ಉಪಯೋಗಿಸುತ್ತಿದ್ದಂತೆ ಕಾಣುತ್ತದೆ. ಕಾಲಕ್ರಮದಲ್ಲಿ ಕೆಲವರು ಕವಿಗಳು ಸಂಸ್ಕೃತ ಪದಗಳನ್ನು ಅವಶ್ಯವಿಲ್ಲದ ಸಂದರ್ಭದಲ್ಲಿಯೂ ವಿಶೇಷವಾಗಿ ಪ್ರಯೋಗಿಸಿದುದರಿಂದ ಅಂಥ ಪ್ರಯೋಗಗಳು ಆಕ್ಷೇಪಣೆಗೆ ಗುರಿಯಾದಂತೆ ಕಾಣುತ್ತದೆ. ನಯಸೇನನು—ಕನ್ನಡ ಗ್ರಂಥಗಳನ್ನು ಬರೆಯಲಾರಂಭಿಸಿ ಸಂಸ್ಕೃತ ಪದಗಳನ್ನು ತುಂಬುವುದು ತಪ್ಪು; ಸಂಸ್ಕೃತದಲ್ಲಿ ಬರೆವುದಾದರೆ ಆ ಭಾಷೆಯಲ್ಲಿಯೇ ಬರೆಯಬೇಕು; ಕನ್ನಡದಲ್ಲಿ ಸಂಸ್ಕೃತವನ್ನು ಬೆರಸುವುದು ಘೃತವನ್ನೂ ತೈಲವನ್ನೂ ಬೆರಸಿದಂತಾಗುವುದು—ಎಂದು ಹೇಳಿದ್ದಾನೆ.[1] ಕನ್ನಡವನ್ನೂ ಸಂಸ್ಕೃತವನ್ನೂ ಅನವಶ್ಯವಾಗಿ ಬೆರಸುವುದನ್ನು—'ಮುತ್ತಂ ಮೆಟಿಸಂ ಕೋದಂತಿರೆ' ಎಂದು ನಾಗವರ್ಮನು ದೂಷಿಸಿದ್ದಾನೆ. ಸಂಸ್ಕೃತ ಪದಗಳ ಸಹಾಯವಿಲ್ಲದೆ ಕನ್ನಡದಲ್ಲಿ ಗ್ರಂಥರಚನೆ ಮಾಡುವುದು ಸಾಧ್ಯವೆಂಬುದನ್ನು ತೋರಿಸುವುದಕ್ಕಾಗಿ ಆಂಡಯ್ಯನು ಕಬ್ಬಿಗರಕಾವವನ್ನು ಬರೆದಿರುವಂತೆ ತೋರುತ್ತದೆ. ಆದರೂ ಸಂಸ್ಕೃತ ಶಬ್ದಪ್ರಯೋಗವನ್ನು ತಡೆವುದು ಸಾಧ್ಯವಾಗದೆ ಹೋಯಿತು; ಈಚೆಯ ಕವಿಗಳು ಸಂಸ್ಕೃತ ಪದಗಳನ್ನು ಸ್ವೇಚ್ಛೆಯಾಗಿ ಉಪ

1. ಪೊಸಗನ್ನಡದಿಂ ವ್ಯಾಪಱಿಸುವೆಂ ಸತ್ಕೃತಿಯನೆಂದಂ ಕನ್ನಡಮಂ ಚಿಂ।
ತಿಸಿ ಕೂಡಲಾಜಿದಕ್ಕುಟ। ವಿಸುಕದ ಸಕ್ಕದಮನಿಕ್ಕುವವನುಂ ಕವಿಯೇ॥
ಸಕ್ಕದಮುಂ ಪೇಟಿವ್ಪೊಡೆ ನೆಜಿಱಿ। ಸಕ್ಕದಮುಂ ಪೇಟಿಕ್ಕಿ ಸುದಗನ್ನಡದೊಳ್ ತಂ।
ವಿಕ್ಕುವುದೇ ಸಕ್ಕದಮಂ। ತಕ್ಕುದೆ ಬೆರಸಲ್ಕೆ ಘೃತಮುಪಂ ತೈಲಮುಮಂ॥

ಯೋಗಿಸುತ್ತ ಬಂದಿದ್ದಾರೆ. ತೆಲುಗು, ಮಲೆಯಾಳ ಈ ಭಾಷೆಗಳಲ್ಲಿಯೂ ಹೀಗೆಯೇ ಇರುವಂತೆ ಕಾಣುತ್ತದೆ; ತಮಿಳಿನಲ್ಲಿ ಸಂಸ್ಕೃತ ಪ್ರಯೋಗವು ಇಷ್ಟೊಂದು ಹೆಚ್ಚಾಗಿಲ್ಲ.

ಸಂಸ್ಕೃತ ಶಬ್ದಗಳು ವಿಕಾರವಿಲ್ಲದೆ ಕನ್ನಡಕ್ಕೆ ಸೇರಿರುವುದು ಮಾತ್ರವಲ್ಲದೆ ಅವು ವಿಕಾರವನ್ನು ಹೊಂದಿ ತದ್ಭವಗಳೆಂಬ ಹೆಸರಿನಿಂದಲೂ ಹೇರಳವಾಗಿ ಬಂದು ಸೇರಿವೆ ಸಂಸ್ಕೃತ ಶಬ್ದಗಳು ತದ್ಭವರೂಪಗಳನ್ನು ಪಡೆವಾಗ ಆಗುವ ವಿಕಾರಗಳು ಕನ್ನಡ ವ್ಯಾಕರಣಗಳಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ. ಈ ವಿಕಾರಗಳು ಪ್ರಾಕೃತ ವ್ಯಾಕರಣಗಳಲ್ಲಿ ಸಂಸ್ಕೃತವು ಅಪಭ್ರಂಶವಾಗುವುದಕ್ಕೆ ವಿಧಿಸಿರುವ ನಿಯಮಗಳನ್ನು ಬಹಳಮಟ್ಟಿಗೆ ಅನುಸರಿಸುತ್ತವೆ. ಈ ತದ್ಭವ ರೂಪಗಳು ಕನ್ನಡದಲ್ಲಿಯೂ ತೆಲುಗಿನಲ್ಲಿಯೂ ವಿಶೇಷವಾಗಿ ಪ್ರಯೋಗದಲ್ಲಿವೆ; ತಮಿಳಿನಲ್ಲಿ ಅಷ್ಟು ವಿಶೇಷವಾಗಿಲ್ಲ.

ಸಾಮಾನ್ಯ ವ್ಯವಹಾರಕ್ಕೆ ಬೇಕಾದ ದೇಶ್ಯಶಬ್ದಗಳು ದ್ರಾವಿಡ ಭಾಷೆಗಳಲ್ಲೆಲ್ಲಾ ತಕ್ಕಮಟ್ಟಿಗೆ ಏಕರೂಪವಾಗಿವೆ. ಆದರೂ ಸಮಾನಾರ್ಥಕವಾದ ತೆಲುಗು ಕನ್ನಡ ಪದಗಳಿಗೆ ಇರುವ ಹೋಲಿಕೆಗಳು ಅಷ್ಟು ಸ್ಪಷ್ಟವಾಗಿ ಕಾಣುವುದಿಲ್ಲ; ಕನ್ನಡ ತಮಿಳು ಭಾಷೆಗಳ ಸಮಾನಾರ್ಥಕ ಶಬ್ದಗಳಲ್ಲಿ ಸ್ವಲ್ಪ ಹೆಚ್ಚುಕಡಮೆ ಅರ್ಧ ಪಾಲು ಏಕರೂಪವಾಗಿದೆ; ಇನ್ನು ಕಾಲುಪಾಲು ಏಕದೇಶದಲ್ಲಿ ಮಾತ್ರ ವಿಕಾರವನ್ನು ಹೊಂದಿದೆ.

ಸಂಸ್ಕೃತ ಶಬ್ದಗಳು ವಿಧಿಗಳಿಗನುಸಾರವಾಗಿ ವಿಕಾರವನ್ನು ಹೊಂದಿ ತದ್ಭವಗಳಾಗಿ ಕನ್ನಡಕ್ಕೆ ಬಂದಂತೆ ಹಳಗನ್ನಡ ಶಬ್ದಗಳು ಕೂಡ ತಕ್ಕಮಟ್ಟಿಗೆ ಅದೇ ವಿಧಿಗಳಿಗನುಸಾರವಾಗಿ ವಿಕರಿಸಿ ಹೊಸಗನ್ನಡ ಶಬ್ದಗಳಾಗಿವೆ.

ದ್ರಾವಿಡಭಾಷೆಗಳಿಗೆ ಸಂಸ್ಕೃತ ಶಬ್ದಗಳೂ ಪ್ರಾಕೃತ ಶಬ್ದಗಳೂ ಬಂದು ಸೇರಿರುವಂತೆ ಸಂಸ್ಕೃತ ಭಾಷೆಗೂ ಕೆಲಕೆಲವು ದ್ರಾವಿಡ ಶಬ್ದಗಳು ಹೋಗಿ ಸೇರಿ ಸಂಸ್ಕೃತ ಪದಗಳೆಂದೇ ಭಾವಿಸಲ್ಪಟ್ಟಿವೆಯೆಂದೂ ಅಂಥ ಶಬ್ದಗಳಿಗೆ ಸಂಸ್ಕೃತದಲ್ಲಿ ವ್ಯುತ್ಪತ್ತಿಯನ್ನು ಹೇಳಲಿಕ್ಕಾಗದಿರುವುದೇ ಮೊದಲಾದ ಕಾರಣಗಳಿಂದ ಅವು ಸಂಸ್ಕೃತ ಶಬ್ದಗಳಲ್ಲವೆಂದೂ ಕೆಲವರು ಪಾಶ್ಚಾತ್ಯಪಂಡಿತರು [1] ಅಭಿಪ್ರಾಯ ಪಡುತ್ತಾರೆ.

## ಕನ್ನಡ ಭಾಷೆಯ ಅವಸ್ಥಾಭೇದಗಳು.

ಕನ್ನಡ ಭಾಷೆಗೆ ಪೂರ್ವದ ಹಳಗನ್ನಡ. ಹಳಗನ್ನಡ, ಹೊಸಗನ್ನಡ ಎಂಬ ಮೂರು ಅವಸ್ಥೆಗಳಿರುವಂತೆ ತೋರುತ್ತದೆ. ನೃಪತುಂಗನು ತನ್ನ ಕಾಲಕ್ಕೆ ಹಿಂದೆ

1. ಡಾಕ್ಟರ್ ಕಾಲ್ಡ್‌ವೆಲ್, ಕಿಟ್ಟೆಲ್. ಗುಂಡರ್ಟ್ ಮುಂತಾದವರು.

ಹಳಗನ್ನಡವೆಂಬ ಭಾಷೆಯಿದ್ದಂತೆ ಹೇಳಿದ್ದಾನೆ. ಪೂರ್ವದ ಹಳಗನ್ನಡವು ಕದಂಬರ ರಾಜಧಾನಿಯಾದ ಬನವಾಸಿಯಲ್ಲಿ ವ್ಯವಹಾರದಲ್ಲಿದ್ದಂತೆಯೂ 8 ನೆಯ ಶತಮಾನದ ವರೆಗೆ ಬಳಕೆಯಲ್ಲಿದ್ದಂತೆಯೂ ಕೆಲವರು ಹೇಳುತ್ತಾರೆ. ತರುವಾಯ ಹಳಗನ್ನಡವು 14 ನೆಯ ಶತಮಾನದ ವರೆಗೂ ಪ್ರಚಾರದಲ್ಲಿದ್ದಿತು. ಅಲ್ಲಿಂದೀಚೆ ಹೊಸಗನ್ನಡವು ಬಳಕೆಗೆ ಬಂದಿತು. ಈ ಅವಸ್ಥಾಭೇದಗಳು ಇಂಥಿಂಥ ಕಾಲದಲ್ಲಿಯೇ ಆರಂಭವಾಗಿ ಇಂಥಿಂಥ ಕಾಲದಲ್ಲಿಯೇ ಮುಗಿದುವೆಂದು ಹೇಳಲಿಕ್ಕಾಗುವುದಿಲ್ಲ. ಆ ಆ ಕಾಲಗಳಲ್ಲಿ ಭಾಷೆಯಲ್ಲಿ ವಿಶೇಷವಾಗಿ ಕಾಣಬರುವ ರೂಪಭೇದಗಳಿಂದ ಅವಸ್ಥಾಭೇದಗಳನ್ನು ಸ್ಥೂಲಸ್ಥೂಲವಾಗಿ ಹೀಗೆ ನಿರೂಪಿಸಬೇಕಾಗಿದೆ.

ಹಳಗನ್ನಡ ವ್ಯಾಕರಣಗಳಲ್ಲಿರುವ ಸೂತ್ರಗಳಿಂದ ಸಿದ್ಧಿಸದ. ಸಂದಾನ್, ಬಂದೊನ್, ಒಕ್ಕಲುಳ್, ಕೆಡುಗ ಮೊದಲಾದ ಶಬ್ದರೂಪಗಳು 8 ನೆಯ ಶತಮಾನದಲ್ಲಿಯೂ ಅದಕ್ಕೆ ಪೂರ್ವದಲ್ಲಿಯೂ ಹುಟ್ಟಿರುವ ಶಾಸನಗಳಲ್ಲಿ ದೊರೆಯುತ್ತವೆ. ಈ ರೂಪಗಳು ತಮಿಳಿನಲ್ಲಿ ದೊರೆವ ರೂಪಗಳನ್ನು ಹೋಲುತ್ತವೆ. ಇಂಥ ಶಬ್ದರೂಪಗಳ ಪ್ರಯೋಗಸ್ವಾಚರ್ಯವು ಪೂರ್ವದ ಹಳಗನ್ನಡಕ್ಕೆ ಒಂದು ಗುರುತಾಗಿದ್ದಂತೆ ತಿಳಿಯಬಹುದಾಗಿದೆ. ಹಳಗನ್ನಡಕ್ಕೂ ಹೊಸಗನ್ನಡಕ್ಕೂ ಇರುವ ಭೇದವು ವಿದಿತವಾಗಿಯೇ ಇದೆ. ಹೀಗೆ ಕಾಲಭೇದದಿಂದ ಕನ್ನಡಭಾಷೆಗೆ ಅವಸ್ಥಾಭೇದವುಂಟಾದಂತೆ ದೇಶಭೇದದಿಂದಲೂ ಕೆಲಕೆಲವು ವ್ಯತ್ಯಾಸಗಳು ಉಂಟಾಗಿವೆ. ನೃಪತುಂಗನು ಕನ್ನಡದಲ್ಲಿ ಉತ್ತರಮಾರ್ಗ. ದಕ್ಷಿಣಮಾರ್ಗ ಎಂಬ ಎರಡು ಭೇದಗಳು ಉಂಟೆಂದು ಹೇಳಿ ಆ ಮಾರ್ಗಗಳಿಗೆ ಕೆಲವು ಪ್ರಯೋಗಗಳನ್ನು ಹೇಳಿದ್ದಾನೆ. ಈ ವಿಷಯವನ್ನು ನಾಗವರ್ಮ ಭಟ್ಟಾಕಳಂಕರೂ ಸೂಚಿಸಿದ್ದಾರೆ.[1] ಕನ್ನಡ ದೇಶವು ಬಹಳ ಕಾಲದಿಂದ ಬೇರೆ ಬೇರೆ ರಾಜಾಂಗಗಳಿಗೆ ಒಳಪಟ್ಟಿದ್ದುದರಿಂದಲೂ ಕನ್ನಡಭಾಷೆ ಬೇರೆ ಬೇರೆ ಭಾಷೆಗಳ ಸಂಪರ್ಕವನ್ನು ಹೊಂದಿದುದರಿಂದಲೂ ಮೇಲೆ ಹೇಳಿದ ವ್ಯತ್ಯಾಸಗಳು ಹೆಚ್ಚುತ್ತ ಬಂದು ಪ್ರಕೃತದಲ್ಲಿ ದೇಶಭೇದ ಸೂಚಕವಾದ ಧಾರ್ವಾಡದ ಕನ್ನಡ, ಮಂಗಳೂರು ಕನ್ನಡ, ಮೈಸೂರು ಕನ್ನಡ ಎಂಬಿವೇ ಮೊದಲಾದ ಅವಾಂತರ ಭೇದಗಳು ಹುಟ್ಟಿವೆ.

## ಕನ್ನಡ ಸಾಹಿತ್ಯದ ಪ್ರಾಚೀನತೆ.

ಕನ್ನಡ ಭಾಷೆಯಲ್ಲಿ ಬಹಳ ಕಾಲಕ್ಕೆ ಹಿಂದೆಯೇ ಗ್ರಂಥರಚನೆ ಆರಂಭವಾದಂತೆ ತಿಳಿಯುತ್ತದೆ. ನಮಗೆ ಗ್ರಂಥರೂಪವಾಗಿ ದೊರೆತಿರುವುದರಲ್ಲಿ 9 ನೆಯ ಶತಮಾನದಲ್ಲಿ ಹುಟ್ಟಿರುವ ಕವಿರಾಜಮಾರ್ಗವೇ ಮೊದಲನೆಯದು. ಆದರೂ

1. ದ್ವಿತೀಯ ಸಂಪುಟದ ಅವತರಣಿಕೆಯ 23—28 ಪುಟಗಳನ್ನು ನೋಡಿ.

ನೃಪತುಂಗನ ಕಾಲಕ್ಕೆ ಹಿಂದೆಯೇ ಅನೇಕ ಕವಿಗಳು ಪದ್ಯಗ್ರಂಥಗಳನ್ನೂ ಗದ್ಯ ಗ್ರಂಥಗಳನ್ನೂ ರಚಿಸಿದ್ದಂತೆ ತಿಳಿಯಬರುತ್ತದೆ. ಈ ಪ್ರಾಚೀನಕವಿಗಳಲ್ಲಿ 6ನೆಯ ಶತಮಾನದ ಕೊನೆಯಲ್ಲಿದ್ದ ಗಂಗರಾಜನಾದ ದುರ್ವಿನೀತನ ಹೆಸರು ಹೇಳಿರುವಂತಿದೆ. ಸುಮಾರು 6ನೆಯ ಶತಮಾನದಿಂದ ಕನ್ನಡ ಭಾಷೆಯಲ್ಲಿ ಬರೆದ ಶಾಸನಗಳು ದೊರೆಯುತ್ತವೆ. ಕವಿರಾಜಮಾರ್ಗದಲ್ಲಿ ಹೇಳಿರುವ ಕವಿಗಳಲ್ಲದೆ ಶ್ಯಾಮಕುಂದಾಚಾರ್ಯನು ಸುಮಾರು 650 ರಲ್ಲಿ ಗ್ರಂಥರಚನೆಮಾಡಿರುವಂತೆ ತೋರುತ್ತದೆ ಭಟ್ಟಾಕಲಂಕನು (1604) ತತ್ತ್ವಾರ್ಥಮಹಾಶಾಸ್ತ್ರಕ್ಕೆ ವ್ಯಾಖ್ಯಾನರೂಪವಾದ 96,000 ಗ್ರಂಥಪರಿಮಿತಿಯುಳ್ಳ ಚೂಡಾಮಣಿಯೆಂಬ ಜೈನಗ್ರಂಥವು ಕನ್ನಡ ಭಾಷೆಯಲ್ಲಿ ಹುಟ್ಟಿರುವುದಾಗಿ ಹೇಳುತ್ತಾನೆ. ಈ ಚೂಡಾಮಣಿಯನ್ನು ಬರೆದವನು ಶ್ರೀವರ್ಧದೇವನೆಂದೂ ಇವನು ದಂಡಿಯಿಂದ ಸ್ತುತಿಸಲ್ಪಟ್ಟಿರುವನೆಂದೂ ಶಾಸನಗಳಿಂದ ತಿಳಿಯುತ್ತದೆ. ಈತನು 7ನೆಯ ಶತಮಾನದಲ್ಲಿದ್ದಿರಬೇಕು. ಆ ಕಾಲದಲ್ಲಿ ಇಂಥ ಉಪಾಂತ್ಯವಾದ ಗ್ರಂಥವು ಹುಟ್ಟಬೇಕಾದರೆ ಅದಕ್ಕೆ ಬಹಳ ಕಾಲ ಹಿಂದೆಯೇ ಕನ್ನಡದಲ್ಲಿ ಗ್ರಂಥರಚನೆ ಆರಂಭವಾಗಿದ್ದಿರಬೇಕು. ಇವಲ್ಲದೆ 11ನೆಯ ಶತಮಾನಕ್ಕೆ ಹಿಂದೆ ಇದ್ದ ಅವ್ಯತ ಸಾಗರನೆಂಬ ಕವಿಯಿಂದ ರಚಿತವಾದ ಯಾಪ್ಪರುಂಗಲಕ್ಕಾರಿಕೈ ಎಂಬ ತಮಿಳು ಛಂದೋಗ್ರಂಥದಿಂದ ಕನ್ನಡದಲ್ಲಿ ಗುಣಗಾಂಕಿಯಂ ಎಂಬ ಒಂದು ಛಂದೋ ಗ್ರಂಥವು ಇದ್ದಂತೆಯೂ ಅದರಲ್ಲಿ ಕವಿ ತನ್ನ ವಿನಯವನ್ನು ಸೂಚಿಸಿರುವುದಲ್ಲದೆ ಒಬ್ಬ ಸ್ತ್ರೀಯನ್ನು ಸಂಬೋಧಿಸಿ ಗ್ರಂಥವನ್ನು ಬರೆದಿರುವಂತೆಯೂ ಇದೇ ರೀತಿಯನ್ನು ತಮಿಳು ಗ್ರಂಥಕಾರನೂ ಅನುಸರಿಸಿರುವಂತೆಯೂ ತಿಳಿಯುತ್ತದೆ.[1] ಕನ್ನಡ ಗ್ರಂಥವನ್ನು ಬರೆದ ಕವಿಯ ಹೆಸರು ಹೇಳಿಲ್ಲ. ಅವನು ತನ್ನ ಗ್ರಂಥವನ್ನು ಗುಣಗ, ಗುಣಗಾಂಕ, ಗುಣಕೆನಲ್ಲ ಎಂಬ ವಿಶೇಷಣಗಳುಳ್ಳ 3ನೆಯ ವಿಜಯಾದಿತ್ಯನೆಂಬ (844–888) ಮೂಡಣಚಾಲುಕ್ಯರಾಜನಿಗೆ ಅಂಕಿತ ಮಾಡಿರುವಂತೆ ತೋರುತ್ತದೆ. ಈ ಗ್ರಂಥವು ದೊರೆತಿಲ್ಲ. ಹೀಗೆ 6ನೆಯ ಶತಮಾನದಲ್ಲಿಯೇ ಗ್ರಂಥರಚನೆ ಆರಂಭವಾದುದು ತಮಿಳನಲ್ಲಿ ಹೊರತು ಮತ್ತಾವ ದ್ರಾವಿಡಭಾಷೆಯಲ್ಲಿಯೂ ಇಲ್ಲವೆಂದು ಹೇಳಬಹುದು.

## ಕನ್ನಡ ಕವಿಗಳು.

ಕನ್ನಡದಲ್ಲಿ ಗ್ರಂಥರಚನೆಮಾಡಿರುವ ಕವಿಗಳನ್ನು ಸ್ಥೂಲವಾಗಿ ಜೈನರು, ವೀರಶೈವರು, ವೈಷ್ಣವರು ಎಂಬ ಮೂರು ಪಂಗಡವಾಗಿ ವಿಂಗಡಿಸಬಹುದು. ಈ ಮೂರು ಪಂಗಡದವರಲ್ಲದೆ ಇತರರೂ ಕೂಡ ಕನ್ನಡದಲ್ಲಿ ಹಲವು ಗ್ರಂಥಗಳನ್ನು

1. ಗುಣಗಾಂಕಿಯುಮೆನ್ನುಂ ಕರುನಾಡಗಚ್ಚಂದಮೇ ಪೋಲ್ ಮಹಡೂಮುನ್ನಿಲೈಯುಡೈತ್ತಾಯ್ ಅವೈಯಡಕ್ಕಮುಡೈತ್ತಾಯ್.

ರಚಿಸಿದ್ದಾರೆ. ಆದರೆ ಅವರ ಸಂಖ್ಯೆ ಕಡಮೆ. ಈ ಕವಿಗಳಲ್ಲಿ ಜೈನರೇ ಕನ್ನಡಭಾಷೆಗೆ ಆದಿಕವಿಗಳು. 12 ನೆಯ ಶತಮಾನದ ವರೆಗೆ ಜೈನಕವಿರಚಿತವಾದ ಗ್ರಂಥಗಳೇ ವಿಶೇಷವಾಗಿ ದೊರೆಯುತ್ತವೆ. ಇವರ ಗ್ರಂಥಗಳೆಲ್ಲಾ ಪ್ರಾಯಿಕವಾಗಿ ಚಂಪೂ ರೂಪದಲ್ಲಿವೆ. ಇವರ ಕಾಲದಲ್ಲಿ ಚತ್ತಾಣ, ಬೆದಂಡೆ, ಮೆಲ್ವಾಡು ಮೊದಲಾದ ಪ್ರಬಂಧವಿಶೇಷಗಳು ರಚಿತವಾದಂತೆ ತಿಳಿಯಬರುತ್ತದೆ. ಆದರೆ ಈ ಪ್ರಬಂಧಗಳಾವುವೂ ಈಗ ದೊರೆತಿಲ್ಲ. ಈ ಜೈನಕವಿಗಳಿಗೆ ಗಂಗರು, ರಾಷ್ಟ್ರಕೂಟರು, ಚಾಲುಕ್ಯರು, ಬಲ್ಲಾಳರು ಈ ರಾಜರೆಲ್ಲರೂ ಪ್ರೋತ್ಸಾಹಕರಾಗಿದ್ದುದರಿಂದ ಕನ್ನಡಭಾಷೆ ಉತ್ತಮಸ್ಥಿತಿಗೆ ಬಂದು ಹಲವು ಉದ್ಗ್ರಂಥಗಳು ಹುಟ್ಟಲು ಕಾರಣವಾಯಿತು.

12 ನೆಯ ಶತಮಾನದಿಂದೀಚೆಗೆ 15 ನೆಯ ಶತಮಾನದ ವರೆಗೆ ವೀರಶೈವಕವಿಗಳು ಕನ್ನಡಭಾಷೆಯಲ್ಲಿ ವಿಶೇಷವಾಗಿ ಗ್ರಂಥಗಳನ್ನು ಬರೆಯಲಾರಂಭಿಸಿದಂತೆ ಕಾಣುತ್ತದೆ. ಬಸವ, ಚೆನ್ನಬಸವ, ಸಿದ್ಧರಾಮ ಮೊದಲಾದ ವೀರಶೈವರು ಮತಗ್ರಂಥಗಳನ್ನು ಕನ್ನಡದಲ್ಲಿಯೇ ಬರೆದುದರಿಂದ ಈ ಭಾಷೆಯ ಅಭಿವೃದ್ಧಿಗೆ ಹೆಚ್ಚು ಅವಕಾಶವುಂಟಾಯಿತು. ವೀರಶೈವಗ್ರಂಥಗಳಲ್ಲಿ ಕೆಲವು ಚಂಪೂರೂಪವಾಗಿದ್ದರೂ ಪ್ರಾಯಿಕವಾಗಿ ಎಲ್ಲವೂ ವಚನ, ರಗಳೆ, ಷಟ್ಪದಿ, ತ್ರಿಪದಿ, ಸಾಂಗತ್ಯ– ಈ ರೂಪದಲ್ಲಿವೆ.

ತರುವಾಯ ವೈಷ್ಣವಕವಿಗಳು ಕನ್ನಡದಲ್ಲಿ ಹೇರಳವಾಗಿ ಗ್ರಂಥಗಳನ್ನು ಬರೆಯಲಾರಂಭಿಸಿದರು. ಈ ಕವಿಗಳ ಗ್ರಂಥಗಳು ಪ್ರಾಯಿಕವಾಗಿ ಷಟ್ಪದಿ, ಪದ, ಸುಳಾದಿ, ಕಥೆ ಈ ರೂಪವಾಗಿವೆ.

ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ಮತದ ಕವಿಗಳು ವಿಶೇಷವಾಗಿ ಗ್ರಂಥರಚನೆಮಾಡಿದ್ದಾರೆ ಎಂಬ ಅಂಶವನ್ನು ಸ್ಥೂಲವಾಗಿ ತಿಳಿಸುವುದಕ್ಕೋಸ್ಕರ ಈ ರೀತಿಯಾಗಿ ಕಾಲವಿಭಾಗಮಾಡಿದೆ. ಇದರಿಂದ ಜೈನರ ಕಾಲದಲ್ಲಿ ಶೈವ ವೈಷ್ಣವ ಗ್ರಂಥಗಳೂ ಶೈವರ ಕಾಲದಲ್ಲಿ ವೈಷ್ಣವ ಜೈನ ಗ್ರಂಥಗಳೂ ವೈಷ್ಣವರ ಕಾಲದಲ್ಲಿ ಶೈವ ಜೈನಗ್ರಂಥಗಳೂ ಹುಟ್ಟಲಿಲ್ಲವೆಂದು ತಿಳಿಯಬಾರದು. ಜೈನರು, ವೀರಶೈವರು, ಬ್ರಾಹ್ಮಣರು ಇವರುಗಳಲ್ಲಿಯೂ ಇತರರಲ್ಲಿಯೂ ಕೆಲವರು ಸ್ತ್ರೀಯರೂ ಕೂಡ ಗ್ರಂಥಗಳನ್ನು ರಚಿಸಿದ್ದಾರೆ. ಇವರಲ್ಲಿ ಕಂತಿ, ಮಹಾದೇವಿಯಕ್ಕ, ಜೆಲುವಾಂಬೆ, ಸಂಚಿಯ ಹೊನ್ನಮ್ಮ, ಶೃಂಗಾರಮ್ಮ, ಹೆಳವನಕಟ್ಟೆ ಗಿರಿಯಮ್ಮ ಇವರೇ ಮುಖ್ಯವಾದವರು.

## ಕನ್ನಡ ಗ್ರಂಥಗಳು.

ಕನ್ನಡದಲ್ಲಿ ಬೇಕಾದಷ್ಟು ಗ್ರಂಥಗಳು ಹುಟ್ಟಿವೆ. ಭಟ್ಟಾಕಳಂಕನು ಕನ್ನಡದಲ್ಲಿ ಮತಗ್ರಂಥಗಳು, ಶಾಸ್ತ್ರಗ್ರಂಥಗಳು, ಕಾವ್ಯ, ನಾಟಕ, ಅಲಂಕಾರ ಇವೇ ಮೊದಲಾದ ಬಹು ಗ್ರಂಥಗಳು ದೊರೆಯುತ್ತವೆ ಎಂಬುದಾಗಿ ಕರ್ಣಾಟಕಗ್ರಂಥ

ಸಮೃದ್ಧಿಯನ್ನು ಸೂಚಿಸಿದ್ದಾನೆ[1]. ಜೈನರೂ, ವೀರಶೈವರೂ, ಬ್ರಾಹ್ಮಣರೂ ಕೆಲ ಕೆಲವು ಕೇವಲ ಲೌಕಿಕ ಕಾವ್ಯಗಳನ್ನು ಬರೆದಿದ್ದರೂ ಮುಖ್ಯವಾಗಿ ಮತಗ್ರಂಥ ಗಳನ್ನೇ ವಿಶೇಷವಾಗಿ ಬರೆದಿದ್ದಾರೆ ಜೈನರ ಕಾವ್ಯಗಳಲ್ಲಿ ಪ್ರಾಯಿಕವಾಗಿ ತೀರ್ಥಂ ಕರರ ಚರಿತ್ರವೂ ತತ್ವವಿಚಾರವೂ ಹೇಳಿವೆ ವೀರಶೈವರ ಗ್ರಂಥಗಳಲ್ಲಿ ಈಶ್ವರನ ಚತುರ್ವಿಂಶತಿಲೀಲೆಗಳೂ ಅರುವತ್ತುಮೂವರ ಮತ್ತು ಪುರಾತನರ ಚರಿತಗಳೂ, ಏಕೋತ್ತರಶತಸ್ಥಲ ಮೊದಲಾದ ತತ್ವವಿಷಯಗಳೂ ವಿಸ್ತಾರವಾಗಿ ಪ್ರತಿಪಾದಿ ಸಲ್ಪಟ್ಟಿವೆ. ಬ್ರಾಹ್ಮಣರ ಗ್ರಂಥಗಳು ರಾಮಾಯಣ, ಭಾರತ, ಭಾಗವತ ಇವೇ ಮೊದಲಾದ ಪುರಾಣಕಥೆಗಳನ್ನೂ ವೇದಾಂತವಿಚಾರಗಳನ್ನೂ ಒಳಕೊಂಡಿವೆ.

ಭಟ್ಟಾಕಳಂಕನು ತನ್ನ ಕಾಲದಲ್ಲಿ ಕನ್ನಡನಾಟಕಗಳು ಇದ್ದಂತೆ ಹೇಳು ತ್ತಾನೆ. ಪ್ರಾಚೀನನಾಟಕಗಳು ಆವುವೂ ಈಗ ದೊರೆತಿಲ್ಲ. ಆದರೆ ಕರ್ಣಪಾ ರ್ಯನು ಬರೆದುದಾಗಿ ತಿಳಿದು ಬರುವ ಮಾಳವೀಸೂಧವವೂ ಕೇಶಿರಾಜನು ಬರೆದಿರುವಂತೆ ಹೇಳಿಕೊಂಡಿರುವ ಸುಭದ್ರಾಹರಣವೂ ಪ್ರಬೋಧಚಂದ್ರವೂ ನಾಟಕಗಳಾಗಿರಬಹುದು. ರತ್ನಾವಳೀನಾಟಿಕೆಯ ಭಾಷಾಂತರವಾದ ಸಿಂಗರಾರ್ಯ ಕೃತ ಮಿತ್ರವಿಂದಾಗೋವಿಂದವೆಂಬ ನಾಟಿಕೆಯೊಂದೇ ಈಗ ದೊರೆತಿದೆ. ಇದು 17 ನೆಯ ಶತಮಾನದಲ್ಲಿ ಹುಟ್ಟಿದೆ.

ಅಲಂಕಾರಗ್ರಂಥಗಳಲ್ಲಿ ನೃಪತುಂಗನ ಕವಿರಾಜಮಾರ್ಗವೇ ಪ್ರಾಚೀನ ವಾದುದು. ಅಲ್ಲಿಂದೀಚೆಗೆ ಹುಟ್ಟಿದ ನಾಗವರ್ಮನ ಕಾವ್ಯಾವಲೋಕನದಲ್ಲಿ ಶಬ್ದಾರ್ಥಾಲಂಕಾರಗಳೂ ಕವಿಸಮಯವೂ ಕವಿಕಾಮನ ಶೃಂಗಾರರತ್ನಾಕರ, ಸಾಳ್ವನ ರಸರತ್ನಾಕರ, ತಿಮ್ಮನ ನವರಸಾಲಂಕಾರ ಇವುಗಳಲ್ಲಿ ರಸಪ್ರಕ್ರಿಯೆಯೂ ಶಾರದಾವಿಲಾಸದಲ್ಲಿ ಧ್ವನಿಪ್ರಕ್ರಿಯೆಯೂ ಉಕ್ತವಾಗಿವೆ. ಇವಲ್ಲದೆ ದಂಡಿಯ ಕಾವ್ಯಾದರ್ಶದ ಪರಿವರ್ತನರೂಪವಾದ ಮಾಧವಾಲಂಕಾರವೂ ಚಂದ್ರಾಲೋಕದ ಆಧಾರದ ಮೇಲೆ ಹುಟ್ಟಿರುವ ಅಪ್ರತಿಮವೀರಚರಿತ, ನರಪತಿವಿಜಯ ಎಂಬ ಗ್ರಂಥ ಗಳೂ ಕರ್ಣಾಟಕ ಕುವಲಯಾನಂದವೂ ಇನ್ನು ಬೇರೆ ಕೆಲವು ಗ್ರಂಥಗಳೂ ಇವೆ.

ಛಂದಶ್ಶಾಸ್ತ್ರದಲ್ಲಿ ಗುಣಗಾಂಕಿಯವೆಂಬ ಒಂದು ಪ್ರಾಚೀನಗ್ರಂಥವು ಇದ್ದಂತೆ ತಿಳಿಯಬರುತ್ತದೆ. ಅದು ಈಗ ದೊರೆತಿಲ್ಲ. ನಾಗವರ್ಮನ ಛಂದೋಂ ಬುಧಿಯಲ್ಲಿ ಛಂದಶ್ಶಾಸ್ತ್ರದ ಎಲ್ಲಾ ಭಾಗಗಳೂ ಸಂಪೂರ್ಣವಾಗಿ ಹೇಳಿವೆ. ಇದೇ ವಿಷಯವಾಗಿ ಕವಿಜಿಹ್ವಾಬಂಧನ, ಛಂದಸ್ಸಾರ ಎಂಬ ಗ್ರಂಥಗಳು ಇರುವುದಲ್ಲದೆ ಇನ್ನೂ ಕೆಲವು ಗ್ರಂಥಗಳು ಇದ್ದಂತೆ ಊಹಿಸಲು ಕಾರಣವಿದೆ.

---

1 ಶಬ್ದಾಗಮಯುಕ್ತ್ಯಾಗಮ ಪರಮಾಗಮ ವಿಷಯಾಣಾಂ ತಥಾ ಕಾವ್ಯನಾಟಕಾಲಂಕಾರ ಕಲಾ ಶಾಸ್ತ್ರವಿಷಯಾಣಾಂ ಚ ಬಹೂನಾಂ ಗ್ರಂಥಾನಾಮಪಿ ಭಾಷಾಕೃತಾನಾಮುಪಲಭ್ಯಮಾನತ್ವಾತ್.

ಶಬ್ದಾನುಶಾಸನ.

ವ್ಯಾಕರಣಗ್ರಂಥಗಳಲ್ಲಿ ನಯಸೇನಕೃತವಾದ ಒಂದು ವ್ಯಾಕರಣವಿದ್ದಂತೆ ತಿಳಿಯುತ್ತದೆ. ಅದು ದೊರೆತಿಲ್ಲ. ಶಬ್ದಸ್ಮೃತಿ, ಶಬ್ದಮಣಿದರ್ಪಣ ಇವೆರಡು ಗ್ರಂಥಗಳೂ ಕನ್ನಡಭಾಷೆಯಲ್ಲಿಯೂ ಭಾಷಾಭೂಷಣ, ಶಬ್ದಾನುಶಾಸನ ಎಂಬಿ ವೆರಡೂ ಸಂಸ್ಕೃತದಲ್ಲಿಯೂ ಇವೆ.

ನಿಘಂಟುಗಳಲ್ಲಿ ರನ್ನಕಂದವೇ ಪ್ರಾಚೀನವಾದುದು. ಶಬ್ದಸಾರ, ಕರ್ಣಾಟಕನಿಘಂಟು, ಚತುರಾಸ್ಯನಿಘಂಟು, ಕರ್ಣಾಟಕಶಬ್ದಮಂಜರಿ, ಕಬ್ಬಿಗರ ಕೈಪಿಡಿ, ಕವಿಕಂಠಹಾರ, ಕರ್ಣಾಟಕ ಸಂಜೀವನ ಮೊದಲಾದುವು ಹಳಗನ್ನಡ ಪದಗಳ ಅರ್ಥವನ್ನು ವಿವರಿಸುತ್ತವೆ. ವಸ್ತುಕೋಶ, ಮಂಗಾಭಿಧಾನ, ನಾನಾರ್ಥರತ್ನಾಕರ ಮೊದಲಾದುವು ಸಂಸ್ಕೃತಶಬ್ದಗಳಿಗೆ ಕನ್ನಡಪ್ರತಿಪದಗಳನ್ನು ಕೊಡುತ್ತವೆ. ಇವಲ್ಲದೆ ಅಮರ, ಹಲಾಯುಧ ಮೊದಲಾದ ಸಂಸ್ಕೃತಕೋಶಗಳಿಗೆ ಟೀಕೆಗಳೂ ವೈದ್ಯನಿಘಂಟುಗಳ ಟೀಕೆಗಳೂ ದೊರೆಯುತ್ತವೆ.

ಭಾಷಾವ್ಯುತ್ಪತ್ತಿಗೆ ಸಹಕಾರಿಗಳಾದ ಮೇಲೆ ಹೇಳಿದ ಗ್ರಂಥಗಳಲ್ಲದೆ ಲೋಕವ್ಯವಹಾರಕ್ಕೆ ಉಪಯುಕ್ತವಾದ ಶಾಸ್ತ್ರಗ್ರಂಥಗಳೂ ಜೀವನವೃತ್ತಾಂತಗಳೂ, ಚರಿತ್ರಗಳೂ ಯಥೋಚಿತವಾಗಿ ದೊರೆಯುತ್ತವೆ.

ವೈದ್ಯಶಾಸ್ತ್ರದಲ್ಲಿ ಜಗದ್ಬಳಸೋಮನಾಥಕೃತವಾದ ಕರ್ಣಾಟಕ ಕಲ್ಯಾಣಕಾರಕವೇ ಪ್ರಾಚೀನವಾದುದು. ಖಗೇಂದ್ರಮಣಿದರ್ಪಣದಲ್ಲಿ ವಿಷವೈದ್ಯವು ವಿಸ್ತಾರವಾಗಿ ಹೇಳಿದೆ. ಅಲ್ಲದೆ ಶ್ರೀಧರದೇವ, ಸಾಳ್ವ, ಚಿಕುಪಾಧ್ಯಾಯ, ವೀರರಾಜ, ನಂಜರಾಜ. ನೃಸಿಂಹಭಟ್ಟ, ಬ್ರಹ್ಮ ಮೊದಲಾದವರು ಹಲವು ವೈದ್ಯಗ್ರಂಥಗಳನ್ನು ಬರೆದಿದ್ದಾರೆ. ವ್ರಣವೈದ್ಯ, ಸ್ತ್ರೀವೈದ್ಯ, ಬಾಲವೈದ್ಯ ಇವುಗಳ ವಿಷಯವಾಗಿಯೂ ಗ್ರಂಥಗಳು ಹುಟ್ಟಿವೆ. ಚಂದ್ರರಾಜ, ಅಭಿನವಚಂದ್ರ, ರಾಮಚಂದ್ರ, ಪದ್ಮಣಪಂಡಿತ ಮೊದಲಾದವರು ಅಶ್ವವೈದ್ಯವನ್ನೂ ಚಾಲುಕ್ಯ ರಾಜನಾದ ಕೀರ್ತಿವರ್ಮನು ಗೋವೈದ್ಯವನ್ನೂ ವೀರಭದ್ರರಾಜನು ಪಾಲಕಾಪ್ಯ ಕೃತಹಸ್ತ್ಯಾಯುರ್ವೇದಕ್ಕೆ ಟೀಕೆಯನ್ನೂ ಬರೆದಿದ್ದಾರೆ.

ಪಾಕಶಾಸ್ತ್ರದಲ್ಲಿ ಜಯಬಂಧುನಂದನನ ಗ್ರಂಥವೇ ಪ್ರಾಚೀನವಾದುದು. ಮಂಗರಸ ಮುಂತಾದವರು ರಚಿಸಿದ ಗ್ರಂಥಗಳೂ ಇವೆ.

ಜ್ಯೋತಿಶ್ಶಾಸ್ತ್ರದಲ್ಲಿ ಶ್ರೀಧರಾಚಾರ್ಯಕೃತ ಜಾತಕತಿಲಕವೇ ಪ್ರಾಚೀನವಾದುದು. ಇವಲ್ಲದೆ ಈ ವಿಷಯವಾಗಿ ಲೋಕೋಪಕಾರ, ರಟ್ಟಮತ, ರಟ್ಟನ ಜಾತಕ, ನರಪಿಂಗಳಿ, ಮಾರ್ಕಂಡೇಯಪುರಾಣ, ಶಕುನಪ್ರಪಂಚ ಮೊದಲಾದ ಗ್ರಂಥಗಳೂ ಸೂರ್ಯಸಿದ್ಧಾಂತವೇ ಮೊದಲಾದ ಕೆಲವು ಸಂಸ್ಕೃತ ಗ್ರಂಥಗಳ ಟೀಕೆಗಳೂ ದೊರೆಯುತ್ತವೆ.

ಗಣಿತಶಾಸ್ತ್ರದಲ್ಲಿ ವ್ಯವಹಾರಗಣಿತ, ಕ್ಷೇತ್ರಗಣಿತ, ಬೀಜಗಣಿತ ಮೊದಲಾದ ಗ್ರಂಥಗಳೂ ಕೆಲವು ಸಂಸ್ಕೃತ ಗ್ರಂಥಗಳ ಟೀಕೆಗಳೂ ಇವೆ.

ಕಾಮಶಾಸ್ತ್ರದಲ್ಲಿ ಮದನತಿಲಕವೇ ಪುರಾತನಗ್ರಂಥವು. ಇದಲ್ಲದೆ ಸ್ಮರತಂತ್ರ, ಮನ್ಮಥವಿಜಯ, ಜನವಶ್ಯ ಮೊದಲಾದ ಗ್ರಂಥಗಳೂ ವಾತ್ಸ್ಯಾಯನ, ಕೊಕ್ಕೋಕ ಮೊದಲಾದ ಗ್ರಂಥಗಳ ಟೀಕೆಗಳೂ ಇವೆ.

ಇವುಗಳಲ್ಲದೆ ಸ್ವರಶಾಸ್ತ್ರ, ರತ್ನಶಾಸ್ತ್ರ, ಸಾಮುದ್ರಿಕಶಾಸ್ತ್ರ, ಬಾಣಗಾರಿಕೆ ಮೊದಲಾದುವುಗಳ ವಿಷಯವಾಗಿಯೂ ಗ್ರಂಥಗಳು ಹುಟ್ಟಿವೆ.

ಜೀವನವೃತ್ತಾಂತಗಳಲ್ಲಿ ರಾಜನೃಪವಿಜಯ, ಕಂಠೀರವನರಸರಾಜವಿಜಯ, ಚಿಕ್ಕದೇವರಾಜವಿಜಯ ಮುಂತಾದ ಗ್ರಂಥಗಳೂ ಚರಿತ್ರೆಗಳಲ್ಲಿ ಮೈಸೂರರಸುಗಳ ಪೂರ್ವಾಭ್ಯುದಯ, ಕೆಳದಿನೃಪವಿಜಯ, ಬಿಳಗಿಯರಸರ ವಂಶಾವಳಿ ಮೊದಲಾದ ಗ್ರಂಥಗಳೂ ಇವೆ.

ಅಲ್ಲದೆ ಕಾವ್ಯಸರಣಿಯನ್ನನುಸರಿಸಿ ಪ್ರೌಢವಾದ ಬಂಧದಿಂದ ಉದ್ದಾಮ ಕವಿಗಳು ರಚಿಸಿರುವ ಅನೇಕ ಕನ್ನಡಶಾಸನಗಳು ದೊರೆಯುತ್ತವೆ. ಇವು 7 ನೆಯ ಶತಮಾನ ಮೊದಲುಗೊಂಡು 17 ನೆಯ ಶತಮಾನದ ವರೆಗೆ ಬೇರೆ ಬೇರೆ ಕಾಲದಲ್ಲಿ ಹುಟ್ಟಿವೆ. ಇವುಗಳಲ್ಲಿ ಹಲವು ಗ್ರಂಥಗಳೆಂದು ಪರಿಗಣಿಸುವಷ್ಟು ಪ್ರೌಢವಾಗಿವೆ.

## ಕನ್ನಡಭಾಷೆಗೆ ಪ್ರೋತ್ಸಾಹ.

ಕರ್ಣಾಟಕಭಾಷೆಯೂ ಕವಿತೆಯೂ ಪೂರ್ವಕಾಲದಿಂದಲೂ ರಾಜರುಗಳ ಮತ್ತು ಮಂಡಲಿಕರ ಪ್ರೋತ್ಸಾಹದಿಂದ ಅಭಿವೃದ್ಧಿಗೆ ಬಂದಂತೆ ತಿಳಿಯಬರುತ್ತದೆ. ರಾಷ್ಟ್ರಕೂಟರು, ಗಂಗರು, ಚಾಲುಕ್ಯರು, ಕಾಕತೀಯರು, ಹೊಯ್ಸಳರು, ಸೌಂದತ್ತಿಯರಸರು, ವಿಜಯನಗರದ ಅರಸರು, ಮೈಸೂರರಸರು, ತುಳುವ ರಾಜರು, ಚೌಟರು ಇವರೇ ಮೊದಲಾದ ರಾಜರುಗಳಲ್ಲಿ ಕೆಲವರು ಸ್ವತಃ ಕವಿಗಳಾಗಿದ್ದುದಲ್ಲದೆ ಅನೇಕರು ಕರ್ಣಾಟಕಕವಿಗಳಿಗೆ ಪೋಷಕರಾಗಿದ್ದು ವಿಶೇಷ ಪ್ರೋತ್ಸಾಹವನ್ನುಂಟುಮಾಡಿದ್ದಾರೆ. ಈ ರಾಜರುಗಳೇ ಅಲ್ಲದೆ ಇವರ ಕೈಯ ಕೆಳಗೆ ದೊಡ್ಡದೊಡ್ಡ ಪದವಿಗಳನ್ನು ವಹಿಸಿದ್ದ ಅನೇಕ ಅಧಿಕಾರಿಗಳಲ್ಲಿ ಕೆಲವರು ಗ್ರಂಥರಚನೆ ಮಾಡಿರುವುದಲ್ಲದೆ ಹಲವರು ಕವಿಗಳಿಗೆ ಪ್ರೋತ್ಸಾಹಕರಾಗಿ ಹಲವು ಗ್ರಂಥಗಳನ್ನು ಬರಸಿದ್ದಾರೆ. ಇವರೇ ಅಲ್ಲದೆ ಉಮ್ಮತ್ತೂರು, ಕೆಳದಿ, ಸುಗಟೂರು, ಬೇಲೂರು, ನುಗ್ಗೆಹಳ್ಳಿ, ಪಿರಿಯಪಟ್ಟಣ, ಹದಿನಾಡು, ಚಿಕ್ಕನಾಯಕನಹಳ್ಳಿ, ಮುದಿಗೆರೆ, ಬಿಜ್ಜವರ, ಕಳಲೆ ಮುಂತಾದ ಸ್ಥಳಗಳ ಪಾಳೆಯಗಾರರೂ ಕವಿ

ಪೋಷಕರಾಗಿದ್ದರು. ಉದಾಹರಣೆಗಾಗಿ ಕೆಲವು ಅಂಶಗಳನ್ನು ಇಲ್ಲಿ ತಿಳಿಸುತ್ತೇವೆ[1]. ರಾಷ್ಟ್ರಕೂಟರಲ್ಲಿ ಪ್ರಸಿದ್ಧನಾದ ನೃಪತುಂಗನು ಸ್ವತಃ ಕವಿಯಾಗಿದ್ದುದಲ್ಲದೆ ಅನೇಕ ಕನ್ನಡಕವಿಗಳಿಗೆ ಅವಲಂಬವಾಗಿದ್ದನು. ಗಂಗರಾಜರಿಂದ ಪೋಷಿತರಾಗಿ ಚಾವುಂಡರಾಯ, ನಾಗವರ್ಮ I, ಗುಣವರ್ಮ I ಮೊದಲಾದವರು ಉದ್ಗ್ರಂಥಗಳನ್ನು ರಚಿಸಿದರು. ಚಾಲುಕ್ಯರಾಜರ ಪೋಷಣೆಯಲ್ಲಿ ಆದಿಪಂಪ, ಪೊನ್ನ, ರನ್ನ, ಚಂದ್ರರಾಜ, ದುರ್ಗಸಿಂಹ, ಕೀರ್ತಿವರ್ಮ, ನಾಗವರ್ಮ II ಮೊದಲಾದ ಕವಿಗಳು ಕಾವ್ಯಗಳನ್ನು ಬರೆದಿದ್ದಾರೆ. ಹೊಯ್ಸಳರ ಕಾಲದಲ್ಲಿ ಅಭಿನವಪಂಪ, ಕಂತಿ, ರಾಜಾದಿತ್ಯ, ಸುಮನೋಬಾಣ, ಮಲ್ಲಿಕಾರ್ಜುನ, ರುದ್ರಭಟ್ಟ, ಜನ್ನ, ಹರಿಹರ, ಕೆರೆಯಪದ್ಮರಸ, ಕುಮಾರಪದ್ಮರಸ, ಕೇಶಿರಾಜ ಮೊದಲಾದವರು ಗ್ರಂಥರಚನೆಮಾಡಿದ್ದಾರೆ. ಕರ್ಣಪಾರ್ಯ, ನೇಮಿಚಂದ್ರ, ಮುನಿಚಂದ್ರ ಮೊದಲಾದ ಕವಿಗಳು ಸೌಂದತ್ತಿಯರಸರ ಕಾಲದಲ್ಲಿ ಗ್ರಂಥಗಳನ್ನು ಬರೆದಿದ್ದಾರೆ. ವಿಜಯನಗರದ ಅರಸರ ಪ್ರೋತ್ಸಾಹದಿಂದ ಮಧುರ, ಮಂಗರಸ I, ಕುಮಾರವ್ಯಾಸ, ಕುಮಾರವಾಲ್ಮೀಕಿ, ನಿತ್ಯಾತ್ಮಶುಕ, ಕಲ್ಲರಸ, ಲಕ್ಷ್ಮಣ್ಣಾದಂಡೇಶ, ಚಾಮರಸ, ಚಂದ್ರಶೇಖರ ಮುಂತಾದವರು ಗ್ರಂಥಗಳನ್ನು ರಚಿಸಿದ್ದಾರೆ. ತುಳುವರಾಜರ ಪೋಷಣೆಯಲ್ಲಿ ಸಾಳ್ವ, ರತ್ನಾಕರವರ್ಣಿ ಇವರೇ ಮೊದಲಾದವರು ಗ್ರಂಥರಚನೆಮಾಡಿದರು. ಮೈಸೂರರಸರ ಪೋಷಣೆಯಲ್ಲಿ ತಿರುಮಲಾರ್ಯ, ಸಿಂಗರಾರ್ಯ, ಚಿಕ್ಕುಪಾಧ್ಯಾಯ, ತಿಮ್ಮರಸ, ಮಲ್ಲಿಕಾರ್ಜುನ, ಸಂಚಿಯ ಹೊನ್ನಮ್ಮ, ಕಳಲೆ ನಂಜರಾಜ ಮುಂತಾದವರು ಅನೇಕ ಕೃತಿಗಳನ್ನು ರಚಿಸಿದ್ದಾರೆ. ಮುಮ್ಮಡಿ ಕೃಷ್ಣರಾಜಒಡೆಯರವರ ಕಾಲದಲ್ಲಿ ಆಳಿಯ ಲಿಂಗರಾಜ, ದೇವಲಾಪುರದ ನಂಜುಂಡ, ಕೆಂಪುನಾರಾಯಣಶಾಸ್ತ್ರಿ, ಸೀತಾರಾಮಶಾಸ್ತ್ರಿ ಮೊದಲಾದವರು ಅನೇಕ ಗದ್ಯಗ್ರಂಥಗಳನ್ನೂ ಯಕ್ಷಗಾನ ಪ್ರಬಂಧಗಳನ್ನೂ ರಚಿಸಿದ್ದಾರೆ. ಚಾಮರಾಜ ಒಡೆಯರವರ ಕಾಲದಲ್ಲಿ ಅನೇಕಕವಿಗಳು ಸಂಸ್ಕೃತದಿಂದಲೂ ಇಂಗ್ಲಿಷಿನಿಂದಲೂ ನಾಟಕಗಳನ್ನು ಪರಿವರ್ತಿಸಿ ನಾಗರಿಕರಿಗೆ ಹೃದಯಂಗಮವಾಗುವಂತೆ ಅಭಿನಯಿಸಿ ತೋರಲು ಅನುಕೂಲವಾಗುವಹಾಗೆ ರಚಿಸಿದ್ದಾರೆ.

ಈ ರೀತಿಯಲ್ಲಿ ಕರ್ಣಾಟಕಕವಿತೆ ರಾಷ್ಟ್ರಕೂಟರ ಕಾಲದಲ್ಲಿ ಗೋದಾವರೀತೀರದಲ್ಲಿ ಕಿಸುವೊಳಲೇ ಮೊದಲಾದ ಸ್ಥಳಗಳಲ್ಲಿ ಉತ್ತಮಸ್ಥಿತಿಯಲ್ಲಿದ್ದು ಅನಂತರ ದಕ್ಷಿಣಾಭಿಮುಖವಾಗಿ ಹೊರಟು ಚಾಲುಕ್ಯರಿಂದ ಪೋಷಿತವಾಗಿ ಬಳಿಕ ಹೊಯ್ಸಳರ ಕೈಸೇರಿ ತರುವಾಯ ವಿಜಯನಗರದಲ್ಲಿದ್ದು ಆನೇಲೆ ಕಾವೇರೀತೀರದಲ್ಲಿ ಮೈಸೂರರಸರ ಪರಿಪಾಲನೆಯಲ್ಲಿ ನಿಂತಹಾಗೆ ತೋರುತ್ತದೆ.

---

1. ಇನ್ನೂ ಹೆಚ್ಚು ವಿಷಯಗಳನ್ನು ತಿಳಿಯಬೇಕಾದರೆ ದ್ವಿತೀಯ ಸಂಪುಟದ ಅವತರಣಿಕೆಯ 12—22 ಪುಟಗಳನ್ನು ನೋಡಿ.

## ಕರ್ಣಾಟಕ ಕವಿಚರಿತೆ.

ಹಿಂದಣ ಮುದ್ರಣದ ಅವತರಣಿಕೆಯಲ್ಲಿ (ಪುಟ 15) ಹೇಳಿರುವಂತೆ ಈ ಗ್ರಂಥದಲ್ಲಿ ಒಬ್ಬೊಬ್ಬ ಕವಿಯ ಚರಿತೆಯೂ ಪ್ರಾಯಿಕವಾಗಿ ಈ ಕ್ರಮದಲ್ಲಿ ಬರೆದಿದೆ:—

ಮೊದಲು ಕವಿಯ ಹೆಸರೂ ಅದರ ಪಕ್ಕದಲ್ಲಿ ವರ್ಷ ಸಂಖ್ಯೆಯೂ ಕೊಟ್ಟಿವೆ. ವರ್ಷ ಸಂಖ್ಯೆಗಳೆಲ್ಲಾ ಕ್ರಿಶ್ತಶಕೆಗೆ ಅನ್ವಯಿಸುತ್ತವೆ ಎಂದು ತಿಳಿಯಬೇಕು. ಈ ವರ್ಷಸಂಖ್ಯೆ ಪ್ರಾಯಿಕವಾಗಿ ಗ್ರಂಥರಚನಾಕಾಲವನ್ನು ಸೂಚಿಸುತ್ತದೆ. ಕೆಲವು ಕಡೆ ಈ ಸಂಖ್ಯೆಯ ಹಿಂದೆ ಸುಮಾರು ಎಂಬ ಅರ್ಥವನ್ನು ಸೂಚಿಸುವಂತೆ ಸು. ಎಂಬ ಅಕ್ಷರವು ಬರೆದಿದೆ. ಬಳಿಕ ಆ ಕವಿಯಿಂದ ರಚಿತವಾದ ಗ್ರಂಥಗಳ ಹೆಸರು ಕೊಟ್ಟಿದೆ. ಕೆಲವೆಡೆಗಳಲ್ಲಿ ಆ ಕವಿ ಬರೆದುದಾಗಿ ಇತರಕಾರಣಗಳಿಂದ ತಿಳಿಯ ಬರುವ ಗ್ರಂಥಗಳ ಹೆಸರೂ ಸೇರಿಸಿದೆ. ತರುವಾಯ ಕವಿಯ ದೇಶ, ವಂಶ, ಮತ, ಗುರು, ಪೋಷಕ, ಬಿರುದುಗಳು ಇವೇ ಮೊದಲಾದ ಅವನ ಜೀವನವೃತ್ತಾಂತದ ಅಂಶಗಳು ಹೇಳಿವೆ. ಅನಂತರ ವಿಚಾರಪೂರ್ವಕವಾಗಿ ಕಾಲನಿರ್ಣಯ ಮಾಡಿದೆ. ಆ ಮೇಲೆ ಆ ಕವಿಯನ್ನು ಸ್ತುತಿಸುವ ಇತರಕವಿಗಳ ಹೆಸರುಗಳು ಕೊಟ್ಟಿವೆ. ಅಲ್ಲಿಂದ ಮುಂದೆ ಆ ಕವಿ ಸ್ಮರಿಸುವ ಪೂರ್ವಕವಿಗಳ ಹೆಸರುಗಳು ಹೇಳಿವೆ. ಅನಂತರ ಆ ಕವಿ ತನ್ನ ಕವಿತಾಚಾತುರಿ, ಗುಣಗಳು ಮೊದಲಾದುವನ್ನು ಹೇಳಿಕೊಳ್ಳುವ ಪದ್ಯಗಳು ಉದ್ಧರಿಸಿ ಬರೆದಿವೆ. ಬಳಿಕ ಕವಿಕೃತವಾದ ಗ್ರಂಥ ಗಳನ್ನು ಒಂದೊಂದಾಗಿ ತೆಗೆದುಕೊಂಡು ಅದರವರ ಸ್ವರೂಪ, ಪ್ರತಿಪಾದ್ಯವಿಷಯ, ಕಥಾಗರ್ಭ, ಆಶ್ವಾಸ ಸಂಖ್ಯೆ, ಇಷ್ಟದೇವತಾಸ್ತುತಿ, ಗುರುಪರಂಪರೆ, ಗ್ರಂಥ ರಚನೆಗೆ ಕಾರಣ ಮೊದಲಾದುವನ್ನು ವಿವರಿಸಿ ಬಳಿಕ ಆಶ್ವಾಸಾಂತ್ಯಗಳಲ್ಲಿ ದೊರೆವ ಗದ್ಯಗಳು ಅನುವಾದಮಾಡಲ್ಪಟ್ಟಿವೆ. ಅನಂತರ ಗ್ರಂಥದ ಬಂಧದ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳಿ ಕವಿತಯ ಧೋರಣೆಯನ್ನು ತೋರಿಸುವುದಕ್ಕಾಗಿ ಕೆಲವು ಪದ್ಯಗಳು ಉದಾಹೃತವಾಗಿವೆ.

ಪ್ರಾಯಿಕವಾಗಿ ಈ ಕ್ರಮವನ್ನು ಅನುಸರಿಸಿ ಕವಿಗಳ ಚರಿತೆ ಬರೆಯಲ್ಪ ಟ್ಟಿದ್ದರೂ ಮೇಲೆ ವಿವರಿಸಿದ ಅಂಶಗಳೆಲ್ಲಾ ತಿಳಿದುಬಾರದಿರುವ ಕೆಲವರು ಕವಿಗಳ ಚರಿತೆ ಯಥೋಚಿತವಾಗಿ ಸಂಕ್ಷೇಪಿಸಿ ಬರೆದಿದೆ.

## ಪ್ರಥಮ ಸಂಪುಟ.

ಕರ್ಣಾಟಕಕವಿಚರಿತೆಯ ಪ್ರಥಮ ಸಂಪುಟವು ಹಲವು ವರ್ಷಗಳಿಗೆ ಹಿಂದೆ, 1907 ರಲ್ಲಿ, ಮುದ್ರಿತವಾಯಿತು. ಆ ಮುದ್ರಣದ ಪ್ರತಿಗಳೆಲ್ಲಾ ಮುಗಿದು ಹೋದುದರಿಂದ ಪುಸ್ತಕವನ್ನು ಪರಿಷ್ಕರಿಸಿ ಮತ್ತೊಂದು ಮುದ್ರಣವನ್ನು ಕೈಗೊ

ಳ್ಳುವುದು ಉಚಿತವೆಂದು ತೋರಿತು. ಅದೇ ಮೇರೆಗೆ ತಿದ್ದುವ ಕೆಲಸವು ಒಂದೂವರೆ ವರ್ಷಕ್ಕೆ ಹಿಂದೆಯೇ ಆರಂಭವಾಗಿ ಪುಸ್ತಕವು ಈ ರೀತಿಯಾಗಿ ಮುದ್ರಿತವಾಗಿದೆ. ಇದರಲ್ಲಿ ಪ್ರಥಮ ಸಂಪುಟದ ಹಿಂದಣ ಮುದ್ರಣದ 1 ನೆಯ ಪರಿಶಿಷ್ಟದಲ್ಲಿಯೂ ದ್ವಿತೀಯ ಸಂಪುಟದ ಮೊದಲು 42 ಪುಟಗಳು, 3 ನೆಯ ಪರಿಶಿಷ್ಟ ಇವುಗಳಲ್ಲಿಯೂ ಹೇಳಿರುವ ಕವಿಗಳನ್ನು ಸೇರಿಸಿರುವುದಲ್ಲದೆ ಹಲವರು ಹೊಸಕವಿಗಳ ಚರಿತೆಯೂ, ಶಾಂತಿನಾಥನ ಸುಕುಮಾರಚರಿತೆ (ಪುಟ 83) ಹರೀಶ್ವರನ ಮುಡಿಗೆಯ ಅಷ್ಟಕ (ಪುಟ 234) ಆಚಣ್ಣನ ಶ್ರೀಪದಾಶೀತಿ (ಪುಟ 304) ಇವೇ ಮೊದಲಾದ ಹಿಂದೆ ದೊರೆಯದ ಹಲವು ಹೊಸಗ್ರಂಥಗಳೂ ಸೇರಿಸಿವೆ. ಅಲ್ಲದೆ ವೀರಶೈವವಚನಕಾರರಲ್ಲಿ ಹಿಂದೆ ತಿಳಿಯದೆ ಇದ್ದ ಕೆಲವರ ಚರಿತೆಯನ್ನು ಬರೆದಿರುವುದಲ್ಲದೆ ದ್ವಿತೀಯ ಸಂಪುಟದಲ್ಲಿ ಸರಿಯಾಗಿ ಬರೆಯದೆ ಇದ್ದ ಹಲವರು ವಚನಕಾರರ ಚರಿತೆ ತಿದ್ದಿ ಬರೆಯಲ್ಪಟ್ಟಿದೆ (ಪುಟಗಳು 189–210). ಹಿಂದಣ ಮುದ್ರಣದಲ್ಲಿ ಹೇಳಿರುವ ಕವಿಗಳ ಸಂಖ್ಯೆ ಸುಮಾರು 230; ಇದರಲ್ಲಿಯ ಕವಿಗಳ ಸಂಖ್ಯೆ ಸುಮಾರು 280 ಈ ಕವಿಗಳಲ್ಲಿ ಸುಮಾರು 40 ಮಂದಿ ಶಾಸನಗಳನ್ನು ಬರೆದಿದ್ದಾರೆ. ಮತಗಳ ಪ್ರಕಾರ ವಿಂಗಡಿಸಿದರೆ ಸುಮಾರು 95 ಮಂದಿ ಜೈನರೂ 90 ಮಂದಿ ವೀರಶೈವರೂ 45 ಮಂದಿ ಬ್ರಾಹ್ಮಣರೂ 50 ಮಂದಿ ಇತರರೂ ಆಗಿದ್ದಾರೆ. ಈ ಕವಿಗಳಲ್ಲಿ 6 ಮಂದಿ ಹೆಂಗಸರು. ಅವತರಣಿಕೆಯಲ್ಲಿಯೂ ತಿದ್ದುಪಾಡುಗಳು ಮಾಡಿವೆ. ಹಿಂದಣ ಮುದ್ರಣಕ್ಕೆ ಸೇರಿಸಿದ್ದ ಅನುಬಂಧದಲ್ಲಿಯ ಕವಿಗಳೂ ಗ್ರಂಥಗಳೂ ಬಹಳ ನುಟ್ಟಿಗೆ ದ್ವಿತೀಯ ತೃತೀಯ ಸಂಪುಟಗಳಲ್ಲಿ ಸೇರಿರುವುದರಿಂದ ಆ ಅನುಬಂಧವು ಈ ಮುದ್ರಣದಲ್ಲಿ ಬಿಡಲ್ಪಟ್ಟಿದೆ. ಉಳಿದಿರುವ ಕವಿಗಳ ಮತ್ತು ಗ್ರಂಥಗಳ ಪಟ್ಟಿ ತೃತೀಯ ಸಂಪುಟಕ್ಕೆ ಅನುಬಂಧವಾಗಿ ಕೊಡಲ್ಪಡುವುದು.

ಈ ಪುಸ್ತಕವನ್ನು ಪರಿಷ್ಕರಿಸುವುದರಲ್ಲಿ ಕೆಲವರು ಮಹನೀಯರು ಆದರಿಂದ ಸಹಾಯಮಾಡಿದ್ದಾರೆ. ಇವರೊಳಗೆ ದಾವಣಗೆರೆ ನಿಶಾನಿಮಠದ ಶ್ರೀಮಾ॥ ಶಾಂತವೀರಾರ್ಯರು ಮಾಡಿದ ಸಹಾಯವು ಮುಖ್ಯವಾಗಿ ತಿಳಿಸತಕ್ಕುದಾಗಿದೆ. ವೀರಶೈವ ವಚನಕಾರರು ಪ್ರಾಯಿಕವಾಗಿ ತಮ್ಮ ವಚನಗಳಲ್ಲಿ ಇಷ್ಟದೇವತೆಯ ಅಂಕಿತವನ್ನು ಹೇಳುವರೇ ಹೊರತು ತಮ್ಮ ಹೆಸರನ್ನು ಹೇಳುವುದಿಲ್ಲ. ಆದುದರಿಂದ ಇಂಥಿಂಥ ವಚನಕಾರರು ಇಂಥಿಂಥ ಅಂಕಿತಗಳನ್ನು ಉಪಯೋಗಿಸುತ್ತಾರೆ ಎಂಬಂಶವು ತಿಳಿದ ಹೊರತು ಆವುವಾದರೂ ವಚನಗಳನ್ನು ನೋಡಿ ತತ್ಕರ್ತೃಗಳು ಇಂಥವರು ಎಂದು ಹೇಳಲು ಸಾಧ್ಯವಲ್ಲ. ಶ್ರೀಮಾ॥ ಶಾಂತವೀರಾರ್ಯರಿಗೆ ಅದೃಷ್ಟವಶಾತ್ ಸಿಕ್ಕಿದ ಒಂದು ಓಲೆಯ ಪುಸ್ತಕದಲ್ಲಿ ಅನೇಕ ವಚನಕಾರರ ಹೆಸರೂ ಅವರ ವಚನಗಳೂ ಆ ವಚನಗಳ ಸಂಖ್ಯೆಯೂ ಕೊಟ್ಟಿವೆ. ಈ ಪುಸ

ಕವು 1747 ರಲ್ಲಿ ಬರೆದುದು; ಇದರಲ್ಲಿ 3222 ವಚನಗಳಿವೆ. ಅವರು ಕೊಟ್ಟ ಈ ಪುಸ್ತಕದ ಪ್ರತಿಯ ಸಹಾಯದಿಂದ ವಚನಕಾರರ ವಿಷಯವಾಗಿ ಬಿದ್ದಿದ್ದ ತಪ್ಪುಗಳನ್ನು ತಿದ್ದುವುದಕ್ಕೂ ಹೊಸವಚನಕಾರರನ್ನು ಸೇರಿಸುವುದಕ್ಕೂ ಅನುಕೂಲವಾಯಿತು. ಆದರೂ ಇನ್ನೂ ಅನೇಕ ವಚನಕಾರರ ಹೆಸರು ತಿಳಿದಿಲ್ಲ (ಪುಟ 211). ಬಿಜಾಪುರ ಜಿಲ್ಲೆಗೆ ಸೇರಿದ ಹಲಸಂಗಿಯ ಶ್ರೀಮಾ ಚೆನ್ನಮಲ್ಲಪ್ಪನವರೂ 449 ನೆಯ ಪುಟದಲ್ಲಿ ಹೇಳಿರುವ ಬಿಜಾಪುರದ ಶಾಸನದ ಪ್ರತಿಯನ್ನು ಕಳುಹಿಸಿಕೊಟ್ಟು ಸಹಾಯಮಾಡಿದ್ದಾರೆ. ಈ ಶಾಸನವು ಬಿಜಾಪುರದೊಡನೆ ಸಂಬಂಧವುಳ್ಳ ನಾಗಚಂದ್ರನಿಂದ ರಚಿತವಾಗಿರಬಹುದೋ ಎಂಬ ಊಹೆಗೆ ಅವಕಾಶವಿದೆ.

ಇನ್ನು, ಕೆಲವು ಪತ್ರಿಕೆಗಳಲ್ಲಿ ಕವಿಚರಿತೆಯ ವಿಷಯವಾಗಿಯೂ ನನ್ನ ವಿಷಯವಾಗಿಯೂ ಬರೆದಿರುವ ಅಂಶಗಳನ್ನು ಕುರಿತು ಒಂದೆರಡು ಮಾತುಗಳನ್ನು ಆಡಬೇಕಾಗಿದೆ. ಕನ್ನಡ ಪರಿಷತ್ಪತ್ರಿಕೆಯಲ್ಲಿ (ಜನವರಿ 1922, ಪುಟಗಳು 280–282) ಶ್ರೀಮಾ ಬಿ. ಎ. ಕೃಷ್ಣಮೂರ್ತಿಗಳು "ಗುಣಸೇನಪಂಡಿತನ ಹೆಸರು ಕವಿಚರಿತೆಯ ಎರಡು ಸಂಪುಟಗಳಲ್ಲಿಯೂ ಹೇಳಿಲ್ಲ; ಈತನಿಗೆ ಕನ್ನಡದಲ್ಲಿಯೂ ಪಾಂಡಿತ್ಯವಿದ್ದಂತೆ ತೋರುವುದು" ಎಂದು ಬರೆದಿದ್ದಾರೆ. ಈತನು ಕನ್ನಡದಲ್ಲಿ ಬರೆದಿದ್ದಾನೆ ಎಂಬುದಕ್ಕೆ ನನಗೆ ಆವ ಆಧಾರವೂ ದೊರೆಯಲಿಲ್ಲವಾದುದರಿಂದ ಇವನ ಹೆಸರನ್ನು ಹೇಳಲಿಲ್ಲ. ಸರಿಯಾದ ಆಧಾರವು ಸಿಕ್ಕಿದರೆ ಇವನ ಹೆಸರನ್ನು ಸೇರಿಸಲು ಆವ ಅಡ್ಡಿಯೂ ಇಲ್ಲ. ಇದೇ ಪತ್ರಿಕೆಯಲ್ಲಿಯೂ ಇತರ ಪತ್ರಿಕೆಗಳಲ್ಲಿಯೂ ಕವಿರಾಜಮಾರ್ಗದ ಕರ್ತೃವಿನ ವಿಷಯವಾಗಿ ಅನೇಕ ವಾಗ್ಯುದ್ಧಗಳು ನಡೆದಿವೆ. ಈ ಯುದ್ಧದಲ್ಲಿ ಆಸ್ಥೆಯಿಸುವ ಶಕ್ತಿ ನನಗಿಲ್ಲ. ಶ್ರೀಮಾ ನಾರಾಯಣ ಶ್ರೀನಿವಾಸ ರಾಜಪುರೋಹಿತರು ಈ ಯುದ್ಧದಲ್ಲಿ ವಿಶೇಷವಾಗಿ ಆಸ್ಥೆಯಿಸಿ ಹಲವು ಆಯುಧಗಳನ್ನು ಜಳಪಿಸಿದ್ದಾರೆ. ಆದರೆ ಇದರಿಂದ ಕನ್ನಡಿಗರಿಗೆ ವಿಶೇಷ ಪ್ರಯೋಜನವಾದಂತೆ ಕಾಣುವುದಿಲ್ಲ. ಈ ವಾದದ ಗುಣಾವಗುಣಗಳನ್ನು ವಿಚಾರಮಾಡಲು ಇಲ್ಲಿ ಅವಕಾಶವಿಲ್ಲ; ಇಷ್ಟು ಮಟ್ಟು ಮಾತ್ರ ಹೇಳಬಹುದು: ಜೈನನಾದ ನೃಪತುಂಗನು ಬ್ರಾಹ್ಮಣರ ಭಗವದ್ಗೀತೆಯ

ಯತ್ರ ಯೋಗೇಶ್ವರಃ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ।
ತತ್ರ ಶ್ರೀರ್ವಿಜಯೋ ಭೂತಿರ್ಧ್ರುವಾ ನೀತಿರ್ಮತಿರ್ಮಮ ॥

ಎಂಬ ಶ್ಲೋಕದಲ್ಲಿ ಉಕ್ತವಾದ ಕೆಲವು ಪದಗಳನ್ನೇ ತನಗೆ ಬಿರುದುಗಳಾಗಿ ಮಾಡಿಕೊಳ್ಳಲು ಕುತೂಹಲಿಯಾದುದಕ್ಕೆ ಕಾರಣವು ಗೋಚರವಾಗುವುದಿಲ್ಲ. ಶ್ರೀವಿಜಯ ಎಂಬ ಬಿರುದು ನೃಪತುಂಗನಿಗೆ ಉಂಟೆಂದು ತೋರಿಸುವುದಕ್ಕೆ ಶ್ರೀಮಾ ರಾಜಪುರೋಹಿತರು

ವೀರಶ್ರೀ ವಿಜಯನ ಕೆ । ಯ್ಸಾರೆ ಸುರಾಂಗನೆಯರೊಸೆದು ಪರಸುವ ರವಮುಂ ।
ಭೋರೆಂದೆಸಗುವ ಕುಸುಮಾ । ಸಾರದ ಬಲ್ಸರಿಯುಮೆಸೆದುನಂಬರತಳದೊಳ್ ॥

ಎಂಬ ಪದ್ಯವನ್ನು ಉದಾಹರಿಸಿದ್ದಾರೆ (ಪರಿಷತ್ಪತ್ರಿಕೆ, ಜುಲೈ 1923). ಈ ಪದ್ಯದಲ್ಲಿ ಶ್ರೀವಿಜಯ ಎಂಬ ಬಿರುದೇ ಇಲ್ಲ. ವೀರಶ್ರೀ ಎಂಬುದು ಕರ್ತೃ. ವಿಜಯ ಎಂದರೆ ಅರ್ಜುನ. ವೀರಲಕ್ಷ್ಮಿ ಅರ್ಜುನನ ಕೈಸೇರಲು ಸುರಾಂಗನೆಯರು ಹರಸಿದರು, ಪುಷ್ಪವೃಷ್ಟಿಯಾಯಿತು—ಎಂಬುದು ಈ ಪದ್ಯದ ಅರ್ಥವು. ಶ್ರೀಯುತ ಟಿ. ಎ. ಸುಬ್ಬರಾಯಶಾಸ್ತ್ರಿಗಳು ಪ್ರಬುದ್ಧ ಕರ್ಣಾಟಕದಲ್ಲಿ (ದುಂದುಭಿ ವರ್ಷದ ದೀಪಾವಳೀ ಸಂಚಿಕೆ, ಪುಟಗಳು 5–16) 1763 ರಲ್ಲಿ ಹುಟ್ಟಿದ ಚೋರ ಬಸವಚರಿತ್ರೆ ಎಂಬ ಆಧುನಿಕಗ್ರಂಥದ ಕೆಲವು ಹೇಳಿಕೆಗಳನ್ನು ಆವಲಂಬಿಸಿ ಕುಮಾರವ್ಯಾಸನು ಚಾಮರಸನ ಸಮಕಾಲದವನಾದ ಹರೀಶ್ವರನ (ಸು. 1165) ಸಮಕಾಲದವನೆಂದು ನಿರ್ಧರಿಸಿದ್ದಾರೆ. ಈ ಗ್ರಂಥಕ್ಕಿಂತ ಸುಮಾರು 100 ವರ್ಷ ಹಿಂದೆ ಹುಟ್ಟಿರುವ ಭೈರನೇಸ್ವರಕಥಾಸೂತ್ರರತ್ನಾಕರದಲ್ಲಿ ಪ್ರೌಢರಾಯ (1419–1446), ಜಕ್ಕಣಾರ್ಯ, ಚಾಮರಸ, ವೀರಣ್ಣೊಡೆಯ, ಕರಸ್ಥಲದನಾಗಿದೇವ, ಕಲ್ಲುಮಠದ ಪ್ರಭು ಇವರೆಲ್ಲರೂ ಸಮಕಾಲದವರೆಂದು ಹೇಳಿದೆ. ಅಲ್ಲದೆ ಹರೀಶ್ವರನಿಗೆ ಹರಿಹರ ಶಿವಾಚಾರ್ಯ ಎಂಬ ಹೆಸರು ಚೋರಬಸವಚರಿತ್ರೆಯಲ್ಲಿ ಹೊರತು ಇನ್ನಾವ ವೀರಶೈವ ಗ್ರಂಥವಲ್ಲಿಯೂ ಹೇಳಿರುವಂತೆ ತಿಳಿವುದಿಲ್ಲ. ಕಾಲನಿರ್ಣಯ ವಿಷಯದಲ್ಲಿ ಈ ಗ್ರಂಥವನ್ನು ಎಷ್ಟರಮಟ್ಟಿಗೆ ನಂಬಬಹುದು ಎಂಬಂಶವು ಶಾಸ್ತ್ರಿಗಳು ಆಸುವಾದ ಮಾಡಿರುವ ಈ ಒಂದು ವಾಕ್ಯದಿಂದಲೇ ವ್ಯಕ್ತವಾಗುತ್ತದೆ (ಪುಟ 7) :—

"ಹಂಪೆಯಲ್ಲಿ ರಾಘವ, ಭೀಮಕವಿ, ಲಕ್ಷ್ಮಣ್ಣಮಂತ್ರಿ ಮೊದಲಾದ ಶಿವ ಭಕ್ತ ಕವಿಗಳ ಮಧ್ಯದಲ್ಲಿ ಬೆಳಗುತ್ತಿದ್ದ ಹರಿಹರ ಶಿವಾಚಾರ್ಯನೆಡೆಗೈತಂದು ಚಾಮರಸನು ಅವನೊಡನೆ ಪ್ರಭುಲಿಂಗಲೀಲೆಯನ್ನು ಹೇಳುತ್ತಿದ್ದನು."

ಇಲ್ಲಿ ಒಟ್ಟಿಗೆ ಕುಳಿತಿದ್ದಂತೆ ಹೇಳಿರುವವರಲ್ಲಿ ಹರೀಶ್ವರನ ಮತ್ತು ರಾಘವನ ಕಾಲ ಸುಮಾರು 1165 ; ಭೀಮಕವಿಯ ಕಾಲ 1369 ; ಲಕ್ಷ್ಮಣ್ಣಮಂತ್ರಿಯ ಕಾಲ 1428.

ವೀರಶೈವ ಧರ್ಮಪ್ರಕಾಶಿಕೆ (ಜುಲೈ 1922), ವಿಭಾಕರ (ಜೂನ್ 30,1922) ಈ ಪತ್ರಿಕೆಗಳು ವಸ್ತುಸ್ಥಿತಿಯನ್ನು ತಿಳಿಯದೆ ಭ್ರಮಿಸಿ ನನ್ನ ಮೇಲೆ ಕೆಲವು ದೋಷಗಳನ್ನು ಆರೋಪಿಸಿವೆ. ಮೊದಲನೆಯ ಪತ್ರಿಕೆಯಲ್ಲಿ ಈ ಮಾತುಗಳು ಹೇಳಿವೆ :—"ಶ್ರೀಮದ್ವೀರಶೈವಮತದಮೇಲೆ ಕರ್ಣಾಟ ಕವಿಚರಿತ್ರೆಯ ಕರ್ತರು ಪರಮತದವರಾದಕಾರಣ ವಿಷವನ್ನು ಕಾರಿರುವರೆಂದು ವೇ॥ ಶಾಂತವೀರಯ್ಯ. ನಿಶಾನಿಮಠ ಇವರು ತುಂಬಾ ಶ್ರಮವಹಿಸಿ ಶೋಧಿಸಿ ಕಳುಹಿಸಿರುವ ವಿಷಯ

ಗಳನ್ನು ಓದಿದ ಎಂಥವರಿಗಾದರೂ ತಿಳಿಯದೆ ಇರಲಾರದು. ಇವರು ಕಷ್ಟಪಟ್ಟು ಪುರಾತನ ತಾಳವಾಲಿ ಗ್ರಂಥಗಳನ್ನು ಶೋಧಿಸಿ ಪರಮತದವರು ನಮ್ಮ ಮತದ ಮೇಲೆ ಕಾರಿರುವ ವಿಷಕ್ಕೆ ತಕ್ಕ ಔಷಧವನ್ನು ತಯಾರುಮಾಡುತ್ತಿರುವರು." ನಾನು ಕೆಲವರು ವೀರಶೈವ ವಚನಕಾರರ ಹೆಸರನ್ನು ಹೇಳಲಿಲ್ಲ ಎಂಬುದಕ್ಕಾಗಿ ಈ ಕಠಿನೋಕ್ತಿಗಳು ಪ್ರಯೋಗಿಸಿವೆ. ದ್ವಿತೀಯ ಸಂಪುಟವನ್ನು ಬರೆದಾಗ ನಾನು ಸಾವಿರಾರು ಓಲೆಯ ಪುಸ್ತಕಗಳನ್ನು ಶೋಧಿಸಿದೆನು. ಆದರೆ ಶ್ರೀಮಾ ಶಾಂತ ವೀರಾರ್ಯರಿಗೆ ಸುಯೋಗದಿಂದ ಸಿಕ್ಕಿದಂತೆ ನನಗೂ ವಚನಕಾರರ ಹೆಸರನ್ನು ಹೇಳುವ ಒಂದು ಪುಸ್ತಕವು ಸಿಕ್ಕಿದ್ದರೆ ಒಂದು ಹೆಸರನ್ನಾದರೂ ಬಿಡುತ್ತಿರಲಿಲ್ಲ. ಆಕಾಲದಲ್ಲಿ ತಿಳಿದಿರಲಿಲ್ಲವಾದುದರಿಂದ ಹೇಳಲಿಲ್ಲ. 'ಅನ್ಯಮತ', 'ವಿಷಕಾರುವುದು' ಎಂಬ ನುಡಿಗಳು ನನಗೆ ಬಹಳ ಖೇದಕರವಾಗಿವೆ. ಸಾಹಿತ್ಯ ಸಾಮ್ರಾಜ್ಯದಲ್ಲಿ ಮತ, ವರ್ಣ, ಸಿರಿ, ಬಡತನ ಮುಂತಾದ ಭಾವನೆಗಳಿಗೆ ಎಡೆಯೇ ಇಲ್ಲ. ವೀರಶೈವ ಕವಿಗಳ ಚರಿತೆಯನ್ನು ಬರೆವುದರಲ್ಲಿ ನಾನು ತೋರಿಸಿರುವ ನಿಷ್ಪಕ್ಷಪಾತತೆಗೆ ಅನೇಕ ವೀರಶೈವ ಮಹನೀಯರು ಆನಂದಿಸಿ ತಮ್ಮ ಮೆಚ್ಚಿಕೆಯನ್ನು ತಿಳಿಸಿದ್ದಾರೆ. ವಿಭಾಕರದಲ್ಲಾದರೋ ಈ ಮಾತುಗಳು ಹೇಳಿವೆ :—"ರಾ. ನರಸಿಂಹಾಚಾರ್ಯರು ತಮಗೆ ಸಂಬಳವು ದೊರೆಯುವುದೆಂದು ಪರಿಶ್ರಮಿಸಿ ಶೋಧ ಮಾಡಿದರು ಮತ್ತು ಆ ಗ್ರಂಥಕರ್ತರ (ವಚನಕಾರರ) ಹೆಸರು ಬರೆಯೋಣವೆಂದರೆ ವೀರಶೈವ ಶರಣರ ಕೀರ್ತಿಯು ಹೆಚ್ಚಬಹುದೆಂತಲೋ ಏನೋ ಕಾರಣದಿಂದ ಬಿಟ್ಟಿರಬಹುದು" ಈ ವಿಷಬಾಣ ಪ್ರಯೋಗಕ್ಕೆ ನಾನು ಸರ್ವಾತ್ಮನಾ ಪಾತ್ರವಲ್ಲ. ಕವಿಚರಿತೆಯನ್ನು ನಾನು ಸರಕಾರಕ್ಕಾಗಿ ಸಂಬಳವನ್ನು ಹೊಂದಿ ಬರೆಯಲಿಲ್ಲ; ಭಾಷಾಸೇವೆಯನ್ನು ಮಾಡಬೇಕೆಂಬ ಉತ್ಕಟೇಚ್ಛೆಯಿಂದ ಶ್ರಮಪಟ್ಟು ಸ್ವಂತ ದ್ರವ್ಯವನ್ನು ವ್ಯಯಮಾಡಿ ಪ್ರಕಟಿಸಿದೆನು. ವಚನಕಾರರ ಅಂಕಿತಗಳನ್ನೆಲ್ಲಾ ಕೊಟ್ಟಿದ್ದೇನೆ: ಹೆಸರು ಆಕಾಲದಲ್ಲಿ ದೊರೆಯಲಿಲ್ಲವಾದುದರಿಂದ ಹೇಳಲಿಲ್ಲ. ಇಷ್ಟುಮಾತ್ರಕ್ಕೆ ಮತ್ಸರಗ್ರಸ್ತನೆಂದು ಹೇಳುವುದು ಉಚಿತವೇ? ವೀರಶೈವರ ಸಾಹಿತ್ಯ ಸಂಪತ್ತನ್ನು ಪ್ರಕಟಮಾಡುವುದರಲ್ಲಿ ಆವ ವೀರಶೈವನೂ ನನ್ನಷ್ಟು ಶ್ರಮಪಟ್ಟಿಲ್ಲ ಎಂದು ಧೈರ್ಯವಾಗಿ ಹೇಳಬಲ್ಲೆನು.

ಕನ್ನಡ ಸಾಹಿತ್ಯಪರಿಷತ್ಪತ್ರಿಕೆಯಲ್ಲಿ (ಅಕ್ಟೋಬರ್ 1922, ಪುಟಗಳು 171–184) ಶ್ರೀಮಾ ತಿರುಮಲ ತಾತಾಚಾರ್ಯರು ಬರೆದಿರುವ ವಿಷಯವನ್ನು ಕುರಿತು ಒಂದು ಮಾತನ್ನು ಆಡುವುದು ಉಚಿತವಾಗಿ ತೋರುತ್ತದೆ. ಇವರು ಶಾಸನದ ಕೊನೆಯಲ್ಲಿ ಬರುವ 'ಬರೆದಂ' ಎಂಬುದು ಆ ಶಾಸನವನ್ನು ರಚಿಸಿದ ಕವಿಗೆ ಅನ್ವಯಿಸುತ್ತದೆ ಎಂದು ತಿಳಿದುಕೊಂಡಿರುವಂತೆ ತೋರುತ್ತದೆ. ಬೇರೆ ಆವ ವಿಧವಾದ ಸೂಚನೆಯೂ ಇಲ್ಲದೆ ಸುಮ್ಮನೆ ಬರೆದಂ ಎಂದಿದ್ದರೆ ಆದು

ಲೇಖಕನಿಗೆ ಅನ್ವಯಿಸುವುದೇ ಹೊರತು ಕವಿಗಲ್ಲ. ಕವಿಯಾದರೆ ಒರೆದಂ, ಪೇಳ್ದಂ ಎಂಬುವೇ ಮೊದಲಾದ ಪದಗಳಿರುತ್ತವೆ. ಆದುದರಿಂದ ಅವರು ಕವಿಗಳೆಂದು ಭಾವಿಸಿರುವ ಗುರುಭಕ್ತರಾಚಯ್ಯ, ರಾವಪಯ್ಯ, ಪ್ರತಿಕಂಠಕಾಮರಾಜ ಎಂಬವರು ಲೇಖಕರೇ ಹೊರತು ಕವಿಗಳಲ್ಲ.

ಈ ಮುದ್ರಣದಲ್ಲಿ ಲೋಪಗಳಿಲ್ಲ ಎಂದು ಹೇಳಲಾರೆನು, ಸಾಧ್ಯವಾದ ಮಟ್ಟಿಗೂ ಪರಿಷ್ಕರಿಸಿದ್ದೇನೆ ಎಂದು ಮಾತ್ರ ಹೇಳಬಲ್ಲೆನು. ಇದನ್ನು ಕನ್ನಡಿಗರಿಗೆ ಕಾಣಿಕೆಯಾಗಿ ಒಪ್ಪಿಸಿದ್ದೇನೆ. ಇದು ಅವರ ಮೆಚ್ಚಿಕೆಯನ್ನೂ ಪ್ರೋತ್ಸಾಹವನ್ನೂ ಪಡೆದರೆ ನನ್ನ ಶ್ರಮವು ಸಾರ್ಥಕವೆಂದು ಭಾವಿಸುವೆನು. ಈಗ ಮುದ್ರಣದಲ್ಲಿರುವ ತೃತೀಯ ಸಂಪುಟವೂ ಶೀಘ್ರವಾಗಿ ಹೊರಬೀಳಬೇಕೆಂದು ಹಾರೈಸುತ್ತೇನೆ.

ಈ ಗ್ರಂಥವನ್ನು ತಮಗೆ ಅರ್ಪಿಸಲು ಅಪ್ಪಣೆಯನ್ನು ದಯಪಾಲಿಸಿದುದಕ್ಕಾಗಿ ಶ್ರೀಮನ್ಮಹಾರಾಜರವರಿಗೆ ಅತ್ಯಂತ ಕೃತಜ್ಞನಾಗಿದ್ದೇನೆ.

ದ್ವಿತೀಯ ಸಂಪುಟದ ವಿಷಯವಾಗಿ ಸವಿಶೇಷಾಭಿಪ್ರಾಯಗಳನ್ನು ತಿಳಿಸಿದ ಮಹನೀಯರುಗಳ, ಐದುನೂರುರೂಪಾಯಿ ಸಹಾಯ ದ್ರವ್ಯವನ್ನು ಕೊಟ್ಟು ಈ ಮುದ್ರಣಕ್ಕೆ ಸಹಕಾರಿಗಳಾದ ಮೈಸೂರು ವಿಶ್ವವಿದ್ಯಾನಿಲಯದ ಅಧಿಕಾರಿಗಳ, ಉಪಕಾರವು ಚಿರಸ್ಮರಣೀಯವಾಗಿದೆ.

ಈ ಪುಸ್ತಕವನ್ನು ಜಾಗ್ರತೆಯಾಗಿಯೂ ಜಾಗರೂಕತೆಯೊಡನೆಯೂ ಮುದ್ರಿಸಿದ ಬೆಂಗಳೂರು ಮುದ್ರಣಾಲಯದ ಮುಖ್ಯಾಧಿಕಾರಿಗಳ ಉಪಕಾರವು ಸ್ಮರಿಸತಕ್ಕದಾಗಿದೆ.

ಮುನ್ನಂ ಕೃತರತ್ನಂಗಳ್ ಸೆನ್ನಮುರ್ದೆಯುಳ್ ಧರಿಸುವನ್ನಂ ಕಬ್ಬುಂ।
ಕನ್ನಡಕವಿಗಳ ಚರಿತಂ। ಕನ್ನಡಿಗರ ಬಗೆಗೆ ಮುದಮನೊದವಿಸುಗನಿಶಂ ॥
ಶ್ರೀರಾಮಾನುಜಪದಸರ। ೀರುಹಷಟ್ಪದನನಂತದೇಶಿಕವಂಶ್ಯಂ ।
ನಾರಾಯಣಾರ್ಯತನುಭವ। ನೋರಂತೊರೆದಂ ನ್ಸಸಿಂಹಕವಿಯಾಕೃತಿಯಂ

Bangalore,
*1st March, 1924.*

ರಾ. ನರಸಿಂಹಾಚಾರ್ಯ.

# ಶ್ರೀಃ

# ಕರ್ಣಾಟಕ ಕವಿಚರಿತೆ.

## ಪ್ರಥಮ ಸಂಪುಟ.

**ಸಮಂತಭದ್ರ, ಕವಿಪರಮೇಷ್ಠಿ, ಪೂಜ್ಯಪಾದ,** ಎಂಬ ಮೂವರು ಜೈನ ಕವಿಗಳನ್ನು, ಕನ್ನಡದಲ್ಲಿ ಗ್ರಂಥಗಳನ್ನು ಬರೆದಿರುವ ಪ್ರಬಲರಾದ ಜೈನಕವಿಗಳೆಲ್ಲಾ ತಮ್ಮತಮ್ಮ ಗ್ರಂಥಗಳ ಆದಿಭಾಗದಲ್ಲಿ ವಿಶೇಷವಾಗಿ ಸ್ತುತಿಸಿದ್ದಾರೆ:—

ಶ್ರೀಮತ್ಸಮಂತಭದ್ರ। ಸ್ವಾಮಿಗಳ ಜಗತ್ಪ್ರಸಿದ್ಧಕವಿಪರಮೇಷ್ಠಿ।
ಸ್ವಾಮಿಗಳ ಪೂಜ್ಯಪಾದ। ಸ್ವಾಮಿಗಳ ಪದಂಗಳೀಗ ಶಾಶ್ವತಪದಮಂ॥

**ಆದಿಪಂಪ.**

*** ಸಮಂತಭದ್ರ। ಖ್ಯಾತರ ಪದಪಾಂಸು ಕಿಡಿಸುಗಳ್ಪಪಾಂಸುಗಳಂ॥
ಕವಿಪರಮೇಷ್ಠಿಗಳ ಗುಣ। ಸ್ತವನಂಗಳ್ ಪೂಜ್ಯಪಾದಯತಿಪತಿಯ ಗುಣ।
ಸ್ತವನಂಗಳೊರ್ಮೆ ನಾಲಗೆ। ಗೆ ವಂದ ಮಾನವನ ವಾಙ್ಮಲಂ ನಿಂದಪುದೇ॥

**ಅಭಿನವಪಂಪ.**

ಸಮನಿಕೆ ಮನ್ಮಾನಸದೊಳ್। ಸಮಂತಭದ್ರಾಂಘ್ರಿನಖಿರಕಾಂತಿಜಳಂ ಮ।
ತ್ತಮಳಿನಕವಿಪರಮೇಷ್ಠಿ। ಕ್ರಮಕಮಳಂ ಪೂಜ್ಯಪಾದಪದನಖಿಕುಮುದಂ॥

**ಅಗ್ಗಳ.**

ಹೀಗೆಯೇ **ಹೊನ್ನ, ನಯಸೇನ** ಮೊದಲಾದವರೂ ಹೊಗಳಿದ್ದಾರೆ.

ಈ ಮೂವರು ಕವಿಗಳು ಕನ್ನಡದಲ್ಲಿ ಗ್ರಂಥಗಳನ್ನು ಬರೆದಿರುವರೋ ಇಲ್ಲವೋ ತಿಳಿಯದು. ಆದರೂ ಇವರನ್ನು ಅನೇಕ ಕರ್ಣಾಟಕಕವಿಗಳು ಸ್ತುತಿಸುವುದರಿಂದ ಇವರ ವಿಷಯವನ್ನು ಸ್ವಲ್ಪಮಟ್ಟಿಗೆ ತಿಳಿದುಕೊಳ್ಳುವುದು ಆವಶ್ಯಕವು.

### ಸಮಂತಭದ್ರ. ಸು. 400.

ಈತನನ್ನು ಜಿನಸೇನನು (783) ತನ್ನ ಸಂಸ್ಕೃತದ ಆದಿಪುರಾಣದಲ್ಲಿಯೂ[1] **ಚಾವುಂಡರಾಯನು** (978) ತನ್ನ **"ಚಾವುಂಡರಾಯ"** ಪುರಾಣದಲ್ಲಿಯು:—

1. ನಮಸ್ಸಮಂತಭದ್ರಾಯ ಮಹತೇ ಕವಿವೇಧಸೇ।
ಯದ್ವಚೋವಜ್ರಪಾತೇನ ನಿರ್ಭಿನ್ನಾಃ ಕುಮತಾದ್ರಯಃ॥

ಅಭಿಮತಮಾಗಿರೆ ತತ್ತ್ವಾ । ರ್ಥಭಾಷ್ಯಮಂ ತರ್ಕಶಾಸ್ತ್ರಮಂ ಬರೆದು ವಚೋ ।
ವಿಭವದಿನಿಳೆಗೆಸೆದ ಸಮಂ । ತಬದ್ರದೇವರ ಸಮಾನರೆಂಬರುಮೊಳರೇ ॥

ಎಂಬ ಪದ್ಯದಲ್ಲಿಯೂ ಸ್ತುತಿಸಿದ್ದಾರೆ.

ಇದಲ್ಲದೆ, ಶ್ರವಣಬೆಳ್ಗೊಳದ 67 ನೆಯ[1] ಶಾಸನದಲ್ಲಿ (1129) ಈತನ ವಿಷಯವಾಗಿ ಈ ಸಂಗತಿಗಳು ತಿಳಿಯಬರುತ್ತವೆ :—ಈತನು ಭಸ್ಮಕರೋಗವನ್ನು ನಾಶಮಾಡಿಕೊಂಡು ಪದ್ಮಾವತೀದೇವಿಯಿಂದ ಉದಾತ್ತವಾದ ಪದವನ್ನು ಹೊಂದಿ ಮಂತ್ರಶಕ್ತಿಯಿಂದ ಚಂದ್ರಪ್ರಭಜಿನನನ್ನ ಆಹ್ವಾನಮಾಡಿ ಕಲಿಯುಗದಲ್ಲಿ ಜಿನ ಧರ್ಮಕ್ಕೆ ಸಾಮ್ರಾಜ್ಯವನ್ನು ಉಂಟುಮಾಡಿದನು. ವಾದಕ್ಕೋಸ್ಕರ ಪಾಟಲೀಪುತ್ರ ನಗರ, ಮಾಳವದೇಶ, ಸಿಂಧುದೇಶ, ಠಕ್ಕದೇಶ, ಕಾಂಚೀಪುರ, ವಿದಿಶೆ. ಕರಹಾಟಕ ದೇಶ, ಇವುಗಳಲ್ಲಿ ಸಂಚಾರ ಮಾಡಿದನು. ಇವನು ವಾದಕ್ಕೆ ನಿಂತರೆ ಈಶ್ವರನಿಗೂ ನಾಲಗೆ ಒಳಕ್ಕೆ ಎಳೆದುಕೊಳ್ಳುವುದು.[2]

ಇವನ ವಿಷಯವಾಗಿ **ದೇವಚಂದ್ರನು**[3] ತನ್ನ ರಾಜಾವಳೀಕಥೆಯಲ್ಲಿ (1838) ಹೀಗೆ ಬರೆದಿದ್ದಾನೆ.—

ಕಾಂಚೀಪುರಿಯೊಳು ಶಿವಕೋಟಿಮಹಾರಾಜನೆಂಬಾತನನುಜಂ ಶಿವಾಯನಂ ಬೆರಸು ರಾಜ್ಯಂಗೆಯ್ಯುತ್ತೆ ಕೋಟಿಲಿಂಗಸ್ಥಾಪನೆಗೆಯ್ದು ಅವಜೊಳು ಭೀಮಲಿಂಗದ ಗುಡಿಯೊಳು ದಿನವೊಂದಕ್ಕೆ ದ್ವಾದಶಖಂಡುಗತಂಡುಲದ ಅನ್ನವಂ ವಿನಿಯೋಗಮಾಡಿಸುತ್ತಿರ್ಪಿನಮಿತ್ತ ಭೀಮರಥೀ ಕೃಷ್ಣವೇಣೀ ತೊಜೆಗಳ ಮಧ್ಯವಿಷಯದಲ್ಲಿರುವ ಉತ್ಕಲಿಕಾಗ್ರಾಮದೊಳುದ್ಭವಿಸಿದ ಸಮಂತಭದ್ರಾಚಾರ್ಯರೆಂಬ ಯತಿಪತಿಗಳು ಮಣುವಕಹಳ್ಳಿಯೊಳಿನಶನಾವಿತಪದಿಂ

---

1. ಈ ಸಂಖ್ಯೆಗಳು ಶ್ರವಣಬೆಳ್ಗೊಳದ ಶಾಸನಗಳ ಹೊಸಮುದ್ರಣಕ್ಕೆ ಅನ್ವಯಿಸುತ್ತವೆ.
2. ವಂದ್ಯೋ ಭಸ್ಮಕಭಸ್ಮಸಾತ್ಕೃತಿಪಟುಃ ಪದ್ಮಾವತೀದೇವತಾ ।
ದತ್ತೋದಾತ್ತಪದಃ ಸಮಂತ್ರವಚನವ್ಯಾಹೂತಚಂದ್ರಪ್ರಭಃ ॥
ಆಚಾರ್ಯಸ್ಸ ಸಮಂತಭದ್ರಗಣಭೃದ್ಯೇನೇಹಕಾಲೇ ಕಲೌ ।
ಜೈನಂ ವರ್ತ್ಮ ಸಮಂತಭದ್ರಮಭವದ್ಭದ್ರಂ ಸಮಂತಾನ್ಮುಹುಃ ॥
ಯಸ್ಯೈವಂ ವಿಧಾ ವಾದಾರಂಭ ಸಂರಂಭ ವಿಜೃಂಭಿತಾಭವ್ಯಕ್ರಯಸ್ಸೂಕ್ತಯಃ ॥
ಪೂರ್ವಂ ಪಾಟಲಿಪುತ್ರಮಧ್ವನಗರೇ ಭೇರೀ ಮಯಾ ತಾಡಿತಾ ।
ಪಶ್ಚಾನ್ಮಾಳವಸಿಂಧುಠಕ್ಕವಿಷಯೇ ಕಾಂಚೀಪುರೇ ವೈದಿಶೇ ॥
ಪ್ರಾಪ್ತೋಹಂ ಕರಹಾಟಕಂ ಬಹುಭಟಂ ವಿದ್ಯೋತ್ಕಟಂ ಸಂಕಟಂ ।
ವಾದಾರ್ಥೀ ವಿಚರಾಮ್ಯಹಂ ನರಪತೇ ಶಾರ್ದೂಲವಿಕ್ರೀಡಿತಂ ॥
ಆವಟುತಟಮಟತಿ ಝಟಿತಿ ಸ್ಫುಟಪಟುವಾಚಾಟಧೂರ್ಜಟೇರಪಿ ಜಿಹ್ವಾ ।
ವಾದಿನಿ ಸಮಂತಭದ್ರೇ ಸ್ಥಿತವತಿ ತವ ಸದಸಿ ಭೂಪ ಕಾಸ್ತಾನ್ಯೇಷಾಂ ॥
3. ಈತನು 1838 ರಲ್ಲಿ ರಾಜಾವಳೀಕಥೆಯೆಂಬ ಒಂದು ದೊಡ್ಡ ಗದ್ಯಗ್ರಂಥವನ್ನು ಬರೆದಿದ್ದಾನೆ ಅದರಲ್ಲಿ ಜೈನವ ತಕ್ಕೆ ಸಂಬಂಧಿಸಿದ ಹಲವು ಇತಿಹಾಸಗಳೂ, ಅನೇಕರಾಜರ ಚರಿತ್ರೆಗಳೂ, ಕೆಲವು ಕವಿಗಳ ವಿಷಯಗಳೂ ದೊರೆಯುತ್ತವೆ.

ಕ್ರಿಯಾಯುಕ್ತರಾಗಿರಲೊಂದು ಕಾರಣಮಾಗೆ ಭಸ್ಮಕವ್ಯಾಧಿ ಪುಟ್ಟಿಯದಕ್ಕೆ ಪ್ರತೀಕಾರವಿಲ್ಲ ದುದಱಂ ಸ್ವಗುರುವ ಸಮಾಪನಮನೆಸ್ಪು—

ಉಪಸರ್ಗೇ ದುರ್ಭಿಕ್ಷೇ ಜರಸಿ ರುಜಾಯಾಂ ಚ ನಿಸ್ಪ್ರತೀಕಾರೇ।
ಧರ್ಮಾಯ ತನುವಿಮೋಚನಮಾಹುಸ್ಸಲ್ಲೇಖನಾಮಾರ್ಯಾಃ॥

ಎಂದು ಸಲ್ಲೇಖನವಂ ಬೇಡುತ್ತಮುಂ ಗುರುಗಳೆಂದರ್—ನಿಮ್ಮಂದಂ ಮುಂದೆ ಧರ್ಮೋದ್ಧರಣಮಪ್ಪುದಱಂದೆ ನಿಮ್ಮಯುಸಿರ್ ತೃಪ್ತಿಯಿಪ್ಪಂತು ಭುಂಜಿಸಿ ರೋಗೋಪಶಮನಮಾಗೆ ಪುನರ್ದೀಕ್ಷೆಗೊಸ್ಕರಮೆಂಬುದುಂ ಕಾರಂಜೀಪ್ರಾಮದೊಳ್ ಶಿವಕೋಟಿಮಹಾರಾಜನಂ ಕಂಡಲ್ಲಿಂದಾರ್ಪಂಗಮಾಗುವಲ್ ಅವರ್ ರೂಪಿಂದ ಭಸ್ಮಕವ್ಯಾಧಿಯುಂ ನಾಗಶ್ರಿಯಮುಂ ನೋಡಿ ಆಶ್ಚರ್ಯಮಾಗಿ ಶಿವನೆಂದೇ ಎಗೆದು ನಮಸ್ಕರಿಸಿ, ಎಂಥ ಮಾಟ್ಟ ಧರ್ಮಮೆಂದುಂ, ತನ್ನ ಶಿವಭಕ್ತಿ ನಿಸ್ಪೃಹತ್ವಮುಂ ಕೊಟ್ಟಬೆಂಗಾರಾಧನೆಯುಂ ಭೀಮಲಿಂಗಕ್ಕೆ ಬಿಟ್ಟಿಹ ಪಡಿತರಮುಂ ಪೇೞ್, ನಿಸ್ಸ ಧರ್ಮನಿರ್ವಹಣಮುಂ ನಿರಾಕರಣಂ ಮಾಱ್ಪಿನೆಂದು ಪನ್ನಿರಡು ದಿವಂಗಳವನ್ನಕ್ಕಂ ತನ್ನ ಪ್ರಾಣನಿರೋಧನಕ್ಕೆ ಕವಾಟಬಂಧಮಂ ಮಾಡಿ ಪೋಗ ವೇೞ್ದು ತಾನುಮಾಭಕ್ತಿಯೆಲ್ಲಮನೊಂದೆಗುಟ್ಟುಟ್ಟಿಯದಂತೆ ತನ್ನುದರಾಗ್ನಿಗಾಹುತಿಗೊಟ್ಟು ತಣಿಪಿ ಕದಹಂ ತೆಱೆಯಲತ್ಯರ್ಚ್ಚರ್ಯಂಬಟ್ಟು ಮಱುದಿವಸಂ ರಾತ್ರಿಯೊಳರ್ಧಾಂಶದೊಳೊಂದಂಶಮುಟ್ಟಂದೊಡೆ ಇದೇಕುಟ್ಟದುದೆಂದು ಬೆಸಗೊಳೆ, ದೇವರ್ ಪ್ರಸಾದಶೇಷಾನ್ನಮನಿರಿಸಿದರೆನೆ, ಬೆಳಗಿಸೊಳು ನಾಲ್ಕಜಾಳೊಳೊಂದಂಶಮುಟ್ಟಯೆ ಪರೀಕ್ಷಿಸಲಾರಯ್ದು ನೋಡಿ ತಿಳಿದು ಐದನೆಯ ದಿವಸಂ ಚತುರಂಗಬಲಂ ಬೆಸಸರಸಂ ಮೂವಳಸು ಸುತ್ತಿ ಬಾಗಿಲಂ ತೆಱೆವುದೆಂದು ಕಲಕಲರವಂ ಪೊಣ್ಮೆ ತದುಪಸರ್ಗಂ ಪಿಂಗುವನ್ನಮಾಹಾರಶರೀರನಿವೃತ್ತಿಗೆಯ್ದು ವಸ್ತುಸ್ತವಾದಿ ತ್ರಿವಿಧ ಸ್ತೋತ್ರಮನೇಕಚಿತ್ತದಿಂ ವೃಷಭಾದಿ ಇಪ್ಪತ್ತುನಾಲ್ವರ್ಗಂ ನಾನಾಜಾತಿವೃತ್ತಪದ್ಯಂಗಳಿಂ ಪೇೞಲುತೊಡಗಿಯಷ್ಟಮತೀರ್ಥಕರ ಚಂದ್ರಪ್ರಭಸ್ವಾಮಿಗ್ಗೆದುಸ್ತುತಿಯಂ ಪೇೞ್ದು ಭೀಮಲಿಂಗಮನೀಕ್ಷಿಸುವುದುಂ, ಜಿನಶಾಸನದೇವಿಯಿಂದ ಲಿಂಗದೊಳೆ ಮೂಜುಪುರುಷಪ್ರಮಾಣದ ಸುವರ್ಣಮಯ ಚಂದ್ರಲಾಂಛನಮಪ್ಪರ್ಹದ್ಭಟ್ಟಾರಕಪ್ರತಿಮೆ ಯಕ್ಷಯಕ್ಷೀಪ್ರತಿಮೆಯಿಂದಷ್ಟಮಹಾಪ್ರಾತಿಹಾರ್ಯದೊಡನೆ ಜಾಜ್ವಲ್ಯಮಾನಮಾಗೆ ಸೂರ್ಯೋದಯಮಾದಂತೆಯುದ್ಭವಿಸಿತೋಜುವುದುಂ, ಮುನೀಶ್ವರಂ ಬಾಗಿಲಂ ತೆಱೆದುಜ್ಜ್ವಲವೀತರಾಗರ ನುತಿಗೆಯ್ಯುತ್ತ ನಿಂದಿರ್ಪುದುಂ, ಆ ಮಾಹಾತ್ಮ್ಯಕ್ಕೆ ಅತ್ಯಾಶ್ಚರ್ಯಮಾಗೆ ಶಿವಕೋಟಿಮಹಾರಾಜಂ ಭಸ್ಮನಪ್ಪುದಱಂ ನಿಜಾನುಜಂ ಬೆಸಸಾಮುನಿಮುಖ್ಯರ ಶ್ರೀಪಾದಕ್ಕಂ ಪೊಡೆವಟ್ಟಿರ್ಪುದುಂ, ಮಹಾವೀರವರ್ಧಮಾನಪರ್ಯಂತಂ ನುತಿಗೆಯ್ದು ಕೈಯೆತ್ತಿಕೊಂಡು ಪರಸೆ ಆ ಸದ್ಧರ್ಮ ಸ್ವರೂಪಮಂ ಸವಿಸ್ತರಂ ಕೇಳ್ದು ಸಂಸಾರ ಶರೀರಭೋಗನಿರ್ವೇಗದಿಂ ಶ್ರೀಕಂರನೆಂಬ ಸುತಂಗೆ ರಾಜ್ಯಮನಿತ್ತು ಶಿವಾಯನಂಗೂಡಿ ಆ ಮುನಿವರರಲ್ಲಿಯೇ ಜಿನದೀಕ್ಷೆಯನಾಂತು ಶಿವಕೋಟ್ಯಾಚಾರ್ಯರಾಗಿ ರತ್ನಮಾಲಾದ್ಯನೇಕ ಶಾಸ್ತ್ರಸ್ವರ್ತಕರಾದರ್. ಆ ಭಾವಿತೀರ್ಥಕರರಪ್ಪ ಸಮಂತಭದ್ರಸ್ವಾಮಿಗಳು ಪುನರ್ದೀಕ್ಷೆ

ಗೊಂಡು ತಪಸ್ಸಾಮರ್ಥ್ಯದಿಂ ಚತುರಂಗುಲಚಾರಣತ್ವಮಂ ಪಡೆದು ರತ್ನಕರಂಡಕಾದಿಜಿನಾಗಮಪುರಾಣಮಂ ಪೇಟಿ ಸ್ಯಾದ್ವಾದವಾದಿಗಳಾಗಿ ಸಮಾಧಿವಡೆದರು.

ಈತನನ್ನು ಜಿನಸೇನನು (783) ಸ್ತುತಿಸಿರುವುದರಿಂದ ಇವನು ಅವನಿಗಿಂತ ಹಿಂದಣವನೆಂಬುದು ವ್ಯಕ್ತನಾಗಿದೆ. ಈತನು ಶಕ 60 ರಲ್ಲಿ—ಎಂದರೆ ಕ್ರಿಸ್ತ ಶಕ 138 ರಲ್ಲಿ—ಇದ್ದಂತೆ ಜೈನರಲ್ಲಿ ಪ್ರತೀತಿಯಿದೆ[1] ಆದರೆ ಕ್ರಿಸ್ತಶಕ 1 ನೆಯ ಶತಮಾನದಲ್ಲಿ ಇದ್ದನೆಂದು ಇವರು ಹೇಳುವ ಕುಂದಕುಂದಾಚಾರ್ಯನಿಂದ ಸಮಂತಭದ್ರನು 7. 8 ತಲೆ ಈಚೆಯವನಾದುದರಿಂದ ಇವನ ಕಾಲವು 138 ಕ್ಕಿಂತ ಈಚೆ ಇದ್ದಿರಬೇಕು. ಪೂಜ್ಯಪಾದನು (ಸು. 600) ತನ್ನ ಜೈನೇಂದ್ರ ವ್ಯಾಕರಣದಲ್ಲಿ ಈತನ ಹೆಸರನ್ನು ಹೇಳುವುದರಿಂದ ಇವನು ಅವನಿಗಿಂತ ಹಿಂದೆ ಇದ್ದವನು ಎಂಬುದಂತೂ ಸ್ಪಷ್ಟವಾಗಿಯೇ ಇದೆ: ಸುಮಾರು 400 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇನೆ.

ಈತನು **ಮಣುವಕಹಳ್ಳಿ**ಯಲ್ಲಿ ತಪಸ್ಸುಮಾಡಿದಂತೆ **ರಾಜಾವಳೀಕಥೆ**ಯಲ್ಲಿ ಹೇಳಿರುವುದರಿಂದ ಇವನು ಕರ್ನಾಟಕದೇಶದಲ್ಲಿ ಕೆಲವುಕಾಲ ವಾಸಮಾಡಿದ್ದರೂ ಇರಬಹುದು. ಇವನು ಕನ್ನಡದಲ್ಲಿ ಗ್ರಂಥಗಳನ್ನು ಬರೆದಿದ್ದಾನೆಯೋ ಇಲ್ಲವೋ ತಿಳಿಯದು. ಈತನ ಸಂಸ್ಕೃತಪ್ರಾಕೃತಗ್ರಂಥಗಳಿಗೆ ಹಳಗನ್ನಡದ ವ್ಯಾಖ್ಯಾನಗಳು ದೊರೆತಿವೆ.

---

## ಕವಿಪರಮೇಷ್ಠಿ. ಸು. 550.

ಇವನನ್ನು **ಆದಿಪಂಪನೂ** (941) **ನಯಸೇನನೂ** (1112) "ಜಗತ್ಪ್ರಸಿದ್ಧ" ಎಂದು ಹೊಗಳಿದ್ದಾರೆ. **ಪಾರ್ಶ್ವಪಂಡಿತನು** (1205)—

ನಿಷ್ಠಾಪರತ್ವದಿಂ ಪರ। ಮೇಷ್ಠಿಸ್ತವನಮನನೂನಮಂ ಮಾಡಿ ಗುಣ।
ಜ್ಯೇಷ್ಠನೆನಿಸಿರ್ಪ ಕವಿಪರ। ಮೇಷ್ಠಿಗುಣಸ್ತವನಮೆಮಗೆ ದಲ್ ಕರಣೀಯಂ॥

ಎಂದೂ, ಎರಡನೆಯ **ಗುಣವರ್ಮನು** (ಸು. 1235) ತನ್ನ **ಪುಷ್ಪದಂತ ಪುರಾಣದಲ್ಲಿ**—

ನಿರುಪಮಸರಸ್ವತೀಸುಂ। ದರಚತುರಾನನನಶೇಷವಿಬುಧಸ್ತುತ್ಯಂ।
ಪರಮಬ್ರಹ್ಮನೆನಲ್ ಕವಿ। ಪರಮೇಷ್ಠಿ ಪುರಾಣಪುರುಷನೆಂಬುದು ಪುಸಿಯೇ॥

ಎಂದೂ, ಸ್ತುತಿಸಿದ್ದಾರೆ. **ಚಾವುಂಡರಾಯನು** (978)—

1. ಡಾಕ್ಟರ್ ಭಂಡಾರ್ಕರರವರ "ಸಂಸ್ಕೃತಶೋಧಸಂಗ್ರಹ" ದ ರಿಪೋರ್ಟು 1883–1884, ಪುಟ 320.

ಚರಿತಪುರಾಣದೊಳೊಂದನೆ। ಬರೆದರ್ ಬರೆದಿಕ್ಕಿದರ್ ತ್ರಿಷಷ್ಟಿಶಲಾಕಾ।
ಪುರುಷರ ಪುರಾಣಮಂ ಕವಿ। ಪರಮೇಶ್ವರರಂತೆ ಜಸಕೆ ನೋಂತರುಮೊಳರೇ॥

ಎಂಬ ಪದ್ಯದಲ್ಲಿಯೂ, **ನೇಮಿಚಂದ್ರನು** (ಸು. 1170) **ನೇಮಿನಾಥಪುರಾಣ** ದಲ್ಲಿಯ—

ಜನರ ಪುರಾಣಂಗಳೊಳೊಂ। ದನೆ ಬರೆದೊಡೆ ಬರೆದೆವೆಂಬರೀಭುವನಂ ಜೀ।
ಯೆನೆ ಬರೆದಿರಿಸಿದರಿರ್ಪ। ತ್ತನಾಲ್ಕುಮಂ ಪೊಗಟಿ ಸುಕವಿಪರಮೇಶ್ವರಂ॥

ಎಂಬ ಪದ್ಯದಲ್ಲಿಯೂ, "ಕವಿಪರಮೇಶ್ವರ" ಎಂಬ ಕವಿಯನ್ನು ಸ್ತುತಿಸಿದ್ದಾರೆ. ಆದರೆ **ನೇಮಿಚಂದ್ರನು** ಈ ಪದ್ಯದ ಹಿಂದಣ

ಸುಕವಿಪರಮೇಷ್ಠಿಗಳ ನಾ। ಟಕಮೆನಿಸಿದ ಭುವನವಂದ್ಯವರವಿದ್ಯಾತೀ।
ರ್ಥಕರತ್ಪಪುಣ್ಯಲಕ್ಷ್ಮಿಗ। ಸಕಲಶ್ರುತದೇವಿ ಯಕ್ಕೆ ಯಕ್ಕಂ ಬ್ರಹ್ಮಂ॥

ಎಂಬ ಪದ್ಯದಲ್ಲಿ ಕವಿಪರಮೇಷ್ಠಿ ಎಂಬ ಹೆಸರನ್ನು ಹೇಳಿರುವುದರಿಂದ ಇವನಿಗೆ "ಕವಿಪರಮೇಶ್ವರ" ಎಂಬ ಹೆಸರೂ ಉಂಟೆಂದು ಊಹಿಸಬಹುದಾಗಿದೆ. **ಆದಿ ಪಂಪನು** (941) ಈತನನ್ನು ಸ್ತುತಿಸುವುದರಿಂದ ಇವನು ಅವನ ಕಾಲಕ್ಕೆ ಹಿಂದಣವನೆಂಬುದಂತೂ ವ್ಯಕ್ತವಾಗಿಯೇ ಇದೆ. **ಚಾವುಂಡರಾಯನು** ಈ ಕವಿಯ ತ್ರಿಷಷ್ಟಿಶಲಾಕಾಪುರುಷಪುರಾಣದ ಆಧಾರದಿಂದ ಜಿನಸೇನನು (783) ಆದಿಪುರಾಣವನ್ನು ಬರೆದುದಾಗಿ ಹೇಳುವುದರಿಂದ ಇವನು ಜಿನಸೇನನಿಗೆ ಹಿಂದಣವನೆಂದು ತಿಳಿಯುತ್ತದೆ. ಈತನ ಹೆಸರು ಜೈನಗ್ರಂಥಗಳಲ್ಲಿ ಪ್ರಾಯಶಃ ಸಮಂತಭದ್ರನ ಹೆಸರಿಗೆ ಮುಂದೆಯೂ ಪೂಜ್ಯಪಾದನ (ಸು. 600) ಹೆಸರಿಗೆ ಹಿಂದೆಯೂ ಇರುವುದರಿಂದ ಇವನು ಸಮಂತಭದ್ರನ ಕಾಲಕ್ಕೆ ಈಚೆಯೂ ಪೂಜ್ಯಪಾದನ ಕಾಲಕ್ಕೆ ಆಚೆಯೂ ಇದ್ದವನೆಂದು ತೋರುತ್ತದೆ. ಸುಮಾರು 550 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ.

---

## ಪೂಜ್ಯಪಾದ. ಸು. 600.

**ಈತನನ್ನು ಚಾವುಂಡರಾಯನು** (978)—

ಸುಕವಿಸ್ತುತರ್ ವ್ಯಾಕರ। ಣಕರ್ತೃಗಳ್ ಗಗನಗಮನಸಾಮರ್ಥ್ಯರ್ ತಾ।
ರ್ಕಿಕತಿಳಕರೆಂದು ಪೊಗಟ್ಪುದು। ಸಕಲಜನಂ ಪೂಜ್ಯಪಾದಭಟ್ಟಾರಕರಂ॥

ಎಂಬ ಪದ್ಯದಲ್ಲಿಯೂ, **ವೃತ್ತವಿಲಾಸನು** (ಸು. 1160)—

ಭರದಿಂ ಜೈನೇಂದ್ರಮಂ ಭಾಸುರಮೆನಲೊರೆದಂ ಪಾಣಿನೀಯಕ್ಕೆ ಟೀಕಂ।
ಬರೆದಂ ತತ್ತ್ವಾರ್ಥಮಂ ಟಿಪ್ಪಣದಿನಜಸಿದಂ ಯಂತ್ರಮಂತ್ರಾದಿಶಾಸ್ತ್ರಂ॥

ತ್ಕರಮಂ ಭೂರಕ್ಷಣಾರ್ಥಂ ವಿರಚಿಸಿ ಜಸಮಂ ತಾಳ್ದಿದಂ ವಿಶ್ವವಿದ್ಯಾ ।
ಭರಣಂ ದೇವಾಂಗನಾರಾಧಿತಪದಕಮಳಂ ಪೂಜ್ಯಪಾದವ್ರತೀಂದ್ರಂ ॥

ಎಂಬ ಪದ್ಯದಲ್ಲಿಯೂ, **ನೇಮಿಚಂದ್ರನು** (ಸು. 1170)—

**ಪೂಜ್ಯಪಾದ । ಸ್ವಾಮಿಯು ವಾಗ್ದೇವಿಲಾಸವಿಮಾಗಭಿಮತಮಂ ॥

ಎಂಬ ಪದ್ಯಭಾಗದಲ್ಲಿಯೂ, **ಪಾರ್ಶ್ವಪಂಡಿತನು** (1205)—

ಸಕಳೋರ್ವೀನುತಪೂಜ್ಯಪಾದಮುನಿಪಂ ತಂ ಪೇಟ್ಸ ಕಲ್ಯಾಣಕಾ ।
ರಕದಿಂ ದೇಹದ ದೋಷಮಂ ವಿತತವಾಚಾದೋಷಮಂ ಶಬ್ದಸಾ ॥
ಥಕಜ್ಞೆನೇಂದ್ರದಿನೀಜಗಜ್ಜನದ ಮಿಥ್ಯಾದೋಷಮಂ ತತ್ತ್ವಜ್ಞೋ ।
ಥಕತತ್ತ್ವಾರ್ಥದ ವೃತ್ತಿಯಿಂದೆ ಕಳೆದಂ ಕಾರುಣ್ಯದುಗ್ಧಾರ್ಣವಂ ॥

ಎಂಬ ಪದ್ಯದಲ್ಲಿಯೂ, ಸ್ತುತಿಸಿದ್ದಾರೆ.

ಈ ಪದ್ಯಗಳಲ್ಲಿ ತಿಳಿಯಬರುವ ಸಂಗತಿಗಳಲ್ಲದೆ, ಶ್ರವಣಬೆಳ್ಗೊಳದ ಶಾಸನಗಳಿಂದ[1] ಈತನ ವಿಷಯವಾಗಿ ಈ ಸಂಗತಿಗಳೂ ತಿಳಿಯಬರುತ್ತವೆ :—ಈತನಿಗೆ ಮೊದಲು **ದೇವನಂದಿ** ಎಂಬ ಹೆಸರು ಇದ್ದಿತು. ತರುವಾಯ ಬುದ್ಧಿಮಾಹಾತ್ಮ್ಯದಿಂದ **ಜಿನೇಂದ್ರಬುದ್ಧಿ** ಎಂಬ ನಾಮಧೇಯವು ಉಂಟಾಯಿತು. ಬಳಿಕ ವನದೇವತೆಗಳಿಂದ ಇವನ ಪಾದಗಳು ಪೂಜಿಸಲ್ಪಟ್ಟುದರಿಂದ **ಪೂಜ್ಯಪಾದ** ಎಂಬ ಹೆಸರು ಬಂದಿತು. ಈತನು ವೈದ್ಯಶಾಸ್ತ್ರದಲ್ಲಿ ಪ್ರವೀಣನಾಗಿದ್ದನು. ಈತನ ಪಾದತೀರ್ಥಸ್ಪರ್ಶದಿಂದ ಕಬ್ಬಿಣವು ಚಿನ್ನವಾಯಿತು. ಈತನು ಪೂರ್ವವಿದೇಹಕ್ಕೆ ಹೋಗಿ ಜಿನದರ್ಶನಮಾಡಿದನು.

ಇದೂ ಅಲ್ಲದೆ **ರಾಜಾವಳೀಕಥೆ**ಯಲ್ಲಿ ಈತನ ವಿಷಯವಾಗಿ ಬರೆದಿರುವ ಅಂಶಗಳನ್ನು ಸಂಗ್ರಹಿಸಿ ಬರೆಯುತ್ತೇವೆ :—

ಶಕವರ್ಷ 300 ಸಂದಂದು ಕರ್ಣಾಟಕದೊಳು ಕೊಳ್ಳಾಗಾಲಮೆಂಬ ಪುರದೊಳು ಮಾಧವಭಟ್ಟನೆಂಬ ಬ್ರಾಹ್ಮಣನ ಹೆಂಡತಿ ಶ್ರೀದೇವಿಯೆಂಬವಳ್ಗೆ ಗರ್ಭಂ ಬಳೆದು ನವಮಾಸಂ ನೆಱೆಯೆ ಶ್ರವಣನಕ್ಷತ್ರದೊಳ್ ಪುತ್ರೋತ್ಪತ್ತಿಯಪ್ಪುದುಂ ಜಾತನಾಮಕರ್ಮಾದಿಗಳಂ ಮಾಡಿ ಪೂಜ್ಯಪಾದನೆಂದು ಪೆಸರಿಟ್ಟು ಸಲಹಿದೊಡೆ, ಜೈನಶಾಸ್ತ್ರಂಗಳೊಳ್ ಬಲ್ಲಿದನಾಗಿ ಬಾಲಕಾಲದೊಳೆ ಜಿನದೀಕ್ಷೆಯಂ ತಾಳೆ ದಕ್ಷಿಣದಿಗ್ಭಾಗದ ಶಿಲೋಚ್ಚಯದೊಳ್ ತಪಂ

1. ಶಾ. 64. ಯೋ ದೇವನಂದಿಪ್ರಥಮಾಭಿಧಾನೋ । ಬುದ್ಧ್ಯಾ ಮಹತ್ಯಾ ಸ ಜಿನೇಂದ್ರಬುದ್ಧಿಃ ।
ಶ್ರೀಪೂಜ್ಯಪಾದೋಜನಿ ದೇವತಾಭಿ । ರ್ಯತ್ಪೂಜಿತಂ ಪಾದಯುಗಂ ಯದೀಯಂ ॥

ಶಾ. 254. ಶ್ರೀಪೂಜ್ಯಪಾದ ಇತಿ ಚೈಷ ಬುಧೈಃ ಪ್ರಚಖ್ಯೇ । ಯತ್ಪೂಜಿತಃ ಪದಯುಗೇ ವನದೇವತಾಭಿಃ ॥

ಶಾ. 258. ಶ್ರೀಪೂಜ್ಯಪಾದಮುನಿರಪ್ರತಿವೌಷಧರ್ದ್ಧಿಃ । ಜೀಯಾದ್ವಿದೇಹಜಿನದರ್ಶನಪೂತಗಾತ್ರಃ ।
ಯತ್ಪಾದಧೌತಜಲಸಂಸ್ಪರುಶಪ್ರಭಾವಾತ್ । ಕಾಲಾಯಸಂ ಕಿಲ ತದಾ ಕನಕೀಚಕಾರ ॥

ಗೆಯ್ಯುತ್ತಿರ್ದಂ. ಮುಡಿಗುಂಡವೆಂಬ ಗ್ರಾಮದಲ್ಲಿದ್ದ ತನ್ನ ಸೋದರದ ಮಾವನಾದ ಪಾಣಿನ್ಯಾಚಾರ್ಯನಿಗೆ ವ್ಯಾಕರಣಮಂ ಪೂರ್ತಿಮಾಡುವುದಜ್ಞಾಳಿಗೆ ಅವಸಾನಕಾಲಂ ಬರೆ ಆತನು ಪೂರ್ತಿಮಾಡೆಂದು ಕೇಳಿಕೊಳಲು ಪೂಜ್ಯಪಾದಂ ಪೂರ್ತಿಮಾಡಿದಂ. ಜೈನೇಂದ್ರವ್ಯಾಕರಣ ಸೂತ್ರಮುಂ ರಚಿಸಿದಂ. ಬಜ್ಜಕಂ ಪಾಣಿನಿಸೂತ್ರವೃತ್ತಿಯುಂ ರಚಿಸಿದಂ.

ಈ ಕಥೆಯ ಪ್ರಕಾರ ಪೂಜ್ಯಪಾದನು ಕರ್ಣಾಟಕದೇಶದಲ್ಲಿ ಶಕ 300 ರಲ್ಲಿ ಹುಟ್ಟಿದನೆಂದು ತಿಳಿಯಬರುತ್ತದೆ. ಇದು ಎಷ್ಟರಮಟ್ಟಿಗೆ ನಿಜವೋ ಹೇಳಲಿಕ್ಕಾಗುವುದಿಲ್ಲ. ಅಲ್ಲದೆ ಇಲ್ಲಿ ಹೇಳಿರುವ ಪಾಣಿನಿಯ ವಿಷಯವು ಸುತರಾಂ ನಂಬುಗೆಗೆ ಅರ್ಹವಾದುದಲ್ಲ.

ಮತ್ತು ರಾಜಾವಳೀಕಥೆಯಲ್ಲಿ :—

ಪೂಜ್ಯಪಾದಯತೀಂದ್ರಂ ಪದಿನಾಡಿನೊಳು ತಪಂಗೆಯ್ಯುತ್ತ ತೀರ್ಥವಂದನೆಯಂ ಮಾಡಲೆಂದು ಆಂಧ್ರ ಕರ್ಣಾಟ ಚೋಳ ಪಾಂಡ್ಯ ಮೊದಲಾದ ಎಲ್ಲಾ ದೇಶಂಗಳಂ ವಿಹಾರಿಸಿ ಕಾಂಗೆಲೆಯಶ್ಶೆಲಕ್ಕಂ ಬಂದು ಜಿನಾಗಮಮಂ ಕೆಲವು ನೋಡಿ ತಿಳಿದುಪದೇಶಮಾಟ್ಟಿವರಿಲ್ಲದೆ ಕೆಲವು ಸಿದ್ಧಾಂತಂ ಮಜ್ಜಿಗರೆದಿರ್ದುದಜ್ಞಂ ಸಂದೇಹಗ್ರಸ್ತಮಾಗೆ ಪೂರ್ವವಿದೇಹಕ್ಕೆ ಪಾದಲೇಪೌಷಧಿಸಾಮರ್ಥ್ಯದಿಂ ಪೋಗಿ ಸಮವಸರಣದೊಳಿರ್ದ ಶ್ರೀಜಿನಪತಿಗಳಂ ವಂದಿಸಿ ತತ್ತ್ವಮಂ ನಿಸ್ಸಂದೇಹಮಾಗಜ್ಞದಲ್ಲಿಯೆ ಪುಸ್ತಕದೊಳ್ ಬರೆದುಕೊಂಡು ದೈವಾಯತ್ತದಿಂ ಭರತಕ್ಷೇತ್ರಮನೆಯ್ದುವಲ್ಲಿ ಸೂರ್ಯಕಿರಣೋಷ್ಣದಿಂ ದೃಷ್ಟಿ ಪೋಗೆ ಬಂಕಾಪುರವೆಂಬುದಜ್ಞೊಳ್ ಶಾಂತೀಶ್ವರಂ ವಂದಿಸಿ ಶಾಂತ್ಯಷ್ಟಕಮಂ ಪೇಟ್ಟು ದೃಷ್ಟಿಯಂ ಪಡೆದು ಬಂದು ಸಿದ್ಧಾಂತಮುಂ ಶಿಷ್ಯಪ್ರಶಿಷ್ಯರ್ಗಮುಪದೇಶಂಗೆಯ್ದು ಲೌಕಿಕಪರಮಾರ್ಥಂಗಳಂ ರಚಿಸಿ ಸದ್ಗತಿ ಪ್ರಾಪ್ತರಾದರ್—ಎಂದು ಹೇಳಿದೆ.

ಈತನ ಜೈನೇಂದ್ರವ್ಯಾಕರಣದ ಹೆಸರನ್ನು ಜಿನಸೇನನು ತನ್ನ ಹರಿವಂಶದ (783) ಆದಿಭಾಗದಲ್ಲಿ ಹೇಳಿದ್ದಾನೆ. ಈ ವ್ಯಾಕರಣದ ಸೂತ್ರಗಳನ್ನು ಅಕಳಂಕದೇವನು (ಸು. 750) ತನ್ನ ತತ್ತ್ವಾರ್ಥರಾಜವಾರ್ತಿಕದಲ್ಲಿಯೂ ಜಯಾದಿತ್ಯ ವಾಮನರು ಕಾಶಿಕಾವೃತ್ತಿಯಲ್ಲಿಯೂ (ಸು. 700) ಉದಾಹರಿಸಿದ್ದಾರೆ. ಈ ಕಾರಣಗಳಿಂದ ಪೂಜ್ಯಪಾದನು ಸುಮಾರು 600 ರಲ್ಲಿ ಇದ್ದಿರಬಹುದು. ಈತನು ಕನ್ನಡದಲ್ಲಿ ಗ್ರಂಥಗಳನ್ನು ಬರೆದಿದ್ದಾನೆಯೋ ಇಲ್ಲವೋ ತಿಳಿಯದು.

---

## ಶ್ರೀವರ್ಧದೇವ. ಸು. 650.

ಈತನು ಜೈನಕವಿ. ದೇವಚಂದ್ರನ ರಾಜಾವಳೀಕಥೆಯಲ್ಲಿ—

ಮತ್ತಂ ತುಂಬುಲೂರಲ್ಲಿ ಪುಟ್ಟಿದ ತುಂಬುಲೂರುನಾಮಾಚಾರ್ಯರ್ ಪ್ರಾಕೃತ ಸಂಸ್ಕೃತಕರ್ಣಾಟಾದಿಭಾಷೆಗಳಿಂ ಸಿದ್ಧಾಂತಪ್ರಬಂಧಕರ್ತೃಗಳ್ ಚೂಡಾಮಣಿವ್ಯಾಖ್ಯಾನ ಚತುರಶೀತಿಸಹಸ್ರಗ್ರಂಥರಚನೆಯಂ ಮಾಡಿದರ್

ಎಂದು ಒಂದು ಭಾಗದಲ್ಲಿಯೂ,

ತುಂಬುಲೂರುನಾಮಾಚಾರ್ಯರ್ ಎಂಬತ್ತುನಾಲ್ಕುಸಾಸಿರ ಗ್ರಂಥಕರ್ತೃಗಳಾಗಿ ಕರ್ನಾಟಕಭಾಷೆಯಂ ಚೂಡಾಮಣಿವ್ಯಾಖ್ಯಾನಮಂ ಮಾಡಿದರ್

ಎಂದು ಮತ್ತೊಂದು ಭಾಗದಲ್ಲಿಯೂ ಬರೆದಿದೆ.

**ಚಾವುಂಡರಾಯನು** (978) ತೆಂಬುಳೂರಾಚಾರ್ಯನೆಂಬ ಗುರುವನ್ನು ಸ್ತೋತ್ರಮಾಡಿದ್ದಾನೆ. **ಭಟ್ಟಾಕಳಂಕನು** (1604) ತನ್ನ ಶಬ್ದಾನುಶಾಸನದಲ್ಲಿ ಕರ್ನಾಟಕಭಾಷೆಯ ಪ್ರಾಶಸ್ತ್ಯವನ್ನು ಹೇಳುವಾಗ—ಈ ಕರ್ನಾಟಕಭಾಷೆ ಶಾಸ್ತ್ರಕ್ಕೆ ಅನುಪಯುಕ್ತವಾದುವಲ್ಲ; ಏಕೆಂದರೆ ಈ ಭಾಷೆಯಲ್ಲಿಯೇ ತೊಂಬತ್ತಾರುಸಾಸಿರ ಗ್ರಂಥಸಂಖ್ಯೆಯುಳ್ಳ ಚೂಡಾಮಣಿ ಎಂಬ ತತ್ತ್ವಾರ್ಥಮಹಾಶಾಸ್ತ್ರವ್ಯಾಖ್ಯಾನವು ದೊರೆಯುತ್ತದೆ[1]—ಎಂದು ಬರೆದಿದ್ದಾನೆ. ದೇವಚಂದ್ರನು 84,000 ಗ್ರಂಥವೆಂದು ಹೇಳುತ್ತಾನೆ; ಭಟ್ಟಾಕಳಂಕನು 96,000 ಗ್ರಂಥವೆಂದು ಹೇಳುತ್ತಾನೆ. ಗ್ರಂಥಪ್ರಮಾಣದಲ್ಲಿ ಅವನ ಹೇಳಿಕೆಗೂ ಇವನ ಹೇಳಿಕೆಗೂ 12,000 ದಷ್ಟು ಹೆಚ್ಚುಕಡಮೆ ಇದೆ. ಈ 12,000 ಗ್ರಂಥವು ಸಂಗ್ರಹರೂಪವಾಗಿಯೋ ಅವತರಣಿಕೆಯ ರೂಪವಾಗಿಯೋ ಇರಬೇಕೆಂದೂ ಗ್ರಂಥಕ್ಕೆ ಸೇರಿದುದಲ್ಲವೆಂದೂ ಜೈನರಲ್ಲಿ ಪ್ರತೀತಿ ಇರುವಂತೆ ತಿಳಿಯುತ್ತದೆ. ಅಲ್ಲದೆ ಇಂದ್ರನಂದಿ ತನ್ನ ಶ್ರುತಾವತಾರದಲ್ಲಿ ತುಂಬಲೂರಾಚಾರ್ಯನು 84,000 ಗ್ರಂಥಸಂಖ್ಯೆಯುಳ್ಳ ಚೂಡಾಮಣಿವ್ಯಾಖ್ಯಾನವನ್ನು ಕನ್ನಡದಲ್ಲಿ ಬರೆದನೆಂದೂ ಆರನೆಯ ಖಂಡಕ್ಕೆ 7,000 ಗ್ರಂಥಸಂಖ್ಯೆಯುಳ್ಳ ಪಂಚಿಕೆಯನ್ನು ಪುನಃ ಮಾಡಿದನೆಂದೂ ಹೇಳುತ್ತಾನೆ.[2] ಇವನ ಹೇಳಿಕೆಯ ಪ್ರಕಾರ ಗ್ರಂಥಸಂಖ್ಯೆ 91,000 ಆಗುತ್ತದೆ. ಐದುಸಾವಿರ ಗ್ರಂಥಸಂಖ್ಯೆಯುಳ್ಳ ಮತ್ತೊಂದು ಪಂಚಿಕೆಯಿದ್ದರೂ ಇರಬಹುದು. ಆದುದರಿಂದ ಈ ವ್ಯತ್ಯಾಸವನ್ನು ನಾವು ಗಣನೆಗೆ ತರಬೇಕಾದುದಿಲ್ಲ. ಇಂದ್ರನಂದಿ ದೇವಚಂದ್ರರು ಗ್ರಂಥಕರ್ತನ ಹೆಸರು ತುಂಬುಲೂರಾಚಾರ್ಯನೆಂದು ಕಂಠೋಕ್ತವಾಗಿ ಹೇಳಿದ್ದಾರೆ; ಭಟ್ಟಾಕಳಂಕನು ಹೆಸರು ಹೇಳಿಲ್ಲ.

---

1. ನಚೈಷಾ (ಕರ್ನಾಟಭಾಷಾ) ಶಾಸ್ತ್ರಾನುಪಯೋಗಿನೀ. ತತ್ತ್ವಾರ್ಥಮಹಾಶಾಸ್ತ್ರವ್ಯಾಖ್ಯಾನಸ್ಯ ಷಣ್ಣವತಿಸಹಸ್ರಪ್ರಮಿತಗ್ರಂಥಸಂದರ್ಭರೂಪಸ್ಯ ಚೂಡಾಮಣ್ಯಭಿಧಾನಸ್ಯ ಮಹಾಶಾಸ್ತ್ರಸ್ಯ * * * ಉಪಲಭ್ಯಮಾನತ್ವಾತ್

2. ಅಥ ತುಂಬಲೂರನಾಮಾಚಾರ್ಯೋಽಭೂತ್ತುಂಬಲೂರಸಜ್ಞಾನೇ।
ಷಷ್ಠೇನ ವಿನಾ ಖಂಡೇನ ಸೋ (ಽ) ಪ್ಯಾನ್ತ್ಯೋರುಭಯೋಃ॥
ಚತುರಧಿಕಾಶೀತಿಸಹಸ್ರ ಗ್ರಂಥ ರಚನಯಾ ಯುಕ್ತಾಂ। (ೞ)
ಕರ್ನಾಟಭಾಷಯಾಕೃತ ಮಹತೀಂ ಚೂಡಾಮಣಿಂ ವ್ಯಾಖ್ಯಾಂ॥
ಸಪ್ತಸಹಸ್ರಗ್ರಂಥಾಂ ಷಷ್ಠಸ್ಯ ಚ ಪಂಚಿಕಾಂ ಪುನರಕಾರ್ಷೀತ್॥

ಆದರೆ ಗ್ರಂಥದ ಹೆಸರು ಚೂಡಾಮಣಿ ಎಂದೂ ಗ್ರಂಥವು ಕನ್ನಡದಲ್ಲಿ ಬರೆದಿದೆ ಎಂದೂ ಮೂವರೂ ಒಪ್ಪಿಕೊಳ್ಳುತ್ತಾರೆ. ಇದೂಅಲ್ಲದೆ ಶ್ರವಣಬೆಳ್ಗೊಳದ 67 ನೆಯ ಶಾಸನದಿಂದ (1129) ಚೂಡಾಮಣಿಯೆಂಬ ಹೆಸರುಳ್ಳ ಕಾವ್ಯವನ್ನು ರಚಿಸಿದವನು ಕವಿಚೂಡಾಮಣಿಯಾದ ಶ್ರೀವರ್ಧದೇವನೆಂದೂ[1] ಈತನನ್ನು ದಂಡಿ ಹೊಗಳಿದ್ದಾನೆಂದೂ ತಿಳಿಯಬರುತ್ತದೆ. ಇದರಿಂದ ತುಂಬಲೂರಾಚಾರ್ಯ, ಶ್ರೀವರ್ಧದೇವ, ಎಂಬ ಎರಡು ಹೆಸರುಗಳೂ ಒಬ್ಬನಿಗೇ ಅನ್ವಯಿಸುತ್ತವೆ ಎಂಬುದು ವ್ಯಕ್ತವಾಗುತ್ತದೆ. ಇಂದ್ರನಂದಿ ದೇವಚಂದ್ರರೂ ಭಟ್ಟಾಕಳಂಕನೂ ಹೇಳಿರುವ ಚೂಡಾಮಣಿಯೆಂಬ ಹೆಸರೇ ಇಲ್ಲಿಯೂ ಹೇಳಿದೆ. ಆದರೆ ಇಲ್ಲಿ "ಚೂಡಾಮಣಿಕಾವ್ಯ" ವೆಂದು ಹೇಳಿದೆ. ಆದುದರಿಂದ ಶಾಸನಶ್ಲೋಕದಲ್ಲಿ ಹೇಳಿರುವ ಚೂಡಾಮಣಿಗ್ರಂಥವೂ ಇಂದ್ರನಂದಿ ಭಟ್ಟಾಕಳಂಕ ದೇವಚಂದ್ರರು ಹೇಳುವ ಚೂಡಾಮಣಿಗ್ರಂಥವೂ ಒಂದೇ ಆಗಿರಬಹುದೋ ಇಲ್ಲವೋ ಎಂಬ ಸಂಶಯವು ಸಾಧಾರಣವಾಗಿ ಹುಟ್ಟಬಹುದು. ಆದರೆ ಗ್ರಂಥವು ಕೇವಲ ವ್ಯಾಖ್ಯಾನವಲ್ಲದೆ ಸ್ವತಂತ್ರವಾಗಿದ್ದಲ್ಲಿ ಕಾವ್ಯಶಬ್ದವು ಅನುಚಿತವಲ್ಲ.

ಈ ಗ್ರಂಥಕರ್ತೃವಾದ ಶ್ರೀವರ್ಧದೇವನು ದಂಡಿಯಿಂದ ಸ್ತುತಿಸಲ್ಪಟ್ಟಿದ್ದಾನೆ ಎಂಬುದರಿಂದ ಈತನು ದಂಡಿಗೆ ಹಿಂದೆಯೋ ಅಥವಾ ಸಮಕಾಲದಲ್ಲಿಯೋ ಇದ್ದಿರಬೇಕು. ದಂಡಿಯ ಕಾವ್ಯಾದರ್ಶದಲ್ಲಿ ಉದಾಹೃತವಾದ ಹಲವು ಪದ್ಯಗಳನ್ನು **ನೃಪತುಂಗನು** (814—877) ತನ್ನ ಕವಿರಾಜಮಾರ್ಗದಲ್ಲಿ ಕನ್ನಡಕ್ಕೆ ಪರಿವರ್ತಿಸಿ ಬರೆದಿರುವುದರಿಂದ[2] ದಂಡಿ ನೃಪತುಂಗನಿಗಿಂತ ಬಹಳ ಹಿಂದೆ ಇದ್ದಿರಬೇಕು. ಈತನು 7 ನೆಯ ಶತಮಾನದ ಅಂತ್ಯಭಾಗದಲ್ಲಿದ್ದನೆಂಬುದಕ್ಕೆ ಆಧಾರಗಳಿವೆ.[3] **ಚಾವುಂಡರಾಯನು** (978) ತನ್ನ ಗ್ರಂಥದ ಕೊನೆಯಲ್ಲಿ ಹೇಳಿರುವ ಗುರುಪರಂಪರೆಯನ್ನು ನೋಡಿದರೆ ತೆಂಬುಳೂರಾಚಾರ್ಯನು ಅಥವಾ ಶ್ರೀವರ್ಧದೇವನು ಜಿನಸೇನನಿಗೆ (783) ಬಹಳ ಹಿಂದೆ ಇದ್ದಂತೆ ತಿಳಿಯುತ್ತದೆ. ಆದುದರಿಂದ ದಂಡಿಯಿಂದ ಸ್ತುತನಾದ ಶ್ರೀವರ್ಧದೇವನು ಸುಮಾರು 650 ರಲ್ಲಿ ಇದ್ದಿರಬಹುದು.

---

1. ಚೂಡಾಮಣಿಃ ಕವೀನಾಂ ಚೂಡಾಮಣಿನಾಮಸೇಯ್ಯಕಾವ್ಯಕೃತಿಃ।
ಶ್ರೀವರ್ಧದೇವ ಸಮಃ ಹಿ ಕೃತಪುಣ್ಯಃ ಕೀರ್ತಿಸಾಹಿತ್ಯಂ॥
ಯಃ ಸಮಸಮುಪಶ್ಲೋಕಿತೋ ದಂಡಿನಃ.—
ಜಹ್ನೋಃ ಕನ್ಯಾಂ ಜಟಾಗ್ರೇಣ ಬಭಾರ ಪರನೇಶ್ವರಃ।
ಶ್ರೀವರ್ಧದೇವ ಸಂಧತ್ತೇ ಜಿಹ್ವಾಗ್ರೇಣ ಸರಸ್ವತೀಂ॥

2. ಕವಿರಾಜಮಾರ್ಗದ ಉಪೋದ್ಘಾತ, ಪುಟ 18—20.

3. *Indian Antiquary*, XLI, 92.

ಈತನ ಗ್ರಂಥವು ಇನ್ನೂ ಎಲ್ಲಿಯೂ ದೊರೆತಿಲ್ಲ. ಭಟ್ಟಾಕಳಂಕನು (1604) "ಸಮುಪಲಭ್ಯಮಾನತ್ವಾತ್" ಎಂದು ಹೇಳುವುದರಿಂದ ಅವನ ಕಾಲದಲ್ಲಿ ಈ ಗ್ರಂಥವು ಇದ್ದಂತೆ ತೋರುತ್ತದೆ. 7 ನೆಯ ಶತಮಾನದಲ್ಲಿಯೇ ಇಂಥ ಅಸಾರವಾದ ಗ್ರಂಥವು ಹುಟ್ಟಿರುವುದರಿಂದ ಆ ಕಾಲಕ್ಕೆ ಹಿಂದೆಯೂ ಅನೇಕ ಕರ್ಣಾಟಕಗ್ರಂಥಗಳು ಇದ್ದಿರಬೇಕು ಎಂಬುದರಲ್ಲಿ ಸಂಶಯವಿಲ್ಲ. ಅವುಗಳಲ್ಲಿ ಒಂದೂ ದೊರೆಯದೆ ಇರುವುದು ಶೋಚನೀಯವಾದ ವಿಷಯವಾಗಿದೆ.

---

## ಶ್ಯಾಮಕುಂದಾಚಾರ್ಯ. ಸು. 650.

ಈತನು ಜೈನಕವಿ. ಇವನು ಪ್ರಾಭೃತವನ್ನು ಕನ್ನಡದಲ್ಲಿ ಬರೆದಿರುವುದಾಗಿ ಇಂದ್ರನಂದಿಯ ಶ್ರುತಾವತಾರದಲ್ಲಿಯ

ಕಾಲೇ ತತಃ ಕಿಯತ್ಯಪಿ ಗತೇ ಪುನಃ ಶ್ಯಾಮಕುಂದಸಂಜ್ಞೇನ।
ಪ್ರಾಕೃತಸಂಸ್ಕೃತಕರ್ಣಾಟಭಾಷಯಾ ಪದ್ಧತಿಃ ಪರಾ ರಚಿತಾ ॥

ಎಂಬ ಭಾಗದಿಂದ ತಿಳಿಯುತ್ತದೆ. **ಚಾವುಂಡರಾಯನು** (978) ತನ್ನ ಪುರಾಣದ ಅಂತ್ಯದಲ್ಲಿ ಕೊಟ್ಟಿರುವ ಗುರುಪರಂಪರೆಯಿಂದ ಈತನು ತುಂಬುಲೂರಾಚಾರ್ಯನ ಅಥವಾ ಶ್ರೀವರ್ಧದೇವನ ಕಾಲದಲ್ಲಿಯೋ ಅಥವಾ ಅವನ ಕಾಲಕ್ಕೆ ಸ್ವಲ್ಪ ಹಿಂದೆಯೋ ಇದ್ದಂತೆ ತಿಳಿಯುತ್ತದೆ. ಇವನ ಗ್ರಂಥವು ದೊರೆತಿಲ್ಲ.

---

## ನೃಪತುಂಗನು (814—877) ಹೇಳುವ ಪೂರ್ವದ ಕನ್ನಡ ಕವಿಗಳು.

ರಾಷ್ಟ್ರಕೂಟರಾಜರಲ್ಲಿ ಒಬ್ಬನಾದ **ನೃಪತುಂಗನು** (814–877) ಕನ್ನಡದಲ್ಲಿ ಕವಿರಾಜಮಾರ್ಗವೆಂಬ ಒಂದು ಅಲಂಕಾರಗ್ರಂಥವನ್ನು ಬರೆದಿದ್ದಾನೆ. ಈ ಗ್ರಂಥದಲ್ಲಿ ತನಗೆ ಹಿಂದೆ ಇದ್ದ ಕರ್ಣಾಟಕಗದ್ಯಪದ್ಯಗ್ರಂಥಕರ್ತರಾದ ಕೆಲವುಮಂದಿ ಕವಿಗಳ ಹೆಸರುಗಳನ್ನು—

ಮಿಗೆ ಕನ್ನಡಕಬ್ಬಂಗಳೊ। ಳಗಣಿತಗುಣಗದ್ಯಪದ್ಯಸಮ್ಮಿಶ್ರಿತಮುಂ।
ನಿಗದಿಸುವರ್ ಗದ್ಯಕಥಾ। ಪ್ರಗೀತಿಯುಂ ತಚ್ಚಿರಂತನಾಚಾರ್ಯರ್ಕಳ್ ॥

ಗದ್ಯಗ್ರಂಥಕರ್ತೃಗಳ್ :—

ವಿಮಲೋದಯನಾಗಾರ್ಜುನ। ಸಮೀತಜಯಬಂಧುದುರ್ವಿನೀತಾದಿಗಳೀ।
ಕ್ರಮದೊಳ್ ನೆಗಜ್ಜಿ ಗದ್ಯಾ। ಶ್ರಮಪದಗುರುತಾಪ್ರತೀತಿಯಂ ಕೆಯ್ಕೊಂಡರ್ ॥

ಪದ್ಯಗ್ರಂಥಕರ್ತೃಗಳ್ :—

ಪರಮಶ್ರೀವಿಜಯಕವೀ। ಶ್ವರಸಂಡಿತಚಂದ್ರಲೋಕಪಾಲಾದಿಗಳೀ।
ನಿರತಿಶಯವಸ್ತುವಿಸ್ತರ। ವಿರಚನೆ ಲಕ್ಷ್ಯಂ ತದಾದ್ಯಕಾವ್ಯಕ್ಕೆಂದುಂ ॥

ಎಂಬ ಪದ್ಯಗಳಲ್ಲಿ ಹೇಳಿದ್ದಾನೆ. ಈ ಕವಿಗಳಲ್ಲಿ ಒಬ್ಬಿಬ್ಬರು ನೃಪತುಂಗನ ಸಮಕಾಲದವರಾಗಿದ್ದಿರಬಹುದೆಂದು ತೋರುತ್ತದೆ. ನೃಪತುಂಗನ ಕಾಲಕ್ಕೆ ಹಿಂದೆಯೇ ಕನ್ನಡದಲ್ಲಿ ಅನೇಕ ಗದ್ಯಗ್ರಂಥಗಳು ಹುಟ್ಟಿದ್ದುವೆಂಬುದು ಜ್ಞಾಪಕದಲ್ಲಿ ಇಡತಕ್ಕ ವಿಷಯವಾಗಿದೆ.

ಈ ಕವಿಗಳಲ್ಲಿ ಹಲವರ ವಿಷಯವು ನಮಗೆ ತಿಳಿಯದು. ಆದರೂ ಒಬ್ಬೊಬ್ಬನನ್ನು ಕುರಿತು ಒಂದೆರಡು ಮಾತುಗಳನ್ನು ಬರೆಯುತ್ತೇವೆ.

I. ಗದ್ಯಗ್ರಂಥಕರ್ತೃಗಳು:—

## ವಿಮಲ.

**ವಿಮಲ**ನೆಂಬ ಒಬ್ಬ ಶ್ವೇತಾಂಬರಜೈನಕವಿ ಸಂಸ್ಕೃತದಲ್ಲಿ ಪ್ರಶ್ನೋತ್ತರ ಮಾಲೆ ಎಂಬ ಗ್ರಂಥವನ್ನು ಬರೆದಿರುವಂತೆ ಆ ಗ್ರಂಥದಿಂದ ತಿಳಿಯಬರುತ್ತದೆ. ಆ ವಿಮಲನು ಇವನಾಗಿರಲಾರನು ಎಂದು ತೋರುತ್ತದೆ. ಅಲ್ಲದೆ **ಶ್ರ. ಬೆ. ಶಾ.** 67 ರಲ್ಲಿ (1129) ವಿಮಲಚಂದ್ರನೆಂಬ ಒಬ್ಬ ದಿಗಂಬರಜೈನಕವಿಯನ್ನು ವಾದಿಶ್ರೇಷ್ಠನೆಂದು ವಿಶೇಷವಾಗಿ ಸ್ತುತಿಸಿದೆ. ಆತನು ನೃಪತುಂಗನಿಗೆ ಹಿಂದೆ ಇದ್ದವನಂತೆ ಕಾಣುವುದಿಲ್ಲ. ದುಂಡು ನಿರ್ಗುಂದಯುವರಾಜನ ಗುರುವಾದ ಒಬ್ಬ ವಿಮಲಚಂದ್ರನು 777 ರಲ್ಲಿದ್ದಂತೆ ತಿಳಿಯುತ್ತದೆ.[1] ಅವನೇ ಇವನಾಗಿರಬಹುದೆಂದು ತೋರುತ್ತದೆ.

---

## ಉದಯ.

ಸೋಮನಾಥನೆಂಬ ಚೋಳರಾಜನ ಮಗನಾದ **ಉದಯಾದಿತ್ಯನು** ಉದಯಾದಿತ್ಯಾಲಂಕಾರವೆಂಬ ಒಂದು ಗ್ರಂಥವನ್ನು ಬರೆದಿದ್ದಾನೆ. ಆ ಗ್ರಂಥದಲ್ಲಿ ತನ್ನ ಹೆಸರನ್ನು **ಉದಯ** ಎಂದೂ ಬರೆದುಕೊಂಡಿದ್ದಾನೆ. ಆದರೆ ಈತನು ಸುಮಾರು 1150 ರಲ್ಲಿ[2] ಇದ್ದಂತೆ ತಿಳಿವುದರಿಂದ ಇವನು ನೃಪತುಂಗನು ಹೇಳುವ ಉದಯನಲ್ಲ.

---

## ನಾಗಾರ್ಜುನ.

ಈ ಹೆಸರುಳ್ಳ ಒಬ್ಬನು ವೈದ್ಯವಲ್ಲಿ ಬಹಳ ನಿಪುಣನಾಗಿ ನಾಗಾರ್ಜುನ ಕಲ್ಪವೇ ಮೊದಲಾದ ಅನೇಕ ಗ್ರಂಥಗಳನ್ನು ಮಾಡಿದನೆಂದೂ ರಸವಾದದಲ್ಲಿ ಪಾರಂಗತನಾಗಿ ಬೆಟ್ಟಗಳನ್ನೆಲ್ಲಾ ಬಂಗಾರಮಾಡಿದನೆಂದೂ ಪ್ರತೀತಿಯಿದೆ.

---

1. *Ind. Ant.*, II ; Nāgamangala 85.
2. ಉದಯಾದಿತ್ಯನ ಚರಿತೆಯನ್ನು ನೋಡಿ.

**ರಾಜಾವಳೀಕಥೆಯಲ್ಲಿ**—ನಾಗಾರ್ಜುನನು ಪೂಜ್ಯಪಾದನ ಸೋದರದಳಿಯನೆಂದೂ ಪೂಜ್ಯಪಾದನ ಉಪದೇಶಮಹಿಮೆಯಿಂದ ಇವನು ಬಂಗಾರಮಾಡುವುದನ್ನು ತಿಳಿದುಕೊಂಡು ದೇಶಾಟನಮಾಡುತ್ತ ಯಂತ್ರಮಂತ್ರತಂತ್ರಾದಿಗಳಿಂ ಕಲ್ಪಿಸಿ ಸಿದ್ಧನಾಗಾರ್ಜುನನೆಂಬ ಕೀರ್ತಿ ದಿಗಂತವ್ಯಾಪಿಯಾಗಿರಲು ಶ್ರೀಶೈಲವನ್ನೈದಿ ಮಲ್ಲಿಕಾರ್ಜುನಪ್ರತಿಷ್ಠೆಗೈದು ಉತ್ತರದೇಶಕ್ಕೆ ಹೋಗಿ ಒಂದೆರಡು ಬಿಟ್ಟಮಂ ಚಿನ್ನಮಂ ಮಾಡಲು ಯತ್ನಿಸಿ ಮುಂದಕ್ಕೆ ಹೋದಾಗ ಇಬ್ಬರು ಸ್ತ್ರೀಯರು ಸಂಜೆಸಿ ಇವನನ್ನು ಕೊಂದರೆಂದೂ—ಹೇಳಿದೆ.

ನಾಗಾರ್ಜುನಕಕ್ಷಪುಟವೆಂಬ ಒಂದು ವೈದ್ಯಗ್ರಂಥವು ದೊರೆಯುತ್ತದೆ. ಅಲ್ಲದೆ, ನಂದಿಸೂತ್ರಗಳ ಮತ್ತು ಆವಶ್ಯಕಸೂತ್ರಗಳ ಆದಿಭಾಗದಲ್ಲಿ ಒಬ್ಬ ನಾಗಾರ್ಜುನನನ್ನು ವಿಶೇಷವಾಗಿ ಸ್ತುತಿಸಿರುವಂತೆ [1] ತಿಳಿಯಬರುತ್ತದೆ.

ಇವರಲ್ಲಿ ನೃಪತುಂಗನು ಹೇಳುವ ನಾಗಾರ್ಜುನನು ಒಬ್ಬನಾಗಿರಬಹುದೋ ಏನೋ ತಿಳಿಯದು.

---

## ಜಯಬಂಧು.

ಮದ್ರಾಸ್ ಪ್ರಾಚ್ಯಕೋಶಾಲಯದಲ್ಲಿ ನಮಗೆ ದೊರೆತ ಚಂಪೂರೂಪವಾದ ಒಂದು ಸೂಪಶಾಸ್ತ್ರಗ್ರಂಥದಲ್ಲಿ ಕೆಲವು ಪದ್ಯಗಳ ಕೊನೆಯಲ್ಲಿ "**ಜಯಬಂಧು ನಂದನ**" ಎಂದಿದೆ. ಆ ಗ್ರಂಥದ ಶೈಲಿ ಪೂರ್ವಕಾಲದ ಜೈನಕವಿಗಳ ಶೈಲಿಯನ್ನು ಅನುಸರಿಸಿದೆ. ನೃಪತುಂಗನು ಹೇಳುವ ಜಯಬಂಧುವಿನ ಮಗನೇ ಆ ಗ್ರಂಥವನ್ನು ಬರೆದಿರಬಹುದೋ ಏನೋ ತಿಳಿಯದು.

**ಅರ್ಹದ್ದಾಸನು** (ಸು. 1300) ಬರೆದಿರುವ **ರಟ್ಟಮತವೆಂಬ** ಗ್ರಂಥದಲ್ಲಿ ಅವನ ಬಂಧುವಾದ ಕುಂಚತೇಜನೆಂಬ ಅಪರನಾಮಧೇಯವುಳ್ಳ ಒಬ್ಬ ಜಯಬಂಧುವಿನ ಹೆಸರು ಹೇಳಿದೆ. ಆದರೆ ಈ ಜಯಬಂಧು ಅರ್ಹದ್ದಾಸನ ಸಮಕಾಲದವನು ಎಂದು ಊಹಿಸುವುದಕ್ಕೆ ಕಾರಣವಿದೆ. [2]

---

## ದುರ್ವಿನೀತ. ಸು. 600.

ಗಂಗರಾಜರಲ್ಲಿ ಈ ಹೆಸರಿನವನೊಬ್ಬನಿದ್ದನು. ಕೆಲವು ತಾವ್ರಶಾಸನಗಳಲ್ಲಿ ಈತನಿಗೆ "ಶಬ್ದಾವತಾರಕಾರಃ," "ದೇವಭಾರತೀನಿಬದ್ಧಬೃಹತ್ಕಥಃ", "ಕಿರಾತಾರ್ಜುನೀಯಪಂಚದಶಸರ್ಗಟೀಕಾಕಾರಃ" ಎಂಬ ವಿಶೇಷಣಗಳಿರುವುದರಿಂದ

1. *Ind. Ant.*, XVIII, 181.
2. ಅರ್ಹದ್ದಾಸನ ಚರಿತೆಯನ್ನು ನೋಡಿ

ಈತನು ಶಬ್ದಾವತಾರವನ್ನು ರಚಿಸಿದಂತೆಯೂ, ಗುಣಾಢ್ಯನ ಬೃಹತ್ಕಥೆಯನ್ನು ಸಂಸ್ಕೃತಕ್ಕೆ ಪರಿವರ್ತಿಸಿದಂತೆಯೂ, ಭಾರವಿಕೃತ ಕಿರಾತಾರ್ಜುನೀಯದ 15 ನೆಯ ಸರ್ಗಕ್ಕೆ ಟೀಕೆಯನ್ನು ಬರೆದಂತೆಯೂ ತಿಳಿಯುತ್ತದೆ. ಅವಂತಿಸುಂದರೀ ಕಥಾಸಾರ ಎಂಬ ಗ್ರಂಥದಿಂದ ಈತನು ಪಲ್ಲವರಾಜನಾದ ಸಿಂಹವಿಷ್ಣುವಿನ ಮತ್ತು ಪೂರ್ವದೇಶದ ಚಾಲುಕ್ಯರಾಜನಾದ ವಿಷ್ಣುವರ್ಧನನ (I) ಸಮಕಾಲದವನೆಂದೂ ಭಾರವಿ ಇವನ ಆಸ್ಥಾನದಲ್ಲಿ ಸ್ವಲ್ಪಕಾಲ ಇದ್ದನೆಂದೂ ತಿಳಿಯುತ್ತದೆ.[1] ಈ ಕಾರಣಗಳಿಂದ ಇವನ ಕಾಲವು ಸುಮಾರು 600 ಆಗಿರಬಹುದು. ನೃಪತುಂಗನು ಹೇಳುವ ಕನ್ನಡಕವಿ ಈತನೇ ಆಗಿರಬೇಕು. ನೃಪತುಂಗನು ಕರ್ನಾಟಕಗದ್ಯಗ್ರಂಥಕರ್ತೃಗಳಲ್ಲಿ ಇವನ ಹೆಸರನ್ನು ಸೇರಿಸಿರುವುದರಿಂದ 6 ನೆಯ ಶತಮಾನದಲ್ಲಿಯೇ ಕನ್ನಡದಲ್ಲಿ ಗದ್ಯಗ್ರಂಥಗಳು ವಿಶೇಷವಾಗಿದ್ದುವು ಎಂದು ತಿಳಿಯಬಹುದಾಗಿದೆ. ಈ ವಿಷಯವು ಕನ್ನಡಿಗರಿಗೆ ಹೃದಯಂಗಮವಾಗದೆ ಇರಲಾರದು.

II. ಪದ್ಯಗ್ರಂಥಕರ್ತೃಗಳು :—

## ಶ್ರೀವಿಜಯ.

ಈತನು ಜೈನಕವಿ. ಇವನು ಕನ್ನಡದಲ್ಲಿ **ಚಂದ್ರಪ್ರಭಪುರಾಣವನ್ನು** ಚಂಪೂರೂಪವಾಗಿ ಬರೆದನೆಂದು **ಮುಂಗರಸನು** (1508) ತನ್ನ **ನೇಮಿಜಿನೇಶಸಂಗತಿ**ಯಲ್ಲಿ—"ಕನ್ನಡದೊಳು ಚಂಪೂಕಾವ್ಯವ ನೆಜಿಪೆ ಪೇಳ್ದ । ಸನ್ನುತಸತ್ಕವೀಶ್ವರರ" ಹೇಳುತ್ತೇನೆ ಎಂದಾರಂಭಿಸಿ "ದೇವಚಂದ್ರಪ್ರಭರನು ಕೊಂಡಾಡಿದ । ಶ್ರೀವಿಜಯರ....." ಎಂಬ ಪದ್ಯದಲ್ಲಿ ಹೇಳಿದ್ದಾನೆ. ಮತ್ತು ಪಿರಿಯಪಟ್ಟಣದ **ದೊಡ್ಡಯ್ಯನು** (ಸು. 1550) ತನ್ನ **ಚಂದ್ರಪ್ರಭಸಾಂಗತ್ಯ**ದಲ್ಲಿ "ಚಂದ್ರಪ್ರಭಪುರಾಣವ ಪೇಳ್ದ ವಿಜಯಕವೀಂದ್ರ" ಎಂದು ಈತನನ್ನು ಸ್ತುತಿಸಿದ್ದಾನೆ. ಈ ಕವಿಯನ್ನು **ದುರ್ಗಸಿಂಹನು** (ಸು. 1145) ತನ್ನ **ಪಂಚತಂತ್ರ**ದಲ್ಲಿ "ಶ್ರೀ ವಿಜಯರ ಕವಿಮಾರ್ಗಂ । ಭಾವಿಪ ಕವಿಜನದ ಮನಕೆ ಕನ್ನಡಿಯುಂ ಕೆ । ಯ್ದೀವಿಗೆಯುಮಾದುವದಱಿಂ । ಶ್ರೀವಿಜಯರ್ ದೇವರವರನೇವಣ್ಣಿಪುದೋ ॥" ಎಂಬ ಪದ್ಯದಲ್ಲಿ ಹೊಗಳಿದ್ದಾನೆ. **ಕೇಶಿರಾಜನು** (ಸು. 1260) ತನ್ನ **ಶಬ್ದಮಣಿದರ್ಪಣ**ದಲ್ಲಿ ಇತರಕವಿಗಳೊಡನೆ ಶ್ರೀವಿಜಯನನ್ನೂ ಹೇಳಿ ಇವರುಗಳ "ಸುಮಾರ್ಗಮಿದಱೊಳೆ ಲಕ್ಷ್ಯಂ" ಎಂದು ಹೇಳಿದ್ದಾನೆ.

**ಶ್ರ. ಬೆ. ಶಾ.** 67 ರಿಂದ (1129) ಒಬ್ಬ ಶ್ರೀವಿಜಯನು ಅವನೋ ಒಬ್ಬ ಗಂಗರಾಜನಿಗೆ ಗುರುವಾಗಿದ್ದಂತೆಯೂ ಹೇಮಸೇನಮುನಿ ಬಹುಕಾಲ ಕಷ್ಟ

1. *Mysore Archæological Report* for 1921, 28.

ಪಟ್ಟು ಸಾಧಿಸಿದ ವಿದ್ಯೆಯೂ ತಪಸ್ಸೂ ಈತನಲ್ಲಿ ಸ್ವಲ್ಪಕಾಲದಲ್ಲಿಯೇ ಸಂಕ್ರಮಿಸಿದುವು ಎಂದು ವಾದಿರಾಜದೇವನು ಸ್ತುತಿಸಿದಂತೆಯೂ ತಿಳಿಯಬರುತ್ತದೆ. ಆದರೆ ಬೇಲೂರು 17 ನೆಯ ಶಾಸನದಿಂದ ಈ ಗಂಗರಾಜನು ಬೂತುಗನೆಂದು (938—953) ತಿಳಿಯುತ್ತದೆ. ಅಲ್ಲದೆ ಸುಮಾರು 915 ರಲ್ಲಿ ಅನುಪಮಕವಿ ಎಂಬ ಬಿರುದನ್ನು ಪಡೆದಿದ್ದ ಒಬ್ಬ ಶ್ರೀವಿಜಯದಂಡನಾಥನು ಇದ್ದುದಾಗಿ ತಿಳಿಯಬರುತ್ತದೆ.[1] ಇವರಿಬ್ಬರೂ ನೃಪತುಂಗನ ಕಾಲಕ್ಕೆ ಈಚೆಯವರು. ಆದುದರಿಂದ ಚಂದ್ರಪ್ರಭಪುರಾಣಕರ್ತೃವಾದ ಶ್ರೀವಿಜಯನೇ ನೃಪತುಂಗನು ಹೇಳುವ ಕವಿಯೆಂದು ತೋರುತ್ತದೆ.

ಈತನು ನೃಪತುಂಗನ "ಸಭಾಸದ"ನಾಗಿದ್ದಂತೆಯೂ ಕವಿರಾಜಮಾರ್ಗಾಲಂಕಾರವನ್ನು ನೃಪತುಂಗನ ಹೆಸರಿನಲ್ಲಿ ಬರೆದಂತೆಯೂ ಊಹಿಸುವುದಕ್ಕೆ ಕಾರಣಗಳಿರುವಂತೆ ತೋರುತ್ತದೆ. ಈಯಂಶವು ನೃಪತುಂಗನ ಚರಿತೆಯಲ್ಲಿ ಚರ್ಚಿಸಿದೆ.

ದುರ್ಗಸಿಂಹನೂ ಕೇಶಿರಾಜನೂ ಈತನನ್ನು ಹೊಗಳಿರುವುದನ್ನು ನೋಡಿದರೆ ಈತನು ಪ್ರೌಢಕವಿಯಾಗಿದ್ದಿರಬೇಕೆಂದು ಧಾರಾಳವಾಗಿ ಹೇಳಬಹುದು. ಈತನ ಚಂದ್ರಪ್ರಭಚಂಪು ದೊರೆತಿಲ್ಲ. ಈತನು ಮತ್ತಾವ ಗ್ರಂಥಗಳನ್ನು ಬರೆದಿದ್ದಾನೆಯೋ ತಿಳಿಯದು.

---

## ಕವೀಶ್ವರ.

ಇದು ಬಿರುದೇ ಹೊರತು ಹೆಸರಲ್ಲ. ಈ ಬಿರುದನ್ನು ಪಡೆದಿದ್ದವನಾರೋ ತಿಳಿಯದು. ಕವಿರಾಜಮಾರ್ಗದ ದ್ವಿತೀಯಪರಿಚ್ಛೇದದ ಕೊನೆಯ ಪದ್ಯದಲ್ಲಿ "ಕಾವ್ಯದಿಂ ಶ್ರೀವಿಜಯಪ್ರಭೂತಮುದಮಂ ತನಗಾಗಿಸಿದಂ ಕವೀಶ್ವರಂ" ಎಂದು ಹೇಳಿದೆ. ನೃಪತುಂಗನು ಹೇಳುವ ಕವೀಶ್ವರನು ಇವನೇ ಆಗಿರಬಹುದು ಎಂದು ತೋರುತ್ತದೆ. ಈ ಪದ್ಯದ ಆಧಾರದಿಂದಲೂ ಇನ್ನು ಕೆಲವು ಕಾರಣಗಳಿಂದಲೂ ಕವಿರಾಜಮಾರ್ಗವು ನೃಪತುಂಗನ ಆಶ್ರಿತನಾದ ಕವೀಶ್ವರನೆಂಬವನಿಂದ ರಚಿತವಾಯಿತೆಂದು ಡಾಕ್ಟರ್ ಫ್ಲೀಟ್ ಅಭಿಪ್ರಾಯಪಟ್ಟಿದ್ದಾರೆ.[2]

---

## ಪಂಡಿತ.

ಇದೂ ಬಿರುದಿನಂತೆ ಕಾಣುತ್ತದೆಯೇ ಹೊರತು ಹೆಸರಿನಂತೆ ಕಾಣುವುದಿಲ್ಲ. ಶ್ರ. ಬೆ. ಶಾ. 254 ರಲ್ಲಿ (1398) ಪಂಡಿತಾರ್ಯ ಎಂಬ ಹೆಸರುಳ್ಳ ಒಬ್ಬ

1. ಇವನ ಚರಿತೆಯನ್ನು ನೋಡಿ.

2. *Ind. Ant.*, XXXIII, 258.

ಯತಿಯನ್ನು ವಾಗ್ಮಿಶ್ರೇಷ್ಠನೆಂದು ವಿಶೇಷವಾಗಿ ಕೊಂಡಾಡಿದೆ. ಆದರೆ ಈತನು ಆಧುನಿಕನಾದುದರಿಂದ ನೃಪತುಂಗನು ಹೇಳುವ ಪಂಡಿತನು ಬೇರೆ ಅಲ್ಲ.

---

## ಚಂದ್ರ.

**ಕೇಶಿರಾಜ** (ಸು. 1260), **ರುದ್ರಭಟ್ಟ** (ಸು. 1180), **ರಟ್ಟಮತವನ್ನು** ಬರೆದ **ಅರ್ಹದ್ದಾಸ** (ಸು. 1300), ಇವರುಗಳು ಚಂದ್ರಭಟ್ಟನೆಂಬ ಒಬ್ಬ ಕವಿಯನ್ನು **ಸ್ತುತಿಸಿದ್ದಾರೆ**. **ದುರ್ಗಸಿಂಹನೂ** (ಸು. 1145) ಒಬ್ಬ ಚಂದ್ರಭಟ್ಟನನ್ನು ಸ್ತುತಿಸಿದಂತೆ ತೋರುತ್ತದೆ. ಈ ಚಂದ್ರಭಟ್ಟನು ಸುಮಾರು 1000 ದಲ್ಲಿಯೋ ಅದಕ್ಕೆ ಹಿಂದೆಯೋ ಇದ್ದಂತೆ ತೋರುತ್ತದೆ[1] ಮತ್ತೊಬ್ಬ ಚಂದ್ರಭಟ್ಟಕವಿ 1067 ರಲ್ಲಿ ಇದ್ದಂತೆ ತಿಳಿಯುತ್ತದೆ.[2] **ಚಂದ್ರರಾಜನೆಂಬ** ಒಬ್ಬ ಕವಿ **ಮದನತಿಲಕವೆಂಬ** ಗ್ರಂಥವನ್ನು ಬರೆದಿದ್ದಾನೆ. ಈತನು 1079 ರಲ್ಲಿ ಇದ್ದಂತೆ ಊಹಿಸುವುದಕ್ಕೆ ಕಾರಣವಿದೆ.[3] **ಜಾತಕತಿಲಕವನ್ನು** ಬರೆದ **ಶ್ರೀಧರಾಚಾರ್ಯನು** (1049) ಒಬ್ಬ ಚಂದ್ರಕವಿಯ ಹೆಸರನ್ನು ಹೇಳುತ್ತಾನೆ. **ಅಭಿನವದಶಕುಮಾರಚರಿತವನ್ನು** ಬರೆದ **ಚೌಂಡರಸನು** (ಸು. 1300) **ಚಂದ್ರನೆಂಬ** ಒಬ್ಬ ಕವಿಯನ್ನು ಹೊಗಳಿದ್ದಾನೆ. ನೃಪತುಂಗನು ಹೇಳುವ ಚಂದ್ರನು, ಶ್ರೀಧರಾಚಾರ್ಯನು ಹೇಳುವ ಚಂದ್ರನಾಗಿರಬಹುದೋ ಏನೋ ತಿಳಿಯದು.

---

## ಲೋಕಪಾಲ.

ಈತನ ವಿಷಯವಾಗಿ ನಮಗೇನೂ ತಿಳಿಯದು. ಇವನು ನೃಪತುಂಗನ ಸಾಮಂತ ಬಂಕರಸನ ಮಗನಾದ ಲೋಕಾದಿತ್ಯನಾಗಿರಬಹುದೆಂದು, ಮೆ. ರೈಸ್ ಹೇಳುತ್ತಾರೆ.[4] ಆದರೆ ಲೋಕಾದಿತ್ಯ, ಲೋಕಪಾಲ, ಎಂಬ ಹೆಸರುಗಳಿಗೆ ಬಹಳ ಭೇದವಿದೆ. ಒಂದುವೇಳೆ ಎರಡೂ ಒಬ್ಬನ ಹೆಸರೇ ಎಂದು ಭಾವಿಸಿದರೂ ನೃಪತುಂಗನು ತನ್ನ ಸಾಮಂತನ ಮಗನನ್ನು ಪುರಾಣಕವಿಗಳ ಗೋಷ್ಠಿಯಲ್ಲಿ ಸೇರಿಸಿ ಹೇಳುವುದು ಅಸಂಭವವಾಗಿ ತೋರುತ್ತದೆ.

ನೃಪತುಂಗನು ಹೇಳಿರುವ ಕನ್ನಡಕವಿಗಳಲ್ಲಿ ಶ್ರೀವಿಜಯನು ಚಂದ್ರಪ್ರಭಪುರಾಣವನ್ನು ಕನ್ನಡದಲ್ಲಿ ಚಂಪೂರೂಪವಾಗಿ ಬರೆದನೆಂದು, ಮಂಗರಸ,

1. ಚಂದ್ರಭಟ್ಟನ ಚರಿತೆಯನ್ನು ನೋಡಿ.
2. ಇವನ ಚರಿತೆಯನ್ನು ನೋಡಿ.
3. ಚಂದ್ರರಾಜನ ಚರಿತೆಯನ್ನು ನೋಡಿ.
4. ಶಬ್ದಾನುಶಾಸನ, ಉಪೋದ್ಘಾತ, ಪುಟ 22.

ದೊಡ್ಡೈಯ, ಇವರ ಗ್ರಂಥಗಳಿಂದ ತಿಳಿಯಬರುತ್ತದೆ. ಉಳಿದವರು ಕನ್ನಡದಲ್ಲಿ ಆವ ಗ್ರಂಥಗಳನ್ನು ಬರೆದಿರುವರೋ ತಿಳಿಯದು. ಇವರ ಗ್ರಂಥಗಳೆಲ್ಲಾ ದೊರೆತರೆ ನೃಪತುಂಗನಿಗೆ ಹಿಂದೆ ಕವಿಗಳು ಕನ್ನಡಭಾಷೆಯನ್ನು ಹೇಗೆ ಬರೆಯುತ್ತಿದ್ದರು, ಅವನ ಕಾಲಕ್ಕೂ ಹಿಂದಣಕಾಲಕ್ಕೂ ಭಾಷಾಶೈಲಿಯಲ್ಲಿಯೂ ರಚನೆಯಲ್ಲಿಯೂ ವ್ಯಾಕರಣಮರ್ಯಾದೆಯಲ್ಲಿಯೂ ಆವ ವ್ಯತ್ಯಾಸಗಳಿದ್ದುವು ಎಂಬ ವಿಷಯಗಳನ್ನು ತಿಳಿಯಬಹುದು. ನೃಪತುಂಗನು ಹಳಗನ್ನಡದ ಪದಗಳನ್ನು ವಿಶೇಷವಾಗಿ ಉಪಯೋಗಿಸಲಾಗದು ಎನ್ನುತ್ತಾನೆ. ಅವನ ಕಾಲದಲ್ಲಿದ್ದ ಹಳಗನ್ನಡದ ಸ್ವರೂಪವೆಂಥದೋ ತಿಳಿಯದು. ಅವನು ಹೇಳಿರುವ ಕವಿಗಳ ಗ್ರಂಥಗಳು ಪ್ರಾಯಶಃ ಆಕಾಲದ ಹಳಗನ್ನಡದಲ್ಲಿರಬಹುದು. ಅವು ದೊರೆತರೆ ಆಕಾಲದ ಹಳಗನ್ನಡದ ಸ್ವರೂಪವನ್ನು ತಿಳಿದುಕೊಳ್ಳುವುದಕ್ಕೆ ಸಾಧನಸಂಪತ್ತಿ ಉಂಟಾಗುವುದು.

---

## ಜಯಬಂಧುನಂದನ. ಸು. 800.

ಮದ್ರಾಸ್ ಪ್ರಾಚ್ಯಕೋಶಾಲಯದಲ್ಲಿ ಒಂದು ಸೂಪಶಾಸ್ತ್ರವು ದೊರೆತಂತೆಯೂ ಅದರಲ್ಲಿ ಕೆಲವು ಪದ್ಯಗಳ ಕೊನೆಯಲ್ಲಿ "**ಜಯಬಂಧುನಂದನ**" ಎಂಬ ಹೆಸರು ಇರುವಂತೆಯೂ ಹಿಂದೆಯೇ ತಿಳಿಸಿದೆಯಷ್ಟೆ.[1] ಈ ಜಯಬಂಧುನಂದನನು, ನೃಪತುಂಗನು ತನ್ನ ಹಿಂದೆ ಇದ್ದಹಾಗೆ ಹೇಳುವ ಜಯಬಂಧುವಿನ ಮಗನಾಗಿರಬಹುದು. ಪೂರ್ವದ ಜೈನಶೈಲಿಯನ್ನು ಅನುಸರಿಸುವ ಇವನ ಬಂಧವೂ ಈ ಅಭಿಪ್ರಾಯಕ್ಕೆ ಉಪಷ್ಟಂಭಕವಾಗಿದೆ. ಈ ಕವಿಯ ನಿಜವಾದ ಹೆಸರು ಗೊತ್ತಿಲ್ಲ. ಕನ್ನಡಕವಿಗಳು ತಮ್ಮ ಗ್ರಂಥಗಳಲ್ಲಿ ಕೆಲವು ಪದ್ಯಗಳ ಕೊನೆಯಲ್ಲಿ ತಮ್ಮ ಹೆಸರನ್ನಾಗಲಿ ಬಿರುದನ್ನಾಗಲಿ ಹೇಳಿಕೊಳ್ಳುವ ವಾಡಿಕೆಯುಂಟು: ಮಂಗರಾಜ, ಅರ್ಹದ್ದಾಸ, ಸುಜನೋತ್ತಂಸ ಮೊದಲಾದ ಕವಿಗಳ ಗ್ರಂಥಗಳನ್ನು ನೋಡಿದರೆ ಈ ವಿಷಯವು ಸ್ಪಷ್ಟವಾಗುತ್ತದೆ. ಈ ಸಂಪ್ರದಾಯಕ್ಕೆ ಅನುಸಾರವಾಗಿ ಈ ಸೂಪಶಾಸ್ತ್ರದಲ್ಲಿ ದೊರೆವ 'ಜಯಬಂಧುನಂದನ' ಎಂಬುದೂ ಕವಿಗೇ ಅನ್ವಯಿಸಬಹುದು.

ಈ ಸೂಪಶಾಸ್ತ್ರವು ಚಂಪೂರೂಪವಾಗಿದೆ; ಆದರೂ ಗದ್ಯಭಾಗವೇ ವಿಶೇಷವಾಗಿದೆ. ಇದರಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

ಕಾಸಿದ ಪಾಲೊಳಿಕ್ಕಿ ಮೊಸರಂ ನೆಜ' ಪೊಟ'್ತಸೆವಂತಮತ್ರೆಯಂ।
ಕಾಸಿ ಘೃತಾನ್ವಿತಂ ಕಳಮಚೂರ್ಣಮನಿಕ್ಕಿ ಬಟ'ಕ್ಕೆ ಸೀರೆಯೊಳ್ ॥

---

1. ಪುಟ 12.

ಮಾಸರಮಾಗೆ ಸೇವಿಗೆಯನೊತ್ತಿ ಸಿತೋದಕದಿಂದೆ ಮತ್ತೆ ಸಂ।
ವಾಸಿಸಿ ಮಾಲ್ಕಿ ಲಡ್ಡುಗೆಯನೀತೆಜಿದಿಂ ಜಯಬಂಧುನಂದನಾ ॥ 1 ॥

ಅರೆದುರ್ದಿನ ಬೀಳೆಯನೊಂ। ದಿರೆ ಮೊಸರದಿ (?) ನೀರೊಳಿಂಗು ಜೀರಗೆ ಕೊತ್ತುಂ।
ಬರಿ ಮೆಣಸಲ್ಲಂ ಬೆರಸಿ। ಡ್ಡರಿಗೆಯನಡೆ ಕಂಪನಿಂಪುಮಂ ತಳೆದಿರ್ಕುಂ ॥ 2 ॥

ತುಜುವೆಯ ಬೀರನಿಕ್ಕಿ ತರುಹೇ·ಯ ದುಗ್ಧಮನರ್ಧಮಪ್ಪಿನಂ।
ಮಜುಗಿಸಿ ಬಂಧಮಾಗಿ ಘೃತಮುಂ ಬೆರಸಿಟ್ಟು...ಮತ್ತದಂ ॥
ಪೆಜವಜಿಂಳೀಂ ತ್ರಿಜಾತಕದೊಳೊಂದಿರೆ ವೇದಿಸಿ ಕಮ್ಮಿತಾಗೆ ಪಾಂ।
ಗಜ·ದಮ್ಯತೋಪಮಾನಮಿದು ತಾನೆನೆ ಮಾಡುಗೆ ಪಾಲೊಳುಂಡೆಯಂ ॥ 3 ॥

---

## ಸೈಗೊಟ್ಟ ಶಿವಮಾರ. ಸು. 800.

ಈ ಗಂಗರಾಜನು ಶಿವಮಾರಮತವೆಂಬ ಒಂದು ಗಜಶಾಸ್ತ್ರವನ್ನು ಮಾಡಿದಂತೆ ನಗರದ 35 ನೆಯ ಶಾಸನದ ಈ ಭಾಗದಿಂದ ತಿಳಿಯುತ್ತದೆ:—

ಶಿವಮಾರದೇವಂ ಸೈಗೊಟ್ಟನೆಂಬೆರಡನೆಯ ಪೆಸರಂ ತಾಳ್ದಿ ಶಿವಮಾರ ಮತಮೆಂದು ಗಜಶಾಸ್ತ್ರಮುಂ ಮಾಡಿ ಮತ್ತಂ—

ಏವೇಳ್ಪ್ಪುದೊ ಶಿವಮಾರಮ। ಹೀವಳಯಾಧಿಪನ ಸುಭಗಕವಿತಾಗುಣಮಂ।
ಭೂವಳಯದೊಳ್ ಗಜಾಷ್ಟಕ। ಮೋವನಿಗೆಯುಮೊನಕೆವಾಡುಮಾದುದೆ ಪೇಳ್ಗುಂ ॥

'ಒನಕೆವಾಡಾದುದು' ಎಂಬುದರಿಂದ ಇದು ಕನ್ನಡಭಾಷೆಯಲ್ಲಿದ್ದಿರಬಹುದು.

---

## ನೃಪತುಂಗ. 814—877.

ಈತನು ಕವಿರಾಜಮಾರ್ಗವನ್ನು ಬರೆದಿದ್ದಾನೆ; ಇನ್ನಾವ ಗ್ರಂಥಗಳನ್ನು ಬರೆದಿದ್ದಾನೆಯೋ ತಿಳಿಯದು.

ಇವನು ರಾಷ್ಟ್ರಕೂಟವಂಶದ ದೊರೆ; 814 ರಿಂದ 877 ರವರೆಗೆ ರಾಜ್ಯಭಾರಮಾಡಿದನು. ಈತನಿಗೆ ಅಮೋಘವರ್ಷ, ಅತಿಶಯಧವಳ ಎಂಬ ಹೆಸರುಗಳೂ ಉಂಟು. ಈತನು ಸಂಸ್ಕೃತದಲ್ಲಿ ಆದಿಪುರಾಣವನ್ನು ಬರೆದ ಜಿನಸೇನನ (783) ಶಿಷ್ಯನೆಂದು ಗುಣಭದ್ರನ (898) ಉತ್ತರಪುರಾಣದಿಂದ ತಿಳಿಯುತ್ತದೆ.[1]

1. ಯಸ್ಯ ಪ್ರಾಂಶುನಖಾಂಶುಜಾಲವಿಸರದ್ವಾರಾಂತರಾವಿರ್ಭವ।
ತ್ಪಾದಾಂಭೋಜರಜಃಪಿಶಂಗಮುಕುಟಪ್ರತ್ಯಗ್ರರತ್ನದ್ಯುತಿಃ ॥
ಸಂಸ್ಮರ್ತಾ ಸ್ವಮಮೋಘವರ್ಷನೃಪತಿಃ ಪೂತೋಽಹಮದ್ಯೇತ್ಯಲಂ।
ಸ ಶ್ರೀಮಾನ್ ಜಿನಸೇನಪೂಜ್ಯಭಗವತ್ಪಾದೋ ಜಗನ್ಮಂಗಳಂ ॥

ಈತನ ರಾಜಧಾನಿ ಮಾನ್ಯಖೇಟಪುರ; ಇದು ಈಗ ಹೈದರಾಬಾದು ಸೀಮೆಯಲ್ಲಿರುವ ಮಾಲ್‌ಖೇಡ್ ಎಂಬುದೇ. ನೃಪತುಂಗನು 62 ವರ್ಷಗಳು ರಾಜ್ಯಭಾರ ಮಾಡಿದನು. ಬಳಿಕ ತಾನೇ ರಾಜ್ಯವನ್ನು ಬಿಟ್ಟಂತೆ ಅವನು ಸಂಸ್ಕೃತದಲ್ಲಿ ಬರೆದಿರುವ ಪ್ರಶ್ನೋತ್ತರಮಾಲೆಯೆಂಬ ಗ್ರಂಥದ ಅಂತ್ಯಶ್ಲೋಕದಿಂದ ತಿಳಿಯುತ್ತದೆ.[1]

ಇವನ ತಂದೆ ಅತಿಶಯಧವಳನೆಂದು, ಮೈ. ರೈಸ್ ಹೇಳುತ್ತಾರೆ.[2] ಆದರೆ ಅತಿಶಯಧವಳ ಎಂಬ ಹೆಸರು ಇವನದೇ ಎಂಬುದು ಶಾಸನಗಳಿಂದಲೂ ಇವನ ಗ್ರಂಥದಲ್ಲಿ ದೊರೆವ "ಅತಿಶಯಧವಳೋಕ್ತಕ್ರಮದೆ", "ಅತಿಶಯಧವಳೋರ್ವೀಶೋದಿತಾಲಂಕೃತಿ", "ಆಗದೆಂದನತಿಶಯಧವಳಂ", "ಅತಿಶಯಧವಳಧರಾಧಿಪಮತದಿಂದಂ" ಎಂಬ ಪದ್ಯಭಾಗಗಳಿಂದಲೂ ವ್ಯಕ್ತವಾಗುತ್ತದೆ. ಅಲ್ಲದೆ, "ನರಲೋಕಚಂದ್ರಮತದಿಂ", "ಕೃತಕೃತ್ಯಮಲ್ಲವಲ್ಲಭಮತದಿಂ", "ಪರಮಸರಸ್ವತೀತೀರ್ಥಾವತಾರನೃಪತುಂಗದೇವ" ಎಂಬುದಾಗಿ ಇವನ ಗ್ರಂಥದಲ್ಲಿ ಅಲ್ಲಲ್ಲಿ ದೊರೆವುದರಿಂದ ಈತನಿಗೆ ಅತಿಶಯಧವಳ ಎಂಬುದಲ್ಲದೆ ನರಲೋಕಚಂದ್ರ, ಕೃತಕೃತ್ಯಮಲ್ಲವಲ್ಲಭ, ಪರಮಸರಸ್ವತೀತೀರ್ಥಾವತಾರ ಎಂಬ ಬಿರುದುಗಳೂ ಇದ್ದಂತೆ ತೋರುತ್ತದೆ.

ಇವನ ಗ್ರಂಥ

## ಕವಿರಾಜಮಾರ್ಗ.

ಇದು ಅಲಂಕಾರಗ್ರಂಥ. ನಮಗೆ ದೊರೆತಿರುವ ಕನ್ನಡಗ್ರಂಥಗಳಲ್ಲೆಲ್ಲಾ ಇದೇ ಪುರಾತನವಾದುದು. ಈ ಗ್ರಂಥವು ಮೂರು ಪರಿಚ್ಛೇದಗಳಾಗಿ ಭಾಗಿಸಲ್ಪಟ್ಟಿದೆ:—(1) ದೋಷಾನುವರ್ಣನನಿರ್ಣಯ, (2) ಶಬ್ದಾಲಂಕಾರ, (3) ಅರ್ಥಾಲಂಕಾರ. ಗ್ರಂಥಾವತಾರದಲ್ಲಿ ಮೊದಲನೆಯ ಪದ್ಯದಲ್ಲಿ "ನೃಪತುಂಗ" ಎಂದೂ ಎರಡನೆಯ ಪದ್ಯದಲ್ಲಿ "ಅತಿಶಯಧವಳ" ಎಂದೂ ತನ್ನ ಹೆಸರುಗಳನ್ನು ಹೇಳಿಕೊಂಡು ಶ್ಲೇಷೆಯಿಂದ ವಿಷ್ಣುಸ್ತುತಿಯನ್ನು ಮಾಡಿ, ಬಳಿಕ ಸರಸ್ವತಿಯನ್ನೂ ಕವೀಶ್ವರರನ್ನೂ ಕಾವ್ಯಗಳನ್ನೂ ಹೊಗಳಿ, ಗದ್ಯಪದ್ಯಕಾವ್ಯಲಕ್ಷಣಗಳನ್ನು ಹೇಳಿ, ಇವುಗಳಿಗೆ ಲಕ್ಷ್ಯರೂಪವಾಗಿ ಗ್ರಂಥಗಳನ್ನು ಬರೆದಿರುವ ಸಂಸ್ಕೃತ ಕರ್ಣಾಟಕಕವಿಗಳ ಹೆಸರುಗಳನ್ನೂ ಹೇಳಿದ್ದಾನೆ. ಸಂಸ್ಕೃತಕವಿಗಳಲ್ಲಿ ಕಾದಂಬರೀಹರ್ಷಚರಿತಗಳೆಂಬ ಗದ್ಯಕಾವ್ಯಗಳ ಕರ್ತೃವಾದ ಬಾಣನನ್ನೂ

1. ವಿನೇಕಾತ್ಯಕ್ತರಾಜ್ಯೇನ ರಾಜ್ಞೇಯಂ ರತ್ನಮಾಲಿಕಾ।
ರಚಿತಾಮೋಘವರ್ಷೇಣ ಸುಧಿಯಾ ಸದಲಂಕೃತಿಃ॥

2. ಶಬ್ದಾನುಶಾಸನ, ಉಪೋದ್ಘಾತ, ಪುಟ 23.

ಪದ್ಯಕಾವ್ಯಕರ್ತೃಗಳಾದ ಗುಣಸೂರಿ ನಾರಾಯಣ ಭಾರವಿ ಕಾಳಿದಾಸ ಮಾಘಾದಿಗಳನ್ನೂ ಸ್ಮರಿಸಿದ್ದಾನೆ. ಕನ್ನಡಕವಿಗಳಲ್ಲಿ ಗದ್ಯಪದ್ಯಕಾವ್ಯಕರ್ತೃಗಳೆಂದು ಈತನು ಹೇಳಿರುವವರ ವಿಷಯವನ್ನು ಹಿಂದೆಯೇ ತಿಳಿಸಿದ್ದೇವೆ.[1]

ಆಮೇಲೆ ಕನ್ನಡಭಾಷೆ ಪ್ರಚಾರದಲ್ಲಿದ್ದ ಪ್ರದೇಶವನ್ನೂ ಆ ಭಾಷೆ ಉಚ್ಚ್ರಾಯದಶೆಯಲ್ಲಿದ್ದ ಸ್ಥಳಗಳನ್ನೂ ಆ ಸ್ಥಳದವರು ಆ ಭಾಷೆಯನ್ನು ಚೆನ್ನಾಗಿ ಅಭ್ಯಾಸಮಾಡಿದ್ದರು ಎಂಬ ವಿಷಯವನ್ನೂ ಸೂಚಿಸಿ, ತನ್ನ ಕಾಲದಲ್ಲಿ ಹಳಗನ್ನಡವೆಂಬ ಭಾಷೆಯಿದ್ದಿತೆಂದೂ, ಕನ್ನಡಭಾಷೆಯಲ್ಲಿ ದಕ್ಷಿಣೋತ್ತರಶೈಲಿಗಳೆಂಬ ಎರಡು ಭೇದಗಳು ಉಂಟೆಂದೂ, ಬೆದಂಡೆಚತ್ತಾಣಗಳೆಂಬ ಎರಡು ವಿಧವಾದ ಪದ್ಯಕಾವ್ಯಗಳನ್ನು ಪುರಾತನಕವಿಗಳು ಒಡಂಬಟ್ಟಿದ್ದಾರೆಂದೂ ಹೇಳುತ್ತಾನೆ. ತರುವಾಯ ಕಾವ್ಯದೋಷಗಳಲ್ಲಿ ದಿಕ್ಪ್ರದರ್ಶನಾರ್ಥವಾಗಿ ಕೆಲವನ್ನು ಉದಾಹರಿಸಿ ಪ್ರಥಮಪರಿಚ್ಛೇದವನ್ನು ಮುಗಿಸುತ್ತಾನೆ. ಎರಡನೆಯ ಪರಿಚ್ಛೇದದಲ್ಲಿ, ಕನ್ನಡದಲ್ಲಿ ಬರೆವುದಕ್ಕೆ ಕಷ್ಟವಾದ ಏಕಾಕ್ಷರದ್ವ್ಯಕ್ಷರಶ್ಲೋಕಗಳಿಗೂ ಚಿತ್ರಯಮಕಾದಿಗಳಿಗೂ ಉದಾಹರಣಗಳನ್ನು ಕೊಡುತ್ತಾನೆ. ಮೂರನೆಯ ಪರಿಚ್ಛೇದದಲ್ಲಿ ಸುಮಾರು ೩೮ ಅಲಂಕಾರಗಳಿಗೆ ಲಕ್ಷ್ಯಲಕ್ಷಣಗಳನ್ನು ಹೇಳಿದ್ದಾನೆ. ಪ್ರತಿ ಪರಿಚ್ಛೇದದ ಕೊನೆಯಲ್ಲಿಯೂ "ನೃಪತುಂಗದೇವಾನುಮತಮಪ್ಪ ಕವಿರಾಜಮಾರ್ಗದೊಳ್" ಎಂದಿದೆ.

ಈ ಗ್ರಂಥದ ಕೆಲವು ಪದ್ಯಗಳು ಛಂದೋಂಬುಧಿಯಲ್ಲಿಯೂ ಶಬ್ದಮಣಿದರ್ಪಣದಲ್ಲಿಯೂ ಉದಾಹೃತವಾಗಿವೆ.[2]

ಯದ್ಯಪಿ ಈ ಗ್ರಂಥವು ನೃಪತುಂಗಕೃತವೆಂದು ಪ್ರತೀತಿಯಿದ್ದರೂ ಶ್ರೀವಿಜಯಕೃತವೋ ಎಂದು ಸಂದೇಹಪಡುವುದಕ್ಕೆ ಅವಕಾಶವಿದೆ. ಪ್ರಥಮಪರಿಚ್ಛೇದದ ಅಂತ್ಯ ಪದ್ಯದಲ್ಲಿ "ಶ್ರೀವಿಜಯಪ್ರಭೂತಮನಿದಂ ಕೆಯ್ಕೊಳ್ಳುದಿಂ ಮಾಜ್ಗೆಯಿಂ" ಎಂದೂ, ದ್ವಿತೀಯ ಪರಿಚ್ಛೇದದ ಕಡೆಯ ಪದ್ಯದಲ್ಲಿ "ಕಾವ್ಯದಿಂ ಶ್ರೀವಿಜಯಪ್ರಭೂತಮುದಮಂ ತನಗಾಗಿಸಿದಂ ಕವೀಶ್ವರಂ" ಎಂದೂ, ಮೂರನೆಯ ಪರಿಚ್ಛೇದದ ಕೊನೆಯ ಪದ್ಯದಲ್ಲಿ "ಪರಮಶ್ರೀವಿಜಯಪ್ರಭೂತಿಜಯಶಸ್ಸ್ತ್ರೀಬಾಲವೃದ್ಧಾಹಿತಂ" ಎಂದೂ ದೊರೆಯುತ್ತದೆ. ಅಲ್ಲದೆ ಪ್ರತಿ ಪರಿಚ್ಛೇದದ ಕೊನೆಯ ಗದ್ಯದಲ್ಲಿಯೂ "ನೃಪತುಂಗದೇವಕೃತ" ಎನ್ನದೆ "ನೃಪತುಂಗದೇವಾನುಮತಮಪ್ಪ" ಎಂದಿದೆ. ಮೂರು ಪರಿಚ್ಛೇದಗಳ ಕೊನೆಯ ಪದ್ಯಗಳಲ್ಲಿಯೂ "ಶ್ರೀವಿಜಯಪ್ರಭೂತ" ವೆಂದಿರುವುದರಿಂದಲೂ ಮುಖ್ಯವಾಗಿ ಮೊದಲನೆಯ ಪರಿಚ್ಛೇದದ ಕಡೆಯ ಪದ್ಯದಲ್ಲಿ 'ಶ್ರೀವಿಜಯನು ಇದನ್ನು ಮಾಡಿದನು' ಎಂಬರ್ಥವು ತೋರುವುದರಿಂದಲೂ ಗ್ರಂಥದ ಅಂತ್ಯಭಾಗದಲ್ಲಿ "ಆಶ್ರಿತ ಮಹಾನೃಪತುಂಗಸಭಾಸದಂ.....ಕೂಡೆ

1. ಪುಟ 10.

2. ಛಂದೋಂಬುಧಿ, ಪುಟ 18, 19, 20, 21. ಶಬ್ದಮಣಿದರ್ಪಣ, ಪುಟ 71, 98.

ಪೇಟ್ದ ನುತಕಾವ್ಯಂ" ಎಂದಿರುವುದರಿಂದಲೂ "ನೃಪತುಂಗಾನುಮತಮಪ್ಪ" ಎಂಬುದರಿಂದಲೂ ಒಂದು ವೇಳೆ ನೃಪತುಂಗನು ಪೂರ್ವಕವಿಗಳ ಗೋಷ್ಠಿಯಲ್ಲಿ ಹೇಳಿರುವ ಶ್ರೀವಿಜಯನೇ ಆತನ ಆಸ್ಥಾನಕವಿಯಾಗಿದ್ದು ಈ ಗ್ರಂಥವನ್ನು ರಚಿಸಿ ನೃಪತುಂಗನ ಅಂಕಿತದಿಂದ ಪ್ರಕಟಿಸಿದ್ದರೂ ಇರಬಹುದು. ಹಿಂದೆ [1] ಅನುವಾದಿಸಿರುವ ಶ್ರೀವಿಜಯಸ್ತುತಿರೂಪವಾದ ದುರ್ಗಸಿಂಹನ "ಶ್ರೀವಿಜಯರ ಕವಿಮಾರ್ಗಂ" ಎಂಬ ಪದ್ಯದಲ್ಲಿಯ 'ಕವಿಮಾರ್ಗಂ' ಎಂಬುದು 'ಕವಿರಾಜಮಾರ್ಗ' ಎಂಬ ಈ ಗ್ರಂಥಕ್ಕೆ ಅನ್ವಯಿಸುವುದಾದರೆ ಇದು ಶ್ರೀವಿಜಯಕೃತವೆಂಬ ಊಹೆಗೆ ಸಹಾಯಕವಾಗುತ್ತದೆ. ಆದರೆ ಈ ವಿಷಯದಲ್ಲಿ ಹೀಗೆಯೇ ಸರಿ ಎಂದು ನಿಶ್ಚಯಿಸಲಾಗುವುದಿಲ್ಲ. ಒಂದುವೇಳೆ ನೃಪತುಂಗನಿಗೆ ಶ್ರೀವಿಜಯ ಎಂಬ ಬಿರುದೂ ಇದ್ದಿರಬಹುದು ಎಂದರೆ ಅದಕ್ಕೆ ಶಾಸನಗಳಲ್ಲಿಯಾಗಲಿ ಈ ಗ್ರಂಥದಲ್ಲಿಯಾಗಲಿ ಆವ ಆಧಾರವೂ ಸಿಕ್ಕುವುದಿಲ್ಲ. ಈ ಗ್ರಂಥವು ನೃಪತುಂಗನ ಆಶ್ರಿತನಾದ ಕವೀಶ್ವರನಿಂದ ರಚಿತವಾಯಿತು, ಎಂಬ ಡಾಕ್ಟರ್ ಫ್ಲೀಟರ ಅಭಿಪ್ರಾಯವು ಹಿಂದೆಯೇ ಸೂಚಿಸಲ್ಪಟ್ಟಿದೆ.[2]

ಈ ಗ್ರಂಥದಲ್ಲಿ ಅನೇಕಪದ್ಯಗಳು ಉದಾಹೃತನಾಗಿವೆ. ಇವು ಪ್ರಾಯಶಃ ನೃಪತುಂಗನಿಗೆ ಹಿಂದೆ ಇದ್ದ ಕವಿಗಳ ಗ್ರಂಥಗಳಿಂದ ಉದ್ಧೃತವಾಗಿರಬಹುದು. ಈ ಪದ್ಯಗಳಲ್ಲಿ ರಾಮಾಯಣದ ಕಥೆಗೆ ಸಂಬಂಧಿಸಿದುವು ಕೆಲವಿವೆ. ಇದರಿಂದ ಈಗ ನಮಗೆ ದೊರೆತಿಲ್ಲದ ಆವುದೋ ಒಂದು ರಾಮಾಯಣವು ಆಕಾಲದಲ್ಲಿ ಇದ್ದಂತೆ ತೋರುತ್ತದೆ. ಈ ರಾಮಾಯಣದ ಪದ್ಯಗಳು **ನಾಗವರ್ಮನ** (ಸು. 990) **ಛಂದೋಂಬುಧಿಯಲ್ಲಿಯೂ** ಉದಾಹೃತವಾಗಿವೆ. ನೃಪತುಂಗನು ತನಗೆ ಹಿಂದೆ ಇದ್ದ ಭಾಷೆಯನ್ನು ಹಳಗನ್ನಡವೆಂದು ಹೇಳುವುದರಿಂದಲೂ ಇವನು ಉದಾಹರಿಸಿರುವ ಪದ್ಯಗಳ ಬಂಧಗೌರವದಿಂದಲೂ ಇವನ ಕಾಲಕ್ಕೆ ಬಹಳ ಹಿಂದೆಯೇ ಗ್ರಂಥರಚನೆ ಆರಂಭವಾಗಿ ಕನ್ನಡವು ಉತ್ತಮಸ್ಥಿತಿಗೆ ಬಂದಿದ್ದಿತೆಂದು ಊಹಿಸುವುದಕ್ಕೆ ಅವಕಾಶವಿದೆ.

ಇವನು ಕೆಲವು ಪದ್ಯಗಳಲ್ಲಿದ್ದ ದೋಷಗಳನ್ನು ತಿದ್ದಿ ಪರಿಷ್ಕರಿಸಿ ಬರೆದಿದ್ದಾನೆ. ಅವುಗಳಲ್ಲಿ ಮೂರು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

(1) ಅಡಸುಕುಮಾರನನಾಯತ। ತರಕಡೆಗಣ್ಣಿಂದೆ ನೋಡಿ ಕೆಳದಿಸಮೀತಂ।
ಪರಿಗತನಗೆಯಿಂದಿರ್ದೆಂ। ಗುರುನಾಣ್ಚರದಿಂದಮೆಜಗಿ ಮುಖತಾವರೆಯಂ॥ [3]

**ಅಶುದ್ಧ**

ನರಪತಿತನಯನನಾಯತ। ತರಳಾಪಾಂಗದೊಳೆ ನೋಡಿ ಕೆಳದಿಯರೊಡನಾಂ।
ಪರಿಗತಹಾಸ್ಯದೊಳಿರ್ದೆಂ। ಗುರುಲಜ್ಜಾಭರದಿನೆಜಗಿ ಮುಖಸರಸಿಜಮಂ॥ **ಶುದ್ಧ**

1. ಪುಟ 13.
2. ಪುಟ 14.
3. ಶಬ್ದಮಣಿದರ್ಪಣ, ಪುಟ 98.

(2) ಬಹಿರಂತರುಪವನಂಗಳೊ। ಳಹರಹಮಾಪರಭೃತಂಗಳುಲಿವ ರವಂಗಳ್।
ಸಹಸಾ ತಳಮುಳಗೊಳಿಸಿದು। ವಹೋಮನಂಗಳನಿತಸ್ತತಂ ವಿರಹಿಗಳಾ ॥ **ಅಶುದ್ಧ**

ಬಹಿರುದ್ಯಾನಾಂತರದೊಳ್। ಸಹಸೋದಿತಮುತ್ತಕೋಕಿಲೋಚ್ಚೈರ್ಧ್ವನಂ।
ಮುಹುರಾಕರ್ಣಿಸೆ ಪಡೆದ। ತ್ತಹರ್ನಿಶಂ ಪೆರ್ಚನಂತರಂಗಕ್ಕೆನ್ನಾ ॥ **ಶುದ್ಧ**

(3) ಬರಿಸಿ ಕ್ಷಿತಿಪತಿಯಂ ಸ್ಮೈ। ತಿರಿಸಿ ಪ್ರಿಯಕುಶಲವಾರ್ತೆಯಂ ಬಿಸಗೊಂಡು।
ಸ್ಥಿರಮಿರ್ದು ಪ್ರಭು ನುಡಿಯೆ। ಪ್ರರೂಢಮುದನಾದನಾತನೆಂಬುದು ದೂಷ್ಯಂ ॥[1]
**ಅಶುದ್ಧ**

ಕ್ಷಿತಿಪತಿಯಂ ಬರಿಸಿ ಜಗ। ನ್ನುತನಂ ಸಂತೈಸಿ ಕುಶಲವಾರ್ತಾಂತರಮಂ।
ಮಿತವಚನಂ ಬಿಸಗೊಂಡತಿ। ವಿತೀರ್ಣಮುದನಾದನಾತನೆಂಬುದುಮಾರ್ಗಂ ॥ **ಶುದ್ಧ**

ಶಬ್ದಾಲಂಕಾರವನ್ನು ವಿವರಿಸುವ ಎರಡನೆಯ ಪರಿಚ್ಛೇದದಿಂದ ನಾಲ್ಕು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

[2] ಮುನ್ನಂ ತನ್ನಂ ತಾನೆ ತಾನೇ। ಕೆನ್ನಂ ಕೆನ್ನಂ ನಿರಂತರಂ।
ಖಿನ್ನಂ ಬಂದಿರ್ಪನಂತಿನ್ನುಂ। ತನ್ನಂ ತನಗಮೇವಳೋ ॥ 4 ॥

ನಿನ್ನಂ ನಿನ್ನನೆನೇ ನಿನಾ। ನಾನಾನನನನನ್ನನಂ।
ನೀನೇ ನನ್ನನ್ನನಾನಾನಾ। ನಿನ್ನೀನೇನನನೂನನಂ ॥ 5 ॥

ಮಾನಿನೀ ಮುನ್ನಮಾಂ ನೀನೇ। ನೀನಾನಿನ್ನನುಮಾನಮೇಂ।
ಮಾನಮಾನಾನೆಮುನ್ನನ್ನೆಂ। ಮಾನಮಾನನಮುನ್ನಿನಾ ॥ 6 ॥

ಕೆಡಿಪಂ ಬಾರಗೇ ಮೆಯ್ಯಂ। ಕೆಡಿಪಂ ಕೆಡಿಪಂತೆ ಮುಂ।
ಕೆಡಿಪಂ ಪೋಕುಮೇ ತಾಮುಂ। ಕೆಡಿಸಲ್ ಸುಡಿಸೋಲಮೇ ॥ 7 ॥

ಇವನ ಬಂಧವನ್ನು ತೋರಿಸುವ್ರದಕ್ಕೆ ಎರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

ಕುಜುವಂತು ಪೆಜರಬಗೆಯಂ। ತೆಜಸಿವಿರೆ ಪೆಜರ್ಗಜುಪಲಾರ್ಪವಂ ಮಾತಜುವಂ।
ಕಿಜುದಜುೂಳಿ ಪಿರಿದುಮರ್ಧಮ। ನಜುಪಲ್ ಸೆಜುವಾತನಾತನಿಂದಂ ನಿಪುಣಂ ॥ 8 ॥

ನುಡಿಯಂ ಛಂದದೊಳೊಂದಿರೆ। ತೊಡರ್ಚಲಜುವಾತನಾತನಿಂದಂ ಜಾಣಂ।
ತಡೆಯದೆ ಮಹಾಧ್ವಕೃತಿಗಳ। ನೊಡರಿಸಲಾರ್ಪಾತನೆಲ್ಲರಿಂದಂ ಬಲ್ಲಂ ॥ 9 ॥

---

1. ಶಬ್ದಮಣಿದರ್ಪಣ. ಪುಟ 71.

2. ಇವುಗಳಲ್ಲಿ ತಪ್ಪು ಬಿದ್ದಿರುವಹಾಗೆ ತೋರುತ್ತದೆ; ಚೆನ್ನಾಗಿ ಅರ್ಥವಾಗುವುದಿಲ್ಲ.

## ಗುಣನಂದಿ. ಸು. 900.

**ಮಲ್ಲಿಕಾರ್ಜುನನು** (ಸು. 1245) ತನ್ನ **ಸೂಕ್ತಿಸುಧಾರ್ಣವ**ವೆಂಬ ಕರ್ಣಾಟಕಪದ್ಯಸಂಗ್ರಹದಲ್ಲಿ ಗುಣನಂದಿಯ ಗ್ರಂಥದಿಂದ ಪದ್ಯಗಳನ್ನು ಉದ್ಧರಿಸಿ ಬರೆದಿರುವಂತೆ ಹೇಳುತ್ತಾನೆ. **ಕೇಶಿರಾಜನು** (ಸು. 1260) ಪೂರ್ವದ ಕನ್ನಡ ಕವಿಗಳ ಗೋಷ್ಠಿಯಲ್ಲಿ ಇವನ ಹೆಸರನ್ನೂ ಸೇರಿಸಿ ಹೇಳಿದ್ದಾನೆ. **ನಂಜುಂಡನು** (ಸು. 1525) ತನ್ನ ಕುಮಾರರಾಮಕಥೆಯಲ್ಲಿ—

ಇಂಪುವಡೆದ ಕವಿತಾರಸಲಹರಿಯ । ಸೊಂಪಿನಿಂ ವಾದಿಗಳಿರ್ದೆಗೆ ।
ಕಂಪನವನು ಪುಟ್ಟಿಸುವ ಗುಣನಂದಿಯ । ನಾಂ ಪೊಗಳ್ವುವೆ ಬಲಗೊಂಬೆ ॥

ಎಂದು ಈತನನ್ನು ಹೊಗಳಿದ್ದಾನೆ. ಆದುದರಿಂದ ಈತನು ಕನ್ನಡದಲ್ಲಿ ಗ್ರಂಥಗಳನ್ನು ಬರೆದಿರುವುದರಲ್ಲಿ ಸಂಶಯವಿಲ್ಲ. **ಶಬ್ದಮಣಿದರ್ಪಣ**ದಲ್ಲಿ[1]—

ಚುರ್ಚಿದವೊಲ್ ಬಿಸಿಲಳುರೆಕೆ । ಮುಚ್ಚಿದ ತಳಿರಂತೆ ಸೊಂಪು ಗುಣನಂದಿ ***

ಎಂಬ ಕಂದಭಾಗವು ಉದಾಹರಿಸಿದೆ. ಇದು ಗುಣನಂದಿಕೃತವಾದ ಗ್ರಂಥದಿಂದ ತೆಗೆದುದೋ ಇಲ್ಲವೇ ಅವನ ವಿಷಯವಾಗಿ ಹುಟ್ಟಿರುವ ಬೇರೆ ಗ್ರಂಥದಿಂದ ತೆಗೆದುದೋ ತಿಳಿಯದು.

ಈತನು ಪೂಜ್ಯಪಾದನ ಜೈನೇಂದ್ರವ್ಯಾಕರಣಕ್ಕೆ ವ್ಯಾಖ್ಯಾನರೂಪವಾಗಿ ಪ್ರಕ್ರಿಯಾವತಾರ ಎಂಬ ಸಂಸ್ಕೃತ ಗ್ರಂಥವನ್ನು ಬರೆದಿದ್ದಾನೆ. **ಭಟ್ಟಾಕಳಂಕನು** (1604) ಈತನ ಹೆಸರನ್ನು ಹೇಳುವಾಗಲೆಲ್ಲಾ "ಭಗವಾನ್ ಗುಣನಂದಿಃ" ಎಂದು ಗೌರವಿಸುತ್ತಾನೆ. ಈತನನ್ನು ಭಾಮನು ವಾಲ್ಮೀಕಿಸೂತ್ರವ್ಯಾಖ್ಯಾನದಲ್ಲಿ ಸ್ತುತಿಸಿದ್ದಾನೆ.

ಇವನು ತರ್ಕವ್ಯಾಕರಣಶಾಸ್ತ್ರಗಳಲ್ಲಿ ಪಂಡಿತನೆಂದೂ, ಸಾಹಿತ್ಯವಿದ್ಯಾಪತಿಯೆಂದೂ, ಈತನಿಗೆ ಮುನ್ನೂರುಜನ ಶಿಷ್ಯರಿದ್ದರೆಂದೂ, ಅವರಲ್ಲಿ ದೇವೇಂದ್ರಮುನಿ ಪ್ರಖ್ಯಾತನಾದವನೆಂದೂ ಶ್ರವಣಬೆಳ್ಗೊಳದ 66, 117, 127 ನೆಯ ಶಾಸನಗಳಿಂದ ತಿಳಿಯಬರುತ್ತದೆ.[2] ಈ ಶಾಸನಗಳಲ್ಲಿ 127 ನೆಯದು 1115 ರಲ್ಲಿ

1. ಪುಟ 39.

2. ತಚ್ಛಿಷ್ಯೋ ಗುಣನಂದಿಪಂಡಿತಯತಿಶ್ಚಾರಿತ್ರಚಕ್ರೇಶ್ವರಃ ।
ತರ್ಕವ್ಯಾಕರಣಾದಿಶಾಸ್ತ್ರನಿಪುಣಸ್ಸಾಹಿತ್ಯವಿದ್ಯಾಪತಿಃ ॥
ಮಿಥ್ಯಾವಾದಿಮದಾಂಧಸಿಂಧುರಘಟಾಸಂಘಟ್ಟಕಂಠೀರವೋ ।
ಭವ್ಯಾಂಭೋಜದಿವಾಕರೋ ವಿಜಯತಾಂ ಕಂದರ್ಪದರ್ಪಾಪಹಃ ॥
ತಚ್ಛಿಷ್ಯಾಶ್ಚಿಶತಾ ವಿನೇಕವಿಧಯಶ್ಶಾಸ್ತ್ರಾಬ್ಧಿಪಾರಂಗತಾಃ ।
ತೇಷೂತ್ಕೃಷ್ಟತಮೋ ದ್ವಿಸಪ್ತತಿಮಿತಾಃ ಸಿದ್ಧಾಂತಶಾಸ್ತ್ರಾರ್ಥಕ ॥
ವ್ಯಾಖ್ಯಾನೇ ಪಟುವೋ ವಿಚಿತ್ರಚರಿತಾಸ್ತೇಷು ಪ್ರಸಿದ್ಧೋ ಮುನಿಃ ।
ನಾನಾನೂತನನಯಪ್ರಮಾಣನಿಪುಣೋ ದೇವೇಂದ್ರಸೈದ್ಧಾಂತಿಕಃ ॥

ಹುಟ್ಟಿರುವುದರಿಂದಲೂ ದೇವೇಂದ್ರಮುನಿಯಿಂದೀಚೆಗೆ ಈ ಶಾಸನದ ಕಾಲದವರೆಗೆ ಗುರುಪರಂಪರೆಯಲ್ಲಿ ಏಳುಜನವಿದ್ದಂತೆ ತಿಳಿಯಬರುವುದರಿಂದಲೂ ಈ ದೇವೇಂದ್ರಮುನಿ **ಆದಿಪಂಪನ** (941) ಗುರುವಾದ ದೇವೇಂದ್ರಮುನಿಯೇ ಆಗಿರಬೇಕು. ಈತನ ಗುರುವಾದ ಗುಣನಂದಿ ಬಹುಶಃ 900 ರಲ್ಲಿ ಇದ್ದಿರಬಹುದು.

---

## ಗುಣವರ್ಮ.

### ವಿಚಾರಂ.

ಈ ಹೆಸರಿನವರು ಇಬ್ಬರು ಜೈನಕವಿಗಳಿದ್ದಂತೆ ತಿಳಿಯಬರುತ್ತದೆ. ಹರಿವಂಶವನ್ನು ಬರೆದವನು ಒಬ್ಬ ಗುಣವರ್ಮನು; ಪುಷ್ಪದಂತಪುರಾಣವನ್ನು ಬರೆದವನು ಮತ್ತೊಬ್ಬನು. ಪುಷ್ಪದಂತಪುರಾಣವನ್ನು ಬರೆದ ಗುಣವರ್ಮನು ಪೂರ್ವಕವಿಗಳೆನ್ನು ಸ್ತುತಿಸುವ

ಅನುಗುಣಮಾಗಿ ಕೂಡೆ ಗುಣವರ್ಮನ ಪೆಯ್ದುರಿ ಪಂಪನೋಜೆ ಪೊ ।
ನ್ನನ ಪೊಸದೇಸೆ ರನ್ನನ ಗುಣೋನ್ನತಿಯುಗ್ಗಳನೊಳ್ಪು ನಾಗವ ॥
ರ್ಮನ ಬಹುರೀತಿ ನೇಮಿಯ ಚರಿತ್ರ್ತಿ ಜನ್ನಿಗಸಿಂಪು ನಾಗಚಂ ।
ದ್ರನ ರಸವತ್ತಿ ರಂಜಿಸುಗೆ ಸಿರ್ದಯಮೆನ್ನಯ ನವ್ಯಕಾವ್ಯದೊಳ್ ॥

ಎಂಬ ಪದ್ಯದಲ್ಲಿ ಒಬ್ಬ ಗುಣವರ್ಮನನ್ನು ಸ್ತುತಿಸುವುದರಿಂದ ಇವನಿಗೆ ಹಿಂದೆ ಒಬ್ಬ ಗುಣವರ್ಮನೆಂಬ ಕವಿ ಇದ್ದನೆಂಬುದು ಸ್ಪಷ್ಟವಾಗುತ್ತದೆ. ಈತನು ಅಗ್ಗಳನನ್ನೂ (1189) ಜನ್ನನನ್ನೂ (1209) ಸ್ತುತಿಸುವುದರಿಂದ ಆ ಕವಿಗಳಿಗಿಂತ ಈಚೆಯವನಾಗಿರಬೇಕು. ಅಲ್ಲದೆ ಮಲ್ಲಿಕಾರ್ಜುನನು (ಸು. 1245) ಇವನ ಪುಷ್ಪದಂತಪುರಾಣದಿಂದ ಪದ್ಯಗಳನ್ನು ಉದ್ಧರಿಸಿರುವುದರಿಂದ ಅವನಿಗೆ ಹಿಂದೆ ಇದ್ದಿರಬೇಕು. ಈ ಕಾರಣಗಳಿಂದ ಈತನು ಸುಮಾರು 1235 ರಲ್ಲಿ ಇದ್ದಿರಬಹುದು. ಹಿಂದಣ ಗುಣವರ್ಮನನ್ನು ನಯಸೇನನು (1112) ಸ್ತುತಿಸುವುದರಿಂದ ನಯಸೇನನಿಗಿಂತ ಅತನು ಹಿಂದಣವನೆಂಬುದು ವ್ಯಕ್ತವಾಗುತ್ತದೆ. **ಅಂತು ನಯಸೇನನಿಂದ ಸ್ತುತನಾದ ಗುಣವರ್ಮನಿಗೂ ಜನ್ನನನ್ನು ಸ್ತುತಿಸುವ ಗುಣವರ್ಮನಿಗೂ ಅವ ಸಂಬಂಧವೂ ಇಲ್ಲವೆಂಬುದು ಸ್ಪಷ್ಟವಾಗದೆ ಇರಲಾರದು.**

### ಗುಣವರ್ಮ I. ಸು. 900.

**ಕೇಶಿರಾಜನು** (ಸು. 1260) 118 ನೆಯ ಸೂತ್ರದ ಕೆಳಗೆ—"ಓಲ್ ಪರಮಾದಲ್ಲಿಯುಂ ದೀರ್ಘಮುಂಟು" ಎಂದು ಹೇಳಿ, "ಈಂದ ಪುಲಿಯಾವೊಲಿರ್ದಳ್—ಎಂದು ಗುಣವರ್ಮನ ಹರಿವಂಶಪ್ರಯೋಗಂ" ಎಂಬುದರಿಂದ ಈತನು ಹರಿವಂಶವೆಂಬ ಗ್ರಂಥವನ್ನು ಬರೆದಿರುವಂತೆ ತಿಳಿಯುತ್ತದೆ. ಅಲ್ಲದೆ—

ಗುಣವರ್ಮಂ ಸತ್ಕವಿತಾ । ಗುಣಮುಂ ಭವ್ಯತ್ವಗುಣಮುಮಾತ್ಮಯಶೋರ ।
ಕ್ಷಣಮೆನೆ ಮೆಱೆದಂ ಪೆಸರಿಂ । ಪ್ರಣುತಮೆನೆ ಪೇೞ್ದು ನೇಮಿನಾಥಾನ್ವಯಮಂ ॥

ಎಂಬ **ಪಾರ್ಶ್ವಪಂಡಿತನ** (1205) ಪದ್ಯದಿಂದಲೂ ಈತನು ನೇಮಿನಾಥ ಪುರಾಣವನ್ನು—ಎಂದರೆ **ಹರಿವಂಶವನ್ನು**—ಬರೆದನೆಂಬುದು ವ್ಯಕ್ತವಾಗುತ್ತದೆ. ಮತ್ತು **ಅಭಿನವವಾದಿವಿದ್ಯಾನಂದನ** (1533) **ಕಾವ್ಯಸಾರದಲ್ಲಿ** ಶೂದ್ರಕವೆಂಬ ಗ್ರಂಥವು ಗುಣವರ್ಮನಿಂದ ರಚಿತವಾದುದೆಂದು ಕೆಲವು ಕಡೆ ಹೇಳಿ ಆ ಗ್ರಂಥದಿಂದ ಪದ್ಯಗಳು ಉದಾಹೃತವಾಗಿರುವುದರಿಂದ ಈತನು **ಶೂದ್ರಕ**ವೆಂಬ ಗ್ರಂಥವನ್ನೂ ಬರೆದಿರಬೇಕು. **ನಾಗವರ್ಮನು** II (ಸು. 1145) ಭಾಷಾ ಭೂಷಣದಲ್ಲಿ—

ಎನಿತ್ತೆನಿತ್ತಂ ಬುಜಪತ್ರನೇತ್ರೆಯಾ । ಘನಸ್ತನಂಗಳ್ ಬಳೆಗುಂ ಕಿರಾತಯಾ ।
ಅನಿತ್ತನಿತ್ತಂ ವನದೊಳ್ ವನೇಚರಂ । ತನಗ್ತು ಬಿಲ್ಲಾನದನೆತ್ತೆ ಕೇಸುಗುಂ ॥

ಎಂಬ ಪದ್ಯವನ್ನು ಉದಾಹರಿಸಿ "ಗುಣವರ್ಮಕವೇರ್ಭುವನೈಕವೀರಸ್ಯ ಪ್ರಯೋಗಃ" ಎಂದು ಹೇಳುತ್ತಾನೆ. ಈ ಪದ್ಯವು ಈತನ ಆವ ಗ್ರಂಥದಿಂದ ಉದ್ಧೃತವಾಗಿದೆಯೋ ತಿಳಿಯದು. ನಾಗವರ್ಮನು ಹೇಳುವುದನ್ನು ನೋಡಿದರೆ ಇವನಿಗೆ ಭುವನೈಕವೀರ ಎಂಬ ಬಿರುದೂ ಇದ್ದಂತೆ ತಿಳಿಯುತ್ತದೆ. ಇದಲ್ಲದೆ ನಾಗವರ್ಮನು II **ಕಾವ್ಯಾವಲೋಕನ**ದಲ್ಲಿ ಅಧ್ವನ್ ಶಬ್ದಕ್ಕೆ ಪ್ರಯೋಗವನ್ನು ಹೇಳುವಾಗ—

ಪ್ರಣುತಗುಣರೆನಿಪ ವಿಬುಧಾ । ಗ್ರಣಿಗಳ್ ಕೆಯ್ಕೊಂಡು ಪೊಗೞ್ದಿ ಸಲೆನೆಗೞ್ದುವು ಧಾ ।
ರಿಣಿಯೊಳಗೆ ನಾಗವರ್ಮನ । ಗುಣವರ್ಮನ ಶಂಭುವರ್ಮನಧ್ವಾನಂಗಳ್ ॥

ಎಂದು ಬರೆದಿದ್ದಾನೆ. ಇದರಿಂದ ಈ ಗುಣವರ್ಮನು ಲಕ್ಷಣಗ್ರಂಥಕಾರನಾಗಿಯೂ ಇದ್ದಂತೆ ತೋರುತ್ತದೆ. **ನಯಸೇನನು** (1112)—'ಗುಣವರ್ಮನ ಜಾಣ್ ನೆಲಸಿರ್ಕೆ ಮತ್ಕೃತಿಯೊಳ್' ಎಂದೂ **ರುದ್ರಭಟ್ಟನು** (ಸು. 1180)—'ಗುಣ ವರ್ಮನ ಬಂಧಗೌರವಂ ಇರ್ಕೆ ಮತ್ಕೃತಿಯೊಳ್' ಎಂದೂ ಇತರಕವಿಗಳು ಬೇರೆಬೇರೆ ವಿಧವಾಗಿಯೂ ಈತನ ಕವಿತಾಚಾತುರಿಯನ್ನು ಹೊಗಳಿರುವುದರಿಂದ ಈತನು ಬಹಳ ಪ್ರಸಿದ್ಧಕವಿಯಾಗಿದ್ದಿರಬೇಕು. **ಶೂದ್ರಕ**ಗ್ರಂಥದಿಂದ ಕಾವ್ಯ ಸಾರದಲ್ಲಿ ಉದಾಹೃತವಾಗಿರುವ ಪದ್ಯಗಳಲ್ಲಿ ಕೆಲವು **ಮಲ್ಲಿಕಾರ್ಜುನನ** (ಸು. 1245) **ಸೂಕ್ತಿಸುಧಾರ್ಣವದಲ್ಲಿಯೂ** ದೊರೆಯುತ್ತವೆ. ಈ ಪದ್ಯಗಳಲ್ಲಿ **ಕವಿ ಮಹೇಂದ್ರಾಂತಕ, ಗಂಗಚಕ್ರಾಯುಧ, ಗಂಗರಜರ್ಜುನ, ಕಾಮದ** ಎಂಬುವೇ ಮೊದಲಾದ ಬಿರುದುಗಳುಳ್ಳ ಒಬ್ಬ ಗಂಗರಾಜನನ್ನು ವಿಶೇಷವಾಗಿ ಸ್ತುತಿಸಿ

ಶೂದ್ರಕರಾಜನಿಗೆ ಹೋಲಿಸಿದ್ದಾನೆ. ಗಂಗರಾಜರಲ್ಲಿ ಮಹೇಂದ್ರಾಂತಕ, ಕಾಮದ ಎಂಬ ಬಿರುದುಗಳುಳ್ಳವನು 886 ರಿಂದ 913 ರ ವರೆಗೆ ಆಳಿದ ಎರೆಯಪ್ಪನು ಒಬ್ಬನೇ ಆದುದರಿಂದ ಕವಿ ಈ ರಾಜನ ಆಶ್ರಿತನಾಗಿದ್ದಿರಬೇಕು. ಆದುದರಿಂದ ಇವನ ಕಾಲವು ಸುಮಾರು 900 ಆಗಿರಬಹುದು.

ಶೂದ್ರಕದಿಂದ ಕಾವ್ಯಸಾರದಲ್ಲಿ ಅನುವಾದಿಸಿರುವ ಪದ್ಯಗಳಲ್ಲಿ ಕೆಲವನ್ನು ಉದ್ಧರಿಸಿ ಬರೆಯುತ್ತೇವೆ :—

ಸಮುದ್ರ.

ಗಂಭೀರಸ್ಫಾರವೇಲಾಬಹಲಪರಿವೃತೋಲ್ಲೋಲಕಲ್ಲೋಲಮಾಲಾ ।
ರಂಭಪ್ರೋದ್ಭೀನಫೇನಪ್ರಬಲಜಲಚರೋಲ್ಲೂಶಪಾತೀನಶುಂಭ ॥
ತ್ಕುಂಭೀರಾಭೀಳನಕ್ರಪ್ರಕರಮಕರನೀರೇಭರತ್ನಪ್ರವಾಳೋ ।
ಜೃಂಭತ್ತೋದ್ಭಾಸಿವೀಚೀನಿಚಯಘನಘನಾರಾವರೌದ್ರಂ ಸಮುದ್ರಂ ॥ 10 ॥

ಮಿಳಿರ್ವರುಣಧ್ವಜಂಗಳ ನೆಲ್ಲಿಲ್ಲಗಳೊಂದೆರೆಗೆತ್ತು ವಾರ್ಧಿಯೊಳ್ ।
ಪೊಳೆವೆಳವಾಳೆಗಳ್ ಕರ್ದುಕೆ ಬಾಳೆಗಳಂ ತಿಮಿ ನುಂಗೆ ನುಂಗಿದಾ ॥
ಗಳೆ ತಿಮಿಯುಂ ತಿಮಿಂಗಿಳನಡಂಗುವಿನಂ ತವೆ ನುಂಗೆ ತತ್ತಿಮಿಂ ।
ಗಿಳನುಮನಾತಿಮಿಂಗಿಳಗಿಳಂ ನೆಜ ನುಂಗುವುದೊಂದು ತಾಣದೊಳ್ ॥ 11 ॥

ನದಿ.

ಪೆಜಗಸಿತಾಗಿ ಮುಂತಗಲಿತಪ್ಪುದಜಂದೆ ಧರಾತಳಂದಗು ।
ಳ್ವಿಜಪುದಜಂದೆ ಕೊಂಕಿ ಪರಿಯುತ್ತಿರವಿಂದೆ ಕೊಲಲ್ಕಿವೊಕ್ಕಳಂ ॥
ನೆಜವುದಜಂದೆ ಸಪ್ತಮುಖದಿಂದೆ ವಿಷೋನ್ನತಿಯಿಂದೆ ಭೋಗದೊಳ್ ।
ತುಜುಗಿರವಿಂದೆ ಪೋಲ್ತುದು ಮಹಾನದಿ ರುಂದ್ರಫಣೇಂದ್ರರಾಜನಂ ॥ 12 ॥

ಸೂರ್ಯೋದಯ.

ಪುದಿದು ಕವಿದಿಡಿದ ತಮದೊ। ಡ್ಡಡಿರ್ವಿನವೊರ್ಮೊದಲೊಳಿರ್ದ ಕಲ್ಪಿವೆಯಸನಿವೋಲ್।
ಕದಿರ್ಗಳೊಳೆ ತುಜುಗಿ ಮೂಡಿದ । ನುದಯಾದ್ರಿಯೊಳರುಣತರುಣಕಿರಣಪ್ರಸರು
ಸೂರ್ಯಾಸ್ತ. ॥ 13 ॥

ಕಿರಣಂಗಳೆ ಕಾವುಗಳೆನೆ। ಹರಿದಶ್ವಂಗಳೆ ಪಸುರ್ತ್ತ ಪಸುರೆಲೆಯೆನೆ ತೋ ।
ರ್ಪರುಣದಿನಮಣಿ ಬಯಲ್ವಾ । ವರೆಯನೆ ಪೋಲ್ತಿರ್ದನಪರಗಿರಿವರಶಿರದೊಳ್ ॥14 ॥

ಮುಂದಾಗಿ ದಿನಪನುದಯಾ । ನಂದದೊಳಸ್ತಮಯಸಮಯದೊಳ್ ಸಂಜೆ ಕರಂ ।
ಪಿಂದುಳ್ಕಿದುದಂತೆ ಕೆಲರೊಡ । ವಂದಾದುದಯದೊಳೆ ಸಾರ್ವರೆಡರೊಳಗಲ್ವರ್
ಚಂದ್ರ. ॥ 15 ॥

ಒಡನೆ ಸುರಾಸುರರ್ ಕನಕಪರ್ವತಮಂ ಕಡಗೋಲ ಮಾಡಿ ಮೇಣ್ ।
ಪೆಡೆ ಪಲವಪ್ಪ ವಾಸುಕಿಮಹೋರಗನಂ ಕಡಗಣ್ಣಿಮಾಡಿ ಪಾ ॥

ಲ್ಗಡಲನುಪಾಯದಿಂ ಕಡೆಯೆ ರಾಹುಗೆ ವಾಯುಪಥಾಗ್ರಮೆಂಬ ಪೆ।
ರ್ಮಡಕೆಯೊಳಕ್ಕಿ ಕೊಟ್ಟ ಪೊಸಬಿಣ್ಣೆವೊಲಿರ್ದುದು ಚಂದ್ರಮಂಡಲಂ ॥ ॥ 16 ॥

## ಅಮಾತ್ಯಲಕ್ಷಣ.

ಕರಿಯವೊಲಪ್ಪುದಾಳ್ದನರಸರ್ಕ ? ಗಿವಲ್ಲಿ ನರೇಂದ್ರನರ್ಥಮಂ ।
ಪೊರೆದಿರವಲ್ಲಿ ಪಂಕರುಹಪತ್ರದ ನೀರವೊಲಪ್ಪುದೆಬ್ಬಿ ಸು ॥
ಟ್ಟುರೆಯವೊಲಪ್ಪುದರ್ಥಮನುಪಾರ್ಜಿಸುವಲ್ಲಿ ನಿಜಾಭಿಮಾನಮಂ ।
ಧರಿಯಿಸುವಲ್ಲಿ ಚಾಡಗೆವೊಲಪ್ಪುದು ತಪ್ಪದಮಾತ್ಯಲಕ್ಷಣಂ ॥ ॥ 17 ॥

## ನೀತಿ.

ಒಡನೆ ದರಿದ್ರರೆಲ್ಲಮಭಿಮಾನಿಗಳಪ್ಪೊಡಮಾಳ್ಪನಿಚ್ಛೆಯಂ ।
ನುಡಿವನರೆಲ್ಲಮಾತನೆಡರೊಳ್ ನಿಲಲಾರ್ಪೊಡಮರ್ಥರಾಶಿಯಂ ॥
ಪಡೆವವರೆಲ್ಲಮೋಗಡಿಸದೀವೊಡಮಾಜಿಯೊಳುರ್ಚಿ ಕೆಯ್ವುವಂ ।
ಪಿಡಿವವರೆಲ್ಲಮಣ್ಮುವೊಡವಿಾಯುಗಮೇಕೆ ಕನಿಷ್ಠಮಪ್ಪುದೋ ॥ ॥ 18 ॥

## ಕಾಡು.

ಗಿರಿಯಿದು ಕರಿಯಿದು ಕರಿಯಿದು । ಗಿರಿಯಿದು ಗಿರಿಯಲ್ತು ಕರಿಯಿದಲ್ತು ಕರೀಂದ್ರಂ;
ಗಿರಿವರವಿದು ಕರಿವರಮೆಂ । ದರಿದಜಯಲ್ ಗಹನದೊಳಗೆ ಗಿರಿಯಂ ಕರಿಯಂ ॥ 19 ॥

## ಸೂಕರ

ವಿಜಿಗುವ ದಾಡೆಯಿಂದಣೆದು ಪೆರ್ದರಿಯಂ ತರದಿಂದವೆತ್ತುತುಂ ।
ತುಜಿತುಜಿತೀಂಬ ಕಂಧರಮನೊತ್ತರಗೊಂಡು ಮಹಾವಮಹೀಜದೊಳ್ ॥
ತಜಿತಜನಾಗೆ ಮಾಜಿಜಿಸುತುಂ ಮಲೆಯುತ್ತೊಲೆಯುತ್ತುಮಲ್ಲಿಕೆಯ್ ।
ಪಜ್ಜದ ಗಜೇಂದ್ರನಂತೆ ಬರುತಿರ್ದುದು ಭೀಕರನೊಂದು ಸೂಕರಂ ॥ ॥ 20 ॥

## ಸೌಂದರ್ಯ.

ಸಣ್ಣಂನಡು ತಿಣ್ಣಂ ಮೊಲೆ । ಬಣ್ಣಂ ಪಸುರ್ವೆಸಜೆ ಬಣ್ಣಮಧರಂ ಮಧುರಂ ।
ಕಣ್ಣಲರ್ಗಣ್ಣೆಮೆ ಮುಂದಂ । ಬಣ್ಣಿಸಲರಿದಬ್ಜಜಂಗಮಾಕೆಯ ರೂಪಂ ॥ ॥ 21 ॥

## ಶೂದ್ರಕನ ಬೇಟೆ.

ತುಂಗಗಿರಿಶಿಖರದಿಂದಂ । ಲಂಘಿಸಿ ಶೂದ್ರಕನ ಪೊಳೆವ ಸುರಗಿಯ ನೊನೆಯೊಳ್ ।
ಪೊಂಗಿ ಸೊಡರ್ಗುಡಿಯ ಮೇಲೆಪ । ತಂಗಂ ಪಾಯ್ವಂತೆ ಪಾಯ್ದು ಬಿಲ್ದುದು ಸಿಂಗಂ
——— ॥ 22 ॥

## ಕವಿವ್ಯಾಸ. ಸು. 900.

**ಆದಿಪಂಪನು** (941) ತನ್ನ **ಭಾರತದಲ್ಲಿ**—ವ್ಯಾಸಮುನೀಂದ್ರರುಂದ್ರವಚನಾವ್ಯಳವಾರ್ಧಿಯನೀಸುವೆಂ ಕವಿವ್ಯಾಸನೆನೆಂಬ ಗರ್ವಮೆನಗಿಲ್ಲ—ಎಂದು.

ಹೇಳುತ್ತಾನೆ. ಕವಿವ್ಯಾಸನೆನೆಂಬ ಗರ್ವಮೆನಗಿಲ್ಲ ಎಂಬುದರಿಂದ ಇವನಿಗೆ ಹಿಂದೆ ಆವನೋ ಒಬ್ಬ ಕವಿ ಕನ್ನಡದಲ್ಲಿ ಒಂದು ಭಾರತವನ್ನು ಬರೆದು ಕವಿವ್ಯಾಸನೆಂಬ ಹೆಸರಿಟ್ಟುಕೊಂಡಿದ್ದಂತೆ ಊಹಿಸಬಹುದಾಗಿದೆ. ತನಗೆ ಹಿಂದೆ ಅನೇಕರು ಭಾರತವನ್ನು ಬರೆದಿರುವಂತೆ ಪಂಪನೇ ಹೇಳಿದ್ದಾನೆ. ಅವರಲ್ಲಿ ಈ ಕವಿವ್ಯಾಸನೂ ಒಬ್ಬನಾಗಿರಬಹುದು. ಇವನೇ ಕುಮಾರವ್ಯಾಸನೆಂದು ಕೆಲವರು ಭ್ರಮಿಸುತ್ತಾರೆ. ಆದರೆ ಕುಮಾರವ್ಯಾಸನು ಆಧುನಿಕನು; ಸುಮಾರು 1430 ರಲ್ಲಿ ಇದ್ದನು. ಕವಿವ್ಯಾಸನ ಕಾಲವು ಸುಮಾರು 900 ಆಗಿರಬಹುದು.

---

## ಶ್ರೀವಿಜಯದಂಡನಾಥ. ಸು. 915.

ಕಡಪಾ ಡಿಸ್ಟ್ರಿಕ್ಟ್ ದಾನವುಲಪಾಡು ಎಂಬ ಗ್ರಾನುದಲ್ಲಿರುವ ಒಂದು ಶಾಸನದಲ್ಲಿ[1] ಈತನನ್ನು 'ಅನುಪಮಕವಿ' 'ಅಜಿತವಿಂಗೋಜ' ಎಂದು ಹೊಗಳಿದೆ. ಈತನು ಕವಿಯಾಗಿದ್ದಿರಬಹುದು; ಆವ ಗ್ರಂಥವನ್ನು ಬರೆದಿದ್ದಾನೆಯೋ ತಿಳಿಯದು. ಈತನು ಜೈನನು, ಬಳಿಕುಲದವನು. ಇವನು ರಾಷ್ಟ್ರಕೂಟರಾಜನಾದ ಇಂದ್ರ III (915–917) ಎಂಬವನಲ್ಲಿ ದಂಡನಾಯಕನಾಗಿದ್ದಂತೆಯೂ ಬಹಳ ಪರಾಕ್ರಮಶಾಲಿಯಾಗಿದ್ದಂತೆಯೂ ಕೊನೆಗೆ ಸನ್ಯಾಸನವಿಧಿಯಿಂದ ನಿರ್ವಾಣವನ್ನು ಪಡೆದಂತೆಯೂ ಮೇಲಣ ಶಾಸನದಿಂದ ತಿಳಿಯುತ್ತದೆ. ಈ ಶಾಸನದಿಂದ ಇವನ ಸ್ತುತಿರೂಪವಾದ ಕೆಲವು ಪದ್ಯಗಳನ್ನು ಕೆಳಗೆ ಬರೆಯುತ್ತೇವೆ:—

ಪತಿಯ ಬೆಸದಿಂದಮಹಿತರ । ನತಿಕೋಪದಿನಿಕ್ಕಿ ಗೆಲ್ದು ಪರಿಪಾಳಿಸಿದಂ ।
ಚತುರುದಧಿವಲಯಮೆಲ್ಲಮ । ನತಿರಥನೀದಂಡನಾಯಕಂ ಶ್ರೀವಿಜಯಂ ॥ 23 ॥

ತುರಗದಬ್ರಂಗಳನೊಡ್ಡಿದ । ಕರಿಘಟೆಯಂ ಪಿರಿಯ ನೆರವಿಯಂ ಬಲ್ಲಣಿಯಂ ।
ಧುರದೆಡೆಯೊಳಿಜ್ಜದು ಗೆಲ್ದುಂ । ಕರದಸಿ ಕರಮುರಿದು ರಣದೊಳನುಪಮಕವಿಯೂ
॥ 24 ॥

ಅಟ್ಟವಿಧಕರ್ಮಮೆಲ್ಲಮ । ನಟ್ಟುಂಬರಿಗೊಂಡು ಕಿಡಿಪೆನೆಂಬುದೆ ಬಗೆಯಂ ।
ಪುಟ್ಟದನುದಾತ್ತಸತ್ವಂ । ನೆಟ್ಟನೆ ವಿಬುಧೇಂದ್ರವಂದ್ಯನಜಿತವಿಂಗೋಜಂ ॥ 25 ॥

ತಾನಜ್ಜದು ತೊಜ್ಜಿದು ನೆಟ್ಟನೆ । ಮಾನಸವಾಙ್ಮೀವುದೆಂದು ಸನ್ಯಾಸನದೊಳ್ ।
ಮಾನಸಿಕೆಗಿಡದೆ ಕೊಂಡೊನ । ನೂನಸುಖಾಸ್ಪದಮನಬ್ಜಿಯೊಳ್ ಶ್ರೀವಿಜಯಂ
॥ 26 ॥

---

1. *Epigraphia Indica*, X, 150.

## ರವಿನಾಗಭಟ್ಟ: 929.

ಈ ಕವಿ ಧಾರ್ವಾಡಜಿಲ್ಲೆಯ ನರುಗುಂದದ ಸಮೀಪದಲ್ಲಿರುವ ಒಂದು ಶಾಸನವನ್ನು[1] ಬರೆದುದಾಗಿ ಆ ಶಾಸನದ ಕೊನೆಯಲ್ಲಿರುವ

ಬರೆದೊನಿದಂ ಶ್ರೀವಿಜಯಂ । ನೆರೆದಿನ್ನೂರಿರ್ಪದಿಂಬರುಂ ಪೇಟ್ಪಿನೆ ತಾಂ ।
ಪರಿಣತನಿಂಕಬ್ಬಂಗಳ । ನೊರೆದಂ ರವಿನಾಗಭಟ್ಟನತ್ಯಾದರದಿಂ ॥

ಎಂಬ ಪದ್ಯದಿಂದ ವ್ಯಕ್ತವಾಗುತ್ತದೆ. ಈ ಶಾಸನವು ರಾಷ್ಟ್ರಕೂಟರಾಜನಾದ 3 ನೆಯ ಪ್ರಭೂತವರ್ಷನ (4 ನೆಯ ಗೋವಿಂದನ) ಆಳಿಕೆಯಲ್ಲಿ ಶಕ 841 ರಲ್ಲಿ ಬರೆದುದು. ಇದರಲ್ಲಿ ಕಂಠಮಗೆರೆಗೆ ಕೆಲವರು ಭೂಮಿಯನ್ನೂ ಆಯವನ್ನೂ ಬಿಟ್ಟಂತೆ ಹೇಳಿದೆ. ರವಿನಾಗಭಟ್ಟ ಎಂಬಹೆಸರನ್ನು ನೋಡಿದರೆ ಈತನು ಬ್ರಾಹ್ಮಣನಾಗಿರಬಹುದೆಂದು ತೋರುತ್ತದೆ. ಹಾಗಿದ್ದ ಪಕ್ಷದಲ್ಲಿ ಈತನೇ ನಮಗೆ ತಿಳಿದು ಬಂದಿರುವ ಬ್ರಾಹ್ಮಣಕವಿಗಳಲ್ಲಿ ಆದಿಕವಿ. ಇವನು ಆದಿಪಂಪನ (902–941) ಸಮಕಾಲದವನು. ಶಾಸನದ ಪದ್ಯಗಳನ್ನು ನೋಡಿದರೆ ಈತನು ಪ್ರೌಢಕವಿಯೆಂಬುದು ಸ್ಪಷ್ಟವಾಗುತ್ತದೆ. ಈ ಕವಿಯ ಬಂಧವನ್ನು ತೋರಿಸುವುದಕ್ಕಾಗಿ ಈ ಶಾಸನದ ಬಹಳ ಭಾಗವನ್ನು ಕೆಳಗೆ ಬರೆಯುತ್ತೇವೆ:—

ಸ್ವಸ್ತಿ ಪ್ರಭೂತವರ್ಷಂ । ವಿಸ್ತೃತಕುವಳಯಮನುತ್ತರೋತ್ತರವಿಭವ ।
ಪ್ರಸ್ತುತ್ಯತೆಯಿಂ ರಕ್ಪಿಪ । ವಿಸ್ತರದಿಂದೆಂಟನೂಜನಾಲ್ವತ್ತವು ತಾಂ ॥ 27 ॥
ಶಕಕಾಲಂಗಳ್ ವರ್ಷಂ । ಪ್ರಕಟಂ ಪೆಸರಿಂ ಪ್ರಮಾಥಿ ವರ್ತಿಸೆ ದಿನಪಂ ।
ಮಕರಕ್ಕೆ ವರ್ಪ ಸಂಕ್ರಮ । ಣಕಾಲದೊಳ್ ಕೂಡೆ ಬಂದ ಪೌಷದ ತಿಥಿಯೊಳ್॥ 28 ॥
ಪನ್ನಿರ್ಮತ್ತರ್ ಕೆಯ್ಯಂ । ಮಾನ್ಯಂಗುಡುಗೆಂದು ಪೇಟ್ಪಿವೋ (?) ರನ ಬಿಸದೊಳ್ ।
ನನ್ನಿವೆಡೆಂಗಂ ಲಿ(ಂಗಮ್ ?) । ತನ್ನೆಟ್ಟ್ಯಾಯೆ ಕೊಟ್ಟು ಕೆಜಿಕೆಗೆ ಯಶಮಂ ಪಡೆದಂ
॥ 29 ॥
ವಿಪ್ರರ ವಿವಾಹಮೂರೊಳ । ಗಪ್ಪನಿತಜಿಳೊಳೆಲ್ಲಮೊಸಗೆದ್ಯಮ್ಮಂ ಮೂಱಂ ।
ತಪ್ಪದೆ ಮಾಣಿಯೊಳಿರಡಂ । ಕೆಪ್ಪಿದರೀಶೂದ್ರಗಣದ ಮದುವೆಯೊಳೊಂದಂ ॥ 30 ॥
ಪ್ರಾಯಶ್ಚಿತ್ತನಮಿತ್ತದೊ । ಳಾಯದ ಪಣಮೆನಿತನಿತ್ತುಮೂರೊಳ್ ಸಹಿರ ।
ಣ್ಯಾಯದ ಪಣಮುಂ ಪೆರ್ಗಱ । ಗಾಯಮಿದೆಂದೊಸೆದು ಕೊಟ್ಟೊರೀದ್ವಿಜಮುಖ್ಯರ್
॥ 31 ॥
ನೆಜಱೆಯೆ ಗುಣಾಢ್ಯರ್ ಕಂಠಮ । ಗೆಜಱಿಗನಿತುಂ ದ್ರವ್ಯದಾಯಮುಂ ಕೊಟ್ಟವರ್ಗಳ್ ।
ತಜಱಸಂದೀಶಾಸನಮಂ । ನಿಜಱಿಸಿದರಾಚಂದ್ರತಾರಕಾಂತಂಬರೆಗಂ ॥ 32 ॥
ಮಾತಿನೊಳೀನೀಸ್ಥಿತಿಯಂ । ಘಾತಿಸಿ ಕೆಡಿಸಿದ ನರಂ ಚಿರಂ ಪಂಚಮಹಾ ।
ಪಾತಕನ ಪೋದ ಲೋಕ । ಕ್ಕಾತಂ ತಾಂ ಪೋಕುಮೆಂದೊಡದುವೇಂ ಪಿರಿದೇ ॥ 33 ॥

---

1. *Ind. Ant.*, XII, 223.

## ಕವಿರಾಜರಾಜ. 930.

ಈತನು ಧಾರ್ವಾಡಜಿಲ್ಲೆಯ ಕಳಸದಲ್ಲಿರುವ ಒಂದು ಶಾಸನವನ್ನು[1] ಬರೆದು ದಾಗಿ ಆ ಶಾಸನದ ಕೊನೆಯಲ್ಲಿರುವ

ಕವಿರಾಜರಾಜವಿಬುಧ। ಪ್ರವರಂ ಶ್ರೀಕಾಡಿಯೂರನಲ್ಲಿಯ ಕಮಲೋ।
ದ್ಭವವಂಶಪ್ರೋತ್ತಮರಂ ; ನವೀನವರ್ಣನೆಯಿನೆಸೆಯಲಭಿವರ್ಣಿಸಿದಂ ॥

ಎಂಬ ಪದ್ಯದಿಂದ ತಿಳಿಯುತ್ತದೆ. ಈ ಶಾಸನವು ರಾಷ್ಟ್ರಕೂಟರಾಜನಾದ ಗೊಜ್ಜಿಗದೇವನ ಅಥವಾ 4 ನೆಯ ಗೋವಿಂದನ (918—933) ಆಳಿಕೆಯಲ್ಲಿ ಬರೆದುದು. ಇದರಲ್ಲಿ ರೇವದಾಸದೀಕ್ಷಿತ, ವೀಸೋತ್ತರದೀಕ್ಷಿತ ಎಂಬ ಇಬ್ಬರು ದಂಡನಾಯಕರಿಗೆ ದೊರೆ ಎರೆಯನಕಾಡಿಯೂರೆಂಬ ಗ್ರಾಮವನ್ನು ಸರ್ವ ನಮಸ್ಯವಾಗಿ ಶಕ 851 ರಲ್ಲಿ ಕೊಟ್ಟಂತೆ ಹೇಳಿದೆ. ಈ ಶಾಸನದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ :—

### ಗೊಜ್ಜಿಗದೇವ.

ನಗರಾಜಂ ಧೈರ್ಯದೊಂದೇಟ್ಟಿಗ್ಗಿಯನವನಿತಳಂ ಕ್ಷಾಂತಿಯೊಂದುರ್ವನಂಭೋ।
ಧಿ ಗಭೀರೋದ್ವಾನಿಯೊಂದುನ್ನತಿಯನೆಸೆವಿನಂ ತಾಳ್ದಿದತ್ತೊಳ್ಪಿನಿಂ ಗೊ ॥
ಜ್ಜಿಗದೇವಂ ಕೊಟ್ಟೊಡೆಂದುತ್ತಮಬುಧಜನಂ ತಮ್ಮ ದೊಂದಲ್ಲಿಜ್ಜಿಂದಂ।
ಪೊಗಲ್ಪಿಲ್ ಬಾಪ್ಪಪ್ಪುಕೆಯ್ದುಂ ನೃಪಗುಣಗಣಮಂ ರಟ್ಟಕಂದರ್ಪದೇವಂ ॥ 34 ॥

ಬಿಸೆದೊಡೊಸೆದೊಡೆ ಕೊಳಲ್ ರ। ಕ್ಷಿಸಲಂತಕರಾಜನಬ್ಜಸಂಭವನೆನಲೇ।
ವಸುಧಾತಳದೊಳ್ ಕೋಪ। ಪ್ರಸಾದಮಂ ಪೊಗಲ್ಪಿಲಾರ್ಪರಾರ್ ಗೊಜ್ಜಿಗನಾ॥ 35 ॥

### ಎರೆಯನಕಾಡಿಯೂರು.

ತುಱುಗಿ ಕವಲ್ತು ಕತ್ತಲಿಪ ಚೂತಕುಜಂಗಳೊಳೂಂದಿ ಕಂಪಿನೊಳ್।
ನೆಱೆದು ರಸಂಗಳಂ ತಳೆದ ಪಣ್ಗೊಲಿಯಂ ಗಿಳಿವಿಂಡು ಚಂಚುವಿಂ ॥
ದಿಱಿದೊಡೆ ಸೋರ್ವ ಸೋನೆಯೊಳೆ ದಾಂಗುಡಿಯಿಂದೆಸೆದಿರ್ಪುವೊಳ್ಪಿನಿಂ।
ದೆಱೆಯನಕಾಡಿಯೂರ ಲತವಳ್ಳಿಯುವುಲ್ಲಿಯ ನಾಗವಳ್ಳಿಯುಂ ॥ 36 ॥

ಪೊಱಪೊಲ್ಪಿಲೊಳ್ ಪೊದಲ್ದಿ ನವನಂದನಬೃಂದದಿನೊಳ್ಪನಾಳ್ದ ಪೆ।
ರ್ಗೆಜ್ಜಿಗಳಿನೊಲ್ದು ಗಾವರಿಸುತಿರ್ಪ ಮದಾಳಿಯನೆಯ್ದೆ ಪೂವ ಕೆ ॥
ಕ್ಕಿಜ್ಜಿ ನಿಮಿರ್ದಿರ್ದ ಪಾದರಿಯಿನೂದುವ ತೆಂಬೆಲರಿಂ ಬಿಡಂಗುವೆ।
ತ್ತೆಱೆಯನಕಾಡಿಯೂರ್ ಬಯಸಿ ನೋಲ್ಪಿರ ಕಣ್ಗೆಸೆದೊಪ್ಪಿ ತೋಱುಗುಂ ॥ 37 ॥

---

1. *Epigraphia Indica*, XIII, 327.

## ಆದಿಪಂಪ. 941.

ಈತನು ಕನ್ನಡದಲ್ಲಿ ಆದಿಪುರಾಣ, ಭಾರತ ಅಥವಾ ವಿಕ್ರಮಾರ್ಜುನ ವಿಜಯ, ಎಂಬ ಎರಡು ಗ್ರಂಥಗಳನ್ನು ಬರೆದಿದ್ದಾನೆ. ಇವನು ದುಂದುಭಿ ವರ್ಷದಲ್ಲಿ ಹುಟ್ಟಿದುದಾಗಿ ಆದಿಪುರಾಣದಲ್ಲಿರುವ

ದುಂದುಭಿಗಭೀರನಿನದಂ ದುಂದುಭಿಸಂವತ್ಸರೋದ್ಭವಂ

ಎಂಬ ಪದ್ಯಭಾಗದಿಂದ ತಿಳಿಯುತ್ತದೆ. ಮತ್ತು ಅದೇಗ್ರಂಥದ ಅಂತ್ಯದಲ್ಲಿರುವ

ಶಕವರ್ಷಮೆಂಟುನೂಱ್ ಕೆ ಕಡೆಯೊಳಜುವತ್ತುಮೂಱು ಸಂದಂದು ಜಗ।
ತ್ಪ್ರಕಟಪ್ಲವಸಂವತ್ಸರ । ದ ಕಾರ್ತಿಕಂ ಮುದಮನೀಯೆ ನಂದೀಶ್ವರದೊಳ್ ॥
***ನೆಗಟ್ಟಿದಂದೀ । ಕೃತಿ ಜಗದೊಳ್ ಪುದಿದು ಸಾಗರಾಂತಂಬರೆಗಂ ॥

ಎಂಬ ಪದ್ಯಗಳಿಂದ ಆ ಗ್ರಂಥವನ್ನು, ಶಕ 863 ನೆಯ ಪ್ಲವಸಂವತ್ಸರದಲ್ಲಿ—ಎಂದರೆ ಕ್ರಿ. ಶ. 941 ರಲ್ಲಿ—ಬರೆದಂತೆ ವ್ಯಕ್ತವಾಗುತ್ತದೆ. ದುಂದುಭಿವರ್ಷದಲ್ಲಿ ಹುಟ್ಟಿದಂತೆ ಹೇಳುವುದರಿಂದ ಪ್ಲವವರ್ಷದಿಂದ ಹಿಂದಕ್ಕೆ ದುಂದುಭಿಯವರೆಗೆ ಲೆಕ್ಕಮಾಡಿದರೆ ಇವನು ಕ್ರಿ. ಶ. 902 ನೆಯ ವರ್ಷದಲ್ಲಿ ಹುಟ್ಟಿದಂತೆ ತಿಳಿಯಬರುತ್ತದೆ. ಈ ಗ್ರಂಥವನ್ನು ಬರೆದಾಗ ಇವನಿಗೆ 39 ವರ್ಷವಾಗಿದ್ದಿತು.

ಭಾರತದ ಅಂತ್ಯಭಾಗದಲ್ಲಿ ಈತನು ತನ್ನ ವಂಶಾವಳಿಯನ್ನು ಹೀಗೆ ಹೇಳಿಕೊಂಡಿದ್ದಾನೆ :—ವೆಂಗಿಮಂಡಲದಲ್ಲಿ ವೆಂಗಿಪಳುವಿಗೆ ಸೇರಿದ ವಸಂತ, ಕೊಟ್ಟೂರು, ನಿಡುಗುಂದಿ, ವಿಕ್ರಮಪುರ ಎಂಬ ಅಗ್ರಹಾರಗಳಲ್ಲಿ ಅಗ್ರಗಣ್ಯನಾಗಿ ವತ್ಸಗೋತ್ರೋದ್ಭವನಾದ ಮಾಧವಸೋಮಯಾಜಿಯೆಂಬ ಬ್ರಾಹ್ಮಣನಿದ್ದನು. ಅವನ ಮಗ ಅಭಿಮಾನಚಂದ್ರ; ಆತನ ಮಗ ಕೊಮರಯ್ಯ; ಅವನ ಮಗ ಅಭಿರಾಮದೇವರಾಯ. ಈತನು ಮತಗಳೊಳಗೆಲ್ಲಾ ಜೈನಮತವೇ ಶ್ರೇಷ್ಠವೆಂದು ತಿಳಿದು ಜಿನಧರ್ಮವನ್ನು ಅವಲಂಬಿಸಿದನು. ಇವನ ಮಗನೇ ಆದಿಪಂಪನು.

ಈತನು ಜೈನಕವಿ; ಕೊಂಡಕುಂದಾನ್ವಯಕ್ಕೆ ಸೇರಿದವನೆಂದು ಹೇಳಿಕೊಂಡಿದ್ದಾನೆ. ಈತನಿಗೆ ಕವಿತಾಗುಣಾರ್ಣವ, ಪುರಾಣಕವಿ, ಸುಕವಿಜನ ಮನೋಮಾನಸೋತ್ತಂಸಹಂಸ, ಸರಸ್ವತೀಮಣಿಹಾರ, ಸಂಸಾರಸಾರೋದಯ—ಎಂಬ ಬಿರುದುಗಳಿದ್ದಂತೆ ತೋರುತ್ತದೆ. ಈತನ ಗುರು ದೇವೇಂದ್ರಮುನಿ. ಈ ಮುನಿ ರಾಜಪೂಜಿತನೆಂದೂ, ಭಾರತೀಭಾಳಪಟ್ಟನೆಂದೂ ಶ್ರ. ಬೆ. 66 ನೆಯ ಶಾಸನದಿಂದ ತಿಳಿಯುತ್ತದೆ.[1] ಈ ಕವಿ ಪುಲಿಗೆರೆಯ ರಾಜನಾದ ಚಳುಕ್ಯ

1. ಅಜನಿ ಮಹಿಪಚೂಡಾರತ್ನರಾರಾಜಿತಾಂಘ್ರಿಃ। ವಿಜಿತಮಕರಕೇತೂದ್ದಂಡದೋರ್ದಂಡಗರ್ವಃ ।
ಕುನಯನಿಕರಭೂಧ್ವಾನೀಕದಂಭೋಳಿದಂಡಃ। ಸಜಯತುವಿಬುಧೇಂದ್ರೋ ಭಾರತೀಭಾಳಪಟ್ಟಃ॥

ವಂಶೋತ್ಪನ್ನನಾದ ಅರಿಕೇಸರಿಯು ಆಸ್ಥಾನಪಂಡಿತನಾಗಿದ್ದನು; "ಚತುರಂಗಬಳ ಭಯಂಕರಣಂ" ಎಂದೂ, "ಜೋಳದಪಾಟ್ಟಿ[1] ನಿಜಾಧಿನಾಥನಾಹವದೊಳರಾತಿನಾಯ ಕರ ಪಟ್ಟವೆ ಸಾರಿಸೆ ಸಂದ ಪೆಂಪು.....ಸಂದನೇಂ ಕಲಿಯೊ" ಎಂದೂ ಹೇಳಿಕೊಂಡಿರುವುದರಿಂದ ಅರಿಕೇಸರಿಯಲ್ಲಿ ದಂಡನಾಯಕನಾಗಿಯೂ ಇದ್ದಿರಬಹುದು. ತನ್ನ ಪೋಷಕನಾದ ಈ ಅರಿಕೇಸರಿಯ ವಂಶಾವಳಿಯನ್ನು ಭಾರತದ ಆದಿಭಾಗದಲ್ಲಿ ಹೀಗೆ ಹೇಳಿದ್ದಾನೆ:—

ಚಳುಕ್ಯವಂಶದಲ್ಲಿ ಪ್ರಸಿದ್ಧನಾದ ದೊರೆ ಯುದ್ಧಮಲ್ಲ. ಇವನು ಸಪಾದಲಕ ಕ್ಷಿತೀಶ. ಇವನ ಮಗ ಅರಿಕೇಸರಿ. ಈತನ ಮಕ್ಕಳು ನರಸಿಂಹ, ಭದ್ರದೇವ. ನರಸಿಂಹನ ಮಗ ದುರ್ಗ್ಗಮಲ್ಲ. ಇವನ ಮಗ ಬದ್ದಗ. ಈತನ ಮಗ ದುರ್ಗ್ಗಮಲ್ಲ. ಇವನ ಮಗ ನರಸಿಂಹ. ಈತನು ಘೂರ್ಜರರಾಜನನ್ನು ಜಯಿಸಿ "ಗಂಗಾವಾರ್ಧಿಯೊಳಾತ್ತತುರಂಗನುಮಂ ಮಿಸಿಸಿದಂ." ಈತನ ಹೆಂಡತಿ ಜಾಕವ್ವೆ. ಇವರ ಮಗನೇ ಕನಿಯ ಪೋಷಕನಾದ ಅರಿಕೇಸರಿ. ಈ ರಾಜನು ಸಮಧಿಗತಪಂಚಮಮಹಾಶಬ್ದ ಎಂಬ ಪ್ರಶಸ್ತಿಯುಳ್ಳ ಸಾಮಂತ ಕ್ಷತ್ರಿಯನು.

ಕವಿ, ಈ ದೊರೆಗೆ ಅರಿಗ, ಹರಿಗ, ಗುಣಾರ್ಣವ, ಇವೇ ಮೊದಲಾದ ಹಲವು ಹೆಸರುಗಳನ್ನು ಹೇಳಿದ್ದಾನೆ. ಭಾರತದಲ್ಲಿ ಅರಿಕೇಸರಿಯನ್ನು ಅರ್ಜುನನಿಗೆ ಹೋಲಿಸಿ ಅವನ ಪರಾಕ್ರಮಾದಿಗಳನ್ನು ಹೊಗಳಿದ್ದಾನೆ. ಈ ಕಾವ್ಯವನ್ನು ಕೇಳಿ ಸಂತೋಷಿಸಿ ಅರಿಕೇಸರಿ ಕವಿಗೆ ಬಚ್ಚೆಸಾಸಿರದಲ್ಲಿರುವ ಧರ್ಮಪುರವೆಂಬ ಶಾಸನದಗ್ರಹಾರವನ್ನು ಕೊಟ್ಟನು.

ಕವಿ ಭಾರತದಲ್ಲಿ ಲೌಕಿಕವನ್ನೂ ಆದಿಪುರಾಣದಲ್ಲಿ ಜಿನಾಗಮವನ್ನೂ "ಸಮಸ್ತಭೂತಳಕೆ ಬೆಳಗುವಂತೆ"ಯೂ ಒಂದನ್ನು ಆರುತಿಂಗಳಲ್ಲಿಯೂ ಮತ್ತೊಂದನ್ನು ಮೂರುತಿಂಗಳಲ್ಲಿಯೂ ತಾನು ಪ್ರತಿಜ್ಞೆಮಾಡಿದ ರೀತಿಯಲ್ಲಿಯೇ ಮುಗಿಸಿದಂತೆಯೂ ಹೇಳುತ್ತಾನೆ. ತನ್ನ ಗ್ರಂಥಗಳನ್ನು "ರಾಜಸುಧಾನಿಯ ಪುಟವಹ ಸಾಜದ ಪುಲಿಗೆಜೆಯ ತಿರುಳ ಕನ್ನಡದೊಳ್" ಬರೆದಿರುವಂತೆ ಹೇಳುತ್ತಾನೆ. ಇವನ ಗ್ರಂಥಗಳು "ಮುನ್ನಿನ ಕಬ್ಬಮನೆಲ್ಲಮಿಕ್ಕಿ ಮೆಟ್ಟಿದುವು." ನಾಗವರ್ಮ, ಕೇಶಿರಾಜ ಮೊದಲಾದ ಲಕ್ಷಣಗ್ರಂಥಕಾರರೆಲ್ಲಾ ಇವನ

1 ಈ ಪದವನ್ನು, ಮಿ. ರೈಸ್ ಜೋಳರಾಜ್ಯವೆಂದು ಭ್ರಮಿಸಿರುವಂತೆ ತೋರುತ್ತದೆ. ಈ ಶಬ್ದಕ್ಕೆ ಬರುಣ ಅಥವಾ ಹಂಗು ಎಂಬುದು ಅರ್ಥವೆಂದು ಈ ಪ್ರಯೋಗಗಳಿಂದ ಸ್ಪಷ್ಟವಾಗುತ್ತದೆ:—

ಜೋಳದಪಾಟಂಯಂ ಬಗೆದುದಿಲ್ಲಾದ್ರೋಣನುಂ ದ್ರೌಣಿಯುಂ।—ರನ್ನ.

ಜೋಳದಪಾಟಿಗೆನ್ನ ಸುವನಿತ್ತಾಪ್ಯಾತಿಯಂ ತಾಳ್ವನೆಂ॥—ಕರ್ಣಪಾರ್ಯ.

ಸಲಹಿದೊಡೆಯನ ಜೋಳವಾಟಂಗೆ।

ತಲೆಯ ಮಾಱುವುದೊಂದು ಪುಣ್ಯ॥—ಕುಮಾರವ್ಯಾಸ.

ಗ್ರಂಥಗಳಿಂದ ಪದ್ಯಗಳನ್ನು ಉದಾಹರಿಸಿದ್ದಾರೆ. ಅಲ್ಲದೆ ಇವನಿಂದೀಚೆಗೆ ಕಾವ್ಯವನ್ನು ಬರೆದಿರುವ ಜೈನಕವಿಗಳೆಲ್ಲಾ ಪ್ರಾಯಶಃ ಇವನ ಹೆಸರನ್ನು ತಮ್ಮ ತಮ್ಮ ಗ್ರಂಥಗಳ ಆದಿಭಾಗದಲ್ಲಿ ಗೌರವಪುರಸ್ಸರವಾಗಿ ಹೇಳುತ್ತಾರೆ:—

ಚತುರಚಮುತ್ಕೃತಿಯುದ್ಧಾ । ಟಿತರಮಣೀಯಂ ದಿಟಕ್ಕೆ ಪಂಪನ ಕೃತಿ ವಿ ।
ಕ್ಕಿತರರ ಕೃತಿತತಿಯವಿಚಾ । ರಿತರಮಣೀಯಂ ವಿದಗ್ಧರಂ ಮೆಚ್ಚಿಕುಮೇ ॥

[ಪಾರ್ಶ್ವಪಂಡಿತ. (1205)]

ಪಸರಿಪ ಕನ್ನಡಕ್ಕೊಡೆಯನೊರ್ವನೆ ಸತ್ಕವಿ ಪಂಪನಾವಗಂ ।
ವಸುಧೆಗೆ ಚಕ್ರಿಯಂತಮರಭೂಮಿಗೆ ವಾಸವನಂತೆ ಸಂತತಂ ॥
ರಸೆಗುರಗೇಂದ್ರನಂತೆ ಗಗನಕ್ಕೆ ವಿಕರ್ತನನಂತೆ ಧಾತ್ರಿಯೊಳ್ ।
ಪೆಸರ್ವಡೆದಿರ್ದನೀಗಳೆಮಗೀಗೆ ತದೀಯವಚೋವಿಳಾಸಮಂ ॥

[ನಾಗರಾಜ. (1331)]

ಆದಿಕವಿ ಪಂಪನೆಂದನು । ವಾದಿಸಿ ವಾದಿಸಿ ವಿರೋಧಿ ವಿಪರೀತತೆಯಿಂ ।
ದೋದೆ ವಿಲೋಮದೆ ಪೆಸರಂ । ಮೇದಿನಿಯೊಳಗವನ ಪೆಸರೆ ಪೆಸರ್ವಡೆದೆಸೆಗುಂ ॥

[ಮಧುರ. (ಸು. 1385)] ಇತ್ಯಾದಿ.

ಈತನು ತನಗೆ ಹಿಂದೆ ಇದ್ದ ಆವ ಕನ್ನಡಕವಿಯನ್ನೂ ಸ್ಮರಿಸಿಲ್ಲ. ತನ್ನ ಅದ್ವಿತೀಯವಾದ ಕವಿತಾಪ್ರೌಢಿಯನ್ನೂ ಬಿರುದುಗಳನ್ನೂ ಅವಕ್ಕೆ ಕಾರಣವನ್ನೂ ಇತರವಿಷಯಗಳನ್ನೂ ಕೆಳಗಣ ಪದ್ಯಗಳಲ್ಲಿ ಹೇಳುತ್ತಾನೆ:—

ಕ್ಷಿತಿಗೆ ಸಮಸ್ತ ಭಾರತಮುಮಾದಿಪುರಾಣಮುಮಿಗಳೊಂದಳಂ ।
ಕೃತಿಯನೊಲಿರ್ದುವೇಕಜಿಯ ಪೋದವರಾದವರೊಳ್ ಸರಸ್ವತೀ ॥
ಮತಿ ಕವಿತಾಗುಣಕ್ಕೆ ಪದೆದೆಯ್ದೆವರಲ್ಕೆ ಕವೀಂದ್ರರಾರ್ ಸರ ।
ಸ್ವತಿಗೆ ವಿಳಾಸಮಂ ಪೊಸತುಮಾಡುವ ಪಂಪನ ವಾಗ್ವಿಳಾಸಮಂ ॥
ವತ್ಸಕುಲತಿಲಕನಭಿಜನ । ವತ್ಸಲನಭಿಮಾನಮೂರ್ತಿ ಸುಕವಿಯಶೋನಿ ।
ರ್ಮತ್ಸರನಮೃತಮಯೋಕ್ತಿಶ । ರತ್ಸಮಯಸುಧಾಂಶುವಿಶದಕೀರ್ತಿವಿತಾನಂ ॥
ವಿದಿತಂ ಪ್ರಾತೀತಿಕಂ ಕೋಮಳಮತಿಸುಭಗಂ ಸುಂದರಂ ಸೂಕ್ತಿಗರ್ಭಂ ।
ಮೃದುಸಂದರ್ಭಂ ವಿಚಾರಕ್ಷಮಮುಚಿತಪದಂ ಶ್ರವ್ಯನವ್ಯಾತುಲಂ ವ್ಯಾ ॥
ಪ್ತದಿಗಂತಂ ಕಾವ್ಯಮೆಂದನ್ವಿತಸುಕವಿಜನಂ ಮೆಚ್ಚಿ ನಿಚ್ಚಂ ಮನಂಗೊ ।
ಳ್ವುದಱಂದಂ ನೆಟ್ಟನೀತಂ ಸುಕವಿಜನಮನೋಮಾನಸೋತ್ತುಂಗಸಹಂಸಂ ॥
ಇದು ನಿಚ್ಚಂ ಪೊಸತರ್ಣವಂಬೊಲತಿಗಂಭೀರಂ ಕವಿತ್ವಂ ಜಗ ।
ತ್ಕದಱಂದಂ ಕವಿತಾಗುಣಾರ್ಣವನಿಳಾಲೋಕೈಕವಿಖ್ಯಾತನ ॥
ಭ್ಯುದಯಪ್ರಾಪ್ತಿನಿಮಿತ್ತಮುನ್ನತಯಶಂ ಸಂಸಾರದೊಳ್ ಸಾರಮು ।
ವ್ವುದಱಂ ಧರ್ಮಮದಂ ನಿಮಿರ್ಚುವುದಱಂ ಸಂಸಾರಸಾರೋದಯಂ ॥

ಆತಿಸುಭಗೆಗೆ ಸಂದ ಸರ। ಸ್ವತಿಗೀತನ ಲಲಿತವಾಗ್ವಿಳಾಸಮೆ ಸದಲಂ।
ಕೃತಿಯುವೊಲೆಸೆದಪುದು ಜಗ। ತ್ಪತೀತನೀತನೆ ಸರಸ್ವತೀಮಣಿಹಾರಂ॥
ಕದಳೀಗರ್ಭಶ್ಯಾಮಂ। ಮೃದುಕುಟಿಲಶಿರೋರುಹಂ ಸರೋರುಹವದನಂ।
ಮೃದುಮಧ್ಯಮತನು ಹಿತಮಿತ। ಮೃದುವಚನಂ ಲಲಿತಮಧುರಸಾಂದರವೇಷಂ॥

ಇವನ ಗ್ರಂಥಗಳಲ್ಲಿ

## 1. ಆದಿಪುರಾಣ.

ಈ ಕಾವ್ಯವು ಆದಿತೀರ್ಥಂಕರನಾದ ಪುರುದೇವನ ಚರಿತವು; ಚಂಪೂ ರೂಪವಾಗಿದೆ. ಇದನ್ನು ಕಾವ್ಯರಚನೆಗೆ ಲಕ್ಷ್ಯಗ್ರಂಥವಾಗುವಂತೆ ಬರೆದುದಾಗಿ—

ಇದುವೆ ಸುಕವಿಪ್ರಮೋದ। ಪ್ರದಮಿದುವೆ ಸಮಸ್ತಭವ್ಯಲೋಕಪ್ರಮುದ।
ಪ್ರದಮೆನೆ ನೆಗಪ್ಪಾದಿಪುರಾ। ಣದೊಳಜಂವುದು ಕಾವ್ಯಧರ್ಮಮಂ ಧರ್ಮಮುಮಂ॥

ಎಂಬ ಪದ್ಯದಲ್ಲಿ ಹೇಳುತ್ತಾನೆ. ಗ್ರಂಥವು 16 ಆಶ್ವಾಸಗಳಾಗಿ ವಿಭಾಗಿಸಲ್ಪಟ್ಟಿದೆ. ಗ್ರಂಥಾವತಾರದಲ್ಲಿ ಕವಿ ಆದಿಬ್ರಹ್ಮನನ್ನು ಸ್ತುತಿಸಿದ್ದಾನೆ. ಬಳಿಕ ಸಿದ್ಧರನ್ನೂ ಆಚಾರ್ಯರನ್ನೂ ಉಪಾಧ್ಯಾಯರನ್ನೂ ಸಾಧುಗಳನ್ನೂ ಚಕ್ರೇಶ್ವರಿಯನ್ನೂ ವೃಷಭಯಕ್ಷನನ್ನೂ ಸರಸ್ವತಿಯನ್ನೂ ನುತಿಸಿ ಆಮೇಲೆ ಸಮಂತಭದ್ರನು ಮೊದಲುಗೊಂಡು ಅಕಳಂಕದೇವನ ವರೆಗೆ ಗುರುಗಳನ್ನು ಪರಿವಿಡಿಯಿಂದ[1] ಸ್ತುತಿಸಿದ್ದಾನೆ. ತರುವಾಯ ತನಗೆ "ಬುಧಸಮೂಹಂ" ಹಿಂದೆ ಹೇಳಿರುವ[2] ಬಿರುದುಗಳನ್ನು ಕೊಟ್ಟು "ಇದಂ ಪೇೞ್ದೆಂದೆನೆ ಪೇೞಲ್ಕಾಂ ಮನಂದಂದೆಂ" ಎನ್ನುತ್ತಾನೆ. ಈ ಕಥೆ "ಪರಂಪರೆಯಿಂ ವಿಶ್ರುತವೀರಸೇನಜಿನಸೇನಾಚಾರ್ಯಪರ್ಯಂತವಾಗಿರೆ ಬಂದುದು" ಎಂದು ಹೇಳುತ್ತಾನೆ. ನಾಭಿನಂದನನಾದ ವೃಷಭನು ಸಿಂಹಾಸನಾರೂಢನಾಗಿರುವಲ್ಲಿ ಭರತನು ಕೇಳಲು ವೃಷಭಸೇನಗಣಾಗ್ರಣಿ ಈ ಆದಿಪುರಾಣವನ್ನು ಹೇಳಿದನು. ವಿಪುಲಾದ್ರಿಯಲ್ಲಿ ವರ್ಧಮಾನಜಿನಸನ್ನಿಧಿಯಲ್ಲಿ ಗೌತಮನು ಮಗಧನಾಯಕನಿಗೆ ಅದನ್ನೇ ವಿಸ್ತಾರವಾಗಿ ಹೇಳಿದನು. ಆ ಕಥೆಯನ್ನೇ "ಅಪರಿಮಿತಭಕ್ತಿಯಿಂ ವಿರಚಿಸುವೆಂ" ಎಂದು ಹೇಳಿ ಕಥೆಯನ್ನು ಆರಂಭಿಸುತ್ತಾನೆ. ಆಶ್ವಾಸಗಳ ಕೊನೆಯಲ್ಲಿ—

---

1. ಸಮಂತಭದ್ರ, ಕವಿಪರಮೇಷ್ಠಿ, ಪೂಜ್ಯಪಾದ, ಗೃಧ್ರಪಿಂಛಾಚಾರ್ಯ, ಜಟಾಚಾರ್ಯ, ಶ್ರುತಕೀರ್ತ್ಯಾಚಾರ್ಯ, ಮಲಧಾರಿಸಿದ್ಧಾಂತಮುನೀಶ್ವರ, ದೇವೇಂದ್ರಮುನಿ, ಜಯನಂದಿಮುನಿ, ಅಕಳಂಕದೇವ.

2 ಪುಟ 30.

ಇದು ದೇವೇಂದ್ರಮುನೀಂದ್ರವಂದ್ಯಪರಮಜಿನೇಂದ್ರಮುಖಚಂದ್ರವಾಕ್ಚಂದ್ರಿಕಾ ಪ್ರಸರಪ್ರಸಾದೋದೀರ್ಣ ಸೂಕ್ತಿಕಲ್ಲೋಲಮಾಲಾಕೀರ್ಣ ಕವಿತಾಗುಣಾರ್ಣವಪ್ರಣೀತಮ ಪ್ಪಾದಿಪುರಾಣದೊಳ್

ಎಂಬ ಗದ್ಯವಿದೆ.

ಈ ಗ್ರಂಥವನ್ನು ಕವಿ ಉತ್ಕೃಷ್ಟಭಾಷಾಶೈಲಿಯಲ್ಲಿ ರಚಿಸಿದ್ದಾನೆ. ಪದದ ಜೋಡಣೆ ಕಿವಿಗಿಂಪಾಗಿಯೂ ಲಲಿತವಾಗಿಯೂ ಹೃದಯಂಗಮವಾಗಿಯೂ ಇದೆ. ಪದಗಳು ಮುತ್ತುಕೋದಂತೆ ಹೊಂದಿಕೆಯಾಗಿವೆ. ಬಂಧವು ಗಂಭೀರವಾಗಿಯೂ ಭಾವಗರ್ಭಿತವಾಗಿಯೂ ಇದೆ. ಇವನ ವಾಗ್ಧೋರಣಿ ಪ್ರಾಯಃ ಇತರ ಕನ್ನಡ ಕವಿಗಳಲ್ಲಿ ದೊರೆಯಲಾರದೆಂದು ತೋರುತ್ತದೆ.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

### ಮಗಳಿಗೆ ತಂದೆತಾಯಿಗಳು ಹೇಳುವ ಬುದ್ಧಿವಾದ.

ಮನಮಜ್ಜಂಜಿ ಬೆರ್ಚಿ ಬೆಸಕೆಯ್ಯಂ ನಿಜವಲ್ಲಭನೇನನೆಂದೊಡಂ ।
ಕೆನಿಸದಿರೊಂದಿದಗ್ರಮಹಿಷೀಪದದಲ್ಲಿ ಪದಸ್ಥೆಯಾಗು ನಂ ॥
ದನರನಗಣ್ಯಪುಣ್ಯಧನರಂ ಪಡೆಯೆಂದಮರ್ದಪ್ಪಿಕೊಂಡ ತ ।
ತ್ತನುಜೆಯಗಲ್ಕೆಯೊಳ್ ನೆಗಪಿದರ್ ಬಸಮಲ್ಲದ ಬಾಷ್ಪವಾರಿಯಂ ॥ 38 ॥

### ಅಳಿಯನಿಗೆ ಅತ್ತೆಮಾವಂದಿರು ಹೇಳುವ ಹಿತೋಕ್ತಿ.

ಬಗೆದುಂ ನಿನ್ನವ್ವಾಯೋನ್ನತಿಯನಿವಳತಿಸ್ನೇಹಸಂಬಂಧಮಂ ನೀಂ ।
ಬಗೆದುಂ ಸಂದೆಮ್ಮ ನಣ್ಮಂ ಬಗೆದುಮಜಿಯದೇನಾನುಮೆಂದಾಗಳುಂ ಮೆ ॥
ಲ್ಲಗೆ ನೀಂ ಕಲ್ಪಿಪ್ಪುದೆಮ್ಮಂ ನೆನೆದೆರ್ದೆಗಿಡದಂತಾಗೆ ಪಾಲಿಪ್ಪುದಿಂತೀ ।
ಮೃಗಶಾಬೀಕ್ಷಣೆಯಂ ಮನ್ನಿಸುವುದಿನಿತನಾಂ ಬೇಡಿದೆಂ ವಜ್ರಜಂಘಾ ॥ 39 ॥

### ಅಗಲಿಕೆ.

ಪೊಡೆಮಡುವಪ್ಪಿಕೊಳ್ವ ನೆನೆಯುತ್ತಿರಿಮೆಂಬ ಸಮಸ್ತವಸ್ತುವಂ ।
ಕುಡುವ ಪಲರ್ಮೆಯಿಂ ಪರಸಿ ಸೇಸೆಯನಿಕ್ಕುವ ಬುದ್ಧಿವೇಲ್ಪಿಕೆ ॥
ಯ್ಯೆಡೆ ನಿಮಗೆಂದೊಡಂಬಡಿಪ ನಲ್ಲರಗಲ್ಕೆಗೆ ಕಣ್ಣನೀರ್ಗಳಂ ।
ಮಿಡಿವ ಬಹುಪ್ರಕಾರಜನಸಂಕಟಮೊಪ್ಪಿದುದಾಪ್ರಯಾಣದೊಳ್ ॥ 40 ॥

### ಪರ್ವತ ಪ್ರಾಂತ.

ಎಳನೀರೊತ್ತಿನೊಳೊತ್ತಿ ಬರ್ಪ ಪೊನಲೊಳ್ ಸಾಂದ್ರೇಂದುಕಾಂತೋಪಲೋ ।
ಚ್ಛಳಿತಾಚ್ಛಾಚ್ಛಜಳಪ್ರವಾಹಭರದೊಳ್ ಮಂದಾನಿಲಾಂದೋಳನಾ ॥

ಕುಳಿತಾರಾಮಫಲಾಮೃತೋಪಮರಸಸ್ತೋತಂಗಳೊಳ್ ಸಾಲ್ವಿನಂ ।
ಬೆಳೆದೋರಂತೊಜಿಗಿರ್ದ ಶಾಲಿವನದಿಂ ಸೇವ್ಯಂ ನಗೋಪತ್ಯಕಂ ॥ 41 ॥

## ಮಾವು.

ತಳಿರೊಳ್ಗಿಂಬಿನೊಳೂಳ್ಪ ಕೋಕಿಲಕುಲಂ ಪೂಗೊಂಬಿನೊಳ್ ಪಾಡುತಿ ।
ರ್ಪಳಿವೃಂದಂ ತುಜುಗಿರ್ದ ಬಲ್ಮಿಡಿಯ ತೂಗುಂಗೊಂಬಿನೊಳ್ ಪಾಯ್ವು ಬಂ ।
ಡುಳಿಸುತ್ತಿರ್ಪ ಶುಕಾಳಿ ತಮ್ಮ ಬಿಸದಿಂ ತಂತಮ್ಮ ಠಾಣಾಂತರಂ ।
ಗಳೊಳಿರ್ದಂಗಜತಂತ್ರದಂತೆಸೆವಿನಂ ಚಿಲ್ವಾದುವಿಮ್ಮಾವುಗಳ್ ॥ 42 ॥

ತಳಿರೊಳ್ ನೀನೆ ಬಿಡಂಗನ್ಗೆ ನನೆಗಳೊಳ್ ನೀಂ ನೀಜಿಸ್ದೆ ಪುಷ್ಪಸಂ ।
ಕುಳದೊಳ್ ನೀನೆ ವಿಳಾಸಿಯ್ಗೆ ಮಿಡಿಗಳೊಳ್ ನೀಂ ಚಿಲ್ಸ್ದೆ ಪಣ್ತಪ ।
ಣ್ಗಳಿನೋಪೋ ಪೆಜಿತ್ತೇನೊ ನೀನೆ ಭುವನಕ್ಕಾರಾಧ್ಯನ್ಗೆ ಭೃಂಗಕೋ ।
ಕಿಳಕೀರಪ್ರಿಯ ಚೂತರಾಜ ತರುಗಳ್ ನಿನ್ನಂತೆ ಚಿನ್ನಂಗಳೇ ॥ 43 ॥

## ಮಂದಾನಿಲ.

ಅಳಿಸಿನದದ ಮದಕೋಕಿಳ। ಕಳನಿನದದ ಜತಿಯೊಳಭಿನಯಂ ನೆಗಲ್ಪ್ಪುಸೆಗಂ ।
ಲಳಿತಮನೇನಾಡಿಸಿದಸೊ। ಮಳಯಾನಿಳನರ್ತಕಂ ಲತಾನರ್ತಕಿಯಾ ॥ 44 ॥

## ಸುರಹೊನ್ನೆ.

ಎಸಲ್ಪ್ಪಿಳನೆಂಪ್ಪಿ ಕಂಡರಿಸಿ ಮುತ್ತಿನೊಳಲ್ಲಿ ಸುವರ್ಣಚೂರ್ಣಮಂ ।
ಪಸರಿಸಿ ಕೇಸರಾಕೃತಿಯೊಳಲ್ಲಿಗೆ ಕರ್ಣಿಕೆಯಂದಮಾಗೆ ಕೇ ।
ಲಿಸಿ ಹೊಸತಪ್ಪ ಮಾಣಿಕದ ನುಣ್ಬರಲಂ ಮಧು ಮನ್ಮಥಂಗೆ ಬ ।
ಣ್ಣಿಸಿ ಸಮೆದಂತೆ ತೋಜುವುದು ಪೂಗಳೊಳೀಂ ಸುರಹೊನ್ನೆ ಚಿನ್ನನೋ ॥ 45 ॥

## ವಸಂತ.

ಎಳವಿಸಿಲೀಗಳೀಗಳೆ ಮುದಿದ್ದುದು ಚೂತಕುಜಾತಮಿಗಳೀ ।
ಗಳೆ ನನೆದೋಜುತಿಂದೊಳದಿನುಣ್ಮೆದ ಷಟ್ಪದವೃಂದಮಿಗಳೀ ॥
ಗಳೆ ಮೊರೆದತ್ತು ಚಂದನದ ತಳ್ಕ ಬಲಾನಿಕರಕ್ಕದೀಗಳೀ ।
ಗಳೆ ನೆಗಲ್ದಿತ್ತೆಲೀ ಪುಗಿಲದಾಗಲೆ ವೇಡ ವಸಂತರಾಜನಾ ॥ 46 ॥

## ಚಂದ್ರೋದಯ.

ಅದೊಂದಿನಿಸು ಬೀಗದಿಂ ನವಜಪಾಪ್ರಸೂನಾಭಮಾ ।
ಯ್ತದೊಂದಿನಿಸು ಬೀಗದಿಂ ಕನಕಕುಂಭದಂತಾಯ್ತು ಮ ।
ತ್ತದೊಂದಿನಿಸು ಬೀಗದಿಂ ಮೃದುಮೃಣಾಳಸಂಕಾಶಮಾ ।
ಯ್ತದೇಂ ಬಲ್ಲಂಕೆ ಬಿಂಬದುಜ್ಜ್ವಳಿಕೆಯೋ ಸುಧಾಸೂತಿಯಾ ॥ 47 ॥

### ಚಂಪಕ.

ಪಡೆದೊಡೆ ಕಂಪಂ ಬಣ್ಣಂ। ಬಡೆಯುವು ಬಣ್ಣಮನೆ ಪಡೆದುವಪ್ಪೊಡೆ ಕಂಪಂ।
ಪಡೆಯುವುಲ್ಲಂದಲರ್ಗಳಿರಡುಮ। ನೊಡವೆಳೆದೀಚಂಪಕಕ್ಕೆ ಪೂಗಳ್ ದೊರೆಯಂ ॥ 48 ॥

## 2. ಭಾರತ ಅಥವಾ ವಿಕ್ರಮಾರ್ಜುನವಿಜಯ.

ಈ ಗ್ರಂಥವು ಚಂಪೂರೂಪವಾಗಿದೆ. ಇದರಲ್ಲಿ ಕವಿ ಪಾಂಡವರ ಜನನದಿಂದ ಕೌರವವಧೆಯವರೆಗೆ ಭಾರತಕಥೆಯನ್ನು ಸಂಕ್ಷೇಪವಾಗಿ ಹೇಳಿ ಕೊನೆಯಲ್ಲಿ ಅರ್ಜುನನಿಗೆ ಪಟ್ಟಾಭಿಷೇಕವಾದಂತೆ ವರ್ಣಿಸಿದ್ದಾನೆ. ತನ್ನ ಪೋಷಕನಾದ ಅರಿಕೇಸರಿಯೆಂಬ ಚಾಳುಕ್ಯರಾಜನನ್ನು ಅರ್ಜುನನಿಗೆ ಹೋಲಿಸಿದ್ದಾನೆ. ಈ ಗ್ರಂಥವನ್ನು ಅರಿಕೇಸರಿಯ ಅಪ್ಪಣೆಯಮೇರೆಗೆ ಬರೆದುದಾಗಿ ಹೇಳುತ್ತಾನೆ. ಗ್ರಂಥವು 14 ಆಶ್ವಾಸಗಳಾಗಿ ಭಾಗಿಸಲ್ಪಟ್ಟಿದೆ. ಗ್ರಂಥಾವತಾರದಲ್ಲಿ ಅರಿಕೇಸರಿಯನ್ನು ವಿಷ್ಣುವಿಗೂ ಪರಮೇಶ್ವರನಿಗೂ ಸೂರ್ಯನಿಗೂ ಮನ್ಮಥನಿಗೂ ಹೋಲಿಸಿ ಬೇರೆ ಬೇರೆ ಮಂಗಳಶ್ಲೋಕಗಳನ್ನು ಮಾಡಿದ್ದಾನೆ. ಬಳಿಕ ಸರಸ್ವತಿಯನ್ನೂ ವಿನಾಯಕನನ್ನೂ ನುತಿಸಿದ್ದಾನೆ. ತರುವಾಯ—ಹಿಂದೆ ಅನೇಕರು ಭಾರತಕಥೆಯನ್ನು ಬರೆದಿದ್ದಾರೆ. ಆದರೆ ಆವ ಸಂಗತಿಯನ್ನೂ ಬಿಡದಂತೆ ಕ್ರಮವಾಗಿಯೂ ಪುನೋಪರವಾಗಿಯೂ ಬರೆವುದಕ್ಕೆ ಇನ್ನಾರೂ ಸಮರ್ಥರಿಲ್ಲ—ಎಂದು ವಿದ್ವಾಂಸರು ಕೇಳಿಕೊಳ್ಳಲು "ಪೇಟಿಲೊಡರ್ಚಿದೆನೀಪ್ರಬಂಧಮಂ" ಎನ್ನುತ್ತಾನೆ. ಆಮೇಲೆ ತನ್ನ ಪೋಷಕನ ವಂಶಾವಳಿಯನ್ನು ಹೇಳಿ ಕಥೆಯನ್ನು ಆರಂಭಿಸುತ್ತಾನೆ. ಆಶ್ವಾಸಗಳ ಅಂತ್ಯದಲ್ಲಿ—

ಇದು ವಿವಿಧಬುಧಜನವಿನುತಜಿನಪದಾಂಭೋಜವರಪ್ರಸಾದೋತ್ಪನ್ನ ಪ್ರಸನ್ನಗಂಭೀರವಚನರಚನಚತುರ ಕವಿತಾಗುಣಾರ್ಣವವಿರಚಿತಮಪ್ಪ ವಿಕ್ರಮಾರ್ಜುನವಿಜಯದೊಳ್

ಎಂಬ ಗದ್ಯವಿದೆ.

ಈ ಗ್ರಂಥದ ಬಂಧವು ಆದಿಪುರಾಣದ ಬಂಧದಷ್ಟು ಲಲಿತವಾಗಿಲ್ಲ: ಪ್ರೌಢವಾಗಿಯೂ ಭಾವಗರ್ಭಿತವಾಗಿಯೂ ಇದೆ. ಆದರಲ್ಲಿ ಸಂಸ್ಕೃತಪದಗಳು ಹೆಚ್ಚು; ಇದರಲ್ಲಿ ಕನ್ನಡಪದಗಳು ಹೆಚ್ಚು.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ.—

ರಾಜಧರ್ಮ (ಅರ್ಜುನೋಕ್ತಿ).

ಒತ್ತಿ ತಜುಂಬಿ ನಿಂದ ರಿಪುಭೂಜನಮಾಜದ ಬೀರ್ಗಳಂ ನಭ।
ಕ್ಕೆತ್ತದೆ ಬಂದು ತನ್ನ ಮಜಿಪೊಕ್ಕೊಡೆ ಕಾಯದೆ ಚಾಗದೊಳ್ಪಿನ ॥
ಚ್ಚೊತ್ತದೆ ಪೂಣ್ದು ಬಾಟ್ಪಿ ಪುಟ್ಟುವಾನಸನೆಂಬನಜಾಂಡಮೆಂಬದೊಂ।
ದತ್ತಿಯ ಪಣ್ಣೊಳಿರ್ಪ ಪುಟ್ಟುವಲ್ಲದೆ ಮಾನಸನೇ ಮುರಾಂತಕಾ ॥ 49 ॥

## ಸತ್ತವರಿಗಾಗಿ ದುಃಖಿಸುವುದು.

ಕಬ್ಬಿದವರ್ಗಬ್ಬುದಬ್ಬಿಪ್ಪೊಡವರೇಬ್ಬಿಪ್ಪೊಡಮಂತವರಿಂ ಬಬ್ಬಿಕ್ಕೆ ತಾ ।
ಮುಬ್ಬಿಪೊಡಮೇಬ್ಬರಂತವರಣಂ ತಮಗಂ ಬಬ್ಬಿಪ್ಪುಕಿಲ್ಲ ಧರ್ಮಮಂ ॥
ಗಬ್ಬಿಯಿಸಿಕೊಳ್ಳುದೊಂದೆ ಚದುರಿಂತುಟು ಸಂಸೃತಿಧರ್ಮಮೇಕೆ ಬಾ ।
ಯಬ್ಬಿವುದದೇಕೆ ಚಿಂತಿಸುವುದೇಕೆ ಪಲುಂಬುವುದೇಕೆ ನೋವುದೋ ॥ 50 ॥

## ಧನಮದ.

ನುಡಿ ತಡನಪ್ಪುದೊಂದು ಮೊಗಮೊಳ್ ಮುಜುಕಂ ಪೊರೆಕೊಳ್ಳುದೊಂದು ನಾ ।
ಣ್ಗೆಡೆಗುಡದಿರ್ಪುದೊಂದು ನುಡಿಗಳ್ ಪೊಜಿಯಂ ಮಜಿಯಿಪ್ಪುದೊಂದು ಕ ॥
ಳ್ಗುಡಿದವರಂದಮಿಂತು ನಿರಿ ಸಾರ್ತರೆ ಸಾರ್ವುದದರ್ಕೆ ಸಂದೆಯಂ ।
ಬಡದೆ ಜಲಕ್ಕನೀಗಳಜಿದೆಂ ನಿರಿ ಕಳ್ಕೊಡಪುಟ್ಟಿತೆಂಬುದಂ ॥ 51 ॥

## ಅರ್ಜುನನ ವಿರಹ.

ಅಲರಲರ್ಗಣ್ ಮುಗುಳ್ ನಗೆ ಮಡಲ್ ತೊಡೆ ತುಂಬಿ ಕುರುಳ್ ತಳಿರ್ ತಳಂ ।
ಗೊಲೆ ಮೂಲೆ ಕಂಪು ಕಂಪು ಕೊಸೆನೆಳ್ಪುಗುರ್ಗಳ್ ಕುಡಿ ತೋಳ್ ನಯಂ ನಯಂ ॥
ನೆಲೆ ನೆಲೆ ಧಂಗಿ ಧಂಗಿ ಪದನಾ ಪೆಳೆವಾರ್ವಯ್ ನೆಜಿತಲ್ಲಿದೆಂತೊ ಕೋ ।
ಮುಲಲತೆ ಪೇಬ್ಬಿನೆಸ್ಸಸಯಳಂ ಮಜಿಗೊಂದುಮೊ ನೂಜಿಗೊಂದುಮೋ ॥ 52 ॥

## ನಂದನ.

ಕವಿನ ಮದಾಳಿಯುಂ ಮಸುಳನಾಗಿ ಪಯೊಜರಜಂಗಳೊಳ್ ಕವಿ ।
ಲ್ಗಖಿಲನುನಾಗಿ ಬಂದ ಮುಲಯಾನಿಲನೂಪೆ ತೆರಳ್ದ ಚೂತವ ॥
ಲ್ಲವದ ತೆರಳ್ಕೆ ತದ್ವನವಿಲಾಸಿನಿಯುಟ್ಟ ದುಕೂಲದೊಂದು ಪ ।
ಲ್ಲವದ ತೆರಳ್ಕೆಯಂತೆಸೆಯೆ ಕಣ್ಗೆಸೆದಿರ್ದುವು ನಂದನಾಳಿಗಳ್ ॥ 53 ॥

ಮಿಡಿದೊಡೆ ತನಿಗಬ್ಬು ರಸಂ । ಬಿಡುವುವು ಬಿರಿದೊಂದು ಮುಗುಳ ಕಂಪಿನೊಳೆ ಮೊಗಂ।
ಗಿಡುವುವು ತುಂಬಿಗಳಬ್ಬಿಮೆ।ವಡುವುವು ಕುಡಿದೊಂದು ಪಣ್ಣ ರಸದೊಳ್ ಗಿಳಿಗಳ್ ॥54॥

## ವರ್ಷಾಕಾಲ.

ಪೆಸೆ ಪಸುರೇಜು ಪಚ್ಚೆಯೊಳೆ ಮುಚ್ಚಿ ಮುಸುಂಕಿದ ಮಾಲ್ಕಿಯಾದುದಾ ।
ಗಸಮಳಿನೀಳನೀಳಗಳಕಂಠತಮಾಳವಿನೀಳನೀರದ ॥
ಪ್ರಸರವಿಭಾಸಿಯಾದುದು ಸವಿಾರನುದಾರಕದಂಬಕೇತಕೀ ।
ಪ್ರಸರರಜಸ್ಸ್ಪರಪ್ರಕಟಪಾಂಸುಳವಾದುದು ಮೇಘಕಾಲದೊಳ್ ॥ 55 ॥

ಪೊಳೆವಮರೇಂದ್ರಗೋಪದ ಪಸುರ್ತ್ತೆಳವುಲ್ಗಳ ತಳ್ತ ಕಾರ್ಮುಗಿ ।
ಲ್ಗಳ ಕಿಜುಗೊಂಕುಗೊಂಕಿದ ಪೊನಲ್ಗಳ ಕೆಂಪು ಪಸುರ್ಪು ಕರ್ಪು ಬೆ ॥

ಳ್ವೊಳಕೊಳೆ ಶಕ್ರಕಾರ್ಮುಕವಿಳಾಸಮನೇನಿರ್ದೆಗೊಂಡು ಬೀಟದ।
ತ್ತಳಗಮನುಂಟುಮಾಡಿದುದೊ ಕಾಮನ ಕಾರ್ಮುಕದಂತೆ ಕಾರ್ಮುಕಂ ॥ 56 ॥

## ಶರತ್ಕಾಲ.

ಕಡವಿನ ಕಂಪಡಂಗಿದುದು ಜಾದಿಯ ಸೊಂಪೆಸೆದತ್ತು ಸೋಗೆಯು।
ರ್ಕುಡುಗಿದುದಂಚೆಯುರ್ಕು ಪೊಸತಾಯ್ತು ಮುಗಿಲ್ಗಳ ನೀಳ್ದ ಕಪ್ಪುಮೋ ॥
ಗಡಿಸಿದುದಿಂದುಮಂಡಳದ ಕರ್ಪೆಸೆದತ್ತು ಘನಾಗಮಂ ಮೊದ।
ಲ್ಗಿಡೆ ಶರದಾಗಮಂ ನೆಜಿಯೆ ಪರ್ಬಿ ಸಮಸ್ತಮಹೀವಿಭಾಗಮಂ ॥ 57 ॥

ಅಳಿ ಬಿರಿದಿರ್ದ ಜಾದಿಯೊಳಿ ಪಲ್ಮೊರೆಯುತ್ತಿರೆ ಹಂಸೆ ಪೂತ ಪೂ।
ಗೊಳದೊಳಿ ರಾಗಿಸುತ್ತಿರೆ ಶುಕಾವಳಿ ಬಂಧುರಗಂಧಶಾಳಿ॰ಂ ॥
ಕುಳದೊಳಿ ಪಾಯ್ದು ಪಾಯ್ದು ನೆಲೆಯುತ್ತಿರೆ ಸಾರೆ ಚಕೋರಮಿಂದುಮಂ।
ಡಳಗಳಿತಾಮೃತಾಸವಮನುಂಡುಸಿರುತ್ತಿರೆ ಚೆಲ್ವು ಶಾರದಂ ॥ 58 ॥

## ಭೀಷ್ಮಶರತಲ್ಪ.

ತಿಂತಿಣಿಯಾಗಿ ನಟ್ಟ ಕಣೆಯೊಳ್ ನೆಲಮುಟ್ಟದ ಮೆಯ್ಯೊಳತ್ತವಿ।
ತ್ತಂ ತೆಜಿದಿರ್ದ ಪುಣ್ಗಳಿಸೆವಕ್ಕರದಂತಿರೆ ನೋಡಿ ಕಲ್ಪಿಮೆಂ ॥
ಬಂತೆಯೊಲಿರ್ದನಟ್ಟವಣೆಗೋಲ್ಗಳ ಮೇಲೆಸೆದಿರ್ದ ವೀರಸಿ।
ದ್ಧಾಂತದ ಶಾಸನಂಬರೆದ ಪೊತ್ತಗೆಯಂತಮರಾಪಗಾತ್ಮಜಂ ॥ 59 ॥

## ರಾಜಸೇವೆ.

ಕೊಯನೆ ಸಂದೆಮಾಚ್ಪಿ ಕಡುವಂದೆಯನೊಳ್ಗಲಿಮಾಚ್ಪಿ ತಕ್ಕನಂ।
ಪೋಲೆಯನ ಮಾಚ್ಪಿ ಮುಂ ಪೋಲೆಯನಂ ನೆಜಿ ತಕ್ಕನ ಮಾಚ್ಪಿ ತವ್ಮೊಳ ॥
ಗ್ಗಲಿಸಿ ಪೊದಚ್ಪು ಸರ್ವಿದವಿನೇಕತೆಯಿಂ ನೃಪಚಿತ್ತವೃತ್ತಿ ಸಂ।
ಚಲನುದಜುಂದಮೋಲಗಿಸಿ ಬಾಚ್ಪುದೆ ಕಷ್ಟಮಿಳಾಧಿನಾಥರಂ ॥ 60 ॥

## ಸ್ತ್ರೀಶೋಕ.

ಇಜುವ ಪಿಣಿಲ್ ತೆರಳ್ವೊಜಿವ ಕಣ್ಣಸಿ ಮಾಣದೆ ಮೋದೆ ಶೋಕದ।
ಚ್ಚಿಜುದವೊಲಿರ್ದ ಬಾಸುಚ್ಚನಚ್ಚಲ್ವು ಕಚ್ಚೀಲ್ವು ಬಚ್ಚಲ್ವು ಜೋಲ್ವು ಮೆಯ್ಯ್।
ಮಜುಗುವ ಬೇಗದೊಳ್ಕೊಗಮಣಂ ದಸೆಗಾಣದ ನೋಟಮಾರುಮಂ।
ಮಜುಗಿಸೆ ಬಂದುದಂದು ಕರುಣಂ ಬರೆ ನೈರಿನೃಪಾಂಗನಾಜನಂ ॥ 61 ॥

## ದುರ್ಯೋಧನ ಪ್ರಲಾಪ.

ಒಡಲೆರಡೊಂದೆ ಜೀವಮಿವರ್ಗೆಂಬುದನೆಂಬುದು ಲೋಕವಿಖ್ಯಾತಮಾಗಳಾ।
ನುಡಿ ಪುಸಿಯಾಯ್ತು ನಿನ್ನಸು ಕಿರೀಟಿಯ ಶಾತಶರಂಗಳಿಂದೆ ಪೋ ॥

ಪೊಡಮೆನಗಿನ್ನು ವಿಾಯೊಡಲೊಳಿರ್ದುದು ನಾಣಿಲಿಜೀವಮೆಂದೊಡಾ ।
ವೆಡೆಯೊಳೆ ನಿನ್ನೊಳೆನ್ನ ಕಡುಗೂರ್ಮೆಯುಮಬ್ಜಿಜುಮುಂಗವಲ್ಲಭಾ ॥ 62 ॥

## ಬನವಾಸಿ ದೇಶ.

ತಂಕಣ ಗಾಳಿ ಸೋಂಕಿದೊಡವೊಳ್ನುತಿಗೆಯ್ದೊಡವಿಂಪನಾಳ್ದ ಗೇ ।
ಯುಂ ಕವಿವೊಕ್ಕುಡಂ ಬಿರಿದ ಮುಲ್ಲಿಗೆಗಂಡೊಡಮಾದ ಕೆಂದಲಂ ॥
ಪಂ ಕೆಳಿಗೊಂಡೊಡಂ ಮಧುಮಹೋತ್ಸವಮಾದೊಡಮೇನನೆಂಬೆನಾ ।
ರಂಕುಸವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿದೇಶಮಂ ॥ 63 ॥

---

## ಅಸಗ. ಸು. 945.

**ಪೊನ್ನನು** (ಸು. 950) ತನ್ನ **ಶಾಂತಿ**ಪುರಾಣದಲ್ಲಿ ಈ ಕವಿಯ ಹೆಸರನ್ನು ಹೇಳಿ ತಾನು "ಕನ್ನಡಕವಿತೆಯೊಳಸಗಂ । ಗನ್ನೂರ್ಮಡಿ" ಎಂದು ಹೇಳಿಕೊಂಡಿದ್ದಾನೆ. **ನಯಸೇನನು** (1112) ತನ್ನ **ಧರ್ಮಾ**ಮೃತದಲ್ಲಿ—"ಅಸಗನ ದೇಸೆ" ಎಂದು ಈತನ ಹೆಸರನ್ನು ಹೇಳಿದ್ದಾನೆ. **ದುರ್ಗಸಿಂಹನು** (ಸು. 1145) ಈತನನ್ನು ಮನಸಿಜ, ಚಂದ್ರ, ಇವರ ಜತೆಯಲ್ಲಿ ಸೇರಿಸಿ

ಪೊಸತೆನಿಸಿ ದೇಸೆಯಿಂ ನವ । ರಸಮೆಸೆಯಲ್ಕೊಳ್ಪುವೆತ್ತ ಮಾರ್ಗದಿನಿಳೆಗೇ ।
ನೆಸೆದುವೊ ಸುಕವಿಗಳಿನೆ ಸೆಗ । ಲ್ವಿಸಗನ ಮನಸಿಜನ ಚಂದ್ರ [ಭಟ್ಟನ ಕೃತಿಗಳ್॥]

ಎಂದು ಹೊಗಳಿದ್ದಾನೆ. **ಕೇಶಿರಾಜನೂ** (ಸು. 1260) ಪೂರ್ವಕವಿಗಳ ಗೋಷ್ಠಿಯಲ್ಲಿ ಈತನನ್ನು ಸೇರಿಸಿದ್ದಾನೆ. ಆದುದರಿಂದ ಈತನು ಪ್ರೌಢಕವಿಯಾಗಿದ್ದಿರಬೇಕು. ಇವನು ಆವ ಗ್ರಂಥಗಳನ್ನು ಬರೆದಿದ್ದಾನೆಯೋ ತಿಳಿಯದು.[1] ಪೊನ್ನನು (ಸು. 950) ಈತನ ಹೆಸರನ್ನು ಹೇಳುವುದರಿಂದ ಈತನು ಅವನಿಗಿಂತ ಹಿಂದೆ ಇದ್ದನೆಂಬುದು ವ್ಯಕ್ತವಾಗಿದೆ: ಸುಮಾರು 945 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇನೆ.

---

## ಪೊನ್ನ ಸು. 950.

ಈತನು **ಶಾಂತಿ**ಪುರಾಣವನ್ನೂ ಜಿನಾಕ್ಷರಮಾಲೆಯನ್ನೂ ಬರೆದಿದ್ದಾನೆ. **ಶಾಂತಿ**ಪುರಾಣದ ಕೊನೆಯಲ್ಲಿರುವ

ಪ್ರಕಟಂ ಲೋಕೋತ್ತರಲ್ ॥ ಕೆಕಪರಿಣತಿ ಪೊನ್ನಿಗಂಗೆ ಶಾಂತೀಶ್ವರರಾ ।
ಮಕಥಾಪ್ರಶಸ್ತಿಯಿಂದಾ । ದ ಕೃತಿಗಳ್ . . . . . ॥
ವಿದಿತಭುವನೈಕರಾಮಾ । ಭ್ಯುದಯಕ್ಕಂ ಬೆಳೆಗುಮಾವುದಂತರಮಿಂತೀ ।
ಪದಿನಾಲ್ಕುಂ ಭುವನಂಗಳ್ । ಪದಿನಾಲ್ಕಾ ಶ್ವಾಸರಚನೆಗಂ ಬೆಲೆಯಕ್ಕುಂ ॥

---

1. ಇವನು ಸಂಸ್ಕೃತದಲ್ಲಿ ವರ್ಧಮಾನಪುರಾಣವನ್ನು ಬರೆದಿದ್ದಾನೆ.

ಎಂಬ ಪದ್ಯಗಳಿಂದ ಈತನು ಹದಿನಾಲ್ಕಾಶ್ವಾಸವುಳ್ಳ ರಾಮಕಥೆ ಅಥವಾ ಭುವನೈಕರಾಮಾಭ್ಯುದಯ ಎಂಬ ಗ್ರಂಥವನ್ನೂ ಬರೆದಿರುವಂತೆ ತಿಳಿಯಬರುತ್ತದೆ. ಅಲ್ಲದೆ "ಸಂದ ಗತಪ್ರತ್ಯಾಗತಮೆಂದೀಕೃತಿಯೆಂದಿವರ್ಕೆ" ಎಂಬುದರಿಂದ ಶಾಂತಿಪುರಾಣವೆಂಬ "ಈಕೃತಿ" ಯಲ್ಲದೆ "ಗತಪ್ರತ್ಯಾಗತ" ವಾದ ಮತ್ತೊಂದು ಕೃತಿಯೂ ಈತನಿಂದ ರಚಿತವಾಗಿರಬೇಕು. ಈ ರಾಮಕಥೆಯೂ ಗತಪ್ರತ್ಯಾಗತ ಕೃತಿಯೂ ನಮಗೆ ದೊರೆತಿಲ್ಲ. ಶಬ್ದಮಣಿದರ್ಪಣದಲ್ಲಿ—

ಉದಯಾಸ್ತೋನ್ನತಶೈಲಸೇತುಹಿಮವತ್ಕುತ್ಕೀಲಪರ್ಯಂತಸಂ।
ಪದೆಯಂ ವಾರ್ಧಿತರಂಗಸಂಗಸಿಸಪತ್ಯಾಂಚೀಕಲಾಪಾಂಚಿತಾ ॥
ಸ್ಪದೆಯಂ ಸಾಧಿಸಿ ಕಬ್ಬಿಗಂಗೆ ನೆಲನಂ ನಿರ್ವ್ಯಾಜದಿಂದಂ ನಿಮಿ।
ರ್ಚಿದ ಗೆಲ್ದಂ ಭುವನೈಕರಾಮನಮಹಿಪಂಗಕ್ಕುಂ ಪೆಜರ್ಗಕ್ಕುಮೇ ॥[1]
.....ಆನೆಯ ಮೀಲೆಯುಮಾಳ ಮೀಲೆಯುಂ।
ಕುದುರೆಯ ಮೀಲೆಯುಂ ಪರಿದುಪೊಂದೆ ಗಜಂ ಭುವನೈಕರಾಮನಾ ॥[2]

ಎಂಬ ಪದ್ಯಗಳಲ್ಲಿ ಭುವನೈಕರಾಮ ಎಂಬ ಒಬ್ಬ ರಾಜನ ಹೆಸರು ಹೇಳಿದೆ. ಒಂದು ವೇಳೆ ಇದು ಪೊನ್ನನ ಭುವನೈಕರಾಮಾಭ್ಯುದಯದ ಪದ್ಯವಾಗಿದ್ದರೂ ಇರಬಹುದು. ಇವನ ಗತಪ್ರತ್ಯಾಗತಕೃತಿ ಸಂಸ್ಕೃತಭಾಷೆಯಲ್ಲಿರಬಹುದೆಂದು ತೋರುತ್ತದೆ. ಇವನು ಒಂದು ಅಲಂಕಾರಗ್ರಂಥವನ್ನೂ ಬರೆದಿರುವುದಾಗಿ ಕೆಲವರು ಹೇಳುತ್ತಾರೆ.

ಈತನು ಜೈನಕವಿ. ಇವನಿಗೆ ಪೊನ್ನ, ಪೊನ್ನಿಗ, ಪೊನ್ನಮಯ್ಯ, ಸವಣ, ಕುರುಳ್ಗಳ ಸವಣ ಎಂಬ ಹೆಸರುಗಳುಂಟು; ಕವಿಚಕ್ರವರ್ತಿ, ಉಭಯಕವಿಚಕ್ರವರ್ತಿ, ಸರ್ವದೇವಕವೀಂದ್ರ, ಸೌಜನ್ಯಕಂದಾಂಕುರ ಎಂಬ ಬಿರುದುಗಳೂ ಉಂಟು.

.....ಕವಿತಾರಸಮುಂ ಸದರ್ಥವಾ ॥
ದಿತ್ಪಮನಿಂದ್ರನಂದಿಮುನಿಯುಂ ಪಡೆದೊಂ ದೊರೆಯಾರ್ ಕವಿತ್ವವಾ।
ದಿತ್ಪಫಲಂ ಹಿ ಶಾಸ್ತ್ರಮೆನಿಪನ್ನತಿಯುಂ ಕವಿಚಕ್ರವರ್ತಿಯೊಳ್ ॥

ಎಂಬುದರಿಂದ ಈತನ ಗುರು ಇಂದ್ರನಂದಿ[3] ಎಂದು ತಿಳಿಯುತ್ತದೆ.

ಭುವನದ ಕನ್ನಡಸಕ್ಕದ। ಕವಿಗಳ್ ಸಲೆ ಸಾಲೆ ಸೋಲೆ ಸವಣಂಗಿತ್ತಂ।
ಸವಿವೇಕಮುಭಯಕವಿಚ। ಕ್ರವರ್ತಿವೆಸರಂ ನಿಜಾಹಿತೋಷ್ಣಂ ಕೃಷ್ಣಂ ॥

---

1. ಪುಟ 188.

2. ಪುಟ 146.

3. ಈ ಹೆಸರಿನ ಒಬ್ಬ ಜೈನಗುರು ಸಂಸ್ಕೃತದಲ್ಲಿ ಸಮಯಭೂಷಣವೆಂಬ ಒಂದು ಗ್ರಂಥವನ್ನು ಬರೆದಿದ್ದಾನೆ. ಇವನೇಯೋ ಏನೋ ತಿಳಿಯದು.

ಕವಿತಾವಿಳಾಸಮಂ ಚ । ಕ್ರವರ್ತಿ ತಾನಿರ್ದು ಮೆಚ್ಚಿ ಪೆಸರ್ಗೊಂಡೆರಡುಂ ।
ಕವಿತೆಯೊಳಮುಭಯಕವಿಚ । ಕ್ರವರ್ತಿಯೆನೆ ನೆಗಲ್ದಿನೀಕುರುಳ್ಗಳ ಸವಣಂ ॥

ಎಂಬ ಪದ್ಯಗಳಿಂದ ಈತನಿಗೆ ಕೃಷ್ಣರಾಜನು ಉಭಯಕವಿಚಕ್ರವರ್ತಿಯೆಂಬ ಬಿರುದನ್ನು ಕೊಟ್ಟಂತೆ ತಿಳಿಯುತ್ತದೆ. ಈ ವಿಷಯವನ್ನು **ಜನ್ನನೂ** (1209) ತನ್ನ **ಯಶೋಧರಚರಿತ್ರೆ**ಯಲ್ಲಿಯ—

ಕನ್ನರನಾದ ಮಿಂ ಕುಡೆ । ಹೊನ್ನಂ ಮನಮೊಸೆದು ತೈಲಪಂ ಕುಡೆ ರನ್ನಂ ।
ನುನ್ನಿಸಿ ಬಲ್ಲಾಳಂ ಕುಡೆ । ಜನ್ನಂ ಕವಿಚಕ್ರವರ್ತಿವೆಸರಂ ತಳೆದಂ ॥

ಎಂಬ ಪದ್ಯದಲ್ಲಿ ದೃಢಪಡಿಸುತ್ತಾನೆ. ಈ ಅಂಶವನ್ನೇ **ದುರ್ಗಸಿಂಹನು** (ಸು. 1145)

.....ಪಡೆದಂ ವಿಶ್ವಾ ।
ವನಿಪಾಲಂ ಕೃಷ್ಣನರೇಂ । ದ್ರನಿಂಯಿ ಕವಿಚಕ್ರವರ್ತಿವೆರಂ ಪೊನ್ನಂ ॥

ಎಂಬ ಪದ್ಯದಲ್ಲಿ ಹೇಳಿದ್ದಾನೆ.

**ರನ್ನನು** (993) ಈ ಕವಿಯನ್ನು ಹೊಗಳುವುದರಿಂದ ಈತನು ಅವನ ಹಿಂದೆ ಇದ್ದಿರಬೇಕು. ಅಲ್ಲದೆ ಈತನಿಂದ ಶಾಂತಿಪುರಾಣವನ್ನು ಬರೆಯಿಸಿದ ಮಲ್ಲಪ, ಪುನ್ನಿಮಯ್ಯ, ಎಂಬವರು ಮುಂದೆ ತೈಲಪನ ಚಮೂಪತಿಗಳಾದಂತೆ ರನ್ನನ ಅಜಿತಪುರಾಣದಿಂದ ತಿಳಿಯುತ್ತದೆ. ಈ ತೈಲಪನು 973 ರಿಂದ 997ರ ವರೆಗೆ ರಾಜ್ಯವಾಳಿದನು. ಆದುದರಿಂದ ಕವಿಗೆ ಉಭಯಕವಿಚಕ್ರವರ್ತಿಯೆಂಬ ಬಿರುದನ್ನು ಕೊಟ್ಟ ರಾಜನು 939 ರಿಂದ 968ರ ವರೆಗೆ ಆಳಿದ ಕನ್ನರ ಎಂಬ ಹೆಸರುಳ್ಳ ರಾಷ್ಟ್ರಕೂಟವಂಶದ 3 ನೆಯ ಕೃಷ್ಣರಾಜನಾಗಿರಬೇಕು. ಈ ಕಾರಣಗಳಿಂದ ಪೊನ್ನನು ಸುಮಾರು 950 ರಲ್ಲಿ ಇದ್ದಿರಬಹುದು.

ಈತನು ಬಹಳ ಪ್ರಸಿದ್ಧನಾದ ಕವಿ. ಇವನನ್ನು ಅನೇಕ ಕವಿಗಳು ಹೊಗಳಿದ್ದಾರೆ:—

ಚದುರರೆನಿಸಿದರ ಚಿತ್ತ । ಕ್ಕಿದು ಪೊಸತೆನಿಸಿರ್ದ ರೀತಿಯಂ ನಿರ್ವಹಿಪ ।
ಗ್ಗದ ಬಲ್ಮೆ ಬಗೆಯ ತನಗ । ಲ್ಲದೆ ಪೆಱರಿರ್ಪಲ್ಲಿನಿಪ ಪೊನ್ನನಂ ಪೊಗಟ್ಪಿದರಾರ್ ।

[**ಪಾರ್ಶ್ವಪಂಡಿತ** (1205)]

ಹೀಗೆಯೇ **ನಯಸೇನ** (1112), **ನಾಗವರ್ಮ II** (ಸು. 1145), **ರುದ್ರಭಟ್ಟ** (ಸು. 1180), **ಕೇಶಿರಾಜ** (ಸು. 1260), **ಮಧುರ**[1] (ಸು. 1385) ಮೊದಲಾದ ಕವಿಗಳೆಲ್ಲಾ ಸ್ತುತಿಸಿದ್ದಾರೆ. ಈತನ ಗ್ರಂಥಗಳಿಂದ ನಾಗವರ್ಮ ಕೇಶಿರಾಜಾದಿಲಕ್ಷಣಗ್ರಂಥಕಾರರು ಪದ್ಯಗಳನ್ನು ತೆಗೆದು ಉದಾಹರಿಸಿದ್ದಾರೆ. **ಪಂಪ, ಪೊನ್ನ,**

1. ರನ್ನನ ಚರಿತೆಯನ್ನು ನೋಡಿ

ರನ್ನ, ಈ ಮೂವರೂ "ರತ್ನತ್ರಯ" ವೆನಿಸಿಕೊಂಡಿದ್ದಂತೆ ರನ್ನನ ಅಜಿತ ಪುರಾಣದಲ್ಲಿಯ—

ಕವಿಜನದೊಳ್ ರತ್ನತ್ರಯ । ಪವಿತ್ರರೆನೆ ನೆಗಟ್ಟಿ ಪಂಪನುಂ ಪೊನ್ನಿಗನುಂ ।
ಕವಿರತ್ನನುಮಿವಮೂವರ್ । ಕವಿಗಳ್ ಜಿನಸಮಯದೀಪಕರ್ ಪೆಜಿರೊಳರೇ ॥

ಎಂಬ ಪದ್ಯದಿಂದ ತಿಳಿಯುತ್ತದೆ.

ಈ ಕವಿ ಪಂಪನಂತೆಯೇ ಆವ ಹಿಂದಣ ಕವಿಯನ್ನೂ ಸ್ಮರಿಸಿಲ್ಲ. ಆದರೆ—

ಕನ್ನಡಕವಿತೆಯೊಳಸಗಂ । ಗನ್ನರ್ಮಡಿ ರೇಖೆಗಗ್ಗಳಂ ಸಕ್ಕದದೊಳ್ ।
ಮುನ್ನುಳ್ಳ ಕಾಳಿದಾಸಂ । ಗನ್ನರ್ಮಡಿ ರಚನೆಯೊಳ್ ಕುರುಳ್ಗಳ್ವಣಂ ॥

ಎಂಬ ಪದ್ಯದಲ್ಲಿ ಹಿಂದೆ ಇದ್ದ ಕನ್ನಡಕವಿಯಾದ ಅಸಗನನ್ನೂ ಸಂಸ್ಕೃತಕವಿಯಾದ ಕಾಳಿದಾಸನನ್ನೂ ಹೇಳಿ ಅವರಿಗಿಂತ ತಾನು ಚತುರನೆಂದು ಹೇಳಿಕೊಳ್ಳುತ್ತಾನೆ.

ಈತನು ಸಂಸ್ಕೃತದಲ್ಲಿಯೂ ಕನ್ನಡದಲ್ಲಿಯೂ ತನಗಿರುವ ಪ್ರೌಢಿಯನ್ನೂ ಅದ್ವಿತೀಯಪಾಂಡಿತ್ಯವನ್ನೂ ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ :—

ದೊರೆಯಿಲ್ಲೆನೆ ಪೊರೆಯಿಲ್ಲೆನೆ । ನೆರಮಿಲ್ಲೆನೆ ಸಮುಜಿ ಸಕ್ಕದಂ ಕನ್ನಡಮೆಂ ।
ಬೆರಡುಂ ಕವಿತೆಯನಮಳ್ಪ । ತ್ತರಂತಿರೊಡನದಪಿದಂ ಕುರುಳ್ಗಳ್ವಣಂ ॥

ಇದಿರ್ಗೆ ಬರೆ ಪೊನ್ನಿಗಂ ಕಿಡಿ । ಸದಿರಂ ಕವಿಗಮಕಿವಾದಿವಾಗ್ಮಿಗಳ ಕವಿ ।
ತ್ಪದ ಗಮಕಿತ್ಪದ ವಾದಿ । ತ್ಪದ ವಾಗ್ಮಿತ್ಪದ ಪೊಡರ್ಪುಮಂ ದರ್ಪಮುಮಂ ॥

ನೇರಿದುವೆನಿಪೆರಡುಂ ಕವಿ । ತಾರಸವಿಶಾಸನನೊರ್ವನೊಳ್ ನೆಲಸಿದುವಿ ।
ನ್ನಾರಾರ ಕವಿತ್ವಮುಮವಿ । ಚಾರಿತರಮಣೀಯಮಲ್ಲಿ ಪುರುಳಜಿಸುವುದೇ ॥

ಎರಡೆಡೆಗೆ ವರ್ಸನುಂ ಮ । ಚ್ಚರಿಸುವನುಂ ನುಡಿಗೆ ಸಕ್ಕದಂ ಕನ್ನಡಮೆಂ ।
ಬೆರಡುಂ ಕವಿತೆಯು ಬಲ್ಮೆಗೆ । ಬೆರಲೆತ್ತಿದನಿಳೆಯೊಳೀ ಕುರುಳ್ಗಳ್ವಣಂ ॥

ಜನಮಡಿಗಿಡೆ ಪಜರಿಂ ಪೇ । ಬ್ಬಿಸದ ವೆಸರ್ ಪೆಜರೆನಿಸಿ ಪೆಜರಿಂದಂ ಸೋ ।
ಏಸದ ಪೆಜಂಗಿಸಿಸೆಡೆಗುಡ । ದಸಹಾಯಕವೀಶ್ವರಂ ಕುರುಳ್ಗಳ್ವಣಂ ॥

ಸೋಡಿರೆ ಪೇಳ್ವ್ಡ ಮೂಜುವರೆ [1] ಭಾಷೆಗಳಂ ಪೆಜರರ್ಥಮಂ ಪೆಜರ್ ।
ಮಾಡಿದ ದೇಸೆಯುಂ ಪೆಜರ ಬಿನ್ನಣಮುಂ ಪೆಜರೋಜೆಯುಂ ಕಡಂ ॥

ಮಾಡುವ ಕಳ್ವ ಕೊಳ್ವ ಖಳರಿರ್ಕೆಮ ಕಬ್ಬಿಗಗಳ್ಳರೆಂದು ಕೂ ।
ಸಾಡಿಸಲಾಗದಕ್ಕರದ ರಾಜ್ಯದೊಳೀ ಕವಿಚಕ್ರವರ್ತಿಯಾ ॥

ಕಂಡೊಡನಾಡಿದಕ್ಕರಿಗನಕ್ಕರಿಗಂ ಗೆಡೆಗೊಂಡ ಪಂಡಿತಂ ।
ಪಂಡಿತನೆಯ್ದೆ ಕಲ್ತ ಚದುರಂ ಚದುರಂ ಸಭೆಗುಕ್ತಿ ಮಂಡನಂ ॥

---

1. 1ನೆಯ ನಾಗವರ್ಮನ ಚರಿತೆಯನ್ನು ನೋಡಿ.

ಮಂಡನಮಚ್ಚುಯಂ ಕಿಡಿಸದಾಳ್ದ ನೃಪಂ ನೃಪನಿರ್ದ ಮಂಡಲಂ ।
ಮಂಡಲಮೆಂದೊಡೆಯ್ದುಲರಿದುನ್ನತಿಯಂ ಕವಿಚಕ್ರವರ್ತಿಯಾ ॥

**ಈತನ ಗ್ರಂಥಗಳಲ್ಲಿ**

## 1. ಶಾಂತಿಪುರಾಣ.

**ಇದು 16 ನೆಯ ತೀರ್ಥಂಕರನಾದ ಶಾಂತಿನಾಥನ ಚರಿತವು; ಚಂಪೂ ರೂಪವಾಗಿದೆ; ಹನ್ನೆರಡು ಆಶ್ವಾಸಗಳಾಗಿ ಭಾಗಿಸಲ್ಪಟ್ಟಿದೆ. ಈ ಕಾವ್ಯಕ್ಕೆ ಕವಿ ಪುರಾಣಚೂಡಾಮಣಿ ಎಂಬ ಹೆಸರಿಟ್ಟಿರುವಂತೆ—**

ಶಾಂತಿಜಿನಜನ್ಮಜಲಧಿಗೆ। ಶಾಂತಿಪುರಾಣಮೆ ಪರಾರ್ಥ್ಯರತ್ನಮಿದಂ ಪೇ ।
ಳ್ದಂತು ಕವಿಚಕ್ರವರ್ತಿಯೆ । ನೋಂತಂ ಪೆಸರಿಂ ಪುರಾಣಚೂಡಾಮಣಿಯಂ ॥

**ಎಂಬ ಪದ್ಯದಲ್ಲಿಯೂ ಆಶ್ವಾಸಗಳ ಕೊನೆಯ ಗದ್ಯಗಳಲ್ಲಿಯೂ ಹೇಳುತ್ತಾನೆ. ಈ ಗ್ರಂಥವನ್ನು ಬರೆವುದಕ್ಕೆ ಕಾರಣವನ್ನು ಈ ರೀತಿಯಾಗಿ ಹೇಳುತ್ತಾನೆ:—**

ವೆಂಗಿವಿಷಯದಲ್ಲಿಯ ಕಮ್ಮೆನಾಡಿನ ಪುಂಗನೂರೆಂಬ ಗ್ರಾಮದಲ್ಲಿ ಕೌಂಡಿನ್ಯ ಗೋತ್ರೋದ್ಭವನಾದ ಯಾಜ್ಞವಲ್ಕ್ಯಸದೃಶನಾದ ನಾಗಮಯ್ಯನೆಂಬ ಜೈನಬ್ರಾಹ್ಮಣನಿದ್ದನು. ಆತನಿಗೆ ಮಲ್ಲಪನೆಂದೂ ಪುನ್ನಿಮಯ್ಯನೆಂದೂ ಇಬ್ಬರು ಮಕ್ಕಳಿದ್ದರು. ಇವರು ತಮ್ಮ ಗುರುವಾದ ಜಿನಚಂದ್ರದೇವನ ಪರೋಕ್ಷವಿನಯಪ್ರದರ್ಶನಾರ್ಥವಾಗಿ ಒಂದು ಗ್ರಂಥವನ್ನು ಬರೆವಂತೆ ಕೇಳಿಕೊಳ್ಳಲು ಕವಿ ಈ ಗ್ರಂಥವನ್ನು ಬರೆದನು.

ಗ್ರಂಥಾವತಾರದಲ್ಲಿ ಶಾಂತಿನಾಥನನ್ನು ಸ್ತುತಿಸಿದ್ದಾನೆ. ಬಳಿಕ ಸಿದ್ಧಾಚಾರ್ಯೋಪಾಧ್ಯಾಯಸಾಧುಗಳನ್ನೂ ಯಕ್ಷ ಯಕ್ಷಿಗಳನ್ನೂ ಸರಸ್ವತಿಯನ್ನೂ ಕ್ರಮವಾಗಿ ನುತಿಸಿದ್ದಾನೆ. ತರುವಾಯ ಜಿನಚಂದ್ರಮುನಿಯ ಗುರುಪರಂಪರೆಯನ್ನು[1] ಕೊಟ್ಟು ಆ "ಜಿನಚಂದ್ರನಂ ಶಾಂತೀಶ್ವರಕಥೆಗೆ ಪತಿಯೆನಲ್ಕೆ ಪೇಳ್ದಿಂ ಕೃತಿಯಂ" ಎಂದು ಹೇಳಿ, ಗ್ರಂಥವನ್ನು ಬರೆಯಿಸಿದ ಮಲ್ಲಪಯ್ಯ ಪುನ್ನಿಮಯ್ಯರ ವಂಶಾವಳಿಯನ್ನು ವಿವರಿಸಿ ಕಥೆಯನ್ನು ಆರಂಭಿಸಿದ್ದಾನೆ. ಆಶ್ವಾಸಗಳ ಕೊನೆಯಲ್ಲಿ—

ಇದು ಜಿನೇಂದ್ರಚರಣಸರಸೀರುಹಶಿಲೀಮುಖಾಯಮಾನ ಶ್ರೀಮದುಭಯಕವಿಚಕ್ರವರ್ತಿನಿರ್ವರ್ತಿತಮುಂ ಅಮ್ಮನಭಕ್ತಾಭಿಧಾನವಿದ್ಯಾನಿಧಾನಮಲ್ಲಪಾರ್ಯತದನುಜಾತಾಭಿಜಾತಸಾರಸ್ವತಪುನ್ನಮಾರ್ಯಕಾರಿತಮುಮಪ್ಪ ಪುರಾಣಚೂಡಾಮಣಿಯೊಳ್

**ಎಂಬ ಗದ್ಯವಿದೆ.**

---

1. ಕಾನೂರ್ಗಣದ ಅರ್ಹದ್ಬಲಿ ಯತಿಯು ಶಿಷ್ಯ ಅರ್ಹಣಂದಿಯೋಗಿ; ಆತನ ಶಿಷ್ಯ ವೀರಣಂದಿ ಮುನಿ; ಆವನ ಶಿಷ್ಯ ಬೆಟ್ಟದರಾಮಣಂದಿ; ಆತನ ಶಿಷ್ಯ ಚಂಡಿನಂದಿ; ಅವನ ಶಿಷ್ಯನೇ ಕಥೆಗೆ ಪತಿಯಾದ ಜಿನಚಂದ್ರಮುನಿ; ಈತನು ಒಂದು ಪೂಜ್ಯಪಾದಚರಿತವನ್ನು ಬರೆದಿರುವಂತೆ ಕವಿ ಹೇಳುತ್ತಾನೆ.

ಇವನ ಬಂಧವು ಪ್ರೌಢವಾಗಿದೆ. ಈ ಪುರಾಣದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

## ಪ್ರಭಾತ.

ದೆಸೆಗಳ್ ಮೃಗಮದಕರ್ದಮ । ದೆಸಕವಿನಪ್ಪಿಕ್ಕಿ ಪಾಲೊಳೋಲಾಡಿದವೋಲ್ ।
ಎಸೆದಿರ್ದುವೊಯ್ಯನೊಯ್ಯನೆ । ಮಸುಳ್ದುವು ತಾರಗೆಗಳೊಣಗಿದಗೆಗಳ ತೆಱದಿಂ ॥ 64 ॥

## ಚಂದ್ರೋದಯ.

ಉದಯಕ್ಕಾಶ್ಮಭೃತ್ತಟಂ ರಂಗನುನುಡುತಿ ಪುಷ್ಪಾಂಜಲಕ್ಷೀಸಮಂ ಸ ।
ರ್ವಿದಗುರ್ವಪ್ಪಂಧಕಾರಂ ನವಯವನಿಕೆಯಂ ನಾಲ್ಕುಜಾವಂಗಳುಂ ತ ॥
ಪ್ಪದೆ ನಾಲ್ಕಂಕಂಗಳಂ ಪೋಲ್ತಮರ್ದಿರೆ ಹಿಮಕ್ಯನ್ನಾಟಿಕಾಸೂತ್ರಧಾರಾ ।
ಭ್ಯುದಯಪ್ರಾರಂಭಮಿಂದಾಶೆಯೊಳೆನೆಯೆನೆ ಚೆಲ್ವಾಯ್ತು ಶೀತಾಂಶುಬಿಂಬಂ ॥ 65 ॥

## ಮಾವು.

ಪುದಿದೆಳಗಾಯ್ ಬಸಂತದ ಮೊದಲ್ ನೆರೆಪೊಪ್ಪುವ ಪೋರೆಗಾಯ್ ಬನಂ ।
ತದ ನಡು ವಸ್ ಬಸಂತದ ಸೆಜ್ಜಿಂಗೆಸೆ ತನ್ಮಯನುಪ್ಪಿನಂ ಬನಂ ॥
ತದ ನಿಮಿರ್ದಾವಿ ಮಧ್ಯನುವಸಾನವೊದಂಬಡೆ ತನ್ನೊಳಂ ಬನಂ ।
ತದೊಳಮದೇಂ ಬಸಂತದಪಗುಂತಿಗೆ ಬಾೞ್ದೊಡಲಾಯ್ತೊ ಮಾಮರಂ ॥ 66 ॥

## ಸರಸ್ಸು.

ವಿದಳಿತಹೇಮತಾಮರಸಸಾಂದ್ರಲಸನ್ಮಕರಂದಸಿಕ್ತಪ ।
ಟ್ಪದತತಿ ಪಾಯ್ದುಪಾಯ್ದುಸರಸೀರುಹವಿಂ ಸರಸೀರುಹಕ್ಕೆ ಪೋ ॥
ಲ್ತುದು [ಮಧುವುಂ] ಮನೋಭವನುಮಬ್ಜಯೊಳಾಡುವ ಪೊನ್ನ ಬಟ್ಟನೊ ।
ರ್ವೊದಲೆ ಮನೋಜಕಾಂತೆ ಮುಳಿಸಿಂ ದೆಸೆಗೋವದೆ ಸೂಸುವಂದಮಂ ॥ 67 ॥

## ವನ.

ಮೆಯ್ವಸಮೊಂದೆ ಪೂವಿನೊಳೆ ಪೋಗೆ ತೆಱಂದಿರಿದಳ್ಳಿಗೊಂಬಿನೊಳ್ ।
ಪಾಯ್ವುದುಮೊಂದೆ ಪಣ್ಣ ರಸಮಂ ಸವಿಗಾಱಿದೆ ಚಂಚುವಂ ನೆಲ ॥
ಕ್ಕುಯ್ವುದುವೊಂದೆ ಕೋರಕದೊಳಟ್ಟಿಮೆವಟ್ಟವಚತ್ತು ಲಂಘನಂ ।
ಗೆಯ್ವುದುಮಾದುದಾಮಧುಪಕೀರಪಿಕಾಳಿಗೆ ನಂದನಂಗಳೊಳ್ ॥ 68 ॥

ನಯಮಳವಟ್ಟ ಪಚ್ಚೆ ಸಹಕಾರದೊಳಿಂಗುಳಿಕಂ ತಳೆರ್ತಶೋ ।
ಕೆಯೊಳರಿದಾಳಮುಳ್ಳಲರ್ದ ಸಂಪಗೆಯೊಳ್ ಕಡುಗಪ್ಪು ಭೃಂಗಕೋ ॥
ಟಿಯೊಳೆಸೆದಿರ್ದ ನೀಲಗಿರಿಮಲ್ಲಿಗೆಯೊಳ್ ಸಮನಾಗೆ ಚೀರಫ ।
ಟ್ಟಿಯೆ ಬರೆದಿಟ್ಟ ಚಿತ್ರದ ಬನಕ್ಕೆಣೆಯಾಯ್ತು ಬನಂ ವಿದೇಹದೊಳ್ ॥ 69 ॥

### ವಸಂತ.

ಸಕಲಮಧುವ್ರತಪ್ರಚಯಮೆಂಬ ಪಿಕಾವಳಿಯೆಂಬ ಸದ್ಪದ ।
ಶುಕಕುಳಮೆಂಬ ನೆಚ್ಚಿಸಿದ ಗಾಯಕಸತ್ತತಿಹಾರವೃತ್ತಪಾ ॥
ರಕತತಿಗಿತ್ತನಗ್ಗಳದ ಮಾವಿನ ಪೂವಿನ ಮಾವಿನಂಕುರ ।
ಪ್ರಕರದ ಮಾವಿನೊಳ್ತಡಿಯ.....ಜೀವಿತಮಂ ಬಸಂತದೊಳ್ ॥ 70 ॥

### ಅಶೋಕ.

ಭ್ರಾಜಿತಧೂಮಮಾಳಿ ಮಧುಪಾವಳಿ ಕೇಸುರಿ ಕೆಂದಳಿರ್ ತದು ।
ರ್ವ್ರೀಜಮುದಗ್ರವಹ್ನಿಯೆನೆ ಯಾತ್ರೆಯೊಳಂಗಜನಕ್ಕು ಚಾವಮಂ ॥
ಪೂಜಿಸಿ ವಿಾನಕೇತನಮನರ್ಚಿಸಿ ವಾಜಿಯನಾಜಿಗೆಂದು ನೀ ।
ರಾಜಿಸಲಂದು ಪೊತ್ತಿಸಿದ ದೀಪ್ಯಮೆನಿಪ್ಪುವು ತಳ್ತಶೋಕೆಗಳ್ ॥ 71 ॥

### ಮಲ್ಲಿಗೆ.

ಕುಸುಮಕುಲಕ್ಕೆ ನಿನ್ನರಸೆ ನಿನ್ನ ವಿಳಾಸಮೆ ನಿನ್ನ ಚೆಲ್ವಿ ನಿ ।
ನ್ನೆಸಕಮೆ ನಿನ್ನ ಸಲ್ಗೆ ಮಧುಲಕ್ಷ್ಮಿಯೊಳಾಮಲಯಾನಿಲೇಂದುಗಳ್ ॥
ಪೊಸಯಿಸೆ ನಿನ್ನ ಸೌರಭಮನೆಂದಭಿಷೇಕಪುರಸ್ಸರಂ ಸ್ಮರಂ ।
ನಸುವಿರಿದಿರ್ದ ಮಲ್ಲಿಗೆಗೆ ಕಟ್ಟಿದನಂಕದ ರಾಜ್ಯಪಟ್ಟಮಂ ॥ 72 ॥

## 2. ಜಿನಾಕ್ಷರಮಾಲೆ.

ಇದು ಜಿನಸ್ತುತಿರೂಪವಾದ ಗ್ರಂಥವು; ಇದರಲ್ಲಿ 39 ಕಂದಪದ್ಯಗಳವೆ. ಈ ಪದ್ಯಗಳು ಕಕಾರದಿಂದ ಳಕಾರದ ವರೆಗೆ ವರ್ಣಾನುಕ್ರಮವಾಗಿ ಆರಂಭಿಸುವುದಲ್ಲದೆ ಅಂತಾದಿಯಾಗಿಯೂ ಇವೆ.

ಳಾಂತಂಬರಂ, ಬುಧರ್ ಪೊಗ । ಳ್ವಿಂತಕ್ಕರಮಾಲೆಯುಂ ಜಿನಸ್ತವದೊಳಗೋ ।
ರಂತಿರೆ ಪೇಳ್ವುದಂ ಹಿಮಸೇ । ತ್ಪಂತವರಂ ಪರೆವಿನಂ ಕುರುಳ್ಗಳಸವಣಂ ॥

ಎಂಬ ಕೊನೆಯ ಪದ್ಯದಿಂದ ಗ್ರಂಥರಚನಾಕ್ರಮವೂ ಕವಿಯ ಹೆಸರೂ ಗೊತ್ತಾಗುತ್ತವೆ.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

ಘನದುಷ್ಕೃತಬಲನಿರ್ವೇ । ದನಕರಚಾರಿತ್ರ ಚಿತ್ರವಾಗಿರೆ ಪೊಗಟ್ಪುಂ ।
ಜಿನನಾಥ ಭವದ್ಗುಣಮಂ । ವಿನತೋರ್ವ್ರೀಜನಮನಂತ ಮತ್ತತಿಸಜ್ಞಾ ॥ 73 ॥

[1] ಜವನಂ ಭಾವಲಯಂ ಸಿಂ । ಹವಿಷ್ಟರಂ ಚಮರಮಮರತೂರ್ಯಮಶೋಕಂ ।
ಧವಳಚ್ಛತ್ರಂ ಸುರಪು । ಷ್ಪವೃಷ್ಟಿ ಜಿನನಾಥ ನಿಮ್ಮೊಳಿಸೆವುದು ನಿಚ್ಚಂ ॥ 74 ॥

1. ಈ ಪದ್ಯವು ಶಬ್ದಾನುಶಾಸನದಲ್ಲಿ ಉದಾಹೃತವಾಗಿದೆ. ಸೂ. 65

ಋಷಕುಲಶಾಂಕಿತಪದಯುಗ । ವೃಷಭಧ್ವಜ ವೃಷಭನಾಥ ಸುಚರಿತ್ರ ಗಜ ।
ದ್ವಿಷವಿಷ್ಟರ ಪೊಗಟಿಲ್ ಮ । ದ್ವಿಷಯಮೆ ನಿನ್ನಮಲಗುಣಗಣಂ ಸರ್ವಜ್ಞಾ ॥ 75 ॥
ಜೊಬ್ಬಿನ ಸೊಡರಿಂ ಚರುವಿಂ । ಚಿಬ್ಬಂಬೊಯ್ದೆಲೆಯಿನಲರಿನಕ್ಷತೆಯಿಂದಂ ।
ಮೆಬ್ಬರಿಸಿ ನಿನ್ನನರ್ಚಿಸಿ । ನಿಬ್ಬರಮಾಗಿರ್ದ ನರಕಗತಿಯೊಳ್ ಬೀಳ್ವಿಂ ॥ 76 ॥

---

## ಚಾವುಂಡರಾಯ. 978.

ಈತನು **ಚಾವುಂಡರಾಯಪುರಾಣವನ್ನು** ಬರೆದಿದ್ದಾನೆ. ಈ ಗ್ರಂಥದ ಕೊನೆಯಲ್ಲಿರುವ—

ನವಶತಸಂಖ್ಯೆಯಾಗೆ ಶಕಕಾಲಸಮಂ ನೆಗಟ್ದೀಶ್ವರಾಬ್ದಮು ।
ತ್ಸವಕರಮಾಗೆ ಫಾಲ್ಗುಣಸಿತಾಷ್ಟಮಿ ರೋಹಿಣಿ ಸೋಮವಾರಮಂ ॥
ಬಿವು ಶುಭದಂಗಳಾಗೆ ಪರಮೋತ್ಸವದಿಂ ಗುಣರತ್ನಭೂಷಣಂ ।
ಕವಿಜನಕೀಮಿರಂ ಬರೆದು ಪುಸ್ತಕಕೇಜಸದಂ ಪುರಾಣಮಂ ॥

ಎಂಬ ಪದ್ಯದಿಂದ ಈ ಪುರಾಣವು ಶಕ 900 ನೆಯ ಈಶ್ವರ ಸಂವತ್ಸರದಲ್ಲಿ—ಎಂದರೆ ಕ್ರಿ. ಶ. 978 ರಲ್ಲಿ—ಹುಟ್ಟಿದಂತೆ ವ್ಯಕ್ತವಾಗುತ್ತದೆ. ಈ ಗ್ರಂಥದಿಂದ ಈತನ ವಿಷಯವಾಗಿ ಅನೇಕ ಸಂಗತಿಗಳು ತಿಳಿಯುತ್ತವೆ:—ಇವನು ಬ್ರಹ್ಮಕ್ಷತ್ರಿಯವಂಶದಲ್ಲಿ ಹುಟ್ಟಿದವನು. ಇವನಿಗೆ ಅಜಿತಸೇನಾಚಾರ್ಯಶಿಷ್ಯನಾದ "ಗಂಗಕುಲಾಬ್ಜಚಂದ್ರ, ಗಂಗಕುಲಚೂಡಾಮಣಿ, ಜಗದೇಕವೀರ, ಧರ್ಮಾವತಾರ, ನೊಳಂಬಕುಲಾಂತಕದೇವ" ಎಂಬ ಬಿರುದುಗಳುಳ್ಳ ರಾಚಮಲ್ಲನು (974–984) 'ಪರಮಸ್ವಾಮಿ.' ಈ ರಾಚಮಲ್ಲನಲ್ಲಿ ಈತನು ಸೇನಾನಾಯಕನಾಗಿಯೂ ಮಂತ್ರಿಯಾಗಿಯೂ ಇದ್ದನು. ಇವನೂ ಅಜಿತಸೇನಾಚಾರ್ಯನ ಶಿಷ್ಯನು. ಈತನು ಶ್ರವಣಬೆಳ್ಗೊಳದಲ್ಲಿ ಅಪರಿಮಿತವಾಗಿ ಧನವ್ಯಯಮಾಡಿ ಗೊಮ್ಮಟೇಶ್ವರಪ್ರತಿಷ್ಠೆಯನ್ನು ಮಾಡಿಸಿದನು. ರಾಚಮಲ್ಲನು ಇವನ ಔದಾರ್ಯಕ್ಕೆ ಮೆಚ್ಚಿ "ರಾಯ" ಎಂಬ ಬಿರುದನ್ನು ಕೊಟ್ಟನು. ಶ್ರ. ಬೆ. 345 ನೆಯ ಶಾಸನದಲ್ಲಿಯ—"ಸ್ಥಿರಜಿನ ಶಾಸನೋದ್ಧರಣರಾದಿಯೊಳಾರೆನೆ ರಾಚಮಲ್ಲಭೂ। ವರವರಮಂತ್ರಿ ರಾಯನೆ ಬಬ್ಬಿಕ್ಕೆ ***" ಎಂಬ ಪದ್ಯಭಾಗದಲ್ಲಿಯೂ ಇವನಿಗೆ "ರಾಯ" ಎಂಬ ಹೆಸರು ಉಪಯೋಗಿಸಲ್ಪಟ್ಟಿದೆ. ಈತನಿಗೆ "ಅಣ್ಣ" ನೆಂದೂ ಒಂದು ಹೆಸರು ಇದ್ದಂತೆ ತಿಳಿಯುತ್ತದೆ. ಈತನು ಗೋವಿಂದರಾಜನನ್ನು ಬೆಂಕೊಂಡು ರಾಚಯನನ್ನು ಕೊಂದು ಕೀರ್ತಿಯನ್ನು ಹೊಂದಿದಂತೆ ಹೇಳಿಕೊಳ್ಳುತ್ತಾನೆ; ಬಹಳ ಪರಾಕ್ರಮಶಾಲಿಯಾಗಿದ್ದಂತೆ ತಿಳಿಯಬರುತ್ತದೆ. ತನಗೆ ಇದ್ದ ಬಿರುದುಗಳನ್ನೂ ಅವಕ್ಕೆ ಕಾರಣಗಳನ್ನೂ ಹೀಗೆ ಹೇಳುತ್ತಾನೆ:—

ಆಳ್ದನ ಬಿಸದಿಂ ಖೇಡಗಕಾಳಿಗದೊಳ್ ವಜ್ರಳದೇವನಂ ಗೆಲ್ದ ಸಾಹಸದಿಂ ಸಮರ ಧುರಂಧರಂ ; ಗೋನೂರ ಬಯಲೊಳ್ ಬಂದೊಡ್ಡಿದ ನೊಳಂಬರ ಕಾಳಿಗದೊಳ್ ಜಗದೇಕ ವೀರನ ಮುಂತೆ ತನ್ನ ಬಲಮಂ ಮೆಱೆದುದಜಂ ವೀರಮಾರ್ತಾಂಡಂ ; ಉಚ್ಚಂಗಿಯ ಕೋಟೆಯೊಳ್ ರಾಜಾಯ್ತನೊಳ್ ಒರ್ವನೆ ರಣಮಂ ಮೆಱೆದುದಜಂದೆ ರಣರಂಗ ಸಿಂಗಂ ; ಬಾಗೆಯೂರ ಕೋಟೆಯೊಳ್ ತ್ರಿಭುವನನೀರನಂ ಕೊಂದು ಗೋವಿಂದರನಂ ಪುಗಿಸಿದುದಜಂ ವ್ಯರಿಕುಲಕಾಲದಂಡಂ ; ನೃಪಕಾಮನ ಕೋಟೆಯೊಳ್ ರಾಜ, ಬಾಸ, ಸಿವರ, ಕೂಣಾಂಕ ಮೊದಲಾದ ಕಲಿಗಳಂ ಒಂದೆ ಮೆಯ್ಯೊಳ್ ಪೆಣೆವಿಜ್ಜದುದಜಂ ಭುಜವಿಕ್ರಮಂ ; ತನ್ನ ತಮ್ಮನಂ ನಾಗವರ್ಮನಂ ಕೊಂದ ಪಗೆಗೆ ಚಲದಂಕಗಂಗನುಂ ಗಂಗರ ಭಟನುಮೆನಿಸಿದ ಮುದುರಾಚಯನಂ ಕೊಂದುದಜಂ ಸಮರಪರಶುರಾಮಂ, ಜಟ್ಟಿಗರನಟ್ಟಿದ ದಂಡಿನೊಳೆ ಸಷ್ಟಂಟಕಂ ಮಾಡಿದುದಜಂ ಪ್ರತಿಪಕ್ಷರಾಕ್ಷಸಂ ; ವೀರಭಟಕೋಟಿಯಂ ತವೆ ಕೊಂದುದಜಂ ಭಟಮಾರಿ ; ನಿಶ್ಶಂಕಾದಿಗುಣಪರಿತಕ್ಷನೈಕಕಾರಣನಪ್ಪುದಜಂ ಗುಣವಂ ಕಾವಂ ; ಸತ್ಯತ್ಯಾಗಾದಿಸಮನ್ವಿತನಪ್ಪುದಜಂ ಸಮ್ಯಕ್ತ್ವರತ್ನಾಕರಂ ; ಪರಾಂಗನಾಪರದ್ರವ್ಯ ಪರಾಙ್ಮುಖನಪ್ಪುದಜಂ ಶೌಚಾಭರಣಂ, ಪರಿಹಾಸದೊಳಂ ಸೂನೃತವಚನನಪ್ಪುದಜಂ ಸತ್ಯಯುಧಿಷ್ಠಿರಂ; ಅತಿಪ್ರಚಂಡವೀರಮಾಂಡಲಿಕಶಿಖಿಮಂಡನಮಾಗೆಯಪ್ಪುದಜಂ ಸುಭಟ ಚೂಡಾಮಣಿ.

ವೀರಮಾರ್ತಾಂಡನೆಂಬ ತನ್ನ ಬಿರುದನ್ನು—

ಚಂಡಪ್ರತಾಪರೂರ್ಜಿತ । ಮುಂಡಲರಶ್ಮಿಮತೀಜರೆಂದೆಂದೆ ಭಯಂ ।
ಗೊಂಡೆಜಿಗುಗುಂ ಜನಂ ಮಾ । ರ್ತಾಂಡಂಗಂ ನೆಗಟ್ಟ್ಸ ವೀರಮಾರ್ತಾಂಡಂಗಂ ॥

ಎಂಬ ಪದ್ಯದಲ್ಲಿಯೂ ಹೇಳಿಕೊಂಡಿದ್ದಾನೆ. ಶ್ರ. ಬೆ. 281 ನೆಯ ಶಾಸನದಲ್ಲಿ (ಸು. 983) ಈತನ ವಿಜಯಗಳೂ ಬಿರುದುಗಳೂ ಹೇಳಿವೆ. ಈತನಿಗೆ 'ಗುಣರತ್ನಭೂಷಣ' 'ಕವಿಜನಶೇಖರ' ಎಂಬ ಬಿರುದುಗಳೂ ಇದ್ದಂತೆ ತಿಳಿಯುತ್ತದೆ. ಈತನು ಕವಿರನ್ನನಿಗೆ (993) ಪೋಷಕನಾಗಿದ್ದನೆಂದು ಅಜಿತಪುರಾಣದಿಂದ ತಿಳಿಯುತ್ತದೆ.

ಈತನ ಗ್ರಂಥ

## ಚಾವುಂಡರಾಯಪುರಾಣ ಅಥವಾ ತ್ರಿಷಷ್ಟಿಲಕ್ಷಣ ಮಹಾಪುರಾಣ.

ಇದು ಚತುರ್ವಿಂಶತಿತೀರ್ಥಕರರ ಚರಿತವು. ಈ ಮಹಾಪುರಾಣವನ್ನು ಆದಿಯಲ್ಲಿ ಕೂಚಿಭಟ್ಟಾರಕನೂ ನಂದಿಮುನೀಶ್ವರನೂ ವಿರಚಿಸಿದರು. ಅನಂತರ ಕವಿಪರಮೇಶ್ವರನು ತ್ರಿಷಷ್ಟಿಶಲಾಕಾಪುರುಷಪುರಾಣವನ್ನು ಬರೆದನು. ಅದನ್ನೇ ಜಿನಸೇನ ಮುನೀಶ್ವರನು "ಭವ್ಯಾಳಿಗೆ ಪೇಟ್ದು ಮಾಣೆ ಗುಣಭದ್ರಮುನೀಶ್ವರರ್

ತ್ರಿಷಷ್ಟಿಪುರುಷಪ್ರತಿಬಂಧಪುರಾಣ" ವನ್ನು ಬರೆದರು. ಅದನ್ನೇ ಚಾವುಂಡರಾಯನು "ಭವ್ಯಕೋಟಿಗೆ ಅಜಿಪಿದೆಂ" ಎಂದು ಹೇಳುತ್ತಾನೆ.

ಗ್ರಂಥಾವತಾರದಲ್ಲಿ ವೃಷಭಜಿನೇಂದ್ರಾದಿಚತುರ್ವಿಂಶತಿ ಜಿನರನ್ನು ಸ್ತುತಿಸುತ್ತಾನೆ. ಬಳಿಕ ಗೃಧ್ರಪಿಂಛಾಚಾರ್ಯನು ಮೊದಲುಗೊಂಡು ಅಜಿತಸೇನಾಚಾರ್ಯನವರೆಗೆ ಗುರುಗಳನ್ನು ಕ್ರಮವಾಗಿ ಸ್ತುತಿಸಿದ್ದಾನೆ.[1] ತರುವಾಯ (1) ಋಷಭ (2) ಅಜಿತ (3) ಶಂಭವ (4) ಅಭಿನಂದನ (5) ಸುಮತಿ (6) ಪದ್ಮಪ್ರಭ (7) ಸುಪಾರ್ಶ್ವ (8) ಚಂದ್ರಪ್ರಭ (9) ಪುಷ್ಪದಂತ (10) ಶೀತಲ (11) ಶ್ರೇಯಾಂಸ (12) ವಾಸುಪೂಜ್ಯ (13) ವಿಮಲ (14) ಅನಂತ (15) ಧರ್ಮ (16) ಶಾಂತಿನಾಥ (17) ಕುಂಥು (18) ಅರ (19) ಮಲ್ಲಿ (20) ಮುನಿಸುವ್ರತ (21) ನಮಿ (22) ನೇಮಿ (23) ಪಾರ್ಶ್ವ (24) ವರ್ಧಮಾನ, ಎಂಬ ಚತುರ್ವಿಂಶತಿ ತೀರ್ಥಕರರ ಚರಿತವನ್ನು ಬರೆದಿದ್ದಾನೆ.

ಗ್ರಂಥದ ಅಂತ್ಯದಲ್ಲಿ ಶ್ರುತಕೇವಲಿಗಳು, ಕೇವಲಿಗಳು, ದಶಪೂರ್ವಧರರು, ಏಕಾದಶಾಂಗಧರರು, ಆಚಾರಾಂಗಧರರು, ಪೂರ್ವಾಂಗದೇಶದೇಶಧರರು, ಇವರುಗಳ ಸಂಖ್ಯೆಯನ್ನೂ ಹೆಸರುಗಳನ್ನೂ ಹೇಳಿ, ಅನಂತರ ಅರ್ಹದ್ಬಲಿ, ಮಾಘಣಂದಿ, ಭೂತಬಲಿ, ಪುಷ್ಪದಂತ, ಶ್ಯಾಮಕುಂದಾಚಾರ್ಯ, ತೆಂಬುಳೂರಾಚಾರ್ಯ, ಸಮಂತಭದ್ರ, ಶುಭನಂದಿ, ರವಿನಂದಿ, ಏಲಾಚಾರ್ಯ, ವೀರಸೇನ, ಜಿನಸೇನ, ಇವರನ್ನು ಹೇಳಿ—

ಇಂತಯ್ತತೊಂಬಜಿನಮುನಿ । ಸಂತತಿಯಿಂದಂ ಶ್ರುತಾವತಾರಂ ಧರೆಗೋ ।
ರಂತೆ ನಿಮಿರ್ದೆಂದುದವರ್ಗಳ । ಸಂತತಿಯೊಳ್ ನೆಗಳ್ದಿರ್ಜಿತಸೇನಾಚಾರ್ಯರ್ ॥

ಎಂದು ತನ್ನ ಗುರುಗಳ ವಿಷಯವನ್ನು ತಿಳಿಸಿದ್ದಾನೆ.

ಗ್ರಂಥದ ಅಂತ್ಯಭಾಗದಲ್ಲಿ ಮಾತ್ರ—

ಇದು ಸಕಲಭುವನಜನವಂದ್ಯಮಾನ ಸಂಯಮಸಮಾಧಾನವಿಜಿತದುರಿತಾರಾತಿಸೇನ ಶ್ರೀಮದಜಿತಸೇನಭಟ್ಟಾರಕಪಾದಪದ್ಮಪ್ರಸಾದಾಸಾದಿತರತ್ನತ್ರಯಾಲಂಕೃತ ಧರ್ಮವಿಜಯಿ ಶ್ರೀಮಚ್ಚಾವುಂಡರಾಯವಿರಚಿತಮಪ್ಪ ತ್ರಿಷಷ್ಟಿಲಕ್ಷಣಮಹಾಪುರಾಣದೊಳ್

1. ತತ್ತ್ವಾರ್ಥಸೂತ್ರವನ್ನು ಬರೆದ ಗೃಧ್ರಪಿಂಛಾಚಾರ್ಯ; ಕವಿತಾಚತುರನಾದ ಸಿದ್ಧಸೇನಾಚಾರ್ಯ; ತತ್ತ್ವಾರ್ಥಭಾಷ್ಯವನ್ನೂ ತರ್ಕಶಾಸ್ತ್ರವನ್ನೂ ಬರೆದ ಸಮಂತಭದ್ರ; ರತ್ನತ್ರಯವೆನಿಸಿದ ಸಮಂತಭದ್ರತ್ರಯ; ವ್ಯಾಕರಣಕರ್ತೃವೂ ಗಗನಗಮನಸಾಮರ್ಥ್ಯನೂ ತಾರ್ಕಿಕತಿಳಕನೂ ಆದ ಪೂಜ್ಯಪಾದಭಟ್ಟಾರಕ; ಚರಿತಪುರಾಣದಲ್ಲಿ ಒಂದನ್ನೂ ತ್ರಿಷಷ್ಟಿಶಲಾಕಾಪುರುಷರ ಪುರಾಣವನ್ನೂ ಬರೆದ ಕವಿಪರಮೇಶ್ವರ; ವೀರಸೇನಭಟ್ಟಾರಕ; ಜಿನಸೇನಭಟ್ಟಾರಕ; ಗುಣಭದ್ರದೇವ; ಸರ್ವಸಾಧುಭಟ್ಟಾರಕ; ಧರ್ಮಸೇನಾಚಾರ್ಯ; ಮುಳ್ಳುಂದದೊಳ್ ಸನ್ಯಸನವಂ ಮಾಡಪೋಗಿ ಬಳಿಕ ಕೊಪಣಾದ್ರಿಯಲ್ಲಿ ಮುಡಿಪಿದ ಸುಕುಮಾರಸೇನಮುನಿ; ನಾಗಸೇನ ವೀರಸೇನ ಚಂದ್ರಸೇನ ಮುನಿಪುಂಗವರು; ಆರ್ಯಸಂದಿಮುನಿ; ನಯಸೇನಮುನಿಶಿಷ್ಯನೂ ತನ್ನ ಗುರುವೂ ಆದ ಅಜಿತಸೇನಾಚಾರ್ಯ.

ಎಂಬ ಗದ್ಯವಿದೆ. ಆದರೆ ಉಳಿದ ಕಡೆಯಲ್ಲಿ—

ಇದು ಸಕಲಶಾಸ್ತ್ರ ಸಂಯಮಸಂಪನ್ನ ಶ್ರೀಮದಜಿತಸೇನಭಟ್ಟಾರಕಚರಣಕಮಲ ಚಂಚರೀಕ ಧರ್ಮವಿಜಯ * * * ಪುರಾಣದೊಳ್

ಎಂದಿದೆ.

ಚಾವುಂಡರಾಯಪುರಾಣವು ಪ್ರಾಯಃ ಗದ್ಯರೂಪವಾಗಿದೆ. ಆದ್ಯಂತಗಳಲ್ಲಿ ಕೆಲವು ಪದ್ಯಗಳಿವೆ. ಗ್ರಂಥದ ಮಧ್ಯದಲ್ಲೆಯೂ ಅಲ್ಲಲ್ಲಿ ಒಂದೆರಡು ಪದ್ಯಗಳು ದೊರೆಯುತ್ತವೆ. ಇತರ ಕವಿಗಳು ಬರೆದಿರುವ ಜಿನಪುರಾಣಗಳು ಹೀಗಿಲ್ಲ; ಅವುಗಳಲ್ಲಿ ಅಲ್ಲಲ್ಲಿ ಗದ್ಯಗಳಿದ್ದರೂ ಪದ್ಯಗಳೇ ವಿಶೇಷವಾಗಿವೆ. ನೃಪತುಂಗನ ಕಾಲಕ್ಕೆ ಹಿಂದೆಯೇ ಕನ್ನಡದಲ್ಲಿ ಅನೇಕ ಗದ್ಯಗ್ರಂಥಗಳು ಹುಟ್ಟಿದುದಾಗಿ ತಿಳಿಯ ಬರುತ್ತದೆ. ಅವುಗಳಲ್ಲಿ ಅವುದೂ ದೊರೆತಿಲ್ಲ. ಈಗ ದೊರೆತಿರುವ ಗದ್ಯಗ್ರಂಥ ಗಳಲ್ಲಿ ಚಾವುಂಡರಾಯಪುರಾಣವೇ ಅತಿಪುರಾತನವಾದುದು. ಈ ದೊಡ್ಡ ಗದ್ಯಗ್ರಂಥವು ಹತ್ತನೆಯ ಶತಮಾನದ ಭಾಷಾಶೈಲಿಯನ್ನು ತಿಳಿವುದಕ್ಕೆ ಬಹಳ ಉಪಯೋಗವಾದ ಸಾಧನವಾಗಿದೆ.

ಈ ಗ್ರಂಥದಿಂದ ಒಂದೆರಡು ಪದ್ಯಗಳನ್ನೂ ಸ್ವಲ್ಪ ಗದ್ಯಭಾಗವನ್ನೂ ಉದ್ಧರಿಸಿ ಬರೆಯುತ್ತೇವೆ—

### ಚಾವುಂಡರಾಯನ ಕೀರ್ತಿ.

ಸುರಶೈಲಂ ಪಿರಿದಲ್ತು ವಾರ್ಧಿ ಪಿರಿದಲ್ತಾಮೇರುಗಂ ವಾರ್ಧಿಗಂ ।
ಪಿರಿದುರ್ವೀತಳಮಲ್ತು ಮೇರುಗಿರಿಗಂ ವಾಗಾಶಿಗಂ ಧಾತ್ರಿಗಂ ॥
ಪಿರಿದಾಶಾಂತರಮಲ್ತು ಮಂದರಸಮುದ್ಯೋರ್ವೀದಿಗಂತಂಗಳಿಂ ।
ಪಿರಿದುಗ್ರಾರಿಜಯಾರ್ಜಿತೋರ್ಜಿತಯಶಂ ಶ್ರೀವೀರಮಾರ್ತಾರ್ಂಡನಾ ॥ 77 ॥

### ವಸಂತ.

ಕಳಕಂಠೀನಾದಮಾದಂ ಬಗೆಗೊಳೆ ಲಲಿತಾಶೋಕಧಾತ್ರೀರುಹಂ ಕ ।
ಣ್ಗೊಳೆ ಚೇತೋಹಾರಿಚೂತದ್ರುಮವನಿಜನಸ್ತ್ರೀಮಮಂ ಶೋಭೆಯಿಂದೀ ॥
ಟಿಕ್ಕೊಳೆ ಕಾವಂ ಪೂವಿನಂಬಂ ತೆಗೆದುಕೊಳೆ ಮುಗುಳ್ಮಲ್ಲಿಕಾಮಾಲೆ ಚಿತ್ತಂ ।
ಗೊಳೆ ಬಂದತ್ತಂದು ಮಾದ್ಯನ್ಮಧುಕರಕುಳರುಂಕಾರಕಾಂತಂ ವಸಂತಂ ॥ 78 ॥

### ಸೀತಾಪಹಾರ.

ರಾವಣಂ ಶೂರ್ಪನಖಿಯ ಮಾತಂ ನಿಶ್ಚಯಿಸಿ ಮಾರೀಚಂಬೆರಸು ಪುಷ್ಪಕವಿಮಾ ನಾರೂಢನಾಗಿ ನಭಸ್ಸ್ಥಲಕ್ಕೊಗೆದು ಚಿತ್ರಕೂಟೋದ್ಯಾನವನಮನೆಯ್ದಿ ಮಾರೀಚನಂ ಪರಾರ್ಥ್ಯಮಣಿಹರಿಣಪೋತಕಂಮಾಡಿ ಸೀತೆಯ ಮುಂದೆ ಸುಲ್ಲಾಯಲ್ತೀಲ್ತಿಡದಂ

ನೀತೆ ಕಂಡರಸಂಗೆ ತೋಱು ವಿಚಿತ್ರವರ್ಣಮೃಗಮಿದು ರಾಜಭವನಯೋಗ್ಯಮೆಂಬುದು ಮರಸನಾಕೆಯಲ್ತಾಯಂ ತೀರ್ಚಲೆಂದು ಮೃಗದ ಬಲ್ಮಾಯಂ ತಗುಳ್ವೊಡದು ದೂರಮು ಮಾಸನ್ನಮುಮಲ್ಲದಾಸೆದೋಱು ಕಿಱಿದೆಡೆಯನುಯ್ದಾಕಾಶಕ್ಕೆ ಪಾಱುವುದುಮದಱಿ ಪೋಬಲ್ಮಾಯನಱಿಯದೆ ಮಗುಲ್ವಿನನ್ನೆಗಮಿತ್ತ ರಾವಣಂ (ರಾಮ) ವೇಷಧರನಾಗಿ ನೀತೆಯಲ್ಲಿಗೆ ವಂದು, ಮಣಿಮೃಗಪೋತಕಮಂ ಪಿಡಿದು ಪೊಲ್ಲಿಟ್ಟೆನೀಗಳಸ್ತಮಯ ಸಮಯವಾದುದು ಪೊಲ್ಲಿಲ್ಲಿ ಪೋಪಂ ನಿಬಿಗೆಯನೇಱಿಂದು ತ್ರಿಜಿಕಾಕಾರಮಾಗಿರ್ದ ಪುಷ್ಪಕವಿಮಾನಮನೆಂಱಿಸಿ ನಿಬಿಗೆಯ ಕೆಲದೊಳ್ ತಾನುಂ ತುರಗಾರೂಢನಾಗಿ ಬರ್ಪಂ ದಮಂ ಮಾಯೆಯಿಂ ಮಾಡಿ ತನಗೆ ಮೃತ್ಯುದೇವತೆಯನುಯ್ಯಂತುಯ್ದು ಲಂಕೆಯ ನೆಯ್ದೆ ಪೊಱಪೊಱ್ತಿಲೊಳಿರ್ದು ಮಾಯಾವಿಧಿಯಂ ಪಿಂಗಿಸಿ ತನ್ನ ತಂದಾವೃತ್ತಾಂತಮನ ಱಿಪಿ ಹರಿನೀಲೋಜ್ಜ್ವಲವರ್ಣಮುಪ್ಪ ನಿಜರೂಪಮಂ ತೋಱಿ ಜನಕಾತ್ಮಜೆ ಲಜ್ಜೆಯೊಳಂ ಭಯದೊಳಂ ರಾವಣನ ವಿರಹದೊಳಂ ನೂರ್ಘಾರ್ಗತೆಯಾಗೆ, ತ್ರೀಲವತಿಯಪ್ಪ ನೀತೆಯ ಕೋಮಲಾಂಗಸ್ಪರ್ಶನದಿನಾಕಾರಗಾಮಿನಿವಿದ್ಯಾವಿನಾಶಮಕ್ಕುಮೆಂಬ ಭಯದಿಂ ಮುಟ್ಟಲಂಜ ವಿದ್ಯಾಧಿಯುರಂ ಬರಿಸಿ ನೀತಲಕ್ಕೆಯಿಗಳಿಂ ನೀತೆಯನೆಬ್ಬಿಸಿ ಱಿದೊಡಿದಾವ ಪ್ರದೇಶಮೆನೆ, ಲಂಕಾಪುರಬಹಿರುದ್ಯಾನವಿಶಾಪ್ರದೇಶಮಿಲ್ಲಿಗೆ ನಿನ್ನಂ ರಾವಣಂ ತಂದನಾತಂಗೆ ನೀಂ ಮಹಾದೇವಿಯಾಗಿ ತ್ರೀಲವತಿಯಾಗ್ಯಳಂ ಸುಖವಿರ್ಪುದು ಪೆಜದಂ ಬಗೆಯದಿರೆಂಬುದುಮದಂ ಕೇಳ್ದು ಶೋಕಾಕುಲೆಯಾಗಿ ವಿನಶ್ಯದಾತ್ಮಕಮಪ್ಪೋಲೆಗ ನುಸುಗಮೆನ್ನ ತ್ರೀಲಮಂ ಕೆಡೆ ನೆಗಲ್ತ್ತಾನಲ್ಲೆನೆನ್ನರಸನಂ ಕಾಣ್ಬನ್ನೆಗಮಾರೊಳಂ ನುಡಿವೆನಲ್ಲೆನಾತನ ಕ್ಷೇಮವಾರ್ತೆಯುಂ ಕೇಳ್ವನ್ನೆಗಮಾನುಣಲ್ಲೆನಾತಂಗೆ ಪೊಲ್ಲದಾದಂದು ಬಾಹ್ಯಾಭ್ಯಂತರಗ್ರಂಥಿಪರಿತ್ಯಾಗದಿಂ ಸನ್ಯಸನಂಗಯ್ದು ನಾವೆನೆಂದು ಪರಿಚ್ಛೇದಂಗೆಯ್ದು ದಿವವಾ (?) ಲಕ್ಷ್ಮಮಪ್ಪ ಕೇವಲಾಭರಣಂಗಳನಿರಲಿತ್ತು ಬ್ರೀದುವನೆಲ್ಲಮಂ ಕಳೆದು ನೀಮಿನ್ನೆನ್ನಂ ಮುಟ್ಟದಿರಿಮೆಂದು ಖೇಚರಿಯರಂ ಬಾರಿಸಿ ಮೌನವ್ರತದಿಂದಿರ್ದಿನಂ ಲಂಕೆಯೊಳನೇಕಮುತ್ಪಾತಂಗಳಾಗೆ ಚಕ್ರರತ್ನಮಾಯುಧಾಗಾರದೊಳ್ ಪುಟ್ಟೆ ತದುತ್ಪಾತಂಗಳಂ ಕಂಡು ವಿಜಿಗಾಗಿ ಪುರೋಹಿತಾದಿಗಳ್ ಬಂದ ನೀತೆಯುಂ ತಂದು ಪೊಲ್ಲಕೆಯ್ದೆ, ನಿನಗಹಿತಮುಮಪಖ್ಯಾತಿಯುಮಪ್ಪಂತು ಮಾಡಿದೆಯುಂ ಮಗುಲ್ಚಿ ಕುಡುವುದೊಳ್ಳಿತೆನೆ, ರಾವಣಂ ನೀತೆಯುಂ ತಂದ ಕಾರಣದಿನೆನಗೆ ಸಕಲಭೂನಾಧಿಪತ್ಯಮಂ ಮಾಲ್ಪಿ ಚಕ್ರಂ ಪುಟ್ಟದುದದಱಿಂ ನೀಮಿದರ್ಕೆ ಮಾರ್ಕೊಳ್ಳದಿರಿಮೆಂದು ಬಾರಿಸಿದಂ ॥ 79 ॥

---

## ಕಮುಳಾದಿತ್ಯ. 978.

ಈತನು ಬೆಳ್ಗಾಂ ಡಿಸ್ಟ್ರಿಕ್ಟಿನಲ್ಲಿಯ ಸೊಗಲ್ ಎಂಬ ಗ್ರಾಮದಲ್ಲಿರುವ ಒಂದು ಶಾಸನವನ್ನು [1] ಬರೆದುದಾಗಿ ಆ ಶಾಸನದ ಕೊನೆಯಲ್ಲಿರುವ

1. *Epigraphia Indica*, XVI, 3

ಭ ವನಂ ವನನಿಧಿ ಸುರಗಿರಿ । ದಿವಕುಳಮಿನಚಂದ್ರರುಳ್ಳಿನಂ ಧರ್ಮಮಿದು ।
ದ್ಭವಮಾಗಿ ನಡೆಗೆ ಶಾಸನ । ಕವಿ ಕವಳಾದಿತ್ಯರಚಿತಕಾವ್ಯಾದೇಶಂ ॥

ಎಂಬ ಪದ್ಯದಿಂದ ತಿಳಿಯುತ್ತದೆ. ಇವನು ಬ್ರಾಹ್ಮಣಕವಿಯೆಂದು ತೋರುತ್ತದೆ. ಈ ಶಾಸನದಲ್ಲಿ ಚಾಳುಕ್ಯರಾಜನಾದ ನೂರ್ಮಡಿ ತೈಲನ ಆಳಿಕೆಯಲ್ಲಿ ಕಂಚಿಯಬ್ಬೆ ಸುವರ್ಣಾಕ್ಷಿ ದೇವಾಲಯಕ್ಕೆ 978 ರಲ್ಲಿ ದತ್ತಿಯನ್ನು ಬಿಟ್ಟಂತೆ ಹೇಳಿದೆ. ಇದರಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ :—

## ಸುವರ್ಣಾಕ್ಷಿ ದೇವಸ್ಥಾನದ ಪ್ರದೇಶ

ಪಂಕಜಷಂಡವಿಂದೆಸೆನ ನೆಯ್ದುಲ ಪೂಗೊಳದಿಂ ತಳಿರ್ತ ಮಾ ।
ವಿಂ ಕುಸುಮೋದಿತಂ ಕೊಸಗು ಪಾದರಿ ನೇಜುಲಶೋಕೆ ಬಾಲಿಯಿಂ ॥
ಬಂಕದ ವೃಕ್ಷಜಾತಿಗಳಿನಿಂಚರದಿಂ ಪುಗಲೆಂಬ ಕೋಕಿಲಾ ।
ಳಂಕೃತದಿಂದೆ ಸಾಲ ಬನಮೊಪ್ಪುವುದೀವಿಷಯಾಂತರಾಳದೊಳ್ ॥ 80 ॥

ಪುಲಿಗಳ್ ಧರ್ಮಶ್ರವಣಮ । ನೆಲೆ ಮಿಡುಕದೆ ಕೇಳುತಿರ್ಪುವರಗಿಳಿಗಳ್ ನಿ ।
ರ್ಮಲಮುನಿಪರೋದುಪ್ಪೋದಂ । ಚಳವಾಪೆಡೆಯುಜ್ಜುಮು ಪೇಟ್ಟುವಿರುಳುಂ
ಸಗಲುಂ ॥ 81 ॥

ಪಾಪಿ ಪುಗಲ್ ಪುಗಲುಗ್ರದ । ಕೋಪಿ ಪುಗಲ್ ಪುಗಲಶೇಷಧರ್ಮದ್ರೋಹ ।
ವ್ಯಾಪಾರಿ ಪುಗಲ್ ಪುಗಲೆಂ । ದಾಪೊಟ್ಟುಂ ಕೋಕಿಲಂಗಳುಲಿಗುಂ ಬನದೊಳ್ ॥ 82 ॥
ಗಟ್ಟಿಪುವರಗಿಳಿಯ ಕುಕಿಲುವ । ಕಳಹಂಸೆಯ ಗಾವರಿಪ್ಪ ವೆಣ್ಪುಂಬಿಯ ಬಾ ।
ವಳಿಸುವ ಪುರುಳಿಯ ಕೋಡಂ । ಗಳ ನಗಿಸುವ ರವಮೆ ನಗದ ನಾಲ್ಕುಂದೆಸೆಯೊಳ್
॥ 83 ॥

## ಕಂಚಿಯಬ್ಬೆ

ಹರಚರಣಾಬ್ಜಭೃಂಗಿ ಕಪಟೋದಯವರ್ಜಿತೆ ನಿರ್ಮಲಾಂಗಿ ಭಾ ।
ಸುರತರಮೂರ್ತಿ ನಿರ್ಮಳಿನಕೀರ್ತಿ ದಯಾಪರೆ ದಾನಧರ್ಮತ ॥
ತ್ಪರಗುಣಯುಕ್ತೆ ದೇವಗುರುಭಕ್ತೆ ಸುಗೋತ್ರಪವಿತ್ರೆಯೆಂದು ವಿ ।
ಸ್ತರದೊಳೆ ಕೀರ್ತಿಕುಂ ವಸುಧೆ ಸಂತಸದಿಂದಮೆ ಕಂಚಿಕಬ್ಬೆಯಂ ॥ 84 ॥

## ಫಲಸ್ತುತಿ

ಮೇಳಿಸಿ ನಾಯಡಗಂ ಚಂ । ಡಾಳಿ ಕಪಾಳದೊಳೆ ಕಳ್ಳನೆಜ್ಜಿದಡುತುಂ ತ ।
ತ್ಕಾಳದೆ ಕೆರ್ದಿಂ ಮುಚ್ಚಿಸ । ಮಾಳೋಕದೊಳಿಂದ್ರನಾಕೆಯುಂ ಬಿಸಗೊಂಡಂ ॥
ದೇವಸ್ವಂ ಬ್ರಹ್ಮಸ್ವಮ । ನಾವು . . . . ಂದ ಪಾತಕನ ಪಾದರಜಂ ।
ಭಾವಿಸಲಘೋಜ್ಯಮೆನಲಾ । ದೇವಸ್ವಮನಟ್ಟವನಿಂ ನಿಕೃಷ್ಟರುಮೊಳರೇ [1] ॥ 85 ॥

---

1. ಇಂದ್ರಾ ಸ್ಪೃಷ್ಟಿ ಚಂಡಾಲೀಂ ಕಿಮುದಂ ಪಚ್ಯತೇ ಕ್ವಯಾ ।
ಶ್ವಮಾಂಸಂ ಸುರಯಾ ಸಿಕ್ತಂ ನೃಕಪಾಲೇ ಚಿತಾಗ್ನಿನಾ ॥
ದೇವಬ್ರಾಹ್ಮಣವಿತ್ತಾನಿ ಬಲಾದಪಹರಂತಿ ಯೇ ।
ತೇಷಾಂ ಪಾದರಜೋಭೀತ್ಯಾ ಚರ್ಮಣಾ ಪಿಹಿತಂ ಮುಖಾ ॥

## ನಾಗವರ್ಮ.

### ವಿಚಾರಂ.

**ಈ ಹೆಸರಿನವರು ಇಬ್ಬರು ಕವಿಗಳು ಇದ್ದಂತೆ ತಿಳಿಯಬರುತ್ತದೆ. ಛಂದೋಂಬುಧಿಯನ್ನೂ ಕಾದಂಬರಿಯನ್ನೂ ಬರೆದವನು ಒಬ್ಬ ನಾಗವರ್ಮನೆಂದೂ, ಕಾವ್ಯಾವಲೋಕನ ವಸ್ತುಕೋಶ ಕರ್ಣಾಟಕಭಾಷಾಭೂಷಣಗಳನ್ನು ಬರೆದವನು ಬೇರೊಬ್ಬ ನಾಗವರ್ಮನೆಂದೂ ನಿರ್ಧರಿಸುವುದಕ್ಕೆ ಸಾಕಾದ ಕಾರಣಗಳಿವೆ.**

ಮೈಸೂರು ಓರಿಯಂಟಲ್ ಲೈಬ್ರರಿಯಲ್ಲಿ ಪ್ರಕಟವಾಗಿರುವ ಛಂದೋಂಬುಧಿಯಲ್ಲಿ ಗ್ರಂಥಾದಿಯಲ್ಲಿರುವ ಮಂಗಳಶ್ಲೋಕಗಳಲ್ಲಿ ಕವಿಯು ಕಾಲವೇ ಮೊದಲಾದ ಅಂಶಗಳನ್ನು ನಿಶ್ಚಯಿಸುವುದಕ್ಕೆ ಸಹಕಾರಿಯಾದ ಕೆಲವು ಪದ್ಯಗಳು ಬಿಟ್ಟುಹೋಗಿವೆ. ನಾವು ನೋಡಿದ ನಾಲ್ಕು ಬೇರೆಯ ಪುಸ್ತಕಗಳಲ್ಲಿಯೂ—

ಅರಿಂ ರಕ್ಕಸಗಂಗಂ । ಗುರುಗಳ್ ನೆಗಳ್ದಜಿತಸೇನದೇವರ್ ಗಯೆಯಿಂ ।
ಪೊರೆವ ನೃಪನಣ್ಣನೆಸೆ ಮ । ಚ್ಚರಿಸುವರಾರ್ ನಾಕಿಯಿರುಳೊಳೀಂ ಪುಟ್ಟಿದನೇ ॥
ಗಂಡರ ಮೂಕುತಿಯೆನಿಸಿದ । ಮಾಂಡಳಿಕರ ಮಂತ್ರಿ ಸಂಧಿವಿಗ್ರಹಿ ರಾಯಂ ।
ಕೊಂಡಾಡಿ ಪೊರೆದನೆನೆ ಧರೆ । ಕೊಂಡಾಡದೆ ಕೊಂಡುಕೊನೆಯುದೇ ನಾಕಿಗನಂ ॥

ಎಂಬ ಪದ್ಯಗಳು ದೊರೆಯುತ್ತವೆ. ಈ ಪದ್ಯಗಳಿಂದ ಛಂದೋಂಬುಧಿಯನ್ನು ಬರೆದ ನಾಗವರ್ಮನ ಕಾಲವನ್ನು ನಿಸ್ಸಂದೇಹವಾಗಿ ನಿಶ್ಚಯಿಸಬಹುದು:

1. (1) ರಕ್ಕಸಗಂಗ.—ಈ ರಾಜನು ರಾಚಮಲ್ಲನ (974—984) ತಮ್ಮನೆಂದೂ ಆತನ ಕಾಲವಾದಮೇಲೆ ಸುಮಾರು 984 ರಿಂದ ರಾಜ್ಯಭಾರಮಾಡಿದನೆಂದೂ ಶಾಸನಗಳಿಂದ ತಿಳಿಯಬರುತ್ತದೆ. (2) ಅಜಿತಸೇನದೇವ.—ಇವನು ರಾಚಮಲ್ಲನಿಗೂ ಆತನ ಮಂತ್ರಿಯಾದ ಚಾವುಂಡರಾಯನಿಗೂ ಗುರು. (3) ಅಣ್ಣ; ರಾಯ.—ಈ ಹೆಸರುಗಳು ಚಾವುಂಡರಾಯನಿಗೆ ಉಂಟೆಂದು ಅವನ ಚರಿತೆಯಲ್ಲಿ ತಿಳಿಸಿದ್ದೇವೆ. ಆದುದರಿಂದ ಈ ನಾಗವರ್ಮನು ರಕ್ಕಸಗಂಗನ ಕಾಲದಲ್ಲಿ ಚಾವುಂಡರಾಯನಿಂದ ಪೋಷಿತನಾಗಿಯೂ ಅಜಿತಸೇನದೇವನ ಶಿಷ್ಯನಾಗಿಯೂ ಇದ್ದನೆಂಬುದು ವ್ಯಕ್ತವಾಗದಿರಲಾರದು.

ಅಲ್ಲದೆ ಕಾದಂಬರಿಯ ಕೊನೆಯಲ್ಲಿ ಕುದುರೆಗಳನ್ನು "ಸತ್ಕೃತಿವನಿತಗಿದಾ ಚಿತ್ಯಮೆಂದಿತ್ತನತ್ಯುತ್ಪವಿಂ ವಿದ್ಯುತ್ಪಭಾಮಂಡಲಿ ತಣಿವಿನೆಗಂ ಭೋಜರಾಜಕ್ಷಿತೀಶಂ" ಎಂದು ಹೇಳಿದೆ. ಧಾರಾಪುರದ ಭೋಜರಾಜನು 10 ನೆಯ ಶತಮಾನದ ಅಂತ್ಯಭಾಗದಲ್ಲಿ ಆಳುವುದಕ್ಕೆ ಆರಂಭಿಸಿದಂತೆ ತಿಳಿಯುತ್ತದೆ. ಮೇಲಣ ಪದ್ಯಭಾಗದಲ್ಲಿ ಹೇಳಿರುವ ಭೋಜರಾಜನು ಇವನೇ ಆಗಿರಬಹುದು. **ಈ ಕಾರಣಗಳಿಂದ ಈ ನಾಗವರ್ಮನು ಸುಮಾರು 990 ರಲ್ಲಿ ಇದ್ದಿರಬೇಕು.**

ಕಾವ್ಯಾವಲೋಕನದಲ್ಲಿ—

ಪ್ರಣುತಗುಣರೆನಿಪ ವಿಬುಧಾ । ಗ್ರಣಿಗಳ್ ಕೆಯ್ಕೊಂಡುಪೊಗಲ್ವಿ ಸಲೆ ನೆಗಲ್ವುವುಧಾ ।
ರಿಣಿಯೊಳಗೆ ನಾಗವರ್ಮನ । ಗುಣವರ್ಮನ ಶಂಖವರ್ಮನಧ್ಯಾನಂಗಳ್ ॥

ಎಂಬ ಪದ್ಯವು ಉದಾಹೃತವಾಗಿದೆ. ಇದರಿಂದ ಈ ಗ್ರಂಥಕರ್ತೃವಾದ ನಾಗವರ್ಮನಿಗೆ ಹಿಂದೆಯೇ ಬೇರೆ ಒಬ್ಬ ಲಕ್ಷಣಗ್ರಂಥಕಾರನಾದ ನಾಗವರ್ಮನು ಪ್ರಖ್ಯಾತನಾಗಿದ್ದನೆಂಬುದು ವ್ಯಕ್ತವಾಗುತ್ತದೆ. ಅಲ್ಲದೆ ಕಾವ್ಯಾವಲೋಕನವನ್ನು ಬರೆದ ನಾಗವರ್ಮನಿಗೆ ಅದೇ ಗ್ರಂಥದಲ್ಲಿಯ—

ಅಭಿಮತಶಬ್ದಸಂಸ್ಕರಣದಿಂ ಜನಮುಂ ತಿಳಿವಂತುಮಾಡಿ ನಾ ।
ಗ್ಭಿಭವಮದಪ್ರತರ್ಕ್ಯಮೆನೆ ಸಂದೆಸಕಂ ದೆಸೆಯುಂತನೆಯ್ದೆ ತ ॥
ತ್ಸಭೆಯೊಳಗಗ್ರಪೂಜೆವಡೆದೊಂದು ಮಹಾಮಹಿಮಾನುಭಾವದಿಂ ।
ದಭಿನವಶರ್ವವರ್ಮನಿವನೆಂದಪುದುರ್ವರೆ ನಾಗವರ್ಮನಂ ॥

ಎಂಬ ಪದ್ಯದಿಂದ **ಅಭಿನವಶರ್ವವರ್ಮ** ನೆಂಬ ಬಿರುದಿದ್ದಂತೆ ತಿಳಿಯುತ್ತದೆ.

ಜನ್ನನು ಅನಂತನಾಥಪುರಾಣದಲ್ಲಿ—ಜನನಾಥಂ ಜಗದೇಕನಲ್ಲಿ ಕಟಕೋಪಾಧ್ಯಾಯನಾನಾಗವ । ರ್ಮನಿದಾನೀಂತನಶರ್ವವರ್ಮನೆ ಗಡಂ ಜನ್ನಂಗುಪಾಧ್ಯಾಯಂ **—ಎಂಬುದರಿಂದ **ಇದಾನೀಂತನಶರ್ವವರ್ಮ**ನೆನಿಸಿದ ನಾಗವರ್ಮನು ಜನ್ನನಿಗೆ ಉಪಾಧ್ಯಾಯನಾಗಿದ್ದಂತಯೂ ಜಗದೇಕನಲ್ಲಿ ಕಟಕೋಪಾಧ್ಯಾಯನಾಗಿದ್ದಂತೆಯೂ ತಿಳಿಯುತ್ತದೆ. ಈ ನಾಗವರ್ಮನೇ ಕಾವ್ಯಾವಲೋಕನವನ್ನು ಬರೆದವನಾಗಿರಬೇಕು. ಚಾಳುಕ್ಯರಾಜರಲ್ಲಿ ಜಗದೇಕಮಲ್ಲ ಎಂಬವನು 1138 ರಿಂದ 1150 ರ ವರೆಗೆ ಆಳಿದ ಹಾಗೆ ತಿಳಿಯಬರುತ್ತದೆ. **ಆದುದರಿಂದ ಈ ನಾಗವರ್ಮನು ಸುಮಾರು 1145 ರಲ್ಲಿ ಇದ್ದಿರಬೇಕು.** ಜನ್ನನು 1209 ರಲ್ಲಿ ಯಶೋಧರಚರಿತವನ್ನೂ 1230 ರಲ್ಲಿ ಅನಂತನಾಥಪುರಾಣವನ್ನೂ ಬರೆದಂತೆ ಆ ಗ್ರಂಥಗಳಿಂದ ತಿಳಿಯಬರುವುದರಿಂದ ಈ ನಾಗವರ್ಮನು ಜನ್ನನಿಗೆ ಉಪಾಧ್ಯಾಯನಾದಾಗ ಬಹಳ ವೃದ್ಧನಾಗಿದ್ದಿರಬೇಕು.

II. (1) ಛಂದೋಂಬುಧಿಯನ್ನು ಬರೆದ ನಾಗವರ್ಮನು ತನ್ನ ತಂದೆ ವೆಣ್ಣಮಯ್ಯನೆಂದು ಹೇಳಿಕೊಂಡಿದ್ದಾನೆ. ಎರಡನೆಯ ನಾಗವರ್ಮನು ಕಾವ್ಯಾವಲೋಕನದ ಕೊನೆಯಲ್ಲಿ "ಪೇಟ್ಟಿಂ ದಾಮೋದರತನಯನೀವಚೋಲಂಕೃತಿಯಂ" ಎಂದೂ ವಸ್ತುಕೋಶದ ಕೊನೆಯಲ್ಲಿ "ದಾಮೋದರಪ್ರಿಯಸುತಂ" ಎಂದೂ ಹೇಳಿಕೊಂಡಿದ್ದಾನೆ. (2) ಮೊದಲನೆಯ ನಾಗವರ್ಮನಿಗೆ ನಾಕಿ, ಸಯ್ಯಡಿಯಾತಂ, ಎಂಬ ಹೆಸರುಗಳು ಇದ್ದಂತೆ ತಿಳಿಯುತ್ತದೆ. ಕಾವ್ಯಾವಲೋಕನಾದಿಗ್ರಂಥಗಳಲ್ಲಿ ಈ ಹೆಸರುಗಳು ಸಿಕ್ಕುವುದಿಲ್ಲ. (3) ಮೊದಲನೆಯವನಿಗೆ "ಕವಿರಾಜಹಂಸ" ಎಂಬ ಬಿರುದುಂಟು; ಎರಡನೆಯವನಿಗೆ "ಕವಿತಾಗುಣೋದಯ" ಎಂಬ ಬಿರುದಿದೆ. (4) ಮೊದಲನೆಯವನು ಛಂದೋಂ

ಬುಧಿಯ ಆದಿಭಾಗದ ಸ್ತೋತ್ರದಿಂದಲೂ ಅಧಿಕಾರಗಳ ಆದಿಪದ್ಯಗಳಿಂದಲೂ ಕೆಲವು ಓಲೆಯ ಪುಸ್ತಕಗಳ ಪ್ರಕಾರ ಅಧಿಕಾರಾಂತ್ಯದ ಗದ್ಯಗಳಿಂದಲೂ ಕಾದಂಬರಿಯ ಆದಿಶ್ಲೋಕದಿಂದಲೂ ಜೈನನೋ ಅಲ್ಲವೋ ಎಂಬ ಸಂದೇಹವನ್ನು ಉಂಟುಮಾಡುತ್ತಾನೆ. ಆದರೆ ತನ್ನ ಗುರು ಅಜಿತಸೇನಾಚಾರ್ಯನೆಂದು ಹೇಳುವುದರಿಂದ ಜೈನನೇ ಆಗಿರಬೇಕು. ಚಾವುಂಡರಾಯಪುರಾಣದಿಂದ ಚಾವುಂಡರಾಯನಿಗೆ ನಾಗವರ್ಮನೆಂಬ ಒಬ್ಬ ತಮ್ಮನಿದ್ದಂತೆ ತಿಳಿಯುತ್ತದೆ.[1] ಮೇಲೆ ಬರೆದಿರುವ "ಅರಸಂ ರಕ್ಕಸಗಂಗಂ" ಎಂಬ ಪದ್ಯದಲ್ಲಿ ತನ್ನ ಪೋಷಕನು "ಅಣ್ಣ" ನೆಂಬುದರಿಂದ ಇವನೇ ಅವನ ತಮ್ಮನಾಗಿರಬಹುದೋ ಎಂಬ ಸಂದೇಹವು ಹುಟ್ಟುತ್ತದೆ. ಆದರೆ ತಾನು ವೆಣ್ಣಮಯ್ಯನ ಜ್ಯೇಷ್ಠಪುತ್ರನೆಂದು ಹೇಳುವುದರಿಂದ ಇವನು ತದ್ಭಿನ್ನನೆಂದು ತೋರುತ್ತದೆ. ಎರಡನೆಯವನು ಜೈನನೆಂಬುದರಲ್ಲಿ ಸಂದೇಹವೇ ಇಲ್ಲ. ಈ ವಿಷಯವು ಕಾವ್ಯಾವಲೋಕನ, ವಸ್ತುಕೋಶ, ಕರ್ನಾಟಕಭಾಷಾಭೂಷಣ, ಇವುಗಳಲ್ಲಿಯ ಆದಿಭಾಗದ ಸ್ತುತಿಪದ್ಯಗಳಿಂದಲೂ ಅಂತ್ಯಭಾಗದ ಗದ್ಯದಿಂದಲೂ ಜನ್ನನು ಜೈನಪುರಾಣಕರ್ತೃಗಳಲ್ಲಿ ಇವನನ್ನೂ ಸೇರಿಸಿ ಹೇಳಿರುವುದರಿಂದಲೂ ದೃಢಪಡುತ್ತದೆ.

ಈಯಿಬ್ಬರು ನಾಗವರ್ಮರಲ್ಲದೆ ಬೇರೊಬ್ಬ ನಾಗವರ್ಮನೆಂಬ ಬ್ರಾಹ್ಮಣನು ಚಂದ್ರಚೂಡಾಮಣಿಶತಕವೆಂಬ ಗ್ರಂಥವನ್ನು ಬರೆದಿದ್ದಾನೆ.[2]

## ನಾಗವರ್ಮ I. ಸು. 990.

ಇವನು **ಛಂದೋಂಬುಧಿಯನ್ನೂ ಕರ್ನಾಟಕ** ಕಾದಂಬರಿಯನ್ನೂ ಬರೆದಿದ್ದಾನೆ. ಛಂದೋಂಬುಧಿಯಿಂದ ಈತನ ವಿಷಯವಾಗಿ ಈಯಂಶಗಳು ತಿಳಿಯುತ್ತವೆ:—ವೆಂಗಿವಿಷಯದಲ್ಲಿಯ ಸಪ್ತಗ್ರಾಮಗಳಲ್ಲಿ ಮನೋಹರವಾದ ಪೆಂಗಿಪಳುವಿನಲ್ಲಿ ಕೌಂಡಿನ್ಯಗೋತ್ರೋದ್ಭವನಾದ ವೆಣ್ಣಮಯ್ಯನೆಂಬ ಬ್ರಾಹ್ಮಣನಿದ್ದನು. ಅವನ ಪತ್ನಿ ಕೌಂಡಿಕಬ್ಬೆ; ಮಗ ದಾಮಮಯ್ಯ. ಇವನ ಹೆಂಡತಿ ಕುಂದಕಬ್ಬೆ; ಜ್ಯೇಷ್ಠಪುತ್ರ ವೆಣ್ಣಮಯ್ಯ; ಇವನ ಹೆಂಡತಿ ಪ್ರೋಳಕಬ್ಬೆ; ಜ್ಯೇಷ್ಠಪುತ್ರ ನಾಗವರ್ಮ I. ಈತನಿಗೆ ಕವಿರಾಜಹಂಸ, ಬುಧಾಬ್ಜವನಕಳಹಂಸ, ಕಂದರ್ಪ, ನೆಗಟ್ಟಿಕೋಜ ಎಂಬ ಬಿರುದುಗಳಿದ್ದಂತೆ ತೋರುತ್ತದೆ. ಅಲ್ಲದೆ ನಾಕಿ, ಸಯ್ಯಡಿಯಾತ[3] ಎಂಬ ಹೆಸರುಗಳೂ ಇದ್ದಂತೆ ತಿಳಿಯುತ್ತದೆ. "ಬೀರಸಿರಿಯಕ್ಕೆ ಭುಜಾಸಿಗೆ ನಾಗವರ್ಮನಾ" ಎಂದೂ, "ಕುಂತೀಪುತ್ರಂ ಪೊಣರ್ದ ರಣದೊಳ್" ಎಂದೂ ಹೇಳಿಕೊಳ್ಳುವುದರಿಂದ ಈತನು ಯುದ್ಧವೀರನಾಗಿದ್ದಂತೆ ತೋರುತ್ತದೆ.

---

1. ಪುಟ 47. 2. ನಾಗವರ್ಮಾಚಾರ್ಯನ ಚರಿತೆಯನ್ನು ನೋಡಿ.

3. ಸಯ್ಯಡಿಯೆಂಬುದು ಕರ್ನಾಟಕ ದೇಶದ ಕಿಸುಕಾಡುನಾಡಿನಲ್ಲಿ ಒಂದು ಅಗ್ರಹಾರವೆಂದು ತಿಳಿಯಬರುತ್ತದೆ—ದುರ್ಗಸಿಂಹನ ಪಂಚತಂತ್ರ, ಪುಟ 8

**ಈತನ ಕಾಲವೇ ಮುಂತಾದ ಕೆಲವು ವಿಷಯಗಳು ಹಿಂದಣ ವಿಚಾರದಲ್ಲಿ ವಿವರಿಸಿವೆ. ತನ್ನ ಕವಿತಾಚಾತುರ್ಯವನ್ನೂ ಗುಣಗಳನ್ನೂ ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ:—**

ನವರಸಮುಜ್ಜ್ವಲಂ ಮಾತು ಪೊಸತಾಗಿರೆ ದೇಸೆಯ ದೇಸೆವೆತ್ತುದಂ ।
ಬವೊಲಿರೆ ಜಾಣ್ ಮನಂಗೊಳಿಸೆ ಪೂಣ್ದಿರದರ್ಥಕೃತಿಪ್ರಬಂಧಮಂ ॥
ಕಿವಿಗಿಸದಾಗೆ ಪೊಚ್ಚಪೊಸತಾಗೆ ಮನೋಹರಮಾಗೆ ಪೇಟ್ಪಿ ಸ ।
ತ್ಕವಿ ಕವಿರಾಜಹಂಸನೆನೆ ಪೇಟಿಲೊಡರ್ಚಿದೆನೀಪ್ರಬಂಧಮಂ ॥

ರಚಿತಪದಪ್ರಸನ್ನಪರಿಪೂರ್ಣರಸಾವಹಮರ್ಥಯುಕ್ತಮಾ ।
ಗುಚಿತಪುರಾಣಮಾರ್ಗಪದಪದ್ಧತಿಬಂಧುರಬಂಧಮೆಂಬಿನಂ ॥
ರಚಿಯಿಸೆ ವಾಚ್ಯವಾಚಕ ವಿಶೇಷ್ಯವಿಶೇಷಣ ಲಕ್ಷ್ಯಲಕ್ಷಣ ।
ಪ್ರಚುರತೆ ಕಾಳಿದಾಸನುಮನೇಳಿಸಿತೀಕವಿರಾಜಹಂಸನಾ ॥

ಹರಹಾಸಕೊಂದೆರಟುಂ ದಿಕ್ಕರಿರದನಕೆರಟುಂ ಜು ನಾಕಾಧಿನಾಥ ।
ದ್ವಿರದಕ್ಕಂ ಮೂಜುನಾಲ್ಕಂದುವಿನ ರುಚಿಗೆ ನಾಲ್ಕಯ್ದು ದುಗ್ಧಾಬ್ಧಿಗಯ್ದಾ ॥
ಜರವಿಂದಕ್ಕತ್ತಲಾಜೀವ್ಯಮರನದಿಗಮೇಟಿಂಟು ಕೈಲಾಸಧಾತ್ರೀ ।
ಧರಕೆಂಟೊಂಬತ್ತು ಪತ್ತೆಂದೆನೆ ಪಸರಿಸಿದಂ ಕೀರ್ತಿಯಂ ನಾಗವರ್ಮಂ ॥

ಕುಂತೀಪುತ್ರಂ ಪೊಣರ್ದ ರಣದೊಳ್ ಪದ್ಮಜಂ ಶಾಸ್ತ್ರದೊಳ್ ಶ್ರೀ ।
ಕಾಂತಾಕಾಂತಂ ಪಿರಿಯ ಸಿರಿಯೊಳ್ ಸಿಂಧುಜಂ ಶೌಚದೊಳ್ ಕ ॥
ರ್ಣಂ ತಪ್ಪಿಲ್ಲೆಂದೆಸಿಪ ನುಡಿಯೊಳ್ ವಿಕ್ರಮಾದಿತ್ಯನಾರ್ತೋ ।
ರಂತೀನೌದಾರತೆಯೊಳೆಸೆದಂ ಕಂದಕಂದರ್ಪನೆಂದುಂ ॥

ತನುವಿಂದೊಂದು ಗುಣಂಗಳಿಂದಿರದು ಸಾಹಿತ್ಯಂಗಳಿಂ ಮೂಜು ಮೇಣ್ ।
ಮನದಿಂ ನಾಲ್ಕುಮಳತ್ಪದಮ್ಮನೆ ಸುಚಾರಿತ್ರಂಗಳಿಂದಾಜಿ ಸ ॥
ಜ್ಞನದಿಂದೇಟು ಸುತತ್ವದಿಂದೆ ತಳೆದೆಂಟಂಗಂ ಭುಜದ್ವಂದ್ವದೊಳ್ ।
ತನಗಿನ್ನಾರ್ ಸರಿ ನಾಗವರ್ಮನೊಳೆ ದಾಸರ್ ಕಾಳಿದಾಸಂಬರಂ ॥

ಮತಿವಂತರ್ ಸಮಸೆಂಬುದಾವುದದಜೊಳ್ ಮತ್ತೊರ್ವರಿಲ್ಲಬ್ಧಿವೇ ।
ಷ್ಟಿತಭೂಚಕ್ರದೊಳೆಂತು ಮೇರುಗಿರಿಯಿಂ ಮತ್ತೊಂದು ಶೈಲೇಂದ್ರಮು ॥
ನ್ನತಮಿಲ್ಲಂತುಟೆ ನಾಕಿಗಂಗೆನುತುಮಿಮಾಮತ್ತೇಭವಿಕ್ರೀಡಿತಂ ।
ಪ್ರತಿವಸ್ತೂಪಮೆಯಿಂ ತಗುಳ್ದು ಪೊಗಟ್ಟುಂ ವಿಶ್ವಂಭಗಾಮಂಡಲಂ ॥

ಜಿತಬಾಣಂ ಹರಿಯಂತಧಃಕೃತಮಯೂರಂ ತಾರಕಾರಾತಿಯಂ ।
ತತಿಮಾಘಂ ಶಿಶಿರಾಂತ್ಯದಂತೆ ಸುರಪಪ್ರೋಚ್ಚಂಡಕೋದಂಡದಂ ॥

ತ ತಿರೋಭೂತಗುಣಾಢ್ಯನಬ್ಜವನಸಂತಾವಿರ್ಭವದ್ದಂಡಿ ಭಾ ।
ರತದಂತಾತ್ತಧನಂಜಯೈಕವಿಭವಂ ವಾಗ್ಗುಂಫದೊಳ್ ನಾಕಿಗಂ ॥

ಕೊನೆಯ ಪದ್ಯದಲ್ಲಿ ಶ್ಲೇಷೆಯಿಂದ ತನಗೆ ಹಿಂದೆ ಇದ್ದ ಸಂಸ್ಕೃತಕವಿಗಳ ಹೆಸರನ್ನು ಹೇಳುತ್ತಾನೆ. ಈ ಪದ್ಯಗಳಲ್ಲಿ ಕುಕವಿಗಳನ್ನು ನಿಂದಿಸುತ್ತಾನೆ:—

ಹಜಗವಿಗಳ ಕಬ್ಬಂಗಳ । ಪೊಜಗೊಳಗಕ್ಕರದ ಪೊಲ್ಲೆ ಬಿರ್ದಿದೊಡೆಲ್ಲಂ ।
ಬಜತಾಜಗಬೀಜಗವೆ । ತ್ತಜತತ್ತಜಿವೆಕ್ಕಸಕ್ಕಮಸ್ತವ್ಯಸ್ತಂ ॥[1]
ಮಚ್ಚಿಯಿಲ್ಲದೆ ಪೊಯ್ಗುಂರಿಂ । ಬೆಳೆಗುಮೆ ಧರೆ ಮಜುಗಿ ಕುದಿದು ಶಾಸ್ತ್ರದ ಬಲದಿಂ ।
ದಳಿಪಿಂ ಸೇಟ್ಟೊಡಮದು ಕೋ । ಮಳಮಕ್ಕುಮೆ ಸಹಜಮಿಲ್ಲದಾತನ ಕಬ್ಬಂ ॥

ಇವನ ಗ್ರಂಥಗಳಲ್ಲಿ—

## 1. ಛಂದೋಂಬುಧಿ.

ಇದು ಛಂದಶ್ಶಾಸ್ತ್ರ. ಕನ್ನಡಛಂದಸ್ಸಿಗೆ ನಮಗೆ ದೊರೆತಿರುವ ಲಕ್ಷಣಗ್ರಂಥಗಳಲ್ಲಿ ಇದೇ ಪುರಾತನಗ್ರಂಥವು. ಈಶ್ವರನು ಉಮೆಗೆ ಉಪದೇಶಮಾಡಿದ ಛಂದಸ್ಸು ಪಿಂಗಳನಿಂದ ಭೂಲೋಕದಲ್ಲಿ ವಿಸ್ತೃತವಾದಂತೆಯೂ ಅದನ್ನು ತಾನು ಕಲಿತು ತನ್ನ ಹೆಂಡತಿಗೆ ಉಪದೇಶಮಾಡಿದಂತೆಯೂ ಹೇಳುವುದರಿಂದ ಈ ಕವಿ ಪಿಂಗಳನನ್ನು ಅನುಸರಿಸುವಂತೆ ತಿಳಿಯುತ್ತದೆ. ಸಂಸ್ಕೃತಪಿಂಗಳ, ಪ್ರಾಕೃತ ಪಿಂಗಳ, ಎಂದು ಇಬ್ಬರು ಪಿಂಗಳರು ಇದ್ದಂತೆ ಕೆಲವರು ಅಭಿಪ್ರಾಯಪಡುತ್ತಾರೆ. ಆದರೆ ಒಬ್ಬ ಪಿಂಗಳನೇ ಸಂಸ್ಕೃತಛಂದಸ್ಸನ್ನೂ ಪ್ರಾಕೃತಛಂದಸ್ಸನ್ನೂ ಬರೆದಂತೆ ಪ್ರತೀತಿಯಿದೆ. ಈ ಕವಿ ಈಯೆರಡುಲಕ್ಷಣಗ್ರಂಥಗಳನ್ನೂ ಅನುಸರಿಸಿರುವಂತೆ ತೋರುತ್ತದೆ. ಆದರೆ ಅನುಪೂರ್ವಿಯಲ್ಲಿಯೂ ವೃತ್ತಗಳ ಹೆಸರಿನಲ್ಲಿಯೂ ಪಿಂಗಳ ಛಂದಸ್ಸಿಗೂ ಇವನ ಗ್ರಂಥಕ್ಕೂ ಬಹಳ ವ್ಯತ್ಯಾಸವಿದೆ. ವೃತ್ತರತ್ನಾಕರ, ಶ್ರುತಬೋಧ, ಈ ಗ್ರಂಥಗಳಲ್ಲಿರುವಂತೆಯೇ ವೃತ್ತದ ಲಕ್ಷಣವನ್ನು ಹೇಳುವ ಪದ್ಯವೇ ಆ ವೃತ್ತಕ್ಕೆ ಲಕ್ಷ್ಯವಾಗುವಂತೆ ಬರೆದಿದ್ದಾನೆ. ಈ ಗ್ರಂಥವು ಆರು ಆಶ್ವಾಸಗಳಾಗಿ ಭಾಗಿಸಲ್ಪಟ್ಟಿದೆ. ಪೀಠಿಕಾನಂತರ (1) **ಸಂಜ್ಞಾಧಿಕಾರ**—ಇದರಲ್ಲಿ ಪ್ರಾಸಗಳ ವಿಷಯವನ್ನು ಹೇಳುವಾಗ ಪ್ರಾಯಶಃ ನೃಪತುಂಗನ ಉದಾಹರಣಪದ್ಯಗಳನ್ನೇ ತೆಗೆದು ಬರೆದಿದ್ದಾನೆ. ಭಾಷೆಗಳ ವಿಷಯದಲ್ಲಿ

ಸಂಸ್ಕೃತಂ ಪ್ರಾಕೃತಮಪಭ್ರಂಶಂ ಪೈಶಾಚಿಕಮೆಂಬ ಮೂಱುವರೆ ಭಾಷೆಗಳೊಳ್ ಪುಟ್ಟುವ ದ್ರವಿಡಾಂಧ್ರಕರ್ಣಾಟಾದಿಷಟ್ಪಂಚಾಶತ್ಸರ್ವವಿಷಯಭಾಷಾಜಾತಿಗಳಕ್ಕುಂ

ಎಂದು ಹೇಳಿದ್ದಾನೆ. ಅನಂತರ ಕನ್ನಡಕ್ಕೆ ಅಸಾಧಾರಣವಾಗಿರುವ "ಜಾತಿ[2]" ಗಳನ್ನು—

---

1. ಈ ಪದ್ಯವು ಹರಿಹರನ ಗಿರಿಜಾಕಲ್ಯಾಣದಲ್ಲಿಯೂ ದೊರೆಯುತ್ತದೆ.
2. ವೃತ್ತಮಕ್ಷರಸಂಖ್ಯಾತಂ ಜಾತಿರ್ಮಾತ್ರಾಕೃತಾ ಭವೇತ್ ।

ಮದನವತಿಯಕ್ಕರಂ ಚೌ । ಪದಿ ಗೀತಿಕೆಯೇಳೆ ತಿವದಿಯುತ್ಸಾಹಂ ಷ ।
ಟ್ಪದಿಯಕ್ಕುಂಕೆ ಕರಂ ಚಿ । ಲ್ಪೊದವಿದ ಛಂದೋವತಂಸಮಬ್ಜಭವಾಕ್ಷೀ ॥

ಎಂಬ ಪದ್ಯದಲ್ಲಿ ಹೇಳಿದ್ದಾನೆ. (2) **ಸಮವೃತ್ತವಿವರಣ**: ಇದರಲ್ಲಿ ಉಕ್ತೆಯಿಂದ ಉತ್ಕೃತಿಯ ವರೆಗೆ 26 ಛಂದಸ್ಸುಗಳನ್ನು ಹೇಳಿದ್ದಾನೆ. ಮೂರನೆಯ ಆಶ್ವಾಸದಲ್ಲಿ ಇತರ ಸಮವೃತ್ತಗಳನ್ನೂ ಅರ್ಧಸಮವೃತ್ತವಿಷಮವೃತ್ತಗಳನ್ನೂ ಮಾತ್ರಾಚ್ಛಂದಗಳನ್ನೂ ಮಾತ್ರಾಗಣಚ್ಛಂದಗಳನ್ನೂ ಹೇಳಿದ್ದಾನೆ. ನಾಲ್ಕನೆಯ ಆಶ್ವಾಸದಲ್ಲಿ ಇತರ ಮಾತ್ರಾಗಣಚ್ಛಂದಗಳನ್ನೂ ಐದನೆಯದರಲ್ಲಿ ಕನ್ನಡಮಾತ್ರಾಗಣಚ್ಛಂದಗಳನ್ನೂ ಆರನೆಯದರಲ್ಲಿ ಷಟ್ಪ್ರತ್ಯಯಗಳನ್ನೂ ವಿವರಿಸಿದ್ದಾನೆ. ಆಶ್ವಾಸಗಳ ಅಂತ್ಯದಲ್ಲಿ ಮೆ॥ ಕೆಟಲ್ ಅಚ್ಚುಹಾಕಿಸಿರುವ ಪುಸ್ತಕದಲ್ಲಿ

ಇದು ಸಮಸ್ತಸುರಾಸುರೇಂದ್ರಮುನೀಂದ್ರಮಣಿಮಕುಟಘಟಿತಶ್ರೀಮಚ್ಚರಣಕಮಲದರ್ಪತ್ತರಮೇಶ್ವರಚಾರುಚರಣಾರವಿಂದದ್ವಂದ್ವಮಕರಂದಮತ್ತಮಧುಕರಾಯಮಾನ ವಿಬುಧಜನಮನಃಪದ್ಮಿನೀರಾಜಹಂಸ ಶ್ರೀಮತ್ಕವಿರಾಜಹಂಸ ನಾಗವರ್ಮನಿರ್ಮಿತಮಪ್ಪ ಛಂದೋಂಬುಧಿಯೊಳ್

ಎಂಬ ಗದ್ಯವಿದೆ. ಆದರೆ ನಾವು ನೋಡಿದ ಕೆಲವು ಓಲೆಯ ಪುಸ್ತಕಗಳಲ್ಲಿ ಈ ಗದ್ಯವು—ಇದು ಪರಮೇಶ್ವರಚರಣಾರವಿಂದಮರಂದಮಧುಕರಾಯಮಾಣ—ಎಂದು ಆರಂಭಿಸುತ್ತದೆ. ಇನ್ನೊಂದು ಪ್ರತಿಯಲ್ಲಿ—ಇದು ಭಗವದ್ಭವಾನೀವಲ್ಲಭಪಾದಾರವಿಂದ—ಎಂದು ಆರಂಭಿಸುತ್ತದೆ.

ಮೆ॥ ಕೆಟಲ್ ಅಚ್ಚುಹಾಕಿಸಿರುವ ಪುಸ್ತಕದಲ್ಲಿ—ಗ್ರಂಥಾವತಾರದಲ್ಲಿರುವ ಮಂಗಳಶ್ಲೋಕಗಳೂ ಆಶ್ವಾಸಗಳ ಆದಿಯಲ್ಲಿರುವ ದೇವತಾಸ್ತುತಿರೂಪವಾದ ಪದ್ಯಗಳೂ ಗ್ರಂಥದ ಆದ್ಯಂತಗಳಲ್ಲಿರುವ ಕವಿವಿಷಯಕವಾದ ಕೆಲವು ಪದ್ಯಗಳೂ ಬಿಟ್ಟಿವೆ. ಈ ಕವಿಯ ರಚನೆಯನ್ನು ತೋರಿಸುವುದಕ್ಕೋಸ್ಕರ ಈ ಬಿಟ್ಟಿರುವ ಪದ್ಯಗಳಲ್ಲಿ ಕೆಲವನ್ನು ಇಲ್ಲಿ ಉದ್ಧರಿಸಿ ಬರೆಯುತ್ತೇವೆ:—

## ಮಂಗಳಶ್ಲೋಕಗಳು.

### ವಿಷ್ಣು.

ಶ್ರೀವಧುವಂ ಪಯೋಧಿಮಥನೋದ್ಭವವಸ್ತುಸಮೂಹದೊಳ್ ಮಹಾ ।
ದೇವಸಮೇತಮಿರ್ದಸುರರುಂ ಸುರರುಂ ಕುಡೆ ತನ್ನ ಮೆಚ್ಚುಗೊಂ ॥
ಡಾವನಶೇಷಭೂಭುವನಮಂಡಲವಲ್ಲಭನಾದ ದೇವನೀ ।
ಗಾವಗಮೆಮ್ಮ ಬೇಟ್ಪಿ ವರದುನ್ನತಿಯಂ ಸುಕವೀಂದ್ರವಲ್ಲಭಂ ॥ 86 ॥

### ಶಿವ.

ಜಡೆಗಳ ಬಂಬಲೊಪ್ಪುವಳಕಾವಳಿ ಭೀಷಣಮಪ್ಪ ಪಾವಿನೊ ।
ಳ್ವುಡಿಗೆಯೊದಲ್ಪ ಪೊಂದುಡಿಗೆ ಶಕ್ತಿ ವಿರಾಜಪ ಶಕ್ತಿ ಶೂಲಮಾ ॥

ಪಿಡಿದ ಕರಾಸಿ ಗೌರಿ ನಿಜವಲ್ಲಭಯಾಗಿರೆ ಮಿಕ್ಕ ನಾಕಿ ಸ ।
ಯ್ದಡಿಯ ಪಿನಾಕಿ ಕೂರ್ತು ನಮಗೀಗೆ ವರಂಗಳನುತ್ಸವಂಗಳಂ ॥ 87 ॥

## ಪಾರ್ವತಿ.

ನಗೆಮೊಗಮುಂ ಪೊದಟ್ಟಿ ಪೊಸಜವ್ವನಮುಂ ಮಿಗಿಲಪ್ಪ ಗಾಡಿಯುಂ ।
ಸೊಗಯಿಪ ಮುದ್ದುಗೆಯ್ತಮನೊಜಲ್ದಿನಿಸಂ ಮನವಾಜಿ ನೋಡಿ ತೊ ॥
ಟ್ಟಗೆ ಕೊಳೆ ಮೇಲಿ ವಾಯ್ದು ಮಹಿಷಾಸುರನಂ ತವೆ ಕೊಂದಳಾವಳಾ ।
ಭಗವತಿ ಕೂರ್ತು ಬೀರಸಿರಿಯಕ್ಕೆ ಭುಜಾಸಿಗೆ ನಾಗವರ್ಮನಾ ॥ 88 ॥

## ವಿನಾಯಕ.

ಸಕಳಕಳಾಗಮಾಭರಣನೀಶ್ವರತತ್ಪ್ರಸಮಸ್ತವಸ್ತುರೂ ।
ಪಕನಕಲಂಕನಭ್ಯುದಯಕಾರಣವಾರಣವಕ್ತ್ರನಾಪ್ತಲೌ ॥
ಕಿಕಮತನಿಸ್ಥಿತಾಗಮಪದಾರ್ಥಪರಂಪರನಾದನಾವಿನಾ ।
ಯಕಗಣನಾಯಕಂ ಕೃತಿಗೆ ನಾಯಕನಕ್ಕೆ ನೆಗಟ್ಟಿಗೋಜನಾ ॥ 89 ॥

## ಸೂರ್ಯ.

ಒದವಿದ ಕೌಮುದಂ ಮುಗಿಯೆ ಧಾರಿಣಿಯುಂ ಕಡುಮುಂದಮಾಗಿ ಪ ।
ರ್ವಿದ ತಮಮೆಲ್ಲಮೋಸರಿಸೆ ತನ್ನನೆ ಕೀರ್ತಿಪ ಶಿಷ್ಟಕೋಟಿಗ ॥
ಭ್ಯುದಯಮನಾವಗಂ ನಿಜಕರಂ ದಯೆಗೆಯ್ದಿರೆ ತಾನೆ ದೇವನಾ ।
ದುದಯದಿವಾಕರಂ ಕರಮಲರ್ಚುಗೆ ನನ್ನ ಮುಖಾರವಿಂದಮಂ ॥ 90 ॥

## ಸರಸ್ವತಿ.

ಅತಿಮಧುರವ್ಯಸನ್ನಪರಿಪೂರ್ಣರಸೋಚಿತವರಂಜಿತಾರ್ಥಸಂ ।
ಯುತೆ ಸಕಲಾಗಮೋಕ್ತಿಯುತೆ ಲಕ್ಷ್ಯಲಕ್ಷ್ಯಸಮಸ್ತವಸ್ತುಸಂ ॥
ಯುತ್ತೆ ಸರಸೀಜಗರ್ಭನ ಮುಖಾಂಬುಜದಿಂದಮಗಲ್ದು ಬಂದು ವಾ ।
ಕ್ಷತಿ ನೆಲಸಿರ್ಕೆ ಕೂರ್ತು ಮುಖಸಂಕಜದೊಳ್ ಕವಿರಾಜಹಂಸನಾ ॥ 91 ॥

## ಮೂರನೆಯ ಆಶ್ವಾಸದ ಮೊದಲನೆಯ ಪದ್ಯ.

ಶ್ರೀರಮಣನಖಿಳಸುರವಿ । ಸ್ತಾರಕನಮರೇಂದ್ರಮಕುಟತಾಟಿತಚರಣಾಂ ।
ಭೋರುಗುಣಶೇಷತತ್ತ್ವ । ಗಾರಂ ದಯೆಗೆಯ್ಗೆ ನಾಗವರ್ಮಂಗೊಳ್ಪಂ ॥ 92 ॥

## ನಾಲ್ಕನೆಯ ಆಶ್ವಾಸದ ಮೊದಲನೆಯ ಪದ್ಯ.

ಶ್ರೀರಮಣೀರಮಣಂ ಕವಿ । ತಾರಮಣೀರಮಣನಧಿಕಸೌಭಾಗ್ಯದ ಗೌ ।
ರೀರಮಣೀರಮಣಂ ಕುಡು । ಗಾರೋಗ್ಯಾಯುಷ್ಯವೃದ್ಧಿಯಂ ನಾಕಿಗನೊಳ್ ॥ 93 ॥

ಕನ್ನಡಚಂಪೂಕಾವ್ಯಗಳಲ್ಲಿ ವಿಶೇಷವಾಗಿ ದೊರೆವ ಷಡ್ವಿಧವೃತ್ತಗಳನ್ನು ಕಂಡುಹಿಡಿವುದಕ್ಕೆ ಸುಲಭೋಪಾಯವನ್ನು ಹೇಳುವ ಈ ಪದ್ಯವನ್ನು ತೆಗೆದು ಬರೆಯುತ್ತೇವೆ :—

ಗುರುವೊಂದಾದಿಯೊಳುತ್ವಲಂ ಗುರು ಮೊದಲ್ಗೊಜ್ಜಾಗೆ ಶಾರ್ದೂಲಮಾ ।
ಗುರು ನಾಲ್ಕಾಗಿರಲಂತು ಸ್ರಗ್ಧರೆ ಗುರುದ್ವಂದ್ವಂ ಲಘುದ್ವಂದ್ವಮಾ ॥
[1] ಗಿರೆ ಮತ್ತೇಭಮದೊಂದೆ ನಾಲ್ಕು ಲಘುವಿಂದಾಚ್ಛಂಪಕಂ ಮತ್ತಮಾ ।
ಹರಿಣೇವೃತ್ತಮದಕ್ಕುಮಯ್ದುಲಘುವಿಂ ಪಂಕೇಜಪತ್ರೇಕ್ಷಣೇ ॥ 94 ॥

ಒಂದು ಪ್ರತಿಯಲ್ಲಿ ಗ್ರಂಥಾಂತ್ಯದಲ್ಲಿ ಈ ಪದ್ಯವು ದೊರೆಯುತ್ತದೆ :—

ಗಿರಿಬಾಣಾನಲಚಂದ್ರದಿಗ್ಗಜಖರಾಂಭೋರಾಶಿಯುಗ್ಮಂಗಳಂ ।
ಬರೆದಟ್ಟಲ್ ತೆಗೆದಾಗಳಬ್ಧಿಗುಣರತ್ನಾದ್ರಿದ್ವಯಂ ದ್ರವ್ಯಭೂ ॥
ಶರಮೆಂಬೀಕ್ರಮದಿಂದಮೋಜೆಯೊಳೆ ಕೇಳ್ ಪಜ್ಝಟ್ಟಿಕ್ರಮಂ ತಪ್ಪದಿಂ ।
ತಿರದೋದಲ್ ಸಲೆ ಗೂಢಲೇಖನಮಿದುಂ ಪಂಕೇಜಪತ್ರೇಕ್ಷಣೇ ॥ 95 ॥

---

## 2. ಕಾದಂಬರಿ.

ಇದು ಬಾಣಕೃತವಾದ ಸಂಸ್ಕೃತಕಾದಂಬರಿಗೆ ಚಂಪೂರೂಪವಾದ ಕರ್ಣಾಟಕಭಾಷಾಂತರವು. ಇದರಲ್ಲಿ ಪ್ರಾಯಶಃ ಸಂಸ್ಕೃತಗ್ರಂಥದ ಅನುಪೂರ್ವಿಯೇ ಅನುಸರಿಸಲ್ಪಟ್ಟಿದ್ದರೂ ವರ್ಣನಾಭಾಗಗಳಲ್ಲಿ ಅಲ್ಲಲ್ಲಿ ಕೆಲವು ಬಿಟ್ಟು ಹೋಗಿವೆ. ಕವಿ ತನ್ನ ಗ್ರಂಥದ ಉತ್ಕೃಷ್ಟತೆಯನ್ನು ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ :—

ಸತ್ಕೃತಿ ಸಂಸ್ಕೃತದಿಂದೆ ಜ । ಗತ್ಕೃತುಕಮಾಗಿ ಮತ್ತೆ ಕರ್ಣಾಟದೊಳಂ ।
ಸತ್ಕವಿಸಿವಪುಂ ವೊಗಲ್ಪಿ ಚ । ಮತ್ಕೃತಿಯುಂ ಪಡೆದು ಸೊಬಗುವಡೆದತ್ತಿಗೞ್ ॥
ಇದು ಚೋದ್ಯಂ ಕವಿಸೃಷ್ಟಿತಂ ನವರಸಂ ನಿರ್ದೋಷಮೆಂದೀಗಳಾ ।
ಮುದು ಕಾದಂಬರಿ ಸೇವ್ಯಮಾದುದನಿತುಂ ತಾನೆಯ್ದಿ ಭೂಭಾಗದೊಳ್ ॥
ವಿದಿತಶ್ರೀಕವಿನಾಗವರ್ಮನ ವಚಸ್ಸಂದೋಹದಿಂ ದೋಷಮೊಂ ।
ದದಳಂಕಾರದ ವಸ್ತುಬಂಧಮಿದು ತಾನೇಂ ಮಾಡದೇಂಗೆಯ್ದುದೋ ॥

ಗ್ರಂಥಾವತಾರದಲ್ಲಿ ಈಶ್ವರಶಿರೋಮಣಿಯಾದ ಚಂದ್ರನನ್ನು ಸ್ತುತಿಸಿ ಬಳಿಕ ಸರಸ್ವತಿಯನ್ನೂ ಬಾಣಕವಿಯನ್ನೂ ಹೊಗಳಿ ಕಥೆಯನ್ನು ಆರಂಭಿಸಿದ್ದಾನೆ.

---

1 ಗಿರೆ ಮತ್ತೇಭ ಲಘುದ್ವಯತ್ರಿಗುರುವಿಂದಕ್ಕುಂ ಮಹಾಸ್ರಗ್ಧರಂ ।
ಹರಿಣಾಕ್ಷೀ ಲಘುನಾಲ್ಕು ಚಂಪಕಮಿವಾಱುಂ ಖ್ಯಾತಕರ್ಣಾಟಕಂ ॥ ಎಂಬ ಪಾಠವೂ ಇದೆ.

ಗ್ರಂಥದ ಕೊನೆಯಲ್ಲಿ

ಶ್ರೀನಾಗವರ್ಮವಿರಚಿತಮಪ್ಪ ಕರ್ಣಾಟಕಾದಂಬರಿಯೊಳ್

ಎಂದಿದೆ.

ಈ ಕವಿಯ ಬಂಧವು ಲಲಿತವಾಗಿಯೂ ಮಧುರವಾಗಿಯೂ ಭಾವಗರ್ಭಿತವಾಗಿಯೂ ಹೃದಯಂಗಮವಾಗಿಯೂ ಇದೆ. ಇವನ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

ಗಿಳಿ.

ಜಳಜದ ಮೊಗ್ಗೆಯಂತೆ ಮುಗುಳಂತೆಳೆಪಿರ್ಕೆಯ ಕಾಯ್ಗಳಂತೆ ರಾ ।
ಲ್ದಳಿಕುಸುಮಂಗಳಂತೆ ತರುನೀಡನಿಕಾಯದಿನೆಲ್ಲಮಾಗಳಾ ॥
ಗಳಿ ಗಜವೊಯ್ಯ ಕಣ್ಪೆಜಿವ ತುಪ್ಪುಟಿಪೊಡರ್ಚುವ ಕೆಂಪನಾಳ್ಗ ಕೋ ।
ಮಳಶುಕರಾಬಕಪ್ರಕರಮಂ ತೆಗೆದಂ ದಯೆಗೆಟ್ಟು ಲುಬ್ಧಕಂ ॥ 96 ॥

ಅಳುವುದು.

ನಸುಪೆಜಿಯುತ್ತುಮಿರ್ದ ವೋಸಮುತ್ತಿನ ನಿಂಪಿನ ಸಂಪುಟಂಗಳಿಂ ।
ನುಸುಳ್ದು ಸುಪಾಣಿಯಾಗಿ ಪೊಜಿಪೊಣ್ಮುವ ಮುತ್ತಿನ ನಾಲೆಯಂದದಿಂ ॥
ಮಿಸುಗಿ ನಿರಂಜನಂಗಳಿನಿಪಕ್ಕಿಪುಟಾಂತರದಿಂದಮೇಕೆ ಪೇಳ್ವುದಂ ।
ಪಸರಿಸಿ ನೀಳ್ದು ಪೊಣ್ಮಿದುವು ಕಣ್ಣಿನಿಗಳ್ ತರಳಾಯತೇಕ್ಷಣೇ ॥ 97 ॥

ಕುದುರೆ.

ಮೊಗದಿಂದಂ ನೇರ್ಪನಾಳ್ದಂತುರದಿನಗಲಿತಾದಂತೆ ಪಾರ್ಶ್ವಂಗಳಿಂ ನೂ ।
ಲ್ದಿಗೆದತ್ತೆಂಬಂತೆ ವಾತಾತ್ಮಜೆ ಸನಡಿಸಿತೆಂಬಂತಿರುದ್ಗ್ರೀವದಿಂ ಪ ॥
ರ್ವುಗೆವೆತ್ತಂತಂಗಕಾಂತಿಪ್ರಕರದೆ ಪಸರಿಪ್ಪಂತೆ ಮುಂಗಾಲ್ಗಳಿಂದಂ ।
ಮುಗಿಲಂ ಮುಟ್ಟಿಪ್ಪುದೆಂಬಂತತಿಜವಮಿದಿರೊಳ್ ಬಂದುದಿಂದಾಯುಧಾಶ್ವಂ ॥ 98 ॥

ಸಜ್ಜನರು.

ಜನಪತಿಗಳ್ ನುಡಿಯಲ್ ಮಾ । ರ್ದನಿಯಂತನುವದಿಸಿ ಬರ್ದುಕಲೊಲ್ಲದೆ ಮಾಕೊಂ ।
ಡನುಚಿತಮಿದೆಂದು ಮಾಣಿಸ । ಮನುಜೋತ್ತಮರೆಲ್ಲಿಯಾನುಮಿರ್ಪರ್ ಜಗದೊಳ್
[॥ 99 ॥

ಲಕ್ಷ್ಮಿ.

ಸುರೆಯುಂ ಸೊರ್ಕಂ ಸುರೋರ್ವೀರುಹಕಿಸಲಯದಿಂ ರಾಗಮುಂ ಕೌಸ್ತುಭಸ್ಯ ।
ಸ್ತರದಿಂ ನೈಷ್ಠುರ್ಯಮುಂ ದುರ್ವಿಷಮವಿಷದಿನುನ್ಮೋಹಮುಂ ಮುಗ್ಧದೋಷಾ ॥
ಕರನಿಂ ವಕ್ರತ್ವಮಂದುಶ್ಚ್ಯವನನ ಹಯದಿಂ ವೇಗಮುಂ ತಾಳ್ದಿ ನೀರಾ ।
ಕರದಿಂದೇಳ್ತಂದಳಂತಾಸಿರಿ ಸಹಭವರಂ ಪೋಲ್ವುದೇಂ ಚೋದ್ಯಮಾಯ್ತೀ ॥ 100 ॥

ಶ್ರುತಮುಂ ಕೆಯ್ಕೊಳ್ಳಲಾಚಾರಮನವಧರಿಸಳ್ ಸತ್ಯಮಂ ಬಾಲ್ಪಿಗೆಯ್ಯಳ್ ।
ಮತಿಯುಂ ಬಿಪ್ಪಂಡಿಪಳ್ ಲಕ್ಷಣಮನೆಣಿಸಳ್ ದಾರ್ಢ್ಯಮಂ ಚಿಂತಿಸಳ್ ಸಂ ॥
ಗತಿಯುಂ ವಿಶ್ವಾಸಿಸಳ್ ಸುಂದರತರವಪುವಂ ನೋಡಲೆಂತುಂ ವಿಶೇಷ ।
ಜ್ಞತೆಯುಂ ತಾನೇತಕೆಂಬಳ್ ನರಿಯನಜುಯುತುಂ ಬಣ್ಣಿವಂ ಗಾಂಪನಲ್ತೇ ॥ 101 ॥

## ನೃಪರು.

ಮೊದಲೊಳ್ ತಮ್ಮನೆ ನೋಡಲಿತ್ತ ಪದದೊಳ್ ಕೆಯ್ಕೊಂಡವರ್ ತಾಮೆ ನೋ ।
ಡಿದೊಡೋರಂತುಪಕಾರಮಂ ಮೆಱೆದವರ್ ಮಾತಾಡಿದಂದರ್ಥರಾ ॥
ಜ್ಯದ ಪೆಂಪಂ ದಯೆಗೆಯ್ವವರ್ ಚೆಸಸಿದಂದಾಗಳ್ ವರಂಗೊಟ್ಟವರ್ ।
ಪದಪಿಂ ಮುಟ್ಟಿದೊಡೆಯ್ದೆ ರಕ್ಷಿಸಿಗವರ್ ಭೂಪರ್ ಧರಾಚಕ್ರದೊಳ್ ॥ 102 ॥

## ಪುಂಡರೀಕನು ಮೃತನಾದಾಗ ಕಪಿಂಜಳನ ಪ್ರಳಾಪ.

ಪರಿಚಯಮಿಲ್ಲ ಕಂಡಜುಯಯೋ ಸಖ ತೊಟ್ಟೆನಲಿಂತು ಬಿಟ್ಟು ವೋ ।
ಪರೆ ಕಠಿನಾತ್ಮನಾವೆ ನೆರವಾರೆನಗಿರ್ದಪರೆತ್ತಪೋವೆನೊ ॥
ರ್ವರುಮೆನಗಾಸೆಯಿಲ್ಲ ದೆಸೆ ಪಾಲ್ಮಿಸಗಿರ್ದಪುದಂಧನಾದೆನಾರ್ ।
ಶರಣೆನಗೆನ್ನ ಬಾಲ್ಪಿಯಿ ನಿರರ್ಥಕಮೆಂದೆನುತುಂ ಪಲುಂಬಿದಂ ॥ 103 ॥

ಒಡನುಂಡೊಡನಿರ್ದೊಡವಳೆ । ದೊಡನಾಡಿಗಳಾಗಿ ನೃತ್ಯಗೀತಂ ಪೊದಲಾ ।
ಗೊಡನೊಡನೆ ಕಲ್ತು ಕಲೆಗಳ । ನೆಡೆವಿಡದಿರ್ವರ್ಗಮಾಯ್ತು ಪರಮಪ್ರೇಮಂ ॥ 104 ॥

## ಸಂಧ್ಯೆ.

ದೆಸೆದೆಸೆಯೊಳ್ ಪಸರಿಸುತಿರೆ । ಪೊಸ ತೊಂಡೆಯ ಪಣ್ಣ ಬಣ್ಣಮಂ ಮಸುಳಿಪ ಕೆಂ ।
ಬಿಸಿಲ ಮಿಸುಪಿನಿಸು ಪಡುವಣ । ದೆಸೆಗವಲಂಬಿಸಲೊಡರ್ಚಿದತ್ತಿನಬಿಂಬಂ ॥ 105 ॥

## ಹಾರ.

ಪೊಳೆವೆಳದಿಂಗಳೊಳ್ಮಿ ಜುಗಳಿಂ ಸುರಸಿಂಧುವ ಶೀಕರಂಗಳಿಂ ।
ಜಳನಿಧಿಯಲ್ಲಿ ಮಾರ್ಪೊಳೆವ ತಾರೆಗಳಿಂ ಸಮೆದಂತೆ ಶಾರದಂ ॥
ಗಳ ಜಸದೇಲ್ಪಿಗ ಲಕ್ಷ್ಮಿಯ ಮುಗುಳ್ನಗೆ ಜೊನ್ನದ ಬಾಲ್ಪಿಕ್ಕ ರತ್ನಸಂ ।
ಕುಳದಧಿದೈವಮೆಂದೆಸೆದುದುಜ್ಜ್ವಳಮೌಕ್ತಿಕಹಾರಮುಂಡಳಂ ॥ 106 ॥

## ಮಹಾಶ್ವೇತೆ.

ಕಡೆದರೊ ಶಂಖದಿಂ ತೆಗೆದರೋ ನವಮೌಕ್ತಿಕದಿಂ ಮೃಣಾಳದಿಂ ।
ಪಡೆದರೊ ದಂತದಿಂದೆಸೆಯೆ ಮಾಡಿದರೋ ರುಚಿರೋಜ್ಜ್ವಳಾಂಗನುಂ ॥
ಬಿಡದಮೃತಾಂಶುರಶ್ಮಿಗಳ ಕುಂಚಿಗೆಯಿಂದಮೆ ಕರ್ಚಿ ಪಾರದಂ ।
ದೊಡೆದರೊ ಪೇಟ್ಪಿನಲ್ ಕರಮೆ ಕಣ್ಗೆಸೆದಿರ್ದುದು ರೂಪು ಕಾಂತೆಯಾ ॥ 107 ॥

## ಕೇಶಿದಂಡನಾಯಕ. ಸು. 990.

ಈತನು ರನ್ನನ (993) ಸಾಹಸಭೀಮವಿಜಯವನ್ನು ತಿದ್ದಿದಂತೆ ಆ ಗ್ರಂಥದ—

ವನಮುಹಭವನೆನಿಸಿದ ದಂ । ಡನಾಯಕಂ ಕೇಶಿ ತಿರ್ದ ಪೇೞ್ದಿಂ

ಎಂಬ ಪದ್ಯಭಾಗದಿಂದ ತಿಳಿಯುತ್ತದೆ. ಈ ಕೇಶಿದಂಡನಾಯಕನಾರೋ ತಿಳಿಯದು. ರನ್ನನ ಗ್ರಂಥವನ್ನು ತಿದ್ದಬೇಕಾದರೆ ಈತನು ದೊಡ್ಡ ಪಂಡಿತನಾಗಿದ್ದಿರಬೇಕು. ಈತನ ವಿಷಯವಾಗಿ ಇನ್ನೇನೂ ತಿಳಿಯಬಂದಿಲ್ಲ.

---

## ರನ್ನ. 993.

ಈತನು ಅಜಿತಪುರಾಣವನ್ನೂ ಸಾಹಸಭೀಮವಿಜಯವನ್ನೂ ರನ್ನಕಂದ ಮೆಂಬ ಒಂದು ನಿಘಂಟುವನ್ನೂ ಬರೆದಿದ್ದಾನೆ. ಅಲ್ಲದೆ, ಅಜಿತಪುರಾಣದ ಕೊನೆಯಲ್ಲಿರುವ—

ಕರಮೆಸೆದುವು ರತ್ನತ್ರಯ । ಪರಿಕಲ್ಪಿಪ ಪರಶುರಾಮಚರಿತಂ ಚಕ್ರೇ ।
ಶ್ವರಚರಿತಮಜಿತತೀರ್ಥೇ । ಶ್ವರ ಚರಿತಂ ರತ್ನನಿಂದೆ ಭುವನತ್ರಯಪೊಗೞ್ ॥

ಎಂಬ ಪದ್ಯದಿಂದ ಈತನು ಪರಶುರಾಮಚರಿತ, ಚಕ್ರೇಶ್ವರಚರಿತ, ಎಂಬ ಬೇರೆ ಎರಡು ಗ್ರಂಥಗಳನ್ನು ಸಹ ಬರೆದ ಹಾಗೆ ತಿಳಿಯುತ್ತದೆ. ಸಾಹಸಭೀಮವಿಜಯದಲ್ಲಿಯ "ಗಂಗಮಂಡಲಚಕ್ರೇಶ್ವರಕಟಕೋತ್ತಮನಾಯಕವಿರಚನೆಯಿನನರ್ಘ್ಯರತ್ನಮಾದಂ ರತ್ನಂ" ಎಂಬ ವಾಕ್ಯವನ್ನು ನೋಡಿದರೆ ಈತನ ಚಕ್ರೇಶ್ವರಚರಿತೆ ಗಂಗರಾಜನ ಸೇನಾನಾಯಕನಾದ ಮತ್ತು ತನ್ನ ಪೋಷಕನಾದ ಚಾವುಂಡರಾಯನ ವಿಷಯವಾದ ಗ್ರಂಥವೆಂದು ತೋರುತ್ತದೆ. ಈ ಪರಶುರಾಮಚರಿತವೂ ಚಕ್ರೇಶ್ವರಚರಿತವೂ ನಮಗೆ ದೊರೆತಿಲ್ಲ.

ಈ ಕವಿಯ ವಿಷಯವಾಗಿ ಇವನ ಗ್ರಂಥಗಳಿಂದ ಈ ಸಂಗತಿಗಳು ತಿಳಿಯುತ್ತವೆ:—

ಈತನು ಜೈನಕವಿ; ಬೆಳುಗರೆ ನಾಡಿನಲ್ಲಿರುವ ಬೆಳುಗಲಿ ಐನೂರಿನಲ್ಲಿಯ ಜಂಬುಖಂಡಿ ಎಸ್ಪತ್ತರಲ್ಲಿ ಶ್ರೇಷ್ಠವಾದ ಮುದುವೊಳಲಲ್ಲಿ ಸೌಮ್ಯಸಂವತ್ಸರದಲ್ಲಿ (949) ಹುಟ್ಟಿದನು; ಬಳೆಗಾರಕುಲಕ್ಕೆ ಸೇರಿದವನು. ಈತನ ತಾಯಿ ಅಬ್ಬಲಬ್ಬೆ; ತಂದೆ ಜಿನವಲ್ಲಭೇಂದ್ರ; ಸಹೋದರರು ದೃಢಬಾಹು, ರೇಚಣ, ಮಾರಯ್ಯ; ಹೆಂಡತಿಯರು ಜಕ್ಕಿ, ಶಾಂತಿ; ಮಗ ರಾಯ; ಮಗಳು ಅತ್ತಿಮಬ್ಬೆ. ಇವನ ಗುರು ಅಜಿತಸೇನಾಚಾರ್ಯ[1]; ಸ್ವಾಮಿ ಚಾವುಂಡರಾಯ. ಇವನಿಗೆ ತೈಲಪನು (973–997)

1. ಈತನೇ ಚಾವುಂಡರಾಯನಿಗೂ ಮೊದಲನೆಯ ನಾಗವರ್ಮನಿಗೂ ಗುರು.

**ಕವಿಚಕ್ರವರ್ತಿ**ಯೆಂಬ ಬಿರುದನ್ನು ಕೊಟ್ಟನು.[1] ಈತನು ಮೊದಲು ಸಾಮಂತರಲ್ಲಿಯೂ ಮಂಡಲೇಶ್ವರರಲ್ಲಿಯೂ ಇದ್ದು ಬಳಿಕ ಸತ್ಯಾಶ್ರಯನಲ್ಲಿ (997–1009) "ಉದಯಪರಂಪರೆಯ" ನ್ನು ಹೊಂದಿದನು; **ಕನಕದಂಡ, ಚಾಮರ, ಆನೆ, ಛತ್ರ** ಮೊದಲಾದ ಬಿರುದುಗಳನ್ನು ಪಡೆದಿದ್ದನು. ಅಜಿತಪುರಾಣವನ್ನು ಶಕ 915 ನೆಯ ವಿಜಯವರ್ಷದಲ್ಲಿ—ಎಂದರೆ ಕ್ರಿ. ಶ. 993 ರಲ್ಲಿ—ಬರೆದನು.

ಈತನಿಗೆ **ಕವಿರತ್ನ, ಅಭಿನವಕವಿಚಕ್ರವರ್ತಿ, ಕವಿಕುಂಜರಾಂಕುಶ, ಕವಿಚಕ್ರವರ್ತಿ, ಉಭಯಕವಿ,** ಎಂಬ ಬಿರುದುಗಳುಂಟು. ಅಲ್ಲದೆ—

ಕವಿಮುಖಚಂದ್ರಂ ಕವಿಚ । ಕ್ರವರ್ತಿ ಕವಿರಾಜಶೇಖರಂ ಕವಿರಾಜಂ ।
ಕವಿಜನಚೂಡಾರತ್ನಂ । ಕವಿತಿಲಕಂ ಕವಿತತುರ್ಮುಖಂ ಕವಿರತ್ನಂ ॥

ಎಂಬ ಪದ್ಯದಲ್ಲಿ ಇತರ ಬಿರುದುಗಳನ್ನೂ ಹೇಳಿಕೊಂಡಿದ್ದಾನೆ.

ಈತನು ತನಗೆ ಹಿಂದೆ ಇದ್ದ ಕವಿಗಳಲ್ಲಿ ಪಂಪನನ್ನೂ ಪೊನ್ನನನ್ನೂ ಹೊಗಳಿ ಅವರ ವಿಷಯವಾಗಿಯೂ ತನ್ನ ವಿಷಯವಾಗಿಯೂ ಹೀಗೆ ಬರೆದಿದ್ದಾನೆ—ಪಂಪನಿಂದ 'ವಾಗ್ವಿಭವೋನ್ನತಿ ನೆಗಟ್ಟಿದು.' 'ಅವನ ಗುಣದೊಳಗೆಸೆದಿರ್ದ' ಉಭಯಕವಿಚಕ್ರವರ್ತಿಗೂ (ಪೊನ್ನ) ಅಭಿನವಕವಿಚಕ್ರವರ್ತಿಗೂ (ತಾನು) ಸಮಾನರಂಟೇ? ಕವಿಗಳಲ್ಲಿ ಕವಿತಾಗುಣಾರ್ಣವ (ಪಂಪ), ಕವಿರತ್ನ, ಇವರಿಬ್ಬರೇ ಪುಣ್ಯವಂತರು; ಇವರಿಬ್ಬರೇ ಕೃತಾರ್ಥರು. ಆದಿಪುರಾಣವನ್ನು ರಚಿಸಿದುದರಿಂದ ಪಂಪನು ದ್ವಿಜವಂಶಧ್ವಜವಾದನು. ಅಜಿತಪುರಾಣವನ್ನು ರಚಿಸಿದುದರಿಂದ ರನ್ನನು ವೈಶ್ಯವಂಶಧ್ವಜವಾದನು. ಹಿಂದೆ ಪಂಪನೂ ಪೊನ್ನನೂ ರಟ್ಟರಾಜ್ಯದಲ್ಲಿ ಪ್ರಖ್ಯಾತರಾದರು; ಉಭಯಕವಿಯಾದ ಕವಿರತ್ನನು ಚಾಳುಕ್ಯರಾಜ್ಯದಲ್ಲಿ ಪ್ರಖ್ಯಾತನಾದನು.

**ಈ ಕವಿಯನ್ನು ಅಭಿನವಪಂಪ** (ಸು. 1100), **ನಯಸೇನ** (1112), **ಪಾರ್ಶ್ವ** (1205), **ಮಧುರ** (ಸು. 1385), **ಮಂಗರಸ** (1508), **ಮೊದಲಾದ ಕವಿಗಳು ಹೊಗಳಿದ್ದಾರೆ. ನಾಗವರ್ಮಕೇಶಿರಾಜರು** ಇವನ ಗ್ರಂಥಗಳಿಂದ ಪದ್ಯಗಳನ್ನು ಉದಾಹರಿಸಿದ್ದಾರೆ.

ಈತನು ಸಂಸ್ಕೃತಕವಿಗಳಲ್ಲಿ ರಾಮಾಯಣಭಾರತಕರ್ತೃಗಳಾದ ವಾಲ್ಮೀಕಿ ವ್ಯಾಸರನ್ನೂ ಪದ್ಯರಚನೆಯಲ್ಲಿ ಖ್ಯಾತನಾದ ಕಾಳಿದಾಸನನ್ನೂ ಗದ್ಯರಚನೆಯಲ್ಲಿ ಖ್ಯಾತನಾದ ಬಾಣನನ್ನೂ ಕನ್ನಡಕವಿಗಳಲ್ಲಿ ಪಂಪಪೊನ್ನರನ್ನೂ ಸ್ತುತಿಸಿದ್ದಾನೆ.

---

1. ಪಡೆಯಿದೆಯ ಕಡೆಯ ಬಡವರ್ । ಕುಡೆ ಪಡೆದನೊ ಚಕ್ರವರ್ತಿಯೊಳ್ ತ್ರೈಲಘನೊಳ್ ।
ಪಡೆದಂ ಮಹಿಮೋನ್ನತಿಯಂ । ಪಡೆದಂ ಕವಿಚಕ್ರವರ್ತಿವೆಸರಂ ರನ್ನಂ ॥
ಜನ್ನನೂ ಈಯಂಶವನ್ನು ಹೇಳಿದ್ದಾನೆ. ಜನ್ನನ ಚರಿತೆಯನ್ನು ನೋಡಿ.

ಇವನು ಕ್ಲಿಷ್ಟಕವಿತೆಯನ್ನು—

ಕಾರಕಪೂರಕವಸ್ತುವಿ । ಚಾರಕನಿಸ್ತಾರಕರ್ಕಳೋಳಿಯೆ ಸಭೆಗೊ ।
ಟ್ಟೋರಂತೆ ನಾಲ್ವರಿರ್ದು ವಿ । ಚಾರಂಬೇಳ್ವಿಂತೆ ಪೇಳ್ವಿ ಕೃತಿಯುಂ ಕೃತಿಯೇ ? ॥
ದರವುರಮುಮುಂಟಸುಂಟಿಯು । ಮರಿವೊರಕನುಮೆನಿಸಿ ತರತರಂ ನುಡಿದು ಸಭಾಂ ।
ತರದೊಳ್ ರಂಜಿಪುದೆ ರಸಾಂ । ತರಂಗಳಂ ಮುಟ್ಟಿ ನುಡಿದು ರಂಜಿಸವೇಡಾ ॥
ಸರಸತಿಯನಬಲೆಯಂ ಗೋ । ಸ್ಮರಿಗೊಂಡರ್ಥಕ್ಕೆ ಕುದಿದು ನೋಯಿಸುವವನ ।
ಕ್ಕರಿಗನೆ ಪಾತಕನಾತನೆ । ಸರಸ್ವತೀದ್ರೋಹನವನನಾರ್ ಮುಟ್ಟುವರೋ ॥

ಎಂಬ ಪದ್ಯಗಳಲ್ಲಿ ನಿಂದಿಸಿ, ತನ್ನ ಸರ್ವೋತ್ಕೃಷ್ಟವಾದ ಉಭಯಕವಿತಾಚಾತುರ್ಯಾದಿಗಳನ್ನು ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ :—

ಕೊಂಡಾಟದ ಸಾಮಂತರ । ಮಂಡಲಿಕರ ಸಕಲಚಕ್ರವರ್ತಿಗಳ ಸಭಾ ।
ಮಂಡಲದೊಳುಭಯಕವಿಮುಖ । ಮಂಡನಮಾಗಿರ್ಪ ರತ್ನಮಿಾಕವಿರತ್ನಂ ॥

ವಸುಧೆಯೊಳಗೊಂದು ರತ್ನಮಿ । ದೆಸೆದಿರ್ದುದು ಪಲವು ರತ್ನಮಿಲ್ಲೆಂಬಿನಮೇಂ ।
ಮಸುಳಿಸಿದನೊ ಬಹುರತ್ನಾ । ವಸುಂಧರಾ ಎಂಬ ವಾಕ್ಯಮಂ ಕವಿರತ್ನಂ ॥

ಆರಾತಿಯಕವಿಪುಂಗವ । ರಾರುಂ ಮುನ್ನಾರ್ತರಿಲ್ಲ ವಾಗ್ದೇವಿಯ ಭಂ ।
ಡಾರದ ಮುದ್ರೆಯನೊಡೆದಂ । ಸಾರಸ್ವತಮನಿಪ ಕವಿತೆಯೊಳ್ ಕವಿರತ್ನಂ ॥

ಕನ್ನಡಮೆರಡಜುನೂಜಜ । ಕನ್ನಡವಾತಿರುಳ ಕನ್ನಡಂ ಮಧುರಮ್ಯೋ ।
ತ್ಪನ್ನಂ ಸಂಸ್ಕೃತಮೆನೆ ಸಂ । ಪನ್ನಂ ನೆಗಟ್ಟಿಭಯಕವಿತೆಯೊಳ್ ಕವಿರನ್ನಂ ॥

ರತ್ನಪರೀಕ್ಷಕನಾಂ ಕೃತಿ । ರತ್ನಪರೀಕ್ಷಕನೆನೆಂದು ಫಣಿಪತಿಯು ಫಣಾ ।
ರತ್ನಮುಮಂ ರನ್ನನ ಕೃತಿ । ರತ್ನಮುಮಂ ಪೇಳ್ದು ಪರೀಕ್ಷಿಪಂಗೆಂಟೆರ್ದೆಯೇ ? ॥

ರಸಮಂ ಭಾವಮುಮಂ ಕಾ । ಳಸಮಂ ಕುಣಿಕೆಯುಮನಱದು ಕವಿಮಾರ್ಗದೊಳಂ ।
ಪೊಸದೇಗೆಯ ನುಡಿಗಳೊಳಂ । ಪೊಸಯಿಪ ಬಲ್ಮೈಗೆ ಚತುರ್ಮುಖಂ ಕವಿರನ್ನಂ ॥

ಆವನಿಪರೊಳ್ ನಿಜಭುಜಬ । ಕ್ಕವರ್ತಿ ರಣಜಯಕ್ಕೆ ತೈಲನೆಂತಸಹಾಯಂ ।
ಕವಿಗಳೊಳಮಂತೆ ಕವಿಚ । ಕ್ರವರ್ತಿ ಕವಿರತ್ನನಂತು ಕೃತಿಗಸಹಾಯಂ ॥

ಮತಿ ಕೋಶಂ ಪದವಿದ್ಯೆ ಕಂಠಿಕೆ ಜಸಂ ಶ್ವೇತಾತಪತ್ರಂ ಸರ ।
ಸ್ವತಿ ಮಾದೇವಿ ಪದೋಕ್ತಿ ಭೇರಿ ಕಳಿತಂ ಸಿಂಹಾಸನಂ ಸಂದಲಂ ॥
ಕೃತಿ ಚಂಚಚ್ಚಮರೀಜಮಾಗೆ ಕವಿತಾಸಾಮ್ರಾಜ್ಯಮಂ ತಾಳ್ದಿದು ।
ನ್ನತಿಯಿಂದಂ ಕವಿಚಕ್ರವರ್ತಿವೆಸರೇಂ ರನ್ನಂಗೆ ಮೆಯ್ವೆತ್ತುದೋ ॥

ಇವನ ಗ್ರಂಥಗಳಲ್ಲಿ—

## 1. ಅಜಿತಪುರಾಣ.

ಇದು ಎರಡನೆಯ ತೀರ್ಥಂಕರನಾದ ಅಜಿತನಾಥನ ಚರಿತೆ; ಚಂಪೂರೂಪವಾಗಿದೆ; 12 ಆಶ್ವಾಸಗಳಾಗಿ ಭಾಗಿಸಲ್ಪಟ್ಟಿದೆ. ಈ ಪುರಾಣಕ್ಕೆ ಕವಿ 'ಕಾವ್ಯರತ್ನ,' 'ಪುರಾಣತಿಲಕ' ಎಂಬ ಹೆಸರುಗಳನ್ನು ಇಟ್ಟಿದ್ದಾನೆ. ಇದರ ಉತ್ಕೃಷ್ಟತೆಯನ್ನು—

ಇನಿತುಪಪತ್ತಿಯಿಲ್ಲಿನಿತು ಬಿನ್ನಣಮಿಲ್ಲಿನಿತರ್ಥದೃಷ್ಟಿಯು ।
ಲ್ಲಿನಿತುಚಿತೋಕ್ತಿಯಿಲ್ಲಿನಿತಳಂಕೃತಿಯಿಲ್ಲಿನಿತಾಗಮಾರ್ಥಮಿ ॥
ಲ್ಲಿನಿತುವರಂ ಪ್ರಬೋಧಮಣಮಿಲ್ಲ ಪೆಱಗ್ಗಿದು ಕಾವ್ಯರತ್ನಮಂ ।
ಡನಮೆಸೆ ಮೆಚ್ಚಿ ಬಗ್ಗೈಸದರಾರ್ ಕವಿರತ್ನನ ಕಾವ್ಯರತ್ನಮಂ ॥

ಎಂಬ ಪದ್ಯದಲ್ಲಿ ಹೇಳುತ್ತಾನೆ.[1]

ಈ ಗ್ರಂಥವನ್ನು ಬರೆವುದಕ್ಕೆ ಕಾರಣವನ್ನು ಹೀಗೆ ಹೇಳುತ್ತಾನೆ:—

ಪೊನ್ನನಿಂದ ಶಾಂತಿಪುರಾಣವನ್ನು ಬರೆಯಿಸಿದ ಮಲ್ಲಪನೂ ಪುನ್ನಮಯ್ಯನೂ ತೈಲಪನ (973–997) ಚಮೂಪತಿಗಳಾಗಿದ್ದರು. ಅವರಲ್ಲಿ ಪುನ್ನಮಯ್ಯನು ಗೋವಿಂದರನೆಂಬ ದ್ರೋಹಿಯೊಡನೆ ಯುದ್ಧಮಾಡಿ ಕಾವೇರಿಯ ತೀರದಲ್ಲಿ ಮೃತನಾದನು. ಮಲ್ಲಪನು ತೈಲಪನ ಕಾಲವಾದಮೇಲೆ ರಾಜ್ಯವಾಳಿದ, ಇಜಿವಬೆಡಂಗ ಎಂಬ ಬಿರುದುಳ್ಳ, ಸತ್ಯಾಶ್ರಯನ (997–1009) ಆಸ್ಥಾನದಲ್ಲಿ ಮುಖ್ಯಾಧಿಕಾರಿಯಾಗಿದ್ದನು. ಈತನಿಗೆ ಐವರು ಗಂಡುಮಕ್ಕಳೂ ಮೂವರು ಹೆಣ್ಣುಮಕ್ಕಳೂ ಇದ್ದರು. ಹೆಣ್ಣುಮಕ್ಕಳಲ್ಲಿ ಅತ್ತಿಮಬ್ಬೆ, ಗುಂಡಮಬ್ಬೆ ಎಂಬಿಬ್ಬರನ್ನು ಚಾಳುಕ್ಯಚಕ್ರವರ್ತಿಯು ಮಹಾಮಂತ್ರಿಯಾದ ದಲ್ಲಿಪನ ಮಗನಾಗದೇವನಿಗೆ ವಿವಾಹಮಾಡಿಕೊಟ್ಟನು. ಈಯತ್ತಿಮಬ್ಬೆಯು ಗರ್ಭದಲ್ಲಿ ಪಡೆವಳ ತ್ತೆಲ ಎಂಬ ಬಿರುದುಳ್ಳ ಅಣ್ಣಿಗದೇವನೆಂಬ ಪುತ್ರನು ಜನಿಸಿದನು. ಹೀಗಿರುತ್ತಿರಲು ನಾಗದೇವನು ಕುನುರರ ಕಾಳಗದಲ್ಲಿ ತನ್ನ ಸಾಮರ್ಥ್ಯವನ್ನು ತೋರಿಸಿ ಮಹಾರಾಜನನ್ನು ಮೆಚ್ಚಿಸಿ ಸೇನಾಪತಿಪದವಿಯನ್ನು ಹೊಂದಿದನು. ಅನಂತರ ಪಂಚಲನನ್ನು ಜಯಿಸಿ ಕರಹಡದೇಶದಿಂದ ಮಲ್ಲಮನನ್ನು ಓಡಿಸಿದನು. ಹೀಗೆ ಇನ್ನೂ ಅನೇಕ ಯುದ್ಧಗಳಲ್ಲಿ ಜಯವನ್ನು ಪಡೆದು ಕೊನೆಗೆ ಮೃತನಾದನು. ಆಗ ಅವನ ಕಿರಿಯ ಹೆಂಡತಿ ಗುಂಡನುಬ್ಬೆ ತನ್ನ ಅಕ್ಕನಾದ ಅತ್ತಿಮಬ್ಬೆಯ ಬಳಿಗೆ ಹೋಗಿ—"ನೀನು ಪುತ್ರಸತಿಯಾದುದರಿಂದ ಮಗನನ್ನು ಪರಾಮರಿಸಿ ಕೊಂಡಿರು. ನಾನು ಪತಿಯೊಡನೆ ಸಹಗಮನವನ್ನು ಮಾಡುತ್ತೇನೆ" ಎಂದು ಹೇಳಿ ಪತಿಯೊಡನೆ ದೇಹತ್ಯಾಗಮಾಡಿದಳು. ಬಳಿಕ ಅತ್ತಿಮಬ್ಬೆ ಪ್ರತಿಷ್ಠೆಯಾಗಿ ಸಾಮಿರಾರು

---

1. ಈ ಕವಿಯ ಗ್ರಂಥವನ್ನು ಪಾರ್ಶ್ವಪಂಡಿತನು (1205)—

ರತ್ನಕೃತಿಪದಕಮಂ ನುತ । ನೂತನಾರ್ಥಸ್ಫೂರ್ತಿಯುಕ್ತಮಂ ಸತ್ಕೃತಿಯಂ ।
ಯತ್ನದೆ ಸುಜನರ್ ವಿಜಿತಸ । ಪತ್ನಮನತಿಪೃಥುಳಹೃದಯದೊಳ್ ತಳೆಯದರಾರ್ ॥

ಎಂದು ಸ್ತುತಿಸಿದ್ದಾನೆ.

ಮಣಿಕನಕಮಯಜಿನಪ್ರತಿಮೆಗಳನ್ನು ಮಾಡಿಸಿ ವಿಶೇಷಪ್ರಖ್ಯಾತಿಹೊಂದಿ ತನ್ನ ತ್ಯಾಗದಿಂದ ಜಗವೆಲ್ಲಾ ದಾನಚಿಂತಾಮಣಿ ಎಂದು ತನ್ನನ್ನು ಹೊಗಳುವಂತೆ ಮಾಡಿದಳು. ಆಕೆಯ ಇಷ್ಟಾನುಸಾರವಾಗಿ ಕವಿ ಈ ಪುರಾಣವನ್ನು ಬರೆದನು.

ಗ್ರಂಥಾವತಾರದಲ್ಲಿ ಕವಿ ಅಜಿತಜಿನನನ್ನು ಸ್ತುತಿಸಿದ್ದಾನೆ. ಬಳಿಕ ಸಿದ್ಧಾದಿಗಳನ್ನು[1] ಸ್ತುತಿಸಿ, ಮಲ್ಲಪ, ಪುನ್ನಿಮಯ್ಯ ಇವರ ವಂಶಾದಿಗಳನ್ನು ಹೇಳಿ. ದಾನಚಿಂತಾಮಣಿಯೆಂದು ಪ್ರಸಿದ್ಧಳಾಗಿದ್ದ ಅತ್ತಿಮಬ್ಬೆಯನ್ನು ವಿಶೇಷವಾಗಿ ಹೊಗಳಿ,[2] ತರುವಾಯ ಕಥೆಯನ್ನು ಆರಂಭಿಸಿದ್ದಾನೆ. ಆಶ್ವಾಸಗಳ ಕೊನೆಯಲ್ಲಿ–

ಇದು ಸಕಲಸುಜನಹೃದಯನಂದನಂದಾರಕ ಶ್ರೀಮದಜಿತಸೇನಭಟ್ಟಾರಕಶ್ರೀಪಾದ ಪದ್ಮಸ್ಮರಣಾದಾಸಾದಿತವರತತ್ತತ್ರಯಾಲಂಕೃತ ಶ್ರೀಮದಭಿನವಕವಿಚಕ್ರವರ್ತಿ ಕವಿರತ್ನನಿರ್ಮಿತ ಶ್ರೀಮದಜಿತತೀರ್ಥಂಕರಪುರಾಣತಿಲಕಮೊ

ಎಂಬ ಗದ್ಯವಿದೆ.

ಈಕವಿ ಬಹಳ ಪ್ರಸಿದ್ಧನು. ಇವನ ಬಂಧವು ಸರಸವಾಗಿಯೂ ಪ್ರೌಢವಾಗಿಯೂ ಇದೆ. ಇವನ ಪದಸಾಮಗ್ರಿಯೂ ರಚನಾಶಕ್ತಿಯೂ ಬಂಧಗೌರವವೂ ಆಶ್ಚರ್ಯಾವಹವಾಗಿವೆ. ಪದ್ಯವನ್ನು ಆರಂಭಿಸಿದರೆ ಮಧ್ಯದಲ್ಲಿ ಅವತಡೆಯೂ ಇಲ್ಲದೆ ಕೊನೆಯವರೆಗೂ ಪ್ರಸಾದಗುಣಪೂರ್ಣವಾಗಿಯೂ ಹೃದಯಂಗಮವಾಗಿಯೂ ಪದಗಳು ಹೊರಡುವಂತೆ ಕಾಣುತ್ತವೆ. ಈ ಕಾರಣದಿಂದಲೇ **ಮಧುರನು** (ಸು. 1385) ಧರ್ಮನಾಥಪುರಾಣದಲ್ಲಿ ಹೊನ್ನ ರನ್ನ ಇವರ ಚಾತುರಿಯನ್ನು

ಬಿನ್ನಾಣದ ಕುಸುರಿ ಪಸರಿಸು । ನನ್ನಂ ಗುಣಜಾತಬಂಧಮುಳವಡ ಸೆಗಟ್ಟಾ ।
ಪೊನ್ನಂ ರನ್ನಂ ಕೂಡಿಪೊ । ಡಿನ್ನಾವಾಗ್ಮಧುಗೆ ಭೂಷಣಂ ಪಜಿತುಂಟೇ ॥

ಎಂದು ಚಮತ್ಕಾರವಾಗಿ ವರ್ಣಿಸಿದ್ದಾನೆ.

ಈ ಪುರಾಣದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ.—

ವಸಂತ.

ಎಳನೆಜಿಕೆ ದಾಪೆ ಕೆಂದಳಿರೆ ನಾಲಗೆ ಮಾಪುವರಳ್ಗಳೊಂಬಿನೊಳ್ ।
ಬಿಳಿವಸಂತಂ ವಸಂತಮುರಲಾರ್ಪಿಂಗೆ ಕೋಕಿಲಮುಂಬಿನಂ ಮುನಂ ॥

1 ಸಿದ್ಧರು, ಆಚಾರ್ಯರು, ಉಪಾಧ್ಯಾಯರು, ಸಾಧುಗಳು, ಕಾರಸಂಘದವರು ತನ್ನ ಗುರುವಾದ ಅಜಿತಸೇನಮುನಿ, ಆರ್ಯಸ್ತ್ರೀಸಾಧ್ವಿಯರು ಜಿನಾಗಮ, ಗಣಧರಸೇನಾನಾಯಕನಾದ ಸಿಂಹಸೇನ, ಸರಸ್ವತಿ, ಯಕ್ಷಿಯಕ್ಕಳು, ಧರ್ಮಚಕ್ರ.

2. ಈಕೆಯನ್ನು ಸ್ತುತಿಸುವಾಗ—ದಾನಮಾಡುವುದರಲ್ಲಿ ಬೂತುಗ, ನೊಳಂಬಾಂತಕ, ಚಾವುಂಡರಾಯ, ಶಂಕರಗಂಡ, ಇವರು ಪ್ರಸಿದ್ಧರು. ಇವರಿಗಿಂತ ಈಕೆ ಪ್ರಸಿದ್ಧಳು—ಎಂದು ಹೇಳುತ್ತಾನೆ

ಗೊಳಿ ಮಧುಮಾಸಕೇಸರಿ ವಿಯೋಗಿಗಳೆಂಬ ಮೃಗಂಗಳಂ ಭಯಂ ।
ಗೊಳಿಸಿದುದುತ್ಕಕೀರಮದಕೋಕಿಲಗರ್ಜಿತತರ್ಜಿತಂಗಳಿಂ [1] ॥ 108 ॥

ನವಸಪಕಾರದಂಕುರದಿನಂಕುರಿಸಿತ್ತು ಪೊಪಟ್ಟಿ ನೀಳ್ದ ಪ ।
ಲ್ಲವತತಿಯಿಂದೆ ಪಲ್ಲವಿಸಿತುನ್ಮದಭೃಂಗಕುಳಕ್ಕೆ ಕಂಪುವೀ ॥
ಜುವ ಕುಸುಮಂಗಳಂ ಕುಸುಮಿಸಿತ್ತು ಶುಕವ್ರಜಮುತ್ಸುಕತ್ವದಿಂ ।
ಸನಿವ ಫಲಂಗಳಂ ಫಲಿತಮಾಯ್ತು ಮನೋಜಮನೋರಥದ್ರುಮಂ ॥ 109 ॥

## ಚಂದ್ರ.

[2]ಜಗದಾಲೋಕನಪರ್ವಣಂ ಪ್ರಥಮದಿಕ್ಕಾಂತಾನನಂ ಕಂತುರಾ ।
ಜಗಜೋಲ್ಲಿಪನಪಿಂಡಮಂಬರಸರಸ್ಯುತ್ಫುಲ್ಲಪದ್ಮಂ ವಿಯೋ ॥
ಗಿಗಣಾಕೂತಕುಟುಂಗಪೋತಭಯಕೃತ್ಕಂಠೀರವಂ ಭೀಮನೆ ।
ತ್ತೊಗೆದತ್ಯರ್ಣವವೀಚಿನರ್ತನನಟಂ ಬಿಂಬಂ ಸುಧಾಸೂತಿಯಾ ॥ 110 ॥

## ಚಂದ್ರಿಕೆ.

[2]ಬೆಲಗಸೆದಿಕೊಂಡು ಕುಡಿಯಲ್ ಮೊಗೆಯಲ್ ಕೊಡಗೊಂಡು ತರ್ದಿ ಬ ।
ಚ್ಚಲಸೆಳಸೋಂಟಮೊಳಾ ಪರಿಯಿಸಲ್ ಪಜಗೊಲ್ಲಗಸಿಕ್ಕೆ ಪಾಯಿಸಲ್ ॥
ನೆಲೆಯಿಸಿಸೆಂದು ಸೋದರೊಳವೊಕ್ಕು ಧುಮುಮ್ಮಿಜಾದಾಡಲೀಸಲ ।
ಗ್ಗಲಿಸಿದಲಂಪಿನಿಂ ಬಗೆದುದಂದು ಜನಂ ಘನಚಂದ್ರಿಕಾಂಬುವಂ ॥ 111 ॥

## ಸೂರ್ಯೋದಯ.

ನಾಸವದಿಕ್ಕಟಂ ತಮದ ಮೂಷ ತಮಂ ನುಡಿದರ್ಪಲಬ್ಜ ನಂ ।
ನಾಸಿ ಸಮಾರನೇರಗೆಗನಾಗ ಸದಾಘವ ದೀಪ್ತಿ ವರ್ತಿಯೊಳ್ ॥
ಕಾಸೆ ತೆರಳ್ದ ಪಿಂಜರಿಯುಪೋಲ್ ತಿರುಸಂಜೆ ತೆರಳ್ದಿನಂ ಪದಂ ।
ಗಾಸಿನ ವೊನ್ನ ಗಟ್ಟಯಪೊಲೊಪ್ಪಿಮದುದ್ಗತಭಾನುಮಂಡಲಂ ॥ 112 ॥

## ಪ್ರಭಾತ.

ಕೇಳ್ದನಜಾತನೇ ಶಫರಲೋಚನೆ ವರ್ದ್ಧಿಸಿ ಪದ್ಮಬಾಂಧವಂ ।
ಬಳ್ಕಳಸಡಿದಂ ಕಲಸಹಸ್ರಮುಸೆಂದು ಕಳಸ್ವನಂ ಮನಂ ॥
ಗೊಳ್ಳಿಸೆಗಂ ಕಳಕ್ಕಳಿಸಿ ಸಂತಸವಾತಿನ ಪೂರ್ಣಪಾತ್ರಮಂ ।
ಕೊಳ್ಳವೊಲೀಪ್ಪುಕೊಂಡುವಳಿಗಳ್ ಸುಮನೋಮುಕರಂದಗಂಧಮಂ ॥ 113 ॥

---

1. ಶಬ್ದಮಣಿದರ್ಪಣದಲ್ಲಿ ಉದಾಹೃತವಾಗಿದೆ—ಪು. 81
2. ನಾಗವರ್ಮನ ಕಾವ್ಯಾವಲೋಕನದಲ್ಲಿ ಉದಾಹೃತವಾಗಿದೆ.

### ಸ್ತ್ರೀಜನ.

ವಿಳಸಿತಪುಂಡರೀಕಚರಣಂ ಕುಮುದೇಕ್ಷಣಕಾಂತಮಂಜನಾ ।
ಕುಳಿತವಿಲೋಚನಂ ಸ್ವಗತನಾಮಗಮನ್ವಿತಸುಪ್ರತೀಕಮು ॥
ಜ್ವಲತರಪುಷ್ಪಗಂತಮಮರೇಭಗತಂ ಗೃಹಸಾರ್ವಭೌಮಮ ।
ಗ್ಗಳಮೆಸೆದತ್ತು ದಿಗ್ವಳಯದಂತೆ ನಿಶಾಂತದೊಳಂಗನಾಜನಂ ॥ 114 ॥

### ಸ್ತ್ರೀಶೋಕ.

ಪಡಪಡವಾಯ್ವ ಮೆಲ್ಲೆರ್ದೆಗಳಂ ಕರಯುಗ್ಮದಿನೊತ್ತಿ ಕಣ್ಣ ನೀ ।
ರಡಿಗಡಿಗುಣ್ಮಿ ಪಾಯ್ತರೆ ಮುಖೇಂದು ಬಿಗುರ್ತಿರೆ ಸುಯ್ಯ ಬೆಂಕೆಯಾ ॥
ನಿಡುಪಮಳುಂಬಮಪ್ಪಿನೆಗವಿಾಶನದೆಲ್ಲಿದನೆತ್ತವೋದನಾ ।
ವೆಡೆಯನಧೀಶನೆಂದು ಪಲವಾಡಿದರಂದಜತಾಂಗನಾಜನಂ ॥ 115 ॥

### ವಿರಕ್ತಿ.

ಸಾರಮೆ ಸಾರಮಪ್ಪ ಜನಧರ್ಮಮನಾತ್ಮನಸಾರಮಪ್ಪುದಂ ।
ಸಾರವಿದೆಂದು ನಂಬಿ ತನಗಲ್ಲದುದಂ ತನಗಪ್ಪದೆಂದು ಕೇ ॥
ದಾರವಿಹಾರಸೋದರಕೃಶೋದರಸುಂದರದಾರದಾರಕೋ ।
ದಾರವಿಮೋಹದೊಳ್ ತೊಡರ್ದು ದಾರುಣದುಃಖಮನೆಯ್ದುದಿರ್ಕುಮೇ ॥ 116 ॥

## 2. ಸಾಹಸಭೀಮವಿಜಯ ಅಥವಾ ಗದಾಯುದ್ಧ.

ಈ ಗ್ರಂಥವು ಚಂಪೂರೂಪವಾಗಿದೆ; 10 ಆಶ್ವಾಸಗಳಾಗಿ ಭಾಗಿಸಲ್ಪಟ್ಟಿದೆ. ಇದರಲ್ಲಿ—ಭೀಮನು ದ್ರೌಪದಿಯ ಮುಂದೆ ಪ್ರತಿಜ್ಞೆಮಾಡಿದಂತೆ ದುರ್ಯೋಧನನ ಮಕುಟವನ್ನೂ ತೊಡೆಗಳನ್ನೂ ಗದಾಯುದ್ಧದಲ್ಲಿ ಭಂಗಿಸಿ ಅವನನ್ನು ಕೊಂದು ಪಟ್ಟಾಭಿಷಿಕ್ತನಾದನು–ಎಂದು ವರ್ಣಿಸಿದೆ. ಇಜ್ಜುವ ಬೆಡಂಗ, ಸಾಹಸಭೀಮ, ಚಾಳುಕ್ಯನಾರಾಯಣ, ಅಕಳಂಕಚರಿತ, ಅಮ್ಮನ ಗಂಧವಾರಣ, ಸಾಹಸಾಂಕ ಎಂಬ ಬಿರುದುಗಳುಳ್ಳ ಸತ್ಯಾಶ್ರಯನ (997—1009) ಸಾಹಸಗಳನ್ನು ವರ್ಣಿಸಬೇಕೆಂದು ತನಗೆ ಆಶೆ ಹುಟ್ಟಿದುದರಿಂದ ಈ ರಾಜನನ್ನು ಕಥಾನಾಯಕನನ್ನಾಗಿ ಮಾಡಿ "ಭೀಮನೊಳ್ ಪೋಲಿಸಿಪೇೞ್ವೆನೀಗದಾಯುದ್ಧಮಂ" ಎಂದು ಕವಿ ಹೇಳುತ್ತಾನೆ. ಈ ರಾಜನು "ನರಪತಿತೈಲಪಂ ಬೆಸಸೆ ಘೂರ್ಜರಸೇನೆಗೆ ಸೂಚಿಯಾನೆಯಂ ಪರಿಯಿಸಿ ಗೆಲ್ದಂ" "ಕೊಂಕಣೇಶ್ವರನನಿದಿರ್ಚಿ ಸಾಧಿಸಿದಂ" "ಬಲವತ್ತುಂಗಕಳಿಂಗರಾಜಮದವನ್ಮಾತಂಗಸಿಂಗಂ" ಎಂದೂ, "ಸರ್ವಗ್ರಾಸಂ ಗೊಂಡತ್ತಪರಾದಿತ್ಯನ ಮಂಡಲಮಂ ಬಾಹುರಾಹು ಸತ್ಯಾಶ್ರಯನಾ" ಎಂದೂ ಹೇಳಿದ್ದಾನೆ. ಈ ಸತ್ಯಾಶ್ರಯನ ವಂಶಪರಂಪರೆಯನ್ನು ಈರೀತಿಯಾಗಿ ವರ್ಣಿಸಿದ್ದಾನೆ:—

ಅವನ ಪೂರ್ವಜರಪ್ಪರಸುಗಳೊಳಗೆ ಅಯೋಧ್ಯಾಪುರಪರಮೇಶ್ವರನುಂ ದಿಶಾದಂತಿ ಪ್ರಕಟಪ್ರಭಾವನುಮಪ್ಪ ಸತ್ಯಾಶ್ರಯವಲ್ಲಭನಿಂ, ವಿಷ್ಣುವರ್ಧನಾಪರನಾಮಧೇಯನಿಂ, ರಾಷ್ಟ್ರಕೂಟಗಜಘಟಾವಿಘಟನಸಿಂಹನೆನಿಸಿದ ಜಯಸಿಂಹದೇವನಿಂ, ಅತಿಪ್ರಬಲರಣರಾಮನೆನಿಸಿದ ರಣರಂಗಸಿಂಹನಿಂ, ವಾತಾಪಿಪುರವರೇಶ್ವರನೆನಿಸಿದ ಪುಲಕೇಶಿದೇವನಿಂ, ಪರಿರಕ್ಷಿತಪವಿತ್ರವರ್ಮನೆನಿಸಿದ ಕೀರ್ತಿವರ್ಮನಿಂ, ತತ್ತನಯನಪ್ಪೆರಡನೆಯ ಸತ್ಯಾಶ್ರಯದೇವನಿಂ, ಅವನ ಕಿಱಿಯ ಮಗನಪ್ಪ ಮಂಗಳಾರ್ಜುನನಿಂ, ಸತ್ಯಾಶ್ರಯನಪ್ಪೆರಡನೆಯ ಸತ್ಯವ್ರತಿಯಿಂ, ತತ್ತನಯನಪ್ಪಾದಿತ್ಯವರ್ಮನಿಂ, ತದಪತ್ಯನಪ್ಪ ವಿಕ್ರಮಾದಿತ್ಯನಿಂ, ತತ್ಪುತ್ರನಪ್ಪ ದುರ್ಧರಮಲ್ಲನಿಂ, ತನ್ನಂದನನಪ್ಪ ನಿರವದ್ಯಾಪರನಾಮಧೇಯನಪ್ಪ ವಿಜಯಾದಿತ್ಯಭಟ್ಟಾರಕನಿಂ, ತತ್ಸೂನುವಿತ್ರನಪ್ಪ ವಿಕ್ರಮಾರ್ಜುನನೆನಿಸಿದ ಕೊಂಕಣವಿಕ್ರಮಾದಿತ್ಯನಿಂ, ತತ್ಸೂನುವಿತ್ರನಪ್ಪ ಕೀರ್ತಿವರ್ಮನಿಂ, ಆತನ ಕಿಱಿಯ ಮಗನಪ್ಪ ಭೀಮಪರಾಕ್ರಮಿಯಿಂ, ತಜ್ಜಾತನಪ್ಪೆರಡನೆಯ ಕೀರ್ತಿವರ್ಮನಿಂ, ತತ್ಸೂನುವಪ್ಪ ಪಿರಿಯ ತೈಲಪನಿಂ, ಆತನ ಮಗನಪ್ಪ ಮುಕುಂದಿಯ ಕೊಂದ ಕುಂದಿಯ ಭೀಮನಿಂ, ಆತನ ಮಗನಪ್ಪ ವಿಕ್ರಮಾದಿತ್ಯದೇವನಿಂ, ಆತನ ಮಗನಪ್ಪ ರಣರಂಗಮಲ್ಲನೆನಿಪ್ಪಯ್ಯಣದೇವನಿಂ, ಆತನ ಮಗನುತ್ತುಂಗಮಲ್ಲನೆನಿಸಿದ ವಿಕ್ರಮಾದಿತ್ಯನಿಂ, ಚಾಳುಕ್ಯಕುಲೋದ್ಭವನಪ್ಪ ವಿಕ್ರಮಾದಿತ್ಯದೇವಂಗಂ ಚೈದ್ಯಕುಲೋದ್ಭವೆಯಪ್ಪ ಬೊಂಕಾದೇವಿಗಂ ಪುಟ್ಟಿದ ಕರಹಟಭಯಂಕರಂ, ಪಲ್ಲಿಕೋಟೋಲ್ಲಂಘನಂ, ಭದ್ರಕವಿದ್ರಾವಣಂ, ಕೊಂಕಣಭಯಂಕರಂ, ಯಾದವಕುಲಾಂಬರದ್ಯುಮಣಿ, ರಣರಂಗಭೀಷಣಂ, ಸಾಮಂತಮೃಗಶಾರ್ದೂಲ, ರಣರಂಗರಾಕ್ಷಸ, ಅಕಲಂಕರಾಮ, ತಳವರ್ಗತಳಪ್ರಹಾರ, ಅರಿಷ್ಟಷಟ್ಟ. ರಾಷ್ಟ್ರಕೂಟಕಾಳಕೂಟಂ. ಪಾಂಚಾಲಮದೇಭಪಂಚಾನನಂ, ಉತ್ಪಕ್ಕಮಲ್ಲಂ, ಶ್ರೀಮನ್ಮೂರ್ಮಡಿತೈಲಪನೆನಿಸಿದಾಹವಮಲ್ಲದೇವನಿಂ ಚಾಳುಕ್ಯವಂಶಮುದಿತೋದಿತಮಾದುದು.

ಈ ಗ್ರಂಥವನ್ನು 'ವನರುಹಭವನೆನಿಸಿದ ದಂಡನಾಯಕಂ ಕೇಶಿ ತಿರ್ದಿಪೇಟ್ದಿಂ' ಎಂದು ಹೇಳುತ್ತಾನೆ. ಈ ಕೇಶಿದಂಡನಾಯಕನಾರೋ ತಿಳಿಯದು. ಕವಿ ಈ ಗ್ರಂಥದಲ್ಲಿ ಭಾರತದ ಕಥಯನ್ನೆಲ್ಲಾ "ಸಿಂಹಾವಲೋಕನಕ್ರಮ" ದಿಂದ ತಿಳಿಸಿರುವಂತೆ ಹೇಳುತ್ತಾನೆ. ಗ್ರಂಥಾವತಾರದಲ್ಲಿ ಶ್ಲೇಷೆಯಿಂದ ಚಾಳುಕ್ಯ ನಾರಾಯಣನನ್ನು ನಾರಾಯಣನಿಗೆ ಹೋಲಿಸಿ ವಿಷ್ಣುಸ್ತುತಿಮಾಡಿದ್ದಾನೆ. ಬಳಿಕ ಇದೇ ರೀತಿಯಾಗಿ ಈಶ್ವರನನ್ನೂ ಬ್ರಹ್ಮನನ್ನೂ ಸೂರ್ಯನನ್ನೂ ಮನ್ಮಥನನ್ನೂ ಕ್ರಮವಾಗಿ ಸ್ತುತಿಸಿ ಅನಂತರ ಸರಸ್ವತಿಯನ್ನೂ ಗಣನಾಯಕನನ್ನೂ ಸ್ತುತಿಸಿದ್ದಾನೆ. ಆಶ್ವಾಸಗಳ ಅಂತ್ಯದಲ್ಲಿ--

ಇದು ಸಮಸ್ತಭುವನವಲ್ಲಭ ಶ್ರೀಮದಾಹವಮಲ್ಲದೇವ ಶ್ರೀಪಾದಕಲ್ಪಪಾದಪಸದಾಶ್ರಯಾಸನ್ನವರ್ತಿ ಕವಿಚಕ್ರವರ್ತಿ ಕವಿರನ್ನ ವಿರಚಿತಮಪ್ಪ ಚಾಳುಕ್ಯಚಕ್ರವರ್ತಿ ಶ್ರೀಸಾಹಸಭೀಮವಿಜಯದೊಳ್

ಎಂಬ ಗದ್ಯವಿದೆ.

ನಮಗೆ ದೊರೆತ ಈ ಗ್ರಂಥದ ಪ್ರತಿಗಳಿರಡರ ಕೊನೆಯಲ್ಲಿಯೂ—

ಶಕಸಮಗತಿಯುತುಯುಗಶಶಿ । ನಿಕರಾಂಕಂ ಚಿತ್ರಭಾನು . . . . ಕಾ ।
ರ್ತಿಕಸಿತಸಪ್ತಮಿ . . . . । ಸುಕರಂ ಬುಧಸೇವ್ಯಮಾಯ್ತು ರನ್ನನ ಕಾವ್ಯಂ ॥

ಎಂಬ ಅಸಮಗ್ರವಾದ ಪದ್ಯವಿದೆ. ಈಪದ್ಯದ ಅರ್ಥವು ವಿಶದವಾಗಿಲ್ಲ. ವರ್ಷಸಂಖ್ಯೆಯನ್ನು ನೋಡಿದರೆ ನಾಲ್ಕು ಅಂಕಗಳು ಇರುವಂತೆ ತೋರುತ್ತದೆ. ಶಕವರ್ಷ ಸಾವಿರವೂ ಚಿಲ್ಲರೆ ಯಾದರೆ ಅಜಿತಪುರಾಣವನ್ನು ಬರೆದ ಶಕ 915 ಕ್ಕೂ ಇದಕ್ಕೂ ಸಂಬಂಧವೇ ತೋರುವುದಿಲ್ಲ. 'ಶಶಿ' ಎಂಬುದಕ್ಕೆ ಒಂದು ಎಂಬ ಸಂಕೇತವುಂಟು. ಆದರೆ ಈ ಪದ್ಯದಲ್ಲಿರುವ "ಶಶಿನಿಕರ" ಎಂಬುದಕ್ಕೆ ಏನರ್ಥವೋ ತಿಳಿಯದು. ಈಪದ್ಯವು ಸಮಗ್ರವಾಗಿಯೂ ಸುಬದ್ಧವಾಗಿಯೂ ದೊರೆವ ವರೆಗೆ ಇದರ ಅರ್ಥವನ್ನು ನಿಶ್ಚಯಿಸುವುದು ಕಷ್ಟವಾಗಿದೆ. ಚಿತ್ರಭಾನುವರ್ಷ ಎಂಬುದರಿಂದ ಅಜಿತಪುರಾಣವನ್ನು ಬರೆದ ವಿಜಯವರ್ಷದಿಂದ ಈಚೆಯ ಚಿತ್ರಭಾನು ಎಂದು ಊಹಿಸುವಪಕ್ಷಕ್ಕೆ ಆ ಗ್ರಂಥವನ್ನು ಬರೆದ 49 ವರ್ಷಗಳ ಮೇಲೆ, ಕವಿಗೆ 93 ವರ್ಷಗಳಾಗಿದ್ದಾಗ, ಈ ಕೃತಿಯನ್ನು ರಚಿಸಿರಬೇಕಾಗುತ್ತದೆ; ಅಲ್ಲದೆ ಆಕಾಲದ ರಾಜನೇ ಬೇರೆ; ಆದುದರಿಂದ ವಿಜಯವರ್ಷಕ್ಕೆ ಹಿಂದಣ ಚಿತ್ರಭಾನುವಿನಲ್ಲಿ—ಎಂದರೆ, ಶಕ 905 ರಲ್ಲಿಯೇ (982)—ಈ ಗ್ರಂಥವನ್ನು ಬರೆದಿರಬೇಕು.

ಈ ಗ್ರಂಥದಲ್ಲಿ ಕವಿ ತನ್ನ ವಾಕ್ಪ್ರೌಢಿಮೆಯ ಪರಾಕಾಷ್ಠೆಯನ್ನು ತೋರಿಸಿದ್ದಾನೆ; ಮುಖ್ಯವಾಗಿ ವೀರರಸವನ್ನು ಬಹಳಶಾಸ್ತ್ರೀಯವಾಗಿ ನಿರೂಪಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

ದುರ್ಯೋಧನನವಧಾನಂತರ "ಇದುವರೆಗಂ ಕುರುಮಹೀಪತಿಯೊಳ್ ನೆಲಸಿರ್ದಿನೀಗಳುತ್ತಮಪುರುಷೋತ್ತಮಂ ಬಯಸೆ ಪಾಂಡವರೊಳ್ ನೆಲಸಲ್ಕೆ ಪೋದ ಪೆಂ" ಎಂದು ಹೇಳಿದ ಲಕ್ಷ್ಮಿಯನ್ನು ನೋಡಿ ಆಶ್ವತ್ಥಾಮನುಕ್ತಿ—

ಕಲಿ ಪಂದೆಯೆಂದು ಬಗೆಯದೆ । ಕುಲಜಂ ಕುಲಹೀನನೆಂದು ಬಗೆಯದೆ ತರುಣಂ ।
ಸಲೆ ವೃದ್ಧನೆಂದು ಬಗೆಯದೆ । ನೆಲಸುವೆ ನಿನ್ನಂ ನಿಕೃಷ್ಟರೆಂಬರುವೊಳರೇ ॥ 117 ॥

ಇಜ್ಜಯಿಸುವೆ ತಂದೆಮುಕ್ಕಳ । ನಿಜ್ಜಯಿಸುವೆಯ್ ಸೋದರರ್ಕಳಂ ತಮ್ಮೊಳ್ ತ ।
ರ್ಜಯ್ಯಿಸುವೆಯ್ ಗುರುಶಿಷ್ಯರ । ನಿಜ್ಜಗದೊಳ್ ನಿನ್ನನಂತು ಕಷ್ಟಿಯಾದರುವೊಳರೇ ॥ 118 ॥

ಪೊಡವಿಯ ಪರಸವೆ ಬಿನ್ನವಿ । ಪೊಡೆ ಕೇಳ್ವೆಮುಂದೆ ನಿಂಗರಂ ಕಾಣವೆ ತ ।
ಕ್ಕೆಡೆಯೊಳ್ ಕಡೆಗಣಿಸುವ ನೃಪ । ರಿಡಂಬನೆಯುವು ಲಕ್ಷ್ಮಿ ನಿನ್ನ ದೂಸಜಿಸಲ್ತೇ ॥ 119 ॥

ಗುಣಿಗಳ ನೆರೆಪೊರ್ದದ ನಿ । ರ್ಗುಣರಂ ಪೊರ್ದುವ ವಿಶಿಷ್ಟರಂ ಮುಷ್ಟರೊಳಂ ।
ಗಣಿಯಿಸ ಸಮನೆಂಬವಗುಣ । ಗಣಂಗಳೆವು ಲಕ್ಷ್ಮಿ ನಿನ್ನ ದೂಸಜಿಸಲ್ತೇ ॥ 120 ॥

### ಭೀಮಸೇನನು ಕೊಳದಲ್ಲಿ ಮುಳುಗಿದ್ದ ದುರ್ಯೋಧನನನ್ನು ಮೂದಲಿಸುವುದು.

ಹರಿ ಸಂಧಾನಕ್ಕೆ ವಂದಂಡವಘಡಿಸಿದಹಂಕಾರಮೆಲ್ಲಿತ್ತೊ ಕೃಷ್ಣಾಂ ।
ಬರಕೇಶಾಕೃಷ್ಟಿಯಂ ಮಾಡಿಸಿದ ಮದಮದೆಲ್ಲಿತ್ತೊ ಕೌಂತೇಯರಂ ಮ ॥
ಚ್ಚರದಿಂ ಕಾಂತಾರದೊಳ್ ತಿಜ್ರನೆ ತಿರುಪಿದ ಸೊರ್ಕೀಗಳೀನಾದುದೆಂದಾ ।
ಕುರುವಂಶಾಧೀಶನಂ ಮೂದಲಿಸಿದನದಟಂ ಭೀಮನುದ್ದಾಮಭೀಮಂ ॥ 121 ॥

### ಭೀಮನ ಗದಾಪ್ರಹಾರ.

ಇದು ಲಾಕ್ಷಾಗೇಹದಾಹಕ್ಕಿದು ವಿಷಮವಿಷಾನ್ನಕ್ಕಿದಾನಾಡ ಜೂದಿಂ ।
ಗಿದು ಪಾಂಚಾಲೀಪ್ರಪಂಚಕ್ಕಿದು ಕೃತಕಸಭಾಲೋಕನಭ್ರಾಂತಿಗೆಂದೋ ॥
ವದೆ ಪೊಯ್ದುಂ ಕಾಲ್ಗಳಂ ತೋಳ್ಗಳನಗಲ್ದುರಮಂ ಕೆನ್ನೆಯಂ ನೆತ್ತಿಯಂ ಕೋ ।
ಪದಿನಯ್ದುಂ ದುರ್ಣಯಕ್ಕಯ್ದಿಡೆಯನುರುಗದಾದಂಡದಿಂ ಭೀಮಸೇನಂ ॥ 122 ॥

### ದುರ್ಯೋಧನನು ಯುದ್ಧರಂಗದಲ್ಲಿ ಮೃತನಾದ ಕರ್ಣನನ್ನು ನೋಡಿ ಪ್ರಲಾಪಿಸುವುದು.

ಕೆಳೆಯಂಗಾಯ್ತುಸುಮೋಕ್ಷಮಾಗದೆನಗಂ ಬಾಷ್ಪಾಂಬುಮೋಕ್ಷಂ ಧರಾ ।
ತಳಮುಂ ಕೊಟ್ಟಿನಿವಂ ಜಳಾಂಜಳಿಯುಮುಂ ನಾಂ ಕೊಟ್ಟೆನಿಲ್ಲನ್ಯಮಂ॥
ಡಳಮುಂ ಸುಟ್ಟಿನಿವಂ ಪ್ರಕೋಪಶಿಖಿಯಿಂದಾನೀತನಂ ಸತ್ಕ್ರಿಯಾ ।
ನಳನಿಂ ಸುಟ್ಟೆನುಮಿಲ್ಲ ಮತ್ಕೃತಮಂ ಕರ್ಣಂಗಿದೇಕೂರ್ತನೋ ॥ 123 ॥

### ರಣರಂಗದಲ್ಲಿ ಮೃತನಾದ ದುಶ್ಶಾಸನನನ್ನು ನೋಡಿ ದುರ್ಯೋಧನನು ಪ್ರಲಾಪಿಸುವುದು.

ಜನನೀಸ್ತನ್ಯಮನುಂಡೆನಾಂ ಬಲ್ಲಿಕೆ ನೀಂ ಸೋಮಾಮೃತಂ ದಿವ್ಯಭೋ ।
ಜನಮೆಂಬಿಂತಿವನುಂಡೆನಾಂ ಬಲ್ಲಿಕೆ ನೀಂ ಬಾಲತ್ವದಿಂದೆಲ್ಲಿಯುಂ ॥
ವಿನಯೋಲ್ಲಂಘನಮಾದುದಿಲ್ಲ ಮರಣಕ್ಕೆನ್ನಿಂದೆ ನೀಂ ಮುಂಚಿದಯ್ ।
ಮೊನೆಯೊಳ್ ಸೂಟ್ರಿತ್ತಡವಾಯ್ತುದೊಂದೆಡೆಯೊಳಂ ಹಾ ವತ್ಸ ದುಶ್ಶಾಸನಾ ॥ 124 ॥

## 3. ರನ್ನಕಂದ.

ನಮಗೆ ದೊರೆತ ಈ ನಿಘಂಟುವಿನ ಒಂದು ಅಸಮಗ್ರಪ್ರತಿಯಲ್ಲಿ 12 ಕಂದ ಗಳಿವೆ. ಇವು ಪ್ರಾಯಿಕವಾಗಿ "ಕವಿರತ್ನ" ಎಂದು ಮುಗಿಯುತ್ತವೆ. ಇವು ಗಳಲ್ಲಿ ಎರಡನ್ನು ಉದಾಹರಿಸುತ್ತೇವೆ :—

ಸಣ್ಣದೆನಲ್ ಕಿಱ್ದಕ್ಕುಂ । ಸಣ್ಣೆನೆ ಮಾಡೆಂಬವಾಚಿ ಬಱಯೆಸೆ ವಂಶಂ ।
ಎಣ್ಣೆಸೆ ಲೆಕ್ಕಿಪುದುಂ ಬೆಸು । ಗಣ್ಣೆನೆಲ್ ಗೊರವನಪ್ಪುದೆಲೆ ಕವಿರತ್ನಾ ॥ 125 ॥

ಕೋಸಿತನಲ್ ಪೋಣಿಸಿದುದು । ಸೂಸಿದುದೆನೆ ತುಳ್ಕಿತಂಬುದುಂ ಪರಿಮಳಮುಂ ।
ವಾಸಿತಮೆನೆ ಕಂಪುಂ ಏಗೆ । ಸಾಸವಮೆನೆ ನಮ್ರದಾರ್ಢಮೆಲೆ ಕವಿರತ್ನಾ ॥ 126 ॥

## ಗಜಾಂಕುಶ. ಸು. 1000.

**ಮಲ್ಲಿಕಾರ್ಜುನನು** (ಸು. 1245) **ಸೂಕ್ತಿಸುಧಾರ್ಣವ**ದಲ್ಲಿ "ಗಜಾಂಕುಶರಾಜನ ಚಿತ್ತವೃತ್ತಿ" ಎಂದು ಈತನನ್ನು ಸ್ತುತಿಸಿ ಈತನ ಗ್ರಂಥಗಳಿಂದ ಪದ್ಯಗಳನ್ನು ಉದ್ಧರಿಸಿರುವಂತೆ ಹೇಳಿರುವುದರಿಂದ ಈತನು ಕನ್ನಡದಲ್ಲಿ ಗ್ರಂಥಗಳನ್ನು ಬರೆದಿರಬೇಕು. **ನಯಸೇನನು** (1112) **ಧರ್ಮಾಮೃತ**ದಲ್ಲಿ "ಗಜಾಂಕುಶನೊಳ್ಪುವೆತ್ತು ರಂಜಿಸುವ ಸದರ್ಥದೃಷ್ಟಿ" ಎಂದು ಈ ಕವಿಯನ್ನು ಸ್ತುತಿಸಿದ್ದಾನೆ. **ದುರ್ಗಸಿಂಹನು** (ಸು. 1145) ಈತನನ್ನು ಸ್ತುತಿಸುವ—

ತ್ರಿಜಗನ್ನುತವಾಗ್ವಿಭವದಿ । ನಜಂಗೆ ನೂರ್ಮಡಿಯೆನಿಪ್ಪ ಪೆಂಪಂ ತಳೆದಂ ।
ವಿಜಿತಾರಿ ದಂಡನಾಯಕ । ಗಜಾಂಕುಶಂ ಕುಶಲವಾಂಛಿತಪ್ರಿಯಶೌರ್ಯಂ ॥

ಎಂಬ ಪದ್ಯದಿಂದ ಈತನು ದಂಡನಾಯಕನಾಗಿಯೂ ದೊಡ್ಡ ಕವಿಯಾಗಿಯೂ ಇದ್ದಂತೆ ತಿಳಿಯುತ್ತದೆ. ಈತನಿಗೆ ಗಜಗ[1] ಎಂಬ ಹೆಸರೂ ಉಂಟು. **ಶ್ರೀಧರಾಚಾರ್ಯನು** (1049) ತನ್ನ ಜಾತಕತಿಲಕದಲ್ಲಿ ಇವನ ಹೆಸರನ್ನು ಹೇಳಿರುವುದರಿಂದ ಈತನು 1049 ಕ್ಕೆ ಹಿಂದೆ ಇದ್ದಿರಬೇಕು. ಸುಮಾರು 1000 ದಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ; ಇನ್ನೂ ಹಿಂದೆ ಇದ್ದಿದ್ದರೂ ಇರಬಹುದು. ಈ ಕವಿಯನ್ನು ಹಿಂದೆ ಹೇಳಿದವರಲ್ಲದೆ **ರುದ್ರಭಟ್ಟ, ಆಂಡಯ್ಯ, ಕೇಶಿರಾಜ, ಕುಮುದೇಂದು, ವಾಣೀವಲ್ಲಭ** ಮೊದಲಾದ ಕವಿಗಳೂ ಹೊಗಳಿರುವುದರಿಂದ ಈತನು ಪ್ರೌಢಕವಿಯಾಗಿದ್ದಿರಬೇಕು. ಇವನ ಗ್ರಂಥಗಳು ಆವುವೂ ದೊರೆತಿಲ್ಲ. **ಶಬ್ದಮಣಿದರ್ಪಣ**ದಲ್ಲಿ ಉದಾಹೃತವಾದ **ಕೆಲವು** ಪದ್ಯಗಳಲ್ಲಿ ಒಂದೆರಡು ಕಡೆ ಗಜಗ ಎಂಬ ಹೆಸರು ದೊರೆಯುತ್ತದೆ. ಈ ಪದ್ಯಗಳು ಇವನ ಗ್ರಂಥದಿಂದ ಉದ್ಧೃತವಾದುವೋ ಏನೋ ತಿಳಿಯದು.

---

## ಮನಸಿಜ. ಸು. 1000.

**ಶ್ರೀಧರಾಚಾರ್ಯನು** ತನ್ನ ಜಾತಕತಿಲಕದಲ್ಲಿ (1019) ಈ ಕವಿಯ ಹೆಸರನ್ನು ಹೇಳಿದ್ದಾನೆ. **ದುರ್ಗಸಿಂಹನು** (ಸು. 1145) ಈತನನ್ನು ಅಸಗ, ಚಂದ್ರ [ಭಟ್ಟ], ಈ ಕವಿಗಳೊಡನೆ ಸೇರಿಸಿ—

1 ರತ್ನಶೇಖರಚರಿತವನ್ನು ಬರೆದ ಪಟ್ಟಣಿಶೇಷಮನು (ಸು 1725) ಪೂರ್ವಕವಿಗಳನ್ನು ಸ್ತುತಿಸುವಾಗ ಗಜಗ, ಗಜಾಂಕುಶ ಎಂಬವರನ್ನು ಪ್ರತ್ಯೇಕಪ್ರತ್ಯೇಕವಾಗಿ ಸ್ತುತಿಸಿದ್ದಾನೆ. ಈ ಹೆಸರುಗಳು ಬೇರೆಬೇರೆ ಇಬ್ಬರು ಕವಿಗಳಿಗೆ ಅನ್ವಯಿಸುವಂತೆ ಈತನು ತಿಳಿದುಕೊಂಡಿದ್ದ ಹಾಗೆ ಕಾಣುತ್ತದೆ. ಆದರೆ ನಮಗೆ ದೊರೆತ ಆವ ಜೈನಗ್ರಂಥಗಳಲ್ಲಿಯೂ ಇಂಥ ತಿಳಿವಳಿಕೆಗೆ ಅವಕಾಶವಿಲ್ಲ. ಗಜಗ ಎಂಬುದು ಗಜಾಂಕುಶ ಎಂಬುದಕ್ಕೆ ಸಂಕ್ಷೇಪವಾದ ರೂಪವು. ಜಿನ್ನಿಗ, ಜನಾರ್ದನ; ನಾಕಿಗ, ನಾಗವರ್ಮ; ಬಾಚಿಗ, ಭಾಸ್ಕರ; ಎಂಬಿವುಗಳನ್ನು ನೋಡಿದರೆ ಈ ವಿಷಯವು ವ್ಯಕ್ತವಾಗುತ್ತದೆ.

ಪೊಸತಿನಿಸಿ ದೇಸೆಯಿಂ ನವ। ರಸಮಿಸೆಯಲ್ಕೊಳ್ವವೆತ್ತ ಮಾರ್ಗದಿನಿಳಿಗೇ।
ನೆಸೆದುವೊ ಸುಕವಿಗಳೆನೆ ನೆಗ। ಲ್ದಿಸಗನ ಮನಸಿಜನ ಚಂದ್ರ [ಭಟ್ಟನ ಕೃತಿಗಳ್]॥

ಎಂಬ ಪದ್ಯದಲ್ಲಿ ಸ್ತುತಿಸಿದ್ದಾನೆ. **ರುದ್ರಭಟ್ಟ** (ಸು. 1180), **ಕೇಶಿರಾಜ** (ಸು. 1260) ಇವರೂ ಈ ಕವಿಯನ್ನು ಹೊಗಳಿದ್ದಾರೆ. **ಕವಿಕಾಮನು** (ಸು. 1200) ಶೃಂಗಾರವನ್ನು ಬರೆದ ಕವಿಗಳನ್ನು ಹೇಳುವಾಗ "ಮನಸ್ಸಂಜಾತ" ಎಂಬ ಒಬ್ಬ ಕವಿಯನ್ನು ಹೇಳುತ್ತಾನೆ. ಈ ಮನಸ್ಸಂಜಾತನು ಈ ಕವಿಯೇ ಆಗಿದ್ದ ಪಕ್ಷದಲ್ಲಿ ಈತನು ಆವುದೋ ಒಂದು ಶೃಂಗಾರಗ್ರಂಥವನ್ನು ಬರೆದಿರುವಂತೆ ಊಹಿಸಬಹುದಾಗಿದೆ. **ಈಶ್ವರಕವಿ** (ಸು. 1500) ತನ್ನ ಕವಿಜಿಹ್ವಾಬಂಧನದಲ್ಲಿಯ—

ಚಿತ್ತಜನಾಗನರ್ಮಸುಧಿಯಂ ಕವಿಕೇರವರನ್ನಮುಖ್ಯರೊಂ।
ಚಿತ್ತದೊಳಿಟ್ಟು ಪೇಟ್ಪೆ.....॥

ಎಂಬ ಪದ್ಯದಲ್ಲಿ ಹೇಳಿರುವ "ಚಿತ್ತಜ" ಎಂಬವನು ಈ ಕವಿಯೇ ಆಗಿರಬಹುದು. ಶ್ರೀಧರಾಚಾರ್ಯನು ಇವನ ಹೆಸರನ್ನು ಹೇಳುವುದರಿಂದ ಈತನು 1049 ಕ್ಕೆ ಹಿಂದೆ ಇದ್ದಿರಬೇಕು. ಎಷ್ಟು ಹಿಂದೆ ಇದ್ದನೋ ತಿಳಿಯದು; ಸುಮಾರು 1000 ದಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ. ಇವನು ಬರೆದಿರುವ ಗ್ರಂಥಗಳು ಆವುವೂ ದೊರೆತಿಲ್ಲ.

---

## ಚಂದ್ರಭಟ್ಟ. ಸು. 1000.

**ರುದ್ರಭಟ್ಟನು** (ಸು. 1180) ಪೂರ್ವಕವಿಗಳನ್ನು ಸ್ತುತಿಸುವಾಗ "ಚಂದ್ರಭಟ್ಟನ ಜತಿ.....ಮತ್ಪ್ರತಿಯೊಳಿರ್ಕೆ" ಎಂದೂ, **ಕೇಶಿರಾಜನು** (ಸು. 1260) ಇತರಕವಿಗಳೊಡನೆ ಇವನನ್ನೂ ಸೇರಿಸಿ "ಚಂದ್ರಭಟ್ಟನ..... ಸುವಾರ್ಗವಿಮಜಲೊಳಿ ಲಕ್ಷ್ಯಂ" ಎಂದೂ ಈ ಕವಿಯ ಹೆಸರನ್ನು ಗೌರವ ಪುರಸ್ಸರವಾಗಿ ಹೇಳಿದ್ದಾರೆ. ಈತನು ಆವ ಗ್ರಂಥಗಳನ್ನು ಬರೆದಿದ್ದಾನೆಯೋ ತಿಳಿಯದು. **ರಟ್ಟಕವಿ** (ಸು. 1300) ತನ್ನ ರಟ್ಟಮತದಲ್ಲಿ "ಚಂದಿರಭಟ್ಟರ ದಯೆಯಿಂ ಸಂದೆಯಮಣಮಿಲ್ಲದಂತು ಕಲ್ಪುದು ಮಟ್ಟಿಯಂ" ಎಂದು ಹೇಳುತ್ತಾನೆ. ರುದ್ರಭಟ್ಟ ಕೇಶಿರಾಜರು ಹೇಳುವ ಚಂದ್ರಭಟ್ಟನೂ ರಟ್ಟನು ಹೇಳುವ ಚಂದಿರಭಟ್ಟನೂ ಒಬ್ಬನೇ ಆಗಿದ್ದ ಪಕ್ಷದಲ್ಲಿ ಈತನು ಒಂದು ವೈದ್ಯಶಾಸ್ತ್ರಗ್ರಂಥವನ್ನೂ ಬರೆದಿರಬೇಕು. ದುರ್ಗಸಿಂಹನೂ (ಸು. 1145) ಈ ಕವಿಯನ್ನು ಸ್ತುತಿಸಿರುವಂತೆ ತೋರುತ್ತದೆ. ಅಲ್ಲದೆ ಶ್ರೀಧರಾಚಾರ್ಯನು (1049) ತನ್ನ ಜಾತಕ

ತಿಲಕದಲ್ಲಿ ಅಂಬುಜಾರಿ (ಚಂದ್ರ) ಎಂದು ಸೂಚಿಸಿರುವ ಕವಿ ಈತನೇ ಆಗಿದ್ದರೂ ಇರಬಹುದು. ಹಾಗಿದ್ದಪಕ್ಷದಲ್ಲಿ ಇವನ ಕಾಲವು ಸುಮಾರು 1000 ಆಗ ಬಹುದು. ಒಂದು ವೇಳೆ ಇನ್ನೂ ಹಿಂದೆ ಇದ್ದರೂ ಇರಬಹುದು.

---

## ಕಪ್ಪಣಭಟ್ಟ. 1032.

ಸೊರಬದ 184 ನೆಯ ಶಾಸನದ ಕೊನೆಯಲ್ಲಿ—ಶ್ರೀಮತ್ಕವಿರಾಜವಲ್ಲಭಂ ಕಪ್ಪಣಭಟ್ಟರ ಲಿಖಿತಂ—ಎಂದಿದೆ. ಈತನನ್ನು "ಶ್ರೀಮತ್ಕವಿರಾಜವಲ್ಲಭಂ" ಎಂದು ವಿಶೇಷಿಸಿ ಹೇಳಿರುವುದರಿಂದ ಇವನು ಕವಿಯಾಗಿದ್ದಿರಬೇಕು. 'ಲಿಖಿತಂ' ಎಂಬುದರಿಂದ ಈ ಶಾಸನವು ಏತದ್ರಚಿತವೋ ಅಲ್ಲವೋ ಎಂಬ ಸಂದೇಹಕ್ಕೆ ಅವಕಾಶವಿದೆ. ಇದು ಚಾಳುಕ್ಯರಾಜನಾದ 1 ನೆಯ ಜಯಸಿಂಹನ ಆಳಿಕೆಯಲ್ಲಿ ಆಂಗೀರಸ ವರ್ಷದಲ್ಲಿ (1032) ಹುಟ್ಟಿದುದು.

---

## ನಾರಾಯಣಭಟ್ಟ. ಸು. 1040.

ಪೂರ್ವದೇಶದ ಚಾಳುಕ್ಯರಾಜನಾದ ರಾಜರಾಜನ (1022-1063) ಆಸ್ಥಾನಕವಿಯಾದ ನನ್ನಯ್ಯಭಟ್ಟನಿಗೆ ತೆಲುಗುಭಾರತವನ್ನು ಬರೆವುದರಲ್ಲಿ ಸಹಾಯಕನಾಗಿದ್ದ ನಾರಾಯಣಭಟ್ಟನು ಕನ್ನಡದಲ್ಲಿಯೂ ಕವಿಯಾಗಿದ್ದಂತೆಯೂ ಕವೀಭವಜ್ರಾಂಕುಶ ಎಂಬ ಬಿರುದನ್ನು ಪಡೆದಿದ್ದಂತೆಯೂ ಈ ಶ್ಲೋಕಗಳಿಂದ ತಿಳಿಯುತ್ತದೆ—

ಯಸ್ಸಂಸ್ಕೃತ ಕರ್ನಾಟ ಪ್ರಾಕೃತಪೈಶಾಚಿಕಾಂಧ್ರಭಾಷಾಸು ।
ಕವಿರಾಜಶೇಖರ ಇತಿ ಪ್ರಥಿತಸ್ಸುಕವಿತ್ವವಿಭವೇನ ॥
ಕವೀಂ ಮನೀಷಾಲವದುರ್ವಿದಗ್ಧಾಂ ಮನೋಹರಾಭಿರ್ವಿಜಸೂಕ್ತಿಭಿರ್ಯಃ ।
ಕುರ್ವನ್ನಗರ್ವಾಂ ಪಟುಭಿರ್ಬಿಭರ್ತಿ ಕವೀಭವಜ್ರಾಂಕುಶನಾಮ ಸಾರ್ಥಂ ॥

ಈತನ ಕಾಲವು ಸುಮಾರು 1040 ಆಗಿರಬಹುದು. ಇವನು ಕನ್ನಡದಲ್ಲಿ ಆವ ಗ್ರಂಥವನ್ನು ಬರೆದಿದ್ದಾನೆಯೋ ತಿಳಿಯದು.

---

## ವಿಚಯ. 1041.

ಮದ್ರಾಸ್ ಪ್ರಾಚ್ಯಕೋಶಾಲಯದಲ್ಲಿ ನಮಗೆ ದೊರೆತ ಶಕ 963 ರಲ್ಲಿ ಬರೆದ ಒಂದು ಶಾಸನದಲ್ಲಿ ಇವನನ್ನು ವಿಶೇಷವಾಗಿ ಸ್ತುತಿಸಿ ಈತನ ವಿಷಯವಾಗಿ ಈ ಪದ್ಯವು ಬರೆದಿದೆ—

ಭರತನೊಳಂ ಮೇಣ್ ನಾರದ। ಗೊರವನೊಳಂಭೋಜಭವನೊ.....ಳಂ।
ಕುರಿಸಿದ ಭರತಾಗಮಲತೆ। ಧರೆಯೊಳ್ ಪಲ್ಲವಿಸಿತೀಗಳೇಚಮನಿಂದಂ॥

ಇದರಿಂದ ಈತನು ಒಂದು ಭರತಶಾಸ್ತ್ರವನ್ನು ಬರೆದಿರುವಂತೆ ತೋರುತ್ತದೆ.

---

## ಶ್ರೀಧರಾಚಾರ್ಯ. 1049.

ಈತನು **ಜಾತಕತಿಲಕವನ್ನು** ಬರೆದಿದ್ದಾನೆ. **ಚಂದ್ರಪ್ರಭಚರಿತೆ**ಯನ್ನೂ ಬರೆದಿರುವಂತೆ ಜಾತಕತಿಲಕದ ಅಂತ್ಯಭಾಗದಲ್ಲಿರುವ

ಸುಭಗವಚಂ ಕಾವ್ಯಕವಿ। ತ್ವಭೂಷಣಂ ಶ್ರೀಧರಾರ್ಯರಚಿತಂ ಚಂದ್ರ।
ಪ್ರಭಚರಿತಂ ಶಾಸ್ತ್ರಕವಿ। ತ್ವಭೂಷಣಂ ಧರೆಗೆ ನೆಗಲ್ದ್ದಿ ಜಾತಕತಿಲಕಂ॥
ಆದಿದೆನ್ನದೆ ಜಾತಕತಿಲ। ಕದೊಳಜುವುದು ಗಣಿತಧರ್ಮಮಂ ಸಕಳಜಗ।
ದ್ವಿದಿತಂ ಚಂದ್ರಪ್ರಭಚರಿ। ತದೊಳಜುವುದು ಕಾವ್ಯಧರ್ಮಮಂ ಬುಧನಿವಹಂ॥

ಎಂಬ ಪದ್ಯಗಳಿಂದ ತಿಳಿಯುತ್ತದೆ. ಆದರೆ ಈ ಗ್ರಂಥವು ನಮಗೆ ದೊರೆತಿಲ್ಲ.

ಇವನು ಜೈನಕವಿ. ಇವನ ಸ್ಥಳ ಬೆಳುವಲನಾಡಿನಲ್ಲಿರುವ ನರಿಗುಂದ. "ವಿಪ್ರಕುಲೋತ್ತಮಂ" ಎಂದು ಹೇಳಿಕೊಂಡಿದ್ದಾನೆ. "ಇದುವರೆಗೂ ಆರೂ ಕನ್ನಡದಲ್ಲಿ ಜ್ಯೋತಿಷವನ್ನು ಬರೆದಿಲ್ಲ; ನೀನು ಜಾತಕತಿಲಕವನ್ನು ಬರೆಯಬೇಕು" ಎಂದು ವಿದ್ವಾಂಸರು ಹೇಳಲು ಈ ಗ್ರಂಥವನ್ನು ಬರೆದಂತೆ ಕವಿ ಹೇಳುತ್ತಾನೆ. ಇದರಿಂದ ಕನ್ನಡದಲ್ಲಿ ಜ್ಯೋತಿಷವನ್ನು ಬರೆದವರಲ್ಲಿ ಇವನೇ ಪ್ರಥಮ ಕವಿಯೆಂದು ತಿಳಿಯುತ್ತದೆ. ಈಯಂಶವನ್ನು **ಬಾಹುಬಲಿ** (ಸು. 1560) ತನ್ನ **ನಾಗಕುಮಾರಕಥೆ**ಯ ಆದಿಭಾಗದಲ್ಲಿಯ ಈ ಪದ್ಯದಲ್ಲಿ ದೃಢೀಕರಿಸುತ್ತಾನೆ—

ಜ್ಯೋತಿಷವಿದ್ಯೆಗೆ ಮೊದಲಿಗ ಸಲೆ ವಾದಿ। ಸಾತಭಯಂಕರನೆನಿಪ।
ಖ್ಯಾತಿಗೆ ನೆಲೆಯಾದ ಶ್ರೀಧರಾಚಾರ್ಯರ। ಪ್ರೀತ ಕೈವಿಗೆ ಬಲಗೊಂಪೆ॥

ಈ ಗ್ರಂಥವನ್ನು "ಧರಣಿಗಿರಿನಿಧಿಶಕಾಂಕಂ ವಿರೋಧಿಸಂವತ್ಸರದಲ್ಲಿ" ಎಂದರೆ ಶಕ 971 (1049) ರಲ್ಲಿ ಬರೆದಂತೆ ಹೇಳುತ್ತಾನೆ. ಗ್ರಂಥಾಂತ್ಯದಲ್ಲಿ "ಧಾತ್ರಿಯನಾಹವಮಲ್ಲಭೂಮಿಪಾಳಕನೆಸೆದಾಳ್ಗೆ" ಎಂಬುದರಿಂದ ಕವಿ ಚಾಳುಕ್ಯ ರಾಜನಾದ ಆಹವಮಲ್ಲನ (1042–1068) ಆಳಿಕೆಯಲ್ಲಿದ್ದನೆಂದು ತಿಳಿಯುತ್ತದೆ.

ಈ ಕವಿಗೆ ಗದ್ಯಪದ್ಯವಿದ್ಯಾಧರ, ಬುಧಮಿತ್ರ ಎಂಬ ಬಿರುದುಗಳುಂಟು. ತನ್ನ ಗುಣಾದಿಗಳನ್ನೂ ಕವಿತಾಪ್ರೌಢಿಯನ್ನೂ ಈ ಪದ್ಯಗಳಲ್ಲಿ ಹೇಳಿದ್ದಾನೆ:—

ವಿಧುವಿಶದಯಶೋನಿಧಿ ಕಾ । ವ್ಯಧರ್ಮಜಿನಧರ್ಮಗಣಿತಧರ್ಮಮಹಾಂಭೋ ।
ನಿಧಿಯೆನೆ ನೆಗಟ್ಟಿಂ.ಜಗದೊಳ್ । ಬುಧಮಿತ್ರಂ ನಿಜಕುಲಾಂಬುಜಾಕರಮಿತ್ರಂ ॥
ರಸಭಾವಸಮನ್ವಿತನೆಂ । ದು ಸುಭಗನೆಂದಖಿಳವೇದಿಯೆಂದನ್ವಿತನೆಂ ।
ದು ಸಮಗ್ರನೆಂದು ಸಲೆ ಬ । ಣ್ಣಿಸುವುದು ಧರೆ ಗದ್ಯಪದ್ಯವಿದ್ಯಾಧರನಂ ॥

ಅನವದ್ಯಂ ಕವಿತಾಗುಣಾರ್ಣವನಿಳಾದೇವಾನ್ವಯಾಬ್ಧ್ಯಂಬುಜಾ ।
ರಿನಿಭಂ ಪ್ರೌಢವಿಳಾಸಿನೀಮನಸಿಜಂ ಶ್ರೀಶೀಲಭದ್ರಂ ದ್ವಿಷ ॥
ಜ್ಜನದುರ್ವಾರಗಜಾಂಕುಶಂ ಸುಜನರತ್ನಂ ತಾನೆನಲ್ಕೀಂ ಕೃತಾ ।
ರ್ಥನೊ ಕರ್ನಾಟಕವೀಂದ್ರಸದ್ಗುಣ? ಗುಣಾರ್ಣಂಜ್ಞಾಧರಂ ಶ್ರೀಧರಂ ॥

**ಕೊನೆಯ ಪದ್ಯದಲ್ಲಿ ಆದಿಪಂಪ(ಕವಿತಾಗುಣಾರ್ಣವ),ಚಂದ್ರ ಅಥವಾ ಚಂದ್ರ ಭಟ್ಟ(ಅಂಬುಜಾರಿ), ಮನಸಿಜ,? ಗುಣವರ್ಮ(ಶೀಲಭದ್ರ), ಗಜಾಂಕುಶ, ರನ್ನ ಎಂಬ ಪೂರ್ವಕವಿಗಳ ಹೆಸರನ್ನೂ ಸೂಚಿಸಿದ್ದಾನೆ.**[1]

" ಧರಣೀಸ್ತುತಾರ್ಯಭಟನಂ । ನಿರತಿಶಯೋಜ್ಜ್ವಳಯಶಃಪ್ರಕೋರಕನಂ ಶ್ರೀ ।
ಕರಣ" ಎಂಬ ಅಸಮಗ್ರವಾದ ಪದ್ಯದಲ್ಲಿ ಆರ್ಯಭಟನ ಹೆಸರು ಹೇಳಿದೆ.

ಇವನ ಗ್ರಂಥ—

## ಜಾತಕತಿಲಕ

ಇದು ಜ್ಯೋತಿಷಗ್ರಂಥ ; ಕಂದವೃತ್ತಗಳಲ್ಲಿ ಬರೆದಿದೆ ; 24 ಅಧಿಕಾರ ಗಳಾಗಿ ಭಾಗಿಸಲ್ಪಟ್ಟಿದೆ. ಅಧಿಕಾರಗಳ ಹೆಸರು—ಸಂಜ್ಞಾ, ಬಲಾಬಲ, ಗರ್ಭ, ಜನ್ಮ, ತಿರ್ಯಗ್ಜನ್ಮ, ಅರಿಷ್ಟ, ಅರಿಷ್ಟಭಂಗ, ಆಯುರ್ದಾಯ, ದಶಾಂತರ್ದಶಾ, ಅಷ್ಟಕವರ್ಗ, ಜೀವ, ರಾಜಯೋಗ, ನಾಭಿಸಂಯೋಗ, ಚಂದ್ರಯೋಗ, ದ್ವಿತ್ರಿ ಯೋಗ, ದೀಕ್ಷಾಯೋಗ, ರಾಶಿ, ಲಗ್ನಭಾವ, ದ್ರೇಕ್ಕಾಣ, ದೃಷ್ಟ, ಅನಿಷ್ಟ, ಸ್ತ್ರೀ ಜಾತಕ, ನಿರ್ಯಾಣ, ನಷ್ಟಜಾತಕ. ಈ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಈ ಪದ್ಯ ಗಳಲ್ಲಿ ಹೇಳಿದ್ದಾನೆ:—

ಪದಪೂರಣಮನಣಂ ಪುಗಿ । ಸದೆ ಕುದಿದು ವೃಥಾಕ್ಷರಂಗಳಂ ಸ್ಸಾಸದೊಳಿ ।
ಕ್ಕದೆ ರಾಸ್ತ್ರದರ್ಥಮಂ ಬಿಸು । ಡದೆ ಪೂರ್ತೆಯಿನೋದುವೇಳ್ಪುದಾರ್ ಮೆಚ್ಚರಿದಂ ॥
ಅಮಿತಾರ್ಥಂ ಸಕಲಾಚಾ । ರ್ಯಮತಾಂತಸ್ಸಾರಮತಿಗಭೀರಂ ಹೃದಯಂ ।
ಗಮಮನ್ಯತಾಸ್ತ್ರಸಿರಪೇ । ಕ್ಷಮೆಂಬಿನಂ ಖ್ಯಾತವಾಯ್ತು ಜಾತಕತಿಲಕಂ ॥
ಸುಕರಮುಚಿತಕ್ರಿಯಾಕಾ । ರಕಮಪಶಬ್ದಪ್ರದೂರಮಪನೇಯಂ ಸಾ ।
ರ್ಥಕಪದವಿನ್ಯಾಸಂ ಜಾ । ತಕತಿಲಕವಿದೆಂದು ಕೊಂಡುಕೊನೆಯದರೊಳರೇ ॥

---

1 ಇದರಿಂದ ಈ ಕವಿಗಳೆಲ್ಲಾ 1049 ಕ್ಕೆ ಹಿಂದೆ ಇದ್ದವರೆಂಬುದು ವ್ಯಕ್ತವಾಗುತ್ತದೆ.

ಲಲಿತವಚೋಲಲನಾನನ । ತಿಲಕಂ ದೈವಜ್ಞವದನತಿಲಕಂ ವಿದ್ವ ।
ತ್ಕುಲಮುಖತಿಲಕಂ ಜಾತಕ । ತಿಲಕಂ ತ್ರೈಲೋಕ್ಯತಿಲಕವಿದು ಕೇವಲಮೇ ॥

ಗ್ರಂಥಾವತಾರದಲ್ಲಿ ಜಿನಸ್ತುತಿಯೂ ಸರಸ್ವತೀಸ್ತುತಿಯೂ ಇವೆ. ಅಧಿಕಾರಾಂತ್ಯದಲ್ಲಿ ಈ ಗದ್ಯವಿದೆ—

ಇದು ಭಗವದರ್ಹತ್ಪರಮೇಶ್ವರಚರಣಸರಸಿರುಹಷಟ್ಪದಾಯಮಾನಂ ಸರಸಪ್ರಸನ್ನಂ ವಚೋಲಕ್ಷ್ಮೀಧರಂ ಗದ್ಯಪದ್ಯವಿದ್ಯಾಧರಂ ಶ್ರೀ ಶ್ರೀಧರಾಚಾರ್ಯಪ್ರಣೀತಮಪ್ಪ ಜಾತಕತಿಲಕದೊಳ್

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

## ಜ್ಯೋತಿಷದ ಪ್ರಯೋಜನ

ಭವಬದ್ಧಶುಭಾಶುಭಕ । ರ್ಮವಿಪಾಕದ ಫಲಮನರಿಪುಗುಂ ಜ್ಯೋತಿರ್ಜ್ಞಾ ।
ನವದೆಂತೆನೆ ಕತ್ತಲೆವನೆ । ಯ ವಸ್ತುವಂ ತೋರ್ಪ ಸೊಡರ ಬೆಳಗಿನ ತೆಱದಿಂ ॥127॥

## ಗ್ರಹಬಲ

ಶನಿಯಿಂದಂ ಮಹಿಜಾತನಾಮಹಿಜನಿಂದಂ ಸೌಮ್ಯನಾಸೋಮನಂ ।
ದನನಿಂದಂ ಗುರುವಾಸುರೇಂದ್ರಗುರುವಿಂದಂ ಶುಕ್ರನಾಶುಕ್ರನಿಂ ॥
ವನಜಾತಾಹಿತನಾವನೇಜರಿಪುವಿಂ ಪಂಕೇಜಮಿತ್ರಂ ಬಳಾ ।
ಧ್ಯನೆನಿಕ್ಕುಂ ಕ್ರಮದಿಂದವೀಗ್ರಹಬಳಂ ನೈಸರ್ಗಿಕಂ ನಾಮದಿಂ ॥128॥

## ಸ್ತ್ರೀಪುಂಜನನ

ಅಸಮಾಲಯದೊಳ್ ನಿಲೆ ಸೂ । ರ್ಯಸುರೇಜ್ಯರ್ ಬಳಯುತರ್ ನರಂ ಪುಟ್ಟುಗುಮಾ ।
ಅಸಿತೇಂದುಗಳತಿಬಳರಾ । ಗಿ ಸಮದೊಳಿರೆ ರಮಣಿ ಪುಟ್ಟುಗುಂ ಬುಧವಿತಾ ॥129॥

## ಪ್ರಸವದಿನ

ವಿದಿತಂ ಕಾಂತೆಗೆ ಪೊಟ್ಟುತೀವಿದುದು ಪೇೞ್ದಿನ್ನಾವುದಕ್ಕುಂ ಪ್ರಸೂ ।
ತದಿನಂ ತಾನೆನೆ ಚಂದ್ರನಾವ ಗೃಹದೊಳ್ ತತ್ಕಾಲದೊಳ್ ನಿಂದನಾ ॥
ಸದನದ್ವಾದಶಭಾಗಮಂತೆನಿತು ಸಲ್ಗುಂ ಮುಂತೆ ತತ್ಸಂಖ್ಯೆ ಗೇ ।
ಪದಿನತ್ತಲ್ ? ನಿಶಚಂದ್ರಮಂ ಪ್ರಸವಕಾಲಂ ಕಾಂತೆಗಂತಾದಿನಂ ॥130॥

## ಅರಿಷ್ಟನಾಶ

ಪಿರಿದು ಪಳಾಳದೊಳೇಂ ಸುರ । ಗುರುವೊರ್ವನೆ ವೀರ್ಯವಂತನುಂ ಕಾಂತನುಮಾ ।
ಗಿರೆ ಜನ್ಮಲಗ್ನದೊಳ್ ಸಂ । ಹರಿಸುಗುಮಘಮಂ ಕರೀಂದ್ರಮಂ ಸಿಂಹದವೋಲ್
॥131॥

### ಶಿಶುಮರಣ

ಬರೆ ಕನ್ಯಾಲಗ್ನಂ ಭಾ । ಸ್ಕರನಲ್ಲಿರೆ ಮೀನದೊಳ್ ಶನೈಶ್ಚರನಿರೆ ಸುಂ ।
ದರಿ ಸಾಗುಮುದಯದಯ್ದನೆ । ಯ ರಾಶಿಯೊಳ್ ಭೂಜನಿರೆ ತನೂಜಂ ಸಾಗುಂ
॥132॥

### ನಕ್ಷತ್ರವನ್ನು ಕಂಡುಹಿಡಿವುದು

ಸಮಸಿಸಿದ ಪೃಚ್ಛಕನ ಪೆಸ । ರ ವಾತ್ರೆಯೊಳ್ ಕೂಡಿಕೊಂಡು ಛಾಯಾಂಗುಳಿವಾ।
ನಮಸಿರ್ಪತ್ತೇಲ್ಪಜೆ ನೆ । ತ್ತೆ ಮಿಕ್ಕುದಕ್ಕುಂ ನಕ್ಷತ್ರ ಮೊದಲೆನೆ ಭಗಣಂ ॥133॥

### ದೀರ್ಘಾಯು

ತ್ರಿದಶಾಧೀಶ್ವರಮಂತ್ರಿ ಶೀತಕರರೆಂಬೀಯಿರ್ವರುಂ ಕರ್ಕಗ್ಗೇ ।
ಹದೊಳರ್ದಂದು ಶರಾಂಕಸೂನುಸಿತರೆಂಬೀಯಿರ್ವರುಂ ಕೆಂದ್ರಗೇ ॥
ಹದೊಳರ್ದಂದು ರಿಪುತ್ರಿಲಾಭಗೃಹದೊಳ್ ಮಿಕ್ಕನ್ಯರಿರ್ದಂದು ಪು ।
ಟ್ಟಿದ ಮರ್ತ್ಯಂಗೆ ಚಿರಾಯು ಸಂಭವಿಸುಗುಂ ಸಂಯುಕ್ತ್ಯರತ್ನಾಕರಾ ॥134॥

---

## ಕವಿಮಲ್ಲ. 1057.

ಈತನು ಹೆಗ್ಗಡದೇವನಕೋಟೆ 18 ನೆಯ ಶಾಸನವನ್ನು ಬರೆದುದಾಗಿ ಆ ಶಾಸನದ ಕೊನೆಯಲ್ಲಿರುವ—

ಮುಜುವರ ಚಕ್ರಂ ದ್ವಿಜರೊಳ್ । ಕಜ್ಜಮಜಯಿಲ್ಲೆಸಸ ಕುಜಬನಾದಿತ್ಯಂ ಸಂ ।
ದಜಕೆಯುವಗಾದ ಮಲ್ಲಂ । ಜಜುಚವ ಕವಿ ರಾಜಬಾಂಧವಂ ಬರೆದಸಿದಂ ॥

ಎಂಬ ಪದ್ಯದಿಂದ ತಿಳಿಯಬರುತ್ತದೆ. ಈ ಶಾಸನವು ರಾಜೇಂದ್ರದೇವನ ಆಳಿಕೆಯಲ್ಲಿ ಶಕ 979 ನೆಯ ಹೇಮಲಂಬಿಯಲ್ಲಿ—ಎಂದರೆ 1057 ರಲ್ಲಿ—ಬರೆದುದು. ಇದರಲ್ಲಿ—ಚೋಳರಾಜನಲ್ಲಿ ಮಂಡಳಿಕನಾಗಿಯೂ ನುಗುನಾಡಧಿಪನಾಗಿಯೂ ಇದ್ದ ರವಿಗನು ತನ್ನ ಮಗಳಾದ ದೇಕಬ್ಬೆಯನ್ನು ನವಿಲೆನಾಡಧಿಪತಿಯಾದ ಏಚಣಿಗೆ ಕೊಟ್ಟು ಮದುವೆಮಾಡಿದ್ದಂತೆಯೂ ಈ ಏಚನು ತನ್ನ ದಾಯಿಗರನ್ನು ಕೊಂದುದರಿಂದ ರಾಜನು ಇವನನ್ನು ತಲೆಕಾಡಿಗೆ ಒಯ್ದು ಕೊಲ್ಲಿಸಲು, ದೇಕಬ್ಬೆ ಪತಿಯೊಡನೆ ಸಹಗಮನವನ್ನು ಮಾಡಿದಂತೆಯೂ ಅವಳ ಜ್ಞಾಪಕಾರ್ಥವಾಗಿ ರವಿಗನು ಈ ಶಿಲಾಸ್ತಂಭ ಶಾಸನವನ್ನು ನಡಿಸಿದಂತೆಯೂ ಹೇಳಿದೆ. ಈ ಶಾಸನದಲ್ಲಿರುವ ವೃತ್ತ ಕಂದ ಅಕ್ಕರ ಇವುಗಳ ಬಂಧವನ್ನು ನೋಡಿದರೆ ಬರೆದವನು ಪ್ರೌಢಕವಿಯೆಂದು ಊಹಿಸಬಹುದಾಗಿದೆ. ಇದರಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

## ರವಿಗ.

ರವಿಗಂ ಪುಟ್ಟಿದನೊಡನು। ಧ್ರುವಮಾಯ್ತು ಜಾವಜಿವಿನೊಡನೆ ಪುಟ್ಟಿದುದಾಯುಂ।
ಸವಸಂದಾಯದೊಡಂ ಸಂ। ಭವಮಾದುದು ಚಾಗವಿಂತುಟುಂ ಬಿರುದುಂಟೇ
॥ 135 ॥

ಕಡಲ ಕಡೆವರಮಜಾಂಡದ। ಕುಡಿವರನಾರಾಗಜೇಂದ್ರದಂತುವರಂ ತ।
ಳ್ತೊಡನೊಡನೆ ಪರ್ದಿ ಬಳಿದುದು। ಕುಡಿಯರ ವಲ್ಲಭನ ಕೀರ್ತಿಲತೆ ಕೋಮಳದಿಂ
॥ 136 ॥

ಕುಡಿಯರ ವಲ್ಲಭಂ ಕುಡಿಯರಾಭರಣಂ ನುಗುನಾಡ ರಾಮನೆಂ।
ದೊಡೆ ಕಲಿಕಾಲಕರ್ಣನ ವಿನೋದದ ಚಾಗದ ಬೀರದಾರ್ಪನೀ ॥
ಗಡಿನ ನಿಕೃಷ್ಟನಿರ್ಗುಣನಿಕೃತ್ಯನಿರಾಚರನೇಟಿವೀಟಿರೊಳ್।
ಕಡುಜಡರೆಂತು ಪೋಲಪರೊ ಧನ್ಯನೆನಿಪ್ಪ ವಚೋಗ್ರಗಣ್ಯನಾ
॥ 137 ॥

## ದೇಕಬ್ಬೆ.

ತಂದೆಯುಮಬ್ಬೆಯು ಮೊಡನೆಯೆ। ಬಂಧುಗಳುಂ ಬಂದುಮಗಳೆ ಸಾಯುವೆ ಮಾನ್ಸರ್।
ನೆಂದೆಲ್ಲಂ ಕಾಲ್ತೆಡಿದೊಡ। ನಿಂದಿತೆ ದೇಕಬ್ಬೆ ಮುನಿದು ಬಗ್ಗಿಸಿ ನುಡಿದಳ್ ॥138॥

ನುಗುನಾಡಧಿಪತಿ ರವಿಗನ। ಮಗಳಾಗಿಯುಮಂತೆ ನವಿಲೆನಾಡಧಿಪತಿಗಾಂ।
ನೆಗಲ್ಚಿ ನತಿಯಾಗಿ ಬಾಳ್ವುದು। ಬಗೆದರ್ಪನೆ ಕೊಟ್ಟು ಕೊಂಡ ಮನೆಯಸಮಾ
[ಚಿಯಲ್ ॥139॥

ನೆರೆಪೆಲ್ಲಂ ಬೇಡ ಮಾಣೆಂದೊಡೆ ನುಡಿಯದಿರಿಂ ಪೋಗಿಮಾಂ ಮಾಣೆನೆಂದಾ।
ದರದಿಂದಂ ಭೂಮಿ ಪೋಕ ಪುಟ್ಟಿಗೆ ಪಸು ಧನಮಂ ನಿಂಡುತುಂ...ಮೇ ॥
ವರ ದೇವಂಗಲ್ತಿಯಂ ಕೆಯ್ಮುಗಿದುರಿವುರಿಯಂ ಪೊಕ್ಕು ದೇಕಬ್ಬೆ ತನ್ನಂ।
ಧರೆಯೆಲ್ಲಂ ಮೆಚ್ಚಿ ನಿಚ್ಚಂ ಪೊಗಲ್ಚಿ ನೆಗಲ್ಚಿತುಂ ದೇವಲೋಕಕ್ಕೆ ಪೋದಳ್
॥ 140 ॥

---

## ದಿವಾಕರಣಂದಿ. 1062.

ಈತನು ತತ್ವಾರ್ಥಸೂತ್ರಕ್ಕೆ ಕನ್ನಡವೃತ್ತಿಯನ್ನು ಬರೆದಿದ್ದಾನೆ. ಈ ವಿಷಯವು ನಗರದ 57 ನೆಯ ಶಾಸನದ ಈ ಪದ್ಯದಿಂದಲೂ ತಿಳಿಯುತ್ತದೆ :—

ಜದರುಂ ಬಾಳಕರುಂ ಬುಧನ್ಯಕರಮುಂ ತತ್ವಾರ್ಥಮಂ ಕಲ್ತಘಂ।
ಕೆಡೆ ಸಮ್ಯಕ್ತ್ವಮನೆಯ್ದು ಸತ್ತಪರಮಸ್ಥಾನಾಪ್ತಿಯಂ ನಿಶ್ಚಯಂ॥
ಪಡೆಯಲ್ ಮಾಡಿದರೊಪ್ಪೆ.....ರ್ ತತ್ವಾರ್ಥಸೂತ್ರಕ್ಕ ಕ।
ನ್ನಡದಿಂ ವೃತ್ತಿಯನೆಲ್ಲಿಗಂ ನೆಗಲ್ಚಿ ನಂ ನಿದ್ಯಾಂತರತ್ನಾಕರರ್॥

ಈತನಿಗೆ ಉಭಯಸಿದ್ಧಾಂತರತ್ನಾಕರ ಎಂಬ ಬಿರುದಿದ್ದಂತೆ ತಿಳಿಯಬರುತ್ತದೆ. ಈತನ ಗುರು ಚಂದ್ರಕೀರ್ತಿ ಭಟ್ಟಾರಕ. ಈ ಶಾಸನದಲ್ಲಿಯೂ ಶಕ 984 ರಲ್ಲಿ ಬರೆದ ಸೊರಬದ 58 ನೆಯ ಶಾಸನದಲ್ಲಿಯೂ ಈತನನ್ನು ವಿಶೇಷವಾಗಿ ಸ್ತುತಿಸಿದೆ. ಈತನು ಪಟ್ಟಣಸ್ವಾಮಿ ನೊಕ್ಕನಿಗೆ ಗುರುವೆಂದೂ ಸಕಲಚಂದ್ರನು ಈತನ ಶಿಷ್ಯನೆಂದೂ ತಿಳಿಯುತ್ತದೆ. ಈ ಶಾಸನಗಳಿಂದ ಈತನ ಸ್ತುತಿರೂಪವಾದ ಒಂದು ಪದ್ಯವನ್ನು ತೆಗೆದು ಬರೆಯುತ್ತೇವೆ:—

ಚಾರುಚರಿತ್ರೀದೊರೆಯರಾರೆನಿಪೊಳ್ಪಿನ ಚಂದ್ರಕೀರ್ತಿಭ।
ಟ್ಟಾರಕರಗ್ರಶಿಷ್ಯರಘಹಾರಿಗಳಾರ್ಹತತತ್ವವಸ್ತುವಿ॥
ಸ್ತಾರಕರಂಗಜಾರಿಗಳಶೇಷವಿಶೇಷಗುಣಾವಳೀಮನೋ ।
ಹಾರಿಗಳೆಂಬಿನಂ ನೆಗಲ್ದಿರಲ್ತೆ ದಿವಾಕರಣಂದಿಸೂರಿಗಳ್॥

ಈತನ ತತ್ವಾರ್ಥಸೂತ್ರವೃತ್ತಿಗೆ ತತ್ವಾರ್ಥಸೂತ್ರಾನುಗತಕರ್ಣಾಟಕಲಘುವೃತ್ತಿ ಎಂದು ಹೆಸರು. ಮೂಲವು ಗೃಧ್ರಪಿಂಛಾಚಾರ್ಯಕೃತ. ವೃತ್ತಿಯ ಆದಿಯಲ್ಲಿ

ನತ್ವಾ ಜಿನೇಶ್ವರಂ ವೀರಂ ವಕ್ಷ್ಯೇ ಕರ್ಣಾಟಭಾಷಯಾ।
ತತ್ವಾರ್ಥಸೂತ್ರಸೂತ್ರಾರ್ಥಂ ಮಂದಬುದ್ಧ್ಯನುರೋಧತಃ॥

ಎಂಬ ಶ್ಲೋಕವೂ ಅಂತ್ಯದಲ್ಲಿ

ಇದು ಸಕಲಾಗಮಸಂಪನ್ನ ಶ್ರೀಮಚ್ಚಂದ್ರಕೀರ್ತಿಭಟ್ಟಾರಕ ಪದ್ಮನಂದಿ ಸಿದ್ಧಾಂತದೇವ ಶ್ರೀಪಾದಪ್ರಸಾದಾಸಾದಿತಸಮಸ್ತಸಿದ್ಧಾಂತಾಮೃತಪಾರಾವಾರ ಶ್ರೀಮದ್ದಿವಾಕರಣಂದಿಭಟ್ಟಾರಕಮುನೀಂದ್ರವಿರಚಿತ ತತ್ವಾರ್ಥಸೂತ್ರಾನುಗತ ಕರ್ಣಾಟಕಲಘುವೃತ್ತಿಯೊಳ್

ಎಂಬ ಗದ್ಯವೂ ಇವೆ. ಪ್ರಕರಣ 10.

---

## ಮಲ್ಲಿನಾಥ. 1062.

ಇವನು ನಗರದ 57 ನೆಯ 58 ನೆಯ ಶಾಸನಗಳನ್ನು ಬರೆದುದಾಗಿ ಆ ಶಾಸನಗಳಿಂದ ತಿಳಿಯುತ್ತದೆ. 58 ನೆಯ ಶಾಸನವು ಶಕ 984 (1062) ರಲ್ಲಿ ಬರೆದುದು.

ಈತನು ಪಟ್ಟಣಸ್ವಾಮಿಯಾದ ನೊಕ್ಕನ ಮಗ; ದಿವಾಕರಣಂದಿ ಶಿಷ್ಯನಾದ ಸಕಲಚಂದ್ರನ ಗುಡ್ಡ. ತನ್ನನ್ನು ಈ ಪದ್ಯದಲ್ಲಿ ಸ್ತುತಿಸಿಕೊಂಡಿದ್ದಾನೆ:—

ಸುಜನಜನಕುಮುದಚಂದ್ರನ। ಸುಜನಜನಾನನವಿಲೋಕನಮುಕುರನಸಾ।
ಸುಜನಜನವನಜಹಂಸನ। ಸುಜನಜನಂ ಪೊಗಲ್ದಿ ಮಲ್ಲಿನಾಥಂ ನೆಗಲ್ದಿಂ॥

ಈ ಶಾಸನಗಳಲ್ಲಿ ಚಾಳುಕ್ಯರಾಜನಾದ ತ್ರೈಲೋಕ್ಯಮಲ್ಲನ ಆಳಿಕೆಯಲ್ಲಿ ಬೀರಸಾಂತರದೇವನ ಪಟ್ಟಣಸ್ವಾಮಿ ನೊಕ್ಕನು ದಾನಗಳನ್ನು ಮಾಡಿದಂತೆ ಹೇಳಿದೆ.

ಈ ಶಾಸನಗಳಿಂದ ದಿವಾಕರಣಂದಿಸ್ತುತಿರೂಪವಾದ ಒಂದು ಪದ್ಯವನ್ನು ಹಿಂದೆಯೇ ಬರೆದಿದ್ದೇವೆ.[1] ಇನ್ನು ಕೆಲವನ್ನು ಕೆಳಗೆ ಬರೆಯುತ್ತೇವೆ:—

## ನೊಕ್ಕ.

ಹರಿಸಂಘಾತದೆ ಕಟ್ಟುವೆತ್ತ ಬಡವಜ್ಯಾಳಾಳಿಯಿಂ ಬೆಂದ ಭೀ।
ಕರಪಾರೀನತಿಮಿಂಗಿಳಾಳಿಯಿನತಿಕ್ಷ್ವೋಭಕ್ಕೆ ಸಂದಿರ್ದಗ॥
ಸ್ತ್ಯರಿನಪ್ರಾಶನಕೆಯ್ದು ವಾರದತಿತೀಕ್ಷ್ಣಕ್ಷಾರವಾರಿಪ್ರಭಂ।
ಗುರವಾರಾಶಿಯೊಳೆಂತು ಪೋಲಿಪುದೊ ಪೇಟುಂ ಸಮ್ಯಕ್ತ್ವವಾರಾಶಿಯಂ॥ 141 ॥

ಸಿರಿಗಾವಾಸಮನೇಕರತ್ನನಿಚಯೋತ್ಪತ್ತ್ಯಾಶ್ರಯಂ ಭೀರುರ।
ಕ್ಷರತಂ ಚಂದ್ರಕಳಾಪ್ರವರ್ಧನಮುದಂ ಪೀಯೂಷಪಿಂಡಾಸ್ಪದಂ॥
ವರವೇಳಾವಳಯಾವೃತಂ ಸಮತೆಯಿಂ ವಾರಾಶಿ ಪೋಲ್ತುಂ ಮನೋ।
ಹರದಾನತ್ಯದಿಸೆಯ್ದು ಪೋಲದೆ ವಲಂ ಸಮ್ಯಕ್ತ್ವವಾರಾಶಿಯಂ ॥ 142 ॥

ಪುದಿದ ತಮಸ್ತಮಃಪಟಲಮೊಂದಿದ ಚಿಂತೆ ತಗುಳ್ದು ತಳ್ತು ಪ।
ತ್ತಿದ ರುಜೆ ಪೆರ್ಚಿ ಸಾರ್ಚಿದ ದರಿದ್ರತೆ ಬಟ್ಟೆಯೊಳಾದ ಸೇದೆ ಪಿಂ॥
ಗಿದಪುದು ಕಂಡ ಕಾಕ್ಕೆಯೊಳೆ ತಪ್ಪದು ಪಟ್ಟಣಸಾಮಿ ನೊಕ್ಕನಿ।
ಲ್ಲದೊಡೆ ಬಲ್ಪಿಲ್ಲು ಬಂದ ಬುಧಮಂಡಳಗೀಮಲೆ ಶೂನ್ಯಮಾಗದೇ ॥ 143 ॥

ಬಲ್ವಲನಪ್ಪ ಪೆರ್ಬುಸಿಯ ಬಯ್ಕೆಗೆ ಭಾಜನಮಾದ ದೊಳ್ಗೆ ಬೀ।
ಟಿಲ್ಲರಿವಂತೆ ನೇಲ್ದ ನರೆಗಡ್ಡದ ದೊಡ್ಡರ ಬಿಲ್ಲವಾತುಗಳ್॥
ಕೊಲ್ಲುವವರ್ಕೆ ಕೆಮ್ಮನೆಡೆಯಾಡದಿರೋವೆಲೆ ಶಿಷ್ಟ ಬೇಡಿಕೊ।
ಳ್ಳೊಲ್ಪೊಡೆ ನಮ್ಮ ಧರ್ಮದ ತವರ್ಮನೆ ಪಟ್ಟಣಸಾಮಿನೊಕ್ಕನಂ ॥ 144 ॥

## ಬೀರಸಾಂತರ.

ಧುರದೊಳಸಿಲತೆಯನುರ್ಚಿದೊ। ಡರಿನೃಪಯುವತಿಯರ ಮುಗುಳಕಂಕಣದಾ ಕೀಲ್।
ತರತರದಿನುರ್ಚಿದುವು ನಿಜ। ಕರಖಡ್ಗಮವರ್ಕೆ ಕೀಲೆ ಶಾಂತರನೃಪತೀ ॥ 145 ॥

## ಸ್ವಗುರು ಸಕಲಚಂದ್ರ.

ಸಕಳಚಂದ್ರಮುನಿನಾಥರುರ್ವರಾ। ಸಕಳದೊಳ್ ಪರಮಯೋಗ್ಯರೆಂಬುದಂ।
ಕಕುಭದಂತಿಗಳ ದಂತದೊಳ್ ಕರಂ। ಪ್ರಕಟಮಾಗೆ ಬರೆದಂ ಪಿತಾಮಹಂ॥ 146 ॥

---

1. ಪುಟ 80.

## ಚಂದ್ರಭಟ್ಟ. 1067.

ಈತನು ಧಾರ್ವಾಡ ಜಿಲ್ಲೆಯಲ್ಲಿಯ ಹೊಟ್ಟೂರು ಗ್ರಾಮದ ಒಂದು ಶಾಸನವನ್ನು[1] ಬರೆದ **ರಾಜವಲ್ಲಭನ** ಕವಿತೆಯನ್ನು "ವಿಸ್ತರಿಸಿ ತಿರ್ದಿದಂತೆ" ಆ ಶಾಸನದ ಕೊನೆಯ ಪದ್ಯದಿಂದ ತಿಳಿಯುತ್ತದೆ. ಈ ಶಾಸನವು 1067 ರಲ್ಲಿ ಬರೆದುದು. ಇದರಲ್ಲಿ ಚಂದ್ರಭಟ್ಟನಿಗೆ 'ವಾಕ್ಪತಿ' ಎಂಬ ವಿಶೇಷಣವು ಹೇಳಿದೆ. ಇವನು ಕವಿಯಾಗಿದ್ದಿರಬೇಕು. **ಶ್ರೀಧರಾಚಾರ್ಯನು** (1049) ತನಗೆ ಹಿಂದೆ ಇದ್ದ ಒಬ್ಬ **ಚಂದ್ರಕವಿಯ** ಹೆಸರನ್ನು ಹೇಳುತ್ತಾನೆ. ಈತನು ತದ್ಭಿನ್ನನಾಗಿರಬೇಕು.

---

## ಬಳಭದ್ರದೇವ. 1067.

ಇವನು ಧಾರ್ವಾಡ ಜಿಲ್ಲೆಯಲ್ಲಿಯ ಹೊಟ್ಟೂರು ಗ್ರಾಮದ ಒಂದು ಶಾಸನವನ್ನು[1] ಬರೆದ **ರಾಜವಲ್ಲಭನ** ಕವಿತೆಯನ್ನು "ವಿಸ್ತರಿಸಿ ತಿರ್ದಿದಂತೆ" ಆ ಶಾಸನದ ಅಂತ್ಯದಲ್ಲಿರುವ ಪದ್ಯದಿಂದ ತಿಳಿಯಬರುತ್ತದೆ. ಈ ಶಾಸನವು 1067 ರಲ್ಲಿ ಹುಟ್ಟಿದುದು. ಬಳಭದ್ರದೇವನು ಕವಿಯಾಗಿದ್ದಿರಬೇಕು ಎಂಬುದರಲ್ಲಿ ಸಂಶಯವಿಲ್ಲ.

---

## ರಾಜವಲ್ಲಭ. 1067.

ಈತನು ಧಾರ್ವಾಡ ಜಿಲ್ಲೆಯಲ್ಲಿಯ ಹೊಟ್ಟೂರೆಂಬ ಗ್ರಾಮದಲ್ಲಿರುವ ಒಂದು ಶಾಸನವನ್ನು[1] ಬರೆದುದಾಗಿ ಆ ಶಾಸನದ ಕೊನೆಯಲ್ಲಿರುವ "ಸ್ಫುರಿತ ವಚೋವಿಭಾಸಿ ಚಟುವಾಣಿಯ ಸತ್ಕವಿರಾಜವಲ್ಲಭಂ। ವಿರಚಿಸಿದಂ ವಿವೇಕ ನಿಧಿ" ಎಂಬ ಪದ್ಯಭಾಗದಿಂದ ತಿಳಿಯುತ್ತದೆ. ಅದೇಪದ್ಯದ "ವಿಸ್ತರಿಸಿ ತಿರ್ದಿದರ್ ವಾಕ್ಪತಿ ಚಂದ್ರಭಟ್ಟರುಂ ಗುರುಬಳಭದ್ರದೇವರುಂ" ಎಂಬ ಭಾಗದಿಂದ ಚಂದ್ರಭಟ್ಟ, ಬಳಭದ್ರದೇವ ಎಂಬವರು ಇವನ ಕವಿತೆಯನ್ನು ತಿದ್ದಿದಂತೆಯೂ ತಿಳಿಯುತ್ತದೆ.

ಈ ಶಾಸನದಲ್ಲಿ ಚಾಳುಕ್ಯರಾಜನಾದ ತ್ರೈಲೋಕ್ಯಮಲ್ಲನ ಮಹಾಸಾಮಂತ ಜೋಯಿಯರಸ ಮೊದಲಾದವರು **ಕೇಶಿಗಾವುಂಡನು** ಕಟ್ಟಿಸಿದ **ಕೇಶವೇಶ್ವರ ದೇವಸ್ಥಾನಕ್ಕೆ** 1067 ರಲ್ಲಿ ದತ್ತಿಯನ್ನು ಬಿಟ್ಟಂತೆ ಹೇಳಿದೆ. ಇದರಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ :—

1. *Epigraphia Indica*, XVI, 83.

### ಮಾರಗಾವುಂಡ.

ಕುಡುವರ್ ಬೇಡಿದೊಡರ್ಥಿಗರ್ಥಚಯಮುಂ ಶ್ರೀನುಂತರುಂತೇನುಮುಂ।
ಕುಡರೀಲೋಕದೊಳೊಂದಪೂರ್ವಮೆನಿಸಲ್ ಕಾಲಿಲ್ಲದರ್ ಬೇಡಿ ಬಂ॥
ದೊಡೆ ಕಾಲಂ ನಿಜಶಕ್ತಿಯುಂ ಪಲರ್ಗೆ ಕೊಟ್ಟಂ ಮಾರಗಾವುಂಡನೆಂ।
ದೊಡೆ ತತ್ಸತ್ಕೃದ ತತ್ಕದುನ್ನತಿಯನಂತಿಂತುಂತೆನಲ್ಬಕ್ಕುಮೇ ॥ 147 ॥

### ಕೇತಿಗಾವುಂಡ.

ಜಳನಿಧಿಯೊಳುಡುಪನುದಯಾ। ಚಳದೊಳಿನಂ ಪುಟ್ಟುವಂತೆಪೋಲ್ ಗೋಮುವಸ।
ತ್ಕುಳದೊಳುದಯಿಸಿ ಸುಪುತ್ರಃ। ಕುಳದೀಪಕ ಎನಿಸಿ ಕೇತಿ ಜಸಮುಂ ಪಡೆದಂ
॥ 148 ॥

---

## ಶಾಂತಿನಾಥ. 1068.

ಈತನು ಸುಕುಮಾರಚರಿತವನ್ನು ಬರೆದಿದ್ದಾನೆ. ಈ ವಿಷಯವು ಷಿಕಾರಿಪುರದ 136 ನೆಯ ಶಾಸನದಿಂದಲೂ (ಶಕ 990 ಕೀಲಕ) ತಿಳಿಯುತ್ತದೆ. ಈ ಕವಿ ಭುವನೈಕಮಲ್ಲನ (1068—1076) 'ಪಸಯಿತ' ನಾದ ಲಕ್ಷ್ಮನೃಪನ ಕೈಯಕೆಳಗೆ ಮಂತ್ರಿಯಾಗಿ "ಬನವಸೆ ಪನ್ನಿರ್ಭಾಸಿರಕ್ಕಮರ್ಥಾಧಿಕಾರಿಯುಂ ಕಾರ್ಯಧುರಂಧರನುಂ ತದ್ರಾಜ್ಯಸಮುದ್ಧರಣನುಂ" ಎನಿಸಿದ್ದನು. ಈತನು ಜೈನಕವಿ. ಇವನ ಗುರು ವರ್ಧಮಾನವ್ರತಿ; ತಂದೆ ಗೋವಿಂದರಾಜ; ಅಣ್ಣ ಕನ್ನಪಾರ್ಯ; ತಮ್ಮ ವಾಗ್ಭೂಷಣನಾದ ರೇವಣ; ಸ್ವಾಮಿ ಲಕ್ಷ್ಮನೃಪ. ಈತನನ್ನು 'ದಂಡನಾಥ ಪ್ರವರಂ' 'ಪರಮಜಿನಮತಾಂಭೋಜಿನೀರಾಜಹಂಸಂ' 'ಸರಸ್ವತೀಮುಖ ಮುಕುರಂ' 'ಸಹಜಕವಿ' 'ಚತುರಕವಿ' 'ನಿಸ್ಸಹಾಯಕವಿ' ಎಂದು ಮೊದಲಾಗಿ ವಿಶೇಷಿಸಿ ಹೇಳಿದೆ. ಇವನ ಸ್ತುತಿಯನ್ನು ನೋಡಿದರೆ ಈತನು ಪ್ರೌಢಕವಿಯಾಗಿದ್ದಂತೆ ತಿಳಿಯುತ್ತದೆ. ಈತನ ಉಪದೇಶದಿಂದ ಲಕ್ಷ್ಮನೃಪನು ಬಳಗ್ರಾಮದಲ್ಲಿ ಶಾಂತಿತೀರ್ಥೇಶ್ವರನ ದೇವಸ್ಥಾನಕ್ಕೆ ಶಿಲಾಕರ್ಮವನ್ನು ಮಾಡಿಸಿದನು. ಕವಿಯ ಸ್ತುತಿರೂಪವಾದ ಕೆಲವು ಪದ್ಯಗಳನ್ನು ಈ ಶಾಸನದಿಂದ ತೆಗೆದು ಬರೆಯುತ್ತೇವೆ :—

ಕವಿತಾಚೂತಾಂಕುರಶ್ರೀಮದಕಲಕಲಕಂಠೋಪಮಂ ಕಾವ್ಯಸೌಧಾ।
ರ್ಣವವೇಳಾಪೂರ್ಣಚಂದ್ರಂ ಸಮವಿಷಮಮಹಾಕಾವ್ಯವಲ್ಲೀಲತಾಂತೋ॥
ತ್ಸವಚಂಚಚ್ಚಂಚರೀಕಂ ವಸುಧೆಗೆಸೆದನುರ್ವೀನುತಂ ದಂಡನಾಥ।
ಪ್ರವರಂ ಶ್ರೀಶಾಂತಿನಾಥಂ ಪರಮಜಿನಮತಾಂಭೋಜಿನೀರಾಜಹಂಸಂ॥
ಕುನಯಂಗಳ್ ಜೈನಮಾರ್ಗಾಮೃತದೊಳಿರೆ ಜಲಕ್ಷೀರದಂತಲ್ಲಿ ಸದ್ವಾ।
ಕ್ಯನಿಶಾತೋಚ್ಚಂಚುವಿಂದಂ ಕುಮತಕಲುಷಪಾನೀಯಮಂ ತೂಳ್ದಿ ಜೈನಾ॥

ನನನಿರ್ಮತ್ತತ್ವದುಗ್ಧಾಮೃತಮನಖಿಳಭವ್ಯೋತ್ಕರಂ ಮೆಚ್ಚಲಾಸ್ಪಾ।
ದನೆಗೆಯ್ಪೊಳ್ಪಿಂದಮಾದಂ ಪರಮಜಿನಪತಾಂಭೋಜಿನೀರಾಜಹಂಸಂ ॥
ಸಹಜಕವಿ ಚತುರಕವಿ ನಿ। ಸ್ಸಹಾಯಕವಿ ಸುಕವಿ ಸುಕರಕವಿ ಮಿಥ್ಯಾತ್ವಾ।
ಪಹಕವಿ ಸುಭಗಕವಿ ವಿನುತ। ಮಹಾಕವೀಂದ್ರಂ ಸರಸ್ವತೀಮುಖಮುಕುರಂ ॥
ಸುಕರರಸಭಾವದಿಂ ವ। ರ್ಣಕವಿಂ ತತ್ಕಾರ್ಥನಿಚಯದಿಂ ಸೂಕ್ತಮೆನಲ್।
ಸುಕುಮಾರಚರಿತಮಂ ಪೇ। ಟ್ಪ ಕವೀಂದ್ರಾಗ್ರಣಿ ಸರಸ್ವತೀಮುಖಮುಕುರಂ ॥
ಅಸಹಾಯನಾಗಿಯುಂ ಸುಜ। ನಸಹಾಯಂ ಮದಪಹೀನನಾಗಿಯುಮರ್ಥಿ।
ಪ್ರಸರೋತ್ಕಟದಾನಾಧಿಕ। ನಸದೃಶವಿಭವಂ ಸರಸ್ವತೀಮುಖಮುಕುರಂ ॥
ಹರಹಾಸಾಕಾಶಗಂಗಾಜಳ ಜಳರುಹಸೀಹಾರ ಸೀಹಾರಧಾತ್ರೀ।
ಧರ ಸೀಹಾರಾಂಶುತಾರಾವನಿಧರ ಶರದಂಭೋಧರ ಕ್ಷೀರಸೀರಾ ॥
ಕರ ತಾರಾಭಾರತೀದಿಗ್ವದನಿರದನ ಪೀಯೂಷಡಿಂಡೀರಮುಕ್ತಾ।
ಕರಕುಂದೇಂದ್ರೇಭಹಂಸೋಜ್ಜ್ವಳವಿಶದಯಶೋವಲ್ಲಭಂ ಶಾಂತಿನಾಥಂ ॥
ಒಡವೆಯಸೊಳ್ಪಿಸಿಂ ಪಡೆದು ಪುಂಜಿಸಿ ಪೂಜಿಸಿ ಕೋಣತಾಣದೊಳ್।
ಮಡಗದೆ ಶಿಷ್ಟರಿಟ್ಟಿಡೆಗೆ ಬಂಧುಗಳಿಲ್ಲಮಿಗಪ್ಪುದೆಂದುಮೆ ॥
ನ್ನೊಡಮೆ ಶರೀರಮೆನ್ನದು ನಿಯೋಗದ ಪರ್ವಮಿದೆನ್ನದೆಂದು ಮೆ।
ಳ್ವಡದಿರಿಮೆಂದು ಗೋಸಣೆ ತೊಟಲ್ದುದು...ಶಾಂತಿನಾಥನಾ ॥

ಈತನ ಗ್ರಂಥ

## ಸುಕುಮಾರಚರಿತ

ಇದು ಚಂಪೂರೂಪವಾಗಿದೆ; 12 ಆಶ್ವಾಸಗಳಾಗಿ ಭಾಗಿಸಲ್ಪಟ್ಟಿರುವಂತೆ ತೋರುತ್ತದೆ. ನಮಗೆ ದೊರೆತ ಪ್ರತಿಯಲ್ಲಿ ಆದ್ಯಂತಗಳಲ್ಲಿ ಓಲೆಗಳು ಹೋಗಿರುವುದಲ್ಲದೆ ಮಧ್ಯದಲ್ಲಿಯೂ ಹಲವು ಕಡೆ ಓಲೆಗಳು ಶಿಥಿಲವಾಗಿಯೂ ಲುಪ್ತವಾಗಿಯೂ ಇರುವುದರಿಂದ ಗ್ರಂಥದ ಆನುಪೂರ್ವಿಯನ್ನು ತಿಳಿಸಲು ಸಾಧ್ಯವಿಲ್ಲದೆ ಇದೆ. ಇದರಲ್ಲಿ ಸೂರದತ್ತರಾಜನಿಗೂ ಯಶೋಭದ್ರೆಗೂ ಹುಟ್ಟಿದ ಸುಕುಮಾರನೆಂಬ ರಾಜಕುಮಾರನ ಚರಿತ್ರವು ಹೇಳಿದೆ. ಈತನು ಯಶೋಭದ್ರಾಚಾರ್ಯರ ಉಪದೇಶದಿಂದ ಪೂರ್ವಸ್ಮರಣೆಯನ್ನು ಪಡೆದು ವೈರಾಗ್ಯದಿಂದ ಅವರಲ್ಲಿಯೇ ದೀಕ್ಷೆಯನ್ನು ಹೊಂದಿ ಕೊನೆಗೆ ಮುಕ್ತಿಯನ್ನು ಪಡೆಯುತ್ತಾನೆ.

ಆಶ್ವಾಸಗಳ ಅಂತ್ಯದಲ್ಲಿ ಈ ಗದ್ಯವಿದೆ—

ಇದು ಸಮಸ್ತವಿನೇಯಜನವಿನಮಿತ ಶ್ರೀವರ್ಧಮಾನಮುನೀಂದ್ರವಂದ್ಯಪರಮಜಿನೇಂದ್ರಶ್ರೀಪಾದಪದ್ಮವರಪ್ರಸಾದೋತ್ಪನ್ನ ಸಹಜಕವೀಶ್ವರ ಶ್ರೀಶಾಂತಿನಾಥಪ್ರಣೀತಮಪ್ಪ ಸುಕುಮಾರಚರಿತ್ರದೊಳ್

ಈ ಗ್ರಂಥದಿಂದ ಕೆಲವು ಭಾಗಗಳನ್ನು ತೆಗೆದು ಬರೆಯುತ್ತೇವೆ :—

## ಮುನಿ

ಮುನಿವವರುಂ ಕೂರ್ಪನರುಂ । ಮುನಿಸುಂ ಕೂರ್ಮೆಯುಮನುಂಟುಮಾಡುವ
ಪದದೊಳ್ ।
ಮುನಿಯದ ಕೂರದ ಮುನಿಸದ । ಮುನಿಪತಿ ಭಾವಿಪೊಡೆ ತಾನೆ ಜನಪತಿಯಲ್ತೇ ॥ 149 ॥

## ಉದ್ಯಾನ (ಆದ್ಯಂತಪ್ರಾಸದ ರಗಳೆ)

ಅನಿರುಪಮುಗೃಹಬಹಿರುದ್ಯಾನಂ । ತಾನೆಸೆದೊಪ್ಪುಗುಮಪ್ರತಿಮಾನಂ ।
ನಾಗಲತಾವಿಸ್ತೀರ್ಣಮದಪ್ಪುದು । ಪೂಗದ್ರುಮಸಂಕೀರ್ಣಮೆನಿಪ್ಪುದು ।
ಬನದೊಳೆತ್ತಲುಂ ಸುಲ್ತಿವರಗಿಳಿಗಳೆ । ಜನುಗಿ ರಾಗದಿಂದಂ ಮೊರೆವಳಿಗಳೆ ।
ಪೋ ಪುಗಿಲ್ ಪುಗಿಲ್ ನಿಲ್ಲಿಸುತ ಕರಂ । ಕಾಪುಗೊಂಡು ಜಡಿವುದು ಪಿಕನಿಕರಂ
॥ 150 ॥

## ವಿವಾಹಗೇಹ (ಲಲಿತರಗಳೆ)

ಮರಕತಭಿತ್ತಿಗಳಿಂ ಭಿತ್ತಿವೆತ್ತು । ಪೊಸದೇಸೆಯೊಳಿತ್ತಂ ಭಂಗಿವೆತ್ತು ।
ವಜ್ರದ ಕಂಭಂಗಳ ಕಾಂತಿ ಮಿಂಚೆ । ಪರಭಾಗಂಬಡೆದವಱೊಳ್ ಪಳಂಚೆ ।
ಪೊಂಗಳಸಂಗಳ್ ತಳತಳನೆ ತೊಳಗೆ । ಕಪ್ಪುರದ ಸೊಡರ್ಗಳೋರಂತೆ ಬೆಳಗೆ ।
ಪೊಂದಳಿರ್ಗಳ ತೋರಣದೊಳಗೆ ಪೊಜಗೆ । ಕೆಂದಳಿರ್ಗಳ ಮಾಲೆಗಳೆಜಗಿ ತುಜುಗೆ ।
ಭಾವಿಸುವಂದದು ಪುಣ್ಯಾವತಾರ । ಮಾರಯ್ಪಂದದು ಸಂಸಾರಸಾರ ।
ಈ ಲೋಕದೊಳದಱಿಂತಪ್ಪುವಿಲ್ಲ । ಬಣ್ಣಿಸಲದನಾವನುಮಱಿದನಿಲ್ಲ ॥ 151 ॥

## ಊಟ

ಎಳಮಾವಿನ ಮಿಡಿ ಮಾಗುಳಿ । ಮೆಳಸಿನ ಕರೆ ಬೆತ್ತಲಟ್ಟಿಯಾಳಿಯ ಗೊಲೆಯಿಂ ।
ದಳವಟ್ಟಿರೆ ಲಾವಣಕಂ । ಗಳನಿಕ್ಕಿದರಾಗಳಲ್ತಿಯಿಂದಂಗನೆಯರ್ ॥ 152 ॥
ಇದು ಬಾಳ್ಮೊಸರಿದು ಕಳಲಿಂ । ತಿದು ರುಚಿವೆತ್ತಿರ್ದ್ದು ಪಾನಮಿದು ಮಜ್ಜಿಗೆ ತಾ ।
ನಿದು ಶಿಖರಿಣಿಯೆನುತುಂ ತಿಂ । ಬಿ ತಿಂಬಿ ತಂದೆಜಿದರಬಲೆಯರ್ ನಿರ್ಪುಗಳಿಂ
॥ 153 ॥

## ಜಿನಸ್ತುತಿ

ಕೆನಿಗಳ್ ನಿನ್ನ ಮೃದೂಕ್ತಿಯಂ ಬಯಸಿ ಕೇಳುತ್ತಿರ್ಕ್ಕೆ ಕಣ್ಗಳ್ ಮಹೋ ।
ತ್ಸವದಿಂ ನಿನ್ನನೆ ನೋಡುತಿರ್ಕ್ಕೆ ಸಲೆ ಕೆಯ್ಗಳ್ ನಿನ್ನ ಪಾದಾರವಿಂ ॥
ದವನೋತಚ್ಚಿತ್ತಸುತಿರ್ಕ್ಕೆ ಸಂದ ಮನಮೆಂದುಂ ನಿನ್ನ ದಿವ್ಯಸ್ಮರೂ ।
ಪವನಾರಾಧಿಸುತಿರ್ಕ್ಕೆ ವಿಶ್ರುತವಿನೇಯಸ್ಯಾರ್ಹಚಿಂತಾಮಣೇ ॥ 154 ॥

## ಜಿನಸ್ತುತಿ (ಪದ್ಧಳಿ)

ಜಯಜಯ ಭುವನತ್ರಯಪರಮದೇವ। ದೇವೇಂದ್ರಾಭ್ಯರ್ಚಿತಚರಣಕಮಲ।
ಕಮಲವಿರಹಿತನಿರುಪಮದೇಹ। ದೇಹಾಶ್ರಿತಪುಳಕ್ಷಣವಿನೂತ।
ನೂತನಸಂಗತಕ್ಕೆವಲ್ಯಬೋಧ। ಬೋಧಪ್ರಕಾಶವಸ್ತ್ವರೂಪ।
ರೂಪಾತಿಶಯಾನ್ವಿತ ವಿತತವಿಭವ। ಭವನಿವಹಸಟಲನಿರ್ಮುಕ್ತಜೀವ ॥ 155 ॥

## ಸುಕುಮಾರನ ಭೋಗ

ಮಾಸರವೊಕ್ಕ ಕಳ್ತುರಿಯ ಪಂಕಮನಲ್ಲದೆ ಪಂಕಮಂ ಕರಂ।
ಬೀಸುವ ಚಾರುಚಾಮರದ ಗಾಳಿಯನಲ್ಲದೆ ಗಾಳಿಯಂ ನುಸೋ।
ಭಾಸುರಮಪ್ಪ ಕಪ್ಪುರದ ದೂಳಿಯನಲ್ಲದೆ ದೂಳಿಯಂ ನಿಜಾ।
ವಾಸದೊಳಿಂತುಟೆಂದಜಿಯನಿಂತುಟು ಪುಣ್ಯಮಗಣ್ಯಮಾತನಾ ॥ 156 ॥

## ನಾಗಶ್ರೀಯ ವರ್ಣನೆ (ರಗಳೆ)

ಸುದತಿಯ ತೊಳಗುವ ತೋಳ ಮೊದಲ್ಗಳ್। ಮುದನವಿಲಾಸದ ಮೊತ್ತಮೊದಲ್ಗಳ್।
ಲಲನಾರತ್ನದ ಬಾಹುಯುಗಂಗಳ್। ಲಲಿತಲತಾಭಾಸಾಸದೃಶಂಗಳ್।
ಸುರುಚಿರಮೃದುತರವಲ್ಲವದಂತಿರೆ। ಕರತಳವೊಪ್ಪುಗುಮೆನೆದೋದಂತಿರೆ।
ಕರಶಾಖೆಗಳತನುಕ್ಕುರದಂದಂ। ಕರನಖಿಮವು ಕೇದಗೆಯೆಸಲ್ರಂದಂ।
ನೋಡೆ ಕುಮಾರಿಯ ಬಳ್ಕುವ ಮಧ್ಯಂ। ನಾಡೆ ಮನೋಜ್ಞಂ ಪೊಗಟಿಲಸಾಧ್ಯಂ।
ಲಾವಣ್ಯಾಂಬುರಸದ್ರವರೂಪಂ। ಭಾವಿಪೊಡಾಕೆಯ ನಾಭೀಕೂಪಂ।
ಜಲಜದಳಾಕ್ಷಿಯ ಕಣ್ಮಲರಂದಂ। ಪೊಳೆವೆಳವಿಸಿಂಗಳ ಪೊಣರ್ಗಳ ಚಂದಂ।
ಅಗಣಿತಗುಣನೆಯಂ ವಿಬುಧನಿಕಾಯಂ। ಪೊಗಟ್ಪಲ್ ನೆಜಿವರೆ ನಾಗಶ್ರೀಯಂ ॥ 157 ॥

## ನಾಗಶ್ರೀಯ ಪಾಂಡಿತ್ಯ

ಪ್ರತಿಭಾಸಂಸ್ಕೃತಿಯಿಂ ಸಲಕ್ಷಣತರಂಗೋಪಾಂಗದಿಂ ವಿಶ್ವವಿ।
ಶ್ರುತವಸ್ತ್ವರ್ಥವಿನರ್ಥವೈಷ್ಣಿಯನಳಂಕಾರೋಕ್ತಿಯಿಂ ನಿರ್ಣಯೋ।
ಚಿತವಿನ್ಯಾಸವಿನತ್ಯುದಾತ್ತರಸದಿಂದಾಕಸ್ಮೆ ಸಾಕ್ಷಾತ್ಸರ।
ಸ್ವತಿ ತಾನೆಂಬಿನಮೇಂ ಪ್ರಭಾವಿಸಿದಳೋ ನಾನಾಕಳಾಳಾಪಮಂ ॥ 158 ॥

ನೆರೆದಾರಾಜಸಭಾಂತರಾಳದೊಳುದಾತ್ತಾರ್ಥೋಕ್ತಿಯಿಂ ತನ್ನೊಳಾರ್।
ದೊರೆಯೆಂಬನ್ನೆಗಮುದ್ಗತಪ್ರಥಿತಶಬ್ದಾರ್ಥೋಕ್ತಿಯಿಂ ವ್ಯಕ್ತಮಾ ॥
ಗಿರೆ ವಕ್ಕಾಣಿಸಿ ತದ್ವಿದರ್ ಪೊಗಟ್ಪುಬಾಪ್ಪೆಂಬನ್ನೆಗಂ ತತ್ಪತಿಂ।
ವರೆ ವೇದಾದಿಕಳಾಕಳಾಪಮನಶೇಷಾಳಾಪದಿಂದೋದಿದಳ್ ॥ 159 ॥

ಸಕಲವ್ಯಾಕರಣಾರ್ಥಶಾಸ್ತ್ರನಿಪುಣರ್ ಮಾರ್ಕೊಂಡರಿಲ್ಲುರ್ಕ್ಕಿ ತಾ ।
ರ್ಕಿಕರೊಟ್ಟೈಸಿದರಿಲ್ಲ ಸತ್ಕವಿಗಳಡ್ಡಂಬಂದರಿಲ್ಲುಂತೆ ಭುಂ ॥
ಭುಕವಿಾಲೋಕದೊಳಾರೊಳಂ ಜನಿಯಿಸಿತ್ತಿಲ್ಲೆಂಬಿನಂ ವಿಪ್ರಕ ।
ನ್ಯಕೆ ವಿದ್ಯಜ್ಞನದಿಂದಮಂದು ಪಡೆದಳ್ ಪಾಂಡಿತ್ಯಸೌಂದರ್ಯಮಂ ॥ 160 ॥

---

## ನಾಗವರ್ಮಾಚಾರ್ಯ. ಸು. 1070.

ಈತನು **ಚಂದ್ರಚೂಡಾಮಣಿಶತಕವನ್ನು** ಬರೆದಿದ್ದಾನೆ. ಈ ಗ್ರಂಥದಲ್ಲಿಯ

ಉದಯಾದಿತ್ಯನ ಸಂಧಿವಿಗ್ರಹಿಲಲಾಮುಂ ನಾಗವರ್ಮಂ ಸಮಂ ।
ತುದಯಾದಿತ್ಯನ ರಾಯಭಾರಿಯೆನಿಸಿರ್ದಾತ್ಮಾಗ್ರಜಂ ಭಾಸ್ಕರಂ ॥
ಮೊದಲಾದೀಶ್ವರಭಕ್ತರಪ್ಪಿವರ್ಗೆ ಪೇಱ್ದೀಜ್ಞಾನಸಾರಂ ಸುಖಾ ।
ಸ್ಪದಮೊಲ್ವೀದುಗೆ ಭುಕ್ತಿಮುಕ್ತಿಫಲಮಂ ಶ್ರೀಚಂದ್ರಚೂಡಾಮಣೀ ॥

ಎಂಬ ಪದ್ಯದಿಂದ ಈತನು ಉದಯಾದಿತ್ಯನಲ್ಲಿ ಸಂಧಿವಿಗ್ರಹಿಯಾಗಿದ್ದಂತೆಯೂ ಉದಯಾದಿತ್ಯನಲ್ಲಿ ರಾಯಭಾರಿಯಾಗಿದ್ದ ತನ್ನ ಅಣ್ಣ ಭಾಸ್ಕರ ಮೊದಲಾದ ವರಿಗೋಸ್ಕರ ಈ ಗ್ರಂಥವನ್ನು ಹೇಳಿದಂತೆಯೂ ತಿಳಿಯಬರುತ್ತದೆ.

ಷಿಕಾರಿಪುರದ 129 ನೆಯ ಶಾಸನದಿಂದ (1071) ಚಾಳುಕ್ಯರಾಜನಾದ ಭುವನೈಕಮಲ್ಲನಲ್ಲಿ (1069—1076) "ಶ್ರೀಮನ್ಮಹಾಪ್ರಧಾನಂ ಹಿರಿಯ ಸಂಧಿವಿಗ್ರಹಿ ಮನೆವೆರ್ಗಡೆ ದಂಡನಾಯಕಂ ಬ್ರಹ್ಮಕ್ಷತ್ರಶಿಖಾಮಣಿ ರಾಜಾಧಿರಾಜಂ ಕೋಳಾಳಪುರವರೇಶ್ವರಂ ನಂದಿಗಿರಿನಾಥಂ" ಆಪ ಉದಯಾದಿತ್ಯನು "ಬನವಸೆ 12000, ಸಾಂತಳಿಗೆ 1000, ಮುಂಡಳಿ 1000, ಪದಿನೆಂಟಗ್ರಹಾರಂ" ಇವುಗಳನ್ನು ಆಳುತ್ತಿದ್ದಂತೆಯೂ ಅವನ ಕಾಲದಲ್ಲಿ ಬಹಳ ಪ್ರಸಿದ್ಧನಾದ ಅದ್ವೈತಿ ಗುಣಗಳ್ಳ ನಾಗವರ್ಮಾಚಾರ್ಯನೆಂಬವನೊಬ್ಬನು ಇದ್ದಂತೆಯೂ ತಿಳಿಯುತ್ತದೆ. ಈ ನಾಗವರ್ಮನೇ ಕವಿಯಾಗಿರಬಹುದೆಂದು ಊಹಿಸುತ್ತೇವೆ. ಹಾಗಿದ್ದ ಪಕ್ಷದಲ್ಲಿ ಇವನು ಸುಮಾರು 1070 ರಲ್ಲಿ ಇದ್ದಿರಬೇಕು. ಈ ಕವಿಗೆ ಗುಣಗಳ್ಳನೆಂಬ ಬಿರುದಿದ್ದಂತೆಯೂ ಈತನು ಅದ್ವೈತಿಯಾಗಿಯೂ ದೊಡ್ಡ ಪಂಡಿತನಾಗಿಯೂ ಇದ್ದಂತೆಯೂ ಮೇಲಣ ಶಾಸನದ ಈ ಪದ್ಯಗಳಿಂದ ತಿಳಿಯುತ್ತದೆ:—

ಆನಂದಾದ್ವಯಸತ್ಯ । ಜ್ಞಾನಮಯರ್ ನೆಗಟ್ಟಿರಖಿಳದೊಳ್ ನಿಷ್ಕಳನಾ ।
ದಾನಂದರ್ ತನ್ನಾಮಾ । ಧೀನರ್ ಗುಣಗಳ್ಳನಾಗವರ್ಮಾಚಾರ್ಯರ್ ॥
ಶ್ರೀಮನ್ಮುಕ್ತಿವಧೂಲೀ । ಲಾಮಂಗಳತಿಳಕನೆಸೆದನದ್ವಯಮಹಿಮೋ ।
ದ್ಧಾಮಂ ಸಂಪೂರ್ಣಂ ವಿ । ದ್ಯಾಮೂರ್ತಿ ಜಿತಾತ್ಮನಕ್ಷರಂ ಗುಣಗಳ್ಳಂ ॥

ತ್ರ॥ ನುಡಿವ ತತ್ವದ ಮಾತಂ ಬಿಡಲಾರನೇನುಮಂ ।
ನುಡಿವಳಿಯಂತೆ ನಡೆವಳಿಯೆನಿಸಿದಂ । ನುಡಿದಂತೆ ಗಂಡಂ ಗುಣಗಳ್ಕಂ ॥

ಈತನು ಬಲಿಪುರದಲ್ಲಿ ದೇವಾಲಯಗಳನ್ನೂ ಮುತ್ತೂರೆಡೆಯಲ್ಲಿ ಸಿದ್ಧತೀರ್ಥವನ್ನೂ ಮಾಡಿಸಿದಂತೆ ತಿಳಿಯಬರುತ್ತದೆ.

ಇವನ ಗ್ರಂಥ

## ಚಂದ್ರಚೂಡಾಮಣಿಶತಕ.

ಇದು ಮತ್ತೇಭವೃತ್ತದಲ್ಲಿ ಬರೆದಿದೆ. ಇದರಲ್ಲಿ ಪ್ರತಿಪಾದಿತವಾದ ವಿಷಯವು ವೈರಾಗ್ಯವು. ಈ ಗ್ರಂಥಕ್ಕೆ ಜ್ಞಾನಸಾರವೆಂದು ಹೆಸರಿಟ್ಟಿರುವಂತೆ ತೋರುತ್ತದೆ; ಬಂಧವು ಲಲಿತವಾಗಿಯೂ ಗಂಭೀರವಾಗಿಯೂ ಇದೆ. ಇದರಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

ದೆಸೆಯಂ ನುಂಗಿಯುಮರ್ಬಿಯಂ ನೊಣೆದುಮಂಭೋರಾಶಿಯಂ ಪೀರ್ದುಮಾ ।
ಗಸಮಂ ತಳ್ತಡರ್ದೇಱಿಯುಂ ದಣಿಗುಮೇ ಮತ್ತೆಯ್ದುದಿರ್ಪಲ್ಲಿಗೆ ॥
ಯ್ದುಸುತಿರ್ಕುಂ ಚಲದಿಂದೆ ತೃಷ್ಣೆ ನೆಗಟ್ಟುಂತೃಷ್ಣಾಗ್ನಿಯಂ ಕೂಡೆ ಮ ।
ಱಿಸಲಕ್ಕುಂ ನಿಜತತ್ವಮೆಂಬಮೃತದಿಂ ಶ್ರೀಚಂದ್ರಚೂಡಾಮಣೀ ॥ 161 ॥

ನರೆಯಿಂದಂ ತರೆಯಿಂದಮಾದ ಸೆರೆಯಿಂದಂ ಮುಪ್ಪಿನೊಳ್ ಬೆಲ್ವುಗೆ ।
ಟ್ಟರುತುಂ ವ್ಯಾಧಿಯೊಳಾಗಳುಂ ನಮೆಯುತುಂ ತಳ್ತಿರ್ದ ದಾರಿದ್ರ್ಯದೊಳ್ ॥
ಪೊರಳುತ್ತಿರ್ದುಮದೆಂತುಮಿಂತುಮಳಿಪೆಂತುಂ ಪೋಗದಾಕುತ್ತಮಂ ।
ಹರಿಪೊಂದೌಷಧಿಯಂ ಸಮಂತು ದಯೆಗೆಯ್ ಶ್ರೀಚಂದ್ರಚೂಡಾಮಣೀ ॥ 162 ॥

ಪೆಜಿನುಂಡಂ ಪೆಜಿಸುಟ್ಟಪಂ ಪೆಜಿನತರ್ಕ್ಕೈಶ್ವರ್ಯಮಂ ತಾಳ್ದಿದಂ ।
ಪೆಜಿನುದ್ದಾಮಪರಾಕ್ರಮಕ್ಕೆ ನೆಲೆಯಾಗಿರ್ದಪ್ಪನೆಂದಾಗಳುಂ ॥
ಕಜುಪಿಂದಂದಶನಕ್ಕೆ ಮೇಲೆ ಸಲವೆಂದೋರಂತೆ ತನ್ನಂತೆ ತಾಂ ।
ಪೆಱರಂ ಭಾವಿಸೆ ತತ್ತ್ವಮಿಂತುಟೆ ವಲಂ ಶ್ರೀಚಂದ್ರಚೂಡಾಮಣೀ ॥ 163 ॥

---

## ಹರಿಯಣ್ಣ. 1075.

ಈತನು ಸೊರಬದ 262 ನೆಯ ಶಾಸನವನ್ನು ಬರೆದುದಾಗಿ ಆ ಶಾಸನದ ಕೊನೆಯಲ್ಲಿರುವ "ಬಮ್ಮರ ಹರಿಯಣ್ಣ ಹೇಟ್ಪ ಶಾಸನ" ಎಂಬ ವಾಕ್ಯದಿಂದ ತಿಳಿಯುತ್ತದೆ. ಈತನು ಜೈನಕವಿ.

ಈ ಶಾಸನವು ಕದಂಬರಾಜನಾದ ಕೀರ್ತಿದೇವನ ಆಳಿಕೆಯಲ್ಲಿ ಶಕ 997 ರಲ್ಲಿ ಬರೆದುದು. ಇದರಲ್ಲಿ ಕೀರ್ತಿದೇವನ ಮಹಿಷಿಯಾದ ಮಾಳಲದೇವಿ ಕುಪ್ಪ

ಟೂರ ಬ್ರಹ್ಮಜಿನಾಲಯಕ್ಕೆ ಗ್ರಾಮವನ್ನು ಬಿಟ್ಟಂತೆ ಹೇಳಿದೆ. ಈ ಶಾಸನದಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ :—

ಕುಪ್ಪಟೂರು

ಬೆಳೆದ ಸುಗಂಧಿಶಾಲಿವನದಿಂದೊಳಗೊಪ್ಪುವ ನಾಳಿಕೇರಕಾ ।
ದಳನವಪೂಗನಾಗಲತಿಕಾವನದಿಂ ಪರಿ . . . ಳದಿಂ ॥
ವಳಯಿತಮಾಗಿ ವಿಪ್ರಸುರಚಿತ್ರನಿಕೇತನಮಾಲೆಯಿಂದೆ ಕ ।
ಣ್ಗೊಳಿಪುದು ಕುಪ್ಪಟೂರ್ ಸಕಳವಿದ್ಯೆಗೆ ತಾನೆನೆ ಜನ್ಮಭೂತಳಂ ॥ 164 ॥

ಪದ್ಮನಂದಿ

ಶಾಂತರಸಂ ಪೊನಲ್ವರಿದು ಸಂಯಮವಲ್ಲಿ ಮಡಲ್ತು ಪರ್ಬಿ ತೋ ।
ರ್ಪಂತೆ ಚರಾಚರವ್ರಜಮನಾತ್ಮವಚೋಮೃತದಿಂ ವಿನೇಯರಾ ॥
ಸ್ವಾಂತರಜೋಮಳಂ ತೊಳೆದು ಪೋಯ್ತೆನೆ ಪೇಟ್ ಬುಧಪದ್ಮನಂದಿಸ್ಮೈ ।
ದ್ಧಾಂತಿಕಚಕ್ರವರ್ತಿಯನದಾರ್ ಪೊಗಟರ್ ಗುಣಶೀಲಮೂರ್ತಿಯಂ ॥ 165 ॥

---

## ಬ್ರಹ್ಮ. ಸು. 1079.

ಮದನತಿಲಕವನ್ನು ಬರೆದಿರುವ ಚಂದ್ರರಾಜನು (ಸು. 1079) ತನ್ನ ಗ್ರಂಥವನ್ನು "ತಿರ್ದಿ ಬರೆದವಂ ಬ್ರಹ್ಮಂ" ಎಂದು ಹೇಳಿಕೊಂಡಿದ್ದಾನೆ. ಈ ಬ್ರಹ್ಮನು ಕವಿಯಾಗಿದ್ದಿರಬೇಕು. ಇವನ ವಿಷಯವಾಗಿ ನಮಗಿನ್ನೇನೂ ತಿಳಿಯದು.

---

## ಚಂದ್ರರಾಜ. ಸು. 1079.

ಈ ಕವಿ ಮದನತಿಲಕವೆಂಬ ಗ್ರಂಥವನ್ನು ಬರೆದಿದ್ದಾನೆ. ಅಲ್ಲದೆ

ಸಕಲವ್ಯಾಕರಣಾರ್ಥಶಾಸ್ತ್ರಗಣಿತಾಲಂಕಾರಸತ್ತಾತ್ಪರ್ಯನಾ ।
ಟಕನಾಟ್ಯಾಧ್ಯಯನನೃತ್ತಗೀತಹಯಶಾಸ್ತ್ರಾದ್ಯೇತಗಾಂಧರ್ವತಾ ॥
ರ್ಕಕವೀಂದ್ರಾಗಮವೈದ್ಯವಾದ್ಯಶಕುನೋದ್ಗದ್ಧೃದ್ವಿದ್ಯಾಕದಂ ।
ಬಕಮುಂ ಚಂದ್ರಕವೀಂದ್ರನೊರ್ವನೆ ವಲಂ ಬಲ್ಲಂ ಪಜಿರ್ ಬಲ್ಲರೇ ॥

ಎಂದು ಹೇಳಿಕೊಂಡಿರುವುದರಿಂದ ಇತರ ಗ್ರಂಥಗಳನ್ನೂ ಬರೆದಿರಬಹುದು. ಒಬ್ಬ ಬ್ರಾಹ್ಮಣಕವಿ (ಸು. 1400) ಅಭಿನವಚಂದ್ರನೆಂದು ಹೆಸರಿಟ್ಟುಕೊಂಡು ಒಂದು ಹಯಶಾಸ್ತ್ರವನ್ನು ಬರೆದಿದ್ದಾನೆ. ಮೇಲಣ ಪದ್ಯದಿಂದ ಚಂದ್ರರಾಜನು ಹಯ ಶಾಸ್ತ್ರಜ್ಞನೆಂದು ತಿಳಿಯುತ್ತದೆ. ಅಭಿನವಚಂದ್ರ ಎಂಬ ಹೆಸರನ್ನು ನೋಡಿದರೆ

ಹಿಂದೆ ಒಬ್ಬ ಚಂದ್ರನು ಹಯಶಾಸ್ತ್ರವನ್ನು ಬರೆದಂತೆ ಊಹಿಸುವುದಕ್ಕೆ ಅವಕಾಶ ವಿದೆ. ಆದುದರಿಂದ ಈ ಕವಿ ಒಂದು ಹಯಶಾಸ್ತ್ರವನ್ನೂ ಬರೆದಿರಬಹುದು. ಇವನ ಇತರ ಗ್ರಂಥಗಳು ಆವುವೂ ದೊರೆತಿಲ್ಲ.

ಇವನು 'ವಿಪ್ರಕುಲಲಲಾಮಂ' 'ದ್ವಿಜಾಂಭೋಧಿರಾಜಂ' 'ಮನು ಮುನೀಂದ್ರಾಚಾರಂ' ಎಂದು ಹೇಳಿಕೊಂಡಿರುವುದರಿಂದ ಬ್ರಾಹ್ಮಣನೆಂಬುದು ವ್ಯಕ್ತವಾಗುತ್ತದೆ. ಇವನು ವಾಜಿಗೋತ್ರದವನು 'ಸುರಂಜಿತಧರಾಧೀಶಂ' ಎಂಬುದರಿಂದ ರಾಜರ ಅನುಗ್ರಹಕ್ಕೆ ಪಾತ್ರನಾಗಿದ್ದಂತೆ ತಿಳಿಯುತ್ತದೆ. ಈತನಿಗೆ ಶ್ರೀಕವಿತಾಮಹಿಮಾರ್ಣವ, ಪ್ರತ್ಯಕ್ಷಕಂದರ್ಪ, ಅಬ್ಜಾನನಚಂದ್ರ ಎಂಬ ಬಿರುದುಗಳು ಇದ್ದಂತೆ ತೋರುತ್ತದೆ. ಚಾಳುಕ್ಯರಾಜ ಜಯಸಿಂಹದೇವನ ಮಹಾಸಾಮಂತನಾದ ಮಾಚನು ತನಗೆ ಪೋಷಕನೆಂದು ಹೇಳಿಕೊಂಡಿದ್ದಾನೆ. ಇವನನ್ನು ಅನೇಕ ಪದ್ಯಗಳಲ್ಲಿ ಸ್ತುತಿಸಿದ್ದಾನೆ.

ಸಾಗರ 109 ನೆಯ ಶಾಸನದಲ್ಲಿ (1079) ಚಾಳುಕ್ಯರಾಜನಾದ ವಿಕ್ರಮಾದಿತ್ಯನ ತಮ್ಮ ಜಯಸಿಂಹನ ಕೈಯಕೆಳಗೆ ಒಬ್ಬ ಮಾಚಿರಾಜನು ಸಾಂತಳಿಗೆ ನಾಡ ರಾಜಾಧ್ಯಕ್ಷನ ಪದವಿಯನ್ನು ವಹಿಸಿದ್ದನೆಂದು ಹೇಳಿದೆ

**ಮಲ್ಲಿಕಾರ್ಜುನನು** (ಸು. 1245) ಈ ಕವಿಯು ಗ್ರಂಥದಿಂದ ಪದ್ಯಗಳನ್ನು ಉದ್ಧರಿಸಿ ಬರೆದಿರುವುದರಿಂದ ಇವನು 1245 ಕ್ಕೆ ಹಿಂದೆ ಇದ್ದನೆಂಬುದು ನಿಸ್ಸಂದೇಹವಾಗಿದೆ. 1245 ಕ್ಕೆ ಹಿಂದೆ ಜಯಸಿಂಹನೆಂಬ ರಾಜನ ಕೈಯ ಕೆಳಗೆ ಮಾಚಿರಾಜನೆಂಬವನಿದ್ದುದು 1079 ರಲ್ಲಿ ಮಾತ್ರವೆಂದು ತಿಳಿಯಬರುವುದರಿಂದ ಶಾಸನೋಕ್ತನಾದ ಈ ಮಾಚಿರಾಜನೇ ಕವಿಯ ಪೋಷಕನಾಗಿರಬೇಕು. ಆದುದರಿಂದ ಕವಿಯ ಕಾಲವು ಸುಮಾರು 1079 ಆಗಬಹುದು. **ದುರ್ಗಸಿಂಹನು** (ಸು. 1145) **ಅಸಗ ಮನಸಿಜರ** ಜತೆಯಲ್ಲಿ ಒಬ್ಬ **ಚಂದ್ರ** [ಭಟ್ಟ] ನನ್ನು ಹೇಳಿದ್ದಾನೆ. ಇವನೇ ಆಗಿರಬಹುದೋ ಏನೋ ತಿಳಿಯದು. ಅಭಿನವದಶಕುಮಾರ **ಚರಿತವನ್ನು** ಬರೆದ **ಚೌಂಡರಸನು** (ಸು. 1300) 'ಸುಗಮಾರ್ಥಸ್ಫುಟಶಬ್ದ ಸುಂದರಕಿರಣಾಕ್ಷಾಂದ್ರನಂ ಚಂದ್ರನಂ' ಎಂದು ಇವನನ್ನು ಸ್ತುತಿಸಿದ್ದಾನೆ.

ಈತನು ತನಗೆ ಹಿಂದೆ ಇದ್ದ ಆವ ಕನ್ನಡಕವಿಗಳ ಹೆಸರನ್ನೂ ಹೇಳಿಲ್ಲ.

ತನ್ನ ಕವಿತಾಚಾತುರಿಯನ್ನೂ ಗುಣಗಳನ್ನೂ ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ:—

ಸಕಲಕಲಾಗಮಕೋವಿದ। ನಕಲಂಕಚರಿತ್ರನುದ್ಯಗುಣಗಣಮಣಿ ವಿ।
ಪ್ರಕುಲಲಲಾಮಂ ಲೋಕ। ಪ್ರಕಟೀಕೃತಕೀರ್ತಿ ನೆಗಚ್ಪಿ ಚಂದ್ರಕವೀಂದ್ರಂ॥

ಅಸತೀಸಂಕುಲದೂರನಂ ಮನುಮುನೀಂದ್ರಾಚಾರನಂ ಶ್ರೀವಧೂ।
ಲಸಿತೋರಸ್ಸ್ಥಲನಂ ವಿಶುದ್ಧಕುಲನಂ ದಿಕ್ಕಾಮಿನೀಗೇಯಮಾ॥
ನಸಮುದ್ಭಾಸಿತವರ್ಣನಂ ಬಹುಕಲಾಸಂಪೂರ್ಣನಂ ಧಾತ್ರಿ ಬ।
ಣ್ಣಿಸುಗುಂ ಚಂದ್ರನನರ್ಥಿಕೀರ್ತಿಪರಪುಷ್ಪಾನಂದಮಾಕಂದನಂ॥

ಪರಹಿತನೆಂಬ ಸತ್ಯನಿಧಿಯೆಂಬ ಮಹಾಕವಿಯೆಂಬ ದೀನಭಾ।
ಸುರಸುರಭೂಜನೆಂಬ ಗುಣಿಯೆಂಬ ಗುಣಾಸ್ಪದನೆಂಬ ಲೋಕದೊಳ್॥
ಪರಹಿತನೆಂಬ ಸತ್ಯನಿಧಿಯೆಂಬ ಮಹಾಕವಿಯೆಂಬ ದೀನಭಾ।
ಸುರಸುರಭೂಜನೆಂಬ ಗುಣಿಯೆಂಬ ವೆಜರ್ ನರರಾರ್ ಧರಿತ್ರಿಯೊಳ್॥

ಶಿವಶೀಲಂ ಪುಣ್ಯಶೀಲಂ ವಿಬುಧವಿಬುಧಪಾಲಂ ಗುಣಾಸೀಕರಾಲಂ।
ಸುವಿನೀತಂ ಬಂಧುನೀತಂ ನುಕೃತಸುಕೃತಜಾತಂ ಸುವಿಸ್ತಾರಿಜಾತಂ॥
ಕವಿಭಾವಂ ಸುಪ್ರಭಾವಂ ವಿಶದವಿಶದಭಾವಂ ಮಹಾಭಾವಭಾವಂ।
ಭವತೇಜಂ ಚಂದ್ರರಾಜಂ ಕರುಣಕರುಣರಾಜಂ ದ್ವಿಜಾಂಭೋಧಿರಾಜಂ॥

ಇವನ ಗ್ರಂಥ

## ಮದನತಿಲಕ.

ಇದು ಚಂಪೂಗ್ರಂಥವು. ತನ್ನ ಪೋಷಕನಾದ ಮಾಚಿರಾಜನು ಅವನ ಹೆಂಡತಿಗೆ ಹೇಳಿದ ಕಾಮತತ್ತ್ವವನ್ನು ಈ ಗ್ರಂಥರೂಪವಾಗಿ ಬರೆದಂತೆ—

ಅಗಣಿತಗುಣಮಾಚಿನೃಪಂ। ಮೃಗನಯನೆಗೆ ಪೇಜ್ವ ಕಾಮತತ್ತ್ವಮನಿಂಪಾ।
ಪಗವೊಪವೆ ಪಲವುಛಂದಮೂ। ಳಿಗೆದಂಭೋಜಾಸ್ಯಚಂದ್ರನಭಿನರ್ದಿಸಿದಂ॥

ಎಂಬ ಪದ್ಯದಲ್ಲಿ ಹೇಳುತ್ತಾನೆ. ಗ್ರಂಥದ ಆದಿಭಾಗದಲ್ಲಿ ಈ ಗದ್ಯವಿದೆ :—

ಚಂದ್ರರಾಜಂ ಆಗಮಲಕ್ಷಿಕವಿರೋಧಮುಂ ಕಳೆದು ಸಾರಾಂಶಮುಂ ಕೂಂಡು ಸಲವುಮತಂಗಳನೊಂದುಮಾಡ ಪದಿನೆಂಟಧಿಕರಣಂಗಳಿಂದಲಂಕಾರಾಲಂಕೃತಮಾಗೆ ನಾನಾ ಚ್ಛಂದಮಿನಯ್ನೂಱುಗದ್ಯಪದ್ಯಂಗಳಂ ವಿರುತಮಾಡಿ ಪೇೞ್ದಿಂ.

ಗ್ರಂಥಾವತಾರದಲ್ಲಿ ಕವಿ ಮನ್ಮಥನನ್ನು ಸ್ತುತಿಸಿದ್ದಾನೆ. ಬಳಿಕ ಚಾಳುಕ್ಯ ಜಯಸಿಂಹರಾಜನನ್ನೂ ತನ್ನ ಪೋಷಕನಾದ ಮಾಚನೃಪನನ್ನೂ ವಿಶೇಷವಾಗಿ ಕೊಂಡಾಡಿದ್ದಾನೆ. ತರುವಾಯ ಕಾಮಶಾಸ್ತ್ರವನ್ನು ಬರೆದಿರುವ ಪೂರ್ವಕವಿಗಳ ಹೆಸರನ್ನು ಹೇಳಿ ಅವರಿಗಿಂತ ತಾನು ಅಧಿಕನೆಂದು ಈ ಪದ್ಯಗಳಲ್ಲಿ ಹೇಳುತ್ತಾನೆ:—

ಅನಕಂ ಕುಂಡಲಿ ಬಾಭ್ರುವೀರ್ಯನತಿಲೌಲ್ಯಂ ಕೂಬರಂ ಕಾತರಂ।
ಕೆನಿಪಂ ಭದ್ರನರೂಪಿ ಕೇತು ಕುವಿಟಂ ವಾತ್ಸ್ಯಾಯನಂ ಗೋಣಿಕಾ।
ಜನಯಂ ನಿರ್ದಯನಲ್ಪವೀರ್ಯನೆನಿಪಂ ಚಾರಾಯಣಂ ಜತ್ತಕಂ।
ತನುಹೀನಂ ದೊರೆಯಲ್ಲರಿಂತಿನಿಬರುಂ ಪ್ರತ್ಯಕ್ಷಕಂದರ್ಪನೊಳ್॥

ಎನೆ ನೆಗಟ್ದಿ ಚಂದ್ರನಬ್ಜಾ । ನನಚಂದ್ರಂ ಶ್ವೇತಕೇತುಜತ್ತಕವಾತ್ಸ್ಯಾ ।
ಯನಪಾಂಚಾಳಾದಿಮಹಾ । ಮುನಿಮತಮನೆ ಪೇಟ್ದಿನೆಸೆಯೆ ಪೊಸಗನ್ನಡದಿಂ ॥

ತನ್ನ ಕಾವ್ಯದ ಉತ್ಕೃಷ್ಟತೆಯನ್ನು ಹೀಗೆ ಹೇಳುತ್ತಾನೆ:—

ಅಧರೀಕೃತವಾತ್ಸ್ಯಾಯನ । ಮಧಿಗತಕವಿಮಾರ್ಗಮಖಿಳನಾನಾಚ್ಛಂದ ।
ಕ್ಕಧಿಕೃತಮಿದೆಂದು ಪೇಳ್ದುದು । ಬುಧಮುಂಡಲಿ ನಚ್ಚಿಮೆಚ್ಚಿ ಚಂದ್ರನಕೃತಿಯಂ ॥
ಕೃತಿಪತಿ ಮಾಚನೃಪಂ ಕವಿ । ಪತಿ ಚಂದ್ರಂ ತಿರ್ದಿ ಬರೆದವಂ ಬ್ರಹ್ಮಂ ಸ ।
ತ್ಕೃತಿ ಮದನತಿಲಕಮಿದು ಕಾ । ಮತತ್ತ್ವಮೆನೆ ನಚ್ಚಿ ಮೆಚ್ಚಿ ಪೊಗಟಿದರೊಳರೇ ॥

ಅಧಿಕರಣಗಳ ಕೊನೆಯಲ್ಲಿ—

ಇದು ಚಂದ್ರರಾಜವಿರಚಿತಮಪ್ಪ ಮದನತಿಲಕದೊಳ್

ಎಂದಿದೆ.

ಇವನ ಗ್ರಂಥವು ಚಿಕ್ಕದಾದರೂ ಪ್ರತಿಪದ್ಯವೂ ಶಬ್ದಾಲಂಕಾರಚಿತ್ರಿತವಾಗಿಯೂ ರಚನಾಕೌಶಲವ್ಯಂಜಕವಾಗಿಯೂ ಇದೆ. ಅನೇಕ ಪದ್ಯಗಳು ಚಕ್ರಾದಿಬಂಧರೂಪವಾಗಿವೆ. ಕೆಲವು ಪದ್ಯಗಳಿಂದ ನಾನಾಬಂಧಗಳೂ ವೃತ್ತಗಳೂ ಉದ್ಧಾರವಾಗುತ್ತವೆ. ಕನ್ನಡದಲ್ಲಿ ಇಂಥ ಚಿತ್ರಕವಿತೆ ವಿಶೇಷವಾಗಿಲ್ಲ. ಚಿತ್ರಕವಿತೆಯಾದರೂ ಈ ಗ್ರಂಥದಲ್ಲಿ ಲಾಲಿತ್ಯದಲ್ಲಿಯೂ ರಸಪುಷ್ಟಿಯಲ್ಲಿಯೂ ಅವ ವಿಧವಾದ ಕೊರತೆಯೂ ಕಾಣಬರುವುದಿಲ್ಲ. ಈತನ ಕವಿತಾಶಕ್ತಿ ಆಶ್ಚರ್ಯವಹವಾಗಿದೆ. ಈ ಗ್ರಂಥವನ್ನು "ಪೇಟ್ದಿನೆಸೆಯೆ ಪೊಸಗನ್ನಡದಿಂ" ಎಂಬುದರಿಂದ ಈತನು ಆ ಕಾಲದ ಹಳಗನ್ನಡವನ್ನು ಬಿಟ್ಟು ಹೊಸಗನ್ನಡದಲ್ಲಿ ಬರೆದಿರಬಹುದು.

ತನ್ನ ಪೋಷಕನನ್ನೂ ತನ್ನನ್ನೂ ಸ್ತುತಿಸುವ ಕೆಲವು ಪದ್ಯಗಳು ಚಿತ್ರಬಂಧರೂಪವಾಗಿವೆ. ಅವುಗಳನ್ನು ಇತರಪದ್ಯಗಳೊಡನೆ ಉದ್ಧರಿಸಿ ಬರೆಯುತ್ತೇವೆ:

ಜಯಸಿಂಹ

ಬಳವದ್ವಿಷ್ಟಮವರ್ತಿ ಕಂ(ಟ) ಕವಿರೋವೃತ್ತಿರ್ತಿ ಸಂಯುಗ್ರಿತಾ ।
ಖಿಳಪೃಥ್ವೀವರಲಾಭಪೂರ್ತಿ ಮಗಧೋರ್ವೀಪಾಳಲೀಲಾರ್ತಿ ಕುಂ ॥
ತಳವೇಶೋದ್ಭವಚಕ್ರವರ್ತಿ ಭುವನಪ್ರೋತ್ತೀರ್ತಿ ಲುಪ್ತಪ್ರಜಾ ।
ಕುಳವಿತ್ಯರ್ತಿ ಮುಕುಂದಮೂರ್ತಿ ನೆಗಟ್ಟಂ ಶ್ರೀಕೀರ್ತಿವಿದ್ಯಾಧರಂ ॥ 166 ॥

ಚೋಳಕುಲವಿಳಯಕಾಳಂ । ಕಾಳಮುಖಪ್ರಾಪಿತೋದ್ಧತಾಹಿತಮಾಳಂ ।
ಮಾಳವರಾಜಕಶೂಳಂ । ಶೂಳಾಯುಧಚರಣಕಮಳಭೃಂಗಂ ಸಿಂಗಂ ॥ 167 ॥

## ಮಾಚ

ಮಳಯಾಂಧ್ರಾ ರ್ಬುದಮಾಗಧದ್ರವಿಡವೆಂಗೀವಂಗನೇಪಾಳಕೇ ।
ರಳಪಾಂಚಾಳಕಳಿಂಗಕೊಂಕಣಸುರಾಷ್ಟ್ರಾಭೀಳಕಾಶ್ಮೀರಕೋ ॥
ಸಳಲಂಪಾಕತುರುಷ್ಕಗೌಳಸಕಾಮಾಕ್ಷೀಂದ್ರಕಾಂಭೋಜನಂ ।
ಹಳದೇರಾಧಿಪರಂ ಭಯಂಗೊಳಿಸಿದಂ ವಿಕ್ರಾಂತದಿಂ ಮಾಚಿಗಂ ॥ 168 ॥

ಅಭಿನವಭಗದತ್ತಂ ಭೋಗದೊಳ್ ಚಾರುದತ್ತಂ ।
ಸ್ವಭುಜವಿಜಯಸಾರ್ಥಂ ಖಂಡಿತಾರಾತಿಪಾರ್ಥಂ ॥
ಸುಭಟನಿಕಟಸಾಮಂತಾವತಂಸಂ ಘನತಾಂಸಂ ।
ವಿಭವಜಿತಬಿಡೌಜಂ ಮಾಚಕಾಂತಾಮನೋಜಂ ॥ 169 ॥

ಗತಿ ಮಾರ್ಗಂ ಶ್ರುತಿ ದೇಸೆನುಣ್ಪು ಗಮುಕಂ ಬಂಧಂ ಕ್ರಮಂ ಕೂಕುಳಂ ।
ಕೃತಿಯರ್ಥಂ ಲಯತಾಳಸೌನವಗುಣಂ ಬಣ್ಣಂ ಕ್ರಿಯಾಕಾರಕಂ ॥
ಯತಿ ತಾಳಂ ರಸಭಾವಮಿಂಪಭಿನಯಂ ಪ್ರಾಣಂ ಪದಂ ಛಂದಮಾ ।
ನತಿ ರಾರೀತಮನಿಪ್ಪ ಗೀತದೆಡೆಯೊಳ್ ಮಾಚಂ ಸರೋಜಾಸನಂ ॥ 170 ॥

ಸುರಹಿತನಲ್ಲದೆಯುಂ ತಾಂ । ಸುರಹಿತಕರನರಸನಲ್ಲದರಸಂ ಕಮಳಾ ।
ಕರನಲ್ಲದೆಯುಂ ಕಮಳಾ । ಕರನೆನಿಕುಂ ಮಾಚನೃಪತಿ ವಿಶ್ವಂಭರೆಯೊಳ್ ॥ 171 ॥

## ಚಕ್ರವೃತ್ತಂ

ಗಂಗಾಚಂದ್ರಹಿಮಾಚಲಾಭಯಶಸುತ್ತುಂಗೋಗ್ರರಾಜಪ್ರಭಂ ।
ಗಂಗೋದ್ಯತ್ಸಿಥರಶಕ್ರನಪ್ರಿಯತನೋವಿತ್ರಂ ದಿವಾಕೃತ್ಸಮು ॥
ತ್ತುಂಗಾರಾಜತಸದ್ವಿಸನ್ನಯವಿದಂ ದುರ್ಗಾಭ್ರವಾತದ್ರವಂ ।
ವಂಗಾಂಗಾಂಧ್ರಕಳಿಂಗವಾರ್ಜತುಹಿನಾಭಂ ಮಾಚಿಮಂತ್ರೋದ್ಭವಂ ॥ 172 ॥

[ಈ ಶ್ಲೋಕವು ತಪ್ಪಾಗಿದೆ. ಇದರಿಂದ ಚಂದ್ರರಾಜಕೃತ–ಚಕ್ರವೃತ್ತವಿದು–ಮಾಚಸ್ತೋತ್ರ–ಎಂದು ಉದ್ಧಾರವಾಗುತ್ತದೆ.]

ಅನೇಕವೃತ್ತಗಳೂ ಬಂಧಗಳೂ ಉದ್ಧಾರವಾಗುವ ಪದ್ಯ:—

ಆಂಗನ್ಯಪಾಯತಿತುಂಗಭುಜಂ ಕಲಿಯಂಗಿತಶಿಕ್ಷಿತನಿಂದುಯಶಂ ।
ಪಿಂಗಜದೊಂಗತಭೃಂಗಕಚಂ ಕಲಿ ಮಂಗಳಲಕ್ಷಣಯುಕ್ತನಿವಂ ॥
ಸಂಗರಕೇಸರಿ ಸಂಗಗುಣಂ ಬಲಿ ಭೃಂಗರದಕ್ಷನುವಾಯುತನುಂ ।
ಸಂಗದಸನ್ಮತಿ ರಂಗವಹಂ ಸಲೆ ಭಂಗಿಯನೀಕ್ಷಿಸಿ ಮಾಚನೃಪಂ ॥ 173 ॥

"ಇದುವೆ ಎಡೆಯಕ್ಕರಮುಂ, ಕಿಱಿಯಕ್ಕರಮುಂ, ಚೌಪದಿಕೆಯುಂ, ಎರಡು ಷಟ್ಪದಿಯುಂ, ತ್ರಿಪದೋನ್ನತಿಯುಂ, ವಲ್ಲಮುಖಿಯುಂ, ತ್ರೋಟಕಮುಂ, ಚಿತ್ರ

ಪದಕಮುಂ, ಕಮಳಮುಂ, ಚಂದ್ರಿಕೆಯುಂ, ಇಂದುಮುಖಿಯುಂ, ಮೊದಲಾಗೆ 84 ವೃತ್ತಮುಂ, ಪಾದಮುರಜಬಂಧಮುಂ, ಗೋಮೂತ್ರಿಕೆಯುಮಕ್ಕುಂ"

ಈ ಶ್ಲೋಕದಲ್ಲಿ ಅಲ್ಲಲ್ಲಿ ತಪ್ಪುಗಳಿವೆ. ಕೆಲವು ವೃತ್ತಗಳನ್ನು ಉದ್ಧಾರ ಮಾಡಿ ಬರೆಯುತ್ತೇವೆ:—

(1) ಕಮಳವೃತ್ತಂ

ಶಿಕ್ಷಿತನಿಂದುಯಶಂ । ಲಕ್ಷ್ಮಣಯುಕ್ತನಿವಂ ।
ದಕ್ಷನುವಾಯುತನುಂ । ನೀಕ್ಷಿಸಮಾಚನೃಪಂ ॥

(2) ತೋಟಕಂ

ಕಲಿಯುಂಗಿತಶಿಕ್ಷಿತನಿಂದುಯಶಂ । ಕಲಿ ಮುಂಗಳಲಕ್ಷ್ಮಣಯುಕ್ತನಿವಂ ॥
ಬಲಿ ಭೃಂಗರದಕ್ಷನುವಾಯುತನುಂ । ಸಲೆ ಭೃಂಗಿಯನೀಕ್ಷಿಸಿ ಮಾಚನೃಪಂ ॥

(3) ಸೌಂದರಂ

ತುಂಗಭುಜಂ । ಭೃಂಗಕಚಂ । ಸಂಗಗುಣಂ । ರಂಗವಹಂ ॥

(4) ಚಿತ್ರಪದಂ

ಅಂಗನೃಪಾಯತಿತುಂಗಭುಜಂ । ಪಿಂಗಜದೊಂಗತಭೃಂಗಕಚಂ ।
ಸಂಗರಕೇಸರಿಸಂಗಗುಣಂ । ಸಂಗದಸನ್ಮತಿರಂಗವಹಂ ॥

(5) 'ಅಂಗಿತಶಿಕ್ಷಿತ' ಎಂದು ಆರಂಭಿಸಿದರೂ ಇದೇ ವೃತ್ತವಾಗುತ್ತದೆ

(6) ತ್ರಿಪದೋನ್ನತಿ

ಪೂರ್ವಾರ್ಧವೂ ನಾಲ್ಕನೆಯ ಪಾದವೂ ಮೇಲಣ ಚಿತ್ರಪದದಂತೆಯೇ. ಮೂರನೆಯ ಪಾದವು ಮಾತ್ರ

"ಸಂಗರಕೇಸರಿಸಂಗಗುಣಂ ಬಲಿ" ಎಂದಾಗುತ್ತದೆ.

(7) ಮತ್ತು (8) ಶರಷಟ್ಪದಿ

ಪೂರ್ವಾರ್ಧವೂ ಉತ್ತರಾರ್ಧವೂ ಒಂದೊಂದು ಶರಷಟ್ಪದಿಯ ಪದ್ಯವಾಗುತ್ತದೆ.

(9) ಜಗದ್ವಂದಿತಂ

ತುಂಗಭುಜಂ ಕಲಿಯುಂಗಿತಶಿಕ್ಷಿತನಿಂದುಯಶಂ ।
ಭೃಂಗಕಚಂ—ಇತ್ಯಾದಿ.

(10) ಈಗಿರುವ ಪದ್ಯವೇ ಪನಮುಂಜರಿಯಾಗುತ್ತದೆ.

## ಕವಿವಿಷಯ.

### ಶ್ಲೇಷೆಯ ಕಂದಂಗಳ್.

ವೃತಗೋಮಂ ಸಕಲಕಲಾ । ನ್ವಿತನಮೃತಮಯಂ ವಿಶುದ್ಧವಿಧ್ಯಂ ಪರಿವೇ ।
ಷ್ಟಿತಸನ್ನಿವಹಂ ಕುವಲಯ । ಹಿತನೆನೆ ಸಂಪೂರ್ಣಚಂದ್ರನೊಳ್ ದೊರೆಚಂದ್ರಂ ॥174॥

ಒಸೆದಿನಿಸಂ ವಿಬುಧರ್ ಸೇ । ವಿಸೆಸೋಡಶಕಳೆಗೆ ಕುಂದುವಾಚಂದ್ರನೀ ।
ನೆಸೆದನೊ ನಾಲ್ಕಡಿ ವಿಗಿಲೆನೆ । ವಿಸುಪ ಚತುಷ್ಪಷ್ಟಿಕಲೆಗಳಿಂ ಕವಿಚಂದ್ರಂ ॥ 175 ॥

ಇದು ಪಣವಬಂಧಮುಂ ಗೋಮೂತ್ರಿಕೆಯುಮಕ್ಕುಂ:—

ಅಜಿಜೈತ್ರಕರಂ ಧೀರಂ । ರಾಜಿತಂ ಚಂದ್ರನೂರ್ಜಿತಂ ।
ವಾಜಿಗೋತ್ರಂ ಸ್ಥಿರಂ ಧೀರಂ । ಪೂಜಿತಂ ಚಂದ್ರನೂರ್ಜಿತಂ ॥ 176 ॥

### ಅರ್ಧಪಾದಗತಪ್ರತ್ಯಾಗತವಿಷಮಚಕ್ರಪದ್ಯಂ.

ಸಾಹಸಾಮದಯಾಹಾಸ । ಸಹಾಯದರಿತೋಪರಿ ।
ನಿಹತೋರಯಸೋಹೇಮ । ಮಹಿಸೋಯಮಸಾಹಸಂ ॥ 177 ॥

ಇದುವೆ ಮುರಜಪಣವಬಂಧಮುಂ ಗೋಮೂತ್ರಿಕೆ ಮೊದಲಾದ ಪಲವುಂತೆಱದ ಬಂಧಮುಂ ಜತ್ತರಟ್ಟಮೆಂಬೆರಡು ವೃತ್ತಮುಮಕ್ಕುಂ :—

ಕವಿರಾಜಸಮಾನಮ್ಯ । ಕವಿರಾಜಸಮಾನಸಂ ।
ಕವಿರಾಜಸಮಾನಂ ತಾಂ । ಕವಿರಾಜಸಮಾನಕಂ ॥ 178 ॥

ಇದು ಆದ್ಯಂತಪ್ರಾಸಯಮಕಮುಂ ಜತ್ತರಟ್ಟಮುಮಕ್ಕುಂ:—

ಪೂಜಿತವಿಬುಧಸಮಾಜಂ । ಯೋಜಿತಸಮವಿದ್ಯನಮಲಗುಣಕವಿರಾಜಂ ।
ರಾಜಿತರೂಪಮನೋಜಂ । ವಾಜಿತಮೋರಹಿತನಂಬುಜ . . . ತೇಜಂ ॥ 179 ॥

## ಇತರ ಪದ್ಯಗಳು.

### ಏಕಾಕ್ಷರಿ

ನಿನ್ನನ್ನಂ ನಿನ್ನನ್ನೆಂ । ನಿನಾನ್ನಾನುನನನ್ನ ನಿನ್ನನನ್ನೆಂ ನಿನ್ನಂ ।
ನಿನ್ನನ್ನಾಂ ನಾಂ ನೀನೆನೆ । ನಿನ್ನೆನ್ನಂ ನನ್ನಿ ನಿನ್ನನಾನನೆನ್ನೆಂ ॥ 180 ॥

### ದ್ವ್ಯಕ್ಷರಿ

ದನು-ಂದನನಿನನಂದನ । ನಿನನಂದನನಿನನನಂದನನ ನಂದನನಂ ।
ದಿನನಂದನನೆಂದನುದಿನ । ದನನಿನನಾನನ್ನನಾದೆನಾಂದಂ ನಿನ್ನಂ ॥ 181 ॥

### ತ್ರ್ಯಕ್ಷರಿ

ದಾನನಂದನಂ ಮಾನಾ । ಮಾನಂಮಾನಿನೀಮನೋಮುದನಂ ।
ಮಾನಿನಂ ನಾನಾನಾಮನಂದನನುದ್ಯಾಮನಿನಿದಂದಾಮಂ (?) ॥ 182 ॥

### ಅಕಾರಾಂತಕಂದಂ

ಹರಹಾಸಧವಳಕಮಳಾ । ಕರಶರಧವಳಾಭ್ರಹಾರತಾರಾಚಳಪಾಂ ।
ಡರಪತ್ರಖಂಡತಾರಾಂ । ಬರರಂಗಾಚಳಶಶಾಂಕಶಂಕರವಲಯಂ ॥ 183 ॥

### ನಿರೋಷ್ಠ್ಯಕಂದಂ

### ಇದುವೆ ಜತ್ತರಟ್ಟ ಮುಮುಕ್ಕುಂ.

ಖರಕಿರಣನ ತನಯನ ಖರ । ಕಿರಣನ ದಶರಥನ ನಳನ ಜಲಜಜನ ಧರಾ ।
ವರನ ಶಶಧರನ ಶಕ್ರನ । ಚರಿತೆಯೆ ನಿಜಚರಿತವೆನಿಸಿದಾತನನೊಲ್ಗುಂ ॥ 184 ॥

### ಓಕಾರಾಂತಪದ್ಯ

ಓವೋ ವೋಲ್ವೋ ತೋವೋ ವೋವೋ ।
ವೋವೋ ನೋವೋ ವೋಯ್ವೋಳ್ಗೋಲೋ ॥
ಕೋವೋಲ್ವೋಯ್ವೋ ಸೋವೊಂಕೊಳ್ಗುಳ್ ।
ಗೋವೊಂ ನೊಂದೊಂ ನೋರ್ವೋ ವೋರ್ವೋ ॥ 185 ॥

### ಓಕಾರಾಂತಮುಮೇಕಾರಾಂತಮುಮೊಡಗೂಡಿದುದರ್ಕೆ

ಒಲೆದೊರೆವೊಳಿವೊರೆಲೆತೊತೂ ವೋಗೆಂಬೊಡೆವೋಡೆಂದೊಡೆವೋ ಬಿಳ್ಪಲೆಗೊಲೆವೋ
ಪೆಳ್ಪೊಡೆವೊರೆವೊರೆವೋಕೆಂದೊಳ್ಗೆ ಕೊಳಿಸೋಡೊವೊಂಬೆಳ್ಪೊಂ ॥ 186 ॥

### ವೇಶ್ಯಾಚರ್ಯ

ಕಿಚ್ಚಂ ನೀರಂ ಪೊಕ್ಕುಂ । ನಿಚ್ಚಂ ಕಾಲ್ಚಿಡಿದು ಮತ್ತೆ ಲಲ್ಲೈಸಿ ಕರಂ ।
ಬಿಚ್ಚನೆ ಸುಯ್ದುಂ ನಂಬಿಸ । ರಚ್ಚರಿಯೇ ವೇಶ್ಯೆಯರ್ಕಳಿಂತಪ್ಪರುಮಂ ॥ 187 ॥

---

## ಕರ್ಪರಸ. 1084.

ಈತನು ಧಾರ್ವಾಡಜಿಲ್ಲೆಯಲ್ಲಿಯ ನರುಗುಂದದ ಸಮೀಪದಲ್ಲಿರುವ ಹದಳಿಯ ಶಾಸನವನ್ನು[1] ಬರೆವಂತೆ ಆ ಶಾಸನದ ಕೊನೆಯ—

ಶ್ರೀಮನ್ಮಹಾಸಂಧಿವಿಗ್ರಹಿ ದಂಡನಾಯಕಂ ಕಾಳಿದಾಸಭಟ್ಟರಳಿಯಂ ಕವಿತಾ
ಮನೋಹರಂ ಕವಿತಳರ ಕರ್ಪರಸಂ ಬರೆದಂ

---

1. *Ind. Ant.*, XIII, 91.

ಎಂಬ ವಾಕ್ಯದಿಂದ ತಿಳಿಯುತ್ತದೆ. ಈ ಶಾಸನವು 1084 ರಲ್ಲಿ ಬರೆದುದು. ಇದರಲ್ಲಿ ಚಾಳುಕ್ಯರಾಜನಾದ ವಿಕ್ರಮಾದಿತ್ಯನ (1076—1126) ಕಾಲದಲ್ಲಿ ದೇವಶಕ್ತಿಪಂಡಿತನ ಶಿಷ್ಯನಾದ ಜ್ಞಾನಶಕ್ತಿಪಂಡಿತನು ಹದಳಿಯ 400 ಬ್ರಾಹ್ಮಣರ ಮುಂದೆ ಗೌರೀಶ್ವರದೇವರಿಗೆ ದತ್ತಿಯನ್ನು ಬಿಟ್ಟಂತೆ ಹೇಳಿದೆ.

ಈ ಶಾಸನದಲ್ಲಿರುವ ಪದ್ಯಗಳನ್ನು ನೋಡಿದರೆ ಈತನು ಒಳ್ಳೆಯ ಕವಿಯಾಗಿದ್ದಂತೆ ತೋರುತ್ತದೆ. ಇವನು ಬ್ರಾಹ್ಮಣಕವಿ. ಇವನ ತಂದೆ ಚಂದ್ರ, ತಾಯಿ ಚಾಮಾಂಬಿಕೆ, ಮಾವ ಕಾಳಿದಾಸಭಟ್ಟ—ಎಂಬ ಅಂಶಗಳು—

ಜನಕಂ ವಿಪ್ರಕುಲಾಂಬರದ್ಯುಮಣಿ ಚಂದ್ರಂ ತಾಯ್ ಸದಾಚಾರವ ।
ರ್ತಿನಿ ಚಾಮಾಂಬಿಕೆ ನಿರ್ಮಲೋರ್ಜಿತಯಶಂ ಶ್ರೀಕಾಳಿದಾಸಂ ಧರಾ ॥
ವಿನುತಂ ಮಾವನುಮಾವರಂ ಸಕಲಲೋಕಾರಾಧ್ಯನಾರಾಧ್ಯನೆಂ ।
ದು ನಿತಾಂತಂ ಧರೆ ಬಣ್ಣಿಕುಂ ಬುಧಸಮೂಹಕ್ಕರ್ಪನಂ ಕರ್ಪನಂ ॥

ಎಂಬ ಪದ್ಯದಿಂದ ತಿಳಿಯುತ್ತವೆ. ಮದನತಿಲಕವನ್ನು ಬರೆದ ಚಂದ್ರರಾಜನು (ಸು. 1079) ಈ ಕವಿಯ ತಂದೆಯಾಗಿದ್ದರೂ ಇರಬಹುದು.

ಈ ಶಾಸನದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ :—

## ಹದಳಿಯ ನಾನೂರು ಬ್ರಾಹ್ಮಣರು.

ಶರಣೆನೆ ಕಾವರೀವರೆರೆದರ್ಥಿಗೆ ವಿಪ್ರಕುಲಪ್ರದೀಪರೀ ।
ಶ್ವರಚರಣಾಬ್ಜಭೃಂಗರಧಿಕರ್ ಸಲೆ ಧರ್ಮದ ಮೇರುಗಳ್ ದಿಶಾಂ ॥
ತರಯರರುತ ಮರ್ ಗುಣಿಗಣಾಗ್ರಣಿಗಳ್ ಸರಸೀಜಜಾತನೊಳ್ ।
ದೊರೆಯೆನೆ ಲೋಕದೊಳ್ ನೆಗಲ್ದಿ ಪಲ್ಬಿಲ ಸದ್ವಿಜರೇಂ ಕೃತಾರ್ಥರೋ ॥188॥

## ಜ್ಞಾನಶಕ್ತಿಪಂಡಿತ.

ವರವೇದಾಗಮಶಾಸ್ತ್ರದ । ಪರಿಣತಿಯೊಳಜಂಗೆ ತಾಮೆ ದೊರೆ ಪದ್ಮಭವಂ ।
ದೊರೆ ತಮಗೆಪೆಜಿರೊಳಾವನೊ।ದೊರೆ ವಿಪ್ರಕುಲಪ್ರದೀಪರೊಳ್ ವಸುಮತಿಯೊಳ್ ॥189॥

ಸ್ಮರಪರಿತಾಪಮಂ ತೊಜಿದನಶ್ರಮದಿಂ ವಿಷಯಂಗಳೆಲ್ಲಮಂ ।
ಹರಿಸಿದನೆಂದು ಲೋಕಮನಿತುಂ ನೆಜಿ ಕೀರ್ತಿಪುದಿಂತಿದೇಕೆ ವಾ ॥
ಕ್ತರುಣಿಗೆ ಸೋಲ್ತು ಮುಕ್ತವಧುಗಾಟಿಪನೆಂದೊಡೆ ಜ್ಞಾನಶಕ್ತಿದೇ ।
ವರ ಚರಿತಂ ಚರಾಚರದೊಳಂ ಬಗೆವಂಗೆ ವಿಚಿತ್ರನೆಲ್ಲಿಯುಂ ॥ 190 ॥

ಸೆರಗಿಲ್ಲದೀವ ದಾನದೊ । ಳರವಿಂದಪ್ರಿಯತನೂಜನುಂ ಶುಚಿತನದೊಳ್ ।
ಮರುತಾತ್ಮಜನೆಂಬಿವರೊಳ್ । ದೊರೆ ಪಂಡಿತಪುಂಡರೀಕವನಮಾರ್ತಂಡಂ ॥ 191 ॥

---

## ದಾಮರಾಜ. 1085.

ಈತನು ಶಿವಮೊಗ್ಗ 10 ನೆಯ ಶಾಸನವನ್ನು ಬರೆದಂತೆ ಆ ಶಾಸನದ ಕೊನೆಯ "ಸಂಧಿವಿಗ್ರಹಿ ದಾಮರಾಜಂ ಸಾಸನಗಬ್ಬಮಂ ಪೇಟ್ಟು ಬರೆದಂ" ಎಂಬ ವಾಕ್ಯದಿಂದ ತಿಳಿಯುತ್ತದೆ. ಇವನು ಜೈನಕವಿ; ಆರಲ್ಲಿ ಸಂಧಿವಿಗ್ರಹಿಯಾಗಿದ್ದನೋ ತಿಳಿಯದು. ಈ ಶಾಸನದಲ್ಲಿ ಚಾಳುಕ್ಯರಾಜನಾದ ವಿಕ್ರಮಾದಿತ್ಯನ (1076—1126) ಸಾಮಂತ ಗಂಗಪೆರ್ಮಾನಡಿಯ ಮಹಾಪ್ರಧಾನ ಹೆಗ್ಗಡೆ ನೊಕ್ಕಯ್ಯನು ಬಸದಿಗಳನ್ನು ಕಟ್ಟಿಸಿದಂತೆಯೂ ಈ ಬಸದಿಗಳಿಗಾಗಿ ಗಂಗಪೆರ್ಮಾನಡಿ 1084 ರಲ್ಲಿ ವೃತ್ತಿಗಳನ್ನು ಬಿಟ್ಟುಕೊಟ್ಟಂತೆಯೂ ಹೇಳಿದೆ. ದಾಮರಾಜನು ಈ ನೊಕ್ಕಯ್ಯನ ಆಶ್ರಿತನಾಗಿದ್ದಂತೆ ತೋರುತ್ತದೆ: ಅವನನ್ನು ಬಹಳವಾಗಿ ಸ್ತುತಿಸಿದ್ದಾನೆ. ಶಾಸನದ ಪದ್ಯಗಳನ್ನು ನೋಡಿದರೆ ಇವನು ಒಳ್ಳೆಯ ಕವಿಯೆಂಬುದಕ್ಕೆ ಅಡ್ಡಿಯಿಲ್ಲ.

ಈ ಶಾಸನದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

### ಗಂಗಪೆರ್ಮಾನಡಿ.

ನುಡಿದುದೆ ನಸ್ಸ ಮಾಡಿದುದೆ ಶಾಸನಮಿತ್ತುದೆ ರಾಮರೇಸು ಮಾ ।
ರ್ಪಿಡಿದುದೆ ವಜ್ರಲೇಪಮುಱಿದೀಟ್ಟುದೆ ಮೃತ್ಯು ಪರೋಪಕಾರದೊಳ್ ॥
ನಡೆದುದೆ ಬಟ್ಟೆ ಷಡ್ಗುಣಮೆ ಮೆಯ್ಯನೆ ಧರ್ಮದೊಳೊಂದಿ ನಿನ್ನವೋಲ್ ।
ನಡೆವ ನೃಪೇಂದ್ರನಾವನಖಿಳಾವನಿಯೊಳ್ ಕಲಿಗಂಗಭೂಪತೀ ॥ 192 ॥

ಸ್ಥಿರನೇ ಮೇರುಗಿರೀಂದ್ರದೊಳ್ ಸೆಣಸುವಂ ಗಂಭೀರನೇ ವಾರ್ಧಿಯೊಳ್ ।
ಪುರುಡಿಪ್ಪಂ ಕಲಿಯೇ ಸುರೇಂದ್ರಸುತನಂ ಮೆಚ್ಚಂ ಮಹಾದಾನಿಯೇ ॥
ಸುರಭೂಜಕ್ಕೊಜ್ಜಿಗಟ್ಟವಂ ಚದುರನೇ ಪಾಂಚಾಳನಿಂ ಮಿಕ್ಕನೆಂ ।
ದಿರದೀಗಳ್ ಧರೆ ಬಣ್ಣಿಕುಂ ರಣಜಯಪ್ರೋತ್ತುಂಗನಂ ಗಂಗನಂ ॥ 193 ॥

### ನೊಕ್ಕ.

ಪಾರ್ಥಿವರಂ ನಿರಾಕರಿಪ ದಾನಗುಣೋಕ್ತಿಯಿನರ್ಥಿಗರ್ಥಮಂ ।
ಪ್ರಾರ್ಥಿಸದೀವ ಕಾರಣದೆ ಪೆರ್ಗಡೆ ನೊಕ್ಕಣನೀಪರೋಪಕಾ ॥
ರಾರ್ಥಮಿದಂ ಶರೀರಮೆನಿಪೊಂದು ಪುರಾಣವಚೋಕ್ತಿಯಿಂದಮು ।
ಪ್ರಾರ್ಥಿತದಾನದಿಂದೆ ನೆಗಟ್ಪ್ವನ್ನತಿ ಸಂದುದಿಳಾತಳಾಗ್ರದೊಳ್ ॥ 194 ॥

ಮಾರ್ಗದೊಳೊಳ್ಪಿನೊಳ್ ಗುಣದೊಳಣ್ಮೆಸೊಳಾರ್ಪಿನೊಳಾದದೊಂದು ಪೆಂ ।
ಪಾರ್ಗಮಸಾಧ್ಯಮಿಂತಿಱಿವ ಕಾವ ಗುಣಂಗಳೆ ಸಾಜಮೆಂದು ಕೇ ॥
ಳ್ದರ್ಗೆಡೆಗೊಂಡು ಜೀಂಕರಿಸೆ ರಾಜಗುಣಕ್ಕಳವಟ್ಟ ನೊಕ್ಕನಂ ।
ಪೆರ್ಗಡೆಯೆಂಬುದೇ ಧುರಕೆ ಮಾರ್ಗೆಡೆಯಂ ಪತಿಗೇಕಸಾಧನಂ ॥ 195 ॥

ಪೆರ್ಗಡೆತನಮಂ ಬಲ್ಲರ್ । ಖಟ್ಗಿಮನಣಮಱಿಯರುಟ್ಟಿದವಾತ್ಯರ್ ನೊಕ್ಕಂ ।
ಪೆರ್ಗಡೆ ಗಂಗರ ಮನೆಯೊಳ್ । ವಾರ್ಗೆಡೆ ಸಂಗರದ ಮೊನೆಯೊಳನೆ ಮೆಚ್ಚದರಾರ್ ॥196॥

---

## ಸೇನಬೋವ ಮಾದಿನುಯ್ಯ. 1098.

ಮದ್ರಾಸ್ ಪ್ರಾಚ್ಯಕೋಶಾಲಯದಲ್ಲಿ ನಮಗೆ ದೊರೆತ 1098 ರಲ್ಲಿ ಬರೆದ ಒಂದು ಶಾಸನದಲ್ಲಿ ಈತನನ್ನು "ಕಾವ್ಯನಾಟಕಕಾರ" ಎಂದು ವಿಶೇಷಿಸಿ ಹೇಳಿದೆ. ಇವನು ಆವ ಗ್ರಂಥಗಳನ್ನು ಬರೆದಿದ್ದಾನೆಯೋ ತಿಳಿಯದು.

---

## ಶಂಖವರ್ಮ. ಸು. 1100.

ಈ ಕವಿಯ ಹೆಸರು **ಎರಡನೆಯ ನಾಗವರ್ಮನ** (ಸು. 1145) ಕಾವ್ಯಾವಲೋಕನದಲ್ಲಿ 'ಅಧ್ವನ್' ಶಬ್ದದ ಪ್ರಯೋಗವನ್ನು ತೋರಿಸುವಾಗ—

ಪ್ರಣುತಗುಣರೆನಿಪ ವಿಬುಧಾ । ಗ್ರಣಿಗಳ್ ಕೆಯ್ಕೊಂಡು ಪೊಗಟ್ಪಿ ಸಲೆ ನೆಗಟ್ಟುವು ಧಾ ।
ರಿಣಿಯೊಳಗೆ ನಾಗವರ್ಮನ । ಗುಣವರ್ಮನ ಶಂಖವರ್ಮನಧ್ವಾನಂಗಳ್ ॥

ಎಂಬ ಪದ್ಯದಲ್ಲಿ ಹೇಳಿದೆ. ಇದರಿಂದ ಈತನು ಈ ನಾಗವರ್ಮನಿಗೆ ಹಿಂದೆ ಇದ್ದನೆಂಬುದು ವ್ಯಕ್ತವಾಗುತ್ತದೆ; ಅಲ್ಲದೆ ಲಕ್ಷಣಗ್ರಂಥಕಾರನಾಗಿದ್ದಂತೆಯೂ ತಿಳಿಯುತ್ತದೆ. ಈ ಕವಿಯನ್ನು **ರುದ್ರಭಟ್ಟನು** (ಸು. 1180) 'ಸಂದ ಶಂಖವರ್ಮನ ಬಗೆ' ಎಂದು ಹೊಗಳಿರುವುದರಿಂದ ಈತನು ಪ್ರಸಿದ್ಧಕವಿಯಾಗಿಯೂ ಇದ್ದಿರಬೇಕು. ಈತನ ಕಾಲವು ಸುಮಾರು 1100 ಆಗಿರಬಹುದೆಂದು ಊಹಿಸುತ್ತೇವೆ; ಇನ್ನೂ ಹಿಂದೆ ಇದ್ದಿದ್ದರೂ ಇರಬಹುದು. ಇವನ ಗ್ರಂಥಗಳು ಆವುವೂ ನಮಗೆ ದೊರೆತಿಲ್ಲ.

---

## ನಾಗಚಂದ್ರ. ಸು. 1100.

ಈತನು ರಾಮಚಂದ್ರಚರಿತಪುರಾಣ (ಪಂಪರಾಮಾಯಣ), **ಮಲ್ಲಿನಾಥ ಪುರಾಣ** ಎಂಬ ಎರಡು ಗ್ರಂಥಗಳನ್ನು ಬರೆದಿದ್ದಾನೆ. **ಜಿನಮುನಿತನಯ, ಜಿನಾಕ್ಷರಮಾಲೆ** ಮೊದಲಾದ ಇತರ ಗ್ರಂಥಗಳನ್ನೂ ಕೂಡ ಈತನು ರಚಿಸಿದ್ದಾನೆ ಎಂದು **ದೇವಚಂದ್ರನು** ರಾಜಾವಳೀಕಥೆಯಲ್ಲಿ (1838) ಹೇಳುತ್ತಾನೆ. ಈಗ ಆಚ್ಚಾಗಿರುವ ಜಿನಮುನಿತನಯ ಎಂಬ ಗ್ರಂಥವು ಈ ಕವಿಯಿಂದ ರಚಿತವಾದುದೆಂಬ ಪ್ರತೀತಿಯಿದೆ. ಆದರೆ ಈ ಗ್ರಂಥದ ರಚನೆಯನ್ನು ನೋಡಿದರೆ ಇದಕ್ಕೂ ನಾಗಚಂದ್ರನ ಗ್ರಂಥಗಳಿಗೂ ಆವ ವಿಧವಾದ ಹೋಲಿಕೆಯೂ ಇರುವಂತೆ ತೋರ

ವುದಿಲ್ಲ. ಆಧುನಿಕನಾದ ಅವನೋ ಒಬ್ಬ ಸಾಧಾರಣಕವಿಯಿಂದ ಈ ಗ್ರಂಥವು ರಚಿತವಾಗಿದೆ ಎಂಬುದರಲ್ಲಿ ಸಂಶಯವಿಲ್ಲ. ನಮಗೆ ಸಿಕ್ಕಿದ ಈ ಗ್ರಂಥದ ಓಲೆಯ ಪ್ರತಿಯಲ್ಲಿ—

ಕೇಳುವ ಭವ್ಯರ ಪುಣ್ಯಂ । ಪೇಳ್ವುವ ಕವಿನೂತನಾಗಚಂದ್ರನ ಭಾಗ್ಯಂ ।
ಪಾಲಿಪ ಜಿನೇಂದ್ರಧರ್ಮವ । ನೇಳಿಸದಿರು ಮೋಕ್ಷಗಾಮಿ ಜಿನಮುನಿತನಯಾ ॥

ಎಂಬ ಪದ್ಯವು ಇದೆ. 'ಕವಿನೂತನಾಗಚಂದ್ರ' ಎಂಬುದರಿಂದ ಜಿನಮುನಿತನಯವನ್ನು ಬರೆದವನು 'ಅಭಿನವನಾಗಚಂದ್ರ' ಎಂದು ಹೆಸರಿಟ್ಟುಕೊಂಡಿದ್ದ ಹಾಗೆ ತೋರುತ್ತದೆ. 'ಕವಿನೂತನಾಗಚಂದ್ರ' ಎಂಬುದನ್ನು 'ಕವಿನಿನುತನಾಗಚಂದ್ರ' ಎಂದು ಅಚ್ಚುಹಾಕಿರುವುದರಿಂದ ಈ ಗ್ರಂಥವು ನಾಗಚಂದ್ರಕೃತವೆಂಬ ಭ್ರಮೆಗೆ ಅವಕಾಶವುಂಟಾದಂತೆ ಕಾಣುತ್ತದೆ. ಜಿನಾಕ್ಷರಮಾಲೆ ಎಂಬ ಒಂದು ಗ್ರಂಥವು ಪೊನ್ನನಿಂದ ರಚಿತವಾಗಿದೆ ಎಂದು ಹಿಂದೆಯೇ ತಿಳಿಸಿದ್ದೇವೆ.[1] ನಾಗಚಂದ್ರನೂ ಒಂದು ಜಿನಾಕ್ಷರಮಾಲೆಯನ್ನು ರಚಿಸಿದ್ದಾನೆಯೋ ಅಥವಾ ದೇವಚಂದ್ರನೇ ಭ್ರಮಿಸಿದ್ದಾನೆಯೋ ತಿಳಿಯದು.

ಈ ಕವಿಯ ದೇಶ, ಕಾಲ, ವಂಶ ಮುಂತಾದುದಾವುದೂ ಈತನ ಗ್ರಂಥಗಳಿಂದ ತಿಳಿವುದಿಲ್ಲ. ಆದರೆ ಮಲ್ಲಿನಾಥಪುರಾಣದಲ್ಲಿಯ

ನಿಜವಿಭವೋದಯಂ ಸಫಲಮಾಯ್ತೆನೆ ಮಲ್ಲಿಜನೇಂದ್ರಗೇಹಮಂ ।
ವಿಜಯಪುರಕ್ಕಲಂಕರಣಮಾಗಿರೆ ಮಾಡಿಸಿ ತಚ್ಚರಿತ್ರಮಂ ॥
ಸುಜನಸಭಾವತಂಸಮೆನೆ ಪೇಳ್ದುದಿತೋದಿತಮಾಗೆ ಮಾಡಿದಂ ।
ನಿಜಕವಿತಾಗುಣೋದಯಮುದೆಂಬಿನವಾಕೃತಿ ನಾಗಚಂದ್ರನಾ ॥

ಎಂಬ ಪದ್ಯದಲ್ಲಿ ಈತನು ವಿಜಯಪುರದಲ್ಲಿ ಮಲ್ಲಿನಾಥಜಿನಾಲಯವನ್ನು ಕಟ್ಟಿಸಿ ಮಲ್ಲಿನಾಥಪುರಾಣವನ್ನು ಬರೆದಂತೆ ಹೇಳುತ್ತಾನೆ. ಈ ವಿಜಯಪುರವು ಈಗಿನ ಬಿಜಾಪುರವಾಗಿರಬಹುದು; ಇದೇ ಇವನ ಊರಾಗಿದ್ದರೂ ಇರಬಹುದು. "ನಿಜವಿಭವೋದಯಂ ಸಫಲಮಾಯ್ತು" ಎಂಬುದರಿಂದ ಇವನು ಐಶ್ವರ್ಯವಂತನಾಗಿ ಉನ್ನತಸ್ಥಿತಿಯಲ್ಲಿದ್ದಂತೆ ತಿಳಿಯುತ್ತದೆ. ಈತನಿಗೆ **ಅಭಿನವಪಂಪ** ಎಂಬ ಹೆಸರೂ ಉಂಟು; ಮತ್ತು ಇವನ ಗ್ರಂಥಗಳಿಂದ—ಭಾರತೀಕರ್ಣಪೂರ; ಕವಿತಾಮನೋಹರ; ಸಾಹಿತ್ಯವಿದ್ಯಾಧರ; ಚತುರಕವಿಜನಾಸ್ಥಾನರತ್ನಪ್ರದೀಪ; ಸಾಹಿತ್ಯಸರ್ವಜ್ಞ; ಸೂಕ್ತಿಮುಕ್ತಾವತಂಸ ಎಂಬ ಬಿರುದುಗಳೂ ಇದ್ದಂತೆ ತಿಳಿಯಬರುತ್ತದೆ. ಈತನ ಗುರು ಬಾಲಚಂದ್ರಮುನಿ.

1. ಪುಟ 39.

**ಈ ಕವಿಯ ಕಾಲವನ್ನು ನಿರ್ಣಯಿಸುವುದಕ್ಕಾಗಿ ಇಲ್ಲಿ ಸ್ವಲ್ಪ ವಿಚಾರ ಮಾಡುತ್ತೇವೆ:—**

(1) ಎರಡನೆಯ ನಾಗವರ್ಮನು (ಸು. 1145) ಭಾಷಾಭೂಷಣದಲ್ಲಿ 'ದ್ವಿತೀಯಾರ್ಥೇ ಚತುರ್ಥೀ'[1] ಎಂಬ ಸೂತ್ರದ ಕೆಳಗೆ "ಬಹುತಾಪಕ್ಕೆ ಬಿಗುರ್ತು ವಿಷ್ಣು ಪಡೆದಂ ಮತ್ಸ್ಯಾವತಾರಕ್ಕೆ" ಎಂಬ ಪದ್ಯಭಾಗವನ್ನು ಪಂಪರಾಮಾಯಣದಿಂದ[2] ತೆಗೆದು ಉದಾಹರಿಸಿದ್ದಾನೆ. ಇದರಿಂದ ನಾಗಚಂದ್ರನು ನಾಗವರ್ಮನ ಕಾಲಕ್ಕೆ ಹಿಂದೆಯೇ ಪ್ರಸಿದ್ಧನಾಗಿದ್ದಿರಬೇಕೆಂಬುದು ವ್ಯಕ್ತವಾಗುತ್ತದೆ; ಒಂದು ತಲೆಯಾದರೂ ಹಿಂದೆ ಇದ್ದಿರಬೇಕೆಂಬುದರಲ್ಲಿ ಸಂಶಯವಿಲ್ಲ. (2) ದುರ್ಗಸಿಂಹನು (ಸು. 1145) ಪೂರ್ವಕವಿಗಳ ಗೋಷ್ಠಿಯಲ್ಲಿ ಸೇರಿಸಿ ಸ್ತುತಿಸಿರುವ ಕರ್ಣಪಾರ್ಯನು ತನ್ನ ನೇಮಿನಾಥಪುರಾಣದಲ್ಲಿಯ—

ಅದ್ಯತನನಾಗಿಯುಂ ನೆಗ। ಲ್ದಾದ್ಯರ ದೊರೆಯೆನಿಸಿ ಮೆಱೆದು ಸಾಹಿತ್ಯಕಳಾ।
ಪ್ರಧ್ಯತೆಯಿನೇದನಾನಿರ। ವದ್ಯಗುಣಂ ಸಂದ ನಾಗಚಂದ್ರಕವೀಂದ್ರಂ ॥

ಎಂಬ ಪದ್ಯದಲ್ಲಿ ನಾಗಚಂದ್ರನನ್ನು ಹೊಗಳಿದ್ದಾನೆ. "ಅದ್ಯತನನಾಗಿಯುಂ" ಎಂಬುದರಿಂದ ಕರ್ಣಪಾರ್ಯನಿಗೆ (ಸು. 1140) ಸುಮಾರು ಒಂದು ತಲೆ ಹಿಂದೆ ಇದ್ದಿರಬಹುದು. (3) ಮೇಘಚಂದ್ರನನ್ನು ಸ್ತುತಿಸುವ "ಮುನಿನಾಥಂ ದಶಧರ್ಮಧಾರಿ"[3] ಎಂಬ ಪಂಪರಾಮಾಯಣಪದ್ಯವು, ಆ ಮೇಘಚಂದ್ರನು 1115 ರಲ್ಲಿ ಗತಿಸಿದುದಾಗಿ ತಿಳಿಸುವ ಸುಮಾರು ಅದೇ ವರ್ಷದಲ್ಲಿ ಬರೆದ ಶ್ರವಣಬೆಳ್ಗೊಳದ 127 ನೆಯ ಶಾಸನದಲ್ಲಿ ದೊರೆಯುತ್ತದೆ. ಇದರಿಂದ ಪಂಪರಾಮಾಯಣವು ಈ ಶಾಸನ ಹುಟ್ಟಿದ 1115 ಕ್ಕೆ ಹಿಂದೆ ಇದ್ದುದು ವ್ಯಕ್ತವಾಗುತ್ತದೆ. (4) ಮದ್ರಾಸ್ ಪ್ರಾಚ್ಯಕೋಶಾಲಯದಲ್ಲಿ ನಮಗೆ ದೊರೆತ, 1105 ರಲ್ಲಿ ಬರೆದ, ಒಂದು ಶಾಸನದಲ್ಲಿ ಒಬ್ಬ ಪಂಪಕವಿಯು ಹೆಸರು ದೊರೆಯುತ್ತದೆ. ಈ ಕವಿ ನಾಗಚಂದ್ರನೇ ಆಗಿರಬಹುದು.

**ಈ ಕಾರಣಗಳಿಂದ ನಾಗಚಂದ್ರನು ಸುಮಾರು 1100 ರಲ್ಲಿ ಇದ್ದಿರಬೇಕೆಂದು ಊಹಿಸುತ್ತೇವೆ.**

ಕಂತಿ[4] ಯೆಂಬ ಪ್ರಖ್ಯಾತಳಾದ ಒಬ್ಬ ಕಬ್ಬಿಗಿತಿ ದ್ವಾರಸಮುದ್ರದ ಬಲ್ಲಾಳರಾಯನ ಸಭೆಯಲ್ಲಿ ಪಂಡಿತೆಯಾಗಿದ್ದಂತೆ ತಿಳಿಯುತ್ತದೆ. ಕಂತಿಹಂಪನ ಸಮಸ್ಯೆಗಳೆಂದು ವಾಡಿಕೆಯಾಗಿ ಕರೆಯಲ್ಪಡುವ ಕೆಲವು ಪದ್ಯಗಳಿಂದ ಈ ಕಂತಿಗೂ ನಾಗಚಂದ್ರನಿಗೂ ಸಂವಾದಗಳು ನಡೆದಂತೆ ತಿಳಿಯಬರುತ್ತಿದೆ.[5] ಇದೇ ವಿಷಯವಾಗಿ ದೇವಚಂದ್ರನೂ ಹೀಗೆ ಬರೆದಿದ್ದಾನೆ:—'ದೋರರಾಯಂ ಆಸ್ಥಾನದ ಕನ್ನಡ ಸಂಸ್ಕೃತಮಹಾಕವಿಗಧಿಪಂ ಪಂಪಕವಿಯಂ ಕಳುಹಲ್ ಆತಂ ಬಂದು ವಿದ್ಯೆಯಿಂ ಸಾವಿರಪ್ರಶ್ನೆಯಂ ಕೇಳಲ್ ಆಕೆ (ಕಂತಿ)

1. ಸೂತ್ರ 93 2. ಆಶ್ವಾಸ 7, ಪದ್ಯ 98 3 ಆಶ್ವಾಸ 1, ಪದ್ಯ 20. 4. ಕಂತಿಯ ಚರಿತೆಯನ್ನು ನೋಡಿ. 5. "ಉಸಿರೆಂದಾಗುಣಕಂತಿಕೆ। ಗಸಮಸಮಸ್ಯೆಯನೆ ಕೊಟ್ಟನಭಿನವಪಂಪಂ"

ಉತ್ತರಮಂ ಕುಡಲ್ ಆಕೆಯಂ ರಾಜಸಭೆಗೆಯ್ದೆ ವಿದ್ವತ್ಸಮೂಹದೊಳಧಿಕಕವೀಶ್ವರಿಯಾಗಿರ್ದಳ್.' ಈ ಹೇಳಿಕೆ ನಿಜವಾಗಿದ್ದಪಕ್ಷದಲ್ಲಿ ನಾಗಚಂದ್ರನು 1100 ರಿಂದ 1106 ರವರೆಗೆ ಆಳಿದ ಹೊಯ್ಸಳರಾಜನಾದ 1ನೆಯ ಬಲ್ಲಾಳನ ಆಸ್ಥಾನಪಂಡಿತನಾಗಿದ್ದಿರಬೇಕು.

ಮೆ॥ ರೈಸ್—ನಾಗಚಂದ್ರನ ಗುರುವಾದ ಬಾಲಚಂದ್ರನು ಸುಜನೋತ್ತಂಸನ ಸಮಕಾಲದವನೆಂದೂ ಪಾಳ್ಕೃತತ್ರಯವ್ಯಾಖ್ಯಾಕಾರನೆಂದೂ ಸುಮಾರು 1140ರಲ್ಲಿ ಇದ್ದನೆಂದೂ ಹೇಳುತ್ತಾರೆ[1]; ಆಲ್ಲದೆ ಮೆ॥ ಪಾಠಕರು "ಮೇಘಚಂದ್ರನು ಪೂಜ್ಯಪಾದಕೃತವಾದ ಸಮಾಧಿಶತಕಕ್ಕೆ 'ವಿತತಯಶೋನಿಧಿ ಪಂಪನ ಸುತಂಗೆ ತಿಳಿವಂತು ಪೊಚ್ಚ ಪೊಸಗನ್ನಡದಿಂ' ಒಂದು ವ್ಯಾಖ್ಯಾನವನ್ನು 1148 ರಲ್ಲಿ ಬರೆದಿದ್ದಾನೆ" ಎಂದು ಹೇಳುವ[2] ಆಧಾರದಿಂದ ನಾಗಚಂದ್ರನು ಸುಮಾರು 1145 ರಲ್ಲಿ ಇದ್ದಿರಬಹುದೆಂದೂ ಹೇಳುತ್ತಾರೆ. ಆದರೆ ಬಾಲಚಂದ್ರ ಎಂಬ ಹೆಸರುಳ್ಳ ಇಬ್ಬರು ಜೈನಗುರುಗಳು ಇದ್ದಂತೆ ಶಾಸನಗಳಿಂದ ತಿಳಿಯಬರುತ್ತದೆ. ಸುಜನೋತ್ತಂಸನ ಸಮಕಾಲದವನೂ ಪಾಳ್ಕೃತತ್ರಯವ್ಯಾಖ್ಯಾಕಾರನೂ ಆದ ಬಾಲಚಂದ್ರನಿಗೆ ಅಧ್ಯಾತ್ಮಿ ಬಾಲಚಂದ್ರ[3] ಎಂದು ಹೆಸರು. ಈತನು 1176 ರಲ್ಲಿ ಗತಿಸಿದ ನಯಕೀರ್ತಿಯ ಶಿಷ್ಯನೆಂದೂ[4] 1181 ರಲ್ಲಿ ಬದುಕಿದ್ದನೆಂದೂ[5] ಪುಸ್ತಕಗಚ್ಛದವನೆಂದೂ[6] ತಿಳಿಯುತ್ತದೆ. ಇವನು ಬೇರೆ ನಾಗಚಂದ್ರನ ಗುರುವಾಗಿರಲಾರನು. ಮತ್ತೊಬ್ಬ ಬಾಲಚಂದ್ರಮುನಿ 1115 ರಲ್ಲಿ ಗತಿಸಿದ ಮೇಘಚಂದ್ರನ ಸಧರ್ಮನೆಂದೂ[7] ವಕ್ರಗಚ್ಛಕ್ಕೆ ಸೇರಿದವನೆಂದೂ ತಿಳಿಯುತ್ತದೆ. ಹಿಂದೆ ಹೇಳಿದ ನಯಕೀರ್ತಿಯ ತಂದೆಯಾದ ಗುಣಚಂದ್ರನೂ ಈ ಮೇಘಚಂದ್ರನ ಸಧರ್ಮನೆಂದು ಶ. ಬಿ. 66 ನೆಯ ಶಾಸನದಿಂದ ತಿಳಿಯುತ್ತದೆ. ಇದರಿಂದ ವಕ್ರಗಚ್ಛದ ಬಾಲಚಂದ್ರನೂ ಮೇಘಚಂದ್ರನೂ ನಯಕೀರ್ತಿಯ ತಂದೆಯಾದ ಗುಣಚಂದ್ರನೂ ಸಮಕಾಲದವರೆಂದು ವ್ಯಕ್ತವಾಗುತ್ತದೆ. ಆದುದರಿಂದ ನಯಕೀರ್ತಿಯ ಶಿಷ್ಯನಾದ ಪುಸ್ತಕಗಚ್ಛದ ಅಧ್ಯಾತ್ಮಿ ಬಾಲಚಂದ್ರನಿಗೂ ನಯಕೀರ್ತಿಯ ತಂದೆಯ ಸಧರ್ಮನಾದ ವಕ್ರಗಚ್ಛದ ಬಾಲಚಂದ್ರನಿಗೂ ಆವ ಸಂಬಂಧವೂ ಇಲ್ಲ. ಈ ವಕ್ರಗಚ್ಛದ ಬಾಲಚಂದ್ರನೇ ನಾಗಚಂದ್ರನ ಗುರು. ಈತನ ವಿಷಯವಾಗಿ ಸುಮಾರು 1100 ರಲ್ಲಿ ಬರೆದ ಶ. ಬಿ. 69 ನೆಯ ಶಾಸನದಲ್ಲಿ—

ಸಿದ್ಧಾನ್ತಾದ್ಯಖಿಳಾಗಮಾರ್ಥನಿಪುಣವ್ಯಾಖ್ಯಾನಸಂಶುದ್ಧಿಯಿಂ।
ಶುದ್ಧಾಧ್ಯಾತ್ಮಕತತ್ತ್ವನಿರ್ಣಯವಚೋವಿನ್ಯಾಸದಿಂ ಪ್ರೌಢಿಸಂ॥
ಬದ್ಧವ್ಯಾಕರಣಾರ್ಥಶಾಸ್ತ್ರಭರತಾಲಂಕಾರಸಾಹಿತ್ಯದಿಂ।
ರಾದ್ಧಾಂತೋತ್ತಮಬಾಳಚಂದ್ರಮುನಿಯಂತಾರ್ ಖ್ಯಾತರೀಲೋಕದೊಳ್॥

---

1. ಶಬ್ದಾನುಶಾಸನ, ಉಪೋದ್ಘಾತ, ಪುಟ 33 2. *Ind. Ant.*, XII, 20. 3. ಇವನ ಚರಿತವನ್ನು ನೋಡಿ 4. ಶ. ಬಿ. ಶಾ. 66. 5. ಶ. ಬಿ. ಶಾ. 327. 6. ಶ. ಬಿ. ಶಾ. 254. 7. ಶ. ಬಿ. ಶಾ. 69.

ಎಂಬ ಪದ್ಯವಿದೆ. ಈತನೂ ಕನ್ನಡಕವಿಯಾಗಿದ್ದಿರಬಹುದು. ನಾಗಚಂದ್ರನು ಸ್ತುತಿಸುವ ಮೇಘಚಂದ್ರನೇ ಬೇರೆ; ಸಮಾಧಿಶತಕವ್ಯಾಖ್ಯಾಕಾರನಾದ ಮೇಘಚಂದ್ರನೇ ಬೇರೆ. ಮೊದಲನೆಯವನು 1115 ರಲ್ಲಿ ಗತಿಸಿದುದಾಗಿ ಹೇಳುವ ಶ್ರ. ಬಿ. 127 ನೆಯ ಶಾಸನದಲ್ಲಿಯೇ ಅವನ ಸ್ತುತಿರೂಪವಾದ "ಮುನಿನಾಥಂ ದಶಧರ್ಮಧಾರಿ" ಎಂಬ ಪದ್ಯವು ಇದೆ. ಎರಡನೆಯವನು ಸಮಾಧಿಶತಕವ್ಯಾಖ್ಯೆಯನ್ನು 1148 ರಲ್ಲಿ ಬರೆದುದಾಗಿ ತಿಳಿಯಬರುವುದರಿಂದ ಈತನಿಗೂ 1115 ರಲ್ಲಿ ಗತಿಸಿದವನಿಗೂ ಏನೇನೂ ಸಂಬಂಧವಿಲ್ಲ. ಈತನು ಶ್ರ. ಬಿ. 66ನೆಯ ಶಾಸನದಲ್ಲಿ ನಯಕೀರ್ತಿಯ ಶಿಷ್ಯನೆಂದು ಹೇಳಿರುವ ಮೇಘಚಂದ್ರನಾಗಿರಬಹುದು. "ವಿತತಯಶೋನಿಧಿ ಪಂಪನ" ಎಂಬುದು ನಾಗಚಂದ್ರನಿಗೆಯೇ ಅನ್ವಯಿಸುವ ಪಕ್ಷದಲ್ಲಿ ಅವನ ಕಾಲವಾದಮೇಲೆ ಅವನ ಮಗನಿಗಾಗಿ ಎರಡನೆಯ ಮೇಘಚಂದ್ರನು ಸಮಾಧಿಶತಕವ್ಯಾಖ್ಯಾನವನ್ನು ಬರೆದಿರಬಹುದು.

ನಾಗಚಂದ್ರನು ಸ್ತುತಿಸುವ ವೀರಣಂದಿಸೈದ್ಧಾಂತಿಕನು ಸಮಾಧಿಶತಕವ್ಯಾಖ್ಯಾಕಾರನಾದ ಮೇಘಚಂದ್ರನ ಮಗನೆಂದು ಮೆ॥ ಪಾರಕರು ಅಭಿಪ್ರಾಯಪಡುತ್ತಾರೆ.[1] ಆದರೆ ಈತನು ಮೊದಲನೆಯ ಮೇಘಚಂದ್ರನ ಮಗನೆಂಬುದು ಶ್ರ. ಬಿ. 140 ನೆಯ ಶಾಸನದಿಂದ ವ್ಯಕ್ತವಾಗುತ್ತದೆ. ನಾಗಚಂದ್ರನು ಸ್ತುತಿಸುವ ಶುಭಕೀರ್ತಿ, ನಾಗಚಂದ್ರನ ಗುರುವಾದ ಬಾಲಚಂದ್ರನ ಮಗನೆಂದು ಅದೇ ಶಾಸನದಿಂದಲೇ ತಿಳಿಯುತ್ತದೆ. ಈ ಕಾರಣಗಳಿಂದ ಕವಿ ತನ್ನ ಗ್ರಂಥಗಳಲ್ಲಿ ಸ್ತುತಿಸುವ ಮೊದಲನೆಯ ಮೇಘಚಂದ್ರನೂ ಅವನ ಮಗ ವೀರಣಂದಿಸಿದ್ಧಾಂತಿಯೂ ತನ್ನ ಗುರು ಬಾಲಚಂದ್ರನೂ ಇವನ ಮಗ ಶುಭಕೀರ್ತಿಯೂ ಕವಿಯ ಸಮಕಾಲದವರೆಂದು ಹೇಳಬಹುದು; ಶ್ರುತಕೀರ್ತಿಯೂ ಸಮಕಾಲದವನಾಗಿರಬಹುದು.

ಈ ಕವಿಯನ್ನು **ಕರ್ಣಪಾರ್ಯ** (ಸು. 1140), **ದುರ್ಗಸಿಂಹ** (ಸು. 1145), **ಪಾರ್ಶ್ವ** (1205), **ಜನ್ನ** (1209), **ಮಧುರ** (ಸು. 1385), **ಮಂಗರಸ** (1508) ಮೊದಲಾದವರು ಸ್ತುತಿಸಿದ್ದಾರೆ:—

ಮಾರ್ಗದ್ವಯಪರಿಣತಕವಿ । ಮಾರ್ಗಮನೋಹಾರಿಯಾದುದೆಂದಖಿಳಬುಧರ್ । ನಿರ್ಗರ್ವರಾಗಿ ಪಂಪನ । ಗೀರ್ಗುಂಫದ ಪೆಂಪನಾಗಳುಂ ಬಣ್ಣಿಸುವರ್ ॥

**ದುರ್ಗಸಿಂಹ.**

ಇಂಪೆಸೆಯೆ ವಿಪಂಚಿಯ ದನಿ । ಯುಂ ಪೊಂಲ್ತಿರೆ ಸುಕರಸರಸಸೂಕ್ತಿವಿಲಾಸಂ । ಪಂಪನೆ ನುಡಿವಂ....।.....ಬಲ್ಗೆಯ್ಕೆ ಕಳಕಂಠನವೋಲ್ ॥

**ಪಾರ್ಶ್ವ.**

ಘಳಿಲನೆ ವಿಬುಧರ್ ತುಷ್ಟಿಯ । ನೊಳಕೆಯ್ವು ಮನಃಸ್ಪಸಾದಮುಂಪಡೆವುದಱಿಂ । ಕಳಿಯುಂ ಚಂದ್ರಂ ಕವಿತಾ । ಕಳಿಯುಂ ಕವಿನಾಗಚಂದ್ರನಾಂತುದೆ ಸಫಲಂ ॥

**ಮಧುರ.**

---

1. *Ind. Ant.*, XIV, 14.

* * * * * ರಘು । ಕಾಂತನ ಮಲ್ಲಿತೀರ್ಥಕರ ।
ಸಂತಸದಿಂ ವರ್ಣಿಸಿದ ನಾಗಚಂದ್ರನ । ಸಂತತಮಭಿನುತಿಸುವೆನು ॥

## ಮುಂಗರಸ.

**ಈತನ ಗ್ರಂಥಗಳಿಂದ ನಾಗವರ್ಮ ಕೇಶಿರಾಜಾದಿ: ಲಕ್ಷಣಗ್ರಂಥಕಾರರು ಪದ್ಯಗಳನ್ನು ಉದಾಹರಿಸಿದ್ದಾರೆ.**

**ಈತನು ತನಗೆ ಹಿಂದೆ ಇದ್ದ ಕವಿಗಳಲ್ಲಿ ಪಂಪ, ಪೊನ್ನ. ರನ್ನ ಇವರುಗಳನ್ನು–**

ಮನ್ನಿಸುಗೆ ಕೃತಿಗೆ ಸೌಭಾ । ಗ್ಯೋನ್ನತಿಯಂ ಸುಕವಿಪಂಪನಾದಿಪುರಾಣಂ ।
ಪೊನ್ನನ ಶಾಂತಿಪುರಾಣಂ । ರನ್ನನ ಕೃತಿರತ್ನಮೆನಿಸಿದಜಿತಪುರಾಣಂ ॥

**ಎಂಬ ಪದ್ಯದಲ್ಲಿ ಹೇಳಿದ್ದಾನೆ.**

**ತನ್ನ ಕವಿತಾಚಾತುರಿಯನ್ನೂ ಗುಣಗಳನ್ನೂ ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ—**

ಪದರಚನೆ ಸಜ್ಜನಶ್ರವ । ಣದೊಳಂಚೆಯ ತುಪ್ಪುಟ್ರಿಂಚೆಯಿಂ ತಿರಿಪಿದವೋಲ್ ।
ಮೃದುವೆನೆ ಪೊಸಬಗೆ ರಸಭಾ । ವದೊಳೋಕುಳಿಯಾಡೆ ಪೇಟ್ರ್ದಿನಭಿನವಪಂಪಂ ॥
ಬಗೆ ಚೀತೋಬಂಧು ಬಂಧಂ ಶ್ರವಣಸಹಚರಂ ಕಾಂತಿ ಕಾಂತಾಕಟಾಕ್ಷಾ ।
ನುಗಮರ್ಥವ್ಯಕ್ತಿ ವಾಣೀಮಣಿಮಯಮುಕುರಂ ಶ್ಲಿಷ್ಟಮಕ್ಲಿಷ್ಟಮಧ್ಯಂ ॥
ಸುಗಮಂ ಭಾವಂ ಪ್ರಸನ್ನಂ ರಸಮನವಧಿ ಮಾಧುರ್ಯಮಾಶ್ಚರ್ಯಮೆಂದೀ ।
ಜಗಮೆಲ್ಲಂ ಮೆಚ್ಚಿ ಪೇಟ್ರ್ದಿಂ ಚತುರಕವಿಜನಾಸ್ಥಾನರತ್ನಪ್ರದೀಪಂ ॥
ಫುಲ್ಲಶರಂ ಬಸಂತಪ ಪುಗಿಲ್ ನೆಜಿರಿಂಗಳ ತಣ್ಪಿಸಿಲ್ ಮುಗು ।
ಳ್ಮಲ್ಲಿಗೆ ಬಂದ ಮಾವಲೆವ ತೆಂಕಣ ಗಾಳಿ ವಿಪಂಚಿಯಾಂಚರಂ ॥
ನಲ್ಲಳ ಲಲ್ಲೆ ಕೋಗಿಲೆಯ ಬಗ್ಗಣೆ ತುಂಬಿಯ ಗೇಯಮೆಂಬಿನಂ ।
ಬಲ್ಲವರಂ ಮನಂಗೊಳಿಸುಗುಂ ಕೃತಿ ಸತ್ಕೃತಿ ನಾಗಚಂದ್ರನಾ ॥
ಜಿನಪತಿಸಭೆಯೊಳ್ ಪೂಜ್ಯಂ । ಮುನಿಪತಿಸಭೆಯೊಳ್ ಪದಾರ್ಥನಿಪುಣಂ ವಿದ್ವ ।
ಜ್ಜನಸಭೆಯೊಳ್ ಮಾನ್ಯಂ ಸ । ಜ್ಜನಸಭೆಯೊಳ್ ಚಾರುಚರಿತನಭಿನವಪಂಪಂ ॥

**ಕುಕವಿಗಳನ್ನು ಈ ಪದ್ಯಗಳಲ್ಲಿ ನಿಂದಿಸುತ್ತಾನೆ :—**

ಆರಯ್ಯದೆ ಸದ್ಭಾವಮ । ನಾರಯ್ದೆ ಪದಪದಾರ್ಥಮಂ ದೆಸೆಬಿದ್ದಂ ।
ನೀರುಡುವಿನಡವಿಯಂತಿರೆ । ನೀರಸಮನೆ ಕೇಳ್ದರಲಸೆ ಪೇಟ್ರ್ದಿಂ ಕವಿಯೀ ॥
ಪೆಱರ ನುಡಿ ಪೆಱರ ಮಾರ್ಗಂ । ಪೆಱರರ್ಥಂ ಪೆಱರ ದೇಸೆ ಪೆಱರೋಜೆಯೆನಲ್ ।
ಪೆಱರ ಬಲ್ಲಿಸಂದು ತನ್ನಂ । ಮೆಱಿವಂ ಕವಿಯಲ್ಲಮಾಟಕಾಱರ ಜೋಹಂ ॥

ಇವನ ಗ್ರಂಥಗಳಲ್ಲಿ—

**1. ರಾಮಚಂದ್ರಚರಿತಪುರಾಣ ಅಥವಾ ಪಂಪರಾಮಾಯಣ.**

ಈ ಗ್ರಂಥವು ಚಂಪೂರೂಪವಾಗಿದೆ. ಇದರಲ್ಲಿ ಜೈನಸಂಪ್ರದಾಯಕ್ಕನು ಸಾರವಾಗಿ ರಾಮಾಯಣದ ಕಥೆ ಹೇಳಲ್ಪಟ್ಟಿದೆ. ಕವಿ—ವಿಪುಳಾಚಲದಲ್ಲಿ ವೀರ ಜಿನಪಾರ್ಶ್ವದಲ್ಲಿ ಗಣಾಗ್ರಣಿ ಗೌತಮನು ಮಗಧಾಧಿಪನಿಗೆ ಹೇಳಿದ ರಾಮಕಥೆಯನ್ನು ವರ್ಣಿಸುತ್ತೇನೆ—ಎಂದು ಹೇಳುತ್ತಾನೆ. ಈ ರಾಮಕಥೆಯ ವಿಷಯವಾಗಿ **ದೇವಚಂದ್ರನು** ತನ್ನ **ರಾಮಕಥಾವತಾರದಲ್ಲಿ** (1797) ಹೀಗೆ ಬರೆದಿದ್ದಾನೆ.—

ಈ ರಾಮಕಥೆಯಂ ಮುನ್ನಂ ಆದಿದೇವನ ಸಮವಸರಣದೊಳ್ ಆದಿಚಕ್ರಿಯಪ್ಪ ಭರತೇಶ್ವರಂಗಂ ಪುರುಪರಮೇಶ್ವರಂ ಮೃದುಮಧುರಶ್ರಾವ್ಯನವ್ಯದಿವ್ಯಭಾಷೆಯಿಂ ನಿರೂಪಿಸಿದುದು, ಪರಂಪರಾತೀರ್ಥಸಂತಾನದಿಂ ಬರೆ, ಪಶ್ಚಿಮತೀರ್ಥಂಕರರಪ್ಪ ಶ್ರೀವೀರವರ್ಧಮಾನಸ್ವಾಮಿ ಸರ್ವಭಾಷಾಸ್ವಭಾವದಿಂ ಶ್ರೇಣಿಕಮಹಾಮಂಡಲೇಶ್ವರಂಗಱುಯೆಪೇಟ್ಟುದುಂ, ಅದು ಅನುಕ್ರಮದಿಂ ಗುರುಪರಂಪರೆಯಿಂ ವ್ಯಕ್ತಮಾಗುತ್ತುಂಬರೆ ಕೂಚಿಭಟ್ಟಾರಕರುಂ ನಂದಿಮುನಿವರರುಂ ಕವಿಪರಮೇಷ್ಠಿಗಳುಂ ರವಿಷೇಣಾರ್ಯರುಂ ವೀರಸೇನಸಿದ್ಧಸೇನರುಂ ಪದ್ಮನಂದೀಶ್ವರುಂ ಗುಣಭದ್ರರುಂ ಸಕಲಕೀರ್ತಿಗಳೆಂದಿವರಾದಿಯಾಗಿ ಪೇಟ್ದುದಂ ಚಾವುಂಡರಾಯ ನಾಗಚಂದ್ರ ಮಾಘಣಂದಿಸಿದ್ಧಾಂತಿ ಕುಮುದೇಂದು ನಯಸೇನಾದಿಗಳ್ ಪುರಾಣದೊಳಂ ರಾಮಚರಿತ್ರದೊಳಂ ಕುಮುದೇಂದುರಾಮಾಯಣದೊಳಂ ಪುಣ್ಯಾಸ್ರವ ಕಥಾಸಾರದೊಳಂ ಪೇೞ್ದರ್.

ಇವರಿಂದ ಗುರುಪರಂಪರಾಗತವಾಗಿ ಉಪದಿಷ್ಟವಾದ ರಾಮಚರಿತೆ ಈ ಗ್ರಂಥದಲ್ಲಿ ಹೇಳಲ್ಪಟ್ಟಿದೆ ಎಂಬುದು ವ್ಯಕ್ತವಾಗುತ್ತದೆ. ಗ್ರಂಥವು 16 ಆಶ್ವಾಸಗಳಾಗಿ ಭಾಗಿಸಲ್ಪಟ್ಟಿದೆ. ಈ ಗ್ರಂಥದ ವಿಷಯವಾಗಿ **ದೇವಚಂದ್ರನು**—

ಶ್ರೀಮೂಲಸಂಘ ಬಲೋತ್ಕಾರಗಣ ಶ್ರೀಮಾಘಣಂದಿಸಿದ್ಧಾಂತಿ ಚಕ್ರವರ್ತಿಸುತ ಚತುರ್ವಿಧಪಾಂಡಿತ್ಯ ಶ್ರೀವಾದಿಕುಮುದಚಂದ್ರಪಂಡಿತದೇವ [1] ರಚಿತರಾಮಾಯಣ ಸಮಾನವಾದ ಶ್ರೀಮದಭಿನವಪಂಪರಚಿತ ರಾಮಾಯಣ.

ಎಂದು ಹೇಳುತ್ತಾನೆ.

ಗ್ರಂಥದ ಉತ್ಕೃಷ್ಟತೆಯನ್ನೂ ತನ್ನ ಕವಿತಾಪ್ರೌಢಿಯನ್ನೂ ಕವಿ ಈ ಪದ್ಯಗಳಲ್ಲಿ ವರ್ಣಿಸಿದ್ದಾನೆ.—

ಪಿರಿದೆನಿಸಿರ್ದ ರಾಮಕಥೆಯಂ ಕಿಱುದಾಗಿರೆ ದೇಸೆ ಮಾರ್ಗಮೆಂ।
ಬೆರಡಱಿಪೂಳಂ ರಸಂಬಡೆದು ಪಂಡಿತಮಂಡಲಿ ಮೆಚ್ಚೆ ನೇರ್ಪುವೆ॥
ತ್ತಿರಲವಿರೋಧಮಾಗೆ ಕೃತಿವೇೞ್ದ ಸತ್ಕವಿ ನಾಗಚಂದ್ರನಂ।
ತಿರೆ ಪೆಱರಾರ್ ಸರಸ್ವತಿ ಕುಡಲ್ ಪಡೆದರ್ ವರಮಂ ಕವೀಶ್ವರರ್

1. ಈತನ ಚರಿತೆಯನ್ನು ನೋಡಿ

ಕೃತವಿದ್ಯರ್ ಸಮುಚಿತ್ತರಾಗಿ ಪದಪಿಂದಾರಯ್ಕೆ ಕರ್ಣಾಟಸಂ ।
ಸ್ಕೃತಕಾವ್ಯಂಗಳೊಳರ್ಥದಿಂ ರಚನೆಯಿಂ ನೇರ್ಪಟ್ಟ ವಿಗ್ಧಚ್ಛಮ ॥
ತ್ಕೃತಿಯಪ್ಪಂತಿರೆ ನಾಗಚಂದ್ರವಿಬುಧಂ ಪೇೞ್ದಿಂದವಿಂದಾದ್ಯರ ।
ದ್ಯತನರ್ ಪೇೞ್ದಭಿರಾಮರಾಮಕಥೆಯೇಂ ಸಯ್ಪಿಂಗಡರ್ಪಕ್ಕುಮೇ ॥

ಗ್ರಂಥಾವತಾರದಲ್ಲಿ ಕವಿ 20 ನೆಯ ತೀರ್ಥಕರನಾದ ಮುನಿಸುವ್ರತನನ್ನು ಸ್ತುತಿಸಿದ್ದಾನೆ. ಬಳಿಕ ಸಿದ್ಧಾದಿಗಳನ್ನೂ ಸರಸ್ವತಿಯನ್ನೂ ಸ್ತುತಿಸಿ ತರುವಾಯ-ಅನುಬದ್ಧಕೇವಲಿಗಳು ಮೊದಲುಗೊಂಡು ವೀರಣಂದಿಸೈದ್ಧಾಂತಿಕನವರೆಗೆ ಗುರುಗಳನ್ನು ಸ್ತುತಿಸಿದ್ದಾನೆ.[1] [ಈ ಗುರುಗಳಲ್ಲಿ ಕೆಲವರನ್ನು ಸ್ತುತಿಸುವ ಈ ಗ್ರಂಥದ ಪದ್ಯಗಳು ಶ್ರ. ಬೆ. ಶಾಸನಗಳಲ್ಲಿ ಅನುವಾದಮಾಡಲ್ಪಟ್ಟಿವೆ.[2]] ಬಳಿಕ ನಾಮ ನಿರ್ದೇಶಮಾಡದೆ ಪೂರ್ವಕವಿಗಳನ್ನು ಸ್ತುತಿಸಿ ಆಮೇಲೆ ಜೈನಸಂಪ್ರದಾಯಕ್ಕನುಸಾರವಾಗಿ—

ಜಗಮುಂ ಯುಗಮುಂ ಮನ್ನಾ । ದಿಗಳಂ ಕಾಲಸ್ವರೂಪಮುಂ ಜಿನರುಂ ಚ ।
ಕ್ಕಿಗಳಂ ಹಲಧರಕೃಷ್ಣಾ । ದಿಗಳಂ ಶ್ರೀರಾಮಚರಿತದೊಳ್ ವರ್ಣಿಸುವೆಂ ॥

ಎಂದು ಪ್ರತಿಜ್ಞೆಮಾಡಿ ಅದೇ ಮೇರೆಗೆ ಹಲಧರಕೃಷ್ಣರವರೆಗೆ ಸೂಚಿತವಾಗಿರುವ ವಿಷಯವನ್ನೆಲ್ಲಾ ಹೇಳಿ ಮೂರನೆಯ ಆಶ್ವಾಸದಲ್ಲಿ ದಶರಥನ ಕಥೆಯನ್ನು ಉಪಕ್ರಮಿಸುತ್ತಾನೆ. ಕೊನೆಯ ಆಶ್ವಾಸದಲ್ಲಿ ಶ್ರೀರಾಮನು ಜಿನದೀಕ್ಷೆಯನ್ನು ಸ್ವೀಕರಿಸಿ ನಿರ್ವಾಣವನ್ನು ಐದಿದಂತೆ ಹೇಳುತ್ತಾನೆ. ಆಶ್ವಾಸಗಳ ಕೊನೆಯಲ್ಲಿ—

ಇದು ಪರಮಜಿನಸಮಯಕುಮುದಿನೀಶರಚ್ಚಂದ್ರಬಾಲಚಂದ್ರಮುನೀಂದ್ರ ಚರಣ ನಖಕಿರಣಚಂದ್ರಿಕಾಚಕೋರಂ ಭಾರತೀಕರ್ಣಪೂರಂ ಶ್ರೀಮದಭಿನವ ಪಂಪವಿರಚಿತಮಪ್ಪ ರಾಮಚಂದ್ರಚರಿತಪುರಾಣದೊಳ್

ಎಂಬ ಗದ್ಯವಿದೆ.

---

1. ಅನುಬದ್ಧಕೇವಲಿಗಳು, ಶ್ರುತಕೇವಲಿಗಳು, ದಶಪೂರ್ವಧರರು, ಏಕಾದಶಾಂಗಧಾರಿಗಳು, ಭೂತಬಲಿ, ಪುಷ್ಪದಂತ, ಜಿನಸೇನ, ವೀರಸೇನ, ಸಮಂತಭದ್ರ, ಕವಿಸರಮೇಷ್ಠಿ, ಪೂಜ್ಯಪಾದ, ಕೊಂಡಕುಂದ, ಅಕಲಂಕ, ವರ್ಧಮಾನಭಟ್ಟಾರಕ, (ಸ್ವಗುರು) ಬಾಲಚಂದ್ರ, (ತತ್ಸಘರ್ಮ) ಮೇಘಚಂದ್ರತ್ರೈವಿದ್ಯ, (ಬಾಲಚಂದ್ರಪುತ್ರ) ಶುಭಕೀರ್ತಿ, ವಾಸುಪೂಜ್ಯ, ಶ್ರುತಕೀರ್ತಿ, (ಮೇಘಚಂದ್ರಪುತ್ರ) ವೀರಣಂದಿ.

2. ಮೇಘಚಂದ್ರನನ್ನು ಸ್ತುತಿಸುವ "ಮುನಿನಾಥಂ ದಶಧರ್ಮಧಾರಿ" (1. 20) ಶ್ರ ಬೆ. ಶಾ. 127 ರಲ್ಲಿ (1115): ಇವನನ್ನೇ ಸ್ತುತಿಸುವ ಈ ಪದ್ಯವೂ "ಮುವತ್ತಾಜುಂಗುಣದಿಂ" (1.19) ಎಂಬ ಪದ್ಯವೂ, ಇವನ ಮಗ ವೀರಣಂದಿಯನ್ನು ಸ್ತುತಿಸುವ "ಗಣಧರರಂ ಶ್ರುತದೊಳ್" (1.26) "ಹರಿಹರಹಿರಣ್ಯಗರ್ಭ" (1. 27) ಎಂಬ ಪದ್ಯಗಳೂ, ಶ್ರ. ಬೆ. ಶಾ. 140 ರಲ್ಲಿ (1145); ಶ್ರುತಕೀರ್ತಿಯನ್ನು ಸ್ತುತಿಸುವ "ಆವೊಂವಾದಿಕಥಾತ್ರಯ" (1.24) "ಶ್ರುತಕೀರ್ತಿತ್ರೈವಿದ್ಯ" (1. 25) ಎಂಬ ಪದ್ಯಗಳು ಶ್ರ. ಬೆ. ಶಾ 64 ರಲ್ಲಿ (1163); ಬಾಲಚಂದ್ರನನ್ನು ಸ್ತುತಿಸುವ "ಪ್ರಚುರ ಕಲಾಸ್ಥಿತ" (1.18) ಎಂಬ ಪದ್ಯವು ಶ್ರ ಬೆ. ಶಾ. 158 ರಲ್ಲಿ (ಸು. 1110) ದೊರೆಯುತ್ತವೆ.

ಈ ಗ್ರಂಥಕ್ಕೂ ವಾಲ್ಮೀಕಿರಾಮಾಯಣಕ್ಕೂ ಇರುವ ಕೆಲವು ವ್ಯತ್ಯಾಸಗಳನ್ನು ಸೂಚಿಸುತ್ತೇವೆ. ಇಲ್ಲಿ ರಾಮನ ತಾಯಿ ಅಪರಾಜಿತೆ; ಶತ್ರುಘ್ನನ ತಾಯಿ ಸುಪ್ರಭೆ. ಸುಮಿತ್ರೆಗೆ ಲಕ್ಷ್ಮಣನೊಬ್ಬನೇ ಮಗ. ವಿಶ್ವಾಮಿತ್ರನ ಪ್ರಸ್ತಾವವೇ ಇಲ್ಲ. ಸುಗ್ರೀವಾದಿಗಳು ಕಪಿಗಳಲ್ಲ, ಕಪಿಧ್ವಜರು. ರಾಮಲಕ್ಷ್ಮಣರಿಗೆ ಬಲಾಚ್ಯುತರು ಎಂದೂ ಹೆಸರು. ಇವರು ಕಾರಣಪುರುಷರೆಂದು ಹೇಳಿದೆ. ಲಕ್ಷ್ಮಣನಿಗೆ ಕೃಷ್ಣ, ಕೇಶವ, ವಾಸುದೇವ ಎಂಬ ಹೆಸರುಗಳೂ ಉಂಟು; ಇವನಿಗೆಯೇ ಹೆಚ್ಚು ಪ್ರಾಶಸ್ತ್ಯವು ಹೇಳಿದೆ. ರಾಮನ ವರ್ಣ ಬಿಳುಪು; ಲಕ್ಷ್ಮಣನದು ಕಪ್ಪು. ಲಕ್ಷ್ಮಣನಿಗೆ ಅನೇಕಾವೃತ್ತಿ ಮದುವೆಯಾಗುತ್ತದೆ; ಈತನೇ ರಾವಣನನ್ನು ಸಂಹರಿಸುತ್ತಾನೆ. ಸೀತೆಗೆ ಪ್ರಭಾಮಂಡಲನೆಂಬ ಒಬ್ಬ ಸಹೋದರನುಂಟು; ಅವಳು ಲವಾಂಕುಶರ ಜನನಾನಂತರ ಅಗ್ನಿಪ್ರವೇಶಮಾಡಿ ಜಿನದೀಕ್ಷೆಯನ್ನು ಸ್ವೀಕರಿಸುತ್ತಾಳೆ—ಇತ್ಯಾದಿ.

ಇವನ ಬಂಧವು ಬಹಳ ಲಲಿತವಾಗಿಯೂ ಮನೋಹರವಾಗಿಯೂ ಇದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ.—

### ಕಪಿಲಚಿತ್ತೋತ್ಪವೆಯರ ಸ್ನೇಹ.

ಒಡನಾಡಿಯುಮೊಡನೋದಿಯು। ಮೊಡವಳಿದುಂ ಪಲವು ಕಾಲದಿಂದನುಬಂಧಂ।
ಗಿಡಮೊದಲೆರಡಸುವೊಂದೆನೆ। ಗೆಡೆವಕ್ಕಿಗಳಂತೆ ಕೂಡಿ ನಲಿಯುತ್ತಿರ್ದರ್ ॥ 197 ॥

### ಹುಲಿ.

ಜಡಿಯುತ್ತುಂ ಬಾಲಮಂ ಕಣ್ಣುರಿಯನುಗುಳ್ತಿ ಜಿಹ್ವಾನಲಂಪೆರ್ಚಿ ಬಾಯ್ವ್।
ಟ್ಟೊಡೆವನ್ನಂ ಗರ್ಜಿಸುತ್ತುಂ ಪವನಜವದೆ ಮೇಲ್ವಾಯ್ದು ಪೊಯ್ವತ್ತು ಕೆಯ್ಯೇ ॥
ಱಿದೆಯಿಂ ಬಾಯೇಱಿ ಬಾಯಿಂದೊಡನೆ ರುಧಿರಮುಂ ಖಂಡಮುಂ ಸೂಸುವನ್ನಂ।
ಸಿಡಿಲೆಂಬಾಶಂಕೆಯಂ ಪೆಣ್ಬಲಿ ಪಡೆದು ಮೃಗೀರಕ್ತಸೇವಾಸುರಕ್ತಂ ॥ 198 ॥

### ದಶರಥನ ಸೌಂದರ್ಯ.

ತೊದವುಗಳೆಡ್ಡಮಾವನಿತಱಿಂ ತನಗಕ್ಕುಮೆ ಗಾಡಿ ಗಾಡಿ ಮೆ।
ಯ್ವೊಡವೆನೆ ಮಾಸಿ ರೂಪುಗರೆದಿರ್ದೊಡಮಾತನ ರೂಪಿನೊಂದು ಕ॥
ಣ್ವೊಡವೆನೆ ಬೀಱಿದೊಂದು ಬಗೆಗಿಕ್ಕಿದ ಶಕ್ತಿನೆ ವಶ್ಯದೊಂದು ಕ।
ಣ್ವೊಡವೆನೆ ನೋಟ್ಪ ನೋಟಕರ ಕಣ್ಗೊಳಗಾದುದು ಕಣ್ಣ ಪಾಪೆಯೋಲ್ ॥ 199 ॥

### ರಾಮನ ಮೂರ್ಛೆ.

ನಸುಬಿಸುಪೇಱಿ ಮೆಯ್ ಮಗುಳ್ತಿ ಕೆತ್ತುವ ತಾಣಮೆ ಕೆತ್ತೆ ಮ್ಮಂದಮಾ।
ದುಸಿರ್ಗಳೆ ನಾಸಿಕಾಮುಕುಳದಿಂದಿನಿಸುಂ ಪೊಱಪೊಣ್ಮೆ ತಳ್ತು ಸಂ ॥

ಧಿಸಿದೆಮೆ ಬಿರ್ಚಿ ಕಣ್ಮಲರ್ಗಳುಳ್ಳಲರುತ್ತಿರೆ ಜಾನಕೀ ಎನು।
ತ್ತುಸಿರ್ದುಸಿರ್ದೆಬ್ದಿನಾರಘುಕುಲಾಂಬರಚಂಡಮರೀಚಿ ಮೂರ್ಛೆಯಿಂ ॥ 200 ॥

## ರಾಮನ ಪ್ರಲಾಪ.

ಕಳಹಂಸಾಲಸಯಾನೆಯಂ ಮೃಗಮದಾಮೋದಾಸ್ಯನಿಶ್ವಾಸೆಯಂ।
ತಳಿರೇ ತಾವರೆಯೇ ಮದಾಳಿಕುಳಮೇ ಕರ್ನೆಯ್ಸುಲೇ ಮತ್ತಕೋ ॥
ಕೆಳಮೇ ಕಂಡಿರೆ ಪಲ್ಲವಾಧರೆಯನಂಭೋಜಾಸ್ಯೆಯಂ ಭೃಂಗಕುಂ।
ತಳೆಯಂ ಕೈರವನೇತ್ರೆಯಂ ಪಿಕರವಪ್ರಖ್ಯಾತೆಯಂ ಸೀತೆಯಂ ॥ 201 ॥

## ವರ್ಷಾಕಾಲ.

ತೀಡುವ ಪಶ್ಚಿಮಾನಿಲನ ತೀಟದೊಳುತ್ಕಟಮಾಗೆ ರಾಗಮಿ।
ರ್ದೋಡಿದ ಚಂಚುವಂ ತೆಱೆದೆಱಂಕೆಯೆಬ್ಬಿರ್ದಿರೆ ಕಂಠನಾಳಮಂ ॥
ನೀಡಿ ವಿಯತ್ತಳಕ್ಕೊಗೆದು ಕಾರಮುಗಿಲ್ವನಿಯಂ ಮನಂ ಕುಳಿ।
ರ್ಕೊಡುವಿನಂ ಕರ್ದುಂಕಿ ನಲಿದಾಜಿದುದಾಡಿದುದಂದು ಚಾತಕಂ ॥ 202 ॥

## ಗ್ರೀಷ್ಮ.

ಮೃಗಕುಲವಾಸೆಗೆಯ್ದು ಮೃಗತೃಷ್ಣಿಕೆಯಂ ಜಲಮೆಂದು ತೃಷ್ಣೆಯಿಂ।
ಪಗಲಿಬ್ಬವನ್ನೆಗಂ ಪರಿದು ಗಂಟಲುರಂಬರವಾಜಿ ಬೆಂದೊವಲ್ ॥
ತೆಗಳಿಗೆವೀಬ್ಬಿ ಬಾಯ್ಗೆ ಕರುಸಂ ಬರೆ ನಾಲಗೆಗಿಬ್ಬ್ರು ನಟ್ಟಿದಿ।
ಟ್ಟಿಗಳೊಡನಳ್ಳೆ ಪೊಯ್ಯೆ ನಡೆಗೆಟ್ಟುವು ತೃಷ್ಣೆಯನಾರೊ ಬೇಯದರ್ ॥ 203 ॥

## 2. ಮಲ್ಲಿನಾಥ ಪುರಾಣ.

ಇದು 19 ನೆಯ ತೀರ್ಥಂಕರನಾದ ಮಲ್ಲಿನಾಥನ ಚರಿತೆ; ಚಂಪೂರೂಪವಾಗಿದೆ; 14 ಆಶ್ವಾಸಗಳಾಗಿ ಭಾಗಿಸಲ್ಪಟ್ಟಿವೆ. ಗ್ರಂಥದ ಉತ್ಕೃಷ್ಟತೆಯನ್ನೂ ತನ್ನ ಕವಿತಾ ಪ್ರೌಢಿಯನ್ನೂ ಕವಿ ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ:—

ಸಮಚಿತ್ತರಪ್ಪ ವಿದ್ವ। ತ್ತಮರಿರ್ದ್ದಾರಯ್ದೆ ಸರಸಕವಿತಾರಸದೊಳ್।
ಸಮನಕ್ಕುಮಧಿಕಮಕ್ಕುಂ। ಸಮಸ್ತಕಾವ್ಯಕ್ಕೆ ಮಲ್ಲಿನಾಥಪುರಾಣಂ ॥

ಧರೆ ಪೊಗಬ್ಬಿ ವೀತರಾಗನ। ಚರಿತದೊಳಳವಡಿಸಿ ಸಕಲರಸಮಂ ಕವಿತಾ।
ಪರಿಣತಿಯಂ ಮೆಱೆದಂ ಕಾ। ವ್ಯರಸಾರ್ಣವಪೂರ್ಣಚಂದ್ರನಭಿನವಪಂಪಂ ॥

ಚರಿತಪುರಾಣಮಂ ನೆಱೆಯೆ ಪೇೞ್ವೊಡೆ ಪೇೞ್ಗಮ ದಿವ್ಯಭಾಷೆಯಿಂ।
ಪರಮಜಿನೇಶ್ವರರ್ ಗಣಧರರ್ ಜನತತ್ತ್ವಮಹತ್ತ್ವಮನ್ಯಗೋ।
ಚರಮೆ ರಸಾವಲಂಬಮೆನೆ ಮಲ್ಲಿಜಿನೇಂದ್ರಮಹಾಪುರಾಣಮಂ।
ವಿರಚಿಸಿದಂ ಪ್ರಸಿದ್ಧಕವಿಪದ್ಧತಿಯಿಂ ಕವಿತಾಮನೋಹರಂ ॥

ಗ್ರಂಥಾವತಾರದಲ್ಲಿ ಕವಿ ಮಲ್ಲಿನಾಥನನ್ನು ಸ್ತುತಿಸಿದ್ದಾನೆ. ಬಳಿಕ ಸಿದ್ಧಾದಿಗಳನ್ನೂ ರತ್ನತ್ರಯವನ್ನೂ ಸರಸ್ವತಿಯನ್ನೂ ಯಕ್ಷ ಯಕ್ಷಿಯರನ್ನೂ ಸ್ತುತಿಸಿ ಅನಂತರ ಅನುಬದ್ಧಕೇವಲಿಗಳಿಂದ ಮೇಘಚಂದ್ರತ್ರೈವಿದ್ಯನವರೆಗೆ ಗುರುಗಳನ್ನು ರಾಮಚಂದ್ರಚರಿತಪುರಾಣದಲ್ಲಿರುವ ಪದ್ಯಗಳಿಂದಲೇ ಇಲ್ಲಿಯೂ ಸ್ತುತಿಸಿದ್ದಾನೆ. ಆಮೇಲೆ ಪೂರ್ವಕವಿಗಳನ್ನು ಹೊಗಳಿ[1]

ಭರತಮಹೀಶ್ವರಂಗೆ ಮಗಧೇಶ್ವರಮಂಡಲಿಕಂಗೆ ತಾರಭೂ।
ಧರವಿಪುಳಾದ್ರಿಯೊಳ್ ವೃಷಭಸೇನಗಣಾಗ್ರಣಿ ಗೌತಮೋತ್ತಮಂ ॥
ಪುರುಜನವರ್ಧಮಾನಗುರುಸನ್ನಿಧಿಯೊಳ್ ತಿಳಿವಂತು ಪೇಟ್ದುದಂ।
ವಿರಚಿಸುವೆಂ ಮನಂ ಬಯಸೆ ಮಲ್ಲಿಜಿನೇಂದ್ರ ಮಹಾಪ್ರಬಂಧಮಂ ॥

ಎಂದು ಕಥೆಯನ್ನು ಆರಂಭಿಸಿದ್ದಾನೆ. ಆಶ್ವಾಸಗಳ ಕೊನೆಯಲ್ಲಿ ರಾಮಚಂದ್ರ ಚರಿತ ಪುರಾಣದಲ್ಲಿರುವ ಗದ್ಯವೇ ಇದೆ: ಅಂತ್ಯದಲ್ಲಿ ಮಾತ್ರ ಮಲ್ಲಿನಾಥಪುರಾಣದೊಳ್ ಎಂದಿದೆ.

ಈ ಕಾವ್ಯದಲ್ಲಿ ಕವಿ ತನ್ನ ವರ್ಣನಾಶಕ್ತಿಯನ್ನು ಬಹಳ ಚೆನ್ನಾಗಿ ತೋರಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

### ಅಭಿನಯ.

ಮನದ ತೊಡರ್ಪು ಲೋಚನದಡರ್ಪರಲಂಬಿನ ಕೂರ್ಪು ಸರ್ವಮೋ।
ಹರ್ರಸದಿರ್ಪು ಬೇಟದ ಪೊಡವರ್ಭಿಮಾನದ ನಟ್ಟು ತುರ್ಪು ಕಾ ॥
ಮನ ಕರವಾಳ ಕರ್ಪು ವಿರಹಾಪಿಯ ತೋಳ ಪಸುರ್ಪು ಜೀಯ ಭಾ।
ಪೆನಿಸುವುದಂಗಹಾರಕರಣಾಭಿನಯಂಗಳ ನೇರ್ಪು ನೀಜಿಯಾ ॥ 201 ॥

### ಚಂದ್ರೋದಯ.

ದಾಂಗುಡಿವಿಟ್ಟು ದಳ್ಳಿಸುವ ಕೆಂದಳದಿಂದೊಸೆದೆತ್ತಿ ಲಕ್ಷ್ಮ್ರಿ ಕಾ।
ಮಂಗೆ ಮಗಂಗೆ ಶೈಶವನಿರೀಕ್ಷಣಕೇಳಿಗೆ ನೇತ್ರಸೂತ್ರದಿಂ ॥
ದಿಂಗಡಲೆಂಬ ಸಜ್ಜಿವನೆಯೊಳ್ ತೆರೆದೊಟ್ಟಿಲ ಮೇಲೆ ಕೆಂಬರ।
ಲ್ದಿಂಗಣಿಗಟ್ಟಿದಂತುದಯಶೈಲಶಿಖಂಡದೊಳಿಂದುಮಂಡಳಂ ॥ 205 ॥

### ಚಂದ್ರಿಕೆ.

ಪುಗಿಸಿದುವಟ್ಟೆ ಪರ್ವತಗುಹೋದರವುಂ ಕೆಲವಂ ಗವಾಕ್ಷದಿಂ।
ದುಗಿದುವು ದೇವಸದ್ಮದೊಳಡಂಗಿದುವಂ ಬಯಲಿಂಗೆ ಬಿಟ್ಟುವಂ ॥

---

1. ಪುಟ 104.

ತಗುಳ್ದರೆಯಟ್ಟಿ ನುಂಗಿದುವು ವಿರ್ಮರನಂ ಸೆಜಗೆಯ್ದು ಪರ್ಣಸಂ।
ಧಿಗಳೆಡೆಯುಂದಮಿಟ್ಟೊರಸಿ ಕೊಂದುವು ಕಲ್ತಿಲೆಯಂ ಹಿಮಾಂಶುಗಳ್ ॥ 206 ॥

## ಭೃಂಗ.

ಬರಿಮುಗುಳೊಳ್ ಮುಸುಂಬನಲೆದೊಯ್ಯನೆ ಕರ್ಣಿಕೆಯಂ ಕರ್ದುಂಕಿ ಕೇ।
ಸರಮನೆಱಂಕೆಯಿಂ ಕೆದಱಿ ಬಂಡನುರಂಬರಮುಂಡು ತಳ್ತಿಸ॥
ಟ್ಟಿಪ್ಪಿರೆಯೊಳಡಂಗಿ ನುಣ್ಚರದಿನಾಣತಿಮಾಡಿದುದುನ್ಮದಾಳಿ ತಾ।
ವರೆಯೊಳಗಿರ್ದ ಲಕ್ಷ್ಮ್ಯಯು ಮನಂಬಡೆದೆಕ್ಕಲಗಾಣನೆಂಬಿನಂ ॥ 207 ॥
ಪೊಸತಲರ್ದ ವಳುಳರಸದೊಳ್। ಮುಸುಂಬು ಮುಱ್ಱಿಗುವಿನಮೆಱಗಿ ಕೋ
ಡೆಱಕೆಗಳಂ।

ಪಸರಿಸಿ ಕಂಪನಲಂಪಿಂ। ದುಸಿರ್ದುಸಿರ್ದೀಂಟಿದುದು ಮಧುಪಸೆರ್ದೆಮುಱ್ಱಿ
ಗುವಿನಂ ॥ 208 ॥

## ಹಂಸದ ಪಟ.

ಬಟ್ಟಿದುವಾದ ಕಣ್ಣಾ ಕರಿಯಾಲಿಯ ಸುತ್ತಣ ಸಣ್ಣ ಬೆಳ್ಪು ನೇ।
ರ್ಪಟ್ಟುದು ಕರ್ಬುರಚ್ಛವಿಯ ಚಂಚು ಮನಂಗೊಳಿಸಿತ್ತು ಮೆಯ್ಯ ಬೆ॥
ಳ್ಪಟ್ಟಳಮಾಯ್ತು ಕಾಲ್ಗಳರಿದಾಳದ ಮೇಗಣ ಕೆಂಪಿನಣ್ಮೆಯಿಂ।
ನಿಟ್ಟಿಗೆ ಬಂದುದಾರ್ ಬರೆವರಿಂತಳವಟ್ಟಿರೆ ರಾಜಹಂಸನಂ ॥ 209 ॥

## ಪಕ್ಷಿಯ ಕೂಗು.

ಅಲರ್ವಕ್ಕಿಯ ಗೆಡೆವಕ್ಕಿಯ। ಜಲವಕ್ಕಿಯ ಪವಳನಾಯ ಪಕ್ಕಿಯ ಕಿಸುಗ।
ಣ್ಮಲರ್ವಕ್ಕಿಯ ಮೆಲ್ಲುಲಿ ನ। ಲ್ಲುಲಿ ಮದನನ ಗೀತವಾದ್ಯದುಲಿಯುಪೊಲೆಸೆಗುಂ
॥ 210 ॥

---

## ಕಂತಿ. ಸು. 1100.

ಈಕೆ ಆವ ಗ್ರಂಥಗಳನ್ನು ಬರೆದಿದ್ದಾಳೆಯೋ ತಿಳಿಯದು. ಆದರೆ ಈಕೆ ದ್ವಾರಸಮುದ್ರದ ಬಲ್ಲಾಳರಾಯನ ಸಭೆಯಲ್ಲಿ **ಅಭಿನವಪಂಪನು** ಕೊಟ್ಟ ಸಮಸ್ಯೆಗಳನ್ನು ಪೂರ್ತಿಮಾಡಿದಂತೆ "ಕಂತಿಹಂಪನ ಸಮಸ್ಯೆಗಳು" ಎಂಬ ಪದ್ಯಗಳಿಂದ ಗೊತ್ತಾಗುತ್ತದೆ. **ಬಾಹುಬಲಿ** (ಸು. 1560) **ನಾಗಕುಮಾರಚರಿತೆ**ಯಲ್ಲಿ—

ವಿಬುಧಜನಸ್ತುತಶ್ರೀವೀರದೋರನ। ಸಭೆಗೆ ಮಂಗಳಲಕ್ಷ್ಮ್ಯಯೆನಿಪ।
ಶುಭಗುಣಚರಿತೆ ಕಂತಿಕೆಯರ ಪೊಗಟ್ಪಿ ನಾ। ನಭಿನವವಾಗ್ದೇವಿಯರ ॥

ಎಂಬ ಪದ್ಯದಲ್ಲಿ ಈಕೆಯನ್ನು ಸ್ತುತಿಸಿದ್ದಾನೆ. ಇದರಿಂದ ಈಕೆ ದ್ವಾರಸಮುದ್ರದ ಬಲ್ಲಾಳರಾಯನ ಸಭೆಯಲ್ಲಿ ಪಂಡಿತೆಯಾಗಿದ್ದಂತೆ ತಿಳಿಯುತ್ತದೆ. "ಅಭಿನವ ವಾಗ್ದೇವಿ" ಎಂಬುದು ಈಕೆಗೆ ಬಿರುದಾಗಿದ್ದಿರಬಹುದು. ದೇವಚಂದ್ರನು ಈಕೆಯ ವಿಷಯವಾಗಿ ಹೀಗೆ ಬರೆದಿದ್ದಾನೆ:—

ದೋರರಾಯಂ ದೋರಸಮುದ್ರಮೆಂಬ ತಟಾಕಮಂ ಕಟ್ಟಿಸಿ ಧರ್ಮಚಂದ್ರನೆಂಬ ದ್ವಿಜನುಂ ಮಂತ್ರಿಯಾಗಲ್ ಆಳುತ್ತಿರೆ ಮಂತ್ರಿಯ ಮಗಂ ಉಪಾಧ್ಯಾಯನಾಗಿ ಛಂದೋಲಂಕಾರವ್ಯಾಕರಣಕಾವ್ಯಾದಿಗಳಂ ಪೇಳ್ದುತ್ತೆ ಮಕ್ಕಳ್ಗೆ ಮತಿಪ್ರಕಾಶಕ್ಕಂ ಜ್ಯೋತಿಷ್ಮತೀ ತೈಲಮಂ ಮಾಡಿ ಕುಡುಕೆಯೊಳಿಟ್ಟು ನಂದಮತಿಯಾಗಿರ್ದರ್ಗರೆಬಿಂದುವಾತ್ರಮುಂ ಕುಡುತ್ತುಮಿರ್ಪುದಂ ಕಂತಿಯೆಂಬ ಕೆಳದಿ ಅಱಿಯದೆ ಆ ತೈಲವೆಲ್ಲಮಂ ಸೇವಿಸಲ್ ಉರಿ ಹತ್ತಿ ಬಾವಿಯೊಳ್ ಬಿೞ್ದಿರ್ಪುದಂ ಕಂಠಪ್ರಮಾಣದ ನೀರೊಳ್ ನಿಂದು ಜೀವಮುೞಿಯೆ ವಿದ್ಯಾವಿಶಾರದೆಯಾಗಿ ಕವಿತ್ವಮಂ ಪೇೞ್ದುತ್ತುಂ ಬಾವಿಯೊಳೆ ಇರ್ಪುದುಂ, ದೋರರಾಯನಾಸ್ಥಾನದ ಕನ್ನಡ ಸಂಸ್ಕೃತಮಹಾಕವಿಗಧಿಪಂ ಪಂಪಕವಿಯುಂ ಕಳುಹಲ್ ಆತಂ ಬಂದು ವಿದ್ಯೆಯುಂ ಸಾವಿರಪ್ರಶ್ನೆಯುಂ ಕೇಳಲ್ ಉತ್ತರಮುಂ ಕುಡಲ್ ಆಕೆಯುಂ ರಾಜಸಭೆಗೆಯ್ದಿಸೆ ವಿದ್ವತ್ಸಮೂಹದೊಳ್ ಅಧಿಕಕವೀಶ್ವರಿಯಾಗಿರ್ದಳ್.

ಅಭಿನವಪಂಪನು ಇವಳಿಗೆ ಸಮಸ್ಯೆಗಳನ್ನು ಕೊಟ್ಟಂತೆ ತಿಳಿವುದರಿಂದ ಈಕೆ ಆತನ ಸಮಕಾಲದವಳಾಗಿರಬೇಕು. ಆ ಕಾಲದಲ್ಲಿ ದ್ವಾರಸಮುದ್ರದಲ್ಲಿ 1100 ರಿಂದ 1106 ರ ವರೆಗೆ ಆಳಿದ ಬಲ್ಲಾಳನೇ ರಾಜನಾಗಿದ್ದಿರಬೇಕು. ಈತನ ಸಭೆಯನ್ನು ಪಂಪ, ಕಂತಿ, ಮೊದಲಾದ ಕವಿಗಳು ಅಲಂಕರಿಸಿದಂತೆ ತೋರುತ್ತದೆ. ಕನ್ನಡದಲ್ಲಿ ಕವಿತ್ವಮಾಡಿರುವ ಹೆಂಗಸರಲ್ಲಿ ನಮಗೆ ತಿಳಿದಮಟ್ಟಿಗೆ ಈಕೆಯೇ ಮೊದಲನೆಯವಳು. ಇವಳ ಪದ್ಯಗಳಿಂದ ಈಕೆ ಜೈನಸ್ತ್ರೀಯೆಂದು ವ್ಯಕ್ತವಾಗುತ್ತದೆ. ಅಲ್ಲದೆ ಇವಳಿಗೂ ಪಂಪನಿಗೂ ಬಹಳವಾಗಿ ಸಂವಾದವು ನಡೆಯುತ್ತಿದ್ದಂತೆಯೂ, ಒಂದಾನೊಂದು ದಿವಸ ಪಂಪನು ಇವಳಿಂದ ಹೊಗಳಿಸಿಕೊಳ್ಳುವೆನೆಂದು ಪಂಥ ಮಾಡಿಕೊಂಡು ಅದಕ್ಕೋಸ್ಕರ ಸತ್ತವನಂತೆ ನಟಿಸಿ ಶವದಂತೆ ಬಿದ್ದಿರಲು ಆಗ ಕಂತಿ ಈತನನ್ನೂ ಈತನ ಕವಿತಾಚಾತುರಿಯನ್ನೂ

ಕವಿರಾಯ ಕವಿಪಿತಾಮಹ । ಕವಿಕಂಠಾಭರಣ ಕವಿಶಿಖಾಮಣಿ ಭಾಪುರೆ ।
***ಮ ಪಂಪುಗ । ಕವಿಚಕ್ರೇಶಂಗೆ ಸಾವು ಸಮನಿಸಿತಕಟಾ ॥
ಕಲ್ಲೊಸರ್ಗುಂ ಕೊಯ್ವಿಣಗಿದ । ಪುಲ್ಲೆಲ್ಲಂ ಚಿಗುರ್ಗುಮಡವಿಗಡಿದ ಮರಂಗಳ್ ।
ಪಲ್ಲವಿಕುಮಮಮ ಕವಿಗಜ । ಮಲ್ಲನ ಪಂಪುಗನ ಕಾವ್ಯರಸತಾಮೃತದಿಂ ॥
ಇನ್ನೇಕೆ ದೋರನೋಲಗ । ಮಿನ್ನೇಕೆ ಕವಿತ್ವವಾದತರ್ಕಸಮಸ್ಯಂ ।
ಇನ್ನೇಕೆ ಬಲ್ವಿಚಾರಂ । ಚಿನ್ನಿಗಕವಿ ಪಂಪರಾಜನಳ್ತಿದಬಱ್ಕಂ ॥

ಎಂಬ ಪದ್ಯಗಳಲ್ಲಿ ಹೊಗಳಿ ಶೋಕಿಸಲು, ಪಂಪನು ಎದ್ದು "ನಿನ್ನಿಂದ ಹೊಗಳಿಸಿಕೊಂಡು ಪಂಥವನ್ನು ಗೆದ್ದೆನು" ಎಂದು ಹೇಳಿದಂತೆಯೂ, ತಿಳಿಯಬರುತ್ತದೆ.

ಕೆಲವು ಸಮಸ್ಯಾಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

ಪಂಪ.—ದನವಂ ಕಡಿಕಡಿದು ಬಸದಿಗೆಬ್ರಿಯುತ್ತಿರ್ದರ್ [ಪರ್ವ.

ಕಂತಿ.—ವನದೊಳಗೆ ಪುಟ್ಟಿ ಬೆಳೆಯುತೆ । ತನಿಗಂಪಂ ಪತ್ತು ದೆಸೆಗೆ ಬೀಱುತ್ತಿ
ಘನತರಸುರುಚಿರಸಚ್ಚಂ । ದನವಂ ಕಡಿಕಡಿದು ಬಸದಿಗೆಬ್ರಿಯುತ್ತಿರ್ದರ್ ॥ 211 ॥

ಕಂತಿ.—ಕಡೆದೊಡೆಯಲ್ ಹರನಾಮಂ । ನಡುದೊಡೆಯಲ್ ಹವಿಯ ನಾಮಮಾದ್ಯಕ್ಷರಮುಂ ।
ತೊಡೆಯಲ್ಕೆ ರವಿಯ ನಾಮಂ । ಕಡೆಯಿಂದೋದಲ್ಕೆ ವಿರಹ ಕೇಳಿಲೆ ಪಂಪಾ ॥ 212 ॥

[ಹರವಿ]

ಪಂಪ.—ಮಸೆಕಲ್ಲ ಕುದು ಬಾಚಿಯ । ಪೊಸತೆನಿಸುವ ಕೊಡಲಿಯುಳಿಯನೊರ್ಕಂದದೊಳಂ ।
ಉಸಿರೆಂದಾಗುಣಕಂತಿಕೆ । ಗಸಮಸಮಸ್ಯಮನೆ ಕೊಟ್ಟನಭಿನವಪಂಪಂ ॥

ಕಂತಿ.—ಮಸಕಲ್ಗಳಿ ಮಾಂಬಳಮಂ । ವಸುಧಾತಳಕುದಿರೆ ಬಾಚಿಯೆತ್ತಿದಳೊರ್ವಳ್ ।
ಶಶಿಮುಖಿಗೆ ಕೊಡಲಿಕಾವಧು । ಪೊಸವಣ್ಣಂ ಸವಿದು ನೋಡಿ ನಸುವುಳಿಯೆಂದಳ್ ॥ 213 ॥

ಕಂತಿ.—ನಿನ್ನ ಕವಿತ್ವಮೆಲ್ಲಂ ಮಡಕೆ, ತುಡುಕೆ, ಅಡಕೆ, ಹೊಡಕೆ ಎಂದೊಡೆ—

ಪಂಪ.—ಮಡಕೆ ನಿಮಿರ್ದಾಡೆ ಜಡೆಗಳ್ । ತುಡುಕೆ ಶರಾಸ್ಫುಮುಮನಭವನತಿ ಕೋಪದೊಳಂ ।
ಅಡಕೆ ಮರುಳ್ಗಳ್ ಪೆಣನಂ । ಹೊಡೆಕೆಡೆದರ್ ದೈತ್ಯರಂದು ತ್ರಿಪುರ ಸ್ಥಳದೊಳ್ ॥ 214 ॥

ಪಂಪ.—ನಿರೋಷ್ಠ್ಯಕಂದಮಂ ಪೇಳ್ದಿಂದೊಡೆ—

ಕಂತಿ.—ಸು[1] ರನರನಾಗತೀಶ್ವರ । ಹೀರಕಿರೀಟಾಗ್ರಲಗ್ನಚರಣಸರೋಜಾ ।
ಧೀರೋದಾರಚರಿತ್ರೋ । ತ್ಸಾರಿತಕಲುಷಾಘ ರಕ್ಷಸಲ್ಕಿ ಜಿನಹರ್ ॥ 215 ॥

---

1. ಇಲ್ಲಿ ಆದ್ಯಕ್ಷರವು ದೀರ್ಘವಾಗಿರಬೇಕು. ಆದರೆ ನಮಗೆ ದೊರೆತ ಪ್ರತಿಯಲ್ಲಿ ಹೀಗೆಯೇ ಇದೆ.

## ಹಂಪೆಯ ವಾದಿರಾಜ. ಸು. 1100.

**ರಾಘವಾಂಕನು** (ಸು. 1165) ತನ್ನ **ಹರಿಶ್ಚಂದ್ರಕಾವ್ಯದಲ್ಲಿ ಈತನನ್ನು** "ಸುಕವಿ" ಎಂದು ಹೇಳುವುದರಿಂದ ಇವನು ಕವಿಯಾಗಿದ್ದಿರಬೇಕು. ಆ ಗ್ರಂಥದಲ್ಲಿ ಕೊಟ್ಟಿರುವ ಗುರುಪರಂಪರೆಯಂತೆ ಈತನು ಹರೀಶ್ವರನ (ಸು. 1165) ತಂದೆಯ ಗುರುವಿನ ಗುರುವಾದುದರಿಂದ ಸುಮಾರು 1100 ರಲ್ಲಿ ಇದ್ದಿರಬಹುದು. ಆವ ಗ್ರಂಥಗಳನ್ನು ಬರೆದಿದ್ದಾನೆಯೋ ತಿಳಿಯದು.

---

## ಕವಿತಾವಿಲಾಸ. ಸು. 1100.

**ದುರ್ಗಸಿಂಹನು** (ಸು. 1145) ಪೂರ್ವಕವಿಗಳನ್ನು ಸ್ತುತಿಸುವಾಗ

ಅನತಿಶಯನೀತಿಮಾರ್ಗನ । ನನೂನಕವಿತಾವಿಲಾಸನಂ ಭೂತಲದೊಳ್ ।
ಮನುಗಂ ವ್ಯಾಸಂಗಂ ಮಿಗಿ । ಲೆನಿಸಿದ ಕವಿತಾವಿಲಾಸನಂ ಪೊಗಟ್ಪಿದರಾರ್ ॥

ಎಂಬ ಪದ್ಯದಲ್ಲಿ ಒಬ್ಬ ಕವಿತಾವಿಲಾಸನನ್ನು ಸ್ತುತಿಸುತ್ತಾನೆ. ಈ ಪದ್ಯದಿಂದ ಈ ಕವಿ ಆವುದೋ ಒಂದು ನೀತಿಗ್ರಂಥವನ್ನು ಬರೆದಿರುವಂತೆ ಊಹಿಸಬಹುದಾಗಿದೆ. **ನಯಸೇನನು** (1112) "ನೂತ್ನಕವಿತಾವಿಲಾಸ" ಎಂಬ ಬಿರುದನ್ನು ಇಟ್ಟುಕೊಂಡಿರುವುದರಿಂದ ಈತನೇ ಆದಿಕವಿತಾವಿಲಾಸನಾಗಿರಬೇಕು. ಆದುದರಿಂದ ಈತನು ನಯಸೇನನಿಗೆ ಹಿಂದೆ--ಎಂದರೆ ಸುಮಾರು 1100 ರಲ್ಲಿ ಇದ್ದಿರಬಹುದು.

---

## ವಾದಿ ಕುಮುದಚಂದ್ರ. ಸು. 1100.

ಈತನು ಜಿನಸಂಹಿತೆಯೆಂಬ ನಾಮಾಂತರವುಳ್ಳ ಪ್ರತಿಷ್ಠಾಕಲ್ಪಕ್ಕೆ ಕನ್ನಡ ವ್ಯಾಖ್ಯಾನವನ್ನು ಬರೆದಿದ್ದಾನೆ. ಇವನು ಜೈನಕವಿ; ಮಾಘಣಂದಿ ಸಿದ್ಧಾಂತ ಚಕ್ರವರ್ತಿಯ ಮಗನು; ಚತುರ್ವಿಧಪಾಂಡಿತ್ಯಚಕ್ರವರ್ತಿ ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ವ್ಯಾಖ್ಯಾನದ ಆರಂಭದಲ್ಲಿ—

ಶ್ರೀಮಾಘಣಂದಿಸಿದ್ಧಾಂತ ಚಕ್ರವರ್ತಿತನೂಭವಃ।
ಕುಮುದೇಂದುರಹಂ ವಚ್ಮಿ ಪ್ರತಿಷ್ಠಾಕಲ್ಪಟಿಪ್ಪಣಂ ॥

ಎಂಬ ಶ್ಲೋಕವೂ, ಅಂತ್ಯದಲ್ಲಿ—

ಇತಿ ಶ್ರೀಮಾಘಣಂದಿಸಿದ್ಧಾಂತಚಕ್ರವರ್ತಿಸುತ ಚತುರ್ವಿಧಪಾಂಡಿತ್ಯಚಕ್ರವರ್ತಿ ಶ್ರೀ ವಾದಿಕುಮುದಚಂದ್ರಪಂಡಿತದೇವವಿರಚಿತೇ ಪ್ರತಿಷ್ಠಾಕಲ್ಪಟಿಪ್ಪಣೇ

ಎಂಬ ಗದ್ಯವೂ ಇವೆ.

**ದೇವಚಂದ್ರನು** ತನ್ನ ರಾಮಕಥಾವತಾರದಲ್ಲಿ (1797) ಸಂಪರಾಮಾಯಣದ ವಿಷಯವಾಗಿ—

ಶ್ರೀಮೂಲಸಂಘ ಬಲೋತ್ಕಾರಗಣ ಶ್ರೀಮಾಘಣಂದಿಸಿದ್ಧಾಂತಚಕ್ರವರ್ತಿಸುತ ಚತುರ್ವಿಧಪಾಂಡಿತ್ಯ ಶ್ರೀವಾದಿಕುಮುದಚಂದ್ರಪಂಡಿತದೇವರಚಿತ ರಾಮಾಯಣಸಮಾನವಾದ ಶ್ರೀಮದಭಿನವಪಂಪರಚಿತರಾಮಾಯಣಂ

ಎಂಬುದರಿಂದ ಈ ಕವಿ ಒಂದು ರಾಮಾಯಣವನ್ನೂ ಬರೆದಿರುವಂತೆ ತಿಳಿಯುತ್ತದೆ. ಇವನ ಕಾಲವು ಸುಮಾರು 1100 ಆಗಿರಬಹುದೆಂದು ಊಹಿಸುತ್ತೇವೆ.

**ಬಾಲಚಂದ್ರನು** (ಸು. 1170) ತನ್ನ ತತ್ತ್ವಾರ್ಥತಾತ್ಪರ್ಯವೃತ್ತಿಯನ್ನು ಒಬ್ಬ ಕುಮುದಚಂದ್ರ ಭಟ್ಟಾರಕನ ಪ್ರತಿಬೋಧನಾರ್ಥವಾಗಿ ರಚಿಸಿದಂತೆ ಹೇಳುತ್ತಾನೆ. ಈ ಕುಮುದಚಂದ್ರನು ಬೇರೆ.

---

## ಮಲ್ಲಿಕಾರ್ಜುನಭಟ್ಟ. 1102.

ಸಿಕಾರಿಪುರದ 98 ನೆಯ 99 ನೆಯ ಶಾಸನಗಳನ್ನು ಈತನು ಬರೆದುದಾಗಿ ಆ ಶಾಸನಗಳ ಕೊನೆಯಲ್ಲಿರುವ—

ವಿನುತಮಧುರೋಕ್ತಿಯಿಂ ತ । ನ್ನನತಿಶಯವಚೋವಿಭೂತಿಗಿದುವೆ ಯಶಶ್ಶಾ ।
ಸನಮಾದುದೆಂಬಿನಂ ಶಾ । ಸನಮಸಿದಂ ಬರೆದನಾಶುಕವಿನಿಟಿಲಾಕ್ಷಂ ॥
ಕವಿನುತಮೆನಲೊರೆದತಿಪಟು । ಕವಿಸಾರಸ್ವತಮಹೋದಯನ ಕಿಂಕರನೀ ।
ವಿಧರ್ಮಶಾಸನಮನಭಿ । ನವಮಾಗಿರೆ ಮಲ್ಲಿಕಾರ್ಜುನಾರ್ಯಂ ಬರೆದಂ ॥

ಎಂಬ ಪದ್ಯಗಳಿಂದ ತಿಳಿಯುತ್ತದೆ. ಈತನಿಗೆ "ಆಶುಕವಿನಿಟಿಲಾಕ್ಷ" ಎಂಬ ಬಿರುದುಂಟು. ಈತನು ಬ್ರಾಹ್ಮಣಕವಿ; "ಸಾರಸ್ವತಮಹೋದಯ" ಎಂಬ ಬಿರುದುಳ್ಳ ಸೋಮೇಶ್ವರಪಂಡಿತದೇವನ ಶಿಷ್ಯನು. ಮೇಲೆ ಹೇಳಿದ ಎರಡು ಶಾಸನಗಳೂ ಚಾಳುಕ್ಯ ವಿಕ್ರಮಾದಿತ್ಯನ ಆಳಿಕೆಯಲ್ಲಿ ಮೊದಲನೆಯದು 1102 ರಲ್ಲಿಯೂ ಎರಡನೆಯದು 1112 ರಲ್ಲಿಯೂ ಬರೆದುವು. ಮೊದಲನೆಯದರಲ್ಲಿ—ಗೋವಿಂದದಂಡನಾಯಕನು ಕೇದಾರೇಶ್ವರದೇವರ ಧೂಪದೀಪನೈವೇದ್ಯಕ್ಕೆಂದು ದತ್ತಿಯಂ ಬಿಟ್ಟಂತೆಯೂ, ಎರಡನೆಯದರಲ್ಲಿ—ಕೊಂಕಣಾಧಿಪಚಂದ್ರನೃಪಕುಮಾರನಾದ ಕಾಮದೇವರಸನು ಕೇದಾರೇಶ್ವರದೇವರ ದೇವಕುಲದ ಖಂಡಸ್ಫುಟಿತ ಜೀರ್ಣೋದ್ಧಾರಾದಿಕಾರ್ಯಗಳಿಗೆಂದು ದತ್ತಿಯಂ ಬಿಟ್ಟಂತೆಯೂ ಹೇಳಿದೆ. ಈ ಶಾಸನಗಳ ಕೊನೆಯಲ್ಲಿರುವ—

ಪರಿಕಿಸೆ ಮಲ್ಲಿದೇವವಿಭುಗಾರ್ ಸಮನಿರ್ಬರುಮಿರ್ಕೆಲಂಗಳೊಳ್ ।
ಬರೆದುವನಂತ್ಯದಿಂ ಬರೆವ ಬಾಜಿಪ ಬಾಜಿಪ ಕಬ್ಬಮೆಂತುಟಂ ॥
ತಿರೆ ಪೊಸಗಬ್ಬಮಂ ನುಡಿವ ಭಾವಿಸಿ ಕೇಳ್ವ ಕಥಾಚತುಷ್ಕಮಂ ।
ಧರೆ ಪರಿಕರ್ಮಮೆಂದಿನಿತುಮಂ ಗುಣಿಯಿಪ್ಪ ಮತಿಪ್ರಭಾವದೊಳ್ ॥

ಎಂಬ ಪದ್ಯದಿಂದಲೂ, "ಶ್ರೀಮತ್ಸಹಜಸಾರಸ್ವತವಾಚಕವಾರಿಜಾಸನಂ," "ನಾನಾವಿಧಾವಧಾರಣಾಚಕ್ರವರ್ತಿಮಲ್ಲಿಕಾರ್ಜುನಭಟ್ಟಂ ಕವಿಕಂಜಸಂಭವಂ," "ಗೊಬ್ಬೂರ ಧಾರಣಾಸಾರ್ವಭೌಮ ಮಲ್ಲಿಕಾರ್ಜುನಭಟ್ಟಂ ಸುಕವೀಂದ್ರ ಷಣ್ಮುಖಂ" ಎಂಬ ವಾಕ್ಯಗಳಿಂದಲೂ ಈತನು ಅವಧಾರಣೆಗಳನ್ನು ಮಾಡುವುದರಲ್ಲಿ ಬಹಳ ಸಮರ್ಥನಾಗಿದ್ದನೆಂದೂ ಕವಿಶ್ರೇಷ್ಠನೆಂದೂ ತಿಳಿಯುತ್ತದೆ. ಗೊಬ್ಬೂರು ಇವನ ಸ್ಥಳವಾಗಿರಬಹುದು. "ಮಲ್ಲಿದೇವವಿಭು" ಎಂದು ಹೇಳಿಕೊಂಡಿರುವುದರಿಂದ ಈತನು ದೊರೆಯ ಕೈಯ ಕೆಳಗೆ ಒಬ್ಬ ಅಧಿಕಾರಿಯಾಗಿದ್ದಂತೆ ಊಹಿಸಬಹುದಾಗಿದೆ. ಡಾಕ್ಟರ್ ಭೌದಾಜಿಯವರ ಪುಸ್ತಕದಲ್ಲಿ ಕೊಟ್ಟಿರುವ ವಿಕ್ರಮಾದಿತ್ಯನಕಾಲದ 48 ನೆಯ ಶಾಸನವನ್ನೂ ಇವನೇ ಬರೆದಿದ್ದಾನೆ. ಇವನು ಪ್ರೌಢಕವಿಯೆಂಬಂಶವನ್ನು ಶಾಸನಪದ್ಯಗಳು ವ್ಯಕ್ತಪಡಿಸುತ್ತವೆ. ಇವುಗಳಲ್ಲಿ ಕೆಲವನ್ನು ಉದ್ಧರಿಸಿ ಬರೆಯುತ್ತೇವೆ:—

## ವಿಕ್ರಮಾದಿತ್ಯ.

ಸ್ವಸ್ತಿ ಶ್ರೀವನಿತಾರ್ಪಿತ । ವಿಸ್ತೀರ್ಣೋರಸ್ಥಲಂ ರಿಪುನ್ನಜಮುಸ್ತ ।
ನ್ಯಸ್ತಚರಣಂ ಸಮುಸ್ತಜ । ನಸ್ತುತಸಿತಕೀರ್ತಿ ವಿಕ್ರಮಾದಿತ್ಯನ್ನಪಂ ॥ 216 ॥

ಬಿರುದಂ ಬಿಟ್ಟಳ್ತಿ ಕೊಂಡಿರ್ವತಿಭಯರಸದಿಂ ತಮ್ಮ ತಮ್ಮಾಳ್ಗ ವಿಶ್ವಂ ।
ಭರೆಯಂ ಬಿಟ್ಟಿಕ್ಕುಂಜಂಗಳೊಳುಟುದುಟಿದಿರ್ದರ್ಕೆ ಮಾಜಾಂತು ಯುದ್ಧಾ ॥
ಜಿರದೊಳ್ ಬಿಟಾತ್ಮಕಾಂತಾಘಮನನಮರವಧೂವರ್ಗದೊಳ್ ಲೀಲೆಯಿಂದಂ ।
ಸೆರೆದಿರ್ಪುದ್ಯೋಗಮುಂ ಶಾತ್ರವರ್ಗೆ ಸಲಿಸುವಂ ವಿಕ್ರಮಾದಿತ್ಯದೇವಂ ॥ 217 ॥

## ಪರಶುರಾಮ.

ಧರಣೀಮಂಡಲದೊಳ್ ಧರಾಭುಜರನಿರ್ವರ್ತ್ತೊಂದು ಸೂಲ್ರಿಂ ಕೊಂದು ತ ।
ದ್ಧರಣೀಮಂಡಲಮಂ ಸಮಸ್ತಧರಣೀದೇವರ್ಗೆ ವಾರ್ಧ್ಯಂತಿಕಂ ॥
ಬರಮಿತ್ತಲ್ಲಿ ಧರಾಮರಸ್ತದೊಳಿರಲ್ಕಾಗೆಂದು ಪೋಗೊತ್ತಿ ಸಾ ।
ಗರಮಂ ಚಾನಿಪ ಕೊರ್ಪಿನೊಳ್ ಬುಧನುತಂ ಶ್ರೀರೇಣುಕೇನಂದನಂ ॥ 218 ॥

ಕಣಮಾತ್ರೋದಕಮನಿರ । ಲ್ಕಣವಿಾಯದೆ ಪಶ್ಚಿಮಾಬ್ಧಿ ತೆಗೆದೆಡೆಯೊಳ್ ಕೊಂ ।
ಕಣಸಪ್ತಕಮಂ ಫಣಿಕಂ । ಕಣವರದೆ ನಿಜಾಶ್ರಯಾರ್ಧಮಾವಿಭು ಪಡೆದಂ ॥ 219 ॥

### ಗೋವಿಂದದಂಡನಾಯಕ.

ಅರಿಭಟರಳ್ಗರುಳ್ವಾಣಿಲ ಬಾಸಿಗದಿಂ ನೊರೆನೆತ್ತರೆಂಬ ಬಂ ।
ಧುರತರಕುಂಕುಮದ್ರವದಿನುದ್ಧಶಿರಸ್ಸರಸೀರುಹಂಗಳಿಂ ॥
ಕರಮೊಸೆದರ್ಚಿಪಂ ನಿಜಭುಜಾಸಿಲತಾಸ್ಥಿತಚಂಡಿಕಾಪದಾಂ ।
ಬುರುಹಯುಗಂ (ಗಳಂ) ಸಮರರಂಗದೊಳೀರಣರಂಗಭೈರವಂ ॥ 220 ॥

..ಸನನಂ.....ಮುಂತಣ..ಸ.....ಯಿ..ಪೋಗದಾಂ ।
ಪೆಸಕಮನಾಂತವಂಗೆ ಪೆಸರಾವುದದೇತಱ ಮೇಲೆ ಬಿಟ್ಟಿ ತಾ ॥
ನ್ನೊಸೆಯಿಸುವಂ ಪ್ರಿಯಂ ಮುಳಿದಳಂ ಕವಿಗೇಂ ಪೆಸರಾರ್ಪಿನೇಟ್ಟಿ್ಗಯಿಂ ।
ಸುಮತಿಯೊಳ್ ವಿಚಾರಿಸುವೊಡೀದೊಗೆಯುಂ ರಣರಂಗಭೈರವಂ ॥ 221 ॥

[ಕಲಿಕಾಲಕರ್ಣಂ.]

ಬಿರುದರ ಜವನದಟರ ಗೋ । ಣ್ಮರಿ ಮಲೆವರ ಮಾರಿ ಗಂಡಮಚ್ಚರದೊಳ್ ಮ ।
ಚ್ಚರಿಸುವರ ಮಿಟ್ಟು ಶೌರ್ಯಾ । ಭರಣಂ ರಣರಂಗಭೈರವಂ ಗೋವಿಂದಂ ॥ 222 ॥

### ಕೊಂಕಣಾಧಿಪ ಚಂದ್ರನೃಪ.

ಕಲಿತನಮಾರ್ಗಮಿಾಕಲಿ ಕಟಾಕ್ಷಿಸುವನ್ನೆಗಮೆಲ್ಲಿಯುಂ ಭುಜಾ ।
ಬಲದಳವೀಭುಜಾಬಲಿ ವಿರೋಧಿಸುವನ್ನೆಗಮೇಕಮಾರ್ಗದಿಂ ॥
ಸಲುತಿರಲಕ್ಕುಮುರ್ಬಿದದಟೀಯದಟಂ ಭೃಕುಟಿಪ್ರಭಾವಮಂ ।
ನೆಲೆಗೊಳಿಪನ್ನೆಗಂ ಮುಖದೊಳೆಂಬುದು ಚಂದ್ರನರೇಂದ್ರನಂ ಜಗಂ ॥ 223 ॥

### ಕಾಮದೇವರಸ.

ರತಿಗೆಣೆಯಾಗೆ ಬೀರಸಿರಿ ಮಾಧವಮಾಗೆ ಮಹಾಹವಂ ಸಮೂ ।
ರ್ಜಿತವಿಷಮಾಸ್ತ್ರಪಾತದಿನರಾತಿಗಳಂ ದಿವಿಜೇಂದ್ರಕಾಮಿನೀ ॥
ತತಿಗೆಱಗಿಪ್ಪ ಬಲ್ಮೆ ನಿಜಮಾಗಿರೆ ಸಂದ ಸಮಗ್ರನಬ್ಬ ಬಾ ।
ಪ್ರತಿಶಯಕಾಮದೇವನಿವನೆಂದಪುದುರ್ವರೆ ಕಾಮದೇವನಂ ॥ 224 ॥

---

## ಅಚರಾಜ, ಮಲ್ಲಿದೇವ. 1104.

ಇವರಿಬ್ಬರೂ ಅಬ್ಬಲೂರಲ್ಲಿರುವ ಒಂದು ಶಾಸನವನ್ನು [1] ಬರೆದುದಾಗಿ ಆ ಶಾಸನದ ಕೊನೆಯಲ್ಲಿರುವ "ಸುಕರಕವಿಯಪ್ಪಚರಾಜನುಂ ಸಹಜಕವಿ ಮಲ್ಲಿದೇವನುಂ ಬರೆದರ್" ಎಂಬ ವಾಕ್ಯದಿಂದ ತಿಳಿಯುತ್ತದೆ. ಈ ಶಾಸನವು ಚಾಳುಕ್ಯ ವಿಕ್ರಮಾದಿತ್ಯನ ಆಳಿಕೆಯಲ್ಲಿ 1104 ರಲ್ಲಿ ಹುಟ್ಟಿದುದು. ಇದರಲ್ಲಿ

1. *Epigraphia Indica*, V, 231.

ಮಹಾಸಾಮಂತಾಧಿಪತಿ ಗೋವಿಂದರಸನು ಏಚಗಾವುಂಡನ ಪ್ರಾರ್ಥನಾನುಸಾರವಾಗಿ ಅಬ್ಬಲೂರ ಬ್ರಹ್ಮೇಶ್ವರದೇವಸ್ಥಾನಕ್ಕೆ ನಾಗರಖಂಡಕ್ಕೆ ಸೇರಿದ ಮುರಿಗನ ಹಳ್ಳಿಯನ್ನು ಶೈವಾಚಾರ್ಯನಾದ ಸೋಮೇಶ್ವರಪಂಡಿತನ ಕಾಲಂ ಕರ್ಚಿ ಬಿಟ್ಟಂತೆ ಹೇಳಿದೆ. ಈ ಶಾಸನದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

ಶ್ರೀಕಂಠದೇವ.

ಹರಪಾದಾಂಭೋಜದೊಳ್ ಚಿತ್ತಮನೆಸೆವ ಮುಖಾಂಭೋಜದೊಳ್ ಭಾರತೀಸೌಂ ।
ದರಿಯಂ ಚಾರಿತ್ರದೊಳ್ ನಿರ್ಮಲತೆಯನಖಿಲಾಶಾಂತದೊಳ್ ಶಕ್ರದಿಕ್ಕುಂ ॥
ಜರಭಾಸ್ವತ್ಕೀರ್ತಿಯುಂ ಬಾಪ್ಪುಜಿ ನಿಲಿಸಿದನುದ್ಯದ್ಭುಣಾಘಂ ಮುನೀಂದ್ರಾ ।
ಭರಣಂ ಶ್ರೀಕಂಠದೇವಂ ಬುಧಜನತಿಲಕಂ ತರ್ಕವಿದ್ಯಾಸಮುದ್ರಂ ॥ 225 ॥

ಸೋಮೇಶ್ವರಸೂರಿ.

ಕೆಲಬರ್ ತರ್ಕವಿಶಾರದರ್ ಕೆಲಬರಾಪ್ತಾಳಾಪಸಂಬೋಧಕರ್ ।
ಕೆಲಬರ್ ನಾಟಕಕೋವಿದರ್ ಕೆಲಬರೊಳ್ಗಬ್ಬಂಗಳಂ ಬಲ್ಲವರ್ ॥
ಕೆಲಬರ್ ವ್ಯಾಕರಣಜ್ಞರಿಂತಿನಿತುಮಂ ಬಲ್ಲನ್ನರಿಲ್ಲೆಲ್ಲಮಂ ।
ಸಲೆ ಸೋಮೇಶ್ವರಸೂರಿ ಬಲ್ಲನನಘಂ ನೈಯಾಯಿಕಾಗ್ರೇಸರಂ ॥ 226 ॥

ಅಕಳಂಕಾಮ್ರಕುಜಾತಚೈತ್ರಸಮಯಂ ಲೋಕಾಯತಾಂಭೋಧಿಶೀ ।
ತಕರಂ ಸಾಂಖ್ಯದಿಶಾದಿಶಾರದನಿ ಮಿಮಾಂಸಾಂಗನಾಕಂಬುಕಂ ॥
ಶಕನನ್ಯೋಕ್ತಿಕಭೂಷಣಂ ಸುಗತನೀರೇಜಾತಚಂಡಾಂಶು ತಾ ।
ರ್ಕಿಕಸೋಮೇಶ್ವರಸೂರಿ ಪೆಂಪುವಡೆದಂ ನೈಯಾಯಿಕಾಗ್ರೇಸ ಂ ॥ 227 ॥

---

## ನಯಸೇನ. 1112.

ಈತನು ಧರ್ಮಾಮೃತವನ್ನು ಬರೆದಿದ್ದಾನೆ. **ಎರಡನೆಯ ನಾಗವರ್ಮನು** (ಸು. 1145) ಭಾಷಾಭೂಷಣದ 72 ನೆಯ ಸೂತ್ರವಾದ "ದೀರ್ಘೋಕ್ತಿರ್ನಯಸೇನಸ್ಯ" ಎಂಬುದರಲ್ಲಿ ನಯಸೇನಮುನಿಮತಾನುಸಾರವಾಗಿ ಸಂಬೋಧನಕ್ಕೆ ದೀರ್ಘವುಂಟೆಂದು ಹೇಳುವುದರಿಂದ ಈತನು ಕನ್ನಡ ವ್ಯಾಕರಣವನ್ನು ಸಹ ಬರೆದಿರುವಂತೆ ತೋರುತ್ತದೆ. ಧರ್ಮಾಮೃತವು ಹೊರತು ಈ ಕವಿಯ ಇನ್ನಾವ ಗ್ರಂಥವೂ ನಮಗೆ ದೊರೆತಿಲ್ಲ. ಈತನು ಜೈನಕವಿ.

ಮುಳುಗುಂದದೊಳಿರ್ದು ಮಹೋ । ಜ್ಜ್ವಳಧರ್ಮಾಮೃತಮನಲ್ಪಾಯಂದಂ ಭವ್ಯಾ ।
ವಳಿಗಱುಪಿದಂ ಧರಿತ್ರೀ । ತಳಪೂಜ್ಯಂ ಸುಕವಿನಿಕರಪಿಕಮಾಕಂದಂ ॥

ಎಂಬುದರಿಂದ ಈ ಕವಿ ಈ ಗ್ರಂಥವನ್ನು ಮುಳುಗುಂದದಲ್ಲಿ ಬರೆದಂತೆ ತಿಳಿಯುತ್ತದೆ. ಅದೇ ಇವನ ಸ್ಥಳವಾಗಿರಬಹುದು.

ಗಿರಿಶಿಖಿವಾಯುಮಾರ್ಗಶಶಿಸಂಖ್ಯೆಯೊಳಾವಗಮೊಂದಿ ವರ್ತಿಸು ।
ತ್ತರೆ ಶಕಕಾಲಮುನ್ನತಿಯ ನಂದನವತ್ಸರದೊಳ್ . . . . . ॥
. . . . ಕಾವ್ಯರತ್ನಮೆನಿಸಿರ್ದೀಗ್ರಂಥಂ ನಿರ್ವಾಹಮಾಯ್ತು ನಿರ್ವಿಘ್ನತೆಯಿಂ ॥

ಎಂಬ ಅಸಮಗ್ರಪದ್ಯದಿಂದ ಈ ಗ್ರಂಥವನ್ನು ಶಕ 1037 ರಲ್ಲಿ ಬರೆದಂತೆ ತಿಳಿಯುತ್ತದೆ. ಆದರೆ ನಂದನವರ್ಷವು 1037 ಆಗುವುದಿಲ್ಲ; 1034 ಆಗುತ್ತದೆ. 'ಗಿರಿ' ಎಂಬುದರಿಂದ ಜೈನರು ನಾಲ್ಕು ಎಂಬ ಸಂಖ್ಯೆಯನ್ನು ಸೂಚಿಸುವಂತೆ ತೋರುತ್ತದೆ. ಹಾಗಿದ್ದರೆ 1112 ರಲ್ಲಿ ಈ ಗ್ರಂಥವು ಹುಟ್ಟಿರಬೇಕು.

ಈ ಕವಿಗೆ 'ಸುಕವಿನಿಕರಪಿಕಮಾಕಂದ,' 'ಸುಕವಿಜನಮನಃಪದ್ಮಿನೀ ರಾಜಹಂಸ' ಎಂಬ ಬಿರುದುಗಳು ಇದ್ದಂತೆ ಆಶ್ವಾಸಗಳ ಆದ್ಯಂತಪದ್ಯಗಳಿಂದ ತಿಳಿಯುತ್ತದೆ. ಅಲ್ಲದೆ ಆಶ್ವಾಸಗಳ ಕೊನೆಯ ಗದ್ಯಗಳಲ್ಲಿ 'ದಿಗಂಬರದಾಸ,' 'ನೂತ್ನಕವಿತಾವಿಲಾಸ' ಎಂದೂ ಹೇಳಿಕೊಂಡಿದ್ದಾನೆ. ಈತನು ತನ್ನ ಗುರುವಿನ ಹೆಸರನ್ನು ಹೇಳದೆ, 'ತ್ರೈವಿದ್ಯಚೂಡಾಮಣಿ,' 'ತ್ರೈವಿದ್ಯಚಕ್ರೇಶ್ವರ,' 'ತ್ರೈವಿದ್ಯಲಕ್ಷ್ಮೀಪತಿ,' 'ತ್ರೈವಿದ್ಯಚಕ್ರಾಧಿಪ' ಎಂದು ಸೂಚಿಸಿದ್ದಾನೆ. ಆದರೂ ನರೇಂದ್ರಸೇನಮುನಿಯನ್ನು ಮೂರುಪದ್ಯಗಳಲ್ಲಿ ಸ್ತುತಿಸಿ, ತ್ರೈವಿದ್ಯಚಕ್ರೇಶ್ವರ ಎಂದು ಹೇಳಿ, ಚಾಳುಕ್ಯಭುವನೈಕಮಲ್ಲನಿಂದ(1068–1076) ಪೂಜಿತನಾದ ಗುಣಚಂದ್ರಪಂಡಿತನಿಗೆ ಈ ನರೇಂದ್ರಸೇನಮುನಿ "ತ್ರೈವಿದ್ಯಮಹಾಭಿಧಾನಮುಂ ಕೊಟ್ಟರ್" ಎಂಬುದರಿಂದ ಈತನೇ ಕವಿಯ ಗುರುವಾಗಿರಬಹುದು.

ಕವಿ ತನಗೆ ಹಿಂದೆ ಇದ್ದ ಕನ್ನಡಕವಿಗಳನ್ನು ಈ ಪದ್ಯದಲ್ಲಿ ಸ್ತುತಿಸಿದ್ದಾನೆ–

ಅಸಗನ ದೇಸೆ ಪೊನ್ನನ ಮಹೋನ್ನತಿವೆತ್ತ ಚಿಡಂಗು ಪಂಪನೊಂ।
ದಸದೃಶಮಪ್ಪಪೂರ್ವರಸಭಾವ ಗಜಾಂಕುಶಸೊಳ್ಪುವೆತ್ತು ರಂ ॥
ಜಸುವ ಸದರ್ಥದೃಷ್ಟಿ ಗುಣವರ್ಮನ ಜಾಣ್ ಕವಿರತ್ನನೊಂಜೆ ಶೋ।
ಭಿಸೆ ನೆಲಸಿರ್ಕ್ಕೆ ಧಾರಿಣಿ ಮನಂಗೊಳಿ ಮತ್ಕೃತಿಯೊಳ್ ನಿರಂತರಂ ।

ತನ್ನ ಗುಣಗಳನ್ನು ಈ ಪದ್ಯದಲ್ಲಿ ಹೇಳಿಕೊಂಡಿದ್ದಾನೆ–

ಮಾನಿತಶೀಲನಿಧಾನನ। ನೂನಗುಣಂ ಸಕಳಭವ್ಯಜನಬುಧಜನಪ ।
ತ್ರಾನಂದಕರಂ ಕೇಳ್ ನಯ। ಸೇನಬುಧಂ ಸುಕವಿನಿಕರಪಿಕಮಾಕಂದಂ ॥

ಈತನು–ಕನ್ನಡದಲ್ಲಿ ಗ್ರಂಥವನ್ನು ಬರೆಯುತ್ತೇನೆಂದು ಆರಂಭಿಸಿ ಸಂಸ್ಕೃತ ಪದಗಳನ್ನು ಸ್ವೇಚ್ಛೆಯಾಗಿ ಉಪಯೋಗಿಸಬಾರದು–ಎಂಬಂಶವನ್ನು ಈ ಪದ್ಯಗಳಲ್ಲಿ ಹೇಳುತ್ತಾನೆ:—

ಪೊಸಗನ್ನಡದಿಂ ವ್ಯಾವ। ರ್ಣಿಸುವೆಂ ಸತ್ಕೃತಿಯನೆಂದು ಕನ್ನಡಮಂ ಚಿಂ।
ತಿಸಿ ಕೂಡಲಾಜಿದಕ್ಕಟ। ಮಿಸುಕದ ಸಕ್ಕದಮನಿಕ್ಕುವವನುಂ ಕವಿಯೇ ॥

ಸಕ್ಕದಮಂ ಪೇೞ್ದೊಡೆ ನೆಱಿ । ಸಕ್ಕದಮಂ ಪೇೞ್ದಿ ಶುದ್ಧಕನ್ನಡದೊಳ್ ತಂ ।
ದಿಕ್ಕುವುದೆ ಸಕ್ಕದಂಗಳ। ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ ॥

ಇದರಿಂದ ಈ ಕವಿಯ ಕಾಲದಲ್ಲಿಯೇ ಕವಿಗಳು ಕನ್ನಡಕಾವ್ಯಗಳಲ್ಲಿ ಅನಾವಶ್ಯಕವಾಗಿ ಅನೇಕ ಸಂಸ್ಕೃತಪದಗಳನ್ನು ಪ್ರಯೋಗಿಸುತ್ತಿದ್ದರೆಂದು ತಿಳಿಯುತ್ತದೆ.

ಇವನ ಗ್ರಂಥ

## ಧರ್ಮಾಮೃತ.

ಈ ಗ್ರಂಥದಲ್ಲಿ—'ಜಿನಮತದೊಳೆನಿತು ಸಾರಮ। ದನಿತುಂ ಲೇಸಾಗಿ ತೋರ್ಪುದು' ಎಂದು ಹೇಳುತ್ತಾನೆ. ಇದಕ್ಕೆ 'ಕಾವ್ಯರತ್ನ' ವೆಂದು ಹೆಸರಿಟ್ಟಿದ್ದಾನೆ. ಇದು 14 ಆಶ್ವಾಸಗಳಾಗಿ ಭಾಗಿಸಲ್ಪಟ್ಟಿದೆ. ಇದರಲ್ಲಿ–ವಿಪುಳಾದ್ರಿಯಲ್ಲಿ ವೀರನಾಥಂ ನೆಲಸಿರಲು, ಆ ಸಭೆಯಲ್ಲಿರ್ದ ಧರ್ಮೋಪದೇಶಜ್ಞನಾದ ಗೌತಮನಂ ಶ್ರೇಣಿಕಮಹಾರಾಜನು ಧರ್ಮೋಪದೇಶಮಂ ಮಾಳ್ಪಂತೆ ಕೇಳಿಕೊಳ್ಳಲು, ಅವನು ಜಿನದರ್ಶನಮಾಹಾತ್ಮ್ಯವನ್ನೂ, ಆ ದರ್ಶನಕ್ಕೆ ಅಂಗಗಳಾದ ನಿಶ್ಶಂಕೆ, ನಿಷ್ಕಾಂಕ್ಷೆ, ನಿರ್ವಿಚಿಕಿತ್ಸೆ, ಅಮೂಢದೃಷ್ಟಿತ್ವ, ಉಪಗೂಹನ, ಸ್ಥಿತಿಕರಣ, ವಾತ್ಸಲ್ಯ, ಧರ್ಮಪ್ರಭಾವನೆ ಎಂಬಿವುಗಳನ್ನೂ, ಮತ್ತು

ಕೊಲ್ಲದ ಪುಸಿಯದ ಕಳವಿಸಿ। ನಿಲ್ಲದ ಪರವನಿತೆಯರ್ಗ್ಗೆ ಪದಿಪಿಂ ಚಿತ್ತಂ।
ಸಲ್ಲದ ಪರಿಗ್ರಹಕ್ಕಳಿ । ಪಿಲ್ಲದ ಸುವ್ರತಮಿವಯ್ದುಮಲ್ಲಮೆ ರತ್ನಂ ॥

ಎಂದು ಹೇಳಲ್ಪಡುವ ಅಹಿಂಸಾವ್ರತ, ಸತ್ಯವ್ರತ, ಅಸ್ತೇಯವ್ರತ, ಸಬ್ರಹ್ಮವ್ರತ, ನಿಷ್ಪರಿಗ್ರಹವ್ರತ ಎಂಬ ಪಂಚಾಣುವ್ರತಗಳನ್ನೂ ಹೇಳಿ,

ಇಂತೀಪದಿನಾಲ್ಕುಮನ। ತ್ಯಂತಂ ದೃಢಹೃದಯನಾಗಿ ತಾಳ್ದಿರ್ದಂಗೋ।
ರಂತೆ ನಿರಂತರಸೌಖ್ಯಂ । ಭ್ರಾಂತಿಲ್ಲದೆ ಕೂಡುವಲ್ಲಿ ಸಂದೆಯಮುಂಟೇ ॥

ಎನ್ನಲು, 'ಗಣಧರದೇವರ್ಗೆ ಮಗಧಾವನೀವಲ್ಲಭಂ ಭಕ್ತಿಪೂರ್ವಕಂ ವಂದಿಸಿ ಎನಗೆ ತಿಳವಂತೆ ಆ ದರ್ಶನಮುಂ ನಿಶ್ಶಂಕಾದ್ಯಷ್ಟಗುಣಂಗಳುಂ ಪಂಚಾಣುವ್ರತಮುಮೆಂಬ ಪದಿನಾಲ್ಕು ಮಹಾರತ್ನಂಗಳೊಳೊಂದೊಂದಱೊಳ್ ಚರಿಯಿಸಿ ನಿರ್ವೃತಿಯನೆಯ್ದಿದ ಮಹಾಪುರುಷರ ಕಥೆಗಳಂ ಬೆಸಸಲ್ವೇೞ್ಕುಮೆನೆ ಗಣಧರರ್ ಪೇೞಲ್ ತಗುಳ್ದರ್'—ಎಂದಾರಂಭಿಸಿ, ಈ 14 ವಿಷಯಗಳನ್ನು ಆಶ್ವಾಸಕ್ಕೆ ಒಂದೊಂದರಂತೆ 14 ಆಶ್ವಾಸಗಳಲ್ಲಿ ಹೇಳಿದ್ದಾನೆ.

ಗ್ರಂಥಾವತಾರದಲ್ಲಿ ವೀರಜಿನನನ್ನು ಸ್ತುತಿಸಿದ್ದಾನೆ. ಬಳಿಕ ಸಿದ್ಧಾದಿಗಳನ್ನೂ ಯಕ್ಷಿಯಕ್ಷರನ್ನೂ ಸರಸ್ವತಿಯನ್ನೂ ಸ್ತುತಿಸಿ, ಅನಂತರ ಅರ್ಹದ್ಬಲ್ಯಾ

ಚಾರ್ಯನಿಂದ ಅಕಲಂಕದೇವನವರೆಗೆ ಕ್ರಮವಾಗಿ ಗುರುಗಳನ್ನು[1] ಹೊಗಳಿದ್ದಾನೆ. ಆಶ್ವಾಸಗಳ ಕೊನೆಯಲ್ಲಿ—

"ಇದು ನಿಖಿಲದಿವಿಜಪರಿಬೃಢಮಕುಟಘಟಿತಮಣಿಕಿರಣವಿಲುಳಿತಚುಂಬನೀಯಪರಮ ಜಿನಚರಣಯುಗಳಸರಸೀರುಹಮತ್ತಮಧುಕರ ನಿರುಪಮಸಹಜಕವಿಜನಪಯಃಪಯೋಧಿ ಹಿಮಕರನುತಭಾವಯುತ ದಿಗಂಬರದಾಸ ನೂತ್ನಕವಿತಾವಿಳಾಸ ಶ್ರೀಮನ್ನಯಸೇನದೇವ ವಿರಚಿತಮಪ್ಪ ಧರ್ಮಾಮೃತದೊಳ್"

ಎಂಬ ಗದ್ಯವಿದೆ.

ಇವನ ಗ್ರಂಥವು ಲಲಿತವಾಗಿಯೂ ಮೃದುಮಧುರಪದಗುಂಫಿತವಾಗಿಯೂ ನೀತಿಶ್ಲೋಕಪುಂಜರಂಜಿತವಾಗಿಯೂ ಇದೆ. ಇದರಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

ವಸಂತ.

ವನಜಂಗಳ್ ದಳವೇಱಿ ಚೂತಲತೆಗಳ್ ನೀರೇಱಿ ಶೀತಾಂಶು ತೊ।
ಟ್ಟನೆ ಪೂರ್ವಾದ್ರಿಯನೇಱಿ ಮನ್ಮಥಗಜಂ ಸೊರ್ಕೇಱಿ ಪೊನ್ನುಯ್ಯಲಂ॥
ವನಜಾತಾಕ್ಷಿಯರೇಱಿ ಕಾಮನ ಸರಲ್ ಕೂರ್ಪೇಱಿ ಪುಂಡ್ರೇಕ್ಷುಚಾ।
ಪನ ಚಾಪಂ ಕೊಲೆಗೇಱಿ ಬಂದುದು ವಸಂತಂ ಸಂತತೋತ್ಸಾಹದಿಂ ॥ 228 ॥

ಅಳಿಗಳ ಧಾನಮುಂ ನಿಮಿರೆ ಕೋಕಿಳನಿಸ್ವನಮುಣ್ಮೆ ಕೇಕಿಸಂ।
ಕುಳಿರವಮೊಪ್ಪೆ ಕೆಂದಳಿರ ಗೊಂದಳದಿಂ ಸಹಕಾರಭೂರುಹಾ॥
ವಳಿ ಕಡುರಯ್ಯಮಾಗೆ ವನಜಂಗಳರಲ್ದಿರೆ ಕೂಡೆ ಚಂದ್ರನು।
ಜ್ವಳಿಸೆ ವಿನೋದಮುಂ ಪಡೆಯೆ ಬಂದನೊಱಲ್ದ ವಸಂತವಲ್ಲಭಂ ॥ 229 ॥

ಕಳವು.

ನರಕದ ದಾರಿ ಮಹಾನಿ। ಷ್ಠುರದುಃಖಿದ ಬೀಜ್ಮ ಪುಣ್ಯದ ಕ್ಷಯಮಳಿಪಿಂ।
ಗಿರಲೆಡೆ ಕೊಲೆಯ ತವರ್ಮನೆ। ದುರಿತದ ಪೆರ್ಬೆಳಸು ಕಳವು ಬಗೆವೊಡೆ ಜಗದೊಳ್
॥ 230 ॥

---

1. ಅರ್ಹದ್ಬಲ್ಯಾಚಾರ್ಯ, ಗುಣಧರಭಟ್ಟಾರಕ, ಮುಂಕ್ಷ್ವಾಚಾರ್ಯ, ನಾಗಹಸ್ತ್ಯಾಚಾರ್ಯ, ವೃಷಭಾಚಾರ್ಯ, ಧರಸೇನಾಚಾರ್ಯ, ಭೂತಬಲಿ, ಪುಷ್ಪದಂತ, ಕೊಂಡಕುಂದ, ಸಿಂಹನಂದಿ, ಕೂಚಿಭಟ್ಟಾರಕ, ಸಮಂತಭದ್ರ, ಕವಿಪರಮೇಷ್ಠಿ, ಪೂಜ್ಯಪಾದ, ವಿದ್ಯಾನಂದ, ಅನಂತವೀರ್ಯ, ಸಿದ್ಧಸೇನ, ಶ್ರುತಕೀರ್ತಿ, ಪ್ರಭಾಚಂದ್ರ, ಬೊಪ್ಪದೇವ, ಏಳಾಚಾರ್ಯ, ವೀರಸೇನ, ಜಿನಸೇನ, ಗುಣಭದ್ರ, (ಶು) ಭಚಂದ್ರ, ಅಜಿತಸೇನ, ಸೋಮದೇವ, ನರೇಂದ್ರಸೇನ, ನಯಸೇನಮುನಿ, ದಿವಾಕರನಂದಿ, ಶುಭಚಂದ್ರ, ರಾಮಣಂದಿ, ನರೇಂದ್ರಸೇನಮುನಿ, ಭೇರುಂಡಪಂಡಿತ, ವಾಸುಪೂಜ್ಯ, ಪದ್ಮಣಂದಿ, ಮೇಘಚಂದ್ರ, ಮಾಘಣಂದಿ, ಪ್ರಭಾಸೇನ, ಅರ್ಹಣಂದಿ, ಶ್ರುತಕೀರ್ತಿ, ರಾಮಸಿಂಹ, ವಾಸುಪೂಜ್ಯ, ಚಾರುಸೇನ, ಕುಕ್ಕುಟಾಸನ ಮುಲಧಾರಿಮುನಿ, ಮೇಘಚಂದ್ರ, ರಾಮಸೇನ, ಕನಕನಂದಿ, ಅಕಲಂಕದೇವ.

## ವಿಚಾರಪರತೆ.

ತೆಂಗಿನ ಕಾಯದೊಂದು ಕಠಿನತ್ವಮನೊರ್ಮೆಯೆ ಕಂಡು ಪೊಲ್ಲದೆಂ।
ದೇಂ ಗಳ ಬಿರ್ಚಿ ಭೀರುತನದಿಂ ಬಿಡದೊಯ್ಯನೆ ಮೂಸಿ ನೋಡಿ ಕಾಯ್॥
ಪಿಂಗಿದುದೆಂಬ ಬಿಳ್ತನಮನೊಯ್ಯನೆ ಮಾಡದೆ ಬುದ್ಧಿವಂತರಂ।
ಪಿಂಗದೆ ಪೊರ್ದಿ ಮೆಲ್ಲನೆ ವಿಚಾರಿಸಿ ಪೊರ್ದುವುದಾಪ್ತನಪ್ಪನಂ ॥ 231 ॥

## ವಿವಿಧನೀತಿ.

ಕಲ್ಲಂ ಕರ್ಬುನಮುಂ ನೋ। ಡೆಲ್ಲಿಯುಮೋರಂತೆ ಪಡೆಯಲಪ್ಪುದು ಪೊನ್ನಂ।
ಲ್ಲಲಿತಮಪ್ಪ ರತ್ನಮ। ನೆಲ್ಲಿಯುಮೋರಂತೆ ಪಡೆಯಲಪ್ಪುದೆ ಧರೆಯೊಳ್ ॥ 232 ॥

ಪೆಣ್ಣಿಂಗಂ ಪೊನ್ನಿಂಗಂ। ಮಣ್ಣಿಂಗಂ ಕಾಂಕ್ಷೆಯಿಂದಮೆಱಗದೆ ಲೋಕಂ।
ಬಣ್ಣಿಸೆ ಸಂಚಲನಾಗದೆ। ತಿಣ್ಣಂ ನಡೆವವನೆ ತಾಂ ತಪೋಧನನಕ್ಕುಂ ॥ 233 ॥

ಜಲಧಿಯೊಳೆ ಕಪ್ಪೆ ಸತ್ತೊಡೆ। ಜಲಧಿಯ ನೀರೆಲ್ಲಮಟ್ಟಿ ಕೊಳೆನಾರ್ಪುವೆ ನಿ॥
ರ್ಮಲನಲ್ಲದೊರ್ವನಿಂದಂ। ಮಲಿನತೆ ಪೊರ್ದುವುದೆ ವಿಮಳಸದ್ಧರ್ಮಮುಮಂ
॥ 234 ॥

ಅರಳೆಯ ಕೆಚ್ಚಿನಂತೆ ಧನಮಾಯು ವಸಂತದ ಶೋಭೆಯಂತೆ ಪೆ।
ರ್ದೆರೆಗಳ ಬಂಬಲಂತೆ ಸೊಬಗೊಡ್ಡಿದ ಮೇಘಸಮೂಹದಂತೆ ನಂ॥
ಟರ ಕಡುಗೂರ್ಮೆ ಪಣ್ತ ಮುರನಂತೆ ವಿಳಾಸದಗುರ್ಬು ಮೈಮೆಯು।
ಬ್ಬರಮದು ನೀರ ಬೊಬ್ಬುಳಿಕೆಯಂತೆ ನಿರಂತರಮಲ್ಲಿವೆಲ್ಲಿಯುಂ ॥ 235 ॥

ಉರಗವಿಷಮೇಱಿದವರುಂ। ನಿರಿಯುಳ್ಳರ್ ಮರ್ದುಗುಣಿಕೆಯುಂ ತಿಂದವರುಂ।
ಪಿರಿದುಂ ಪೈತ್ಯಾಧಿಕರುಂ। ಧರೆಯೊಳ್ ಮೆಯ್ಯೞಯರೆಂಬ ನುಡಿ ತಪ್ಪುಗುಮೇ
॥ 236 ॥

ಏಗೆಟ್ಟತ್ತೆನ್ನದೆ ಮನ। ವೋಗಡಿಸದೆ ತೀರದಾರಿನೆಂದುಡುಗದೆ ನಿ।
ರ್ವೇಗಂ ಚಿತ್ತದೊಳಣಮಿನಿ। ಸಾಗದೆ ತಾಂ ಮಾಱ್ಪುದನ್ನದಾನಮನೞವಂ ॥ 237 ॥

ತನ್ನವರೆನ್ನವರೆನ್ನದೆ। ಸನ್ನುತಮತಿಯಾಗಿ ಸಕಲಜೀವಂಗಳುಮಂ।
ತನ್ನಂ ರಕ್ಕಿಸುವಂತಿರೆ। ಬಿನ್ನಣಮೇನಱಿದು ರಕ್ಕಿಪುದು ಸತ್ಪುರುಷಂ ॥ 238 ॥

ಕನ್ನಡಿಯಂ ತೋಱುವೊಡ। ತ್ಯುನ್ನತಸಲ್ಲಕ್ಷಣಂಗೆ ಮುನಿಸಾಗದು ಮ।
ತ್ತೆನ್ನದೆ ಮೂಕೊಱೆಯಂಗಂ। ಕನ್ನಡಿಯಂ ತೋಱಿ ಬಡಿಗುಮಿಱಿಗುಂ ಕೊಲ್ಗುಂ
॥ 239 ॥

ಕಲಿತನದಿಂದಂ ಲೋಗರ್। ಪುಲಿಯಂ ಪಿಡಿದೊಡಮದೇಂ ಬಿಡೆಂಬರ್ ತಾಮೊಂ।
ದಿಲಿಯಂ ಪಿಡಿದೊಡಮದು ಪೆ। ರ್ಬುಲಿಯೆಂಬರ್ ದುರ್ಜನರ್ಗೆ ತಾನಿದು ಸಹಜಂ
॥ 240 ॥

ಆರಯ್ದು ನೋಡೆ ತೊಜ್ಜಿಗಳ। ನೀರುಂ ವಾರಿಧಿಯ ನೀರ ಪೊರ್ದುಗೆಯಿಂದಂ।
ಸಾರಂಗೆಟ್ಟುಪ್ಪಪ್ಪವೊ। ಲಾರುಂ ದುರ್ಜನರ ಸಂಗದಿಂದಂ ಕೆಡರೇ ॥ 241 ॥

ಕಡುದಣ್ಪುಗೆಟ್ಟು ಕೆಚ್ಚಿನೊ। ಳೊಡಗೂಡಿದ ನೀರ್ ಬಲ್ಪಿಂಕ್ಕೆ ತೀವ್ರತೆಯಿಂ ಕೆ॥
ಯ್ಸುಡುವಂತೆ ನೋಡೆ ದುರ್ಜನ। ರೊಡನಾಡಿದ ಮಾನಸಗ್ಗೆಸದ್ಗುಣಮುಂಟೇ
॥ 242 ॥

ಮರಣಕ್ಕಂಜದೆ ಗುಣಮಂ। ಪರಿಹರಿಸದೆ ಶೀಲರತ್ನಮಂ ರಕ್ಷಿಸಿ ಸ।
ತ್ತರ ಸಾವು ಸಾವೆ ಶೀಲಮ। ನುರವಣಿಯಿಂ ಬಿಟ್ಟ ಖಳರ ಬಾಲ್ಗುಂ ಬಾಲ್ಗೀ ॥ 243 ॥

ಮೊದಲೊಳ್ ಮುಳ್ಳಿನ ಮೊನೆಗಳ್। ಮೃದುವಪ್ಪುವು ಬಲ್ಪಿಂಕೆ ಬೆಟ್ಟೆತಪ್ಪುವು ಖಳರುಂ।
ಮೊದಲೊಳ್ ಗುಣಿಯೆಸಿಸಿರ್ದರ್। ತುದಿಯೊಳ್ ಕೇಳ್ ತಮ್ಮ ಮಾಯಮುಂ
ಪ್ರಕಟಿಸುವರ್ ॥ 244 ॥

ಪೊಲೆಯರ್ ಭಾವಿಸುವೊಡೆ ದು। ಷ್ಕುಲರನುಪಮಶುದ್ಧವೃತ್ತಿಯೊಳ್ ನಡೆವೊಡೆ ಭೂ।
ತಲಮೆಲ್ಲಂ ಬಣ್ಣಿಸುವುದು। ಕುಲದಿಂದಂ ಧರ್ಮಮಧಿಕಮೆಂದಱಿಪುವವೋಲ್
॥ 245 ॥

ಸತ್ಕೃತಿ.

ರಸಭಾವಂ ಗಮಕಂ ಕಾ। ಳಸೆ ನಾಣ್ಣುಡಿ ದೇಸೆವೆತ್ತ ಪೊಸನುಡಿ ಮಾರ್ಗಂ।
ಕುಸುರಿಯ ಬಗೆಯೆಂದಿನಿತಱೊ। ಳೆಸೆಯದ ಕೃತಿ ಕೃತಿಯೆ ಬಗೆದು ನೋಟ್ಪೊಡೆ
ಜಗದೊಳ್ ॥ 246 ॥

ಸ್ವೈರಿಣಿಯರು.

ಧರಣೀಚಕ್ರಮುಮಂ ವಿಯತ್ತಳಮುಮಂ ಗಂಟಿಕ್ಕುವರ್ ಮಿಂಚನ।
ಚ್ಚರಿಯಪ್ಪಂತುಱದೊಂದುಮಾಡಿ ಪೆಣೆವರ್ ಕಲ್ಲಲ್ಲಿ ನಾರೆತ್ತುವರ್॥
ತ್ವರಿತಂ ಬಿನ್ನಣದಿಂ ಬಿಸಿಲ್ಗುದುರೆಯಂ ತಂದೇಱುವರ್ ಮೇರುವಂ।
ಭರದಿಂದಂ ಪಿಡಿದೆತ್ತುವರ್ ಮಳಲೊಳಂ ನೀರ್ಮಾಡುವರ್ ಜೋಡೆಯರ್ ॥247॥

---

## ರಾಜಾದಿತ್ಯ. ಸು. 1120.

ಈತನು ವ್ಯವಹಾರಗಣಿತ, ಕ್ಷೇತ್ರಗಣಿತ, ವ್ಯವಹಾರರತ್ನ, ಲೀಲಾವತಿ, ಚಿತ್ರಹಸುಗೆ, ಜೈನಗಣಿತಸೂತ್ರಟೀಕೋದಾಹರಣ, ಮೊದಲಾದ ಗಣಿತಗ್ರಂಥಗಳನ್ನು ರಚಿಸಿದ್ದಾನೆ.

ಈತನು ಜೈನಕವಿ. ಇವನಿಗೆ ರಾಜವರ್ಮ, ಭಾಸ್ಕರ, ಬಾಚ, ಬಾಚಯ, ಬಾಚಿರಾಜ ಎಂಬ ಹೆಸರುಗಳೂ ಗಣಿತವಿಳಾಸ, ಓಜೆವೆಡಂಗ, ಪದ್ಯವಿದ್ಯಾಧರ ಎಂಬ ಬಿರುದುಗಳೂ ಇದ್ದಂತೆ ಇವನ ಗ್ರಂಥಗಳಿಂದ ತಿಳಿಯುತ್ತದೆ. "ಕೂಂಡಿ

ಮಂಡಲಕ್ಕನುಪಮರತ್ನಮಂಡನನೆನಿಸಿಪ್ಪ ಪೂವಿನಬಾಗೆ" ಇವನ ಸ್ಥಳವು. ಇವನ ಹೆಂಡತಿ ಕನಕಮಾಲೆ. "ಉರ್ವೀಶ್ವರನಿಕರಸಭಾಯೋಗ್ಯಂ" ಎಂದು ಹೇಳಿಕೊಂಡಿರುವುದರಿಂದ ಇವನು ರಾಜರಲ್ಲಿ ಆಸ್ಥಾನಪಂಡಿತನಾಗಿದ್ದಂತೆ ತೋರುತ್ತದೆ. ತನ್ನ ಗುರು ಮುಂತಾದವರನ್ನು ಈ ಪದ್ಯದಲ್ಲಿ ಹೇಳಿಕೊಂಡಿದ್ದಾನೆ:—

ಜಿನನಾಥಂ ನೇಮಿನಾಥಂ ನಿಜಗುರು ಶುಭಚಂದ್ರೋತ್ತಮಂ ತಂದೆ ಸರ್ವಾ।
ವನಿಪಸ್ತುತ್ಯಾಸ್ಪದಂ ಶ್ರೀಪತಿ ಜನನಿ ವಸಂತಾಖ್ಯೆ ತನ್ನಗ್ರಜಂ ಶಾಂ॥
ತನುಮತ್ತಾಭೋಗಮಂ(?)ಬಾಹುಬಲಿಭರತರಾತ್ಮೇಶ್ವರರ್ ತಾಮೆನಲ್ ಬಾ।
ಪೆನೆ ರಾಜಾದಿತ್ಯನೇಂ ಧನ್ಯನೊ ವಿಶದಯಶಂ ಸದ್ಗುಣಾಂಭೋಧಿಚಂದ್ರಂ॥

ಈತನ ವ್ಯವಹಾರರತ್ನದಲ್ಲಿ ವಿಷ್ಣುನೃಪಾಲನ ಹೆಸರನ್ನು ಹೇಳುವ—

ನಗಮಷ್ಟಂ ನವಮರ್ಕದಿಙ್ಮನುದಿನಾಂಭೋರಾಶಿಷಟ್ಪಂಚಸಂ।
ಖ್ಯೆಗಳಂ ವರ್ತನೆಗೊಳ್ಪ ವಂದಿಜನವಿಾರಯ್ದುರ್ಕಮಾದಾರ್ಯವೀ॥
ರ್ಯಗುಣಂ ವಿಷ್ಣುನೃಪಾಲನಿತ್ತನೊಸೆದಿನ್ನೂಱೀಟಿಪ್ಪಿನ್ನ(?)ಮತ್ತೆಲ್ಲವಂ।
ದಿಗಳೋರೊರ್ವರ ಭಾಗಕೇನಹುದು ಮತ್ತೇನಕ್ಕುಮೋ ಭಾಸ್ಕರಾ॥

ಎಂಬ ಈ ಉದಾಹರಣಪದ್ಯವು ದೊರೆಯುತ್ತದೆ. ಆಲ್ಲದೆ ವ್ಯವಹಾರಗಣಿತದಲ್ಲಿಯೂ ಕೆಲವುಕಡೆ ವಿಷ್ಣುನೃಪಾಲನ ಹೆಸರು ದೊರೆಯುತ್ತದೆ. ಹೊಯ್ಸಳ ರಾಜನಾದ ವಿಷ್ಣುವರ್ಧನನು ಸುಮಾರು 1111 ರಿಂದ 1141 ರವರೆಗೆ ಆಳಿದಂತೆ ತಿಳಿಯುತ್ತದೆ. ಈ ಉದಾಹರಣಪದ್ಯದಿಂದ ವಿಷ್ಣುವರ್ಧನನು ಕವಿಯ ಕಾಲದಲ್ಲಿ ದೊರೆಯಾಗಿದ್ದಂತೆ ಊಹಿಸಬಹುದಾಗಿದೆ. ಆಲ್ಲದೆ ಶ್ರ. ಬೆ. 117 ನೆಯ ಶಾಸನದಿಂದ ಒಬ್ಬ ಶುಭಚಂದ್ರನು 1123 ರಲ್ಲಿ ಗತಿಸಿದಂತೆ ತಿಳಿಯಬರುತ್ತದೆ. ಈತನೇ ಕವಿಯ ಗುರುವಾಗಿರಬಹುದು. ಹೀಗಿದ್ದಪಕ್ಷದಲ್ಲಿ ಕವಿ ವಿಷ್ಣುವರ್ಧನನಲ್ಲಿ ಆಸ್ಥಾನಪಂಡಿತನಾಗಿ ಸುಮಾರು 1120 ರಲ್ಲಿ ಇದ್ದಿರಬಹುದು.

ಇವನು ತನಗೆ ಹಿಂದೆ ಇದ್ದ ಕವಿಗಳಲ್ಲಿ ಆರನ್ನೂ ಹೇಳಿಲ್ಲ. ಆದರೆ—

ಮಾಗಧವಿಷಯದ ಪರಿಭಾ। ಷಾಗಮಮಂ ಪೇೞ್ದಿನಲ್ತೆ ಪೂರ್ವಾಚಾರ್ಯಂ।
ಲೋಗರಱಿವಂತು ಕುಂತಣ। ಬಾಗೆಯ ಪರಿಭಾಷೆಯಲ್ಲಿವಂ ವಿರಚಿಸಿದಂ॥

ಎಂಬ ಪದ್ಯದಲ್ಲಿ ಹಿಂದೆ ಆವನೋ ಒಬ್ಬ ಪೂರ್ವಾಚಾರ್ಯನು ಬರೆದುದನ್ನು ತಾನು ಕುಂತಣಬಾಗೆಯ ಪರಿಭಾಷೆಯಲ್ಲಿ ಬರೆದಂತೆ ಹೇಳುತ್ತಾನೆ.

ತನ್ನ ಪಾಂಡಿತ್ಯವನ್ನೂ ಗುಣಗಳನ್ನೂ ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ:

ಈಚತುರಬ್ಧಿವೇಷ್ಟಿತಮಹೀತಳದೊಳ್ ದೊರೆಯಾರ್ ಸಮಸ್ತವಿ।
ದ್ಯಾಚತುರಾನನಂಗೆ ವಿಬುಧಾಶ್ರಿತಕಲ್ಪವಮಹೀರುಹಂಗೆನಲ್॥

ಮೇಚರಕರ್ಣಗತರಿಣಿಯನಧಂಬಣ್ಣಿಪರಂತೆಸೆದುನಾ(?)।
ಳೋಚಿತನಂ ದಯಾಬ್ಧಿಹಿಮರೋಚಿಯನಪ್ರತಿಗಂಧಬಾಚಿಯುಂ ॥
ಆಶ್ರಿತಕಲ್ಪವುಹೀಜಂ । ವಿಶ್ರುತಭೂಭುವನಕೀರ್ತಿ ಶಿಷ್ಟೇಷ್ಟಜನೈ ।
ಕಾಶ್ರಯನಮಳಚರಿತ್ರಂ । ವಿಶ್ರವ್ಯವಹಾರಗಣಿತಮುಂ ವಿರಚಿಸಿದಂ ॥
ಅನುರೂಪಂ ಸತ್ಯವಾಕ್ಯಂ ಪರಹಿತಚರಿತಂ ಸುಸ್ಥಿರಂ ಭೋಗಿ ಗಂಭೀ ।
ರನುದಾರಂ ಸಚ್ಚರಿತ್ರಂ ಸೊಬಗನಖಿಲವಿದ್ಯಾವಿದಂ ಭವ್ಯಸೇವ್ಯಂ ॥
ಜನ-ಾಸಂಸ್ತುತ್ಯನುರ್ವೀಶ್ವರನಿಕರಸಭಾಯೋಗ್ಯನೆಂದಾಗಳುಂ ಮೇ ।
ದಿನಿ ರಾಜಾದಿತ್ಯನಂ ಬಣ್ಣಿಪುದಱಿದೊಲವಿಂ ಸಂತತೋತ್ಸಾಹದಿಂದಂ ॥

ಇವನ ಗ್ರಂಥಗಳಲ್ಲಿ

## 1. ವ್ಯವಹಾರಗಣಿತ.

ಈ ಗ್ರಂಥವು ಗದ್ಯಪದ್ಯಾತ್ಮಕವಾಗಿದೆ; ಸೂತ್ರಗಳನ್ನು ಪದ್ಯರೂಪವಾಗಿ ಬರೆದು ಟೀಕೆಯನ್ನೂ ಉದಾಹರಣೆಗಳನ್ನೂ ಕೊಟ್ಟಿದ್ದಾನೆ. ಗ್ರಂಥವು 8 ಅಧಿಕಾರಗಳಾಗಿ ಭಾಗಿಸಲ್ಪಟ್ಟಿದೆ; ಒಂದೊಂದಧಿಕಾರಕ್ಕೂ ಹಾರವೆಂಬ ಸಂಜ್ಞೆ ಇದೆ. ಈ ಗ್ರಂಥವನ್ನು 5 ದಿವಸಗಳಲ್ಲಿ ಬರೆದಂತೆ—

ಲೆಕ್ಕದ ಕವಿತೆಯ ಬಲ್ಮೆ ಜ । ಗಕ್ಕೆಸೆದಿರೆ ಸಕಲಗಣಿತಮಾಗ್ರಂಥದೊಳಂ ।
ತಕ್ಕನೆ ತೀವಿರಲಯ್ದುದಿ । ನಕ್ಕಂ ನೆಜಿ ಪೇೞ್ದಿನಲ್ತೆ ರಾಜಾದಿತ್ಯಂ ॥

ಎಂಬ ಪದ್ಯದಲ್ಲಿ ಹೇಳುತ್ತಾನೆ. ಗ್ರಂಥದ ಉತ್ಕೃಷ್ಟತೆಯನ್ನು ಈ ಪದ್ಯಗಳಲ್ಲಿ ವರ್ಣಿಸಿದ್ದಾನೆ:—

ಅದಱಿಂ ಲೋಕಹಿತಾರ್ಥಂ । ಮೃದುಪದಲಲಿತಪ್ರಸನ್ನಗಂಭೀರಾರ್ಥಾ ।
ಸ್ಪದಮೆನೆ ಭಾಸ್ಕರದೇವಂ । ವಿದಿತವ್ಯವಹಾರಗಣಿತಮುಂ ವಿರಚಿಸಿದಂ ॥
ಎನಿಸಿದ ಗುಣಿ ರಾ (ಜಾದಿ । ತ್ಯನೆ ಸು) ರುಚಿರಮಪ್ಪ ಗಣಿತತತ್ತ್ವಜ್ಞತೆಯಂ ।
ಜನತೋಪಕಾರದೊಳ್ ಮೆಜಿ । ದನೆನಲ್ ವ್ಯವಹಾರಗಣಿತಮುಂ ಮೆಚ್ಚದರಾರ್ ॥
ಧಾರಿಣಿಯೊಳ್ ಸಕಲಬುಧಾ । ಧಾರಮೆನಲ್ ಸ್ವಲ್ಪಮಾಗಿಯುಂ ವ್ಯವಹಾರಾ ।
ಧಾರಮೆನಲ್ ಸಾರಮೆನಲ್ । ಶ್ರೀರಾಜಾದಿತ್ಯನಬ್ಜಭವಿರಚಿಸಿದಂ ॥

ಗ್ರಂಥಾವತಾರದಲ್ಲಿ "ಜಿನಪತಿ ರಾಜಾದಿತ್ಯಂಗೆ ಮಾಟಿಕ್ಕೆ ಮತಿವಿಕಸನಮಂ" ಎಂದು ನೇಮಿಜಿನನನ್ನು ಸ್ತುತಿಸಿದ್ದಾನೆ. ಅಧಿಕಾರಗಳ ಕೊನೆಯಲ್ಲಿ

ಇದು ಶುಭಚಂದ್ರದೇವಯೋಗೀಂದ್ರಪಾದಾರವಿಂದಮತ್ತಮಧುಕರರಾಯಮಾನ ಮಾನ
ಸಾನಂದಿತಸಕಲಗಣಿತತತ್ತ್ವವಿಳಾಸಂ ವಿನೇಯಜನವಿನುತಂ ಶ್ರೀರಾಜಾದಿತ್ಯವಿರಚಿತಮಪ್ಪ
ವ್ಯವಹಾರಗಣಿತದೊಳ್

ಎಂಬ ಗದ್ಯವಿದೆ. ಈ ಗ್ರಂಥದಲ್ಲಿ ಪ್ರತಿಪಾದಿತವಾದ ವಿಷಯಗಳು: ಸಹಜ ತ್ರಯರಾಶಿ, ವ್ಯಸ್ತತ್ರಯರಾಶಿ, ಸಹಜಪಂಚರಾಶಿ, ವ್ಯಸ್ತಪಂಚರಾಶಿ, ಸಹಜ ಸಪ್ತರಾಶಿ, ವ್ಯಸ್ತಸಪ್ತರಾಶಿ, ಸಹಜನವರಾಶಿ, ವ್ಯಸ್ತನವರಾಶಿ, ಪದಪಿನ ಸೂತ್ರ, ಬಣ್ಣಾಂತರದ ಸೂತ್ರ, ಹೊದೆಯಂಬಿನ ಸೂತ್ರ, ವಿಧುರೆ, ತೂಬಿನ ಸೂತ್ರ. ಹರವರಿಯ ಸೂತ್ರ, ಚಕ್ರಬಡ್ಡಿ, ಇತ್ಯಾದಿ.[1]

ನಮಗೆ ತಿಳಿದಮಟ್ಟಿಗೆ ಕನ್ನಡದಲ್ಲಿ ಗಣಿತಶಾಸ್ತ್ರವನ್ನು ಬರೆದಿರುವ ಕವಿಗಳಲ್ಲಿ ಇವನೇ ಮೊದಲನೆಯವನು. ಈತನು ಗಣಿತಶಾಸ್ತ್ರಕ್ಕೆ ಸಂಬಂಧಪಟ್ಟ ಪ್ರಾಯಶಃ ಎಲ್ಲಾ ವಿಷಯಗಳನ್ನೂ ತನ್ನ ಗ್ರಂಥಗಳಲ್ಲಿ ತಕ್ಕಮಟ್ಟಿಗೆ ಪ್ರತಿಪಾದಿಸಿದ್ದಾನೆ. ಈ ಶಾಸ್ತ್ರವನ್ನು ಜನಗಳಿಗೆ ಸುಖಬೋಧವಾಗುವಂತೆ ಪದ್ಯರೂಪವಾಗಿ ಬರೆವುದು ಕಷ್ಟ. ಆದರೂ ಈ ಕವಿ ಸೂತ್ರಗಳನ್ನೂ ಉದಾಹರಣೆಗಳನ್ನೂ ಬಹಳ ಲಲಿತವಾದ ಪದ್ಯಗಳಲ್ಲಿ ಚೆನ್ನಾಗಿ ಅವಗಾಹನವಾಗುವಂತೆ ಬರೆದಿದ್ದಾನೆ. ಈ ಪದ್ಯಗಳ ಬಂಧದಿಂದ ಈತನಿಗೆ ಗಣಿತಶಾಸ್ತ್ರಪ್ರವೀಣತೆಯೇ ಅಲ್ಲದೆ ಕವಿತಾಪ್ರೌಢಿಯೂ ಉಂಟೆಂಬುದು ವ್ಯಕ್ತವಾಗುತ್ತದೆ.

ಈ ಗ್ರಂಥದಿಂದ ಕೆಲವು ಸೂತ್ರಗಳನ್ನೂ ಪ್ರಶ್ನೆಗಳನ್ನೂ ಉದ್ಧರಿಸಿ ಬರೆಯುತ್ತೇವೆ:—

ಸೂತ್ರ.—ಶತಫಳಯುಗಳಾಂತರದಿಂ । ಗತಮಾಸಮನಿಱ್ದು ಪಡೆದ ಲಾಭದ ಪೊನ್ನಂ ।
ಹೃತಿಗೆಯ್ದು ಲಬ್ಧದಿಂದಂ । ಶತಮುಂ ಮೋದಿದೊಡೆ ಬರ್ಕುಮಾಮೂಲಧನಂ ॥ ॥248॥

ಪ್ರಶ್ನೆ.—ತ್ರಿಕಶತದೆ ಕೊಂಡು ತಾಂ ಪಂ । ಚಕಶತದಿಂ ಕೊಟ್ಟು ಲಾಭಮಱುವತ್ತಚ್ಚಂ ।
ಪ್ರಕಟಮೆನೆ ಪಡೆಯೆ ಬರಿಸ । ಕ್ಕಳಂಕಚರಿತ್ರ ಮೊದಲ ಪೊನ್ನೆನಿತಕ್ಕುಂ ? ॥249॥

ಗದ್ಯಾಣ ೧೦೦. ತಿಂಗಳು ೧. ಬಡ್ಡಿಗದ್ಯಾಣ ೩.
ಗ॥ ೧೦೦. ತಿಂಗಳು ೧. ಬಡ್ಡಿಗ॥ ೫.
ಮೊದಲು ಗ॥—೦೦. ತಿಂಗಳು ೧೨. ಲಾಭ ಗ॥ ೬೦. [ಲಬ್ಧ. ಮೊದಲು ಗ॥ ೨೫೦

ಟೀಕು.—ಲಾಭದ ೬೦ನು ೧೦೦ ಱಂ ಗುಣಿಸಿರಿಸಿ, ಮತ್ತೆ ಬಡ್ಡಿ ಗ॥ ೫ ಲ್ಲಿ ಗ॥ ೩ ಬಡ್ಡಿಯಂ ಕಳೆದು ಉಟ್ಟದ ೨ ಱಂ ತಿಂಗಳು ೧೨ ನಿಱ್ದು ಗುಣಿಸಲ್ ೨೪ ಹಾರವಂ ಮಾಡಿ ಭಾಗಿಸಲ್ ತಪ್ಪದು.

## ಪ್ರಶ್ನೆಗಳು.

ಮೂಱುದಿವಸಕ್ಕೆ ಖಂಡುಗ । ದಾಱುಂ ಕೊಳಗಂಗಳೆರಡು ಬಳ್ಳಂ ಮಾನಂ ।
ಮೂಱಾಗಲ್ ಬರಿಸದ ಮೇ । ಲಾಱುಂ ದಿವಸಕ್ಕೆ ಭತ್ತ ತಾನೆನಿತಕ್ಕುಂ ॥ 250 ॥

1. ನಮಗೆ ದೊರೆತ ಪ್ರತಿ ಶಿಥಿಲವಾಗಿದ್ದುದರಿಂದ ಗ್ರಂಥದಲ್ಲಿ ಪ್ರತಿಪಾದಿತವಾದ ವಿಷಯಗಳೆಲ್ಲಾ ಕಂಡುಹಿಡಿಯಲಾಗಲಿಲ್ಲ.

ನೂಱುಪ್ಪತಯ್ದು ಪೊನ್ನುಂ । ಮಾಱಿಪ್ಪುವುದರ್ಕೆ ವಟ್ಟಮಿರ್ಪಣಮಡ್ಡಂ ।
ಮೂಱುಂ ವೀಸಮೆನಲ್ಕೇ । ಱ್ನುಱುಂ ಪೊನ್ವಟ್ಟಮುಱಿದು ತಾನೆನಿತಕ್ಕುಂ ॥ 251 ॥

ಕರಿ ನೂಱಿಂಟುಮನೆಸ್ವಿಕಾವ ದಿವಸಕ್ಕೊೀರೊಂದು ಗದ್ಯಾಣಮುಂ ।
ಸ್ಥಿರವಿವೊಂ ನಿನಗೆಂದೊಡೊಂದು ದಿವಸಕ್ಕೊಂದಾನೆಯುಂ ಮಾಱಲಾ ॥
ಕರಿಯಾರೊೀಹಕರಿಪ್ಪತಯ್ದುದಿವಸಂ ಕಾದೊಲ್ಲೆನೆಂದಾಗಳೆ ।
ರ್ಬರ ಸಂವಾದದ ಲೆಕ್ಕಮಂ ತಿಳಿಯೆ ಪೇೞ್ ನಿರ್ವ್ಯಾಜದಿಂ ಭಾಸ್ಕರಾ ॥ 252 ॥

ಕರಿ ೧೦೮. ದಿನ ೧ಕ್ಕೆ ಕೂಲಿ ಗದ್ಯಾಣ ೧. ದಿನ ೧. ಮಾಱುದಾನೆ ೧.
ಈ ಲೆಕ್ಕದಲ್ಲಿ ದಿನ ೨೫ ಕ್ಕೆ ಲಬ್ಧ ಗ॥ ೨೨ ೨ ವಿ ಳ.

ಟೀಕು.—ಮೊದಲ ಪ್ರಮಾಣಿನ ೧೦೮ ನೂ ಗ॥ ೧ ನೂ ಕೂಡಲು ೧೦೯ ನು ದಿನ ೨೫ ಱಿಂ ಗುಣಿಸಲು ೨೭೨೫. ಇದಂ ಪ್ರತಿಯನಿಟ್ಟು ಆ ಕಡೆಯ ದಿನ ೨೫ ನು ವರ್ಗಂಗೊಂಡು ಅದಱೊಳಗೆ ಆ ದಿನ ೨೫ ನು ಕೂಡಿ ಅರ್ಧಿಸಲು ೩೨೫. ಇದಂ ಮುನ್ನ ಪ್ರತಿಯಿಟ್ಟ ೨೭೨೫ ಱಲ್ಲಿ ಕಳೆಯಲು ೨೪೦೦. ಇದಂ ಆದಂತಿ ೧೦೮ ಱಿಂ ಭಾಗಿಸಲು ತಪ್ಪದು.

## ದಾಳಿಂಬದ ಬೀಜವನರಿವುದಕ್ಕೆ ಸೂತ್ರ.

ಎಸಟಿನಿಱಿದೆತ್ತು ನಯದಿಂ । ರಸಕೃತಿಯಿಂ ಬೀಜಮಕ್ಕುಮವು ದಾಳಿಂಬ ।
ಕ್ಕೆಸೆಗುಂ ಗುಣಿತಕ್ರಮದಿಂ । ವಸ ಮತಿಗಱಿವಂತೆ ಪೇೞ ಗಣಿತವಿಳಾಸಾ ॥253॥

ದಾಳಿಂಬದ ಕಾಯ್ ೧ಕ್ಕೆ ಎಸಟ್ ೫ಕ್ಕೆ ಲಬ್ಧ ಬೀಜ ೩೭೦.

ಟೀಕು.—ಎಸಟ್ ೫ನು ೨೫ಱಿಂ ಗುಣಿಸಿದೊಡೆ—೧೦. ರಸಕೃತಿಯಿಂದೆ ವರ್ಗಂಗೊಳಲು ೩೭. ಇದಂ ೧೦೨ಱಿಂ ಗುಣಿಸಲು ೩೭೦.

## ಪರಿಭಾಷೆ.

ಕಾಗಿಣಿ ನಾಲ್ಕುಂ ವೀಸಮ । ದಾಗಿರ್ಕುಂ ವೀಸಮಯ್ದು ಪಾಗಮೆನಿಕ್ಕುಂ ।
ಪಾಗಂ ನಾಲ್ಕಱಿಂಳಿ ಪಣಂ । ಪ್ರಾಗುಕ್ತಂ ದಶಪಣಂಗಳಿಂ ಗದ್ಯಾಣಂ ॥ 254 ॥

## ಪೂವಿನಬಾಗೆ.

ವನತತಿಯಿಂ ನದೀನದಕುಭೃತ್ಕುಲದಿಂ ಧನಧಾನ್ಯವರ್ಗದಿಂ ।
ಜನಪದರಾಜಿಯಿಂ ಬೆಳೆವ ಕೆಯ್ಪೊಲದಿಂದೆಸೆಪೂರ್ಗಳಿಂ ಜಗ ॥
ಜ್ಞನನುತಜೈನಧರ್ಮದ ನೆಗೞ್ತ್ತಿಯಿನೊಪ್ಪಿರೆ ಕೂಂಡಿಮಂಡಲ ।
ಕ್ಕನುಪಮರತ್ನಮಂಡನಮೆನಿಪ್ಪುದು ಪೂವಿನಬಾಗೆ ಸಂತತಂ ॥ 255 ॥
ಆವೆಡೆಯೊಳ್ ಮನಂಬಯಸಿ ಪಾಂಥಜನಂ ನಿಲಲಲ್ಲಿ ಗಲ್ಲಿಗ ।
ಬ್ಜಾವಳಿಯಲ್ಲಿಗಲ್ಲಿಗೆ ಸುಸಾರಭದಿಂದೆಸೆದಿರ್ಪ ಪುಷ್ಪವಾ ॥

ಟಾವಳಿಯಲ್ಲಿಗಲ್ಲಿಗೆ ನವಭ್ರಮರಾವಳಿ ಹಂಸಭೃಂಗಕೇ ।
ರಾವಳಿಯಿಂದಮೊಪ್ಪುವುದು ಬಾಗೆಯದೊಂದು ಮಹೀಪ್ರದೇಶದೊಳ್ ॥ 256 ॥

ಪೊಸ ಪೊಂಗೇದಗೆ ಜಾಜಿ ಪಾಟಲಿ ಲಸತ್ಸೇವಂತಿ ನೀಲಾಬ್ಜಮು ।
ದ್ಧಸರೋಜಂ ಸುರಹೊನ್ನೆ ಸಂಪಗೆ ನವೋದ್ಯನ್ಮಲ್ಲಿಕಾದಿಪ್ರಸೂ ॥
ನ.....ಸಿನಿಂ ದೆಸೆಗೆ..ನಿಚ.....ನನ್ಯರ್ಥಮಾ ।
ಗೆಸೆಗುಂ ಪೂವಿನಬಾಗೆಯೆಂಬ ಪೆಸರಿಂದಿಂಬಾಗಿ ಚಿಲ್ವಾಗಿರಲ್ ॥ 257 ॥

## 2. ಕ್ಷೇತ್ರಗಣಿತ.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ವೃತ್ತಾಕಾರದ ಭೂಮಿಯ । ಸುತ್ತಳೆದರ್ಧಮನೆ ಬಿಡುವುದುಱಿದರ್ಧದೊಳಂ ।
ಮತ್ತಿರಡು ಭಾಗಮಾಡಿಯೆ । ಮತ್ತೊಂದಱಿವೊಳೊಂದನೊತ್ತೆ ಕಂಭಂ ಬರ್ಕುಂ
॥ 258 ॥

ಅತಿವೃತ್ತಮರ್ಧಚಂದ್ರಾ । ಕೃತಿಯಾಗಿರೆ ಕ್ಷೇತ್ರಮದಱಿವೊಳೊಂದಂ ಕೊಂಡಾ ।
ಗತಿಭಾಗೆಯೊಳೊಂದಂ ಕೊಂ।ಡತಿಶಯದಿಂ ರವಿಯ ಗುಣಿಸೆ ಸಮಪದಮಕ್ಕುಂ
॥259॥

ವೃತ್ತದ ವಳಯಮನಳೆದಾ।ಮೊತ್ತವ ಗುಣದಿಂದಮೆತ್ತಿ ಬಂದಾಲಬ್ಧಮು ।
ನೊತ್ತುತೆತನ್ನಿಂ ತನ್ನಂ।ಬಿತ್ತರದಿಂ ಗತಿಯೊಳೆತ್ತೆ ಬಂದುದು ಕಂಭಂ ॥ 260 ॥

## 3. ವ್ಯವಹಾರರತ್ನ.

ಇದರಲ್ಲಿ ೫ ಅಧಿಕಾರಗಳಿವೆ. ಇದರಿಂದ ಒಂದು ಪ್ರಶ್ನೆಯನ್ನು ಹಿಂದೆಯೇ ಉದಾಹರಿಸಿದ್ದೇವೆ.

## 4. ಜೈನಗಣಿತಸೂತ್ರೋದಾಹರಣ

ಇದರಲ್ಲಿ ಪ್ರಶ್ನೆಗಳನ್ನು ಕೊಟ್ಟು ಉತ್ತರವನ್ನು ಪಡೆವ ವಿಧಾನವನ್ನು ತೋರಿಸಿದ್ದಾನೆ. ಗ್ರಂಥಾರಂಭದಲ್ಲಿ ನೇಮಿಜಿನೇಶನನ್ನು ಸ್ತುತಿಸುವ ಈ ಪದ್ಯ ವಿದೆ:—

ಶ್ರೀಮದವಿಚಳಿತಲಕ್ಷ್ಮೀ । ಪ್ರೇಮಂ ತ್ರೈಲೋಕ್ಯಧಾಮನಾನತಶಕ್ರಂ ।
ಸೋಮಂ ಸ್ವಾಧೀನಮುಖಂ । ನೇಮಿಜಿನಂ ಮಾಲ್ಪಿಕ್ಕೆ ನಮಗೆ ಬೋಧೋದ
ಯಮಂ ॥ 261 ॥

## 5. ಚಿತ್ರಹಸುಗೆ.

ಇದು ಸೂತ್ರಟೀಕಾರೂಪವಾಗಿದೆ.

## 6. ಲೀಲಾವತಿ.

ಇದು ಪದ್ಯರೂಪವಾಗಿದೆ. ಲೆಕ್ಕಗಳನ್ನು ಮಾಡಿ ತೋರಿಸಿದೆ.

## ಮೌಕ್ತಿಕಕವಿ. ಸು. 1120.

ಚಂದ್ರನಾಥಾಷ್ಟಕವೆಂಬ ಗ್ರಂಥದ ಅಂತ್ಯದಲ್ಲಿರುವ

ಕೃತಕೃತ್ಯಂ ಮೌಕ್ತಿಕಂ ಸತ್ಕವಿ ವಿರಚಿಸಿದೀಸಾರಮಪ್ಪಷ್ಟಕಶ್ರೀ ।
ಸ್ತುತಿಯಂ ಪೇೞ್ದೊಡೀದುವಾಲಿಪ್ಪವರ್ಗೆ ನಿರುಪಮಾನಂದಮಂ ಮಾೞ್ಕು ನೀಕಾ ॥
ಪತಿರಾಮಸ್ಥಾಪಿತೋದ್ಯತ್ತ್ರಿಭುವನತಿಲಕಾಲಂಕೃತಖ್ಯಾತಿನಾಮಾಂ ।
ಕಿತಮಾಗೊಪ್ಪಿರ್ಪ ಪೆಣ್ಣಿಂಗಡಲಪುರವರಾಧೀಶ್ವರಂ ಚಂದ್ರನಾಥಾ ॥

ಎಂಬ ಪದ್ಯದಿಂದ ಈ ಅಷ್ಟಕವನ್ನು ಬರೆದವನು ಮೌಕ್ತಿಕಕವಿಯೆಂದು ತೋರುತ್ತದೆ. ಇಲ್ಲಿ ಹೇಳಿರುವ ಪೆಣ್ಣಿಂಗಡಲು ಅಥವಾ ಹೆಣ್ಣಿಗಡಲು ಎಂಬ ಸ್ಥಳವು ಜೈನರಾದ ಕೊಂಗಾಳ್ವರ ರಾಜ್ಯಕ್ಕೆ ಸೇರಿದ್ದಿತು. ಇದನ್ನು ವೀರಕೊಂಗಾಳ್ವ ದೇವನು ಸುಮಾರು 1120 ರಲ್ಲಿ ಮೇಘಚಂದ್ರನ ಶಿಷ್ಯನಾದ ಪ್ರಭಾಚಂದ್ರ ಸಿದ್ಧಾಂತದೇವನಿಗೆ ದಾನವಾಗಿ ಕೊಟ್ಟಂತೆ ಒಂದು ಶಾಸನದಿಂದ [1] ತಿಳಿಯುತ್ತದೆ. ಸುಮಾರು 1189 ರಲ್ಲಿ ಈ ಸ್ಥಳದೊಳಗೆ ಶೈವರು ಪ್ರಬಲರಾಗಿದ್ದಂತೆ ಇತರ ಶಾಸನಗಳಿಂದ [2] ತಿಳಿವುದರಿಂದ ಅಲ್ಲಿ ಜೈನರ ಪ್ರಾಬಲ್ಯದ ಕಾಲವು ಸುಮಾರು 1120 ಆಗಿರಬಹುದು. ಆ ಕಾಲವನ್ನೇ ಕವಿಗೆ ಕೊಟ್ಟಿದ್ದೇವೆ.

ಈ ಗ್ರಂಥದಲ್ಲಿ 9 ವೃತ್ತಗಳಿವೆ; ಪ್ರತಿವೃತ್ತವೂ ಚಂದ್ರನಾಥ ಎಂದು ಮುಗಿಯುತ್ತದೆ. ಇದರಿಂದ ಒಂದು ಪದ್ಯವನ್ನು ಉದ್ಧರಿಸಿ ಬರೆಯುತ್ತೇವೆ:—

ಕುಮತೋದ್ಗಗ್ರೀಷ್ಮತಪ್ತಂಗಿದು ಹಿಮಕರಬಿಂಬಂ ಪರಸ್ತೋತ್ರಪಿತ್ತ ।
ಭ್ರಮಹೃಜ್ಜಿಹ್ವಂಗೆ ಸೌಧಂ ಕಬಳಮನೃತದುರ್ವಾಸನಾವಾಸಿತಾತ್ಮಂ ॥
ಗಮಳಾಂಭೋಜಂ ಕುದೃಷ್ಟ್ಯಾಶ್ಮಮಯಿಗಿದು ಘನಸಾರಾಂಜನಂ ಕುಶ್ರುತಾನಾ ।
ಗಮದುರ್ಮಂತ್ರಂಗೆ ನಿರ್ನಾಕೃತಿಯಿದಮೃತಬೀಜಾಕ್ಷರಂ ಚಂದ್ರನಾಥಾ ॥

---

## ಮಾದಿರಾಜ. 1123.

ದಾವಣಗೆರೆಯ 2 ನೆಯ ಶಾಸನದ (ಚಾಳುಕ್ಯ ವಿಕ್ರಮವರ್ಷ 48 ಶೋಭಕೃತ್) ಕೊನೆಯಲ್ಲಿ 'ಕವಿಮಾದಿರಾಜಂ ಬರೆದಂ' ಎಂದಿದೆ. ಈ ಮಾದಿರಾಜನು ಆವ ಗ್ರಂಥಗಳನ್ನು ಬರೆದಿದ್ದಾನೆಯೋ ತಿಳಿಯದು.

---

1 *Mysore Archæological Report* for 1913, para 64.

2. Arkalgūḍ 79 and 81.

## ಮಹಾಪ್ರಭು ಕೇಶಿರಾಜ. 1124.

ಜೆನ್ನಗಿರಿಯ 61 ನೆಯ ಶಾಸನದಲ್ಲಿ (ಚಾಳುಕ್ಯ ವಿಕ್ರಮವರ್ಷ 48 ಕ್ರೋಧಿ) ಒಬ್ಬ ಕೇಶಿರಾಜನನ್ನು 'ವಿಬುಧಜನವನಜವನಕಳಹಂಸಂ' 'ಸರಸ್ವತೀ ಕಂಠಾವತಂಸಂ' ಎಂದು ಹೊಗಳಿದೆ. ಈ ಬಿರುದುಗಳನ್ನು ನೋಡಿದರೆ ಈತನು ಕವಿಯಾಗಿದ್ದಿರಬಹುದೆಂದು ತೋರುತ್ತದೆ. ಈತನನ್ನು ಸ್ತುತಿಸ.ವ ಪದ್ಯಗಳಲ್ಲಿ ಒಂದೆರಡನ್ನು ತೆಗೆದು ಬರೆಯುತ್ತೇವೆ:—

ಪುರುಷಾರ್ಥದ ಕಣೆ ಸತ್ಕವಿ । ಕರು ಪೆರ್ಮೆಯ ನೆರ್ಮೆಮೆಂದು ವಿಬುಧಾಗ್ರಣಿಗಳ್ ।
ಕರಮಲ್ಲಿ ತ್ತಯಿಂದೆ ಪೊಗಲ್ವಿಲ್ । ಧರೆಗೆಸೆದಂ ಕೇಶಿರಾಜನೂರ್ಜಿತತೇಜಂ ॥
ವಿನಯನಿಧಾನನೂರ್ಜಿತಮಹಾಮಹಿಮಾಸ್ಪದನಬ್ಜಿವೇಷ್ಟಿತಾ ।
ವನಿತಳಪೂಜ್ಯನಿಷ್ಟಜನಕಲ್ಪಮಹೀರುಹನೇಕವಾಕ್ಯನಂ ॥
ದನುನಯದಿಂ ಬುಗರ್ ಪೊಗಲ್ವಿರಾಗಳುವಿಾ ನೆಗಲ್ವಿರ್ದ ಕೇಶಿರಾ ।
ಜನನಿನತೇಜನಂ ದ್ವಿಜಸರೋಜನನಾತ್ರಿತಕಲ್ಪಭೂಜನಂ ॥

---

## ಕೀರ್ತಿವರ್ಮ. ಸು. 1125.

ಈತನು ಗೋವೈದ್ಯವನ್ನು ಬರೆದಿದ್ದಾನೆ. ಈ ಗ್ರಂಥದಲ್ಲಿರುವ—

ಜಿನನಾಪ್ತಂ ಗುರು ದೇವಚಂದ್ರಮುನಿಪಂ ತ್ರೈಲೋಕ್ಯಮಲ್ಲಾಧಿಪಂ ।
ಜನಕಂ ಪಾಲಭವಂದ್ಯ . . . . . ವಾಕ್ಕ್ಷೀವರಂ ವಿಕ್ರಮಾಂ ॥
ಕನರೇಂದ್ರಂ ತನಗಗ್ರಜಾತನೆನಲಂತಾರ್ ನೋಂತರೀಕೀರ್ತಿವ ।
ರ್ಮನರೇಂದ್ರಂಬರಮೆಂದು ಧಾತ್ರಿ ಪೊಗಲ್ಗುಂ ನಿಚ್ಚಂ ಮಹೋತ್ಸಾಹದಿಂ ॥

ಎಂಬ ಪದ್ಯದಿಂದ ಈತನ ತಂದೆ ತ್ರೈಲೋಕ್ಯಮಲ್ಲಾಧಿಪ, ಅಣ್ಣ ವಿಕ್ರಮಾಂಕ ನರೇಂದ್ರ, ಗುರು ದೇವಚಂದ್ರಮುನಿ, ಇಷ್ಟದೇವತೆ ಜಿನ ಎಂದು ತಿಳಿಯುತ್ತದೆ. ಸುಮಾರು ಈ ಕವಿಯ ಸಮಕಾಲದವನಾದ ಬ್ರಹ್ಮಶಿವಕವಿ ತನ್ನ ಸಮಯ ಪರೀಕ್ಷೆಯಲ್ಲಿ ಈತನ ವಿಷಯವಾಗಿ ಮೇಲೆ ಹೇಳಿದ ಅಂಶಗಳನ್ನು ಈ ಪದ್ಯಗಳಲ್ಲಿ ಹೇಳಿದ್ದಾನೆ—

ಜನತಾನಂದಂ ಚಳುಕ್ಯಾಭರಣನವನಿಪಾಳೋತ್ತಮಂ ಸಾರ್ವಭೌಮಂ ।
ಜನಕಂ ತ್ರೈಲೋಕ್ಯಮಲ್ಲಂ ಸಕಳವಸುಮತೀವಲ್ಲಭಂ ವಿಕ್ರಮಾಂಕಾ ॥
ವನಿಪಂ ತಾನಗ್ರಜಾತಂ ತ್ರಿಭುವನಪತಿ ದೇವಾದಿದೇವಂ ಜಿನೇಂದ್ರಂ ।
ತನಗಾಪ್ತಂ ಮತ್ತೆನಲ್ಕೀಂ ಪಿರಿಯನೊ ಜಗತೀನಾಥರೊಳ್ ಕೀರ್ತಿವರ್ಮಂ ॥
ಅರಸುಮಗಂ ಗಡ ಕವಿ ಗಡ । ಪಿರಿದೀವಂ ಗಡ ಬಲ್ಗಿಕ್ಕೆ ಜ್ಞಿನಂ ಗಡೆನಲ್ ।
ಧರಣಿಪತಿ ಕೀರ್ತಿವರ್ಮಂ । ನಿರತಂ ಪೊನ್ ಕಮ್ಮೆತಾದುದೆನಿಸಿದನಿಳೆಯೊಳ್ ॥

ಇದರಿಂದ ಕೀರ್ತಿವರ್ಮನು ಚಾಳುಕ್ಯರಾಜರ ವಂಶದಲ್ಲಿ ಹುಟ್ಟಿದವನೆಂದು ವ್ಯಕ್ತವಾಗುತ್ತದೆ. ಆ ರಾಜರಲ್ಲಿ ತ್ರೈಲೋಕ್ಯಮಲ್ಲನು 1042 ರಿಂದ 1068 ರ ವರೆಗೆ ಆಳಿದಂತೆಯೂ ಅವನ ಮಗನಾದ ವಿಕ್ರಮಾದಿತ್ಯನು 1076 ರಿಂದ 1126 ರ ವರೆಗೆ ಆಳಿದಂತೆಯೂ ತಿಳಿಯುತ್ತದೆ. ಈ ವಿಕ್ರಮಾದಿತ್ಯನೇ ಕವಿಯ ಅಣ್ಣನಾಗಿರಬೇಕು. ಆದುದರಿಂದ ಕವಿ ಸುಮಾರು 1125 ರಲ್ಲಿ ಇದ್ದಿರಬಹುದು. ಮೇಲೆ ಹೇಳಿದ ವಿಕ್ರಮಾದಿತ್ಯನಿಗೆ ಜಯಸಿಂಹ III, ವಿಷ್ಣುವರ್ಧನವಿಜಯಾದಿತ್ಯ, ಎಂಬ ಇಬ್ಬರು ತಮ್ಮಂದಿರಿದ್ದರು. ಇವರಲ್ಲಿ ಕವಿ ಒಬ್ಬನಾಗಿರಬಹುದೋ ಏನೋ ತಿಳಿಯದು. ತ್ರೈಲೋಕ್ಯಮಲ್ಲನಿಗೆ ಕೇತಲದೇವಿಯೆಂಬ ಜೈನಧರ್ಮಾನುಸಾರಿಣಿಯಾದ ಪತ್ನಿಯೊಬ್ಬಳು ಇದ್ದಂತೆಯೂ ಆಕೆ ಕೆಲವು ಜಿನಾಲಯಗಳನ್ನು ಕಟ್ಟಿಸಿದಂತೆಯೂ ತಿಳಿಯಬರುತ್ತದೆ.[1] ಕವಿ "ಜಿನನಾಪ್ತಂ" ಎಂದು ಹೇಳಿಕೊಂಡಿರುವುದರಿಂದ ಈಕೆಯ ಮಗನಾಗಿದ್ದಿರಬಹುದು. ಶ್ರ. ಬೆ. 64 ನೆಯ ಶಾಸನದಲ್ಲಿ (1163) ಗುರುಪರಂಪರೆಯನ್ನು ಹೇಳುವಾಗ ರಾಘವಪಾಂಡವೀಯವನ್ನು ಬರೆದ ಶ್ರುತಕೀರ್ತಿತ್ರೈವಿದ್ಯನ ಸಮಕಾಲಿಕನಾದ ಒಬ್ಬ ದೇವಚಂದ್ರ ಮುನಿಯನ್ನು ಸ್ತುತಿಸಿದೆ. ಈತನೇ ಕವಿಯ ಗುರುವಾಗಿರಬಹುದು. ಈ ಕವಿ–ಕೀರ್ತಿಚಂದ್ರ, ವೈರಿಕರಿಹರಿ, ಕಂದರ್ಪಮೂರ್ತಿ, ಸಮ್ಯಕ್ತ್ವರತ್ನಾಕರ, ಬುಧಭವ್ಯಬಾಂಧವ, ವೈದ್ಯರತ್ನ, ಪಾಲಭವಂದ್ಯ, ಕವಿತಾಬ್ಧಿಚಂದ್ರಮ, ಕೀರ್ತಿವಿಳಾಸ—ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ.

ಇವನ ಗ್ರಂಥ

## ಗೋವೈದ್ಯ.

ನಮಗೆ ದೊರೆತ ಪ್ರತಿ ಅಸಮಗ್ರ, ಮತ್ತು ಅಶುದ್ಧ. ಈ ಪ್ರತಿಯು ಆದಿ ಭಾಗದಲ್ಲಿ ಮೂವತ್ತುಮೂರು ಓಲೆಗಳ ವರೆಗೆ ಕೆಲವು ಪದ್ಯಗಳಿವೆ. ಉಳಿದ ಐವತ್ತು ಓಲೆಗಳಲ್ಲಿ ಗದ್ಯರೂಪವಾಗಿ ಗೋಗಳ ವ್ಯಾಧಿಗಳಿಗೆ ಔಷಧಗಳೂ ಯಂತ್ರಗಳೂ ಬರೆಹಾಕುವ ಕ್ರಮಗಳೂ ವಿಸ್ತಾರವಾಗಿ ಹೇಳಿವೆ. ಕೆಲವು ಪದ್ಯಗಳನ್ನೂ ಕೊನೆಯ ಗದ್ಯವನ್ನೂ ಪ್ರತಿಯಲ್ಲಿ ಇದ್ದ ಹಾಗೆ ಬರೆಯುತ್ತೇವೆ.

ಆದಿಯಲ್ಲಿ—

ಬಡವಂ ಕೊಬ್ಬಿದ ಬಂಚಿಯ। ನುಡುಗದೆ ಹಯಮಾಡಿ ಕಱ್ಪಿವ ತೆಱನಂ ಕುತ್ತಂ।
ಬಿಡುವಂತು ವೈರಿಕರಿಹರಿ। ನುಡಿದಂ ಕಂದರ್ಪಮೂರ್ತಿ ಕೀರ್ತಿವಿಲಾಸಂ॥

ಎಂಬ ಪದ್ಯವಿದೆ.

ಅಂತ್ಯದಲ್ಲಿ—

1. *Ind. Ant.*, XIX, 268.

ಇದು ದೇವೇಂದ್ರಮುನೀಂದ್ರಚಂದ್ರಪಾದಾರವಿಂದಾಮುಂದಮರಂದಮಧುಕರಾಯ ಮಾನ.....ದೆ ಸುಧಾಚಾರಿತ್ರಿ ಮೇಘಚಂದ್ರಸಿದ್ಧಾಂತದೇವರವಿಂದಾರಕಂ ಕವಿತಾಬ್ಧಿಚಂದ್ರಮಂ

ಎಂಬ ಅಬದ್ಧವಾದ ಗದ್ಯವಿದೆ.

ಪದ್ಯಗಳು.

ಬಡಿಯುದೆ ಭಾರಮುಂ ಪಿರಿದನಿಕ್ಕದೆ ಮೇಹುಜ(ಲ)ಂಗಳಿಂಬಿವಂ ।
ಕುಡದನಜ್ಞಂದಕ್ಕಟಂ ಬರದು ನೀಳದೆ ಕಾಯದೆ ಗೋಕುಲಂಗಳಂ ॥
ಬಡವೆನಜ್ಞಾಯದಂತು ಕಡುಗರುವಿಸಮಾನರಾಯಂ ಲಕ್ಷ್ಮಿಯ(ಂ) ।
ಪಡೆದ (ಪ) ರಂದು ಪೇಟ್ಪಿನುದಿತೋತ್ಸವದಿಂ ಬುಧಭವ್ಯಬಾಂಧವಂ ॥263॥

ಅಧಿಕಂ ರಕ್ತಪ್ರಭಂ ಕಾಲಚನನಮರ್ದಿರೆ ಅಂತಸ್ತಸತ್ತಾ ।
ಣದಜೀವಘನಂ ನೋಡಲ್ ಬಹಿಃಪ್ರಾಣಮುನಡಿಸಿದಾನಂ ಜಗಕ್ಕೆಂದು ಕಾವ್ಯಂ ॥
ಬುದೊಸದವೈದ್ಯರತ್ನಂ ದೆಸೆದೆಸೆಗೆಸೆಯಲ್ ಪೇಟ್ದಿನುತ್ಸಾಹದಿಂಮಿ ।
ತಧರಾವಿಕ್ಕದರಪಾಲಭವಂದ್ಯಂ ಸಹಜಕವಿಜಿತೋತ್ಸಾಹನಂ ಕೀರ್ತಿಚಂದ್ರಂ ॥264॥

---

## ಬ್ರಹ್ಮಶಿವ. ಸು. 1125.

ಇವನು ಸಮಯಪರೀಕ್ಷೆಯನ್ನೂ ತ್ರೈಲೋಕ್ಯಚೂಡಾಮಣಿಸ್ತೋತ್ರವನ್ನೂ ಬರೆದಿದ್ದಾನೆ. ಈತನು ಜೈನಕವಿ; ವತ್ಸಗೋತ್ರದವನು; ಇವನ ಸ್ಥಳ ಪ್ರೌಟ್ಟಣ ಗೆರೆ; ಇವನ ತಂದೆ ಸಿಂಗರಾಜ. "ಅಗ್ಗಳದೇವನ ಕೆಳೆಯಂ" ಎಂದು ಹೇಳಿಕೊಂಡಿದ್ದಾನೆ. ಈಯಗ್ಗಳದೇವನಾರೋ ತಿಳಿಯದು; ಚಂದ್ರಪ್ರಭಪುರಾಣವನ್ನು ಬರೆದ ಅಗ್ಗಳದೇವನು (1189) ಬೇರೆ ಅಲ್ಲ. ಈತನ ಗುರು ವೀರಣಂದಿಮುನಿ. ಇವನಿಗೆ 'ಬ್ರಹ್ಮ' ಎಂಬ ಹೆಸರೂ ಉಂಟು. ಈತನು ಸೌರ, ಕೌಳೋತ್ತರ, ವೇದ, ಸ್ಮೃತಿ, ಮೊದಲಾದುವುಗಳನ್ನು ಓದಿ ಅವುಗಳ ಅಸಾರತೆಯನ್ನು ತಿಳಿದಿರುವಂತೆ—

ಸೌರಂ ಕೌಳೋತ್ತರಮಂ । ಬಾರಾಧನೆಗಳೊಳಗಮಖಿಳವೇದಸ್ಮೃತಿತ ।
ತ್ಪೌರಾಣಮೆನಿಪ್ಪುವಜ್ಞಿಳ । ಸಾರಮನಿಂಬಾಗೆ ಬ್ರಹ್ಮಶಿವಕವಿ ಬಲ್ಲಂ ॥

ಎಂಬ ಪದ್ಯದಲ್ಲಿ ಹೇಳುತ್ತಾನೆ.

ಪಿರಿದಜ್ಞಾಯಿಂದೆ ಮಾಹೇ । ಶ್ವರಧರ್ಮದೊಳದಜ್ಞಿಳೊಳ್ಪುಗಾಣದೆ ಮಗುಜ್ಜಾ ।
ಪರಮಜಿನಧರ್ಮದೊಳಪೊ । ಕ್ಕು ರಾಗಿಪೊಡೆ ಸುಕವಿ ಬ್ರಹ್ಮ (ಶಿವನೇ ಬಲ್ಲಂ) ॥

ಎಂಬ ಪದ್ಯದಿಂದ ಈತನು ಶೈವಮತವನ್ನು ಅವಲಂಬಿಸಿದ್ದು ಅದರ ಅಸಾರತೆಯನ್ನು ಕಂಡು ತಿರುಗಿ ಜೈನನಾದಂತೆ ಊಹಿಸಬಹುದಾಗಿದೆ.

**ತ್ರೈಲೋಕ್ಯಚೂಡಾಮಣಿ ಸ್ತೋತ್ರದ ಅಂತ್ಯದಲ್ಲಿರುವ**

ಎಡೆಯಾಡುತ್ತುಮನೂನಜ್ಞಿನಭವನಕ್ಕಾನಂದದಿಂದಂ ತಳ ।
ರ್ನಡೆಗಲ್ತೆಂ ಪರಮಾಗಮಾಭ್ಯಸನದಿಂದಾಪೊಟ್ಟುಮಾಗಳ್ ತೊದ ॥
ಲ್ನುಡಿಗಲ್ತೆಂ ಕಿಜಯಂದು ಪುಣ್ಯವಶದಿಂದಾರಾಜ್ಯಪೂಜ್ಯಾಸ್ಪದಂ ।
ಬಡೆದಾಗಳ್ ಕವಿಚಕ್ರವರ್ತಿವೆಸರಂ ತ್ರೈಲೋಕ್ಯಚೂಡಾಮಣೀ ॥

ಎಂಬ ಪದ್ಯದಿಂದ ಈತನು ರಾಜಮರ್ಯಾದೆಯನ್ನೂ ಕವಿಚಕ್ರವರ್ತಿಯೆಂಬ ಬಿರುದನ್ನೂ ಪಡೆದಂತೆ ತಿಳಿಯುತ್ತದೆ.

ನಮಗೆ ದೊರೆತ ಸಮಯಪರೀಕ್ಷೆಯ ಪ್ರತಿಯಲ್ಲಿ ಮೊದಲನೆಯ ಓಲೆಯಿಲ್ಲ. ಆ ಭಾಗದಲ್ಲಿ ಕವಿಯ ವಿಷಯವಾಗಿ ಆವ ಅಂಶಗಳು ಹೇಳಿವೆಯೋ ತಿಳಿಯದು. ಎರಡನೆಯ ಓಲೆಯಲ್ಲಿ 'ದಾನವಿನೋದೆ' ಯೆಂಬ ಬಿರುದುಳ್ಳ ಒಬ್ಬ ಅತ್ತಿಮಬ್ಬೆಯನ್ನೂ, "ಜಿನಸಮಯವಾರ್ಧಿವರ್ಧನತಾರಾಪತಿ"ಯಾದ ಒಬ್ಬ ರಾಮತರಾಯನನ್ನೂ, ಚಾಳುಕ್ಯರಾಜನಾದ ತ್ರೈಲೋಕ್ಯಮಲ್ಲನ ಮಗ **ಕವಿಕೀರ್ತಿವರ್ಮ**ನನ್ನೂ,[1] ದೇವನಾಗನ ಮಗನಾದ ಆಹವಮಲ್ಲಮಹೀಶನನ್ನೂ ಸ್ತುತಿಸಿ, ಗ್ರಂಥವನ್ನು ಆರಂಭಿಸಿದ್ದಾನೆ. ಇದರಿಂದ ಈ ಕವಿಗೆ ಕೀರ್ತಿವರ್ಮಕವಿ ಸಮಕಾಲದವನಾಗಿದ್ದಿರಬೇಕೆಂದು ತೋರುತ್ತದೆ. ಆದುದರಿಂದ ಈ ಕವಿ ಸುಮಾರು 1125 ರಲ್ಲಿ ಇದ್ದಿರಬಹುದು. ಇವನ ಗುರುವಾದ ವೀರಣಂದಿಮುನಿ 1115 ರಲ್ಲಿ ಗತಿಸಿದ[2] ಮೇಘಚಂದ್ರತ್ರೈವಿದ್ಯನ ಮಗನಾಗಿರಬಹುದು.

ನಮಗೆ ತಿಳಿದ ಮಟ್ಟಿಗೆ ಈತನನ್ನು ಆವ ಕವಿಗಳೂ ಸ್ತುತಿಸಿಲ್ಲ; ಆದರೆ **ಕೇಶಿರಾಜನು ಶಬ್ದಮಣಿದರ್ಪಣದ** 75 ನೆಯ ಸೂತ್ರದ ಕೆಳಗೆ ಈ ಕವಿಯ ಗ್ರಂಥದಲ್ಲಿಯ—

ಪದೆದಾಡಂ ತವೆ ಕೊಂದು ಸಗ್ಗಮನದರ್ಕೂಲ್ವೀವರಂತೀಯಲಾ ।
ಗದೆತತ್ಪುತ್ರಕಳತ್ರಮಿತ್ರನಿವಹಕ್ಕಾಡಿಂದಮಾಬಂಧು ಕೂ ॥
ರದ (ರೇ) ಕೊಂದಡದಿಂಬ ಶಾಸ್ತ್ರದಿನಹಿಂಸಾಲಕ್ಷಣೋ[3] ಧರ್ಮ ಎಂ ।
ಬುದನೀತತ್ಪವಿತುರ್ವರೇಣ್ಯರಟಿದರ್ ತ್ರೈಲೋಕ್ಯಚೂಡಾಮಣೀ[4] ॥

ಎಂಬ ಪದ್ಯದ ಕೊನೆಯ ಭಾಗವನ್ನು ಉದಾಹರಿಸಿದ್ದಾನೆ.

---

1. ಪು 129.
2. ಶ್ರ. ಬೆ ಶಾಸನ 127
3 ಮೈ॥ ಕಟ್ಟಲೆ ಮುದ್ರಿಸಿರುವ ಶಬ್ದಮಣಿದರ್ಪಣದಲ್ಲಿ 'ಲಕ್ಷಣೋ' ಎಂಬುದಕ್ಕೆ ಪ್ರತಿಯಾಗಿ 'ಪರನೋ' ಎಂದು ತಪ್ಪು ಬಿದ್ದಿದೆ.
4. ಈ ಪದ್ಯವು ತ್ರೈಲೋಕ್ಯಚೂಡಾಮಣಿ ಸ್ತೋತ್ರದಲ್ಲಿಯೂ ದೊರೆಯುತ್ತದೆ.

ನಮಗೆ ದೊರೆತ ಭಾಗದಲ್ಲಿ ಪೂರ್ವಕವಿಗಳನ್ನು ಸ್ತುತಿಸುವ ಪದ್ಯಗಳಿಲ್ಲ. ತನ್ನ ಗುಣಾದಿಗಳನ್ನು ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ—

* * * ಚಳಭೀ । ದನವಜ್ರಂ ಜೈನಮಾರ್ಗನಿಶ್ಚಿತಚಿತ್ತಂ ।
ಜಿನಸಮಯಸುಧಾರ್ಣವ। ರ್ಧನಚಂದ್ರಂ ಪೇೞ್ವೆನೆಂಯೆ ಭವ್ಯರ ಮತದಿಂ ॥
ಜಿನಧರ್ಮಾಮೃತವಾರ್ಧಿವರ್ಧನಶಶಾಂಕಂ ತೀವ್ರಮಿಥ್ಯಾತ್ವಬಂ ।
ಧನಚಂಡಾಂಶು ಕಷಾಯಮೂಢತಿಮಿರಧ್ವಾಂತದ್ವಿಷಂ ಭವ್ಯಮಂ ॥
ಡನನಾನಂದಿತಸನ್ಮನೀಂದ್ರನಿಕರಂ ರತ್ನತ್ರಯೋದ್ಭಾಸಿ ಸ ।
ಜ್ಞನಸಂಸ್ತುತ್ಯನನಾಪ್ತರಂದಮನೆ ಪೇೞ್ವಂ ಬ್ರಹ್ಮನೀಮಾಟ್ಕೆಯಿಂ ॥

ಈತನ ಗ್ರಂಥಗಳಲ್ಲಿ

## 1. ಸಮಯಪರೀಕ್ಷೆ.

ಇದರಲ್ಲಿ "ಆಪ್ತಾಗಮಧರ್ಮಂ ಅನಾಪ್ತಾಗಮಧರ್ಮಂ" ಎಂಬ ಎರಡನ್ನೂ ಹೇಳಿದ್ದಾನೆ. ಸೌರಶೈವವೈಷ್ಣವಾದಿಮತದವರ ಪುರಾಣಗಳಲ್ಲಿಯೂ ಆಚರಣೆಗಳಲ್ಲಿಯೂ ಇರುವ ದೋಷಗಳನ್ನು ತೋರಿಸಿ, ಜೈನಮತವೇ ಸರ್ವೋತ್ಕೃಷ್ಟವಾದುದೆಂದು ಹೇಳಿದ್ದಾನೆ. ಗ್ರಂಥವು ಮೊದಲಿಂದ ಕಡೆಯವರೆಗೆ ಗದ್ಯಭಾಗವಿಲ್ಲದೆ ಕೇವಲ ಕಂದವೃತ್ತರೂಪವಾಗಿಯೇ ಬರೆದಿದೆ. ಇದು 15 ಅಧಿಕಾರಗಳಾಗಿ ಭಾಗಿಸಲ್ಪಟ್ಟಿದೆ.[1] ಅಧಿಕಾರಗಳ ಕೊನೆಯಲ್ಲಿ—

ಇದು ಭಗವದರ್ಹತ್ಪರಮೇಶ್ವರಚರಣಸ್ಮರಣಪರಿಣತಾಂತಃಕರಣ ವೀರಣಂದಿಮುನೀಂದ್ರಚರಣಸರಸಿರುಹಷಟ್ಪರಣ ಮಿಥ್ಯಾಸಮಯತೀವ್ರತಿಮಿರಚಂಡಕಿರಣ ಸಕಳಾಗಮಾರ್ಥನಿಪುಣ ಮಹಾಕವಿ ಬ್ರಹ್ಮಶಿವವಿರಚಿತಮಪ್ಪ ಸಮಯಪರೀಕ್ಷೆಯೊಳ್

ಎಂಬ ಗದ್ಯವಿದೆ.

ಇವನ ಬಂಧವು ಬಹಳ ಸರಳವಾಗಿಯೂ ಲಲಿತವಾಗಿಯೂ ಇದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

### ಜೂದು.

ಬವರದ ಬೀಟ್ತು ವಂಚನೆಯ ಪುತ್ತಜ್ಜಿವಿಂಗೆ ವಿಕಾರಹೇತು ದ ।
ರ್ಶವಸೆಗೆ(?) ಕಾರಣಂ ಪರಿಭವಕ್ಕದು ವಿತ್ತದ ಕೇಡು ರೌದ್ರಸಂ ॥
ಭವಮಸುಖಾಸ್ಪದಂ ಗುಣಗಣಂಗಳ ಕೇಡಿನಿಸರ್ದ ಜೂದನಾ ।
ಡುವ (ನರ)ನೆಯ್ದುನೇ ಸಕಳಹಾನಿಯನುತ್ತಮಸೌಖ್ಯಹಾನಿಯಂ ॥ 265 ॥

1 ಗ್ರಂಥದ ಆದಿಭಾಗವು ದೊರೆಯದುದರಿಂದ ಇವನು ಸ್ತುತಿಸುವ ದೇವರು ಗುರುಗಳು ಮೊದಲಾದವರ ವಿಷಯವಾಗಿ ನಮಗೂ ಹೇಳುವುದಕ್ಕಿಲ್ಲದೆ ಇದೆ. ದೊರೆತ ಭಾಗದಲ್ಲಿ ಇವನು ಹೇಳಿರುವ ಆಕ್ಷಿಮಟ್ಟಿ ಮೊದಲಾದವರ ಹೆಸರುಗಳು ಮುಂದೆಯೇ ಕೊಟ್ಟಿವೆ.

ಪಡಶಲೆ ನೋಗುಂ ಕಣ್ಗಳ್|ಕೆಡುಗುಂ ಮೆಯ್ ಬೀನೆಗೆಯ್ಗುವೊಡಮೆಯುಮೊಳ್ಪುಂ|
ಕೆಡುಗುಂ ಮೂಲವ್ಯಾಧಿಯು|ಮಡಸುಗುಮಿಂತಿನಿತೆ ಜೂದಿನಿಂ ಬರ್ಪ ಫಲಂ ॥266॥

ಉಡುಗದೆ ಸೊರ್ಕೆದಂದದೊಳೆ ಗೆಲ್ದೆಡೆಯೊಳ್ ಸಲೆ ಬಾಯ್ಗುವಂದುದಂ ॥
ನುಡಿವರಲ್ಲಿಲ್ಲು ಸೋಲ್ತ ಪದದೊಳ್ ದೆಸೆಗಾಣದೆ ಮಾನ್ಯರಪ್ಪರಂ ॥
ಜಡಿವರನರ್ಥಮಂ ಬಗೆಯರಂತದಜ್ಞಂದಮೆ ಜೂದನಾಡಲುಂ ।
ನುಡಿಯಲುಮಾಗ ಸದ್ಗುಣ ವಿಭಾವಮನೆಯ್ದುವನೆಂಬ ದೂಸಜ್ಞಂ ॥ 267 ॥

## ಜಿನಸಮಯ.

ಪುಸಿ ಕೊಲೆ ಕಳವು ಪರಸ್ತ್ರೀ । ವ್ಯಸನಂ ಮಧುಮದ್ಯಮಾಂಸಸೇವನೆ ಪೊಲ್ಲಿಂ ।
ದು ಸದಾ ಬಗ್ಗಿಪ ಕತದಿಂ । ದೆ ಸಕಳಸಮಯಕ್ಕೆ ಸಮ್ಮತಂ ಜಿನಸಮಯಂ ॥268 ॥

ಪುಸಿವವನೆ ತೊಲಗು ಹಿಂಸೆಯೊ । ಳೆಸಗುತ್ತರ್ಪವನೆ ತೊಲಗು ಪರವಧುವಿಂಗಾ ।
ಟಿಸುವವನೆ ತೊಲಗೆನುತ್ತುಂ । ಪಸರಿಸುವುದು ಜೈನಧರ್ಮಭೇರೀನಿನದಂ ॥ 269 ॥

ಅಡದಿಂಬ ತೊಲಗು**ಪೆಜ್ಜ । ರೊಡಮೆಗಳಂ ಕೊಳ್ವ ತೊಲಗು ಮಧುವಂ ಕಳ್ಳಂ ।
ಕುಡಿವವನೆ ತೊಲಗೆನುತ್ತುಂ । ಪೊಡವಿಗೆ ಜಿನಧರ್ಮದೊಂದು ಗೋಸಣೆಯೆಸೆಗುಂ
॥ 270 ॥

## ಜೀವದಯೆ.

ನೀರಂ ತೋಜಿದೆ ಪಸಿದುದ । ನಾರಯ್ದೆ ಸೇದೆಯಜ್ಜದು ಸಲಿಸದೆ ಪಿರಿದುಂ ।
ಭಾರಮನೆ ಪೇಜ್ಜ ನಸುನಂ । ದೂರಾಂತರಮುಯ್ವಲಾಗದೆಂಬಂ ಜೈನಂ ॥ 271 ॥

ಕಸಮಂ ಕಳಿವೆಡೆಯೊಳ್ ಸಾ । ಜಿಸುವಡೆಯೊಳಮಕ್ಕೆಗುಟ್ಟುವೆಡೆಯೊಳ್ ಸಲೆ ಸೋ ।
ದಿಸಿ ಜೀವನಿಕರಮಂ ರ । ಕ್ಷಿಸುವರೆನಲ್ ಜೈನರಿಂ ದಯಾಪರರೊಳರೇ ॥ 272 ॥

## ನೀತಿ.

ಬಡವಂ ಗುಣಿಯಾದೊಡಮವ । ನೊಡನುಡಿಯಂ ಹಸ್ತಿಮರ್ಮಿನಾದೊಡಮಂತುಂ।
ನುಡಿಗುಂ ಸಿರಿವಂತನೊಳಂ । ಪೊಡೆ ಮತ್ತವನಜ್ಞತದಲ್ಲಿ ಪುರುಳಜಿಸುವುದೇ ॥273 ॥

ಅವಂಗಂ ತನ್ಗಂದಂ । ಸಾವುಂ ಕೇಡುಂ ಭಯಂಗಳುಂ ವಿಕಳತೆಯುಂ ।
ನೋವುಮಿನಿಸಾಗದಂತಿರ । ಲಾವಂ ಸಲೆ ನುಡಿವನೆಂತುಮಾತನೆ ದೇವಂ ॥ 274 ॥

ಪುಸಿಯಂ ನುಡಿದವರ್ಗಳ ಮಾ । ನಸಿಕ್ಕೆಯುಂ ಗುಣಮುಮಱಿಗುಮಂತವರಂ ವ ।
ಸ್ಮರಾರುಂ ಭಾವಿಸುವೊಡೆ । ಪುಸಿಯೆ ಮೊದಲ್ ಪಾತಕಂಗಳೆನಿತನಿತರ್ಕಂ ॥ 275 ॥

ಅಪವರ್ಗೋಚಿತಮಾರ್ಗಮಸ್ತದುರಿತಾತಂಕಂ ಸದಾಚಾರಸ್ಫೀ ।
ತ್ಯಪದಂ ಸಜ್ಜನಸನ್ನುತಂ ಬಗೆಯೆ ಸತ್ಯಂ ನಾಸ್ತಿ ಸತ್ಯಾತ್ಪರಂ ॥

ತಪ ಎಂದಿರ್ದಪುದಾಗಮೋಕ್ತಮದಱಿಂದಾರಾದೊಡಂ ಸತ್ಯವಾ ।
ಕ್ಯಪವಿತ್ರೀಕೃತವಕ್ತ್ರರಾಗಿ ಪಡೆಯಂ ನಿರ್ವಾಣಕಲ್ಯಾಣಮಂ ॥ 276 ॥

ಇವನೆತ್ತುಂಗೋಳಂ ನೀ । ಮಿವನಂ ನಂಬದಿರಿಮೆಂದು ಕಂಡವರ್ಗಳ್ ಸಾ ।
ಱುವರತ್ತಲುಮತ್ಯುತ್ತಮ । ಭವಮಬ್ಧಿಗುಂ ಸ್ತೇಯಮದಱಿಂತೆಂತುಂ ಕಷ್ಟಂ ॥277॥

ಗಂಡನ ದೆಸೆಯುತ್ತಮರಂ । ಕಂಡೊಡೆ ಕಡೆಗಣಿಸುವರ್ ತವರ್ಮನೆಯವರಂ ।
ಕಂಡೊಡೆರಾಗಿಸಿ ಕರೆದೊಡ । ನುಂಡುಂ ಬೇಡಿದುದನೀವರಱಿಗುಲಿವೆಂಡಿರ್ ॥ 278 ॥

ಕಲಿಸದೆ ಮುಂ ಪೆಱಸೆಱತಂ । ಕಲಿಪುದು ಮಕ್ಕಳ್ಗೆ ದೇವತಾರಾಧನೆಯಂ ।
ಕಲಿಸುವುದು ಜೀವದಯೆಯಂ । ಕಲಿಪುದು ಸತ್ಪಾತ್ರಮಱಿದು ದಾನಮನೀಯಲ್
॥ 279 ॥

ನರವಿನ ಪುತ್ತಮೇಧ್ಯದ ತವರ್ಮನೆ ಕೇವಿನ ಕೊಂಡಮೆಲ್ವಿನಾ ।
ಗರಮಱಿದೋಲ ಪೆರ್ಬದುಕೆ ಜಂತುಗಳಾಗಳುಮಿರ್ಪ ತಾವು ನೆ ॥
ತ್ತರ ನೆಲೆವೆರ್ಚಿ ನಿಂದ ಮುಡು ಚೀಃ ಕಡುಕಷ್ಟಮೆನಿಪ್ಪುದೀಕಳೀ ।
ಬರನುನಿದೊಳ್ಳಿತೆಂಬರಱಿವಿಲ್ಲದವರ್ ಪೆಣನೆಂಬರಾರ್ಹತರ್ ॥ 280 ॥

## ಇತರಮತವಿಡಂಬನ.

ಒಗೆದುರಿಲಿಂಗದೊಂದುಪವಣಂ ಪರಿಭಾವಿಸಲಬ್ಜನಾಭನುಂ ।
ನೆಗಪ್ಪಿ ವಿರಿಂಚಿಯುಂ ಕೆಲ್ಗೆಗೆಯುಂ ನೆಱೆ ಮೇಗೆಯುಮೆಯ್ವುವಲ್ಲಿಕೇ ॥
ದಗೆ ಗಡ ಬೊನ್ನ ನೊಳ್ ನುಡಿದು ಮುಂ ಪುಸಿದಿರ್ದುದಱಿಂದವಿಾಶಪೂ ।
ಜಿಗೆ ಪೊಱಗಾದುದೆಂಬರೆಱೆ ಕೇದಗೆ ಮುನ್ನುಡಿಗಲ್ತುದಕ್ಕುಮೇ ॥ 281 ॥

ಮರುಳರಸಂಗೆ ಮಲ್ಲಿಗೆಯ ಮೊಲ್ಲೆಯ ಜಾಹಿಯ ಕಂಪನಾಳ್ವ ಸುಂ ।
ದರಕುಸುಮಂಗಳಂ ಕುಡದ ಕಾರಣಮಾವುದೊ ಬನ್ನಿಯೆರ್ಕೆಯು ॥
ತ್ತರಣಿಯ ಬೆಲ್ಲವೆತ್ತದ ತೊಳಂಚಿಯ ಪ್ರಯನೊಂದನಿತ್ತು ಚಿ ।
ಚ್ಚರಮಮರತ್ನಮಂ ಪಡೆದೆನೆಂಬರದರ್ಕೆ ನಿಮಿತ್ತಮಾವುದೋ ॥ 282 ॥

ಧರೆಗೊಡೆಯಂ ಚಕ್ರೇಶಂ । ತಿರಿನೆ ಬಲಿಯಲ್ಲಿ ಬೇಡಿ ಮೂಱಡಿನೆಲನಂ ।
ಸಿರಿಯೊಡೆಯಂ ಕೇಲ್ದಿಳಾಳಾ । ಗಿರಲಱಿವನೆ ಪರಿಸುತುಂ ಕಿರೀಟಿಯ ರಥಮುಂ ॥283॥

ಬಸಿಱಿಂಳಿಗೆ ಬಯ್ತು ಹರಿ ರ । ಕ್ಷಿಸಿದಂ ಗಡ ಜಗಮನಸುರರಲ್ಲಿಂದೇನೊಂ ।
ದೆಸೆಯೊಳ್ ಪೋಗಿರ್ದರೊ (ಪೇಟ್ರಿ । ಮು) ನಗಿ ಕೊಲಲ್ ತಕ್ಕುದೋ ಸರಣ್ಹೊಕ್ಕ
ವರಂ ॥ 284 ॥

ಬಗೆವೊಡದೇನಾನುಂ ಬಾ । ಲ್ತಿಗಲ್ಲವೆನಿಪರಳಿಗೊಲ್ದು ಪೊಡೆಮಡುವವನಾ ।
ಚಿಗುರುಂ ಪೂವುಂ ಕಾಯುಂ । ಸೊಗಯಿಪ ಮಾವಿಂಗೆ ಪುಣಿಸೆಗೆಜಗಲ್ತೇಡಾ ॥ 285 ॥

ಒರ್ಮಾನಂಗಜ್ಞಾವಾವಿಂ । ಗೊರ್ಮೆಯುಮೆಜಗುತ್ತುಮಿರದೆ ಕೊಡನಾಲ್ಗಜ್ಞಾವೊಂ ।
ದೆರ್ಮೆಗೆಜ್ಞಾಗಿದೊಡೆ ಪಶುವಿಂ । ನೂರ್ಮಡಿ ಫಲವಿಾವುದದಜ್ಞಾನೆಜ್ಞಾಗುಗೆ ಭಕ್ತಂ ॥286॥

ವ್ರತಗುಣಸಚ್ಚರಿತ್ರಯುತರಪ್ಪಮಹಾತ್ಮರ ಮೇಲೆ ಬಂದು ದೆಸೆ ।
ವತೆ ತನಗೊಲ್ಪೊಡಂ ಪರಕೆವೇಡಿದೊಡಪ್ಪುದು ನಂಬಲಂತದಂ ॥
ಸಿತಗೆ ನಿಕೃಷ್ಟೆ ದುಶ್ಚರಿತೆ ತೊಟ್ಟಿನಿಸಿರ್ದಳ ಮೇಲೆ ಬಂದು ದೇ ।
ವತ ನುಡಿದಪ್ಪಳೆಂದೊದೆ ವಿವೇಕಿಗಳಂತದನೇಕೆ ನಂಬುವರ್ ॥ 287 ॥

ಜಗಮಂ ಸುಡುವೊಡೆ ರುದ್ರಂ । ಜಗದೊಳಗಿರ್ದಾತ್ಮಭಕ್ತರೆಲ್ಲರುಮಂ ಮೆ ।
ಲ್ಲಗೆ ತೆಗೆದು ಬೀಜ ಪೊಜಿಗಿ । ಕ್ಕುಗುವೋ ಮೇಣ್ ಕೂಡೆ ಸುಟ್ಟು ಕಳೆಗುವೊ
ಪೇಬಿಂ ॥ 288 ॥

ಒಡಲೊರ್ವಾಗಮನಿತ್ತಂ । ಗಡ ಕಾಂತೆಗೆ ಶಂಭು ಶಂಭುಗಂ ಕೊಟ್ಟಳ್ ತ ।
ನ್ನೊಡಲೊರ್ವಾಗಮನಗಸುತೆ । ಗಡ ವಿಕ್ಕೆರಡರೆಯನಾರ್ಗೆ ಕೊಟ್ಟರೊ ಪೇಬಿಂ॥289॥

ಸಲೆ ಮೆಯ್ಗರ್ಚುವ ಪಲ್ಲಂ । ಸುಲಿವ ವಿಲೇಪನಮನಾಗಳುಂ ಪೂಸುವ ತಂ ।
ಬುಲಮುಂ ಮೆಲ್ಲ ತಪಸ್ಸಿಗ । ಳೊಲಿಪರ್ ಬೆಲೆವೆಣ್ಗಳೊಲಿಸರಮೃತಾಂಗನೆಯಂ॥290॥

## 2. ತ್ರೈಲೋಕ್ಯಚೂಡಾಮಣಿಸ್ತೋತ್ರ.

ಈ ಗ್ರಂಥದಲ್ಲಿ 36 ವೃತ್ತಗಳಿವೆ; ಇವಕ್ಕೆ ಭಕ್ತೀಸರತ್ನಮಾಲೆ ಎಂಬ ಹೆಸರೂ ಉಂಟು. ಪ್ರತಿ ಪದ್ಯವೂ ತ್ರೈಲೋಕ್ಯಚೂಡಾಮಣಿ ಎಂದು ಮುಗಿಯುತ್ತದೆ. ಇದರಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

ಅಜ್ಞಾವಿಲ್ಲಂಬುದನಕ್ಷಸೂತ್ರಮಣಿಯಂ ಕಾರುಣ್ಯಮಿಲ್ಲಂಬುದಂ ।
ಮಿಜುಗುತ್ತಿರ್ಪ ತಸೂಳದಿಂ ತನಗಣಂ ನಾಣ್ ಮುನ್ನಮಿಲ್ಲಂಬುದಂ ॥
ವೊಜ್ಞಗೆಟ್ಟರ್ಚಿಸಲಿಂಗದಿಂ ತಪದ ಮಾತಿಲ್ಲಂಬುದಂ ಗೌರಿಯಿಂ ।
ದಜ್ಞದೇನೆಂದು ಜಡರ್ ಮೃಡಂಗೆಜಗುವರ್ ತ್ರೈಲೋಕ್ಯಚೂಡಾಮಣೀ ॥ 291 ॥

ಪಡೆಮಾತೇಂ ಗಡ ಮತ್ಸ್ಯಕಚ್ಛಪವರಾಹಾಕಾರಮಂ ತಾಳ್ದಿದಂ ।
ಗಡ ಕುಬ್ಜದ್ವಿಜನಾಗಿ ದೈತ್ಯನಿದಿರೊಳ್ ದಾನಕ್ಕೆ ಕೈಯ್ಯಂತವಂ ॥
ಗಡ ಸಂಗ್ರಾಮದೊಳಾಂತು ಕಾದಿಯೆ ಜರಾಸಂಧಂಗೆ ಚಿನ್ನಿತ್ತವಂ ।
ಗಡ ದೇವಂ ಗಡ ಪೇಬ್ಗೊಡಿನ್ನವಣಕಂ ತ್ರೈಲೋಕ್ಯಚೂಡಾಮಣೀ ॥ 292 ॥

ಕೆಜ್ಞಯಂ ಸಂಜೆಯಸಿಂದ್ರನಂ ಗಣಪನಂ ಗೌರೀಶನಂ ಭಾನುವಂ ।
ಪೆಜ್ಞಯಂ ಗೋಕುಳಮಂ ಗಿರಿಪ್ರಕರಮಂ ಬಾದುಂಪೆಯಂ ಕಾಂತಿಯಂ ॥
ತೊಜ್ಞಯಂ ವಾರ್ಧಿಯನಯ್ದು ಪಾಲುಮರನಂ ದೈವಂಗಳೆಂದಿಂತು ಕೂ ।
ರ್ತೆಜ್ಞಗುತ್ತಿರ್ಪವರೆಂತು ಮುಕ್ತಿವಡೆವರ್ ತ್ರೈಲೋಕ್ಯಚೂಡಾಮಣೀ ॥ 293 ॥

ಜಿನಮಾರ್ಗಂಬಿಡದನ್ಯಮಾರ್ಗಮನದೇಂ ಪೇೞ್ದೊಡೂಷಣಂಗೆಯ್ದು ದು ।
ರ್ಜನನಾದಂ ಕರಮೆನ್ನೆ ಮೆಚ್ಚದವರ್ಗಳ್ ಮಧ್ಯಸ್ಥರಾರಯ್ದೆ ಪಾ ॥
ವಿನ ಪಲ್ಲೊಳ್ ವಿಷಮುಂಟು ಕೆಚ್ಚು ಸುಡುಗುಂ ನಂಜಲ್ಕ್ಕೆದೆಂಬಂತೆ ಪೇ ।
ೞ್ದಿನದಂ ವಸ್ತುವಿಚಾರಮಾತೆಜನದಂ ತ್ರೈಲೋಕ್ಯಚೂಡಾಮಣೀ ॥ 294 ॥

---

## ವಿಷ್ಣುದಂಡಾಧಿಪ. 1130.

ಚಿಕ್ಕಮಗಳೂರು 137 ನೆಯ ಶಾಸನದಲ್ಲಿ (ಶಕ 1051) ಈತನನ್ನು 'ಉಪನಿಷದ್ಗಿರಾಂ ಆಹರ್ತಾ' 'ಸತ್ಕಾವ್ಯಗೋಷ್ಠಿಶ್ರೀಯಃ ಜನಯಿತಾ' ಎಂದು ಸ್ತುತಿಸಿದೆ. ಈತನು ಕವಿಯಾಗಿದ್ದಿರಬಹುದೆಂದು ತೋರುತ್ತದೆ. ಇವನು ಹೊಯ್ಸಳ ವಿಷ್ಣುವರ್ಧನನ (1111—1141) ಆಶ್ರಿತನಾದ ರಾಯಣದಂಡ ನಾಥನ ಮಗನು.

---

## ಸಾಂತಮಹಂತ. 1137.

ಈತನು ನಾಗಮಂಗಲದ 28 ನೆಯ ಶಾಸನವನ್ನು ಬರೆದುದಾಗಿ ಆ ಶಾಸ ನದ ಕೊನೆಯಲ್ಲಿರುವ—

ಕ್ಷಿತಿವಿನುತೆ ಸರ್ಬದೇವನ । ಸುತೆ ಸನ್ನುತೆ ಸೋಮಿಯಕ್ಕನಣುಗಿನ ಪುತ್ರಂ ।
ಸತುಕವಿ ಸಾಂತಮಹಂತಂ । ಸ್ಥಿತಿಸಾರಂ ಪೇೞ್ದಿನಟ್ಟಿಯಿಂ ಸಾಸನಮಂ ॥

ಎಂಬ ಪದ್ಯದಿಂದ ತಿಳಿಯುತ್ತದೆ. ಈ ಶಾಸನವು ಹೊಯ್ಸಳ ವಿಷ್ಣುವರ್ಧನನ ಆಳಿಕೆಯಲ್ಲಿ, 1137 ರಲ್ಲಿ, ಬರೆದುದು. ಇದರಲ್ಲಿ—ವಿಷ್ಣುವರ್ಧನನ ದಂಡನಾಥ ನಾದ ಏಚಿರಾಜನು ದೊರೆಯಿಂದ ಪಡೆದ ನಾನಲಕೆರೆಯನ್ನು ಮೂಲಸ್ಥಾನದ ಮಲ್ಲಿಕಾರ್ಜುನದೇವರಿಗೆ ಕೊಟ್ಟಂತೆ ಹೇಳಿದೆ. ಈ ಶಾಸನದ ಪದ್ಯಗಳನ್ನು ನೋಡಿದರೆ ಸಾಂತಮಹಂತನು ಕವಿಗಳಲ್ಲಿ ಗಣ್ಯನೆಂಬುದರಲ್ಲಿ ಸಂಶಯವಿಲ್ಲ. ಈ ಪದ್ಯಗಳಲ್ಲಿ ಕೆಲವನ್ನು ಉದ್ಧರಿಸಿ ಬರೆಯುತ್ತೇವೆ :—

### ಶಿವಸ್ತುತಿ.

ಪತ್ತಿರೆ ಗಂಗೆಯ ಪನಿಗಳ್ । ಮುತ್ತಿನ ಬಾಸಿಗಮಿದೆನಿಸಿ ವಾಸುಗಿ ಸುಖದಿಂ ।
ಸುತ್ತಿರ್ದ ಜೂಟದಾದೇ । ವೊಂತ್ತಮನೆಮಗೊಸೆದು ಕುಡುಗೆ ಸುಖಸಂಪದಮಂ ॥295॥

### ಎರೆಯಂಗ.

ಪಜ್ಜಪಜ್ಜಸಿ ಮುಳಿದು ಕಾಯ್ವಂ । ದುಜ್ಜಿದೆತ್ತಿದ ವೀರವೈರಿವರ್ಗದ ಬಾಯ್ ಹೊ ।
ನ್ನೊಜ್ಜಿಯಾಗೆ ಕಟ್ಟಿದಲಗಂ । ಕಿಜ್ಜಸನೆರಣಮುಖದೊಳಗದಟನಿಂದೆಜ್ಜುಂಗಂ ॥ 296 ॥

## ವಿಷ್ಣುವರ್ಧನ.

ಚೀರಮು ವೈರಮುಂ ಬಿಸುಡು ಪಾಂಡ್ಯ ಕಡಂಗದಿವಂಧ್ರ ರಂಧ್ರಮುಂ।
ಪಾರದಿರೊಡ್ಡ ಗೊಡ್ಡನವದಂ ಬಿಡು ಮಾಳವ ಕಾಳೆಗಕ್ಕೆ ಮೆ॥
ಯ್ದೋಜಿದೆ ಸಾಗೆಲೇ ತಿಗುಳ ನೀಂ ಜಗುಲ್ಲಿಂಬುದಪಾರವೀರದು।
ರ್ವಾರಗಭೀರಧೀರತೆ (?) ವಿನಿಸ್ಪೃತಫೋಷಣೆ ಬಲ್ಲು ಭೂಪನಾ ॥ 297 ॥

ಎತ್ತದ ಮುನ್ನಮೆತ್ತಿ ನಡೆಗೊಳ್ಳದ ಮುನ್ನಮಡುತ್ತು ಕೋಪದಿಂ।
ಮುತ್ತದ ಮುನ್ನಮರ್ಥಮನೆ ತೆತ್ತಿರಿವಿತ್ತಿರಿಮಾತ್ಮದುರ್ಗಮಂ॥
ಮತ್ತೆನವೇಡ ನಿರ್ಗಮಮಿದೆಂದು ವಿರೋಧಿಗೆ ವೀರಲಕ್ಷ್ಮಿ ಸಾ।
ಜುತ್ತಿರೆ ವಿಷ್ಣುವಿಕ್ರಮದುಪಕ್ರಮಮಾಕ್ರಮಿಸಿತ್ತು ಲೋಕಮಂ ॥ 298 ॥

ಧುರದೊಳ್ ಬಂದೊಡ್ಡಿ ವೈರಿಪ್ರಕರಮಿರಲವಷ್ಟಂಭದಿಂ ಬಿಟ್ಟಿದೇವಂ।
ಕರವಾಳಂ ತೋಡಿ ಕೊಂಡಿಂಬಲ್ಲಿಕಮೆಲೆ ಮಹಾದೇವ ಕಾಳಾಗ್ನಿರುದ್ರಂ॥
ಗುರಿಗಣ್ ಬಂದಂತೆ ಮಾಕಾಳಿಗೆ ಗರವಡರ್ದಂತಿಂದ್ರದಿಗ್ದಂತಿ ಕಾಯ್ದಿಂ।
ಪರಿಷ್ಠಂಗೊಂಡಂತಗುರ್ಬುರ್ಬಿಪುದೆನೆ ಮುಳಿಸಿಂ ವಿಷ್ಣು ವಾಜ್ಞಾಂಪನಾವಂ ॥299॥

## ಏಚಿರಾಜ.

ಬಾರಿಸೆ ದಂಡೆಯಂ ಕೊರಲ ಕೊಂಕಳವಟ್ಟಿರೆ ಕಾಲವೇಗವಿಂ।
ಧಾರಿಣಿಯೊಳ್ ಬಿಡಂಗನೊಳಕೊಂಡಿರಲೇಜು ತುರಂಗರಾಜನಂ॥
ವೀರಮುಮಂ ವಿಳಾಸಮುಮನೀತನೆ ತಾಳ್ದಿದನೆಂದು ನೋಡಿ ಕೆ।
ಯ್ಯಾರದಿನೆಲ್ಲರುಂ ಪೊಗಳ್ದ್ ತನ್ನನೆ ಸಚಿವಮಂತ್ರಿ ರಂಜಿಪಂ ॥ 300 ॥

---

## ಹರಿಪಾಲ. ಸು. 1140.

**ಎರಡನೆಯ ನಾಗವರ್ಮನ** (ಸು. 1145) **ಭಾಷಾಭೂಷಣದಲ್ಲಿ** "ದ್ವಿತೀಯಾಂತಸ್ಯ ವಾ ಸ್ಮರೇ[1]" ಎಂಬ ಸೂತ್ರದ ಕೆಳಗೆ "ಹರಿಪಾಲಸ್ಯ ಪ್ರಯೋಗಃ—ಕಲ್ಲಾನೇಜುದಂ: ಬಿಲ್ಲಾನೇಜುಸಿದಂ" ಎಂದಿದೆ. ಇದರಿಂದ ಹರಿಪಾಲನು ನಾಗವರ್ಮನಿಗೆ ಹಿಂದೆಯೇ ಕನ್ನಡಗ್ರಂಥಗಳನ್ನು ಬರೆದು ಪ್ರಸಿದ್ಧ ಕವಿಯಾಗಿದ್ದಿರಬೇಕೆಂಬುದು ವ್ಯಕ್ತವಾಗುತ್ತದೆ. ಇವನು ಸುಮಾರು 1140 ರಲ್ಲಿ ಇದ್ದಿರಬಹುದು. ಆವ ಗ್ರಂಥಗಳನ್ನು ಬರೆದಿದ್ದಾನೆಯೋ ತಿಳಿಯದು

---

1. ಸೂತ್ರ 69

## ಹಂಸರಾಜ. ಸು. 1140.

**ಕೇಶಿರಾಜನು** (ಸು. 1260) **ಶಬ್ದಮಣಿದರ್ಪಣದ** 289 **ನೆಯ ಸೂತ್ರದ ಕೆಳಗೆ**—"**ಎರಡು ಪದಮುಂ ತದ್ಭವ(ವ)ನೆಯ್ದುವಲ್ಲಿ ಒಂದು ಪದಮನುಟ್ಟಿಸಿ ತಪ್ಪಾದುದರ್ಕೆ ಹಂಸರಾಜನ ಪ್ರಯೋಗಂ—ತರವೇಟ್ಟು ಮಾಣಿಕ್ಯಭಂಡಾರದ ಪುಟಿಕೆಗಳಂ–ಇಲ್ಲಿ ಮಾಣಿಕ್ಯಶಬ್ದಮನುಟ್ಟಿದು ಮಾಣಿಕಭಂಡಾರಮೆನೆ ಶುದ್ಧಂ**" ಎಂದು ಬರೆದಿದ್ದಾನೆ. **ಈ** "ತರವೇಟ್ಟು" ಎಂಬ ಪದ್ಯವನ್ನು ಇದೇ ಸಂದರ್ಭದಲ್ಲಿ **ನಾಗವರ್ಮನು** (ಸು. 1145) **ಕಾವ್ಯಾವಲೋಕನ**ದಲ್ಲಿ ಹೀಗೆ ಸನುಗ್ರವಾಗಿ **ಕೊಟ್ಟಿದ್ದಾನೆ** :—

ತರವೇಟ್ಟು ಮಾಣಿಕ್ಯಭಂಡಾರದ ಪುಟಿಕೆಗಳಂ ಪುಂಜಿಸಲ್ಬೇಟ್ಟು ಸುವರ್ಣ್ಣಂ।
ತ್ಕರಮಂ ತೋಜಲ್ಕೆವೇಟ್ಟು ದಂತಿಗಳನರಿಸವೇಟ್ಟು ಮುಂತ ವಾಹಂಗಳಂ ಬಿ॥
ತ್ತರಿಸಲ್ಬೇಟ್ಟು ಚಿತ್ರಚೀನಾಂಬರಪರಿಕರಮಂ ಮಾಣದೆಂದೋಳಿಯಿಂ ಲೆಂ।
ಕರನಾಗಳ್ ಪೇಟ್ದಿನೀಯಲ್ಕರೆದವರ್ಗೆ ಮಹಾದಾನಮಂ ವಿಕ್ರಮಾಂಕಂ॥

ಇದರಿಂದ ಹಂಸರಾಜನು ನಾಗವರ್ಮನಿಗಿಂತ ಹಿಂದೆ ಇದ್ದವನೆಂಬುದು ವ್ಯಕ್ತವಾಗುತ್ತದೆ; ಸುಮಾರು 1140 ರಲ್ಲಿ ಇದ್ದಿರಬಹುದು. ಮೇಲೆ ಬರೆದಿರುವ ಪದ್ಯದಲ್ಲಿ ಹೇಳಿರುವ ವಿಕ್ರಮಾಂಕನು 1076 ರಿಂದ 1126 ರ ವರೆಗೆ ಆಳಿದ ಚಾಳುಕ್ಯ ವಿಕ್ರಮಾದಿತ್ಯನಾಗಿದ್ದ ಪಕ್ಷದಲ್ಲಿ ಈ ಕವಿ ಆ ರಾಜನ ಕಾಲದವನೆಂದು ಊಹಿಸಬಹುದಾಗಿದೆ. ಈತನು ಆವ ಗ್ರಂಥಗಳನ್ನು ಬರೆದಿದ್ದಾನೆಯೋ ತಿಳಿಯದು.

---

## ಕರ್ಣಪಾರ್ಯ. ಸು. 1140.

**ಈತನು ನೇಮಿನಾಥಪುರಾಣವನ್ನು** ಬರೆದಿದ್ದಾನೆ. "ಮಾಳವೀಮಾಧವ" ಎಂಬ ಒಂದು ಗ್ರಂಥವನ್ನು ಈತನು ಬರೆದಿರುವುದಾಗಿ **ದುರ್ಗಸಿಂಹನ** (ಸು. 1145) **ಪಂಚತಂತ್ರ**ದಲ್ಲಿಯ—

ಪರಮಕವೀಶ್ವರಚೇತೋ। ಹರಮೆಂಬಿನಮೆಸೆವ ಮಾಳವೀಮಾಧವಮುಂ।
ವಿರಚಿಸಿದ ಕನ್ನಮಯ್ಯಂ। ಬರಮಾಗಂ ಸುಕವಿ ಬಗೆವೊಡಿನ್ನಂಮುನ್ನಂ॥

ಎಂಬ ಪದ್ಯದಿಂದ ತಿಳಿಯಬರುತ್ತದೆ. ಅಲ್ಲದೆ **ವೀರೇಶಚರಿತ**ವೆಂಬ ಬೇರೊಂದು ಗ್ರಂಥವನ್ನು ಬರೆದಿರುವುದಾಗಿ **ದೊಡ್ಡಯ್ಯನ** (ಸು. 1550) **ಚಂದ್ರಪ್ರಭ ಸಾಂಗತ್ಯ**ದಲ್ಲಿಯ—

ವರಶಾಂತಿನಾಥನ ಪೊಗಟ್ಪಿ ಹೊನ್ನನ ಸ್ಮರಿ। ಹರನೇಮಿನಾಥಚರಿತವ।
ಪುರಿತಾರಿವೀರೇಶನ ಚರಿತವ ಪೇಳ್ದು। ಗರುವ ಕಣ್ಣಪನ ನುತಿಪೆನು॥

ಎಂಬ ಪದ್ಯದಿಂದ ತಿಳಿಯಬರುತ್ತದೆ. ಮೂಳವೀಮೂಧವವೂ ವೀರೇಶಚರಿತವೂ ನಮಗೆ ದೊರೆತಿಲ್ಲ.

ಈತನು ಜೈನಕವಿ; ಇವನ ಹೆಸರು—ಕರ್ಣಪ, ಕಣ್ಣಪ, ಕಣ್ಣಮಯ್ಯ, ಕನ್ನಮಯ್ಯ, ಕಣ್ಣಮ ಎಂದೂ ಅಲ್ಲಲ್ಲಿ ದೊರೆಯುತ್ತದೆ. ಈತನಿಗೆ—ಪರಮಜಿನ ಮತಕ್ಷೀರವಾರಾಶಿಚಂದ್ರ, ಭವ್ಯವನಜವನಮಾರ್ತಾಂಡ, ಸಹಜಕವಿತಾರಸೋದಯ—ಎಂಬ ಬಿರುದುಗಳು ಇದ್ದಂತೆ ತೋರುತ್ತದೆ. ಇವನ ವಿಷಯವಾಗಿ ನೇಮಿನಾಥಪುರಾಣದಿಂದ ಈಯಂಶಗಳು ತಿಳಿಯುತ್ತವೆ:—"ಜೀಮೂತವಾಹನ ವಿದ್ಯಾಧರಚಕ್ರವರ್ತಿವಂಶತಿಳಕ" ನಾದ ಗೋವರ್ಧನ ಅಥವಾ ಗೋವಣ ಎಂಬ ರಾಜನು ಕಿಳಿಕಿಳದುರ್ಗಕ್ಕೆ ಅಧಿಪತಿಯಾಗಿದ್ದನು. ಇವನಿಗೆ ಗಂಡರಾದಿತ್ಯಭೂಪ, ಶ್ರೀಭೂಷಣ ಎಂಬ ಬಿರುದುಗಳುಂಟು. ಈತನ ಹೆಂಡತಿ ಕಂಚವ್ವೆ; ಇವನಿಗೆ ವಿಜಯಾದಿತ್ಯ, ಲಕ್ಷ್ಮಣ ಅಥವಾ ಲಕ್ಷ್ಮೀಧರ, ವರ್ಧಮಾನ, ಶಾಂತ ಎಂಬ ನಾಲ್ವರು ಕುಮಾರರು ಇದ್ದರು. ವಿಜಯಾದಿತ್ಯನ ಹೆಂಡತಿ ಸೊನ್ನಲದೇವಿ. ಲಕ್ಷ್ಮಣನ ಹೆಂಡತಿ ಗೋಪ...ಮಗಳಾದ ಚಂದಲದೇವಿ. "ಪೃಥಿತಯಾಶಂ ಸಮಸ್ತವಿಬುಧಾಗ್ರಣಿ" ಯಾದ ಈ ಲಕ್ಷ್ಮಣರಾಜನು ಈ ಪುರಾಣವನ್ನು ಹೇಳಿಸಿದನು. ಈ ಲಕ್ಷ್ಮಣರಾಜನ ಗುರು ನೇಮಿಚಂದ್ರಮುನಿ. ಕವಿಯ ಗುರು ಮಲಧಾರಿದೇವನ ಶಿಷ್ಯನಾದ ಕಲ್ಯಾಣಕೀರ್ತಿ.

(1) ದುರ್ಗಸಿಂಹನು (ಸು. 1145) ಈ ಕವಿಯನ್ನು ಸ್ತುತಿಸುವುದರಿಂದ ಈತನು ಅವನಿಗೆ ಹಿಂದೆ ಇದ್ದಿರಬೇಕು. (2) ಈತನು ನಾಗಚಂದ್ರನನ್ನು (ಸು. 1100) ಹೊಗಳುವಾಗ "ಅದ್ಯತನನಾಗಿಯುಂ" ಎಂದು ಹೇಳಿರುವುದರಿಂದ ಅವನಿಗಿಂತ ಸುಮಾರು ಒಂದು ತಲೆ ಈಚೆಯವನಾಗಿದ್ದಿರಬಹುದು. (3) ತನ್ನ ಗುರುವಾದ ಕಲ್ಯಾಣಕೀರ್ತಿಯು ಜತೆಯಲ್ಲಿ ಶುಭಚಂದ್ರಮುನಿಯನ್ನೂ ಸ್ತುತಿಸಿದ್ದಾನೆ. ಒಬ್ಬ ಶುಭಚಂದ್ರಮುನಿ 1123 ರಲ್ಲಿ ಗತಿಸಿದಂತ ಶ. ಬಿ. 117 ನೆಯ ಶಾಸನದಿಂದ ತಿಳಿಯುತ್ತದೆ. ಕಲ್ಯಾಣಕೀರ್ತಿ 1115 ರಲ್ಲಿ ಗತಿಸಿದ ಮೇಘಚಂದ್ರತ್ರೈವಿದ್ಯನ ಸಧರ್ಮನೆಂದು ಶ. ಬಿ. 69 ನೆಯ ಶಾಸನದಿಂದ ತಿಳಿಯುತ್ತದೆ. ಅಲ್ಲದೆ ಕವಿ ಬಿಟ್ಟಿದ ಮುನಿಯೆಂಬ ಒಬ್ಬ ಗುರುವನ್ನು ಹೊಗಳಿ—ಬಿಟ್ಟದ ಮುನಿಯಂ ನೆನೆದೊಡೆ | ಮುಟ್ಟುವು ರಾಕ್ಷಸಪಿಶಾಚವಿಷಮಾಹಿಗಳುಂ—ಎಂದು ಹೇಳಿದ್ದಾನೆ, ಶ. ಬಿ. 69 ನೆಯ ಶಾಸನದಲ್ಲಿ ಕಲ್ಯಾಣಕೀರ್ತಿ—ಶಾಕಿನ್ಯಾದಿಗ್ರಹಾಣಾಂಚ | ನಿರ್ಘಾಟನಧುರಂಧರಃ—ಎಂದು ಹೇಳಿರುವುದರಿಂದ ಬಿಟ್ಟದಮುನಿಯೆಂಬುದು ಕವಿಯ ಗುರುವಿನ ಮತ್ತೊಂದು ಹೆಸರಾಗಿರಬಹುದು. (4) ಲೀಲಾವತಿಯನ್ನು ಬರೆದ ನೇಮಿಚಂದ್ರನಿಗೂ (ಸು. 1170) ಈ ಲಕ್ಷ್ಮಣರಾಜನೇ ಪೋಷಕನಾಗಿದ್ದಂತೆ ಆ ಗ್ರಂಥದಿಂದ ತಿಳಿಯಬರುತ್ತದೆ.[1] ನೇಮಿಚಂದ್ರನ ಕಾಲದಲ್ಲಿ ಲಕ್ಷ್ಮಣರಾಜನು ರಾಜ್ಯಭಾರ ಮಾಡು

1 ನೇಮಿಚಂದ್ರನ ಚರಿತವನ್ನು ನೋಡಿ.

ತ್ತಿದ್ದಂತೆ ವ್ಯಕ್ತವಾಗುತ್ತದೆ. ಕರ್ಣಪಾರ್ಯನ ಕಾಲದಲ್ಲಿ ಲಕ್ಷ್ಮಣರಾಜನು ರಾಜ್ಯಭಾರಮಾಡುತ್ತಿರಲಿಲ್ಲ. ಅವನ ತಂದೆಯೋ ಅಥವಾ ಅಣ್ಣನಾದ ವಿಜಯಾದಿತ್ಯನೋ ಆಳುತ್ತಿದ್ದಂತೆ ತಿಳಿಯಬರುತ್ತದೆ. ಆದುದರಿಂದ ಕರ್ಣಪಾರ್ಯನು ನೇಮಿಚಂದ್ರನಿಗೆ ಸುಮಾರು ಒಂದು ತಲೆಹಿಂದೆ ಇದ್ದಿರಬೇಕು.

**ಈ ಕಾರಣಗಳಿಂದ ಈ ಕವಿ ಸುಮಾರು 1140 ರಲ್ಲಿ ಇದ್ದನೆಂದು ಊಹಿಸಬಹುದಾಗಿದೆ.**

ಈತನನ್ನು **ರುದ್ರಭಟ್ಟ** (ಸು. 1180), **ಆಂಡಯ್ಯ** (ಸು. 1235), **ಮುಂಗರಸ** (1508), **ದೊಡ್ಡಯ್ಯ** (ಸು. 1550) ಮೊದಲಾದ ಕವಿಗಳು ಸ್ತುತಿಸಿದ್ದಾರೆ.

ಈತನು ಪೂರ್ವಕವಿಗಳನ್ನು ಈ ಪದ್ಯಗಳಲ್ಲಿ ಹೊಗಳಿದ್ದಾನೆ:—

ಹೊನ್ನನ ರನ್ನನ ಪಂಪನ। ಸನ್ನುತಕವಿತಾಗುಣಕ್ಕೆ ಸರಿ ದೊರೆ ಸಮನ।
ಪ್ಪನ್ನರ್ ಕಾವ್ಯಕಳಾಸಂ। ಪನ್ನರ್ ಪೆಜರೊಳರೆ ಧರೆಯೊಳಿನ್ನುಂ ಮುನ್ನುಂ॥
ಅದ್ಯತನನಾಗಿಯುಂ ನೆಗ। ಲ್ದ್ವಾದ್ಯರ ದೊರೆಯೆನಿಸಿ ಮೆಜ್ಜಿದು ಸಾಹಿತ್ಯಕಲಾ।
ಹೃದ್ಯತೆಯಿನೇಂದನಾನಿರ। ವದ್ಯಗುಣಂ ಸಂದ ನಾಗಚಂದ್ರಕವೀಂದ್ರಂ॥

ಇವನ ಗ್ರಂಥ

## ನೇಮಿನಾಥಪುರಾಣ.

ಇದು 22 ನೆಯ ತೀರ್ಥಂಕರನಾದ ನೇಮಿನಾಥನ ಚರಿತವು. ಇದರಲ್ಲಿ "ಹರಿವಂಶಕುರುವಂಶವೆರಡುಮುಂ", "ಶ್ರೀಭೂಷಣಾರ್ಯಪ್ರಮುಖಬುಧಜನಂ ಪೇೞ್ದಂ" ಎನಲು—

ಅದಱಿಂದಮಾಪುರಾಣಮ। ನೊದವಿದ ಸದ್ಭಕ್ತಿಯಿಂದಮಾಂ ವಿರಚಿಸುವೆಂ।
ಮೃದುಪದವಿನೂತರಚನಾ। ಸ್ಪದಮಿದು ತಾನೆನೆ ಸಮಸ್ತಬುಧತತಿ ಸತತಂ॥

ಎಂದು ಕಥೆಯನ್ನು ಉಪಕ್ರಮಿಸಿದ್ದಾನೆ. ಈ ಪುರಾಣದಲ್ಲಿ ಕೃಷ್ಣಾವತಾರದ ಕಥೆಯೂ, ಪಾಂಡವರ ಕಥೆಯೂ, ಭಾರತಯುದ್ಧದ ಕಥೆಯೂ ಹೇಳಿವೆ. ಕವಿ ತನ್ನ ಪೋಷಕನಾದ ಲಕ್ಷ್ಮೀಧರರಾಜನನ್ನು ವಿಷ್ಣುವಿಗೆ ಹೋಲಿಸಿ ಬಹಳವಾಗಿ ಸ್ತುತಿಸಿದ್ದಾನೆ. ಲಕ್ಷ್ಮೀಧರರಾಜನು ಈ ಗ್ರಂಥವನ್ನು ಮಾಡಿಸಿದನೆಂಬ ವಿಷಯವನ್ನು—

ಶರದುದ್ಯಚ್ಚಂದ್ರಚಂದ್ರಾಭರಣಸುರಸರಿತ್ತಾರತಾರಾಚಳಪ್ರ।
ಸ್ಫುರಕೀರ್ತಿಶ್ರೀವಿಳಾಸಂ ಸಕಲಗುಣಗಣಾವಾಸನಾಗಿರ್ದ ಲಕ್ಷ್ಮೀ॥
ಧರನಿಂ ಸಂಸಿದ್ಧಮಾದೀಕೃತಿ ವಿಬುಧಜನಾಹ್ಲಾದಸಂಪಾದಿ ವಿಶ್ವಂ।
ಭರೆಯೊಳ್ ನಿಲ್ಕೆಯ್ದಿ ನಿಲ್ವನ್ನೆಗಮವನಿಕುಲಾದ್ರೀಂದ್ರಚಂದ್ರಾಬ್ಧಿತಾರಂ॥

ಎಂಬ ಕೊನೆಯ ಪದ್ಯದಲ್ಲಿಯೂ ಹೇಳಿದ್ದಾನೆ. ಈ ಗ್ರಂಥವು ಚಂಪೂರೂಪವಾಗಿದೆ. ಇದರಲ್ಲಿ 14 ಆಶ್ವಾಸಗಳಿವೆ. ಗ್ರಂಥಾವತಾರದಲ್ಲಿ ನೇಮಿನಾಥನನ್ನು ಸ್ತುತಿಸಿದ್ದಾನೆ. ಬಳಿಕ ಸಿದ್ಧಾದಿಗಳನ್ನೂ ಯಕ್ಷಿಯಕ್ಷರನ್ನೂ ಸರಸ್ವತಿಯನ್ನೂ ಸ್ತುತಿಸಿ, ಆ ಮೇಲೆ ಸಮಂತಭದ್ರನಿಂದ ಅಕಳಂಕಚಂದ್ರನ ವರೆಗೆ ಗುರುಗಳನ್ನು ಪರಿವಿಡಿಯಿಂದ ಹೊಗಳಿದ್ದಾನೆ.[1] ಆಶ್ವಾಸಗಳ ಕೊನೆಯಲ್ಲಿ—

ಇದು ನಿಖಿಳವಿಬುಧಜನವಿನುತಸಾಶ್ಚರ್ಯಚಾರಿತ್ರಚಕ್ರವರ್ತಿ ಕಲ್ಯಾಣಕೀರ್ತಿಮುನೀಂ ಪ್ರ ಚಂದ್ರವಾಕ್ಚಂದ್ರಿಕಾಪ್ರಸಾದ ಪ್ರಬೋಧಿತವಾಕ್ಕುಮುದಸಮುದಯಂ ಸಹಜಕವಿತಾರ ಸೋದಯಂ ಶ್ರೀಕರ್ಣಪಾರ್ಯವಿರಚಿತಮಪ್ಪ ನೇಮಿನಾಥಪುರಾಣದೊಳ್

ಎಂಬ ಗದ್ಯವಿದೆ.

ಈ ಗ್ರಂಥದಲ್ಲಿ ವರ್ಣನಾಭಾಗವು ವಿಶೇಷವಾಗಿಲ್ಲ; ಕಥೆ ಮಾತ್ರ ಸುಬೋಧವಾಗಿಯೂ ಲಲಿತವಾಗಿಯೂ ಹೇಳಿದೆ. ಇದರಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

### ಸತ್ಕೃತಿ.

ಸಂದ ಸುವರ್ಣಮೊಸ್ಪ ಮೃದುತೇಜೆಯನಾಂತ ಪದಪ್ರಯೋಗದಿಂ ।
ಸೌಂದರಮುಸ್ಪ ಸದ್ಗುಚನಹೃದ್ಯತೆಯಂ ಪ್ರದಿದರ್ಶಿಸುವಿಯಂ ॥
ದೊಂದಿ ಸುಪುಣ್ಯಕಾಮಿನಿಯ ಮಾಲ್ಕೆಯಿಸೆಯ್ದು ವಿದಗ್ಧಕೋಟಿಗಾ ।
ನಂದಮನಪ್ಪುಕೆಯ್ದುವೊಡೆ ಪಲ್ಗಳ ಕೈಂ ಸತ್ಕೃತಿಯೇ ನಿರಂತರಂ ॥ 301 ॥

### ಸಮುದ್ರ.

ಜಳಮತ್ತೀಭಪ್ರತಾನಪ್ರಬಳತರಕರಾಸ್ಫಾಲನೋದ್ಭೂತವೀಚೀ ।
ಕುಳದಿಂ ಪ್ರಕ್ಷೋಭಿತೋದ್ದಂತಕರನಿಕರಹಸ್ತಪ್ರಹಾರಸ್ಫುಟೋ ॥
ಚ್ಛಳಿತಾಂಭೋಬಿಂದುಸಂದೋಹದಿನಮಿತತಿಮಿಸ್ತೋಮದಿಂ ಭೀಮನಕಾ ।
ವಳಿಯಿಂದಾಕೀರ್ಣಮಾದಂ ಸೊಗಯಿಪ ಲವಣಾಂಭೋಧಿ ಪೆಂಪಿಂದಗಾಧಂ ॥302 ॥

### ವನ.

ಸುರಹೊನ್ನೆಯ ಸೌರಭಮ । ಬ್ಬರಿಸುವ ಮಲ್ಲಿಗೆಯ ಕಂಪು ಸಂಪಗೆಯ ಮನೋ ।
ಹರಮೆನಿಪ ಪರಿಮಳಂ ಪ । ರ್ವಿರೆ ನಂದನದಂತಗಂ ಕರಂ ರಮಣೀಯಂ ॥ 303 ॥
ಗಲ್ಬಿಪುವ ಗಿಳಿ ಬಗ್ಗಿಪ ಪಿಕ । ಮಲರೊಳ್ ಮೊರೆವಳಿ ಸಮಂತು ನರ್ತಿಪ ಶಿಖಿ ಸಂ।
ಚಳಿಪ ಕಪಿ ಸುಲ್ಬಿಪ ಹಂಸೆಯು । ಮಳುಂಬಮೆನಿಸೆ ರಮ್ಯಮೆಂತುಮಾರಯ್ದು
ಬನಂ ॥ 304 ॥

---

1. ಸಮಂತಭದ್ರ. ಪೂಜ್ಯಪಾದ ಗೃಧ್ರಪಿಂಛ, ವೀರಸೇನ, ಗುಣಭದ್ರ. ಕೊಂಡಕುಂದಾನ್ವಯ ಮೂಲಧಾರಿ, ತಚ್ಛಿಷ್ಯಮೂಲಧಾರಿ, ಕೊಲ್ಲಾಪುರದ ಶುಭಚಂದ್ರ, ಬೆಟ್ಟದಮೂಲ, ನೇಮಿಚಂದ್ರಮುನಿ, ಅಕಳಂಕಚಂದ್ರ.

## ಕಂಸಸಭೆ.

ಇರೆ ರಾಜಮಂಡಳಂ ವಿ । ಸ್ತರದಿಂ ಗುರುಬುಧಸಮೇತಮಾಗಳ್ ಸಭೆಯಂ ।
ಬರೆದಂತಿರೆಸೆಯಿ ಕಂಸಂ । ತರಣಿಯನನುಕರಿಸೆ ರಾಹುವೋಲ್ ಹರಿಯುರ್ದಂ ॥ 305 ॥

## ದೂತನಾಗಿ ಹೋದ ಕೃಷ್ಣನ ಉಕ್ತಿ.

ಪಿರಿದುಂ ದೋರ್ಬಲಗರ್ವದಿಂದೆಸೆವ ನಿನ್ನೀಕರ್ಣನೀಶಲ್ಯನೀ ॥
ಸುರಸಿಂಧೂದ್ಭವನೀಘಟಪ್ರಭವನೀತತ್ಪುತ್ರನೀತತ್ಸಹೋ ॥
ದರರುಂ ನೆಟ್ಟನೆ ನೋಡೆ ನೋಡೆ ಸಭೆಯೊಳ್ ನಿಮ್ಮಿರ್ವರಂ ಕಟ್ಟಿ ಖೇ ।
ಚರನುಯ್ಯುತ್ತಿರೆ ತಂದ ಗಂಡಿನದಟಂ ನೀಂ ಕಂಡುಮೇಂ ನಂಬಯೋ ॥ 306 ॥

## ಬಲರಾಮಪಾಂಡವರ ಧಿಕ್ಕಾರ.

ಬಳಮುಂ ನಚ್ಚುವೊಡೀಕೃಷ್ಣನಿವಳನುವಿಾಜೂದಾಳಿಯಾಗಾಳಿಗಾ ।
ವಲ್ಲಿಯಾಳೀಬಳಿದೊಟ್ಟು ನಟ್ಟುವನುವಿಾಗೋಪಾಳರಪ್ಪಿಯುಮ ॥
ಳ್ಗಳಿದಲ್ ಚಂಡಭುಜರ್ ಬಭಾಪಿವರ್ಗಳಾಚಕ್ರೇಶಸೈನ್ಯಾಗ್ರಮಂ ।
ಡಳನಾಥರ್ಕಳನಾಂಪರಾನದಿರರೀ ಬಲ್ಲಾಳ್ಗಳೀಸಂದೆಯಂ ॥ 307 ॥

## ಮಾವು.

ಅನುಪಮಮಾಗಿ ಬಂದ ನನೆ ನುಣ್ಗೊನೆ ಗೊಂದಳಿಸರ್ಪ ಕೆಂದಳಿರ್ ।
ಕೊನರ ಸುಸೌರಭದ್ರವದ ಸೇವೆಯನುರ್ವಿ ಕುಕಿಲ್ವ ಕೋಕಿಲಂ ।
ಘನತರದಿಂಚರಂ ನೆಗೆಯೆ ಮುಂಚಿದ ಪೂವಿನ ಗೊಂಚಲಂ ಕರಂ ।
ಜನಿತವಿನೋಹದಿಂ ನುಸುಜೆ ಮುತ್ತುವ ಮತ್ತಮದಾಳಿ ಮಾವಿಸೊಳ್ ॥ 308 ॥

## ಕೃಷ್ಣ.

ದೇವಕಿಯ ನಯನಚಂದ್ರಿಕೆ । ಯಾವರಿಸಿರೆ ಕೃಷ್ಣನಂಗಮೆಸೆದತ್ತಾಗಳ್ ।
ದೇವಾಪಗಾಪ್ರವಾಹದಿ । ನಾವೃತಮಾಗಿರ್ದ ನೀಲಮಣಿಶಿಖರಿಯವೋಲ್ ॥ 309 ॥

## ಸೈನ್ಯರಜಸ್ಸು.

ಪದಸಂಘಟ್ಟನದಿಂದಮೆಬ್ಬಿವನಿಯಂ ಪರ್ವಿರ್ದ ಕೆಂದೂಳಿ ದಿ ।
ಗ್ವದನಿವ್ರಾತದ ಕುಂಭಮುಂ ಪುದಿದು ತತ್ಸಿಂದೂರದಂತಿರ್ದುದಂ ॥
ತೊದವುತ್ತುಂ ನೆಗೆದಭ್ರದೊಳ್ ಪರಿದು ಮುಂದೈಸಿರ್ಪುದುಂ ಭಾನುವಂ ।
ದುದಯಾದ್ರೀಂದ್ರದೊಳಿರ್ಪ ಪಾಂಗನೊಳಕೊಂಡಿರ್ದಂ ರಜೋರಂಜಿತಂ ॥ 310 ॥

## ಮಾದಿರಾಜಮುನಿ. ಸು. 1140.

ಈತನು **ದುರ್ಗಸಿಂಹನ** (ಸು. 1145) **ಪಂಚತಂತ್ರವನ್ನು** ತಿದ್ದಿದ ನೆಂದೂ ಕವಿಯಾಗಿದ್ದನೆಂದೂ ಆ ಗ್ರಂಥದ—

ಕವಿಗಮಕಿವಾದಿವಾಗ್ಮಿ । ಪ್ರವರರ್ ಶ್ರೀಮಾದಿರಾಜಮುನಿಪುಂಗವರು ।
ತ್ವವದಿಂ ತಿರ್ದಿದರೆನೆ ಭೂ । ಭುವನದೊಳಿದನೆಯ್ದಿಕೊಂಡು ಕೊನೆಯುದರೊಳರೇ ॥

ಎಂಬ ಪದ್ಯದಿಂದ ವ್ಯಕ್ತವಾಗುತ್ತದೆ. ಇವನು ಸುಮಾರು 1140 ರಲ್ಲಿ ಇದ್ದಿರ ಬಹುದು; ಆವ ಗ್ರಂಥಗಳನ್ನು ಬರೆದಿದ್ದಾನೆಯೋ ತಿಳಿಯದು.

---

## ಮಹಾದೇವಭಟ್ಟ. 1144.

ಅಬ್ಬಲೂರಲ್ಲಿರುವ ಒಂದು ಕನ್ನಡಶಾಸನದ **ಕೊನೆಯಲ್ಲಿ**[1] "ಸಹಜಕವಿ ಉಪಾಧ್ಯಾಯ ಮಹಾದೇವಭಟ್ಟನ ಬರೆಪ" ಎಂದಿದೆ. ಈ ಶಾಸನವು ಚಾಳುಕ್ಯ ಜಗದೇಕಮಲ್ಲನ (1138—1150) ಆಳಿಕೆಯಲ್ಲಿ ಬರೆದುದು. ಈ ಕವಿ ಆವ ಗ್ರಂಥವನ್ನು ಬರೆದಿದ್ದಾನೆಯೋ ತಿಳಿಯದು.

---

## ಎರಡನೆಯ ನಾಗವರ್ಮ[2]. ಸು. 1145.

ಈತನು **ಕಾವ್ಯಾವಲೋಕನ, ಕರ್ಣಾಟಕಭಾಷಾಭೂಷಣ, ವಸ್ತು ಕೋಶ**—ಈ ಗ್ರಂಥಗಳನ್ನು ರಚಿಸಿದ್ದಾನೆ. **ಜನ್ನನು** (1209) ಇತರಕವಿ ಗಳೊಂದಿಗೆ ಈ ಕವಿಯನ್ನೂ ಸೇರಿಸಿ, "ಈ ಕವಿಗಳೆಲ್ಲ ಜಿನೇಂದ್ರಪುರಾಣಕರ್ತೃ ಗಳ್" ಎಂದು ಹೇಳುವುದರಿಂದ ಈತನು ಆವುದೋ ಒಂದು ಜಿನಪುರಾಣ ವನ್ನೂ ಬರೆದಿರಬೇಕು.

ಈತನು ಜೈನಕವಿ; ತನ್ನ ಹೆಸರನ್ನು ನಾಕಿಗ ಎಂದೂ ಹೇಳಿಕೊಂಡಿದ್ದಾನೆ. ಇವನ ತಂದೆ ದಾಮೋದರ.

**ಜನ್ನನು** ತನ್ನ **ಅನಂತನಾಥಪುರಾಣದಲ್ಲಿ**—

ಜನನಾಥಂ ಜಗದೇಕನಲ್ಲ ಕಟಕೋಪಾಧ್ಯಾಯನಾನಾಗವ ।
ರ್ಮನಿದಾನೀಂತನಶರ್ವವರ್ಮನೆ ಗಡಂ ಜನ್ನಂಗುಪಾಧ್ಯಾಯಂ ॥

**ಎನ್ನುತ್ತಾನೆ. ಕಾವ್ಯಾವಲೋಕನದಲ್ಲಿಯ**—

---

1. *Epigraphia Indica*, V, 234. 2 ಪುಟ 53.

'ಅಭಿಮತಶಬ್ದಸಂಸ್ಕರಣದಿಂ ಜನಮಂ ತಿಳಿವಂತುಮಾಡಿ ವಾ ।
ಗ್ವಿಭವಮದಪ್ರತರ್ಕ್ಯಮೆನೆ ಸಂದೆಸಕಂ ದೆಸೆಯಂತನೆಯ್ದೆ ತ ॥
ತ್ವಭೆಯೊಳಗಗ್ರಪೂಜೆವಡೆದೊಂದು ಮಹಾಮಹಿಮಾನುಭಾವದಿಂ ।
ದಭಿನವಶರ್ವವರ್ಮನಿವನೆಂದವುದುರ್ವರೆ ನಾಗವರ್ಮನಂ ॥

ಎಂಬ ಪದ್ಯದಿಂದ ಈ ನಾಗವರ್ಮನಿಗೆ ಅಭಿನವಶರ್ವವರ್ಮ ಎಂಬ ಬಿರುದು ಇದ್ದಂತೆ ತಿಳಿಯಬರುತ್ತದೆ. ಆದುದರಿಂದ ಈ ನಾಗವರ್ಮನೇ ಜಗದೇಕನಲ್ಲಿ ಕಟಕೋಪಾಧ್ಯಾಯನಾಗಿಯೂ ಜನ್ನನಿಗೆ ಉಪಾಧ್ಯಾಯನಾಗಿಯೂ ಇದ್ದಿರಬೇಕು. ಈತನು **ನಯಸೇನನ** (1112) ಹೆಸರನ್ನು ಹೇಳುವುದರಿಂದ ಆತನಿಗಿಂತ ಈಚೆ ಇದ್ದನೆಂಬುದು ವ್ಯಕ್ತವಾಗಿದೆ. ಚಾಳುಕ್ಯರಾಜರಲ್ಲಿ ಜಗದೇಕಮಲ್ಲನು 1138 ರಿಂದ 1150 ರ ವರೆಗೆ ಆಳಿದಹಾಗೆ ತಿಳಿಯಬರುವುದರಿಂದ ನಾಗವರ್ಮನು ಈತನಲ್ಲಿ ಸುಮಾರು 1145 ರಲ್ಲಿ ಕಟಕೋಪಾಧ್ಯಾಯನಾಗಿ ಇದ್ದಿರಬಹುದು. ಇವನು ಈ ಜಗದೇಕಮಲ್ಲನ ಕಾಲವಾದಮೇಲೆ ಬಹುದಿವಸ ಬದುಕಿದ್ದು ವಾರ್ಧಕದಲ್ಲಿ ಜನ್ನನಿಗೆ ಉಪಾಧ್ಯಾಯನಾದಂತೆ ತೋರುತ್ತದೆ.

ಈತನಿಗೆ ಅಭಿನವಶರ್ವವರ್ಮ, ಕವಿಕರ್ಣಪೂರ, ಕವಿತಾಗುಣೋದಯ, ಕವಿಕಂಠಾಭರಣ ಎಂಬ ಬಿರುದುಗಳಿದ್ದಂತೆ ತಿಳಿಯುತ್ತದೆ.

ಈತನನ್ನು **ಆಚಣ್ಣ** (ಸು. 1195), **ಜನ್ನ**, **ಸಾಳ್ವ** (ಸು. 1550), **ದೇವೋತ್ತಮ** (ಸು. 1600) ಮೊದಲಾದ ಕವಿಗಳು ಸ್ತುತಿಸಿದ್ದಾರೆ.

ತನಗೆ ಹಿಂದೆ ಇದ್ದ ಕವಿಗಳಲ್ಲಿ—'ದೀರ್ಘೋಕ್ತಿರ್ನಯಸೇನಸ್ಯ'[1] ಎಂಬ ಸೂತ್ರದಲ್ಲಿ **ನಯಸೇನನನ್ನೂ**, 'ದ್ವಿತೀಯಾಂತಸ್ಯ ಪಾ ಸ್ಮರೇ'[2] ಎಂಬ ಸೂತ್ರದ ಕೆಳಗೆ "ಹರಿಪಾಲಸ್ಯ ಪ್ರಯೋಗಃ ತಥಾಗುಣವರ್ಮಕವೇರ್ಭುವನೈಕವೀರಸ್ಯ ಪ್ರಯೋಗಃ" ಎಂದು **ಹರಿಪಾಲಗುಣವರ್ಮರನ್ನೂ**, 'ಉದಂತಾನ್ನಾಗವೋ ಬಹುಳಂ'[3] ಎಂಬ ಸೂತ್ರದ ಕೆಳಗೆ "ಗುರುಹಂಪದೇವೋಕ್ತ ಪ್ರಯೋಗಃ" ಎಂದು **ಆದಿಹಂಪನನ್ನೂ** ಹೇಳಿದ್ದಾನೆ. ಕಾವ್ಯಾವಲೋಕನದಲ್ಲಿಯ—

ಪ್ರಣುತಗುಣರೆನಿಪ ವಿಬುಧಾ । ಗ್ರಣಿಗಳ್ ಕೆಯ್ಕೊಂಡು ಪೊಗಟ್ಪಸಲೆನಿಪ್ಪವ ಧಾ ।
ರಿಣಿಯೊಳಗೆ ನಾಗವರ್ಮನ । ಗುಣವರ್ಮನ ಶಂಖವರ್ಮನಧ್ಯಾನಂಗಳ್ ॥

ಎಂಬ ಪದ್ಯದಲ್ಲಿ **ಒಂದನೆಯ ನಾಗವರ್ಮ, ಒಂದನೆಯ ಗುಣವರ್ಮ, ಶಂಖವರ್ಮ** ಈ ಕವಿಗಳ ಹೆಸರುಗಳು ಹೇಳಿನೆ. ಅಲ್ಲದೆ ಕಾವ್ಯಾವಲೋಕನ

1. ಭಾಷಾಭೂಷಣ, ಸೂ 74. 2 ಭಾ ಭೂ ಸೂ 69. 3 ಭಾ. ಭೂ. ಸೂ. 192.

ಭಾಷಾಭೂಷಣಗಳಲ್ಲಿ **ಪೊನ್ನ, ರನ್ನ, ಹಂಸರಾಜ, ನಾಗಚಂದ್ರ** ಮೊದಲಾದ ಕವಿಗಳ ಗ್ರಂಥಗಳಿಂದ ಅನೇಕ ಪದ್ಯಗಳು ಉದಾಹೃತವಾಗಿವೆ.

ತನ್ನ ಕವಿತಾಚಾತುರಿಯನ್ನೂ ಗುಣಾದಿಗಳನ್ನೂ ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ:—

ಸಾರವಿಚಾರಬಂಧುರಮತಿಪ್ರಸರಂ ಪರಿಪಕ್ವಶಾಸ್ತ್ರಸಂ।
ಸ್ಕಾರನುಪೇತಕೌತುಕರಸಂ ವಿದಿತಾಗಮಲೋಕವೃತ್ತನು॥
ತ್ಸಾರಿತಮತ್ಸರಂ ಸುಜನವತ್ಸಳನೆಲ್ಲಿಯುಮಿತಸೆಂದು ಕ।
ಯ್ಕಾರದೆ ಬಣ್ಣಿಕುಂ ವಿಬುಧಮಂಡಳಿ ಪಂಡಿತನಾಗವರ್ಮನಂ॥
ಶ್ರುತದೇವೀಮಕರಂದಕಲ್ಪಲಪನಂ ವಾಕ್ಕೃತಿವಾಸಾಂಬುಜಾ।
ಯತವಕ್ತ್ರಂ ರಸಭಾವಭಾಸುರಸಮುದ್ಯದ್ಭಾರತೀನರ್ತನೋ॥
ಚಿತರಂಗಪ್ರತಿಮಾನನಂ ಪ್ರವಿಲಸದ್ಭಾಕ್ಷುಂದರೀಕುಂಕುಮಾಂ।
ಕಿತಕೇಳೀಭವನಾಜಿರೋಪಮಮುಖಿಂ ಭೂಭಾಗದೊಳ್ ನಾಕಿಗಂ॥
ಸಾಮಾನ್ಯವಾಚಿಗಳನೀತೆಜಿಂದನನ್ಯ।
ಸಾಮಾನ್ಯಮಾನ್ಯಸುಚರಿತ್ರಗುಣಾವತಾರಂ॥
ಸಾಮಾನ್ಯಮಪ್ಪ ಜನಮುಂ ತಿಳಿವಂತು ಪೇಳ್ದಂ।
ದಾಮೋದರಪ್ರಿಯಸುತಂ ಕವಿಕರ್ಣಪೂರಂ॥

ಇವನ ಗ್ರಂಥಗಳಲ್ಲಿ

## 1. ಕಾವ್ಯಾವಲೋಕನ.

ಇದು ಅಲಂಕಾರಶಾಸ್ತ್ರ; ಆದಿಭಾಗದಲ್ಲಿ ವ್ಯಾಕರಣವೂ ಸಂಗ್ರಹವಾಗಿ ಹೇಳಿದೆ. ಇದರಲ್ಲಿ ಸೂತ್ರಗಳನ್ನು ಪದ್ಯರೂಪವಾಗಿ ಬರೆದು ಲಕ್ಷ್ಯಕ್ಕೆ ಪೂರ್ವ ಕವಿಗಳ ಗ್ರಂಥಗಳಿಂದ ಪದ್ಯಗಳನ್ನು ಉದಾಹರಿಸಿದ್ದಾನೆ. ಈ ಗ್ರಂಥವು (1) ಶಬ್ದಸ್ಮೃತಿ, (2) ಕಾವ್ಯಮಲವ್ಯಾವೃತ್ತಿ, (3) ಗುಣವಿವೇಕ, (4) ರೀತಿಕ್ರಮರಸನಿರೂಪಣ, (5) ಕವಿಸಮಯ ಎಂದು 5 ಅಧಿಕರಣಗಳಾಗಿ ಭಾಗಿಸಲ್ಪಟ್ಟಿದೆ. ಇವುಗಳಲ್ಲಿ ಶಬ್ದಸ್ಮೃತಿಯೆಂಬುದೇ ವ್ಯಾಕರಣಭಾಗವು. ಇದರಲ್ಲಿ (1) ಸಂಧಿ, (2) ನಾಮ, (3) ಸಮಾಸ, (4) ತದ್ಧಿತ, (5) ಆಖ್ಯಾತ ಎಂದು 5 ಅಧ್ಯಾಯಗಳಿವೆ. ಕಾವ್ಯಮಲವ್ಯಾವೃತ್ತಿಯಲ್ಲಿ (1) ಪದಪದಾರ್ಥಸಂಧಿದೋಷವಿನಿಶ್ಚಯ, (2) ವಾಕ್ಯವಾಕ್ಯಾರ್ಥದೋಷಾನುಕೀರ್ತನ ಎಂಬ ಎರಡು ಪ್ರಕರಣಗಳಿವೆ. ಗುಣವಿವೇಕದಲ್ಲಿ (1) ಮಾರ್ಗವಿಭಾಗದರ್ಶನ, (2) ಶಬ್ದಾಲಂಕಾರನಿರ್ಣಯ, (3) ಅರ್ಥಾಲಂಕಾರ ಎಂದು ಮೂರು ಪ್ರಕರಣಗಳಿವೆ. ರೀತಿಕ್ರಮರಸನಿರೂಪಣದಲ್ಲಿ (1) ರೀತಿ

ಭಾಗ, (2) ರಸಭಾಗ ಎಂದು ಎರಡು ಭಾಗಗಳಿವೆ. ಕವಿಸಮಯದಲ್ಲಿ (1) ಅಸದಾಖ್ಯಾತಿ, (2) ಸದಕೀರ್ತನ, (3) ನಿಯಮಾರ್ಥ, (4) ಐಕ್ಯ ಎಂದು ನಾಲು ಭಾಗಗಳಿವೆ. ಈ ಗ್ರಂಥದ ಉತ್ಕೃಷ್ಟತೆಯನ್ನು—

ಕವಿಗಳ್ಗಿದು ಕೆಯ್ಗನ್ನಡಿ । ಕವಿತೆಗೆ ಬಾಲ್ಗೊಮ್ಮೆ ದಲುದಾತ್ತವಾಗ್ದೇವತೆಗು ।
ದ್ಭವಹೇತುಕೋಶಗೃಹಮನೆ । ಭುವನದೊಳಿದು ಪರೆದು ನಿಲ್ಪುದೊಂದಚ್ಚರಿಯೇ ॥

ಎಂಬ ಪದ್ಯದಲ್ಲಿ ಹೇಳಿದ್ದಾನೆ. ಗ್ರಂಥಾವತಾರದಲ್ಲಿ ವರ್ಧಮಾನನನ್ನೂ ಸರಸ್ವತಿಯನ್ನೂ ಸ್ತುತಿಸಿದ್ದಾನೆ. ಅಧಿಕರಣಗಳ ಅಂತ್ಯದಲ್ಲಿ—

ಇದು ಸಕಳಸುಕವಿಜನಮನಸ್ಸರೋಜಿನೀರಾಜಹಂಸಾಯಮಾನಾನೂನಕವಿತಾಗುಣೋದಯಂ ಶ್ರೀನಾಗವರ್ಮವಿರಚಿತಮುಸ್ಪ ಕಾವ್ಯಾವಲೋಕನದೊಳ್

ಎಂಬ ಗದ್ಯವಿದೆ.

ಕವಿತಾಮಾರ್ಗವನ್ನು ಬೋಧಿಸುವ ಈ ಪದ್ಯವನ್ನು ಈ ಗ್ರಂಥದಿಂದ ಉದ್ಧರಿಸಿ ಬರೆಯುತ್ತೇನೆ :—

ಇದು ಸೌಂದರ್ಯಗುಣಪ್ರಕಾಶಮಿದು ತಾನಗಾಮ್ಯತಾಧಾನಮಿಂ ।
ತಿದು ಭಾಸ್ವತ್ಸರಭಾಗರಮ್ಯಮಿದು ಬಂಧಾಶೇಷವಿಚ್ಛಿತ್ತಿಗಾ ॥
ಸ್ಪದಮೆಂದಿಂತುಚಿತಪ್ರಯೋಗವಿಧಿಯಿಂ ಸಯ್ತುರ್ಪಿನಂ ತಿರ್ದಿ ಪೇ ।
ಟ್ಟುದು ಪೂಮಾಲೆಯನಿಂಬಿನಿಂ ಸಮವವೋಲ್ ಸತ್ಕಾವ್ಯಮಂ ಕಬ್ಬಿಗಂ ॥ 311 ॥

## 2. ಕರ್ಣಾಟಕಭಾಷಾಭೂಷಣ.

ಇದು ಕನ್ನಡಭಾಷೆಯ ವ್ಯಾಕರಣಗ್ರಂಥವು. ಇದರಲ್ಲಿ ಸೂತ್ರಗಳನ್ನೂ ವೃತ್ತಿಯನ್ನೂ ಸಂಸ್ಕೃತಭಾಷೆಯಲ್ಲಿ ಬರೆದು, ಪೂರ್ವಕವಿಗಳ ಕನ್ನಡಗ್ರಂಥಗಳಿಂದ ಉದಾಹರಣೆಗಳನ್ನು ಕೊಟ್ಟಿದ್ದಾನೆ. ಇದರಲ್ಲಿ ಒಟ್ಟು 280 ಸೂತ್ರಗಳಿವೆ.[1] ಗ್ರಂಥವು (1) ಸಂಜ್ಞಾ, (2) ಸಂಧಿ, (3) ವಿಭಕ್ತಿ, (4) ಕಾರಕ, (5) ಶಬ್ದರೀತಿ, (6) ಸಮಾಸ, (7) ತದ್ಧಿತ, (8) ಆಖ್ಯಾತನಿಯಮ, (9) ಅವ್ಯಯನಿರೂಪಣ, (10) ನಿಪಾತನಿರೂಪಣ ಎಂದು ಹತ್ತು ಪರಿಚ್ಛೇದಗಳಾಗಿ ವಿಭಾಗಿಸಲ್ಪಟ್ಟಿದೆ. ಕನ್ನಡ ವ್ಯಾಕರಣದಲ್ಲಿ ಜ್ಞಾತವ್ಯಾಂಶಗಳು ಸುಲಭವಾಗಿಯೂ ಸಂಗ್ರಹವಾಗಿಯೂ ಈ ಗ್ರಂಥದಲ್ಲಿ ಹೇಳಿದೆ. ಗ್ರಂಥಾವತಾರದಲ್ಲಿ—

1. ಭಾಷಾಭೂಷಣದ ದ್ವಿತೀಯ ಮುದ್ರಣದಲ್ಲಿ 269 ಸೂತ್ರಗಳಿವೆ. ಕವಿಚರಿತೆಯಲ್ಲಿ ಕೊಟ್ಟಿರುವ ಸೂತ್ರಸಂಖ್ಯೆಗಳು ಪ್ರಥಮ ಮುದ್ರಣಕ್ಕೆ ಅನ್ವಯಿಸುತ್ತವೆ

ಸರ್ವಜ್ಞಂ ತದಹಂ ವಂದೇ । ಪರಂ ಜ್ಯೋತಿಸ್ತಮೋಪಹಂ ।
ಸ್ವಯಂಭೂತ್ಪಾ ಯನ್ಮುಖಾದ್ದೇವೀ । ಸರ್ವಭಾಷಾ ಸರಸ್ವತೀ ॥

ಎಂಬ ಶ್ಲೋಕವೂ, ಅಂತ್ಯದಲ್ಲಿ--

ಕರ್ನಾಟಶಬ್ದಸೂತಾ್ಣಿ । ಲೋಕಸ್ಯೋತ್ಪತ್ತಿಹೇತವೇ ।
ರಚಿತಾನಿ ಸ್ಫುಟಾರ್ಥಾನಿ । ಕೃತಿನಾ ನಾಗವರ್ಮಣಾ ॥

ಎಂಬ ಶ್ಲೋಕವೂ ಇವೆ.

## 3. ವಸ್ತುಕೋಶ.

ಇದು ಕನ್ನಡದಲ್ಲಿ ಉಪಯೋಗಿಸುವ ಸಂಸ್ಕೃತಪದಗಳಿಗೆ ಅರ್ಥವನ್ನು ಹೇಳುವ ಪದ್ಯರೂಪವಾದ ಸಂಸ್ಕೃತಕರ್ನಾಟಕನಿಘಂಟು ಈ ಗ್ರಂಥದಲ್ಲಿ (1) ಏಕಾರ್ಥಕಾಂಡ, (2) ನಾನಾರ್ಥಕಾಂಡ, (3) ಸಾಮಾನ್ಯಕಾಂಡ ಎಂದು ಮೂರು ಕಾಂಡಗಳು ಇವೆ; ವರ್ಗಗಳು 17 ; ಗ್ರಂಥಪ್ರಮಾಣ 800. ವರರುಚಿ, ಹಲಾಯುಧ, ಭಾಗುರಿ, ಶಾಶ್ವತ, ಅಮರಸಿಂಹ ಮೊದಲಾದವರ ಕೋಶಗಳನ್ನು ನೋಡಿ ಈ ಗ್ರಂಥವಸ್ತುವನ್ನು ಬಗೆದಂತೆ ಕವಿ ಹೇಳುತ್ತಾನೆ. ಗ್ರಂಥಾವತಾರದಲ್ಲಿ ವರ್ಧಮಾನನನ್ನು ಸ್ತುತಿಸಿ, ಏಳನೆಯ ಪದ್ಯದಲ್ಲಿ ಸರಸ್ವತಿಯ ಪರ್ಯಾಯನಾಮಗಳನ್ನು ಕೊಟ್ಟು ಸ್ತುತಿಸಿ, ಬಳಿಕ ಜಿನನ ಪರ್ಯಾಯನಾಮಗಳನ್ನು ಹೇಳಿ ಸ್ತುತಿಸಿದ್ದಾನೆ. ಈ ಗ್ರಂಥದ ಉತ್ಕೃಷ್ಟತೆಯನ್ನು ಈ ಪದ್ಯಗಳಲ್ಲಿ ಸೂಚಿಸಿದ್ದಾನೆ :—

ಪುದಿದ ಮನಸ್ತಮಮುಂ ಬಿಡೆ । ಬೆದಱಿ ಸದರ್ಥಪ್ರಕಾಶಮುಂ ಮಾಡುಗುಮ ।
ಪ್ಪುದಱಿಂ ಸಮಸ್ತವಿದ್ಯಾ । ಸ್ಪದೀಪಸಮುಭಿಧಾನಕೋಶಮುಲ್ದೆ ಪೆಜತೇಂ ॥
ಕರಮೆ ಜಡಮತಿಯುಮುಜ್ಜ್ವಲ । ಮೆನೆ ಕನ್ನಡದಿಂ ಜಲಕ್ಕನಾಗಿರ್ಪಿಸೆಗಂ ।
ನಿರಚಿಸಿದಂ ಕವಿಕಂಠಾ । ಭರಣನದಂ ನಾಗನರ್ಮನೆಸೆ ಮುಚ್ಚಟದರಾರ್ ॥

ಕಾಂಡಗಳ ಅಂತ್ಯದಲ್ಲಿ ಈ ಗದ್ಯವಿದೆ :—

ಇದು ಸಮಸ್ತಭುವನಜನಸಂಸ್ತೂಯಮಾನ ಮಾನಾನಾನವಕವಿತಾಗುಣೋದಯಂ ಶ್ರೀ ನಾಗವರ್ಮವಿರಚಿತಮಪ್ಪಭಿಧಾನವಸ್ತುಕೋಶದೊಳ್.

ಈ ಗ್ರಂಥದಿಂದ ಅಕ್ಷೌಹಿಣಿಯ ಅರ್ಥವನ್ನು ವಿವರಿಸುವ ಈ ಪದ್ಯವನ್ನು ಉದ್ಧರಿಸಿ ಬರೆಯುತ್ತೇವೆ :—

### ಪಿರಿಯಕ್ಕರ.

ಒಂದುಸಾಮಜಮೊಂದುತೇರ್ ಮೂಜಶ್ವಮಯ್ದುಕಾ(ಲಾಳ್ಗಳುಂ)ಪತ್ತಿಯಕ್ಕುಂ ।
ಸಂದ ಪತ್ತಿ ಮೂಜುಗೆ ಸೇನಾಮುಖಂ ಮೂಜಿಱಂ ಗುಲ್ಮಂ ಮೂಜುಗುಲ್ಮ ॥

ಕ್ಕೊಂದುಗಣಮವು ಮೂಱು ವಾಹಿಸಿ ತತ್ತ್ರಯಂ ಪೃತನಾಖ್ಯೆ ಪೃತನೆಗಳ್‌ಮೂ ।
ಱಿಂದಿ ತೋಱೆ ಚಮು ಮೂಱುಮನೀಕಿನಿ ಪತ್ತನೀಕಿನಿಯಕ್ಕೌಹಿಣಿಯೆನಿಕ್ಕುಂ
॥ 312 ॥

ನಮಗೆ ದೊರೆತಿರುವ ಕನ್ನಡ ವ್ಯಾಕರಣಗ್ರಂಥಗಳಲ್ಲಿ ಇವನದೇ ಮೊದಲನೆಯದು. ಕಾವ್ಯಾವಲೋಕನದ ಪ್ರಥಮಾಧಿಕರಣವಾದ ಶಬ್ದಸ್ಮೃತಿಯಲ್ಲಿ **ಈತನು** ಸಂಗ್ರಹವಾಗಿ ಹೇಳಿರುವ ವ್ಯಾಕರಣಪ್ರಕ್ರಿಯೆಗಳನ್ನು **ಕೇಶಿರಾಜನು** ಶಬ್ದಮಣಿದರ್ಪಣದಲ್ಲಿ ವಿಸ್ತರಿಸಿ ಬರೆದಿದ್ದಾನೆ. ಶಬ್ದಸ್ಮೃತಿಯಲ್ಲಿ ಉದಾಹೃತವಾದ ಪದ್ಯಗಳನ್ನೇ ಕೇಶಿರಾಜನು ತನ್ನ ಗ್ರಂಥದಲ್ಲಿ ಪ್ರಾಯಶಃ ಉದಾಹರಿಸಿದ್ದಾನೆ. ಕರ್ಣಾಟಕ ಭಾಷೆಗೆ ಸಂಸ್ಕೃತದಲ್ಲಿ ಸೂತ್ರರೂಪವಾಗಿ ಬರೆದಿರುವ ವ್ಯಾಕರಣಗ್ರಂಥಗಳಲ್ಲಿ ಭಾಷಾಭೂಷಣವೇ ಮೊದಲನೆಯದು. ಇವರ ರೀತಿಯನ್ನೇ ಅನುಸರಿಸಿ **ಭಟ್ಟಾಕಳಂಕನು** (1604) **ಶಬ್ದಾನುಶಾಸನ**ವೆಂಬ ದೊಡ್ಡ ವ್ಯಾಕರಣಗ್ರಂಥವನ್ನು ಬರೆದಿದ್ದಾನೆ.

**ನೃಪತುಂಗನು** ಹೇಳುವಂತೆಯೇ ನಾಗವರ್ಮನೂ ಉತ್ತರಮಾರ್ಗ, ದಕ್ಷಿಣಮಾರ್ಗ ಎಂಬ ಭೇದಗಳನ್ನು ಹೇಳುತ್ತಾನೆ. ಆದರೆ, ಈತನು ಹೇಳುವ ದಕ್ಷಿಣೋತ್ತರಮಾರ್ಗಗಳು ವೈದರ್ಭ ಗೌಡಮಾರ್ಗಗಳೇ ಹೊರತು ಕನ್ನಡದ ಭೇದಗಳಲ್ಲ [1] ಅಲಂಕಾರಪ್ರಕರಣವು ನೃಪತುಂಗನ ಗ್ರಂಥದಲ್ಲಿರುವುದಕ್ಕಿಂತ ಈತನ ಕಾವ್ಯಾವಲೋಕನದಲ್ಲಿ ವಿಸ್ತಾರವಾಗಿ ಹೇಳಿದೆ. ಆದರೆ ಈ ಗ್ರಂಥದಲ್ಲಿ ಹೇಳಿರುವ ರಸನಿರೂಪಣ ಮೊದಲಾದ ಅಂಶಗಳು ನೃಪತುಂಗನ ಗ್ರಂಥದಲ್ಲಿಲ್ಲ. ಈತನ ರಸಪ್ರಕರಣವನ್ನು ಅನುಸರಿಸಿ, **ಸಾಳ್ವನು** (ಸು. 1550) **ರಸರತ್ನಾಕರ**ವೆಂಬ ತನ್ನ ಗ್ರಂಥವನ್ನು ಬರೆದಂತೆ ಹೇಳುತ್ತಾನೆ. ಕನ್ನಡಭಾಷೆಯಲ್ಲಿ ನಮಗೆ ದೊರೆತಿರುವ ನಿಘಂಟುಗಳಲ್ಲಿ ವಸ್ತುಕೋಶವೇ ಮೊದಲನೆಯದು. **ಮುಂಗರಾಜನೂ** (1398), **ದೇವೋತ್ತಮನೂ** (ಸು. 1600) ಈ ನಿಘಂಟುವನ್ನು ನೋಡಿ ತಮ್ಮ ಕೋಶಗಳನ್ನು ರಚಿಸಿದಂತೆ ಹೇಳುತ್ತಾರೆ.

---

## ದುರ್ಗಸಿಂಹ. ಸು. 1145.

ಈತನು ಪಂಚತಂತ್ರವನ್ನು ಬರೆದಿದ್ದಾನೆ. ಈತನ ವಿಷಯವಾಗಿ ಇವನ ಗ್ರಂಥದಿಂದ ಈಯಂಶಗಳು ತಿಳಿಯಬರುತ್ತವೆ:— ಕರ್ಣಾಟಕದೇಶದಲ್ಲಿಯ ಕಿಸುಕಾಡುನಾಡಿನಲ್ಲಿ ಸಯ್ಯಡಿಯೆಂಬ ಅಗ್ರಹಾರದಲ್ಲಿ "ಮನ್ಮಾದಿಪುರಾಣಮುನಿಗಣ

1. ದ್ವಿತೀಯಸಂಪುಟದ ಅವತರಣಿಕೆಯ 27ನೆಯ ಪುಟವನ್ನು ನೋಡಿ.

ಪ್ರಣೂತಶ್ರುತಿವಿಹಿತವಿಶುದ್ಧಮಾರ್ಗನುಂ, ನಿತ್ಯಹೋಮಾಧ್ಯಯನಾನೇಕಯಾಗಾವಭೃತಸ್ನಾನಪವಿತ್ರಗಾತ್ರನುಂ, ಭಗವನ್ನಾರಾಯಣಚರಣಾಂಬುಜಸ್ಮರಣಪರಿತಾಂತಃಕರಣನುಂ, ತರ್ಕವ್ಯಾಕರಣಕಾವ್ಯನಾಟಕಭರತವಾತ್ಸ್ಯಾಯನಾದ್ಯಶೇಷವಿದ್ಯಾಸಮುದ್ರತರಣಗುಣೈಕಪುಣ್ಯನುಂ, ಧರಾಮರಾಗ್ರಗಣ್ಯನುಂ" ಆದ ದುರ್ಗಮಯ್ಯನಿದ್ದನು. ಇವನ ಮಗ "ದೇವದ್ವಿಜಗುರುಜನಪದಸೇವಾನಿರತ" ನಾದ ಈಶ್ವರಾರ್ಯ; ಇವನ ಹೆಂಡತಿ ರೇವಕಬ್ಬೆ; ಮಗ ಕವಿ ದುರ್ಗಸಿಂಹ. ಈತನು ಬ್ರಾಹ್ಮಣಕವಿ; ಕಮ್ಮೆ ಕುಲದವನು; ಗೌತಮಗೋತ್ರದವನು. ಇವನ ಗುರು 'ಮಹಾಯೋಗಿ'ಯಾದ ಶಂಕರಭಟ್ಟ. ಚಾಳುಕ್ಯರಾಜರಲ್ಲಿ 'ಕಲಿಕಾಲಕರ್ಣಂ,' 'ನೃಪಚಕ್ರವರ್ತಿತಿಲಕಂ,' 'ಶ್ರೀಕೀರ್ತಿವಿದ್ಯಾಧರಂ,' 'ಸತ್ಯಾಶ್ರಯಕುಲತಿಲಕಂ,' 'ಚೋಳಕಾಲಾನಲಂ' ಎಂಬ ಬಿರುದುಗಳುಳ್ಳ ಜಗದೇಕಮಲ್ಲ ಅಥವಾ ಜಯಸಿಂಹ ಎಂಬ ರಾಜನಲ್ಲಿ ಶ್ರೀಗಂಡಭೂರಿಶ್ರಯನೆಂಬ ಬಿರುದುಳ್ಳ ಸಿಂಹಸನ್ನಾಹನೆಂಬ ದಂಡನಾಯಕನಿದ್ದನು. ತಚ್ಚರಣಕಮಲಭೃಂಗನಾದ ಚಕ್ರವರ್ತಿದಂಡಾಧೀಶ, ಕೋದಂಡರಾಮಾಧಿಪ, ಮೊದಲಾದ ಬಿರುದುಗಳುಳ್ಳ ಕುಮಾರಸ್ವಾಮಿ ಕವಿಗೆ ಜಗದೇಕಮಲ್ಲನಲ್ಲಿ ಸಂಧಿವಿಗ್ರಹಿಸದವಿಯನ್ನು ಕೊಡಿಸಿದನು. ತನ್ನ ಸ್ವಾಮಿಯಾದ ಜಗದೇಕಮಲ್ಲನ ಆಜ್ಞೆಯಂತೆ ಕವಿ ಸಯ್ಯಡಿಯಲ್ಲಿ ಹರಿಹರ ಭವನಗಳನ್ನು ಕಟ್ಟಿಸಿದನು.

**ಮಲ್ಲಿಕಾರ್ಜುನನು** (ಸು. 1245) ಈ ಕವಿಯು ಪಂಚತಂತ್ರದಿಂದ ಪದ್ಯಗಳನ್ನು ಉದ್ಧರಿಸಿ ಬರೆದಿರುವುದರಿಂದ ಈತನು 1245 ಕ್ಕೆ ಮುಂದೆ ಇದ್ದನೆಂಬುದು ಸ್ಪಷ್ಟವಾಗಿದೆ. ಪೂರ್ವಕವಿಸ್ತವಾವಸರದಲ್ಲಿ ಈತನು ನಾಗಚಂದ್ರನ (ಸು. 1100) ಹೆಸರನ್ನು ಹೇಳುವುದರಿಂದ ಆತನ ಕಾಲಕ್ಕೆ ಈಚೆಯವನಾಗಿರಬೇಕು. ಆದುದರಿಂದ 1138 ರಿಂದ 1150 ರ ವರೆಗೆ ಆಳಿದ ಜಗದೇಕಮಲ್ಲನೆಂಬ ಚಾಳುಕ್ಯರಾಜನಲ್ಲಿಯೇ ಈತನು ಸಂಧಿವಿಗ್ರಹಿಯಾಗಿದ್ದಿರಬೇಕು; ಸುಮಾರು 1145 ರಲ್ಲಿ ಇದ್ದಿರಬಹುದು.

ವರರುಚಿ ಕಾಳಿದಾಸಸುಕುಮಾರಕುಮಾರಕವಾಸಬಾಣನುಂ।
ಹರಿಹರಸಾರ್ವಭೌಮಕವಿರನ್ನನು ರೇಚುಗದುರ್ಗಸಿಂಹನುಂ॥
ವರಕವಿಬತ್ತಲೇಶ್ವರನು ರಾಘವನಗ್ಗಳರುದ್ರಭಟ್ಟನುಂ।
ತುರುಗಮಯೂರಹಂಪುಗಸು ಕುಂತಿ ಚವುಂಡಿಯರೇ ಕವೀಂದ್ರರು॥

ಎಂಬ ಒಂದು ಪದ್ಯವು ದೊರೆಯುತ್ತದೆ.[1] ಇದಾವ ಕವಿಯಿಂದ ರಚಿತವಾದುದೋ ತಿಳಿಯದು. ಇದರಲ್ಲಿ ದುರ್ಗಸಿಂಹನನ್ನೂ ಕವೀಂದ್ರರ ಗೋಷ್ಠಿಯಲ್ಲಿ ಸೇರಿಸಿ ಹೇಳಿದೆ.

1. ಬೆಂಗಳೂರಲ್ಲಿ ಅಚ್ಚಾಗಿರುವ ನೀತಿಸಾರ ಎಂಬ ಗ್ರಂಥದಲ್ಲಿ

ಈತನು ಪೂರ್ವಕವಿಗಳಲ್ಲಿ—ವಾಲ್ಮೀಕಿವ್ಯಾಸಾದಿಕವಿಗಳು, "ನಾಭೇಯಂ ಸುರಾಮಾತ್ಯನಿಂದ್ರನದೀನಂದನನುದ್ಧವಂ ಮನುವಿಶಾಲಾಕ್ಷೇಭದಂತಂ ಕುಬೇರನ ಜಾತ ಪ್ರಿಯಪುತ್ರ"ರೆಂಬೀ ನೀತಿಶಾಸ್ತ್ರಪ್ರವರ್ತಕರು, ಚಂದ್ರಗುಪ್ತನಿಗೆ ರಾಜ್ಯವನ್ನು ಸಂಪಾದಿಸಿಕೊಟ್ಟ ನೀತಿವಿದನಾದ ವಿಷ್ಣುಗುಪ್ತ, ಗುಣಾಢ್ಯ, ವರರುಚಿ, ಕಾಳಿದಾಸ, ಹರ್ಷರಾಜನಿಂದ ಕವಿಚಕ್ರವರ್ತಿಬಿರುದಂ ಪಡೆದ ಬಾಣ, ಸೂರ್ಯನನ್ನು ಮೆಚ್ಚಿಸಿದ ಮಯೂರ, ರಾಘವಪಾಂಡವೀಯವನ್ನು ಬರೆದ ಧನಂಜಯ, 'ಮಾಮನಕುಮಾರ ನುದ್ಭಟಭೀಮಂ ಭವಭೂತಿಭಾರವೀಭಟ್ಟವಚ॥ ಶ್ರೀಮಾಘರಾಜಶೇಖರಕಾಮಂ ದಕರು,' ದಂಡಿ, ಈ ಸಂಸ್ಕೃತ ಕವಿಗಳನ್ನೂ, **ಶ್ರೀವಿಜಯ,** ಮಾಳವೀಮಾಧವವನ್ನು ಬರೆದ **ಕನ್ನಮಯ್ಯ, ಅಸಗ, ಮನಸಿಜ, ಚಂದ್ರ(ಭಟ್ಟ), ಪೊನ್ನ,** ಮಾರ್ಗದ್ವಯಪರಿಣತಕವಿಮಾರ್ಗನಾದ **ಪಂಪ,** ದಂಡನಾಯಕ **ಗಜಾಂಕುಶ, ಕವಿತಾವಿಲಾಸ,** ಈ ಕನ್ನಡ ಕವಿಗಳನ್ನೂ ಸ್ತುತಿಸಿದ್ದಾನೆ. ತನ್ನ ಗ್ರಂಥವನ್ನು 'ಕವಿಗಮಕಿವಾದಿವಾಗ್ಮಿಪ್ರವರ' ನಾದ ಶ್ರೀಮಾದಿರಾಜ ಮುನಿಪುಂಗವನು ತಿದ್ದಿದನೆಂದು ಹೇಳುತ್ತಾನೆ.

ತನ್ನ ಗುಣಾದಿಗಳನ್ನು ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ:—

ಅನವದ್ಯಾಚರಣಕ್ಕುದಾಹರಣಮುದ್ಯತ್ಕೀರ್ತಿಗಾಧಾರಮಾ।
ಳ್ಪನ ಕಾರ್ಯಕ್ಕೆ ಮರುತ್ತನೂಜನೆನಿಸಿದರ್ದಾತ್ಮೀಯವಂಶಕ್ಕೆ ಮಂ॥
ಡನರತ್ನಂ ಕಟಕಾರ್ಣವಪ್ರತರಣಪ್ರೌದ್ಧಾಸಿ ಸಿದ್ಧೇಷ್ಟಶಿ।
ಷ್ಟನಿಕಾಯಕ್ಕೆ ವಹಿತ್ರಮೆಂದು ಪೊಗಟ್ಗುಂ ವಿದ್ವಜ್ಜನಂ ದುರ್ಗನಂ॥
ವಿನಯಾಧೀನನಹೀನಂ। ವಿನುತಕುಲೀನಂ ನಜೇಶಕಾರ್ಯಧುರೀಣಂ।
ಮನುವಿರಚಿತಧರ್ಮಮಾರ್ಗಾ। ಧ್ವನೀನನಿವನೆಂದು (ದುರ್ಗನೆನಿಸಿ)ದನಲ್ತೇ॥
ಅಜುವಿಂಗಾಕರಮೊಳ್ಗುಣಕ್ಕೆ ಕಣಿ ಶೌಚಕ್ಕಾಸ್ಪದಂ ಜಾಣ್ತನ।
ಕ್ಕೆ ಜೀವಟ್ಟೊಳ್ನುಡಿಗಾರ್ಮಮಾಯತಿಗಡಪರ್ಪಿಂಗೆ ಲೀಲಾಗೃಹಂ॥
ಗುಜು ಧರ್ಮಕ್ಕ ವಿನೀತವೃತ್ತಿಗೆ ತವರ್ ಸತ್ಯಕ್ಕಧಿಷ್ಠಾನಮಂ।
ದಜಿತಂ ಕೆಯ್ಮೆಗೆ ಕೂರ್ತು ತೇರ್ತಿಸುವುದುರ್ವೀಮಂಡಲಂ ದುರ್ಗನಂ॥
ನಿಶ್ಚಿತಮನರಲ್ಲದರಂ। ದುಶ್ಚರಿತರನೆಯ್ದೆ ಪಡೆದ ದೋಷಕ್ಕಂ ಪ್ರಾ।
ಯಶ್ಚಿತ್ತಮೆಂದು ಸಕಲವಿ। ಪಶ್ಚಿನ್ನಿಧಿಯೆನಿಪ ದುರ್ಗನಂ ಬಿದಿ ಪಡೆದಂ॥
ವಿನಯಾಂಭೋನಿಧಿ ವಿಸ್ತಕಲ್ಪನುಜಂ ಸತ್ಯವ್ರತಂ ವಿಪ್ರವಂ।
ಶನಭೋಮಂಡಲಚಂಡಭಾನು ವಿಲಸದ್ವಾಕ್ಚಿತ್ರಮನೋರಾಮನೆಂ॥
ನೆನಸುಂ ಧಾರಿಣಿ ಬಣ್ಣಿಕುಂ ನಿಜಯಶೋವಲ್ಲೀವೃತಾಂಭೋದಮಾ।
ರ್ಗನನಾರಾಧಿತಭರ್ಗನಂ ಭೃಶವಿಪಶ್ಚಿದ್ದುರ್ಗನಂ ದುರ್ಗನಂ॥
ಜಗದೊಳ್ಪತಿಹಿತದೆಡೆಯೊಳ್। ನೆಗಟ್ಪಿದ್ದನಜನಿನೇಕದಂತನಿಂ ಪವನಜನಿಂ।
ಖಗರಾಜನಿನೀದುರ್ಗಂ। ದ್ವಿಗುಣಂ ತ್ರಿಗುಣಂ ಚತುರ್ಗುಣಂ ಪಂಚಗುಣಂ॥

ದಾನಶೂರನಪವಾದಭೀರು ವಿ । ಜ್ಞಾನಮೂರ್ತಿ ಭುವನೈಕವತ್ಸಲಂ ।
ಮಾನನೀಯಗುಣನೆಂಬ ಪೆಂಪಿನು । ದ್ವಾನಿಯಂ ತಳೆದ ದುರ್ಗನನ್ನರಾರ್ ॥
ಉದಯೋತ್ತುಂಗನಗಸ್ಥಭಾವದಿನಪಂ ಪ್ರೋದ್ಯಾಮಧರ್ಮಕ್ಷಮಾ ।
ಜದ ಬೇರ್ ಸ್ವಾಮಿಹಿತೌಘನಿರ್ಮಲಮಹಾರತ್ನಾಕರಂ ನೀತಿಶಾ ॥
ಸ್ತ್ರದ ಮಂತ್ರಕ್ಕಧಿದೈವತಂ ದ್ವಿಜಕುಲಶ್ರೀಕೇಳಿಸಂವಾಸಮಂ ।
ಬುದು ಸರ್ವೋರ್ವರೆ ಧರ್ಮನಿರ್ಮಳಯಶಸ್ಸದ್ಗರ್ಗನಂ ದುರ್ಗನಂ ॥
ಪತಿಹಿತನಂಜನಾತನಯನಾಪವನಾತ್ಮಜನಿಂ ಖಗೇಶ್ವರಂ ।
ಪತಿಹಿತನಾಮರುತ್ತನಯನಿಂ ಖಗರಾಜನಿನರ್ಕನಂದನಂ ॥
ಪತಿಹಿತನಾಮರುತ್ತನಯನಿಂ ಖಗರಾಜನಿನರ್ಕಜಾತನಿಂ ।
ಪತಿಹಿತನೀತನೆಂದು ಪೊಗಟ್ಪುಂ ಸಲೆ ದುರ್ಗನನುರ್ವರಾಜನಂ ॥

ಇವನ ಗ್ರಂಥ

## ಪಂಚತಂತ್ರ.

ಇದು ಚಂಪೂರೂಪವಾಗಿದೆ. ಇದರಲ್ಲಿ (1) ಭೇದಪ್ರಕರಣವರ್ಣನಂ. (2) ಪರೀಕ್ಷಾವ್ಯಾವರ್ಣನಂ, (3) ವಿಶ್ವಾಸಪ್ರಕರಣವರ್ಣನಂ, (4) ವಂಚನಾಪ್ರಕರಣವರ್ಣನಂ, (5) ಮಿತ್ರಕಾರ್ಯಪ್ರಕರಣಂ ಎಂಬ ಐದು ತಂತ್ರಗಳಿವೆ. ಪಂಚತಂತ್ರಕಥೆ ಹುಟ್ಟಿದ ವಿಷಯವನ್ನು ಈ ರೀತಿಯಾಗಿ ಹೇಳಿದ್ದಾನೆ:—

ರಜತಗಿರಿಯಲಿ ಸಮಸ್ತಾಮರಮಣಿಮಕುಟೋದ್ಘೃಷ್ಟಪಾದಾರವಿಂದಂ ಗಿರಿಜಾಧೀಶನಿರ್ದಂ. ಅಂತಿರ್ದ ಪರಮೇಶ್ವರಂಗೆ ಗಿರಿರಾಜತನೂಜೆ ಕರಕಮಲಂಗಳಂ ಮುಗಿದು—ದೇವಾ ನೀವೆನಗೊಂದಪೂರ್ವಮಪ್ಪ ಕಥೆಯಂ ಪೇಳ್ವಿಲ್ಲೆನ್ನುವೆನೆ, ಹರಂ ದರಹಸಿತವದನಾರವಿಂದನಾಗಿ ಪಾರ್ವತಿಗಪೂರ್ವಮಪ್ಪ ಕಥೆಯಂ ಪೇಳ್ದುತ್ತರಲಾಕಥಾಗೋಷ್ಠಿಯೊಳ್ ಪುಷ್ಪದಂತನೆಂಬಂ ಗಣಪ್ರಧಾನನಿರ್ದೆಲ್ಲಮಂ ಕೇಳ್ದೆತ್ತಾನುವೊಂದು ಕಾರಣದಿಂ ಮಾನವಲೋಕದೊಳ್ ಪುಟ್ಟಿ ಗುಣಾಢ್ಯನೆಂಬ ಸತ್ಕವಿಯಾಗಿ ಶಾಲಿವಾಹನನೆಂಬ ಚಕ್ರವರ್ತಿಯ ಕವಿಯಾಗಿರ್ದು ಸರಂ ಗಿರಿಸುತೆಗೆ ಪೇಳ್ದಾಕಥೆಗಳಂ ಪೈಶಾಚಿಕಭಾಷೆಯೊಳ್ ಬೃಹತ್ಕಥೆಗಳಂ ಮಾಡಿ ಪೇಳ್ದೊಡವಂ ವಸುಭಾಗಭಟ್ಟಂ ಕೇಳ್ದಾ ಕಥಾಸಮುದ್ರದೊಳ್ ಪಂಚರತ್ನಮಪ್ಪಯ್ದು ಕಥೆಗಳನಾಯ್ದುಕೊಂಡು ಪಂಚತಂತ್ರಮೆಂದು ಪೆಸರಿಟ್ಟು ಸಮಸ್ತಜನೋಪಕಾರಾರ್ಥಂ ಪೇಳ್ದಿಂ.

ಈ ವಸುಭಾಗಭಟ್ಟನ ಕೃತಿಯನ್ನೇ ತಾನು ಕನ್ನಡದಲ್ಲಿ ಬರೆವುದಾಗಿ—

ವಸುಭಾಗಭಟ್ಟಕೃತಿಯಂ । ವಸುಧಾಧಿಪಹಿತಮನಖಿಲವಿಬುಧಸ್ತುತಮಂ ।
ಪೊಸತಾಗಿರೆ ವಿರಚಿಸುವೆಂ । ವಸುಮತಿಯೊಳ್ ಪಂಚತಂತ್ರಮಂ ಕನ್ನಡದಿಂ ॥

ಎಂಬ ಪದ್ಯದಲ್ಲಿ ಹೇಳುತ್ತಾನೆ.

ಗ್ರಂಥಾವತಾರದಲ್ಲಿ ವಿಷ್ಣುವನ್ನು ಸ್ತುತಿಸಿದ್ದಾನೆ. ಬಳಿಕ ಈಶ್ವರ, ಬ್ರಹ್ಮ, ಸರಸ್ವತಿ, ಚಂದ್ರ, ಮನ್ಮಥ, ಸೂರ್ಯ, ಗಣಪ, ದುರ್ಗಿ ಇವರುಗಳನ್ನು ಕ್ರಮವಾಗಿ ಸ್ತುತಿಸಿದ್ದಾನೆ. ತಂತ್ರಗಳ ಕೊನೆಯಲ್ಲಿ—

ಇದು ವಿನಮದಮರರಾಜಮೌಳಿಮಾಣಿಕ್ಯಮರೀಚಿಮಂಜರೀಪುಂಜರಂಜಿತಭಗವದ್ಭವಾನೀವಲ್ಲಭಚರಣಸರಸಿರುಹಷಟ್ಪದಂ ಶ್ರೀಮನ್ಮಹಾಸಂಧಿವಿಗ್ರಹಿ ದುರ್ಗಸಿಂಹವಿರಚಿತಮಪ್ಪ ಪಂಚತಂತ್ರದೊಳ್

ಎಂಬ ಗದ್ಯವಿದೆ.

ಇವನ ಬಂಧವು ಪ್ರೌಢವಾಗಿಯೂ ಪ್ರಾಸಬದ್ಧವಾಗಿಯೂ ಇದೆ. ಇವನ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ :—

### ಪಿಂಗಳಕನೆಂಬ ಸಿಂಹವು.

ಭಂಗುರಭೀಷಣಭ್ರುಕುಟಿದಂಷ್ಟ್ರಾನುದಗ್ರದವಾನಳಪ್ರಭಾ ।
ಭಂಗಪಿಶಂಗಕೇಸರಸಟಾವೃತರೌದ್ರಮುಖಂ ಮದಾಂಧಮಾ ॥
ತಂಗಘಟಾವಿಘಟ್ಟನಪಟಿಷ್ಠಕಠೋರನಖಾಳಿ ನಾಮದಿಂ ।
ಪಿಂಗಳಕಂ ಮೃಗೇಂದ್ರನೆಸೆದಿರ್ಪುದತರ್ಕ್ಯಪರಾಕ್ರಮಕ್ರಮಂ ॥ 313 ॥

[1]ಚಳದಳಕಂ ಹಸೋರ್ದ್ಧತ । ಪುಳಕಂ ನಖಮುಖವಿದಾರಿತೋಗ್ರೇಭಶಿರಃ ।
ಫಳಕಂ ಮೃಗತಿಳಕಂ ಪಿಂ । ಗಳಕಂ ಪೋಗೆಂದು ಕಳಿಪಿದಂ ದಮನಕನಂ ॥ 314 ॥

### ಸಮುದ್ರ.

ಬಲವೈರಿಸ್ಫಾರವಜ್ರಾಧಿಕಭಯಚಕಿತೋದ್ಘೂತಮೈನಾಕಗೋತ್ರಾ ।
ಚಲಪಕ್ಷತ್ರಾಯಿ ಸಿಂಧುಪ್ರಿಯತಮನತಿಗಂಭೀರನಂತರ್ನಿವಿಷ್ಟಾ ॥
ಖಿಲಲೋಕಂ ನಕ್ರಚಕ್ರಸ್ಫುರದುರುತರಯೂಪಶ್ಚರಾಧ್ಯಾಸಿತಪ್ರೋ ।
ಚ್ಛಲಿತಾಂಭಃಕುಂಭಿಕುಂಭೋನ್ಮದರಸವಿಲಸತ್ ಕ್ಷೋಭರೌದ್ರಂ ಸಮುದ್ರಂ ॥315॥

### ಕತ್ತಲೆ.

ಮೇದಿನಿಯಂ ಕ್ರಮಕ್ರಮದೆ ಪರ್ವಿದುದಾತ್ತನಭೋವಿಭಾಗಮಾ ।
ಚ್ಛಾದಿತದಿಙ್ಮುಖಂ ವ್ಯವಹಿತಾಖಿಲದೃಷ್ಟಿಪಥಂ ತಮೋಲಭ್ಯಂ ॥
ಗೋದರನೀರದಾಗಮಘನಪ್ರಕರಾಂಜನಪುಂಜಕೋಕಿಳಾ ।
ಚ್ಛೋದರಕಾಯಕಾಂತಿಶಿತಿಕಂಠಗಲಪ್ರತಿಮಪ್ರಭಂ ತಮಂ ॥ 316 ॥

---

1. ಈ ಪದ್ಯವು ಶಬ್ದಾನುಶಾಸನದ 140 ನೆಯ ಸೂತ್ರದ ವ್ಯಾಖ್ಯಾನದಲ್ಲಿ ಉದಾಹರಿಸಿದೆ.

## ನರ್ಮದೆ.

ಮದವದ್ಗಜೇಂದ್ರದಾನಮಲಿನೋದ್ಯದ್ಭೃಂಗಸಂಘಾತಸಂ ।
ಪದೆಯಂ ಬಾಲಮೃಣಾಲಜಾಲಕಲಸತ್ಸ್ವಾದುಪ್ರಪುಷ್ಪೋತ್ಕರ ॥
ಚ್ಛದೆಯಂ ತೀರನವೀನಚೂತಕುಸುಮವ್ರಾತಾಸವೋನ್ಮತ್ತಷ ।
ಟ್ಪದೆಯಂ ನರ್ಮದೆಯಂ ಮಹಾಪ್ರದೆಯನಾವಿಪ್ಪಂ ಸಮುಂತೆಯ್ದಿದಂ ॥ 317 ॥

## ಸೂರ್ಯಾಸ್ತ.

ಮುಗಿಯೆ ಸರೋಜಷಂಡಮುಲರ್ದೊಪ್ಪೆ ನವೋತ್ಪಲರಾಜ ಜಕ್ಕವ ।
ಕ್ಕಿಗಳ ಮನಕ್ಕೆ ತಾಪಮೊದವುತ್ತಿರೆ ವಿದ್ರುಮಭಂಗಕಾಂತಿ ಕೆ ॥
ಯ್ಮಿಗೆ ಘನವೀಥಿಯೊಳ್ ನಿಜಕುಲಾಯತನಕ್ಕೆ ಪಾಱೆ ಪ ।
ಕ್ಕಿಗಳಪರಾಂಬುರಾಶಿಗಿಱ್ದಂ ನಳಿನೀವನಜೀವತೇಶ್ವರಂ ॥ 318 ॥

## ಸವಿಾರಣ.

ವಿದಳಿತಪುಷ್ಪಸೌರಭಮನಾವಗಮಿರ್ಕುಳಿಗೊಂಡು ಕೊಂಡು ಷ ।
ಟ್ಪದಪದಪದ್ಮಿನೀನಿವಹಶೈತ್ಯದೊಳೊಯ್ಯನೆ ಕೂಡಿ ಕೂಡಿ ಮಾ ॥
ಣದೆ ವಿವಿಧದ್ರುವೋತ್ಕರದಿಜುಂಬಿನೊಳಿಂಬಿನೆ ನಿಂದು ನಿಂದು ತೀ ।
ಡಿದುದಘಹಾರಣಂ ಪಥಪರಿಶ್ರಮವಾರಣಮಾ ಸವಿಾರಣಂ ॥ 319 ॥

## ವಿವಿಧನೀತಿ.

ಹಿತನಪ್ಪ ಭೃತ್ಯನೆಂದುಂ । ಪತಿಗಪಜಯಮಾಗದಂತೆ ಪೇೞ್ದುದು ಪತಿ ದು ।
ರ್ಮತಿಯಾಗಿ ದುಷ್ಟಜನಸಂ । ಗತಿಗೆಱಗಿದೊಡೆಱಗಲೀಯದಿರ್ಪುದಮೋಘಂ ॥320॥

ಅೞ್ದುದನಾಳ್ದನೊಳ್ ಮಜಿಸಿ ಮಾಣ್ಬಿರದೊಯ್ಯನೆ ಪೇೞ್ದಿದಾತನೇ ।
ತಱಿ ಹಿತನೆಯ್ದಿ ಕೂರ್ಪವರ ಪೇೞ್ದುದನಿಂಬಿನೆ ಕೇಳದಾತನೇ ॥
ತಱಿ ವಿಭು ಮಂತ್ರಿಯುಂ ನೃಪತಿಯುಂ ಬಗೆಗೊಂಡನುಕೂಲವೃತ್ತಿಯೊಳ್ ।
ಮೆಱೆದಿರೆ ಕೂಡುಗುಂ ನಿಖಿಳರಾಜ್ಯವಿಭೂತಿಗಳಾವಕಾಲಮುಂ ॥ 321 ॥

ಸುರಪತಿ ಗೃಧ್ರನಾಗಿ ತಗುಳಲ್ ಮಱೆವೊಕ್ಕ ಕಪೋತನಂ ಕ್ಪಿತೀ ।
ಶ್ವರಕುಲಚಕ್ರವರ್ತಿ ಶಿಬಿಯೆಂಬ ನೃಪೋತ್ತಮನಾತ್ಮಮಾಂಸಮಂ ॥
ಸುರಪತಿಗಿತ್ತು ರಕ್ಪಿಸಿ ಪಯೋಧಿಪರೀತಧರಿತ್ರಿ ಬಣ್ಣಿಸು ।
ತ್ತಿರೆ ತಳೆದಂ ಶರತ್ಸಮಯಚಂದ್ರಕರೋಜ್ಜ್ವಲರುಂದ್ರಕೀರ್ತಿಯಂ ॥ 322 ॥

ಸಾಲದೆ ಪೆಱರಂ ಪೊಡಮ । ಟ್ಟೋಲೈಸದೆ ನಿಚ್ಚವಯಣಮಿಲ್ಲದೆ ತನ್ನಿ ।
ರ್ದಾಲಯದೊಳಿರ್ದು ಬಾೞ್ವುದೆ । ಮೂಲೋಕಮನಾಳ್ದ ಸುಖದಿನಗ್ಗಳಮು
ಲ್ತೇ ॥ 323 ॥

ಪುರುಷಂ ದೈವಮೆ ಶರಣಂ । ದಿರಲಾಗದು ತನಗೆ ತಾನೆ ಮಾಡದು ದೈವಂ ।
ಪುರುಷಾರ್ಥಂಗೆಯ್ಯುತ್ತಿರೆ । ಪರಮಾರ್ಥಂ ದೈವಮುಂ ಕೃತಾರ್ಥಂಮಾಟ್ಟುಂ ॥324॥

ನಂಬಿಪರೆನ್ನರಪ್ಪರುಮನೇತಱದಿಂ ಸಲೆ ನಂಬಿ ಪಾಣ್ಬೆಯರ್ ।
ನಂಬಿಸರಿಂತನೇಕವಿಧದಿಂದೆ ವಿಚಾರಿಸಿ ನೋಡೆ ಪೆಂಡಿರಂ ॥
ನಂಬಲೆ ಆಗ ನಂಬದಿರಲಾಗವರಿಲ್ಲದೆ ಬಾಲ್ಬಿಲಾಗದೇ ।
ನೆಂಬುದಿದರ್ಕೆ ತಕ್ಕುದನೆ ಬಲ್ಲವನುಳ್ಳೊಡೆ ದೇವನಲ್ಲನೇ ॥ 325 ॥

---

## ಸುಕರಸುಕವಿಕಂಠಾಭರಣ. ಸು. 1145.

ಸೊರಬದ 138 ನೆಯ ಶಾಸನದಲ್ಲಿ ಒಬ್ಬ ಎಕ್ಕಲದೇವನನ್ನು ವಿಶೇಷವಾಗಿ ಸ್ತುತಿಸಿ "ಸುಕರಸುಕವಿಕಂಠಾಭರಣಾದ್ಯನೇಕಕವಿಜನಪ್ರಿಯ" ಎಂದು ವಿಶೇಷಿಸಿ ಹೇಳಿದೆ. ಇದರಿಂದ ಸುಕರಸುಕವಿಕಂಠಾಭರಣ ಎಂಬ ಒಬ್ಬ ಕವಿ ಎಕ್ಕಲ ದೇವನ ಆಶ್ರಿತನಾಗಿದ್ದಂತೆ ತಿಳಿಯುತ್ತದೆ. ಈ ಕವಿ ಆವ ಗ್ರಂಥಗಳನ್ನು ಬರೆದಿದ್ದಾನೆಯೋ ತಿಳಿಯದು. ಕನ್ನಡಕವಿಗಳಾದ ನೇಮಿಚಂದ್ರನಿಗೂ (ಸು. 1170) ಸೋಮನಾಥ ಪಂಡಿತನಿಗೂ (1234) ಸುಕವಿಕಂಠಾಭರಣ ಎಂಬ ಬಿರುದಿದೆ. ಈತನನ್ನು ಅನುಸರಿಸಿ ಅವರಿಬ್ಬರೂ ಈ ಬಿರುದನ್ನು ಇಟ್ಟುಕೊಂಡಿದ್ದರೂ ಇರಬಹುದು. ಎರಡನೆಯ ನಾಗವರ್ಮನಿಗೆ (ಸು. 1145) ಕವಿಕಂಠಾಭರಣ ಎಂಬ ಬಿರುದುಂಟು. ಈ ಶಾಸನವು ಚಾಳುಕ್ಯ ಜಗದೇಕಮಲ್ಲನ (1138–1150) ಆಳಿಕೆಯಲ್ಲಿ ಬರೆದುದು.

---

## ಮಧುಸೂದನದೇವ. 1147.

ಈತನು ದಾವಣಗೆರೆಯ 41 ನೆಯ ಶಾಸನವನ್ನು ಬರೆದುದಾಗಿ ಆ ಶಾಸನದಲ್ಲಿಯ—

ಶ್ರೀವೀರಪಾಂಡ್ಯದೇವಮ । ಓವಲ್ಲಭಮಹಿತಪಾದಪರಮಾರಾಧ್ಯ ।
ಶ್ರೀವಿಭವರ್ ಮಧುಸೂದನ । ದೇವರ್ ವಿರಚಿಸಿದರೆಸೆಯೆ ಶಾಸನಕೃತಿಯಂ ॥

ಎಂಬ ಪದ್ಯದಿಂದ ತಿಳಿಯುತ್ತದೆ. ಈ ಶಾಸನವು ಚಾಳುಕ್ಯ ಜಗದೇಕಮಲ್ಲನ (1138—1150) ಆಳಿಕೆಯಲ್ಲಿ 1147 ರಲ್ಲಿ ಬರೆದುದು. ಇದರಲ್ಲಿ ಜಗದೇಕಮಲ್ಲನ ಸಾಮಂತ ವೀರಪಾಂಡ್ಯರಾಜನು ಶಂಕರನಾರಾಯಣದೇವರಿಗೆ ಒಂದು ಗ್ರಾಮವನ್ನು ದತ್ತಿಯಾಗಿ ಬಿಟ್ಟಂತೆ ಹೇಳಿದೆ. ಈ ಶಾಸನದ ಬಂಧವನ್ನು

ನೋಡಿದರೆ ಮಧುಸೂದನನದೇವನು ಉದ್ದಾಮಕವಿ ಎಂಬುದಕ್ಕೆ ಆವ ಅಡ್ಡಿಯೂ ಇಲ್ಲ. ಈತನು ವೀರಪಾಂಡ್ಯನ ಅಣ್ಣನಾದ ಪಂಡಿತಪಾಂಡ್ಯನಿಗೆ ಉಪಾಧ್ಯಾಯನಾಗಿದ್ದಂತೆ

ಅಧಿಗತಸಮಸ್ತವಿದ್ಯಂ । ಮಧುಸೂದನದೇವರಿಂದಮೆನೆ ಪಂಡಿತಪಾಂ ।
ಡ್ಯಧರಾಧಿಪತಿಯ ಪೋಲ್ಕೆಗೆ । ಬಧಿರಧರಾಧೀಶರೆಂತುಮೇಂ ಬಂದಪರೇ ॥

ಎಂಬ ಶಾಸನಪದ್ಯದಿಂದ ವ್ಯಕ್ತವಾಗುತ್ತದೆ. ಇವನು ಬ್ರಾಹ್ಮಣ ಕವಿ.

ಈ ಶಾಸನದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

ಸಮುದ್ರ.

ಮಕರವ್ರಾತಾಭಿಘಾತೋಚ್ಚಳಿತಕಮಠಸಂಘಟ್ಟಸಂಪ್ರರ್ಧಿಮಾನ ।
ಪ್ರಕರಪ್ರಕ್ಷೋಭಿತೋದ್ಯತ್ತರಳತರತರಂಗೋತ್ಕರಂ ಕ್ಷಿಪ್ತಮುಕ್ತಾ ॥
ನಿಕರಂ ಕಣ್ಗೆಯ್ದೆ ಚಿಲ್ವಂ ಪಡೆದುದವಿರಳೋತ್ತಾಳಕಲ್ಲೋಳಮಾಳಾ ।
ಧಿಕಸಂಘರ್ಷಪ್ರಜಾತಪ್ರಬಳಘನಘನಧ್ವಾನರೌದ್ರಂ ಸಮುದ್ರಂ ॥ 326 ॥
ಅದು ನಾನಾನಕ್ರಚಕ್ರಕ್ರಮಕರಿಮಕರೋಡ್ಡೀನಪಾಠೀನಪುಚ್ಛ ।
ಚ್ಛದವಾತಾಘಾತಭೀತಾಚಳಚಳನಚಳತ್ತುಂಗರಂಗತ್ತರಂಗೌ ॥
ಘದುರಂತಪ್ರಾಂತಮುಜ್ಜೃಂಭಿತಬಹಳತಡಿಜ್ಜಾಳಲೀಳಾವಿನೀಳಾಂ ।
ಬುದಬಿಂಬಾಡಂಬರಂ ಕಣ್ಗಿಸೆವುದು ಲಹರೀಲೋಳಬಾಳಪ್ರವಾಳಂ ॥ 327 ॥

ಚಾಳುಕ್ಯಾನ್ವಯಾವತಾರ.

ಶ್ರೀರಮಣೀರಮಣನ ಗಂ । ಭೀರತರೋದಾರನಾಭಿಕಾಸಾರಸರ ।
ದ್ವಾರಿಯೊಳಾದುದು ಸಿತಸರ । ಸೀರುಹಮತಿಬಹಳಸುರಭಿಪರಿಮಳಮಿಳಿತಂ ॥328॥
ಜಳರುಹಜಠರನ ಜಠರದ । ಜಳಜಾತದೊಳೊಗೆದ ಜಳಜಜಾತನ ಹೃದಯ ।
ಸ್ಥಳಜಳರುಹಜಾತಂ ನಿಜ । ಕುಳಾದಿಭೂತಂ ಹರೀತನತಿವಿಖ್ಯಾತಂ ॥ 329 ॥

ತೈಲಪ.

ಗಣನಾತೀತವಿಚಾರದ । ಪ್ರಣತಪ್ರಣತಾವನೀಪಕವನೀಪಕಮಾ ।
ರ್ಗಣಮಾರ್ಗಣಪ್ರದಾಯಕ । ರಣವಿತರಣಗುಣವಿನಿರ್ಜಿತೈಲಂ ತೈಲಂ ॥ 330 ॥

ಚಂದ್ರ.

ನಿಜಮೆನಲಂಬುಜಜನನಾ । ದ್ವಿಜನನಮುನಿನಯನಜನನಮೆಂಬೀಜನನ ।
ತ್ರಿಜನನಮನೆಯ್ದಿ ಸೋಮಂ । ತ್ರಿಜಾತನೆಂತತ್ರಿಜಾತನಿದು ಚಿತ್ರತರಂ ॥ 331 ॥

ರಾಜರಾಜಪಾಂಡ್ಯ.

ನೆನೆನೆನೆದು ರಾಜರಾಜೇಂ । ದ್ರನ ಪೃಥುಳಗದಾಶನಿಪ್ರತಾಪಮನಹಿತಾ ।
ವನಿಭೃನ್ನಿಕಾಯಮಂಭೋ । ಧಿನಿಲೀನಂ ಮಿಡುಕಲಣ್ಮದಚಳಮೆನಿಕ್ಕುಂ ॥ 332 ॥

ವೀರಪಾಂಡ್ಯ.

ಕರವಾಳಾಘಾತಶಾತಾಹಿತಕರಿವಿಲುಠದ್ದಂತಶಲ್ಕಂಗಳಿಂ ತ ।
ಶ್ವರಿಬರ್ಹೋತ್ಪಾದ್ಯಮಹೇಮಾಭರಣಕಿರಣದಿಂ ತತ್ಪತಾಕಾಸ್ತ್ರವರ್ಮಾಂ ॥
ಬರಚಿತ್ರೋದ್ದ್ಯೋತದಿಂ ತದ್ರುಧಿರವಿಸರಕಾಸಾರಿಕಾಪೂರದಿಂ ಪಾಂ ।
ಡುರಿತಂ ಪೈಶಂಗಿತಂ ಕರ್ಬುರಿತಮರುಣಿತಂ ವೀರಪಾಂಡ್ಯಾಜಿರಂಗಂ ॥ 333 ॥

ವಿಜಯಶ್ರೀಪತಿಪಾಂಡ್ಯಭೂಭುಜಭುಜಾವಷ್ಟಂಭವಿತ್ರಸ್ತವೈ ॥
ರಿಜನಾಧೀಶರ ದೇಶದೊಳ್ ತಿಲಕಪುನ್ನಾಗಾಂಜನಸ್ಯಂದನ ॥
ಧ್ವಜಬಾಣಾಸನಸಾಲಕಾಂಚನಸಿತಚ್ಛತ್ರಂಗಳೆಂದುಂ ಕುಜ।
ವ್ರಜದೊಳ್ ತೋರ್ಪುವು ನೋಲ್ಪಿಡಿಲ್ಲಿತರನಸ್ತುಸ್ತೋಮನಾಮಂಗಳಿಂ ॥ 334 ॥

ಅದಿರದಿದಿರಿದಿರನದಿರಿಡು । ವದಟರನದಟಳೆದು ಬೆದಱಿ ಬೆಂಕೊಂಡು ಸಮ ।
ಸ್ತದಿಗಂತರಮಂ ಪುದಿದೊದ । ವಿದ ಜಸದಿಂದೆಸೆವನಸದಳಂ ಪಾಂಡ್ಯನೃಪಂ ॥ 335 ॥

---

## ಕವಿಕಾಳಿದಾಸ. 1147.

ಚಿಕ್ಕಮಗಳೂರು 140 ನೆಯ ಶಾಸನದಲ್ಲಿ (ಶಕ 1069) ಕಾಳಿದಾಸನೆಂಬ ಒಬ್ಬ ಕವಿಯ ಹೆಸರು "ಪೆಂಪನೆ ತಾಳ್ದಲ್ ಕವಿಕಾಳಿದಾಸನೆ ವಲಂ ಧನ್ಯಂ ಪೆಱರ್ ಧನ್ಯರೇ" ಎಂಬ ಪದ್ಯಭಾಗದಲ್ಲಿ ಹೇಳಿದೆ. ಇವನ ತಂದೆ ಚೌಂಡ ಮಯ್ಯ, ತಾಯಿ ಚಂದ್ರಾಮತಿ, ಸಹೋದರರು ಕಾವರಾಜ, ಜನಾರ್ದನ, ಮಲ್ಲಿದೇವ. ಈತನು ಆವ ಗ್ರಂಥವನ್ನು ಬರೆದಿದ್ದಾನೆಯೋ ತಿಳಿಯದು.

---

## ಮುಖ್ಯಪಂಡಿತ. 1147.

ಈತನು ಲಕ್ಷ್ಮೇಶ್ವರದಲ್ಲಿರುವ ಒಂದು ಶಾಸನವನ್ನು[1] ಬರೆದಂತೆ ಆ ಶಾಸನದ ಕೊನೆಯಲ್ಲಿರುವ "ಶ್ರೀಮತ್ಕರ್ಣಾಟಸುಕವಿ ಮುಖ್ಯಪಂಡಿತರ ಕವಿತೆ" ಎಂಬ ವಾಕ್ಯದಿಂದ ತಿಳಿಯುತ್ತದೆ. ಈ ಶಾಸನದಲ್ಲಿ ಚಾಳುಕ್ಯರಾಜನಾದ 2 ನೆಯ ಜಗದೇಕಮಲ್ಲನ ಆಳಿಕೆಯಲ್ಲಿ ಮೇಚರಸನು ಸೋಮನಾಥದೇವಸ್ಥಾನಕ್ಕೆ ಚಿನ್ನದ ಕಲಶವನ್ನು 1147 ರಲ್ಲಿ ಹಾಕಿಸಿ ಭೂಮಿಯನ್ನು ಬಿಟ್ಟನೆಂದು ಹೇಳಿದೆ. ಇದರಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

1. *Epigraphia Indica*, XVI, 46.

## ತೈಲಪ.

ಶ್ರೀಮಚ್ಚಾರುಚಳುಕ್ಯವಂಶನಳಿನೀಬಾಳಾತಪಂ ದುರ್ವಿನೀ ।
ತಾಮೇಯಾರಿನೃಪಾಳಬಾಳಕದಳೀಷಂಡೋಗ್ರವೇದಂಡನು ॥
ದ್ದಾಮಾನಮ್ರನರೇಂದ್ರಮೌಳಿಮಣಿಸಂಘೃಷ್ಟಾಂಘ್ರಿಪದ್ಮದ್ವಯಂ ।
ಭೂವಿಖ್ಯಾತಂ ಸೆಗಬ್ಬಿಂ ಸಮಗ್ರವಿಜಯಶ್ರೀಲೋಲುಪಂ ತೈಲಪಂ ॥ 336 ॥

## ವಿಕ್ರಮಾದಿತ್ಯ.

ಚಲಚೀರೀಭೇರಿಯಿಂ ಕೀಚಕಕುಳವಿಳಸದ್ಗಾಯಕಾನೀಕದಿಂ ಭೂ ।
ತಲಭೃತ್ಸೀಶದಿಂ ಪನ್ನಗಫಣಮಣಿದೀಪಂಗಳಿಂ ಸರ್ಪನಿರ್ಮೋ ॥
ಕಲಸದ್ಪಸ್ತ್ರಂಗಳಿಂ ಬೇಱವರ್ಗೆ ವಿಭವಮಂ ಮಾಡಿ ವಿದ್ವಿಷ್ಟರಂ ದೋ ।
ರ್ಬಲದೃಪ್ತಂ ಭಿಲ್ಲಪಲ್ಲೀಸ್ಥಿತಿಯೊಳಿರಿಸಿದಂ ವಿಕ್ರಮಾದಿತ್ಯದೇವಂ ॥ 337 ॥

## ಜಗದೇಕಮಲ್ಲ.

ಕಮಠಕಠೋರಕರ್ಪರದ ತಾಪಮಡಂಗಿತು ನಾಗರಾಜನು ।
ತ್ತಮಮಣಿಮಸ್ತಕಕ್ಕೆ ಹೊಜ್ಜೆ ಹಿಂಗಿದುದಾದಿಗಿಭಕ್ಕೆ ಕಂಠಭಾ ॥
ರಮುದುಡುಗಿತ್ತನಲ್ ವಸುಮತೀತಳಮಂ ಜಗದೇಕಮಲ್ಲನ ।
ಶ್ರಮದೊಳೆ ತಾಳ್ದಿದಂ ನಿಜಭುಜದ್ವಯಮಪ್ರಬಳಪ್ರದೇಶದೊಳ್ ॥ 338 ॥

## ಕೇಶಿರಾಜ.

ಸತತಾಳಂಕೃತಭದ್ರಲಕ್ಷಣಯುತಂ ಗೋತ್ರೋದ್ಭವಂ ದಾನಸಂ ।
ಭೃತನಂಗೀಕೃತಗೋಮಿನೀಪ್ರಿಯಕರಿಣ್ಯಾಲಿಂಗನೋದ್ಯದ್ಯಶೋ ॥
ರ್ಜಿತನುದ್ಯಜ್ಜಗನೇಕಮಲ್ಲವಿಜಯಸ್ತಂಭೇರಸೆಂಬೀಮಹೋ ।
ನ್ನತಿಯಿಂದಾನೆಯುಕೇಶಿರಾಜವೃತನಾಧೀಶಂಗಿದನ್ವರ್ಥಕಂ ॥ 339 ॥

## ಕಂಚಿದಂಡಾಧಿಪ.

ಕಾಲಾಗ್ನಿಸ್ಫುರಿತಶಿಖಾ । ಮಾಲೆ ಮಹಾರಾಹುರಸನಮಂತಕದಂಷ್ಟ್ರಂ ।
ಕಾಲಾಹಿಯ ಸ್ಫೂತ್ಕಾರಂ । ಸೂಲಿಗೆ ಸೂಲಿಗೆಯು ಕಂಚಿದಂಡಾಧಿಪನಾ ॥ 340 ॥

## ಮೇಚರಸ.

ಕನಕಾಚಳಚೂಡಾಕಾಂ । ಚನಬಂಧುಮಕಳಶಮೆನಿಪ ದಕ್ಷಿಣಸೋಮೆ ।
ಶನ ಮಂದಿರಕ್ಕೆ ಕಾಂಚನ । ಘನಕಳಶಮನಿಟ್ಟನನುಪಮಂ ಮೇಚರಸಂ ॥ 341 ॥

## ಮೇಘಚಂದ್ರ. 1148.

ಈತನು ಪೂಜ್ಯಪಾದಕೃತಸಮಾಧಿಶತಕಕ್ಕೆ ಕನ್ನಡ ವ್ಯಾಖ್ಯಾನವನ್ನು 1148 ರಲ್ಲಿ ಬರೆದುದಾಗಿ ತಿಳಿಯಬರುತ್ತದೆ[1]. ಈತನು 1176 ರಲ್ಲಿ ಗತಿಸಿದ ನಯಕೀರ್ತಿಯ ಶಿಷ್ಯನಾಗಿರಬಹುದು.[2] ಈ ವ್ಯಾಖ್ಯಾನವನ್ನು— 'ವಿತತಯಶೋನಿಧಿ ಪಂಪನ ಸುತಂಗೆ ತಿಳಿವಂತು ಪೊಚ್ಚಪೊಸಗನ್ನಡದಿಂ'—ಬರೆದಂತೆ ಹೇಳುತ್ತಾನೆ. ಈ ಪದ್ಯಭಾಗದಲ್ಲಿ ಹೇಳಿರುವ ಪಂಪನು ನಾಗಚಂದ್ರನೇ ಆಗಿದ್ದ ಪಕ್ಷದಲ್ಲಿ ಅವನ ಕಾಲವಾದ ಮೇಲೆ ಅವನ ಮಗನಿಗೋಸ್ಕರ ಈತನು ಈ ವ್ಯಾಖ್ಯಾನವನ್ನು ಬರೆದಿರಬಹುದು.[3]

---

## ಉದಯಾದಿತ್ಯ. ಸು. 1150.

ಈತನು ಉದಯಾದಿತ್ಯಾಲಂಕಾರವೆಂಬ ಒಂದು ಅಲಂಕಾರ ಗ್ರಂಥವನ್ನು ಬರೆದಿದ್ದಾನೆ. ಈತನ ಬಿರುದುಗಳನ್ನೂ ರಚನಾಚಾತುರಿಯನ್ನೂ ನೋಡಿದರೆ ಇನ್ನೂ ಗ್ರಂಥಗಳನ್ನು ಬರೆದಿರುವಂತೆ ತೋರುತ್ತದೆ. ಆದರೆ ನಮಗೆ ಇವನ ಇತರ ಗ್ರಂಥಗಳಾವುವೂ ದೊರೆತಿಲ್ಲ.

"ವಸುಧಾನಾಥನ ಸೋಮನಾಥನ ಸುತಂ ಚೋಳೋದಯಾದಿತ್ಯಂ," "ಸೋಮಮಹೀಭೃನ್ನಂದನಂ" ಎಂದು ಹೇಳಿಕೊಂಡಿರುವುದರಿಂದ ಈತನು ಆವನೋ ಒಬ್ಬ ಸೋಮನಾಥನೆಂಬ ಚೋಳರಾಜನ ಮಗನೆಂದು ತಿಳಿಯುತ್ತದೆ.

ಒದವಿರ್ದೊಂದು ತಮಂ ಜಗಕ್ಕೆ ಸಜಿವಸ್ಸಂ ತನ್ನ ಸಿಂಹಾಸನ।
ಕ್ಕುದಯಾದ್ರಿಂದ್ರಕೆ ಬರ್ಪ ಪೆರ್ಮೆ ಮೆಱೆವನ್ನಂ ಸತ್ಕವಿಪ್ರೋಲ್ಲಸ ॥
ವ್ಯದನಾಂಭೋರುಹಷಂಡಮುಳ್ಳಲರ್ವಿನಂ ಭೂಮಂಡಲಾಧೀಶನ।
ಪ್ಪುದಯಾದಿತ್ಯನುದಾರಕಾರ್ಯನೆಸೆದಂ ಸಾಹಿತ್ಯವಿದ್ಯಾಧರಂ ॥

ಎಂಬುದರಿಂದ ಈತನು ಪಟ್ಟಾಭಿಷಿಕ್ತನಾಗಿ ಆಳುತ್ತಿದ್ದಂತೆ ತೋರುತ್ತದೆ. ತನ್ನ ಹೆಸರನ್ನು ಉದಯ, ಉದೆಗ ಎಂದೂ ಹೇಳಿಕೊಂಡಿದ್ದಾನೆ. ಈತನಿಗೆ ಕವಿರತ್ನ ಶೇಖರ, ಸಾಹಿತ್ಯವಿದ್ಯಾಧರ, ರಾಜಸುಕವಿರತ್ನಾಭರಣ, ಕವಿರಾಜಶೇಖರ, ಸಾಹಿತ್ಯರತ್ನಾಕರ ಎಂಬ ಬಿರುದುಗಳು ಇದ್ದಂತೆ ತಿಳಿಯುತ್ತದೆ.

'ಇದವಿದ ಮುಂಜನ ಭೋಜನ। ವಿದಿತಶ್ರೀಹರ್ಷನುದಯ ಮತ್ಕೃತಿಯೊಳ್'

---

1. *Ind. Ant.*, XIV, 14.
2. ಶ್ರ. ಬೆ. ಶಾ. 66. 3. ಪುಟ 103.

ಎಂಬ ಪದ್ಯದಲ್ಲಿ ಭೋಜನ ಹೆಸರನ್ನು ಹೇಳುತ್ತಾನೆ. ಭೋಜನು 997 ರಿಂದ 1053 ರ ವರೆಗೆ ಆಳಿದುದಾಗಿ ತಿಳಿವುದರಿಂದ ಕವಿ ಆ ಕಾಲಕ್ಕೆ ಈಚೆಯವನಾಗಿರ ಬೇಕು. ಅಲ್ಲದೆ **ಮಲ್ಲಿಕಾರ್ಜುನನು** (ಸು 1245) **ಸೂಕ್ತಿಸುಧಾರ್ಣವದಲ್ಲಿ** ಮಹಾಕಾವ್ಯದ ಹದಿನೆಂಟಂಗವನ್ನು ಹೇಳುವ—

ಉದಧಿಪ್ರಾಧಿಪಸುತಮಂ । ತ್ಪದೂತಗಮನಾಜಿವಿರಹಪರಿಣಯಸುರತ ।
ರ್ತುದಿನೇಶಚಂದ್ರಮಧುಕುಭ್ । ದುದಕವನಸ್ಪತಿಯೆ ಕೃತಿಗೆ ಪದಿನೆಂಟಂಗಂ ॥

ಎಂಬ ಪದ್ಯವನ್ನು ಈ ಕವಿಯ ಗ್ರಂಥದಿಂದ ಉದ್ಧರಿಸಿ ಬರೆದಿರುವುದರಿಂದ ಈತನು 1245 ಕ್ಕೆ ಹಿಂದೆ ಇದ್ದನೆಂಬುದು ವ್ಯಕ್ತವಾಗುತ್ತದೆ. ಕರ್ಣಾಟಕದೇಶದಲ್ಲಿ ಚೋಳರ ಪ್ರಾಬಲ್ಯವು 12 ನೆಯ ಶತವರ್ಷಕ್ಕೆ ಹಿಂದೆಯೇ ಕ್ಷೀಣದಶೆಗೆ ಬಂದಂತೆ ಶಾಸನಗಳಿಂದ ತಿಳಿವುದರಿಂದ ಈತನು ಸ್ವತಂತ್ರರಾಜನಾಗಿದ್ದಿರಲಾರನು. ಆವ ದೊರೆಯಲ್ಲಿಯೋ ಸಾಮಂತರಾಜನಾಗಿದ್ದಿರಬೇಕು. ಇವನು ಸುಮಾರು 1150 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ.

**ಸಾಳ್ವನು** (ಸು. 1550) ತನ್ನ **ರಸರತ್ನಾಕರದಲ್ಲಿ ಈತನ ಹೆಸರನ್ನು** ಹೇಳಿದ್ದಾನೆ.

ಈತನು ಪೂರ್ವಕವಿಗಳಲ್ಲಿ ಮುಂಜ, ಭೋಜ, ಶ್ರೀಹರ್ಷ ಇವರುಗಳ ಹೆಸರನ್ನು ಹೇಳಿದ್ದಾನೆ: ಆವ ಕನ್ನಡಕವಿಯ ಹೆಸರನ್ನೂ ಹೇಳಿಲ್ಲ.

ತನ್ನ ಕವಿತಾಚಾತುರಿ ಮುಂತಾದುದನ್ನು ಈ ಪದ್ಯದಲ್ಲಿ ಹೇಳಿಕೊಂಡಿದ್ದಾನೆ:—

ಸದಮಲಕಾಂತಿಯಿಂ ಸಮತೆಯಿಂ ಸುಕುಮಾರತೆಯಿಂದ ಭಿನ್ನಭಾ ।
ವದೆ ನುತಲಕ್ಷ್ಯದಿಂ ಸಕಲಭೋಗದಿನುಜ್ಜ್ವಳರೂಪದಿಂ ಪ್ರಿಯ ॥
ಶ್ರೀಪ್ರದವಿದ ಕಾವ್ಯದಿಂ ಕವಿಖಾಮಣಿಯೊಪ್ಪುದಜಂದಮಾದನಿಂ ।
ಮುದಯನೃಪೇಶ್ವರಂ ನೃಪಕವೀಶ್ವರನಿಂ ಕವಿರಾಜಶೇಖರಂ ॥

ಇದಲ್ಲದೆ ತನ್ನನ್ನೇ ಸ್ತುತಿಸಿಕೊಳ್ಳುವ ಅನೇಕಪದ್ಯಗಳು ಉದಾಹರಣ ಗಳಲ್ಲಿಯೂ ದೊರೆಯುತ್ತವೆ

ಇವನ ಗ್ರಂಥ

## ಉದಯಾದಿತ್ಯಾಲಂಕಾರ.

ಇದು ಸಣ್ಣ ಗ್ರಂಥ; ಇದರೊಳಗೆ 72 ಪದ್ಯಗಳಿವೆ. ಈ ಗ್ರಂಥದಲ್ಲಿ (1) ಕಾವ್ಯಭೇದ, (2) ರೀತಿ, (3) ರಸ, (4) ಕಾವ್ಯಗುಣಗಳು, (5) ಅಲಂಕಾರಗಳು, ಇವುಗಳ ಲಕ್ಷಣವನ್ನು ಕ್ರಮವಾಗಿ ಹೇಳಿದ್ದಾನೆ. ಚಂದ್ರಾಲೋಕದಲ್ಲಿ

ಹೇಳಿರುವಂತೆಯೇ ಲಕ್ಷ್ಯಲಕ್ಷಣಗಳು ಪ್ರಾಯಶಃ ಒಂದೇ ಪದ್ಯದಲ್ಲಿ ಹೇಳಿವೆ. ನೃಪತುಂಗನು ಹೇಳುವ ಚತ್ತಾಣ, ಬೆದಂಡೆ ಎಂಬ ಕಾವ್ಯಭೇದಗಳನ್ನು ಈತನೂ ಹೇಳುತ್ತಾನೆ. ಗ್ರಂಥಾವತಾರದಲ್ಲಿ ಸರಸ್ವತಿಯನ್ನು ಸ್ತುತಿಸಿದ್ದಾನೆ. ಇವನ ಸೂತ್ರೋದಾಹರಣೆಗಳಲ್ಲಿ ಕೆಲವು ದಂಡಿಯ ಕಾವ್ಯಾದರ್ಶದಲ್ಲಿಯ ಸೂತ್ರೋದಾಹರಣೆಗಳ ಭಾಷಾಂತರವಾಗಿವೆ.

ಈತನ ಬಂಧವು ಪ್ರೌಢವಾಗಿದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

ರೂಪಕ.

ಸಸಿಯಂ ಪೋಲ್ವುದು ಮೊಗಮಿಂ । ದುಸಿರದೆ ನಗೆನೊಗಮೆ ಸಸಿ ದಲಿಂದಿಂತು ಸಮಂ ।
ತುಸಿವೊಡೆ ರೂಪಕಮಕ್ಕುಂ । ವಸುಧಾಧಿಪ ರಾಜಸುಕವಿರತ್ನಾಭರಣಾ ॥342॥

ಉತ್ಪ್ರೇಕ್ಷೆ.

ಇರೆ ವಸ್ತುವೊಂದು ತನ್ನಯ । ಪರಿಯಿಂ ಬೇಜಕೊಂದನದಜಕೊಳುತ್ಪ್ರೇಕ್ಷಿಸುವಾ ।
ಪರಿಯುತ್ಪ್ರೇಕಾಲಂಕೃತಿ । ಬಿರಿದುವು ನಗುವಂತೆ ಬಿರಯಿಯಂ ಮಲ್ಲಿಗೆಗಳ್ ॥ 343 ॥

ರಸನತ್ತ್ವ.

ಉದೆಗನೊಳಾಂಪರಾರ್ ಮುಳಿದೊಡಂತಕನಾಂತೊಡೆ ಕಂಡದಿಂಡೆಯಂ ।
ಕೆದಜುವನೊಡ್ಡಿದಾನೆಗಳನಿರ್ಕಡಿಮಾಡುವನಾತನೊಳ್ಸಸಂ ॥
ಬಿದಜುಸದಾರನೋಡಿಸದದಾರನದಾರನುದಾತ್ತದೈನ್ಯದೊಳ್ ।
ವುದಿಯುಸದಾರನಾಗಿಸದು ತಾಪಸವೃತ್ತಿಯನಬ್ಜಲೋಚನೇ ॥ 344 ॥

---

## ಸುಮನೋಬಾಣ. ಸು. 1150.

ಜನ್ನನು ಅನಂತನಾಥಪುರಾಣದಲ್ಲಿ ಜೈನಪುರಾಣಗಳನ್ನು ಬರೆದ ಕವಿಗಳ ಗೋಷ್ಠಿಯಲ್ಲಿ "ಪುಷ್ಪಬಾಣ" ಎಂದು ಈತನ ಪೆಸರನ್ನೂ ಸೇರಿಸಿರುವುದರಿಂದ ಇವನು ಆವುದೋ ಒಂದು ಜೈನಪುರಾಣವನ್ನು ಬರೆದಿದ್ದಾನೆ ಎಂಬುದರಲ್ಲಿ ಸಂಶಯವಿಲ್ಲ. ಇವನ ಗ್ರಂಥಗಳಾವುವೂ ದೊರೆತಿಲ್ಲ.

ಈತನು ಜೈನಕವಿ: '(ಕವಿ) ಭಾಳಲೋಚನ' ಎಂಬ ಬಿರುದುಳ್ಳ ಜನ್ನನ (1209) ತಂದೆಯೆಂಬುದು ಅತನ ಯಶೋಧರಚರಿತೆಯಲ್ಲಿಯ—"ಭಾಳಲೋಚನಂ ಕವಿಸುಮನೋ। ಬಾಣನ ಮಗನೆಂದಖಿಳ। ಕ್ಷ್ಮೋಣಿಗೆ ಪೆಸರಾಯ್ತು" ಎಂಬ ಪದ್ಯಭಾಗದಿಂದ ತಿಳಿಯುತ್ತದೆ. ಅನಂತನಾಥಪುರಾಣದಲ್ಲಿ ಜನ್ನನು

"ಶಂಕರಪುತ್ರಂ ಕವಿ ಕಮ್ಮೆವಂಶನಧಿಕಜ್ಞಂ ಕಾಶ್ಯಪಂ" ಎಂದೂ, "ಶಂಕರ ಶುದ್ಧಾಂತಾಂಗನಾಗಂಗೆಗೇನುದಯಂಗೆಯ್ವನೊ ಕಾಶ್ಯಪೋದ್ಭವಕರಂ ಸಾಹಿತ್ಯ ರತ್ನಾಕರಂ" ಎಂದೂ ಹೇಳುವುದರಿಂದ ಈ ಕವಿಯ ನಿಜವಾದ ಹೆಸರು ಶಂಕರ ಎಂದು ತಿಳಿಯಬರುತ್ತದೆ. ಈತನು ಕಮ್ಮೆವಂಶದವನೆಂದೂ ಕಾಶ್ಯಪ ಗೋತ್ರದವನೆಂದೂ ಈತನ ಹೆಂಡತಿ ಗಂಗೆಯೆಂದೂ ಮೇಲೆ ಬರೆದಿರುವ ಪದ್ಯ ಭಾಗಗಳಿಂದ ವ್ಯಕ್ತವಾಗುತ್ತದೆ. **ಮಲ್ಲಿಕಾರ್ಜುನನು** (ಸು. 1245) **ಸೂಕ್ತಿ ಸುಧಾರ್ಣವದಲ್ಲಿ** ತಾನು "ಯಾದವಕಟಕಾಚಾರ್ಯ ಕವಿಸುಮನೋಬಾಣನ ಜಾಮಾತೃ" ಎಂಬುದರಿಂದ ಈತನು ಮಲ್ಲಿಕಾರ್ಜುನನ ಮಾವನೆಂದೂ, ಈ **ಮಲ್ಲಿಕಾರ್ಜುನನ** ಮಗನಾದ **ಕೇಶಿರಾಜನು** (ಸು. 1260) **ಶಬ್ದಮಣಿದರ್ಪಣ** ದಲ್ಲಿ 'ಕವಿಸುಮನೋ ಬಾಣನ ಯಾ। ದವಕಟಕಾಚಾರ್ಯನೆಸೆವ ದೌಹಿತ್ರನೆನಾಂ' ಎಂಬುದರಿಂದ ಕೇಶಿರಾಜನ ಮಾತಾಮಹನೆಂದೂ ತಿಳಿಯುತ್ತದೆ. ಈತನು "ಯಾದವಕಟಕಾಚಾರ್ಯನು" ಎಂದು ಮಲ್ಲಿಕಾರ್ಜುನನೂ ಕೇಶಿರಾಜನೂ ಹೇಳುವ ಅಂಶವನ್ನೇ ಜನ್ನನೂ ಈ ಪದ್ಯದಲ್ಲಿ ವಿವರಿಸಿದ್ದಾನೆ:—

ಜನನಾಥಂ ಜಗದೇಕನಲ್ಲಿ ಕಟಕೋಪಾಧ್ಯಾಯನಾನಾಗವ।
ರ್ಮನಿದಾನೀಂತನಶರ್ವವರ್ಮನೆ ಗಡಂ ಜನ್ನಂಗುಪಾಧ್ಯಾಯನಿಂ॥
ದು ನೃಸಿಂಹಕ್ಷಿತಿಪಾಲನಲ್ಲಿ ಕಟಕೋಪಾಧ್ಯಾಯನಾರೆಂಬ ಸೂ।
ಕ್ತಿನವೀನೋಜ್ಜ್ವಳಬಾಣನಪ್ಪ ಸುಮನೋಬಾಣಂ ಕವಿಶ್ರೇಷ್ಠರೊಳ್॥

ಇದರಿಂದ ಜನ್ನನ ಉಪಾಧ್ಯಾಯನಾದ **ಎರಡನೆಯ ನಾಗವರ್ಮನು** ಚಾಳುಕ್ಯಜಗದೇಕಮಲ್ಲನಲ್ಲಿಯೂ ಜನ್ನನ ತಂದೆಯಾದ **ಸುಮನೋಬಾಣನು ಹೊಯ್ಸಳನರಸಿಂಹನಲ್ಲಿಯೂ** ಕಟಕೋಪಾಧ್ಯಾಯರಾಗಿದ್ದಂತೆ ವ್ಯಕ್ತವಾಗುತ್ತದೆ. ಈ ನರಸಿಂಹನು 1141 ರಿಂದ 1173 ರ ವರೆಗೆ ಆಳಿದುದಾಗಿ ತಿಳಿಯಬರುವುದರಿಂದ ಕವಿ ಸುಮಾರು 1150 ರಲ್ಲಿ ಇದ್ದಿರಬಹುದು.

**ಮಲ್ಲಿಕಾರ್ಜುನ, ಜನ್ನ, ಕೇಶಿರಾಜ** ಮೊದಲಾದವರು ಈತನನ್ನು ಸ್ತುತಿಸಿರುವ ರೀತಿಯನ್ನು ನೋಡಿದರೆ ಈತನು ದೊಡ್ಡ ಕವಿಯಾಗಿ ಇದ್ದಿರಬೇಕೆಂದು ತೋರುತ್ತದೆ. ಈ ಕವಿಯ ನಿಜವಾದ ಹೆಸರು ಶಂಕರ ಎಂದು ಜನ್ನನು ಹೇಳುವುದರಿಂದ ಸುಮನೋಬಾಣ ಎಂಬುದು ಇವನ ಬಿರುದಾಗಿರಬಹುದು. "ನವೀನೋಜ್ಜ್ವಳಬಾಣನಪ್ಪ" ಎಂಬುದರಿಂದ ಈತನಿಗೆ ಅಭಿನವಬಾಣ ಎಂಬ ಬಿರುದೂ ಇದ್ದಂತೆ ಊಹಿಸಬಹುದಾಗಿದೆ.

ಈ ಕವಿಗೆ ಶಂಕರ ಎಂದೂ, ಈತನ ಹೆಂಡತಿಗೆ ಗಂಗೆ ಎಂದೂ, ಅಳಿಯನಿಗೆ ಮಲ್ಲಿಕಾರ್ಜುನ ಎಂದೂ ಹೆಸರುಗಳಿರುವುದರಿಂದ ಇವನು ಶೈವನಾಗಿದ್ದು

ಬಳಿಕ ಜೈನಮತವನ್ನು ಅವಲಂಬಿಸಿರಬಹುದೋ ಎಂಬ ಸಂದೇಹವುಂಟಾಗುತ್ತದೆ.

---

## ಶಂಕರವಿಬುಧ. 1150.

ಸೊರಬದ 19 ನೆಯ ಶಾಸನದ (ಶಕ 1072) ಕೊನೆಯಲ್ಲಿ "ಕಡು ಜಾಣಂ ಸತ್ಯವೀಂದ್ರ ಶಂಕರವಿಬುಧಂ" ಎಂದಿದೆ. ಈತನು ಆವ ಗ್ರಂಥವನ್ನು ಬರೆದಿದ್ದಾನೆಯೋ ತಿಳಿಯದು.

---

## ಚಾವುಂಡರಾಯ. ಸು. 1150.

ಈತನು **ಲೋಕೋಪಕಾರ** ಎಂಬ ಗ್ರಂಥವನ್ನು ಬರೆದಿದ್ದಾನೆ. ಆಶ್ವಾಸಗಳ ಕೊನೆಯ ಗದ್ಯದಲ್ಲಿ "ಶ್ರೀಮತ್ಕವಿಳಾಸತನೂಜಂ" ಎಂದಿದೆ. ಇಲ್ಲಿ ಕವಿತಾವಿಳಾಸ ಎಂಬುದಕ್ಕೆ ಪ್ರತಿಯಾಗಿ "ಕವಿಳಾಸ" ಎಂದು ತಪ್ಪು ಬಿದ್ದಿರಬಹುದು. ಕವಿತಾವಿಳಾಸ ಎಂಬ ಬಿರುದುಳ್ಳ ಒಬ್ಬ ಕವಿ ಸು. 1100 ರಲ್ಲಿ ಇದ್ದನು. ಚಾವುಂಡರಾಯನು ಈ ಕವಿತಾವಿಳಾಸನ ಮಗನಾಗಿದ್ದಲ್ಲಿ ಸು. 1150 ರಲ್ಲಿ ಇದ್ದಿರಬಹುದು. "ಹರವರಪ್ರಸಾದೋತ್ಪನ್ನವಾಗ್ವಿಳಾಸಂ" ಎಂಬುದರಿಂದ ಇವನು ಬ್ರಾಹ್ಮಣಕವಿ ಎಂದು ತೋರುತ್ತದೆ. ಕೆಲವು ಪದ್ಯಗಳ ಕೊನೆಯಲ್ಲಿ ಜಯಬಂಧುನಂದನ, ಶಿಷ್ಟಕಲ್ಪದ್ರುಮ, ಅಚಳಿತವಚನ, ಬುಧೈಕಾಶ್ರಯ ಎಂಬ ಅಂಕಿತಗಳು ದೊರೆಯುತ್ತವೆ. ಇವುಗಳಲ್ಲಿ ಜಯಬಂಧುನಂದನ ಎಂಬ ಅಂಕಿತ ವಿರುವ ಪದ್ಯಗಳು ಆ ಕವಿಯ ಗ್ರಂಥದ ಪದ್ಯಗಳಾಗಿರಬಹುದು. ಉಳಿದುವು ಇವನ ಬಿರುದುಗಳಾಗಿರಬಹುದೋ ಏನೋ ತಿಳಿಯದು.

ಈ "ಕವಿಳಾಸ" ಎಂಬುದು "ಕಲಾವಿಳಾಸ" ಎಂಬುದಕ್ಕೆ ಪ್ರತಿಯಾಗಿ ಬಿದ್ದಿದ್ದ ಪಕ್ಷದಲ್ಲಿ ಚಾವುಂಡರಾಯನು ಕಲಾವಿಲಾಸನ ಮಗನೆಂದು ತಿಳಿಯಬೇಕಾಗುತ್ತದೆ. ಕಲಾವಿಲಾಸನೆಂಬ ಬಿರುದುಳ್ಳ ಒಬ್ಬ ಕನ್ನಡಕವಿ ಇದ್ದಂತೆ **ಅಭಿನವವಾದಿವಿದ್ಯಾನಂದನ** (1533) **ಕಾವ್ಯಸಾರ**ದ ಅಂತ್ಯಭಾಗದ ಪದ್ಯಗಳಿಂದ ತಿಳಿಯಬರುತ್ತದೆ. ಆತನ ಕಾಲವಾಗಲಿ ಗ್ರಂಥವಾಗಲಿ ಗೊತ್ತಿಲ್ಲ.

ಇವನ ಗ್ರಂಥ

### ಲೋಕೋಪಕಾರ. [1]

ಇದರ ಸಮಗ್ರವಾದ ಪ್ರತಿ ದೊರೆತಿಲ್ಲ; 5, 6 ನೆಯ ಆಶ್ವಾಸಗಳು ಮಾತ್ರ ದೊರೆತಿವೆ. ಇವುಗಳಲ್ಲಿ 5 ನೆಯ ಆಶ್ವಾಸದಲ್ಲಿ ಉದಕಾರ್ಗಳವರ್ಣನವೂ

1. ಈ ಗ್ರಂಥಕ್ಕೆ ಒಂದು ಕನ್ನಡ ವ್ಯಾಖ್ಯಾನವೂ ಇದೆ.

6 ನೆಯ ಆಶ್ವಾಸದಲ್ಲಿ ಸ್ತ್ರೀಪುರುಷರ ಸಾಮುದ್ರಿಕಲಕ್ಷಣವೂ ಇವೆ. ಗ್ರಂಥದ ಈ ಭಾಗವು ಕಂದವೃತ್ತರೂಪವಾಗಿದೆ. ಆಶ್ವಾಸಗಳ ಕೊನೆಯಲ್ಲಿ

ಇದು ಸಮಸ್ತಭುವನಜನವಿನೂತಂ ಹರವರಪ್ರಸಾದೋತ್ಪನ್ನವಾಗ್ವಿಲಾಸಂ ಶ್ರೀಮತ್ಕ ವಿಳಾಸತನೂಜಂ ಶ್ರೀಚಾವುಂಡರಾಯವಿರಚಿತಮಪ್ಪ ಲೋಕೋಪಕಾರದೊಳ್

ಎಂಬ ಗದ್ಯವಿದೆ.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

ತುಜುಗಿ ತಳೆರ್ತು ಪೂತು ಫಲಮಾದೆಲೆಯಿಕ್ಕಿದ ಕೊಂಬುಗಳ್ ನೆಲ ।
ಕ್ಕೊಜಗಿದ ನುಣ್ಪುವೆತ್ತ ಮರನುಳ್ಳೆಡೆಯೊಳ್ ಜಳಮಕ್ಕುಮಲ್ಲಿಯೆಂ ॥
ದಜ'ವುದು ತಾಜ'ದಂಬಿದ ನಜುಂಕೆದ ಕೊಂಬೊಣಗಿರ್ದ ಪೂಟೆಯೆ ।
ಟ್ಟಿಜಗಿದ ವೃಕ್ಷದಿಂದಜ'ವುದಾಯೆಡೆಯೊಳ್ ಜಲಮಾಗದೆಂಬುದಂ ॥ 345 ॥

ಪುಲ್ಲಿಲ್ಲದ ನೆಲದೊಳ್ ಪಸು । ರ್ವುಲ್ಲಾದೊಡಮಲ್ಲದಂದು ಪುಲ್ಲುಳ್ಳೆಡೆಯೊಳ್ ।
ಪುಲ್ಲಿನಿತುಮಿಲ್ಲದಿರ್ದೊಡ । ಮಲ್ಲಿಯೆ ನೀರಕ್ಕುಮಲ್ಲಿ ಮೇಣ್ ನಿಧಿಯಕ್ಕುಂ
॥ 346 ॥

ಬೆವರದೆ ಬೆಚ್ಚನಾಗಿ ಮೃದುವಪ್ಪಡಿ ನೆಟ್ಟನೆ ಕೆಂಪುವೆತ್ತು ಮಿಂ ।
ಚುವ ನಖಮಾದಮೊಂದಿದ ಬೆರಲ್ಗಳಡಂಗಿದ ಗುಲ್ಫಮೊಡ್ಡಿ ತೋ ॥
ಜುವ ಮಡನುನ್ನತಾಂಘ್ರಿ ಪರಿವೃತ್ತಮನೋಹರಜಂಘೆ ಹಸ್ತಿಹ ।
ಸ್ತವನಿಟ್ಟುವುತ್ತುಮಿರ್ಪ ತೊಡೆಗಳ್ ಪಡೆಗುಂ ಶುಭಮಂ ನಿರಂತರಂ ॥ 347 ॥

---

## ಜಗದ್ದಳ ಸೋಮನಾಥ. ಸು. 1150.

ಇವನು ಕರ್ಣಾಟಕ ಕಲ್ಯಾಣಕಾರಕವನ್ನು ಬರೆದಿದ್ದಾನೆ. ಈತನು ಜೈನ ಕವಿ. ಇವನಿಗೆ ವಿಚಿತ್ರಕವಿ ಎಂಬ ಬಿರುದಿದ್ದಂತೆ ತಿಳಯುತ್ತದೆ. ತನ್ನ ಗ್ರಂಥವನ್ನು ಸುಮನೋಬಾಣಕವಿಯೂ ಅಭಯಚಂದ್ರಸಿದ್ಧಾಂತಿಯೂ ತಿದ್ದಿದಂತೆ

ಸುಮನೋಬಾಣಕವೀಂದ್ರ । ಪ್ರಮುಖಂ ಬಿರಸಭಯಚಂದ್ರಸಿದ್ಧಾಂತಿಗಳು ।
ತ್ತಮಮಾಗೆ ತಿರ್ದಿದೀಕೃತಿ । ಗಮರ್ದುದು ಸೌಭಾಗ್ಯಮೊಂದಿದಾಯುಂ ಶ್ರೀಯುಂ ॥

ಎಂಬ ಪದ್ಯದಲ್ಲಿ ಹೇಳುವುದರಿಂದ ಕವಿ ಸುಮನೋಬಾಣನ ಸಮಕಾಲದವನು ಎಂಬುದು ವ್ಯಕ್ತವಾಗುತ್ತದೆ. ಸುಮನೋಬಾಣನು ಸುಮಾರು 1150 ರಲ್ಲಿ ಇದ್ದುದಾಗಿ ತಿಳಿವುದರಿಂದ ಕವಿಯ ಕಾಲವೂ ಅದೇ ಆಗಿರಬೇಕು. ಅಲ್ಲದೆ ಇವನು ಸ್ತುತಿಸುವ ಮಾಧವೇಂದು 1131 ರಲ್ಲಿ ಗತಿಸಿದ ಗಂಗರಾಜನ ಮಗನಾದ ಬೊಪ್ಪನ ಗುರುವಾಗಿದ್ದಂತೆ ಸುಮಾರು 1135 ರಲ್ಲಿ ಬರೆದ ಶ್ರವಣಬೆಳ್ಗೊಳದ

384 ನೆಯ ಶಾಸನದಿಂದ ತಿಳಿವುದರಿಂದ ಈ ವಿಷಯವೂ ನಾವು ಕವಿಗೆ ಕೊಟ್ಟಿರುವ ಕಾಲವನ್ನು ದೃಢಪಡಿಸುತ್ತದೆ.

ಇವನ ಗ್ರಂಥ

## ಕರ್ಣಾಟಕ ಕಲ್ಯಾಣಕಾರಕ.

ಇದು ವೈದ್ಯಗ್ರಂಥ; ಪೂಜ್ಯಪಾದಕೃತ ಕಲ್ಯಾಣಕಾರಕದ ಭಾಷಾಂತರವು. ನಮಗೆ ದೊರೆತ ಅಸಮಗ್ರಪ್ರತಿಯಲ್ಲಿ (1) ಪೀಠಿಕಾಪ್ರಕರಣ, (2) ಪರಿಭಾಷಾಪ್ರಕರಣ, (3) ಷೋಡಶಜ್ವರನಿದಾನಚಿಕಿತ್ಸಾನಿರೂಪಣ, (4) ಅತಿಸಾರಗ್ರಹಣೀನಿದಾನಚಿಕಿತ್ಸಾನಿರೂಪಣ, (5) ರಕ್ತಪಿತ್ತನಿದಾನಚಿಕಿತ್ಸಾನಿರೂಪಣ, (6) ಕ್ಷಯನಿದಾನಚಿಕಿತ್ಸಾನಿರೂಪಣ, (7) ಉದರರೋಗನಿದಾನಚಿಕಿತ್ಸಾನಿರೂಪಣ, (8) ಗುಲ್ಮನಿದಾನಚಿಕಿತ್ಸಾನಿರೂಪಣ ಎಂಬ 8 ಅಧ್ಯಾಯಗಳು ಮಾತ್ರ ಇವೆ. ಬಾಹಟ, ಸಿದ್ಧಸಾರ, ಚರಕ ಎಂಬ ವೈದ್ಯಗ್ರಂಥಗಳಿಗಿಂತ ಪೂಜ್ಯಪಾದನ ಕಲ್ಯಾಣಕಾರಕವು ಉತ್ಕೃಷ್ಟವಾದುದೆಂದೂ ಅದರಲ್ಲಿ ಹೇಳಿರುವ ಚಿಕಿತ್ಸೆ ಮದ್ಯ ಮಾಂಸಮಧುವರ್ಜಿತವೆಂದೂ ಈ ಪದ್ಯದಲ್ಲಿ ಹೇಳುತ್ತಾನೆ—

ಸುಕರಂ ತಾನೆನೆ ಪೂಜ್ಯಪಾದನುನಿಗಳ್ ಮುಂ ಪೇೞ್ದ ಕಲ್ಯಾಣಕಾ ।
ರಕಮುಂ ಬಾಹಟಸಿದ್ಧಸಾರಚರಕಾದ್ಯುತ್ಕೃಷ್ಟಮುಂ ಸದ್ಗುಣಾ ॥
ಧಿಕಮುಂ ವರ್ಜಿತಮದ್ಯಮಾಂಸಮಧುವುಂ ಕರ್ಣಾಟದಿಂ ಲೋಕರ ।
ಕ್ಷಕಮುಂ ಚಿತ್ರಮದಾಗೆ ಚಿತ್ರಕವಿ ಸೋಮಂ ಪೇೞ್ದಿನಿಂತಿಟ್ಟಿಯುಂ ॥

ಗ್ರಂಥಾವತಾರದಲ್ಲಿ ಚಂದ್ರನಾಥಸ್ತುತಿ ಇದೆ. ಬಳಿಕ ಕವಿ ಸಿದ್ಧಾದಿಗಳು [1], ಸರಸ್ವತಿ, ಮಾಧವೇಂದು, ಸೈದ್ಧಾಂತಿಕಚಕ್ರವರ್ತಿ ಅಭಯಚಂದ್ರ, ಕನಕಚಂದ್ರ ಪಂಡಿತದೇವ, ಇವರುಗಳನ್ನು ಹೊಗಳಿದ್ದಾನೆ. ಅಧ್ಯಾಯಾಂತ್ಯದಲ್ಲಿ—

ಇದು ವಿಚಿತ್ರಕವಿ ಜಗದ್ವಳಸೋಮನಾಥವಿರಚಿತಮಪ್ಪ ಕರ್ಣಾಟಕ ಕಲ್ಯಾಣಕಾರಕದೊಳ್—

ಎಂದಿದೆ.

ಕೀರ್ತಿವರ್ಮನ (ಸು. 1125) ಗೋವೈದ್ಯವನ್ನು ಬಿಟ್ಟರೆ ಇದೇ ನಮಗೆ ದೊರೆತಿರುವ ಕನ್ನಡ ವೈದ್ಯಗ್ರಂಥಗಳಲ್ಲಿ ಪುರಾತನವಾದುದು. ಇದರಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

### ಜ್ವರೋತ್ಪತ್ತಿ.

ಮಲಸಂಗ್ರಹದಿಂದುದರಾ । ನಲನಬ್ಬಿವಿಂದಾಮಚಲನೆಯಿಂ ಜ್ವರಮೊಗೆಗುಂ ।
ಕೆಲರಾತ್ರಿಪುರಧ್ವಂಸಿಯ । ಲಲಾಟಲೋಚನದಿನೊಗೆದುದೆಂಬರ್ ಜ್ವರಮಂ ॥348॥

1. ಸಿದ್ಧರು, ಆಚಾರ್ಯರು, ಉಪಾಧ್ಯಾಯರು, ಸಾಧುಗಳು

### ಚಿಕಿತ್ಸೆ.

ಜ್ವರದಾದಿಯೊಳುಪವಾಸಂ । ಜ್ವರಮುಗ್ರಮುದಲ್ಲಿ ಗಂಜಿ ಪೇಟ್ಯಿ ಕಷಾಯಂ ।
ಜ್ವರಪಾಕದೊಳಸ್ತಮಿತ । ಜ್ವರದೊಳ್ ಮುಲಹರಣಮಿನಿತಿವಾರೋಗ್ಯಕರಂ ॥ 349 ॥

### ಪಿತ್ತಜ್ವರಕ್ಕೆ ಕಲ್ಕ.

ಸಿರಿಕಂಡಂ ಬಾಳಂ ಶ । ರ್ಕರೆ ಬೇವಿನ ಕಡ್ಡಿ ಭದ್ರಮುಸ್ತೆ ದ್ರಾಕ್ಷಂ ।
ಬೆರಸರೆದು ಕುಡಿಯಲೆಜಿಪೊಡೆ । ಪರಿಹರಿಸುಗುಮೆಯ್ದೆ ಪಿತ್ತಜನಿತಜ್ವರಮಂ
॥ 350 ॥

### ವಿಷಮಜ್ವರಕ್ಕೆ ನಸ್ಯ.

ಪೊಸಚಿಕ್ಕಣಿಕೆಯ ಪುಲ್ಲಂ । ಪೊಸಬೆಳ್ಳುಳ್ಳಿಯ ರಸಂಗಳಂ ತಳದಿಂದಂ ।
ಪೊಸೆದಾಗಳೆ ನಸ್ಯಂಗೆಯೆ । ಬಸವಳ್ದೆನಿಪಾ ಜ್ವರಂಗಳಂ ಮುಸುಳಿಸುಗುಂ ॥ 351 ॥

### ಬಿದ್ದ ನಾಲಗೆಗೆ.

ಪಲಕಾಲದ ಪುಣಿಸೆಯ ಪ । ಣ್ಣಂ ಲೇಹ್ಯಮಂ ಮಾಡಿ ಸನ್ನಿಪಾತಜ್ವರದಿಂ ।
ಸಲೆ ಪೊರಳದಿರ್ದ ನಾಲಗೆ । ಗೆ ಲೇಸನೀಗುಂ ಜ್ವರಂಗಳಂ ಪಿಂಗಿಸುಗುಂ ॥ 352 ॥

### ಪಿತ್ತಾತಿಸಾರಕ್ಕೆ.

ಪರಿವತಿಸಾರಂ ಪಿರಿದಾ । ಗಿರೆ ಹೂಲಿಯಬೀರ ತಿಗುಡನೆಮ್ಮೆಯಮೊಸರೊಳ್ ।
ಬೆರಸಿಟ್ಟು ಸೈಂಧವಂ ಕೂ । ಡಿರೆ ಮೆಲ್ವುದು ದಿವ್ಯಯೋಗಮಿದು ಪರಿಹರಿಕುಂ ॥ 353 ॥

### ರಕ್ತಪಿತ್ತಕ್ಕೆ.

ಬೆರಸುವುದು ಘೃತಮಂ ಶ । ರ್ಕರೆಯಂ ನೆಲ್ಲಿಯುಮನಮುರ್ದುವಳ್ಳಿಯ
ಪುಡಿಯಂ ।
ಪಿರಿದೆನಿಪ ರಕ್ತಪಿತ್ತದ । ಭರಮಂ ಪರಿಹರಿಕುಮಜಗಿದಮೃತಾಮಳಕಂ ॥ 354 ॥

---

## ಸಕಲೇಶವಮಾದರಸ. ಸು. 1150.

ಈತನು ವಚನಗಳನ್ನು ಬರೆದಿದ್ದಾನೆ. ಇವನು ವೀರಶೈವಕವಿ. **ಪದ್ಮಣಾಂಕನ** (ಸು. 1385) **ಪದ್ಮರಾಜಪುರಾಣದಿಂದ** ಇವನ ವಿಷಯವಾಗಿ ಈಯಂಶಗಳು ತಿಳಿಯುತ್ತವೆ:—

"ಇವನ ತಂದೆಯಾದ ಮಲ್ಲರಸನು ಕಲ್ಲಕುರಿಕೆಯಲ್ಲಿ ದೊರೆಯಾಗಿದ್ದು ವಿರಕ್ತನಾಗಿ ಶ್ರೀಶೈಲಕ್ಕೆ ಹೋದನು. ಇವನೂ ಕೆಲವುಕಾಲ ಅಲ್ಲಿ ಆಳುತ್ತಿದ್ದು ವಿರಕ್ತಿಹುಟ್ಟಿ ಅಂಬಿಯ

ಮಾರ್ಗವಾಗಿ ಶ್ರೀಶೈಲಕ್ಕೆ ಹೋಗಿ ತಂದೆಯನ್ನು ಕಾಣಲು ಅವನು—ನೀನು ಕಲ್ಯಾಣದಲ್ಲಿ ಧರ್ಮಸ್ಥಾಪನೆಗಾಗಿ ಹುಟ್ಟುವ ಬಸವನೊಡನೆ ಕಾಲವನ್ನು ಕಳೆಯಬೇಕು—ಎಂದು ಹೇಳಿ ಹಿಂದಕ್ಕೆ ಕಳುಹಿಸಿದನು. ಇವನ ಮಗ ಮಾಯಿದೇವ, ಮಮ್ಮಗ ಕೆರೆಯ ಪದ್ಮರಸ.

ಬಸವನೊಡನೆ ಕೆಲವುಕಾಲ ಇದ್ದುಬಾ—ಎಂದು ಮುಲ್ಲರಸನು ಇವನನ್ನು ಶ್ರೀಶೈಲದಿಂದ ಹಿಂದಕ್ಕೆ ಕಳುಹಿಸಿದನು: ಎಂದು ಭೀಮಕವಿಯ (1369) ಬಸವ ಪುರಾಣದಲ್ಲಿಯೂ (ಸಂಧಿ 20) ಹೇಳಿದೆ.

ಇದರಿಂದ ಇವನು ಬಸವನಿಗಿಂತ (ಸು. 1160) ಕೆಲವುಕಾಲ ಹಿಂದೆ ಇದ್ದವನೆಂದೂ ಕೆರೆಯಪದ್ಮರಸನ (ಸು. 1165) ಪಿತಾಮಹನೆಂದೂ ತಿಳಿಯುತ್ತದೆ. ಆದುದರಿಂದ ಇವನ ಕಾಲವು ಸುಮಾರು 1150 ಆಗಿರಬಹುದು.

## ವಚನಗಳು.

ಇವನ ವಚನಗಳ ಸಂಖ್ಯೆ 113.[1] ಇವುಗಳಲ್ಲಿ **ಸಕಲೇಶ್ವರದೇವ** ಎಂಬ ಅಂಕಿತವು ಉಪಯೋಗಿಸಿದೆ. ಒಂದೆರಡು ವಚನಗಳನ್ನು ತೆಗೆದು ಬರೆಯುತ್ತೇವೆ:—

(1) ಸರ್ವಸಂಗಪರಿತ್ಯಾಗಿಯಾದಡೇನು? ಭೋಗಕ್ಕೆ ಮಜ್ಜುಗಿಸುವೆ; ಪಾಕ ನೇಮವೆಂದಡೆ ಷಡ್ರಸಾನ್ನಕ್ಕೆ ಜಿಗಿಸುವೆ; ಮೌನವ್ರತಿಯೆಂದಡೆ ಸನ್ನೆಯಲ್ಲಿ ಬೇಡಿಸುವೆ; ಬ್ರಹ್ಮಚಾರಿಯೆಂದಡೆ ಅಂಗನೆಯರಿಗೆಜಿಗಿಸುವೆ: ಸಕಲೇಶ್ವರದೇವ ಎನ್ನನಾಳವಾಡಿ ಕಾಡುವೆ. ॥355॥

(2) ಜನಮೆಚ್ಚಿ ಶುದ್ಧನಲ್ಲದೆ ಮನಮೆಚ್ಚಿ ಶುದ್ಧನಲ್ಲಯ್ಯಾ; ವೇಷದಲ್ಲಧಿಕನಲ್ಲದೆ ಭಾಷೆಯಲ್ಲಧಿಕನಲ್ಲಯ್ಯಾ; ನುಡಿಯಜಾಣನಲ್ಲದೆ ನಡೆಯಜಾಣನಲ್ಲಯ್ಯಾ; ಧನದೊರೆಯಿದಿರ್ದೊಡೆ ನಿಃಪ್ರಿಯನಲ್ಲದೆ ಧನದೊರೆತು ನಿಃಪ್ರಿಯನಲ್ಲಯ್ಯಾ; ಏಕಾಂತದ್ರೋಹಿ ಗುಪ್ತ ಪಾತಕ ಯುಕ್ತಹೀನಂಗೆ ಸಕಲೇಶ್ವರದೇವ ಎಂತೊಲಿವ. ॥356॥

(3) ಬಲೀಂದ್ರನ ಸಿರಿಯಿಂದಲಧಿಕರ ನಾನಾರನೂ ಕಾಣೆ; ಅಂತಹ ಸಂಪತ್ತು ಮೂಜಗಡಿಗೈದವೆ ಹೋಯಿತ್ತು. ಕೆಡುವಂತಿದ್ದಿತೇ ಕೌರವನ ರಾಜ್ಯ? ಮಡಿವಂತಿದ್ದಿತೇ ರಾವಳನ ಬಲ್ಲಾಳಿಕೆ? ಪರಸ್ತ್ರೀ ಲಕ್ಷ್ಮೀದೇವಿಗೊಲಿದು ಒಂದು ನಿಮಿಷದಲ್ಲಿ ಮಡಿದ. ಇದು ಸತ್ಯ, ಇದು ಸತ್ಯ. ಸಿರಿಸೌಕರ್ಯವೆಂಬುದು ಆಕಾಶದ ರಚನೆ. ಇದನಜ್ಜದು ದೇಹ ದಿಚ್ಛೆಯನತಿಗಳೆದು ನಮ್ಮ ಸಕಲೇಶ್ವರದೇವಂಗೋತು ನೀನೆಂಬ ಭೃಮೆಯಟ್ಟಯಾ ಮರುಳೆ ॥357॥

---

1. ನಮಗೆ ದೊರೆತ ಪ್ರತಿಯಲ್ಲಿ ಕೆಲವು ವಚನಕಾರರ ವಚನಗಳ ಸಂಖ್ಯೆಗಳು ಕೊಟ್ಟಿವೆ.

## ವೀರಣಂದಿ. 1153.

ಈತನು ಸ್ವಕೃತವಾದ ಆಚಾರಸಾರಕ್ಕೆ ಕನ್ನಡ ವ್ಯಾಖ್ಯಾನವನ್ನು ಬರೆದಿದ್ದಾನೆ. ಇವನು ಜೈನಕವಿ; ಇವನ ಗುರು ಮೇಘಚಂದ್ರ. ಶಕ 1076 ಶ್ರೀಮುಖದಲ್ಲಿ–ಎಂದರೆ 1153ರಲ್ಲಿ ಈ ವ್ಯಾಖ್ಯಾನವನ್ನು ಬರೆದಂತೆ ಅದರಲ್ಲಿರುವ

ಸ್ವಸ್ತಿ ಶ್ರೀಮನ್ಮೇಘಚಂದ್ರತ್ರೈವಿದ್ಯದೇವರ ಶ್ರೀಪಾದಪ್ರಸಾದಾಸಾದಿತಾತ್ಮಪ್ರಭಾವ ಸಮಸ್ತ ವಿದ್ಯಾಪ್ರಭಾವ ಸಕಲದಿಗ್ವರ್ತಿಕೀರ್ತಿ ಶ್ರೀಮದ್ವೀರಣಂದಿಸಿದ್ಧಾಂತಚಕ್ರವರ್ತಿಗಳ್ ಶಕ ವರ್ಷಂ 1076 ಶ್ರೀಮುಖನಾಮಸಂವತ್ಸರದ ಜ್ಯೇಷ್ಠಶುಕ್ಲ 1 ಸೋಮವಾರದಂದು ತಾವು ಮಾಡಿದಾಚಾರಸಾರಕ್ಕೆ ಕರ್ಣಾಟಕವೃತ್ತಿಯಂ ಮಾಡಿದಪರ್[1]—ಎಂಬ ಗದ್ಯದಿಂದ ತಿಳಿಯುತ್ತದೆ. ಇದರಿಂದ ಮಾದರಿಗಾಗಿ ಒಂದು ಶ್ಲೋಕದ ವ್ಯಾಖ್ಯಾನವನ್ನು ತೆಗೆದು ಬರೆಯುತ್ತೇವೆ :—

ಪರಿವ್ರಾಡ್‌ಬ್ರಹ್ಮಕಲ್ಪಾಂತಂ ಯಾತ್ಯುಗ್ರಾಚಾರವಾನಪಿ।
ಆಜೀವಕಃ ಸಹಸ್ರಾರಕಲ್ಪಾಂತಂ ದರ್ಶನೋಜ್ಝಿತಃ॥

ಪರಿವ್ರಾಟ್, ಪರಿವ್ರಾಜಕಂ. ಬ್ರಹ್ಮಕಲ್ಪಾಂತಂ, ಬ್ರಹ್ಮಕಲ್ಪಂಬರಂ. ಅತ್ಯುಗ್ರಾಚಾರವಾನಪಿ, ಬೆಟ್ಟಿತ್ತಪ್ಪ ನೆಗಟ್ಟಿಯನುಳ್ಳನಾದೊಡಂ. ಆಜೀವಕಃ, ಬೌದ್ಧಭೇದಮಪ್ಪ ಕಾಂಜಿಭಿಕ್ಕು. ಸಹಸ್ರಾರಕಲ್ಪಾಂತಂ, ಸಹಸ್ರಾರಕಲ್ಪಂಬರಂ. ದರ್ಶನೋಜ್ಝಿತಃ, ಸಮ್ಯಕ್ತ್ವವಿಲ್ಲದಂ. ಯಾತಿ, ಪೋಕುಂ.

---

## ಶಾಂತಿವರ್ಮ. ಸು. 1160.

ಈ ಕವಿಯನ್ನು **ರುದ್ರಭಟ್ಟನು** (ಸು. 1180) "ಶಾಂತಿವರ್ಮನ ನಯಂ" ಎಂದು ಹೊಗಳುವುದರಿಂದ ಈತನು ರುದ್ರಭಟ್ಟನಿಗೆ ಹಿಂದೆ ಇದ್ದನೆಂಬುದು ವ್ಯಕ್ತವಾಗುತ್ತದೆ. ಈತನು ಆವ ಗ್ರಂಥಗಳನ್ನು ಬರೆದಿದ್ದಾನೆಯೋ ತಿಳಿಯದು. **ನಂಜುಂಡನು** (ಸು. 1525) ತನ್ನ ಕುಮಾರರಾಮಕಥೆಯಲ್ಲಿ ಇವನನ್ನು ಇತರ ಪೂರ್ವ ಕವಿಗಳೊಡನೆ ಸೇರಿಸಿ ಈ ಪದ್ಯದಲ್ಲಿ ಸ್ತುತಿಸಿದ್ದಾನೆ :—

ಗಜಗನ ಗುಣವರ್ಮನ ನಾಗಚಂದ್ರನ। ಸುಜನೋತ್ತಂಸನೆಸಗನ।
ಸುಜನರನ್ನನ ಶಾಂತಿವರ್ಮನ ಪದಸರ। ಸಿಜಗಳಿಗೊಲಿದೆಱಗುವೆನು॥

**ಪುಷ್ಪದಂತಪುರಾಣವನ್ನು** ಬರೆದ **ಎರಡನೆಯ ಗುಣವರ್ಮನು** (ಸು. 1235) ತನ್ನ ಪೋಷಕನಾದ ಒಬ್ಬ "ನಾಟ್ಯಭು" ಶಾಂತಿವರ್ಮನನ್ನು ಹೊಗಳು

1. *Ind. Ant.*, XLI, 88.

ತ್ತಾನೆ. ರುದ್ರಭಟ್ಟನು ಹೇಳುವ ಶಾಂತಿವರ್ಮನಿಗೂ ಈ ಶಾಂತಿವರ್ಮನಿಗೂ ಆವ ಸಂಬಂಧವೂ ಇಲ್ಲ. ಈ ಕವಿಯನ್ನು ರುದ್ರಭಟ್ಟನು ಸ್ತುತಿಸುವುದರಿಂದ ಇವನು ಅವನಿಗೆ ಹಿಂದೆ—ಎಂದರೆ ಸುಮಾರು 1160 ರಲ್ಲಿ ಇದ್ದಿರಬಹುದು.

---

## ವೃತ್ತವಿಲಾಸ. ಸು. 1160.

ಈತನು ಧರ್ಮಪರೀಕ್ಷೆಯನ್ನು ಬರೆದಿದ್ದಾನೆ. ಶಾಸ್ತ್ರಸಾರವೆಂಬ ಮತ್ತೊಂದು ಗ್ರಂಥವನ್ನು ಬರೆದಿರುವಂತೆ ತಿಳಿಯಬರುತ್ತದೆ. ಇದು ನಮಗೆ ದೊರೆತಿಲ್ಲ. ಆದರೆ ಪ್ರಾಕ್ಯಾವ್ಯಮಾಲಿಕೆಯಲ್ಲಿ ಈ ಗ್ರಂಥದ ಕೆಲವು ಭಾಗಗಳು ಉದ್ಧೃತವಾಗಿವೆ.

ಈತನು ಜೈನಕವಿ; ತನ್ನ ವಿಷಯವಾಗಿ ಗ್ರಂಥದಲ್ಲಿ ಏನೂ ಹೇಳಿಕೊಂಡಿಲ್ಲ. ಇವನ ಕಾಲವನ್ನು ನಿರ್ಣಯಿಸುವುದಕ್ಕೆ ಸರಿಯಾದ ಆಧಾರವಿಲ್ಲ; ಇವನು ಸ್ತುತಿಸಿರುವ ಜೈನಗುರುಗಳಿಂದ ಇವನ ಕಾಲವನ್ನು ಊಹಿಸಬೇಕಾಗಿದೆ. ಶುಭಕೀರ್ತಿವ್ರತಿ, ಸೈದ್ಧಾಂತಿಕಮಾಘಣಂದಿಯತಿ, ಭಾನುಕೀರ್ತಿಯತಿ, ಧರ್ಮಭೂಷಣ, ಅವನ ಮಗ ಮತ್ತು ಶಿಷ್ಯ ಅಮರಕೀರ್ತಿ (ಕವಿಯ ಗುರು), ಅಭಯಸೂರಿವಾದೀಶ್ವರ, ಇವರುಗಳನ್ನು ಸ್ತುತಿಸಿದ್ದಾನೆ.

ಒಬ್ಬ ಅಭಯಸೂರಿ ಹೊಯ್ಸಳರಾಜನಾದ 1 ನೆಯ ಬಲ್ಲಾಳನ (1100–1106) ಆಳಿಕೆಯಲ್ಲಿ ಚಾರುಕೀರ್ತಿಗೆ ಸಮಕಾಲದವನಾಗಿ ಇದ್ದಂತೆ ತಿಳಿಯುತ್ತದೆ.[1] 1115 ರಲ್ಲಿ ಗತಿಸಿದ ಮೇಘಚಂದ್ರನ[2] ಸಮಕಾಲದವನಾದ ಒಬ್ಬ ಶುಭಕೀರ್ತಿ ಇದ್ದನು.[3] 1176 ರಲ್ಲಿ ಗತಿಸಿದ ನಯಕೀರ್ತಿಗೆ[4] ಮಾಘಣಂದಿ, ಭಾನುಕೀರ್ತಿ ಎಂಬ ಶಿಷ್ಯರುಂಟು.[5] ಇವರ ಕಾಲವು ಸುಮಾರು 1150 ಆಗಬಹುದು. ಶ್ರವಣಬೆಳ್ಗೊಳದ 274 ನೆಯ ಶಾಸನದಲ್ಲಿ ಧರ್ಮಭೂಷಣನೆಂಬ ಒಬ್ಬ ಜೈನಗುರುವೂ ಅವನ ಶಿಷ್ಯನಾದ ಒಬ್ಬ ಅಮಲಕೀರ್ತಿಯೂ ಹೇಳಲ್ಪಟ್ಟಿದ್ದಾರೆ. ಈ ಅಮಲಕೀರ್ತಿ ಕವಿಯ ಗುರುವಾಗಿರಬಹುದೆಂಬ ಸಂದೇಹವುಂಟಾಗುತ್ತದೆ. ಆದರೆ ಕವಿಯ ಗುರು ಅಮರಕೀರ್ತಿ ಎಂಬುದರಿಂದ ಈತನು ತಪ್ಪಿನ್ನನೆಂದು ತೋರುತ್ತದೆ. ಅಲ್ಲದೆ ಅಮಲಕೀರ್ತಿಯ ಕಾಲವು ಈ ಶಾಸನದ ಪ್ರಕಾರ ಸುಮಾರು 1350 ಆಗುತ್ತದೆ. ಕವಿ ಅಷ್ಟು ಈಚೆಯವನು ಬೇರೆ ಅಲ್ಲ. **ಇವನು ಸುಮಾರು 1160 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ.**

---

1. ಶ್ರ. ಬೆ ಶಾ. 254. 2. ಶ್ರ. ಬೆ. ಶಾ. 127. 3. ಶ್ರ. ಬೆ. ಶಾ. 140. 4. ಶ್ರ. ಬೆ. ಶಾ. 66. 5. ಶ್ರ. ಬೆ. ಶಾ. 327.

**ದೇವಚಂದ್ರನು** ರಾಜಾವಳೀಕಥೆಯಲ್ಲಿ "ಬಲ್ಲಾಳರ ಕಾಲದಲ್ಲಿ ಅಮರ ಕೀರ್ತಿರಾವುಳಯತಿಯರ ಶಿಷ್ಯಂ ವೃತ್ತವಿಳಾಸನೆಂಬಂ ಸಂಸ್ಕೃತಧರ್ಮಪರೀಕ್ಷೆ ಯಂ ವಸ್ತುಕಮಾಗಿ ಮಾಡಿದಂ" ಎನ್ನುತ್ತಾನೆ.

ಈ ಕವಿ ಪೂರ್ವಕವಿಗಳಲ್ಲಿ ಆರನ್ನೂ ಹೇಳಿಲ್ಲ. "ಕವಿತಾಚಾತುರ್ಯರ್ತಿರ್ದುಗೆ ಮದೀಯಕೃತಿಯಂ ವಯೆಯಿಂ" ಎಂದು ಮಾತ್ರ ಹೇಳಿದ್ದಾನೆ.

ತನ್ನ ಗುಣಗಳನ್ನು ಈ ಪದ್ಯದಲ್ಲಿ ಹೇಳಿಕೊಂಡಿದ್ದಾನೆ:—

ಜಿನಪದಸೇವಕಂ ಜಿನಮುನೀಂದ್ರಪದಾರ್ಚಕನನ್ಯದೈವಮಂ ।
ಕನಸಿದೊಳಾದೊಡಂ ನೆನೆಯದುತ್ತಮ.....ನುದಾರಮೀರು ಸ ॥
ಜ್ಞಾನನಿಧಿ ಸತ್ಯಶೌಚಗುಣದಾಗರಮಾಜ್ಞೆಯ ಜನ್ಮಭೂಮಿಯೆಂ ।
ದನುನಯದಿಂದೆ ಕೀರ್ತಿಪುದು ವೃತ್ತವಿಳಾಸನನೀಜಗಜ್ಜನಂ ॥

ಇವನ ಗ್ರಂಥಗಳಲ್ಲಿ

## ಧರ್ಮಪರೀಕ್ಷೆ.

ಅಮಿತಗತಿಯೆಂಬವನು ಸಂಸ್ಕೃತದಲ್ಲಿ ಬರೆದಿರುವ ಧರ್ಮಪರೀಕ್ಷೆಯನ್ನು ಕವಿ ಎಲ್ಲರಿಗೂ ತಿಳಿವಂತೆ ಕನ್ನಡದಲ್ಲಿ ರಚಿಸಿದುದಾಗಿ "ಮುನ್ನಿನ ಚಾರು ಸಂಸ್ಕೃತದ ಧರ್ಮಪರೀಕ್ಷೆಯಂ ಸನ್ನುತಮಾಗೆಯೆಲ್ಲರಜಿವಂತಂಟು ಕನ್ನಡದಿಂ ಪೇಟ್ದಿಂ" ಎಂಬ ಪದ್ಯಭಾಗದಲ್ಲಿ ಹೇಳಿದ್ದಾನೆ. ಇದು ಚಂಪೂಗ್ರಂಥ; 10 ಆಶ್ವಾಸಗಳಾಗಿ ಭಾಗಿಸಲ್ಪಟ್ಟಿದೆ. ಈ ಗ್ರಂಥದಲ್ಲಿ—ಮನೋವೇಗಪವನವೇಗರೆಂಬ ರಾಜಕುಮಾರರು ಪಾಟಲೀಪುರಕ್ಕೆ ಹೋಗಿ ಬ್ರಹ್ಮನ ದೇವಸ್ಥಾನದಲ್ಲಿದ್ದ ಭೇರಿಯನ್ನು ಹೊಡೆದು ಅಲ್ಲಿದ್ದ ಸಿಂಹಾಸನದಲ್ಲಿ ಕುಳಿತುಕೊಂಡಿರಲು, ಅಲ್ಲಿಯ ಶಾಸ್ತ್ರಜ್ಞರಾದ ಬ್ರಾಹ್ಮಣರು ಬಂದು—ವಿದ್ವಾಂಸರಾದವರು ವಾದಾರ್ಥವಾಗಿ ಬಂದು ಭೇರೀರವವನ್ನು ಮಾಡಿ ವಾದದಲ್ಲಿ ಗೆದ್ದ ಮೇಲೆಯೇ ಸಿಂಹಾಸನದಲ್ಲಿ ಕುಳಿತುಕೊಳ್ಳುವ ಪದ್ಧತಿ ಇದೆ. ನೀವು ಆವ ಶಾಸ್ತ್ರದಲ್ಲಿ ಪಂಡಿತರು? ಎಂದು ಕೇಳಲು, ರಾಜಕುಮಾರರು—ನಮಗೇನೂ ತಿಳಿಯದು; ಸುಮ್ಮನೆ ಬಂದು ಕುಳಿತುಕೊಂಡೆವು—ಎಂದು ಹೇಳಿ ಸಿಂಹಾಸನವನ್ನು ಬಿಟ್ಟು ಇಳಿದು ಕೆಳಗೆ ಕುಳಿತುಕೊಂಡು ಬ್ರಾಹ್ಮಣರಿಗೆ ಕಥೆಗಳನ್ನು ಹೇಳಿ ಅವರ ಮತವನ್ನು ಅನೇಕ ವಿಧವಾಗಿ ನಿರಾಕರಿಸಿ ಜಯಪತ್ರವನ್ನು ಹೊಂದಿದಂತೆಯೂ ಜೈನಮತದ ಉತ್ಕೃಷ್ಟತೆಯನ್ನು ಪ್ರಕಟಿಸಿದಂತೆಯೂ—ಕವಿ ಹೇಳಿದ್ದಾನೆ.

ಈ ಗ್ರಂಥದ ಉತ್ಕೃಷ್ಟತೆಯನ್ನು—

ಇದು ದುರಿತತಿಮಿರರವಿರುಚಿ । ಯಿದು ಸತ್ಕೈವಲ್ಯಪದದ ನಿಶ್ರೇಣಿ ಸಮಂ ।
ತಿದು ರತ್ನತ್ರಯಖನಿಯೆನಿ । ಪುದು ಧರ್ಮಪರೀಕ್ಷೆ ಭವ್ಯಜನಹಿತಕರಣಂ ॥

ಎಂಬ ಪದ್ಯದಲ್ಲಿ ಹೇಳಿಕೊಂಡಿದ್ದಾನೆ. ಗ್ರಂಥಾವತಾರದಲ್ಲಿ ವರ್ಧಮಾನಜಿನನನ್ನು ಸ್ತುತಿಸಿದ್ದಾನೆ. ಬಳಿಕ ಸಿದ್ಧಾದಿಗಳನ್ನೂ ಯಕ್ಷಿಯಕ್ಷರನ್ನೂ ಸರಸ್ವತಿಯನ್ನೂ ಸ್ತೋತ್ರಮಾಡಿ ಅನಂತರ ಕೇವಲಿಗಳು ಮೊದಲಾಗಿ ಚಿಕ್ಕಹೇಮದೇವನವರೆಗೆ[1] ಗುರುಗಳನ್ನು ಹೊಗಳಿದ್ದಾನೆ. ಆಶ್ವಾಸಗಳ ಕೊನೆಯಲ್ಲಿ—

ಇದು ವಿನಮದಮರಮಕುಟತಟಘಟಿತಮಣಿಗಣಮರೀಚಿಮಂಜರೀಪುಂಜರಂಜಿತ ಪಾದಾರವಿಂದ ಭಗವದರ್ಹತ್ಪರಮೇಶ್ವರವದನವಿನಿರ್ಗತಶ್ರುತಾಂಭೋಧಿವರ್ಧನಸುಧಾಕರಂ ಶ್ರೀಮದಮರಕೀರ್ತಿರಾವುಳ್ಳವ್ರತೀಶ್ವರಚರಣಸರಸಿರುಹಷಟ್ಪದಂ ವೃತ್ತವಿಳಾಸವಿರಚಿತಮಪ್ಪ ಧರ್ಮಪರೀಕ್ಷೆಯೊಳ್

ಎಂಬ ಗದ್ಯವಿದೆ.

ಇವನ ಬಂಧವು ಸರಳವಾಗಿಯೂ ಲಲಿತವಾಗಿಯೂ ಇದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ :—

ಕೋಳಿ.

ಪರಿಹರಿಸಿ ನಿದ್ರೆಯುಡುಗಿದ । ಕೊರಲಂ ನಿಮಿರ್ದೆತ್ತಿ ನೋಡಿ ನಾಲ್ದಿಸೆಯಂ ಕೇ ।
ಸರಮುಂ ಬಿದಿರ್ದೆಜ್ಜಿಂಕೆಯ । ನೆರಡಂ ಬಡಿದೆಬ್ಬಿಸಿ ಕೋಳಿ ಕೂಗಿದುವಾಗಳ್ ॥ 358 ॥

ಸೂರ್ಯೋದಯ.

ತಳತಳಿಸಿ ಪೂಳಿವ ಪೊಸಕೆಂ । ದಳಿರ್ಗಳ ಕಾವಣಮೊ ಕಮಲಿನಿಯ ರಾಗದ ಪೆ ।
ರ್ವಳವಿಗೆಯೊ ಪೇಬ್ಬಮೆನೆ ಕಂ । ಗೊಳಿಸಿದುದರುಣೋದಯಂ ಸುರೇಂದ್ರನ
ದೆಸೆಯೊಳ್ ॥ 359 ॥

ಬಾಡಿತು ನೆಯ್ದಲ್ಗೋಡಿತು ತಮಂ ತೆಗೆದೋಡಿತು ದೈತ್ಯಸಂಕುಳಂ ।
ತೀಡಿತು ಸೌರಭಂ ನಲಿದು ನೋಡಿತು ಪಂಕಜವಲ್ಲಿ ಷಟ್ಪದಂ ॥
ಪಾಡಿದುವೆಯ್ದೆ ಕೋಕಮಿಥುನಂ ನೆಜಿ ಕೂಡಿದುವೊಲ್ದು ಮೂಡಿದಂ ।
ಮೂಡಣ ದಿಕ್ಕಿನೊಳ್ ತೊಳಗುತುಂ ಬೆಳಗುತ್ತ ನರೋಜಬಾಂಧವಂ ॥ 360 ॥
ಸಸಿಗೆ ಕಳಂಕಮೇಜಿ ದನುಜರ್ಗಲ್ಲಿಲೇಜಿಯುಳೂಕವೃಂದಕು ।
ಬ್ಬಸಮಣಮೇಜಿಯುಪ್ಪಳಿನಿಗುಮ್ಮಳಮೇಜಿ ಸರೋರುಹಕ್ಕೆ ಸಂ ॥

---

1. ಕೇವಲಿಗಳು, ಶ್ರುತಕೇವಲಿಗಳು, ಅನುಬದ್ಧಕೇವಲಿಗಳು, ಕೊಂಡಕುಂದ, ಸಮಂತಭದ್ರ, ಗೃಧ್ರಪಿಂಛ, ಬಳಾಕಪಿಂಛ, ಮಯೂರಪಿಂಛ, ಉಲೂಕಭಟ್ಟಾಚಾರ್ಯ, ಪೂಜ್ಯಪಾದ, ಜಿನಸೇನ, ವೀರಸೇನ, ಶುಭಕೀರ್ತಿವ್ರತಿ, ಸೈದ್ಧಾಂತಿಕಮಾಘಣಂದಿ, ಭಾನುಕೀರ್ತಿ, ಧರ್ಮಭೂಷಣ, ಇವನ ಮಗನೂ ಶಿಷ್ಯನೂ ಆದ ಅಮರಕೀರ್ತಿವ್ರತಿ (ಸ್ವಗುರು), ಹೇಮದೇವ, ಅಭಯಸೂರಿವಾದೀಶ್ವರ, ಮುನಿವಲ್ಲಭ, ತತ್ಪುತ್ರ ಚಿಕ್ಕಹೇನುದೇವ.

ತಸದೊದವೇಱಿ ಕೋಕಮಿಥುನಕ್ಕನುರಾಗತೆಯೇಱಿ ಲೀಲೆಯಿಂ ।
ಬಿಸರುಹಮಿತ್ರನಂದುದಯಪರ್ವತಮಂ ಭರದಿಂದಮೇಱಿದಂ ॥ 361 ॥

## ನಕ್ಷತ್ರ.

ನೆಲನಗಲಕೆ ತೀವಿದ ಕ । ಟ್ಟಲೆಯಂ ಕಳೆಯಲ್ಕೆ ಗಗನತಳದೊಳ್ ಪಲವುಂ ।
ಬೆಳಗಂಡಿಗಳಂ ಸಮೆದಂ । ಜಳಜಜನೆನೆ ತೊಳಗಿ ಬೆಳಗಿದುವು ಭಗಣಂಗಳ್ ॥ 362 ॥

## ಮೇಲೋಗರ.

ಹಾಗಲ ಹಡಲಂ ಕು . ಳಂ । ಕೂಗಲಿ ಕೂಷ್ಮಾಂಡಮವರೆಬದಣಿಗಳಿಂ ಲೇ ।
ಸಾಗಿರೆ ಮಾಡಿದ ಸವಿಮೇ । ಲೋಗರಮಂ ತಂದು ಬಡಿಸಿದರ್ ಮಾನಿನಿಯರ್ ॥363॥

## ಮುದುಕ.

ನರೆದೆಲೆ ಜೋಲ್ದ ಪುಬ್ಬು ಕುಬ್ರುದಕ್ಷಿಯುಗಂ ತುಟಿಯರ್ತ ಬೋಡ ಬಾಯ್ ।
ತೆರೆ ಮಸಗಿರ್ದ ಮೋರೆಯುಡುಗಿರ್ದುರವುಕ್ಕುಳಿಸಿರ್ದ ಪೊಟ್ಟೆ ಮೇ ॥
ಲ್ಸೆರೆ ಮಸಗಿರ್ದ ಕಾಲ್ ಮುಜುದ ಬೆನ್ನು ಜಕಂಪಿಪ ಹಸ್ತಮಸ್ತಕಂ ।
ಪರಿಕಿಸೆ ತಾಪಸಂಗೆನಗೆ ಪೇಸದೆ ಕನ್ನೆಯನೀಯಬಲ್ಲರೇ ॥ 364 ॥

## ಸಮಯಮೂಢತೆ.

ಪೂಸಿದ ಬೂದಿ ತೊಟ್ಟ ಮಣಿಯುಟ್ಟ ತೊವಲ್ ತಳಿರ್ಗಾಸೆ ಲಾಗುಳಂ ।
ಬಾಸಣಿಸಿರ್ದ ಜಾದು ಮಸಿಯಸ್ಥಿಯ ಮಾಲೆಯನಿಕ್ಕಿಕೊಂಡು ದು ॥
ರ್ವೇಷದೊಳಿರ್ಪರಂ ಸಮಯಿಯೆಂದು ತಪಸ್ವಿಗಳೆಂದು ನಾಡೆ ಸಂ ।
ತೋಷದೆ ಕಾಣ್ಬುದೇ ಸಮಯಮೂಢತೆಯೆಂಬುದು ವಿಶ್ವಧಾತ್ರಿಯೊಳ್ ॥ 365 ॥

## ಧೂರ್ತಸ್ವಭಾವ.

ಮನೆಯೊಳ್ ಪಾಲುಂಡು ನಿಶ್ಚಿಂತದೆ ಬಳಿದು ಕರಂ ಸಾಧುವಾಗಿರ್ದು ಠಾವಿಂ ।
ದಿನಿಸುಂ ಬಿಕ್ಕತ್ತಲಿತ್ತಲ್ ಮಿಡುಕದೆ ಪಲವುಂ ಪ್ರಾಣಿಯಂ ಕಾಣುತುಂ ನೆ ॥
ಟ್ಟನೆ ನುಂಗುತ್ತಿರ್ಕುಮಂತೀನರರೊಳಿ ಕೆಲಬರ್ ಧರ್ಮಮಂ ಕೇಳುತುಂ ಸ ।
ಜ್ಜನರೊಳ್ ಬಟ್ಟುಂ ಬಬ್ರುಕ್ಕಂ ಬಿಡುವರೆ ಕೊಲೆಯಂ ಕ್ರೂರಮಂ ಕಷ್ಟ
ಚಿತ್ತರ್ ॥ 366 ॥

## ಸೇತುಬಂಧದ ಪರಿಹಾಸ.

ಅಂದು ಕಪಿವ್ರಜಂ ಪರಿದು ಬೆಟ್ಟುಗಳಂ ನೆಜಕಿಟ್ಟು ನೆತ್ತಿಯೊಳ್ ।
ಸಂದಿಸಿ ಮೂಜುನಾಲ್ಕನಡಕಿಲ್ಗಿರಿಯಾಗಿರೆ ಪೊತ್ತು ಬೇಗದಿಂ ॥
ತಂದು ಸಮುದ್ರಮಂ ಕ್ಷಣದೆ ಕಟ್ಟಿದರೆಂಬಿದು ನಿಮ್ಮ ಶಾಸ್ತ್ರದೊಳ್ ।
ಸಂದ ಪುರಾಣದೊಳ್ ಪದೆದು ಪೇಟ್ಪುದು ಸತ್ಯಮೊ ಮೇಣಸತ್ಯಮೋ ॥ 367 ॥

ಪ್ರಾಕ್ಕಾವ್ಯಮಾಲಿಕೆಯಲ್ಲಿ ಶಾಸ್ತ್ರಸಾರದಿಂದ ಉದ್ಧರಿಸಿ ಬರೆದಿರುವ ಭಾಗದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

ಪಾಪ.

ನಲಿನಲಿದಾಡಿ ಪಾಪಮನುಪಾರ್ಜಿಸಿ ತತ್ಪರಿಪಾಕದಿಂದೆ ಕೋ ।
ಟಲೆಗೊಳಗಾಗಿ ಬಾಯ್ವಿಡುವ ಮೂಢಜನಂಗಳ ಕೃತ್ಯಮಬ್ಬೆಯಿಂ ॥
ಜಲಜಲಿಪಗ್ನಿಯಂ ಪಿಡಿದು ಬೆಂದ ಬಟಿಕ್ಕೆ ಕನತ್ತೊನಲ್ವು ಮು ।
ಮ್ಮಲಮಱುಗುತ್ತೆ ಬಾಯಬ್ಬಿವ ಬಾಲಕಜಾಲಕದಂದಮಲ್ಲವೇ ॥ 368 ॥

ಬಯಸಿ ನಿಧಾನಮಂ ಸುಕೃತಮಿಲ್ಲದವಂ ಭರದಿಂ ತದಗ್ರಭೂ ।
ಮಿಯನಗಬ್ಬುತ್ತುಮಿರ್ದು ನಿಧಿಗಾಣ್ಬೆಡೆಯೊಳ್ ಮರುಳಾಗಿ ಪೋಪ ಮಾ ॥
ಟಿಕ್ಕಿಯೊಳಪವರ್ಗವಾರ್ಗದೊಲವಿಂ ಪಲರುಂ ಪಿರಿದೋದಿ ತತ್ತ್ವನಿ ।
ರ್ಣಯ ಜನಿತೋಕ್ತಿಯಲ್ಲಿ ಜಡರಪ್ಪರಿದೇನಘಶಕ್ತಿ ಚಿತ್ರಮೋ ॥ 369 ॥

ದೈವಮೂಢತೆ.

ಒಗೆವ ದಿನೇಶನಂ ಪರಿವ ಸಿಂಧುವನೂದುವ ಗಾಳಿಯಂ ಧಗಂ ।
ಧಗಿಸುವ ಕಿಚ್ಚನುಬ್ಬಿ ನೆಲನಂ ಕಱಿವಾಕಳನಿರ್ಪ ಸದ್ಮಮಂ ॥
ಸೊಗಯಿಸಿ ನಿಂದ ಪರ್ಮರಮನುಣ್ಬಗುಳಂ ಬೆಸಕೆಯ್ವ ತಮ್ಮ ಮು ।
ಟ್ಟುಗಳನೆ ದೈವಮೆಂದೆಱಗುವಾತನೆ ದೈವದ ಮೂಢನಲ್ಲವೇ ॥ 370 ॥

ಮೋಕ್ಷಚಿಂತೆ.

ಹುಟ್ಟದ ಯೋನಿ ಮೆಟ್ಟದ ನೆಲಂ ನೆಱಿ ಕೊಳ್ಳದ ಕಾಲಮೊರ್ಮೆಯುಂ ।
ಮುಟ್ಟದ ಭಾವಮೊಂದದ ಭವಂ ಪೆಜತಿಲ್ಲೆನೆ ದುರ್ವಿಮೋಹದಿಂ ॥
ತಿಟ್ಟನೆ ಬಂದೆ ನೀಂ ತಿಳಿಯದಕ್ಕಟ ನಿನ್ನ ನಿಜಸ್ವರೂಪಮಂ ।
ನೆಟ್ಟನೆ ನೋಡಿ ಕೂಡಿ ಪಡೆ ನಿತ್ಯನಿರಂಜನಮೋಕ್ಷಲಕ್ಷ್ಮಿಯಂ ॥ 371 ॥

ಬಲಿಪ್ರದಾನಪರಿಹಾಸ.

ಕುಱಿಯಂ ಬೇಡಿದೊಡೀವನೊಂದು ಬಡವಂ ತನ್ನಿಚ್ಛೆಯಿಂ ದೈವಮಾ ।
ಕುಱಿವಿಂಡಿರ್ದೆಡೆಗೆಯ್ವನೊಂದೆರಡುಮೂಱುಂ ನಾಲ್ಕುಮಯ್ದಾಱು ಬ ॥
ಲ್ಗುಱಿಯಂ ತಿಂದೊಡೆ ಕಾಪಿನರ್ ಬಡಿಗುವೋ ನಾಯ್ ತಿನ್ಗುವೋ ದೈವಮಂ ।
ಪೆಱರಂ ಬೇಡುವ ದೈವಮೇಕೆ ಗಡ ಪೇೞ್ವಾತೋಳನಿಂ ಕಷ್ಟಮೇ ॥ 372 ॥

---

## ಬಸವ. ಸು. 1160.

ಈತನು **ಷಟ್ಸ್ಥಲವಚನ, ಶಿಖಾರತ್ನವಚನ, ಕಾಲಜ್ಞಾನವಚನ, ಮಂತ್ರಗೋಪ್ಯ** ಎಂಬ ಗ್ರಂಥಗಳನ್ನು ಬರೆದಿದ್ದಾನೆ.

ಇವನು ವೀರಶೈವಕವಿ; ಕರ್ನಾಟಕದೇಶದಲ್ಲಿ ಪ್ರಸಿದ್ಧವಾದ ಇಂಗಳೇಶ್ವರ ಬಾಗವಾಡಿಯಲ್ಲಿ ಹುಟ್ಟಿದವನು. ಈತನ ಅಜ್ಜನು ಲಿಂಗಭಟ್ಟ; ತಂದೆ ಬಾಗವಾಡಿಯ ಅಗ್ರಹಾರದ "ಗ್ರಾಮಣೀಮಣಿ, ಭೂಮಿದೇವಾಗ್ರಣಿ, ಶೈವಾಂಬುರುಹತರಣಿ" ಯಾದ ಮಂಡಿಗೆ ಮಾದಿರಾಜ; ತಾಯಿ ಮಾದಾಂಬಿಕೆ; ಒಡಹುಟ್ಟಿದವಳು ನಾಗಾಂಬಿಕೆ. ಈಕೆಯ ಮಗನೇ ಚೆನ್ನಬಸವ. ಬಸವನ ಸೋದರದ ಮಾವನು ಬಲದೇವನು. ಈತನು ಬಿಜ್ಜಳರಾಜನಲ್ಲಿ (1156—1167) ಪ್ರಧಾನಿಯಾಗಿದ್ದನು. ಬಲದೇವನ ಮಗಳಾದ ಗಂಗಾಂಬಿಕೆ ಬಸವನ ಹೆಂಡತಿ. ಈತನಿಗೆ ನೀಲಲೋಚನೆ ಅಥವಾ ನೀಲಮ್ಮ ಎಂಬ ಮತ್ತೊಬ್ಬಳು ಹೆಂಡತಿ ಇದ್ದಂತೆ ತಿಳಿಯುತ್ತದೆ. ಬಸವನಿಗೆ ಬಾಲಸಂಗಯ್ಯನೆಂಬ ಒಬ್ಬ ಮಗನಿದ್ದಂತೆಯೂ, ಆತನು ಇವನ ಕಾಲಕ್ಕೆ ಮುಂಚೆಯೇ ಗತಿಸಿದಂತೆಯೂ, ಆ ಕಾಲದಲ್ಲಿ ಬಸವನು "ಪುಷ್ಪವಿದ್ದಂತೆ ಮೊಗ್ಗೆಯನರ್ಪಿಸಿಕೊಂಡ ಶಿವನು; ಪಕ್ವವಾದ ಫಲವಿದ್ದಂತೆ ಕಸುಗಾಯ ಕೊಯ್ದ ಶಿವನು" ಎಂದು ಪ್ರಲಾಪಿಸಿದಂತೆಯೂ ತಿಳಿಯುಬರುತ್ತದೆ.[1]

ಬಸವನು ನಂದೀಶ್ವರನ ಅವತಾರವೆಂದು ವೀರಶೈವಗ್ರಂಥಗಳಲ್ಲಿ ಹೇಳಿದೆ. ಈತನಿಗೆ ಎಂಟು ವಯಸ್ಸಾದಾಗ ಇವನ ತಂದೆಯಾದ ಮಾದಿರಾಜನು ಬ್ರಾಹ್ಮಣಸಂಪ್ರದಾಯಕ್ಕೆ ಅನುಸಾರವಾಗಿ ಉಪನಯನವನ್ನು ಮಾಡಬೇಕೆಂದಿರಲು ಬಸವನು ತಂದೆಯನ್ನು ಕುರಿತು—

ಜನಕ ಕೇಳ್ ಶಿವದೀಕ್ಷೆಯಿಲ್ಲದ । ವನವೊಲೆನ್ನಂ ಮುಂಜಿಗಟ್ಟುವ ।
ಮನವಿದೆಂತಾಯ್ತಾಗ ನಿನಗವಿವೇಕಿಯಂದದಲಿ ॥
ಜನಿಸಿದಾಗಳೆ ಸಂಗಮೇಶ್ವರ । ನೆನಗೆ ಸದ್ಗುರುವಾಗಿ ಬೋಧಿಸಿ ।
ವಿನುತಶ್ರೀವಾಚಾರಮಾರ್ಗದೊಳಿರಿಸಿ ಸಲಹಿದನು ॥
ಸಾರಸಂಸಾರದ್ವಿಜತ್ವವ । ಪಾರಪತಿತವಲಾ ಸದಮಳಾ ।
ಚಾರಸದ್ಗುರುವಿನ ಕರಾಬ್ಜದಿ ಜನ್ಮವಾದಂಗೆ ॥
ಜಾತಿಗೋತ್ರಾತೀತಸದ್ಗುರು । ಜಾತನಂ ಬಹುಜಾತಿಗೋತ್ರಸ ।
ಮೇತದುಷ್ಕೃಯದಾಶ್ರಯನ ನೀನೆಂತು ಮಾಡಿದಪೆ ॥

ಎಂದು ಹೇಳಿ ಬ್ರಾಹ್ಮಣಕರ್ಮವನ್ನು ನಿರಾಕರಿಸಿದನು. ಬಳಿಕ ಕಲ್ಯಾಣಕ್ಕೆ ಹೋಗಿ ಬಲದೇವನ ಮಗಳಾದ ಗಂಗಾಂಬಿಕೆಯನ್ನು ಮದುವೆಯಾಗಿ ಬಲದೇವನ ಕಾಲಾನಂತರ ಬಿಜ್ಜಳನಿಗೆ ತಾನೇ ಮಂತ್ರಿಯಾದನು. ತರುವಾಯ ತನ್ನ ಅಧಿಕಾರದ ಬಲದಿಂದ ವೀರಶೈವ ಮತಕ್ಕೆ ಪ್ರಾಬಲ್ಯವನ್ನು ಉಂಟುಮಾಡಿ, ಆ ಮತಾವಲಂಬಿಗಳಿಗೆ ವಿಶೇಷವಾಗಿ ಸಹಾಯ ಮಾಡಿದನು. ಈ ಮತವು ಸ್ವಲ್ಪ ಕಾಲದಲ್ಲಿಯೇ ಕರ್ನಾಟಕಾಂಧ್ರದೇಶಗಳಲ್ಲಿ ಹರಡಿ

1. ಭೈರವೇಶ್ವರ ಕಾವ್ಯದ ಕಥಾಸೂತ್ರರತ್ನಾಕರ

ಕೊಂಡಿತು. ಹೀಗೆ ವೀರಶೈವರ ಮತವೂ ಅಧಿಕಾರವೂ ತನ್ನ ರಾಜ್ಯದಲ್ಲಿ ಹೆಚ್ಚಿದುದನ್ನು ನೋಡಿ ಜೈನನಾದ ಬಿಜ್ಜಳನು ಅಸಮಾಧಾನಪಟ್ಟು ಬಸವನನ್ನು ಅಧಿಕಾರದಿಂದ ತೆಗೆವುದಕ್ಕೆ ಪ್ರಯತ್ನಪಟ್ಟನು. ಆದರೆ ಈ ಪ್ರಯತ್ನವು ಕೈಗೂಡಲಿಲ್ಲ. ಬಸವನ ಅಧಿಕಾರವು ಮತ್ತೂ ಹೆಚ್ಚಿ ಅವನ ಕಡೆಯವರು ಹಗೆ ತೀರಿಸಿಕೊಳ್ಳುವುದಕ್ಕಾಗಿ ಬಿಜ್ಜಳನನ್ನು 1167 ರಲ್ಲಿ ಕೊಂದುಬಿಟ್ಟರು. ಬಿಜ್ಜಳನ ಮಗನಾದ ರಾಯಮುರಾರಿಸೋಯಿದೇವನು ಬಸವನನ್ನು ದಂಡಿಸಬೇಕೆಂದು ಸೈನ್ಯವನ್ನು ಕೂಡಿಸಲು ಬಸವನು ಉಳಿವೆಗೆ ಓಡಿಹೋದಂತೆಯೂ, ರಾಜನು ಬೆನ್ನಟ್ಟಿಕೊಂಡು ಹೋಗಿ ಆ ಸ್ಥಳಕ್ಕೆ ಮುತ್ತಿಗೆಹಾಕಲು ಬಸವನು ನಿರಾಶೆಯಿಂದ ಬಾವಿಯಲ್ಲಿ ಬಿದ್ದು 1168 ರಲ್ಲಿ [1] ಮೃತನಾದಂತೆಯೂ ಕೆಲವರು ಹೇಳುತ್ತಾರೆ. [2] ಆದರೆ ವೀರಶೈವಗ್ರಂಥಗಳಲ್ಲಿ ಈತನು ಕೂಡಲ ಸಂಗಮೇಶ್ವರಲಿಂಗದಲ್ಲಿ ಐಕ್ಯವಾದಂತೆ ಹೇಳಿದೆ. ಈತನು 88 ಪವಾಡಗಳನ್ನು ಮಾಡಿದಂತೆ ಅನೇಕ ವೀರಶೈವ ಗ್ರಂಥಗಳಲ್ಲಿ ಹೇಳಿದೆ.[3]

ಇವನ ವಿಷಯವಾಗಿ **ಬಸವಪುರಾಣ, ಬಸವರಾಜವಿಜಯ, ಮೂಲಬಸವ** ರಾಜಚಾರಿತ್ರ, **ಬಸವಶತಕ, ಬಸವಸ್ತೋತ್ರದ ತ್ರಿವಿಧಿ, ಬಸವಸ್ತೋತ್ರದ ವಚನ** ನೊದಲಾದ ಗ್ರಂಥಗಳು ಹುಟ್ಟಿವೆ.

ಈತನ ವಚನಗಳಲ್ಲಿ **ಕೂಡಲ ಸಂಗಮದೇವ** ಎಂಬ ಅಂಕಿತವು ಉಪಯೋಗಿಸಿದೆ.

ಇವನ ಗ್ರಂಥಗಳಲ್ಲಿ

## 1. ಷಟ್ಸ್ಥಲವಚನ.

ಇದು ವೀರಶೈವಸಿದ್ಧಾಂತಪ್ರತಿಪಾದಕವಾದ ಗ್ರಂಥ. ಇದರಲ್ಲಿ "ಭಕ್ತಸ್ಥಲವಚನ—527, ಮಾಹೇಶ್ವರಸ್ಥಲವಚನ–240, ಪ್ರಸಾದಿಸ್ಥಲವಚನ—30, ಪ್ರಾಣಲಿಂಗಿಸ್ಥಲವಚನ—58, ಶರಣಸ್ಥಲವಚನ—65, ಐಕ್ಯಸ್ಥಲವಚನ—40, ಅಂತೂ ಸ್ಥಲ 6 ಕ್ಕೆ ಸೇರಿದ ಮಿಶ್ರ 36 ಕ್ಕೆ ಸೇರಿದ ವಚನ 960" ಇವೆ.

ಇದರಿಂದ ಕೆಲವು ವಚನಗಳನ್ನು ಉದ್ಧರಿಸಿ ಬರೆಯುತ್ತೇವೆ:—

(1) ಉಳ್ಳವರು ಶಿವಾಲಯವ ಮಾಡಿಸೀಯರು. ನಾನೇ ಮಾಡುವೆ ಬಡವನಯ್ಯ ಎನ್ನ ಕಾಲೇ ಕಂಭ, ದೇಹವೇ ದೇಗುಲ, ಶಿರವೇ ಹೊನ್ನಕಳಸ ನೋಡಯ್ಯ. ಕೂಡಲ ಸಂಗಮದೇವಯ್ಯ ಕೇಳಯ್ಯ ಸ್ಥಾವರಕ್ಕಳ್ತಿವುಂಟು ಜಂಗಮಕ್ಕಳ್ತಿವುಂಟೆ? ॥ 373 ॥

1. ಚೆನ್ನಬಸವಪುರಾಣ 5 ನೆಯ ಕಾಂಡ 9 ನೆಯ ಸಂಧಿ 18 ನೆಯ ಪದ್ಯದಲ್ಲಿ—ಬಸವನು ಶಾಲಿವಾಹನ ಶಕ 707 ನೆಯ ರಕ್ತಾಕ್ಷಿಸಂವತ್ಸರದಲ್ಲಿ ಗತಿಸಿದಂತೆ ಹೇಳಿದೆ

2. *Journa lof the Bombay Br. R. A. S.* VIII, 97. Rice's *Mysore* I, 332.

3. ಚೆನ್ನಬಸವಪುರಾಣ 5 ನೆಯ ಕಾಂಡ 4 ನೆಯ ಸಂಧಿಯಲ್ಲಿ ಸಂಗ್ರಹವಾಗಿ ಹೇಳಿದೆ.

(2) ಹಾಲತೊಜ್ಜಿಗೆ ಬೆಲ್ಲದಂತಹ ಕೆಸಱು, ಸಕ್ಕರೆಯಂತಹ ಮಲ್ಲಿಲು, ತವರಾಜನಂತಹ ನೊರೆತೆರೆಗಳು. ಇಂತಪ್ಪ ಆದ್ಯರ ವಚನವಿರಲು ಬೇಜ್ಜಿ ಬಾವಿಯ ತೋಡಿ ಉಪ್ಪು ನೀರ ಸವಿದಂತಾಯಿತ್ತಯ್ಯಾ ಎನ್ನ ಯುಕ್ತಿ. ನಿಮ್ಮ ವಚನಂಗಳ ಕೇಳದೆ ಅನ್ಯಪುರಾಣಗಳ ಕೇಳಿ ಕೆಟ್ಟೆನಯ್ಯಾ ಕೂಡಲಸಂಗಮದೇವ ॥ 374 ॥

(3) ಇನ್ನೇನಿನ್ನೇನೆನಯ್ಯಾ ಎನ್ನ ಮನವೆಂಬ ಮರ್ಕಟನ ದಾಲ್ಭಿ ಘನವಾಯಿತ್ತು ; ಎನ್ನ ನಿಂದಲ್ಲಿ ನಿಲ್ಲಲೀಯದು ; ಎನ್ನ ಕುಳಿತಲ್ಲಿ ಕುಳ್ಳಿರಲೀಯದು ; ಕ್ಷಣದಲ್ಲಿ ಪಾತಾಳಕ್ಕೈದುತ್ತಿದೆ ; ಕ್ಷಣದಲ್ಲಿ ಆಕಾಶಕ್ಕೈದುತ್ತಿದೆ ; ಕ್ಷಣದಲ್ಲಿ ದಿಗ್ವಿಸೆಗೈದುತ್ತಿದೆ ; ಕೂಡಲ ಸಂಗಮದೇವ ಈ ಮನವೆಂಬ ಮರ್ಕಟನ ದಾಲ್ಭಿಯನೆಂದಿಗೆ ನೀಗಿ ಎಂದು ನಿಮ್ಮ ನೊಡಗೂಡುವೆನಯ್ಯಾ ॥ 375 ॥

(4) ಹೊನ್ನ ಹಾವುಗೆಯ ಮೆಟ್ಟಿದಾತನ, ಮಿಡಿಮುಟ್ಟಿದ ಕೆಂಜಿಡೆಯವನ, ಮೈಯಲ್ಲಿ ವಿಭೂತಿಯ ಪೂಸಿದವನ, ಕರದಲ್ಲಿ ಕಪಾಲವ ಹಿಡಿದವನ, ಶರೀರದಲರ್ಧವ ಸತಿಗೆ ಕೊಟ್ಟವನ, ಬಾಣನ ಬಾಗಿಲ ಕಾದವನ, ನಂಬಿಗೆ ಕುಂಟಣಿಯಾದವನ, ಚೋಳಂಗೆ ಹೊನ್ನ ಮಲ್ಲಿಯ ಕಜ್ಜಿದವನ, ಮಾಡಿದ ಪೂಜೆಯ ಕೊಂಬವನ, ಸದ್ಭಕ್ತರ ಹೃದಯದಲಿಪ್ಪವನ ಕೊಂಡುಬಾರೆಲವ್ವಾ ಕೂಡಲಸಂಗಯ್ಯನೆಂಬವನ ॥ 376 ॥

## 2. ಶಿಖಾರತ್ನವಚನ.

ಇದರಲ್ಲಿ 34 ವಚನಗಳಿವೆ. ಒಂದನ್ನು ಉದಾಹರಿಸುತ್ತೇವೆ :—

ಕಲ್ಲದೇವರು ದೇವರಲ್ಲ ; ಮಣ್ಣದೇವರು ದೇವರಲ್ಲ ; ಮರದದೇವರು ದೇವರಲ್ಲ ; ಪಂಚಲೋಹದಲ್ಲಿ ಮಾಡುವ ದೇವರು ದೇವರಲ್ಲ ; ಸೇತುರಾಮೇಶ್ವರ ಗೋಕರ್ಣ ಕಾಶಿ ಕೇದಾರ ಮೊದಲಾದ ಅಷ್ಟಾಷಷ್ಟಿಕೋಟಿಪುಣ್ಯತೀರ್ಥಂಗಳು ಪುಣ್ಯಕ್ಷೇತ್ರಂಗಳಲ್ಲಿ ಇಹ ದೇವರು ದೇವರಲ್ಲ ; ತನ್ನ ತಾನಱಿದು ತಾನಾರೆಂದು ತಿಳಿದಡೆ ತಾನೇ ದೇವ ನೋಡಾ ಅಪ್ರಮಾಣ ಕೂಡಲಸಂಗಮದೇವಾ ॥ 377 ॥

## 3. ಕಾಲಜ್ಞಾನವಚನ.

ಇದರಲ್ಲಿ 64 ಪದಗಳಿವೆ. ಗ್ರಂಥಾಂತ್ಯದಲ್ಲಿ—

ಕಾಲಕರ್ಮವ ದಹಿಪುದು ಬಸವಣ್ಣನು। ಪೇಳ್ದಿದ ಕಾಲಜ್ಞಾನವನು।
ಶೂಲಧರನ ಭಕ್ತರಾಲಿಸಿ ಕೇಳಲು। ಮೇಲೆ ಮುಕ್ತಿದೊರಕುವುದು॥

ಎಂಬ ಪದ್ಯವಿದೆ.

ಈ ಗ್ರಂಥದಿಂದ ಎರಡು ಪದಗಳನ್ನು ಉದ್ಧರಿಸಿ ಬರೆಯುತ್ತೇವೆ:—

ಸೃಷ್ಟಿಯೊಳಿರುತಿಹ ಭ್ರಷ್ಟಮನುಷರಲ್ಲಿ ಕೆಟ್ಟಪಾಪವು ಹಜ್ಜುವುದಕೆ।
ಹೊಟ್ಟುಹಾಜ್ಜಿಸಿ ಘಟ್ಟಿಯುಲ್ಲಿಸುವುದಕೆ ಶಿವಬಿಟ್ಟುಕಳುಹುವನು ಮಾರಿಯನು ॥ 378 ॥

ಮಬ್ಬಿಯಿಲ್ಲ ಬೆಳಯಿಲ್ಲ ಹೊಟ್ಟಿಯಿಲ್ಲ ಕೆಜ್ಜಿಯಿಲ್ಲ ನೆಬಿಲಿಲ್ಲ ಉದಕ ಮುನ್ನಿಲ್ಲ ।
ಮೊಳೆಯಿಲ್ಲ ಸೂರ್ಯನ ಕಳೆಯಿಲ್ಲ ಗೆಲವಿಲ್ಲ ಉಬ್ಬಿವಿಲ್ಲ ಆ ಪಾಪಿಗಳಿಗೆ ॥ 379 ॥

## 4. ಮಂತ್ರಗೋಪ್ಯ.

ಇದು ಹಾಡಿನ ರೂಪನಾಗಿದೆ. ಇದರಲ್ಲಿ ವೀರಶೈವಸಿದ್ಧಾಂತವು ಸಂಗ್ರಹವಾಗಿ ಹೇಳಿದೆ.

---

## ಚೆನ್ನಬಸವ. ಸು. 1160.

ಈತನು **ಷಟ್ಸ್ಥಲವಚನ, ಕರಣಹಸುಗೆ, ವಿಶ್ವಾರ್ಪಣ, ಪದಮಂತ್ರಗೋಪ್ಯ, ಮಂತ್ರಗೋಪ್ಯ, ಕಾಲಜ್ಞಾನ**—ಎಂಬ ಗ್ರಂಥಗಳನ್ನು ರಚಿಸಿದ್ದಾನೆ. **ಷಟ್ಚಕ್ರವರ್ತಿವಚನ, ರಾಜಯೋಗದವಚನ, ರುದ್ರಭಾರತದಸೃಷ್ಟಿ** ಎಂಬ ಗ್ರಂಥಗಳನ್ನೂ ಬರೆದಿರುವಂತೆ ತೋರುತ್ತದೆ.

ಇವನು ವೀರಶೈವಕವಿ: ಬಸವನ ಸಹೋದರಿಯಾದ ನಾಗಲಾಂಬಿಕೆಯ ಮಗನು. ಈತನು ಬಿಜ್ಜಳರಾಜನಿಂದ (1156—1167) ಮಾನಿತನಾಗಿದ್ದಂತೆಯೂ ಸೊನ್ನಲಿಗೆಯ ಸಿದ್ಧರಾಮನಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದಂತೆಯೂ ತಿಳಯಬರುತ್ತದೆ. ಈತನ ವಿಷಯವಾಗಿ **ಚೆನ್ನಬಸವಪುರಾಣ, ಚೆನ್ನಬಸವಸ್ತೋತ್ರದರಗಳೆ** ಮುಂತಾದ ಗ್ರಂಥಗಳು ಹುಟ್ಟಿವೆ.

ಇವನ ಗ್ರಂಥಗಳು ಪ್ರಾಯಶಃ ವಚನರೂಪವಾಗಿವೆ; ಎಲ್ಲವೂ ವೀರಶೈವಮತವನ್ನು ಪ್ರತಿಪಾದಿಸುತ್ತವೆ. ವಚನಗಳಲ್ಲಿ **ಕೂಡಲಚೆನ್ನಸಂಗಮದೇವ** ಎಂಬ ಅಂಕಿತವಿದೆ.

ಈ ಗ್ರಂಥಗಳಲ್ಲಿ—

## 1. ಷಟ್ಸ್ಥಲವಚನ.

ಇದು **ಬಸವನ ಷಟ್ಸ್ಥಲವಚನದಂತೆಯೇ** ಇದೆ. ಇದರಿಂದ ಒಂದೆರಡು ವಚನಗಳನ್ನು ತೆಗೆದು ಬರೆಯುತ್ತೇವೆ :—

(1) ಪರರಾಶೆಯೆಂಬ ಜ್ವರಹತ್ತಿ ನಾನು ಕಳವಳಿಸಿ ನುಡಿವೆನಯ್ಯಾ; ಹೊನ್ನು ಹೆಣ್ಣು ಮಣ್ಣು ಬಯಸಿ ವಿಕಳತೆಗೊಂಡಂತ ಪ್ರಲಾಪಿಸುತ್ತ ನುಡಿವೆನಯ್ಯಾ. ಈ ಕಳವಳವ ನಿಲಿಸಿ ನಿಮ್ಮ ಕರುಣಾಮೃತವೆಂಬ ಕಷಾಯವನೆಱೆದು ಪರರಾಶೆಯೆಂಬ ಜ್ವರವ ಮಾಣಿಸು ಬಸವಪ್ರಿಯ ಕೂಡಲಚೆನ್ನಸಂಗಮದೇವ ॥ 380 ॥

(2) ಆನೆಯನೇಱಿದ ಮಾವತಿಗ ಚಕ್ರೇಶ್ವರನಾಗಬಲ್ಲನೆ ? ಅಯ್ಯಾ. ವೇದಶಾಸ್ತ್ರಾಗಮಪುರಾಣಂಗಳನೋದಿ ಕೇಳಿ ಹೇಳ್ವುವರೆಲ್ಲರೂ ನಡೆನುಡಿಪೂರಾಯವಾದ ಪುರಾತನರಾಗಬಲ್ಲರೆ ? ಅಯ್ಯಾ. ತೊತ್ತುಲಕ್ಷಣವಿರಲು ನಾಣ್ಯವನುಡಿಸಿ ನವರತ್ನದಾಭರಣಂಗಳಂ ತೊಡಿಸಿ ದಂಡಿಗೆಯನೇಱಿಸಲು 'ಶಂಕರಸ್ಯ ಯಥಾ ಗೌರೀ' ಎನಿಸಿಕೊಳಬಲ್ಲಳೆ ? ಅಯ್ಯಾ. ಖ್ಯಾತಿಯಾಗಿ ನಿಜತತ್ವಂಗಳನೋದಿ ಕೇಳಿ ಹೇಳ್ದಿದಡೇನು ? ಅದಕ್ಕೆ ತಕ್ಕ ಅಱಿವು ಆಚಾರವು ನಡೆನುಡಿಯಲ್ಲಿ ನಿರ್ಣಯವಿಲ್ಲದಿದ್ದಡೆ ಕುಂಭೀಪಾಕ ನಾಯಕನರಕ ತಪ್ಪದು ಕೂಡಲಚೆನ್ನಸಂಗಮದೇವ ॥ 381 ॥

## 2. ಕರಣಹಸುಗೆ.

ಇದು ಗದ್ಯಗ್ರಂಥ; ವೇದಾಂತಕ್ಕೆ ಸಂಬಂಧಿಸಿದ ಸಾಂಕೇತಿಕ ಶಬ್ದಗಳನ್ನು ವಿವರಿಸುತ್ತದೆ. ಇದರೊಳಗೆ ಅಲ್ಲಲ್ಲಿ ಸಂಸ್ಕೃತ ಶ್ಲೋಕಗಳು ಅನುವಾದಮಾಡಲ್ಪಟ್ಟಿವೆ. ಈ ಗ್ರಂಥದಿಂದ ಸ್ವಲ್ಪ ಭಾಗವನ್ನು ಉದ್ಧರಿಸಿ ಬರೆಯುತ್ತೇವೆ:—

ಇನ್ನು ಪೃಥ್ವಿ ಸಲಿಲ ಪಾವಕ ಪವನ ಅಂಬರ ರವಿ ಶಶಿ ಆತ್ಮ ಎಂಬುವು ಅಷ್ಟಮೂರ್ತಿಯ ಮದಂಗಳು. ಇವಕ್ಕೆ ವಿವರ—ಪೃಥ್ವಿಮದವೆತ್ತಿದಲ್ಲಿ ತನುಗುಣಭರಿತನಾಗಿ ವಸ್ತ್ರಾಭರಣಾನುಲೇಪನತಾಂಬೂಲಮಂ ಬಯಸುತ್ತಿಹನು. ಸಲಿಲಮದವೆತ್ತಿದಲ್ಲಿ ಸಂಸಾರಭರಿತನಾಗಿ ಎನಗೆ ಬೇಕು, ಮನೆಗೆ ಬೇಕು, ಮಕ್ಕಳಿಗೆ ಬೇಕೆನುತ್ತಿಹನು. ಪಾವಕಮದವೆತ್ತಿದಲ್ಲಿ ಕಾಮರಸಭರಿತನಾಗಿ ಕರಸಬೇಕು, ನೋಡಬೇಕು, ನುಡಿಸಬೇಕು, ಆಲಿಂಗಿಸಬೇಕು ಎನುತ್ತಿಹನು. ಪವನಮದವೆತ್ತಿದಲ್ಲಿ ಪಯಣಭರಿತನಾಗಿ ಹೋದಹೆ, ಬಂದಹೆ, ಕೊಂಡಹೆ, ಕೊಟ್ಟಹ ಎನುತ್ತಿಹನು. ಅಂಬರಮದವೆತ್ತಿದಲ್ಲಿ ವಾಹನಭರಿತನಾಗಿ ಆನೆ ಬೇಕು, ಕುದುರೆ ಬೇಕು, ಅಂದಳ ಬೇಕು; ಸೇನೆ ತಳತಂತ್ರ ಛತ್ರಚಾಮರಂಗಳಂ ಬಯಸುತ್ತಿಹನು. ರವಿಮದವೆತ್ತಿದಲ್ಲಿ ಕೋಪಾಗ್ನಿಭರಿತನಾಗಿ ಸಾಧಿಸಿ ಭೇದಿಸಿ ಕೊಂದಹ ತಿಂದಹನೆನುತ್ತಿಹನು. ಶಶಿಮದವೆತ್ತಿದಲ್ಲಿ ಚಿಂತಾಭರಿತನಾಗಿ ಆದೀತೋ ಆಗದೋ, ಇದ್ದೀತೋ ಇಲ್ಲವೋ, ಏನೋ ಎಂತೋ ಎಂದು ಚಿಂತಿಸುತ್ತಿಹನು. ಆತ್ಮಮದವೆತ್ತಿದಲ್ಲಿ ಅಹಂಕಾರಭರಿತನಾಗಿ ಎನ್ನಿಂದ ಬಲ್ಲಿದರಿಲ್ಲ, ಎನಗೆ ಇನ್ನಾರು ಇದಿರಿಲ್ಲವೆಂದು ಅಹಂಭಾವದಿಂದ ಅಹಂಕರಿಸುತ್ತಿಹನು. ಇಂತಿವು ಅಷ್ಟಮೂರ್ತಿಯ ಮದಂಗಳು ॥ 382 ॥

## 3. ಮಿಶ್ರಾರ್ಪಣ.

ಇದೂ ಗದ್ಯಗ್ರಂಥ. ಇದರಿಂದ ಒಂದು ವಾಕ್ಯವನ್ನು ಉದ್ಧರಿಸಿ ಬರೆಯುತ್ತೇವೆ:—

ಇನ್ನು ಆಚಾರಲಿಂಗ ಮಿಶ್ರಷಡ್ವಿಧಲಿಂಗಾರ್ಪಣದ ವಿವರವೆಂತೆಂದೊಡೆ—ಆವುದಾನೊಂದು ಅರ್ಪಣಕ್ಕೆ ಬೇಕಾದುದು ಬೇರು ಗೆಣಸು ಮೊದಲಾದ ಗಂಧವನಱಿವುದು ಆಚಾರಲಿಂಗದಲ್ಲಿ. ಮರದ ತಿಗುಡು ಹಗಿನ ಮೊದಲಾದ ಗಂಧವನಱಿವುದು ಗುರುಲಿಂಗ

ದಲ್ಲಿ. ಚಿಗುರು ಮೊದಲಾದ ಪತ್ರೆಯು ಗಂಧವನಜುವುದು ಶಿವಲಿಂಗದಲ್ಲಿ. ಮೊಗ್ಗೆ ಮೊದಲಾದ ಪುಷ್ಪದ ಗಂಧವನಜುವುದು ಜಂಗಮಲಿಂಗದಲ್ಲಿ. ಕಾಯಿ ಹಣ್ಣು ಮೊದಲಾದ ಫಲಗಳ ಗಂಧವನಜುವುದು ಪ್ರಸಾದಲಿಂಗದಲ್ಲಿ. ಇವೆಲ್ಲವಜಲ್ಲಿಯೂ ಗಂಧವನಜುವುದು ಮಹಾಲಿಂಗದಲ್ಲಿ. ಇಂತೀ ಆಚಾರಲಿಂಗದ ವಿಶ್ವಾರ್ಪಣ ॥ 383 ॥

## 4. ಪದಮಂತ್ರಗೋಪ್ಯ.

ಇದು ಪದಗಳ ರೂಪದಲ್ಲಿದೆ. ಇದರಲ್ಲಿ ಚೆನ್ನಬಸವನು ಸಿದ್ಧರಾಮನಿಗೆ "ಶಿವಯೋಗಸುಮಾರ್ಗಲಕ್ಷಣ" ವನ್ನು ಬೋಧಿಸುತ್ತಾನೆ. ಇದರಿಂದ ಒಂದೆರಡು ಪದಗಳನ್ನು ಉದ್ಧರಿಸಿ ಬರೆಯುತ್ತೇವೆ :—

ನೋಡನೋಡಲು ಲಿಂಗದಾಕಾರ ತಾನಾಗಿ । ನಾದಬಿಂದುವಿನ ಕಳೆ ಶಿವಕಳೆಯೊಳು ।
ಕೂಡೆ ಬಲಿದಾಲಿಂಗ ತಾನು ತಾನಾದಲ್ಲಿ । ನಾದಬಿಂದುಕಳಾತೀತನಾದ ॥ 384 ॥
ಸಂಚದೋವರಿಯೊಳಗೆ ಪಂಚಸೂತ್ರವು ಮಿಂಚಿ । ಕಂಚುಮಿಂಚಿನ ಸಂಚಲವ ನುಂಗಿ ।
ಪಂಚಸೂತ್ರವು ಮಿಂಚಿ ಸಂಚದೋವರಿಗೊಂಡು । ಪಂಚಮುಖಪರಮಗುರುವಾದ ಶರಣ
॥ 385 ॥

## 5. ಮಂತ್ರಗೋಪ್ಯ.[1]

ಈ ಗ್ರಂಥದಲ್ಲಿ 27 ಹಾಡುಗಳಿವೆ; ಒಂದೆರಡನ್ನು ಉದ್ಧರಿಸಿ ಬರೆಯುತ್ತೇವೆ :—

ಮುಟ್ಟಿದಲ್ಲಿ ಮುಟ್ಟದಲ್ಲಿ ತೂಟ್ಟುಬಿಟ್ಟು ಹಣ್ಣಿನಂತೆ ।
ಬಟ್ಟಬಯಲ ತುಟ್ಟತುದಿಯ ಮೆಟ್ಟಿನಿಂದನು ॥
ಸೃಷ್ಟಿಯಂತೆ ತನುಗುಣದಂಗಲಿಂಗವಾದಿಯಜು'ದು ।
ಪುಟ್ಟುಗೆಟ್ಟ ಬಟ್ಟಬಯಲ ಮೆಟ್ಟಿನಿಂದನು ॥ 386 ॥
ತನುಮನಧನವೆಂಬ ತ್ರಿವಿಧವನು ಮೂಜ್ರುಲಿಂಗ ।
ದನುವನನುಕರಿಸಿ ಅವಜಿಕೊಳರ್ಪಿಸುವನು ॥
ತನುಮುಟ್ಟಿ ಮನಮುಟ್ಟಿ ಧನಮುಟ್ಟಿಯರ್ಪಿಸುವ ।
ಅನುವನಜು'ದಾತನೆ ತುರೀಯಕೊಪ್ಪುವನು ॥ 387 ॥

## 6. ಕಾಲಜ್ಞಾನ.

ಇದು ಬಸವನ ಕಾಲಜ್ಞಾನದಂತೆಯೇ ಇದೆ.

## 7. ರುದ್ರಭಾರತದ ಸೃಷ್ಟಿ.

ಇದು ಗದ್ಯಗ್ರಂಥ; ಅಲ್ಲಲ್ಲಿ ಸಂಸ್ಕೃತ ಶ್ಲೋಕಗಳು ಉದಾಹೃತವಾಗಿವೆ. ಇದರಲ್ಲಿ ಸೃಷ್ಟಿಕ್ರಮ, ಯುಗ ಮೊದಲಾದ ವಿಷಯಗಳು ಹೇಳಿವೆ.

---

1 2–5 ಗ್ರಂಥಗಳಿಗೆ ಕನ್ನಡ ವ್ಯಾಖ್ಯಾನಗಳಿವೆ.

## ಪ್ರಭುದೇವ. ಸು. 1160.

ಈತನು **ಷಟ್ಸ್ಥಲಜ್ಞಾನಚಾರಿತ್ರ, ಶೂನ್ಯಸಂಪಾದನೆ, ಮಂತ್ರಗೋಪ್ಯ, ಸೃಷ್ಟಿಯವಚನ, ಬೆಡಗಿನವಚನ, ಮಂತ್ರಮಾಹಾತ್ಮ್ಯ, ಕಾಲಜ್ಞಾನವಚನ** ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಇವನಿಗೆ ಆಲ್ಲಮ ಎಂಬ ಹೆಸರೂ ಉಂಟು; **ಮಾಯಾಕೋಳಾಹಳ** ಎಂಬ ಬಿರುದೂ ಇದ್ದಂತೆ ತಿಳಿಯುತ್ತದೆ. ಈತನ ವಿಷಯವಾಗಿ **ಚೆನ್ನಬಸವಪುರಾಣ, ಪ್ರಭುಲಿಂಗಲೀಲೆ** ಮೊದಲಾದ ಗ್ರಂಥಗಳಿಂದ ಈ ಯಂಶಗಳು ತಿಳಿಯಬರುತ್ತವೆ :—

ಇವನು ವೀರಶೈವಕವಿ; ಈತನ ತಂದೆ ನಿರಹಂಕಾರ; ತಾಯಿ ಸುಜ್ಞಾನಿ. ಇವನ ಚಿತ್ತಸ್ಥೈರ್ಯವನ್ನು ಪರೀಕ್ಷಿಸುವುದಕ್ಕಾಗಿ ಪಾರ್ವತೀದೇವಿ ತನ್ನ ತಾಮಸಗುಣವನ್ನು ಸ್ತ್ರೀರೂಪವಾಗಿ ಹುಟ್ಟುವಂತೆ ಅಟ್ಟಿದಳು. ಅದು ಬಿಳವೊಲನಾಡಿನ ಬನವಸೆಯ ರಾಜನಾದ ಮಮಕಾರನ್ಪನ ಪತ್ನಿ ಮೋಹಿನೀದೇವಿಯ ಗರ್ಭದಲ್ಲಿ ಮಾಯೆ ಎಂಬ ಹೆಣ್ಣುಮಗಳಾಗಿ ಹುಟ್ಟಿತು. ಆ ಹೆಣ್ಣುಮಗಳು ಈತನನ್ನು ಮೋಹಗೊಳಿಸಲು ಯತ್ನಿಸಿದಾಗ ಈತನು ಅವಳನ್ನು ತಿರಸ್ಕರಿಸಿದನು. ಇವನು ಅನಿಮಿಷನ ಕೈಯ ಲಿಂಗವನ್ನು ಸ್ವೀಕರಿಸಿದನು; ಗೊಗ್ಗಯ್ಯ ಮುಕ್ತಾಯಿಗಳಿಗೆ ಬೋಧಿಸಿ ಮುಕ್ತಿಯನ್ನು ಕೊಟ್ಟನು; ಸೊನ್ನಲಿಗೆಗೆ ಹೋಗಿ ಸಿದ್ಧರಾಮನಿಗೆ ಶಿವತತ್ತ್ವವನ್ನು ತಿಳಿಸಿ ಅವನೊಡನೆ ಕಲ್ಯಾಣಕ್ಕೆ ಹೋಗಿ ಬಸವನಿಂದ ಸತ್ಕೃತನಾಗಿ ಶೂನ್ಯಪೀಠವನ್ನು ಪಡೆದನು. ಬಳಿಕ ಶ್ರೀಶೈಲಕ್ಕೆ ಹೋಗಿ ಅಲ್ಲಿ ಮಹಾದೇವಿಗೆ ನಿರ್ವಾಣಪದವಿಯನ್ನು ಉಪದೇಶಿಸಿ ಬಸವನಿಗಿಂತ ಸ್ವಲ್ಪ ಕಾಲ ಮುಂಚೆ ಕದಳಿಯಲ್ಲಿ ಬಯಲಾದನು.

ಇವನು ವೀರಶೈವಗುರುಗಳಲ್ಲಿ ಬಹಳ ಪ್ರಖ್ಯಾತನು; "ಶ್ರೀಮದ್ವೀಶಿಕ ಷಟ್ಸ್ಥಲಚಕ್ರವರ್ತಿ ಬ್ರಹ್ಮಾನಂದ ಪರಶಿವಮೂರ್ತಿ ವಿರಕ್ತಶಿಖಾಮಣಿ ಮಾಯಾಕೋಳಾಹಳ ಪ್ರಭುದೇವರು" ಎಂದು ಕೆಲವರು ವೀರಶೈವಗ್ರಂಥಕರ್ತರು ಈತನನ್ನು ವಿಶೇಷಿಸಿ ಬರೆದಿದ್ದಾರೆ. ಇವನ ವಿಷಯವಾಗಿ **ಪ್ರಭುಲಿಂಗಲೀಲೆ, ಪ್ರಭುದೇವರ ಪುರಾಣ, ಪ್ರಭುನಟನತಾರಾವಳಿ, ಪ್ರಭುಚರಿತ್ರೆ, ಪ್ರಭುಗೀತಿ** ಮೊದಲಾದ ಗ್ರಂಥಗಳು ಹುಟ್ಟಿವೆ.

ಈತನ ವಚನಗಳಲ್ಲಿ **ಗುಹೇಶ್ವರ** ಎಂಬ ಅಂಕಿತವು ದೊರೆಯುತ್ತದೆ.

ಇವನ ಗ್ರಂಥಗಳಲ್ಲಿ—

### 1. ಷಟ್ಸ್ಥಲಜ್ಞಾನಚಾರಿತ್ರ.

ಇದು ಬಸವ, ಚೆನ್ನಬಸವ, ಇವರುಗಳ ಷಟ್ಸ್ಥಲವಚನದಂತೆಯೇ ಇದೆ. ಇದರಲ್ಲಿ 694 ವಚನಗಳಿವೆ. ಇದಕ್ಕೆ ಒಂದು ಕನ್ನಡ ವ್ಯಾಖ್ಯಾನವೂ ಇದೆ.

**ಈ ಗ್ರಂಥವನ್ನು ಗುಹೇಶ್ವರವಚನ ಎಂದೂ ಕರೆವಂತೆ ತೋರುತ್ತದೆ. ಇದರಿಂದ ಕೆಲವು ವಚನಗಳನ್ನು ಉದ್ಧರಿಸಿ ಬರೆಯುತ್ತೇವೆ:—**

(1) ಕೊಸಮುತ್ತಿನ ಸುಪ್ಪಾಣಿಯಂತೆ ಆಲಿಂಗ್ಯೈಕ್ಯವು ; ಸ್ಫಟಿಕದ ಘಟದೊಳಗಣ ಪ್ರಭೆಯಂತೆ ವಾಯುವಿನ ಸಂಚದ ಪರಿಮಳದ ನಿಲವಿನಂತೆ ಲಿಂಗೈಕ್ಯನ ಸಂಬಂಧವದು ಗುಹೇಶ್ವರ ॥ 388 ॥

(2) ಪಾತಾಳದಿಂದತ್ತ ಮಾತ ಬಲ್ಲವರಿಲ್ಲ. ಗಗನದಿಂದಾಮೇಲೆ ಅನುಭಾವಿ ತಾನಿಲ್ಲ. ಒಳಗಣ ಜ್ಯೋತಿಯ ಬೆಳಗಬಲ್ಲವರಿಲ್ಲ. ಹೊಜಗಣ ಹೊಜಗನು ಅಜ್ಞಯಬಲ್ಲವರಿಲ್ಲ. ಹಿಂದಣ ಹಿಂದನು ಮುಂದಣ ಮುಂದನು ತಂದೆ ತೋಜ್ಞದನು ನಮ್ಮ ಗುಹೇಶ್ವರ ॥389॥

(3) ಸುತ್ತಿ ಸುತ್ತಿ ಬಂದಡಿಲ್ಲ ; ಲಕ್ಷಗಂಗೆಯ ಮಿಂದಡಿಲ್ಲ ; ತುಟ್ಟತುದಿಯ ಮೇರುಗಿರಿಯ ಮೆಟ್ಟಿ ಕೂಗಿದಡಿಲ್ಲ ; ಸತ್ಯನೇಮದಿಂದ ತನುಮುಟ್ಟಿಕೊಂಡಡಿಲ್ಲ ; ನಿಚ್ಚಕ್ಕೆ ಮನವನಂದಂದಿಂಗೆ ಅತ್ತಿತ್ತ ಹರಿಯಲೀಯದೆ ಚಿತ್ತದಲ್ಲಿ ಧರಿಸಬಲ್ಲಡೆ ಬಚ್ಚಬಜ್ಞಯ ಬೆಳಗು ಗುಹೇಶ್ವರಲಿಂಗವು ॥ 390 ॥

(4) ಕರಿ ಸ್ಪರ್ಶನೇಂದ್ರಿಯದಿಂದ ಬಂಧನವಡೆದಜ್ಞಿಯಿತ್ತು ; ಪತಂಗನು ರೂಪೇಂದ್ರಿಯದಿಂದ ಬಂಧನವಡೆದಜ್ಞಿಯಿತ್ತು ; ಕುರಂಗನು ಶ್ರೋತ್ರೇಂದ್ರಿಯದಿಂದ ಬಂಧನವಡೆದಜ್ಞಿಯಿತ್ತು ; ಮತ್ಸ್ಯವು ಜಿಹ್ವೇಂದ್ರಿಯದಿಂದ ಬಂಧನವಡೆದಜ್ಞಿಯಿತ್ತು ; ಇಂತೀಯೊಂದೊಂದು ಇಂದ್ರಿಯೋದ್ರೇಕದಿಂದ ಒಂದೊಂದು ಪ್ರಾಣಿ ಪ್ರಳಯವಾಯಿತ್ತು ; ಪಂಚೇಂದ್ರಿಯಂಗಳ ಒಂದು ಘಟದಲಿ ತಾಳಿಹ ಮನುಷ್ಯಪ್ರಾಣಿಗಳಿಗೆ ಮಜಿವೆಯೆಡೆಗೊಂಡು ದೇಹಮೋಹಭ್ರಾಂತು ನುಸುಳಕೆ ಮಾಯೆಯ ಬಾಯ ತುತ್ತಹುದು ಚೋದ್ಯವೇನು ಹೇಳಿಪಾ ಗುಹೇಶ್ವರ ॥ 391 ॥

## 2. ಶೂನ್ಯಸಂಪಾದನೆ.

ಇದರಿಂದ ಒಂದು ವಚನವನ್ನು ಉದ್ಧರಿಸಿ ಬರೆಯುತ್ತೇವೆ:—

ಕನಕಾಚಲದಲ್ಲಿ ವಿನನಾಯಕನೆಂಬ ರತ್ನ ಹುಟ್ಟಿ ಅಹುದಲ್ಲ ಎಂಬ ಕೊಳಗದ ಕೊರಳಲ್ಲಿ ಅಳಿಯುತ್ತೈದಾರೆ. ಕೊಳಗದ ಕೊರಳು ತುಂಬಿ ಅಳಿವಾತನ ಹೃದಯ ತುಂಬಿ ಗುಹೇಶ್ವರಲಿಂಗದ ಕಂಗಳು ತುಂಬಿ ಮಂಗಳಮಯವಾಯ್ತು. ಭಕ್ತಿಯೇ ಓಗರವಾಗಿ ಸತ್ಯವೇ ಮೇಲೋಗರವಾಗಿ ನಿಜತತ್ತ್ವವೇ ಸವಿಯಾಗಿ ಗುಹೇಶ್ವರಲಿಂಗಕ್ಕಿಕ್ಕಬಲ್ಲವ ಸಂಗನ ಬಸವಣ್ಣನಲ್ಲದಿಲ್ಲ ॥ 392 ॥

## 3. ಮುಂತ್ರಗೋಪ್ಯ.

ಇದರಲ್ಲಿ 27 ಪದಗಳಿವೆ; ಒಂದೆರಡನ್ನು ತೆಗೆದು ಬರೆಯುತ್ತೇವೆ:—

**ಹಜ್ಜೆಯಿಲ್ಲದ ಮೃಗವು ಹಲವು ದ್ವೀಪಕೆಹೋಗಿ । ವೆಜ್ಜವಿಲ್ಲದ ಮಣಿಯನೋಡಿ ಕಂಡು,**
**ಪ್ರಜ್ಞಲಿಸಿ ಬೆಳಗುವಾರಚನೆಯಲಿ ಹೊಸೆದು । ವೆಜ್ಜವಿಲ್ಲದ ಮಣಿಯ ಪವಣಿಸಿದನು ॥393॥**

ಹೃತ್ಕಮಲಕರ್ಣಿಕಾವಾಸದೊಳಗಿರುತಿರ್ಪ। ಇಕ್ಕೆಹಿಕ್ಕೆಗಳ ತಾನೊಂದುಮಾಡಿ।
ಸಿಕ್ಕಿಲ್ಲ ತೊಡಕಿಲ್ಲ ದರ್ಕಜಲಪಂಜರವ। ಮಿಕ್ಕುಮಿಾಱಿಯೆನಿಂದ ಪರಮಯೋಗಿ ॥394॥

ಎಂಟಿಸಳ ಕಮಲದಾ ನವಬ್ರಹ್ಮಪುರದೊಳಗೆ। ಎಂಟು ಬೀದಿಯೊಳೆಂಟು ಕರಿಗಳುಂಟು।
ಎಂಟುಕರಿಗಳ ಸುಟ್ಟು ಕಂಟಕಂಗಳ ಗೆಲಿದು। ದಾಂಟಿದೆನು ಸಂಸಾರಸಾಗರವನು ॥395॥

## 4. ಸೃಷ್ಟಿಯವಚನ.[1]

ಇದು ಗದ್ಯಗ್ರಂಥ. ಇದರಿಂದ ಒಂದು ವಾಕ್ಯವನ್ನು ಉದಾಹರಿಸುತ್ತೇವೆ:—

ತತ್ಪದವೇ ಲಿಂಗ ತ್ವಂಪದವೇ ಅಂಗ ಈ ಎರಡಱ ಐಕ್ಯವೇ ಅಸ ॥ 396 ॥

## 5. ಬೆಡಗಿನ ವಚನ.

**ಜ್ಯೋತಿರ್ಮಯಶಾಂಭವೀಜ್ಞಾನದೀಕ್ಷಾಜೋಧೆಯೆಂಬ** ಗ್ರಂಥದಲ್ಲಿ "ವೀರಶೈವವು ಈಶ್ವರಪ್ರೋಕ್ತವು. ಅದನ್ನು ಅಲ್ಲಮಪ್ರಭು ಕಲ್ಯಾಣಸಟ್ಟಣದಲ್ಲಿ ಬಸವಾದಿ ಪ್ರಮಥಗಣಂಗಳಿಗೆ ಎರಡೆಂಬತ್ತುಕೋಟಿ ಬೆಡಗಿನ ವಚನಗಳಿಂದ ಉಪದೇಶ ಮಾಡಿದರು" ಎಂದಿದೆ.

---

## ಮಡಿವಳ ಮಾಚಯ್ಯ. ಸು. 1160.

ಈತನು **ವಚನ**ಗಳನ್ನು ಬರೆದಿದ್ದಾನೆ. ಒಂದು **ಕಾಲ**ಜ್ಞಾನವನ್ನೂ ಬರೆದಿರುವಂತೆ ತೋರುತ್ತದೆ.

ಇವನು ವೀರಶೈವಕವಿ; ಇವನಿಗೆ ಮಡಿವಾಳಯ್ಯ ಎಂಬ ಹೆಸರೂ ಉಂಟು. ಈತನ ವಿಷಯವಾಗಿ ಬಸವಪುರಾಣದಿಂದ ಈಯಂಶಗಳು ತಿಳಿಯುತ್ತವೆ:—

ಇವನು ಹಿಪ್ಪಲಿಗೆಯಲ್ಲಿ ಪುಟ್ಟಿದವನು: ಕಲ್ಯಾಣದಲ್ಲಿ ಜಂಗಮರ ಬಟ್ಟೆಯನ್ನು ಒಗೆಯುತ್ತ ಮಡಿವಳಕಾಯಕವನ್ನು ಮಾಡುತ್ತಿದ್ದನು. ಒಂದು ದಿವಸ ಇವನು ಮಡಿಗಳನ್ನು ತೆಗೆದುಕೊಂಡು ಹೋಗುತ್ತಿರುವಾಗ ಇದಿರಲ್ಲಿ ಬರುತ್ತಿದ್ದ ಒಬ್ಬ ಭವಿ ಅವುಗಳನ್ನು ಸೋಕಲು ಅವನನ್ನು ಕೊಂದುಹಾಕಿದನು. ಪಟ್ಟಣದ ಜನರು ಬಿಜ್ಜಳರಾಯನಲ್ಲಿ ದೂರನ್ನು ಹೇಳಿಕೊಳ್ಳಲು ದೊರೆ ಮಾಚಯ್ಯನನ್ನು ಕೊಲ್ಲುವಂತೆ ಭಟರಿಗೆ ಆಜ್ಞಾಪಿಸಿದನು. ಆಗ ಸಭೆಯಲ್ಲಿದ್ದ ಬಸವನು—ಶಿವಶರಣರ ಮಹಿಮೆ ತಿಳಿಯದೆ? ಏತಕ್ಕೆ ದುಡಿಯುತ್ತೀಯೆ—ಎನಲು, ರಾಜನು ಸಿಟ್ಟುಗೊಂಡು ಮಾವಂತರನ್ನು ಕರೆಯಿಸಿ ಮಾಚಯ್ಯನನ್ನು ಆನೆಯಿಂದ ಮೆಟ್ಟಿಸಿ ಕೊಲ್ಲುವಂತೆ ಆಜ್ಞಾಪಿಸಿದನು. ಮಾಚಯ್ಯನು ಆ ಆನೆಯೊಡನೆ ಕಾದಿ ಅದನ್ನು ಸಂಹರಿಸಿದನು.

---

1. 2-4 ಗ್ರಂಥಗಳಿಗೂ ಕನ್ನಡ ವ್ಯಾಖ್ಯಾನಗಳಿವೆ.

ಇವನ ವಿಷಯವಾಗಿ **ಮುಡಿವಾಳಯ್ಯನ ಚರಿತೆ, ಮುಡಿವಾಳಯ್ಯನ ತಾರಾವಳಿ** ಮೊದಲಾದ ಗ್ರಂಥಗಳು ಹುಟ್ಟಿವೆ.

## ವಚನಗಳು.

ಇವನ ವಚನಗಳ ಸಂಖ್ಯೆ 100. ಇವುಗಳಲ್ಲಿ **ಅರ್ಕೇಶ್ವರಲಿಂಗ** ಎಂಬ ಅಂಕಿತವಿದೆ. ಒಂದೆರಡು ವಚನಗಳನ್ನು ತೆಗೆದು ಬರೆಯುತ್ತೇವೆ:—

(1) ತನು ನಿರ್ವಾಣ, ಮನ ಸಂಸಾರ; ಮಾತು ಬ್ರಹ್ಮ, ನೀತಿ ಅಧಮ; ಅದೇತಱ ಅಜ್ಞವು ಘಾತುಕನ ಕೈಯ ಕತ್ತಿಯಂತೆ. ಅದು ನಿಹಿತವಲ್ಲ ಅರ್ಕೇಶ್ವರಲಿಂಗವ ಅಱಿವುದಕ್ಕೆ ॥ 397 ॥

(2) ನೆನಹು ನಿಜದಲ್ಲಿ ನಿಂದಲ್ಲಿ ಸುರುಳಿನ ತೊಡಕುಗಟ್ಟುಂಟೆ? ಅಂಬರವ ನಡರಿದವಂಗೆ ಬೀಜ್ರುಂದು ಇಂಬುಮಾಡಲುಂಟೆ? ವಸ್ತುವಿನ ಅಂಗದಲ್ಲಿ ಸರ್ವವು ಹಿಂಗಿದಲ್ಲಿ ಅರ್ಕೇಶ್ವರಲಿಂಗವ ಕಟ್ಟುವುದಕ್ಕೆ ತಾವುಂಟೆ? ॥ 398 ॥

---

## ಸಿದ್ಧರಾಮ. ಸು. 1160.

ಈತನು ವಚನಗಳು, **ಮಿಶ್ರಸ್ತೋತ್ರದ ತ್ರಿವಿಧಿ, ಬಸವಸ್ತೋತ್ರದ ತ್ರಿವಿಧಿ, ಅಷ್ಟಾವರಣಸ್ತೋತ್ರದ ತ್ರಿವಿಧಿ, ಕಾಲಜ್ಞಾನ, ಮಂತ್ರಗೋಪ್ಯ** ಎಂಬ ಗ್ರಂಥಗಳನ್ನು ಬರೆದಿದ್ದಾನೆ.

ಇವನು ವೀರಶೈವಕವಿ; ಈತನ ವಿಷಯವಾಗಿ **ರಾಘವಾಂಕನು** (ಸು. 1165) ಬರೆದಿರುವ **ಸಿದ್ಧರಾಮಪುರಾಣದಿಂದ** ಈಯಂಶಗಳು ತಿಳಿಯಬರುತ್ತವೆ:—

ಈತನು ಸೊನ್ನಲಗೆಯಲ್ಲಿ 60 ವರ್ಷ ವಯಸ್ಸಾಗಿದ್ದ ಸುಗ್ಗವ್ವೆಗೂ ಮುದ್ದಗೌಡನಿಗೂ ಮಗನಾಗಿ ಜನಿಸಿದನು. ಆ ಕಾಲದಲ್ಲಿ ಸೊನ್ನಲಿಗೆಯಲ್ಲಿ ನನ್ನಪ್ಪನೆಂಬವನು ದೊರೆಯಾಗಿಯೂ, ಚಾಮಲದೇವಿ ಎಂಬವಳು ರಾಣಿಯಾಗಿಯೂ ಇದ್ದರು. ಸಿದ್ಧರಾಮನು ಜ್ಞಾನಭಕ್ತಿವೈರಾಗ್ಯವುಳ್ಳವನಾಗಿ ಸೊನ್ನಲಗೆಯಲ್ಲಿ ಒಂದು ಕೆರೆಯನ್ನು ಕಟ್ಟಿಸಿ, ಅನೇಕ ಲಿಂಗಗಳನ್ನು ಪ್ರತಿಷ್ಠೆಮಾಡಿ, ವಿದ್ಯಾಸಮುದ್ರನೆಂಬ ಬಿರುದನ್ನು ವಹಿಸಿದ್ದ ಕರ್ಪರನೆಂಬ ಜೋಗಿಯನ್ನು ಸೋಲಿಸಿ, ತಾನು ಕಟ್ಟಿಸಿದ ಕೆರೆಯ ಮಧ್ಯದಲ್ಲಿ ಸಮಾಧಿಯನ್ನು ಮಾಡಿಸಿಕೊಂಡು, ಅಲ್ಲಿಯೇ ಬಯಲಾದನು.

ಇವನ ಜನನವನ್ನು ಸುಗ್ಗವ್ವೆಗೆ ರೇವಣಸಿದ್ಧನು ಸೂಚಿಸಿದಂತೆಯೂ ಸಿದ್ಧರಾಮನು ಚೆನ್ನಬಸವನಿಂದ ಲಿಂಗದೀಕ್ಷೆಯನ್ನು ತಾಳಿ ತತ್ತ್ವೋಪದೇಶವನ್ನು ಪಡೆದಂತೆಯೂ ಇತರ ವೀರಶೈವಗ್ರಂಥಗಳಿಂದ ತಿಳಿಯುತ್ತದೆ.

ಈತನ ವಚನಗಳಲ್ಲಿ **ಕಪಿಲಸಿದ್ಧಮಲ್ಲಿಕಾರ್ಜುನ** ಎಂಬ ಅಂಕಿತವಿದೆ. ತ್ರಿವಿಧಿಗಳಲ್ಲಿ **ಯೋಗಿನಾಥ** ಎಂಬ ಸಂಬೋಧನವಿದೆ. ಈ ಯೋಗಿನಾಥ ಶಬ್ದವು ಜೆನ್ನಬಸವನಿಗೆ ಅನ್ವಯಿಸುತ್ತದೆ.

ಇವನ ಗ್ರಂಥಗಳಲ್ಲಿ—

## 1. ವಚನಗಳು.

ಈ ವಚನಗಳಲ್ಲಿ ಎರಡು 1256 ರಲ್ಲಿ ಬರೆದ ಸೊರಬದ 561 ನೆಯ ಶಾಸನದ ಆದಿಭಾಗದಲ್ಲಿ ಅನುವಾದಮಾಡಲ್ಪಟ್ಟಿವೆ. ಈ ಶಾಸನದಲ್ಲಿ ಅಭಿನವ ಶ್ರೀ ಶೈಲವೆನಿಸಿ ಸೊನ್ನಲಿಗೆಯಪುರದ ಕಪಿಲಸಿದ್ಧಮಲ್ಲಿಕಾರ್ಜುನದೇವರಿಗೆ ಬೀರರಸನು ಗ್ರಾಮವನ್ನು ಬಿಟ್ಟಂತೆ ಹೇಳಿದೆ ಈ ಗ್ರಂಥದಿಂದ ಒಂದೆರಡು ವಚನಗಳನ್ನು ಉದ್ಧರಿಸಿ ಬರೆಯುತ್ತೇವೆ:—

(1) ಸಂಸಾರವೆಂಬ ಸರ್ಪನ ಅಣಲೊಳಗಿಹೆನಯ್ಯಾ. ಆವಾಗ ನುಂಗೀತೆಂದ ಜಾಯೆ; ಆವಾಗ ಉಗುಳ್ತೀತೆಂದಜಾಯೆನಯ್ಯಾ. ಅದರ ಬಾಯಿಂದೆನ್ನ ತೆಗೆದು ಕಾಯಯ್ಯಾ ಕಪಿಲಸಿದ್ಧಮಲ್ಲಿಕಾರ್ಜುನ ॥ 399 ॥

(2) ಧರೆಯ ದೆಸೆವಳಯವೆಲಾ ತನಗಾದದಂ ನಿಲ್ಲಳು; ಎನಿತು ತ್ರಿಭುವನರಾಜ್ಯ ಪದಂಗಳು ತನಗಾದದಂ ನಿಲ್ಲಳು; ಅನಿತಱಿಂಗಳಂ ತೃಪ್ತಿವಡೆಯಳು. ಈಯಾಶೆಯೆಂಬ ವಳಿಂದಲೆ ನಿಮ್ಮೆಡೆಗಾಣದಿರ್ಪೆ. ಈಯಾಶೆಯೆಂಬ ಪಾತಕೆಯನೆಂದಿಂಗೆ ನೀಗಿ ನಿಮ್ಮನೊಡಗೂಡಿ ಬೀಜುವಾಗದೆಂದಿರ್ಪೆನೋ ಕಪಿಲಸಿದ್ಧಮಲ್ಲಿಕಾರ್ಜುನ ॥ 400 ॥

## 2. ಮಿಶ್ರಸ್ತೋತ್ರದ ತ್ರಿವಿಧಿ.

ಇದರಲ್ಲಿ 109 ಪದ್ಯಗಳಿವೆ. ಎರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

ಇಹಪರದ ಪರಿಯನು ಅಯ್ಯ ನೀನೇ ಬಲ್ಲೆ । ನಿಮ್ಮ ಶರಣನು ಬಲ್ಲ ಪ್ರಭುರಾಯನು ।
ಆತನನುಮತದಿಂದ ಮಾಯೆಯನು ಗೆಲುವುದನು । ನೀವೆನಗ ಕಲಿಸುವುದು
ಯೋಗಿನಾಥ ॥ 401 ॥

ಚೆನ್ನೆಯರ ಬಲೆಯಲ್ಲಿ ಎನ್ನನಿರಿಸಿದೆ ಪ್ರಭುವೆ । ಇನ್ನಿದಕೆ ಭಾವಜನು ಜೇಂಟೆಗಾಜಿ ।
ಕುನ್ನಿಗಳು ತಾವೆದ್ದು ಎನ್ನ ಗ್ರಹಿಸದಮುನ್ನ । ಚಿನ್ನಯಪ್ರಭು ಸಲಹೊ
ಯೋಗಿನಾಥ ॥ 402 ॥

## 3. ಬಸವಸ್ತೋತ್ರದ ತ್ರಿವಿಧಿ.

ಇದರಲ್ಲಿ 125 ಪದ್ಯಗಳಿವೆ. ಗ್ರಂಥಾದಿಯಲ್ಲಿ ಜೆನ್ನಬಸವಾದಿಗಳ ಸ್ತುತಿಯಿದೆ. ಇದರಿಂದ ಎರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

ಹನ್ನೆರಡು ಮನೆಯೊಳಗೆ ಹದಿನಾಜನಿರಿಸಿದನು । ಉನ್ನಂತ ಶರಧಿಯನು ದಾಂಟಿ ನಿಂದ ।
ಇನ್ನು ನಿರ್ಮಲವಾದ ಕಳೆಮೊಳೆಯನೊಳಕೊಂಡ । ಚಿನ್ಮೂರ್ತಿ ಬಸವನೈ
ಯೋಗಿನಾಥ ॥ 403 ॥

ಲೋಕಲೋಕವನೆಲ್ಲ ಲೋಕಿಸದೆ ನಿಂದಲ್ಲಿ । ಬೇಕುಮಾಡಿದನೆನ್ನ ಬಸವಲಿಂಗ ।
ಮುಕುಟಮಂಡಲದಲ್ಲಿ ಮನೆಗಟ್ಟಿ ನಿಂದವನು । ಅಕಳಂಕಬಸವನ್ನೆ ಯೋಗಿನಾಥ ॥ 404 ॥

## 4. ಅಷ್ಟಾವರಣಸ್ತೋತ್ರದ ತ್ರಿವಿಧಿ.

ಇದರಲ್ಲಿ 144 ಪದ್ಯಗಳಿವೆ. ಈ ಗ್ರಂಥವು ಗುರು, ಲಿಂಗ, ಜಂಗಮ, ವಿಭೂತಿ, ರುದ್ರಾಕ್ಷಿ, ಮಂತ್ರ, ಪ್ರಸಾದ, ಪಾದೋದಕ, ಇವುಗಳ ಮಹಿಮೆಯನ್ನು ವಿವರಿಸುತ್ತದೆ. ಇದರಿಂದ ಒಂದು ಪದ್ಯವನ್ನು ಉದಾಹರಿಸುತ್ತೇವೆ:—

ಶಿವಭಕ್ತಿರಥಿಯಲಿ ನೆಲೆಗೊಳಿಸಿದಾತ ಗುರು । ಪರಿಕಿಸಯೆ ಭವವ ಹಜುದಾತ ಗುರುವೈ ।
ಶ್ರೀಗುರುವೆ ಎಂಬ ನಾಮಾಕ್ಷರತ್ರಯದಲ್ಲಿ । ಆನು ಪ್ರಜ್ವಲಿತನೆ ಯೋಗಿನಾಥ ॥ 405 ॥

## 5. ಕಾಲಜ್ಞಾನ.

ಇದರಿಂದ ಒಂದು ವಚನವನ್ನು ತೆಗೆದು ಬರೆಯುತ್ತೇವೆ:—

ನಾನಾಕೃತ್ಯ ನೇಮಂಗಳಾದಾವು. ಸತ್ಯಶುದ್ಧಕಾಯಕ ನಿತ್ಯನೇಮಂಗಳಾದಾವು. ಖಂಡಿತಕಾಯಕದ ಅಖಂಡಿತರ ಖಂಡಿತರ ಕಂಡೆವು. ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನ ದೇವರಲ್ಲಿ ಅಂದಿಗೆ ನೂಜು ತುಂಬಿತೆಂಬ ಪುರಾತನರ ಕಂಡೆವು ॥ 406 ॥

---

## ಕೊಂಡಗೂಳಿ ಕೇಶಿರಾಜ. ಸು. 1160.

ಈತನು ಷಡಕ್ಷರಕಂದವನ್ನು ಬರೆದಿದ್ದಾನೆ; ವಚನಗಳನ್ನೂ ಬರೆದಿರುವಂತೆ ತಿಳಿಯುತ್ತದೆ.

ಇವನು ವೀರಶೈವಕವಿ; ಈತನ ವಿಷಯವಾಗಿ ಭೈರವೇಶ್ವರಕಾವ್ಯದ ಕಥಾಸೂತ್ರರತ್ನಾಕರದಲ್ಲಿ ಹೀಗೆ ಹೇಳಿದೆ:—ಕೊಂಡಗೂಳಿಯೆಂಬ ಪುರದಲ್ಲಿ ಕೇಶಿರಾಜಯ್ಯನು ವಸ್ತುಕವರ್ಣಕದಿಂದ ಷಡಕ್ಷರಮಂತ್ರಮಹತ್ವವನು ನವರಸಾರ್ಥಯುಕ್ತವಾಗಿ ಸ್ತುತಿಗೆಯ್ಯುತ್ತಿದ್ದನು. ಕಲ್ಯಾಣದಿಂದ ಪೆರ್ಮಾಡಿರಾಜನು ನಿಯೋಗಿಗಳ ಕಳುಹಿ ಕರೆಯತರಿಸಿ ಪ್ರಧಾನಪಟ್ಟವಂ ಕಟ್ಟಿ ಕೇಶಿರಾಜದಣ್ಣಾಯಕನೆಂದು ಹೆಸರಿಟ್ಟನು. ಹೀಗಿರಲು ಪರವಾದಿಗಳ ಕೃತಕದಿಂದ ದಣ್ಣಾಯಕನ ನಂದಿಮುದ್ರೆಯುಂಗುರವಂ ಅರಸು ತೆಗೆದುಕೊಳಲು ಕೇಶಿ ಕೈಮುಗಿಯದೆ ಮನೆಗೆ ಹೋದನು.

ಇತರ ಗ್ರಂಥಗಳಿಂದ—ಈತನು ಶಿವಪುರಕ್ಕೆ ಬಂದು ಜಂಗಮಾರ್ಚನೆಯನ್ನು ಮಾಡುತ್ತ ಪ್ರತಿದಿನವೂ ಶಿವನನ್ನು ಎಂಟು ಶ್ಲೋಕಗಳಿಂದ ಸ್ತುತಿಸುತ್ತಿದ್ದಂತೆಯೂ ಬಸವೇಶ್ವರನೊಡನೆ ಸಂಗಮೇಶ್ವರಕ್ಕೆ ಹೋದಂತೆಯೂ ತಿಳಿಯುತ್ತದೆ.

ಷಿಕಾರಿಪುರದ 119 ನೆಯ ಮತ್ತು 123 ನೆಯ ಶಾಸನಗಳಿಂದ ಈತನ ವಿಷಯವಾಗಿ ಈಯಂಶಗಳು ತಿಳಿಯುತ್ತವೆ:—

ಈತನು ಭಾರದ್ವಾಜಗೋತ್ರದವನು. ಇವನ ತಂದೆ ಹೊಳಲಮರಸ; ತಾಯಿ ದುರ್ಗಾದೇವಿ. ಈತನು ಬಿಜ್ಜಳರಾಜನ (1156–1167) ಕೈಯ ಕೆಳಗೆ ದಂಡನಾಯಕನಾಗಿ ಬನವಸೆ ಪನ್ನಿರ್ಭಾಸಿರವನ್ನು ಆಳುತ್ತ ಬಲಿಪುರದಲ್ಲಿ ಇದ್ದನು. ಬಿಜ್ಜಳನ ಕಾಲವಾದ ಮೇಲೆ ಅವನ ಮಗ ರಾಯಮುರಾರಿಸೋಯಿದೇವನ ಕಾಲದಲ್ಲಿಯೂ ಇದ್ದನು. ಇವನು ಬಹಳ ಪರಾಕ್ರಮಶಾಲಿ.

ಇವನನ್ನು ಸ್ತುತಿಸುವ ಕೆಲವು ಶಾಸನಪದ್ಯಗಳನ್ನು ಇಲ್ಲಿ ಬರೆಯುತ್ತೇವೆ:—

ಧುರದೊಳ್ ಕೇಶವದಂಡನಾಥನ ಭುಜೋತ್ಪಾತಾಸಿಘಾತಕ್ಕೆ ವಿ ।
ಶ್ವರಿಪೂರ್ವೀಶ್ವರರಂಜಿ ಹುತ್ತಡರ್ದು ಜೀವಂಬಿತ್ತೊಡೆಮ್ಮೆಮ್ಮ ಕಾಂ ।
ತರಸೊಲ್ದಿಂತಿದು ರಕ್ಷಿಸಿತ್ತಿದುವೆ ದೈವಂ ತಾನೆನುತ್ತಾ ವಧೂ ।
ತ್ಕರದಿಂದಾದುದು ಹುತ್ತನೂದುವ ಕೃತವ್ಯಾಪಾರವೀಧಾತ್ರಿಯೊಳ್ ॥
ಪುಸಿಯಲ್ತು ಬೀಱ್ಪಿರಂ ಪು । ಟ್ಟಿಸುವ ಬೆಸಂ ಬರ್ಮನದು ಸಮಂತವರಂ ರ ।
ಕ್ಷಿಸುವ ಬೆಸಂ ತನ್ನದು ಗಡ । ಸಿಸದಂ ಕೇಶವನಿದೇನುದಾತ್ತನೊ ಧರೆಯೊಳ್ ॥
ಇನಜಂ ಕೊಟ್ಟ ತೂವಲ್ ತಿಬಿ । ಮುನಿ ಕೊಟ್ಟಡಗಾದಧೀಚಿ ಕೊಟ್ಟಿಲ್ಲುಗಳೀಂ ।
ಧನದಂತೆ ಸೇವ್ಯಮೇ ವೇ । ಟ್ಪಿನುತುಂ ಹೊಂಗಳನೆ ಕೇಶವಂ ಕುಡುತಿರ್ಪಂ ॥

ಈತನ ಗ್ರಂಥಗಳಲ್ಲಿ—

## ಷಡಕ್ಷರಕಂದ.

ಈ ಗ್ರಂಥಕ್ಕೆ ಮಂತ್ರಮಹತ್ತ್ವದ ಕಂದ ಎಂಬ ಹೆಸರೂ ಉಂಟು. ಇದರಲ್ಲಿ ಓಂನಮಶ್ಶಿವಾಯ ಎಂಬ ಷಡಕ್ಷರಮಂತ್ರದ ಮಹಿಮೆ ಹೇಳಿದೆ. ಕಂದಗಳು 110. ಒಂದೊಂದು ಕಂದವೂ 'ಓಂನಮಶ್ಶಿವಾಯೆಂಬ ಪದಂ' ಎಂದು ಮುಗಿಯುತ್ತದೆ.

ಇವನ ಬಂಧವು ಪ್ರೌಢವಾಗಿದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

ಆಟವುಟದ ಮಾತನಾಡಿಯೆ । ತುಟಿ ವಿಡುಕಲದೇಕೆ ಜನನಮುರಣಾರ್ಣವದಾ ।
ತಟವಂ ಸಾರ್ಚುವ ತೆಪ್ಪಂ । ದಿಟವಿದೆ ಕೇಳೋಂನಮಶ್ಶಿವಾಯೆಂಬ ಪದಂ ॥ 407 ॥

ಉಬ್ಬನಲನಲದು ವಿಷಯದೊ । ಳಬ್ಬರಿಸುವ ಮುನಿಸು ಮನದ ಕನಲಿಕೆ ಕಾಮಂ ।
ಪೊಬ್ಬಿಡುವ ದುರಿತಕೋಟಿಯ । ನೆಬ್ಬಟ್ಟುವುದೋಂನಮಶ್ಶಿವಾಯೆಂಬ ಪದಂ ॥ 408 ॥

ತಱಿಯಲ್ ಮೋಹದ ಕೆಚ್ಚಂ । ಪಱಿಯಲ್ ಭವಪಾಶಮಂ ಮನೋಜನ ಬಿಲ್ಲಂ ।
ಮುಱಿಯಲ್ ಮಾಯೆಯ ಬೀರಂ । ಕೊಱಿಯಲ್ ಜಪಮೋಂನಮಶ್ಶಿವಾಯೆಂಬ
ಪದಂ ॥ 409 ॥

ಇವನ ವಚನಗಳು ನಮಗೆ ದೊರೆತಿಲ್ಲ.

---

## ಸೊಡ್ಡಳ ಬಾಚರಸ. ಸು. 1160.

ಈತನು ವಚನಗಳನ್ನು ಬರೆದಿದ್ದಾನೆ; ಒಂದು ಕಾಲಜ್ಞಾನವನ್ನೂ ಬರೆದಿರುವಂತೆ ತೋರುತ್ತದೆ.

ಇವನು ವೀರಶೈವಕವಿ; ಬಿಜ್ಜಳರಾಜನಲ್ಲಿ (1156–1167) ಕರಣಿಕನಾಗಿದ್ದನು. ಈತನು ಸುಳ್ಳುಲೆಕ್ಕವನ್ನು ಬರೆದನೆಂದು ಕೊಂಡೆಯರು ದೊರೆಯಲ್ಲಿ ದೂರಲು, ಬಸವನು ಸೂರ್ಯಗತಿಯನ್ನು ಹನ್ನೊಂದು ದಿವಸ ನಿಲ್ಲಿಸಿ ಲೆಕ್ಕವನ್ನು ಪೂರ್ತಿಮಾಡಿ ತೋರಿಸಿದಂತೆಯೂ ಬಿಜ್ಜಳನು ಇಬ್ಬರನ್ನೂ ಮನ್ನಿಸಿದಂತೆಯೂ ಇತಿಹಾಸವಿದೆ.

### ವಚನಗಳು.

ಇವನ ವಚನಗಳಲ್ಲಿ **ಸೊಡ್ಡಳ** ಎಂಬ ಅಂಕಿತವಿದೆ. ಒಂದೆರಡು ವಚನಗಳನ್ನು ಉದ್ಧರಿಸಿ ಬರೆಯುತ್ತೇವೆ:—

(1) ಗಂಡನುಳ್ಳ ಹೆಂಡಿರ ಕಂದು ಅಳಿಪದಿರಾ ಮನವೇ ! ಬಂದ ಬಸಿಜನು ಉಂಡ ಮೊಲೆಯನು ಕಂಡು ಮಱುಗದಿರಾ ಮನವೇ ! ಉದ್ದಂಡತನದಲಿ ನಡೆದ ಭಂಡರನು ಹುಟ್ಟಿ ಗೊಂಡದಲ್ಲಿಕ್ಕದೆ ಬಿಡುವನೆ ನಮ್ಮ ದೇವರಾಯ ಸೊಡ್ಡಳ ॥ 410 ॥

(2) ಗಂಗಾನದಿಯಲ್ಲಿ ಮಿಂದು ಗಂಜಳದಲ್ಲಿ ಹೊರಳುವರೆ? ಚಂದನವಿದ್ದಂತೆ ದುರ್ಗಂಧವ ಮೈಯಲ್ಲಿ ಪೂಸುವರೆ? ಸುರಭಿ ಮನೆಯಲ್ಲಿ ಕಱೆಯುತ್ತಿರೆ ಹರಿವರೆ ಸೊಣಗನ ಹಾಲಿಂಗೆ? ಬಯಸಿದಮೃತವಿದ್ದಂತೆ ಅಂಬಿಲವನೆಱೆದುಂಬ ಭ್ರಮಿತಮಾನವ ನೀನು ಕೇಳಾ ! ಪರಮಪದವಿಯನೀವಚಿನ್ನ ಸೊಡ್ಡಳನಿದ್ದಂತೆ ಸಾವದ್ಯವನೋಂತಡೆ ಕಾವುದೇ ನಿನ್ನ? ॥411॥

---

## ಮಹಾದೇವಿಯಕ್ಕ. ಸು. 1160.

ಈಕೆ ವಚನಗಳನ್ನೂ **ಯೋಗಾಂಗತ್ರಿವಿಧಿ**ಯನ್ನೂ ಬರೆದಿದ್ದಾಳೆ; **ಸೃಷ್ಟಿಯ ವಚನ, ಅಕ್ಕಗಳ ಪೀಠಿಕೆ** ಎಂಬ ಗ್ರಂಥಗಳನ್ನೂ ಬರೆದಿರುವಂತೆ ತಿಳಿಯುತ್ತದೆ.

ಇವಳು ವೀರಶೈವಕವಿ; ಉಡುತಡಿಯೆಂಬ ಪಟ್ಟಣದಲ್ಲಿ ಹುಟ್ಟಿದಳು. ಆ ಪಟ್ಟಣದ ದೊರೆ ಕೌಶಿಕನು ಇವಳನ್ನು ಮದುವೆಯಾಗಬೇಕೆಂದು ಬಯಸಲು. ಭವಿಯೆಂದು ಅವನನ್ನು ಪರಿಹರಿಸಿ ವಿರಕ್ತಳಾಗಿ ಕಲ್ಯಾಣಕ್ಕೆ ಹೋಗಿ ಬಸವಾದಿ ಗಳೊಡನೆ ಇದ್ದಳು.

ಇವಳ ವಿಷಯವಾಗಿ ಮಹಾದೇವಿಯಕ್ಕನ ಪುರಾಣ ಎಂಬ ಗ್ರಂಥವು ಹುಟ್ಟಿದೆ.

ಈಕೆಯ ಗ್ರಂಥಗಳಲ್ಲಿ—

## 1. ವಚನಗಳು.

ಈಕೆಯ ವಚನಗಳಲ್ಲಿ **ಚೆನ್ನಮಲ್ಲಿಕಾರ್ಜುನ** ಎಂಬ ಅಂಕಿತವಿದೆ. ಕೆಲವು ವಚನಗಳನ್ನು ತೆಗೆದು ಬರೆಯುತ್ತೇವೆ :—

(1) ಅಮೇಧ್ಯದ ಹಡಿಕೆ; ಮೂತ್ರದ ಕುಡಿಕೆ; ಎಲುವಿನ ತಡಿಕೆ; ಕೇವಿನ ಹಡಿಕೆ; ಸುಡಲಿ ದೇಹವ. ಒಡಲುವಿಡಿದು ಕೆಡದಿರು, ಚೆನ್ನಮಲ್ಲಿಕಾರ್ಜುನನನಜ ಮರುಳೆ ॥412॥

(2) ಒಮ್ಮೆ ಕಾಮನ ಕಾಲಹಿಡಿವೆ; ಮತ್ತೊಮ್ಮೆ ಚಂದ್ರನುಂಗೆ ಸೆರಗೂಡ್ಡಿ ಬೀಡುವೆ; ಸುಡಲಿ ವಿರಹವ. ನಾನಾರಿಗೆ ಧೃತಿಗೆಡುವೆ? ಚೆನ್ನಮಲ್ಲಿಕಾರ್ಜುನದೇವನೆನ್ನ ನೊಲ್ಲದಕಾರಣ ಎಲ್ಲರಿಗೆ ಹಂಗುಗಿತ್ತಿಯಾದೆನವ್ವಾ ॥413॥

(3) ಬಿಟ್ಟದಮೇಲೊಂದು ಮನೆಯಮಾಡಿ ಮೃಗಂಗಳಿಗಂಜದಡೆಂತಯ್ಯಾ? ಸಮುದ್ರದ ತಡಿಯಲ್ಲಿ ಮನೆಯಮಾಡಿ ನೊರೆತೆರೆಗಳಿಗಂಜದಡೆಂತಯ್ಯಾ? ಸಂತೆಯೊಳಗೊಂದು ಮನೆಯಮಾಡಿ ಶಬ್ದಕ್ಕೆ ನಾಚದಡೆಂತಯ್ಯಾ? ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯಾ. ಲೋಕದೊಳಗೆ ಹುಟ್ಟಿದಬಟಿಕ ಸ್ತುತಿನಿಂದೆಗಳು ಬಂದಡೆ ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು ॥414॥

## 2. ಯೋಗಾಂಗ ತ್ರಿವಿಧಿ.

ಇದರಿಂದ ಒಂದು ಪದ್ಯವನ್ನು ಉದಾಹರಿಸುತ್ತೇವೆ :—

ಅಷ್ಟದಳಕಮಲದಾ । ಬಟ್ಟಬಯಲೊಳಗೊಂದು । ಮುಟ್ಟಬಾರದ ಘನವಿಹುದು । ಮನದೊಳಗೆ । ದೃಷ್ಟಿಯಿಟ್ಟವನೆ ಕಡುಜಾಣ ॥415॥

## 3. ಸೃಷ್ಟಿಯವಚನ.

ಇದು ಗದ್ಯರೂಪವಾಗಿದೆ. ಇದಕ್ಕೆ ಒಂದು ಕನ್ನಡ ವ್ಯಾಖ್ಯಾನವಿದೆ.

## ಘಟ್ಟಿವಾಳಯ್ಯ. ಸು. 1160.

ಈತನು ವಚನಗಳನ್ನೂ ಕಾಲಜ್ಞಾನವನ್ನೂ ಬರೆದಿದ್ದಾನೆ. ಇವನು ವೀರಶೈವಕವಿ; ತನ್ನ ಮಹಿಮೆಯನ್ನು ಬಸವನ ಹೆಂಡತಿಯಾದ ನೀಲಮ್ಮನಿಗೆ ಹೇಳಿದಂತೆ ತಿಳಿಯುತ್ತದೆ.

ಇವನ ಗ್ರಂಥಗಳಲ್ಲಿ—

### 1. ವಚನಗಳು.

ಇವನ ವಚನಗಳ ಸಂಖ್ಯೆ 56. ಇವುಗಳಲ್ಲಿ **ಚಿಕ್ಕಯ್ಯಪ್ರಿಯಸಿದ್ಧಲಿಂಗ** ಎಂಬ ಅಂಕಿತವಿದೆ ಒಂದೆರಡು ವಚನಗಳನ್ನು ತೆಗೆದು ಬರೆಯುತ್ತೇವೆ:—

(1) ರೋಗಿಗೆ ಹಾಲು ಸಿಹಿಯಪ್ಪುದೆ? ಗೂಗೆಗೆ ರವಿ ಲೇಸಪ್ಪುದೆ? ಚೋರಂಗೆ ಬೆಳಗು ಗುಣವಪ್ಪುದೆ? ಭವಸಾಗರದ ಸಮಯದಲಿದ್ದವರಿಗೆ ನಿರ್ಭಾವನ ಭಾವನೆಯೆತ್ತಹುದು? ಚಿಕ್ಕಯ್ಯಪ್ರಿಯಸಿದ್ಧಲಿಂಗ ಇಲ್ಲ ಇಲ್ಲ ಎಂದೆ ॥416॥

(2) ಆಸೆಗಾಗಿ ವೇಷವ ಹೊತ್ತು ತಿರುಗುವ ವೇಷಗಾಱರ ಗಂಡ; ಈಷಣತ್ರಯಕಾಗಿ ಈಶನ ಪೂಜಿಸುವ ದಾಸರ ಗಂಡ; ಇಷ್ಟನಱಿದು ತನುವಿಗೆ ಆಸೆಯಮಾಡುವ ಭಾಷೆವಂತರ ಗಂಡ; ನಾನಂಜುವೆ ತ್ರಿವಿಧದ ಹಂಗಱಿದವರಿಗೆ. ನಾನವರಿಗಱಿದ ಬಂಟ. ಚಿಕ್ಕಯ್ಯಪ್ರಿಯಸಿದ್ಧಲಿಂಗ ಬಲ್ಲ ಎಂದೆನು ॥417॥

### 2. ಕಾಲಜ್ಞಾನ.

ಇದರಲ್ಲಿ ಸಂಧಿ 7, ಪದ 393 ಇವೆ. ಒಂದೆರಡು ಪದಗಳನ್ನು ಉದ್ಧರಿಸಿ ಬರೆಯುತ್ತೇವೆ:—

(1) ಅತ್ತೆಯ ಮಾತ ಸೊಸೆ ಕೇಳಳಮ್ಮ। ಅತ್ತೆಯಸೆ ಒತ್ತಿ ದುರ್ಭಾಷೆಯಮ್ಮ।
ಪತಿವ್ರತವು ಕೆಟ್ಟು ಹೋದೀತಮ್ಮ। ಇನ್ನು ಪತಿಯ ಮಾತನು ಸಡ್ಡೆಗೊಳ್ಳರಮ್ಮ ॥418॥

(2) ಮುಕ್ತಿಯೆಂಬುದು ಮುಟ್ಟುಗಿಹೋದೀತಮ್ಮ। ವಿರಕ್ತಿಯೆಂಬುದು ನಿಲ್ಲಲಾರದಮ್ಮ।
ಸೂಕ್ತಿಯೆಂಬುದು ಸವೆದು ಹೋದೀತಮ್ಮ। ತಮ್ಮ ನಿತ್ಯನೇಮವು ಅಮಂಗಲವಾದೀತಮ್ಮ ॥419॥

---

## ಮೋಳಿಗೆಯ ಮಾರಯ್ಯ. ಸು. 1160.

ಇವನು ವಚನಗಳನ್ನು ಬರೆದಿದ್ದಾನೆ. ಈತನು ವೀರಶೈವಕವಿ; ಇವನಿಗೆ ಮೋಳಿಗಯ್ಯ ಎಂಬ ಹೆಸರೂ ಉಂಟು. ಇವನ ಹೆಂಡತಿ ಮಹಾದೇವಿ.

ಈತನು ಬಂದರುದೇಶದ ಮಾಂಡವ್ಯಪುರವನ್ನು ಆಳುತ್ತ ಶಿವಭಕ್ತರನ್ನು ಆರಾಧಿಸುತ್ತಿದ್ದನು. ಬಸವನು ಇವನಲ್ಲಿದ್ದ ಶಿವಭಕ್ತರನ್ನು ಕರೆದುಕೊಂಡು ಹೋಗಲು, ಆತನನ್ನು ಇರಿದು ಕೊಲ್ಲುವಂತೆ ಇಬ್ಬರು ಬಂಟರನ್ನು ಕಳುಹಿದನು. ಅವರು ಜಂಗಮವೇಷವನ್ನು ಹಾಕಿಕೊಂಡು ಬಸವನ ಮನೆಯಲ್ಲಿ ಶಿವಭಕ್ತರ ನಡುವೆ ಕುಳಿತಿರಲು. ಬಸವನ ಮಹಿಮೆಯಿಂದ ಅವರ ಕೊರಳಲ್ಲಿದ್ದ ಬದಣೆಯ ಕಾಯಿಗಳು ಲಿಂಗವಾದುವು. ಇದನ್ನು ಕೇಳಿ ಮೋಳಿಗಯ್ಯನು ವೈರಾಗ್ಯದಿಂದ–

ಹಿರಿಯರ ದರ್ಶನ ನಯನಕ್ಕೆ ಚೆಲುವು; ಸತ್ಪಾತ್ರಕ್ಕೆ ಡುವುದು ಹಸ್ತಕ್ಕೆ ಚಿಂದ: ಸತ್ಯನುಡಿವುದು ವಾಕ್ಯಕ್ಕೆ ಭೂಷಣ: ಶಿವಸ್ತುತಿ ಕೇಳುವುದು ಕರ್ಣಕ್ಕೆ ಅಲಂಕಾರ; ಶರಣರಕೂಡೆ ಸಂಭಾಷಣೆ ಪ್ರಾಣಕ್ಕೆ ಶೃಂಗಾರ; ಇಂತಿಲ್ಲದನರನ ಬಾಲ್ಬು ಹೊಲೆಯ ಜೋಗಿಯ ಕೈಯ ಪಾತ್ರದಿಂದ ಕಡೆ.

ಎಂದು ಗೀತವ ಹಾಡಿ ರಾಜ್ಯವನ್ನು ಬಿಟ್ಟು ಕಲ್ಯಾಣಕ್ಕೆ ಹೋಗಿ ಅಲ್ಲಿ ಕಟ್ಟಿಗೆಯ ಮಾರುವ ಕಾಯಕದಿಂದ ಜಂಗಮಕ್ಕೆ ನೀಡುತ್ತಿದ್ದನು.

## ವಚನಗಳು.

ಇವನ ವಚನಗಳ ಸಂಖ್ಯೆ 230. ಈ ವಚನಗಳಲ್ಲಿ **ನಿಃಕಳಂಕಮಲ್ಲಿ ಕಾರ್ಜುನ** ಎಂಬ ಅಂಕಿತವಿದೆ. ಒಂದೆರಡು ವಚನಗಳನ್ನು ಉದಾಹರಿಸುತ್ತೇವೆ:—

(1) ತಲೆಯಿಲ್ಲದೆ ಕಾಲು ನಡೆಯಬಹುದೆ? ಕುಕ್ಷಿಯಿಲ್ಲದಿರೆ ಬಾಯಿ ಉಣಬಲ್ಲುದೆ? ಆತ್ಮವಿಲ್ಲದೆ ಕರಚರಣಾದಿಗಳಿಗೆ ಏತಜ್ಞ ಹೊಲಬು? ನಿನ್ನ ಭಕ್ತಿಯುಬೆಳೆ ಎನಗೆ ಸತ್ಯದ ಹಾದಿಯಿದು ನಿಃಕಳಂಕಮಲ್ಲಿಕಾರ್ಜುನಾ ॥420॥

(2) ವಸ್ತುವಕುರುತು ಇಷ್ಟವನೋಡಬೇಕಲ್ಲದೆ ಇಷ್ಟವ ಕುರುತು ವಸ್ತುವನೋಡಬಹುದೆ? ಹಿಡಿತೆಯ ಹಿಡಿದು ಇಜ್ಜಯಬೇಕಲ್ಲದೆ ಮೊನೆಯ ಹಿಡಿದು ಇಜ್ಜಿದವರುಂಟೆ? ನೆನಹ ರೂಪಿನಲ್ಲಿ ಅನುಕರಿಸಬಹುದಲ್ಲದೆ ರೂಪ ನೆನಹಿನಲ್ಲಿ ಅನುಕರಿಸಬಹುದೆ? ತಿಟ್ಟವಲಕ್ಷಿಸುವುದು ಲಿಕ್ಕಣಿಕೆಯಲ್ಲದೆ ಆ ತಿಟ್ಟ ಲಿಕ್ಕಣಿಕೆಯ ಲಕ್ಷಿಸಬಹುದೆ? ಇಂತೀದ್ವಂದ್ವವನಜ್ಞಿದು ಉಭಯದ ಸಂದಿನಬೆಸುಗೆ ಒಂದೆಂದಲ್ಲಿ ಏಕ್ಯಾನುಭಾವ ನಿಃಕಳಂಕಮಲ್ಲಿಕಾರ್ಜುನಾ ॥421॥

---

## ಮಹಾದೇವಿ. ಸು. 1160.

ಈಕೆ ವಚನಗಳನ್ನು ಬರೆದಿದ್ದಾಳೆ. ಇವಳು ವೀರಶೈವಕವಿ; ಮೋಳಿಗೆಯ ಮಾರಯ್ಯನ ಹೆಂಡತಿ. ಇವಳ ವಚನಗಳಲ್ಲಿ ಕೆಲವು ಗಂಡನ ವಚನಗಳಿಗೆ ಪ್ರತ್ಯುತ್ತರವಾಗಿವೆ.

## ವಚನಗಳು.

ಇವಳ ವಚನಗಳ ಸಂಖ್ಯೆ 41. ಇವುಗಳಲ್ಲಿ **ಇಮ್ಮಡಿ ನಿಃಕಳಂಕಮಲ್ಲಿ ಕಾರ್ಜುನ** ಎಂಬ ಅಂಕಿತವಿದೆ. ಒಂದು ವಚನವನ್ನು ತೆಗೆದು ಬರೆಯುತ್ತೇವೆ:—

ಪೂಜಿಸಿ ಕಂಡಿಹೆನೆಂದೊಡೆ ಪೂಜೆಗೆ ತನ್ನಯ ಮೂರ್ತಿ ನೀನು; ನೆನಹಿನಲ್ಲಿ ಆತುರಿಸಿ ಕಂಡಿಹನೆಂದೊಡೆ ಆ ನೆನಹಿಂಗೆ ಆತ್ಮಸ್ವರೂಪ ನೀನು; ಎಲ್ಲ ಎಡೆಯಲ್ಲಿ ಭಿನ್ನವಾಗಿ ಕಂಡಿಹೆನೆಂದೊಡೆ ಅಣೋರಣೀಯಾ ಮಹತೋ ಮಹೀಯ ನೀನು; ಸತ್ಯವೆಲ್ಲಿದ್ದಿತ್ತು ಅಲ್ಲಿ ತಪ್ಪದಿಪ್ಪೆ ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನನು ವಿಶ್ವಾಸವೆಲ್ಲಿಪ್ಪುದಲ್ಲಿ ತಪ್ಪದಿಪ್ಪನು ॥ 422 ॥

---

## ಆಯ್ದಕ್ಕಿಯ ಮಾರಯ್ಯ. ಸು. 1160.

ಈತನು ವಚನಗಳನ್ನು ಬರೆದಿದ್ದಾನೆ. ಇವನು ವೀರಶೈವ ಕವಿ.

## ವಚನಗಳು.

ಇವನ ವಚನಗಳ ಸಂಖ್ಯೆ 58. ಇವುಗಳಲ್ಲಿ **ಅಮುಲೇಶ್ವರಲಿಂಗ** ಎಂಬ ಅಂಕಿತವಿದೆ. ಒಂದೆರಡು ವಚನಗಳನ್ನು ತೆಗೆದು ಬರೆಯುತ್ತೇವೆ:—

(1) ಭಕ್ತರಿಗೆ ಬಡತನವುಂಟೆ? ಸತ್ಯರಿಗೆ ಕರ್ಮವುಂಟೆ? ಚಿತ್ತಮುಟ್ಟಿ ಸೇವೆಯು ನಾಡುವ ಭಕ್ತಂಗೆ ಮರ್ತ್ಯ ಕೈಲಾಸವೆಂಬುದುಂಟೆ? ಆತನಿದ್ದುದೇ ಸುಕ್ಷೇತ್ರ, ಆತನ ಅಂಗವೇ ಅಮುಲೇಶ್ವರಲಿಂಗದ ಅಂಗದ ಸುಖ ॥ 423 ॥

(2) ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು; ನಡೆಯಿಲ್ಲದ ನುಡಿ ಅಜಾಮಿಂಗೆ ಹಾನಿ; ಕೊಡದೆ ತ್ಯಾಗಿಯೆನಿಸಿಕೊಂಬುದು ಮುಡಿಯಿಲ್ಲದ ಶೃಂಗಾರ; ದೃಢವಿಲ್ಲದ ಭಕ್ತಿ ಅಡಿಯೊಡೆದ ಕುಂಭದಲ್ಲಿ ಸುಜಲವ ತುಂಬಿದಂತೆ, ಅಮುಲೇಶ್ವರಲಿಂಗವ ಮುಟ್ಟದ ಭಕ್ತಿ ॥ 424 ॥

---

## ಅಂಬಿಗರ ಚೌಡಯ್ಯ. ಸು. 1160.

ಈತನು ವಚನಗಳನ್ನು ಬರೆದಿದ್ದಾನೆ. ಇವನು ವೀರಶೈವ ಕವಿ.

## ವಚನಗಳು.

ಇವನ ವಚನಗಳ ಸಂಖ್ಯೆ 105. ಇವುಗಳಲ್ಲಿ ಇವನ ಹೆಸರು ವ್ಯಕ್ತವಾಗಿ ಹೇಳಿದೆ. ಒಂದೆರಡು ವಚನಗಳನ್ನು ಉದ್ಧರಿಸಿ ಬರೆಯುತ್ತೇವೆ:—

(1) ಎತ್ತ ಸುತ್ತಿ ಬಂದದಂ ಊಹಿಸಬಪ್ಪುದೆ ತಪ್ಪದು. ಹಲವು ಮಾತನಾಡಿದ ಡೇನು? ಮೂಜುಮಲವ ಮುಚ್ಚಿದಿರಬೇಕು. ಹೊಲಬುದಪ್ಪಿ ಮೃಗ ಬಲೆಯೊಳಗೆ ಬಿದ್ದಂತಾಗ ಬೇಡ. ಇದನಱಿತು ಬದುಕೆಂದನಂಬಿಗರ ಚೌಡಯ್ಯ ॥ 425 ॥

(2) ಶುಕ್ಲಶೋಣಿತಪಿಂಡೈಕ್ಯನ ಚಿತ್ತವಾಯು ಅಱುದಳದ ಪದ್ಮದಲ್ಲಿಹುದು. ಮೊಲೆ ಮೂಡಿ ಬಂದಡೆ ಆ ಪಿಂಡವನು ಹೆಣ್ಣೆಂಬರು. ಗಡ್ಡಮಿಸೆಗಳು ಬಂದಡೆ ಆ ಪಿಂಡವನು ಗಂಡೆಂಬರು. ಆ ಇಬ್ಬರ ನಡುವೆ ಸುಜ್ಞಾನ ಆತ್ಮನು ಹೆಣ್ಣೂ ಅಲ್ಲ ಗಂಡೂ ಅಲ್ಲ ನೋಡಾ. ಇವಱಿಂತುವ ತಿಳಿದು ನೋಡಿಹೆನೆಂದಡ ಶ್ರುತಿಗಗೋಚರವೆಂದಾತನಂಬಿಗರ ಚೌಡಯ್ಯ ॥ 426 ॥

---

## ಕೋಲಶಾಂತಯ್ಯ. ಸು. 1160.

ಇವನು ವಚನಗಳನ್ನು ಬರೆದಿದ್ದಾನೆ. ಈತನು ವೀರಶೈವಕವಿ; "ಚಿತ್ರಮುಂ ನೋಡಿ ಜಂಗಮವನಿಜೋದನಂ" ಕೊಂದನು ಎಂದು ಚೆನ್ನಬಸವಪುರಾಣ[1] ದಲ್ಲಿ ಹೇಳಿದೆ.

### ವಚನಗಳು.

ಇವನ ವಚನಗಳ ಸಂಖ್ಯೆ 100. ಇವುಗಳಲ್ಲಿ **ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ** ಎಂಬ ಅಂಕಿತವು ದೊರೆಯುತ್ತದೆ. ಕೆಲವು ವಚನಗಳನ್ನು ತೆಗೆದು ಬರೆಯುತ್ತೇವೆ:—

(1) ಜಡೆ ಮುಡಿ ಬೋಳು ಹೇಗಾದಡಾಗಲಿ. ನಡೆ ನುಡಿ ಸಿದ್ಧಾಂತವಾದಡೆ ಸಾಕು; ಆತ ಪರಂಜ್ಯೋತಿಗುವನಯ. ಆ ಇರವ ನಿನ್ನ ನೀನಱಿ ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗಾ ॥ 427 ॥

(2) ಕ್ಷಮೆಯಿಲ್ಲದ ಭಕ್ತ, ನಯವತಿಯಿಲ್ಲದ ಮಾಟ, ಶೈವ್ಯವಿಲ್ಲದ ಕೂಟ, ಏಕಲಿಂಗಾರ್ಚನೆಯಿಲ್ಲದನನ ಹೃದಯ, ನಂದಿಸಿದ ಕಜ್ಜಳದಂತೆ. ಆ ಸಂದೇಹವ ನಿನ್ನ ನೀನಱಿ ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗಾ ॥ 428 ॥

(3) ಮಾಡಿ ಆಡಲೀತಕ್ಕೆ? ಸಲಹಿಕೊಲ್ಲಲೀತಕ್ಕೆ? ಬಿತ್ತಿಕೀಳ್ಪಲೀತಕ್ಕೆ? ಕಟ್ಟಿ ಒಡೆಯಲೀತಕ್ಕೆ? ಮಾಡಿ ಮಾಡಿ ಮನಗುಂದುವ ನೀಡಿ ನೀಡಿ ನಿಜಗುಂದುವ ಭೇದ, ಆ ಮಾಟವ ನಿನ್ನ ನೀನಱಿ ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗಾ ॥ 429 ॥

---

1. ಕಾಂಡ 5 ಸಂಧಿ 4 ಪದ್ಯ 62.

## ನುಲಿಯ ಚಂದಯ್ಯ. ಸು. 1160.

ಈತನು ವಚನಗಳನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಕಲ್ಯಾಣದಲ್ಲಿ ನೊದೆಯ ಹುಲ್ಲನ್ನು ನುಲಿಹೊಸೆದು ಮಾರಿ ಜೀವಿಸುತ್ತಿದ್ದನು. ಇವನ ವಿಷಯವಾಗಿ ನುಲಿಯಚಂದಯ್ಯನ ಕಥೆ ಎಂಬ ಗ್ರಂಥವು ಹುಟ್ಟಿದೆ.

### ವಚನಗಳು.

ಇವನ ವಚನಗಳ ಸಂಖ್ಯೆ 49. ಇವುಗಳಲ್ಲಿ ಚಂಡೇಶ್ವರಲಿಂಗ ಎಂಬ ಅಂಕಿತವಿದೆ. ಒಂದೆರಡು ವಚನಗಳನ್ನು ತೆಗೆದು ಬರೆಯುತ್ತೇವೆ :—

(1) ಕೈದ ಹಿಡಿದಾಡುವರೆಲ್ಲರು ಇಜ್ಜಾಯಬಲ್ಲರೆ? ಸಾಧನೆಯ ಮಾಡುವ ಬಾಲರೆಲ್ಲರು ಕಾದಬಲ್ಲರೆ? ಅರ್ಥಿಗೆ ಮಾಡುವ ಕೃತ್ಯವಂತರೆಲ್ಲರು ಸದ್ಭಕ್ತರಪ್ಪರೆ? ಅದು ಚಂಡೇಶ್ವರಲಿಂಗಕ್ಕೆ ಸಲ್ಲದ ಮಾಟ ॥ 430 ॥

(2) ಒಂದಣ ಭವಾಗರವನು ದಾಂಟಿದೆ; ಮುಂದಣ ಮುಕ್ತಿಪಥಕ್ಕೆ ಜ್ಞಾನವಂಕುರಿಸಿತ್ತು; ಇನ್ನಂಜೆನಂಜೆನಯ್ಯ. ಎನ್ನ ಮನೋಮೂರುತಿಯಪ್ಪ ಚಂಡೇಶ್ವರನ ಕಾರುಣ್ಯವಾಯಿತ್ತು. ಗೆದ್ದೆ ಗೆದ್ದೆ ಮಹಾಮಾಯೆಯ ॥ 431 ॥

---

## ಅಜಗಣ್ಣ. ಸು. 1160.

ಇವನು ವಚನಗಳನ್ನು ಬರೆದಿದ್ದಾನೆ. ಈತನು ವೀರಶೈವಕವಿ.

### ವಚನಗಳು.

ಇವನ ವಚನಗಳಲ್ಲಿ ಈತನ ಹೆಸರು ಸೂಚಿತವಾಗಿದೆ. ಒಂದು ವಚನವನ್ನು ಉದ್ಧರಿಸಿ ಬರೆಯುತ್ತೇವೆ :—

ಉಟ್ಟುದ ತೊಱೆದವಂಗೆ ಊರೇನು ಕಾಡೇನು? ನಷ್ಟಸಂತಾನಕ್ಕೆ ಕುಲವೇನು ಚಲವೇನು? ಹುಟ್ಟುಗೆಟ್ಟಾತಂಗ ಪುಣ್ಯವೇನು ಪಾಪವೇನು? ಅದು ಕೆಟ್ಟುದು ಕೆಟ್ಟುದು; ತನ್ನ ತಾನಱಿಯದೆ ಬಟ್ಟಬಯಲಲ್ಲಿ ಬಿದ್ದ ಅಜಗಣ್ಣತಂದೆ ॥ 432 ॥

---

## ನಿಜಗುಣದೇವ. ಸು. 1160.

ಈತನು ವಚನಗಳನ್ನು ಬರೆದಿದ್ದಾನೆ. ಇವನು ವೀರಶೈವಕವಿ.

## ವಚನಗಳು.

... ಈತನ ವಚನಗಳಲ್ಲಿಯೂ ಇವನ ಹೆಸರು ಸೂಚಿತವಾಗಿದೆ. ಒಂದು ವಚನವನ್ನು ಉದಾಹರಿಸುತ್ತೇವೆ :—

ಆನುಳ್ಳನಕ ನೀನುಂಟೆಲೆಮಾಯೆ, ಆನಿಲ್ಲದಿರ್ದಡೆ ನೀನಿಲ್ಲ. ಆರ್ ನೀನೆಂಬು
ಭಯವಲ್ಲಿಯಲು ಆನಂದನಿಜಗುಣಯೋಗ ॥ 433 ॥

---

## ಅಮುಗಿದೇವಯ್ಯ. ಸು. 1160.

ಇವನು ವಚನಗಳನ್ನು ಬರೆದಿದ್ದಾನೆ. ಈತನು ವೀರಶೈವಕವಿ.

## ವಚನಗಳು.

ಇವನ ವಚನಗಳಲ್ಲಿ **ಅಮುಗೇಶ್ವರಲಿಂಗ** ಎಂಬ ಅಂಕಿತವಿದೆ. ಒಂದು ವಚನವನ್ನು ತೆಗೆದು ಬರೆಯುತ್ತೇವೆ :—

ವಿಶ್ವಮಯರೂಪಾಗಿ ಬಂದೆಯಯ್ಯಾ. ಭಕ್ತಿಗೆ ಎನ್ನ ಮನಕ್ಕೆ ಸಲೆ ಸಂದ ನಿಲವು
ಅಮುಗೇಶ್ವರಲಿಂಗಕ್ಕೆ ಮಾಟವಾಯಿತ್ತು ॥ 434 ॥

---

## ಕಲಿದೇವಯ್ಯ. ಸು. 1160.

ಈತನು ವಚನಗಳನ್ನು ಬರೆದಿದ್ದಾನೆ. ಇವನು ವೀರಶೈವಕವಿ.

## ವಚನಗಳು.

ಈತನ ವಚನಗಳಲ್ಲಿ **ಕಲಿದೇವರದೇವ** ಎಂಬ ಅಂಕಿತವಿದೆ. ಒಂದು ವಚನವನ್ನು ಉದಾಹರಿಸುತ್ತೇವೆ :—

ಹುಟ್ಟಿದ ಬೀಜವಿದ್ದಡೇನಯ್ಯಾ ಧರೆಯೊಳಗೆ; ಅಟ್ಟುಣಬಾರದ ಮಡಕೆಯಿದ್ದಡೇನಯ್ಯಾ ಮನೆಯೊಳಗೆ; ಶಿವನಿಮ್ಮ ಮುಟ್ಟಿದ ಮನವಿದ್ದಡೇನಯ್ಯಾ ತನುವಿನೊಳಗೆ. ಕೆಚ್ಚಲ ಕಚ್ಚಿಹ ಉಣ್ಣೆ ಬಲ್ಲುದೇ ಕ್ಷೀರದ ರುಚಿಯನು? ಬಚ್ಚಲೊಳಗಣ ಬಾಲಹುಲು ಬಲ್ಲುದೇ ನಿಚ್ಚಳದ ನೀರ ಸುಖವನು? ನಿಚ್ಚನಿಚ್ಚಲೋದುವ ಗಿಳಿ ಬಲ್ಲುದೇ ತನಗೆ ಬಹ ಬೆಕ್ಕಿನ ಬಾಧೆಯನು? ಹುಚ್ಚುಗೊಂಡ ನಾಯಿ ಬಲ್ಲುದೇ ಸಾಕಿದೊಡೆಯನನು? ಇದು ಕಾರಣ ಒಡಲ ಪಡೆದಡೇನು? ಮಡದಿಯರ ಸೆರೆಹಿದಡೇನು? ಒಡವೆಯ ಗಳ್ಳಿಸಿದಡೇನು? ಶಿವನೇ ನಿಮ್ಮ ನಿಜಾಯದ ಮನುಜನ ಒಡಲೆಂಬುದು ಹೊಲೆಜೋಗಿಯ ಕೈಯ ಒಡೆದ ಸೊರೆಯಂತೆ ಕಾಣಾ ಕಲಿದೇವರದೇವ ॥ 435 ॥

---

## ಗಜೇಶ ಮಸಣಯ್ಯ. ಸು. 1160.

ಇವನು ವಚನಗಳನ್ನು ಬರೆದಿದ್ದಾನೆ. ಈತನು ವೀರಶೈವ ಕವಿ.

### ವಚನಗಳು.

ಇವನ ವಚನಗಳ ಸಂಖ್ಯೆ 60. ಇವುಗಳಲ್ಲಿ **ಮಹಾಲಿಂಗಗಜೇಶ್ವರ** ಎಂಬ ಅಂಕಿತವಿದೆ. ಒಂದೆರಡು ವಚನಗಳನ್ನು ಉದ್ಧರಿಸಿ ಬರೆಯುತ್ತೇವೆ:—

(1) ಇಂದುವಿನಲ್ಲಿ ಉದಯವಾದ ಆಲಿಕಲ್ಲಿನಂತೆ ಮುನಿಸ ಮಜ್ಜಿದಿರ್ದಳವ್ವೆ. ಅವನ ಸುಖದಲ್ಲಿ ಸುಖಿಯಾದಳು; ಅಗಲಿದಡೆ ಕಲಿಗೊಂಡಳು. ಮಹಾಲಿಂಗಗಜೇಶ್ವರ ದೇವರಲ್ಲಿ ಮನಸೋಂಕಿ ಮನಲೀನವಾದಳವ್ವಾ ॥ 436 ॥

(2) ಒಲಿದವರ ಕೊಲುವಡೆ ಮುನಿದ ಕೂರಲಗೇಕೆ? ಅವರನೊಲ್ಲೆನೆಂದಡೆ ಸಾಲದೆ? ಮಹಾಲಿಂಗಗಜೇಶ್ವರನ ಶರಣರನಗಲಿದಡೆ ತುಪ್ಪದಲ್ಲಿ ಕೆಚ್ಚನಂದಿಸಿದಂತಾದೆನವ್ವಾ ॥437॥

---

## ಸಿಮ್ಮಲಿಗೆಯ ಚೆನ್ನಯ್ಯ. ಸು. 1160.

ಈತನು ವಚನಗಳನ್ನು ಬರೆದಿದ್ದಾನೆ. ಇವನು ವೀರಶೈವ ಕವಿ.

### ವಚನಗಳು.

ಇವನ ವಚನಗಳಲ್ಲಿ **ಸಿಮ್ಮಲಿಗೆಯ ಚೆನ್ನರಾಮ** ಎಂಬ ಅಂಕಿತವಿದೆ. ಒಂದು ವಚನವನ್ನು ಉದಾಹರಿಸುತ್ತೇವೆ:—

ಬಟ್ಟೆಯಲ್ಲಿ ಹೋಗುತ್ತಿರ್ಪ ಮನುಜನೊಬ್ಬನನು ಹುಲಿ ಕಾಡುಗಿಚ್ಚು ರಕ್ಕಸಿ ಕಾಡಾನೆಗಳು ನಾಲ್ಕು ದಿಕ್ಕಿನಲ್ಲಿ ಅಟ್ಟಿ ಬರುತ್ತಿರಲು, ಅವಂ ಕಂಡು ಭಯದಿಂದ ಹೋಗಲು ದಿಕ್ಕು ತೋಱದೆ ಹಾಳ್ಬಾವಿಯಂ ಕಂಡು ತಲೆಯೂಱಿ ಬೀೞ್ವುವಲ್ಲಿ ಹಾವ ಕಂಡು ಬೀೞಲಮ್ಮದೆ ಇಲಿ ಕಡಿದ ಬಳ್ಳಿಯಂ ಹಿಡಿದು ನಿಲ್ಲಲು, ಜೇನಹುೞ್ವು ಮೈನೂಱಿ ವಾಗ ಮೂಗಿನ ತುದಿಯಲೊಂದು ಹನಿ ಮಧುಬಿಂದು ಬೀೞಲಾಗಿ ಆ ಮಧುವಂ ಕಂಡು ಹಿರಿದಪ್ಪ ದುಃಖವನೆಲ್ಲವ ಸೈರಿಸಿ ನಾಲಗೆಯಲ್ಲಿ ಆ ಮಧುವ ಸೇವಿಸುವನಂತೆ ಈ ಸಂಸಾರ ಸುಖವ ವಿಚಾರಿಸಿ ನೋಡಿದಡೆ ದುಃಖದಾಗರವು. ಇದನಱಿದು ಸಕಲವಿಷಯಂಗಳ ಲ್ಲಿಯು ಸುಖವಿಂತುಟೆಂದು ನಿರ್ವಿಷಯಿಯಾಗಿ ನಿಂದ ನಿಲವು ನೀನೆ ಸಿಮ್ಮಲಿಗೆಯ ಚೆನ್ನರಾಮ ॥ 438 ॥

---

## ಮನುಮುನಿಗುಮ್ಮಟದೇವ. ಸು. 1160.

ಈತನು ವಚನಗಳನ್ನು ಬರೆದಿದ್ದಾನೆ. ನಮಗೆ ದೊರೆತ ಇವನ ವಚನಗಳ ಪ್ರತಿಯ ಆದಿಭಾಗದಲ್ಲಿ ಈತನ ವಿಷಯವಾಗಿ ಹೀಗೆ ಬರೆದಿದೆ:—

ಬಿಜ್ಜಳಂಗೆ ಹದಿನೆಂಟು ದೋಷಗಳಂ ತೀರ್ದಿ ಎಂಬತ್ತುನಾಲ್ಕು ಲಕ್ಷ ಜೀವರಾಶಿಗಳ ಸರ್ವ ಆತ್ಮಭೂತಹಿತನಾಗಿ ಇರೆಂದು ಆತಂಗೆ ಉಪದೇಶಗುರುವಾದ ವಿಾಮಾಂಸಕ ಅವಿಾಮಾಂಸಕಂಗೆ ಸಕಲವ್ರತನೇಮ ನಿತ್ಯವರ್ತಮಾನಕೃತ್ಯ ಜೀವನೇಮಗುಣನಾಮವಂ ಬೋಧಿಸಿದ ಬೌದ್ಧ ಅವತಾರಕ್ಕೆ ಮುಖ್ಯ ಆಚಾರ್ಯನಾದ ತನ್ನ ಸಮಯಕ್ಕೆ ನಿಂಧುಚಂದ್ರಮನಾದ ಮನುಮುನಿ ಗುಮ್ಮಟದೇವರು.

ಇದರಿಂದ ಇವನು ಬಿಜ್ಜಳನ ಸಮಕಾಲದವನೆಂದೂ ಅವನ ಗುರುವಾಗಿದ್ದನೆಂದೂ ತಿಳಿಯುತ್ತದೆ. ಇವನನ್ನು ಜೈನನೆಂಬುದಕ್ಕೆ ಬದಲಾಗಿ ಬೌದ್ಧನೆಂದು ಹೇಳಿರುವುದು ತಪ್ಪಾಗಿರಬಹುದು. ವೀರಶೈವವಚನಕಾರರ ಗೋಷ್ಠಿಯಲ್ಲಿ ಈತನನ್ನೂ ಸೇರಿಸಿರುವುದನ್ನು ನೋಡಿದರೆ ಇವನು ಜೈನನಾಗಿದ್ದು ಆಮೇಲೆ ವೀರಶೈವನಾಗಿರಬಹುದೋ ಎಂಬ ಸಂದೇಹವುಂಟಾಗುತ್ತದೆ.

### ವಚನಗಳು.

ಇವನ ವಚನಗಳ ಸಂಖ್ಯೆ 100. ಇವುಗಳಲ್ಲಿ **ಗುಮ್ಮಟನಾಥನೊಡೆಯ ಅಗಮ್ಮೇಶ್ವರಲಿಂಗ** ಎಂಬ ಅಂಕಿತವಿದೆ. ಒಂದೆರಡು ವಚನಗಳನ್ನು ತೆಗೆದು ಬರೆಯುತ್ತೇವೆ:—

(1) ತತ್ತ್ವಮಸಿ ಎಂಬ ತ್ರಿವಿಧಭೇದಂಗಳಲ್ಲಿ ತ್ರಿವಿಧಮಯನಾಗಿ, ತ್ರಿಗುಣಾತ್ಮಕನಾಗಿ, ತ್ರಿಶಕ್ತಿಪತಿಯಾಗಿ ಗತಿಯ ತೋಱಿಹೆನೆಂದು ಪ್ರತಿರೂಪಾದೆ. ಎಳ್ಳಿನೊಳಗಣ ಎಣ್ಣೆ, ಕಲ್ಲಿನೊಳಗಣ ಬೆಂಕಿ, ಬೆಲ್ಲದೊಳಗಣ ಮಧುರ ಅಲ್ಲಯೇ ಅಡಗಿ ಮಧನದಿಂದಲ್ಲದೆ ತೋಱದವೋಲ್ ಅಲ್ಲಿಯೇ ಅಡಗಿದೆ ಗುಡಿಯೊಳಗೆ ಗುಮ್ಮಟನಾಥನೊಡೆಯ ಅಗಮ್ಮೇಶ್ವರಲಿಂಗ ॥ 439 ॥

(2) ಕಣ್ಣಿನಲ್ಲಿ ನೋಡುವರೆ ತೊಗಲಿನವನಲ್ಲ ; ಕೈಯಲ್ಲಿ ಒಡಿವರೆ ಮೈಯವನಲ್ಲ ; ಭಾವದಲ್ಲಿ ನೋಡುವರೆ ಬಯಲಸ್ವರೂಪ : ನಿನ್ನೊಡಗ ಏತರಿಂದಱಿವೆ? ಎನ್ನ ಭ್ರಾಂತಿನ ಬಲೆಗೆ ಸಿಕ್ಕಿಸಿ ಹೋದೆ ಗುಡಿಯ ಗುಮ್ಮಟನಾಥನೊಡೆಯ ಅಗಮ್ಮೇಶ್ವರಲಿಂಗ ॥ 440 ॥

**ಹಡಪದ ಅಪ್ಪಣ್ಣ, ಬಿಜ್ಜಳದೇವಿ, ಕಾಳವ್ವೆ, ಬಾಚಿಕಾಯಕದ ಬಸವಪ್ಪ** ಇವರುಗಳು ವಚನಗಳನ್ನು ಬರೆದಿರುವಂತೆ ತಿಳಿಯಬರುತ್ತದೆ.

**ಕೊಂಡಗೂಳಿ ಕೇಶಿರಾಜ,**[1] **ಮರುಳುದೇವ** ಇವರುಗಳೂ ವಚನಗಳನ್ನು ಬರೆದಿದ್ದಾರೆ. ಈ ವೀರಶೈವ ಕವಿಗಳ ವಚನಗಳು ಅವರವರ ನಾಮನಿರ್ದೇಶ ದೊಡನೆ ನಮಗೆ ದೊರೆತಿಲ್ಲ. ಇವರು ಉಪಯೋಗಿಸಿರುವ ಅಂಕಿತಗಳು ಇಂಥವು ಎಂದು ತಿಳಿದರೆ ನಮಗೆ ದೊರೆತಿರುವ ವಚನರಾಶಿಯಲ್ಲಿ ಆ ಅಂಕಿತವುಳ್ಳವು ಗಳನ್ನು ಆರಿಸಿ ಇಂಥಿಂಥವರವು ಎಂದು ಹೇಳಬಹುದು. ಪ್ರಕೃತದಲ್ಲಿ ಇದಕ್ಕೆ ಅವಕಾಶವಿಲ್ಲದಿರುವುದಕ್ಕಾಗಿ ವಿಷಾದಿಸಬೇಕಾಗಿದೆ.

ಈ ಕವಿಗಳ ವಿಷಯವಾಗಿ ವೀರಶೈವ ಗ್ರಂಥಗಳಿಂದ ತಿಳಿದುಬರುವ ಅಂಶ ಗಳನ್ನು ಸಂಗ್ರಹವಾಗಿ ಬರೆಯುತ್ತೇವೆ :—

## ಹಡಪದ ಅಪ್ಪಣ್ಣ. ಸು. 1160.

ಈತನು ಒಂದು ಕಾಲಜ್ಞಾನವನ್ನೂ ಬರೆದಿರುವಂತೆ ತಿಳಿಯುತ್ತದೆ. ಬಸವನು ಸಂಗಮೇಶ್ವರನಲ್ಲಿ ಐಕ್ಯವಾದುದನ್ನು ಕಂಡು ಇವನೂ ತನ್ನ ಇಷ್ಟ ಲಿಂಗದಲ್ಲಿ ಐಕ್ಯವಾದನು.

## ಬಿಜ್ಜಳದೇವಿ. ಸು. 1160.

ತಾಯಿಲ್ಲದ ತಬ್ಬಲಿಯಾದುದರಿಂದ ಶಿವನಿಗೆ ತಲೆಯೆಲ್ಲಾ ಜಡೆಗಟ್ಟಿ ಕೊಂಡು ಮೈಯೆಲ್ಲಾ ಬೂದಿಯಾಗಿದೆಯೆಂದು ಈಕೆ ಹಲುಬಿ, ಆತನಿಗೆ ನಾನಾ ದರೂ ತಾಯಾಗಿ ಸಲಹುವೆನು ಎಂದು ನಿಜಲಿಂಗವನ್ನು ನೋಡಲು ಅದು ಶಿಶು ರೂಪವನ್ನು ತಾಳಿತು. ಅದನ್ನು ಪ್ರೀತಿಯಿಂದ ಸಲಹಿ ಅದರ ಬಾಲಲೀಲೆಯನ್ನು ನೋಡಿ ಆನಂದಿಸಿದಳು.

## ಕಾಳವ್ವೆ. ಸು. 1160.

ಈಕೆ ಕಗ್ಗಲ್ಲಿನಿಂದ ಹಾಲನ್ನು ಕರೆದು ಈಶ್ವರನಿಗೆ ಉಣಿಸಿದಳು.

---

## ಮೈದುನರಾಮಯ್ಯ. ಸು. 1160.

ಇವನು ಕನ್ನಡದಲ್ಲಿ ಗೀತಿಗಳನ್ನು ಹಾಡಿದಂತೆ ತಿಳಿಯಬರುತ್ತದೆ.

ಈತನು ವೀರಶೈವಕವಿ; ಇವನ ತಂದೆ ಸೋಮನಾಥ, ತಾಯಿ ಮಹಾದೇವಿ, ಸ್ಥಳ ಆಂಧ್ರದೇಶದ ಭೀಮಾವತೀಪುರ. ದೀಪಾವಳಿಗೆ ಹುಡುಗರೆಲ್ಲಾ ಅಕ್ಕಬಾವಂದಿ

1. ಪುಟ 185.

ರನ್ನು ಕರೆದುತರಲು, ಇವನು ತನ್ನ ಅಕ್ಕಬಾವಂದಿರನ್ನು ತಾನೂ ಕರೆದುತರ ಬೇಕೆಂದು ತಂದೆತಾಯಿಗಳನ್ನು ಕಾಡಿದನು. ಅವರು—ನಿನಗೆ ಪಾರ್ವತಿಯೇ ಅಕ್ಕನು, ಈಶ್ವರನೇ ಬಾವನು—ಎಂದು ಹೇಳಿದಾಗ, ಶ್ರೀಶೈಲಕ್ಕೆ ಹೋಗಿ ಪಾರ್ವತಿಯನ್ನೂ ಈಶ್ವರನನ್ನೂ ಕರೆದುಕೊಂಡು ಬಂದನು—ಎಂದು ಇತಿಹಾಸ ವಿದೆ.

ಇವನ ವಿಷಯವಾಗಿ ಮೈದುನರಾಮಯ್ಯನ ರಗಳೆ ಮೊದಲಾದ ಗ್ರಂಥ ಗಳು ಹುಟ್ಟಿವೆ.

---

## ನೀಲಮ್ಮ. ಸು. 1160.

ಈಕೆ ಪ್ರಸಾದಸಂಪಾದನೆಯನ್ನೂ ಒಂದು ಕಾಲಜ್ಞಾನವನ್ನೂ ಬರೆದಿರು ವಂತೆ ತಿಳಿಯಬರುತ್ತದೆ.

ಇವಳು ವೀರಶೈವಕವಿ; ಬಸವನ ಸೋದರದ ಮಾವನಾದ ಬಲದೇವ ಮಂತ್ರಿಯ ತಮ್ಮನಾದ ಸಿದ್ದಣ್ಣಮಂತ್ರಿಯ ಮಗಳು. ಈಕೆಗೆ ಬಸವನು ಸಂಗಮೇಶ್ವರನ ಕೈಯಲ್ಲಿ ದೀಕ್ಷೆಕೊಡಿಸಿ ಈಕೆಯನ್ನು ಮದುವೆಯಾದನು.

ನೀಲಮ್ಮನ ಸ್ತೋತ್ರ, ನೀಲಾಂಬಿಕಾಪಂಚವಿಂಶತಿ, ನೀಲಮ್ಮನ ತ್ರಿವಿಧಿ ಮೊದಲಾದ ಗ್ರಂಥಗಳು ಇವಳ ಸ್ತುತಿರೂಪವಾಗಿವೆ.

---

## ಕವಿರಾಮ. ಸು. 1160.

**ಸಿಂಗಿರಾಜನು** (ಸು. 1500) ತನ್ನ ಮಲಬಸವರಾಜ ಚಾರಿತ್ರದಲ್ಲಿ **ರಸಕವಿರಾಮ** ಎಂಬವನನ್ನು ಬಿಜ್ಜಳನ ಆಸ್ಥಾನದಲ್ಲಿದ್ದ ಕೊಂಡೆಯರ ಗುಂಪಿ ನಲ್ಲಿ ಸೇರಿಸಿ ಹೇಳಿದ್ದಾನೆ. ಇವನು ಬ್ರಾಹ್ಮಣಕವಿಯೆಂದು ತೋರುತ್ತದೆ; ಆತ ಗ್ರಂಥವನ್ನು ರಚಿಸಿದ್ದಾನೆಯೋ ತಿಳಿಯದು.

---

## ನಿಂಬಾಣದ ಗಣೇಶ್ವರ. ಸು. 1160.

ಇವನು ಶಿವನ ಸಗುಣಲೀಲೆ, ನಿರ್ಗುಣಾನಂದಲೀಲೆ, ಭಕ್ತ್ಯಾನಂದಲೀಲೆ ಇವುಗಳನ್ನು ರಚಿಸಿರುವಂತೆ ತಿಳಿಯಬರುತ್ತದೆ.[1] ಈತನು ವೀರಶೈವಕವಿ.

---

1. ಭೈರವೇಶ್ವರಕಾವ್ಯದ ಕಥಾಸೂತ್ರರತ್ನಾಕರ.

## ಶಿವಯೋಗಿದೇವ. ಸು. 1160.

ಈತನು ಸಿರಸಿಗೆಯೆಂಬ ಪುರದಲ್ಲಿ ಹೊಸ ಹೊಸದಾಗಿ ಕಂದ ವೃತ್ತ ರಗಳೆ ತ್ರಿಪದಿ ದಂಡಕ ವಚನ ಅಷ್ಟಕ ಮೊದಲಾದುವನ್ನು ರಚಿಸಿ ಶಿವನನ್ನು ಸ್ತುತಿಸುತ್ತಿದ್ದನೆಂದು ತಿಳಿಯುತ್ತದೆ.[1] ರಾಘವಾಂಕನು (ಸು. 1165) ತನ್ನ ಹರಿಶ್ಚಂದ್ರಕಾವ್ಯದಲ್ಲಿ ಶಿವನೆಂಬ ಒಬ್ಬ ಕವಿಯನ್ನು ಸ್ತುತಿಸಿದ್ದಾನೆ. ಈತನೇ ಆಗಿರಬಹುದೋ ಏನೋ ತಿಳಿಯದು. ಇವನು ವೀರಶೈವ ಕವಿ; ಈತನ ಗ್ರಂಥಗಳಾವುವೂ ದೊರೆತಿಲ್ಲ.

---

## ಶೀಲವಂತಯ್ಯ. ಸು. 1160.

ಈತನು ಆತ್ಮಲಿಂಗಪ್ರಣವಸಂಯೋಗಸ್ಥಲದ ತ್ರಿವಿಧಿಯನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಜಟ್ಟಿಕಾಯಕದವನು. ಈತನು ಮೊರದರಕ್ಕೆ ಪವಾಡವನ್ನು ಮಾಡಿ ಜಯಚಂದ್ರರಾಜನನ್ನು ಮೆಚ್ಚಿಸಿ ಕಾಶೀಕ್ಷೇತ್ರದಲ್ಲಿ ಮಠವನ್ನು ಕಟ್ಟಿ ಮಲ್ಲಿಕಾರ್ಜುನನೆಂಬವನಿಗೆ ಪಟ್ಟ ಕಟ್ಟಿ ಆ ಮಠದ ಕಂಬದಲ್ಲಿದ್ದು ಅದೃಶ್ಯನಾದನು ಎಂದು ಕೆಳದಿನೃಪವಿಜಯದಲ್ಲಿ ಹೇಳಿದೆ.

ಇವನ ಗ್ರಂಥ

### ಆತ್ಮಲಿಂಗಪ್ರಣವಸಂಯೋಗಸ್ಥಲದ ತ್ರಿವಿಧಿ.

ಇದಕ್ಕೆ ಶೀಲವಂತಯ್ಯನ ತ್ರಿವಿಧಿ ಎಂದು ಸಾಧಾರಣವಾದ ಹೆಸರು; ಗುರು ಸ್ತೋತ್ರ ಎಂಬ ಹೆಸರೂ ಉಂಟು. ಇದರಲ್ಲಿ 111 ಪದ್ಯಗಳಿವೆ; ಪದ್ಯಗಳು ಪ್ರಾಯಿಕವಾಗಿ 'ಗುರುಲಿಂಗ' ಎಂದು ಮುಗಿಯುತ್ತವೆ ಇದಕ್ಕೆ ಎರಡು ಕನ್ನಡ ವಾಖ್ಯಾನಗಳಿವೆ. ಗ್ರಂಥಾದಿಯಲ್ಲಿ ಯತಿವರಮರುಳಾರ್ಯನ ಸ್ತುತಿ ಇದೆ.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

ಗುರುನೆ ಇಹಪರಸುಖದ ವರವೆ ಅಂತಸ್ಥಿರ। ಹರನೆ ಸುಜ್ಞಾನದಿರವೆ।
ಕಾರುಣ್ಯಸಾ। ಗರವೆ ಮರುಳೇಶ ಶರಣಾಗು ॥ 441 ॥

ಸುರಚಾಪ ನಭದಲ್ಲಿ ಮರುತನೊಳ್ ಸುಲ್ಲಿ ಶಿಖಿಯೊ । ಳುರಿ ವಾರಿಯಲ್ಲಿ ಕರಕ।
ಧರೆಯೊಳು ಪಾಂಸು । ಬೆರೆದಂತೆ ಗುರುವಿನೊಳೇಕ ॥ 442 ॥

ಬಿಂದುರೂಪವೆ ಪೀಠ ಮುಂದೆ ನಾದವೆ ವೃತ್ತ । ಸಂದಗೋಮುಖವೆ ಕಳೆ ತ್ರಿವಿಧ ।
ಹೃದಯದೊಳು । ನಿಂದ ಚಿನ್ಮಯನೆ ಗುರುಲಿಂಗ ॥ 443 ॥

---

1. ಭೈರವೇಶ್ವರಕಾವ್ಯದ ಕಥಾಸೂತ್ರರತ್ನಾಕರ.

## ಮರುಳುದೇವ. ಸು. 1160.

ಈತನು ಮರುಳುದೇವರ ಕಂದ, ಮರುಳುದೇವರ ವಚನ[1] ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಇವನಿಗೆ ಮರುಳುಶಂಕರದೇವ, ಉಜ್ಜೈನಿಯ ಮರುಳುದೇವ ಎಂಬ ಹೆಸರುಗಳೂ ಉಂಟು. ಈತನು ವೀರಶೈವಕವಿ; ಕಾಳಿಂಗದೇಶದಿಂದ ಬಂದು ಕಲ್ಯಾಣದಲ್ಲಿ ಹನ್ನೆರಡು ವರ್ಷ ವಾಸಮಾಡಿದಂತೆ ತಿಳಿಯಬರುತ್ತದೆ.

ಇವನ ಗ್ರಂಥಗಳಲ್ಲಿ

### ಮರುಳುದೇವರ ಕಂದ.

ಇದಕ್ಕೆ "ಮರುಳುದೇವರು ನಿರೂಪಿಸಿದ ಪ್ರಭುದೇವರಕಂದ" ಎಂಬ ಹೆಸರೂ ಉಂಟು. ಇದರಲ್ಲಿ 135 ಪದ್ಯಗಳಿವೆ.

ಪದ್ಯಗಳು ಪ್ರಾಯಶಃ 'ಪರಮಪ್ರಭುವೇ' ಎಂದು ಮುಗಿಯುತ್ತವೆ. ಗ್ರಂಥವು ಶಿವಸ್ತುತಿರೂಪವಾಗಿದೆ. ಇದು "ಲಿಂಗಾಂಗದ ಸಂಗದ ಸದಮಳ ಸದ್ಭಾವಪೂಜೆ" ಎಂದು ಕವಿ ಹೇಳುತ್ತಾನೆ. ಇದರಿಂದ ಕೆಲವು ಪದ್ಯಗಳನ್ನು ಎತ್ತಿ ಬರೆಯುತ್ತೇವೆ :—

ಹೊರೆಯೇಱುತೆ ತನು ಪುಳಕಾಂ । ಕುರದೋಱುತೆ ಕರಣತತಿಗಳುರವಣಿಸುತ್ತುಂ ।
ಸೆರೆ ಬಿಗಿಯುತುಮಶ್ರುಜಲಂ । ಸುರಿಯುತುಮಿಹ ಸೊಗದ ಸೊಗಸದೆಂದಾದಪುದೋ
॥ 444 ॥

ಕಂಟಕವ ಕಳೆದೆನೆಲೆ ಶಿವ । ದಾಂಟಿದೆ ಸಂಸಾರಶರಧಿಯಂ ಕರದೊಳ್ ನಿಃ ।
ನಂಟಿ ನೆಲೆಗೊಂಡಕಾರಣ । ವಿಾಂಟಿದೆನಾನಂದಸುಧೆಯ ಪರಮಪ್ರಭುವೇ ॥ 445 ॥

ಪರದೈವಕೆ ಪರವನಿತೆಗೆ । ಪರಹಿಂಸೆಗೆ ಪರಧನಕ್ಕೆ ಪರನಿಂದೆಗೆ ನಾಂ ।
ಪರರ ತುತಿಗೈವ ದೈನ್ಯ । ಕ್ಕುರವಗೆಸದ ತೆಱಿನ ಮಾಡು ಪರಮಪ್ರಭುವೇ ॥ 446 ॥

ಬಾರೆನ್ನ ಕುಲವೆ ಚಲವೇ । ಬಾರೆನ್ನಯ ಸುಕೃತದೊಲವೆ ನಿತ್ಯದ ಬಲವೇ ।
ಬಾರೆನ್ನ ಬಗೆಯ ನಲವೇ । ಬಾರೆನ್ನಯ ನಿಜದ ನಿಲವೆ ಪರಮಪ್ರಭುವೇ ॥ 447 ॥

ಎಲೆ ದೇವ ನಿನ್ನ ಕರುಣಾ । ನಿಲನಟ್ಟುಳಿಗಂಜಿ ತೊಲಗಿತಘಘನನಿಚಯಂ ।
ಸಿಲುಕಿತ್ತು ಮನಂ ನಿಮ್ಮೊಳ್ । ಸಲುಗೆಯ ಮಗನಾದೆನಯ್ಯ ಪರಮಪ್ರಭುವೇ
॥ 448 ॥

---

1. ಪುಟ 197.

## ಇತರ ವಚನಕಾರರು.

ಬಸವನಿಂದ ಈಚೆಗೆ ಇದುವರೆಗೂ ಹೇಳಿದ ಕವಿಗಳು ಸ್ವಲ್ಪ ಹೆಚ್ಚು ಕಡಮೆ ಬಸವನ ಸಮಕಾಲದವರೆಂದು ತಿಳಿಯಬರುತ್ತದೆ. ಇವರಲ್ಲಿ ಹಲವರು ವಚನಗಳನ್ನು ಬರೆದಿರುವುದು ವಾಚಕರಿಗೆ ವೇದ್ಯವಾಗಿಯೇ ಇದೆ. ಇನ್ನೂ ಕೆಲವರು ವಚನಕಾರರು ಇದ್ದಾರೆ. ಇವರಲ್ಲಿ ಸ್ವಲ್ಪ ಜನ ಬಸವನ ಕಾಲಕ್ಕೆ ಹಿಂದಣವರೆಂದೂ ಉಳಿದವರು ಬಹಳಮಟ್ಟಿಗೆ ಅವನ ಸಮಕಾಲಿಕರೆಂದೂ ತಿಳಿಯುತ್ತದೆ. ಇವರೆಲ್ಲರೂ ವೀರಶೈವರು. ಇವರ ವಿಷಯವಾಗಿ ವೀರಶೈವ ಗ್ರಂಥಗಳಿಂದ ತಿಳಿದು ಬರುವ ಅಂಶಗಳನ್ನು ಸಂಗ್ರಹಿಸಿ ಬರೆದು ಅವರವರ ವಚನಗಳನ್ನು ಉದಾಹರಿಸುತ್ತೇನೆ.

---

## ಜೇಡರ ದಾಸಿಮಯ್ಯ. ಸು. 1040.

ಇವನು ಜೈನರನ್ನು ಜಯಿಸಿ ತನ್ನ ಶಿಷ್ಯೆಯಾದ ಸುಗ್ಗಲದೇವಿಯ ಗಂಡ ಜಯಸಿಂಹರಾಜನನ್ನು (ದೇಸಿಂಗರಾಯ) ವೀರಶೈವನನ್ನಾಗಿ ಮಾಡಿದಂತೆ ತಿಳಿಯುತ್ತದೆ[1]. ಬ್ರಹ್ಮಶಿವನು (ಸು. 1125) ಈ ಕವಿಯ ಹೆಸರನ್ನು ಹೇಳುವುದರಿಂದ ಇವನು ಅವನ ಕಾಲಕ್ಕೆ ಹಿಂದೆ ಇದ್ದಿರಬೇಕು. ಆದುದರಿಂದ ಈರಾಜನು 1018 ರಿಂದ 1042 ರ ವರೆಗೆ ಆಳಿದ ಚಾಳುಕ್ಯರಾಜನಾದ 1 ನೆಯ ಜಯಸಿಂಹನಾಗಿರಬೇಕು.

### ವಚನಗಳು.

ಇವನ ವಚನಗಳ ಸಂಖ್ಯೆ 106. ಇವುಗಳಲ್ಲಿ **ರಾಮನಾಥ** ಎಂಬ ಅಂಕಿತವಿದೆ. ಕೆಲವು ವಚನಗಳನ್ನು ತೆಗೆದು ಬರೆಯುತ್ತೇವೆ:—

(1) ಕಡೆಗೀಲಿಲ್ಲದ ಬಂಡಿ ಹೊಡಗೆಡೆವುದಂ ಮಾಣ್ಬುದೆ? ಕಡೆಗೀಲು ಬಂಡಿಗಾಧಾರ. ಕಡುದರ್ಪವೇಱಿದ ಒಡಲೆಂಬ ಬಂಡಿಗೆ ಮೃಡಶರಣರ ನುಡಿಗಡಣವೇ ಕಡೆಗೀಲು ಕಾಣಾ ರಾಮನಾಥ ॥ 449 ॥

(2) ಆಡಗ ತಿಂಬರು ಕಣಕದಡಿಗೆಯಿರಲ್ಕೆ; ಸುರೆಯ ಕುಡಿವರು ಹಾಲಿರಲ್ಕೆ; ಮುಕ್ಕುವರು ಬಂಗಿಯ ಸಕ್ಕರೆಯಿರಲ್ಕೆ; ಸ್ವಸ್ತ್ರೀಯಿದ್ದಂತೆ ಪರಸ್ತ್ರೀಯರಿಗೆ ಅಳುಪುವರು; ಸತ್ತ ನಾಯ ಭಕ್ಷಿಸುವ ಹಡಿಕಿಗರನೇನೆಂಬೆನಯ್ಯಾ ರಾಮನಾಥ ॥ 450 ॥

(3) ಮರದೊಳಗೆ ಮುಂದಾಗ್ನಿಯನುರಿಯದಂತಿರಿಸಿದೆ; ನೊರೆವಾಲೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ; ಶರೀರದೊಳಗಾತ್ಮನನಾರುಂ ಕಾಣದಂತಿರಿಸಿದೆ; ನೀ ಬೆರಸಿಹ ಭೇದಕ್ಕೆ ಬೆಜಿಗಾದೆನಯ್ಯ ರಾಮನಾಥ ॥ 451 ॥

---

1. ಬಸವಪುರಾಣ, ಸಂಧಿ 51; ವೃಷಭೇಂದ್ರವಿಜಯ, ಆಶ್ವಾಸ 35.

(4) ಹರ ತನ್ನ ಭಕ್ತರ ತಿರಿವಂತೆ ಮಾಡುವ; ಒರೆದು ನೋಡುವ ಸುವರ್ಣದ ಚಿನ್ನದಂತೆ; ಅರೆದು ನೋಡುವ ಚಂದನದಂತೆ; ಅರಿದು ನೋಡುವ ಕಬ್ಬಿನ ಕೋಲಿನಂತೆ, ಬೆದಱಿದೆ ಬಿಚ್ಚದೆ ಇದ್ದುಡೆ ಕರವಿಡಿದೆತ್ತಿಕೊಂಬನಮ್ಮ ರಾಮನಾಥನು ॥ 452 ॥

---

## ಮೆರೆಮಿಂಡಯ್ಯ. ಸು. 1100.

ನಂಬಿಯಣ್ಣನ (ಸುಮಾರು 8 ನೆಯ ಶತಮಾನ) ಸಮಕಾಲಿಕನಾದ **ಮೆರೆಮಿಂಡನಾರ್** ಎಂಬ ಒಬ್ಬ ದ್ರಾವಿಡದೇಶದ ಶಿವಭಕ್ತನ ಚರಿತೆ **ಬಸವಪುರಾಣದ** 26 ನೆಯ ಸಂಧಿಯಲ್ಲಿಯೂ **ವೃಷಭೇಂದ್ರವಿಜಯದ** 16 ನೆಯ ಆಶ್ವಾಸದಲ್ಲಿಯೂ ಹೇಳಿದೆ. ಕನ್ನಡ ವಚನಗಳನ್ನು ಬರೆದಿರುವ ಮೆರೆಮಿಂಡಯ್ಯನು ಈತನಲ್ಲವೆಂದು ತೋರುತ್ತದೆ. ಅವನು ಈ ಹೆಸರನ್ನು ಧರಿಸಿದ ಕನ್ನಡ ದೇಶದ ಕವಿಯಾಗಿರಬಹುದೆಂದೂ ಸುಮಾರು 1100 ರಲ್ಲಿ ಇದ್ದಿರಬಹುದೆಂದೂ ಅಭಿಪ್ರಾಯಪಡುತ್ತೇವೆ.

### ವಚನಗಳು.

ಈತನ ವಚನಗಳ ಸಂಖ್ಯೆ 101. ಇವುಗಳಲ್ಲಿ **ವಿಘಟದೂರ ರಾಮೇಶ್ವರ ಲಿಂಗ** ಎಂಬ ಅಂಕಿತವಿದೆ. ಒಂದೆರಡು ವಚನಗಳನ್ನು ಉದಾಹರಿಸುತ್ತೇವೆ:—

(1) ಸ್ಫಟಿಕದ ಭಾಷೆ, ಮರ್ತ್ಯರ ಮಾಟದ ಭಕ್ತಿ, ಚಿತ್ತವನಱಿಯದೆ ಕಾಡುವನಯುಕ್ತಿ, ಮೃತ್ತಿನ ಬೊಂಬೆ ಅಪ್ಪುವಿನ ಮಂದಿರಕ್ಕೆ ಹೋದಂತಾಯಿತ್ತು. ವಿಘಟದೂರ ರಾಮೇಶ್ವರ ಲಿಂಗವನಱಿ. ॥ 453 ॥

(2) ತನ್ನವರನ್ಯರಹರು ಹೆಣ್ಣು ಹೊನ್ನು ಮಣ್ಣು ಹಿಡಿದು ಹೋರಲಾಗಿ; ಆಮೂಱು ಬಿಟ್ಟಡೆ ಅನ್ಯರು ತನ್ನವರಹರು. ಅಱಿದವಂಗು ಸರಿ, ಜಗದ ಒಡಲಾದವಂಗು ಸರಿ: ಆಸೆಯೊಂದೇ ಭೇದ: ಉಭಯಕ್ಕೆ ಹೊಱಗಾಗು ವಿಘಟದೂರ ರಾಮೇಶ್ವರ ಲಿಂಗವನಱಿವುದಕ್ಕೆ ॥ 454 ॥

---

## ಬಿಬ್ಬಬಾಚಯ್ಯ. ಸು. 1150.

ಇವನ ಸ್ಥಳ ಗೊಬ್ಬೂರು. ಇವನು ಶಿವಭಕ್ತರ ಪ್ರಸಾದವನ್ನು ಅಂಜಲೆಂದು ದೂಷಿಸಿದ ವಿಪ್ರರಿಗೆ ಪ್ರಸಾದಮಹಿಮೆಯನ್ನು ತೋರಿಸಿದನು.[1]

---

1. ಬ. ಪು. ಸಂ 56.

## ವಚನಗಳು.

ಇವನ ವಚನಗಳ ಸಂಖ್ಯೆ 100. ಇವುಗಳಲ್ಲಿ **ಏಣಾಂಕಧರ ಸೋಮೇಶ್ವರಲಿಂಗ** ಎಂಬ ಅಂಕಿತವಿದೆ. ಒಂದೆರಡು ವಚನಗಳನ್ನು ತೆಗೆದು ಬರೆಯುತ್ತೇವೆ :—

(1) ಹುಳಿ ಬೆಳೆದು ಸಿಹಿಯಹ ತೆಱನುಂಟು : ಸಿಹಿ ಬಲಿದು ಹುಳಿಯಹ ತೆಱನುಂಟು : ಇಂತೀ ಉಭಯಸ್ಥಲಭೇದ ತದ್ಭಾವವಲ್ಲದೆ ಅನ್ಯವಲ್ಲ ಏಣಾಂಕಧರ ಸೋಮೇಶ್ವರ ಲಿಂಗಕ್ಕೆ ॥ 455 ॥

(2) ಎಲೆಯಿಲ್ಲದ ವೃಕ್ಷದಲ್ಲಿ ಹೂವಿಲ್ಲದ ಕಾಯಾಯಿತ್ತು ; ಕಾಯಿ ಉದುರಿ ಹಣ್ಣು ಬಲಿಯಿತ್ತು ; ಕಣ್ಣಿಗೆ ಹಣ್ಣಲ್ಲದೆ ಮೆಲುವುದಕಲ್ಲ. ಏಣಾಂಕಧರ ಸೋಮೇಶ್ವರ ಲಿಂಗಕ್ಕೆ ಅರ್ಪಿತವಾಯಿತ್ತು ॥ 456 ॥

---

## ಏಲೇಶ್ವರದ ಕೇತಯ್ಯ. ಸು. 1150.

ಈತನು ಭವಿಸಂಪರ್ಕವೇ ಇಲ್ಲದೆ ಇರಲು ದ್ವೇಷಿಗಳು ಇವನ ಕಣಜಕ್ಕೆ ಬೆಂಕಿಯನ್ನು ಹಾಕಿ ಉರಿಸಿಬಿಟ್ಟಾಗ ಬೆಂದ ಬೀಜವನ್ನು ಬಿತ್ತಿ ಬೆಳೆದನು.[1]

## ವಚನಗಳು.

ಇವನ ವಚನಗಳ ಸಂಖ್ಯೆ 200. ಇವುಗಳಲ್ಲಿ **ರಾಮೇಶ್ವರ ಲಿಂಗ** ಅಥವಾ **ಏಲೇಶ್ವರ ಲಿಂಗ** ಎಂಬ ಅಂಕಿತವಿದೆ. ಒಂದೆರಡು ವಚನಗಳನ್ನು ಉದ್ಧರಿಸಿ ಬರೆಯುತ್ತೇವೆ :—

(1) ಭಕ್ತಂಗೆ ಬಯಕೆಯುಂಟೆ? ನಿತ್ಯಂಗೆ ಸಾವುಂಟೆ? ಸದ್ಭಕ್ತಂಗೆ ಮಿಥ್ಯತಥ್ಯವುಂಟೆ? ಕೃತ್ಯಭೃತ್ಯನಾದ ಠಾವಿನಲ್ಲಿ ಪ್ರತ್ಯುತ್ತರಂಗೆಯ್ದುಡೆ ಸತ್ಯ ಸದಾಚಾರಕ್ಕೆ ಹೊಜಿಗು. ಆಚಾರವೇ ಪ್ರಾಣವಾದ ರಾಮೇಶ್ವರಲಿಂಗದ ಆಣೆ ॥ 457 ॥

(2) ದಾಯಗಾಜಿನ ಶೀಲ, ತ್ರಿವಿಧಡಾಳಕನ ಭಕ್ತಿ, ಶಬರನ ದಯೆ, ಚೋರನಲಲ್ಲಿ, ಕಳ್ಳಿಯ ಬಲ್ಲತನ, ಇವೆಲ್ಲವು ಕಲ್ಲಿಯ ಮಣಿಯದಂತೆ ಅಲ್ಲಿಗಲ್ಲಿಗೆ ದಾಯ. ಇಂತೀ ಕಳ್ಳರ ವ್ರತನೇಮ ಸುಟ್ಟಿದಲ್ಲಿಯೇ ಕಾಣಬಂದಿತ್ತು ಏಲೇಶ್ವರ ಲಿಂಗಕ್ಕೆ ॥ 458 ॥

---

## ಆದಯ್ಯ. ಸು. 1150.

**ರಾಘವಾಂಕನ** (ಸು. 1165) **ಸೋಮನಾಥ ಚರಿತೆ**ಯಿಂದ ಈತನು ಸೌರಾಷ್ಟ್ರದಲ್ಲಿ ಜನಿಸಿ ಪುಲಿಗೆರೆಗೆ ಬಂದು ಜೈನರನ್ನು ಜಯಿಸಿದಂತೆ ತಿಳಿಯುತ್ತದೆ.

1. ಬ. ಪು ಸಂ 60.

## ವಚನಗಳು.

ಇವನ ವಚನಗಳ ಸಂಖ್ಯೆ 206. ಇವುಗಳಲ್ಲಿ **ಸೌರಾಷ್ಟ್ರ ಸೋಮೇಶ್ವರ ಲಿಂಗ** ಎಂಬ ಅಂಕಿತವಿದೆ. ಒಂದೆರಡು ವಚನಗಳನ್ನು ಉದ್ಧರಿಸಿ ಬರೆಯುತ್ತೇವೆ :—

(1) ಬೆಚ್ಚು ಬೇಜಱಲ್ಲದ ಸುಖವಚ್ಚಾದ ಪರಿಯ ನೋಡಾ. ಅಯ್ಯ ಅಂಗವಿಲ್ಲದ ಕೂಟ, ಸಮರಸವಿಲ್ಲದ ಬೇಟ, ಸಮರತಿಯಿಲ್ಲದ ಆನಂದ ಸನ್ನಹಿತವಾಗಿ ಸೌರಾಷ್ಟ್ರ ಸೋಮೇಶ್ವರಲಿಂಗದ ಸಂಗ ಏನೂ ಅಲ್ಲದ ನಿಸ್ಸಂಗದ ನಿಜಸುಖವನೇನೆಂಬೆನಯ್ಯ ॥ 459 ॥

(2) ಸೂಕರಂಗೆ ಸುಗಂಧ ಸೊಗಸುವುದೆ? ಶುನಕಂಗೆ ಷಡ್ರಸಾನ್ನ ಸಂಘಟ್ಟವೆ? ಕತ್ತೆಗೆ ಕರ್ಪೂರ ಯೋಗ್ಯವೆ? ಮರ್ಕಟಂಗೆ ಮುಕ್ತಾರ ಸಾಮ್ಯವೆ? ದುರ್ವಿಷಯಿಗಳಪ್ಪ ದುರಾತ್ಮರ್ಗೆ ಸೌರಾಷ್ಟ್ರ ಸೋಮೇಶ್ವರಲಿಂಗ ಸನ್ನಹಿತವೆ? ॥ 460 ॥

---

## ಹಾವಿನಹಾಳ ಕಲ್ಲಯ್ಯ. ಸು. 1150.

ಈತನು ತನ್ನನ್ನು ಕಚ್ಚಿ ಸತ್ತ ಹಾವನ್ನು ಬದುಕಿಸಿದನು; ನಾಯಿಂದ ವೇದವನ್ನು ಹೇಳಿಸಿದನು.[1]

## ವಚನಗಳು.

ಇವನ ವಚನಗಳ ಸಂಖ್ಯೆ 58. ಇವುಗಳಲ್ಲಿ **ಮಹಾಲಿಂಗ ಕಲ್ಲೇಶ್ವರ** ಎಂಬ ಅಂಕಿತವಿದೆ ಕೆಲವು ವಚನಗಳನ್ನು ಉದಾಹರಿಸುತ್ತೇವೆ :—

(1) ಅತ್ಯಾಶೆಯೆಂಬುದೇ ಪಾಪದ ಬೇರು, ಪಾಪವೆಂಬುದಿಲ್ಲ ಕಂಡಿರೆ ಅಯ್ಯ. ಪರಿಣಾಮವೆಂಬುದೇ ಪರಮಾನಂದ, ಬೇಜಱ ಪರಲೋಕವಿಲ್ಲ ಕಂಡಿರೆ ಅಯ್ಯ. ಇಹಪರದಾಶೆಯಿಲ್ಲದಿಹುದೇ ಶಿವಯೋಗ. ಮಹಾಲಿಂಗ ಕಲ್ಲೇಶ್ವರ ಬಲ್ಲ ॥ 461 ॥

(2) ಹಗಲು ಹಸಿವೆಗೆ ಕುದಿದು ಇರುಳು ನಿದ್ರೆಗೆ ಮಱುಗಿ ಉಬ್ಬಾದಾದ ಹೊತ್ತಲ್ಲ ವಿಷಯದಲ್ಲಿ ಬೆಂದು ನಾ ನಿಮ್ಮ ನೆನೆಯಲಱಯದ ಪಾಪಿ ನೋಡಯ್ಯಾ. ನಾ ನಿಮ್ಮ ದೆಸೆಯಱಯದ ಕರ್ಮಿ ನೋಡಯ್ಯಾ. ಮಹಾಲಿಂಗಕಲ್ಲೇಶ್ವರ! ಅಸಗನೀರಡಸಿ ಸಾವ ತೆಱನಂತೆ ಎನ್ನ ಯುಕ್ತಿ ॥ 462 ॥

(3) ಒಲಿದು ಒಲಿಸಿಕೊಳ್ಳಬೇಕು. ಒಲಿದಲ್ಲದೆ ಇಲ್ಲ. ಹಲವುಕೊಂಬೆಗೆ ಹಾಱಿದಿರು ಮರುಳೆ. ಅಟ್ಟ ನೋಡುವ; ಮುಟ್ಟನೋಡುವ; ತಟ್ಟನೋಡುವ; ಒತ್ತಿನೋಡುವ. ಅಟ್ಟದಡೆ ಮುಟ್ಟದಡೆ ತಟ್ಟದಡೆ ಒತ್ತದಡೆ ನಿಷ್ಠೆಯ ಬಿಡದಿರ್ದಡೆ ತನ್ನನೀವ ಮಹಾಲಿಂಗ ಕಲ್ಲೇಶ್ವರ ॥ 463 ॥

---

1. ಬ. ಪು. ಸಂ. 55.

## ಮೂದರ ದೂಳಯ್ಯ. ಸು. 1150.

ಇವನಿಗೆ ದೂಡಯ್ಯ ಎಂಬ ಹೆಸರೂ ಉಂಟು. ಇವನ ಬಚ್ಚಲಮನೆಯ ನೀರಿನ ಸಂಪರ್ಕದಿಂದ ವಿಪ್ರನ ಕುಷ್ಠವು ಪರಿಹಾರವಾಯಿತು.[1]

### ವಚನಗಳು.

ಇವನ ವಚನಗಳ ಸಂಖ್ಯೆ 102. ಇವುಗಳಲ್ಲಿ **ಕಾಮಧೂಮ ಧೂಳೇಶ್ವರ** ಎಂಬ ಅಂಕಿತವಿದೆ. ಎರಡು ವಚನಗಳನ್ನು ಉದಾಹರಿಸುತ್ತೇವೆ :—

(1) ನೆನೆವುದು ನೆನೆಹಿಸಿಕೊಂಬುದು ಜಡನೆಂದ ಮತ್ತೆ ನಾನೀನೆಂಬುದಿಲ್ಲ. ಗಾಳ್ಪಿಯ ಫಲದಂತೆ ಚೇಳಿಗೆ ಗರ್ಭವಾದಂತೆ ವೇಣುವಿಗೆ ಅಕ್ಕಿ ಹುಟ್ಟಿದ ಮತ್ತೆ ಬಾಲ್ಪುವೆಯುಂಟೆ? ನೀನೆಂಬುದ ನಾನಱಿದಲ್ಲಿ ನಾನೀನೆಂಬ ಭಾವವೇನೂ ಇಲ್ಲ ಕಾಮಧೂಮ ಧೂಳೇಶ್ವರನನಱಿಯಬಲ್ಲಡೆ ॥ 464 ॥

(2) ಕುಸುಮದೊಳಡಗಿದ ಸುವಾಸನೆಯಂತೆ. ರಸಿಕನಲ್ಲಿ ಅಡಗಿದ ಎಸಕದಂತೆ, ಕೇಶದಲ್ಲಿ ಅಡಗಿದ ರಸರಂಜನೆಯಂತೆ. ಅಱಿದಱಿಹಿಸಿಕೊಂಬುದು ಎರಡಱ್ಪುದು ಪರಿಪೂರ್ಣವಾದಲ್ಲಿ ಹಲವು ಮಾತಿನ ಹೊಲಬಿನ ಸೂತಕವೇತಕ್ಕೆ ಕಾಮಧೂಮ ಧೂಳೇಶ್ವರ ॥ 465 ॥

---

## ಬಾಹೂರ ಬೊಮ್ಮಣ್ಣ. ಸು. 1160.

ಇವನು ಕಲ್ಲುನಂದಿಯನ್ನು ಹುಲ್ಲು ಮೇಯಿಸಿದನು; ಮದಕರಿಯನ್ನು ಭಂಗಿಸಿದನು.[2]

### ವಚನಗಳು.

ಈತನ ವಚನಗಳ ಸಂಖ್ಯೆ 45. ಇವುಗಳಲ್ಲಿ **ಸಂಗನ ಬಸವಣ್ಣಪ್ರಿಯ ಬ್ರಹ್ಮೇಶ್ವರಲಿಂಗ** ಎಂಬ ಅಂಕಿತವಿದೆ. ಒಂದು ವಚನವನ್ನು ತೆಗೆದು ಬರೆಯುತ್ತೇವೆ :—

ಸದ್ಭಕ್ತಿಯಿಲ್ಲದ ವಿಶ್ವಾಸಹೀನನು ವಾಚಾ ರಚನೆಗಳಿಂದ ಮಾತಿನ ಮಾಲೆಯ ಎಷ್ಟ ನುಡಿದಡೇನು? ಹೆ. ದಂಡದಂತೆ ಮೃತಘಟದಂತೆ ಸಿಡಿಲ ಫಳದಂತೆ ಅದಾರಿಗೆಯೋಗ್ಯ? ಸಂಗನ ಬಸವಣ್ಣ ಸಾಕ್ಷಿಯಾಗಿ ಬ್ರಹ್ಮೇಶ್ವರಲಿಂಗವು ಅವರಲ್ಲಿ ನಿಲ್ಲನಾಗಿ ॥ 466 ॥

---

1. ಬ. ಪು. ಸಂ. 56. 2. ಬ. ಪು. ಸಂ. 22.

## ಪ್ರಸಾದಿ ಭೋಗಣ್ಣ. ಸು. 1160.

ಇವನ ವಚನಗಳ ಸಂಖ್ಯೆ 102. ಇವುಗಳಲ್ಲಿ **ಚೆನ್ನಬಸವಣ್ಣಪ್ರಿಯ ಭೋಗವುಲ್ಲಿಕಾರ್ಜುನಲಿಂಗ** ಎಂಬ ಅಂಕಿತವಿದೆ.

### ವಚನ.

ವಿಹಂಗನ ತತ್ತಿಗೆ ಸ್ಪರ್ಶನದಿಂದ, ಕೂರ್ಮನ ಶಿಶುವಿಂಗೆ ಕೂರ್ಮೆಯಿಂದ. ಚತುಷ್ಪಾದಿ ನರಕುಲಕ್ಕೆ ಕುಚಗಳಿಂದ, ಮಿಕ್ಕಾದ ಜೀವಜಾತಿಲಕ್ಷಣಕ್ಕೆ ತಮ್ಮ ಸ್ವಸ್ಥಾನದಲ್ಲಿಯೇ ತೃಪ್ತಿ. ಆವ ಸ್ಥಲವ ನೆಮ್ಮಿದಲ್ಲಿಯೂ ಭಾವ ಶುದ್ಧವಾದಲ್ಲಿಯೇ ಮುಕ್ತಿ. ಉಭಯಕ್ಕೆ ಉಪಮಾತೀತನಾದಾಗಲೇ ನಿರ್ವಿಜ(?) ಚೆನ್ನಬಸವಣ್ಣಪ್ರಿಯ ಭೋಗಮುಲ್ಲಿ ಕಾರ್ಜುನ ಲಿಂಗದಲ್ಲಿ ॥ 467 ॥

---

## ಅರಿವಿನ ಮಾರಿತಂದೆ. ಸು. 1160.

ಈತನ ವಚನಗಳ ಸಂಖ್ಯೆ 301. ಇವುಗಳಲ್ಲಿ **ಸದಾಶಿವಮೂರ್ತಿಲಿಂಗ** ಎಂಬ ಅಂಕಿತವಿದೆ.

### ವಚನಗಳು.

(1) ಓಗರ ಹಸಿಯುತ್ತೆಂದು ಉಂಬವರಿಲ್ಲ ; ನೀರು ಬಾಯಾಱುತ್ತೆಂದು ಕುಡಿವವರಿಲ್ಲ ; ಭೂಮಿಗೆ ಬಡತನವೆಂದು ಬಿತ್ತುವರಿಲ್ಲ. ತಮ್ಮ ಒಲವರಕ್ಕೆ ತಾವು ಮಾಡುವಲ್ಲಿಗನ್ನದ ಆಶೆ ಬೇಡ ಸದಾಶಿವಮೂರ್ತಿಲಿಂಗವಱಿವುದಕ್ಕೆ ॥ 468 ॥

(2) ಹಾಲುಬತ್ತಿದ ಹಸುವಿಂಗೆ ಕಱುವ ಬಿಟ್ಟಡೆ ಒದೆವುದಲ್ಲದೆ ಉಣಲೀಸುವುದೆ ? ಅಱಿವು ನಷ್ಟವಾದವ ಕ್ರಿಯೆಬಲ್ಲನೆ ? ಕ್ರಿಯೆಯೆಂಬುದೆ ಹಸು, ಅಱಿವೆಂಬುದೆ ಹಾಲು, ಬಯಕೆಯೆಂಬುದೆ ಕಱು. ಇಂತಿತ್ತಿವಿಧವನಱಿದಲ್ಲಿ ಸದಾಶಿವಮೂರ್ತಿಲಿಂಗವು ತಾನೆ ॥ 469 ॥

---

## ಮನಸಂದ ಮಾರಿತಂದೆ. ಸು. 1160.

ಇವನ ವಚನಗಳ ಸಂಖ್ಯೆ 102. ಇವುಗಳಲ್ಲಿ **ಮನಸಂದಿತ್ತು ಮಾರೇಶ್ವರ** ಎಂಬ ಅಂಕಿತವಿದೆ.

### ವಚನಗಳು.

(1) ಮನವಱಿದು ನಯನಕಂಡು ಕೈಯಲ್ಲಿ ಹಿಡಿದು ತೀರಬೇಕು. ಏನನಱಿದಲ್ಲಿಯೂ ಕಾಯಕ್ಕೆ ಕರ್ಮವಟ್ಟಿದು ಜೀವಕ್ಕೆ ಭವಹಱಿದು ಉರಿಕೊಂಡ ಕಪ್ಪುರದಂತೆ ಉಭಯಕ್ಕೊಡಲಿಲ್ಲದೆ ನಿಂದ ನಿಜ ಮನಸಂದಿತ್ತು ಮಾರೇಶ್ವರ ॥ 470 ॥

(2) ವೇದವ ಕಲಿತಲ್ಲಿ ಪಾಠಕನಲ್ಲದೆ ಜ್ಞಾನಿಯಲ್ಲ ; ಶಾಸ್ತ್ರಪುರಾಣವನೋದಿದಲ್ಲಿ ಪಂಡಿತನಲ್ಲದೆ ಜ್ಞಾನಿಯಲ್ಲ ; ವ್ರತನೇಮಕೃತ್ಯಪೂಜಕನಾದಡೇನು? ದಿವ್ಯಜ್ಞಾನದ ಠಾವ ನಱಿಯಬೇಕು. ಈ ಭೇದಂಗಳನಱಿದು ತಿಳಿದಲ್ಲಿ ಮನ ಸಂದಿತ್ತು ಮಾರೇಶ್ವರ ॥ 471 ॥

---

## ನಗೆಯ ಮಾರಿದಂತೆ. ಸು. 1160.

ಈತನ ವಚನಗಳ ಸಂಖ್ಯೆ 100. ಇವುಗಳಲ್ಲಿ **ಆತುರವೈರಿ ಮಾರೇಶ್ವರ** ಎಂಬ ಅಂಕಿತವಿದೆ.

### ವಚನಗಳು.

(1) ಸಮತೆಯ ಸಮಾಧಾನವ ಹೇಱಿವ ಪುಸ್ತಕ ಎತ್ತಿನಮೇಲೆ ; ಹೊಯಿದೊಣ್ಣೆ ಕೈಯಲ್ಲಿ ಲೇಸಾಯಿತ್ತು. ಈತನಿರವು ಮಾತಿನಲ್ಲಿ ಆಗಮು ಮನದಲ್ಲಿ ತೂತಿನ ಕುದಕೆಯ ಆಸೆ. ಇದು ನೀತಿಯಲ್ಲ ಆತುರವೈರಿ ಮಾರೇಶ್ವರ ॥ 472 ॥

(2) ಎಲ್ಲರಂತೆ ಮಾಡಿ ಮನಗುಂದಲಾಱೆ, ಅಱುತು ಮಱೆಯಲಾಱೆ ; ಕಂಡು ಕಾಣದಂತಿರಲಾಱೆ. ಹೇಱಿದಡೆ ಭಕ್ತರ ಒಡಕು, ಹೇಱಿದಿದ್ದರೆ ನಿನ್ನ ತೊಡಕು. ಇಂತೀ ಎರಡಱ ಎರವಿನಲ್ಲಿ ಗುಱಿಯಾಗಲಾಱೆ. ಆತುರವೈರಿ ಮಾರೇಶ್ವರ ॥ 473 ॥

---

## ಕಲ್ಯಾಣದ ವಚನಭಂಡಾರಿ ಶಾಂತರಸ. ಸು. 1160.

ಇವನ ವಚನಗಳ ಸಂಖ್ಯೆ 62. ಇವುಗಳಲ್ಲಿ **ಅಲೇಖನಾಥ** ಎಂಬ ಅಂಕಿತವಿದೆ.

### ವಚನ.

ಮಲವ ತೊಳೆಯಬಹುದಲ್ಲದೆ ಅಮಲವ ತೊಳೆಯಬಹುದೆ ಅಯ್ಯಾ ; ಮಾತನಾಡಬಹುದಲ್ಲದೆ ಅಜಾತನ ಅಱಿಯಬಹುದೆ ಅಯ್ಯಾ ; ಮಾಟವ ಮಾಡಬಹುದಲ್ಲದೆ ಮರ್ಮದ ಕೂಟವ ಕೂಡಬಹುದೆ ಅಯ್ಯಾ ; ರಣದ ಪಂಥವ ಹೇಱಿಬಹುದಲ್ಲದೆ ಕಾದಬಹುದೆ ಅಯ್ಯಾ ; ಮಾತುಗಳ ಕೂಡಿ ಓತು ಹೇಱಿವರೆಲ್ಲರು ಉಮಾಕಾಂತನ ಬಲ್ಲರೆ? ಈ ಮಾತಿನ ಮಾಲೆಗೆ ಅಂಜ ಅಲೇಖನಾಥ ಶೂನ್ಯಕಲ್ಲಿನೊಳಗೆ ಆದೆ ಹೇಱಿಸಾ ॥ 474 ॥

---

## ಡಕ್ಕೆಯ ಬೊಮ್ಮಣ್ಣ. ಸು. 1160.

**ಈತನ ವಚನಗಳ ಸಂಖ್ಯೆ 89. ಇವುಗಳಲ್ಲಿ ಕಾಲಾಂತಕ ಭೀಮೇಶ್ವರ ಲಿಂಗ ಎಂಬ ಅಂಕಿತವಿದೆ.**

### ವಚನ.

ಬ್ರಹ್ಮಂಗೆ ಸರಸ್ವತಿಯಾಗಿ ಬಿನ್ನಿನಲ್ಲಿ ಬಂದಳು ಮಾಯೆ; ವಿಷ್ಣುವಿಂಗೆ ಲಕ್ಷ್ಮಿಯಾಗಿ ಭವಕ್ಕೆ ತಿರಿಗಿಸಿದಳು ಮಾಯೆ; ರುದ್ರಂಗೆ ಉಮಾದೇವಿಯಾಗಿ ಶಿರವ ತೊಡೆಯಲ್ಲಿ ಕಾಡಿದಳು ಮಾಯೆ. ಎಲ್ಲಿ ಎಣ್ಣೆ, ಮುಲ್ಲಿ ಮೊಸೆಯಾಗಿ ಹೂವಿಗೆ ಗಂಧವಾಗಿ ಅವರವರಂಗದಲ್ಲಿ ಓಂಗದ ಪ್ರಕೃತಿರೂಪಾಗಿ ಸಂದಿಲ್ಲದೆ ಕಾಡುತ್ತಿದ್ದಾಳೆ ಮಾಯೆ. ಡಕ್ಕೆಯ ಉಲುಹಡಗುವುದಕ್ಕೆ ಮುನ್ನವೇ ನಿಶ್ಚಯಿಸಿಕೊಳ್ಳಿ ಕಾಲಾಂತಕ ಭೀಮೇಶ್ವರಲಿಂಗವನಜಯ ಬಲ್ಲಡೆ ॥ 475 ॥

---

## ಸಗರದ ಬೊಮ್ಮಣ್ಣ. ಸು. 1160.

**ಇವನ ವಚನಗಳ ಸಂಖ್ಯೆ 85. ಇವುಗಳಲ್ಲಿ ಸಂಗಮೇಶ್ವರ ಎಂಬ ಅಂಕಿತವಿರುವುದಲ್ಲದೆ ಈತನ ಹೆಸರೂ ಉಕ್ತವಾಗಿದೆ.**

### ವಚನ.

ಮಾಡುವ ಮಾಟದವರೆಲ್ಲರೂ ಆರೈಕೆಗೊಂಬರಿಲ್ಲದಿರೆ ಕೋಡಗಸತ್ತ ಜೋಗಿಯಂತಾದರು. ಅಗಡುಹೇಳ್ವುವ ಅಣ್ಣಗಳಿಲ್ಲರೂ ಕೊಡುವರಿಲ್ಲದಿರೆ ಹಾವ ಹಿಡಿದ ಕೋಡಗದಂತಾದರು. ನಾನಿನ್ನಾರ ಕೇಳುವೆ? ಇನ್ನಾರಿಗೆ ಹೇಳ್ವುವೆ? ಾ ನಂಬುವೆ ಸಗರದ ಬೊಮ್ಮನೊಡೆಯ ತನುಮನಸಂಗಮೇಶ್ವರ ॥ 476 ॥

---

## ಅವಸರದ ಕೇರಣ್ಣ. ಸು. 1160.

**ಈತನ ವಚನಗಳ ಸಂಖ್ಯೆ 100. ಇವುಗಳಲ್ಲಿ ಸದ್ಯೋಜಾತಲಿಂಗ ಎಂಬ ಅಂಕಿತವಿದೆ.**

### ವಚನ.

ದಾಕ್ಷಿಣ್ಯದ ಭಕ್ತಿ, ಕಲಿಕೆಯ ವಿರಕ್ತಿ; ಮಾತಿನಮಾಲೆಯ ಬೋಧೆ, ತೂತಜ್ಞಾನಿಗಳ ಸಂಸರ್ಗ: ಬೀತ ಕುಂಭದಲ್ಲಿ ಅಮೃತವ ಹೊಯ್ದಿರಿಸಲಿಕ್ಕೆ ಅದು ಎಷ್ಟು ದಿವಸ ಇರಲಾಪುದು? ಇಂತಿವ ಕಳೆದುಬ್ಬಿದು ನಡೆನುಡಿಸಿದ್ದಾಂತವಾಗಿ ಕೂಡಬೇಕು ಸದ್ಯೋಜಾತಲಿಂಗವ ॥ 477 ॥

---

## ತುರುಗಾಹಿ ರಾಮಣ್ಣ. ಸು. 1160.

ಇವನ ವಚನಗಳ ಸಂಖ್ಯೆ 45. **ಇವುಗಳಲ್ಲಿ ಗೋಪತಿನಾಥ ವಿಶ್ವೇಶ್ವರಲಿಂಗ ಎಂಬ ಅಂಕಿತವಿದೆ.**

### ವಚನಗಳು.

(1) ಕ್ರಿಯಾಶುದ್ಧತೆಯಾದಲ್ಲಿ ಭಾವಶುದ್ಧವಾಗಿಪ್ಪುದು; ಭಾವಶುದ್ಧವಾಗಿಪ್ಪಲ್ಲಿ ಸರ್ವೇಂದ್ರಿಯಂಗಳು ಏಕೇಂದ್ರಿಯವಾಗಿ ಚಿತ್ತಶುದ್ಧವಾಗಿಪ್ಪುದು; ಚಿತ್ತಶುದ್ಧಿ ಸಿದ್ಧಿಯಾದಲ್ಲಿ ಸರ್ವಜ್ಞಾನಸಂಪನ್ನನಪ್ಪನು. ಆಗುಣ ನಿಜದ ನೆಲೆಯಾದಲ್ಲಿ ಗೋಪತಿನಾಥ ವಿಶ್ವೇಶ್ವರಲಿಂಗವ ಬಿಚ್ಚಂತಿಪ್ಪನು ॥ 478 ॥

(2) ಕಂಗಳದೃಷ್ಟದಿಂದ ಇಷ್ಟವ ಕಂಡು, ಮನದದೃಷ್ಟದಿಂದ ಸಿಷ್ಟೆಯನಱಿತು, ಸಿಷ್ಟ ನಿಜದಲ್ಲಿನಿಂದು ಅಜ್ಞಾನ ಕರಿಗೊಂಡಲ್ಲಿ ಗೋಪತಿನಾಥ ವಿಶ್ವೇಶ್ವರಲಿಂಗವು ದೃಷ್ಟವಾಯಿತ್ತು ॥ 479 ॥

---

## ದಾಸೋಹದ ಸಂಗಣ್ಣ. ಸು. 1160.

ಇವನ ವಚನಗಳ ಸಂಖ್ಯೆ 100. **ಇವುಗಳಲ್ಲಿ ಮಾತುಳಾಂಗ ಮಧುಕೇಶ್ವರ ಎಂಬ ಅಂಕಿತವಿದೆ.**

### ವಚನ.

ಹುತ್ತಕ್ಕೆ ಸರ್ಪನಾಗಿ ಉದಕಕ್ಕೆ ಒಳ್ಳೆಯಾಗಿ ಕೂಂಬಿಗ ಕೋಡಗವಾಗಿ ಅವರವರ ಬೆಂಬಟ್ಟಾಯಲ್ಲಿ ಅಜಬಿಜವ ಕಾವ ಜಂಬುಕನಂತೆ ತಿರುಗಲೇತಕ್ಕೆ? ಆಯುಷ್ಯ ತೀರಿದಲ್ಲಿ ಮರಣ, ಐಶ್ವರ್ಯ ಹೋದಲ್ಲಿ ದಾರಿದ್ರ್ಯ ಬಪ್ಪುದು ಎಲ್ಲಿದ್ದಡಂ ತಪ್ಪದೆಂದಱಿದ ಮತ್ತೆ ಬಾಯ ಮುಚ್ಚಿ ಸತ್ತಂತಿಪ್ಪುದೇ ತೆಱ. ಇದು ಭಕ್ತಿ ವಿರಕ್ತಿಯ ಪಥ. ಶಂಭುಗಿಂದಿತ್ತ ಸ್ವಯಂಭುಗಿಂದಿತ್ತ ಅತಿಬಳ ನೋಡಾ ಮಾತುಳಾಂಗ ಮಧುಕೇಶ್ವರನು ॥ 480 ॥

---

## ಗುಪ್ತಮಂಚಣ್ಣ. ಸು. 1160.

ಈತನ ವಚನಗಳ ಸಂಖ್ಯೆ 99. **ಇವುಗಳಲ್ಲಿ ನಾರಾಯಣಪ್ರಿಯ ರಾಮನಾಥ ಎಂಬ ಅಂಕಿತವಿದೆ.**

### ವಚನಗಳು.

(1) ಕುರುಡನ ಕೈಯ ಕೋಲು ಹಿಂಗಿದಾಗ ಅವ ಆಡಿಯಿಡಬಲ್ಲನೆ? ಮೃಡ ಭಕ್ತಿಯ ಮಾಡುವಂಗೆ ದೃಢಚಿತ್ತವಿಲ್ಲದಿದ್ದಡೆ ಕಡೆಗಾಣಿಸಬಲ್ಲನೆ? ಇಂತೀ ವಿಶ್ವಾಸದಡಿ ಬಿಚ್ಚಂತಿರಬೇಕು ನಾರಾಯಣಪ್ರಿಯ ರಾಮನಾಥನಲ್ಲಿ ॥ 481 ॥

(2) ಡಂಬಕದ ಪೂಜಿ ಹೋಹ ಹೊತ್ತಿನ ಕೇಡು; ಆಡಂಬರದ ಪೂಜೆ ತಾಮ್ರದ ಮೇಲಣ ಸುವರ್ಣಚ್ಛಾಯೆ; ಇಂತೀಪೂಜೆಗೆ ಹೂಸೊಪ್ಪನಿಕ್ಕಿ ಮನಹೂಣದೆ ಮಾಡುವ ಪೂಜೆ ಬೀರು ನೆನೆಯದ ನೀರು, ಆಯವಿಲ್ಲದ ಘಾಯ, ಭಾವವಿಲ್ಲದ ಘಟವಾಯುವೆಂದೆ ನಾರಾಯಣಪ್ರಿಯ ರಾಮನಾಥ ॥ 482 ॥

---

## ಸುಂಕದ ಬಂಕಣ್ಣ. ಸು. 1160.

ಇವನ **ಹೆಸರು** ಬಸವಪುರಾಣದಲ್ಲಿ[1] ಬೊಂಕಿದೇವ ಎಂದು ಹೇಳಿದೆ. **ಈತನ ವಚನಗಳ ಸಂಖ್ಯೆ 101. ಇವುಗಳಲ್ಲಿ ಬಂಕೇಶ್ವರಲಿಂಗ** ಎಂಬ ಅಂಕಿತವಿದೆ.

### ವಚನ.

ಬಹುರೂಪ ತೊಟ್ಟಾಡಿದ ದೇಹವೊಂದೆ. ವೇಷರೂಪಿನ ಸಲ್ಲಟವಲ್ಲದೆ ವೇಷಕ್ಕೆ ತಕ್ಕ ಭಾಷೆ, ಭಾಷೆಗೆ ತಕ್ಕ ವೇಷ, ಅಜ್ಞವು, ಆಚರಣೆ ಒಂದಾಗಬೇಕು ಬಂಕೇಶ್ವರ ಲಿಂಗವನಱಿವುದಕ್ಕೆ ॥ 483 ॥

---

## ಬಹುರೂಪಿ ಚೌಡಯ್ಯ. ಸು. 1160.

**ಇವನ ವಚನಗಳ ಸಂಖ್ಯೆ 38. ಇವುಗಳಲ್ಲಿ ರೇಕಣ್ಣಪ್ರಿಯ ನಾಗಿನಾಥ ಎಂಬ ಅಂಕಿತವಿದೆ.**

### ವಚನಗಳು.

(1) ಅಪ್ಪ ಅಪ್ಪ ಎಂಬ ಚಿಕ್ಕ ಮೋಹಮಂ ತೊಟ್ಟು ಮುಯಿಕ್ಕೆ ಹೊತ್ತಿಗೊಂದು ಪರಿಯ ಬಚ್ಚಣಿಕೆಯನಿಕ್ಕಿ ಮತ್ತದನು ತಲೆಯಲ್ಲ ಸೊತ್ತು ತಪ್ಪಿ ಹಜ್ಜೆಯನಿಕ್ಕಿ ಆಡುತ್ತಿದ್ದ ರೇಕಣ್ಣಪ್ರಿಯ ನಾಗಿನಾಥನಲ್ಲಿ ಸೊತ್ತು ಹೋದ ಬಹುರೂಪವ ॥ 484 ॥

(2) ಕೈಯ ಮಜಿಕಿದು ಕಾದುವ ಅಂಕವದೇಕೋ? ಭಾವವಜಿಕಿದು ನೋಡುವ ನೋಟವದೇಕೋ? ಭಯವ ಮಜಿಕಿದು ಮಾಡುವ ಭಕ್ತಿಯದೇಕೋ? ಏಕಾಂತದ ಸುಖಕ್ಕೆ ಲೋಕಾಂತವೇಕೊ? ರೇಕಣ್ಣಪ್ರಿಯ ನಾಗಿನಾಥನಲ್ಲಿ ಗುರುವ ಮಜಿಕಿದು ಲಿಂಗವ ನೊಲಿಸೇನೆಂದಡೆ ಆ ಗುರುಲಿಂಗವೆರಡೂ ಇಲ್ಲ ॥ 485 ॥

---

## ಬೇರೆ ಅಂಕಿತಗಳು.

**ನಮಗೆ ದೊರೆತಿರುವ ವಚನಗಳಲ್ಲಿ ಇನ್ನೂ ಸುಮಾರು 25 ಅಂಕಿತಗಳು ಉಪಯೋಗಿಸಿರುವುದರಿಂದ ಈ ಕಾಲದಲ್ಲಿಯೋ ಅಥವಾ ಸ್ವಲ್ಪ ಈಚೆಯೋ ಇನ್ನೂ**

1. ಸಂಧಿ 58.

ಕೆಲವರು ವಚನಕಾರರು ಇದ್ದರು ಎಂಬುದು ವ್ಯಕ್ತವಾಗುತ್ತದೆ. ಈ ಅಂಕಿತಗಳಲ್ಲಿ ಕೆಲವನ್ನು ಇಲ್ಲಿ ಬರೆಯುತ್ತೇನೆ:—**ಮಸಣಯ್ಯಪ್ರಿಯ ಗಜೇಶ್ವರ, ಸಂಗಯ್ಯಪ್ರಿಯ ಬಂಕೇಶ್ವರ, ಮಹಾಲಿಂಗ ತ್ರಿಪುರಾಂತಕದೇವ, ಸದ್ಗುರು ಸಿದ್ಧಸೋಮೇಶ್ವರಲಿಂಗ, ಉಳಿಯುಮೇಶ್ವರ, ಶಂಭುಜಕ್ಕೇಶ್ವರ, ಕಾಮಭೀಮ ಜೀವದನದೊಡೆಯ, ನಂದಗೋಪಿಯಕಂದ ಪ್ರಿಯ ನಿಸ್ಸಂಗಲಿಂಗರಾಮನಾಥ, ನಿಜಗುರು ಶಾಂತೇಶ್ವರ, ಭೌಂಭೇಶ್ವರ, ನಾಸ್ತಿನಾಥ, ಶಂಭುಸೋಮನಾಥಲಿಂಗ, ಸದ್ಗುರು ಶಂಭುಸೋಮೇಶ್ವರ, ಹುಲಿಗೆರೆಯ ವರದಸೋಮೇಶ, ರೇಕನಾಥಯ್ಯ, ಘನಗುರುಪ್ರಿಯ ಸೋಮನಾಥ, ಹಂಸೆಯ ವಿರುಪಯ್ಯ, ಅಭಿನವ ಮಲ್ಲಿಕಾರ್ಜುನ.** ಇವುಗಳಲ್ಲಿ ಕೆಲವು ಹಿಂದೆ ಹೇಳಿದ ಕೊಂಡಗೂಳಿ ಕೇಶಿರಾಜ ಮೊದಲಾದ ಆರು ವಚನಕಾರರ[1] ಅಂಕಿತಗಳಾಗಿದ್ದರೂ ಇರಬಹುದು. ಈ ಅಂಕಿತಗಳುಳ್ಳ ವಚನಗಳು ದ್ವಿತೀಯಸಂಪುಟದಲ್ಲಿ ಉದಾಹೃತವಾಗಿವೆ.[2] ನಾವು ನಿರ್ದೇಶಿಸಿದೊಡನೆ ಈ ವಚನಗಳು ದೊರೆವವರೆಗೆ ವಚನಕಾರರ ಹೆಸರನ್ನು ಹೇಳಲು ಸಾಧ್ಯವಲ್ಲ.

## ವೀರಶೈವಪಂಡಿತತ್ರಯರು.

ವೀರಶೈವಕವಿಗಳು ತಮ್ಮ ಗ್ರಂಥಾದಿಯಲ್ಲಿ **ಶಿವಲೆಂಕಮಂಚಣ್ಣ, ಶ್ರೀಪತಿಪಂಡಿತ, ಮಲ್ಲಿಕಾರ್ಜುನಪಂಡಿತ** ಎಂಬ ಮೂವರು ಪಂಡಿತರನ್ನು ಪ್ರಾಯಿಕವಾಗಿ ಸ್ತುತಿಸುತ್ತಾರೆ. ಇವರುಗಳು **ಬಸವನ** (ಸು. 1160) ಸಮಕಾಲದವರೆಂದು ತಿಳಿಯಬರುತ್ತದೆ.[3] ಈ ಪಂಡಿತತ್ರಯದ ಚರಿತವನ್ನು **ಗುಬ್ಬಿಯ ಮಲ್ಲಣಾರ್ಯನು** (1513) ತನ್ನ ಭಾವಚಿಂತಾರತ್ನದಲ್ಲಿಯೆ—

ಹರಿಯನಭಗನಂಗೆ ವಂದನೆಗೆಯಿಸಿ ತಿಳಿಯನಂ ।
ಬರದಲ್ಲಿ ಕಟ್ಟಿ ಮೂರ್ಧಾಕ್ಷಗಳ ಪಡೆದು ಸಿ ।
ಸ್ಫುರವಕ್ಕಮಂದತೀವ್ರದ ದುರ್ಗುಣಗಳ ವೈಷ್ಣವವಿಪ್ರಜ್ಞೆನರೆಂಬ ॥
ವರವಾತಪಿತ್ತದುಶ್ಲೇಷ್ಮಮಂ ಕೆಡಿಸಿ ಶಂ ।
ಕರಲೆಂಕಮಂಚಣ್ಣ ಶ್ರೀಪತೀಶ್ವರದೇವ ।
ನುರುಮಲ್ಲಿಕಾರ್ಜುನಂ ಪಂಡಿತತ್ರಯವಾದರೆಮ್ಮ ಭವರೋಗಗಳಿಗ ॥

ಎಂಬ ಪದ್ಯದಲ್ಲಿ ಸಂಗ್ರಹವಾಗಿ ಹೇಳಿದ್ದಾನೆ. ಇವರುಗಳ ವಿಷಯವನ್ನು ಸ್ವಲ್ಪ ಮಟ್ಟಿಗೆ ತಿಳಿಯಪಡಿಸುವುದು ಆವಶ್ಯಕವಾಗಿ ತೋರುವುದರಿಂದ ಇವರ ವಿಷಯವಾಗಿ ವೀರಶೈವ ಗ್ರಂಥಗಳಿಂದ ತಿಳಿವ ಅಂಶಗಳನ್ನು ಸಂಗ್ರಹವಾಗಿ ಬರೆಯುತ್ತೇವೆ.

---

1 ಪುಟ 196-7. 2 ಪುಟ 111—124. 3. ಬ. ಪು. ಸಂಧಿಗಳು 9, 58.

## ಶಿವಲೆಂಕಮಂಚಣ್ಣ. ಸು. 1160.

ಈತನು ವಚನಗಳನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಇವನ ಅಜ್ಜನು ಸೋಮಶಂಭುದೇಶಿಕ; ತಂದೆ 'ಕಾಮಿಕಾದ್ಯಖಿಳಶಿವಕಥಿತತಂತ್ರಾವಳಿಗೆ। ಪ್ರೇಮದಿಂ ವೃತ್ತಿದೀಪಿಕೆಗಳಂ ಬಿತ್ತರಿಸಿ। ಸೋಮಧರಸಮಯಮಂ ಧರಣಿಯೊಳ್ ನಿಱಿಸಿದ'[1] ಸಕಲಾಗಮಾಚಾರ್ಯ. ಈತನು ಕಾಶೀಕ್ಷೇತ್ರದಲ್ಲಿ ಶಿವನೇ ಸರ್ವ ದೇವತೆಗಳಿಗೂ ಪೂಜ್ಯನೆಂದು ಸ್ಥಾಪಿಸಿ ಬಿಂದುಮಾಧವನನ್ನು ವಿಶ್ವೇಶ್ವರನ ಸನ್ನಿಧಾನವನ್ನೆಳೆದಿಸಿ ಶತ್ರುಪಕ್ಷವನ್ನು ಮುರಿದಂತೆಯೂ[2] ತನ್ನ ಹತ್ತು ಬೆರಳುಗಳನ್ನು ಕಡಿದು ಕಾಶಿಯ ವಿಶ್ವೇಶ್ವರನಿಗೆ ಅರ್ಪಿಸಿ ಮರಳಿ ಪಡೆದಂತೆಯೂ[3] ಕಲ್ಯಾಣಕ್ಕೆ ಬಂದು ಬಸವನನ್ನು (ಸು. 1160) ನೋಡಿದಂತೆಯೂ[4] ಗ್ರಂಥಗಳಲ್ಲಿ ಹೇಳಿದೆ.

### ವಚನಗಳು.

ಇವನ ವಚನಗಳ ಸಂಖ್ಯೆ 131 ಇವುಗಳಲ್ಲಿ **ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗ** ಎಂಬ ಅಂಕಿತವಿದೆ. ಒಂದೆರಡು ವಚನಗಳನ್ನು ತೆಗೆದು ಬರೆಯುತ್ತೇವೆ:—

(1) ಕಾಯವ ಮಜ್ಜಿಸು ಜೀವವನಱಿಯಬೇಕು; ಜೀವವ ಮಜ್ಜಿಸು ಜ್ಞಾನವನಱಿಯಬೇಕು; ಜ್ಞಾನವ ಮಜ್ಜಿಸು ಬೆಳಗನಱಿಯಬೇಕು; ಬೆಳಗಿನ ಮಜ್ಜೆಯ ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವನಱಿಯಬೇಕು ॥ 486 ॥

(2) ವಿಶ್ವಮಯರೂಪ ನೀನಾಗಿ ಅಜವ ಆತ್ಮನೊಬ್ಬನಲ್ಲಿಯೇ ಅಡಗಿದೆಯಲ್ಲಾ. ಬೀಗದ ಎಸಳು ಹಲವಾದಡೇನು? ಒಂದು ದ್ವಾರದಲ್ಲಿ ಅಡಗಿ ಮತ್ತಂತೆ ಇಪ್ಪ ತೆಜಿ ನೀನಾಗಿ ಭಕ್ತರ ಚಿತ್ತದಲ್ಲಿ ನಿಶ್ಚಲನಾದೆ ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವೇ ॥487॥

---

## ಶ್ರೀಪತಿಪಂಡಿತ. ಸು. 1160.

ಈತನು ಕನ್ನಡದಲ್ಲಿ ಗ್ರಂಥಗಳನ್ನು ಬರೆದಿರುವುದಾಗಿ ತಿಳಿಯಬಂದಿಲ್ಲ; ಸಂಸ್ಕೃತದಲ್ಲಿ ಬ್ರಹ್ಮಸೂತ್ರಗಳಿಗೆ ಶ್ರೀಕರಭಾಷ್ಯವೆಂಬ ವ್ಯಾಖ್ಯಾನವನ್ನು ಬರೆದಿದ್ದಾನೆ. ಇವನು ಶಿವಪ್ರಸಾದವೇ ಪವಿತ್ರವಾದುದೆಂದು ಪ್ರತಿಜ್ಞೆಗೈದು ವಸ್ತ್ರದಲ್ಲಿ ಅಗ್ನಿಯನ್ನು ಹಾಕಿ ಬನ್ನಿಯಮರಕ್ಕೆ ಕಟ್ಟಿ ಏಳು ದಿನ ಪರ್ಯಂತ ಅಗ್ನಿಯೇ ದೊರೆಯದಂತೆ ಮಾಡಿದುದರಿಂದ ದೇವಯಜ್ಞ ಪಿತೃಯಜ್ಞಗಳಿಗೆ ವಿಘ್ನವುಂಟಾ

---

1. ನೀಲಕಂಠನ ಆರಾಧ್ಯಚಾರಿತ್ರ.
2. ಆನಯಿತ್ವಾ ಹರಾದ್ವಿಷ್ಣುಂ ಕಾಶ್ಯಾಂವಿಶ್ವೇಶಸನ್ನಿಧಿಂ।
   ಬಭಂಜ ವಿದ್ವಿಷೋ ಯಸ್ತಂ ಮನ್ಯೇ ಮಂಚಣಪಂಡಿತಂ ॥ ಶಂಕರಾರಾಧ್ಯನ ಬಸವೇಶ
3. ಬ ಪು. ಸಂ 53. [ವಿಜಯ.
4. ಜ್ಯೇರವೇಶ್ವರಕಾಶ್ಯದ ಕಥಾಸೂತ್ರರತ್ನಾಕರ.

ಗಲು ಶರಣಾಗತರಾದ ವಿಪ್ರರಿಂದ ಜಯಪತ್ರಿಕೆಯನ್ನು ಹೊಂದಿದಂತೆ ವೀರಶೈವ ಗ್ರಂಥಗಳಲ್ಲಿ ಹೇಳಿದೆ.[1]

---

## ಮಲ್ಲಿಕಾರ್ಜುನಪಂಡಿತಾರಾಧ್ಯ. ಸು. 1160.

ಈತನು ವಚನಗಳು, ಗಣಸಹಸ್ರನಾಮ, ಇಷ್ಟಲಿಂಗಸ್ತೋತ್ರ, ಬಸವಗೀತ ಎಂಬ ಗ್ರಂಥಗಳನ್ನು ರಚಿಸಿದಂತೆ ತಿಳಿಯುತ್ತದೆ. ಇವನು ವೀರಶೈವ ಕವಿ.

**ಗುರುರಾಜನ** (ಸು. 1430) **ಸಂಸ್ಕೃತಪಂಡಿತಚರಿತ್ರ, ನೀಲಕಂಠಾಚಾರ್ಯನ** (ಸು. 1485) **ಆರಾಧ್ಯಚಾರಿತ್ರ, ಸಿದ್ಧನಂಜೇಶನ** (ಸು. 1650) **ಗುರುರಾಜಚಾರಿತ್ರ**—ಇವೇ ಮೊದಲಾದ ಗ್ರಂಥಗಳಿಂದ ಈತನ ವಿಷಯವಾಗಿ ಈಯಂಶಗಳು ತಿಳಿಯುತ್ತವೆ:—

ಈತನು ಈಶ್ವರನಿಂದ ಭೂಲೋಕದಲ್ಲಿ ಬಸವೇಶ್ವರನೊಡನೆ ಹೋಗಿ ಅವತರಿಸುವಂತೆ ಆಜ್ಞಪ್ತನಾಗಿ[2], ಶ್ರೀಶೈಲದಲ್ಲಿ ಮಲ್ಲಿಕಾರ್ಜುನಲಿಂಗದ ಸನ್ನಿಧಿಯಲ್ಲಿ ಪುತ್ರಾರ್ಥಿಯಾಗಿ ತಪಂಬಟ್ಟಿದ್ದ, ವೆಂಗಿದೇಶಕ್ಕೆ ತಿಲಕಪ್ರಾಯವಾಗಿದ್ದ ದ್ರಾಕ್ಷಾರಾಮ ಪುರದಲ್ಲಿಯ ಭೀಮೇಶ್ವರಲಿಂಗದ ಪುರೋಹಿತನಾದ, ಪ್ರಾಣಾನ್ತಯಜ ಭೀಮನಪಂಡಿತನಿಗೂ ಗೌರಾಂಬೆಗೂ ಮಗನಾಗಿ ಹುಟ್ಟಿದನು. ಇವನ ಗುರು ಮಹೇಶ್ವರಗಣಾಗ್ರಣಿಯಾದ ಅವಾಂತರಾರ್ಯನ ಶಿಷ್ಯ ರಾಜಮಂತ್ರಜ್ಞನಾದ ಕೋಟಿವಲ್ಲಾಚಾರಾಧ್ಯನು. ಮಲ್ಲಿಕಾರ್ಜುನನು ವೆಲನಾಡು ಚೋಳರಾಜನ ಆಸ್ಥಾನಕ್ಕೆ ಹೋಗಿ ಅಲ್ಲಿ ಬಂದ ವಾದಿಗಳನ್ನು ಜಯಿಸಿ ಬೌದ್ಧಜೈನಚಾರ್ವಾಕಾದಿಮತಗಳನ್ನು ನಿರಸನಮಾಡಿ ವೀರಶೈವಾಚಾರವನ್ನು ಸ್ಥಾಪಿಸಿದನು. ಚೋಳನು ಈತನ ಕಣ್ಣನ್ನು ಕೀಳಿಸಲು ಈತನು ಅವನನ್ನು ಶಪಿಸಿ ಆ ದೇಶವನ್ನು ಬಿಟ್ಟು ಅಮರಾರಾಮನಗರಕ್ಕೆ ಬಂದು ಅಲ್ಲಿ ಗಣಸಹಸ್ರಸ್ತುತಿಯನ್ನು ಹೇಳಿ ಈಶ್ವರನ ಅನುಗ್ರಹದಿಂದ ಊರ್ಧ್ವನೇತ್ರವನ್ನು ಪಡೆದನು.[3]

ಅಮರಾರಾಮನಗರಕ್ಕೆ ಬಂದು ನೆಲಸಿದುದರಿಂದ ಈತನಿಗೆ **ಅಮರಗುಂಡದ ಮಲ್ಲಿಕಾರ್ಜುನ** ಎಂಬ ಹೆಸರೂ ಉಂಟು. ಬಸವನು ಕಳುಹಿಕೊಟ್ಟ ಭಸಿತವನ್ನು ಧರಿಸಿಕೊಳಲು ಈತನಿಗೆ ಆ ಕ್ಷಣವೇ ಕರ್ಣಾಟಭಾಷೆ ಬಂದಿತು. ಆ ಭಾಷೆಯಿಂದ ಇಷ್ಟಲಿಂಗಸ್ತೋತ್ರವನ್ನೂ ಬಸವಮಾಹಾತ್ಮ್ಯಗೀತಗಳನ್ನೂ ಮಾಡಿದನು. ಈತನು ಕಲ್ಯಾಣಕ್ಕೆ ಹೋಗಿ ಬಸವನನ್ನು ನೋಡ

1 ಪ್ರಸಾದ ಪಾವನ ಇತಿ ಪ್ರತಿಜ್ಞಾಯಾಗ್ನಿಮಂಶುಕೇ।
ಬಭಾಸ ಬಬಂಧಯಶ್ಯಮ್ಯಾಂ ಜೇಯಾಚ್ಛ್ರೀಸತಿಪಂಡಿತ ॥ಶಂಕರಾರಾಧ್ಯನ ಬಸವೇಶ [ವಿಜಯ.

2. ಅನುಗಚ್ಛ ತ್ವನುಷ್ಠೇನಂ ಕುಮಾರಂ ಬಸವೇಶ್ವರಂ। [ವಿಜಯ.

3 ಶ್ರೀಮಲ್ಲಿಕಾರ್ಜುನಾರಾಧ್ಯದೇವಾಯಾಂಜಲಿರಪ್ಯತೇ।
ಅವಾಪ್ತೋರ್ಧ್ವದೃಶೇ ರುದ್ರಾತ್ ನಿಷ್ಕಾವಿತವಿರೋಧಿನೇ ಶಂಕರಾರಾಧ್ಯನ ಬಸವೇಶ [ವಿಜಯ.

ೀಕೆಂದು ಹೊರಟು ಹಾನುಗಲ್ಲಿಗೆ ಬಂದಾಗ ದಾರಿಯಲ್ಲಿ ಒಬ್ಬ ಚರನು ಬಂದು ಬಸವಂ ಕೂಡಲ ಸಂಗಮೇಶ್ವರನಲ್ಲಿ ಐಕ್ಯನಾದನು; ಬಿಜ್ಜಳನಂ ಶರಣರು ಕೊಂದರು" ಂದು ಹೇಳಲು, "ಬಸವ ಬಯಲಾದೆಯಾ" ಎಂದು ಅಳಲಿ ಗೀತವನ್ನು ಹಾಡಿ ನು[1]. ಬಳಿಕ ಶ್ರೀಗಿರಿಗೆ ಹೋಗಿ ಅಲ್ಲಿ ಶಿವೈಕ್ಯನಾದನು. ಈತನ ವಿಷಯವಾಗಿ ಂಡಿತಚರಿತ್ರ, ಆರಾಧ್ಯಚಾರಿತ್ರ ಮೊದಲಾದ ಗ್ರಂಥಗಳು ಹುಟ್ಟಿವೆ.

ಈತನ ಗ್ರಂಥಗಳಲ್ಲಿ—

## 1. ವಚನಗಳು.

ಇವನ ವಚನಗಳಲ್ಲಿ **ಅಮರಗುಂಡದ ಮಲ್ಲಿಕಾರ್ಜುನ** ಎಂಬ ಅಂಕಿತ ುದೆ. ಒಂದು ವಚನವನ್ನು ಉದಾಹರಿಸುತ್ತೇವೆ:—

ನೆನೆವ ಮನಕ್ಕೆ ಮಣ್ಣನೆ ತೋಜುದೆ; ನೋಡುವ ಕಣ್ಣಿಂಗ ಹೆಣ್ಣನೆ ತೋಜುದೆ; ಪೂಜಿಸುವ ಕೈಗೆ ಹೊನ್ನನೆ ತೋಜುದೆ. ಈ ತ್ರಿವಿಧವನೆ ತೋಜುಕೊಟ್ಟು ಮಜಹನಿಕ್ಕದೆ ರುಯ್ಯಾ ಅಮರಗುಂಡದ ಮಲ್ಲಿಕಾರ್ಜುನ. ನೀ ಮಾಡಿದ ಬಿನ್ನಾಣಕ್ಕಾನು ಬೆಜಗಾದೆನು ॥ 188 ॥

## 2. ಗಣಸಹಸ್ರನಾಮ.

ಈ ಗ್ರಂಥವನ್ನು ಪಂಡಿತಾರಾಧ್ಯನು—ವೆಲನಾಡು ಚೋಳನ ಸಭೆಯಲ್ಲಿ **ಹರನಿಂದೆಯಂ ಕೇಳ್ದ ದೋಷ, ಬೌದ್ಧರ ಕೂಡೆ ಸರಿಯಾಗಿ ವಾದಿಸಿದ ತಪ್ಪು. ಅವರನ್ನು ನೋಡಿದ ತಪ್ಪು, ಪರವಾದಿಗಳನ್ನು ಸಂಹರಿಸದೆ ಸ್ಥೈರಿಸಿದ ತಪ್ಪು, ಅವರನ್ನು ಸೋಂಕಿದ ಪಾತಕ**—ಇವುಗಳನ್ನು ಪರಿಹರಿಸುವುದಕ್ಕೋಸ್ಕರ ಮಾಡಿದುದಾಗಿ **ಸಿದ್ಧನಂಜೇಶ**ನು ಹೇಳುತ್ತಾನೆ. ಇದರಲ್ಲಿ ಪ್ರಮಥಗಣ, ರುದ್ರಗಣ, ವ್ಯಷ್ಟಿ **ಭಯೋಗಾಚಾರ್ಯರು**, ಅರುವತ್ತು ಮೂವರು. ಷೋಡಶಸುಮತಿಗಳು, ತೇರಪರು. **ದಶಗಣ, ಪುರಾತನರು** ಇವರುಗಳ ನಾಮಗಳು ಹೇಳಿವೆ.

**ಈತನ** ಇತರ ಗ್ರಂಥಗಳು ನಮಗೆ ದೊರೆತಿಲ್ಲ.

---

## ವೀರಶೈವಾಚಾರ್ಯಪಂಚಕ.

**ವೀರಶೈವಕವಿಗಳು** ತಮ್ಮ ಗ್ರಂಥಗಳಲ್ಲಿ—**ರೇವಣ, ಮರುಳಸಿದ್ಧ, ಏಕೋರಾಮಿತಂದೆ, ಪಂಡಿತಾರಾಧ್ಯ, ವಿಶ್ವೇಶ್ವರ**—ಎಂಬ ಐವರು **ಆಚಾರ್ಯ**ರುಗಳನ್ನು ಪ್ರಾಯಿಕವಾಗಿ ಸ್ತುತಿಸುತ್ತಾರೆ. ಇವರುಗಳಲ್ಲಿ **ಕೆಲವರು** ಬಸವನಿಗೆ

1. ಗುರು ರಾಜನ ಪಂಡಿತಚರಿತ್ರದಲ್ಲಿ ಇವನು ಬಸವನೊಂದಿಗೆ ಮಾತಾಡಿದಂತೆ ಹೇಳಿದೆ.

ಹಿಂದೆ ಇದ್ದಂತೆಯೂ ಕೆಲವರು ಅವನ ಸಮಕಾಲದಲ್ಲಿ ಇದ್ದಂತೆಯೂ ತೋರುತ್ತದೆ.[1]

ಇವರುಗಳಲ್ಲಿ ಒಬ್ಬಬ್ಬರು ಕನ್ನಡದಲ್ಲಿ ಗ್ರಂಥರಚನೆಮಾಡಿರುವುದಾಗಿ ತಿಳಿವುದರಿಂದ ಈ ಐವರನ್ನೂ ಒಂದೇ ಕಡೆಯಲ್ಲಿ ಸೇರಿಸಿ ವೀರಶೈವಗ್ರಂಥಗಳಲ್ಲಿ ಇವರುಗಳ ವಿಷಯವಾಗಿ ಹೇಳಿರುವ ಅಂಶಗಳನ್ನು ಸ್ವಲ್ಪ ಮಟ್ಟಿಗೆ ತಿಳಿಸುತ್ತೇವೆ.

## ರೇವಣಸಿದ್ಧ ಅಥವಾ ರೇಣುಕಾಚಾರ್ಯ.

ಈತನು ಕೊಲ್ಲಿಪಾಕದ ಮಹಾಲಿಂಗಗರ್ಭದಲ್ಲಿ ಜನಿಸಿದನು. ಕ್ಷಿತಿಪ ಚಾಳೋಕ್ಯಂಗೆ ಸುರಗಿಯಂ ತೋರಿದನು; ವಿಕ್ರಮಂಗೆ ಒಂದು ಸುರಗಿಯನಿತ್ತನು. ಚಾಮಲವ್ವೆಗೊಲಿದು ಸೊನ್ನಲಾಪುರದ ಸಿದ್ಧರಾಮನ ಉದಯವನು ಅರುಹಿದನು. ವೈಷ್ಣವಚೋಳನಂ ವಾದದಲ್ಲಿ ಗೆದ್ದನು: ರಾಜೇಂದ್ರಚೋಳಾದಿರಾಜರ ಮಕ್ಕಳನ್ನು ಮದುವೆಯಾದನು. ಇವನ ಮಗ ರುದ್ರಮುನಿ.

ರೇವಣಸಿದ್ಧನ ವಿಷಯವಾಗಿ **ರೇವಣಸಿದ್ಧೇಶ್ವರಕಾವ್ಯ, ರೇವಣಸಾಂಗತ್ಯ, ರೇವಣಸಿದ್ಧೇಶ್ವರಪುರಾಣ, ರೇಣುಕಾರ್ಯಚರಿತೆ** ಮೊದಲಾದ ಗ್ರಂಥಗಳು ಹುಟ್ಟಿವೆ.

## ಮರುಳ ಸಿದ್ಧ.

ಈತನು ಕಗ್ಗಲ್ಲಗವ್ವಡನಿಸಿಗೆ ಮಗುವಾಗಿ ಸಿಕ್ಕಿದನು. ಜಜ್ಜುಗಂತೆಯ ಧರಿಸಿ ಕೊಲ್ಲಾಪುರದ ರಕ್ಕಸಿಯ ಕೊಂದು ಅವಳ ಅವಯವಗಳಿಂದ ಕಿನ್ನರ ವೀಣೆಯಂ ಮಾಡಿಕೊಂಡನು. ಮರುಳಂತೆ ಇದ್ದು ಉಜ್ಜುಗಿಯಲ್ಲಿ ಬಯಲಾದನು.

## ಪಂಡಿತಾರಾಧ್ಯ.

ಈತನು ವೀರಶೈವಪಂಡಿತತ್ರಯದಲ್ಲಿಯೂ ಒಬ್ಬನು. ಇವನ ಚರಿತವು ಹಿಂದೆಯೇ ಬರೆದಿದೆ.[2]

## ಏಕೋರಾಮಿ ತಂದೆ.

ಇವನು ಚೆನ್ನಮುದ್ರಾಪುರದ ಭಕ್ತರುದರದಲ್ಲಿ ಜನಿಸಿದನು; ಘಂಟಾಕರ್ಣ ಗಣನಾಥಾಚಾರ್ಯನಿಂದ ಉಪದೇಶವನ್ನು ಪಡೆದು ಶಿವಮಹತ್ತ್ವಾಧಿಕ್ಯಮಂ ಶಾಸ್ತ್ರ ಪೂರ್ವಕವಾಗಿ ಶಿವಭಕ್ತರಿಗೆ ಬೋಧಿಸಿದನು. ಅನೇಕವಾದಿಗಳನ್ನು ಜಯಿಸಿದನು. ಮುದ್ರಾಪುರದ ವೀರಭಾಸ್ಕರನೃಪತಿ ವೈಷ್ಣವಮತೋದ್ಧಾರಕನೂ ಷಟ್ಟಾಸ್ತ್ರಪಾರ

1. ಸುಸ್ಪಜೋತ್ಪಾಗವದ ಭಾಗವೆಂದು ಮುದ್ರಿತವಾಗಿರುವ ಸಂಸ್ಕೃತಪುಸ್ತಕದಲ್ಲಿ ಈ ಪಂಚಾಚಾರ್ಯರು ಈಶ್ವರನ ಪಂಚಮುಖಗಳ ಅವತಾರಗಳಿಂದೂ ಪಂಚಕ್ಷೇತ್ರಗಳ ಲಿಂಗಗಳಿಂದ ಉತ್ಪನ್ನರಾದವರೆಂದೂ ಹೇಳಿದೆ.

2. ಪುಟ 213.

ಗನೂ ಆದ ವ್ಯಾಸನೆಂಬ ವಿದ್ವಾಂಸನಿಗೆ ಮರ್ಯಾದೆಮಾಡಿದುದನ್ನು ತಿಳಿದು ಆವ ನನ್ನು ವಾದದಲ್ಲಿ ಸೋಲಿಸಿ ಅವನಿಗೆ ರಾಮನಾಥಾಚಾರ್ಯನೆಂಬ ಹೆಸರನ್ನಿಟ್ಟನು. ಭೋಗಮಲ್ಲಿಕಾರ್ಜುನಲಿಂಗದಾಲಯಕೆ ಬಂದು ಆ ಲಿಂಗದಲ್ಲಿ ಅಡಗಿದನು.[1]

## ವಿಶ್ವೇಶ್ವರಾಚಾರ್ಯ.

ನಮಗೆ ದೊರೆತ ವೀರಶೈವಗ್ರಂಥಗಳಲ್ಲಿ ಈತನ ಚರಿತವು ಎಲ್ಲಿಯೂ ವಿಸ್ತಾರವಾಗಿ ಹೇಳಿಲ್ಲ. **ಸಿದ್ಧನಂಜೇಶನ** (ಸು. 1650) **ಗುರುರಾಜಚಾರಿತ್ರ**ದಲ್ಲಿ "ಈಶ್ವರನೇ ಕಳಶದಾಚಾರ್ಯ ವಿಶ್ವೇಶ್ವರನಾಗಿ ಧರೆಯಂ ಪಾಲಿಸಿದಂ" ಎಂದೂ ಈತನ ಶಿಷ್ಯನು ಸದಾಶಿವಾಚಾರ್ಯ ಅಥವಾ ಪಂಚವರ್ಣ್ಣಿಗೆಯ ಸ್ವಾಮಿಯೆಂದೂ ಈತನ ಶಿಷ್ಯಪರಂಪರೆಯಲ್ಲಿ ಕೆಲವರು ರಾಜಸನ್ಯಾನಿತರಾಗಿದ್ದರೆಂದೂ ಹೇಳಿದೆ

**ಚತುರಾಚಾರ್ಯಪುರಾಣದಲ್ಲಿ** (1698) ಹಿಂದೆ ಹೇಳಿದ ನಾಲ್ವು ಆಚಾರ್ಯರುಗಳ ಚರಿತ್ರವು ಮಾತ್ರ ವರ್ಣಿತನಾಗಿದೆ.

---

## ಹಂಸದೇವ. 1161.

**ಈತನು ಚಿಕ್ಕನಾಯಕನಹಳ್ಳಿ** 32 ನೆಯ ಶಾಸನವನ್ನು ಬರೆದುದಾಗಿ ಆ ಶಾಸನದಲ್ಲಿರುವ "ಹೇಟಿದ ಕವಿ ಹಂಸದೇವಂ" ಎಂಬ ವಾಕ್ಯದಿಂದ ತಿಳಿಯುತ್ತದೆ. **ಈ ಶಾಸನವು ಹೊಯ್ಸಳ ನಾರಸಿಂಹನ** (1141—1173) **ಆಳಿಕೆಯಲ್ಲಿ 1161 ರಲ್ಲಿ ಬರೆದುದು.**

---

## ದೇವಭದ್ರಮುನಿ. 1161.

**ಈತನು ಚಿಕ್ಕನಾಯಕನಹಳ್ಳಿ** 21 ನೆಯ ಶಾಸನವನ್ನು ಬರೆದುದಾಗಿ ಆ **ಶಾಸನದ ಕೊನೆಯಲ್ಲಿರುವ ಈ ಪದ್ಯದಿಂದ ತಿಳಿಯುತ್ತದೆ:—**

ಉಚಿತಪದಾಳಂಕಾರಂ । ಪ್ರಚುರರಸಂ ನೆಗಟಲಿಂತು ಜಿನಶಾಸನಮಂ ।
ರಚಿಯಿಸಿದಂ ಹರಹಾಸ । ದ್ಯುಚಿರಯಶಂ ದೇವಭದ್ರಮುನಿಪೋತ್ತಂಸಂ

**ಈ ಶಾಸನವು ಹೊಯ್ಸಳ ನಾರಸಿಂಹನ ಆಳಿಕೆಯಲ್ಲಿ** (1141—1173) **ಶಕ** 1083 **ರಲ್ಲಿ ಬರೆದುದು. ಇದರಲ್ಲಿ ಸಾಮಂತಗೋವಿದೇವನು ಹೆಗ್ಗೆರೆಯ ಜೆನ್ನಪಾರ್ಶ್ವದೇವರ ಬಸದಿಗೆ ಸವಣುಗೆರೆಯನ್ನು ಕೊಟ್ಟಂತೆ ಹೇಳಿದೆ.**

---

1. ದೇವಾಂಗ ಪುರಾಣದಲ್ಲಿ—ದೇವಾಂಗನ ಏಳನೆಯ ಅವತಾರವಾದ ದೇವದಾಸನಿಗೆ ನಿಕೋರಾಮ ಎಂಬ ಒಬ್ಬ ಮಗನಿದ್ದಂತೆಯೂ ಆತನು ಜೈನಳಾಗಿದ್ದ ಬಿಜ್ಜಳನ ಹೆಂಡತಿಯನ್ನು ಶೈವಳನ್ನಾಗಿ ಮಾಡಿದಂತೆಯೂ—ಹೇಳಿದೆ.

ಈ ಶಾಸನದ ಬಂಧವನ್ನು ನೋಡಿದರೆ ದೇವಭದ್ರನು ಸಂಸ್ಕೃತ ಕನ್ನಡ ಎರಡರಲ್ಲಿಯೂ ಉದ್ದಾಮಕವಿಯಾಗಿದ್ದಂತೆ ತಿಳಿಯುತ್ತದೆ. ಈ ಶಾಸನದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

## ವಿಷ್ಣುನೃಪ.

ಅರಿಪುರದೊಳ್ ಧಗಿಲ್ಧಗಿಧಗಿಲ್ಧಗಿಲೆಂಬುದರಾತಿಭೂಮಿಪಾ ।
ಳರ ಶಿರದೊಳ್ ಗರಿಲ್ಗರಿಗರಿಲ್ಗರಿಲೆಂಬುದು ವೈರಿಭೂತಳೇ ॥
ಶರ ಕರುಳೊಳ್ ಚಿಮಿಲ್ಚಿಮಿಚಿಮಿಲ್ಚಿಮಿಲೆಂಬುದು ಕೋಪವಹ್ನಿ ದು ।
ರ್ಧರತರಮೆಂದೊಡಳ್ಕುಜೆ ಕಾದುವರಾರ್ ಮಲೆರಾಜರಾಜನೊಳ್ ॥ 489 ॥

## ಬಿಟ್ಟಿದೇವಸಾಮಂತ.

ನಲಿದುಲಿದಟ್ಟಿಕೊಂಡು ಕವಿತರ್ಪ ವಿರೋಧಿಬಳಕ್ಕೆ ಭೀತಿಯಿಂ ।
ನೆಲನೊಲನೆನ್ನದಲ್ಲದಿದು ಪೆರ್ಬಲಮೆನ್ನದೆ ದೋಃಪ್ರತಾಪದಿಂ ॥
ಗಿಲಿಗಿಲಿಗಂಬನಾಡಿಸುವನಾಹವದೊಳ್ ಕಲಿಬಿಟ್ಟಿದೇವನಿ ।
ನ್ನೆಲೆಗಳವಂಗೆ ಸಂಗರದೊಳಾಂಪನೆ ಗಾಂಪನವಾರ್ಯಶೌರ್ಯನೊಳ್ ॥ 490 ॥

ಹೊಡೆವ ಬಜ್ಜಸಿಡಿಲ ಕಾಳನ । ಕುಡುದಾಡೆಯ ಹರನ ನೊಸಲ ಕಣ್ಣಿ ಪೊಡರ್ಪಂ ।
ಪಡೆವುದು ಸಮರದೊಳಿದಜ್ಜಿದ । ಕಡುಗಲಿಗಳ ಕಣ್ಗೆ ಬಿಟ್ಟಿದೇವನ ಸಬಳಂ ॥ 491 ॥

## ಗೋವಿದೇವ.

ಎರೆದವರ್ಗಿತ್ತ ಚಾಗಮುದು ಬಿತ್ತಿನಲೀಶ್ವರನದ್ರಿಮಧ್ಯದೊಳ್ ।
ಗಿರಿಜೆಯಪಾಂಗವೀಕ್ಷಣದೊಳಂಕುರಿಸಿ ಮ್ಯುನದೀಪ್ರವಾಹದಾ ॥
ಪರಿಕರದಿಂದೆ ಪಲ್ಲವಿಸಿ ವಿಗ್ಗಜದಂತಮುಡರ್ಪಿನಲ್ಕೆ ಭಾ ।
ಸುರಮೆನೆ ಗೋವಿದೇವನ ಯಶೋಲತೆ ಪರ್ಬಿದುದೆಯ್ದೆ ಲೋಕಮಂ ॥ 492 ॥

---

## ಶಾಂತಿನಾಥ. 1165.

ಈತನು ನಾಗಮಂಗಲದ 30 ನೆಯ ಶಾಸನವನ್ನೂ ಅರಸಿಯ-ಕೆರೆಯ 48 ನೆಯ ಶಾಸನವನ್ನೂ ಬರೆದುದಾಗಿ ಆ ಶಾಸನಗಳ ಕೊನೆಯಲ್ಲಿರುವ

ದಕ್ಷಿಣಹೆ[1] ಮ್ಮನ ಮಮ್ಮಂ । ಲ[1]ಕ್ಷ್ಮಣಕವಿ ಶಾಂತಿನಾಥ ಕವಿಕುಳತಿಳಕಂ ।
ದಾಕ್ಷಿಣ್ಯನಿಧಿ ಗು[1]ಣೋತ್ತರ । ಶಿಕ್ಷಾಗುರು ಸೇಟ್ಟಿನಟ್ಟಿಯಂ ಶಾಸನಮಂ ॥

ಎಂಬ ಪದ್ಯದಿಂದ ತಿಳಿಯುತ್ತದೆ. ಶಿಕ್ಷಾಗುರು ಎಂಬುದರಿಂದ ಈ ಕವಿ ಉಪಾಧ್ಯಾಯನಾಗಿದ್ದಿರಬಹುದು. ಈತನು ಬ್ರಾಹ್ಮಣಕವಿಯೆಂದು ತೋರುತ್ತದೆ.

1. ಅರಸಿಯ-ಕೆರೆಯ ಶಾಸನದಲ್ಲಿ—ಸೋಮನ, ಲಕ್ಷ್ಮಣ ಗುಣಾಕರ—ಎಂಬ ಪಾಠಾಂತರಗಳಿವೆ.

ಮೇಲೆ ಹೇಳಿದ ಶಾಸನಗಳಲ್ಲಿ ಮೊದಲನೆಯದು ವೀರಬಲ್ಲಾಳನ ಆಳಿಕೆಯಲ್ಲಿ ಪಾರ್ಥಿವಸಂವತ್ಸರದಲ್ಲಿ—ಎಂದರೆ 1165 ರಲ್ಲಿ—ಬರೆದುದು; ಇದರಲ್ಲಿ ವೀರ ಬಲ್ಲಾಳನ ಚಮೂಪತಿಯಾದ ಹುಳ್ಳರಾಜನ ಅಣ್ಣ ಹೆಗ್ಗಡೆ ಕಂಟಿಮಯ್ಯನು ಮಧುಕೇಶ್ವರದೇವರಿಗೆ ದತ್ತಿಯಂ ಬಿಟ್ಟಂತೆ ಹೇಳಿದೆ. ಎರಡನೆಯ ಶಾಸನವೂ ವೀರ ಬಲ್ಲಾಳನ ಆಳಿಕೆಯಲ್ಲಿ ಶಕ 1051 ನೆಯ ಸೌಮ್ಯಸಂವತ್ಸರದಲ್ಲಿ—ಎಂದರೆ 1129 ರಲ್ಲಿ—ಬರೆದುದೆಂದು ಹೇಳಿದೆ. ಆದರೆ 1129 ರಲ್ಲಿ ವಿಷ್ಣುವರ್ಧನನು ಆಳುತ್ತಿದ್ದಂತೆಯೂ ವೀರಬಲ್ಲಾಳನು 1173 ರಿಂದ 1220 ರವರೆಗೆ ಆಳಿದಂತೆಯೂ ತಿಳಿಯಬರುವುದರಿಂದ ಈ ಶಾಸನದ ವರ್ಷವು 1189 ಆಗಿರಬೇಕು. ಮೊದಲನೆಯ ಶಾಸನದಲ್ಲಿ ಹೇಳಿರುವ ವರ್ಷದಲ್ಲಿ (1165) ವೀರಬಲ್ಲಾಳನು ಯುವರಾಜನಾಗಿದ್ದಿರಬಹುದು ಎರಡನೆಯದರಲ್ಲಿ 'ಹೊಯ್ಸಳ ವೀರಬಲ್ಲಾಳದೇವನ ಬೆಸದಿಂ ಜಗತಿಯ ಕೊತ್ತಲಿಗಳ್' ಮೊದಲಾದವರು ಜಗತ್ಕೇಶ್ವರದೇವರಿಗೆ ದತ್ತಿಯಂ ಬಿಟ್ಟಂತೆ ಹೇಳಿದೆ.

ಶಾಂತಿನಾಥನು ಪ್ರೌಢಕವಿ ಎಂಬಂಶವು ಈ ಶಾಸನಗಳಲ್ಲಿಯ ಪದ್ಯಗಳಿಂದ ವ್ಯಕ್ತವಾಗುತ್ತದೆ ಇವುಗಳಲ್ಲಿ ಕೆಲವನ್ನು ಉದ್ಧರಿಸಿ ಬರೆಯುತ್ತೇವೆ:—

## ಎರೆಯಂಗನ ಮಹಿಷಿ ವಿಚಲೆ.

ಕಡುಜಿಡ್ಡು ನಾರ್ಕುಮಾಹಾ । ಲ್ಲಡಲ ಮಗಳ್ ಲಕ್ಷ್ಮಿ ನಾರ್ತೊಡಂ ಗೋಪಾಳಂ ।
ಬಿಡನುಚಿತಮೆಂಬೊಳಪ್ಪಂ । ಬಡದೇಚಲೆ ಪದ್ಮಗಂಧಿ ಸಿರಿಗಂ ಪರಿಗಂ ॥ 493 ॥

## ವಿಷ್ಣುವರ್ಧನ.

ಕಮಲಾಕ್ಷಂ ಪುರುಷೋತ್ತಮಂ ವಿಬುಧಲೋಕಾಹ್ಲಾದನಂ ವಿಷ್ಣುವೆ ।
ತ್ಸಮುದಗ್ರಂ ಸನನಂತಭೋಗಯುತನುರ್ವೀದಾರಧಾರೇಯನು ।
ತ್ತಮಸತ್ವಾನ್ವಿತನುದ್ಧ್ಯಾದವಕುಳಾಳಂಕಾರನೆಂದಿಂತು ವಿ।
ಷ್ಣುಮಹೀಶಂ ಸಲೆ ತಾನೆ ವಿಷ್ಣುವೆನಿಪಂ ಲಕ್ಷ್ಮೀವಧೂವಲ್ಲಭಂ ॥ 494 ॥

## ನರಸಿಂಹ.

ಇರಿರಾದರಿಭೂಪಾಳರ । ಮದದಾನೆಯ ಕೊಂಬನುಡಿದು ದಂತದ ಬಳಿಯಂ ।
ಬಿದುವಿನ ಮುತ್ತಿನ ಹಾರಮ । ನೊದವಿಸಿ ಜಯಸಿರಿಗೆ ತುಡಿಸುವಂ ನರಸಿಂಹಂ ॥
॥ 495 ॥

ವಿಸಸನದೊಳ್ ಕೆಜ್ಜೊಡೆ ಸಿ । ನ್ನಸಿಲತೆ ವೈರಿಗಳ ಹೃದಯದೊಳ್ ನಾಂಟಿ ತಳಿರ್ ।
ಪಸರಿಸೆ ಬಿನ್ನೊಳ್ ಬಳವುದು । ಪೊಸತೊಂದಚ್ಚರಿ ನೃಸಿಂಹ ಭಾವಿಸೆ ಜಗದೊಳ್
॥ 496 ॥

## ವೀರಬಲ್ಲಾಳ.

ಕಲಿಕಾಲಕ್ಷತ್ರಪುತ್ರಪ್ರಬಳತರದುರಾಚಾರಸಂದೋಹದಿಂದಂ ।
ಹೊಲೆ ಹೊದ್ದಲ್ ಹೇಸಿ ಬೀಸತ್ತಳವಲ್ಲಿದ ಮಹೀಕಾಂತೆಯಂ ರಕ್ಷಿಸಲ್ಕಾ ॥
ಜಲಜಾಕ್ಷಂ ತಾನೆ ಬಂದಂತವತರಿಸಿದವೋಲ್ ವೀರಬಲ್ಲಾಳಭೂಪಂ ।
ಕುಲಜಾತಾ್ಧಾ. . . ನ್ಯಸವರನುದಯಂಗೆಯ್ದುನಾಶ್ಚರ್ಯಶೌರ್ಯಂ ॥ 497 ॥

## ಹೆಮ್ಮ.

ಜವಸೊಡನಾದೊಡಂ ಸೆಣಸಿ ಜತ್ತಕುಜ್ರಾಡುವ ವೀರಮಂದೊಡೀ ।
ಭುವನದೊಳಾಂತು ನಿಂದರಿನ್ನಪಾಳರ ನುಂಗುವ ಕಾಲಮೃತ್ಯುವಾ ॥
ಹವದೆಡೆಗಾಗಳುಂ ಬಿಡದೆ ಬೀಸುವ ನಂಜಿನ ಗಾಳಿಯುಂದೊಡಿ ।
ನ್ನಿವನ ಪೊಡರ್ಪನೆಂಪೊಗಟ್ಟುದೋ ಕಲಪೆಮ್ಮನನಾಜಿಗುಮ್ಮನಂ ॥ 498 ॥

## ಕಳಿಕಟ್ಟಿ.

ತೀವಿದ ಚೆನ್ನನಪ್ಪ ಕೆಜಿಯೊಪ್ಪುವ ಕಾತಕವುಂಗು ಸುತ್ತಲುಂ ।
ರ್ಪಿಂವನಲಕೆ ಕಣ್ಪೆಱ್ಪಿದವೋಲ್ ಬೆಳೆದಿರ್ದ ಸುಗಂಧಶಾಳಿಯುಂ ॥
ದೀವಸುಧಾತಳಾಗ್ರದೊಳೆ ರಮ್ಯಮೆನಲ್ ಕಳಿಕಟ್ಟಿ ನಾಡೆಯುಂ ।
ದೇವಗಹಂಗಳಿಂದೆಸೆದು ಶೋಭಿಸುತಿರ್ಪುದು ಸೋಲ್ಗೊಡೊಗ್ಗಳಿಂ ॥ 499 ॥

---

# ಹರೀಶ್ವರ, ರಾಘವಾಂಕ, ಕೆರೆಯ ಪದ್ಮರಸ.

## ವಿಚಾರಂ.

ಹರೀಶ್ವರಾದಿಗಳ ಚರಿತವನ್ನು ಬರೆವುದಕ್ಕೆ ಮುಂಚೆ ಇವರ ಕಾಲವನ್ನು ನಿರ್ಧರಿಸುವುದಕ್ಕಾಗಿ ಸ್ವಲ್ಪ ವಿಚಾರವು ಅವಶ್ಯಕವಾಗಿದೆ.

ಹರೀಶ್ವರನು—1283 (?) ರಲ್ಲಿ ಆಳುವುದಕ್ಕೆ ಆರಂಭಿಸಿದ ವೀರನರಸಿಂಹ ಬಲ್ಲಾಳನ ಕಾಲದಲ್ಲಿ ಇದ್ದಿರಬೇಕೆಂದು ಮೈ॥ ಕಟೆಲ್ ಈ ರೀತಿಯಾಗಿ ನಿರ್ಣಯಿಸಿದ್ದಾರೆ[1]:—

ಹರೀಶ್ವರನ ಸೋದರಳಿಯನಾದ ರಾಘವನು ಪಂಪಾಪುರದ ರಾಜನಾದ ದೇವರಾಜನ (1286–1328) ಸಭೆಯಲ್ಲಿ ಹರಿಶ್ಚಂದ್ರಕಾವ್ಯವನ್ನು ಓದಿದಂತೆಯೂ ಓರಗಲ್ಲಿಗೆ ಹೋಗಿ ಕಾಕತೀಯರುದ್ರನ (1292–1335) ಸಭೆಯಲ್ಲಿ ವೀರೇಶ್ವರಚರಿತವನ್ನು ನಿರ್ಮಿಸಿ ಓದಿ ಅಲ್ಲಿದ್ದ ಕುಕವಿಗಳನ್ನು ಸೋಲಿಸಿದಂತೆಯೂ ನರಸಿಂಹಬಲ್ಲಾಳನ ಮಂತ್ರಿಯಾದ ಕೆರೆಯಪದ್ಮರಸನನ್ನು ನೋಡುವುದಕ್ಕೆ ಬೀಳೂರಿಗೆ ಹೋದಂತೆಯೂ ರಾಘವಾಂಕಚರಿತದಿಂದ ತಿಳಿಯಬರುತ್ತದೆ. ಈ ನರಸಿಂಹಬಲ್ಲಾಳನು ದೇವರಾಜ, ಕಾಕತೀಯರುದ್ರ ಇವರ

1. ಭಂದೋಂಬುಧಿಯ ಉಪೋದ್ಘಾತ, ಪುಟ 53

ಸಮಕಾಲದವನಾಗಿರಬೇಕಾದುದರಿಂದ ಇವನು 1283 ರಿಂದ ರಾಜ್ಯಭಾರಮಾಡಿದ ವೀರ ನರಸಿಂಹಬಲ್ಲಾಳನೇ ಆಗಿರಬೇಕು. ಇವನನ್ನೇ ಚೆನ್ನಬಸವಪುರಾಣದಲ್ಲಿ ಬಿಟ್ಟಿಬಲ್ಲಾಳ ಎಂದು ಕರೆದಿದೆ. ಆದುದರಿಂದ ಹರೀಶ್ವರನು ಸು. 1290 ರಲ್ಲಿ ಇದ್ದಿರಬೇಕು.

ಆದರೆ ಹರೀಶ್ವರ, ರಾಘವ, ಕೆರೆಯ ಪದ್ಮರಸ ಇವರು ಸುಮಾರು 1165 ರಲ್ಲಿ ಇದ್ದರು ಎಂಬುದಕ್ಕೆ ಪ್ರಬಲವಾದ ಕಾರಣಗಳಿವೆ.

(1) ಮಲ್ಲಿಕಾರ್ಜುನನು (ಸು. 1245) ತನ್ನ ಸೂಕ್ತಿಸುಧಾರ್ಣವದಲ್ಲಿ ಹರೀಶ್ವರನ ಗಿರಿಜಾಕಲ್ಯಾಣದಿಂದ ಅನೇಕಪದ್ಯಗಳನ್ನು ಉದ್ಧರಿಸಿ ಬರೆದಿದ್ದಾನೆ. ಇದರಿಂದ ಹರೀಶ್ವರನು 1245 ಕ್ಕೆ ಹಿಂದೆ ಇದ್ದನೆಂಬುದು ವ್ಯಕ್ತವಾಗುತ್ತದೆ.

(2) ಸೋಮರಾಜನು (1222) ತನ್ನ ಉದ್ಭಟಕಾವ್ಯದಲ್ಲಿ—"ಪ್ರಮಥಾಸೀಕ ಕಥಾರ್ಣವೇಂದು ಪರಿದೇವಾಚಾರ್ಯನಂ—ನಿಮಲಜ್ಞಾನಸುದೀಪಿಕಾಸ್ಫುರಿತಚೇತಸ್ಪದ್ಮನಂ ಪದ್ಮನಂ ಬಲಗೊಂಡು ಪೇೞ್ದಿಸೀಕಾವ್ಯಮಂ" ಎಂದು ಹರೀಶ್ವರನನ್ನೂ ಕೆರೆಯ ಪದ್ಮರಸನನ್ನೂ ಸ್ತುತಿಸುವುದರಿಂದ ಇವರಿಬ್ಬರೂ 1222 ಕ್ಕಿಂತ ಹಿಂದಣವರಾಗಿರಬೇಕು.

(3) ಬಿಟ್ಟಿಬಲ್ಲಾಳನು 1283 ರಲ್ಲಿ ರಾಜ್ಯವಾಳಿದ ವೀರನರಸಿಂಹಬಲ್ಲಾಳನೇ ಆಗಿರಬೇಕೆಂದು ಮೆ॥ ಕಿಟಲ್ ಹೇಳಿದ್ದಾರೆ. ಆದರೆ ಪದ್ಮಣಾಂಕನ (ಸು. 1385) ಕೆರೆಯ ಪದ್ಮರಸಚರಿತ್ರರೂಪನಾದ ಪದ್ಮರಾಜಪುರಾಣದಲ್ಲಿಯು—

ಶ್ರೀವಿಪುಳನರಸಿಂಹಬಲ್ಲಾಳಭೂಮಿಪಂ ।
ಕೋವಿದಂ ಯುವರಾಜಪಟ್ಟಾನ್ವಿತಂ ಬಿಟ್ಟಿ ।
ದೇವರಾಯನೆನಿಪ್ಪ ಪುತ್ರಸಹಿತಂ ಯಾದವಾನ್ವಯೋದ್ಧರಣನಾದಂ ॥

ನೃಸಿಂಹಬಲ್ಲಾಳಂ ಕುಮಾರಕುಲಚಿಂತಾಮಣಿಯೆನಿಪ್ಪ ಬಿಟ್ಟಿ ಭೂಪಂ ಬೆರಸು ಸಿಂಹಾಸನ ಸ್ಥನಾಗಿರ್ದಂ—ಎಂಬ ಪದ್ಯಭಾಗಗಳಿಂದ ಕೆರೆಯ ಪದ್ಮರಸನ ಕಾಲದಲ್ಲಿ ನೃಸಿಂಹಬಲ್ಲಾಳನು ರಾಜನಾಗಿದ್ದಂತೆಯೂ ಅವನ ಮಗನಾದ ಬಿಟ್ಟಿದೇವನು ಯುವರಾಜನಾಗಿದ್ದಂತೆಯೂ ತಿಳಿಯುತ್ತದೆ. ಸೋಮರಾಜನು (1222) ಕೆರೆಯ ಪದ್ಮರಸನನ್ನು ಸ್ತುತಿಸುವುದರಿಂದ 1222 ಕ್ಕಿಂತ ಹಿಂದೆ ಪದ್ಮರಸನೂ ನರಸಿಂಹನೂ ಅವನ ಮಗ ಯುವರಾಜ ಬಿಟ್ಟಿದೇವನೂ ಇದ್ದಿರಬೇಕು. ಹೊಯ್ಸಳರಾಜರ ಪರಂಪರೆಯಲ್ಲಿ ವಿಷ್ಣುವರ್ಧನನಿಗೆ (1111—1141) ಬಿಟ್ಟಿದೇವ ಎಂಬ ಹೆಸರುಂಟೆಂದು ಶಾಸನಗಳಿಂದ ತಿಳಿಯುತ್ತದೆ. ಈ ಬಿಟ್ಟಿದೇವನ ತಂದೆಗೆ ಎರೆಯಂಗ ಎಂಬ ಹೆಸರಿದೆ; ನರಸಿಂಹ ಎಂಬ ಹೆಸರು ಬೇರೆ ಇಲ್ಲ. 1222 ಕ್ಕೆ ಹಿಂದೆ ವಿಷ್ಣುವರ್ಧನನ ಮಗ ನರಸಿಂಹಬಲ್ಲಾಳನು ಹೊರತು ಬೇರೆ ನರಸಿಂಹಬಲ್ಲಾಳನು ಯಾರೂ ಇಲ್ಲ. ಈ ನರಸಿಂಹಬಲ್ಲಾಳನು 1141 ರಿಂದ 1173 ರವರೆಗೆ ಆಳಿದನು. ಇವನ ಮಗ ವೀರಬಲ್ಲಾಳ. ಪದ್ಮಣಾಂಕನು ಈ ವೀರಬಲ್ಲಾಳನಿಗೆ ಅವನ ತಾತನಾದ

ವಿಷ್ಣುವರ್ಧನನ ಹೆಸರನ್ನೇ ಇಟ್ಟು ಬಿಟ್ಟದೇವ ಎಂದು ಕರೆದಿರಬೇಕು.[1] ಈ ನರಸಿಂಹ ಬಲ್ಲಾಳನ ಕಾಲದಲ್ಲಿಯೇ (1141—1173) ಕೆರೆಯ ಪದ್ಮರಸನು ಇದ್ದಿರಬೇಕು.

(4) 1292 ರಿಂದ 1335 ರ ವರೆಗೆ ಆಳಿದ ರುದ್ರಪ್ರತಾಪಗಣಪತಿಯ ಕಾಲದಲ್ಲಿ ರಾಘವಾಂಕನು ಓರಗಲ್ಲಿಗೆ ಹೋಗಿದ್ದಂತೆ ಮೆ॥ ಕಿಟಲ್ ಹೇಳಿದ್ದಾರೆ. ಆದರೆ ರಾಘವಾಂಕನು 1222 ಕ್ಕೆ ಹಿಂದೆ ಇದ್ದ ಹರೀಶ್ವರನ ಸೋದರದ ಅಳಿಯನಾದುದರಿಂದ ಆತನು 1292 ರಿಂದ 1335 ರ ವರೆಗೆ ಆಳಿದ ರುದ್ರಪ್ರತಾಪಗಣಪತಿಯ ಸಭೆಗೆ ಹೋದನೆಂಬುದು ಅಸಂಭಾವ್ಯವಾಗಿದೆ. ಒಬ್ಬ ಕಾಕತೀಯ ರುದ್ರದೇವನು ಶಕ 1084 ನೆಯ ಚಿತ್ರಭಾನು ಸಂವತ್ಸರದಲ್ಲಿ—ಎಂದರೆ ಕ್ರಿ. ಶ. 1162 ರಲ್ಲಿ—ಇದ್ದಂತೆ ಶಾಸನಗಳಿಂದ ತಿಳಿಯುತ್ತದೆ.[2] ಈ ದೊರೆಯ ಕಾಲದಲ್ಲಿ ರಾಘವಾಂಕನು ಓರಗಲ್ಲಿಗೆ ಹೋಗಿರಬೇಕು. ಚೆನ್ನಬಸವ ಪುರಾಣದಲ್ಲಿ ರಾಘವನು ಓರಗಲ್ಲಿಗೆ ಹೋದುದಾಗಿ ಹೇಳಿದೆಯೇ ಹೊರತು ಆಗಿನ ದೊರೆಯ ಹೆಸರು ಹೇಳಿಲ್ಲ.

(5) ಪಂಪಾಪುರದ ದೇವರಾಜನು ಹರಿಹರರಾಜನಿಗೆ ಮುಂದೆ 1286 ರಿಂದ 1328 ರ ವರೆಗೆ ರಾಜ್ಯಭಾರ ಮಾಡಿದುದಾಗಿ ಮೆ॥ ಬ್ರೌನ್ ಹೇಳಿರುತ್ತಾರೆಂದು ಮೆ॥ ಕಿಟಲ್ ಬರೆದಿದ್ದಾರೆ. ಆದರೆ ಮೇಲೆ ಹೇಳಿರುವ ಕಾರಣಗಳಿಂದ ಈ ದೇವರಾಜನು ರಾಘವನ ಕಾಲಕ್ಕಿಂತ ಸುಮಾರು 120 ವರ್ಷ ಈಚೆ ಇದ್ದಿರಬೇಕು. ವಸ್ತುತಃ ರಾಘವನ ಕಾಲದಲ್ಲಿಯಾಗಲಿ 1286 ರಿಂದ 1328 ರ ವರೆಗೆಯಾಗಲಿ ದೇವರಾಜನೆಂಬ ಒಬ್ಬ ದೊರೆ ಪಂಪೆಯಲ್ಲಿ ಆಳುತ್ತಿದ್ದನು ಎಂಬ ಹೇಳಿಕೆಗೆ ಆವ ಆಧಾರವೂ ಸಿಕ್ಕಿಲ್ಲ. ಪದ್ಮರಾಜಪುರಾಣದಲ್ಲಿ—ಕೆರೆಯ ಪದ್ಮರಸನ ಪಿತಾಮಹನಾದ ಸಕಳೇಶಮಾದರಸನು ತನ್ನ ತಂದೆಯಾದ ಕಲ್ಲಕುರಿಕೆ ಮಲ್ಲರಸನೊಡನೆ ತಾನು ಸಂಸಾರವನ್ನು ಬಿಟ್ಟು ವಿರಕ್ತನಾಗುವೆನೆಂದಾಗ ಮಲ್ಲರಸನು "ಎಮ್ಮ ಬಸವಾದಿಗಳ್ ಭಕ್ತಿಯಂ ನಿಲಿಸಲೆಂದು ಕಲ್ಯಾಣದೊಳ್ ಬಂದಿರ್ಪರ್; ಅವರೊಡನೆ ಕೆಲವು ಕಾಲಮಂ ಕಳೆ" ಎಂದು ಹೇಳಿದುದಾಗಿ ತಿಳಿವುದರಿಂದ ಸಕಳೇಶಮಾದರಸನ ಕಾಲದಲ್ಲಿ ಬಸವನು ಪುಟ್ಟಿರಬಹುದು. ಕೆರೆಯ ಪದ್ಮರಸನ ತಂದೆ ಮಾಯಿದೇವನೂ ಬಸವನೂ ಸಮಕಾಲದವರಾಗಿರಬಹುದು. ಕೆರೆಯ ಪದ್ಮರಸನು ಸುಮಾರು 1165 ರಲ್ಲಿ ನರಸಿಂಹಬಲ್ಲಾಳನ ಆಳಿಕೆಯಲ್ಲಿ ಇದ್ದಿರಬೇಕು.

ಅಲ್ಲದೆ ಪದ್ಮರಾಜಪುರಾಣದಿಂದ—ರಾಘವನು ಗತಿಸಿದ ಎಂಟು ದಿನಕ್ಕೆ ಹರೀಶ್ವರನು 'ಪಂಪಾವಿರೂಪಾಕ್ಷಲಿಂಗದೊಳಡಂಗಿದಂ' ಎಂದೂ ಕೆರೆಯಪದ್ಮರಸನು ಕಾಶಿಗೆ ಹೋಗುವಾಗ ಹರೀಶ್ವರನನ್ನು ನೋಡಿ 'ಉಮಾವರಂ ನಿಮ್ಮನಿಂದಿಗೆಂಟನೆಯ ದಿನಕೆ ತನ್ನೊಳ್ ನೆರಪಲಿರ್ದಪಂ' ಎಂದು ಹೇಳಿದಹಾಗೂ ಮತ್ತು ಹರೀಶ್ವರನು ನರಸಿಂಹಬಲ್ಲಾಳನಲ್ಲಿ

---

1 ಹಾಸನ 42 ನೆಯ ಮತ್ತು 43 ನೆಯ ಶಾಸನಗಳಲ್ಲಿ ವೀರಬಲ್ಲಾಳನಿಗೆ 'ವಿಷ್ಣುವರ್ಧನ ಶ್ರೀಪ್ರತಾಪ ಹೊಯ್ಸಳ ಭುಜಬಳ ವೀರಬಲ್ಲಾಳ' ಎಂಬ ವಿಶೇಷವಾದ ಹೆಸರು ಹೇಳಿದೆ

2. *Ind. Ant.*, IX, 9.

ಕರಣಿಕನಾಗಿದ್ದಂತೆಯೂ ಇವೇ ರಾಜನ ಸಭೆಯಲ್ಲಿ ಕೆರೆಯಪದ್ಮರಸನಿಗೂ ತ್ರಿಭುವನತಾತ ನಿಗೂ ವಾದವು ನಡೆದಾಗ ರಾಘವನೂ ಅಲ್ಲಿ ಇದ್ದಂತೆಯೂ ತಿಳಿವುದರಿಂದ ಈ ಮೂವರೂ ಸಮಕಾಲದವರು ಎಂಬುದು ವ್ಯಕ್ತವಾಗುತ್ತದೆ.

**ಆದುದರಿಂದ ಹರೀಶ್ವರ, ರಾಘವಾಂಕ, ಕೆರೆಯಪದ್ಮರಸ ಈ ಮೂವರೂ ಸುಮಾರು 1165 ರಲ್ಲಿ ಇದ್ದಿರಬೇಕು.**

## ಹರೀಶ್ವರಾದಿಗಳು ಸ್ತುತಿಸುವ ಪೂರ್ವಕವಿಗಳು.

ಈ ಮೂವರು ಕವಿಗಳ ಚರಿತವನ್ನು ಬರೆವುದಕ್ಕೆ ಮುಂಚೆ ಇವರು ತಮ್ಮ ಗ್ರಂಥಗಳಲ್ಲಿ ಸ್ತುತಿಸುವ ಪೂರ್ವಕವಿಗಳ ವಿಷಯವನ್ನು ಸ್ವಲ್ಪಮಟ್ಟಿಗೆ ತಿಳಿಸುವುದು ಆವಶ್ಯಕವಾಗಿದೆ.

ಹರೀಶ್ವರನು ತನಗೆ ಹಿಂದೆ ಇದ್ದ ಶೈವಕವಿಗಳನ್ನು ತನ್ನ ಗಿರಿಜಾಕಲ್ಯಾಣದಲ್ಲಿಯ—

ಘನಕವಿತಾವಿಲಾಸದೊಳ ಸಂದ ಮಯೂರನ ರಚ್ಚೆ ಕಾಳಿದಾ ।
ಸನ ರಸವೃತ್ತಿ ಬಾಣನ ಮೃದೂಕ್ತಿ ಹಲಾಯುಧನಂದು ಕೇಶಿರಾ ॥
ಜನ ಬಗೆಯುದ್ದಟ್ಟಿಯ್ದುನ ಗಭೀರತೆ ಮಲ್ಲಣನೇಚ್ಚಿ ಭೋಜರಾ ।
ಜನ ಜಸವೆನ್ನ ಕಾವ್ಯದೊಳನೂನತೆಯಿಂ ನೆಲಸರ್ಕ ಸಂತತಂ ॥

ಎಂಬ ಪದ್ಯದಲ್ಲಿ ಹೇಳುತ್ತಾನೆ. ಈತನ ಸೋದರದಳಿಯನಾದ ರಾಘವನು ತನ್ನ ಹರಿಶ್ಚಂದ್ರಕಾವ್ಯದಲ್ಲಿಯ—

ಮನವಚನಕಾಯದೊಳಗೊಮ್ಮೆಯುಂ ಭಾಳಲೋ ।
ಚನನನಲ್ಲದೆ ಹೊಗಲ್ಬಿದುದ್ದಟ್ಟಿಯ್ದುನ ಮಯೂ ।
ರನ ಕಾಳಿದಾಸನ ಹಲಾಯುಧನ ಕೇಶಿರಾಜನ ಮುಲುಹಣನ ಬಾಣನ ॥
ವಿನುತಭೋಜನ ಭಲ್ಲಟನ ಭಾರವಿಯ ಶಿವನ ।
ನೆನೆದು ಬಲಗೊಂಡು ತೊಡಗಿದೆ ಮಹಾಕೃತಿಯನೆಸೆ ।
..... ॥

ಎಂಬ ಪದ್ಯದಲ್ಲಿ ಹಿಂದಣ ಶೈವಕವಿಗಳನ್ನು ಹೇಳಿದ್ದಾನೆ. ಈ ಕವಿಗಳಲ್ಲಿ ಕಾಳಿದಾಸ, ಮಯೂರ, ಬಾಣ, ಭೋಜ, ಭಾರವಿ ಇವರು ಸಂಸ್ಕೃತಕವಿಗಳೇ ಆಗಿರಬೇಕು. ಇವರುಗಳಲ್ಲಿ ಕಾಳಿದಾಸ ಮಯೂರ ಬಾಣರು ಕಂಧಾರದ ನಂದಭೂಪನ ಸಭೆಯಲ್ಲಿದ್ದಂತೆಯೂ ಕಾಳಿದಾಸನು ಶಿವನ ಚರಣಕ್ಕೆ ಕಣ್ಣನರ್ಪಿಸಿ ಮರಳ ಪಡೆದಂತೆಯೂ ಮಯೂರನು ಸೂರ್ಯನಿಂದ ಹೋಗದ ಕುಷ್ಠವನ್ನು ಶಿವನಿಂದ ಸೀಗಿ ನಿರ್ಮಲತನುವನ್ನು ಪಡೆದಂತೆಯೂ ಬಾಣನು ತನ್ನ ಕೈಕಾಲುಗಳನ್ನು

ಕತ್ತರಿಸಿಕೊಂಡು ಶಿವನನ್ನು ಸ್ತುತಿಸಿ ಮರಳಿ ಪಡೆದಂತೆಯೂ ಭೋಜನು ಶಿವ ಕಾವ್ಯವನ್ನು ಬರೆಯಲು ಶಿವನು ಮೆಚ್ಚಿ ಕೈಲಾಸಕ್ಕೆ ಕರೆದುಕೊಂಡುಹೋದಂತೆಯೂ ವೀರಶೈವಗ್ರಂಥಗಳಲ್ಲಿ ಹೇಳಿದೆ. ಬಾಣಮಯೂರರ ವಿಷಯವನ್ನು **ಬ್ರಹ್ಮಶಿವನು** (ಸು. 1125) ತನ್ನ ಸಮಯಪರೀಕ್ಷೆಯಲ್ಲಿ ಹೀಗೆ ಪರಿಹಾಸ ಮಾಡುತ್ತಾನೆ:—

ಕಡಿದೊಡೆ ಬಾಣಂ ಕೆಯ್ಯಂ । ಗಡ ಕೂಡೆ ಕೊನರ್ತುದಾ ಮಯೂರನ ತೊನ್ನಾ ।
ಪೊಡಲುಂ ಸುವರ್ಣಮಾದುದು । ಗಡ ದೇವರ ವರದಿನೆಂದು ಮೂಢರ್ ನುಡಿವರ್ ॥

ಮಲ್ಲಣ, ಕೇಶಿರಾಜ, ಹಲಾಯುಧ, ಉದ್ಭಟ, ಭಲ್ಲಟ, ಶಿವ ಇವರುಗಳಲ್ಲಿ ಕೇಶಿರಾಜನು ಕೊಂಡಗೂಳಿ ಕೇಶಿರಾಜನೇ ಆಗಿರಬೇಕು.[1] ಶಿವನು ಸಿರಸಿಗೆಯ ಶಿವಯೋಗಿದೇವನಾಗಿರಬಹುದು.[2] ಉಳಿದವರು ಕನ್ನಡದಲ್ಲಿ ಗ್ರಂಥಗಳನ್ನು ಬರೆದಿದ್ದಾರೆಯೋ ಇಲ್ಲವೋ ತಿಳಿಯದು. ಇವರುಗಳಲ್ಲಿ ಮಲ್ಲಣ, ಉದ್ಭಟ, ಹಲಾಯುಧ ಇವರುಗಳ ಚರಿತ್ರಗಳು ಬಸವಪುರಾಣವೇ ಮೊದಲಾದ ಗ್ರಂಥಗಳಲ್ಲಿ ದೊರೆಯುತ್ತವೆ. ಮಲ್ಲಣ, ಉದ್ಭಟ ಇವರಿಬ್ಬರ ಹೆಸರುಗಳನ್ನು **ಬ್ರಹ್ಮಶಿವನು** ಹೇಳಿರುವುದರಿಂದ ಇವರು 1125 ಕ್ಕೆ ಹಿಂದೆ ಇದ್ದಿರಬೇಕು. ಇವರುಗಳ ವಿಷಯವಾಗಿಯೂ ಹಲಾಯುಧನ ವಿಷಯವಾಗಿಯೂ ವೀರಶೈವಗ್ರಂಥಗಳಿಂದ ಈ ಯಂಶಗಳು ತಿಳಿಯಬರುತ್ತವೆ.

## ಮಲ್ಲಣ.

ಈತನು ಕಾಶ್ಮೀರದೇಶದಲ್ಲಿ ಭಾರತೀಪೀಠವೆಂಬ ಗ್ರಾಮದಲ್ಲಿ ಸುವರ್ಣ ಭಟ್ಟನೆಂಬ ಬ್ರಾಹ್ಮಣನ ಮನೆಯಲ್ಲಿ ಹುಟ್ಟಿ ಪದ್ಮಾವತಿಯೆಂಬವಳ ಉಪದೇಶದಿಂದ ಶಿವಧ್ಯಾನಮಾಡುತ್ತ ಮಹಾಯೋಗಿಯಾಗಿ ಶಿವಲೋಕವನ್ನೈದಿದನು. ಈತನು ಸಂಸ್ಕೃತದಲ್ಲಿ ಮಲ್ಲಣಸ್ತವವೆಂಬ ಶಿವಸ್ತೋತ್ರರೂಪವಾದ ಒಂದು ಗ್ರಂಥವನ್ನು ಬರೆದಿದ್ದಾನೆ.

## ಉದ್ಭಟ.

ಇವನು ತನ್ನ ಹೆಂಡತಿಯ ಸಂಗಡ ಶಿವನ ಧ್ಯಾನದಲ್ಲಿದ್ದು ಪೂಜೆಗಳನ್ನು ಮಾಡಲು ಶಿವನು ಪ್ರತ್ಯಕ್ಷವಾಗಿ ತನ್ನ ಗಣಕೂಟದಲ್ಲಿ ಇವರಿಬ್ಬರನ್ನೂ ಸೇರಿಸಿಕೊಂಡನು. ಈತನು ಹರಲೀಲೆಯೆಂಬ ಸಾವಿರ ವೃತ್ತವುಳ್ಳ ಒಂದು ಕಾವ್ಯವನ್ನು ಬರೆದುದಾಗಿ **ಬ್ರಹ್ಮಶಿವನ ಸಮಯಪರೀಕ್ಷೆಯಿಂದ** ತಿಳಿಯುತ್ತದೆ. ಈತನ ವಿಷಯವಾಗಿ **ಉದ್ಭಟಕಾವ್ಯ, ಉದ್ಭಟದೇವಚರಿತ್ರೆ** ಮೊದಲಾದ ಗ್ರಂಥಗಳು ಹುಟ್ಟಿವೆ.

1. ಪುಟ 185. 2. ಪುಟ 199

ಒಬ್ಬ ಉದ್ಭಟನು ಸುಮಾರು 9 ನೆಯ ಶತಮಾನದಲ್ಲಿ ಅಲಂಕಾರಗ್ರಂಥಗಳನ್ನೂ ಕುಮಾರಸಂಭವನೆಂಬ ಕಾವ್ಯವನ್ನೂ ಸಂಸ್ಕೃತದಲ್ಲಿ ಬರೆದಿರುವಂತೆ ತಿಳಿಯಬರುತ್ತದೆ. ವೀರಶೈವರು ಸ್ತುತಿಸುವ ಉದ್ಭಟನು ಇವನೇಯೋ ಅಲ್ಲವೋ ತಿಳಿಯದು.

## ಹಲಾಯುಧ.

ಇವನು ಉತ್ತರದೇಶದಲ್ಲಿ ನವಗ್ರಾಮವೆಂಬ ಊರಿನಲ್ಲಿ ಇದ್ದ ಸಮಸ್ತ ಶಿವಭಕ್ತರನ್ನೂ ತನ್ನ ಶಿವಭಕ್ತಿಮಹಿಮೆಯಿಂದ ಶಿವಲೋಕಕ್ಕೆ ಕಳುಹಿ ತಾನೂ ಕೈಲಾಸಕ್ಕೆ ಹೋದನು.

ಸುಮಾರು 10 ನೆಯ ಶತಮಾನದಲ್ಲಿ ಒಬ್ಬ ಹಲಾಯುಧನು ಅಭಿಧಾನರತ್ನಮಾಲೆಯೆಂಬ ಕೋಶವನ್ನೂ ಕವಿರಹಸ್ಯವನ್ನೂ ಸಂಸ್ಕೃತದಲ್ಲಿ ಬರೆದಂತೆ ತಿಳಿಯುತ್ತದೆ. ವೀರಶೈವರು ಹೇಳುವ ಹಲಾಯುಧನು ಇವನೇಯೋ ಏನೋ ತಿಳಿಯದು.

## ಭಲ್ಲಟ.

ಸುಮಾರು 9 ನೆಯ ಶತಮಾನದಲ್ಲಿದ್ದ ಒಬ್ಬ ಭಲ್ಲಟಕವಿ ಭಲ್ಲಟಶತಕವೆಂಬ ಒಂದು ನೀತಿಗ್ರಂಥವನ್ನು ಸಂಸ್ಕೃತದಲ್ಲಿ ಬರೆದಿದ್ದಾನೆ. ವೀರಶೈವರು ಹೊಗಳುವ ಭಲ್ಲಟಕವಿ ಇವನೇ ಆಗಿರಬಹುದೋ ಏನೋ ತಿಳಿಯದು.

---

## ಹರೀಶ್ವರ. ಸು. 1165.

ಈತನು ಗಿರಿಜಾಕಲ್ಯಾಣ, ಪಂಪಾಶತಕ, ಶಿವಗಣದ ರಗಳೆಗಳು, ಮುಡಿಗೆಯ ಅಷ್ಟಕ ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಅಲ್ಲದೆ ರಕ್ಷಾಶತಕ, ಶಿವಾಕ್ಷರಮಾಲೆ ಎಂಬ ಗ್ರಂಥಗಳನ್ನೂ ರಚಿಸಿರುವಂತೆ ತಿಳಿಯಬರುತ್ತದೆ. ಇವು ನಮಗೆ ದೊರೆತಿಲ್ಲ.

ಇವನು ವೀರಶೈವಕವಿ; ನರಸಿಂಹಬಲ್ಲಾಳನ (1141–1173) ಆಳಿಕೆಯಲ್ಲಿ ಹಳೆಯಬೀಡಿನಲ್ಲಿ 'ಕರಣಿಕರ ಕುಲತಿಲಕ'ನಾಗಿದ್ದನು. ಈತನ ಗುರು ಹಂಪೆಯ ಮಾಯಿದೇವ; ಇವನ ಸೋದರದಳಿಯ ರಾಘವಾಂಕ. ಈತನ ಕಾಲದಲ್ಲಿ ಕೆರೆಯ ಪದ್ಮರಸನು ನರಸಿಂಹಬಲ್ಲಾಳನಲ್ಲಿ ಮಂತ್ರಿಯಾಗಿದ್ದನು; ಈ ದೊರೆಯ ಮಗನಾದ ಬಿಟ್ಟಬಲ್ಲಾಳನು ಯುವರಾಜನಾಗಿದ್ದನು. ನರಸಿಂಹಬಲ್ಲಾಳನು ತನ್ನ ಕರಣಿಕನಾದ ಈತನನ್ನು ಲೆಕ್ಕವನ್ನು ಕೇಳಿದಾಗ, ಈತನು ಕಡಿತವನ್ನು ಬಿಟ್ಟು ಕೈಗಳನ್ನು ಒರಸಲು, ದೊರೆ ಅದೇನೆಂದು ಕೇಳಲಾಗಿ— ಪಂಪಾವಿರೂಪಾಕ್ಷನಾಲಯದಲ್ಲಿ ಆರತಿಯನ್ನು ಎತ್ತಿದಾಗ ಅದರ ಸೆಕೆಹತ್ತಿ

ಮೇಲ್ಕಟ್ಟಿನ ಬಟ್ಟೆ ಭುಗಿಲೆಂದು ಉರಿವುದನ್ನು ಕಂಡು ಕೈಯಿಂದ ಒರಸಿ ಆರಿಸಿದೆನು—ಎಂದು ಹೇಳಿದಂತೆಯೂ ದೊರೆ ಆ ಮಾತನ್ನು ನಂಬದೆ ವಿರೂಪಾಕ್ಷ ನಾಲಯಕ್ಕೆ ಒಬ್ಬ ದೂತನನ್ನು ಕಳುಹಿ ಹರೀಶ್ವರನು ಹೇಳಿದುದು ನಿಜವೆಂದು ತಿಳಿದು ಆಶ್ಚರ್ಯಪಟ್ಟು ಈತನನ್ನು ವಿರೂಪಾಕ್ಷಾಲಯದಲ್ಲಿ ಬರೆದುಕೊಂಡಿಹು ದೆಂದು ಕಳುಹಿದಂತೆಯೂ ಪದ್ಮರಸನು ಕಾಶಿಗೆ ಹೋಗುವಾಗ ಪಂಪೆಗೆ ಬಂದು ಈತನನ್ನು ನೋಡಿ—'ಉಮಾವರಂ ನಿಮ್ಮ ನಿಂದಿಗೆಂಟನೆಯ ದಿನಕೆ ತನ್ನೊಳ್ ನೆರಪಲಿರ್ದಪಂ, ಅಂತಜ್ಞಂ ನೀವಿಮಾಗಳೊರೆವ ಮಹಾಕಾವ್ಯಮಂ[1] ಅನಿತ ಜೊಳ್ ಪಾರವೆಯ್ದಿಪುದು' ಎಂದು ಹೇಳಿ ಹೋಪಂತೆಯೂ ತನ್ನ ಸೋದರರಳಿಯ ನಾದ ರಾಘವನು ಗತಿಸಿದ ಎಂಟು ದಿನಕ್ಕೆ ಈತನು ಪಂಪಾವಿರೂಪಾಕ್ಷಲಿಂಗ ದೊಳಗೆ ಅಡಗಿದಂತೆಯೂ ಚೆನ್ನಬಸವಪುರಾಣ ಪದ್ಮರಾಜಪುರಾಣಗಳಿಂದ ತಿಳಿಯಬರುತ್ತದೆ. ಭೈರವೇಶ್ವರಕಾವ್ಯದ ಕಥಾಸೂತ್ರರತ್ನಾಕರದಲ್ಲಿ ಈತನ ವಿಷಯವಾಗಿ ಹೀಗೆ ಬರೆದಿದೆ:—

ಪಂಪಾಕ್ಷೇತ್ರದಲ್ಲಿ ಒಪ್ಪುವ ಹಂಪೆಯ ಶಂಕರಾಚಾರ್ಯರ ಮಗ ಮಾದರಸನು; ಅವನ ಮಗ ಹಂಪೆಯ ಹರೀಶ್ವರನು. ಈತನ ಗುರು ಮಾಯಿದೇವಾಚಾರ್ಯನು. ದೋರಸಮುದ್ರದ ಅರಸು ನೃಸಿಂಹಬಲ್ಲಾಳನು ಪದ್ಮರಸರೆಂಬ ಆರಾಧ್ಯಪುಂಗವರ್ಗೆ ಪ್ರಧಾನಿಪಟ್ಟವಂ ಕಟ್ಟಿ ಪಂಪೆಯ ಹರೀಶ್ವರದೇವರ್ಗೆ ರಹಸ್ಯವ ಬರೆವ ಕರಣಿಕರಿಗೆಲ್ಲಾ ಒರಿಯತನವಂ ಕೊಟ್ಟು ಮಡಗಿಕೊಂಡಿರಲು, ಹರಿಯಣ್ಣಪಂಡಿತನು—ವಿಷ್ಣು ಮೊದಲಾದ ಅನ್ಯದೈವಕ್ಕೆ ಪೊದಮುದ ಲೊಲ್ಲೆನು, ಗುಡಿಯ ಪೂಗಲೊಲ್ಲೆನು—ಎಂದು ನೇಮವಂ ಮಾಡಿಕೊಂಡಿದ್ದನು. ಹರಿಹರೇಶ್ವರನ ಗುಡಿಯಲ್ಲಿ ಬ್ರಹ್ಮರಾಕ್ಷಸನನ್ನು ಓಡಿಸಿದನು. 'ಸರಸ ಮೃದು ಮಧುರೋಪಮೆಗಳಿಂದ ವಸ್ತುಕವರ್ಣಕದಿಂದ ಶಿವನಂ ಶಿವಗಣಂಗಳನು ರಗಳೆಗಳಿಂದ ನುತಿಸಿ ವಚನದ ರಚನೆ ಹೆಚ್ಚುವಂತೆ ಗಿರಿಜೆಯಕಲ್ಯಾಣವಂ ರಚಿಸಿದನು. ರತಕಾಷ್ಠಕಾಕ್ಷರ ಮಾಲಾಗದ್ಯ ಮೊದಲಾದುವಜಂದ ಶಿವನಂ ನುತಿಸಿದನು.

ಈತನಿಗೆ ಹರಿದೇವ, ಹರಿಹರ, ಹರಿಗ, ಹರಿ, ಹರಿಯಣ್ಣಪಂಡಿತ, ಹಂಪೆಯ ಹರೀಶ್ವರ ಎಂಬ ಹೆಸರುಗಳುಂಟು. 'ಪರಮಾನಂದಾಬ್ಧಿ ಪಂಪಾಪುರದರಸ ವಿರೂಪಾಕ್ಷಸಾಕ್ಷಾತ್ಸುಪುತ್ರಂ' ಎಂದು ಹೇಳಿಕೊಂಡಿದ್ದಾನೆ. ಹಂಪೆಯ ವಿರೂ ಪಾಕ್ಷನನ್ನೇ ತನ್ನ ಗ್ರಂಥಗಳಲ್ಲಿ ವಿಶೇಷವಾಗಿ ಕೊಂಡಾಡಿದ್ದಾನೆ.

ಈತನನ್ನು ಪ್ರಾಯಶಃ ಎಲ್ಲಾ ವೀರಶೈವಕವಿಗಳೂ ಸ್ತುತಿಸಿದ್ದಾರೆ. ಅವರಲ್ಲಿ ಇವನೇ ಪ್ರಬಲನಾದ ಪೂರ್ವಕವಿಯೆನ್ನಬಹುದು. ಈತನನ್ನು ಭೀಮಕವಿ (1369) ತನ್ನ ಬಸವಪುರಾಣದಲ್ಲಿ—

1. ಈ ಮಹಾಕಾವ್ಯವು ಗಿರಿಜಾಕಲ್ಯಾಣವೇ ಆಗಿರಬಹುದು.

ಸರಸಮೃದುಮಧುರೋಪಮೆಗಳಂ । ಕುರಿಸೆ ವಸ್ತುಕವರ್ಣಕಂಗಳ ।
ನೆರಪಿ ಹರನಂ ಹರಗಣಂಗಳನ್ಮೆದೆ ಕೀರ್ತಿಸಿದ ।
ಧರೆಗುಭಯಕವಿಶರಭಭೀರುಂ । ಡರಸು ಕವಿ ಹರಿಬುಧವರನು ॥

ಎಂದೂ, **ಪದ್ಮಣಾಂಕನು** (ಸು. 1385) ತನ್ನ **ಪದ್ಮರಾಜಪುರಾಣದಲ್ಲಿ**—

ಚದುರಿಂಪು ಸೊಂಪಲಂಕೃತಿ ಚಮತ್ಕೃತಿ ರೀತಿ ।
ಮೃದುಮಧುರಸರಸೋಪಮಾದ್ಯಖಿಳ ಲಕ್ಷಣಾ ।
ಭ್ಯುದಿತವಸ್ತುಕವರ್ಣಕಂಗಳಿಂ ಶಿವನಂ ಶಿವೈಕ್ಯರಂ ನುತಿಸುತಿರ್ದ ॥
ಶಿವಕವೀಂದ್ರಂ

ಎಂದೂ, **ನೀಲಕಂಠಾಚಾರ್ಯನು** (ಸು. 1485) ತನ್ನ **ಆರಾಧ್ಯಚಾರಿತ್ರದಲ್ಲಿ**–

ಕಂಪಮರ್ದ ಚಂದನದ ಪಂಕದೊಳ್ ಪರಿಮಳಂ ।
ಪೆಂಪುವಡೆದಂತೆ ರಸಭರಿತಪ್ರಬಂಧದೊಳ್ ।
ಸೊಂಪುದೋಜಿಪ ಶಬ್ದಸಂದರ್ಭಮೊಪ್ಪುತಿರೆ ಪೊಸತಪ್ಪ ಯುಕ್ತಿಯಿಂದಂ ॥
ಇಂಪಾಗಿ ಶಿವಗಣಪ್ರಕರಮಂ ಕೊಂಡಾಡಿ ।
ಪಂಪೆಯೊಳು ಪಂಪಾವಿರೂಪಾಕ್ಷನೊಳಗವಿದ ।
ಪಂಪೆಯ ಹರೀಶ್ವರಂ ।

ಎಂದೂ, ಸ್ತುತಿಸಿದ್ದಾರೆ. ಹೀಗೆಯೇ ಇನ್ನೂ ಅನೇಕ ವೀರಶೈವಕವಿಗಳು ಹೊಗಳಿದ್ದಾರೆ.

ಈತನು ಸ್ತುತಿಸುವ ಪೂರ್ವಕವಿಗಳನ್ನು ಹಿಂದೆಯೇ ಹೇಳಿದ್ದೇವೆ.[1]

ತನ್ನ ಕವಿತಾಚಾತುರಿಯನ್ನೂ ಗುಣಗಳನ್ನೂ ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ:—

ಪ್ರಿಯವಚದಂತೆ ಪುಣ್ಯತತಿಯಂತೆ ಸುಧಾಕರನಂತೆ ಕೂರ್ತ ಮು ।
ಗ್ಧೆಯ ಕಡುನೇಹದಂತಮೃತಪಂತೆ ವಸಂತಕನಂತೆ ಪುಷ್ಪಮಾ ॥
ಲೆಯ ಪೊಸಕಂಪಿನಂತೆ ಮಲಯಾನಿಲನಂತೆ ಮರಾಳನಂತೆ ಹಂ ।
ಪೆಯ ಹರಿದೇವನುನ್ನತಕೃತಿಪ್ರಸರಂ ಭುವನೈಕಪೂಜಿತಂ ॥
ಜಾಣಂ ರಸಿಕಂ ಸುಜನ । ಪ್ರಾಣಂ ಕವಿತಾನಿಧಾನನಧಿಕಂ ಪುಣ್ಯ ।
ಕ್ಷೀಣಂ ವರಗಿರಿಜಾಕ । ಲ್ಯಾಣಮನೊರೆದಂ ವಿವೇಕಿ ಹರಿಹರದೇವಂ ॥

ಈ ಪದ್ಯಗಳಲ್ಲಿ ದುಷ್ಕವಿಗಳನ್ನು ದೂಷಿಸಿದ್ದಾನೆ:—

ಒಳಗಱಿಯದೆ ಸತ್ಕಾವ್ಯದ । ಕಳೆಯಱಿಯದೆ ಲಘುತರತ್ವದಿಂ ನಾಲ್ಕೆರಡಾ ।
ಯ್ದುಳಿಮಾತನಾಡಿ ನೆಜಱಿ ಹೆ । ಕ್ಕಳವಿಕ್ಕಿದೊಡೊಲ್ವರೇ ಕವೀಂದ್ರಾಭರಣರ್ ॥

1. ಪುಟ 222.

ಹಜ್ಜಗವಿಗಳ ಕಬ್ಬಂಗಳ । ಹೊಜ್ಜಗಟಿಯಕ್ಕರದ ಹೊಲ್ಗೆಬಿರ್ಚಿದೊಡೆಲ್ಲಂ ।
ಬಜ್ಜ ತಾಜ್ಜಗ ಬೀಜ್ಜಗವೆ । ತ್ತಜ್ಜಿ ತತ್ತಜ್ಜಿವೆಕ್ಕಸಕ್ಕಮಸ್ತವ್ಯಸ್ತಂ ॥[1]
ಪೆಟ್ಟಿವನ ಕಣ್ಗಳಂಧಕನ ಕಾಲ್ಗಳಿವಿಂತೊಡಗೂಡಿ ಗಾವುದಂ ।
ದಳರ್ದೊಡೆ ಬಲ್ಲಿದಂ ನಡೆದ ಮಾಟ್ಕಿಯೆನಿಪ್ಪುದೆ ಬೀಡ ಮಾಣಲೇ ॥
ಅಟ್ಟಿಗವಿ ನಿನ್ನ ತನ್ನೆರವಿನೋದಿನ ಕಬ್ಬಮನೋದದಿರ್ ಸುಧಾ ।
ನಿಳಯದ ಮುಂದೆ ಸತ್ಕೃತಿಯ ಮುಂದೆ ಸುಖಾಬ್ಧಿಯ ಮುಂದದೊರ್ಮೆ
ಯುಂ ॥

ಇವನ ಗ್ರಂಥಗಳಲ್ಲಿ—

## 1. ಗಿರಿಜಾಕಲ್ಯಾಣ.

ಇದರಲ್ಲಿ ಶಿವನಿಗೂ ಪಾರ್ವತಿಗೂ ನಡೆದ ವಿವಾಹವು ವರ್ಣಿಸಿದೆ. ಇದು ಚಂಪೂರೂಪವಾಗಿದೆ; 10 ಆಶ್ವಾಸಗಳಾಗಿ ಭಾಗಿಸಲ್ಪಟ್ಟಿದೆ. ಇದರಲ್ಲಿ ಕಂದ ವೃತ್ತ ಸಹ 1102 ಇವೆ. ಗ್ರಂಥದ ಉತ್ಕೃಷ್ಟತೆಯನ್ನು ಕವಿ ಈ ಪದ್ಯಗಳಲ್ಲಿ ಹೇಳಿದ್ದಾನೆ :—

ಸುರತರುವಿನಂತೆ ಸುಜನರ । ಸತಿಯಂತೆ ಸರೋಜದಂತೆ ಸುಧೆಯಂತೆ ಸುಧಾ ।
ಕರಕೆರಣದಂತೆ ಹಂಪೆಯ । ಹರಿದೇವನ ಕಾವ್ಯಮಖಿಲಸೇವ್ಯಂ ಸವ್ಯಂ ॥
ಓದಿಸೊಡೆ ಕಲ್ಲ ಮಾಲೆಯ । ನಾದಂ ಕರ್ಬುನದ ಕಡಲೆ ವಾದಿಸೆ ರಸಮುಂ ।
ಸೋದಿಸೆಯುರ್ಕೆನಪುಡಿಯೆನಿ । ಪಾದುಷ್ಕವಿತೆಗಳನೆಣಿಸಲೇಕೀ ಕೃತಿಯೊಳ್ ॥
ಕಂದಂಗಳಮೃತಲತಿಕಾ । ಕಂದಂಗಳನೂನವಾಕ್ಯಫಲವಿಲಸನ್ಮಾ ।
ಕಂದಂಗಳ್ ತನಿರಸದು । ಕ್ಕಂದಂಗಳ್ ಸೊಗಯಿಸಿರ್ಪುವೀನುತಕೃತಿಯೊಳಾಂ ॥

ಗ್ರಂಥಾವತಾರದಲ್ಲಿ ಕವಿ ಪಂಪಾವಿರೂಪಾಕ್ಷನನ್ನು ಸ್ತುತಿಸಿದ್ದಾನೆ. ಬಳಿಕ ಪಾರ್ವತಿ, ಗಣೇಶ, ಷಣ್ಮುಖ, ಶಿವಭಕ್ತರು, ಸರಸ್ವತಿ ಇವರುಗಳನ್ನು ಕ್ರಮವಾಗಿ ನುತಿಸಿ ಕಥೆಯನ್ನು ಆರಂಭಿಸಿದ್ದಾನೆ.

ಆಶ್ವಾಸಗಳ ಕೊನೆಯಲ್ಲಿ ಈ ಗದ್ಯವಿದೆ :—

ಇದು ಸಮಸ್ತಸುರಾಸುರನಿಕರಮಕುಟಖಚಿತ ದಿನಕರಕರಾಧಿಕ್ಯಮಾಣಿಕ್ಯಪ್ರಭಾ ಪುಂಜರಂಜಿತಸಂಪಚ್ಚರಣನೆನಿಪ ಪಂಪಾವಿರೂಪಾಕ್ಷ ಶ್ರೀಪಾದಕಮಲಮಕರಂದಮಧುಕರಾಯಮಾನ ಸತ್ಕವೀಶ್ವರ ಹಂಪೆಯ ಹರಿಹರದೇವವಿರಚಿತಮಪ್ಪ ಶ್ರೀಗಿರಿಜಾಕಲ್ಯಾಣ ಮಹಾಪ್ರಬಂಧದೊಳ್.

---

1. ಈ ಪದ್ಯವು ನಾಗವರ್ಮನ ಛಂದೋಂಬುಧಿಯಲ್ಲಿಯೂ ದೊರೆಯುತ್ತದೆ.

ಈತನು ಪ್ರಾಸವಿಷಯದಲ್ಲಿ ಜಿಬಿಕುಳಕ್ಷ್ಳಳವಿಚಾರವು ಆವಶ್ಯಕವಿಲ್ಲವೆಂಬಭಿಪ್ರಾಯವನ್ನು—

ನೋಡುವೊಡೊಂದಕ್ಕರಮದು । ಮಾಡುವೊಡುಚ್ಚರಣೆಗರಿದು ಮೂಜುಂತೆಜನಂ ।
ಕೂಡೆ ಕವಿತತಿ ವಿಚಾರಿಸ । ಬೇಡದಜುಂ ಜಿಬ್ರಿಕುಳಕ್ಷ್ಳಳಂಗಳನಿದಜೊಳ್ ॥

ಎಂಬ ಪದ್ಯದಲ್ಲಿ ಹೇಳಿದ್ದಾನೆ. ಇದರಿಂದ ಹರೀಶ್ವರನ ಕಾಲದಲ್ಲಿಯೇ ಜಿಬಿಕುಳಕ್ಷ್ಳಳಗಳ ಪ್ರಾಸವಿಷಯದಲ್ಲಿ ಅವ್ಯವಸ್ಥೆ ಉಂಟಾದಂತೆ ತೋರುತ್ತದೆ. ಈ ಅವ್ಯವಸ್ಥೆಯನ್ನು ನಿವಾರಣೆ ಮಾಡುವುದಕ್ಕಾಗಿಯೇ **ಕೇಶಿರಾಜನು** (ಸು. 1260) ಶಬ್ದಮಣಿದರ್ಪಣದಲ್ಲಿ ಜಿಬಿಕುಳಕ್ಷ್ಳಳಗಳ ವಿಷಯವಾಗಿ ಬಹಳ ವಿಚಾರ ಮಾಡಿ ಇವುಗಳ ಪ್ರಾಸನಿಯಮವನ್ನು ವಿಧಿಸಿದ್ದಾನೆ. ಕೇಶಿರಾಜನಿಗೆ ಹಿಂದೆ ಇದ್ದ ಜೈನಕವಿಗಳು ಪ್ರಾಯಿಕವಾಗಿ ಜಿಬಿಕುಳಕ್ಷ್ಳಳಭೇದಸೂಚಕವಾದ ನಿಯಮಗಳನ್ನು ಅನುಸರಿಸಿಯೇ ಗ್ರಂಥಗಳನ್ನು ಬರೆದಿದ್ದಾರೆ. ಈ ನಿಯಮಗಳು ಆವಶ್ಯಕವಿಲ್ಲವೆಂದು ಕಂಠೋಕ್ತವಾಗಿ ಹೇಳಿರುವ ಕವಿಗಳಲ್ಲಿ ಹರೀಶ್ವರನೇ ಮೊದಲನೆಯವನು.

ಈತನ ಬಂಧವು ಜೈನಶೈಲಿಯನ್ನು ಅನುಸರಿಸಿ ಲಲಿತವಾಗಿಯೂ ಮೃದುಮಧುರಗಂಭೀರವಾಗಿಯೂ ಇದೆ.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ :—

ಚಂದ್ರ.

ಕರಮೆಸೆದತ್ತು ಕೌಮುದಿಯ ಬಿತ್ತು ಚಕೋರಿಯ ತುತ್ತು ನೀರಜೋ ।
ತ್ಕರದ ವಿಪತ್ತು ತಾರೆಗಳ ತೊತ್ತು ಸುಧಾಂಬುಧಿಯೊತ್ತು ಮತ್ತಮಂ ॥
ಬರದ ಪುಳಿಂದಿ ತಾಳ್ದಿಸವ ಮೂಗಿನ ಮುತ್ತು ಮಗುಟ್ಟಿದ್ದ ನೋಡಲ ।
ಚ್ಚರಿಯೆವಿಸಿತ್ತು ಮೂಡದೆಸೆಯಿಂದೊಗೆತರ್ಪ ಪೊಮಾಂಶುಮಂದಳಂ ॥500 ॥

ವರ್ಷಾಕಾಲ.

ತರದಿಂ ತಿಳಿ ಚಾದಗೆ ಮಧು । ಕರಮಂಚಿ ಪಯೋಧರಂಗಳನುನಯದಿಂದಂ ।
ಕರೆದುವು ನೆರೆದುವು ಮೊರೆದುವು । ಪರೆದುವು ತೊರೆದುವು ನಿರಂತರಂ ಕಾರ್ಮೊಗ
ದೊಳ್ ॥501 ॥

ಗ್ರೀಷ್ಮ.

ಎಲೆ ಎಲೆ ನೋಡು ನೋಡು ಕೆಲನುಂ ಬಲನುಂ ನೆಲನುಂ ದವಾಗ್ನಿ ಸು ।
ಟ್ಟೊಲೆಯವೊಲಾಗೆ ಮೆಟ್ಟಿದಡಿಯೆತ್ತಿದ ಕಾಲುಜಿ ನೀಯೆ ನಿಂದಿರಲ್ ॥

ಚಲಿಯಿಸಲಾಜಿದಾತಪದೆ ಹಸ್ತಮನೆತ್ತಿ ಬಲ್ಬಿಲ್ದು ಘೀಳಿಡು ।
ತ್ತೊಲೆದುದು ಚೀಸ್ಟೆಗುಂದಿದುದು ಜೋಲ್ದುದು ಬಿಲ್ದುದು ಬೆಂದುದೊಂದಿ ಭಂ
॥ 502 ॥

## ಸೂರ್ಯಕಿರಣ.

ಇಳೆಯ ಮುಸುಂಕಂ ಮೆಲ್ಲನೆ । ಕಳೆಯುತ್ತೆಬ್ಬಿಜಿಸುತುಂ ರಥಾಂಗಮನಬ್ಜಂ ।
ಗಳನೆವೆದೆಜಿಯಿಸುತುಂ ದೆಸೆ । ಗಳನೆಲ್ಬಿಸುತೆಲ್ದುವಾಗಳಿನನ ಕರಂಗಳ್ ॥503 ॥

## ಗಿಳಿ.

ಬಿಗಿಯುಪ್ಪಿ ಮೊಗಮನಿಟ್ಟಾ । ಲಿಗಳಂ ನಸುಮುಚ್ಚಿ ಪಕ್ಷಯುಗಮೆಬ್ಬಿಲೆ ರಸಂ ।
ವೆಗೆವ ದನಿ ನಿಮಿರೆ ನಾಲಗೆ । ಚಿಗುರುತ್ತಿರೆ ಸವಿದುದೊಂದು ಗಿಳಿ ತನಿವಣ್ಣಂ ॥504 ॥

## ಪಾರಿವ.

ನಲಿದು ಕೊರಲೆತ್ತಿಕುಕಿಲಿಜಿ । ದುಲಿದುಜಿಸುಬ್ಬಿದೆಳಸಿ ಬಳಸಿಬಬ್ಬಿಸಂದು ಪಳಂ ।
ಚಲೆದೊಲೆದು ಪಕ್ಕಮಂ ಬಿ । ರ್ಚಿ ಲಲ್ಲಿಗೆಯ್ದುತ್ತು ಪಾರಿವಂ ಪಾರಿವದೊಳ್
॥ 505 ॥

## ಚಾತಕ.

ನೆಗೆದುದು ಸಾರ್ದು ಪೊರ್ದಿತಮರ್ದತ್ತು ತುಳುಂಕಿತು ಜೆಂಗ ನೀರಧಾ ।
ರೆಗಳುಜಿ ನಾಂಟಲೀಂಟಿದುದು ನೇಹದೆ ನೋಡಿತುದಂಚಚಂಚುವಿಂ ॥
ದುಗಿದುದು ಪಕ್ಕದಿಂ ಪೊಡೆದುದಂಘ್ರಿಗಳಿಂದೊದೆದತ್ತು ನೆತ್ತಿಯಂ ।
ನೆಗಪಿದುದಪ್ಪಿತಳ್ಳಿಜಿದುದಂಬುಕಣಂಗಳನೊಂದು ಚಾತಕಂ ॥ 506 ॥

## ಕಪಿ.

ಪಜಿಣಿದಲೆಯಿಟ್ಟು ಪಲ್ಗರಿದು ಹರ್ರನುತುರ್ಬುತೆ ಪುರ್ಬನೇಜಿಸು ।
ತ್ತುಲ್ಲುಗಿಸಿ ನೋಡಿ ದಾಂಟಲನುಗೆಯ್ಯುತೆ ತೂಗುತೆ ಝುಂಕಿಸುತ್ತೆ ಬಾ ॥
ಯ್ವೆಜಿದೊಲೆಯುತ್ತೆ ಕೆಯ್ಮಗಪಿ ಜಾಗಿಸಿ ಕುರ್ಗುತುಮೇಡಿಸುತ್ತೆ ತಾಂ ।
ನೆಜಿ ನಗಿಸಿತ್ತು ತಾಪಸಕುಮಾರರನಲ್ಲಿಯದೊಂದು ಮರ್ಕಟಂ ॥ 507 ॥

## ಜಿಂಕೆ.

ತಿರುಗುವ ತನು ಬೆಚ್ಚುವ ಕಣ್ । ಪರಿವ ಮನಂ ನಟ್ಟ ಕಿವಿಯಡಂಗುವ ಸು
ಯ್ಲಿಂ ।
ಸರಳಂ ವಿಾಜಿತೆ ಹರಿಣಂ । ಸರಳಿಸಿತಯ್ವಾಜಿನೇಬ್ಲಿನೆಂಟೊಂಬತ್ತಂ ॥ 508 ॥

## ಪಾರ್ವತಿ.

ಬರೆದರೊ ಬಯ್ತುರೊ ಪೊಲ್ಲರೊ । ಪೊರೆದರೊ ಬೆಚ್ಚನೊ ಮರಳ್ಚಿಕರುವಿಟ್ಟರೊ ಕಂ ।
ಡರಿಸಿದರೊ ಕಡೆದರೋ ಎನೆ । ಗಿರಿರಾಜತನೂಜೆ ಪೂಜೆಯೊಳ್ ರಾಜಿಸುವಳ್ ॥ 509 ॥

## ಶಬರಿ.

ಎಣ್ಣೆಯೊಳರನೇಜು'ಲ ತನಿ। ವಣ್ಣಂ ನುಣ್ಣಿಸಿದನಬ್ಜಭವನೆನಿಸುವ ಮೆ ।
ಯ್ಯುಣ್ಣದ ಶಬರಿ ತಮಾಲದ। ತಣ್ಣೆಲ್ಬಿಲೊಳ್ ಕಣ್ಣುಬೆಳಗೆ ಬೆಳಗಾಗಿರ್ದಳ್ ॥ 510 ॥

## ಶಾಲಿ.

ಸೊಂಪಾಗುತ್ತಂಕುರಿಸು । ತ್ತುಂ ಪಸುರೇಜುತ್ತೆ ಕವಲೆಲ್ಲಿ'ದು ಪೊಡೆಯೊತ್ತು ।
ಕ್ತುಂ ಪಾಲೇಜುತ್ತುಂನೆಜೆ। ದಿಂಪಿಂ ನಳನಳಿಸಿ ಶಾಲಿವನಮೆಸೆದಿರ್ಕುಂ ॥ 511 ॥

## ಮಾವು.

ಅರಳೆಲೆ ಮೇಲಾಡುತ್ತಿರೆ। ಭರದಿಂ ಮಾಂಗಾಯ್ಗಳೊಲೆಯೆ ಕೆಲಬಲದೊಳ್ ನಿಂ ।
ದರಗಿಳಿಯು ತೊದಳ್ನುಡಿ ಬಿ। ತ್ತರಿಸೆ ವಸಂತನ ಕುಮಾರನೆನಿಸಿತ್ತಾಮ್ರಂ ॥ 512 ॥

## ದೇಶ.

ಬಳಸಿದುವೊಪ್ಪಿದುವು ಜಿನುಗಿ। ಗಲ್ಬಿಪಿ ಕುಳಿಕೊರ್ಗೀಡಿ ಕತ್ತಲಿಸಿ ಮಲೆದುದ್ದಂ ।
ದಳೆದು ಫಲಮಾಗಿ ಸರಿವಡೆ। ದಳ ಗಿಳಿ ಮಡು ಗಿಡು ಕರಿ ಗಿರಿ ಚೂತಂ ಗೀತಂ
॥ 513 ॥

## ಫಾಲನೇತ್ರಾಗ್ನಿ.

ಪೊಗೆದುದು ಪೊತ್ತದತ್ತು ಕಡಿಯಿಟ್ಟುದು ನಾಲ್ಪೆಸೆದೋಜೆ'ದತ್ತು ಬಾ ।
ನ್ಗೊಗೆದುದು ನಿಂದು ಪೊಂಬಿಳಗುಮಂ ಪರೆವುತ್ತದು ದಂಧಗಿಲ್ಲಗಿ ॥
ಲ್ಧಗಿಲೆನುತಟ್ಟಿತಟ್ಟಿದುದು ಮುಟ್ಟಿತು ಮುಟ್ಟಿತು ತಿಂದು ತೇಗಿದ।
ತ್ತಗಿಯದೆ ನಿಂದ ಪೂಗಣೆಯನಂ ಪಣೆಗಣ್ಣುರಿ ಪಂಪೆಯಾಳ್ವನಾ ॥ 514 ॥

## ವಿರಹ.

ವಿರಹದೊಳೀಕೆಗಕ್ಕ ಬಿಸಜಂ ವಿಷಜಂ ಹಿಮರೋಚಿ ಸೂಚಿ ಪಾ ।
ದರಿ ದರಿ ಮಾವು ಪಾವು ಕುಮುದಂ ಕುಮುದಂ ತನಿಗರ್ಬು ಮರ್ಬು ಕ ॥
ತ್ತುರಿಯುರಿಗಾಳಿ ದಾಬ್ಜಿ ಕುಸುಮಂ ವಿಷಮಂ ಪೊಸ ಬಾಬ್ಜಿಕೆ ಬಾಳ್ ವನೋ ।
ತ್ಕರಿ ಪುರಿ ಹಂಸೆ ಹಿಂಸೆ ಮೊರೆಪಾಜಿಡಿಯಾರಡಿ ತಿಂಗಳಿಂಗಳಂ ॥ 515 ॥

## ಶಬರನ ಪ್ರಲಾಪ.

ಪಾಸಿನಮೇಲೆ ಪಟ್ಟುರಿಸಿ ಪಾಲಿಜೆ'ದೆನ್ನೊಡಗೂಡಿ ಬಾಲಕಾ ।
ಭ್ಯಾಸದಿನೆತ್ತಿ ಸತ್ತಿಗೆಯ ತಣ್ಣೆಲ್ಬಿಲೊಳ್ ಬಳವಂತೆ ಮಾಡಿಯು ॥
ಚ್ಚಾಸನದಲ್ಲಿ ತಂದಿರಿಸಿಯೋವಿದ ಕುನ್ನಿಯನೀವರಾಹನೀ ।
ಪಾಸಿಗನೀಕಠೋರಮನನೆನ್ನಯ ಮುಂದೆ ಸಮಂತು ಕೊಲ್ವುದೇ ॥ 516 ॥

## 2. ಪಂಪಾಶತಕ.

ಇದು ಪಂಪಾವಿರೂಪಾಕ್ಷಸ್ತುತಿರೂಪವಾಗಿದೆ; ಇದರಲ್ಲಿ ನೂರು ವೃತ್ತಗಳಿವೆ. ಈ ಶತಕದ ಉತ್ಕೃಷ್ಟತೆಯನ್ನು ಕವಿ

ಜಯ ಜಯ ಪುಣ್ಯಮಾರ್ಗಮಿದು ಸಾತ್ಕಿಕಲಕ್ಷಣಮಿಂತಿದಾದ್ಯರ।
ನ್ವಯಮಿದನೂನಭಕ್ತಿರಸಪೂರಮಿದುತ್ತಮಶೀಲಭಕ್ತರಾ ॥
ಶ್ರಯಮಿದು ತಪ್ಪದೆಂದು ಶರಣರ್ ಮಿಗೆ ಬಣ್ಣಿಸಿ ಪೇಳ್ದಿನಾಹ ಹಂ।
ಪೆಯ ಹರಿದೇವನೀಶತಕಮಂ ಸಕಲೇಷ್ಟಫಲಪ್ರದಾತೃವಂ ॥

ಎಂಬ ಕೊನೆಯ ಪದ್ಯದಲ್ಲಿ ಹೇಳಿದ್ದಾನೆ. ಇದರಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

ತರೆ ಮುಸಗಲ್ ಸುಖಾಪ್ತವಿದಿರೇಱುತಿರಲ್. ಪುಳಕಂ ಬೆಮರ್ ಕರಂ।
ಪರಿಯಿಡೆ ಗದ್ಗದಂ ಸುಲ್ಲಿಗೊಳುತ್ತಿರೆ ಕಂಪನಮುರ್ಕಿ ಲೀಲೆಯೊ ॥
ತ್ತರಿಸುತಿರಲ್ ನುದೀಶನಿಜಭಕ್ತೆತರಂಗಿಣಿ ವಾಜುತುಬ್ಬರಂ।
ಬರಿಯುತುಮೆನ್ನಮೇಲೆ ಮಡುಗಟ್ಟುವುದೆಂದೆಲೆ ಪಂಪೆಯಾಳ್ವನೇ ॥517॥

ಸತಿಪುತ್ರರ್ ನಿತ್ರರಾಪ್ತರ್ ತನುಧನಮನಮೆಂಬಿಂತವಂ ನಿತ್ಯಮೆಂದು।
ಚ್ಚತರವ್ಯಾಸಂಗದಿಂ ಮಯ್ಯುಱ್ಱಿಯಪೆ ಮರುಳಾಗಿರ್ದೆನೆನ್ನಂ ದುರಾಶಾ ॥
ವೃತನಂ ದುರ್ಮೋಹಿಯಂ ದುಸ್ತರತರವಿಷಯವ್ಯಾಪ್ತನಂ ದುರ್ಧರೈನೋ।
ಯತನಂ ದುರ್ಬೋಧನಂ ರಕ್ಷಿಪುದೆಲೆ ಕೃಪೆಯಿಂದಂ ವಿರೂಪಾಕ್ಷಲಿಂಗಾ ॥518॥

ಹರಣಂಗಳ್ ಕಳೆಯುಱ್ಱಿ ಲೋಚನಯುಗಂ ನೀರೇಱಿ ಮೆಯ್ಯುಲ್ಲಮುಂ।
ಕುರಮೇಱಲ್ ನುಡಿ ಕಂಪಮೇಱಿ ಕರಣಂಗಳ್ ಲೀಲೆಯೇಱಲ್ ಮೊಗಂ ॥
ಸಿರಿಯೇಱಲ್ ತಲೆಗೇಱಿದುತ್ಸವದೆ ನಿನ್ನಂ ಪೂಜಿಸುತ್ತಾನುಮಾ।
ದರದಿಂದೀಕ್ಷಿಸುತಾಡುತಿರ್ಪುದೆನಗಿನ್ನೆಂದೋ ವಿರೂಪಾಕ್ಷನೇ ॥519॥

ಪೋಗೆನೆ ಪೋಪ ಬಾರೆಲವೊ ಬಾರೆನೆ ಜೀಯ ಹಸಾದಮೆಂದು ಬಿ।
ಳ್ಕಾಗುತೆ ಬರ್ಪ ಮಾಣಿಲವೊ ಸುಮ್ಮನಿರೆಂದೊಡೆ ಸುಮ್ಮನಿರ್ಪ ಮ॥
ತ್ತಗಳೆ ಬಗ್ಗಿಸಲ್ ನಡುಗಿ ಬೀಟುವ ಸೇವಿಸಪ ಕಷ್ಟವೃತ್ತಿಯಂ।
ನೀಗಿದೆನಿಂದು ನಿಮ್ಮ ದಯೆಯಿಂ ಕರುಣಾಕರ ಹಂಪೆಯಾಳ್ವನೇ ॥520॥

ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆ ಪದ್ಮಮಂ।
ತನತನಗಿಂದ್ರಚಂದ್ರರವಿಕರ್ಣದಧೀಚಿಬಲೀಂದ್ರನೆಂದು ತಾ ॥
ನನವರತಂ ವೊಗಳ್ದಿ ಕೆಡಬೇಡೆಲೆ ಮಾನವ ನೀನಹರ್ನಿಶಂ।
ನೆನೆವೊಗಳ್ಚಿರ್ಚಿಸೆಮ್ಮ ಕಡುಸೊಂಪಿನ ಪಂಪಿನ ಪಂಪೆಯಾಳ್ವನಂ ॥521॥

ಮನೆ ನೆಲ್ಲಿಲಾಗೆ ಪೆಂಡಿರಿಸಿದಾಗೆ ಸುತರ್ ಪಿರಿದಾಗೆಯರ್ಥದಾ।
ರ್ಜನೆ ಘನಮಾಗೆ ಯೌವನಮುದಾಗೆ ಬಲ್ಮಿಕ್ಕ ದನೇನನೆಂದಪೆಂ॥
ತನತನಗುರ್ಬುತಂಕುರಿಸುತುಂ ನೆಱೆ ಪಲ್ಲವಿಸುತ್ತೆ ಪರ್ವುತುಂ।
ನನೆಕೊನೆವೋಗಿ ಮಾಯೆ ಕೊಱಚಾಡದೆ ಮಾಣ್ಬಳೆ ಸಂಪೆಯಾಳ್ವನೇ ॥522॥

## 3. ಶಿವಗಣದ ರಗಳೆಗಳು.

ಈ ಗ್ರಂಥವು ಪ್ರಾಯಿಕವಾಗಿ ರಘಟಾರೂಪವಾಗಿದೆ; ಅಲ್ಲಲ್ಲಿ ಗದ್ಯಕಂದ ವೃತ್ತಗಳೂ ದೊರೆಯುತ್ತವೆ. ಇದರಲ್ಲಿಯ ರಗಳೆಗಳ ಸಂಖ್ಯೆ ಇಷ್ಟೇ ಎಂದು ನಿರ್ಧರಿಸಲಾಗುವುದಿಲ್ಲ; ಕೆಲವರು ನೂರೊಂದು ರಗಳೆಗಳೆಂದೂ ಕೆಲವರು ನೂರಿಪ್ಪತ್ತು ರಗಳೆಗಳೆಂದೂ ಹೇಳುತ್ತಾರೆ. ನಮಗೆ ಸಂಪೂರ್ಣವಾದ ಪ್ರತಿ ದೊರೆತಿಲ್ಲ. ಈ ಗ್ರಂಥದಲ್ಲಿ—ತಮಿಳುಭಾಷೆಯಲ್ಲಿ ಬರೆದಿರುವ ಪೆರಿಯಪುರಾಣವೆಂಬ ಗ್ರಂಥದಲ್ಲಿ ನಿರ್ಣಿತರಾದ ಅರವತ್ತುಮೂವರೆಂಬ ಶಿವಭಕ್ತರಮೇಲೆಯೂ ಇತರ ಶಿವಭಕ್ತರ ಮೇಲೆಯೂ ರಗಳೆಗಳು ದೊರೆಯುತ್ತವೆ. ಒಂದು ಪ್ರತಿಯ ಅಂತ್ಯದಲ್ಲಿ ಈ ಪದ್ಯವಿದೆ:—

ಹಂಪೆಯ ಶಂಕರದೇವರ। ಹಂಪೆಯ ಗುರು ಮಾದಿರಾಜದೇವರ ಮತ್ತಂ।
ಹಂಪೆಯ ಮಾದರಸರ ದಯೆ। ಯಿಂ ಪೊಗಟ್ಟಿಂ ರಸಿಕಚಕ್ರ ಪರಿಹರದೇವಂ॥

**ಹರೀಶ್ವರನು** ಈ ಗ್ರಂಥವನ್ನು ರಘಟಾರೂಪವಾಗಿ ಬರೆದುದರಿಂದ ಜನರು 'ರಗಳೆಯ ಕವಿ' ಎಂದು ಈತನನ್ನು ಪರಿಹಾಸಮಾಡಿದಂತೆಯೂ ಈ ಅಪವಾದವನ್ನು ನೀಗುವುದಕ್ಕಾಗಿ ಈತನು ಗಿರಿಜಾಕಲ್ಯಾಣವೆಂಬ ಮಹಾಕಾವ್ಯವನ್ನು ಬರೆದು ತನ್ನ ಪ್ರೌಢಿಮೆಯನ್ನು ತೋರಿಸಿದಂತೆಯೂ ಪ್ರತೀತಿಯಿದೆ. [1]

ಈ ಗ್ರಂಥದಿಂದ ಸ್ವಲ್ಪಭಾಗವನ್ನು ಉದ್ಧರಿಸಿ ಬರೆಯುತ್ತೇವೆ:—

### ಕಾಶ್ಮೀರವರ್ಣನೆ (ರಗಳೆ)

ಶ್ರೀವಸುಮತೀವದನಮುಕುರಮೆಂದೆನಿಸರ್ಪ। ಪಾವನಂ ಸಕಲದೇಶಕ್ಕೆ ತಾನೆನಿಸಿರ್ಪ।
ಶಾರದಾದೇವಿ ಪ್ರಸನ್ನೆಯಾಗಿರುತಿರ್ಪ। ಚಾರುತರನೂತನಕಳಾವಿದರುವಿರುತಿರ್ಪ।
ಊರೂರ್ಗೆ ತೀವಿದ ತಟಾಕನಿಕರಂಗಳಿಂ। ಊರೂರ್ಗೆ ಕೆಕ್ಕೆಱ್ದು ಕೊರ್ವಿದ ವನಂಗಳಿಂ।
ನನೊಳಗೆ ಸುಟ್ಟಿವ ಕಸ್ತೂರಿಯ ಮೃಗಂಗಳಿಂ। ವಿನಯನಿಂದೆಯ್ದುರ್ಪ ಚಮರೀಮೃಗಂಗಳಿಂ।
ನಗರಿನಗರಿಯೊಳಿಸೆವ ದೇವಾಲಯಂಗಳಿಂ। ಮುಗಿಲನಳ್ಳಿಜವ ಘನಮಾಟಕೂಟಂಗಳಿಂ।
ದಸೆವ ಕಾಶ್ಮೀರದೇಶಂ ರಂಜಿಸುವುದಿಳೆಗೆ। ಪೊಸಪೊಸ ಬನಂ ಪಟ್ಟಣಂಗಳಿಂದುರ್ವರೆಗೆ।

1. ಸಿದ್ಧನಂಜೇಶನ (ಸು 1650) ಶಾಲಿವಾಂಕಚಾರಿತ್ರದ 14 ನೆಯ ಸಂಧಿಯಲ್ಲಿಯೂ ಈ ವಿಷಯವು ಸೂಚಿತವಾಗಿದೆ.

ಬಂಧನಂ ಪೂಮಾಲೆಯೊಳಗಲ್ಲದಲ್ಲಿಲ್ಲ । ಅಂಧತ್ವಮಾಕಲ್ಪಿತೆಯೊಳಲ್ಲದಲ್ಲಿಲ್ಲ ।
ಕೊಯ್ವ ನುಡಿ ಕೆಯ್ಗಳೊಳ್ ಮಾನಿನಿಯರಳಕದೊಳ್ । ಬಯ್ವ ನುಡಿ ಗಿಳಿಗಳೊಳ್
ನಲ್ಲರೊಳ್ಜಗಳದೊಳ್ ।
ಬಡತನಂ ಲತೆಗಳೊಳ್ ಲಲನೆಯರ ನಡುವಿನೊಳ್ । ಕಿಡಿಸುವುದು ವಂಶಮುಂ ಮೇದ
ರೊಳ್ ವೃಷಭನೊಳ್ ।
ಅವನಿಗತಿಕಂಟಕಂ ಕೇತಕೇವ್ಯಂದದೊಳ್ । ಭುವನಕಂಟಕಮೆಂಬುದಂಬುಜದ ನಾಳ
ದೊಳ್ ।
ಇಂತಿವಜ್ಞೊಳಲ್ಲದಿಲ್ಲಾನಾಡೊಳೆಲ್ಲಿಯುಂ । ಸಂತತಂ ಸುಖಮಯಂ ದೇಶದೊಳ
ಗೆಲ್ಲಿಯುಂ ॥ 523 ॥

## ನಂಬಿಯಣ್ಣನ ಬಾಲ್ಯ (ಗದ್ಯ).

ಇಂತು ನಂಬಿಯಣ್ಣಂ ಶಿಶುವೇಷದೊಳ್ ನಳನಳಿಸಿ ತೊಳತೊಳಗಿ ಕಂಡವರ ಕಣ್ಣ ಮಣಿ ಎತ್ತಿದರ ಹಸ್ತದಮೃತಫಲಂ ಮುಟ್ಟಿದರ ಮೆಯ್ಯ ಪುಳಕಂ ಅಪ್ಪಿದರೊಪ್ಪಂ ಸಾಗಿಪರ್ ಸೋಗಿಲ ಧನಂ ಕೆಯ್ಕೊಳ್ವವರ ಕಡವರಂ ಎನಿಸಿ, ಪರವೆನಾಚಿ ಸಂಕೆಲೆನಾಚಿಯರನಪ್ಪುವ ತೋಳಿವೆಂಬಂ ತೋಳಾಡಿಸುತ್ತುಂ, ಮುಂದೆ ಶಿವನೊಡನಾಡುವ ಹುಸಿಜಗಳಮೆಂಬುದಂ ಸೂಚಿಸುವಂತೆ ತೊದಳ್ನುಡಿಯಂ ನುಡಿಯುತ್ತುಂ, ದೇವನಂ ತನಗೆ ಕುಂಟಣಿಯಂ ಮಾಡಿ ನಡೆಯಿಸುವುದೀಪರಿಯೆಂದು ತೋರ್ಪಂತೆ ಮೆಲ್ಲಮೆಲ್ಲನೆ ದಟ್ಟಡಿಯಿಡುತ್ತುಂ, ಪುಟ್ಟಿಸಿದರ್ ತಾಮೆಂದು ಬಗೆದು ಮುದ್ದಾಡಿಸುವ ತಾಯ್ತಂದೆಗಳ ಮೊಗಮಂ ನೋಡಿ ನಗುವಂತೆ ಮುಗುಳ್ನಗೆನಗುತ್ತುಂ, ದೇವಾ ! ಸಂಸಾರಂಬುಗದ ಮುನ್ನಂ ಬೇಗಮೆಂದು ಬಂದು ಎನ್ನಂ ತೋಟ್ಟಿಗೊಂಬೆಯೆಂದುಮ್ಮಳಿಕೆಯಿಂದೊರ್ಮೊರ್ಮೆ ಬೆರ್ಚಿ ಬೆರ್ಚಿಯಟ್ಟಿಸುತುಂ. ಈತೆಱದೊಳ್ ಬಂದೆರಡುನಾಲ್ಕಯ್ದು ವತ್ಸರಂ ಬರಂ ನೆಱೆದುವು.

ಕರ್ಪಿನ ಕಾಂತಿಯಿಂ ಕುರುಳ್ಗೊಂಡು ದಟ್ಟೈಸಿ ಕವಲಿಜ್ಜದ ಕುಂತಳಂ ಗಂಗಾಧರನೊಳ್ ಪುರುಡಿಸಿ ತೆರೆಮುಸಗಿದ ಕಾಳಿಂದೀನದಿಯಂ ಶಿರೋಗ್ರದೊಳ್ ಧರಿಸಿದಂತಿರ್ದಪುದು. ಭಾಳಸ್ಥಳದೊಳ್ ಭರಿತಮಾಗಿ ಬೆಳಗುವ ಭಸಿತವಳಯಂ ಮೃಡಂ ಮುಡಿಯಲ್ಲಿ ಧರಿಸಿದೊಡೆ ತಾಂ ಸಸಿಕಳೆಯಂ ನೊಸಲೊಳಿಟ್ಟಂತಿರ್ದಪುದು. ಕರ್ಣದೊಳ್ ಕೆಯ್ಗೊಳಿಸಿ ಮೊತ್ತದೊಳೆಱ್ದು ಬಿತ್ತರಿಸುವ ಉತ್ತಮದ ಮುತ್ತಿನ ಕಡುಕುಗಳ್ ಮುಂದೆ ನೀಂ ಭೋಗಿಸುವ ಸಕಲಸೌಭಾಗ್ಯಕ್ಕೆ ಬೀಜಭೂಮಿಯಾಗಿರಲ್ಕೆ ಚಂದ್ರಧರನೆಮ್ಮಂ ಕಱಿಪಿದನೆಂದೇಕಾಂತಂಬೇಱ್ದಿ ಪುಣ್ಯದುರುಳಿಗಳಂತಿರ್ದಪುವು. ಮೃದುಪದತಳಂಗಳ್ ಲಾವಣ್ಯಕ್ಕೆ ನಗೆ ತನಗೆನುತ್ತೆ ನಟ್ಟುನೋಡುವ ನಾಯಕೆಯರ ದಿಟ್ಟಿಗಳಿಂ ಚರಣತಳಂ ಕಣ್ಪೆತ್ತಂತಿರ್ದಪುದು. ಏಱುವ ಜವ್ವನಂ ಶಿವಪೂಜೆಗೆಂದರಳಲಿರ್ದ ಪರಿಮಳದ ಮೊಗ್ಗೆಯಂತಿರ್ದಪುದು. ಇಂತೀಕುಮಾರಂ ಮರ್ತ್ಯನಲ್ಲ, ಏನಾನುಮೊಂದು ಕಾರಣದಿಂ ಬಂದ ಗಣೇಶ್ವರನಾಗವೇಱ್ಕುಂ ॥ 524 ॥

## 4. ಮುಡಿಗೆಯ ಅಷ್ಟಕ.

**ಹರೀಶ್ವರನು** ಒಂದಾನೊಂದು ಕಾಲದಲ್ಲಿ ತಲೆಬಾಗಿ ಈಶ್ವರದರ್ಶನ ಮಾಡುತ್ತಿರುವಾಗ ಅವನ "ಮಂಡೆಯೊಳ್ ತಳೆದ ರುದ್ರಾಕ್ಷವಿತತಿಪ್ರಸುಮದ ಟೊಪ್ಪಿಗೆ" ಕೆಳಕ್ಕೆ ಬೀಳಲು ಬ್ರಾಹ್ಮಣರು ಹಸಿತಮುಖರಾಗಿ "ಹರಿಯರಸನು ಮುಡಿಗೆಯನೇತಕೆಕ್ಕಿದನೋ" ಎನ್ನಲು, ಹರೀಶ್ವರನು ಅದನ್ನೇ ಮುಡಿಗೆಮಾಡಿ ಶಿವಸ್ತುತಿರೂಪವಾದ ಈ ಅಷ್ಟಕವನ್ನು ಹೇಳಿದಾಗ ಅದನ್ನು ಯಾರೂ ತೆಗೆಯಲಾರದೆ ಹೋಗಲು ಚಂಡೇಶನು ಆ ಟೊಪ್ಪಿಗೆಯನ್ನು ತೆಗೆದು ಹರೀಶ್ವರನ ತಲೆಯ ಮೇಲಿಟ್ಟು ಅಂತರ್ಧಾನನಾದನು—ಎಂಬುದಾಗಿ ರಾಘವಾಂಕಚಾರಿತ್ರದಿಂದ ತಿಳಿಯುತ್ತದೆ.

ಈ ಗ್ರಂಥದಲ್ಲಿ 8 ವೃತ್ತಗಳಿವೆ; ಎಲ್ಲವೂ ಕ್ಷಕಾರಪ್ರಾಸದಲ್ಲಿವೆ; ಒಂದೊಂದೂ "ಮುಡಿಗಿಕ್ಕೆದೆನಿಕ್ಕೆದೆನಾವನೆತ್ತುವಂ" ಎಂದು ಮುಗಿಯುತ್ತದೆ. ಎರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

ಕುಕ್ಷಿಯೊಳಿಟ್ಟು ಭಕ್ತಕುಲಮಂ ಪರಿರಕ್ಷಿಪ ದೇವದೇವನ ।
ಬ್ಯಾಕ್ಷವಿರಿಂಚಿಗಳ್ ತುದಿಮೊದಲ್ಕರೆಗಾಣದ ದೇವದೇವನಾ ॥
ವಕ್ಷದೊಳಾಲ್ದು ಬೊಬ್ಬಿಱಿವ ದೇವಕರೋಟಿಯ ದೇವನೀವಿರೂ ।
ಸಾಕ್ಷನೆ ದೇವನೆಂದು ಮುಡಿಗಿಕ್ಕೆದೆನಿಕ್ಕೆದೆನಾವನೆತ್ತುವಂ ॥ 525 ॥

ತ್ರ್ಯಕ್ಷನೆ ದೇವನಕ್ಷಿಶಿಖಿಗಂಗಜನಾಹುತಿಯಾಗ ಬೇಳ್ಪ ಭಾ ।
ಳಾಕ್ಷನೆ ದೇವನಬ್ಜಜನ ನೆತ್ತಿಯ ಪಾತ್ರೆಯನೆತ್ತಿದಾಮಹಾ ॥
ಭಿಕ್ಷುವೆ ದೇವನಂತಕನನೀಡಿಱಿದೆತ್ತ ಪೊರಳ್ಚಿದಾವಿರೂ ।
ಸಾಕ್ಷನೆ ದೇವನೆಂದು ಮುಡಿಗಿಕ್ಕೆದೆನಿಕ್ಕೆದೆನಾವನೆತ್ತುವಂ ॥ 526 ॥

**ರಾಘವಾಂಕನ** (ಸು. 1165) **ಹರಿಶ್ಚಂದ್ರಕಾವ್ಯದ** ಒಂದು ಪ್ರತಿಯ ಆದಿಭಾಗದಲ್ಲಿ ದೊರೆವ ಗದ್ಯದಲ್ಲಿ [1] ಹರೀಶ್ವರನನ್ನು ಸರಸಕವಿಸಾರ್ವಭೌಮ, ಚತುರಕವಿಚತುರ್ಮುಖ, ಭಾವಕವಿಭಾಳಲೋಚನ, ವರ್ಣಕಕವಿಕರ್ಣಾವತಂಸ, ವಸ್ತುಕಕವಿಮಸ್ತಕನ್ಯಸ್ತಹಸ್ತ, ಅದಟಕವಿಮಾನಮರ್ದನ, ಗರ್ವಿತಕವಿಗಿರಿವಜ್ರದಂಡ, ಉಭಯಕವಿಶರಭಭೇರುಂಡ, ವರ್ತಮಾನಕವಿ ವೇಶ್ಯಾಭುಜಂಗ, ಕರ್ಣಾಟಕಾವ್ಯಲಕ್ಷಣ ದೀಕ್ಷಾಚಾರ್ಯ, ಶಿವಯೋಗಚಕ್ರೇಶ್ವರ, ಲೋಕಾರಾಧ್ಯ, ಸಾಕಾರಸುಧರ್ಮ, ಮರ್ತ್ಯಲೋಕದ ಮಹಾದೇವ ಎಂದು ವಿಶೇಷಿಸಿ ಹೇಳಿದೆ.

---

1. ಪುಟ 238.

## ರಾಘವಾಂಕ. ಸು. 1165.

ಈತನು **ಹರಿಶ್ಚಂದ್ರಕಾವ್ಯ, ಸೋಮನಾಥಚರಿತೆ, ಸಿದ್ಧರಾಮಪುರಾಣ, ವೀರೇಶ್ವರಚರಿತೆ, ಶರಭಚಾರಿತ್ರ, ಹರಿಹರಮಹತ್ತ್ವ** ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಇವುಗಳಲ್ಲಿ ಮೊದಲು ಮೂರು ಗ್ರಂಥಗಳು ನಮಗೆ ದೊರೆತಿವೆ; ಉಳಿದ ಮೂರು ದೊರೆತಿಲ್ಲ, ಆದರೂ ಇವು **ರಾಘವಾಂಕ**ಕೃತವೆಂದು **ಸಿದ್ಧನಂಜೇಶನ** (ಸು. 1650) **ರಾಘವಾಂಕಚಾರಿತ್ರ**ದಿಂದ ತಿಳಿಯಬರುತ್ತದೆ. ಅಲ್ಲದೆ, ಈತನು ಹರಿಶ್ಚಂದ್ರಕಾವ್ಯವನ್ನುರಚಿಸಿ ನರಸ್ತುತಿಮಾಡಿದುದರಿಂದ ಈತನ ಸೋದರದಮಾವನೂ ಗುರುವೂ ಆದ ಹರೀಶ್ವರನು ಕೋಪಗೊಂಡು ಇವನ ಐದು ಹಲ್ಲುಗಳನ್ನು ಮುರಿದು ಕಳೆದು ಇವನಿಂದ ಐದು ಶೈವಕೃತಿಗಳನ್ನು ಮಾಡಿಸಿ ಮರಳಿ ಹಲ್ಲುಗಳನ್ನು ಕೊಟ್ಟನೆಂದು **ಪದ್ಮರಾಜಪುರಾಣದಲ್ಲಿಯ** (ಸು. 1385)

ಅಂತಾಗೆ ತಮ್ಮಗ್ರಜೆಯ ಸುತಂ ಕುಕವಿಹೃ ।
ತ್ಕುಂತಂ ಸುಕವಿವನವಸಂತಂ ದಲುಭಯಕವಿ ।
ಸಂತಾನಶರಭಭೀರುಂಡ ರಾಘವನೊರೆದ ನ್ನುತಿಗೆ ಮುಳಿದು ಕಳೆದು ॥
ದಂತವ್ಯೆದಂ ಮಗುಳ್ದಿ ಶೈವಕೃತಿಪಂಚಕವ ।
ನಂತವನಿನುನಿರಿಸಿಯವಂ ಕೊಟ್ಟು ಪರವಾದ ॥
ನಂ ತಡೆಯದಾತನಿಂ ವಾದಮುಖದಿಂ ಗೆಲಿದನವನ ಕವಿತಾವ್ಯಾಜದಿಂ ॥

ಎಂಬ ಪದ್ಯದಿಂದ ತಿಳಿವುದರಿಂದ ಈತನು **ಹರಿಶ್ಚಂದ್ರಕಾವ್ಯ**ವಲ್ಲದೆ ಐದು ಕೃತಿಗಳನ್ನು ಬರೆದನೆಂಬುದು ವ್ಯಕ್ತವಾಗುತ್ತದೆ. **ಭೈರವೇಶ್ವರಕಾವ್ಯದ ಕಥಾಸೂತ್ರ** ರತ್ನಾಕರದಲ್ಲಿಯೂ "ರಾಘವಾಂಕನು ಶರಣರ ಚಾರಿತ್ರ ಪಂಚಕಾವ್ಯವಂ ಪೇಟ್ಪಿದನು" ಎಂದು ಇದೇ ವಿಷಯವು ಹೇಳಲ್ಪಟ್ಟಿದೆ.

ಈತನ ವಿಷಯವಾಗಿ **ಸಿದ್ಧನಂಜೇಶನ ರಾಘವಾಂಕಚಾರಿತ್ರ**ದಿಂದ ಈ ಯಂಶಗಳು ತಿಳಿಯುತ್ತವೆ:—

ಈತನು ಕುಂತಳದೇಶದಲ್ಲಿ ತುಂಗಭದ್ರಾತೀರದಲ್ಲಿರುವ ಪಂಪಾಪುರದಲ್ಲಿ ಹುಟ್ಟಿದನು. ಇವನ ತಂದೆ ಮಹಾದೇವಭಟ್ಟ; ತಾಯಿ ರುದ್ರಾಣಿ; ಸೋದರದ ಮಾವ ಮತ್ತು ಗುರು ಹಂಪೆಯ ಹರೀಶ್ವರ. ಈತನು ತನಗೆ ಕವಿತಾಶಕ್ತಿಯುಂಟಾದ ಮೇಲೆ ಪಂಪಾಪುರದ ರಾಜನಾದ ದೇವರಾಜನ ಸಭೆಯಲ್ಲಿ ವಿದ್ವಾಂಸರೆಲ್ಲರೂ ಮೆಚ್ಚುವಂತೆ ಹರಿಶ್ಚಂದ್ರ ಕಾವ್ಯವನ್ನು ರಚಿಸಿ ಓದಿದನು. ಹೀಗೆ ನರಸ್ತುತಿಮಾಡಿದ ತಪ್ಪಿತಕ್ಕೆ ಹರೀಶ್ವರನು ಹಲ್ಲುಗಳನ್ನು ಮುರಿಯಲು ಹರೀಶ್ವರನ ಇಷ್ಟಾನುಸಾರ ಸೋಮನಾಥಚರಿತೆಯೇ ಮುಂತಾದ ಗ್ರಂಥಗಳನ್ನು ಬರೆದು ಹಲ್ಲುಗಳನ್ನು ಮರಳಿ ಪಡೆದನು. ತರುವಾಯ ನರಸಿಂಹಬಲ್ಲಾಳನ ಮಂತ್ರಿಯಾದ ಕೆರೆಯ ಪದ್ಮರಸನನ್ನು ನೋಡುವುದಕ್ಕಾಗಿ ಹೊಯ್ಸಳನಗರಕ್ಕೆ ಹೋದನು.

ಅಲ್ಲಿಂದ ಮರಳಿ ಪಂಪೆಗೆ ಬಂದು ಓರುಗಲ್ಲಿನ ರಾಜನಾದ ರುದ್ರಪ್ರತಾಪನ ಸಭೆಯಲ್ಲಿ ಏಕದ್ವಿತ್ರಿಸಂಧಾಗ್ರಾಹಿಗಳೆಂಬ ಕುಕವಿಗಳಿದ್ದಾರೆಂದು ಕೇಳಿ ಅಲ್ಲಿಗೆ ಹೋಗಿ ಷಟ್ಪದೀ ರೂಪವಾದ ವೀರೇಶ್ವರಚರಿತೆಯೆಂಬ ಗ್ರಂಥವನ್ನು ಬರೆದು ರಾಜನ ಸಭೆಯಲ್ಲಿ ಓದಿ ಕುಕವಿ ಪರವಾದಿಗಳನ್ನು ಜಯಿಸಿ ಹಂಪೆಗೆ ಬಂದು ಹರೀಶ್ವರನ ಆಜ್ಞಾನುಸಾರವಾಗಿ ಬೇಲೂರಿಗೆ ಹೋಗಿ ಅಲ್ಲಿ ಬಯಲಾದನು. ಈತನಿಗೆ ಹಿಂದೆ ಷಟ್ಪದಿಗಳಲ್ಲಿ ಆರೂ ಗ್ರಂಥವನ್ನು ಬರೆದಿರಲಿಲ್ಲ ; ಈತನೇ ಅವುಗಳನ್ನು ನಿರ್ಮಿಸಿದವನು.

**ಚೆನ್ನಬಸವಪುರಾಣದಲ್ಲಿ** (1584) **ಇವನ ವಿಷಯವಾಗಿ ಈ ಪದ್ಯವಿದೆ:—**

ವರಹರೀಶ್ವರನ ಸೋದರರದಳಿಯನುಭಯಕವಿ ।
ಶರಭಭೇರುಂಡನೆಂದೆಂಬ ನಾನಾಪರಿಯ ।
ಬಿರುದಾಂಕ ಕವಿರಾಘವಾಂಕನಿರಲೋರುಗಲ್ಲೆಂಬ ಪಟ್ಟಣಕೆ ಪೋಗಿ ॥
ಪರವಾದಿಗಳನಲ್ಲಿ ಗೆಲಿದು ವೀರೇಶನಿಂ ।
ದರಿದೆನಿಪ ಪದಕಮುಂ ಪಡೆದು ವೇಲಾಪುರಿಗೆ ।
ಮರಳಿ ಬಂದಲ್ಲಿ ದೇಹವನುಜೀದು ವರಸಮಾಧಿಯೊಳಿರದೆ ಬಯಲಪ್ಪನು ॥

**ಭೈರವೇಶ್ವರಕಾವ್ಯದ ಕಥಾಸೂತ್ರರತ್ನಾಕರದಲ್ಲಿ ಇವನ ವಿಷಯವಾಗಿ ಈ ಯಂಶಗಳು ಹೇಳಿವೆ:—**

ಪ್ರತಾಪರುದ್ರನ ಸಭೆಯಲ್ಲಿ ಏಕದಂಡಿ ದ್ವಿದಂಡಿ ತ್ರಿದಂಡಿಯೆಂಬ ಮೂವರು ವೈಷ್ಣವಕವಿಗಳು ಸಕಲವಿದ್ವಾಂಸರು ಮಾಡಿದ ಪದ್ಯಮಂ ಮೂಜುವೇಳೆ ಓದಿಸಿ ಆ ಪದ್ಯವ ಪಾಠವಾಡಿ ನನ್ನ ಪದ್ಯವ ನೀನೆಲ್ಲಿ ಕಲಿತೆ ಎಂದು ಕವಿಗಳನ್ನು ರಾಜನ ಸಭೆಯಲ್ಲಿ ಮನ್ನಣೆ ಯಿಲ್ಲದಂತೆ ಸೋಲಿಸುತ್ತಿರಲು, ರಾಘವಾಂಕನು ಆ ವಾರ್ತೆಯಂ ಕೇಳಿ ಕವಿಮುಖ ಕವಾಟನೆಂಬ ಪದ್ಯಾಸ್ತ್ರವಂ ರಚಿಸಿ ಓರುಗಲ್ಲಿಗೆ ಹೋಗಿ ಆ ಏಕದ್ವಿತ್ರಿದಂಡಿಗಳನ್ನು ಸೋಲಿಸಿ ರಾಜನಿಂದ ಮನ್ನಣೆಯನ್ನು ಹೊಂದಿದನು. ಉಭಯಕವಿಶರಭಭೇರುಂಡ ರಾಘವಾಂಕಪಂಡಿತ ಎಂಬ ಶಿವಕವೀಶ್ವರನ ಕವಿತ್ವದಲ್ಲಿ ತಪ್ಪಿಲ್ಲವೆಂದು ಸಮಸ್ತಸಮಯದ ಕವಿಗಳೆಲ್ಲಾ ಕೀರ್ತಿಸಿದರು.

**ಗುರುರಾಜಚಾರಿತ್ರದಿಂದ** (ಸು. 1650) **ಈ ವಿಷಯಗಳು ತಿಳಿಯುತ್ತವೆ:—**

ಕವಿಕಮಲಮಾರ್ತಂಡ ರಾಘವಾಂಕಂ ಪಂಪಾವಿರೂಪಾಕ್ಷನನು ಸ್ತುತಿಸಿ ಕಂಕಣ ಕಿರೀಟಾದಿಗಳನನುನಯದಿ ಪಡೆದು ಉಭಯಕವಿಶರಭಭೇರುಂಡನೆಂಬ ಪೆಂಡೆಯವ ಧರಿಸಿ ಹರಿಶ್ಚಂದ್ರನ ಕಾವ್ಯವ ಮುಜೀದು ಸೋಮನಾಥನ ಕಾವ್ಯವ ಪೇಟ್ಲಿ ಕುಮಾರವ್ಯಾಸನ ಗೆಲಿದು ಓರುಂಗಲ್ಲ್ಗೈದುತ್ತ ಸುಮನಸನ ಲೀಲೆಯಿಂ ಗಂಧರ್ವಲೋಕಕ್ಕೆ ಕಳುಹಿ ವೀರೇಶ ನಾಲಯಕೆ ಹೋಗಿ ದೇಗುಲದ ಹಿಂದೆ ಕುಳಿತು ಭಕ್ತಿಯಿಂದ ವಿಾಸಲುಗವಿತೆಯೆಂಬ

ಪ್ರಬಂಧಮಂ ರಾಗದಿಂದೊರೆದು ದೇಗುಲವನಭಿಮುಖಗೈದು ವೀರಭದ್ರನಂ ರಂಗಸ್ಥಲಕೆ ಬರಿಸಿ ರುದ್ರಪ್ರತಾಪನಿಂ ಪೂಜಿವಡೆದನು.

ಈತನು ತನ್ನ ಗುರುಪರಂಪರೆಯನ್ನು ಈ ಅನುಪೂರ್ವಿಯಲ್ಲಿ ಹೇಳಿದ್ದಾನೆ:– ಹಂಪೆಯ ಶಂಕರಪ್ರಭು, ಸುಕವಿ ಹಂಪೆಯ ಮಾದಿರಾಜ, ಹಂಪೆಯ ಮಹಾದೇವ ಗುರು, ಹಂಪೆಯ ಹರೀಶ್ವರ.

ಈತನಿಗೆ ಉಭಯಕವಿಶರಭಭೇರುಂಡ, ಉಭಯಕವಿಕಮಲರವಿ, ಅದಟ ಕವಿನಿಕರಚೌದಂತ ಎಂಬ ಬಿರುದುಗಳಿದ್ದಂತೆ ತಿಳಿಯುತ್ತದೆ. ಪಂಪಾಪುರದ ದೇವರಾಜನು ಇವನ ಪಾಂಡಿತ್ಯಕ್ಕೆ ಮೆಚ್ಚಿ ಕವಿಶರಭಭೇರುಂಡನೆಂಬ ಪಾದದ ಪೆಂಡೆಯವನ್ನು ಕೊಟ್ಟಂತೆ ರಾಘವಾಂಕಚಾರಿತ್ರದಲ್ಲಿ ಹೇಳಿದೆ.

ಈ ಕವಿ ತಾನು "ಹರೀಶ್ವರನ ವರಸುತಂ" ಎಂದು ಹೇಳಿಕೊಂಡಿದ್ದಾನೆ. ಬಸವಪುರಾಣದಲ್ಲಿಯೂ (1369) "ಹರಿದೇವಸುತ ರಾಘವ" ಎಂದು ಹೇಳಿದೆ. ಹರೀಶ್ವರನ ಶಿಷ್ಯನಾದುದರಿಂದ ಹೀಗೆ ಹೇಳಿಕೊಂಡಿರಬೇಕು.

ಈತನನ್ನು ಪ್ರಾಯಃ ವೀರಶೈವಕವಿಗಳೆಲ್ಲಾ ಸ್ತುತಿಸಿದ್ದಾರೆ. ಇವನು ಸ್ತುತಿಸುವ ಪೂರ್ವಕವಿಗಳನ್ನು[1] ಹಿಂದೆಯೇ ಹೇಳಿದ್ದೇವೆ.

ತನ್ನ ಕವಿತಾಚಾತುರಿಯನ್ನೂ ಗುಣಗಳನ್ನೂ ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ:—

ಮುಂತೆ ಸರಿಯಿಲ್ಲೆಂದು ಪೊಗಟ್ಪಿವರು ಪೊಜಿಮಟ್ಟ ।
ಪಿಂತವನ ಕವಿತೆಯೀನೆಂದು ನಿಂದಿಸಿ ತಮ್ಮ ।
ತೊಂತುಗವಿತೆಯ ತೂಬನುರ್ಚಿ ನೆಜ ದೂಜುಗರ ನದುವೆ ನಿಜನಿಳಯದೊಳಗೆ ॥
ಮುಂತಣಂಗೊಂಡು ಕಾಟ್ಟಿಡೆದೂಳ್ದ ಕವಿಯೆದೆಯ ।
ಕೊಂತ ಮೂಗಿನ ಕತ್ತಿಯದಟಕವಿನಿಕರಚೌ ।
ದಂತ ಪಂಪೆಯ ರಾಘವಾಂಕಪಂಡಿತನುಭಯಕವಿಶರಭಭೇರುಂಡನು ॥
ಕೆಳೆತನದ ಬಂಧುವಿಷಯದ ನಂಟುವೆರಗುಗಳ ।
ಬಲದೊಳಾಂ ಕವಿಯೆಂದು ಕವಿರಾಯನೆಂದು ವೆ ।
ಗ್ಗಳಿಸಿ ಕಾಟ್ಟಿಡೆದೊಡಾಂ ಸೈರಿಸುವೆನಲ್ಲದಾನಂಟನೀಡಾಡಿ ಮಲೆತು ॥
ಬಲ್ಲಿಕವಾಂ ಕವಿಯೆಂದು ಕವಿರಾಯನೆಂದು ವೆ ।
ಗ್ಗಳಿಸಿ ಕಾಟ್ಟಿಡೆದ ದುಷ್ಕವಿಯ ಗರ್ಬದ ಮೂಗ ।
ನಿಲ್ಲುಹದಿರನುಭಯಕವಿಶರಭಭೇರುಂಡ ಹಂಪೆಯರಾಘವಂ ಸಭೆಯೊಳು ॥
ಪೆಜರೊಡವೆಯಂ ಕೊಂಡು ಕೃತಿಯ ಪೇಟ್ಪಿದ ಭಾಷೆ ।

1. ಪುಟ 222.

ಪೆಱರ ಕಾವ್ಯಾರ್ಥಂಗಳಂ ಛಿದ್ರಿಸದ ಭಾಷೆ ।
ಪೆಱರ ದೈವವ ನುತಿಸದಿಪ ಭಾಷೆ ಪೆಱರ ಖೇದವ ನಿರೀಕ್ಷಿಸದ ಭಾಷೆ ॥
ಪೆಱರ ನಿಂದಿಸಿ ತನ್ನ ಹೊಗಲ್ಪಿಕೊಳ್ಳದ ಭಾಷೆ ।
ಪೆಱರ ವಧುವಂ ಕಂಡು ಮನವೆಳಸದಿಹ ಭಾಷೆ ।
ಪೆಱರ ವಸ್ತುವ ತೃಣಕೆ ಸರಿಯೆಂಬ ಭಾಷೆಯಿದು ರಾಘವಾಂಕಗೆ ಸಂದುದು ॥

ಇವನ ವಿಷಯವಾಗಿ ರಾಘವಾಂಕಚಾರಿತ್ರವೆಂಬ ಗ್ರಂಥವು ಹುಟ್ಟಿದೆ.

ಇವನ ಗ್ರಂಥಗಳಲ್ಲಿ

## 1. ಹರಿಶ್ಚಂದ್ರಕಾವ್ಯ.

ಇದರಲ್ಲಿ ಹರಿಶ್ಚಂದ್ರರಾಜನ ಚರಿತ್ರವು ವರ್ಣಿತವಾಗಿದೆ; ಗ್ರಂಥವು 14 ಸ್ಥಲಗಳಾಗಿ ಭಾಗಿಸಲ್ಪಟ್ಟಿದೆ. ಇದರಲ್ಲಿ 775 ವಾರ್ಧಕಷಟ್ಪದಿಗಳೂ ಒಂದು ರಗಳೆಯೂ ಇವೆ. ಇದರ "ಕಥಾಬೀಜ" ವನ್ನು ಕವಿ ಈ ಪದ್ಯದಲ್ಲಿ ಹೇಳಿದ್ದಾನೆ:—

ವಸುಧಾಧಿಪತಿ ಹರಿಶ್ಚಂದ್ರ ಘನಸತ್ವನೆಂ ।
ದೊಸೆದು ವಾಸಿಷ್ಠನಿಂದ್ರಂಗೆನಲು ಕೌಶಿಕಂ ।
ಹುಸಿಮಾಳ್ಪನೆಂದು ಭಾಷೆಯನಿತ್ತು ಧರೆಗೆ ಬಂದನನಿಪ ಸತಿಸುತರನು ॥
ಅಸುವಂತ್ಯವೆನೆ ನಿಗ್ರಹಂಮಾಡಿಯೊಪ್ಪದಿರೆ ।
ಶಶಿಮೌಳಿ ಶ್ರೀವಿಶ್ವನಾಥ ಭೂಪಂಗೆ ಕರು ।
ಣಿಸಿ ಸಕಲಸಾಮ್ರಾಜ್ಯವಿತ್ತಾತನಂ ಮೆಜ್ದ ಕೃತಿ ಪುಣ್ಯದಾಕೃತಿಯಿದು ॥

ಗ್ರಂಥಾವತಾರದಲ್ಲಿ ಕವಿ ಪಂಪಾವಿರೂಪಾಕ್ಷನನ್ನು ಸ್ತುತಿಸಿದ್ದಾನೆ. ಬಳಿಕ ಪಂಪಾಂಬಿಕೆಯನ್ನು ಸ್ತುತಿಸಿ ತನ್ನ ಗುರುಪರಂಪರೆಯನ್ನು ಹೇಳಿ ಕಥೆಯನ್ನು ಆರಂಭಿಸಿದ್ದಾನೆ.

ಈ ಗ್ರಂಥದ ಒಂದು ಪ್ರತಿಯ ಆದಿಭಾಗದಲ್ಲಿ ಈ ಗದ್ಯವು ಬರೆದಿದೆ:—

ಇದು ಸಮಸ್ತಕಳಾಧರಕ್ರಮನಿಷ್ಪಸಂಕ್ರಂದನಾದಿಸುರನಿಕರಮಣಿಮಕುಟಮಯೂಖಮಾಲಾಪುಂಜರಂಜಿತಚರಣಕಂಜಲ್ಕಮಂಜರೀ [ಪಿಂಜರಿತ] ದಿಶಾವಲಯಂ ಸಕಲದೈವದೀಕ್ಷಾಕರ್ತೃ ನಿಖಿಲದೈವರಕ್ಷಾದಕ್ಷ ದೈನ್ಯದೈವಶರಣಾಗತವಜ್ರಪಂಜರ ದರ್ಪಿಷ್ಠದೈವಸರ್ಪಮಯೂರ ಗರ್ವಿತಗರ್ವಶಾಪಹರಣ ಸಮಸ್ತದೈವಸಾರ್ವಭೌಮನೆನಿಪ ಪಂಪಾಧೀಶ್ವರವಿರೂಪಾಕ್ಷವರ್ಣನಮಾಗೆ ಸರಸಕವಿಸಾರ್ವಭೌಮಂ ಚತುರಕವಿಚತುರ್ಮುಖಂ ಭಾವಕವಿಭಾಳಲೋಚನಂ ವರ್ಣಕಕವಿಕರ್ಣಾವತಂಸಂ ವಸ್ತುಕವಿಮಸ್ತಕನ್ಯಸ್ತಹಸ್ತಂ ಅದಟಕವಿಮಾನಮರ್ದನಂ ಗರ್ವಿತಕವಿಗಿರಿವಜ್ರದಂಡಂ ಉಭಯಕವಿಶರಭಭೇರುಂಡಂ ವರ್ತಮಾನಕವಿವೇಶ್ಯಾಭುಜಂಗಂ ಕರ್ಣಾಟಕಾವ್ಯಲಕ್ಷಣದೀಕ್ಷಾಚಾರ್ಯ ಶಿವಯೋಗಚಕ್ರೇಶ್ವರ

ಲೋಕಾರಾಧ್ಯ ಸಾಕಾರಸುಧರ್ಮ ಮರ್ತ್ಯಲೋಕದ ಮಹಾದೇವನೆನಿಪ ಪಂಪಯ ಹರಿಹರ ದೇವರ ಕುಮಾರನೆನಿಪ ಉಭಯಕವಿಕಮಲಾದಿತ್ಯ ಪಂಪಯ ರಾಘವಾಂಕ ವರ್ಣನವ ಪ್ಪ ಹರಿಶ್ಚಂದ್ರಪ್ರಬಂಧಂ.

ಮತ್ತೊಂದು ಪ್ರತಿಯಲ್ಲಿ ಗ್ರಂಥಾಂತ್ಯದಲ್ಲಿ ಈ ಗದ್ಯವಿದೆ:—

ಇಂತೀ ಪಂಪಾಪುರದರಸ ವಿರೂಪಾಕ್ಷಲಿಂಗದಾ ಚರಣನೀರಜಗಂಧಸಿಂದೂರಪಾವನ ಭೃಮರನೆನಿಪ ಅದಟಕವಿಚೌದಂತ ಪಂಪಯ ರಾಘವಾಂಕವಿರಚಿತಮಪ್ಪ ಹರಿಶ್ಚಂದ್ರ ಚಾರಿತ್ರದೊಳ್.

ಇವನ ಬಂಧವು ಪ್ರೌಢವಾಗಿಯೂ ಅರ್ಥಗಾಂಭೀರ್ಯವುಳ್ಳದಾಗಿಯೂ ದೇಶ್ಯಪದಭೂಯಿಷ್ಠವಾಗಿಯೂ ಇದೆ. ಷಟ್ಪದೀಗ್ರಂಥಗಳನ್ನು ಬರೆವುದಕ್ಕೆ ಈತನೇ ಆದಿಕವಿಯೆಂದು ವೀರಶೈವರ ಗ್ರಂಥಗಳಲ್ಲಿ ಹೇಳಿದೆ. ಇದು ಚರ್ಚಾಸ್ಪದವಾದ ವಿಷಯವು. ಈತನ ಗ್ರಂಥಗಳಲ್ಲಿ, ಶಬ್ದಮಣಿದರ್ಪಣಾದಿವ್ಯಾಕರಣಪ್ರಕ್ರಿಯೆಗಳಿಗೆ ವಿರೋಧವಾದ, ಆಗ್ಗೆ ವ್ಯವಹಾರದಲ್ಲಿದ್ದಿರಬಹುದಾದ ಹಲವು ಪ್ರಯೋಗಗಳು ದೊರೆಯುತ್ತವೆ.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

ಚಂದ್ರೋದಯ.

ಕುಸುಮಶರಮಂ ಮದನ ಮಸೆವ ಸಳಿಕನದೊಂದು ।
ಹೂಸಸಾಣೆಯೋ ಗಗನವನಿತೆಯೆಚ್ಚಾಡಲ್ಕೆ ।
ಪಸರಿಸಿದ ನಕ್ಷತ್ರಗವಡಿಕೆಯೊಳಿಟ್ಟುಹಿಟ್ಟದೊಂದು ಬೆಳ್ಳಿಯ ಹಲ್ಲೆಯೋ ॥
ಒಸೆದು ರತಿ ಸಿಟ್ಟಿಸುವ ಕನ್ನಡಿಯೊ ಮನುಮಥನ ।
ಹೊಸಚತ್ರವೋ ತಿಳಿದ ಬೆಳುದಿಂಗಳಂ ಪಿಚರ ।
ರೂಸದು ವಸುಧೆಗೆ ಸುರಿವ ಹೊಸಭಾಂಡವೋ ಎನಿಸಿ ಮೂಡಿತ್ತು ಶಶಿಬಿಂಬವು ॥527॥

ಕೊಳ.

ಬಸವಟ್ಟಿದ ನೆಯ್ಪುಲಂ ಕಂಡು ನಗುವಂತರಳ್ದ ।
ಹೂಸಕಮಲಕುಟ್ಮಲದ ಕರ್ಣಿಕೆಯ ಕೆಲದ ಕಿಜ್ಜ ।
ಯೆಸಟ್ಟಿಡುಕುಜಿಂ ಬಗಿದು ಕೇಸರದ ಕುತ್ತುಜಿಯೊಳು ನುಸುಳಿನುಸುಳಿಪರಾಗದ ॥
ಮಿಸುಪ ರಜದೊಳು ಹೊರಳಿ ಬಳಿದ ಬಂಡೆಂಬ ಕೋ ।
ಟ್ಟಿಕ್ಕಿಸಜ್ಜನೊಳು ನಿಲ್ಕಿ ಜನುಗುವ ಮಜ್ಜಗೆ ಸೌರಭ್ಯ ।
ರಸವ ಕುಟುಕಿತ್ತು ಸಾಗಿಸುವ ಬಾಣತಿದುಂಬಿ ಮೆಜ್ಜಿದುವಂತಾಕೊಳದೊಳು ॥528॥

## ಉಪವನ.

ಗಿಳಿಗಳರಗಿಳಿ ನವಿಲು ಸೋಗೆನವಿಲಾಕೊಳಂ ।
ತಿಳಿಗೊಳಂ ತುಂಬಿ ಮಜ್ಜುಂಬಿ ಮಾವಿಮ್ಮಾವು ।
ಪುಳಿನ ಶೀತಳಪುಳಿನ ತೆಂಗು ಚೆಂದೆಂಗು ಕೇದಗೆಯೆಲ್ಲ ಹೊಂಗೇದಗೆ ॥
ಸುಲ್ಲಿವೆಲರು ತೆಂಬೆಲರು ಕೋಕಿಳಂ ಮತ್ತಕೋ ।
ಕಿಳ ಪಲಸು ಬಕ್ಕೆವಲಸೀಳೆ ಕಿತ್ತೀಳೆಯು ।
ತ್ವಳವೆಲ್ಲನೀಲೋತ್ಪಳಂ ಹಂಸೆ ರಾಜಹಂಸೆಯೆಸೆ ಮೆಜ್ಜೆದುವು ವನದಲಿ ॥ 529 ॥

## ಕೇದಗೆ.

ವಿರಹಿಗಳ ಚಿತ್ತಮಂ ಸೀಳ್ದ ಕಾಮನ ಕೈಯ ।
ಕರಗಸದ ಕಕ್ಕುಗಳೊ ಕಂತು ಹೊಡೆದೊಡೆ ಮುನಿ ।
ಶ್ಯರಕಠಿನಮನಕಾಂತು ಧಾರೆಗಳು ಮುಜ್ಜದಲಗುಗಳ ಮುಕ್ಕುಗಳ ಬಳಗವೋ ॥
ಪರಿಮಳದ ಮುಳುವೇಲಿಯೋ ಎನಿಸಿ ಕಂಟಕೋ ।
ತ್ಕರಭರಿತ ಕೇತಕೆಗಳೊಪ್ಪಿದುವು ಹೂಜಿಗೆ ರಂ ।
ಕರವಿರೋಧಿಯನು ನಡುವಿರಿಸಲಣ್ಮದೆ ಬನಂ ಪೊಜಿಮಡಿಸಿತೆಂಬಂತಿರ ॥ 530 ॥

## ವಿಶ್ವಾಮಿತ್ರನ ಕೋಪ.

ವದಬಾಗ್ಗಿ ಜಡವೊತ್ತುದೋ ನಿಡಿಲು ಸಲೆ ಭಸಿತ ।
ವಿಡಕಲಿತುದೋ ಕಾಡ ಕೆಚ್ಚು ಪರಿಣಾಜನವ ।
ನುಡಕಲಿತುದೋ ಪ್ರಳಯವಹ್ನಿ ತಪಪೆತ್ತುದೋ ಭಾಳಲೋಚನನ ಕೋಪ ॥
ಕಡೆಗೆ ಮುನಿಯಾಯ್ತೊ ಹೇಳ್ಬೆನೆ ಕಣ್ಣ ಕಡೆ ತೋರ ।
ಗಿಡಿಗೆದಜ್ಜೆ ವಿಾಸೆಗೂದಲು ಹೊತ್ತಿ ಹೊಗೆಯೆ ಬಿಜು ।
ನುಡಿಗಳುರಿಯುಗುಳ್ದೆ ವಿಶ್ವಾಮಿತ್ರನುರವಣಿಸಿ ಬಂದನವನೀಶನೆದೆಗ ॥ 531 ॥

## ಚಂದ್ರಮತಿಯ ಪ್ರಲಾಪ.

ಹಡೆದೊಡಲು ಹುಡಿಯಾಯ್ತು ಮಗನೆ ನೀನುಂಟೆಂದು ।
ಕಡೆಗೆ ಹೆಚ್ಚಿದ ಮನಂ ಹೊತ್ತಿ ಹೊಗೆಯಿತ್ತು ಬಿಡ ।
ದಡರಿ ನಿಟ್ಟಿಸಿ ನಲಿವ ದಿಟ್ಟಿ ಕೆಟ್ಟುವು ಸೋಂಕಿ ಪುಳಕಿಸುವ ಕರಣಂಗಳು ॥
ಕಡಿವಡೆದುವೊಸೆದು ಹೆಸರ್ಗೊಳುತಿಪ್ಪ ನಾಲಗೆಯ ।
ಕುಡಿ ಮುರುಟಿತಡಿಗಡಿಗೆ ನುಡಿಯನಾಲಿಪ ಕಿವಿಯ ।
ಹಡಿಗೆತ್ತುವೆಲೆ ಕಂಡ ಎಂದೆನುತ್ತಿಂದುಮುಖಿ ಮುಜುಗಿ ಬಾಯ್ಬಿಟ್ಟಳಂದು ॥ 532 ॥

## 2. ಸೋಮನಾಥಚರಿತೆ.

ಈ ಗ್ರಂಥವು ಪುಲಿಗೆರೆಯ ಸೋಮಯ್ಯನ ಚರಿತ್ರರೂಪವಾಗಿದೆ; ವಾರ್ಧಕ ಷಟ್ಪದಿಯಲ್ಲಿ ಬರೆದಿದೆ; ಆಶ್ವಾಸ 5, ಪದ್ಯ 500.

ಇದರ 'ಕಥಾಗರ್ಭ' ವನ್ನು ಕವಿ ಈ ಪದ್ಯದಲ್ಲಿ ಹೇಳಿದ್ದಾನೆ:—

ನಾರದನ ಕೈಯಿಂದ ಕಲಿಕಾಲದನುವ ಮದ ।
ನಾರಿ ಚಿತ್ತೈಸಿ ಗಣನಾಥನಂ ಕಳುಪಿದೊಡೆ ।
ಸೌರಾಷ್ಟ್ರದೊಳಗಾತನಾದಯ್ಯವೆಸರಿಂದ ಜನಿಸಿ ಹುಲಿಗೆಜಿಗೆ ಬಂದು ॥
ವೈರಿಗಳ ಮೂದಲೆಗೆ ಹಿರಿಯ ಬಸದಿಯೊಳೆ ಸಸಿ ।
ಧಾರಿಸೋಮಯ್ಯನಂ ನಿಲಿಸಿ ತನ್ನಂ ಮುತ್ತಿ ।
ದಾರುಹತರಂ ಗೆಲ್ವನೆಂಬುದು ಕಥಾಗರ್ಭವಿದ ಬೆಳಸಿ ಕೃತಿಯಿಸಿವೆನು ॥

ಇದೇ ವಿಷಯವು ಚೆನ್ನಬಸವಪುರಾಣದಲ್ಲಿಯ—

ಸುರಹೊನ್ನೆಯೆಂಬ ಬಸದಿಗೆ ಬೀಗ ಹುಲಿಗೆಜಿಯ ।
ಪುರದ ಸೋಮಯ್ಯನಂ ಕರೆದು ತಂದಾದಯ್ಯ ।
ನಿರದೆ ಜೈನರ ಹತಿಸಿದಂ * * * ॥

ಎಂಬ ಪದ್ಯಭಾಗದಲ್ಲಿಯೂ ಹೇಳಿದೆ.

ಈ ಗ್ರಂಥದಲ್ಲಿ ಹರಿಶ್ಚಂದ್ರಕಾವ್ಯವನ್ನು ಬರೆದುದಾಗಿ ಹೇಳುವುದರಿಂದ ಆ ಕಾವ್ಯವನ್ನು ಬರೆದ ಮೇಲೆ ಇದನ್ನು ಬರೆದಿರಬೇಕು.

ಕವಿ ಗ್ರಂಥಾವತಾರದಲ್ಲಿ ಹುಲಿಗೆರೆಯ ಸೋಮನಾಥನನ್ನು ಸ್ತುತಿಸಿದ್ದಾನೆ. ಬಳಿಕ ತನ್ನ ಗುರುಪರಂಪರೆಯನ್ನು ಹರಿಶ್ಚಂದ್ರಕಾವ್ಯದಲ್ಲಿರುವಂತೆಯೇ ಹೇಳಿ ಗ್ರಂಥವನ್ನು ಆರಂಭಿಸಿದ್ದಾನೆ.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

### ಚೆಂದೆಂಗು.

ಹಂಗ ಮಗುಚುವೆನೆಂದು ಭೂಮಿ ಕೈನೀಡಿ ಮೇ ।
ಘಂಗಳಿಗೆ ಕೊಡುವಮೃತಕಳಶಸಂಕುಳವೊ ಗಗ ।
ನಾಂಗಣದೊಳುಜಿ ಸುಲ್ಕಿವ ವಿದ್ಯಾಧರಾಳಿಗೆ ವಸಂತನಿಟ್ಟ ಜವಟಿಗೆಯೂ ॥
ಜಂಗುಳಿಯೊ ಕಡಲ ಕಡೆವಂದು ಹುಟ್ಟಿದ ಪದಾ ।
ರ್ಥಂಗಳಂ ತಮತಮಗೆ ಕೊಂಡೊಯ್ವತಿರೆ ಭೂಲ ।
ತಾಂಗಿ ತೆಗೆದೆತ್ತಿಟ್ಟ ರಸರತ್ನವೋ ಎನಿಸಿ ಪಣ್ತ ಚೆಂದೆಂಗೆಸೆದುವು ॥ 533 ॥

## ಬಾಳೆ.

ಹೃದಯದೆ ಕಳಂಕಿಲ್ಲದೋರಂತೆ ನಾರನು ।
ಟ್ಟುದಕಮುಂ ಕುಡಿಕುಡಿದು ಮಲ್ಲಿಗಾಳಿಬಿಸಿಲಿಗ ।
ಳ್ಕದೆ ವನದೊಳೊಂದೆಡೆಯೊಳಿರ್ದು ಕೊಂಬಾಸೆಯಿಲ್ಲದೆ ನೆಲಕೆ ಹೊಜ್ಯೆಯಾಗದೆ ॥
ಬದುಕಿ ತಲೆವಾಗಿ ಬೆಳೆದೊಂದೆಡೆಯೊಳಿರ್ದೆ ನಾ ।
ನುದಿತರಸಫಲವನಾಂತಿರೆ ಕೈಯ ಮೇಗೆ ತಾ ।
ಳಿದೆನೆನ್ನ ನೋಡಿ ಮುನಿಕುಲವೆಂದು ಬುದ್ಧಿವೇಳ್ಪಂತೆ ಕದಳಿಗಳಿಸಿದುವು ॥ 534 ॥

## ನಕ್ಷತ್ರಗಳು.

ಕಡಲ ಸಿಡಿವನಿಯೊ ಮೇಘಾವಳಿಯ ತತ್ತಿಗಳೊ ।
ಪೊಡವಿಯೆಡೆಯನು ನೋಳ್ಪ ಗಗನರಂಧ್ರವೊ ಅಲುಗ ।
ಗುಡದಂತೆ ಕೀಲಿಸಿದ ವಜ್ರಮೊಳಿಗಳೊ ನಭದ ಲತೆ ಹಬ್ಬಿಯೊಗೆದ ನನೆಯೋ ॥
ಕಡುಹಸಿದುವೆಂದು ಶಶಿಯೆಲ್ಲಾ ಚಕೋರಕ್ಕೆ ।
ಕೊಡುವ ಸವಿದುತ್ತುಗಳೊ ಸಿಡಿವ ಸೀರ್ಮುತ್ತುಗಳೊ ।
ತಡೆಯದೆ ವಿಚಾರಿಸೆನೆ ತಾರಾಳಿಯೆಸೆದುವಾಜಗದ ಜನ ನಲಿಯುತಿರಲು ॥ 535 ॥

## ನಾರದ.

ಮುಂತುಗೊಂಡೆಲ್ಲಿ ಜಗಳವ ಹತ್ತಿಸುವೆನೆಂದು ।
ಚಿಂತಿಸುವ ಮನ ಕೊಂಡೆಯಕ್ಕೆಂದು ಘುಡುಘುಡನೆ ।
ತೀಂತೆ ಮಸಗುವ ಬಾಯಿ ಪರರ ಕಾಳಿಗದ ಲಗ್ಗೆಯ ಕೇಳಲೆಳಸುವ ಕಿವಿ ॥
ಸಂತಸುಖಮಿರ್ಪವರು ಕಾದಬೇಕೆಂದು ಕಿಸು ।
ಜಾಂತುಗುರುಮುಸೆವ ಕೈ ತಲೆಯೊತ್ತಿ ಕುತ್ತಿ ಪಲ ।
ರಂ ತಜ್ಞವ ಸಮರಮಂ ನೋಡಲೆಳಸುವ ಕಣ್ಣ ಸಿಂಗರಂ ನಾರದಂಗೆ ॥ 536 ॥

## ಕಾಡು.

ಮಿಕ್ಕ ಸರುವಿಂಗೆ ದರುವಿಂಗೆ ಹಳ್ಳಕ್ಕೆ ಕೊ ।
ಳ್ಳಕ್ಕೆ ಗಿಡುವಿಂಗೆ ಮಡುವಿಂಗೆ ಬೆಟ್ಟಕ್ಕೆ ಘ ।
ಟ್ಟಕ್ಕೆ ಕುತ್ತುಜ್ಞ ಕೋಣೆಗಿಡುಕುಜ್ಞಂದಿಡಿದ ಮೆಳೆನಡುವಿಂಗೆ ನಾನಲಿಂಗೆ ॥
ತಕ್ಕೈಗತ್ತಲೆಗೆ ತರತರದ ನಾನಾಮೃಗಕು ।
ಲಕ್ಕೆ ನಾನಾಧ್ವನಿಗೆ ನಾನಾಭಯಂಕರ ।
ಕ್ಕಿಕ್ಕೆವನೆಯಾನೆಂದು ಬೊಬ್ಬಿಟ್ಟು ಪೇಳ್ಪಂತೆ ಘೀಳಿಡುತ್ತಿಹುದಡವಿಯು ॥ 537 ॥

### ಸೂರ್ಯಾಸ್ತ.

ನಡೆಯುಡುಗಿ ಮುಖವಾಗಿ ಕಾಂತಿ ಮಸುಳಿಸಿ ತೇಜ ।
ವಡಗಿ ಹುಟ್ಟಿದ ಶಾವನಗಲಿ ಕೆಲಕೊಂ ಡೆಯು ।
ಕಡೆಯ ಸಾರ್ವಂತಾದುದೀಗ ಹಿಂದೆನ್ನ ಹೆಸರೆಂದೊಡೋಡುವ ಕತ್ತಲೆ ॥
ಹೊಡಕರಿಸಿ ಬರುತಿದೆನ್ನಾಳಿಕೆಗೆ ಸಸಿಯು ಮುಂ ।
ಗುಡಿ ದಾಟ್ಟಿ ಬರುತಿದೆಯಿವಂ ಕಂಡು ಜೀವಿಪೆ ।
ನ್ನೊಡಲಾಸೆಯೇಕೆಂದು ಲಜ್ಜಿಯಿಂದಿಟ್ಟಿವಂತ ಬಿದ್ದನಿನನಬ್ಧಿಯೊಳಗೆ ॥538॥

## 3. ಸಿದ್ಧರಾಮಪುರಾಣ.

ಇದರಲ್ಲಿ ಸೊನ್ನಲಾಪುರದ ಸಿದ್ಧರಾಮನ ಚರಿತವು ಹೇಳಿದೆ. ಇದೂ ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಸಂಧಿ 9, ಪದ್ಯ 549.

ಸಿದ್ಧರಾಮನು ಸೊನ್ನಲಿಗೆಯಲ್ಲಿ ಅರುವತ್ತು ವಯಸ್ಸಾಗಿದ್ದ ಸುಗ್ಗವ್ವೆಗೂ ಮುದ್ದಗೌಡನಿಗೂ ಮಗನಾಗಿ ಹುಟ್ಟಿದನು. ಇವನ ಕಾಲದಲ್ಲಿ ಸೊನ್ನಲಿಗೆಯಲ್ಲಿ ನನ್ನಪ್ಪನೆಂಬವನು ರಾಜನಾಗಿಯೂ ಚಾಮಲದೇವಿಯೆಂಬವಳು ರಾಜಮಹಿಷಿಯಾಗಿಯೂ ಇದ್ದರು. ಸಿದ್ಧರಾಮನು ಸೊನ್ನಲಿಗೆಯಲ್ಲಿ ಒಂದು ಕೆರೆಯನ್ನು ಕಟ್ಟಿಸಿ, ಅನೇಕ ಲಿಂಗಗಳನ್ನು ಪ್ರತಿಷ್ಠೆಮಾಡಿ, ವಿದ್ಯಾಸಮುದ್ರನೆಂಬ ಬಿರುದನ್ನು ವಹಿಸಿದ್ದ ಕರ್ಪರನೆಂಬ ಜೋಗಿಯನ್ನು ಸೋಲಿಸಿ, ತಾನು ಕಟ್ಟಿಸಿದ ಕೆರೆಯ ಮಧ್ಯದಲ್ಲಿ ಸಮಾಧಿಯನ್ನು ಮಾಡಿಸಿ, ಅಲ್ಲಿಯೇ ಬಯಲಾದನು—ಎಂಬುದೇ ಈ ಗ್ರಂಥದ ಕಥಾಸಾರವು.

ಈ ಗ್ರಂಥವನ್ನು ಕವಿ "ನೆರೆದ ಸೊಗಸಿನ ಸುಗ್ಗಿರಸದ ಮಡು ಪುಣ್ಯದಾಗರಂ" ಎಂದು ಶ್ಲಾಘಿಸಿದ್ದಾನೆ.

ಗ್ರಂಥಾವತಾರದಲ್ಲಿ ಸಿದ್ಧರಾಮನ ಸ್ತುತಿಯಿದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ :—

### ವಸಂತ.

ವೊಸಮೂಗೆ ಮದವಾಜಿ ಮಾವಂಕುರಂದೋಜಿ ।
ಯಸುಕೆ ತಳಿರಂ ಬೀಜಿ ಲತೆ ನನೆಗಳಂ ಪೇಜಿ ।
ಕುಸುಮ ರಜವಂ ತೂಜಿ ತುಂಬಿ ಸುತ್ತಂ ಪಾಜಿ ತೆಂಗಾಳಿ ತಂಪ ಬೀಜಿ ॥
ಸಸಿಗೆ ಕಳಿಯೇಜಿ ಕೋಕಿಲರವಂ ಮಿಜಿ ಕಾ ।

ಮುಸರಂಗಳೂಱಿ ವಿರಹಿಗಳ ಬಾಯಾಱಿ ಮಾ ।
ಮುಸಕದಿಂ ಬಂದನು ವಸಂತನು ವಿಯೋಗಿಹೃತ್ಕುಂತನು ಸುಖಾಶ್ರಾಂತನು
॥ 539 ॥

## ವರ್ಷಾಕಾಲ.

ಇನನೋಡೆ ನವಿಲಾಡೆ ವಿರಹಿಗಳು ಕೂಡೆ ಭೂ ।
ಜನ ಹಾಡೆ ತೃಣ ಮೂಡೆ ಹಂಸೆಗಳು ಬಾಡೆ ಕಡ ।
ವಿನ ಸೊವಡು ತೀಡೆ ಚಾದಗೆ ನೋಡೆ ಘನ ನಾಡೆ ಧರೆಗಂಬುನೀಡೆ ಸಿಡಿಲು ॥
ದನಿಮಾಡೆ ಧರೆ ಕೂಡೆ ಬೆಳೆಗಳಂ ಸೂಡೆ ನೆಲೆ ।
ಯನು ನದಿಗಳೀಡಾಡೆ ಬರ್ಪ ಕಾರ್ಗಾಲವೊ ।
ಯ್ಯನೆ ಮೊಳೆತು ದನಿಯೋಜು ವಿಾಜು ಮೊಳಗಂ ಹೇಜು ತೋಜುತ್ತು ದುರ್ದಿನ
ವನು [1] ॥ 540 ॥

ಈ ಕವಿಯ **ವೀರೇಶಚರಿತೆ, ಶರಭಚಾರಿತ್ರ, ಹರಿಹರಮಹತ್ವ** ಎಂಬ ಮೂರು ಗ್ರಂಥಗಳೂ ನಮಗೆ ದೊರೆತಿಲ್ಲವೆಂದು ಹಿಂದೆಯೇ ತಿಳಿಸಿದೆ. ಆದರೆ **ಸಿದ್ಧನಂಜೇಶನ ರಾಘವಾಂಕಚಾರಿತ್ರದಿಂದ**—ವೀರೇಶಚರಿತೆಯಲ್ಲಿ ವೀರಭದ್ರನು ದಕ್ಷಾಧ್ವರವನ್ನು ನಾಶಮಾಡಿದ ಕಥೆಯೂ, ಶರಭಚಾರಿತ್ರದಲ್ಲಿ ಹಿರಣ್ಯಕಶಿಪುವಿನ ರಕ್ತಪಾನದಿಂದ ಮತ್ತನಾದ ನರಸಿಂಹನನ್ನು ವೀರಭದ್ರನು ಶರಭಾಕಾರದಿಂದ ಶಿಕ್ಷಿಸಿದ ಕಥೆಯೂ, ಹರಿಹರಮಹತ್ವದಲ್ಲಿ ಹಂಪೆಯ ಹರೀಶ್ವರನ ಮಾಹಾತ್ಮ್ಯವೂ ವರ್ಣಿತವಾಗಿರುವಂತೆ ತಿಳಿಯಬರುತ್ತದೆ. ಈ ವೀರೇಶಚರಿತೆಯ ವಿಷಯವಾಗಿ ರಾಘವಾಂಕಚಾರಿತ್ರದಲ್ಲಿ ಈ ಪದ್ಯವಿದೆ:—

ಭೂಸುರಕವಿಸ್ತವರ ರಾಘವಾಂಕಂ ಮುದದಿ ।
ನೀಶಾಲಯದ ಬೆಂಗಡೆಯೊಳೊಲ್ಪು ಕುಳಿತು ಮು ।
ನ್ನೀಷಟ್ಪದಿಯೊಳಾರು ಪೊಗಟ್ಟಿದ್ದುದಿಲ್ಲಿನ್ನಿಂದ ನಿರ್ಮಿತಮುಮುದುಕಾರಣಂ ॥
ವಿಾಸಲ ಕವಿತ್ವವೆಂದೆಂಬ ಪೆಸರೀಕೃತಿಗೆ ।
ಭೂಷಣವಲಾ ಎಂದು ನಿಶ್ಚೈಸಿ ಪೆಸರಿಟ್ಟು ।
ಶಾಸನಂಗೆಯ್ವುನಿಳಿ ಮೊಳಗೆ ವೀರೇಶಸತ್ಕಥೆಯ . . . . . ॥

**ಅನುಭವಶಿಖಾಮಣಿಯನ್ನು** ಬರೆದ **ನಾರಸಿಂಹನು** (1768) ತನ್ನ ಗ್ರಂಥವನ್ನು ರಾಘವಾಂಕನ ಶರಷಟ್ಪದೀರೂಪವಾದ ಗ್ರಂಥದ ಆಧಾರದಮೇಲೆ

1. **ಸೋಮನಾಥಚರಿತೆ**, ಸಿದ್ಧರಾಮಪುರಾಣ ಇವುಗಳಿಂದ ಇಲ್ಲಿ ಉದಾಹೃತವಾದ ಪದ್ಯಗಳಲ್ಲಿ ಒಂದೆರಡು ಹೊರತು ಉಳಿದುವು ಹರಿಶ್ಚಂದ್ರಕಾವ್ಯದಲ್ಲಿಯೂ ದೊರೆಯುತ್ತವೆ.

ಬರೆದುದಾಗಿ ಹೇಳುತ್ತಾನೆ. ಇದು ರಾಘವಾಂಕನ ಆವ ಗ್ರಂಥಕ್ಕೆ ಅನ್ವಯಿಸುತ್ತದೆಯೋ ತಿಳಿಯದು.

---

## ಕೆರೆಯಪದ್ಮರಸ. ಸು. 1165.

ಈತನು **ದೀಕ್ಷಾಬೋಧೆಯೆಂಬ** ಗ್ರಂಥವನ್ನು ಬರೆದಿದ್ದಾನೆ. ಇವನು ವೀರ ಶೈವ ಕವಿ; ಇವನವಿಷಯವಾಗಿ **ಪದ್ಮಣಾಂಕನು** (ಸು. 1385) ಬರೆದಿರುವ **ಪದ್ಮರಾಜಪುರಾಣದಿಂದ** ಈಯಂಶಗಳು ತಿಳಿಯುತ್ತವೆ:—

ಈತನ ಮುತ್ತಜ್ಜನಾದ ಶಿವಯೋಗಿಮಲ್ಲಿಕಾರ್ಜುನಪಂಡಿತನು ಅಥವಾ ಮಲ್ಲರಸನು ಕರ್ಣಾಟಕದೇಶದಲ್ಲಿರುವ ಕಲ್ಲಕುರಿಕೆಯಲ್ಲಿ ದೊರೆಯಾಗಿದ್ದು ವಿರಕ್ತನಾಗಿ ಶ್ರೀಶೈಲಕ್ಕೆ ಹೋದನು. ಈ ಮಲ್ಲರಸನ ಮಗನಾದ ಸಕಲೇಶಮಾದರಸನು ಕೆಲವುಕಾಲ ಕಲ್ಲಕುರಿಕೆಯಲ್ಲಿ ಆಳುತ್ತಿದ್ದು, ವಿರಕ್ತನಾಗಿ ಶ್ರೀಶೈಲಕ್ಕೆ ಹೊರಟು, ದಾರಿಯಲ್ಲಿ ಶಿಷ್ಯರಿಂದ ಪ್ರಾರ್ಥಿತನಾಗಿ ಅಂಬೆಯೆಂಬ ಊರಲ್ಲಿ ಕೆಲವು ಕಾಲ ನಿಂತು, ಬಳಿಕ ಶ್ರೀಶೈಲಕ್ಕೆ ಹೋಗಿ ತಂದೆಯಾದ ಮಲ್ಲರಸನನ್ನು ಕಾಣಲು, ಅವನು—ನೀನು ಇನ್ನೂ ಏಏತ್ತು ವರ್ಷ ಭೂಲೋಕದಲ್ಲಿದ್ದು ಕಲ್ಯಾಣದಲ್ಲಿ ಧರ್ಮಸ್ಥಾಪನಾರ್ಥವಾಗಿ ಹುಟ್ಟುವ ಬಸವನೊಡನೆ ಕಾಲವನ್ನು ಕಳೆಯಬೇಕು—ಎಂದು ಮರಳಿ ಕಳುಹಿಸಿದನು. ಇವನ ಮಗ ಮಾಯಿದೇವನು ಅಂಬೆಯಲ್ಲಿದ್ದನು. ಇವನಿಗೆ ನರಸಿಂಹಬಲ್ಲಾಳನ ದಂಡನಾಯಕನಾದ ಕಮ್ಮೆಕುಲವಲ್ಲಭ ಗೌರಪನ ಅಕ್ಕ ಮಂಗಲೆಯನ್ನು ಕೊಟ್ಟು ಮದುವೆಮಾಡಿದ್ದರು. ಇವರ ಮಗನೇ ಕೆರೆಯಪದ್ಮರಸನು. ಇವನ ಹೆಂಡತಿ ದಂಡನಾಯಕ ಗೌರಪನ ಮಗಳಾದ ಮಾದೇವಿ. ಗೌರಪನ ಕಾಲಾನಂತರ ನರಸಿಂಹಬಲ್ಲಾಳನು ಪದ್ಮರಸನಿಗೆ ದಂಡೇಶಪದವಿಯನ್ನು ಕೊಟ್ಟು ಮಂತ್ರಿಯನ್ನು ಮಾಡಿಕೊಂಡನು.

ಪದ್ಮರಸನು ಗುರುಪರಂಪರೆಗೆ ಸೇರಿದವನು; ಚತುಶ್ಶಾಸ್ತ್ರಪಂಡಿತನು. ಈತನು ಬೇಲೂರಲ್ಲಿ ಒಂದು ಕೆರೆಯನ್ನು ಕಟ್ಟಿಸುವುದಕ್ಕಾಗಿ ದೊರೆಯ ಭಂಡಾರದಿಂದ 12,000 ಹೊನ್ನುಗಳನ್ನು ತೆಗೆದುಕೊಂಡು ಶಿವರೂಪಿಯಾದ ಒಬ್ಬ ಜಂಗಮಭುಜಂಗನಿಗೆ ಕೊಟ್ಟುಬಿಡಲು, ಜನರು ಈ ಸಂಗತಿಯನ್ನು ದೊರೆಗೆ ಹೇಳಿದಾಗ, ಅವನು ಪದ್ಮರಸನನ್ನು ಕರೆಯಿಸಿ ಕೇಳಲು, ಗರ್ದೆತೋಂಟಗಳೊಡನೆ ಕೆರೆ ಸಿದ್ಧವಾಗಿದೆ; ಬಂದು ನೋಡಬಹುದು—ಎಂದು ಹೇಳಿ ದೊರೆಯೊಡನೆ ಬೇಲೂರಿಗೆ ಹೋಗಿ ಅಲ್ಲಿ ಪವಾಡವನ್ನು ಮಾಡಿ ಕೆರೆಯನ್ನು ತೋರಿಸಿ, ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡಿದನು. ಇವನ ಧ್ಯಾನಬಲದಿಂದ ಗಂಗೆಯೇ ಅಂದು ಬಂದು, ಆಕಾಶದಿಂದ ಬಿದ್ದಿತು. "ಅಸಮಾಕ್ಷನಿಂದ ಬಿಟ್ಟಿಗೆ ಕಟ್ಟಿಸಿದ ಕತದಿ" ಈ ಕೆರೆಗೆ ಬಿಟ್ಟಿಸಮುದ್ರವೆಂದು ಹೆಸರು. ಇದನ್ನು ಕಟ್ಟಿಸಿದುದರಿಂದಲೇ ಈತನಿಗೆ ಕೆರೆಯಪದ್ಮರಸನೆಂಬ ಹೆಸರು ಬಂದಿತು.

ಬಳಿಕ ಪದ್ಮರಸನು ಮಂತ್ರಿಪದವನ್ನು ಬಿಟ್ಟು ಬೇಲೂರಲ್ಲಿಯೇ ಇರುತಿರಲು, ತ್ರಿಭುವನತಾತನೆಂಬ ಒಬ್ಬ ಆಂಧ್ರದೇಶದ ಬ್ರಾಹ್ಮಣನು ವಿಷ್ಣುವೇ ಪರದೈವನೆಂದು ಸ್ಥಾಪಿಸುತ್ತ ವಾದಿಗಳನ್ನು ಜಯಿಸಿಕೊಂಡು ದೋರಸಮುದ್ರಕ್ಕೆ ಬಂದು ಬಲ್ಲಾಳರಾಜನನ್ನು ಕಾಣಿಸಿಕೊಳ್ಳಲು, ದೊರೆ ಪದ್ಮರಸನನ್ನು ಕರೆಯಿಸಲು, ತ್ರಿಭುವನತಾತನಿಗೂ ಪದ್ಮರಸನಿಗೂ ವಾದವಾಗಿ ತ್ರಿಭುವನತಾತನು ಸೋತು, ಹಿಂದೆ ಮಾಡಿಕೊಂಡಿದ್ದ ಒಡಂಬಡಿಕೆಯ ಪ್ರಕಾರ ವೀರಶೈವದೀಕ್ಷೆಯನ್ನು ಹೊಂದಿ ಪದ್ಮರಸನಿಗೆ ಶಿಷ್ಯನಾದನು.

ತರುವಾಯ ಪದ್ಮರಸನು ಮಗನಾದ ಕುಮಾರಪದ್ಮರಸನಿಗೆ ಜ್ಞಾನೋಪದೇಶವನ್ನು ಮಾಡಿ, ಕಾಶಿಗೆ ಹೊರಡುವವನಾಗಿ ದಾರಿಯಲ್ಲಿ ಹಂಪೆಗೆ ಬಂದು, ಹರಿದೇವನನ್ನು ನೋಡಿ "ಉಮಾವರಂ ನಿಮ್ಮನಿಂದಿಂಗೆಂಟನೆಯ ದಿನಕೆ ತನ್ನೊಳ್ ನೆರಪಲಿರ್ದಪಂ; ಅಂತಜ್ಞಂ ನೀವೀಗಳೊರೆವೀಮಹಾಕಾವ್ಯಮಂ[1] ತಡೆಯದನಿತಜೊಳ್ ಪಾರವ್ಗೆದಿಪುದು" ಎಂದು ಹೇಳಿ ಕಾಶಿಗೆ ಹೋಗಿ ವಿಶ್ವನಾಥನಲ್ಲಿ ಐಕ್ಯವಾದನು.[2]

ಕೆರೆಯಪದ್ಮರಸನು ತ್ರಿಭುವನತಾತನೊಡನೆ ವಾದಮಾಡುವುದಕ್ಕಾಗಿ ಬೇಲೂರಿಂದ ದೋರಸಮುದ್ರದ ನರಸಿಂಹಬಲ್ಲಾಳನ ಸಭೆಗೆ ಹೋದಾಗ ಅವನ ಜತೆಯಲ್ಲಿ, ದೋರಾಂಬುಧಿಯ **ರಾಮಣ್ಣ,** ಉಭಯಕವಿಶರಭಭೇರುಂಡನೆನಿಪ ಕವೀಂದ್ರ **ರಾಘವ,** ಹುಲಿಗೆರೆಯ **ಮಾಯಿದೇವ** ಪುರಾಣಭಟ್ಟ, ಗುರುಭಕ್ತ ಕಾಮಣ್ಣ, ವಿಶ್ವಣ್ಣ, ಉದ್ಧತಶಾಸ್ತ್ರನಿಕರಭಂಜನ ನಾಗನಾಥಾರ್ಯ, ಅತಿರಸಿಕ **ಕರ್ಣಾಭರಣ** ಬುಧವರ, ಪದವಾಕ್ಯಪ್ರಮಾಣಜ್ಞ **ದೇವರಸ** ಪಂಡಿತ. ಅನೇಕಕಲಾವಿದ ಹಂಪೆಯ **ರಾಮಿತಂದೆ,** ಜಗದಾರಾಧ್ಯ **ನಾಗಿದೇವ,** ಅಷ್ಟಭಾಷಾಕವೀಶ್ವರ **ಶಿವದಾಸ,** ಶೈವವಿರುದ್ಧ ಮತದಾವದಾವ **ದಾವರಸ, ಶರಣಕವಿ** ಮೊದಲಾದ ಪಂಡಿತರು ಹೋದರು.[3]

ಪದ್ಮರಸನು ನರಸಿಂಹಬಲ್ಲಾಳನ[4] ಸಭೆಯಲ್ಲಿ ಶಿವಾದ್ವೈತಸಾಕಾರಸಿದ್ಧಾಂತ ಸಾನಂದಚರಿತ್ರವೆಂಬ ಸಂಸ್ಕೃತಗ್ರಂಥವನ್ನು ರಚಿಸಿ ತ್ರಿಭುವನತಾತನನ್ನು ವಾದದಲ್ಲಿ ಜಯಿಸಲು ಸಭೆಯಲ್ಲಿದ್ದ ಸಕಲವಿದ್ವಾಂಸರೂ ಈ ರೀತಿಯಾಗಿ ಈತನನ್ನು ಶ್ಲಾಘಿಸಿದಂತೆ ತಿಳಿಯಬರುತ್ತದೆ:—

---

1. ಇದೇ ಗಿರಿಜಾಕಲ್ಯಾಣವಾಗಿರಬೇಕು.

2. ಇಲ್ಲಿ ಹೇಳಿರುವುದಕ್ಕೂ ಚೆನ್ನಬಸವಪುರಾಣದಲ್ಲಿ ಹೇಳಿರುವುದಕ್ಕೂ ಸ್ವಲ್ಪ ವ್ಯತ್ಯಾಸವಿದೆ.

3. ಪದ್ಮರಸನ ಜತೆಯಲ್ಲಿ ಹೋದ ಜನರು ಉದ್ಧಟಸ್ತುತಿ, ಬಸವಗೀತೆ, ಹರೀಶಾದಿಗಳ ಗದ್ಯ ಪದ್ಯ ಪ್ರಬಂಧಗಳು ಇವುಗಳನ್ನು ಪಠಿಸುತ್ತ ಹೋದಂತೆಯೂ ಹೇಳಿದೆ.

4. ತರೀಕೆರೆಯ 17 ನೆಯ ಶಾಸನದಲ್ಲಿ ಈ ರಾಜನನ್ನು "ಮಾಹೇಶ್ವರಸಮಯಪ್ರತಿಪಾಳಕ" ಎಂದೂ, ಬೇಲೂರು 177 ನೆಯ ಶಾಸನದಲ್ಲಿ "ಗಮಕಿಜನಜನಿತಶಾಸ್ತ್ರಾರ್ಥ..... ಸಮೂಹ ಸಂಪಾದಿತ ಮಹಾವಾದವಿಚಾರಾಚಾರ್ಯಂ" ಎಂದೂ ವಿಶೇಷಿಸಿ ಬರೆದಿದೆ.

ದೋರಸಮುದ್ರಮೆಂಬ ಪೆಸರಿಂ ಕರಮೊಪ್ಪುವ ರಾಜಧಾನಿಯೊಳ್ ।
ಧೀರನೃಸಿಂಹಭೂವರನಹೋ ಮಹಿಯಂ ಪರಿಪಾಲಿಸುತ್ತಿರ ॥
ಲ್ಕಾರಸೆಯಾಜ್ಞೆನೋಲಗಕೆ ಬಂದನಗುರ್ವಿಸುತಾಂಧ್ರದೇಶದಿಂ ।
ಶೌರಿಯ ಭೃತ್ಯನೋವೊ ಭುವನತ್ರಯತಾತನೆನಿಪ್ಪನೊರ್ವನಂ ॥
ಶಿವನಿಲ್ಲಾ ಶಿವಭಕ್ತಿಯಿಲ್ಲ ಶಿವಸಿದ್ಧಾಂತಂ ದಲಿಲ್ಲಾ ಮತಂ ।
ಸುವಿಚಾರಸ್ಥಿತಿಗಿಲ್ಲ ನಾಡೆ ವನಜಾಕ್ಷಂ ದೈವಮಾವೈಷ್ಣವಂ ॥
ಸುವಿಶಾಲಂ ನಿಜಭಕ್ತಿಗೆಂದೆನುತೆ ಪತ್ರಾಲಂಬನಂಗೆಯ್ದ ತ ।
ದ್ಭುವಿಯಂ ಪದ್ಮರಸಾರ್ಯರೋಡಿಸಿದರೀಸಾನಂದಚಾರಿತ್ರದಿಂ ॥
ಪಿಂದೆ ಸಮಸ್ತನೀಲಪಟಸಾಂಖ್ಯರ ಬೌದ್ಧರ ಜೈನಭೇದದೊಳ್ ।
ಸಂದರ ಭಾಟ್ಟತಾರ್ಕಿಕರ ಕೂಡತಿವಾದಿಸಿ ಸೊರ್ಕಿ ಸೂಕ್ತಿಯ ॥
ಲ್ಲೊಂದದಬದ್ಧವಾದಿಯೆನಿಪುದ್ಧತವೈಷ್ಣವನಂ ವಿಭಾಡಿಸು ।
ತ್ತಿಂದುಧರಪ್ರತಿಷ್ಠೆಯನೆ ಪದ್ಮರಸರ್ ನೆಗಜ್ಚಿರ್ ಧರಿತ್ರಿಯೊಳ್ ॥

ಇದೂ ಅಲ್ಲದೆ ಮೇಲೆ ಹೇಳಿದ ಪಂಡಿತರು ಒಬ್ಬೊಬ್ಬರೂ ಪದ್ಮರಸನನ್ನು ಶ್ಲಾಘಿಸಿ ಸಂಸ್ಕೃತದಲ್ಲಿಯೂ ಕನ್ನಡದಲ್ಲಿಯೂ ಪದ್ಯಗಳನ್ನು ಹೇಳಿದಂತೆ ತಿಳಿಯುತ್ತದೆ. ಈ ಪಂಡಿತರಲ್ಲಿ ಕನ್ನಡದಲ್ಲಿ ಬರೆದಿರುವವರ ಪದ್ಯಗಳನ್ನು ಅವರವರ ಚರಿತದಲ್ಲಿ ಬರೆದಿದ್ದೇವೆ.[1]

ಈ ಕವಿಗೆ ಸಕಲಶಾಬ್ದಿಕಸಾರ್ವಭೌಮ, ಉದ್ಧತವಾದಿಸಿಕರನೇಶ್ಯಾ ಭುಜಂಗ, ತಾರ್ಕಿಕಚಕ್ರವರ್ತಿ, ಶಿವಾದ್ವೈತಸಾಕಾರಸಿದ್ಧಾಂತಪ್ರತಿಷ್ಠಾಪನಾ ಚಾರ್ಯ, ಶರಣಕವಿ, ಭವಿದೂರ ಎಂಬ ಬಿರುದುಗಳಿದ್ದಂತೆ ತಿಳಿಯುತ್ತದೆ.

ಇವನ ಗ್ರಂಥ

## ದೀಕ್ಷಾಬೋಧೆ.

ಇದು ಪ್ರಾಯಶಃ ರಗಳೆಯ ರೂಪವಾಗಿದೆ; ಅಲ್ಲಲ್ಲಿ ಕಂದವೃತ್ತಗಳೂ ಇವೆ; ಸ್ಥಲ 3, ಗ್ರಂಥ 360, ವೃತ್ತ ಕಂದ ಉಭಯ 385. ಇದರಲ್ಲಿ ವೀರಶೈವ ದೀಕ್ಷೆಯನ್ನು ಕೈಕೊಳ್ಳುವುದಕ್ಕೆ ಬೇಕಾದ ವಿಷಯಗಳು ಗುರುಶಿಷ್ಯಸಂವಾದ ರೂಪವಾಗಿ ವಿವರಿಸಲ್ಪಟ್ಟಿವೆ. ಅಲ್ಲಲ್ಲಿ ಸಂಸ್ಕೃತಶ್ಲೋಕಗಳು ಪ್ರಮಾಣತ್ವೇನ ಅನುವಾದವಮಾಡಲ್ಪಟ್ಟಿವೆ. ಈ ವಿಷಯವನ್ನೇ **ಪದ್ಮಣಾಂಕನು** (ಸು. 1385) ಈ ಪದ್ಯಭಾಗದಲ್ಲಿ ಸಂಗ್ರಹವಾಗಿ ತಿಳಿಸಿದ್ದಾನೆ:—

ಓಪ ಶಿಷ್ಯನ ಬೋಧಿಸಿದ ರೀತಿಯಿಂದೆ ರಘ ।
ಟಾಪದ್ಧತಿಯೊಳುಜಿ ಸಸಾಕ್ಷಿಕಂ ವೀರಶೈ ।
ಪೋಪಕಾರಾರ್ಥವಿಂಪಮರೆ ದೀಕ್ಷಾಬೋಧವೆಂಬ ಕೃತಿಯಂ ರಚಿಸಿದಂ ॥

1. ಪುಟ 250.

ಈ ಗ್ರಂಥದಲ್ಲಿ ಲಲಿತರಗಳೆಯೂ ಮಂದಾನಿಲರಗಳೆಯೂ ದೊರೆಯುತ್ತವೆ. ಆರಂಭದಲ್ಲಿ ವಿಶ್ವನಾಥಸ್ತುತಿ ಇದೆ. ಇದರಿಂದ ಕೆಲವು ಭಾಗಗಳನ್ನು ಉದ್ಧರಿಸಿ ಬರೆಯುತ್ತೇವೆ:—

## ಶಿವಭಕ್ತನ ನಡತೆ.

ಉಚ್ಚಾಹಶಿವಭಕ್ತಿಯುಚ್ಚಟ್ಟಾಯದಿರಬೇಕು । ನಿಚ್ಚಟದ ನಿಷ್ಠ ದೃಢ ಕೆಚ್ಚುಗೊಂಡಿರ
ಬೇಕು ।

ನಿಯತವಪ್ಪಾಚಾರಸಮಯ ತಾನಿರಬೇಕು । ನಯದ ವಾಕ್ಯಂ ದಯವು ದಾಕ್ಷಿಣ್ಯ
ವಿರಬೇಕು ।

ದಂಭವಮಾತ್ಸರ್ಯಕ್ಕೆಯಿಂಬುಗುಡದಿರಬೇಕು । ಶಂಭುಪದಭಕ್ತ ನೆಂಬುಗೆಯ ಹಂಬಲು
ಬೇಕು ।

ಪದಪಾಣಿಗುದಗುತ್ಯಕರ್ಮೇಂದ್ರಿಯಗಳಲ್ಲಿ । ಬಿದಜಿದವ ಧಟ್ಟಿಸುವ ಅದಟುಬೇಕನ
ಜಲ್ಲಿ ।

ಸೂಸಲೀಯದೆ ಮನವನೀಶನಾಸದೊಳಿರಿಸಿ । ಬೀಸರಾಗದೆ ಚಿತ್ತಮಂ ವಿಾಸಲಾಗಿರಿಸಿ ।
ಹೀನದೀನತ್ವದುಮ್ಮಾನಮಂ ಬಿಡಬೇಕು । ಜ್ಞಾನಗುರುಭಕ್ತಿತದಾರ್ಢ್ಯನನಾಗಿರಬೇಕು
॥ 541 ॥

## ಚಿತ್ತಚಾಪಲ್ಯ.

ಒಂದು ಹೊತ್ತಿಂಗೊಂದು ಪರಿಯಹುದು ಈಮನಂ । ಬೆಂದ ವಿಷಯಂಗಳಂ ಬಿಟ್ಟು
ಬಿಡದೀಮನಂ ।

ಒಚ್ಚಿಹೊತ್ತಿಗೆ ಭಕ್ತಿಯುಚ್ಚಿಯಹುದೀಮನಂ । ಬೆಚ್ಚಿ ಮತ್ತೊಲ್ಲೆನೆಂದಚ್ಚಟ್ಟಾವುದೀ
ಮನಂ ।

ಒಡಲೊಡವೆಮಡದಿಯರ ತೊಡರಿರ್ಪುದೀಮನಂ । ಕಡೆಗೆ ಮೃಡಭಕ್ತಿದೃಢವಿಡಿಯದಿ
ಹುದೀಮನಂ ॥ 542 ॥

## ಕುಲಮದನಿರಸನ.

ಕುಲಮಂ ವಿಚಾರಿಪೊಡೆ ಸಲವಿಲ್ಲ ಫಲವಿಲ್ಲ । ನೆಲೆಯನಜಂಪೊಡೆ ಶುದ್ಧಹೊಲೆಯೆಂಬುದೆ
ಕುಲವಲ್ಲ ।

ಕಾಯಕ್ಕೆ ಕುಲವೊ ಜೀವಕ್ಕೆ ಕುಲವೋ ಪೇಳ್ಪು । ಈ ಯೆರಡಜಂಹೊಳಗೆ ಇನ್ನಾವುದಕೆ
ಕುಲ ಪೇಳ್ಪು ।

ಕಾಯವಾದೊಡೆ ಶುದ್ಧಹೊಲೆಯಾಗಿ ಕುಲವಿಲ್ಲ । ವಾಯುವಹ ಜೀವ ನಿರವಯನಾಗಿ
ಕುಲವಿಲ್ಲ ।

ತಂದೆತಾಯಿಗಳುಭಯಬಿಂದುಸಂಪುಟದಿಂದ । ಬಂದೆನೆಂಬೊಂದು ಮದವೈಸೆ ನೀ
ನುಡಿವಂದ ॥

ಅಕ್ಕಟೀಕುಲವಿಡಿದು ಸತ್ಕುಲಕೆ ಹೋರುವರೆ । ದಕ್ಕಿದೊಡೆ ಶುದ್ಧಹೊಲೆಗಿಕ್ಕಿ
ಮಾತಾಡುವರೆ ॥ 543 ॥

## ಮಮಕಾರನಿರಸನ.

ಒಡವೆಯಾರದು ಒಡೆಯರಾರೆಂಬುದನು ಅಱಿಯೆ । ಕಡುಲೋಭಿಜಡನೆಯಕಟಱಿ
ಯಲಾ ನರಗುಱಿಯೆ ।
ಕಟ್ಟೊಡೆಯತನವ ಬಲದಿಂತು ಹೋರುವೆ ನೀನು । ಹುಟ್ಟುವಾಗಲೆ ಧನವ ಕಟ್ಟಿ
ತಂದೆಯೊ ನೀನು ।
ನೀ ತಾರದೊಡೆ ನಿನ್ನ ತಾತ ತಂದನೊ ಇದಂ । ಎತಱಿಂದಾಯ್ತು ನಿನಗೊಡೆತನಂ
ಪೇಱಿದಂ ।
ಬರುತ ತಾರದೊಡೇನು ಆಯ್ತು ನಿನಗೆಂದೊಡಂ । ಹರಣದೊಡನೊಯ್ಯಬೇಡಾವೊಡೆ
ಯನಾದೊಡಂ ।
ಹುಟ್ಟುವಲೆ ತಾರೆ ಹೊಂದುವಲೊಯ್ಯೆ ಕಂಡಿದಕೆ । ನಟ್ಟನಡುವೆಹಗಾಯ್ತು ಒಡೆ
ತನಂ ಪೇಱಿದಕೆ ।
ನಿನದಾದೊಡೆ ನಿನ್ನ ವ್ಯಯಕೆ ಸಲುತಿರದೇಕೆ । ಕನ್ನದಿಂ ನೃಪದಾಯರಿಂದ ಸರಿಯಲದೇಕೆ ।
ಹೋಗುತ್ತ ತನ್ನಳತೆಯಲಿ ತಾನೆ ಹೋದುದೇ । ಬೇಗೆಯುಂ ನಿನ್ನ ಹರಣವನೊಯ್ಯ
ದಾದುದೇ ।
ಇದುಕಾರಣಂ ನಿನ್ನ ಸೊಮ್ಮಲ್ಲ ಎಲೆಮರುಳೆ । ಕುದಿದು ಕೋಟಲೆಗೊಂಡೊಡಂ
ಇಲ್ಲ ಎಲೆಮರುಳೆ ॥ 544 ॥

## ಪರತತ್ವಸ್ವರೂಪ.

ಸಕಲತತ್ವಂಗಳಿಗೆ ಯುಕುತಿಗೊಳಗಾಗದದು । ಅಖಿಳನಿಗಮಾಗಮವು ಮುಖವಿಡಲು
ಬಾರದದು ।
ಹರಿಯಜಸುರಾಸುರರು ಪರಿಕಿಸಲು ಬಾರದದು । ಚೆರನಿ ನೀರಕ್ಷೀರದಿರವಿದ್ದು ಇಲ್ಲ
ದುದು ।
ದೂರವೆನಬಾರದದು ಸಾರೆಯೆನಬಾರದದು । ಆರಿಗಳವಡುವುದು ವಿಚಾರಕೊಳ
ಗಾಗದದು ।
ಸಕಲವೆಂಬುದು ತಾನು ನಿಃಕಲವೆನಲು ತಾನು । ಸಕಲನಿಃಕಲವೆನಿಸಿಯೆನಿಸದಿರ್ಪ್ಪುದು
ತಾನು ।
ಒಳಗೆಂದೊಡಂ ತಾನು ಹೊಱಗೆಂದೊಡಂ ತಾನು । ಒಳಗುಹೊಱಗಱ್ರಿದ ಬಱು
ಬೆಳಗಿನ ಬೆಳಗು ತಾನು ।
ಸಕಲಭೂತಂಗಳಂತರ್ಯಾಮಿಯೆನಿಸಿರ್ಪ್ಪ । ಭಕುತರಿಗೆ ಸುಲಭನುಱ್ರಿದರಿಗಸಾಧ್ಯನು
ಮಪ್ಪ ।
ಅಂತು ಸರ್ವಾಂಗಮಯಮಾದ ಮಹಲಿಂಗಮಂ । ಅಂತುವಂ ತಿಳಿ ನಿನ್ನೊಳಿಹ
ಭಾವಸಂಗಮಂ ॥ 545 ॥

## ಕೆರೆಯಪದ್ಮರಸನನ್ನು ಸ್ತುತಿಸಿದ ಕನ್ನಡ ಕವಿಗಳು.

ಕೆರೆಯಪದ್ಮರಸನು ನರಸಿಂಹಬಲ್ಲಾಳನ ಸಭೆಯಲ್ಲಿ ತ್ರಿಭುವನತಾತನನ್ನು ವಾದದಲ್ಲಿ ಜಯಿಸಿದಾಗ ಅವನನ್ನು ಕನ್ನಡ ಪದ್ಯಗಳಿಂದ ಶ್ಲಾಘಿಸಿದ ಕವಿಗಳ ಹೆಸರುಗಳನ್ನೂ ಅವರು ಮಾಡಿದ ಪದ್ಯಗಳನ್ನೂ[1] ಇಲ್ಲಿ ಬರೆಯುತ್ತೇವೆ. ಇವರೆಲ್ಲರೂ ವೀರಶೈವಕವಿಗಳು. ಇವರಲ್ಲಿ ರಾಘವ ಎಂಬವನಿಗೆ ಹೇಳಿರುವ ಬಿರುದಿನಿಂದ ಅವನು ರಾಘವಾಂಕನೇ ಎಂಬುದರಲ್ಲಿ ಸಂದೇಹವಿಲ್ಲ. ಉಳಿದವರ ವಿಷಯವಾಗಿ ನಮಗೆ ಇನ್ನೇನೂ ತಿಳಿಯದು. ಈ ಪದ್ಯಗಳನ್ನು ನೋಡಿದರೆ ಎಲ್ಲರೂ ಒಳ್ಳೆಯ ಕವಿಗಳಾಗಿದ್ದಂತೆ ತೋರುತ್ತದೆ; ಆವ ಗ್ರಂಥಗಳನ್ನು ಬರೆದಿರಬಹುದೋ ತಿಳಿಯದು.

### ದೋರಾಂಬುಧಿಯ ರಾಮಣ್ಣ. ಸು. 1165.

ದೋರಾಂಬುಧಿ ಅಥವಾ ದೋರಸಮುದ್ರ ಎಂದು ಹಳೆಯಬೀಡಿಗೆ ಹೆಸರು.

ಪ್ರಭುತೆಯ ಪೆರ್ಮೆಗಮಾಮಾ । ತ್ರಿಭುವನತಾತಾಖ್ಯೆಯಾಂತ ವೈಷ್ಣವನುದ್ಯ ।
ದ್ವಿಭುಪದ್ಮಣಾರ್ಯರೊಳ್ ಸೋ । ಲ್ತಭಯಮನೆರೆದಂಘ್ರಿಗೆಜ್ಜಗಿದಂ ನೃಪಸಭೆ
ಯೊಳ್ ॥ 546 ॥

### ಉಭಯಕವಿಶರಭಭೇರುಂಡ ರಾಘವ.[2] ಸು. 1165.

ಮಿಹಿರಂಗೆ ತಿಮಿರಮಿದಿರೇ । ಸಹಜಕ್ಕೆ ಠಮಾಳಮಿದಿರೆ ಪದ್ಮರಸಾರ್ಯಂ ।
ಗಹಹಾ ತ್ರಿಭುವನತಾತಂ । ಬಹುವಿಧದಿಂ ಬಗೆಯಲಿದಿರೆ ತಾನೇ ಕೆಟ್ಟಂ ॥ 547 ॥

### ಹುಲಿಗೆರೆಯ ಮಾಯಿದೇವ ಪುರಾಣಭಟ್ಟ. ಸು. 1165.

ತನುವೆಂಟುಂ ಶಿವನವು ತ । ತ್ತನುವಿನೊಳಮರ್ದಿರ್ದು ಬೇಱೆ ದೈವಂ ಸಮಯಂ ।
ತನಗೆಂಬ ತಲೆಗಳನೆ ತಱಿ । ದೆನಗಂ ಚಿಂಡಾಡಲಾಯ್ತು ಮನಮುಶ್ಶಾಂತಂ ॥ 548 ॥

### ಅತಿರಸಿಕ ಕರ್ಣಾಭರಣ ಬುಧವರ. ಸು. 1165.

ಪರಸಮಯಾಂಧಕಾರಘನಚಂಡಕರಂ ಹರಿಯೆಂದು ಸಾಱಿ ಧಿ ।
ಕ್ಕರಿಸುವ ವಾದಿಯಂ ಸಕಲವೇದಪುರಾಣಪುರಾತನೋಕ್ತಿಯಿಂ ॥
ದೊರಸುವೊಡುರ್ವರಾತಳದೊಳೊರ್ವನೆ ಶೈವತಟಾಕಪ ।
ದ್ಮರಸನನಂತಶಾಸ್ತ್ರಸರಸಂ ಚಿರಸಂ ಪರದೈವಜೀವರಂ ॥ 549 ॥

---

1 ಈ ಪದ್ಯಗಳು ಕೆರೆಯಪದ್ಮರಸನ ಮಗನಾದ ಕುಮಾರಪದ್ಮರಸನ ಸಾನಂದಚರಿತ್ರದ ಉಪೋದ್ಘಾತದಲ್ಲಿ ದೊರೆಯುತ್ತವೆ.

2. ಪುಟ 235.

ಲತೆಯುಂ ಖಗಮುಂ ಮೃಗಮುಂ । ಸತಿಯರುಮುಂ ಪೊಗಟ್ಪುವ ಕವಿತೆಯುಂ ನೀಗದೆ ಪಾ ।
ರ್ವತಿಯರಸನನೇ ಪೊಗಟ್ಪಂ । ಕ್ಷಿತಿಯೊಳ್ ಪದ್ಮರಸಶರಣಕವಿ ಭವಿದೂರಂ ॥ 550 ॥

**ಸುಕವಿಕರ್ಣಾಭರಣ** ಎಂದು ಮುಗಿವ ಕೆಲವು ನೀತಿಬೋಧಕವಾದ ಪದ್ಯಗಳು ದೊರೆಯುತ್ತವೆ. ಇವು ಈ ಕವಿಯಿಂದ ರಚಿತವಾಗಿರಬಹುದೋ ಏನೋ ತಿಳಿಯದು. ಒಂದು ಪದ್ಯವನ್ನು ಉದಾಹರಿಸುತ್ತೇವೆ :—

### ಪಾತಿವ್ರತ್ಯ.

ಬೇಲಿತಳಿಗೊಂಟೆಮದಿಲುಗ । ಳೋಲ್ಪಿಸುವ ಕಾಪಿನಾಳು ಮೆಯ್ಗಾಪಿನವರ್ ।
ಬಾಲೆಯರಂ ಕಾವರೆ ಸಜ । ಶೀಲಮೆ ಕಾದಪುದು ಸುಕವಿಕರ್ಣಾಭರಣಾ ॥ 551 ॥

## ಪದವಾಕ್ಯಪ್ರಮಾಣಜ್ಞ ದೇವರಸಪಂಡಿತ. ಸು. 1165.

ಏಕೆ ಬಿಡು ಮತ್ತೆ ಗಟ್ಟಿಪದಿ । ರೇಕೋ ರುದ್ರೋ ದಲೆಂಬ ಸುತಿವಿಡಿದೆಲ್ಲಾ ।
ಕಾಕುಮತಂಗಳನಲೆದು ನಿ । ರಾಕರಿಸಿದ ಸತ್ಯಶರಣಕವಿಗಿದಿರುಂಟೇ ॥ 552 ॥

## ಹಂಪೆಯ ರಾಮಣ್ಣ ಅಥವಾ ರಾಮಿತಂದೆ. ಸು. 1165.

ಇವನಿಗೆ "ಅನೇಕ ಕಲಾವಿದ" ಎಂಬ ವಿಶೇಷಣವು ಹೇಳಿದೆ.

ಗುರುವಂ ಹರನಂ ಪಂಚಾ । ಕ್ಷರಿಯಂ ರುದ್ರಾಕ್ಷಿಯಂ ವಿಭೂತಿಯನೊಲ್ಪಾ ।
ದರಿಪರ್ ಶರಣಕವಿಯ ಪ । ದ್ಮರಸರ ಸಾನಂದಚರಿತೆಯೋದುಗೆ ಶರಣರ್ ॥ 553 ॥

## ಜಗದಾರಾಧ್ಯ ನಾಗಿದೇವ. ಸು. 1165.

ಪರವಾದಿಧ್ವಾಂತಸೂರ್ಯಂ ಕೆರೆಯಪದುಮರಾಜಂ ಸ್ವಗುರ್ವಾಜ್ಞೆಯಿಂದೀ ।
ಶ್ರೀರಭಕ್ತರ್ ಮೆಚ್ಚಿಯಾಹಾ ವಿರಚಿಸಿದ ಶಿವಾದ್ವೈತಸಾಕಾರಸಿದ್ಧಾಂ ॥
ತರಸಂ ಸಾನಂದಚಾರಿತ್ರಮನೆ ಪಸರಿಸುತ್ತಿರ್ಪುದೀಕ್ಷೋಣಿಗೆಂದಂ ।
ಗುರುಭಕ್ತಂ ಕಾರಣಾತ್ಮಂ ವರಗುಣಿ ಜಗದಾರಾಧ್ಯನಾನಾಗಿದೇವಂ ॥ 554 ॥

ಸಂದ ಪುರಾಣದಾಗಮದ ವೇದದ ಶೈವಕಥಾವಿತಾನದೊಳ್ ।
ಕುಂದಿನಿತಿಲ್ಲ ಸೇರುವೆ ಚಮತ್ಕೃತಿಯಾದುದು ಮಾಮಯ್ಯುಯ್ಯಲೇ ॥
ಸೆಂದು ಸಮಸ್ತಸತ್ಕವಿಜನಂ ಪೊಗಟ್ಪುತ್ತಿರೆ ಪೇಟ್ಪಿನೆಯ್ದೆ ಸಾ ।
ನಂದಚರಿತ್ರಮಂ ಕೆರೆಯಪದ್ಮರಸಂ ಬಹುಶಾಸ್ತ್ರಕೋವಿದಂ ॥ 555 ॥

ಛಂದದ ಪೌರಾಣಾಗಮ । ವ್ಯಂದದ ಹೃದಯಮುದು ಶೈವಪದಮೆಂದೆನೆ ಸಾ ।
ನಂದಚರಿತ್ರಮನೊರೆದಂ । ಸಂದಿಸಿ ಪದ್ಮರಸಶರಣಕವಿ ಭವಿದೂರಂ ॥ 556 ॥

ಹರನ ಸಮಗ್ರಭಕ್ತಿ ನೆಲೆಗೊಂಡ ಪುರಾತನಕೇಶಿರಾಜಬಾ ।
ಚರಸರ ಚೊಕ್ಕನಾಯರ ದಧೀಚಿಯ ಶಂಕರದಾಸಿಮಯ್ಯನೆಂ ॥

ಬರ ವರತೇಜದಂತೆ ಮಲೆವನ್ಯಮತಾಂಧರನೊಕ್ಕಲಿಕ್ಕುವಂ ।
ಶರಣಕವೀಶ್ವರಂ ಕೆರೆಯಪದ್ಮರಸಂ ಪ್ರತಿವಾದಿಭಂಜನಂ ॥ 557 ॥

ತರುಗಿರಿಲತೆನಾರಿಯರಂ । ಮುರಹರನಂ ಪೊಗಟ್ಪಿ ಕಥೆಯನಾಲಿಪರಲ್ಲದೆ ।
ಪುರಹರನ ಕಥೆಯನೊಲ್ಲರ್ । ಹರಹರ ಕರಮರಿದು ಶರಣಕವಿ ಭವಿದೂರಂ ॥ 558 ॥

## ಅಷ್ಟಭಾಷಾಕವೀಶ್ವರ ಶಿವದಾಸ. ಸು. 1165.

ಮೃಡಭಕ್ತಿಪಥದ ಸಾರಂ । ಮೃಡನೊಡನೆಣೆಗಾಣ್ಬನೊಡಲ ಸುಡುವತಿಧೀರಂ ।
ಜಡರಜ್ಞಾನನಿವಾರಂ । ಕಡುಗಲಿ ಪದ್ಮರಸಶರಣಕವಿ ಭವಿದೂರಂ ॥ 559 ॥

## ದಾವರಸ. ಸು. 1165.

ಇವನಿಗೆ "ಶೈವವಿರುದ್ಧಮತದಾವದಾವ" ಎಂಬ ವಿಶೇಷಣವು ಉಪಯೋಗಿಸಿದೆ.

ಏಕ್ಕೈಕವೀರನೊರ್ವನೆ । ಏಕೋರುದ್ರನ ಲಲಾಟನೇತ್ರದೊಳೊಗೆದಂ ।
ದೇಕೆ ಶಿವನೆಂಬ ದಕ್ಷಂ । ಗಾಕುಜ್ಞದಲೆಯಿತ್ತನವನ ಪಡಿ ಪದ್ಮರಸಂ ॥ 560 ॥

## ಶರಣಕವಿ. ಸು. 1165.

ಒಳ್ಳೆಗಳುಂ ಗರಳದ ಕರಿ । ಗೊಳ್ಳಿಗಳುಂ ಕೈಪೆಸೊರೆಯ ಬಳ್ಳಿಗಳುಂ ಚಿಃ ।
ಟೊಳ್ಳಿಗಳುಂ ದೈವಾಖ್ಯಕೆ । ಕಳ್ಳರ್ ಗುರುರೂಪವಿಶ್ವನಾಥಂಗೆಣೆಯೇ ॥ 561 ॥

ಅಬ್ಬಲೂರಲ್ಲಿರುವ ಒಂದು ಶಾಸನವನ್ನು [1] ಕೇಶವರಾಜಚಮೂಪನು ರಚಿಸಿದಂತೆಯೂ ಸರಣನೆಂಬ ಕವಿ ತಿದ್ದಿ ಬರೆದಂತೆಯೂ ಆ ಶಾಸನದ ಅಂತ್ಯದಲ್ಲಿರುವ

ಕೇಶವರಾಜಚಮೂಪಂ । ಶಾಸನಮಂ ಪೇಳ್ದನಂತದಂ ತಿರ್ದಿ ನಿರಾ ।
ಯಾಸದೆ ಬರೆದವನೀಶನ । ದಾಸಂ ಶಿವಚರಣಕಮಲಶರಣಂ ಸರಣಂ ॥

ಎಂಬ ಪದ್ಯದಿಂದ ತಿಳಿಯುತ್ತದೆ. ಈ ಶಾಸನವು ಸುಮಾರು 1195 ರಲ್ಲಿ ಬರೆದುದು. ಮೇಲೆ ಹೇಳಿದ ಶರಣಕವಿ ಈ ಸರಣನೇ ಆಗಿರಬಹುದೋ ಏನೋ ತಿಳಿಯದು.

---

## ತಿಪ್ಪಣೋಜ. 1169.

ಬಾಂಬೆ ಬ್ರಾಂಚ್ ರಾಯಲ್ ಏಷ್ಯಾಟಿಕ್ ಸೊಸೈಟಿ ಜರ್ನಲೊಳಗೆ [2] ಅಚ್ಚಾಗಿರುವ ಒಂದು ಕನ್ನಡ ಶಾಸನದ ಕೊನೆಯಲ್ಲಿರುವ

ಭರತಾಗಮಶಾಸ್ತ್ರಕಳಾ । ಪರಿಣತಿಯೊಳ್ ವರ್ಣಕವಿತೆಯೊಳ್ ದಾನಗುಣೋ ।
ತ್ಕರದೊಳ್ ಸರಿಯಾರ್ ವಂಕೇ । ಶ್ವರದೇವರ ತಿಪ್ಪಣೋಜನೊಳ್ ಭೂತಲದೊಳ್ ।

---

[1] *Epi. Ind.*, V, 245. [2] Vol. IX, 294.

ಎಂಬ ಪದ್ಯದಿಂದ ಈತನು ಕವಿಯಾಗಿದ್ದಂತೆ ತಿಳಿಯುತ್ತದೆ. ಈ ಶಾಸನದಲ್ಲಿ— ಗೋಪಕ (Goa) ಪಟ್ಟಣದಲ್ಲಿ ಆಳುತ್ತಿದ್ದ ಕದಂಬರಾಜರಲ್ಲಿ ಪೆರ್ಮಾಡಿ ಅಥವಾ ಶಿವಚಿತ್ತ ಎಂಬ ರಾಜನ ಹೆಂಡತಿಯಾದ ಕಮಲಾದೇವಿ ಒಂದು ದೇವಸ್ಥಾನವನ್ನು ಕಟ್ಟಿಸಿದಂತೆ ಹೇಳಿದೆ. ಈ ಶಿವಚಿತ್ತನು 1169 ರಲ್ಲಿ ಆಳುತ್ತಿದ್ದಂತೆ ಇದೇ ಜನ್ನ ಲೊಳಗಿರುವ ಇತರ ಶಾಸನಗಳಿಂದ ತಿಳಿವುದರಿಂದ ಈ ತಿಪ್ಪಣೋಜನು ಆ ಕಾಲ ದವನಾಗಿರಬೇಕು.

---

## ಬಾಲಚಂದ್ರ. ಸು. 1170.

ಈತನು ಜಿನಸ್ತುತಿಯನ್ನು ಬರೆದಿದ್ದಾನೆ. ಇದಲ್ಲದೆ ಪ್ರಾಭೃತಕತ್ರಯ, ತತ್ತ್ವಾರ್ಥ, ಪರಮಾತ್ಮಪ್ರಕಾಶಿಕೆ ಮೊದಲಾದ ಗ್ರಂಥಗಳಿಗೆ ಕನ್ನಡ ವ್ಯಾಖ್ಯಾನ ಗಳನ್ನೂ ಬರೆದಿದ್ದಾನೆ.

ಇವನು ಜೈನಕವಿ: ಮೂಲಸಂಘದ ದೇಶೀಯಗಣದ ಪುಸ್ತಕಗಚ್ಛದ ಕುಂದಕುಂದಾನ್ವಯಕ್ಕೆ ಸೇರಿದವನು. ಇವನ ಗುರು 1176 ರಲ್ಲಿ ಗತಿಸಿದ ನಯಕೀರ್ತಿ[1]; ಅಣ್ಣ ದಾಮನಂದಿ[2]. ಇವನಿಗೆ ಅಧ್ಯಾತ್ಮಿ ಬಾಳಚಂದ್ರನೆಂದು ಹೆಸರು. ಈತನು 1181 ರಲ್ಲಿ ಬದುಕಿದ್ದಂತೆಯೂ[3] **ಸುಜನೋತ್ತಂಸ**ನೆಂಬ ಬಿರುದುಳ್ಳ **ಬೊಪ್ಪಣಪಂಡಿತ**ನಿಂದ ಗೊಮ್ಮಟಸ್ತುತಿಯನ್ನು ಬರೆಯಿಸಿದಂತೆ ಯೂ[4] ತಿಳಿಯಬರುತ್ತದೆ. ಈತನನ್ನು ಸ್ತುತಿಸುವ ಪದ್ಯಗಳು ಶಾಸನಗಳಲ್ಲಿ ಅನೇಕವಿವೆ. ಬೊಪ್ಪಣಪಂಡಿತನು ಈತನನ್ನು ಈ ರೀತಿಯಾಗಿ ಸ್ತುತಿಸಿದ್ದಾನೆ:—

ವರಸೈದ್ಧಾಂತಿಕಚಕ್ರೇ । ಶ್ವರನಯಕೀರ್ತಿವ್ರತೀಂದ್ರಶಿಷ್ಯಂ ನಿಜಚಿ ।
ತ್ಪರಿಣತನಧ್ಯಾತ್ಮಕಳಾ । ಧರನುಜ್ವಳಕೀರ್ತಿ ಬಾಲಚಂದ್ರಮುನೀಂದ್ರಂ ॥

### ಸಮಯಸಾರ ಪ್ರಾಭೃತ ವ್ಯಾಖ್ಯಾನದ ಕೊನೆಯಲ್ಲಿರುವ

ಇದು ಸಮಸ್ತಸೈದ್ಧಾಂತಿಕಚಕ್ರವರ್ತಿ ಶ್ರೀನಯಕೀರ್ತಿದೇವನಂದನ ವಿನಯಜನಾ ನಂದನ ನಿಜರುಚಿಸಾಗರನಂದಿಸರಮಾತ್ಮದೇವಸೇವಾಸಾದಿತಾತ್ಮಸ್ವಭಾವ ನಿತ್ಯಾನಂದ ಬಾಳ ಚಂದ್ರದೇವವಿರಚಿತ ಸಮಯಸಾರಪ್ರಾಭೃತಸೂತ್ರಾನುಗತ ತಾತ್ಪರ್ಯವೃತ್ತಿ

---

1. ಶ್ರ. ಬೆ. ಶಾ. 66.
2. ನಾಗಮಂಗಲ 70 (1178).
3. ಶ್ರ. ಬೆ. ಶಾ. 327.
4. ಶ್ರ. ಬೆ. ಶಾ. 234.

ಎಂಬ ಗದ್ಯದಿಂದ ಈತನು ನಯಕೀರ್ತಿಯ ಮಗನಲ್ಲಿ ಓದಿದವನೆಂದು ತಿಳಿಯುತ್ತದೆ. ಇವನು **ನಾಗಚಂದ್ರನ** ಗುರುವಲ್ಲವೆಂಬಂಶವನ್ನು ಹಿಂದೆಯೇ ಚರ್ಚಿಸಿದ್ದೇವೆ.[1]

ಇವನ ಗ್ರಂಥಗಳಲ್ಲಿ—

## 1. ಜಿನಸ್ತುತಿ.

ಈ ಗ್ರಂಥದಲ್ಲಿ ಸುಮಾರು 20 ಪದ್ಯಗಳಿವೆ. ಇದರ ಉತ್ಕೃಷ್ಟತೆಯನ್ನು ಕವಿ

ಆದುದು ಬಾಳಚಂದ್ರಮುನಿನಾಕ್ಕದೊಳಾಗಮದೋಜೆಯಿಂದಮಿಂ ।
ದ್ವಾದಶಭೇದದಿಂ ಜಿನಗುಣಸ್ತವನಂ . . ನಾತ್ಮತತ್ತ್ವಸಂ ॥
ಪಾದನಹೇತುವಪ್ಪುದಿದನೋದಿಸುತೋದುವ ಕೇಳುತರ್ಪವ।
ರ್ಗಾದರದಿಂದೆ ಮಾಡುವುದೆ ಮುಕ್ತಿಯನಕ್ಕಯಮುಂ ಜಿನೇಶ್ವರಾ ॥

ಎಂಬ ಕೊನೆಯ ಪದ್ಯದಲ್ಲಿ ಹೇಳಿದ್ದಾನೆ.

ಇದರಿಂದ ಎರಡು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

ಬೇಡಿದ ಭಂಗಿಯಿಂ ನೆಜಪಿದೆನ್ನ ಧನಂ ನವರತ್ನ ಸಂಚಯಂ ।
ನಾಡೆ ಮನಕ್ಕೆ ವರ್ಪ ವನಿತಾನಿಕರಂ ಕಮನೀಯಯವ್ವನಂ ॥
ನೋಡೊಡಲೆಂಬಿವಾವ ತೆಱದಿಂ ಕೆಡುಗುಂ ಕೆಡದೊಪ್ಪುವಾತ್ಮನೊಳ್ ।
ಕೂಡುವ ಚಿತ್ತಮಂ ಗುಣಗಣೋತ್ತಮಮಂ [ದಯೆಗೆಯ್] ಜಿನೇಶ್ವರಾ ॥562 ॥

ಏವುದು ರಕ್ತದಲ್ಲಿ ಸುಕುಲಂ ದೊರೆಕೊಂಡೊಡೆ ಬಂದು ಪುಟ್ಟುಗುಂ ।
ಜೀವನುಶುದ್ಧದೇಹದೊಳಗಾಯ್ತುದು ಭಾವಿಸೆ ಮಾಂಸಪಿಂಡಮೆಂ ॥
ಬೀವಿಧದಿಂ ವಿಚಾರಿಸಿ ನಿಜಾತ್ಮನೊಳಾದುದು ಶುದ್ಧಮೆಂಬುದಂ ।
ಭಾವಿಸುವಂದಮಂ ಭುವನವಂದಿತಮಂ ದಯೆಗೆಯ್ ಜಿನೇಶ್ವರಾ ॥ ॥563 ॥

## 2. ವ್ಯಾಖ್ಯಾನಗಳು.

ಈತನ **ಪಂಚಾಸ್ತಿಕಾಯ** ಪ್ರಾಭೃತವೃತ್ತಿಯ ಆದಿಯಲ್ಲಿ ವರ್ಧಮಾನ ಸ್ತುತಿ ಇದೆ. ಆಮೇಲೆ ಈ ಪದ್ಯವೂ ಗದ್ಯವೂ ಇವೆ:—

ಸುಖಕರರತ್ನತ್ರಯಸಾ । ಧಕ ನಿತ್ಯಾನಂದ ಕುಂದಕುಂದಾಚಾರ್ಯ ।
ಪ್ರಕಟೀಕೃತ ಸತ್ಪ್ರಾಭೃತ । ಕೆ ಕರಂ ಕರ್ಣಾಟವೃತ್ತಿಯಂ ವಿರಚಿಸುವೆಂ ॥

ಶ್ರೀಕುಮಾರನಂದಿಸಿದ್ಧಾಂತದೇವಶಿಷ್ಯರುಂ ಪದ್ಮನಂದ್ಯಾದ್ಯಪರನಾಮಧೇಯರುಮಪ್ಪ ನಿತ್ಯಾನಂದ ಶ್ರೀಕುಂದಕುಂದಾಚಾರ್ಯದೇವರಿಂ ಶಿವಕುಮಾರ[2] ಮಹಾರಾಜಾದಿ

1. ಪುಟ 102 2 ಪಾಠಕರು—ಈತನು ಶ್ರೀ ವಿಜಯ ಶಿವಮೃಗೇಶ ಮಹಾರಾಜ ಎಂಬ ಕದಂಬರಾಜನು ಎಂದು ಹೇಳುತ್ತಾರೆ *Ind. Ant.*, XIV, 15,

ಸಂಕ್ಷೇಪರುಚಿಶಿಷ್ಯಪ್ರತಿಬೋಧನಾರ್ಥಂ ವಿರಚಿತಮುಪ್ಪ ಪಂಚಾಸ್ತಿಕಾಯ ಪ್ರಾಭೃತಶಾಸ್ತ್ರ ತಾತ್ಪರ್ಯಾರ್ಥವೃತ್ತಿಯಂ ವಿರಚಿಸುವೆಂ.

ಅಂತ್ಯದಲ್ಲಿ ಈ ಪದ್ಯಗಳಿವೆ:—

ಪರಮಾಗಮವಾರಿಧಿಹಿಮ । ಕಿರಣಂ ರಾದ್ಧಾಂತಚಕ್ರ ನಯಕೀರ್ತಿಯಮಿ ।
ಶ್ವರಶಿಷ್ಯನಮಳನಿಜಚಿ । ತ್ಪರಿಣತನಧ್ಯಾತ್ಮ ಬಾಳಚಂದ್ರಮುನೀಂದ್ರಂ ॥
ಧೃತರತ್ನತ್ರಿತಯಂ ಪ್ರಾ । ಭೃತಸೂತ್ರಾನುಗತವೃತ್ತಿಯಂ ಪಲರ್ಗಂ ಪ್ರಾ ।
ಕೃತಕರ್ಣಾಟಕವಾಕ್ಯಾ । ರ್ಥತತ್ವನಿಶ್ಚಿತ್ತಿಯಾಗೆ ನಿರ್ವರ್ಣಿಸಿದಂ ॥

ಪ್ರವಚನಸಾರ ಪ್ರಾಭೃತತಾತ್ಪರ್ಯವೃತ್ತಿಯ ಆದಿಯಲ್ಲಿ—

ಭುವನಾರಾಧ್ಯತಪಶ್ಶ್ರೀ । ಧವನಿರ್ಮದಪದ್ಮನಂದಿಮುನಿರಾಜಕೃತ ।
ಪ್ರವಚನಸಾರದ ತಾತ್ಪ । ರ್ಯವೃತ್ತಿಯಂ ಚಿನ್ನಿಯಮ್ಮದಿಂ ವಿರಚಿಸುವೆಂ ॥

ಎಂಬ ಪದ್ಯವಿದೆ. ಇವನ ತತ್ತ್ವಾರ್ಥತಾತ್ಪರ್ಯವೃತ್ತಿಗೆ **ತತ್ವರತ್ನಪ್ರದೀಪಿಕಾ** ಎಂದು ಹೆಸರು. ಇದನ್ನು "ಕುಮುದಚಂದ್ರ ಭಟ್ಟಾರಕಪ್ರತಿಬೋಧನಾರ್ಥಂ" ರಚಿಸಿದಂತೆ ಹೇಳುತ್ತಾನೆ.

---

## ನೇಮಿಚಂದ್ರ. ಸು. 1170.

**ಈತನು ಲೀಲಾವತಿ, ನೇಮಿನಾಥಪುರಾಣ** ಎಂಬ ಗ್ರಂಥಗಳನ್ನು ಬರೆದಿದ್ದಾನೆ.

ಇವನು ಲೀಲಾವತಿಯ ಕೊನೆಯಲ್ಲಿ "ಅಂಬುಧಿವೇಷ್ಟಿತಾವನಿಗೆ ಲಕ್ಷ್ಮಣದೇವನೆ ರಾಜನೆಂದು ಲೋ । ಕಾಂಬಿಕೆಯಪ್ಪ ಪುಣ್ಯಸತಿ ಚಂದಲದೇವಿಯೆ ದೇವಿಯೆಂದು ಸೇ । ವ್ಯಂ ಬುಧನೇಮಿಚಂದ್ರನೆ ಕವೀಶ್ವರನೆಂದು" ಎಂದೂ, "ಧರೆಯಂ ರಕ್ಷಿಸುತಿರ್ಕೆ ಲಕ್ಷ್ಮ ಬರಿಸಂ ಲಕ್ಷ್ಮೀಧರೋರ್ವೀಶ್ವರಂ । ಸರಿಯಂತಾತನ ತೋಳೊಳಿರ್ಕೆ ಸತತಂ ಶ್ರೀಚಂದ್ರಿಕಾದೇವಿ" ಎಂದೂ ಹೇಳಿದ್ದಾನೆ. ಇದೇ ಲಕ್ಷ್ಮಣರಾಜನನ್ನು **ಕರ್ಣಪಾರ್ಯನು** (ಸು. 1140) ತನ್ನ ನೇಮಿನಾಥಪುರಾಣದಲ್ಲಿ ಹೇಳಿದ್ದಾನೆ.[1] ಆದರೆ ಕರ್ಣಪಾರ್ಯನ ಕಾಲದಲ್ಲಿ ಲಕ್ಷ್ಮಣನು ರಾಜ್ಯಭಾರಮಾಡುತ್ತಿರಲಿಲ್ಲ; ಅವನ ತಂದೆಯೋ ಅಥವಾ ಅಣ್ಣನಾದ ವಿಜಯಾದಿತ್ಯನೋ ಆಳುತ್ತಿದ್ದಂತೆ ತಿಳಿಯಬರುತ್ತದೆ. ನೇಮಿಚಂದ್ರನ ಕಾಲದಲ್ಲಿ ಲಕ್ಷ್ಮಣನೇ ಆಳುತ್ತಿದ್ದಂತೆ ಮೇಲಣ ಪದ್ಯಭಾಗಗಳಿಂದ ವ್ಯಕ್ತವಾಗುತ್ತದೆ. ಇದರಿಂದ ನೇಮಿಚಂದ್ರನು ಸುಮಾರು 1140 ರಲ್ಲಿದ್ದ ಕರ್ಣಪಾರ್ಯನಿಗಿಂತ ಒಂದು ತಲೆ ಈಚೆಯವನೆಂದು ಹೇಳಬಹುದು.

1. ಪುಟ 140.

ಅಲ್ಲದೆ ಇವನು ತನ್ನ ನೇಮಿನಾಥಪುರಾಣವನ್ನು ವೀರಬಲ್ಲಾಳನ ಪ್ರಧಾನನಾದ ಸೆಜ್ಜಿವಳ್ಳ ಪದ್ಮನಾಭನಿಗಾಗಿ ಬರೆದಂತೆ ಹೇಳುತ್ತಾನೆ.[1] ವೀರಬಲ್ಲಾಳನು 1173 ರಿಂದ 1220 ರ ವರೆಗೆ ಆಳಿದಂತೆ ತಿಳಿಯುತ್ತದೆ.

ಆದುದರಿಂದ ಈ ಕವಿ ಸುಮಾರು 1170 ರಲ್ಲಿ ಇದ್ದಿರಬಹುದು. ಈತನು ಲೀಲಾವತಿಯನ್ನು ಬರೆದು ಆಮೇಲೆ ನೇಮಿನಾಥ ಪುರಾಣವನ್ನು ಬರೆದಿರಬೇಕು.

ಇವನು ಜೈನಕವಿ; ಮೇಲೆ ಹೇಳಿದ ಲಕ್ಷ್ಮಣರಾಜ, ವೀರಬಲ್ಲಾಳ ಈ ಇಬ್ಬರು ರಾಜರ ಆಸ್ಥಾನದಲ್ಲಿಯೂ ಪ್ರಸಿದ್ಧನಾಗಿದ್ದಂತೆ ತೋರುತ್ತದೆ.

ಈತನಿಗೆ ಆಂಗಿಕನೇಮಿ ಎಂಬ ಹೆಸರೂ, ಕಲಾಕಾಂತ, ಕವಿರಾಜಮಲ್ಲ, ಕವಿಧವಳ, ಶೃಂಗಾರಕಾರಾಗೃಹ, ಕವಿರಾಜಕುಂಜರ, ಸಾಹಿತ್ಯವಿದ್ಯಾಧರ, ವಿದ್ಯಾವಧೂವಲ್ಲಭ, ಸುಕವಿಕಂಠಾಭರಣ, ವಿಶ್ವವಿದ್ಯಾವಿನೋದ, ಭಾರತೀಚಿತ್ತ ಚೋರ, ಚತುರ್ಭಾಷಾಕವಿಚಕ್ರವರ್ತಿ, ಸುಕರಕವಿಶೇಖರ, ಕೃತಿಕುಲದೀಪ, ವಾಗ್ವಲ್ಲಕೀವೈಣಿಕ ಮೊದಲಾದ ಬಿರುದುಗಳೂ, ಇದ್ದಂತೆ ತಿಳಿಯಬರುತ್ತದೆ.

ಇವನು ಪೂರ್ವಕವಿಗಳಲ್ಲಿ ಸಮಂತಭದ್ರ, ಅಕಳಂಕ, ಪೂಜ್ಯಪಾದ ಇವರನ್ನು ಮಾತ್ರ ಸ್ತುತಿಸಿದ್ದಾನೆ; ಆವ ಕನ್ನಡಕವಿಯ ಹೆಸರನ್ನೂ ಹೇಳಿಲ್ಲ.

**ಈತನನ್ನು ಜನ್ನ** (1209), **ಪಾರ್ಶ್ವ** (1205), **ಕಮಲಭವ** (ಸು. 1235), **ಮಧುರ** (ಸು. 1385), **ಮಂಗರಸ** (1508), **ಬಾಹುಬಲಿ** (ಸು. 1560) ಮೊದಲಾದ ಕವಿಗಳು ಸ್ತುತಿಸಿದ್ದಾರೆ.

ಸುಮನೋಧರ್ಮಗುಣಂಗಳೊ । ಳಮರ್ದಮರ್ದಂ ಕಜ್ಜಿವ್ಮನೇಮಿಚಂದ್ರನ ಬಾಣಂ ।
ಭ್ರಮರಹಿತಂ ಮೃದು ಹೃದಯಂ । ಗನುಮೆನಿಪುದಿದಾವ ಕೌತುಕಂ ಬುಧಜನದಾ ॥

**ಪಾರ್ಶ್ವ.**

ಏಮಾತೊ ನನ್ಯಕಾವ್ಯಕ । ಲಾಮಹಿಯೊಳ್ ಬಿಡದೆ ಬೀದಿವರಿವೊಡೆ ಮೊದಲೊಳ್ ।
ನೇಮಿಯ ನೆಮ್ಮುಗೆಯಿಲ್ಲದೊ । ಡೀಮತ್ತಿನ ಕವಿಮನೋರಥಂ ನಡೆದಪುದೇ ॥
ಸರ್ವರ ಸಮ್ಮತಮೆನಗಿದು । ಗರ್ವದ ಮಾತಲ್ಲ ರಾಸ್ತ್ರಲೌಕಿಕಕಲೆಯೊಳ್ ।
ಜೇರ್ವರಿದ ನೇಮಿಜನ್ಮಮ । ರಿರ್ವರೆ ಕರ್ಣಾಟಕೃತಿಗೆ ಸೀಮಾಪುರುಷರ್ ॥

**ಮಧುರ.**

ಶೃಂಗಾರಕಾವ್ಯ ಲೀಲಾವತಿಯನು ಪೇ । ಳ್ದಾಂಗಿಕನೇಮಿಯ ನೆನೆವೆ ॥

**ಮಂಗರಸ.**

---

1. ಈ ವಿಷಯವನ್ನು ದೇವಚಂದ್ರನು ರಾಜಾವಳೀಕಥೆಯಲ್ಲಿ—ಬಲ್ಲಾಳನ ಸಾಮಂತರಾದ ಪದ್ಮನಾಭಾದಿಗಳು ಪುರಾಣಂಗಳಂ ಮಾಡಿಸಿದರು—ಎಂಬಲ್ಲಿ ಹೇಳುವಂತೆ ತೋರುತ್ತದೆ.

ತನ್ನ ಕವಿತಾಚಾತುರಿಯನ್ನೂ ಗುಣಗಳನ್ನೂ ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ:—

ರುಚಿರಕಳಾಧರನಿಂ ನೇ । ಮಿಚಂದ್ರನಿಂ ಸತ್ಕವೀಶಚೂಡಾಮಣಿಯಿಂ ।
ಶುಚಿಪದಶಶಿಕಾಂತೋಪಲ । ನಿಚಯಂ ರಸಮೊಸರುತಿರ್ಪುದೇನಚ್ಚರಿಯೇ ॥
ನವರಸಪೂರ್ಣದೊಳ್ ಲಲಿತಬಿಂಬಿತಸರ್ವಪದಾರ್ಥದೊಳ್ ಮಹಾ ।
ಕವಿಕುಳಸೇವ್ಯದೊಳ್ ಲಸದಲಂಕೃತಿಕಂಜನಿವಾಸದೊಳ್ ಜನೋ ॥
ತ್ಸವಕರದೊಳ್ ಸರಸ್ವತಿ ಮನೋಮುದದಿಂ ಜಲಕೇಳಿಯಾಡುವಳ್ ।
ಪ್ರವಿಮಳನವ್ಯಕಾವ್ಯಕಮಲಾಕರದೊಳ್ ಕವಿರಾಜಮಲ್ಲನಾ ॥
ಧರೆ ಬೀಸೆಂಬಾಸೆಗಾಜಿಂ ಪರಪುರುಷಗುಣಾನ್ವೇಷದೊಳ್ ಸ್ವೈಪುಗಾಜ್ಞಂ ।
ಸಿರಿಯೊಳ್ ಕಟ್ಟಣ್ಮ್ರಕಾಜಿಂ ವಿತತವಿತರಣೋತ್ಸಾಹದೊಳ್ ಗಲ್ಲಕಾಜಿಂ ॥
ಪರವಾದಿವ್ರಾತದೊಳ್ ಬಿತ್ತರಿಪ ತುರಿಪಕಾಜಿಂ ಮಹಾಧರ್ಮದೊಳ್ ಮು।
ಚ್ಚರಕಾಜಿಂ ಭಾವಕೋತ್ಪಾದಕರಸಿಕಕವಿಸ್ತೋಮದೊಳ್ ನೇಮಿಚಂದ್ರಂ ॥
(ಇದನಜು ದು) ನೇಮಿಚಂದ್ರಂ । ವಿದಗ್ಧವಿದ್ಯಾಧರೇಂದ್ರನಖಿಳಕಳಾಕೋ ।
ವಿದನುಚಿತಶಬ್ದವಿದ್ಯಾ । ಸದನಂ ಕವಿಚಕ್ರವರ್ತಿ ಭುವನಾಭರಣಂ ॥
ಸುಕರಕವಿಶೇಖರಿತಂ ತಾ । ರ್ಕಿಕತಿಲಕಂ ಮಾನಮೇರು ಜನಶಾಸನದೀ ।
ಪಕನಕಳಂಕಂ ಭಾವಕ । ಮುಕುರಂ ಕವಿರಾಜಮಲ್ಲನಸ್ಮತಿಮಲ್ಲಂ ॥
ಸಾತಿಶಯಾರ್ಥಮುಮಂ ಮೆ । ಲ್ಪಾತುಮನೊಪ್ಪಿಸಿದರೊಸೆದು ತಮಗಿಲ್ಲದುದಂ ।
ಖ್ಯಾತಂಗೆ ಸುಕವಿನೇಮಿಗೆ । ಭೂತಭವದ್ವಾಗ್ವಿಕವಿಗಳೇನೊಳ್ಳಿದರೋ ॥
ಯುವತಿ ಸರಸತಿ ಪುರಾಶನ । ಕವಿವಿರಹಮನಜು ದೆಲ್ಲ ನಿರ್ಮಲದಶನ ।
ಚ್ಛವಿಕುಸುಮಿತರಸನಾಪ । ಲ್ಲವತಳ್ಪದೊಳಿರ್ದು ಸುಕರಕವಿಶೇಖರನಾ ॥

ಕವಿತಾಪೂರ್ಗವನ್ನೂ ಸತ್ಕವಿಗಳ ಅಸಾಧಾರಣಶಕ್ತಿಯನ್ನೂ ಈ ಪದ್ಯಗಳಲ್ಲಿ ಹೇಳಿದ್ದಾನೆ:—

ದಿಟ್ಟಿಗೆ ಬಂದ ಕೋಮಳಗುಣಂ ಗೆಡೆಗೊಂಡಿರೆ ಪೂವಿನಂತಿರಾ ।
ಯ್ದಿಟ್ಟ ಪದಂ ಬೆಡಂಗೆನಿಸೆ ಬಣ್ಣಿಸರಂ ಪೊಸತಾಗೆ ನುಣ್ಪೊಡಂ ॥
ಬಟ್ಟಿರೆ ಬಂಧಮೊಂದೆ ಚತುರಾಳಿ ಕರಂ ಬಸಮಾಗೆ ಬಾಸಿಗಂ ।
ಗಟ್ಟುವನಂತೆ ಕಟ್ಟುವುದು ಕಬ್ಬಮನುಬ್ಬಣಮಾಗೆ ಕಬ್ಬಿಗಂ ॥
ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿಸಂತತಿ ವಾಮನಕ್ರಮಂ ।
ಮುಟ್ಟುಗೆ ಮುಟ್ಟದಿರ್ಕೆ ಮುಗಿಲಂ ಹರನಂ ನರನೊತ್ತಿ ಗಂಟಲಂ ॥
ಮೆಟ್ಟುಗೆ ಮೆಟ್ಟದಿರ್ಕೆ ಕವಿಗಳ್ ಕೃತಿಬಂಧದೊಳಲ್ತೆ ಕಟ್ಟದರ್ ।
ಮುಟ್ಟಿದರೊತ್ತಿ ಮೆಟ್ಟಿದರದೇನಳವಗ್ಗಳಮೋ ಕವೀಂದ್ರರಾ ॥

ಮರನೀಗುಂ ಮಣಿಯಾಗುಮೊಂದು ಪಶುವೀಗುಂ ಕೆಂಪುಮಂದೋಳಿಯೊಳ್ ।
ಪುರುಡಂ ಪುಟ್ಟಿಸಿ ಕಾವ್ಯಮಂ ಕೊನರಿಪರ್ ಕಲ್ಲಲ್ಲಿ ನಾರೆತ್ತುವರ್ ॥
ಮರುಳಂ ಪೋ ಪುರುಳಾಗಿಪರ್ ಕವಿಗಳೊಳ್ ಪೀಯೂಷಮಂ ಪಿಂಡಲು ।
ರ್ವರೆಯೊಳ್ ಸಂದ ಕವಿಪ್ರವೇಕರೆ ವಲಂ ಬಲ್ಲರ್ ಪೆಜರ್ ಬಲ್ಲರೇ ॥

**ಕುಕವಿಗಳನ್ನು ಈ ಪದ್ಯಗಳಲ್ಲಿ ನಿಂದಿಸುತ್ತಾನೆ:—**

ಬಗೆಗೊಂಡೋದದೆ ಕೇಳದೆಲ್ಲಕಳೆಯಂ ಕಾವ್ಯಜ್ಞರಿಂ ಕಲ್ಲದ ।
ಚ್ಚಿಗದಿಂ ಕೆಟ್ಟಿದ ಕೆಟ್ಟ ಕನ್ನಡದ ಕಾಲ್ಗಿಬ್ಬಂಗಳಂ ಬಟ್ಟಸಾ ॥
ಮಿಗಳಂ ಕೇಳಿಸಿ ತಾಮೆ ತಮ್ಮ ಮನದೊಳ್ ಸರ್ವಜ್ಞರೆಂದಿರ್ಪ ಕ ।
ಬ್ಬಿಗರುಂ ಕಬ್ಬಿಗರೆಂಬ ಲೆಕ್ಕದೊಳಗೇಂ ಭೂಭೃತ್ಸಭಾಭೂಷಣಾ ॥
ಮಿಗೆ ಪದಮಿಡಲಱಿಯದ ನಾ । ಲಗೆವೆಟವರ್ ಸಲೆ ಸದರ್ಥಮಂ ಕಾಣದ ಪೋ ।
ಬಗೆಗುರುಡರ್ ಬಗೆವೊಡೆ ಕ । ಬ್ಬಿಗರಕ್ಕುಮೆ ಓದುಗೇಳದಕ್ಕರಗಿವುಡರ್ ॥
ಎಂದುದನೆನುತಿರ್ಪರ್ ಗಿರಿ । ಯಂದದಿನತಿಸಿತಸುಕವಿವಾಕ್ಕುಲಿಶಂ ಬೀ ।
ಳ್ತಿಂದೊಡಮೆರ್ದೆಯಂ ಸೀಳ್ದೊಡ । ಮೊಂದಕ್ಕರಮಿಲ್ಲೆನಿಪ್ಪ ಕಲ್ಲೆರ್ದೆಗವಿಗಳ್ ॥
ತಲೆಯುಂ ತೂಗುವನೊರ್ವನುರ್ಬಿ ಕೆಲದೊಳ್ ಕಾಲ್ಗಿಬ್ಬಮಂ ಕಟ್ಟಿ ಕೋ ।
ಟಲೆಗೊಂಡೂಳ್ಗವನೊರ್ವನೊಲ್ದವನ ಚಾತುರ್ಯಕ್ಕೆ ಕೈವಾರಮಂ ॥
ಪೊಲಗೆಟ್ಟೀವವನೊರ್ವನಿಂತಕಟ ಯಕ್ಕೋ ಯಾದೃಶಸ್ತಾದೃಶೋ ।
ಬಲಿಯೆಂಬುಕ್ತಿಗೆ ದುರ್ವಿದಗ್ಧರೆ ವಲಂ ನೋಂತರ್ ಪೆಜರ್ ನೋಂತರೇ ॥

**ಇವನ ಗ್ರಂಥಗಳಲ್ಲಿ—**

## 1. ಲೀಲಾವತಿ.

ಇದು ಚಂಪೂಗ್ರಂಥ; 14 ಆಶ್ವಾಸಗಳಾಗಿ ಭಾಗಿಸಲ್ಪಟ್ಟಿದೆ ಈ ಗ್ರಂಥವನ್ನು **ಮಂಗರಸನು** ಶೃಂಗಾರಕಾವ್ಯವೆಂದು ಹೇಳುತ್ತಾನೆ. ಕವಿಯೂ ಇದೇ ಅರ್ಥವನ್ನು "ಮತ್ಕಾವ್ಯಮಾ ಗಂಗೆಯ ಪೊನಲವೊಲೆಂದಿಲ್ಲಿ ಶೃಂಗಾರತೃಷ್ಣಾವಿಧುರಂ ಸಾರಜ್ಞದಿಕ್ಕುಂಜರನಿಕರನುಲಂಪಿಂದವೋಲಾಡುಗೆಂದುಂ; ಶೃಂಗಾರಮುಂ ಕಾವ್ಯ ಬಂಧನದೊಳ್ ತಾಂ ಸೆಜಿಗೆಯ್ವ ಮೈಮೆ" ಎಂಬ ಭಾಗಗಳಲ್ಲಿ ಹೇಳಿದ್ದಾನೆ. ಈ ಕಾವ್ಯವನ್ನು ಒಂದು ವರ್ಷದಲ್ಲಿ ಪೂರೈಸಿದಂತೆ

ಒಂದೆ ಗಡ ಬರಿಸಕ್ಕೆ ಬರೆದಂ । ಬಗೆದಿದನೇಂ ನಿಶಿತಮತಿಯೊ ಕೃತಿಕುಲದೀಪಂ ।

**ಎಂಬ ಪದ್ಯಭಾಗದಿಂದ ತಿಳಿಯುತ್ತದೆ. ಇದರ ಕಥಾಸಾರವು ಕೆಳಗೆ ಸಂಗ್ರಹಿಸಿ ಬರೆದಿದೆ:—**

ಕದಂಬರಾಜರ ರಾಜಧಾನಿಯಾದ ಜಯಂತೀಪುರ ಅಥವಾ ಬನವಾಸಿ ಎಂಬ ಪಟ್ಟಣದಲ್ಲಿ ಚೂಡಾಮಣಿ ಎಂಬ ರಾಜನಿದ್ದನು. ಈತನ ಮಹಿಷಿ ಪದ್ಮಾವತಿ. ಇವರ ಮಗ

ಕಂದರ್ಪದೇವ. ಗುಣಗಂಧನೆಂಬ ಮಂತ್ರಿಯ ಮಗನಾದ ಮಕರಂದನು ಇವನ ಪ್ರಿಯ ಮಿತ್ರನು. ಕಂದರ್ಪನು ಯುವರಾಜಪಟ್ಟವನ್ನು ಹೊಂದಿ, ಒಂದು ದಿನ ರಾತ್ರಿ ಕನಸಿನಲ್ಲಿ ಒಬ್ಬ ಸ್ತ್ರೀಯನ್ನು ಕಂಡು, ಮರುದಿವಸ ಆ ಸ್ತ್ರೀಯಿರುವ ದಿಕ್ಕಿಗೆ ಮಕರಂದನೊಡನೆ ಪ್ರಯಾಣಮಾಡುತ್ತಾನೆ. ಕುಸುಮಪುರವೆಂಬ ಪಟ್ಟಣದ ದೊರೆಯಾದ ಶೃಂಗಾರಶೇಖರನ ಮಗಳಾದ ಲೀಲಾವತಿಯನ್ನೇ ಈತನು ಸ್ವಪ್ನದಲ್ಲಿ ಕಂಡುದು. ಆಕೆಯೂ ಇವನನ್ನು ಸ್ವಪ್ನದಲ್ಲಿ ಕಂಡು ಇವನನ್ನು ಹುಡುಕಲು ಜನರನ್ನು ಕಳುಹಿಸುತ್ತಾಳೆ. ಬಳಿಕ ಇವರಿಬ್ಬರಿಗೂ ವಿವಾಹವಾಗಿ, ಕಂದರ್ಪನು ಲೀಲಾವತಿಯನ್ನು ಕರೆದುಕೊಂಡು ಜಯಂತೀಪುರಕ್ಕೆ ಬಂದು ಸುಖವಾಗಿ ರಾಜ್ಯಭಾರಮಾಡುತ್ತಾನೆ.

ಈ ಕಥೆಯನ್ನು ನೋಡಿದರೆ ಈ ಗ್ರಂಥವು ಸುಬಂಧುವಿನ ವಾಸವದತ್ತೆಯನ್ನು ಅನುಸರಿಸಿರುವಂತೆ ತೋರುತ್ತದೆ.

ಈ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ :—

ಜತಿಗಳವಟ್ಟ ಬಣ್ಣಿದಿನಮರ್ಚಿ ತೊಡರ್ಚಿದ ಛಂದದಿಂದಳಂ ।
ಕೃತಿಗೆಳಸಿರ್ದ ಮಾರ್ಗದಿನಿದಿರ್ಚಿದ ರೀತಿಯನಾಳ್ದು ಧಾತುವಿಂ ॥
ಶ್ರುತಿಗೊಳಗಾದ ಮಾತಿನ ತೆರಳ್ಕೆಗಳಿಂ ರಸಗೇಯದಂತಿರೀ ।
ಕೃತಿ ಪೊಸದೇಸಿಯಿಂದೆಸೆದು ಸೋಲಿಪುದಚ್ಚರಿಯೇ ರಸಜ್ಞರಂ ॥
ಈ ಬಹಳರತ್ನರಂಜದ । ಕೂಬಾರಾವೃತಧರಿತ್ರಿಯಾಕೃತಿರತ್ನ ।
ಕ್ಕೇಬೆಲೆಯೆನಿಸಿದುದೆನೆ ಕವಿ । ತಾಬಳವಾರಳವು ಸುಕರಕವಿಶೇಖರನಾ ॥

ಕಾದಂಬರಿಯನ್ನು ಸುಡಿಸಿ ಇವನ ಲೀಲಾವತಿಗೆ ಕಪ್ಪನಿಡಿಸಿದಂತೆ ಒಂದು ಇತಿಹಾಸವುಂಟು. ಈ ವಿಷಯವನ್ನು **ಬಾಹುಬಲಿ** (ಸು. 1560) ತನ್ನ **ನಾಗಕುಮಾರಚರಿತೆ**ಯಲ್ಲಿಯ

ಸುಡಿಸಿ ಕಾದಂಬರಿಯನು ಲೀಲಾವತಿ । ಗಿಡಿಸಿ ಕಪ್ಪನು ಕೀರ್ತಿ ಜಗವ ।
ಎಡೆಗೊಂಡ ನೇಮಿಚಂದ್ರನ ಚಮತ್ಕೃತಿ ಬಂ । ದೆಡೆಗೊಳ್ವುದೆನ್ನ ಚಿತ್ತದೊಳು ॥

ಎಂಬ ಪದ್ಯದಲ್ಲಿ ಹೇಳಿದ್ದಾನೆ. **ದೇವಚಂದ್ರನು** (1838) ತನ್ನ **ರಾಜಾವಳೀಕಥೆ**ಯಲ್ಲಿ ಈ ವಿಷಯವಾಗಿ ಹೀಗೆ ಬರೆದಿದ್ದಾನೆ :—

ಕಾದಂಬರಿಯೆಂಬ ಶೃಂಗಾರಕಾವ್ಯವಂ ಮಾಡಿ ದೊರೆಯಂ ಮೆಚ್ಚಿಸಿ ಆನೆಯ ಮೇಲೇಱಿಸಿ ಬರ್ಪಲ್ಲಿ ನೇಮಿಚಂದ್ರಕವಿ ತಡೆದು ಶೃಂಗಾರಮಪ್ಪ ಲೀಲಾವತಿಯ ರಚಿಸಿ ಸಭೆಯೊಳೋದಿಸೆ * * * ಮೆಚ್ಚಿ ಕಾದಂಬರೀಕಾವ್ಯಪುಸ್ತಕಮಂ ಸುಟ್ಟು ಲೀಲಾವತಿಗೆ ಕಪ್ಪನಿಡುವಲ್ಲಿ, ಕೇಳಿಕೊಂಡು ಮೊದಲೊಂದು ಓಲೆಯಂ ಸುಡಿಸಿ ಲೀಲಾವತಿಗೆ ಕಪ್ಪನಿಡಿಸಿದರ್.

ದೇವಚಂದ್ರನು ಹೇಳುವುದನ್ನು ನೋಡಿದರೆ ನೇಮಿಚಂದ್ರನ ಕಾಲದಲ್ಲಿ ಕಾದಂಬರಿಯೆಂಬ ಗ್ರಂಥವು ಹುಟ್ಟಿದಂತೆ ತಿಳಿಯುತ್ತದೆ. ಆದರೆ ಕನ್ನಡಕಾದಂಬರಿ ಹುಟ್ಟಿ ಆ ವೇಳೆಗೆ ಸುಮಾರು 200 ವರ್ಷಗಳಾಗಿದ್ದುವು. ಆದುದರಿಂದ ಈತನು ಹೇಳುವುದು ಅಸಂಭಾವ್ಯವಾಗಿ ತೋರುತ್ತದೆ.

**ದೊಡ್ಡಯ್ಯನು** (ಸು. 1550) ತನ್ನ **ಚಂದ್ರಪ್ರಭಚರಿತದಲ್ಲಿ**—

ಬಾಣ ಪೇಟ್ಪುದ ಕಾದಂಬರಿಕಾವ್ಯವ । ಕ್ಷೋಣಿಯೊಳು ಕೆಯೊಳು ಸುಡಿಸಿ ।
ಮಾಣದೆ ಲೀಲಾವತಿಗೆ ಕಪ್ಪಿಡಿಸಿದ । ಜಾಣನೇಮಿಯ ಬಲಗೊಂಬೆ ॥

ಎಂದು ಹೇಳುವುದರಿಂದ ಸಂಸ್ಕೃತಕಾದಂಬರಿಯನ್ನು ಸುಡಿಸಿದಂತೆ ತಿಳಿಯುತ್ತದೆ. ಬಾಹುಬಲಿಯೂ ಸಂಸ್ಕೃತಕಾದಂಬರಿಯನ್ನೇ ಹೇಳಿರಬಹುದು. ಯದ್ಯಪಿ ಹೀಗೆ 16 ನೆಯ ಶತಮಾನದಲ್ಲಿ ಪ್ರತೀತಿಯಿದ್ದರೂ ಇದು ಲೀಲಾವತೀಗ್ರಂಥದ ಉತ್ಕೃಷ್ಟತೆಯನ್ನು ಹೇಳುವುದಕ್ಕಾಗಿ ಹುಟ್ಟಿರಬಹುದು.

ಗ್ರಂಥಾವತಾರದಲ್ಲಿ ಕವಿ ನೇಮಿಜಿನೇಂದ್ರನನ್ನು ಸ್ತುತಿಸಿದ್ದಾನೆ. ಬಳಿಕ ಶಾಂತಿಜಿನನನ್ನೂ ಸಿದ್ಧರನ್ನೂ ಸರಸ್ವತಿಯನ್ನೂ ಸಮಂತಭದ್ರಾಕಳಂಕಪೂಜ್ಯಪಾದರನ್ನೂ ಕವಿಗಳನ್ನೂ ಸ್ತುತಿಸಿ ಆಮೇಲೆ "ಮನೋಜನಂ ಪೊಗಜ್ಜೆಂ" ಎಂದು ಕಥೆಯನ್ನು ಆರಂಭಿಸಿದ್ದಾನೆ. ಆಶ್ವಾಸಗಳ ಕೊನೆಯಲ್ಲಿ ಈ ಗದ್ಯವಿದೆ:—

ಇದು ವಿದಿತವಿವಿಧಪ್ರಬಂಧವನವಿಹಾರಪರಿಣತ ಪರಮಜಿನಚರಣಸರಸ್ಮೃಹ್ಮಾಚಲೋಚ್ಚಲಿತನಖಮಯೂಖಮಂದಕೆನೀಮಜ್ಜನಾನಕ್ತ ಸಂತತೋತ್ಸಿಕ್ತದಾನಾಮೋದಮುದಿತ ಬುಧಮಧುಕರಪ್ರಕರ ಕವಿರಾಜಕುಂಜರವಿರಚಿತಮಪ್ಪ ಲೀಲಾವತೀಪ್ರಬಂಧದೊಳ್.

ಈತನ ಬಂಧವು ಗಂಭೀರವಾಗಿಯೂ ಶೃಂಗಾರರಸಭರಿತವಾಗಿಯೂ ಹೃದಯಂಗಮವಾಗಿಯೂ ಇದೆ. ಇವನ ಪ್ರತಿಭೆಯೂ ಶಬ್ದಸಾಮಗ್ರಿಯೂ ವಾಗ್ಧೋರಣಿಯೂ ಅನ್ಯಾದೃಶವಾಗಿವೆ.

ಇವನ ಗ್ರಂಥಗಳಲ್ಲಿ ಸಂಸ್ಕೃತಪ್ರಾಕೃತಶ್ಲೋಕಗಳೂ ಇವೆ.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

ಸಿಂಹ.

ಕೆದಱಿದ ಕೇಸರಂ ಕುಸಿದ ಪಿಂದೊಗೆದೊಡ್ಡಿದ ಕಂದಮೇಱಿ ಕ।
ಟ್ಟಿದ ಬಸಿಱಿತ್ತಿದೇಕಚರಣಂ ತೆಱೆದಾನನಮಾಱ್ದು ಸುತ್ತಿ ಪ ॥
ತ್ತಿದ ಕುಡಿವಾಲಮೊಪ್ಪೆ ಕಿವಿಗಳ್ ಕೆಱಸುತ್ತಿರೆ ಪಾಯ್ದು ದೇವಕೂ।
ಟದ ಕರುವಿಟ್ಟ ಕೇಸರಿವೊಲರ್ದುದು ಕೇಸರಿ ಕುಂಭಿಕುಂಭದೊಳ್ ॥ 564 ॥

## ಗೂಳಿ.

ಅಡೆಯಂ ಕೋದೆತ್ತುತುಂ ಮಾರ್ದನಿಗೆ ಮುಸಗುತುಂ ದರ್ಪದಿಂ ಛಾಯೆಯೊಳ್
ಕೋ ।
ಡಿಡುತುಂ ಮುನ್ನಾದ ಪುಣ್ಸೆಂತಿಣಿಗೆಜಿಗೆ ನೊಳಂ ತೀರ್ಣಶೃಂಗಾಗ್ರದಿಂ ಮಾ ॥
ರ್ದೊಡೆಯುತ್ತುಂ ಪಾಯ್ದು ಪಿಂಡಂ ಕಲಕಿ ಕೆಲೆಯುತುಂ ಪೆರ್ಚಿ ಬಲ್ಗೂಳಿಗ
ಳ್ ಚೆಂ ।
ಗುಡೆ ಗಂಡಂ ಸೂಸುತುಂ ಬಂದುದು ಮದವಿದಳತ್ಪಿಂಗಳಾಕ್ಷಂ ಮಹೋಕ್ಷಂ
॥ 565 ॥

## ಈದ ಹಸು.

ಕಱು ಪೆಜಗುಲ್ಲಿದಿರೆ ಹೂಂಕೊಂ । ಡಜುಚುತ್ತುಂ ಮಗುಜ್ಜಿ ಮೂಸುತುಂ
ಪೊಲಸಂ ಮಾ ।
ಸೊಜೆಯುತಿರೆ ಏಂತೆ ಕೆಚ್ಚಲ । ನಿಜುಂಕೆ ನಡೆತಂದುವೀಂದ ಪಯಗಳ್ ಪಲ
ವುಂ॥ 566 ॥

## ಹುಲ್ಲೆ.

ನಿಮಿರ್ದ ಕೊರಲ್ ಮುರಲ್ದು ಮಡಿದೂಱಿದ ಮುಂದಣ ಕಾಲ್ಗಳೆಟ್ಟಿ ಸ ।
ಶ್ಚಿಮತನು ಜೋಲ್ದುರಂ ಪೆಜಗನಪ್ಪಿದ ಕೊಂಬುಗಳಾಲಿಸುತ್ತೆ ವಿ॥
ಶ್ರಮಿಸುವ ಕರ್ಣಮುಂ ಮುಗುಳ್ದ ಕಣ್ ಮಿಡುಕೋದುವ ಕಂಠನಾಳಮಂ ।
ದಮರ್ದಿರೆ ನೀರನುಣ್ಗೆರಲೆಯುಂ ಬರಲೊಲ್ಲದೆ ನೋಡಿದಂ ನೃಪಂ
॥ 567 ॥

## ನವಿಲು.

ಕಡುಬಡವಾಗಿ ಮುಂಬಯಕೆಯಿಂ ಬಿಸಿಲಟ್ಟಿ ಕರಂ ಬಳ್ಕಿಲ್ದು ಮೆ ।
ಲ್ಗಡುಕುಗೊಳಲ್ಕುಮೊಲ್ದಿರೆ ಮೆಲ್ಲನೆ ತಂದು ಪೊದಲ್ದಿ ಪೀಲಿಯಂ ॥
ಪಿಡಿದು ಮೊಗಕ್ಕೆ ನೀಡಿ ಕೊರಲಂ ತಿಳಿನೀರ್ಗಳನೀಂಟಿಕೊಂಡು ಬಾ ।
ಯ್ದುಡುನ ಮಯೂರಿಗೇಂ ಮುಜ್ಜಿದು ನೀಡುತುಮಿರ್ದುಮೊ ಸೋಗೆ ಬೀಗದಿಂ
॥ 568 ॥

## ಸಾರಿಕೆಯ ವಿರಹ.

ಗೂಡಿನ ಸುತ್ತಲುಂ ಸುಱ್ಱಿಗುಮಾಲಿಸುಗುಂ ಸಲೆ ಬರ್ಪ ಬಟ್ಟೆಯಂ ।
ನೋಡುಗುಮಟ್ಟುಮೇಟ್ಟುಮೊಳಗಂ ಪುಗುಗುಂ ತಳೆರೊಳ್ ಪೊರಳ್ಗುಮಿ ॥
ಪ್ಪೋಡಿರೆ ಬಿಟ್ಟ ಚಂಚು ಬಿಸುಸುಯ್ದೆಳಮಾವಿನ ಪಲ್ಲವಂಗಳಂ ।
ಬಾಡಿಸುಗುಂ ಮನಂಮಱುಗಿ ಸಾರಿಕೆ ಬಾರದೊಡಾತ್ಮವಲ್ಲಭಂ
॥ 569 ॥

### ಕಲಸುಗೂಳು.

ಬಗಿದಗುಟ್ಟಿಂದದಂತೆ ತೆಗೆದಾಱಿಸಿದೋಗರದೊಳ್ ಪೊದಟ್ಟಿ ಕ।
ಮ್ಮಗೆ ಕೆನೆಗೊಂಡ ಗೆಡ್ಡೆಮೊಸರಂ ಸುರಿವೇಲೆಯ ಚೂರ್ಣವಿಕ್ಕಿ ಪೊ॥
ಯ್ದೊಗುಮಿಗೆ ಬೀಳಿಗೆಯ್ದು ಮೆಟಿಸಂ ತಳಿದಲ್ಲದ ಚಿಲ್ಲಿಯಂ ಪವ।
ಣ್ಬುಗೆ ಕಲಸಿರ್ದ ತಣ್ಗಲಸುಗೂಟ್ಟಿನಿಳಾಪತಿಗಿತ್ತನಟ್ಟಿಯಂ ॥570॥

### ಸೂರ್ಯಾಸ್ತ.

ಪೂಡುವ ಕುದುರೆ ಬಿಸಂ ಕೊಂ। ಡೋಡುವ ತೇರ್ಗೊಂದೆ ಗಾಲಿ ಪೊಡೆವಂ ಪೆಟ್ಟವಂ।
ಕೆಂಡಿಂಗಲಸಿದೊಡಕ್ಕುಮೆ। ನೋಡಿರೆ ರವಿ ಕೆಡೆದನಸ್ತಗಿರಿಮಸ್ತಕದೊಳ್ ॥571॥

### ಗೊಲ್ಲರು.

ಪಿರಿದುಂ ಬಾಯೆಟ್ಟಿಣ್ಣಿಗಿಣ್ಣೊಳ್ ತಳರಡಿಬನದೊಳ್ ಮುದ್ದುಗೋವ್ಯಂದದೊಳ್ ಬಂ।
ಧುರಪಾಂಸುಕ್ರೀಡೆ ವತ್ಸಂಗಳೊಳನವರತಂ ಸ್ತನ್ಯಪಾನಂ ಸುಧೇನೂ॥
ತ್ಕರದೊಳ್ ತಾನಾಗೆ ಗೋವ್ಯೂಹದ ಬಟ್ಟಿವಟ್ಟಿಯುಂ ಮಚ್ಚಿ ಬರ್ಪಂದದಿಂದಂ।
ಬರುತಿರ್ದರ್ ಮೊತ್ತದಿಂ ವಲ್ಲವರಳಕಲಲತ್ಪಲ್ಲವರ್ ಲೀಲೆಯಿಂದಂ ॥572॥

### ಸದ್ಗುಣ.

ಕಣಿಯೊಳವೊಕ್ಕು ತಾರದೆ ಪರೀಕ್ಷೆಗೆ ಪಾರದೆ ತೂಗಿಕೊಂಡು ಕೇ।
ವಣಿಸದೆ ವೆಜ್ಜಮಂ ಕಳೆದು ಕೋಯದೆ ತಾಂ ಮಱುಮೆಯ್ಗೆವರ್ಪ ಸ॥
ದ್ಗುಣಮಣಿಯೆಂಬ ಭೂಷಣದಿನಾವನಲಂಕೃತನಾಮಹಾತ್ಮನಂ।
ಗುಣಕಱುಗೊಂಡು ಕೊಂಡುಕೊನೆದಾರ್ ಗಳ ಕೀರ್ತಿಸರೀಧರಿತ್ರಿಯೊಳ್ ॥573॥

## 2. ನೇಮಿನಾಥ ಪುರಾಣ.

ಇದು 22 ನೆಯ ತೀರ್ಥಕರನಾದ ನೇಮಿನಾಥನ ಚರಿತವು. ಇದನ್ನು ವೀರಬಲ್ಲಾಳನ (1173—1220) ಪ್ರಧಾನನಾದ ಸಜ್ಜೆವಳ್ಳ ಪದ್ಮನಾಭನು ಮಾಡಿಸಿದನೆಂದು "ಆ ಪದ್ಮನಾಭದೇವಂ। ಶ್ರೀಪತಿ ಪುಣ್ಯಪ್ರಭಾವದಿಂ ನೇಮಿಯ ವಿ। ದ್ಯಾಪೃಥುಳಜಲಧಿಭವಕೃತಿ । ರೂಪದ ಕೌಸ್ತುಭಕೆ ಸುಭಗವಲ್ಲಭನಾದಂ" ಎಂಬುದರಿಂದಲೂ ಆಶ್ವಾಸಾಂತ್ಯಗದ್ಯದಿಂದಲೂ ತಿಳಿಯುತ್ತದೆ. ಗ್ರಂಥದ ಆದಿ ಭಾಗದಲ್ಲಿ ಕವಿ "ಜಿನಕಥೆಯೊಳ್। ಸಂದಿಸಿ ವಸುದೇವಾಚ್ಯುತ। ಕಂದರ್ಪರ ಕಥೆಗಳನಿತುಮಂ ವಿರಚಿಸುವೆಂ" ಎಂದು ಪ್ರತಿಜ್ಞೆಮಾಡಿ ಎಂಟನೆಯ ಆಶ್ವಾಸದ ಕೊನೆಯಲ್ಲಿ ಕಂಸವಧೆಯನ್ನು ಮಾತ್ರ ಹೇಳಿ ನಿಲ್ಲಿಸಿ, ಪ್ರತಿಜ್ಞಾನುಸಾರವಾಗಿ

ಗ್ರಂಥವನ್ನು ಪೂರ್ತಿಮಾಡದೆ ಇರುವುದನ್ನು ನೋಡಿದರೆ ಅರ್ಧಗ್ರಂಥವನ್ನು ಬರೆದು ಮೃತನಾದಂತೆ ತೋಗುತ್ತದೆ. ಈ ಕಾರಣದಿಂದಲೇ ಇದಕ್ಕೆ **ಅರ್ಧನೇಮಿ** ಎಂಬ ಹೆಸರು ಬಂದಿರಬಹುದು.

ಈ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಈ ಪದ್ಯದಲ್ಲಿ ಹೇಳಿದ್ದಾನೆ:—

ರಸವೊ ರಸಾಯನವೊ ಕೃತಿ । ವಸಂತವೋ ಕವಿಗಳನ್ಮತವೋ ನೇಮಿಯ ವಾ ।
ಕ್ಪ್ರಸರಮದಜ್ಜಿಸಕದಿಂ ನಿ । ಷ್ಪ್ರೌತಾದುದು ಜಗಕ್ಕೆ ನೇಮಿನಾಥಪುರಾಣಂ ॥

ಹಣಕ್ಕಾಗಿ ಕೃತಿಗಳನ್ನು ಮಾಡಿ ಮಾರುವವರನ್ನು ಈ ಪದ್ಯದಲ್ಲಿ ನಿಂದಿಸಿದ್ದಾನೆ:—

ಎಣಿಸದೆ ಗುಣಮುಂ ಕಾಚಿನ । ಮಣಿಯಂ ಮಾಜುವವೊಲತಸ ನಿನಗಂ ತನಗಂ ।
ಪಣಕೆ ಕೃತಿಯೆಂಬ ಚಿಂತಾ । ಮಣಿಯಂ ಮಾಜುವನ ಬುದ್ಧಿಗಾಂ ಬೆಜಿಗಾದೆಂ ॥

ಹಣದಿಂದ ಕಾವ್ಯವಾಗುವುದಿಲ್ಲವೆಂಬಂಶವನ್ನು ಈ ಪದ್ಯದಲ್ಲಿ ಹೇಳಿದ್ದಾನೆ:—

ಬೆಲೆಯಿಂದಕ್ಕುಮೆ ಕೃತಿ ಗಾ । ವಿಲ ಭುವನದ ಭಾಗ್ಯದಿಂದಮುಕ್ಕುಂ ನೋಬ್ಪಿಂ ।
ಬೆಲೆಗೊಟ್ಟು ತಾರಮಧುವಂ । ಮಲಯಾನಿಲನಂ ಮನೋಜನಂ ಕೌಮುದಿಯಂ ॥

ಗ್ರಂಥಾವತಾರದಲ್ಲಿ ಕವಿ ನೇಮಿನಾಥನನ್ನು ಸ್ತುತಿಸಿದ್ದಾನೆ. ಬಳಿಕ ಸಿದ್ಧಾದಿಗಳನ್ನೂ ಯಕ್ಷಯಕ್ಷಿಯರನ್ನೂ ಗಣಧರರನ್ನೂ ಸ್ತುತಿಸಿ, ತರುವಾಯ ಗೃಧ್ರಪಿಂಛನಿಂದ ಪೂಜ್ಯಪಾದನವರೆಗೆ[1] ಗುರುಗಳನ್ನು ಹೊಗಳಿದ್ದಾನೆ. ಅನಂತರ ತನ್ನ ಸ್ವಾಮಿಯಾದ ಸಜ್ಜೆವಳ್ಳ ಪದ್ಮನಾಭನನ್ನು ಸ್ತುತಿಸಿ "ಭಕ್ತಿಯಿಂದಂ ಹರಿವಂಶಕ್ಷತ್ರಚೂಡಾಮಣಿಯ ಚರಿತಮಂ ಪೇಟಲುದ್ಯುಕ್ತನಾದೆಂ" ಎಂದು ಕಥೆಯನ್ನು ಆರಂಭಿಸಿದ್ದಾನೆ.

ಆಶ್ವಾಸಗಳ ಅಂತ್ಯದಲ್ಲಿ ಈ ಗದ್ಯವಿದೆ:—

ಇದು ಮೃದುಪದಬಂಧಬಂಧುರಸರಸ್ವತೀಸೌಭಾಗ್ಯಂಗೃಧ್ರಪಿಂಛನೀಸಿಧಾನದೀಪವರ್ತಿ ಚತುರ್ಭಾಷಾಕವಿಚಕ್ರವರ್ತಿ ನೇಮಿಚಂದ್ರಕೃತಮುಂ ತ್ರೈಮತ್ಪ್ರತಾಪಚಕ್ರವರ್ತಿ ಶ್ರೀವೀರಬಲ್ಲಾಳದೇವಪ್ರಸಾದಾಸಾದಿತಮಹಾಪ್ರಧಾನಪದವೀವಿರಾಜಿತ ಸಜ್ಜೆವಳ್ಳಪದ್ಮನಾಭದೇವಕಾರಿತಮುಮಪ್ಪ ನೇಮಿನಾಥಪುರಾಣದೊಳ್.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

ತ್ರಿವಿಕ್ರಮಾವತಾರ.

ಅದೆ ಪೊಸಪೊನ್ನ ಸತ್ತಿಗೆಯದಲ್ಲದು ರತ್ನಪಟಚ್ಛತ್ರೀಟಮ ।
ಲ್ಲದು ವರವಜ್ರಕುಂಡಲಮದಲ್ಲದು ಕೌಸ್ತುಭರತ್ನಮಂತದ ॥

1 ಗೃಧ್ರಪಿಂಛ, ಕುಂಡಕುಂದ, ಕವಿಪರಮೇಶ್ವರ, ಜಿನಸೇನ, ವೀರಸೇನ, ಗುಣಭದ್ರ, ಪುಷ್ಪದಂತ ಮಲಧಾರಿ, ಸಮಂತಭದ್ರ, ಅಕಳಂಕ, ಪೂಜ್ಯಪಾದ.

ಲ್ಲದು ಕರಚಕ್ರಮಲ್ಲದದು ನಾಭಿಸರೋಜಮೆನಲ್ ದಿನೇಶಬಿಂ।
ಬದ ನೆಲೆ ತಪ್ಪಿ ತರ್ಪಿನಮನುಕ್ರಮದಿಂ ಬಳೆದಂ ತ್ರಿವಿಕ್ರಮಂ ॥574॥

ಇದು ಲೀಲಾಧೃತಭೂಕರೀಂದ್ರಕರಮಲ್ತಭ್ರೋತ್ಪಟೀಕೇತುವ।
ಲ್ತಿದು ಸೂರ್ಯಾಂಬುಜನಾಳಮಲ್ತು ಶಶಿಲೋಕಾದೀಪಿಕಾಸ್ತಂಭಮು॥
ಲ್ತಿದು ತಾರಾಕುಸುಮಾವಳೀವಿಟಪಮಲ್ತು ಭ್ರಾವನೀಶೇಷನ।
ಲ್ತಿದೆನಲ್ ತಾಂ ಬಳೆದತ್ತನುಕ್ರಮದಿನಾಪಾದಂ ಪಯೋಜಾಕ್ಷನಾ ॥575॥

ತರುವಿಂದತ್ತತ್ತ ನೀಳ್ದಂ ಘನಸಟೆಳದಿನತ್ತತ್ತ ನಿಕ್ಕಂ ಪಿಮೋರ್ವೀ।
ಧರದಿಂದತ್ತತ್ತ ಪೋದಂ ರವಿಯ ರಥದಿನತ್ತತ್ತ ಮೆಯ್ಪೆರ್ಚಿದಂ ಸು।
ಟ್ಟುರೆಯಿಂದತ್ತತ್ತ ಮತ್ತಂ ನಿಮಿರವಿರನಿದೇನೆಂದು ಜಾತಾದ್ಭುತಂ ನೋ।
ಪ್ಪಿರ ಕಣ್ಮಂ ಚೇತಮುಂ ಕಾಲ್ಗಿಡೆ ಕಡುಜವದಿಂ ವಿಷ್ಣು ವರ್ಧಿಷ್ಣುವಾದಂ ॥576॥

ಮುರನಂ ಮುಟ್ಟಿದನಿಲ್ಲ ಮೇಘಘಟೆಯೊಳ್ ಕಾಲ್ಕೊಂಡನಿಲ್ಲಿಲ್ಲ ಭೂ।
ಧರಮಂ ದಾಂಟಿದನಿಲ್ಲ ಬಾಂದೊಜೆಯೊಳಿಟ್ಟಂ ಕಾಲನಿಲ್ಲಿಲ್ಲ ಭಾ॥
ಸ್ಕರನಂ ಮಾಯದ ಮಾಣಿ ಸೆಂಡೊಪೆದನಿಲ್ಲಿಲ್ಲಿಂಬಿನಂ ನೀಡಿದಂ।
ತರದಿಂ ಪಾದಮನುರ್ವಿ ಕೊರ್ವಿ ಬಲಿಯಂ ಗೆಲ್ದಾ ಮನಂ ವಾಮನಂ ॥577॥

## ಗೋವರ್ಧನೋದ್ಧಾರ.

ಸರಲಂ ಬಾರ್ತೆಗೆ ವಿಾಂಟುವಂತೆ ಚರಣಾಂಗುಷ್ಠಾಗ್ರದಿಂ ವಿಾಂಟಿ ಱು।
ಲ್ಲರಿವೊಲ್ ಸ್ಫುಲ್ಲನೆ ಸೂಸಿ ನಿರ್ಝರಜಲಂ ಬೀಳ್ತಿರ್ಪಿನಂ ಕಾವಿನಂ॥
ತಿರೆ ಕೊಂಡೆತ್ತಿದ ಕೆಯ್ ಮುರಾರಿ ಕೊಡೆಯಂ ಕ್ರೀಡಾರಸಕ್ಕೆತ್ತುವಂ।
ತಿರೆ ಕೆಲ್ಬಿತ್ತಿದನೊಂದೆ ಕೆಯ್ಯೊಳೆ ಮಹಾಗೋವರ್ಧನಾದ್ರೀಂದ್ರಮಂ ॥578॥

## ಬೇಸಗೆ.

ಪಿಡಿಗಿಕ್ಕತ್ತು ಮೃಣಾಳಮಂ ವನಗಜಂ ಪೊಕ್ಕತ್ತು ತುಂಡಾಗ್ರದಿಂ।
ದೊಡೆದಂಭೋಜದ ಮೊಗ್ಗೆಯಂ ಮಧುಕರಂ ಧಾರಾಗೃಹಕ್ಕಾಗಿ ಸ॥
ಯ್ತಡಿಯೆತ್ತಿತ್ತು ನವಿಲ್ ಮುರಾಳಿ ಪರಿಕಾಲೊಳ್ ಕಾಲನಟ್ಟಿತ್ತು ನೀ।
ರ್ಗುಡಿಯಲ್ಬೇಡಿದುದಂದು ಪಂಜರಶುಕಂ ಶುಷ್ಕೀಭವತ್ತಾಳುಕಂ ॥579॥

## ಸರಸ್ಸು.

ಗಂಗೆಯ ಗೋತ್ರಮೋ ಸೊದೆಯ ಸಾರಮೊ ಬೆಳ್ನಗೆಯೊಂದು ಬಲ್ಪಿಂ॥ತ್ತಿ
ತ್ತಿಂಗಡಲರ್ದ ಬೇರೊ ಪೊಸಮುತ್ತಿನ ಪುಟ್ಟುವ ನೀರೊ ತೋರ್ಪ ಬೆ॥
ಳ್ದಿಂಗಳ ಬಯ್ಕೆಯೋ ಬನದ ಧೀವರೆಯರ್ಕಳ ಕಣ್ಣ ಬೆಳ್ಪು ಬೆ।
ಳ್ಳಂಗೆದೆದತ್ತೊ ಪೇಳ್ಬಮೆನೆ ನಿರ್ಮಲವಾದುದು ನೀರಜಾಕರಂ ॥580॥

### ವೈಶ್ಯಪುತ್ರನ ಪಾಂಡಿತ್ಯ.

ಶ್ರುತವಧು ಕೂರ್ತು ಕೊಟ್ಟು ತೆಱದಿಂದೆಸೆದಿರ್ದುದು ನಾಟಕಪ್ರವಿ।
ಣತೆ ಕೃತಿಭಾವಕೋವಿದತೆ ಶಬ್ದಸಮಗ್ರತೆ ತರ್ಕರೀತ್ಯಭಿ ॥
ಜ್ಞತೆ ನಯವಾಗ್ವಿಚಕ್ಷಣತೆ ನಾದ್ಯವಿದಗ್ಧತೆ ನರ್ತನಪ್ರಗ।
ಲ್ಭತೆ ರಸಗಾನಮುಗ್ಧತೆ ವಿಳಾಸರಸಜ್ಞತೆ ವೈಶ್ಯಪುತ್ರನಾ ॥ 581 ॥

---

## ಉರಿಲಿಂಗದೇವ. ಸು. 1170.

ಈತನು ವಚನಗಳನ್ನು ಬರೆದಿದ್ದಾನೆ. ಇವನು ವೀರಶೈವ ಕವಿ; **ಶಿವಲೆಂಕಮಂಚಣ್ಣನ**[1] (ಸು. 1160) ಮಗನೆಂದು **ನೀಲಕಂಠಾಚಾರ್ಯನ** (ಸು. 1485) ಆರಾಧ್ಯಚಾರಿತ್ರದಲ್ಲಿ ಹೇಳಿದೆ. ಈತನು ನಲ್ಲೂರಿ ಮಠದಲ್ಲಿ ಅಯ್ಯನಾಗಿದ್ದಂತೆ ತಿಳಿಯುತ್ತದೆ.

### ವಚನಗಳು.

ಇವನ ವಚನಗಳ ಸಂಖ್ಯೆ 29. ಇವುಗಳಲ್ಲಿ ಇವನ ಹೆಸರು ವ್ಯಕ್ತವಾಗಿ ಹೇಳಿದೆ. ಕೆಲವು ವಚನಗಳನ್ನು ತೆಗೆದು ಬರೆಯುತ್ತೇವೆ:—

(1) ನಲ್ಲನೊಲ್ಲೆನೆಂದು ಮುನಿದು ನಾನಡಗಲು, ಅಡಗುವೆಡೆಯೆಲ್ಲಾ ತಾನೆ ನೋಡಿಲಗವ್ವಾ. ನಲ್ಲ ನೀನಿಲ್ಲದೆಡೆಯಿಲ್ಲ; ಅಡಗಲಿಕ್ಕಿಂಬಿಲ್ಲ. ಮುನಿದು ನಾನೇಗುವೆನು? ಶರಣುಗತಿ ಹೊಗುವೆನು ಉರಿಲಿಂಗದೇವನ ॥ 582 ॥

(2) ಇಂಬಿನ ಚುಂಬನವಮೃತಾಹಾರ; ಆಲಿಂಗನವೆ ಆಭರಣ; ಸೋಂಕೆ ಸುವಸ್ತ್ರ: ನೋಟವೆ ಕೂಟ; ಒಡನಾಟವೆ ಅಷ್ಟಭೋಗ; ಎನಗೆ ಉರಿಲಿಂಗದೇವನ ಕೂಟ ಪರಾತ್ಪರವಾಜ್ಮನೋತೀತ ಪರಮಸುಖವು ॥ 583 ॥

(3) ನಮ್ಮ ನಲ್ಲನ ಕೂಡಿದ ಕೂಟವ ಇದಿರಿಗೆ ಹೇಳಬಾರದವ್ವಾ. ನೀವೆಲ್ಲಾ ನಿಮ್ಮ ನಲ್ಲರ ಕೂಡಿದ ಸುಖವ ಬಲ್ಲಂತೆ ಹೇಳಿ. ಉರಿಲಿಂಗದೇವ ಬಂದು ನಿಜಗೆಯ ಸೆಜಗ ಸಡಿಲಿಸಲೊಡನೆ ನಾನೋ ತಾನೋ ಏನೆಂದಱಿಯೆನು ॥ 584 ॥

---

## ಬಿಜ್ಜಯನಾಯಕ. 1172.

ಬಿಜಾಪುರದ ಜಿಲ್ಲಾ ಮಾಡಗಿಹಾಳಿನಲ್ಲಿರುವ ಒಂದು ಶಾಸನದಲ್ಲಿ[2] ಮಾಳಿಗೆಯ ಪ್ರಭು ಬಿಜ್ಜಯನಾಯಕನನ್ನು "ವರ್ಣಕವಿತಾಪ್ರವೀಣ, ಕನ್ನಡಜಾಣ,

1. ಪು 212. 2. *Epi. Ind.*, XV, 315.

ಸಾಹಿತ್ಯವಿದ್ಯಾಧರ" ಎಂದು ವಿಶೇಷಿಸಿ ಹೇಳಿರುವುದರಿಂದ ಈತನು ಕವಿಯಾಗಿದ್ದಿರಬೇಕು. ಆವ ಗ್ರಂಥಗಳನ್ನು ಬರೆದಿದ್ದಾನೆಯೋ ತಿಳಿಯದು. ಇವನ ಪರಂಪರೆ ಹೀಗೆ ಹೇಳಿದೆ: ಮಲ್ಲಗೌಂಡ; ಮಗ ಬಲ್ಲಗೌಂಡ; ಮಗ ಮಲ್ಲಗೌಂಡ; ಹೆಂಡತಿ ಮುದ್ದಿಯಕ್ಕ; ಮಗ ಬಿಜ್ಜಯನಾಯಕ, ಹೆಂಡತಿ ಸಾವಿತ್ರೀದೇವಿ. ಇವನು ಕಳಚುರ್ಯರಾಜನಾದ ರಾಯಮುರಾರಿ ಸೋಯಿದೇವನ ಆಳಿಕೆಯಲ್ಲಿ 1172 ರಲ್ಲಿ ಎರಡು ಶಿವಾಲಯಗಳನ್ನು ಕಟ್ಟಿಸಿ ದತ್ತಿಯನ್ನು ಬಿಟ್ಟಂತೆ ಹೇಳಿದೆ. ಈ ಶಾಸನದಿಂದ ಇವನ ಸ್ತುತಿರೂಪವಾದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

ವಿದಿತಾತಾಗಜಮಾಲೆಯಂತಿರೆ ಸಪದ್ಮಂ ಚಂದ್ರನಂತುತ್ಕಲಾ।
ಪದಳಂ ವಾಸುಗಿಯಂತೆ ಭಾಸುರಭುಜಂಗಾಧಾರನಂಭೋಧಿಯಂ ॥
ತುದಿತಸ್ತುತ್ಯಸರಸ್ವತೀಗಣಯುತಂ ಸಾಹಿತ್ಯವಿದ್ಯಾಧರಂ।
ವಿದಿತಂ ಬಿಜ್ಜಯನಾಯಕಂ ವಿತರಣವ್ಯಾಪಾರಕೇಳೀವಿದಂ ॥ 585 ॥

ಧನಮುಂ ಸಂವರಿಪಲ್ಲಿ ಚಿಂತೆ ರಿಪುವರ್ಗಂ ತನ್ನನಾಂತಲ್ಲಿ ಭೀ।
ತಿ ಸಿತಾಂತಂ ಸಕಲಾರ್ಥಿ ಬೇಡಿದೆಡೆಯೊಳ್ ಲೋಭಂ ದಿಟಂ ತನ್ನೊಳ್ ॥
ಲ್ಲೆನೆ ನಿಶ್ಚಿಂತತೆ ವೀರವೃತ್ತಿ ವಿಪುಲೋದಾರತ್ವಮೆಂಬೀಗುಣ।
ಕ್ಕೆನಸುಂ ಬಿಜ್ಜಯನಾಯಕಂ ಗುರುವೆನಿಪ್ಪಂ ಭೂರಿಭೂಭಾಗದೊಳ್ ॥ 586 ॥

---

## ಬೂಚಿರಾಜ. 1173.

ಶಕವರ್ಷ 1095 ರಲ್ಲಿ—ಎಂದರೆ 1173 ರಲ್ಲಿ—ಬರೆದ ಹಾಸನದ 119 ನೆಯ ಶಾಸನದಲ್ಲಿ ಈತನು ಕನ್ನಡದಲ್ಲಿಯೂ ಸಂಸ್ಕೃತದಲ್ಲಿಯೂ ಪೊನ್ನನಿಗೆ ಸಮಾನನಾದ ಪ್ರೌಢಕವಿಯಾಗಿದ್ದನೆಂದು ಹೇಳಿದೆ. ಇವನು ಜೈನಕವಿ; ವೀರಬಲ್ಲಾಳನಿಗೆ ಮಂತ್ರಿಯಾಗಿದ್ದನು; ಶ್ರೀಪಾಳತ್ರೈವಿದ್ಯನಿಂದ ಶಾಸ್ತ್ರಗಳನ್ನು ಕಲಿತನು. ಇವನ ತಾಯಿ ಸುಗ್ಗವ್ವೆ; ಹೆಂಡತಿ ಶಾಂತಲೆ. ಈತನು ತನ್ನ ಐಶ್ವರ್ಯವನ್ನು ಜಿನಪೂಜೆಗೂ ಆಹಾರಾದಿದಾನಕ್ಕೂ ವಿಶೇಷವಾಗಿ ವ್ಯಯಮಾಡಿದಂತೆ ಹೇಳಿದೆ. ಇವನನ್ನು "ಚತುರ್ವಿಧಪಾಂಡಿತ್ಯಮಂಡಿತಂ" ಎಂದೂ, "ವಾಚಕ ವಾಚಸ್ಪತಿ ಕವಿ। ತಾಚಾರ್ಯಂ ಶ್ರವ್ಯಕಾವ್ಯಪದ್ಯಪದಾರ್ಥಾ। ಲೋಚನಚಕ್ಷು ಪರಾರ್ಥ.... ಪ್ರಿಯಹಿತಾರ್ಥವಾಚಂ ಬೂಚಂ" ಎಂದೂ ಸ್ತುತಿಸಿದೆ. ಈತನು ಆವ ಗ್ರಂಥಗಳನ್ನು ಬರೆದಿದ್ದಾನೆಯೋ ತಿಳಿಯದು.

---

## ದೇವಪಾರ್ಶ್ವ. 1174.

ಈತನು ಅರಸಿಯಕೆರೆಯ 71 ನೆಯ ಶಾಸನವನ್ನು ಬರೆದುದಾಗಿ ಆ ಶಾಸನದ ಕೊನೆಯಲ್ಲಿರುವ

ಭುವನನುತವಾಜಿವಂಶೋ । ದ್ಭವಕರವಿಭುಸೋಮನಾಥಪುತ್ರಂ ಪೇಟ್ದಿಂ ।
ಕವಿರಾಜಂ ಕಾಶ್ಯಪಗೋ । ತ್ರವರ್ಧನಂ ದೇವಪಾರ್ಶ್ವಸೀಶಾಸನಮಂ ॥

ಎಂಬ ಪದ್ಯದಿಂದ ತಿಳಿಯುತ್ತದೆ. ಈ ಪದ್ಯದಿಂದ ಈತನು ಕಾಶ್ಯಪಗೋತ್ರದವನು, ವಾಜಿವಂಶದವನು, ಸೋಮನಾಥನ ಮಗನು ಎಂಬಂಶಗಳು ತಿಳಿಯುತ್ತವೆ. ಮೇಲಣ ಶಾಸನವು ಶಕ 1096 ರಲ್ಲಿ—ಎಂದರೆ 1174 ರಲ್ಲಿ—ಬರೆದುದು. ಇದರಲ್ಲಿ ವೀರಬಲ್ಲಾಳನ ಪ್ರಧಾನನಾದ ಹರಿಹರನು ಅರಸಿಯಕೆರೆಯಲ್ಲಿ ಕಟ್ಟಿಸಿದ ಕೇಶವದೇವಸ್ಥಾನಕ್ಕೆ ಮಹಾಪ್ರಧಾನನು ದತ್ತಿಯನ್ನು ಬಿಟ್ಟಂತೆ ಹೇಳಿದೆ.

ಇದರಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

### ಕೇಶವದೇವರು.

ಶ್ರೀಪಾದಾಂಬುಜಯುಗ್ಮಮತ್ಯಮಲಗಂಗಾಸೂತಿಕಾಗೇಹಮಾ ।
ಯ್ತಾಪಂಕೇರುಹಪೀಠನುದ್ಭವಗೃಹಂ ಶ್ರೀನಾಭಿಯಾಯ್ತೂರ್ಜಿತ ॥
ಶ್ರೀಪತ್ನೀಪ್ರಭವಾಸ್ಪದಂ ವಿಪುಳವಕ್ಷಂ ತಾನದಾಯ್ತೆಂಬೊಡಿ ।
ನ್ನಾಪೂರ್ಣೋನ್ನತಕೇಶವಪ್ರಭುತೆಯಂ ಬಣ್ಣಿಪ್ಪನೇವಣ್ಣಿಪಂ ॥ 587 ॥

### ನರಸಿಂಹನೃಪ.

ತತ್ತನಯಂ ನರಸಿಂಹನೃ । ಪೋತ್ತಮನುದ್ಯತ್ಪ್ರತಾಪನಹಿತನೃಪಾಳೋ ।
ನ್ಮತ್ತೇಭಕುಂಭದಳನಾ । ಯತ್ತಾಯತಖಡ್ಗಕಳಿತನಿಜದೋರ್ದಂಡಂ ॥ 588 ॥

### ವೀರಬಲ್ಲಾಳ.

ಕರಿನಕ್ರಾಭೀಳಹೇಷಾರವಯುತಹಯಸಂದೋಹವೀಚೀಪದಾತಿ ।
ಸ್ಫುರದುತ್ಪಾತೀನಕೋಳಾಹಳಸಮರಮಹಾಂಭೋಧಿಯೊಳ್ ತನ್ನದೋರ್ಮಂ ॥
ದರದಿಂದಂ ಮುಂಥನಾರಂಭಮನೊದವಿಸಿ ವೈರಿಕ್ಷ್ಮಾಪಾಳಲಕ್ಷ್ಮೀ ।
ಕರಿಜಾತ್ಯಶ್ವಂಗಳಂ ಕೊಂಡತುಳಬಳಯುತಂ ವೀರಬಲ್ಲಾಳಭೂಪಂ ॥ 589 ॥

ಸುರರಾಜೇಭಂ ಮದಾಂಧಂ ಮಧುಪಕುಳಯುತಂ ಪುಂಡರೀಕಂ ಸದಾಸೀ ।
ಚರತಂ ಗಂಗಾಹ್ರದಂ ಚಂದ್ರನ ರುಚಿ ಸಲೆ ದೋಷಾವಿಳಂ ತಾನೆನಲ್ ಪೇಟ್ರಿಲ್ ॥
ದೊರೆಯೇ ಬಲ್ಲಾಳಭೂಪಾಳನ ವಿಶದಯಶೋಲಕ್ಷ್ಮಿಯೊಳ್ ವರ್ಣಸಾಮ್ಯಂ ।
ಪಿರಿದುಂ ತಾನಾದೊಡಂ ನಿರ್ಮಳಗುಣದಿನವಂ ಪೋಲಿಸಲ್ ಬಲ್ಲನಾವಂ ॥ 590 ॥

## ಶಾರದಿನಾಥಪಂಡಿತ. 1174.

ಈತನು ಅರಸಿಯಕೆರೆಯ 112 ನೆಯ ಶಾಸನವನ್ನು ಬರೆದುದಾಗಿ ಆ ಶಾಸನದ ಕೊನೆಯಲ್ಲಿರುವ "ಚಬ್ಬರಾಜನ ಪುತ್ರ ಶಾರದಿನಾಥಪಂಡಿತರು ಹೇಳ್ದ ಸಾಸನ" ಎಂಬ ವಾಕ್ಯದಿಂದ ತಿಳಿಯುತ್ತದೆ. ಈ ಶಾಸನವು ಶಕ 1096 ರಲ್ಲಿ— ಎಂದರೆ 1174 ರಲ್ಲಿ—ಬರೆದುದು. ಇದರಲ್ಲಿ ಕೆಲ್ಲಂಗೆರೆಯ ಚೆನ್ನಕೇಶವದೇವರಿಗೆ ಶ್ರೀಕರಣದ ಹೆಗ್ಗಡೆ ಕೇತಯಣ್ಣನು ದತ್ತಿಯನ್ನು ಬಿಟ್ಟಂತೆ ಹೇಳಿದೆ. ಈ ಶಾಸನವು ಬಹಳ ಮಟ್ಟಿಗೆ ಲುಪ್ತವಾಗಿ ಹೋಗಿರುವುದರಿಂದ ಪದ್ಯಗಳನ್ನು ಉದ್ಧರಿಸಿ ಬರೆಯಲಾಗಲಿಲ್ಲ.

---

## ರೇಚಣಮಂತ್ರಿ. 1174.

ಅರಸಿಯಕೆರೆಯ 69 ನೆಯ ಶಾಸನದಲ್ಲಿ (ಶಕ 1096) ಈತನಿಗೆ 'ಸಾಹಿತ್ಯ ವಿದ್ಯಾಧರ' ಎಂಬ ಬಿರುದು ಹೇಳಿದೆ. ಬೆಂಗಳೂರಲ್ಲಿ ಅಚ್ಚಾಗಿರುವ 'ನೀತಿ ಸಾರ' ಎಂಬ ಗ್ರಂಥದಲ್ಲಿ ಒಂದು ಪದ್ಯದಲ್ಲಿ[1] **ದುರ್ಗಸಿಂಹ, ರುದ್ರಭಟ್ಟ, ಅಗ್ಗಳ** ಮೊದಲಾದ ಕವಿಗಳ ಗೋಷ್ಠಿಯಲ್ಲಿ **ರೇಚಗ** ಎಂಬ ಒಬ್ಬ ಕವಿಯ ಹೆಸರು ಹೇಳಿದೆ. ಇವನೇ ಆಗಿರಬಹುದೋ ಏನೋ ತಿಳಿಯದು. ಮೇಲಣ ಶಾಸನದಿಂದ ಈ ರೇಚಣಮಂತ್ರಿಯ ಸ್ತುತಿರೂಪವಾದ ಈ ಪದ್ಯವನ್ನು ತೆಗೆದು ಬರೆಯುತ್ತೇವೆ :—

ಕುಲಮುಂ ಪೇಟ್ರೊಡೆ ವಾಜವಂಶತಿಲಕಂ ಸನ್ಮಂತ್ರಮಂತ್ರಿತ್ವದೊಳ್ ।
ಪಲರುಂ ಜೀಯೆನೆ ದೇವಮಂತ್ರಿಯೊಲವಂ ಸಲ್ಲೀಲೆಯಿಂ ತೋಱುವಂ ॥
ಚಲದಿಂದಾಂತರನಿಕ್ಕೆ ಮೆಟ್ಟಿ ಪಡೆನಂ ಸತ್ಕೀರ್ತಿಯಂ ಧಾತ್ರಿಯೊಳ್ ।
ನಲವಿಂ ರೇಚಣಮಂತ್ರಿಯಾರ್ಗಮಧಿಕಂ ಸಾಹಿತ್ಯವಿದ್ಯಾಧರಂ ॥

---

## ಕೇಶವರಾಜ ಮತ್ತು ಚಾವಣ. ಸು. 1180.

ಈ ಕವಿಗಳಿಬ್ಬರೂ ಸೇರಿ **ವರ್ಧಮಾನಪುರಾಣ**ವೆಂಬ ಗ್ರಂಥವನ್ನು ಉಪಕ್ರಮಿಸಿದಂತೆಯೂ ಈ ಕೇಶವರಾಜನ ಮಗನಾದ ವಾಣೀವಲ್ಲಭನೆಂಬ ಬಿರುದುಳ್ಳ **ಆಚಣ್ಣನು**[2] ಆ ಗ್ರಂಥವನ್ನು ವಿಸ್ತರಿಸಿ ಪೂರ್ತಿಮಾಡಿದಂತೆಯೂ ತಿಳಿಯು

1 ಪುಟ 150.

2 ಆಚಣ್ಣನ ಚರಿತೆಯನ್ನು ನೋಡಿ.

ಬರುತ್ತದೆ. ಇವರು ಮತ್ತಾವ ಗ್ರಂಥಗಳನ್ನು ಬರೆದಿದ್ದಾರೆಯೋ ತಿಳಿಯದು. ಈ ಕೇಶವರಾಜನು ವಸುಧೈಕಬಾಂಧವ ರೇಚಣಚಮೂಪತಿಯ ಇಷ್ಟಾನುಸಾರವಾಗಿ ವರ್ಧಮಾನಪುರಾಣವನ್ನು ಬರೆಯಲುಪಕ್ರಮಿಸಿದಂತೆ ಈ ಗ್ರಂಥದಿಂದಲೇ ತಿಳಿಯುತ್ತದೆ.

---

## ರುದ್ರಭಟ್ಟ. ಸು. 1180.

ಈತನು ಜಗನ್ನಾಥವಿಜಯವನ್ನು ಬರೆದಿದ್ದಾನೆ. ರಸಕಲಿಕೆಯೆಂಬ ಒಂದು ಗ್ರಂಥವನ್ನು ಈತನು ಬರೆದಿರುವಂತೆ ಸಾಳ್ವನು (ಸು. 1550) ತನ್ನ ರಸರತ್ನಾಕರದಲ್ಲಿ ಹೇಳುತ್ತಾನೆ. ಈ ರಸಕಲಿಕೆ ನಮಗೆ ದೊರೆತಿಲ್ಲ.

ರುದ್ರಭಟ್ಟನು, ರಾಜಶೇಖರವಿಳಾಸವೇ ಮೊದಲಾದ ಗ್ರಂಥಗಳನ್ನು ಬರೆದು ಪ್ರಸಿದ್ಧನಾಗಿದ್ದ ಷಡಕ್ಷರಿಯನ್ನು ತನ್ನ ಕವಿತಾಚಾತುರಿಯಿಂದ ಮೀರಬೇಕೆಂದುದ್ದೇಶಿಸಿ 1689 ರಲ್ಲಿ ಜಗನ್ನಾಥವಿಜಯವನ್ನು ಬರೆದಂತೆಯೂ, ವಿದ್ವಾಂಸರೆಲ್ಲರೂ ಇವನ ಗ್ರಂಥವನ್ನು ನೋಡಿ ರಾಜಶೇಖರವಿಳಾಸಕ್ಕೆ ಇದು ಸಮಾನವಾಗಲಾರದೆಂದು ಹೇಳಲು ಪರಿಭವಕ್ಕೆ ಗುರಿಯಾದಂತೆಯೂ, ಷಡಕ್ಷರಿ ತಾನು ಕೆತ್ತುಕೊಂಡಿದ್ದ ಈತನ ಬಿರುದುಗಳನ್ನು ಪುನಃ ದಯೆಯಿಂದ ಕೊಟ್ಟು ಮನ್ನಿಸಿದಂತೆಯೂ, ಬಳಿಕ ರುದ್ರಭಟ್ಟನ ಸ್ನೇಹಿತನಾದ ಲಕ್ಷ್ಮೀಶನು ಬ್ರಾಹ್ಮಣರಿಗುಂಟಾದ ಅಸಮಾನವನ್ನು ತೋಗಲಾಡಿಸಬೇಕೆಂಬ ಅಭಿಪ್ರಾಯದಿಂದ 1691 ರಲ್ಲಿ ಜೈಮಿನಿಭಾರತವನ್ನು ಬರೆದು ವಿದ್ವಾಂಸರಿಂದ 'ಕವಿಚೂತಚೈತ್ರ' ಎಂಬ ಬಿರುದನ್ನು ಪಡೆದಂತೆಯೂ, ಒಂದು ಇತಿಹಾಸವುಂಟು. ಈ ವಿಷಯವನ್ನು ಹೇಳುವ ಈ ಪದ್ಯಗಳು ಮೈ॥ರೈಸಾ ಮುದ್ರಿಸಿರುವ ಭಾಷಾಭೂಷಣದ ಪೀಠಿಕೆಯಲ್ಲಿ (32 ನೆಯ ಪುಟ.) ಕೊಟ್ಟಿವೆ:—

ತಿವಕಲಾಬ್ಜಶಕರುಕ್ಷವರ್ಷಮಾ । ಧವಸಿತಾರ್ಕದಿನಜೀವವಾರದೊಳ್ ।
ಭವಿಗಳೆಲ್ಲ ವರರುದ್ರಭಟ್ಟನೇ । ಕವಿಯೆನಲ್ಕೊರೆದನೊಂದು ಕಾವ್ಯಮಂ ॥
ಅಜಿಸಲ್ ಜಗನ್ನಾಥವಿಜಯಮೆನಿಪಾಕಬ್ಬ ।
ಮುರುದೋಷಪೂಗಪರಿಚಿತವಾಗೆ ಲಾಕ್ಷಣಿಕ ।
ವರರದಂ ರಾಜಶೇಖರವಿಳಾಸಕೆ ಪಡಿಯನೊರೆಯದಿರೆ ರುದ್ರಭಟ್ಟಂ ॥
ಪರಿಭವಕೆ ಗುಜ್ಯಾದನೆಂದು ಸಭಿಕರ್ ಪೇಳ್ವಿ ।
ಪರಿಯಜ್ಞತು ಕರುಣದಿಂದಾಷಡಕ್ಷರಿದೇವ ।
ಬಿರುದುಗಳ ಕೊಂಡು ಮಗುಳ್ವಿತ್ತು ಮನ್ನಿಸಿ ಪೊರೆದನದ ಕೇಳ್ ಲಕ್ಷ್ಮೀಶನು ॥
ಹರಿಚರಿತದಿಂ ಕೂಡಿ ಹರಿಮೇಧಪರ್ವಕಥೆ ।
ಯೊರೆದ ವಾರ್ಧಕಷಟ್ಪದಿಗಳಿಂದ ಜೈಮಿನಿಯ ।
ವರಸೂಕ್ತಿತಾತ್ಪರ್ಯಭರಗರ್ಭಿತಮದಾಗೆ ರಸಿಕರ್ಕಳನುಮೋದಿಸಲ್ ॥

ಪರಿಪರಿಯಲಂಕಾರರಸಭಾವಪುಷ್ಟಿಯಿಂ ।
ಮೆಱೆದುದು ಗುಣೋಂದುಕಲೆಪರಿಮಿತಾಬ್ದದ ಶಕದಿ ।
ಹರಿವಾರಕಾರ್ತಿಕದ ಸಿತಪಂಚಮಿಪ್ರಜಾಪತಿಶರದಿ ಸಾಂಗಮೆನಲು ॥
ಕನ್ನಡಗಬ್ಬಿಗರಾತನ । ಮನ್ನಿಸಿ ಲಕ್ಷ್ಮೀಶನೊರ್ವನೇ ಕವಿರತ್ನಂ ।
ಸನ್ನುತನೆಂದುರುಬಿರುದಂ । ಚಿನ್ನದಿ ಕವಿಚೂತಚೈತ್ರನೆನೆ ಬರೆದಿತ್ತರ್ ॥

1604 ರಲ್ಲಿ ರಚಿತವಾದ ಭಟ್ಟಾಕಳಂಕನ ಶಬ್ದಾನುಶಾಸನದಲ್ಲಿ ಜಗನ್ನಾಥ ವಿಜಯದ ಪದ್ಯಗಳು ಉದಾಹೃತವಾಗಿರುವುದರಿಂದ ಮೈ॥ ರೈಸ್ ಮೇಲಣ ಇತಿಹಾಸವನ್ನು ನಂಬದೆ ಶಬ್ದಾನುಶಾಸನದ ಅವತರಣಿಕೆಯಲ್ಲಿ (ಪುಟ 43) ರುದ್ರಭಟ್ಟನ ಕಾಲವನ್ನು ಹೇಳದೆ ಅವನ ಹೆಸರನ್ನು ಭಟ್ಟಾಕಳಂಕನ ಹೆಸರಿಗೆ ಹಿಂದೆ ಹಾಕಿದ್ದಾರೆ.

ಈ ಕವಿ ಸುಮಾರು 1180 ರಲ್ಲಿ ಇದ್ದಿರಬೇಕೆಂದು ಊಹಿಸುವುದಕ್ಕೆ ಪ್ರಬಲವಾದ ಕಾರಣಗಳು ದೊರೆತಿವೆ.

ಮಲ್ಲಿಕಾರ್ಜುನನು (ಸು. 1245) ತನ್ನ ಸೂಕ್ತಿಸುಧಾರ್ಣವದಲ್ಲಿ ಜಗನ್ನಾಥ ವಿಜಯದಿಂದ ಅನೇಕಪದ್ಯಗಳನ್ನು ಉದ್ಧರಿಸಿ ಬರೆದಿರುವುದರಿಂದ ಈ ಕವಿ 1245 ಕ್ಕೆ ಹಿಂದೆ ಇದ್ದನೆಂಬುದು ವ್ಯಕ್ತವಾಗುತ್ತದೆ. ಅಲ್ಲದೆ, ದೇವಕವಿ (ಸು. 1200) ತನ್ನ ಕುಸುಮಾವಳಿಯಲ್ಲಿ ರುದ್ರಭಟ್ಟನನ್ನೂ ಪೂರ್ವಕವಿಗಳ ಗೋಷ್ಠಿಯಲ್ಲಿ ಸೇರಿಸಿ ಸ್ತುತಿಸುವುದರಿಂದ ಈತನು 1200 ಕ್ಕೆ ಹಿಂದೆ ಇದ್ದಿರಬೇಕು. ಇವನು ಕರ್ಣಪಾರ್ಯನನ್ನು (ಸು. 1140) ಸ್ತುತಿಸುವುದರಿಂದ 1140 ಕ್ಕೆ ಈಚೆ ಇದ್ದಿರಬೇಕು. ಆದುದರಿಂದ ಈ ಕವಿ 1140 ಕ್ಕೆ ಈಚೆಯೂ 1200 ಕ್ಕೆ ಹಿಂದೆಯೂ ಇದ್ದಿರಬೇಕೆಂಬುದು ಸ್ಪಷ್ಟವಾಗುತ್ತದೆ. ಇವನು 1173 ರಿಂದ 1220ರ ವರೆಗೆ ರಾಜ್ಯಭಾರಮಾಡಿದ ವೀರಬಲ್ಲಾಳನ ಕಾಲದಲ್ಲಿ ಈ ಗ್ರಂಥವನ್ನು ಬರೆದನೆಂದು ಅವನ ಗ್ರಂಥದಿಂದಲೇ ತಿಳಿಯುತ್ತದೆ.

(1) "ಚಂದ್ರಮೌಳಿಪ್ರಮುಖನಿಖಿಲವಿದ್ವಜ್ಜನಂ ಮೆಚ್ಚಿ ಪೇೞ್ದಿಂ"

ಎಂಬುದರಿಂದ ಈ ಗ್ರಂಥರಚನಾಕಾಲದಲ್ಲಿ ಪ್ರಸಿದ್ಧನಾದ ಚಂದ್ರಮೌಳಿಯೆಂಬ ಒಬ್ಬ ವಿದ್ವಾಂಸನು ಇದ್ದಂತೆ ತಿಳಿಯುತ್ತದೆ. ಚಂದ್ರಮೌಳಿಯೆಂಬ ಹೆಸರುಳ್ಳ ವಿದ್ವಾಂಸನಾದ ಒಬ್ಬ ಬ್ರಾಹ್ಮಣನು ವೀರಬಲ್ಲಾಳನ ಮಂತ್ರಿಯಾಗಿದ್ದಂತೆ 1181 ರಲ್ಲಿ ಬರೆದ ಶ್ರ. ಬೆ. 327 ನೆಯ ಶಾಸನದಲ್ಲಿಯ

ವರತರ್ಕಾಂಬುಜಭಾಸ್ಕರಂ ಭರತಶಾಸ್ತ್ರಾಂಭೋಧಿಚಂದ್ರಂ ಸಮು ।
ದ್ಧುರಸಾಹಿತ್ಯಲತಾಲವಾಲನೆಸೆದಂ ನಾನಾಕಳಾಕೋವಿದಂ ॥
ಸ್ಥಿರಮಂತ್ರಂ ದ್ವಿಜವಂಶಶೋಭಿತನಶೇಷಸ್ತುತ್ಯನುದ್ಯದ್ಯಶಂ ।
ಧರೆಯೊಳ್ ವಿಶ್ರುತಚಂದ್ರಮೌಳಿಸಚಿವಂ ಸೌಜನ್ಯಜನ್ಮಾಲಯಂ ॥

ಪತಿಭಕ್ತಂ ವರಮಂತ್ರಶಕ್ತಿಯುತನಿಂದ್ರಂಗೆಂತು ಭಾಸ್ವದ್ವೃಹ ।
ಸ್ಪತಿ ಮಂತ್ರೀಶ್ವರನಾದನಂತೆ ವಿಳಸದ್ವಲ್ಲಾಳವೇವಾವನೀ ॥
ಪತಿಗೀವಿಶ್ರುತಚಂದ್ರಮೌಳಿವಿಬುಧೇಶಂ ಮಂತ್ರಿಯಾದಂ ಸಮು ।
ನ್ನತತೇಜೋನಿಲಯಂ ವಿರೋಧಿಸಚಿವೋನ್ಮತ್ತೇಭಪಂಚಾನನಂ ॥

ಎಂಬ ಪದ್ಯಗಳಿಂದ ತಿಳಿಯುತ್ತದೆ.

(2) ಈತನು ಬ್ರಹ್ಮರುದ್ರಸೂರ್ಯರನ್ನು ಸ್ತುತಿಸುವ ಆದಿಪದ್ಯಗಳಲ್ಲಿ ಆದಿಪಂಪರನ್ನರಂತೆಯೇ ಶ್ಲೇಷೆಯಿಂದ ತನ್ನ ಸ್ವಾಮಿಯನ್ನೂ ಕೂಡ ಸ್ತುತಿಸುವಂತೆ ತೋರುತ್ತದೆ. ಮೂರನೆಯ ಪದ್ಯದಲ್ಲಿ ರುದ್ರನಿಗೂ ತನ್ನ ರಾಜನಿಗೂ ಹೊಂದುವಂತೆ 'ಅರಿಕಾಮಧ್ವಂಸಿ' 'ರಾಜರಾಜಪ್ರತಿಷ್ಠಾನಿರತಂ' 'ಉಮಾಕಾಮಿನೀಜೀವಿತೇಶಂ' ಎಂಬ ವಿಶೇಷಣಗಳನ್ನು ಪ್ರಯೋಗಿಸಿದ್ದಾನೆ. ವೀರಬಲ್ಲಾಳನು ಉಚ್ಚಂಗಿಕೋಟೆಯನ್ನು ಸ್ವಾಧೀನಪಡಿಸಿಕೊಂಡು ಅಲ್ಲಿಯ ರಾಜನಾದ ಕಾಮನನ್ನು ಸೆರೆಹಿಡಿದಂತೆ ಮೇಲೆ ಹೇಳಿದ ಶಾಸನದ—

ಚಿರಕಾಲಂ ರಿಪುಗಳ್ಗಸಾಧ್ಯಮೆನಿಸಿರ್ದುಚ್ಚಂಗಿಯುಂ ಮುತ್ತಿ ದು ।
ರ್ಧರತೇಜೋನಿಧಿ ದೂಳಿಗೋಂಟೆಯುನೆ ಕೊಂಡಾಕಾಮದೇವಾವನೀ ॥
ಶ್ವರನಂ ಸಂದೊಡೆಯಕ್ಕೆ ತೀಶ್ವರನನಾಭಂಡಾರಮಂ ಸ್ತ್ರೀಯರಂ ।
ತುರಗವ್ರಾತಮುಮಂ ಸಮಂತು ಪಿಡಿದಂ ಬಲ್ಲಾಳಭೂಪಾಳಕಂ ॥

ಎಂಬ ಪದ್ಯದಿಂದ ಗೊತ್ತಾಗುತ್ತದೆ.

ಹೊಯ್ಸಳರಾಜರಿಗೆ 'ಚೋಳರಾಜಪ್ರತಿಷ್ಠಾಚಾರ್ಯ' ಎಂಬ ಬಿರುದು ಅನೇಕ ಶಾಸನಗಳಲ್ಲಿ ದೊರೆಯುತ್ತದೆ. ರಾಜರಾಜ ಎಂಬ ಹೆಸರುಳ್ಳ ಮೂವರು ಚೋಳರಾಜರಿದ್ದರು. ಇವರಲ್ಲಿ 3 ನೆಯವನು ಹೊಯ್ಸಳರಾಜರ ಸಹಾಯದಿಂದ ಕಳೆದುಕೊಂಡಿದ್ದ ಸಿಂಹಾಸನವನ್ನು ಪುನಃ ಪಡೆದನು.

ವೀರಬಲ್ಲಾಳನಿಗೆ ಉಮಾದೇವಿಯೆಂಬವಳು ಮಹಿಷಿಯಾಗಿದ್ದಂತೆ ಅನೇಕ ಶಾಸನಗಳಿಂದ[1] ತಿಳಿಯಬರುತ್ತದೆ.

ಆದುದರಿಂದ ಈ ವಿಶೇಷಣಗಳು ವೀರಬಲ್ಲಾಳನಿಗೆಯೇ ಅನ್ವಯಿಸುತ್ತವೆ. ಈ ಕಾರಣದಿಂದ ಕವಿ ಹೇಳುವ ಚಂದ್ರಮೌಳಿ ಈ ದೊರೆಯ ಮಂತ್ರಿಯಾದ ಚಂದ್ರಮೌಳಿಯೇ ಎಂಬುದರಲ್ಲಿ ಸಂಶಯವಿಲ್ಲ.

**ಈ ಕಾರಣಗಳಿಂದ ರುದ್ರಭಟ್ಟನು ವೀರಬಲ್ಲಾಳನ ಕಾಲದಲ್ಲಿ ಸುಮಾರು 1180 ರಲ್ಲಿ ಇದ್ದಿರಬೇಕು.**

---

1. ಅರಸಿಯಕೆರೆ— 40, 77, 85, 90, 93; ಚೆನ್ನರಾಯಪಟ್ಟಣ— 172.

ಈತನು ಬ್ರಾಹ್ಮಣ ಕವಿ; ಇವನಿಗೆ ಕೃತಿಶಾರದಾಭ್ರಚಂದ್ರಾತಪ, ಕವಿರಾಜ ಎಂಬ ಬಿರುದುಗಳಿದ್ದಂತೆ ತೋರುತ್ತದೆ.

ತನಗೆ ಹಿಂದೆ ಇದ್ದ ಸಂಸ್ಕೃತಕವಿಗಳಲ್ಲಿ ವಾಲ್ಮೀಕಿ, ವ್ಯಾಸ, ಹರ್ಷ, ಬಾಣ, ಮಾಘ, ಕಾಳಿದಾಸ ಇವರುಗಳನ್ನು ಸ್ತುತಿಸಿ ಬಳಿಕ ಕನ್ನಡಕವಿಗಳನ್ನು ಈ ಪದ್ಯದಲ್ಲಿ ಹೇಳಿದ್ದಾನೆ:—

ಇನಿತುಮವಿರ್ಕ್ಕ ಮತ್ಕೃತಿಯೊಳೀಧರೆ ಬಣ್ಣಿಸೆ ಸಂದ ಶಂಖವ।
ರ್ಮನ ಬಗೆ ಶಾಂತಿವರ್ಮನ ನಯಂ ಗುಣವರ್ಮನ[1] ಬಂಧಗೌರವಂ ॥
ಮನಸಿಜನೋಜೆ ಕಣ್ಣಪನ ಜಾಣ್ಮುಡಿ ಪಂಪನ ರೀತಿ ಚಂದ್ರಭ।
ಟ್ಟನ ಜತಿ ಪೊನ್ನಮಯ್ಯನ ಪಡಂಗು ಗಜಾಂಕುಶನುಳ್ಳ ಬಿನ್ನಣಂ ॥

ಈತನನ್ನು **ಚೌಂಡರಸ** (ಸು. 1300), **ಸಾಳ್ವ** (ಸು. 1550), **ಚಿಕ್ಕುಪಾಧ್ಯಾಯ** (1672) ಮೊದಲಾದ ಕವಿಗಳು ಸ್ಮರಿಸಿದ್ದಾರೆ.

ತನ್ನ ಕವಿತಾಚಾತುರಿಯನ್ನು ಈ ಪದ್ಯದಲ್ಲಿ ಹೇಳಿಕೊಂಡಿದ್ದಾನೆ:—

ಇನಿಯಳ ಸೋಂಕಿನಂತೆ ಪೊಸಮಾವಿನ ಪೂವಿನ ಜೊಂಪದಂತೆ ಚಂ।
ದನರಸದಣ್ಪಿನಂತೆ ನಸೆಯೇಱಿದ ಮಲ್ಲಿಗೆಯಂತೆ ಪೂರ್ಣಚಂ ॥
ದ್ರನ ಸಿರಿಯಂತೆ ಬಂದೆಸಪ ತೆಂಕಣ ತಂಬೆಲರಂತೆ ರುದ್ರಭ।
ಟ್ಟನ ಕವಿತಾರಸಂ ಮನಮುನಿರ್ಕುಲಿಗೂಳ್ದುದು ಸಜ್ಜನರ್ಕಳಾ ॥

ಇವನ ಗ್ರಂಥ

## ಜಗನ್ನಾಥವಿಜಯ.

ಇದು ಚಂಪೂರೂಪವಾಗಿದೆ; 18 ಆಶ್ವಾಸಗಳಾಗಿ ಭಾಗಿಸಲ್ಪಟ್ಟಿದೆ. ಇದರಲ್ಲಿ ಕೃಷ್ಣನ ಜನನ ಮೊದಲುಗೊಂಡು ಬಾಣಾಸುರಯುದ್ಧದವರೆಗೆ ವಿಷ್ಣುಪುರಾಣದ ಕಥೆ ಹೇಳಿದೆ.

ಕವಿ, ತನ್ನ ಗ್ರಂಥವು "ಅನವದ್ಯಂ ರೀತಿಚೋದ್ಯಂ ಸಕಲವಿಬುಧಹೃದ್ಯಂ" ಎಂದು ಹೇಳಿಕೊಂಡಿದ್ದಾನೆ.

ಗ್ರಂಥಾವತಾರದಲ್ಲಿ ಕೃಷ್ಣನನ್ನು ಸ್ತುತಿಸಿದ್ದಾನೆ. ಬಳಿಕ ಬ್ರಹ್ಮ, ರುದ್ರ, ಸೂರ್ಯ, ಗಣಪತಿ, ಸರಸ್ವತಿ ಇವರುಗಳನ್ನು ಸ್ತುತಿಸಿ, ಆಮೇಲೆ ಸಂಸ್ಕೃತ ಕರ್ಣಾಟಕ ಕವಿಗಳನ್ನು ಹೊಗಳಿ, ಗ್ರಂಥವನ್ನು ಆರಂಭಿಸಿದ್ದಾನೆ. ಆಶ್ವಾಸಗಳ ಕೊನೆಯಲ್ಲಿ ಈ ಗದ್ಯವಿದೆ:—

1. ಗುಣನಂದಿಯ ಎಂದು ಪಾಠಾಂತರ.

ಇದು ಸಮಸ್ತಕಮಳಭವಾಂಡಮಾಲಾಘಟೀಘಟತಾರಘಟ್ಟಘಟನಾಸ್ವತಂತ್ರ ನಿಜ ಸ್ವರೂಪನಿರೂಪಣಚಕಿತಸಕಳಾಮ್ನಾಯತಂತ್ರ ಲಕ್ಷ್ಮೀಕಾಂತಶ್ರೀಪಾದಭಕ್ತಿಯುಕ್ತ ಸುಕವೀಂದ್ರ ರುದ್ರಪ್ರಣೀತ ಶ್ರೀಜಗನ್ನಾಥವಿಜಯಮಹಾಪ್ರಬಂಧದೊಳ್.

**ಈ ಕವಿಯ ಬಂಧವು ಪ್ರೌಢವಾಗಿಯೂ ಬಹಳಮಟ್ಟಿಗೆ ಜೈನಸರಣಿಯನ್ನು ಅನುಸರಿಸಿಯೂ ಇದೆ. ಇವನ ಗ್ರಂಥದಿಂದ ಮಲ್ಲಿಕಾರ್ಜುನ** (ಸು. 1245), **ಅಭಿನವವಾದಿವಿದ್ಯಾನಂದ** (1533), **ಭಟ್ಟಾಕಳಂಕ** (1604) **ಮೊದಲಾದವರು ಪದ್ಯಗಳನ್ನು ಅನುವಾದಮಾಡಿದ್ದಾರೆ.**

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ :—

### ವರ್ಷಾಕಾಲ.

ಮನದನುರಾಗದಿಂ ನೆಗೆದು ನೀಡಿದ ಕಂಠಮುರಲ್ವ ತುಪ್ಪಟ್ಟು ।
ರ್ಬನಿವಿಷಮಾದ ಕಣ್ ತೆಱೆದ ಚಂಚು ವಿಜೃಂಭಿಪೆಱಂಕೆ ರಂಜಿಸಿ ॥
ತ್ತೆನೆ ನಲವೇಱಿ ತೋರವನಿ ತಣ್ಬಿಸಿ ಮುಂಬನಿಯೆಂಬ ಕಾರ್ಮುಗಿ ।
ಲ್ಗನಿಯನಲಂಪಿನಿಂದಮಿದಿರ್ಗೊಂದು ಕರ್ದುಂಕಿದುದುದ್ಗಾತಕಂ ॥ 591 ॥

### ಹೇಮಂತ.

ತಳರ್ದು ಕುಲಾಯದಿಂ ಬಿದಿರ್ದೆಱಂಕೆಯ ನೀರ್ವನಿಯಂ ತೆರಳ್ದ ತು ।
ಪ್ಪಟ್ಟಿನೊನೆದಂಟಿ ಚಂಚುಪುಟದಿಂ ಬಿಸಲತ್ತಿದಿರಾಗಿ ನಿಂದು ಕ ॥
ಣ್ಗಳನರೆಮುಚ್ಚಿ ತೋದ ಗಜಯಂ ನಸು ಜೋಲಿಸಿ ಪಕ್ಕಿಗಳ್ ಮರಂ ।
ಗಳ ತುದಿಗೋಡ ಮೇಲೆ ದನಿಗೆಯ್ಯುತುಮಿರ್ದುವು ಮುಂಬಗಲ್ದರಂ ॥ 592 ॥

### ವಸಂತ.

ಕಲಕಾಸಂವೀತಚೂತಂ ಮುಕುಳಿತವಕುಳಂ ಪಲ್ಲವೋಲ್ಲಾಸಿಕಂಕೆ ।
ಲ್ಲಿ ಲತಾಂತಾಕ್ರಾಂತವಾಸಂತಿಕಮೆಸೆದುದು ಯೋಗಿವ್ರಹಸ್ಯಾಂತಕುಂತಂ ॥
ವಿಲಸನ್ಮಲ್ಲೀಲತಾಂತಂ ಲಸದಳಿಸಟಲಕ್ರಾಂತಮಿಂದುಸ್ಪಭಾಸಂ ।
ಕುಲಭಾಭಾಸ್ವದ್ದಿಗಂತಂ ಜಿತಸಕಲಜಗತ್ಕಂತುಕಾಂತಂ ವಸಂತಂ ॥ 593 ॥

### ಗ್ರೀಷ್ಮ.

ಉರಿವರಿವ ಬಿಸಿಲ ಬೆಂಕೆಯ । ಭರದೆ ಮಳಲ್ವೆಂಟಿ ಕಾಯ್ವು ಸಿಡಿಯುತ್ತಿರೆ ಪಂ ।
ಕರುಹಭವಾಂಡದ ಹಂಚಿನ ।ಹುರಿಗಡಲೆಪೊಲೊಡೆದು ಪಾಱುದುವು ಬಿಟ್ಟಂಗಳ್ ॥594॥

### ಮಾವು.

ತೀವಿದ ನುಣ್ಗೊನರ್ ಕಿಱುಗೊನರ್ ನಸುಬಲ್ಗೊನರೆಂಬಿವೇಱಿ ವೆ ।
ತ್ತಾವಗಮೊಳ್ಪಳಿರ್ ಪೊಸದಳಿರ್ ನಸುಕೆಂದಳಿರಾಗಿ ತಳ್ತ ನಾ ॥

ನಾವಿಧದಳ್ಳಿಗೊಂಬುಸೆಳೆಗೊಂಬೆಳಗೊಂಬುಗಳಿಂದಮೊಪ್ಪುವಿ।
ಮ್ಮಾವಿನ ಬಳ್ಳಿಮಾವಿನೆಳಮಾವಿನ ಸೊಂಪೆಸೆಗುಂ ವನಾಂತದೊಳ್ ॥595॥

## ಮಲ್ಲಿಗೆ.

ಅನುನಯದಿಂದೆ ಮೂಡಿದ ಪಸುರ್ನನೆ ಬೆಳ್ನೆಯಪ್ಪ ಪೊಂಗಿ ಬೆ।
ಳ್ನನೆ ಮುಗುಳಪ್ಪ ಬೀಗಿ ಮುಗುಳೊಯ್ಯನೆ ಬಲ್ಮುಗುಳಪ್ಪನುಕ್ರಮಂ॥
ತನಗೆಸೆಯಲ್ ತೊಡಂಬಿ ಕೆೞ್ಗಾಗಿ ಸಿಡಿಲ್ದು ಮರಲ್ದರಲ್ದು ಕಂ।
ಪಿನ ಕಣೆ ತುಂಬಿಯಂ ನೆರಪುತಿರ್ದುದು ಮಲ್ಲಿಗೆ ಚೈತ್ರಮಾಸದೊಳ್ ॥596॥

## ಗಿಳಿ.

ತಳಿರಂ ಚವುಂಟಿ ಪೂವಿಡಿ। ಗಳನಿಜದೆಂಜಲಿಸಿ ಕಾಯ್ಗಳಂ ಪಣ್ಣಂ ರಸಂ।
ಗಳನೀಂಟಿ ತಂಡತಂಡದೆ। ಗಿಳಿಗೆಡೆವರಗಿಳಿಗಳೆಸೆದುವೆಳಮಾವುಗಳೊಳ್ ॥597॥

## ಸಂಧ್ಯಾರಾಗ.

ಒಂದದ ಪಗಲರುಳಿರಡಱ। ಸಂದುಗಳಂ ವರುಣಶಿಲ್ಪಿ ರಕ್ತಾಂಬರದಿಂ।
ಸಂದಿಸಿ ಪೊಲ್ಪಪೊಲಿಸೆದುದು।ಮುಂದೆೞಿದ ಸಂಜೆಗೆಂಪು ಪಡುವಣ[1] ದೆಸೆಯೊಳ್ ॥598॥

## ತಾರಗೆ.

ಇಳಿಗೆ ಪಟಿಗಾಲದಂಬರ। ಮೊಳಸೋರ್ಗುಂ ಬೀೞ್ಕುಮೆಂದು ಧಾತ್ರಂ ಬಲ್ಲಿಂ।
ದಳವಡೆ ಬಿಟ್ಟುದ ಬೆಳ್ಳಿಯ। ಮೊಳಿಗಳೆಸಲ್ ತೊಳಗಿ ಬೆಳಗಿದುವು ತಾರಗೆಗಳ್ ॥599॥

## ಶಿಶುಪಾಲಕೃತ ಕೃಷ್ಣನಿಂದೆ.

ಭುವನಾಪಹಾಸ್ಯಮೆನಲ। ರ್ಣವದೊಳ್ ನೀಂ ಮತ್ಸ್ಯಮಾಗಲಾನಂದು ಸಮು।
ದ್ಭವಿಸಿದೆನಪ್ಪೊಡದಂ ಗಾ। ಣವಿಕ್ಕಿ ಪಿಡಿದೆನ್ನ ಬಾಣಸಕ್ಕೊಪ್ಪಿಸೆನೇ ॥600॥

ನೀಂ ಪೆಸರ ಪಂದಿಯಾದಂ। ದಾಂ ಪುಟ್ಟಿದೆನಪ್ಪೊಡಂದೆ ಬೇಂಟೆಯು ನೆವದಿಂ।
ದಂ ಪಿಡಿದು ತಂದು ಪಂದಿಗ। ಲಂಪಿಂ ಸಂಬರಮನ[2] ರೆಯಿಸದೆ ಮಾಣ್ವಪೆನೇ
॥601॥

ಕೋಗಿಲೆ ಕಾಗೆ ಮುಂ ಪೊರೆದ ಕಾರಣದಿಂ ಪರಪುಟ್ಟನಾದವೋ।
ಲಾಗದ ಜಾತಿ ಗೋವಳಿತಿ ರಕ್ಷಿಸೆ ನೀಂ ಪರಪುಟ್ಟನಾದೆ ನೋ॥
ಡೀಗಳಿದರ್ಕೆ ನಿನ್ನ ತನುಕಾರ್ಷ್ಣ್ಯಮೆ ಸೂಚಕಮಲ್ಲವೇ ಮಹಾ।
ಯಾಗದೊಳಗ್ರಪೂಜೆಗೆ ವಿಜಾತಿ ಕರಾಗ್ರಮನೇಕೆ ನೀಡಿದೈ ॥602॥

---

1. ಬೈಗಿನ. 2. ನಿಜಾಯುಧಂ.

ಅದಟಲೆದದೊಂದು ಬಂಡಿಯ। ನೊದೆದೈ ಬೇರ್ ಕೊಲ್ಲಿತ ಮತ್ತಿಯಂ ನೀಂಕಿಲ್ಲಿತ್ತೈ।
ಕುದುರೆಯನೋವದೆ ನೀಲ್ದೈ। ಮುದುಗಲ್ಲಿತ್ತಯನಿಟ್ಟು ಕೆಡಪಿದೈ ಬಲ್ಲಿದನೈ

॥ 603 ॥

ಪಾವಂ ಪಿಡಿದನಿತಜಿಂಗೊಳೀಂ। ಪಾವಡಿಗರ್ ಸುಭಟರಪ್ಪರೇ ಜಗುನೆಯ ನೀ।
ರ್ವಾವಂ ಪಿಡಿದನಿತಜಿಂಗೊಳು। ರ್ವೀವಳಯಂ ಸುಭಟನೆಂಗುಮೇ ಹರ ನಿನ್ನಂ

॥ 604 ॥

ಏಜುವನೋಲ್ ಪುತ್ತಂ ನೀ। ನೇಜಿ ಜರಾಸಂಧಭಯದೆ ಗಿರಿದುರ್ಗಮನಾ।
ತೂಜಿಲತುದಿಯೊಳ್ ಕೇದಗೆ। ಯೇಜಿದ ಕೋಡನಪೊಲಿರ್ದ ತೆಜಿನಂ ಮುಜಿದೈ

॥ 605 ॥

---

## ಉರಿಲಿಂಗ ಪೆದ್ದಿ. ಸು. 1180.

ಈತನು ವಚನಗಳನ್ನು ಬರೆದಿದ್ದಾನೆ. ಇವನು ವೀರಶೈವಕವಿ; **ಉರಿಲಿಂಗದೇವನ**[1] (ಸು. 1170) ಶಿಷ್ಯನೆಂದು **ನೀಲಕಂಠಾಚಾರ್ಯನ** (ಸು. 1485) ಆರಾಧ್ಯಚಾರಿತ್ರದಿಂದ ತಿಳಿಯುತ್ತದೆ. ಈತನು ನಲ್ಲೂರಿಮಠಕ್ಕೆ ಹನ್ನೆರಡು ವರ್ಷ ಸವುದೆಹಾಕಿ ಆ ಮಠದ ಆಯ್ಯನಾದ ಉರಿಲಿಂಗದೇವನನ್ನು ಲಿಂಗಕೊಡು ವಂತೆ ಕೇಳಿಕೊಳ್ಳಲು ಆತನು ಲಿಂಗವನ್ನು ಕೊಡದೆ ಕಲ್ಲೆಸೆದಾಗ ಆ ಕಲ್ಲೇ ಲಿಂಗ ವಾಯಿತು—ಎಂದು ವೀರಶೈವಗ್ರಂಥಗಳಲ್ಲಿ ಹೇಳಿದೆ.

### ವಚನಗಳು.

ಇವನ ವಚನಗಳಲ್ಲಿ **ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ** ಎಂಬ ಅಂಕಿತ ವಿದೆ. ಒಂದು ವಚನವನ್ನು ಉದಾಹರಿಸುತ್ತೇವೆ:—

ಜ್ಯೋತಿಯ ಸಂಗದಿಂದ ಕರ್ಪೂರವು ಜ್ಯೋತಿಯಪ್ಪಂತೆ, ಅಪ್ಪುವಿನ ಸಂಗದಿಂದ ಲವಣವು ಅಪ್ಪುವಪ್ಪಂತೆ, ಶ್ರೀಗುರುವಿನ ಸಂಗದಿಂದ ಶಿಷ್ಯನು ಶ್ರೀಗುರುವಪ್ಪುದು ತಪ್ಪದು. "ಯಥಾ ಬೀಜಸ್ತಥಾಂಕುರಃ" ಎಂಬುದು ತಪ್ಪದು ದಿಟ ದಿಟ ನೋಡಾ. ಕಲ್ಪವೃಕ್ಷದ ಬೀಜದಿಂದಾದ ಸಸಿ ಕಲ್ಪವೃಕ್ಷವಪ್ಪುದು ತಪ್ಪದು ನೋಡಾ. ಕಾಮಧೇನುವಿನ ಶಿಶು ಕಾಮಧೇನುವಪ್ಪುದು ತಪ್ಪದು ದಿಟ ದಿಟ ನೋಡಾ. ಸದ್ಗುರುವಿಂದಾದ ಶಿಷ್ಯನು ಸದ್ಗುರು ವಪ್ಪುದು ತಪ್ಪದು ದಿಟ ದಿಟ ನೋಡಾ. ಶಿವ ಬಲ್ಲನು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ

॥ 606 ॥

---

1. ಪುಟ 265.

## ರಾಮದೇವ. ಸು. 1180.

ಈತನು ಹೊನ್ನಾಳಿಯ 25 ನೆಯ ಮತ್ತು 50 ನೆಯ ಶಾಸನಗಳನ್ನು ಬರೆದುದಾಗಿ ಆ ಶಾಸನಗಳ ಅಂತ್ಯದಲ್ಲಿರುವ "ವಿರಚಿಸಿದನೊಪ್ಪೆ ಲಕ್ಷ್ಮೀಧರ ತನಯಂ ರಾಮದೇವನೀಶಾಸನಮಂ" ಎಂಬ ಪದ್ಯಭಾಗದಿಂದ ತಿಳಿಯುತ್ತದೆ. ಇವನು ಲಕ್ಷ್ಮೀಧರನ ಮಗನೆಂಬ ಒಂದು ಅಂಶವು ಮಾತ್ರ ಇದರಿಂದ ಗೊತ್ತಾಗುತ್ತದೆ. ಈತನು ಬ್ರಾಹ್ಮಣಕವಿಯೆಂದು ತೋರುತ್ತದೆ. ಈ ಶಾಸನಗಳಲ್ಲಿ ಎರಡನೆಯದು ಶಕ 1102 ರಲ್ಲಿ—ಎಂದರೆ 1180 ರಲ್ಲಿಯೂ—ಮೊದಲನೆಯದು ಶಕ 1130 ರಲ್ಲಿ—ಎಂದರೆ 1208 ರಲ್ಲಿಯೂ—ಬರೆದುದು. 25 ನೆಯ ಶಾಸನದಲ್ಲಿ ನಾಳ್ಪಭು ಹತ್ತಿಯೂರ ಕೇತಗಾವುಂಡನು ರಾಮನಾಥದೇವರಿಗೆ ದತ್ತಿಯನ್ನು ಬಿಟ್ಟಂತೆಯೂ 50 ನೆಯದರಲ್ಲಿ ಮೇಲಾಳ್ಕೆಯ ಮಹಾದೇವ ದಂಡನಾಯಕನು ಸಿದ್ಧೇಶ್ವರದೇವರಿಗೆ ಭೂಮಿಯನ್ನು ಬಿಟ್ಟಂತೆಯೂ ಹೇಳಿದೆ.

ಈ ಶಾಸನಗಳ ಬಂಧದಿಂದ ಈತನು ಒಳ್ಳೆಯ ಕವಿಯೆಂದು ತಿಳಿಯಬರುತ್ತದೆ ಇವುಗಳಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

### ಸಮುದ್ರ.

ಪರಿಧಾವನ್ಮತ್ಸ್ಯಪುಚ್ಛಾಹತಮಕರಕರಾಸ್ಫಾಳನಾಭೀಳನಕ್ರ ।
ಸ್ಫುರಿತೋದ್ಯಚ್ಛಂಖಮಾರಕ್ರಮಣಸಮುದಿತೋಚ್ಚಂಡವಾತಾಭಿಘಾತೋ ॥
ದ್ಧುರವೀಚೀಶೀಕರೌಘಸ್ಫಗಿತನಿಖಿಲದಿಙ್ಮಂಡಲಂ ರಂಜಿಕುಂ ಭಾ ।
ಸುರಜಂಬೂದ್ವೀಪಮುಂ ಸುತ್ತಿಜೆದಖಿಳಧರಾಭೋಗಭದ್ರಂ ಸಮುದ್ರಂ ॥ 607 ॥

### ದಾಸಗವುಂಡ.

ಗುಣದ ಬಣಂಬೆ ಪೆಂಪಿನ ತವರ್ಮನೆ ಸತ್ಯದ ಬಿತ್ತು ಸರ್ವಲ ।
ಕ್ಷಣದ ನಿಧಾನಮಣ್ಮೆನೆಜಿನಾವಟ ಭವಾನದ ರಾಜಿ ಧರ್ಮದೊ ॥
ಳ್ಗಣಿ ನಯದಾಕರಂ ವಿಭವದೂರ್ಜಿತಭೂಮಿಯೆನಲ್ ಪ್ರಭುತ್ವದ ।
ಗ್ರಣಿ ಸಲೆ ಹತ್ತಿಯೂರೆಸೆವ ದಾಸಗವುಂಡನೆ ಧನ್ಯನುರ್ವಿಯೊಳ್ ॥ 608 ॥

### ಕೇತಗವುಂಡ.

ಪರವಧುಗಾಳ್ವನಂಗೆ ಶರಣಾರ್ಥಿಗೆ ವೈರಿಗೆ ಜೇಂಬ್ಪಿನಂಗಿವಂ ।
ಸುರಸರಿದಾತ್ಮಜಂ ಗರುಡನಬ್ಜಿ ಜವಂ ರವಿಜಾತನೆಂದು ಸ ॥
ಚ್ಚರಿತನನಾಪ್ತನಂ ಸ್ಮರನನೊಳ್ಗಲಿಯಂ ಪಿರಿದೀವ ದಾನಿಯಂ ।
ಧರೆಯೊಗಟ್ಟುಂ ಮನೋಮುದನೆ ನಾಳ್ಪ್ರಭುವಂ ಸಲೆ ಕೇತಗಾಂಡನಂ ॥ 609 ॥

## ಚಟ್ಟರಸ.

ಅದಟರನಟ್ಟಿ ಮೆಟ್ಟಿ ರಿಪುವೀರರ ಬಿನ್ನಣಮಂ ಕಟಿಲ್ಚಿ ಮಾ ।
ಜಿ ದ ಸುಭಟರ್ಕಳಂ ಪರಿಯೆ ಪೊಯ್ವುದಿರಾಂಪರನಿಕ್ಕೆ ಪಿಡ್ಗದಂ ॥
ಪದಿನುಜದಾಜಿಯೊಳ್ ವಿಜಯಲಕ್ಷ್ಮಿಗಧೀಶ್ವರನಾದುದಾತ್ತಶೌ ।
ರ್ಯದ ಕಣಿಯೆಂಬಿನಂ ಪಿರಿಯ ಚಟ್ಟರಸಂ ಪೆಸರ್ವೆತ್ತನುರ್ವಿಯೊಳ್ ॥ 610 ॥

## ಈಶ್ವರಭೂಪನ ಕೀರ್ತಿ.

ಈಂಗಡಲಂತೆ ಪೆಂಪುವಡೆದೀಶ್ವರಭೂಪನ ಕೀರ್ತಿಯಂ ಕಳಂ ।
ಕಂಗೆಡೆಗೊಂಡ ಚಂದ್ರಮನದೇಂ ಗಡ ಪೋಲ್ಚನೆ ವೈರಿತುಂಗಸೌ ॥
ಧಂಗಳೊಳುರ್ವಿ ಪರ್ವಿದ ಕಜುಂಕೆಗೆ ತನ್ನಯ ಲಕ್ಷ್ಮಿ ಮೆಚ್ಚುತುಂ ।
ಲಂಗಿಸಿದಾಗಳೊಂದಿನಿಸು ಪೋಲ್ದೊಡೆ ಪೋಲ್ಕೆಮ..ದೇಬ್ಗೆಯೊಳ್ ॥ 611 ॥

---

## ಕುಮಾರ ಪದ್ಮರಸ. ಸು. 1180.

ಈತನು ಸಾನಂದಚರಿತ್ರವನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಇವನ ತಂದೆ ಕೆರೆಯ ಪದ್ಮರಸ (ಸು. 1165), ತಾಯಿ ಮಾದೇವಿ. ತಂದೆಯೇ ಈತನಿಗೆ ಗುರುವೆಂದು ತೋರುತ್ತದೆ. ಇವನಿಗೆ **ಶರಣಕವಿ** ಎಂಬ ಹೆಸರೂ ಉಂಟು.

ಇವನ ಗ್ರಂಥ

### ಸಾನಂದಚರಿತ್ರ.

ಇದು 9 ಸಂಧಿಗಳಾಗಿ ಭಾಗಿಸಲ್ಪಟ್ಟಿದೆ; ನಾನಾಷಟ್ಪದಿಗಳಲ್ಲಿ ಬರೆದಿದ್ದರೂ ಇದರಲ್ಲಿ ಕುಸುಮಷಟ್ಪದಿಗಳೇ ವಿಶೇಷವಾಗಿವೆ; ಒಟ್ಟು 791 ಷಟ್ಪದಿಗಳೂ 2 ರಗಳೆಗಳೂ ಇವೆ. ಈ ಸಾನಂದಚರಿತ್ರವು ಸ್ಕಾಂದಪುರಾಣದಲ್ಲಿ ನಂದಿಸನತ್ಕುಮಾರನಿಗೆ ಹೇಳಿದುದು. ಪೂರ್ಣವಿತ್ತನೆಂಬ ಋಷಿಯ ಮಗನಾದ ಸಾನಂದನು ನರಕದಲ್ಲಿ ಜನರು ನರಳುತ್ತಿದ್ದಾರೆಂದು ಕೇಳಿ ಅವರ ಸಂಕಟವನ್ನು ತಪಿಸುತ್ತೇನೆಂದು ಹೊರಟು ಪಂಚಾಕ್ಷರೀಮಹಿಮೆಯಿಂದ ನಾರಕಿಗಳಿಗೆಲ್ಲಾ ಸದ್ಗತಿಯನ್ನುಂಟುಮಾಡಿದನು—ಎಂಬುದು ಇದರ ಕಥಾಗರ್ಭ.

ಈ ಗ್ರಂಥವು ಕೆರೆಯ ಪದ್ಮರಸನ ಆಜ್ಞಾನುಸಾರವಾಗಿ ಸಂಸ್ಕೃತದಿಂದ ಕನ್ನಡಿಸಲ್ಪಟ್ಟಿತೆಂಬಂಶವೂ ಗ್ರಂಥದ ವಿಷಯ, ಉತ್ಕೃಷ್ಟತೆ, ಪ್ರಯೋಜನ ಇವುಗಳೂ ಈ ಪದ್ಯಗಳಲ್ಲಿ ಹೇಳಿವೆ:—

ಪಿರಿದುಮೊರುಂ ಮುನ್ನ । ವಿರಚಿಸಿದರಿಲ್ಲಿಂದು । ಧರೆಯೊಳೊಳಿಗನ್ನಡದಿ ಪಸರಿಸೆಂದು ।
ಗುರುರೂಪವಿಶ್ವಪತಿ । ಕರುಣಿಸಿದ ತೆಱದಿನಾಂ । ವರಪುರಾಣಾರ್ಥಮಂ ಕನ್ನಡಿಸಿದೆಂ ॥

ಹರಚಮೂವರಪರಮ । ವಿರಚಿತಶ್ಲೋಕಬಂ । ಧುರದೇವಭಾಷೆಯಂ ಕನ್ನಡಿಸಿದೆಂ ।
ಗುರುಕೆರೆಯಪದ್ಮರಸ । ವರಸೂನು ಪದುಮಿಗಂ । ಧರಣಿಯೊಳ್ ಸ್ತ್ರೀಬಾಲಸಾಧ್ಯಮಾಗೆ ॥

ಪರವಾದಿತರುಪರಶು । ಪರಸಮಯಗಿರಿಗಶನಿ । ಪರದೈವವಿಪಿನಪಟುದಾವವಿದಿದೇ ।
ಗುರುಲಿಂಗಜಂಗಮದ । ಪರವಿಲ್ಲವಿಲ್ಲೆಂದು । ಧರಣಿಯೊಳ್ ಡಂಗುರಂಬೊಯ್ವುದಿದಿದೇ ॥

ಚರಿತೆ ಸಾನಂದೇಶ । ಚರಿತೆ ಜಗದಾನಂದ । ಚರಿತೆ ಪಂಚಾಕ್ಷರೀವರಮಹಿಮೆಯ ।
ಚರಿತೆ ಶಿವಭಕ್ತಿಗಿದು । ಚರಿತೆ ಗುರುನಿಷ್ಠೆಗಿದು । ಚರಿತೆ ಸತ್ಪಥಕೆ ತಾನೆಂತೆಂತನೆ ॥

**ಇದೇ ಅರ್ಥವು ಪದ್ಮಣಾಂಕನ** (ಸು. 1385) **ಪದ್ಮರಾಜಪುರಾಣದಲ್ಲಿಯ ಈ ಪದ್ಯದಲ್ಲಿಯೂ ಹೇಳಿದೆ:—**

ಬಲ್ಬಿಕೆ ಸಮಯಸ್ಥಾಪನಾರ್ಥಂ ಶ್ರುತಿಸ್ಮೃತಿವಿ ।
ಮಳಪುರಾಣಾಗಮೋಪನಿಷತ್ಪಭೃತಿಶಾಸ್ತ್ರ ।
ಕುಳದ ಸಾರಂದೆಗೆದು ದೃಷ್ಟಕೆ ಬರೆದು ಸರ್ವರಱಿಯೆ ಕರ್ಣಾಟನಾಗಿ ॥

ಅಲಘುವರ್ಣಕರೀತಿಯಿಂ ರಸಂ ಮುಸುಕೆಯು ।
ಜ್ವಲಿಪಂತೆ ಸಾನಂದಚರಿತಾಖ್ಯಶಾಸ್ತ್ರಮನ ।
ತುಳಗುರುವರಂ ನಿಜಾತ್ಮಜನಿನೊರೆಯಿಸುತೆ ಶಿವಸುಖದೊಳಿಂತೊಪ್ಪುತಿರ್ದಂ ॥

ಸಂಧಿಗಳ ಕೊನೆಯಲ್ಲಿ

ಇದು ನಂದಿನಾಥೇಶ । ಗದಿತಮಾನಂದೈಕ । ದುದಧಿ ಸಾನಂದಾಖ್ಯಚರಿತದೊಳಗೆ ।
ಮುದದಿಂದೆ ಶರಣಕವಿ । ಪದೆದು ಕನ್ನಡಿಸಿದೀ । ..... ಸಂಧಿ ॥

**ಎಂದಿದೆ.**

**ಇವನ ಬಂಧವು ಬಹಳ ಲಲಿತವಾಗಿದೆ. ಈ ಗ್ರಂಥದಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—**

ಸಾನಂದನು ನರಕಕ್ಕೆ ಹೋದುದು.

ಕಟ್ಟಿಕಟ್ಟಿಪ ಪೆಪ್ಪಳಿಪ ಶೋಕಿಪ । ಹಳವಿಸುವ ಬಾಷ್ಪಂಗಳಲ್ಲುಗೆ ।
ಯುಟುವ ನಿಜಕರ್ಮಂಗಳಂ ಬೈದಳವಳಿಪ ಸೆಡೆವ ॥

ಬಲ್ಲಿಲ್ಲ ಹಾಹಾಕ್ರಂದ-ಂಗೆ । ಯ್ದುಲ್ಲಿಲ್ಲ ಜೀವಿಗಳೆಲ್ಲ ದುಃಖಂ ।
ಕಲ್ಲಿಲ್ಲವೋಲೀಕ್ಷಿಸಲಿಕ್ಕೆತಂದಂ ಮಹಾಕರುಣೆ ॥ 612 ॥

## ಪಂಚಾಕ್ಷರೀ ಮಹಿಮೆ.

ಕೆಡೆಮೆಟ್ಟಿ ಕರ್ಮಮುಮ । ನೊಡೆಮೆಟ್ಟಿ ಬೊಮ್ಮಮುಮ ।
ನೆಡೆಗಲಸಿ ದಾಂಟಿ ಸಂಸೃತಿಜಲಧಿಯಂ ॥
ಹೊಡೆವುದಿಡಿದಡಸಿ ಕಡು । ಹುಡಿಗುಟ್ಟಿ ಕಡಿದುಡಿದು ।
ವುಡುಗಿ ಸುಡುವುದು ದುರಿತಗಿರಿತರುಗಳಂ ॥ 613 ॥

ಕೆಟ್ಟ ಸಂಸೃತಿಯೆಂಬ । ನಿಟ್ಟೊಡಲ ದಂತಿ ಕ ।
ಟ್ಟೊಟ್ಟೈಸಲಾರ್ಗಮರಿದೆನಿಪುದಿದನು ॥
ನಿಟ್ಟಿಸುವುದಟ್ಟುವುದು । ಕಟ್ಟುವುದು ಸರಸರನೆ ।
ಮೆಟ್ಟಿ ನೀಳುವುದು ಪಂಚಾಸ್ಯಮಂತ್ರಂ ॥ 614 ॥

---

## ಬೊಪ್ಪಣಪಂಡಿತ. ಸು. 1180.

ಈತನು ಅಧ್ಯಾತ್ಮಿಬಾಳಚಂದ್ರನ "ನಿಯೋಗದಿಂ" ಬೆಳ್ಗೊಳದ ಗೊಮ್ಮಟೀಶ್ವರನನ್ನು 27 ಕನ್ನಡ ವೃತ್ತಗಳಿಂದ ಸ್ತುತಿಸಿದ್ದಾನೆ. ಈ ಪದ್ಯಗಳು ಸುಮಾರು 1180 ರಲ್ಲಿ ಬರೆದ ಶ್ರ. ಬೆ. 234 ನೆಯ ಶಾಸನದಲ್ಲಿವೆ. ನಿರ್ವಾಣಲಕ್ಷ್ಮೀಪತಿ ನಕ್ಷತ್ರಮಾಲಿಕೆಯೆಂಬ ಒಂದು ಸಣ್ಣಗ್ರಂಥವನ್ನೂ ಈತನು ಬರೆದಿದ್ದಾನೆ. "ಸುಜನೋತ್ತಂಸ" ಎಂಬ ಈ ಕವಿಯ ಬಿರುದಿನಿಂದ ಮುಗಿವ ನೀತಿಬೋಧಕವಾದ ಅನೇಕ ಕಂದಪದ್ಯಗಳು ದೊರೆಯುತ್ತವೆ; ಇವೂ ಏತತ್ಕೃತವೆಂದು ತೋರುತ್ತದೆ. ಈತನು ಇನ್ನಾವ ಗ್ರಂಥಗಳನ್ನು ಬರೆದಿದ್ದಾನೆಯೋ ತಿಳಿಯದು.

ಇವನು ಜೈನಕವಿ. ಇವನಿಗೆ ಸುಜನೋತ್ತಂಸ, ಕನ್ನಡಗವಿಬೊಪ್ಪ ಎಂಬ ಬಿರುದುಗಳಿದ್ದಂತೆ ತಿಳಿಯುತ್ತದೆ.

ಈತನು ಅಧ್ಯಾತ್ಮಿಬಾಳಚಂದ್ರನ[1] ನಿಯೋಗದಿಂದ ಶಾಸನಪದ್ಯಗಳನು ಬರೆದಂತೆ ತಿಳಿವುದರಿಂದ ಅವನ ಸಮಕಾಲದವನಾಗಿರಬೇಕು. ಇವನ ಪದ್ಯಗಳಿರುವ ಶಾಸನವು ಸುಮಾರು 1180 ರಲ್ಲಿ ಬರೆದುದಾದುದರಿಂದ ಇವನೂ ಸುಮಾರು ಆ ಕಾಲದವನಾಗಿರಬೇಕು.

ಈತನನ್ನು **ಆಚಣ್ಣನು** (ಸು. 1195) ತನ್ನ **ವರ್ಧಮಾನಪುರಾಣದಲ್ಲಿ** ಸ್ತುತಿಸಿದ್ದಾನೆ. **ಪಾರ್ಶ್ವನು** (1205) ತನ್ನ **ಪಾರ್ಶ್ವನಾಥ ಪುರಾಣದಲ್ಲಿಯ**

1. ಪುಟ 253.

ಧನಕಳೆಗೆ ಮಾಣಿಕಮನೀ । ವನತೆಜದಿಂ ಪೆಜರ್ಗೆ ಕಾವ್ಯಮಂ ಕುಡದೆ ಯಶೋ ।
ಧನಕೆ ಬುಧಜನಕೆ ಕೊಟ್ಟೊ । ರ್ವನೆ ಸುಜನೋತ್ತಂಸನೆನಿಸಿದಂ ಬೊಪ್ಪಣ್ಣಂ ॥

ಎಂಬ ಪದ್ಯದಲ್ಲಿ ಹೊಗಳಿದ್ದಾನೆ. **ಕೇಶೀರಾಜನು** (ಸು. 1260) "ಸುಜನೋತ್ತಂಸನ ಸುಮಾರ್ಗಮಿದಱೊಳೆ ಲಕ್ಷ್ಯಂ" ಎಂದು ತನ್ನ **ಶಬ್ದಮಣಿದರ್ಪಣ**ದಲ್ಲಿ ಹೇಳಿ 'ಸುಜನೋತ್ತಂಸ' ಎಂದು ಮುಗಿವ ಕೆಲವು ಪದ್ಯಭಾಗಗಳನ್ನು ಅಲ್ಲಲ್ಲಿ [1] ಉದಾಹರಿಸಿದ್ದಾನೆ.

ಕವಿ ತನ್ನ ಗುಣಾದಿಗಳನ್ನು ಈ ಪದ್ಯದಲ್ಲಿ ಹೇಳಿಕೊಂಡಿದ್ದಾನೆ:—

ಈಜಿನನುತಿಶಾಸನಮಂ । ಶ್ರೀಜಿನಶಾಸನವಿದಂ ವಿನಿರ್ಮಿಸಿದಂ ವಿ ।
ದ್ಯಾಜಿತವೃಜಿನಂ ಸುಕವಿಸ । ಮಾಜನುತಂ ವಿರದಕೀರ್ತಿ ಸುಜನೋತ್ತಂಸಂ ॥

ಈತನ ಗ್ರಂಥಗಳಲ್ಲಿ

## 1. ಗೊಮ್ಮಟಸ್ತುತಿ.

ಇದನ್ನು

ಶ್ರೀಗೊಮ್ಮಟಜಿನನಂ ನರ । ನಾಗಾಮರದಿತಿಜಖಚರಪತಿಪೂಜಿತನಂ ।
ಯೋಗಾಗ್ನಿಹತಸ್ಮರನಂ । ಯೋಗಿಧ್ಯೇಯನನಮೇಯನಂ ಸ್ತುತಿಯಿಸುವೆಂ ॥

ಎಂದಾರಂಭಿಸಿ, 27 ವೃತ್ತಗಳಿಂದ ಗೊಮ್ಮಟನನ್ನು ಸ್ತುತಿಸಿ, ಬಳಿಕ ತನ್ನ ಬಿರುದಾದ 'ಸುಜನೋತ್ತಂಸ' ಎಂಬ ಪದಕ್ಕೆ

ಸುಜನರ್ ಭವ್ಯರೆ ತನಗವ । ರಜಸ್ಯಮುತ್ತಂಸಮಪ್ಪ ಪುರುಳಿಂ ಬೊಪ್ಪಂ ।
ಸುಜನೋತ್ತಂಸನೆನಿಪ್ಪಂ । ಸುಜನಗ್ರ್ಯತ್ತಂಸಮೆಂಬ ಪುರುಳಿಂದೆನಿಸಂ ॥

ಎಂಬ ಪದ್ಯದಿಂದ ಅರ್ಥವನ್ನು ವಿವರಿಸಿ, ಕೊನೆಗೆ

ಪೊಡವಿಗೆ ಸಂದ ಗೊಮ್ಮಟಜಿನೇಂದ್ರಗುಣಸ್ತವಶಾಸನಕ್ಕೆ ಕ ।
ನ್ನಡಗವಿಬೊಪ್ಪನೆಂದೆನಿಪ ಬೊಪ್ಪಣಪಂಡಿತನೊಲ್ದು ಪೇೞ್ದಂ ॥
ಕಡೆಯಿಸಿದಂ ವಲಂ ಕವಡಮಯ್ಯನ ದೇವನನಲ್ತ್ಯಯಿಂದೆ ಬಾ ।
ಗಡಗೆಯ ರುದ್ರನಾದರದೆ ಮಾಡಿಸಿದಂ ವಿಲಸತ್ಪತಿಷ್ಠೆಯಂ ॥

ಎಂದು ಮುಗಿಸಿದ್ದಾನೆ.

ಈತನನ್ನು ಪಾರ್ಶ್ವನೇ ಮೊದಲಾದವರು ಸ್ತುತಿಸಿರುವ ರೀತಿಯಿಂದಲೂ, ಕೇಶಿರಾಜನು ಇವನ 'ಸುಮಾರ್ಗಂ' ತನ್ನ ಗ್ರಂಥದಲ್ಲಿ 'ಲಕ್ಷ್ಯಂ' ಎಂದು ಹೇಳಿರುವುದರಿಂದಲೂ, ತಾನು 'ಸುಕವಿಸಮಾಜನುತಂ' ಎಂದು ಹೇಳಿಕೊಂಡಿರುವುದರಿಂದಲೂ ಈತನು ಪ್ರಸಿದ್ಧಕವಿಯಾಗಿದ್ದಿರಬೇಕು.

1. ಶಬ್ದಮಣಿದರ್ಪಣ, ಪುಟಗಳು 109, 112, 164.

**ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—**

ಅತಿತುಂಗಾಕೃತಿಯಾದೊಡಾಗದದಱೊಳ್ ಸೌಂದರ್ಯಮೌನ್ನತ್ಯಮುಂ ।
ನುತಸೌಂದರ್ಯಮುಮಾಗೆ ಮತ್ತತಿಶಯಂ ತಾನಾಗದೌನ್ನತ್ಯಮುಂ ॥
ನುತಸೌಂದರ್ಯಮುಮೂರ್ಜಿತಾತಿಶಯಮುಂ ತನ್ನಲ್ಲಿ ನಿಂದಿರ್ದುವೇಂ ।
ಕ್ಷಿತಿಸಂಪೂಜ್ಯಮೊ ಗೊಮ್ಮಟೇಶ್ವರಜನಶ್ರೀರೂಪಮಾತ್ಮೋಪಮಂ ।। 615 ॥

ನೆಲಗಟ್ಟಾನಾಗಲೋಕಂ ತಳಮವನಿ ದಿಶಾಭಿತ್ತಿ ಭಿತ್ತಿವ್ರಜಂ ಸ್ತ ।
ಸ್ತಲಭಾಗಂ ಮುಚ್ಚಣಂ ಮೇಗಣ ಸುರರ ವಿಮಾನೋತ್ತರಂ ಕೂಟಜಾಳಂ ॥
ವಿಲಸತ್ತಾರಾಘಮಂತರ್ವಿತತಮಣಿವಿತಾನಂ ಸಮಂತಾಗೆ ನಿತ್ಯಂ ।
ನಿಲಯಂ ಶ್ರೀಗೊಮ್ಮಟೇಶಂಗೆನಿಸಿದುದು ಜಿನೋತ್ಕಾವಳೋಕಂ
ತ್ರಿಲೋಕಂ ॥ 616 ॥

## 2. ನಿರ್ವಾಣಲಕ್ಷ್ಮೀಪತಿ ನಕ್ಷತ್ರಮಾಲಿಕೆ.

ಇದರಲ್ಲಿ 27 ವೃತ್ತಗಳಿವೆ, ಪ್ರತಿಪದ್ಯವೂ 'ನಿರ್ವಾಣಲಕ್ಷ್ಮೀಪತಿ' ಎಂದು ಮುಗಿಯುತ್ತದೆ. ಈ ಸ್ತುತಿಯನ್ನು ಭವ್ಯರ ಪ್ರೇರಣೆಯಿಂದ ರಚಿಸಿದಂತೆ ಗ್ರಂಥಾಂತ್ಯದ ಈ ಪದ್ಯದಲ್ಲಿ ಹೇಳುತ್ತಾನೆ:—

ಭವವಿಧ್ವಂಸನವಾಸ್ತವಸ್ತವಮನೊಂದಂ ಪೇೞ್ದು ನೀನೆಂಬ ಭ ।
ವ್ಯವರಪ್ರೇರಣೆಯಿಂದಮಿಂತು ಸುಜನೋತ್ತಂಸಂ ಲಸದ್ವೃತ್ತಸು ॥
ಚ್ಛವಿಮುಕ್ತಾಗಣದಿಂದೆ ನಿರ್ಮಿಸಿದುದೀನಿರ್ವಾಣಲಕ್ಷ್ಮೀಪತಿ ।
ಸ್ತವನಂ ಭಾಜಿತಭವ್ಯಕಂರಕಲಿತಂ ನಕ್ಷತ್ರಮಾಲೋಪಮಂ ॥

**ಈ ಗ್ರಂಥದಿಂದ ಎರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—**

ಪರಭಾವಂ ಪರಭಾವಮುಂ ಜನಿಯಿಕುಂ ಸ್ವಾತ್ಮಸ್ಥಭಾವಂ ನಿರಂ ।
ತರಿತಂ ಸ್ವಾತ್ಮಗತತ್ವಮುಂ ಬಗೆಯೆ ಪಾತ್ರಂ ಲೋಹದಿಂ ನಿರ್ಮಿತಂ ॥
ನಿರತಂ ಲೋಹಮಯಂ ಸುವರ್ಣರಚಿತಂ ಸೌವರ್ಣಮೆಂಬಂದದಿಂ ।
ಪರಮುತ್ಕೃಂಬುದು ನಿನ್ನ ಶಾಸ್ತ್ರದ ತಿರುಳ್ ನಿರ್ವಾಣಲಕ್ಷ್ಮೀಪತೀ ॥ 617 ॥

ಸಮಯಜ್ಞಾನದೆ ಸಿದ್ಧಿಯಾಗದದಱೊಳ್ ಶ್ರದ್ಧಾನಮಿಲ್ಲಾದೊಡಾ ।
ಸಮಯಜ್ಞಾನಮುಮಲ್ಲಿ ನಂಬುಗೆಯುಮುಂಟಾಗಿರ್ದೊಡಂ ತುದ್ಧಸಂ ॥
ಯಮವಿಲ್ಲಾದೊಡಮಂತುಮಾಗದದಱಂ ರತ್ನತ್ರಯೀಸಿದ್ಧಿಯಿಂ ।
ಸಮನಿಕ್ಕುಂ ಮುನಿಗೆಂದು ನೀಂ ಬೆಸಸಿದೈ ನಿರ್ವಾಣಲಕ್ಷ್ಮೀಪತೀ ॥ 618 ॥

## 3. ನೀತಿ ಕಂದಗಳು.

**ಇವುಗಳಲ್ಲಿ ಕೆಲವನ್ನು ಇಲ್ಲಿ ಬರೆಯುತ್ತೇವೆ:—**

ನಡೆವುದು ನಗೆಗೆಡೆಯಾಗದೆ । ನುಡಿವುದು ನಯನೀತಿಯಲ್ಲಿ ಸುಜನರೊಳಿಂತುಂ ।
ಬಿಡುವುದು ಕೆಡೆಸುಡಿವವರಂ । ಜಡರೊಡನಾಡಲ್ಕೆ ವೇಡ ಸುಜನೋತ್ತಂಸಾ ॥ 619 ॥

ಒರ್ವರ ಸಿರಿಯೊರ್ವರ ಜಸ । ಮೊರ್ವರ ಸಾಮರ್ಥ್ಯಮೊರ್ವರಾಕಾರಂ ಮ ।
ತ್ತೊರ್ವರ್ ಬಯಸಿದೊಡಪ್ಪುದೆ । ಪೂರ್ವಾರ್ಜಿತಮಿಲ್ಲದರ್ಗೆ ಸುಜನೋತ್ತಂಸಾ
॥ 620 ॥

ಗಿರಿಗಿರಿಯೊಳ್ ಮಾಣಿಕಮುಂ । ಕರಿಕರಿಯೊಳ್ ಮುತ್ತು ಚಂದನಂ ವನವನದೊಳ್ ।
ಧರೆಧರೆಯೊಳ್ ಕತ್ತುರಿಯುಂ । ಪುರಪುರದೊಳ್ ನೃಪರುಮುಂಟೆ ಸುಜನೋತ್ತಂಸಾ
॥ 621 ॥

ಪ್ರೀತಿಯ ಮೊನೆಯಜ್ಜಯದ ಬಲ್ಲಿ । ಕಾತುರಿಸಿದೊಡುಂಟೆನಂಟು ಬತ್ತಿದಗಿಡುವಿಂ ।
ಗೇತವನೆತ್ತಿದೊಡದು ತಾಂ । ಚೇತರಿಪುದೆ ಮುನ್ನಿನಂತೆ ಸುಜನೋತ್ತಂಸಾ ॥622॥

ಎಲ್ಲರನೆಲ್ಲಾತೆಱದಿಂ । ಬಲ್ಲಂದದೆ ತನ್ನ ಕಡೆಗೆ ಮಾಟ್ಪಿನೆ ಚದುರಂ ।
ಪುಲ್ಲೀವುದೆನಲ್ಬೇಡಂ । ಪುಲ್ಲುಂ ಪಲ್ಲೆಡಗೆ ಬಹುದು ಸುಜನೋತ್ತಂಸಾ ॥ 623 ॥

ಮಜ್ಜಿವೊಕ್ಕವರಂ ಕಾಯದೆ । ತಜ್ಜದೊಟ್ಟದೆ ರಣದೊಳಾಂತ ರಿಪುಭೂಭುಜರಂ ।
ಸೆಜ್ಜೆಗೆಯ್ದದೆ ದುರ್ಜನರಂ । ಬಜ್ಜದೊಲ್ಬಳೆ ಭಾಗ್ಯಲಕ್ಷ್ಮಿ ಸುಜನೋತ್ತಂಸಾ ॥ 624 ॥

ಆವುಂ ಮಾವುಂ ಪಾವುಂ । ಬೇವುಂ ತಾವುಂಡೊಡೊಂದು ಕಾಲಿನ ನೀರಂ ।
ಭಾವಿಸೆ ಭಿನ್ನರುಚಿತ್ಯಮ । ನಾವರಿಸವೆ ಧಾತ್ರಿಯೊಳಗೆ ಸುಜನೋತ್ತಂಸಾ ॥ 625 ॥

---

## ರೇವಾಕೋಟ್ಯಾಚಾರ್ಯ. ಸು. 1180.

ಈತನು ಜೈನಕವಿ. ಇವನ ಕಾಲವು ಸುಮಾರು 1180 ಆಗಿರಬಹುದು. ಈತನ ಗ್ರಂಥದಿಂದ ಇಂಡಿಯನ್ ಆಂಟಕ್ವೆರಿ XII ನೆಯ ಸಂಪುಟದ 96 ನೆಯ ಪುಟದಲ್ಲಿ ಕೆಳಗೆ ಬರೆದಿರುವ ಭಾಗವು ಅನುವಾದಮಾಡಲ್ಪಟ್ಟಿದೆ:—

ಪಂಡವಾಸವ ಸೂಳಿಯರ್ ಪೆಜಗನೇಜ ಇಕ್ಕೆಲದೊಳಂ ಚಾಮರಂಗಳನಿಕ್ಕು ತುಂಬರೆ ಬೆಳ್ಗೊಡೆಗೆ ಪಾಲಿಕೇತನಧ್ವಜಂಗಳುಂ ಚಂದ್ರಾದಿತ್ಯರ್ಕಳುಂ ಸಿಂಹವ್ಯಾಘ್ರಮಕರ ಮತ್ಸ್ಯಧ್ವಜಂಗಳುಂ ಮೊದಲಾಗೊಡೆಯ ರಾಜಚಿಹ್ನಂಗಳುಂ ಮುಂದೆ ಪರಿಯೆ ಪಂಚ ಮಹಾಶಬ್ದಂಗಳುಂ ಬದ್ದವಣದ ಪಜ್ಜೆಗಳುಂ ಬಾಜಿಸೆ ವಂದಿಮಾಗಧಯಾಚಕಪ್ರಭೃತಿ ಜನಂಗಳ್ಗಂ ದೀನಾನಾಥರ್ಕಳ್ಗಂ ತುಷ್ಟಿದಾನಮಂ ಕುಡುತ್ತುಂ ಪೋಗಿ ಸಹಸ್ರಕೂಟ ಚೈತ್ಯಾಲಯಮನೆಯ್ದು ಪಟ್ಟವರ್ಧನದಿಂದಿಳಿದು ಬಸದಿಯಂ ತ್ರಿಸ್ರದಕ್ಷಿಣಂಗೆಯ್ದು ದೇವರಂ ಬಂದಿಸಿ.....ಇಂತೆಂದಂ (ವಿದ್ಯುಚ್ಚೋರಂ) ॥626॥

---

## ಚಾಚಣ್ಣ. 1188.

ಈತನು ಬೇಲೂರು 140 ನೆಯ ಶಾಸನದಲ್ಲಿಯೂ ಅರಸಿಯಕೆರೆಯ 47 ನೆಯ ಶಾಸನದಲ್ಲಿಯೂ ಪದ್ಯಗಳನ್ನು ಬರೆದುದಾಗಿ ಹೇಳಿದೆ. ಈ ಶಾಸನಗಳಲ್ಲಿ ಮೊದಲನೆಯದು ವೀರಬಲ್ಲಾಳನ (1173–1220) ಆಳಿಕೆಯಲ್ಲಿ ಕೀಲಕವರ್ಷದಲ್ಲಿ–ಎಂದರೆ 1188 ರಲ್ಲಿ–ಬರೆದುದು. ಈ ಶಾಸನಗಳಲ್ಲಿ ಈ ಕವಿ ಬರೆದ ಒಂದು ಪದ್ಯವನ್ನು ಉದ್ಧರಿಸಿ ಬರೆಯುತ್ತೇವೆ:—

ಜಂಗಮಕಲ್ಪಕಲತೆ ಫಲ । ಮಂ ಗೆಡೆಗೊಂಡಪೊಲುದಾರೆ ಮಾರವೆ ಪೆತ್ತಳ್ ।
ತುಂಗಯಶಮೆಂಬ ಪೊಸವೆ । ಳ್ದಂಗಳ ಬಿತ್ತಿನಿಪ ಭದ್ರನಂ ನಂದನನಂ ॥ 627 ॥

---

## ತ್ರಿವಿಕ್ರಮಪಂಡಿತ. 1188.

ಈತನು ಅರಸಿಯಕೆರೆಯ 22 ನೆಯ ಮತ್ತು 90 ನೆಯ ಶಾಸನಗಳನ್ನು ಬರೆದುದಾಗಿ ಮೊದಲನೆಯ ಶಾಸನದ ಕೊನೆಯಲ್ಲಿರುವ

ಬುಧನಿಧಿ ವಿವೇಕನಿಧಿ ಗುಣ । ನಿಧಿಯಾದಿತ್ಯಾನುಜಂ ತದಂತೇವಾಸಂ ।
ಬುಧನಿಧಿ ವಿವೇಕನಿಧಿ ಗುಣ । ನಿಧಿ ಬರೆದಂ ತ್ರಿಕ್ರಮಾಂಕನೀಶಾಸನಮಂ ॥

ಎಂಬ ಪದ್ಯದಿಂದ ತಿಳಿಯುತ್ತದೆ. ಅಲ್ಲದೆ ಇವನು ಅರಸಿಯಕೆರೆಯ 118 ನೆಯ ಶಾಸನವನ್ನು ತಿದ್ದಿದುದಾಗಿ ಅದರ ಕೊನೆಯಲ್ಲಿರುವ "ತ್ರಿವಿಕ್ರಮಕವೀಶ್ವರನೂರ್ಜಿತವಾಣಿ ತಿರ್ದಿ ತಾಂ ಬರೆದಂ" ಎಂಬ ಪದ್ಯಭಾಗದಿಂದ ತಿಳಿಯುತ್ತದೆ. ಈ ಶಾಸನಗಳಲ್ಲಿ ಮೊದಲನೆಯದು 1188 ರಲ್ಲಿಯೂ ಎರಡನೆಯದು 1189 ರಲ್ಲಿಯೂ ಮೂರನೆಯದು 1194 ರಲ್ಲಿಯೂ ಬರೆದುದು.

ಈ ಶಾಸನಗಳ ಬಂಧವನ್ನು ನೋಡಿದರೆ ಈತನು ಒಳ್ಳೆಯ ಕವಿಯೆಂಬುದರಲ್ಲಿ ಆವ ಸಂಶಯವೂ ಇಲ್ಲ. ಇವುಗಳಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

ವೀರಬಲ್ಲಾಳ.

ಅನುಪಮರಣನಿಸ್ತಾರಕ । ನನೂನಸತ್ತ್ವಸ್ಥಿತಂ ವಿಚಾರಕ್ಷಮನೆಂ ।
ಬ ನೆಗಟ್ಟಿಯಿಂದೆ ಬಲ್ಲಾ । ಳನ್ನಪಾಳಂ ಕಾರ್ತಿಕೇಯನಂತೊಪ್ಪಿರ್ಪಂ ॥ 628 ॥

ಇಳೆ ಶುದ್ಧಸ್ಫಟಿಕೋಪಳಸ್ಫಗಿತಮಾಶಾಮಂಡಳಂ ದಿಗ್ಪಥೂ ।
ಕುಳವೇಣೀಕುಸುಮೋಪಹಾರರಚಿತಂ ನಾಕಂ ನಿಳಿಂಪೇಶನ ॥
ರ್ಮಳಶುಂಡಾಳರದಪ್ರಭಾಧವಳಿತಂ ತಾರಾಪಥಂ ತಾರಕೋ ।
ಜ್ಜ್ವಳಿತಂ ತಾನೆನೆ ಕೊರ್ವಿ ಪರ್ವಿತು ಜಸಂ ಬಲ್ಲಾಳಭೂಪಾಳನಾ ॥ 629 ॥

### ದಾಸಿಸೆಟ್ಟಿಯ ವಾಣಿಜ್ಯ.

ಹರಿದಾಶಾಭ್ರಾಂಡಮಂ ವಾರುಣಿಗೆ ನಡಸುವಂ ವಾರುಣೀವಸ್ತುವಂ ವಿ ।
ಸ್ತರದಿಂದಿಂದ್ರಾಶೆಯೊಳ್ ಪೆರ್ಚಿಸುವನೊಸೆದು ಕೌಜೇರಿಯಿಂ ದ್ಯುಮ್ನಮಂ ನೋ ॥
ಡಿರೆ ಯಾಮ್ಯಾಭಾಗದೊಳ್ ಸಂದಿಸುವನೆಸೆವ ಮೌಲ್ಯಂಗಳಂ ಯಾಮ್ಯದಿಂದು ।
ತ್ತರದಿಕ್ಕಿಂಗಟ್ಟುವಂ ನೋಡನುಪಮವಣಿಜಂ ದಾಸೆಯಂ ದೋಷದೂರಂ ॥ 630 ॥

### ಬಾಣವೂರು.

ಬೆಳೆದಜಗಿದ ಕಲ್ಪವೆಗಳಿಂ । ಗಿಳಿವಿಂಡಿಂ ನಂದನಂಗಳಿಂದಳಿಕುಳದಿಂ ।
ಬಳಸಿದ ಪೂರ್ಣತಟಾಕಾ । ವಳಿಯಂದುರ್ವರೆಗೆ ಬಾಣಪೂರ್ ಸೊಗಯಿಸುಗುಂ
॥ 631 ॥

### ಅರಸಿಯಕೆರೆ.

ಮುಳಿದಾಗಳೆ ಕೂರ್ಪವರೊಳ್ । ತಳಿವುದು ತಿಳಿವುದು ಗದೆಂದು ಸಾಜುವ
ತೆಜದಿಂ ।
ಗಟ್ಟಿಪುವ ಗಿಳಿವಿಂಡಿನ ಕಳ । ಕಳವರಸಿಯಕೆಱೆಯ ಬನದೊಳೊಪ್ಪುತ್ತಿ
ರ್ಕ್ಕುಂ ॥ 632 ॥

---

## ಅಗ್ಗಳ. 1189.

ಈತನು ಚಂದ್ರಪ್ರಭಪುರಾಣವನ್ನು ಬರೆದಿದ್ದಾನೆ[1]. ಇವನು ಜೈನಕವಿ; ಮೂಲಸಂಘ ದೇಶೀಯಗಣ ಪುಸ್ತಕಗಚ್ಛ ಕೊಂಡಕುಂದವಂಶದಲ್ಲಿ ಹುಟ್ಟಿದವನು. ಇವನ ತಂದೆ ಶಾಂತೀಶ; ತಾಯಿ ಪೋಚಾಂಬಿಕೆ; ಗುರು ಶ್ರುತಕೀರ್ತಿ ತ್ರೈವಿದ್ಯ. "ಸುರರಾಜಾರ್ಚಿತನಿಂಗಳೇಶ್ವರಪುರಶ್ರೀತೀರ್ಥಚಂದ್ರಪ್ರಭಂ ಪರಮೇಶಂ" ಎಂಬುದರಿಂದ ಈತನು ಇಂಗಳೇಶ್ವರವೆಂಬ ಊರಿನವನೆಂದು ಊಹಿಸಬಹುದಾಗಿದೆ. ಈತನಿಗೆ ಜೈನಜನಮನೋಹರಚರಿತ; ಕವಿಕುಳಕಳಭವ್ರಾತಯೂಥಾಧಿನಾಥ; ಕಾವ್ಯನೌಕರ್ಣಧಾರ; ಭಾರತೀಭಾಳನೇತ್ರ; ಸಾಹಿತ್ಯವಿದ್ಯಾವಿನೋದ; ಜಿನಸಮಯಸರಸ್ಸಾರಕೇಳೀಮರಾಳ; ಸುಲಲಿತಕವಿತಾನರ್ತಕೀನೃತ್ಯರಂಗ ಎಂಬ ಬಿರುದುಗಳಿದ್ದಂತೆ ಆಶ್ವಾಸಗಳ ಆದ್ಯಂತಪದ್ಯಗಳಿಂದ ತಿಳಿಯುತ್ತದೆ. "ಕಳೆಗಳೆನಿತನಿತಜಿಹ್ವೆಗಳಗ್ಗಳಗಣ್ಣಂ ತೋರ್ಪನಗ್ಗಳಂ ನೃಪಸಭೆಯೊಳ್" ಎಂಬುದರಿಂದ ಈತನು ರಾಜಸಭೆಯಲ್ಲಿ ಪ್ರಸಿದ್ಧಕವಿಯಾಗಿದ್ದಂತೆ ತೋರುತ್ತದೆ. ಈ ಗ್ರಂಥವನ್ನು ಶಕ 1111 ರಲ್ಲಿ—ಎಂದರೆ 1189 ರಲ್ಲಿ—ಬರೆದಂತೆ,

---

1 ಅಗ್ಗಳಲೀಲಾವತಿಯೆಂದು ಒಂದು ಗ್ರಂಥವಿದೆಯೆಂದೂ ಅದು ವಿತತ್ಯತವೆಂದೂ ಕೆಲವರು ಹೇಳಿಕೊಳ್ಳುತ್ತಾರೆ. ಇದಕ್ಕೆ ಆವ ಆಧಾರವೂ ನನಗೆ ದೊರೆತಿಲ್ಲ.

ಏಕಾದಶಶತಮುಂ ಮ । ತ್ತೇಕಾದಶಮಾಗೆ ಶಕನೃಪಾಬ್ದಂ ಸಾಮ್ಯ ।
ಪ್ರಾಕಟವರ್ಷದ ಚೈತ್ರಸಿ। ತ್ಯೈಕಾದಶಿಯಂದು ನೆಗಟ್ಟುದೀಕೃತಿರತ್ನಂ ॥

ಎಂಬ ಪದ್ಯದಿಂದ ತಿಳಿಯುತ್ತದೆ.

ಈತನು ಪೂರ್ವಕವಿಗಳಲ್ಲಿ **ಪಂಪ, ಪೊನ್ನ, ರನ್ನ** ಇವರುಗಳ ಹೆಸರನ್ನು ಹೇಳುತ್ತಾನೆ.

ಈ ಕವಿಯನ್ನು **ಆಚಣ್ಣ** (ಸು. 1195), **ದೇವಕವಿ** (ಸು. 1200), **ಆಂಡಯ್ಯ** (ಸು. 1235), **ಕಮಲಭವ** (ಸು. 1235), **ಬಾಹುಬಲಿ** (ಸು. 1560) ಮೊದಲಾದವರು ಹೊಗಳಿದ್ದಾರೆ. **ಪಾರ್ಶ್ವನು** (1205) ತನ್ನ **ಪಾರ್ಶ್ವನಾಥಪುರಾಣದಲ್ಲಿ** ಈತನನ್ನು ಹೀಗೆ ಸ್ತುತಿಸಿದ್ದಾನೆ:—

ಜಿನಚಂದ್ರಸ್ತವನದೆ ಪಾ । ವನಮೆನಿಸುವ ಸೂಕ್ತಿ ಕೀರ್ತಿದೀಪಿಕೆಗುಜ್ಜೀ ।
ವನಕರಮೆನೆ ಕೌತುಕಮಂ । ಜನಿಯಿಸುಗುಂ ಕವಿಗಳೊಳಗೆ ನೆಗಟ್ವಗ್ಗಳನಾ ॥
ವಾಸ್ತವಭಕ್ತ್ಯುತಂ ರೂ। ಪಸ್ತವನಮಣಿಪ್ರವಾಳಮಂ ಜಿನನಾಸ್ಥಾ ।
ನಸ್ತವನಮನೊದವಿಸಿ ಭೂ । ವಿಸ್ತುತನಾದಗ್ಗಳಂಗನುಗ್ಗಳರೊಳರೇ ॥ [1]

ತನ್ನ ಕವಿತಾಚಾತುರಿಯನ್ನು ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ:—

ಕವಿಯುಂ ಜಕ್ಕುಲಿಸಂತ ನುಣ್ಪುದರ್ದಶಬ್ದಂ ಶಬ್ದಸಂದರ್ಭದೊಳ್ ।
ಸವಿಯುಂ ನುಂದಿಡುವರ್ಥಮರ್ಥದೊಳೊಡಂಬಟ್ಟೊಪ್ಪಸೋರಂತೆ ಬೀ ॥
ಜುವ ಭಾವಂ ಸಲೆ ಭಾವದಿಂದೊದವಿ ಚಿತ್ತಂ ಮೂಡಿ ತೀಂಕಾಡೆ ವೊ ।
ಣ್ಮುವ ನಾನಾರಸವೊಪ್ಪೆ ವಸ್ತುಕೃತಿಯುಂ ಪೆೞ್ಚಿಪ್ಪುಗ್ಗಳಂ ಮೆಚ್ಚಿಪಂ ॥
ಗಟ್ಟಿಪರ್ ಪವಣಜ್ಞಯಪೆ ಜಿಸ । ಗೊಳೆ ಸೆಣಸಿಂ ಲೋಕದೊಳಗೆ ವರ್ತಿಪ ವಿಳಸ ।
ತ್ಕಳಗಳೆನಿತನಿತಟ್ಟೊಳಮು । ಗ್ಗಳಗಣ್ಣಂ ತೋರ್ಪನಗ್ಗಳಂ ನೃಪಸಭೆಯೊಳ್ ॥
ಅಸಹಾಯತೆಯಿಂ ಸಂಸಾ । ರಸಮುದ್ರಮನೀಸಿದಂ ಶಶಿಪ್ರಭನೆಂತಂ ।
ಜಸಪಾಯತೆಯಿಂ ತಚ್ಚರಿ । ತಸಮುದ್ರಮನೀಸಿ ಜಸಮನಗ್ಗಳನಾಂತಂ ॥

ಇವನ ಗ್ರಂಥ

## ಚಂದ್ರಪ್ರಭಪುರಾಣ.

ಇದು ಎಂಟನೆಯ ತೀರ್ಥಂಕರನಾದ ಚಂದ್ರಪ್ರಭನ ಚರಿತವು; 16 ಆಶ್ವಾಸಗಳಾಗಿ ಭಾಗಿಸಲ್ಪಟ್ಟಿದೆ. ಈ ಗ್ರಂಥವನ್ನು ಈತನ ಗುರುವಾದ ಶ್ರುತಕೀರ್ತಿಯ ಆಜ್ಞಾನುಸಾರವಾಗಿ ಹೇಳಿದಂತೆ, ಮದರಾಸ್ ಪ್ರಾಚ್ಯಕೋಶಾಲಯದಲ್ಲಿ

1. ಈ ಪದ್ಯದಿಂದ ಅಗ್ಗಳನು ರೂಪಸ್ತವನಮಣಿಪ್ರವಾಳ, ಜಿನಾಸ್ಥಾನಸ್ತವನ ಎಂಬ ಗ್ರಂಥಗಳನ್ನು ಬರೆದಿರುವಂತೆ ತಿಳಿಯುತ್ತದೆ. ಇವು ಬೇರೆ ಗ್ರಂಥಗಳೋ ಅಥವಾ ಚಂದ್ರಪ್ರಭಪುರಾಣದಲ್ಲಿ ಸೂರ್ಚಿಸಿರುವ ಭಾಗಗಳಿಗೆಯೇ ಅನ್ವಯಿಸುತ್ತವೆಯೋ ತಿಳಿಯದು.

ರುವ ಬಿಳಗಿಯ ತಾಲ್ಲೂಕಿನ ಒಂದು ಶಾಸನದಲ್ಲಿಯ (1592) ಈ ಪದ್ಯದಿಂದ ತಿಳಿಯುತ್ತದೆ:—

ಶ್ರುತಕೀರ್ತಿದೇವನತ್ಯು । ರ್ಜಿತಕೀರ್ತಿಕನಾತ್ಮಶಿಷ್ಯನಿಂದಗ್ಗಳನಿಂ ।
ದತಿಶಯಿತಕಾವ್ಯಮಾರ್ಗದೆ । ನುತಚಂದ್ರಪ್ರಭಪುರಾಣಮಂ ಪೇಳ್ದಿಸಿದಂ ॥

ತನ್ನ ಗ್ರಂಥದ ಉತ್ಕೃಷ್ಟತೆಯನ್ನು ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ:—

ನಯದಿಂ ಪಂಪನೊಜಿಲ್ಲು ನಿರ್ಮಿಸಿದ ಪೊನ್ನಂ ಪ್ರೀತಿಯಿಂ ಪೇಳ್ದಿ ಭ ।
ಕ್ತಿಯಿನಾರತ್ನಕವೀಶ್ವರಂ ಸಮೆದ ತತ್ಕಾವ್ಯತ್ರಯಕ್ಕಂ ಜಗ ॥
ತ್ತ್ರಯಮುಂ ಮುಂ ಬೆಲೆಯಾಗಿ ಪೋಯ್ತೆನೆ ಬಲ್ಪಿಂಕ್ಕಾಂ ಪೇಳ್ದಿ
ಚಂದ್ರಪ್ರಭೋ ।
ದಯವಿಸ್ತಾರಿಯೆನಿಪ್ಪ ಕಾವ್ಯಮಿದಮೂಲ್ಯತ್ವಕ್ಕೆ ಪಕ್ಕಾಗದೇ ॥
ಪ್ರಮುದಿತಭವ್ಯಮಂ ಸುಕವಿಸಂಕುಲಸೇವ್ಯಮನಾಪ್ತತತ್ತ್ವವಿ ।
ತ್ಪ್ರಮುದಯಭಾವ್ಯಮಂ ಸಕಲಸತ್ಕೃತಿನವ್ಯಮನೀಜಿನಾಸ್ಥಯ ॥
ಕ್ರಮಯುತಕಾವ್ಯಮಂ ನೆಜೆಯೆ ನಿರ್ಮಿಸಿ ನಿರ್ಮಲಭಕ್ತಿಭಾವದಿಂ ।
ದಮಲಿನಕೀರ್ತಿಗಂ ಸುಕೃತಪೂರ್ತಿಗಮಗ್ಗಳನಂತು ನೋಂತರಾರ್ ॥

ಗ್ರಂಥಾವತಾರದಲ್ಲಿ ಚಂದ್ರಪ್ರಭನನ್ನು ಸ್ತುತಿಸಿದ್ದಾನೆ. ಬಳಿಕ ಸಿದ್ಧಾದಿಗಳನ್ನೂ ಪಂಚಗುರುಗಳನ್ನೂ ಜಿನಧರ್ಮವನ್ನೂ ಯಕ್ಷಯಕ್ಷಿಯರನ್ನೂ ಸರಸ್ವತಿಯನ್ನೂ ಸ್ತುತಿಸಿ, ಆನಂತರ ಅನುಬದ್ಧಕೇವಲಿಗಳಿಂದ ಶ್ರುತಕೀರ್ತಿದೇವನವರೆಗೆ ಗುರುಗಳನ್ನು[1] ಪರಿವಿಡಿಯಿಂದ ಸ್ತುತಿಸಿದ್ದಾನೆ.

ಆಶ್ವಾಸಗಳ ಕೊನೆಯಲ್ಲಿ

ಇದು ಪರಮಪುರುಷಾರ್ಥಕಳಕಳಭೃತ್ಪಮುದ್ಭೂತಪ್ರವಚನಸರಿತ್ಸರಿನ್ನಾಥ ಶ್ರುತಕೀರ್ತಿತ್ರೈವಿದ್ಯಚಕ್ರವರ್ತಿ ಪದಪದ್ಮನಿಧಾನದೀಪವರ್ತಿ ಶ್ರೀಮದಗ್ಗಳದೇವವಿರಚಿತಮಪ್ಪ ಚಂದ್ರಪ್ರಭಪುರಾಣದೊಳ್

ಎಂಬ ಗದ್ಯವಿದೆ.

ಇವನ ಬಂಧುವು ಅತಿಸ್ತೌಷ್ಠವಾಗಿಯೂ ಸಂಸ್ಕೃತಪದಭೂಯಿಷ್ಠವಾಗಿಯೂ ಇದೆ.

---

1. ಅನುಬದ್ಧಕೇವಲಿಗಳು, ಶ್ರುತಕೇವಲಿಗಳು, ಕೊಂಡಕುಂದ, ಭೂತಬಲಿ, ಪುಷ್ಪದಂತ, ವೀರಸೇನ, ಜಿನಸೇನ, ಅಕಳಂಕ, ಗೃಧ್ರಪಿಂಛ, ಅರ್ಹದ್ಬಲಿ, ಸಿಂಹನಂದಿ, ಸಮಂತಭದ್ರ, ಕವಿಪರಮೇಷ್ಠಿ, ಪೂಜ್ಯಪಾದ, ಕೊಂಡಕುಂದಾನ್ವಯಕುಲಚಂದ್ರ, ಮಾಘಣಂದಿ, ಕನಕನಂದಿ, ಶ್ರುತಕೀರ್ತಿ, ಮುನಿಚಂದ್ರ, ನಯಕೀರ್ತಿ, ಉದಯಚಂದ್ರ, ವೀರಣಂದಿ, ಮಾಘಣಂದಿ, ವರ್ಧಮಾನ, ದೇವಚಂದ್ರ, ದಾಮನಂದಿ, ನೇಮಿಚಂದ್ರ, ಶ್ರುತಕೀರ್ತಿ.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

## ಆಲಿಕಲ್ಲು.

ಘನಸಮಯಶಬರಕರಗತ। ಕನತ್ತುಟಿದ್ದಂಡಪಾತವಿಗಳನ್ನೀಲ।
ಸ್ತನಯಿತ್ನುಕುಲತಮಾಲೀ। ವನಪ್ರಸೂನಂಗಳಿನಿಸಿದುವು ಕರಕಂಗಳ್ ॥633॥

## ಬೇಸಗೆ.

ಅತಿತಪ್ತೋದ್ಪೃತ್ತಧೂಳೀಪಿಹಿತಮಹಿತಳಂ ತುಂಗವಾತೂಳಿಕಾಳಿಂ।
ಗಿತರೋದೋಮಂಡಳಂ ಪ್ರೋಚ್ಚಳಿತಮರುಮರೀಚೀ....ದಿಕ್ಸಂ ॥
ತತಿ ಬಂದತ್ತಂದಗುರ್ವಂ ಬಗೆಗೆ ಪಡೆದಮೋಘಂ ಸಮುದ್ಭೂತಮಾಘಂ।
ಹೃತನದ್ಯೋಘಂ ವಿಮೇಘಂ ಜನಿತಜನಮನೋಗ್ಲಾನಿದಾಘಂ ನಿದಾಘಂ ॥634॥

## ಮಾವು.

ತಳಿರ್ಗಳಿನೊರ್ಮೆ ಪೂಗುಡಿಯಿನೊರ್ಮೆ ಪಸುರ್ಮಿಡಿಯಿಂದಮೊರ್ಮೆ ಕಾ।
ಯ್ಗಳಿನಿರದೊರ್ಮೆ ಪಣ್ಗಳಿನದೊರ್ಮೆ ಜನಕ್ಕೆ ಮನಃಪ್ರಮೋದಮಂ॥
ಬಳೆಯಿಸಿ ಮಾಣ್ದುದಲ್ತು ಸವಿಯಂ ಕವಿಗೊಲಗಿಸಿತ್ತು ಮತ್ತ ಕೋ।
ಕಿಳರವದೊರ್ಮೆ ಭೃಂಗರುತದೊರ್ಮೆ ಶುಕಸ್ವರದೊರ್ಮೆ ಮಾಮರಂ ॥635॥

## ಕಮಲ.

ನಡು ನಸುಪೊಂಗಿ ಸುತ್ತಿಜ್ಜದು ಪತ್ತಿದೆಸಲ್ಗೊಂನೆವಿರ್ಚಿ ತಣ್ಣೆರ।
ಲ್ಗೆಡೆದೆಱಪಾಗೆ ಪೊಕ್ಕು ಸುಲ್ಗಿಱಯುತ್ತಿರೆ ತಳ್ಪು ಸಡಿಲ್ದಗಲ್ದರ॥
ಲ್ತಿಡಿದುಡುಗಿರ್ದ ಕೇಸರದ ನುಣ್ಗೊನೆ ಸೂಸೆ ಮರಲ್ದು ಚೆಲ್ವಿನೊಳ್।
ಗಡಣಿಸಿದತ್ತು ಮುಂಬಗಲೊಳಂಬುರುಹಂ ಸರಸೀಸಮೂಹದೊಳ್ ॥636॥

## ದುಂಬಿಯ ಮರಿ.

ಕೆಜುಮಡುಗೊಂಡ ಬಂಡಿನೊಳಗೀಸಿ ಪೊದಲ್ದಿಡಿದರ್ದ ಕುತ್ತಿಸ।
ಲ್ಕ್ಕುಜುವದೊಳೆಯ್ದಿ ಮೆಯ್ಗುರೆದು ಕೇಸರದೊಳ್ ನಲವಿಂ ಪೊರಳ್ದು ನೀ॥
ಳ್ದೆಜ್ಜಗಿದ ಕೇಲ್ದಿಸಲ್ಗಿಣಿಯೊಳೊಯ್ಯನೆ ಜಾಜಿ ಪರಾಗಪುಂಜದೊಳ್।
ಪಜ್ಜವಡಿಸಿತ್ತು ಭೃಂಗಶಿಶು ನೀರಜದೊಳ್ ನಿಜಪಾಂಸುಕೇಳಿಯಂ ॥637॥

## ಚಂದ್ರಾಸ್ತ.

ಇದು ಸ ಲ್ಗಾಳಿಯಿಂ ನೆಗೆದು ತೋಜುವ ಕಿಂಶುಕಶುಷ್ಕಪತ್ರಮು।
ಲ್ತಿದು ಗಗನಕ್ಕೆ ನಾಡೆ ನಲವಾಜಿದದೊಂದುಕಪೋತಮುಲ್ತು ಮು॥
ತ್ತಿದು ಪರಿದಿರ್ದ ಪಾವಸೆ ಮುಗಿಲ್ಮ್ಮಜಿಯೆಂಬಿನಮಿಂಬುಗೆಟ್ಟು ಕಂ।
ಡಿದ ಪಲ್ಗಂಚುಗನ್ನಡಿವೊಲೇನಿಲ್ಲಿದಾದುದೊ ಚಂದ್ರಮಂಡಲಂ ॥638॥

### ಖಾತಂ.

ಯುತಕಮಲಂ ಗತಕಮಲಂ । ಘೃತಕುರವಂ ಮುಕ್ತಕುರವಮಾತ್ತಕುವಲಯಂ ।
ಪ್ರತಿಮುಕ್ತಕುವಲಯಂ ಚಿ । ತ್ರತರಂ ನೋಡುವ ನರಂಗೆ ಖಾತಮುಖಾತಂ ॥ 639 ॥

### ಹೆಣ್ಣಿಗೆ ಬುದ್ಧಿವಾದ.

ಅಕ್ಕ ನಿಜಪ್ರಿಯಂಗೆ ಮನದಂದದೆ ನೀಂ ಬಿಸಕೆಯ್ವುದಾಗಳುಂ ।
ಮುಕ್ಕಳ ಮಾಟಿಕ್ಕಿಯಂತಿರವೆ ನೀನೊಡವಂದ ಜನಕ್ಕೆ ಸಂತಸಂ ॥
ಮೊಕ್ಕಳಮಾಗೆ ಮನ್ನಿಪುದು ಮಾವನ ಪೆರ್ಮೆಗಮತ್ತೆಯೊಲ್ಮೆಗಂ ।
ತಕ್ಕ ನೆಗಟ್ಟಿಯುಂ ನೆಗಟ್ಟುದೀವುದು ಪೆತ್ತೆಮಗಂ ಪ್ರಮೋದಮುಂ ॥ 640 ॥

### ಜಟ್ಟಿಗ.

ಬಿಟ್ಟ ಕುರುಳ್ ಪೊದಟ್ಟಿ ಕೆಸುಗಣ್ ನಸುಗೆತ್ತುವ ವಿಾಸೆ ಬಾಂಗೆ ತೂಂ ।
ಕಿಟ್ಟವೊಲಪ್ಪ ಮೆಯ್ ಮಿಳಿರ್ವ ನಾಲಗೆಯುರ್ಬಿದ ಪುಬ್ಬು ಕರ್ಬುನ ॥
ಕ್ಕಿಟ್ಟಳಮಪ್ಪ ಕರ್ಕಶತೆಯಿತ್ತಿದ ಕೆಚ್ಚಿನ ಡಂಗೆ ಭೀತಿಯಂ ।
ಪುಟ್ಟಿಸೆ ಬಂದು ಕಟ್ಟಿದಿರೊಳಿರ್ದನದೊರ್ವನದುರ್ತು ಜಟ್ಟಿಗಂ ॥ 641 ॥

### ಕುಕವಿನಿಂದೆ.

ಜೀಯೆನೆ ಬಲ್ಲವರ್ ನೆಜೀಯೆ ಸತ್ಕೃತಿವೇಟ್ಟಿದೆ ಪೇಟ್ ಘುಣಾಕ್ಷರ ।
ಪ್ರಾಯದೆ ಶಬ್ದಮೊಂದೆರಡು ಮತ್ತೆ ವಿಚಾರಿಸಿ ನೋಡೆ ಕಾಕತಾ ॥
ಳೀಯದೆ ವಾಚ್ಯಮೊಂದೆರಡು ಕೂಡೆ ನಿಘರ್ಷಿಪೊಡಂಧಲಾವಕ ।
ನ್ಯಾಯದೆ ಭಾವಮೊಂದೆರಡು ಲೇಸೆನೆ ಪೇಟ್ಟಿಜಿದಿರ್ಪುದೊಪ್ಪಮೇ ॥ 642 ॥

---

## ಕುಪ್ಪಟೂರ ಚಿಮ್ಮರ ವಾಸುದೇವ; ದೊಡ್ಡರ ನಾಚಯ; ಕೇಶವದೇವ. 1189.

ಈ ಮೂವರು ಕವಿಗಳೂ ಸೇರಿ ಸೊರಬದ 179 ನೆಯ ಶಾಸನವನ್ನು ಬರೆದಂತೆ ಆ ಶಾಸನದ ಕೊನೆಯಲ್ಲಿರುವ

ಒಡವಿದ ಕುಪ್ಪಟೂರ ಸುಜನಾಗ್ರಣಿ ಚಿಮ್ಮರವಾಸುದೇವನುಂ ।
ಸದುಗುಣಯುಕ್ತನಪ್ಪ ಕವಿ ದೊಡ್ಡರನಾಚಯನುಂ ಸಮಸ್ತ ಸ ॥
. . . . . ಗ್ಗರ ಕೇಶವದೇವನೆಂಬಿವರ್ ।
ಮುದದೊಳೆ ಕೂಡಿ ಪೇಟ್ಟಿರಿದು ಸಲ್ಗೆ ಶಶಾಂಕದಿನೇಶರುಳ್ಳಿನಂ ॥

ಎಂಬ ಪದ್ಯದಿಂದ ತಿಳಿಯುತ್ತದೆ. ಈ ಶಾಸನವು ತ್ರಿಭುವನಮಲ್ಲವೀರಸೋಮೇಶ್ವರನ (1182–1189) ಕಾಲದಲ್ಲಿ ಶಕ 1111 ರಲ್ಲಿ—ಎಂದರೆ 1189 ರಲ್ಲಿ—ಬರೆದುದು. ಇದರಲ್ಲಿ ಕಾಮರಸನು ರಾಮೇಶ್ವರದೇವರಿಗೆ ದತ್ತಿಯನ್ನು ಬಿಟ್ಟಂತೆ ಹೇಳಿದೆ.

ಈ ಶಾಸನದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

ಕಾಮರಸ.

ಮಿಗೆ ತೇಜಂ ಪೆಜಿರ್ಗಾಗೆ ಸೈರಿಸುವನೇ ಮಿತ್ರಂ ದಿಟಕ್ಕೆಂದು ಭಾ ।
ಸುಗೆ ಸೈರಿಪ್ಪನುದಾತ್ತದಾನಗುಣಮಂ ಸಂತಾನಮೆಂದಬ್ಜಿಜಂ ॥
ನೆಗಲ್ವಾಪ್ಪಕಲ್ಪಕುಜಕ್ಕೆ ಸೈರಿಸುವನುತ್ತುಂಗತ್ವಮಂ ಗೋತ್ರಮಂ ।
ದಗದೊಳ್ ಸೈರಿಪನುಂತೆ ಸೈರಿಸುವನೇ ಕಾದಂಬಕಂಠೀರವಂ ॥643॥

ಮೊಜಿಯೆಂಬುದು ಬಾಂಧವರೊಳ್ । ತೊಜಿಯೆಂಬುದು ನದನದೀನಿಕಾಯದೊಳಾದಂ ।
ಸೆಜಿಯೆಂಬುದು ಜೂದುಗಳೊಳ್ । ಪೆಜಿತೆಡೆಯೊಳಿವಿಲ್ಲ ಕಾಮನೃಪನಾಳ್ವೆಳೆಯೊಳ್ ॥644॥

ಧರೆಗುರುಳೆ ತಮ್ಮ ತಲೆಗಳ್ । ಕರಿಶಿರಮಂ ನಿಜಕಬಂಧದೊಳ್ ಪತ್ತಿಸಿ ಬೀ ।
ರರ ತಂಡಂ ಗಣಪರವೋಲ್ । ಕರಮೆಸೆದರ್ ಕಾಮಭೂಪನಿಜಿದಾಹವದೊಳ್ ॥645॥

---

## ಮೂಳೆಯ. 1192.

ಈತನು ಷಿಕಾರಿಪುರದ 105ನೆಯ ಶಾಸನವನ್ನು ಬರೆದುದಾಗಿ ಆ ಶಾಸನದ ಕೊನೆಯಲ್ಲಿರುವ "ಕವಿರಾಜರ ಪಂಡಿತ ಮೂಳೆಯನ ಕವಿತೆ" ಎಂಬ ವಾಕ್ಯದಿಂದ ತಿಳಿಯುತ್ತದೆ. ಈ ಶಾಸನವು ಶಕ 1114 ರಲ್ಲಿ—ಎಂದರೆ 1192 ರಲ್ಲಿ—ಬರೆದುದು. ಇದರಲ್ಲಿ ಎರಗಚಮೂಪನು ದಕ್ಷಿಣಕೇದಾರೇಶ್ವರದೇವರಿಗೆ ದತ್ತಿಯನ್ನು ಬಿಟ್ಟಂತೆ ಹೇಳಿದೆ.

ಈ ಶಾಸನದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

ಹೊಯ್ಸಳ ನಾರಸಿಂಹ.

ಮುನಿ ಮುನಿದೀಂಟದಬ್ಧಿ ಮರನಲ್ಲದ ಕಲ್ಪಕುಜಂ ಸುರಾರಿಸೂ ।
ದನನದಟಿಂದಮೆತ್ತದತಿಭಂಗದೊಳೊಂದದ ಮಂದರಾದ್ರಿ ನೆ ॥

ಟ್ಟನೆ ಮೃಗರೂಪಮಂ ತಳೆದು ಪುಟ್ಟಿದ ಕೇಸರಿ ಗುಣ್ಪಿನಾರ್ಪಿನೊಳ್ ।
ವಿನುತಮೆನಿಪ್ಪ ಬಿಣ್ಪಿನ ಪರಾಕ್ರಮದೊಳ್ ನರಸಿಂಹಭೂಭುಜಂ ॥ 646 ॥

ತಿರಳದರಾತಿಭೂಭುಜರ ನಿಟ್ಟಿಲುವಂ ಸಲೆ ತೀದು ಜೊಟ್ಟನಿ ।
ಟ್ಟುರುಳ್ದ ಶಿರಂಗಳಂ ಬಲುಗರುಳ್ಗಳೊಳಾಗಳೆ ಕೋದು ಕಂಠದೊಳ್ ॥
ಧರಿಸಿ ಕಪಾಳಮಂ ಪಿಡಿದು ನೆತ್ತರನೀಂಟಿ ಮನೋನುರಾಗದಿಂ ।
ಧುರದೊಳೆ ಮಿಡ್ಗಿ ಕಾಳಿ ಕುಣಿದಾಡುವಳೀನರಸಿಂಹಭೂಪನಾ ॥ 647 ॥

---

## ಹರಿಹರಸೂರಿ. 1194.

ಈತನು ಆರಸಿಯಕೆರೆಯ 118ನೆಯ ಶಾಸನವನ್ನು ಬರೆದನೆಂದೂ ಸೀಗುರಿಯ ಕಾಮನ ತಮ್ಮನೆಂದೂ ಇವನ ಕೃತಿಯನ್ನು ತ್ರಿವಿಕ್ರಮಪಂಡಿತನು[1] ತಿದ್ದಿದನೆಂದೂ ಆ ಶಾಸನದ ಅಂತ್ಯದಲ್ಲಿರುವ—

ಹರಿಹರಸೂರಿ ಸೀಗುರಿಯ ಕಾಮನ ತಮ್ಮನುಮೀಶದತ್ತವಾ ।
ಗ್ಗಿರಚಿಸಿದಂ ತ್ರಿವಿಕ್ರಮಕವೀಶ್ವರನೂರ್ಜಿತವಾಣಿ ತಿರ್ದಿ ತಾಂ ಬರೆದಂ ॥

ಎಂಬ ಪದ್ಯಭಾಗದಿಂದ ತಿಳಿಯುತ್ತದೆ. ಈ ಶಾಸನವು ಶಕ 1116 ರಲ್ಲಿ—ಎಂದರೆ 1194 ರಲ್ಲಿ—ಬರೆದುದು. ಇದರಲ್ಲಿ ವೀರಬಲ್ಲಾಳನ ದಂಡನಾಯಕನಾದ ಮಾಚಿರಾಜಯ್ಯನು ಮಲ್ಲಿಕಾರ್ಜುನ ಮಧುಸೂದನದೇವರ.ಗಳಿಗೆ ದತ್ತಿಯನ್ನು ಬಿಟ್ಟಂತೆ ಹೇಳಿದೆ.

ಈ ಶಾಸನದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

### ವಿಷ್ಣುವರ್ಧನ.

ಮಲೆವ ವಿರೋಧಿಮಂಡಳಿಕಮಂಡಳಿಯಂ ಮುರಳೊತ್ತಿ ಕೊಳ್ಳ ಕೂ ।
ರಲಗಿನ ಕೋಳಿ ಕಾಳವಿಳಯಾಹಿಯ ಕೋಳಿನೆ ಗೆಲ್ದು ನೀಳ್ದ ತೋ ॥
ಳ್ಬಲದೆ ನಿಮಿರ್ದ ಧಾತ್ರಿಯ ಪಾಕೃತಕಂಟಕಮಾಗೆ ರಾಜ್ಯದ ।
ಗ್ಗಲಿಕೆಯನಾಳ್ದ ಪಾಲಿಸಿದನಪ್ರತಿಮಂ ಕಲಿ ವಿಷ್ಣುವರ್ಧನಂ ॥ 648 ॥

### ಮಾಚದಂಡನಾಥ.

ಕರಚಕ್ರಂ ಮುರವಿದ್ವಿಷಂಗೆ ಬಳವಿದ್ವಿಷ್ಟಂಗೆ ವಜ್ರಂ ಭಯಂ ।
ಕರಭಾಳಪ್ರಬಳೇಕ್ಷಣಂ ಪುರಹರಂಗಾರ್ವಂಗೆ ಕಾಯ್ವುಗ್ರಕೇ ॥

---

1. ಪುಟ 283.

ಸರಿಗುಚ್ಚಂಡನಖಂ ವ್ಯಧಾನಮದುವೋಲ್ ಬಲ್ಲಾಳಭೂಪಂಗಿಳಾ ।
ಭರಣಂ ದ್ರೋಹಘರಟ್ಟ ಮಾಚಣನೆ ನಚ್ಚಿಂದುಂ ಜಯಕ್ರೀಡೆಯೊಳ್ ॥ 649 ॥

## ಮಧುಸೂದನ ದಂಡನಾಥನ ಪುರ.

ತುಜುಗಿದ ನಂದನಂ ಪರಿವ ಕಾಲ್ವೆ ಕಡಲ್ಗಿವೆ ತೋಡೆನಿಪ್ಪ ಪೆ ।
ರ್ಗೆಜಿ ಬಳಸಿರ್ದ ಪೆರ್ವೆಳಸು ಸಂದಣಿನೆತ್ತ ಜನಂ ವಿಳಾಸದಿಂ ॥
ಮೆಜಿವಮರಾಲಯಂ ಬಹುಗೃಹಂಗಳ ಸೊಂಪಿವಜಿಂದೆ ಚೆಲ್ವು ಕ ।
ನ್ಪೆಜಿದವೊಲೊಪ್ಪುಗುಂ ಪುರವರಂ ಮಧುಸೂದನದಂಡನಾಥನಾ ॥ 650 ॥

---

## ಪಾಲ್ಕುರಿಕೆ ಸೋಮನಾಥ. ಸು. 1195.

ಈತನು—"ಆರಾಧ್ಯಚಾರಿತ್ರ, ಬಸವಪುರಾಣ, ಅನ್ಯವಾದಕೋಲಾಹಲ, ಬಸವಣ್ಣನ ಪಂಚಗದ್ಯ, ಸದ್ಗುರುಗಳೆ, ಚೆನ್ನಬಸವರಗಳೆ, ಶರಣುಬಸವರಗಳೆ ಇವುಗಳನ್ನು ನಿರೂಪಿಸಿ ಸಕಲವೇದಾಗಮಪುರಾಣವಾಕ್ಯಂಗಳಿಂದ ಇಪ್ಪತ್ತೈದು ಪ್ರಕರಣಪದ್ಧತಿಯಿಂದ ಸೋಮನಾಥಭಾಷ್ಯವೆಂದು ಸಂಗ್ರಹಿಸಿ ಮೆಜಿವಣಿಗೆಮಾಡಿದನು" ಎಂದು ಭೈರವೇಶ್ವರಕಾವ್ಯದ ಕಥಾಸೂತ್ರರತ್ನಾಕರದಲ್ಲಿ ಹೇಳಿದೆ. "ಜ್ಯೋತಿರ್ಮಯಶಾಂಭವೀಜ್ಞಾನದೀಕ್ಷಾ ಚೋಧೆಯ ಪರಮರಹಸ್ಯಾರ್ಥವಂ ಸಂಗಯ್ಯನೆಂಬ ಶರಣನಿಗೆ 160 ವಚನಗಳಿಂದ ಸಂಗ್ರಹಿಸಿ ಉಪದೇಶಿಸಿದನು." ಇವುಗಳಲ್ಲದೆ ಈತನು ಶೀಲಸಂಪಾದನೆ, ಸೋಮೇಶ್ವರಶತಕ, ಸಹಸ್ರಗಣನಾಮ, ಪಂಚರತ್ನ ಎಂಬ ಗ್ರಂಥಗಳನ್ನೂ ಬರೆದಿದ್ದಾನೆ. ಚತುರ್ವೇದಸಾರ ಸಂಗ್ರಹವನ್ನೂ ಗಂಗೋದಯಕಾವ್ಯವನ್ನೂ ರಚಿಸಿದ್ದಾನೆ ಎಂದು ಹೇಳುತ್ತಾರೆ.

ಮೇಲೆ ಹೇಳಿದ ಗ್ರಂಥಗಳಲ್ಲಿ ಆರಾಧ್ಯಚಾರಿತ್ರ, ಬಸವಪುರಾಣ, ಇವೆರಡೂ ತೆಲುಗು ಭಾಷೆಯಲ್ಲಿವೆ. ಚತುರ್ವೇದಸಾರಸಂಗ್ರಹವೂ ಇದೇ ಭಾಷೆಯಲ್ಲಿರುವುದಾಗಿ ತಿಳಿಯುತ್ತದೆ. ಅನ್ಯವಾದಕೋಲಾಹಲ, ಬಸವಣ್ಣನ ಪಂಚಗದ್ಯ, ಸೋಮನಾಥಭಾಷ್ಯ, ಇವು ಸಂಸ್ಕೃತಭಾಷೆಯಲ್ಲಿವೆ. ಆದರೆ ಪಂಚಗದ್ಯಗಳ ಕೊನೆಯಲ್ಲಿ ಮಾತ್ರ ಗ್ರಂಥಕರ್ತನ ಅಂಕಿತವುಳ್ಳ ಒಂದೊಂದು ಕನ್ನಡ ಕಂದಪದ್ಯವಿದೆ. ಗಂಗೋದಯಕಾವ್ಯವೂ ಸಂಸ್ಕೃತದಲ್ಲಿ ಇರಬಹುದು. ಉಳಿದ ರಗಳೆಗಳು, ವಚನಗಳು, ಶೀಲಸಂಪಾದನೆ, ಸೋಮೇಶ್ವರಶತಕ, ಸಹಸ್ರಗಣನಾಮ, ಪಂಚರತ್ನ, ಇವು ಕನ್ನಡದಲ್ಲಿವೆ.

ಈತನು ವೀರಶೈವಕವಿ; ಗೋದಾವರಿಜಿಲ್ಲಾವಿನಲ್ಲಿಯ ಪಾಲ್ಕುರಿಕೆಯಲ್ಲಿ ಹುಟ್ಟಿದವನು. ಈ ಕವಿಯ ಆರಾಧ್ಯಚಾರಿತ್ರದ ಸಂಸ್ಕೃತಪರಿವರ್ತನರೂಪವಾದ ಗುರುರಾಜನ ಪಂಡಿತಚರಿತ್ರದಿಂದ—ಈತನು ವೇಮನಾರಾಧ್ಯನ ಪ್ರಶಿಷ್ಯನಾದ ಗುರುಲಿಂಗಾರ್ಯನ ಶಿಷ್ಯನೆಂದೂ ಬಸವೇಶನ ಶಿಷ್ಯನಾದ ಬಸವೇಶನ ಮಗ

ನೆಂದೂ[1] ಈ ಆರಾಧ್ಯಚಾರಿತ್ರವನ್ನು ತನ್ನ ಸ್ನೇಹಿತನಾದ ಸೂರಣಾಮಾತ್ಯನಿಗೆ ಹೇಳಿದನೆಂದೂ ತಿಳಿಯುತ್ತದೆ.[2] ಇದೂ ಅಲ್ಲದೆ ವೀರಶೈವಗ್ರಂಥಗಳಿಂದ ಈಯಂಶಗಳೂ ತಿಳಿಯಬರುತ್ತವೆ:—ಈತನು ಗಣಪುರದ ಅರಸನಾದ ಜಗದೇಕಮಲ್ಲನಿಂದ ಲಿಂಗಮುದ್ರೆಯ ಭೂಮಿಯನ್ನು ಪಡೆದನು; ಅರುವತ್ತುನಾಲ್ಕು ಶೀಲಗಳನ್ನು ನಡಸುತ್ತಿದ್ದನು. ಮೊಸರುಕುರಿಕೆಯ ಶಾಸ್ತ್ರಿ, ಆಜ್ಯಕುರಿಕೆಯ ಶಾಸ್ತ್ರಿ ಇವರುಗಳೊಡನೆ ವಾದಮಾಡಿ ಜಯಿಸಿದನು. ವೈಷ್ಣವನಾದ ಚಕ್ರಪಾಣಿರಂಗನಾಥನನ್ನು ವಾದದಲ್ಲಿ ಸೋಲಿಸಿ ತನ್ನ ಮಗ ಚತುರ್ಮುಖದ ಬಸವೇಶನಿಂದ ದೀಕ್ಷೆ ಕೊಡಿಸಿದನು. ಪಾಲ್ಕುರಿಕೆಯಿಂದ ಕರ್ನಾಟದೇಶದೊಳೊಪ್ಪುವ ಕಳ್ಳಿಯಕ್ಕೆ ಬಂದು ಅಲ್ಲಿ ಬಸವನನ್ನು ಗದ್ಯಪದ್ಯಗಳಿಂದ ಸ್ತುತಿಸುತ್ತಿದ್ದನು. ಈಶ್ವರನು ಕರೆದರೂ ಕೈಲಾಸಕ್ಕೆ ಹೋಗದೆ ಅಲ್ಲಿಯೇ ಇದ್ದು ಸಮಾಧಿಯಲ್ಲಿ ಕುಳಿತು ಮಣ್ಣುಮುಚ್ಚಿಸಿಕೊಂಡು ಬಯಲಾದನು.

ಈತನಿಗೆ ತತ್ತ್ವವಿದ್ಯಾಕಲಾಪ, ಕವಿತಾಸಾರ, ಅನ್ಯದೈವಕೋಟಾಹಳ, ಪ್ರತ್ಯಕ್ಷಭೃಂಗೀಶನವತಾರ—ಎಂಬ ಬಿರುದುಗಳಿದ್ದಂತೆ ತೋರುತ್ತದೆ.

ಈ ಕವಿಯನ್ನು **ಸೋಮರಾಜನು** (1222) ತನ್ನ **ಉದ್ಭಟಕಾವ್ಯದಲ್ಲಿ** "ಸಮುದಂಚದ್ವೃಷಭಸ್ತವಾಮರಮಹೀಜಾರಾಮನಂ ಸೋಮನಂ" ಎಂದು ಸ್ತುತಿಸಿರುವುದರಿಂದ ಈತನು 1222 ಕ್ಕೆ ಹಿಂದೆ ಇದ್ದನೆಂಬುದು ವ್ಯಕ್ತವಾಗುತ್ತದೆ. ಅಲ್ಲದೆ ಬಸವೇಶನ ಶಿಷ್ಯನ ಮಗನು ಎಂದು ಹೇಳಿಕೊಂಡಿರುವುದರಿಂದ ಬಸವನಿಂದ ಸುಮಾರು 30 ವರ್ಷ ಈಚೆ ಇದ್ದಿರಬಹುದು ಬಸವನು 1168 ರಲ್ಲಿ ಮೃತನಾದಂತೆ ತಿಳಿವುದರಿಂದ ಈ ಕವಿ ಸುಮಾರು 1195 ರಲ್ಲಿ ಇದ್ದಿರಬೇಕು.

ಈತನನ್ನು **ಸೋಮರಾಜ, ಗುಬ್ಬಿಯ ಮಲ್ಲಣಾರ್ಯ** (1513) ಮೊದಲಾದ ಅನೇಕ ವೀರಶೈವಕವಿಗಳು ಸ್ತುತಿಸಿದ್ದಾರೆ.

---

1 ಭೈರವೇಶ್ವರಕಾವ್ಯದ ಕಥಾಸೂತ್ರರತ್ನಾಕರದಲ್ಲಿ ಪಾಲ್ಕುರಿಕೆ ಸೋಮನಾಥನು ರಾಮಿದೇವಯ್ಯ ಮಹಾದೇವಿ—ಇವರುಗಳ ಮಗನೆಂದು ಹೇಳಿದೆ.

2. ಬೆಲ್ಲೇವಿನೇಮನಾರಾಧ್ಯ ಪ್ರತಿಷ್ಯಸ್ಯ ಕೃಪಾನಿಧೇ ।
ಗುರುಲಿಂಗಾರ್ಯಸ್ಯ ದಯಾಕಸ್ತಗರ್ಭಸಮುದ್ಭವಃ ॥
ಬಸವೇಶಸ್ಯತನಯಃ ಬಸವೇಶ್ವರಗೋತ್ರಕಃ ।
ಬಸವೇಶಭುಜಿಷ್ಯಾತ್ಮಭವೋ ಬಸವಕಿಂಕರಃ ॥
ಶ್ರೀಮತ್ಕಾಲ್ಕುರ್ಕಿಸೋಮೇಶನಾಮಾಹಂ ಸರ್ವವಿತ್ತಮಃ ।
ಪಂಡಿತಾರಾಧ್ಯಚರಿತಾಲಂಕೃತಾಂ ಕೃತಿಮಾರಭೇ ॥
ತತಶ್ಚಾಣು ನತಾಮಾತ್ಯ ಸೂರಣಾಮಾತ್ಯಶೇಖರ ।
ಮಮಾಯಂ ಸನ್ಮಿತ್ರಮಿತಿ ಮತ್ವಾಲಕ ಇತಿ ಪ್ರಿಯಃ ॥

ಇವನ ಗ್ರಂಥಗಳಲ್ಲಿ—

## 1. ಶೀಲಸಂಪಾದನೆ.

ಇದು ವಚನರೂಪವಾದ ಗ್ರಂಥ; ಅಲ್ಲಲ್ಲಿ ಸಂಸ್ಕೃತಶ್ಲೋಕಗಳೂ ಇವೆ. ಇದರಲ್ಲಿ ವೀರಶೈವರ 64 ಶೀಲಗಳು ಹೇಳಿವೆ. ಕವಿ–ವೀರಮಾಹೇಶ್ವರತತ್ವದಲ್ಲಿ ಸತ್ಯಾಚಾರ ಸಂಪನ್ನರಾಗಿರ್ದ ಶರಣರು ಅಜುವತ್ತಾಜು ಶೀಲಂಗಳಂ ನಡಸುವ ಪರಿಯೆಂತೆಂದೊಡೆ—ಎಂದಾರಂಭಿಸಿ ಶೀಲಗಳನ್ನು ಲೆಕ್ಕಮಾಡಿ ಹೇಳಿದ್ದಾನೆ. ಈ ಗ್ರಂಥದಿಂದ ಒಂದೆರಡು ವಾಕ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

ಅನ್ಯದೈವ ಭಜನೆಯುಂ ಬಿಡುವುದು. ಜಾತಿಸೂತಕ ಜನನಸೂತಕ ರಜಸ್ಸೂತಕ ಪ್ರೇತ ಸೂತಕಂಗಳಂ ಕಳೆವುದು ॥ 651 ॥

## 2. ಸೋಮೇಶ್ವರಶತಕ.

ಈ ಶತಕಕ್ಕೆ **ಸೋಮಾರಾಧ್ಯಶತಕ** ಎಂಬ ಹೆಸರೂ ಉಂಟು. ಇದು ಬಹಳ ಅಶುದ್ಧವಾಗಿದೆ. ಇದರಲ್ಲಿ ವ್ಯಾಕರಣವಿರುದ್ಧವಾದ ಅನೇಕ ಪ್ರಯೋಗಗಳಿವೆ. ಇದನ್ನು ಸಂಸ್ಕೃತದಲ್ಲಿ ಪಂಡಿತನಾಗಿದ್ದ ಪಾಲ್ಕುರಿಕೆ ಸೋಮನಾಥನು ರಚಿಸಿದನೆಂದು ಹೇಳುವುದು ಕಷ್ಟವಾಗಿದೆ. ಅಲ್ಲದೆ ಶತಕಕಾರನ ಲಿಂಗವು ಪುಲಿಗೆರೆಯಲ್ಲಿದ್ದಂತೆ ಗ್ರಂಥದಿಂದ ತಿಳಿಯುತ್ತದೆ. ಪಾಲ್ಕುರಿಕೆ ಸೋಮನಾಥನ ಸಂಸ್ಕೃತಾಂಧ್ರಗ್ರಂಥಗಳಲ್ಲಿ 'ಪಾಲ್ಕುರಿಕೆಯ ಸೋಮ' ಎಂದೇ ತನ್ನ ಹೆಸರನ್ನು ಹೇಳಿಕೊಂಡಿದ್ದಾನೆ. ಈ ಶತಕದಲ್ಲಿ ಗ್ರಂಥಕರ್ತನ ಹೆಸರು ಸುಮ್ಮನೆ 'ಸೋಮ' ಎಂದಿದೆ ಇದೂ ಅಲ್ಲದೆ ವೀರಶೈವಗ್ರಂಥಗಳಲ್ಲಿ ಪಾಲ್ಕುರಿಕೆಸೋಮಕೃತವೆಂದು ಹೇಳಿರುವ ಗ್ರಂಥಗಳಲ್ಲಿ ಈ ಶತಕವು ಉಕ್ತವಾಗಿಲ್ಲ. ಈ ಕಾರಣಗಳಿಂದ ಶತಕಕಾರನು ಪಾಲ್ಕುರಿಕೆ ಸೋಮನೋ ಅಲ್ಲವೋ ಎಂದು ಸಂದೇಹಿಸಲು ಅವಕಾಶವುಂಟು. ಆದರೂ ಈತನೇ ಶತಕವನ್ನು ಮಾಡಿದನೆಂದು ಪ್ರತೀತಿಯಿರುವುದರಿಂದ ತದನುರೋಧೇನ ಈ ಗ್ರಂಥವು ಇಲ್ಲಿ ಸೇರಿಸಲ್ಪಟ್ಟಿದೆ.

ಇದು ನೀತಿಬೋಧಕವಾದ ಗ್ರಂಥ; ಇದರಲ್ಲಿ 107 ಮತ್ತೇಭವಿಕ್ರೀಡಿತ ವೃತ್ತಗಳಿವೆ[1]: ಪ್ರತಿಪದ್ಯವೂ "ಶ್ರೀಚೆನ್ನಸೋಮೇಶ್ವರ" ಎಂದು ಮುಗಿಯುತ್ತದೆ. 'ನೀತಿಯೆ ಸಾಧನಂ ಸಕಲಲೋಕಕ್ಕೆಲ್ಲ ಬೇಕೆಂದು ಪೇಟ್ಟಿದ ಸೋಮಂ' ಎಂಬ ಪದ್ಯಭಾಗದಲ್ಲಿ ಗ್ರಂಥದ ಸ್ವರೂಪವು ಉಕ್ತವಾಗಿದೆ. ಗ್ರಂಥಾವತಾರದಲ್ಲಿ ಕವಿ ಪುಲಿಗೆರೆಯ ಸೋಮೇಶನನ್ನು ಸ್ತುತಿಸಿದ್ದಾನೆ. ಈ ಶತಕದಿಂದ ಉಂಟಾಗುವ ಪ್ರಯೋಜನವನ್ನು ಕೊನೆಯ ಈ ಪದ್ಯದಲ್ಲಿ ಹೇಳಿದ್ದಾನೆ:—

1 110 ಇವೆ ಎಂದು ಮೈ॥ ಕಿಟೆಲ್ ಹೇಳುತ್ತಾರೆ. ಫಂಡೋಂಬುಧಿಯ ಉಪೋದ್ಘಾತ, ಪುಟ 55.

ಮತಿಯುಂ ಬುದ್ಧಿಯ ಜಾಣ್ಮೆಯಂ ಗಮಕಮಂ ಗಾಂಭೀರ್ಯಮಂ ನೀತಿಯಾ।
ಮತಮಂ ನಿಶ್ಚಲಚಿತ್ತಮುಂ ನೃಪವರಾಸ್ಥಾನೋಚಿತಾರ್ಥಂಗಳಂ॥
ಅತಿಮಾಧುರ್ಯ ಸುಭಾಷಿತಂಗಳ ಮಹಾಸತ್ಕೀರ್ತಿಯಂ ವಾರ್ತೆಯಂ।
ಶತಕಾರ್ಥಂ ಕೊಡದಿರ್ಪುದೇ ಹರಹರಾ ಶ್ರೀಚೆನ್ನಸೋಮೇಶ್ವರಾ॥

**ಇದರಿಂದ ಕೆಲವು** ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ :—

ಚರಿಪಾರಣ್ಯದ ಪಕ್ಷಿಗೊಂದು ತರು ಗೊಡ್ಡಾಗಲ್ ಫಲಂ ತೀವಿದಾ।
ಮರಗಳ್ ಪುಟ್ಟಿವೆ ಪುಷ್ಪವೊಂದುವೊಣಗಲ್ ಭೃಂಗಕ್ಕೆ ಪೂವಿಲ್ಲವೇ॥
ನಿರತಂ ಸತ್ಕವಿಗೊರ್ವ ಗರ್ವಿ ವಿಭು ತಾನುಂ ಲೋಭಿಯಾಗಲ್ ನಿಜಂ।
ಧರೆಯೊಳ್ ದಾತರೆ ಪುಟ್ಟರೇ ಹರಹರಾ ಶ್ರೀಚೆನ್ನಸೋಮೇಶ್ವರಾ ॥ 652 ॥

ರವಿಯಾಕಾಶಕೆ ಭೂಷಣಂ ರಜನಿಗಂ ಚಂದ್ರಂ ಮಹಾಭೂಷಣಂ।
ಕುವರಂ ವಂಶಕೆ ಭೂಷಣಂ ಸರಸಿಗಂಭೋಜಾತಗಳ್ ಭೂಷಣಂ॥
ಹವಿ ಯಜ್ಞಾಳಿಗೆ ಭೂಷಣಂ ಸತಿಗೆ ಪಾತಿವ್ರತ್ಯನೇ ಭೂಷಣಂ।
ಕವಿಯಾಸ್ಥಾನಕೆ ಭೂಷಣಂ ಹರಹರಾ ಶ್ರೀಚೆನ್ನಸೋಮೇಶ್ವರಾ ॥ 653 ॥

ಅವಿನೀತಂ ಮಗನೇ ಅಶೌಚಿ ಗುಣಿಯೇ ಬೈವಾಕೆ ತಾಂ ಪತ್ನಿಯೇ।
ಸನಿಗೆಟ್ಟನ್ನವದೂಟವೇ ಕುಜನರೊಳ್ ಕೂಡಿರ್ಪವಂ ಮಾನ್ಯನೇ॥
ಬವರಕ್ಕಾಗದ ಬಂಟನೇ ಎಡರಿಗಂ ತಾನಾಗದಂ ನಂಟನೇ।
ಶಿವನಂ ಬಿಟ್ಟವ ಶಿಷ್ಯನೇ ಹರಹರಾ ಶ್ರೀಚೆನ್ನಸೋಮೇಶ್ವರಾ ॥ 654 ॥

## 3. ಸಹಸ್ರಗಣನಾಮ.

**ಮಲ್ಲಿಕಾರ್ಜುನನ** ಸಹಸ್ರಗಣನಾಮದ ಒಂದು ಪ್ರತಿಯಲ್ಲಿರುವ

ಶ್ರೀಮತ್ಪಾಲ್ಕುರಿಕೆಸೋಮನಾಥಸ್ಪಭುದೇವೇಶ್ವರಭಕ್ತಪಾಲ।
ಸಹಸ್ರಗಣನಾಮವ ವಿರಚಿಸಿದ ಸತ್ಕಶೀಲ॥

ಎಂಬ ಭಾಗದಿಂದ ಈತನು ಈ ಗ್ರಂಥವನ್ನು ಮಾಡಿದುದು ವ್ಯಕ್ತವಾಗುತ್ತದೆ. ಇದರಲ್ಲಿ ಪ್ರಮಥಗಣ, ರುದ್ರಗಣ, ಭಕ್ತಗಣ, ಯೋಗಾಚಾರ್ಯರು, ತ್ರಿಷಷ್ಟಿಗಣ, ತೇರಸರು, ಅಮರಗಣ, ದಶಗಣ, ಇವರ ನಾಮಗಳು ಹೇಳಿವೆ.

ಆರಂಭದಲ್ಲಿಯೂ ಒಂದೊಂದುಗಣದ ಅಂತ್ಯದಲ್ಲಿಯೂ ಗ್ರಂಥಾಂತ್ಯದಲ್ಲಿಯೂ ಕೆಲವು ಪದ್ಯಗಳಿವೆ. ಸಹಸ್ರನಾಮ ಎಂಬ ಹೆಸರಿದ್ದರೂ ನಮಗೆ ದೊರೆತ ಪ್ರತಿಯಲ್ಲಿ ಒಟ್ಟು 1066 ನಾಮಗಳಿವೆ: ಪ್ರಮಥಗಣ 430, ರುದ್ರಗಣ 149, ವೃಷಭಗಣಯೋಗಾಚಾರ್ಯರು 22, ಅರುವತ್ತುಮೂವರು 67, ಷೋಡಶರು 16, ತೇರಸರು 13, ದಶಗಣಂಗಳು 10, ಅಮರಗಣ 359. ಈ ಅಮರ

ಗಣದಲ್ಲಿ ಬಸವ, ಚೆನ್ನಬಸವ ಮುಂತಾದವರ ಹೆಸರುಗಳಲ್ಲದೆ ಈ ಹೆಸರುಗಳೂ ಹೇಳಿವೆ:—ಅಮುಗಿದೇವಯ್ಯ, ಗಜೇಶಮಸಣಯ್ಯ, ಕಲಿದೇವಯ್ಯ, ಉರಿಲಿಂಗ ಪೆದ್ದಯ್ಯ, ಸತ್ಯಕ್ಕ, ವೀರಸಂಗಯ್ಯ, ಕೊಡಗೂಸು, ಗುಂಡಬ್ರಹ್ಮಯ್ಯ, ನುಲಿಯ ಚಂದಯ್ಯ, ಚಿಮ್ಮುಲಿಗೆಚಂದಯ್ಯ, ವೈದುನರಾಮಯ್ಯ, ಹೇರೂರಹೆಣ್ಣು, ವೀರ ಬಲ್ಲಾಳ, ಏಕಾಂತರಾಮಯ್ಯ, ನಿಂಬಾಣದ ಗಣೇಶ್ವರ, ಅನಿಮಿಷಯ್ಯ, ಬೊಂತಲ ದೇವಿ, ಶಿವಲೆಂಕಮಂಚಣ್ಣ. ಸೂರಸಾನಿ, ಮರುಳುಶಂಕರದೇವ, ಸೂಳೆನಂಬಿ ಯಕ್ಕ, ಸೂಳೆಬೊಮ್ಮಲದೇವಿ, ಸೂಳೆಪದ್ಮಲದೇವಿ, ಸೂಳೆಕಾಮಲದೇವಿ, ಸೂಳೆ ಸಂಕಲದೇವಿ, ಭಿಲ್ಲಮರಾಯ, ಕೋಲಶಾಂತಯ್ಯ, ನನ್ನಯ್ಯ, ನೀಲಲೋಚನೆ, ಅಜಗಣ್ಣ, ನಿಜಗುಣದೇವ. ಇವರುಗಳೆಲ್ಲಾ ಕವಿಯ ಕಾಲಕ್ಕೆ ಹಿಂದೆ ಇದ್ದಿರ ಬೇಕು. ಕೆಲವರು ಮಾತ್ರ ಸಮಕಾಲದವರಾಗಿ ಕಾಣುತ್ತಾರೆ.

## 4. ಪಂಚರತ್ನ.

ಇದರಲ್ಲಿ ಬಸವಸ್ತುತಿರೂಪವಾದ ೫ ವೃತ್ತಗಳಿವೆ.

ಇದರ ಅಂತ್ಯಶ್ಲೋಕದಿಂದ[1] ಇದು ಏತತ್ಕೃತವೆಂದು ತಿಳಿಯುತ್ತದೆ. ಒಂದು ಪದ್ಯವನ್ನು ತೆಗೆದು ಬರೆಯುತ್ತೇವೆ:—

ನರಸುರವರಧೀರಾ ನಂದಿಕೇಶಾವತಾರ।
ವಿಷಮವಿಷಯದೂರಾ ವಿಶ್ವಲೋಕೈಕಸಾರ॥
ಗತಕಲಿಮಲಸಂಗಾ ಖ್ಯಾತಿಗೋಷ್ಠೀಪ್ರಸಂಗ।
ಶರಣು ಬಸವಲಿಂಗಾ ಸಜ್ಜನಾಂಭೋಜಭೃಂಗ ॥ 655 ॥

## 5. ಸದ್ಗುರು ರಗಳೆ.

ಇದರಲ್ಲಿ ಪ್ರತಿವಾಕ್ಯವೂ "ಸದ್ಗುರುವೆ" ಎಂದು ಮುಗಿಯುತ್ತದೆ. ಎರಡನ್ನು ಉದಾಹರಿಸುತ್ತೇವೆ:—

ಭವತಿಮಿರಹರದೀಪಿಕಾವರ್ತಿ ಸದ್ಗುರುವೆ।
ಶ್ರೀಷಡಕ್ಷರಜಮನುಜಾಲಮುಖಿ ಸದ್ಗುರುವೆ ॥ 656 ॥

## 6. ಚೆನ್ನಬಸವಸ್ತೋತ್ರದ ರಗಳೆ.

ಇದರಲ್ಲಿ ಪ್ರತಿವಾಕ್ಯವೂ "ಚೆನ್ನಬಸವ" ಎಂದು ಮುಗಿಯುತ್ತದೆ. ಎರಡನ್ನು ತೆಗೆದು ಬರೆಯುತ್ತೇವೆ:—

ಬಸವಗುರುವಚೋಮೃತಗತವೃಜಿನಪಂಕ ಚೆನ್ನಬಸವ।
ಬಸವಪಾದಕಮಲಕರ್ಣಿಕಾನಿವಾಸ ಚೆನ್ನಬಸವ ॥ 657 ॥

---

1. ಶ್ರೀಮತೇ ವೃಷಭೇಂದ್ರಾಯ ಸೋಮನಾಥೇನ ಧೀಮತಾ।
ಪಂಚರತ್ನಮಿದಂ ದತ್ತಂ ಜ್ಞಾನವೈರಾಗ್ಯಭಕ್ತಿದಂ॥

## 7. ಶರಣುಬಸವ ರಗಳೆ.

ಇದರಲ್ಲಿ 108 ವಾಕ್ಯಗಳಿವೆ; ಒಂದೊಂದೂ "ಶರಣುಬಸವ" ಎಂದು ಮುಗಿಯುತ್ತದೆ. ಅಂತ್ಯದಲ್ಲಿ ಈ ಕಂದವಿದೆ:—

ಶರಣಸ್ತವಕಲ್ಪಕುಜಾಂ । ಕುರುಪದಶಾಖಾಭಿಜಾತನವಕುಸುಮಾಷ್ಟೋ ।
ತ್ತರಶತನಾಮಂಗಳ ಬಸ । ವರಸಂಗರ್ಪಿಸಿದೆ ಪಾಲ್ಕುರಿಕೆ ಸೋಮಾಂಕಂ ॥

ಎರಡು ವಾಕ್ಯಗಳನ್ನು ಉದಾಹರಿಸುತ್ತೇವೆ:—

ಅಚಲಶೈವಧರ್ಮನಿರ್ಣಯಾವತಾರ ಶರಣುಬಸವ।
ವಿಕಟಭವಸಮಿತ್ಸಮೂಹವೀತಿಹೋತ್ರ ಶರಣುಬಸವ ॥ 658 ॥

ಇವನ ವಚನಗಳು ನಮಗೆ ದೊರೆತಿಲ್ಲ.

---

## ಚಕ್ರಪಾಣಿರಂಗನಾಥ. ಸು. 1195.

ಈತನು ಮೊದಲು ವೈಷ್ಣವನಾಗಿದ್ದು ಪಾಲ್ಕುರಿಕೆ ಸೋಮನಾಥನೊಡನೆ ವಾದಮಾಡಿ ಸೋತು[1] ಶಿವದೀಕ್ಷೆಪಡೆದಂತೆ ವೀರಶೈವಗ್ರಂಥಗಳಿಂದ ತಿಳಿಯುಬರುತ್ತದೆ. ಇವನು ವೀರಶೈವಮತವನ್ನು ಅವಲಂಬಿಸಿದ ಬಳಿಕ ಕೆಳಗೆ ಹೇಳುವ ಗ್ರಂಥಗಳನ್ನು ಬರೆದುದಾಗಿ ಗುರುರಾಜಚಾರಿತ್ರದ (ಸು. 1650) ಈ ಭಾಗಗಳಿಂದ ತಿಳಿಯುತ್ತದೆ:—

ಚಕ್ರಪಾಣಿರಂಗನಾಥನು ವೀರಭದ್ರವಿಜಯವ ಹೇಳ್ದ; ಶರಭಲೀಲೆಯಸೊರೆದ; ಶ್ರೀಗಿರಿನಾಥವಿಕ್ರಮವನಾಂಧ್ರಭಾಷೆಯೊಳೊರೆದ, ಸಂಸ್ಕೃತದಲ್ಲಿಯೂ ಕೀರ್ತಿಸಿದ.

ಶ್ರೀಶೈಲಭರ್ತನಕು ನೀಸಂಬುಲ್ಗೆನೂಱು ।
ಲೀಸಪ್ಪ ಪದ್ಯಂಗಳೆಂಟುಸಾವಿರಗಳುಂ ।
ಭಾಸುರದ ದಂಡಕಂ ಸಾಹಸ್ರ ತಾರಾವಳಿಯು ನಾಲ್ಕು ಲಯಗ್ರಾಹಿಯು ॥

ಆಶತಕವೃತ್ತಗಳು ದ್ವೀಧಕಂ ಸಾವಿರವು ।
ಭಾಸುರದ ತೋಟಕಂ ನೂಱು ರಗಳೆಗಳೇೞು ।
ಭಾಷಿಸಿದ ಮತ್ತಕೋಕಿಲಮೂೞುಸಾಸಿರಂ ಗೀತಿಯಂತಾೞುನೂೞು ॥

ಸರಸಮಂಜರವೆಂಟು ಕಂದಂಗಳೈನೂಱು ।
ವಿರಚಿಸಿದ ಕೃತಿಯು ಮೂವತ್ತಾೞು ಗದ್ಯಗಳು ।
ಸರುತ ಮೂವತ್ತಾೞುವುಭಯಶತಕಂ ಪೊಪ್ಪು ಮಿಗಿಲು ಸರ್ವೇಶ ನಿಮಗೆ ॥

---

1. ಪುಟ 292.

ನೆಜಿ ಸಮರ್ಪಿಸಿದೆನೆಂದು ಚೀಟಂ ಬರೆದು ತುಲೆಯಲ್ಲಿ ಮಡಗಿ ತೂಗಲು ಸಾಲದೆ ಹೋಯಿತು ; ಬಲಿಕ ನಾಲ್ಕು ವೃತ್ತವ ಬರೆದು ಮಡಗೆ ತುಲೆ ಸರಿಗಂಡಿತು.

ಇವನ ಗ್ರಂಥಗಳಾವುವೂ ನಮಗೆ ದೊರೆತಿಲ್ಲ.

---

## ಕೇಶವರಾಜ ಚಮೂಪ. ಸು. 1195.

ಈತನು ಅಬ್ಬಲೂರಲ್ಲಿರುವ ಒಂದು ಶಾಸನವನ್ನು[1] ಬರೆದುದಾಗಿ ಆ ಶಾಸನದ ಅಂತ್ಯದಲ್ಲಿರುವ—

ಕೇಶವರಾಜಚಮೂಪಂ । ರಾಸನಮಂ ಪೇಟ್ದನಂತದಂ ತಿರ್ದಿ ನಿರಾ ।
ಯಾಸದೆ ಬರೆದವನೀಶನ । ದಾಸಂ ಶಿವಚರಣಕಮಲಶರಣಂ ಸರಣಂ ॥

ಎಂಬ ಪದ್ಯದಿಂದ ತಿಳಿಯುತ್ತದೆ.

ಈ ಶಾಸನವು ಸುಮಾರು 1195 ರಲ್ಲಿ ಬರೆದುದು. ಇದರಲ್ಲಿ ವೀರಶೈವರಲ್ಲಿ ಪ್ರಸಿದ್ಧಗುರುವಾದ ಏಕಾಂತದ ರಾಮಯ್ಯನ ಚರಿತ್ರವು ಈ ರೀತಿಯಾಗಿ ಹೇಳಿದೆ :—

ಈ ರಾಮಯ್ಯನು ಕುಂತಲದೇಶದ ಅಲಂದೆ ಎಂಬ ಗ್ರಾಮದಲ್ಲಿ ಶ್ರೀವತ್ಸ ಗೋತ್ರೋದ್ಭವನಾದ ಪುರುಷೋತ್ತಮನೆಂಬ ಬ್ರಾಹ್ಮಣನಿಗೂ ತತ್ಪತ್ನಿ ಪದ್ಮಾಂಬಿಕೆಗೂ ವೀರಭದ್ರನ ಅಂಶದಿಂದ ಮಗನಾಗಿ ಜನಿಸಿದನು. ಇವನು ಏಕಾಗ್ರಭಕ್ತಿಯೋಗದಿಂದ ಶಿವನನ್ನು ಏಕಾಂತದಲ್ಲಿ ಆರಾಧಿಸುತ್ತಿದ್ದುದರಿಂದ ಏಕಾಂತದ ರಾಮಯ್ಯನೆಂಬ ಹೆಸರನ್ನು ಪಡೆದನು. ಇವನು ಶಿವಕ್ಷೇತ್ರಗಳಿಗೆ ಯಾತ್ರೆಹೊರಟು, ಪುಲಿಗೆರೆಗೆ ಬಂದು, ಸೋಮನಾಥನನ್ನು ಪೂಜಿಸಿ, ತದಾಜ್ಞಾನುಸಾರವಾಗಿ ಜೈನಮತನಿರಸನಕ್ಕೋಸ್ಕರ ಜೈನಭೂಯಿಷ್ಠವಾದ ಅಬ್ಬಲೂರಿಗೆ ಹೋಗಿ, ಬ್ರಹ್ಮೇಶ್ವರ ದೇವಸ್ಥಾನದಲ್ಲಿರುತ್ತಿದ್ದನು. ಹೀಗಿರಲು ಜೈನರು ಅಲ್ಲಿಗೆ ಬಂದು ಜಿನನೇ ದೈವಂ ಎಂದು ಹೊಗಳಲು ಈತನು ಕೋಪಿಸಿಕೊಂಡು, ಶಿವನಿದ್ದಂತೆ ಬೇರೆ ದೈವವುಂಟೇ ಎನಲು, ಶಿವನೇ ದೈವವಾದಲ್ಲಿ ನಿನ್ನ ತಲೆಯನ್ನು ಕೊಯ್ದು ಕೊಟ್ಟು ಪುನಃ ಪಡೆ ಎಂದು ಆ ಜನರು ಹೇಳಲು, ನಾನು ಹಾಗೆ ಮಾಡಿದರೆ ನೀವೇನು ಮಾಡುವಿರಿ ಎಂದು ಕೇಳಿದಾಗ ಅವರು ನಮ್ಮ ಜಿನನನ್ನು ಕೆತ್ತು ಶಿವನನ್ನು ನಿಲಿಸುವೆವು ಎಂದು ಓಲೆಯನ್ನು ಬರೆದುಕೊಟ್ಟರು. ಒಡನೆ ಅವನು ತಲೆಯನ್ನು ಕೊಯ್ದು ಶಿವಾರ್ಪಣ ಮಾಡಿ ಏಳು ದಿನದ ಮೇಲೆ ಅದನ್ನು ಮರಳಿ ಪಡೆದು ಅಲ್ಲಿಯ ಜಿನಬಿಂಬವನ್ನು ಒಡೆದು ಜೈನರ ಸೇನೆಯನ್ನು ಬಡಿದಟ್ಟಿ ವೀರಸೋಮನಾಥನನ್ನು ನಿಲಿಸಿದ್ದನು. ಬಳಿಕ ಜೈನರು ಭಿಜ್ಜಳನಲ್ಲಿ ಹೋಗಿ ದೂರಲು ಅವನು ಕೋಪಗೊಂಡು ರಾಮಯ್ಯನನ್ನು ಕರೆಯಿಸಿ

1. *Epi. Ind.*, V, 245.

ವಿಚಾರಿಸಲು, ಅವನು ಅವರು ಬರೆದುಕೊಟ್ಟ ಓಲೆಯನ್ನು ತೋರಿಸಿ ಅವರು ಆನೆಸೆಜ್ಜೆಯ ಬಸದಿಯೇ ಮೊದಲಾದ 700 ಬಸದಿಗಳ ಜಿನಬಿಂಬಗಳನ್ನು ಒಡ್ಡುವುದಾದರೆ ತಾನು ತನ್ನ ತಲೆಯನ್ನು ಕೊಯ್ದು ಅವರ ಕೈಯಲ್ಲಿ ಕೊಟ್ಟು ಅವರು ಅದನ್ನು ಸುಟ್ಟಬಳಿಕ ಪುನಃ ಪಡೆವೆನೆಂದು ಹೇಳಿದಾಗ ಬಿಜ್ಜಳನು (1156—1167) ಅವರನ್ನು ಕರೆಯಿಸಿ ಕೇಳಲು ಅವರು ಒಲ್ಲೆವೆನ್ನಲು ಅವರನ್ನು ಕಳುಹಿಸಿಬಿಟ್ಟು ರಾಮಯ್ಯನಿಗೆ ಜಯಪತ್ರವನ್ನು ಕೊಟ್ಟು ಅವನ ಸಾಹಸಕ್ಕೂ ಮಾಹೇಶ್ವರಭಕ್ತಿಗೂ ಮೆಚ್ಚಿ ವೀರಸೋಮನಾಥದೇವರ ಅಂಗಭೋಗಾದಿಗಳಿಗೆ ಗೋಗಾವೆಯೆಂಬ ಗ್ರಾಮವನ್ನು ಏಕಾಂತದ ರಾಮಯ್ಯನ ಕಾಲಂ ಕರ್ಚಿ ಕೊಟ್ಟನು. ಬಳಿಕ ಇವನ ಮಾಹಾತ್ಮ್ಯವನ್ನು ಕೇಳಿ ಚಾಳುಕ್ಯರಾಜನಾದ ತ್ರಿಭುವನ ಮಲ್ಲ ಸೋಮೇಶ್ವರದೇವನು (1182—1189) ಇವನನ್ನು ಬರಮಾಡಿಕೊಂಡು ಸತ್ಕರಿಸಿ ಇವನು ಪ್ರತಿಷ್ಠಿಸಿದ ವೀರಸೋಮನಾಥದೇವರ ಅಂಗಭೋಗಾದಿಗಳಿಗೆ ಅಬ್ಬಲೂರನ್ನು ಬಿಟ್ಟುಕೊಟ್ಟನು. ಆಮೇಲೆ ಕದಂಬರಾಜನಾದ ಕಾಮರಸನು (1181—1203) ಹಾನುಂಗಲ್ಲಿಗೆ ಕರೆದುಕೊಂಡು ಹೋಗಿ ಈತನನ್ನು ಸತ್ಕರಿಸಿ ವೀರಸೋಮನಾಥದೇವರ ಅಂಗಭೋಗಾದಿಗಳಿಗೆ ಮಲ್ಲವಳ್ಳಿಯೆಂಬ ಗ್ರಾಮವನ್ನು ಕೊಟ್ಟನು. ಏಕಾಂತದ ರಾಮಯ್ಯನು ಆರಲ್ಲಿಯೂ ಯಾಚಿಸದೆ ಈಶ್ವರಪ್ರಸಾದದಿಂದ ತವನಿಧಿಯನ್ನು ಪಡೆದು ದೇವಾಲಯವನ್ನು ಕಟ್ಟಿಸಿದನು.

ಈ ಶಾಸನದ ಬಂಧವನ್ನು ನೋಡಿದರೆ ಕೇಶವರಾಜ ಚಮೂಪನು ಪ್ರೌಢ ಕವಿಯೆಂದು ಹೇಳಲಿಕ್ಕೆ ಅಡ್ಡಿಯಿಲ್ಲ. ಈ ಶಾಸನದಲ್ಲಿ ಈತನು ಪುರಾತನಭಕ್ತರ ಗೋಷ್ಠಿಯಲ್ಲಿ ಕೊಂಡಗೂಳಿ ಕೇಶಿರಾಜನನ್ನು ಸೇರಿಸಿ ಸ್ತುತಿಸುವುದರಿಂದ ಈತನು ತದ್ಭಿನ್ನನೆಂಬುದು ವ್ಯಕ್ತವಾಗುತ್ತದೆ. ಮೆ॥ ಫ್ಲೀಟ್—ಈತನು ಬನವಾಸಿಯನ್ನು ಸುಮಾರು 1168 ರಿಂದ 1181 ರ ವರೆಗೆ ಆಳಿದುದಾಗಿ ಶಾಸನಗಳಿಂದ ತಿಳಿದು ಬರುವ ದಂಡನಾಯಕ ಬೊಳಿಕೆಯ ಕೇಶಿರಾಜಯ್ಯನಾಗಿರಬೇಕೆಂದು ಹೇಳುತ್ತಾರೆ.[1] ಆದರೆ ಈ ಕವಿ ತದ್ಭಿನ್ನನೆಂದೂ ಅವನಿಗಿಂತ ಸುಮಾರು 20 ವರ್ಷ ಈಚೆಯವನು.—ಎಂದರೆ ಸುಮಾರು 1195 ರಲ್ಲಿದ್ದವನು—ಎಂದೂ ನಮಗೆ ತೋರುತ್ತದೆ.

ಈ ಶಾಸನದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

ಹಿಮವತ್ಪರ್ವತ.

ಎಸೆಗುಂ ಪೂರ್ವಾಪರಾಂಭೋನಿಧಿಮಿತವಿತತಾಯಾಮದಿಂ ಸಿದ್ಧಕನ್ಯಾ ।
ವಿಸರಾನಂಗೋರುಕೇಳೀಶ್ರಮಶಮಮಹಿಮಾಕಂದರಂ ಸ್ಪರ್ಧನೀವಾಃ ॥
ಪ್ರಸರೋಪಕ್ಷುಣ್ಣನಾನಾನಗನಿಕರಗಳದ್ಗಂಡಶೈಲಾಳಿಮಾಳಾ ।
ವಿಸರಂ ಪ್ರಸ್ಫಾರಶೀತದ್ಯುತಿರುಚಿನಿಚಯಭ್ರಾಜತಂ ಶೀತಶೈಲಂ ॥ 659 ॥

1. *Epi. Ind.*, V, 238, 239.

## ಅಲಂದೆನಗರ.

ಪ್ರಕಟಿತಕಮುರಾವತಿಯೊಳ್ । ಸುಕೇಶಿಯುಂ ಮಂಜುಘೋಷೆಯುಂ ತಾ
[ಮಿರ್ಬರ್ ।
ಸಕಲವಧೂತತಿಯೆಲ್ಲಂ । ಸುಕೇಶಿಯರ್ ಮಂಜುಘೋಷೆಯರ್ ತತ್ಪುರ
[ದೊಳ್ ॥ 660 ॥

## ಶಿವಪಾರಮ್ಯ.

ಜಗವಂ ಮಾಡುವನಾವನಾವನದನಾಪತ್ಕಾಲದೊಳ್ ಕಾವನಿಂ ।
ಮಿಗೆ ಕೋಪಂ ತನಗಾಗೆ ಸಂಹರಿಸಲಾವಂ ದಕ್ಷನಾಶಂಭು ಸ ॥
ರ್ವಗನಿರ್ದಂತೆ ಗತಪ್ರಭಾವವಿಭವಂ ಸಂಸಾರದೊಳ್ ಬಿಟ್ಟು ದಂ ।
ದುಗದೊಳ್ ಬಟ್ಟು ತಪಕ್ಕೆ ಸಾರ್ದು ಸುಖಿಮಂ ಪಾರ್ದಿರ್ಪನುಂ ದೇವನೇ ॥661॥

## ವೀರಸೋಮನಾಥ.

ಶ್ರೀಯಂ ದೀರ್ಘಾಯುವಂ ಕೀರ್ತಿಯನನುದಿನಮುಂ ಮಾಟ್ಕೆ ಗೀರ್ವಾಣ
[ವ್ಯಂದ ।
ಜ್ಯಾಯಂ ಶ್ರೀವೀರಸೋಮಂ ವಿಧೃತಹಿಮಕರಂ ಕಾಮದೇವಂಗುದಾರ ॥
ಶ್ರೀಯುಕ್ತಂಗದ್ರಿಜಾಸಸ್ಮಿತಸಿತತರಲಾಲೋಲವಿಸ್ತಾರಲೀಲಾ ।
ನೇಯಾಳೋಕೋದಿತಶ್ರೀಲಲಿತರತಿಕಲಾಲಾಸ್ಯಶೈಲೂಷನೇಷಂ ॥ 662 ॥

---

## ಸರಣ. ಸು. 1195.

ಇವನು, ಕೇಶವರಾಜ ಚಮೂಪನು[1] (ಸು. 1195) ಬರೆದ ಅಬ್ಬಲೂರು ಶಾಸನವನ್ನು ತಿದ್ದಿ ಬರೆದುದಾಗಿ ಅದೇ ಶಾಸನದ ಅಂತ್ಯದಲ್ಲಿರುವ—

ಕೇಶವರಾಜಚಮೂಪಂ । ಶಾಸನಮಂ ಪೇಟ್ಟಿನಂತದಂ ತಿರ್ದಿ ನಿರಾ ।
ಯಾಸದೆ ಬರೆದವನೀಶನ । ದಾಸಂ ಶಿವಚರಣಕಮಲಶರಣಂ ಸರಣಂ ॥

ಎಂಬ ಪದ್ಯದಿಂದ ತಿಳಿಯುತ್ತದೆ. ಈತನು ಆವ ಗ್ರಂಥಗಳನ್ನು ಬರೆದಿದ್ದಾನೆಯೋ ತಿಳಿಯದು.

---

## ಆಚಣ್ಣ. ಸು. 1195.

ಈತನು ವರ್ಧಮಾನ ಪುರಾಣವನ್ನೂ ಶ್ರೀಪದಾಶೀತಿಯನ್ನೂ ಬರೆದಿದ್ದಾನೆ. ಇವನು ಜೈನಕವಿ; ಭಾರದ್ವಾಜಗೋತ್ರದವನು. ಇವನ ತಂದೆ ಕೇಶವ ರಾಜ; ತಾಯಿ ಮಲ್ಲಾಂಬಿಕೆ; ಗುರು ನಂದಿಯೋಗೀಶ್ವರ. "ಪುರಿಕರನಗರಾ

1. ಪುಟ 297.

ಧೀಶ . . . . (ಅ)ರ್ಹತ್ಸೀವಾಸಕಾತ್ಮಶಯಂ" ಎಂಬುದರಿಂದ ಪುರಿಕರನಗರವು (ಪುಲಿಗೆರೆ) ಇವನ ಸ್ಥಳವಾಗಿರಬಹುದು. ವಸುಧೈಕಬಾಂಧವ ಎಂಬ ಬಿರುದುಳ್ಳ ರೇಚಣಚಮೂಪನು ವರ್ಧಮಾನ ಪುರಾಣವನ್ನು ಬರೆವಂತೆ ಹೇಳಲು ಕವಿಯ ತಂದೆಯಾದ **ಕೇಶವರಾಜನೂ** ತಿಕ್ಕಣಚಾವಣನೂ ಸೇರಿ ಉಪಕ್ರಮಿಸಿದುದು "ದೈವನಿಯೋಗದಿಂದ" ನಿಂತುಹೋಗಲು ಅದನ್ನು ಆ ರೇಚಣಚಮೂಪನ ಇಷ್ಟಾನುಸಾರವಾಗಿ ಈತನು ವಿಸ್ತಾರಿಸಿ ಪೂರೈಸಿದನು.

ಈ ಕವಿಗೆ ವಾಣೀವಲ್ಲಭ, ಪಂಚಪರಮಗುರುಪದವಿನತ ಎಂಬ ಬಿರುದುಗಳಿದ್ದಂತೆ ತಿಳಿಯುತ್ತದೆ.

ಈತನನ್ನು **ಪಾರ್ಶ್ವನು** (1205) ತನ್ನ **ಪಾರ್ಶ್ವನಾಥಪುರಾಣದಲ್ಲಿ** ಸ್ತುತಿಸಿರುವುದರಿಂದ ಈತನು 1205 ಕ್ಕೆ ಹಿಂದೆ ಇದ್ದನೆಂಬುದು ವ್ಯಕ್ತವಾಗುತ್ತದೆ. ಇವನು ಪೂರ್ವಕವಿಸ್ತವಾವಸರದಲ್ಲಿ **ಬೊಪ್ಪಣಪಂಡಿತನನ್ನೂ** (ಸು. 1180), **ಅಗ್ಗಳನನ್ನೂ** (1189) ಸ್ತುತಿಸಿರುವುದರಿಂದ ಅವರ ಕಾಲಕ್ಕೆ ಈಚೆಯವನಾಗಿರಬೇಕು. ಅಲ್ಲದೆ ಇವನಿಂದ ಗ್ರಂಥವನ್ನು ಬರೆಯಿಸಿದ ವಸುಧೈಕಬಾಂಧವ ರೇಚಣಚಮೂಪತಿ ಮೊದಲು ಕಲಚುರ್ಯರಾಜರಲ್ಲಿ ಮಂತ್ರಿಯಾಗಿದ್ದು ಆಮೇಲೆ ಹೊಯ್ಸಳ ವೀರಬಲ್ಲಾಳನಲ್ಲಿ (1173–1220) ಮಂತ್ರಿಯಾಗಿದ್ದಂತೆ ಶಾಸನಗಳಿಂದ[1] ತಿಳಿಯುತ್ತದೆ. ಕವಿಯ ಗುರುವಾದ ನಂದಿಯೋಗೀಶ್ವರನು 1189 ರಲ್ಲಿ ಇದ್ದಂತೆ ಮದರಾಸ್ ಪ್ರಾಚ್ಯಕೋಶಾಲಯದಲ್ಲಿರುವ ಒಂದು ಶಾಸನದಿಂದ ತಿಳಿಯುತ್ತದೆ. ಈ ಕಾರಣಗಳಿಂದ ಈತನು ಸುಮಾರು 1195 ರಲ್ಲಿ ಇದ್ದನೆಂದು ಹೇಳಬಹುದು.

ಈತನು ಪೂರ್ವಕವಿಗಳನ್ನು ಈ ಪದ್ಯದಲ್ಲಿ ಸ್ಮರಿಸಿದ್ದಾನೆ:—

ಶ್ರೀವಿಜಯಂ ಗಜಾಂಕುಶನುದಾತ್ತಯಶಂ ಗುಣವರ್ಮನಾಜಗ ।
ತ್ಸಾವನನಾಗವರ್ಮನಸಗಂ ರಸಿಕಾಗ್ರಣಿ ಪಂಪದೇವನಾ ॥
ಭಾವಕಚಕ್ರಿ ಪೊನ್ನಿಗನಿಳಾನುತರನ್ನಿಗನಗ್ಗದಗ್ಗಳಂ ।
ಧೀವಿಭು ಪೊಪ್ಪನೆಂಬ ಕವಿದರ್ಪಕರಿಂದೆಸೆದತ್ತು ಭೂತಳಂ ॥

**ಈತನನ್ನು ಪಾರ್ಶ್ವನು** ಹೀಗೆ ಸ್ತುತಿಸಿದ್ದಾನೆ:—

ಶ್ರೀಗುಣಗರ್ಭಂ ಕೀರ್ತಿಕ । ಳಾಗರ್ಭಂ ಸೂಕ್ತಿಸಂಗತಾಧ್ಯಾತ್ಮಂ ಜ್ಞೆ।
ನಾಗಮಗರ್ಭಮಿದೆನೆ ಜಗ । ತೀಗುರು ನೆಗಟ್ಪಿಂ ಪ್ರಸನ್ನಗುಣನಾಚಣ್ಣಂ ॥
ನವರಸದೊಳಮಿತರರಸ । ಕ್ಕವಕಾಶಂಗುಡದೆ ತಳೆಯೆ ಶಾಂತರಸಮನಂ ।
ತವಿಚಳನಮವುಂ ಕರೆಗ । ಣ್ಮವುವೆನೆ ಪೃಥುಹೃದಯನಾದನೆಂತಾಚಣ್ಣಂ ॥

1. Arsikere 77.

ಕವಿ ತನ್ನ ಗುಣಾದಿಗಳನ್ನು ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ :—

ಭಾರದ್ವಾಜಸವಿತ್ರಗೋತ್ರತಿಳಕಂ ಶ್ರೀಕೇಶಿರಾಜಾತ್ಮಜಂ ।
ಸಾರೋದಾರಸತೀವ್ರತಾದಿಗುಣಭೃನ್ಮಲ್ಲಾಂಬಿಕಾನಂದನಂ ॥

ತಾರೇಶೋಜ್ಜ್ವಳಕೀರ್ತಿ ಜೈನರುಚಿ ವಾಣೀವಲ್ಲಭಂ ನಿರ್ಮಳಾ !
ಚಾರಂ ನಿರ್ಮಿಸಿ ಪೆರ್ಮೆವೆತ್ತನೊಲವಿಂದಾಚಣ್ಣನೀಧಾತ್ರಿಯೊಳ್ ॥
ಜನಸಮಯಸಮುದ್ಧರಣಂ । ಜನಮತಸಿದ್ಧಾಂತವಾರ್ಧಿವರ್ಧನಚಂದ್ರಂ ।
ಜನರಂತ ಭವ್ಯಸೇವ್ಯಂ । ಜನಮುನಿಯಾಚಣ್ಣನಮಳಗುಣಗಣನಿಳಯಂ ॥

ಇವನ ಗ್ರಂಥಗಳಲ್ಲಿ

## 1. ವರ್ಧಮಾನ ಪುರಾಣ.

ಇದು 24 ನೆಯ ತೀರ್ಥಂಕರನಾದ ವರ್ಧಮಾನನ ಅಥವಾ ಮಹಾವೀರನ ಚರಿತವು; 16 ಆಶ್ವಾಸಗಳಾಗಿ ವಿಭಾಗಿಸಲ್ಪಟ್ಟಿದೆ. ಈ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಈ ಪದ್ಯದಲ್ಲಿ ಹೇಳಿದ್ದಾನೆ :—

ಸದಳಂಕಾರದಗಾರಮುದ್ಧುರನಭಾವಾಸೀಕಜೋಕಂ ಸದ ।
ರ್ಧದ ಸಾರ್ಧಂ ವರಶಬ್ದವೃಂದದ ವಿರಾಜನ್ಮಂದಿರಂ ನಾಡೆಯುಂ ॥
ಮೃದುಸಂದರ್ಭದ ಗರ್ಭವಿಂತಿವೆನಿಸಲ್ ಸಾಲ್ದಿರ್ದ ಕಾವ್ಯಂ ಸಭಾ ।
ಸದರಂತಃಕರಣಕ್ಕದೇಂ ಕಜ್ಜಯದೇ ಸೌಖ್ಯಾಮೃತಾಸಾರಮಂ ॥

ಈ ಗ್ರಂಥವು "ದಂಡನಾಥರೇಚರಸನ ಮಾನಸಪ್ರಿಯವೆನಿಪ್ಪ ಜಗನ್ನುತ ವರ್ಧಮಾನಸಚ್ಚರಿತಂ" ಎಂದು ಹೇಳಿದ್ದಾನೆ.

ಗ್ರಂಥಾವತಾರದಲ್ಲಿ ವರ್ಧಮಾನಸ್ತುತಿಯಿದೆ. ಬಳಿಕ ಕವಿ ಸಿದ್ಧಾದಿಗಳನ್ನೂ ಸರಸ್ವತಿಯನ್ನೂ ಯಕ್ಷಯಕ್ಷಿಯರನ್ನೂ ಸ್ತುತಿಸಿ ಗೌತಮನಿಂದ ಅಕಳಂಕನ[1] ವರೆಗೆ ಗುರುಗಳನ್ನು ಕ್ರಮವಾಗಿ ಹೊಗಳಿದ್ದಾನೆ.

ಆಶ್ವಾಸಗಳ ಕೊನೆಯಲ್ಲಿ ಈ ಗದ್ಯವಿದೆ :—

ಇದು ನಿಖಿಳಭುವನಜನವಿನೂತ ಸ್ಫೀತಮಹಿಮಾವದಾತ ವೀತರಾಗಸರ್ವಜ್ಞತಾ ಸಮೇತ ಖ್ಯಾತಜಿನಸಮಯಕಮಳನಿಕಳಹಂಸಾಯಮಾನ ಮಾನಿತಶ್ರೀನಂದಿಯೋಗೀಂದ್ರ ಪ್ರಸಾದವಾಚಾಮಹಿತ ಕೇಶವರಾಜಾನಂದನಂದನ ವಾಣೀವಲ್ಲಭವಿರಚಿತಮಪ್ಪ ವಸು ಧೈಕಬಾಂಧವಶ್ರೀವರ್ಧಮಾನಪುರಾಣದೊಳ್.

ಈ ಗ್ರಂಥವು ಪ್ರಾಸಯಮಕಾದಿಶಬ್ದಾಲಂಕಾರಭೂಯಿಷ್ಠವಾಗಿ ಪ್ರೌಢವಾಗಿದೆ.

---

1. ಗೌತಮ, ಭೂತಬಲಿ, ಪುಷ್ಪದಂತ, ಗೃಧ್ರಪಿಂಛ, ಸಮಂತಭದ್ರ, ಪೂಜ್ಯಪಾದ, ಅಕಳಂಕ.

ಇದರಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

### ನಗೇಂದ್ರ.

ಮಾರಾಮಾರಾಮರಂಗತ್ಕಮಳಕಮಳವನ್ಮಾನಸಂ ಮಾನಸಂಪ ।
ತ್ಸಾರಂ ಸಾರಂಗಯೋಷಿತ್ಸುರತಸುರತರೋನ್ಮಾನಭೋಗಂ ನಭೋಗಂ ॥
ಧಾರೂಢಾರೂಢಮುತ್ತೋಕದಳಕದಳಗುಂಜಾಕರಂ ಜಾಕರಂ ಮಂ ।
ದಾರೋದಾರೋರುಕುಂಜಂ ವಿಷಮವಿಷಮಹಾಪನ್ನಗೇಂದ್ರಂ ನಗೇಂದ್ರಂ ॥ 663 ॥

### ರಾಜಗೃಹನಗರ.

ಕರಮೆಸೆವುದು ರಾಜಗೃಹಂ । ಪುರಮುರುತರವಿಭವವಿಜಿತಸುರರಾಜಗೃಹಂ ।
ಸುರುಚಿರರಾಜಗೃಹಂ ರಾ । ಜರಾಜಗೃಹಸದ್ಯಶವರವಣಿಗ್ರಾಜಗೃಹಂ ॥ 664 ॥

### ವಕುಳ.

ವಕುಳಂ ಸಪರಿಮಳಪ್ರಸ । ವಕುಳಂ ಸೌರಭಸಮಾಗತಭ್ರಮರಾರಾ ।
ವಕುಳಂ ಸೊಗಯಿಸಿದತ್ತಿಸೆ । ವ ಕುಳಂಬಿತವಿಟಸಮವನಿಸಂಸ್ಥಾವಕುಳಂ ॥ 665 ॥

### ವನ.

ವನವನವನತಲತೋಜ್ಜೀ । ವನವನವನವತನುಶಿಖಿಗಿದೆಂದು ಜಗತ್ಪಾ ।
ವನವನವನಳಿವಿಳಾಸಭ । ವನನವನಜಾತಪೂರ್ವಮನೆ ಮಾಡಿಸಿದಂ ॥ 666 ॥

### ದ್ವ್ಯಕ್ಷರಿ.

ಕಲಿ ಕೊಂಕಲ್ತೆಕಲಕ್ಕುಂ । ಕೆಲಕ್ಕೆ ಕೋಲಿಕ್ಕಿ ಲಕ್ಕೆಲೆಕ್ಕಕ್ಕೆಲ್ಲಂ ।
ಕಲಿ ಕೊಲಲೆ ಕಲಲ್ತಕ್ಕುಂ ।..ಕಕ್ಕುಂ ಕಲಿ ಕಲಂಕೆ ಕೊಂಕೆ ಕಲಂಕಂ ॥ 667 ॥

### ಗತಪ್ರತ್ಯಾಗತ.

ಕುಂದಿನಿಂದೆಚ್ಚನದು ಬಂ । ಟಂದಮಲ್ಲದೆ ನಿಂದುದೆಂ ।
ದೆಂದು ನಿಂದೆಲ್ಲಮದಟಂ । ಬಂದು ನಚ್ಚದೆ ನಿಂದಿಕುಂ ॥ 668 ॥

### ಚೂತ.

ಬಿಡದೆಱಗಿ ಕೊಂಬುಕೊಂಬಿನೊ । ಳೆಡೆಗಿಱಿದರಗಿಳಿಯ ಗಱಿಯ ತುಂಡದಪುದುವಿಂ ।
ಪಡೆವುದು ಪಣ್ಣಾಲವಿದೆನೆ । ಬೆಡಂಗನವಿರಳಿತಫಲಪರೀತಂ ಚೂತಂ ॥ 669 ॥

### ಅರನೇರಿಲು.

ಉರಿಗೊಡ್ಡಿದರಗಿದೆಂಬಿನ । ಮರಗಿಳಿಗಳ ಚಂಚು ತಾಗಲೊಡನೊಡೆದೋರಂ ।
ತಿರೆ ಸುರಿವ ಪಣ್ಗಳಿಂದಮೆ । ಅರನೇಱಿಲ ಮರಗಳಲ್ಲಿ ಸೊಗಯಿಸಿ ತೋರ್ಕುಂ ॥ 670 ॥

## ಕತ್ತಲೆ.

ಇನಿತುಲ್ಲಿಪದೆ ಕತ್ತುರಿ ಚಂ । ದನಮುಂ ಕಜ್ಜ ಪೆಜ್ಜೆಯನಿಂದ್ರನೀಲಂ ಮುತ್ತಂ
ನನೆಯನಳಿ ಗಂಗೆಯುಂ ಜಗು । ಸೆ ನುಂಗಿದಂತಾಯ್ತು ನುಂಗೆ ಕಲ್ತಿಲಿ ಬೆಳಗಂ ॥ 671 ॥

ಉಲ್ಲಿಯೆ ಜಳಾಹಿಯೆಂದು ಬಿಸವಲ್ಲಿಯನಂಚೆ ಶಿಲೀಮುಖಂಗಳೆಂ ।
ದಿಲ್ಲಿಕೆಯ ಪೂಗಳಂ ಪಜಮೆ ಕೋಕಿಳಮೆಂದು ಪಿಕಂ ಬಳಾಕೆಯಂ ॥
ಬಲ್ಲಿಸಲಲಾಸಗೆಯ್ಯೆ ಕಳಹಂಸಕುಟುಂಬಿನಿಯಂ ಮಯೂರಿಯಂ ।
ದೆಳಸೆ ಶಿಖಾವಳಂ ಪುದಿದುದಂಧತಮಂ ಭುವನಾಂತಮಂ ತಮಂ ॥ 672 ॥

## ನಕ್ಷತ್ರ.

ಅವಿರಳತಿಮಿರಾರ್ದ್ರಮ್ಮಗೋ । ದ್ಭವಸಿಕ್ತನಭೋಂಗಣಕ್ಕೆ ರಾಜಾಗಮನೋ ।
ತ್ಸವದೊಳ್ ಬಿತ್ತರಿಸಿದರಂ । ಗವಲಿಯ ಮುತ್ತುಗಳವೆನಿಸಿದುವು ತಾರಗಗಳ್ ॥ 673 ॥

## ರಾಟಳ.

ಎಲರ್ವೊಯ್ಯಂಮಾಸರ್ಪಕ್ಕುಕಾಂಡರಸದಿಂ ತೋಂಟಕ್ಕೆ ತಮ್ಮೊಳ್ ವಳಂ ।
ಚಲಿವೊಳ್ಗೊಂಚಲ ಕಾಯೊಳುರ್ಕುವೆಳಸೀರಿಂದಂ ಬನಂಗಳ್ಗಗುಂ ॥
ದಲೆ ನೀರೂಟಮಿದೇಕೆ ಕೆಮ್ಮನೆ ತೋಲ್ಪಿಲ್ಲುತ್ತಿರಿಂತೆಮ್ಮನೆಂ ।
ದುಲಿವಂತಪ್ಪುವು ಜಾಟಳಂಗಳಸಕೃದ್ಭೂಧಾಕ್ಕಚೇತ್ಕಾರದಿಂ ॥ 674

## ತೊಂಡು ಹಸುವಿಗಂಜಿದ ಜನದ ತಲ್ಲಣ.

ಮನೆಮನೆದಪ್ಪದೋಡಿ ಪಡಿಯಂ ಕೆಜ್ಜುತಿರ್ಪ ಗೃಹಂಗಳಗ್ರಮಂ ।
ತನಕನಗೇಜ್ಜುತಿರ್ಪ ದಡಿಯಂ ಪಿಡಿದಬ್ಬರಿಸುತ್ತುಮಿರ್ಪ ತೊ ॥
ಟ್ಟನೆ ಕೆಡೆಯುತ್ತುಮಿರ್ಪ ಬಿಡೆ ಕೂಗಿಡುತಿರ್ಪಲ್ಲಿತಿರ್ಪ ತತ್ಪುರೀ ।
ಜನದ ಪೊದಲ್ದಿ ತಲ್ಲಣಿದ ಮಲ್ಲಣಿ ಬೀದಿಯೊಳಾದುದದ್ಭುತಂ ॥ 675 ॥

## ದಿವಿಜ.

ಪ್ರಾತಿಪದಿಕಂಬೊಲಾತನ । ಧಾತುಕನವಿಭಕ್ತಿಭೂಷಿತಂ ನಿಯತಾರ್ಥೋ ।
ಪೇತಂ ನಿಶ್ಚಿತನಾಮ । ಖ್ಯಾತಂ ತಾಂ ಪ್ರತ್ಯಯಾರ್ಹನಾದಂ ದಿವಿಜಂ ॥ 676 ॥

## ಬಲರಾಮನ ಪ್ರಲಾಪ.

ಗರುಡಿಯೊಳಾರೊಳಿಂ ನಲವಿನಾಡುವೆನಾರೊಡನೇಜ್ಜ ತೋಜುವೆಂ ।
ಕರಿತುರಗಂಗಳಂ ನಗುವೆನಾರೊಡನಾರೊಡನಣ್ಣ ಮೆಚ್ಚಿದಂ ॥
ತಿರೆ ಮನದಿಚ್ಚೆಯಂ ನುಡಿವೆನಾರೊಡನಾಡುವೆನಕ್ಕಟಾ ಸಹೋ ।
ದರನನನಾಥನಂ ಬಿಸುಟು ಕೆಮ್ಮನೆ ತಮ್ಮನೆ ಪೋಗಲಕ್ಕುಮೇ ॥ 677 ॥

ಸರಸತಿ ನಿನ್ನ ಭಾಗ್ಯಮರೆಯಾದುದೆ ಹಾ ನಿನತೋಲೆವಾಗ್ಯಮೋ ।
ಸರಿಸಿದುದೇ ಧರಿತ್ರಿ ಸಿರಿ ನಿನ್ನಯ ಮೆಯ್ಸಿರಿ ಸೂಜಿವೋಯ್ತು ಮೆ ॥
ಯ್ಗರೆದುದೆ ವೀರಲಕ್ಷ್ಮಿ ನಿನತ್ಯೆದೆತನಂ ಬಿದಿ ಮೇರೆದಪ್ಪಿ ನಿ ।
ಷ್ಕರುಣದೆ ನಿಮ್ಮ ಬಾಲ್ಗೊಡಲನಕ್ಕಟ ವಂಚಿಸಿ ಕೊಂಡುಪೋದನೇ ॥ 678 ॥

ಸೊಗಯಿಪ ನಿನ್ನ ನುಣ್ಬರದ ಗೀತಿಗೆ ಮೆಚ್ಚುವರಾರೊ ಭೃಂಗ ಕಂ ।
ತುಗೆ ಬರವೀವ ನಿನ್ನ ಬರವಿಂಗಿದಿರ್ವರ್ಪವರಾರೊ ಚೂತ ದೇ ॥
ಸೆಗೆ ನೆಲೆಯಾದ ನಿನ್ನಯ ಮುಗುಳ್ನಗೆಯಂ ಬಗೆಗೊಳ್ವರಾರೊ ಮ ।
ಲ್ಲಿಗೆ ಮಜಿಪಿಕ್ಕಿ ನಿಮ್ಮರಸನಂ ಜವನುಯ್ದುದನಿತ್ತ ಕೇಳಿರೇ ॥ 679 ॥

## 2. ಶ್ರೀಪದಾಶೀತಿ.

ಈ ಗ್ರಂಥವು "ಣಮೋ ಅರುಹಂತಾಣಂ" ಇತ್ಯಾದಿ ಪಂಚಪದಗಳ ಮಹಿಮೆಯನ್ನು ತಿಳಿಸುತ್ತದೆ: ಎಂದರೆ ಅರ್ಹಂತರು, ಸಿದ್ಧರು, ಆಚಾರ್ಯರು, ಉಪಾಧ್ಯಾಯರು, ಸಾಧುಗಳು ಎಂಬ ಪಂಚಪರಮೇಷ್ಠಿಗಳ ನಾಮದ ಮಹಿಮೆಯನ್ನು ಬೋಧಿಸುತ್ತದೆ. ಇದರಲ್ಲಿ ಸುಮಾರು 94 ಕಂದಗಳಿವೆ. ಈ ಗ್ರಂಥದ ಬಂಧವು ಪ್ರೌಢವಾಗಿದೆ. ಇದರ ಉತ್ಕೃಷ್ಟತೆಯನ್ನು ಕವಿ ಈ ಪದ್ಯದಲ್ಲಿ ತಿಳಿಸಿದ್ದಾನೆ:—

ನಿರಪಾಯಾತ್ಮಪ್ರಭಾವಂ ಪರಮಹಿಮಕರಂ ದೂಷಿತಾಶೇಷದೋಷಂ ।
ದುರಘವ್ರಾತಾಬ್ಜವಕ್ತ್ರಂ ವಿರಹಿಜನಹಿತಂ ಸತ್ಪಥಜ್ಯೋತಿ ಶಶ್ವ ॥
ತ್ಪರಿಪೂರ್ಣಂ ನಿಷ್ಕಳಂಕಂ ಬುಧಹೃದಯಗತಧ್ವಾಂತವಿಧ್ವಂಸಿತೇಜಂ ।
ಧರೆಯೊಳ್ ವರ್ತಿಕ್ಕೆ ನಿಚ್ಚಂ ಕುವಲಯಸುಖದಂ ಶ್ರೀಪದಾಶೀತಿಚಂದ್ರಂ ॥

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

### ಪಂಚಪದ.

ಶ್ರೀಮತ್ಪಂಚಪದಂ ಗುರು । ನಾಮಾದಿತ್ರಿತಳಮತುಳರಮ್ಯಂ ಪರ್ಯ್ಯಂ ।
ದಾಮಮಯಂ ಸುಖಕಲಶೋ । ದ್ದಾಮಂ ವಿಶ್ರಾಮಧಾಮಮಕ್ಕೆಮಗನಿಶಂ ॥
॥ 680 ॥

### ಗುರುಪದ.

ಸುಖದ ಕಣಿ ಸುಖದ ತಿಂತಿಣಿ । ಸುಖದ ಬನಂ ಸುಖದ ಸುಗ್ಗಿ ಸುಖದ ಬಸಂತಂ ।
ಸುಖದ ತಿಳಿ ಸುಖದ ಪೊಂಪುಟಿ' । ಸುಖದೊರ್ಬುಳಿ ಸುಖದ ಸೋನೆಯೆನಿಸದೆ
ನಿಸದಂ ॥ 681 ॥

ಸುಖದ ತನಿರಸದ ಪೆರ್ಮಡು । ಸುಖದೊತ್ತಿನ ಸುತ್ತು ಸುಖದತಣ್ಬುಟ್ಟಿಲೆನಿಕುಂ ।
ಸುಖದದೊಣೆ ಸುಖದದೀರ್ಘಿಕೆ । ಸುಖದಕೊಳಂ ಸುಖದಯಂತ್ರಧಾರಾಗಾರಂ
॥ 682 ॥

ಭುವನತ್ರಯಮುಂ ನಿಜರುಚಿ । ನವಾಮೃತಾರ್ಣವದೊಳಾವಗಂ ತೇಂಕಿಸುತಿ ।
ರ್ಪವಿತರ್ಕ್ಯಕಾಂತಿಕಾಂತಂ । ಶಿವಪದಮುಂ ಕಡುಗೆ ನಮಗೆ ಗುರುಪದಮು
ನಘಂ ॥ 683 ॥

ಮರುಳಕ್ಕೆಮ ಪುರುಳಕ್ಕೆಮ । ದುರಿತಾಹಿತಭೀತಿಯಿಂ ಭವತ್ಪದಪದ್ಮಂ ।
ಶರಣೆಂದು ಪೊರ್ದಿದೆನ್ನಂ । ಪರಿಪಾಳಿಸದಿರ್ದೊಡೆತ್ತ ನಿಮಗೆ ಗುರುತ್ವಂ ॥ 684 ॥

## ಪ್ರಣವ.

ಅತಿಶಯಚಿಂತಾಮಣಿ ವಿ । ಶ್ರುತವಿದ್ಯಾಕಲ್ಪಕಂದಳೀಕಂದಮಿಳಾ ।
ಸ್ತುತಬೋಧವಾರ್ಧಿವೇಳಾ । ಸಿತರುಚಿಸಂಪೂರ್ಣಬಿಂಬವಿಭವಂ ಪ್ರಣವಂ ॥ 685 ॥

## ಸಾಧುಗಳು.

ಜಡಿದುಂ ನುಡಿದುಂ ತಮ್ಮೊ । ಳ್ನುಡೆಯುಂಪಡಿದೋಜ್ಞ ಜಡರನೊಯ್ಯನೆ ಕೃಪೆಯುಂ
ಕಿಡದೆಡೆಗೆಯ್ದುಪ ಸಾಧುಗ । ಳಡಿದಳಿರ್ಗಳ್ ಕಿಡಿಸುಗೆಮ್ಮ ಜನ್ಮಶ್ರಮಮುಂ ॥ 686 ॥

---

## ಸಿಂಗದೇವ. 1197.

ಸೊರಬದ 140ನೆಯ ಶಾಸನದಲ್ಲಿ (ಶಕ 1119) ಈತನನ್ನು "ಸರಸೋದಾರ ಕವಿತ್ವತತ್ವಚತುರಾಸ್ಯಂ" ಎಂದು ಹೊಗಳಿದೆ. ಈತನು ಜಿಡ್ಡಳಿಗೆಯ ಎಕ್ಕಳ ದೇವನ ಮತ್ತು ಚಟ್ಟಳದೇವಿಯ ಮಗನೆಂದು ಹೇಳಿದೆ. ಇವನು ಆವ ಗ್ರಂಥಗಳನ್ನು ಬರೆದಿದ್ದಾನೆಯೋ ತಿಳಿಯದು.

---

## ಕವಿಕಾಮ. ಸು. 1200.

ಈತನು ಶೃಂಗಾರರತ್ನಾಕರವನ್ನು ಬರೆದಿದ್ದಾನೆ. ಸ್ತನಶತಕವೆಂಬ ಮತ್ತೊಂದು ಗ್ರಂಥವನ್ನೂ ಬರೆದಿರುವುದಾಗಿ ಪಾರ್ಶ್ವನ (1205) ಈ ಪದ್ಯದಿಂದ ತಿಳಿಯುತ್ತದೆ:—

ಕಾಮನ ಬಾಣಕ್ಕಂ ಕವಿ । ಕಾಮನ ಬಾಣಕ್ಕವಿಲ್ಲ ಭೇದಂ ಸುಮನೋ ।
ರಾಮತಿಯಿಂ ಸ್ತನಶತಕೋ । ದ್ದಾಮತಿಯಿಂ ಭುವನಮಂ ವಶಂಮಾಟ್ಪುದಜಂ ॥

ಈತನ ಬಿರುದುಗಳನ್ನು ನೋಡಿದರೆ ಇವನು ಇನ್ನೂ ಅನೇಕ ಗ್ರಂಥಗಳನ್ನು ರಚಿಸಿರಬಹುದೆಂದು ತೋರುತ್ತದೆ. ಇವನ ಸ್ತನಶತಕವೂ ಇತರ ಗ್ರಂಥಗಳೂ ನಮಗೆ ದೊರೆತಿಲ್ಲ.

"ಭವಪಾದಾಂಬುಜಷಟ್ಪದಂ" ಎಂಬುದರಿಂದಲೂ ಆಶ್ವಾಸಾಂತ್ಯಗದ್ಯದಿಂದಲೂ ಈತನು ಬ್ರಾಹ್ಮಣಕವಿಯೆಂದು ತೋರುತ್ತದೆ. ಅಲ್ಲದೆ

ನಿರುಪಮಕವಿತಾರಸಮಂ । ವರಕವಿಬುಧರತ್ನರಾಜ ಬಣ್ಣಿಸೆ ಸಾಮಂ ।
ತರ ಮಂಡಳಿಕರ ಚಕ್ರೇ । ಶರ ಸಭೆಯೊಳ್ ನೆಗಟ್ಸಿನಿಂತು ಕವಿಮುಖಮುಕುರಂ ॥

ಎಂದೂ "ವಿವಿಧಭೂಭೃದ್ಭೂರಿಸಂಭಾವಿತಾಸ್ಪದದಿಂ" ಎಂದೂ ಹೇಳಿಕೊಂಡಿರುವುದರಿಂದ ಈತನು ರಾಜಾಸ್ಥಾನಗಳಲ್ಲಿ ಪ್ರಸಿದ್ಧಕವಿಯಾಗಿದ್ದಂತೆ ತಿಳಿಯುತ್ತದೆ.

ಈತನಿಗೆ ಶೃಂಗಾರರತ್ನಾಕರ, ಕವಿಮುಖಮುಕುರ ಎಂಬಿವೇ ಮೊದಲಾದ ಅನೇಕ ಬಿರುದುಗಳಿದ್ದಂತೆ ತೋರುತ್ತದೆ. ಇವನಿಗೆ ಅನ್ಯಾದೃಶವಾದ ಕವಿತಾಶಕ್ತಿಯೂ ಅವಧಾನಶಕ್ತಿಯೂ ಇದ್ದಂತೆ ಈ ಪದ್ಯದಿಂದ ತಿಳಿಯುತ್ತದೆ:—

ಎಸಕಂಬೆತ್ತ ಮತಿಪ್ರಕಾಶಮದನಿನ್ನೇನೆಂದಪೆಂ ಚೋಟಿ ನಾ ।
ಲ್ಪಿಸೆಯೊಳ್ ನಾಲ್ಕರ ಕಂಠದೊಳ್ ಬರೆಯೆ ಕಬ್ಬಂಬೀಲ್ಪಿನೊಲ್ದತ್ತಲಾ ॥
ಡಿಸುವಂ ನೆತ್ತಮನಿತ್ತಲೋದಿದೊಡೆ ತಪ್ಪಂ ಪೇಳ್ವುದಂ ತರ್ದಿಯಾ ।
ಲಿಸುವಂ ಗೀತಮನೆನ್ನುಮಂ ನಗಿಸುವಂ ಶೃಂಗಾರರತ್ನಾಕರಂ ॥

ಈತನ ಗ್ರಂಥದಲ್ಲಿಯ ಪದ್ಯವನ್ನು[1] **ಮಲ್ಲಿಕಾರ್ಜುನನು** (ಸು. 1245) ತನ್ನ **ಸೂಕ್ತಿಸುಧಾರ್ಣವ**ದಲ್ಲಿ ಉದ್ಧರಿಸಿ ಬರೆದಿರುವುದರಿಂದ ಇವನು ಅವನ ಕಾಲಕ್ಕೆ ಹಿಂದೆ ಇದ್ದಿರಬೇಕೆಂದೂ **ಪಾರ್ಶ್ವಪಂಡಿತನು** (1205) ಇವನನ್ನು ಸ್ತುತಿಸುವುದರಿಂದ 1205 ಕ್ಕೆ ಹಿಂದೆ ಇಪ್ಪನೆಂದೂ ವ್ಯಕ್ತವಾಗುತ್ತದೆ. ಅಲ್ಲದೆ ಈತನು "ಶೃಂಗಾರ"ವನ್ನು ಬರೆದ ಕವಿಗಳ ಹೆಸರನ್ನು ಹೇಳುವ ಸಂದರ್ಭದಲ್ಲಿ **ಮನಸ್ಸಂಜಾತ** ಎಂಬ ಒಬ್ಬ ಕವಿಯ ಹೆಸರನ್ನು ಹೇಳುತ್ತಾನೆ. ಈ ಮನಸ್ಸಂಜಾತನು ಸುಮಾರು 1000 ರಲ್ಲಿದ್ದ **ಮನಸಿಜ**[2] ನೆಂಬ ಕನ್ನಡಕವಿಯೇ ಆಗಿದ್ದ ಪಕ್ಷದಲ್ಲಿ ಕವಿಕಾಮನು 1000 ಕ್ಕೆ ಈಚೆಯವನಾಗಿದ್ದಿರಬೇಕು. ಸುಮಾರು 1200 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ.

ಈತನು ತನಗೆ ಹಿಂದೆ ಇದ್ದ "ಶೃಂಗಾರ" ಕರ್ತೃಗಳ ಹೆಸರುಗಳನ್ನು ಈ ಪದ್ಯದಲ್ಲಿ ಹೇಳಿದ್ದಾನೆ:—

---

1 ಶೃಂಗಾರರತ್ನಾಕರ, ಪದ್ಯ 7. 2. ಪುಟ 72.

ಸರಸೀಜೋದ್ಭವಕರ್ಣಿಕಾಭವಕುಬೇರಾಪತ್ಯಪಾಂಚಾಳಕೂ ।
ಬರವಾತ್ಸ್ಯಾಯನಚಂದ್ರದತ್ತಕಮನಸ್ಸಂಜಾತನಾರಾಯಣಾ ॥
ಮರಸಿಂಹಾದಿಗಳಿಂ ನೆಗಲ್ತ್ತವಡೆದಾಶೃಂಗಾರವಿಮಾಗಳ್ ಕರಂ ।
ದೊರೆವೆತ್ತತ್ತೆನೆ ಜೀಜಿ ವಿಸ್ತರಿಸಿದಂ ಶೃಂಗಾರಕಾರಾಗೃಹಂ ॥

ಈ ಪದ್ಯದಲ್ಲಿ ಉಕ್ತರಾದ ಕವಿಗಳೆಲ್ಲಾ ಪ್ರಾಯಶಃ **ಸಂಸ್ಕೃತ ಕವಿಗಳು.** ಆದರೆ ಚಂದ್ರನು **ಮದನತಿಲಕವನ್ನು** ಬರೆದ ಚಂದ್ರರಾಜ[1] ನಾಗಿರಬಹುದು; ಮನಸ್ಸಂಜಾತನು ಮನಸಿಜನಾಗಿರಬಹುದು.

ಈತನನ್ನು **ಪಾರ್ಶ್ವ** (1205), **ಸಾಳ್ವ** (ಸು. 1550), **ಮೊದಲಾದ** ಕವಿಗಳು ಸ್ತುತಿಸಿದ್ದಾರೆ.

ತನ್ನ ಕವಿತಾಚಾತುರಿಯನ್ನೂ ಗುಣಗಳನ್ನೂ ಬಿರುದುಗಳನ್ನೂ ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ:—

ಜಗದೊಳ್ ಸನ್ನಿದಮಾದ ನಾಟ್ಯಗಿಡಿಗಳಂ ಛಂದಕ್ಕೆ ಬರ್ಪಂತು ನೆ ।
ಟ್ಟಗೆ ಮಾತಾಡುವ ಬಲ್ಮೆ ಚಿತ್ತದೊಳೊಜಲ್ದಿರ್ದರ್ಥಮಂ ಕೂಡೆ ನಾ ॥
ಲಗೆಯುಂ ರಂಜಿಸುವೊಂದು ಬಿನ್ನಣಮದಿನ್ನಾವಂಗೆ ಪುಣ್ಯೈಕಥಾ ।
ಗಿಗೆ ಸೈಪಿಂ ದೊರೆಕೊಳ್ಗುಮಾತನೆ ವಲಂ ಶೃಂಗಾರರತ್ನಾಕರಂ ॥
ಪದವೆತ್ತಿರ್ದ ಗಭೀರಭಾವಗುಣದಿಂ ಲಾವಣ್ಯಲೀಲಾವಿಲಾ ।
ಸದಿನುದ್ಯದ್ಗುಣಶೋಭೆಯುಂ ವಿವಿಧಭೂಭೃದ್ಭೂರಿಸಂಭಾವಿತಾ ॥
ಸ್ಪದದಿಂ ಭೂಭುವನಪ್ರಸಿದ್ಧಿ ನಿಲೆ ತತ್ಕಾವ್ಯಂ ಜಗತ್ಸೇವ್ಯಮ ।
ಪ್ಪುದಱಿಂದಂ ಕವಿಕಾಮದೇವನೆ ವಲಂ ಶೃಂಗಾರರತ್ನಾಕರಂ ॥
ಮೃದುಮಧುರವಚನರಚನೆಯಿ । ನುದಾತ್ತಕವಿವೃಷಭಕವಿಕದಂಬವಿಸೃಷ್ಟಿ ।
ದ್ಧೃದಯಮನಿರ್ಕುಟ್ಟಿಗೊಳುತಿ । ರ್ಪುದಱಿಂ ಕವಿಕಾಮನಿಂತು ದೆಸೆದೆಸೆಗೆಸೆದಂ ॥
ಅನವದ್ಯಕೀರ್ತಿ ವಿದ್ಯಾ । ವಿನೂತನನಿಮಿತ್ತಬಾಂಧವಂ ಬುಧಸೇವ್ಯಂ ।
ವಿನಯವಿಭೂಷಣನಭಿಮಾ । ನನಿಧಾನಂ ನಿಖಿಲಸುಕವಿಮುಖಮಣಿಮುಕುರಂ ॥
ಸಕಲಕಲಾಕಲಿತಂ ವಾ । ಚಕವಾಚಸ್ಪತಿ ಸರಸ್ವತೀಮುಖತಿಲಕಂ ।

* * * *

ಚದುರ ತವರ್ಮನೆ ರಸಭಾ । ವದ ನಿಧಿ ಮಹಿಮಾಂಬುರಾಶಿ ವಿನಯನಿಧಾನಂ ।

* * * *

ಶ್ರೀನಿಧಿ ವಿವೇಕನಿಧಿ ಕವಿ । ತಾನಿಧಿ ಸೌಭಾಗ್ಯನಿಧಿ ಯಶೋನಿಧಿ ವರವಿ ।
ದ್ಯಾನಿಧಿ ವಿಳಾಸನಿಧಿ ಮಹಿ । ಮಾನಿಧಿ ಮಾನನಿಧಿ ದಾನನಿಧಿ ಕವಿಕಾಮಂ ॥

---

1. ಪುಟ 89.

ಈ ಪದ್ಯಗಳಲ್ಲಿ ಉಕ್ತವಾದ ಬಿರುದುಗಳಲ್ಲದೆ ಕವಿತಾಪಿತಾಮಹ, ಸುಕವಿನಿಕರನಿಳಿಂಪ, ಗದ್ಯಪದ್ಯವಿದ್ಯಾಧರ, ಬುಧಜನಕುಮುದಶರಚ್ಚಂದ್ರ, ಸುಜನನವನ ಜವನನಮಾರ್ತಾಂಡ, ವಾಗ್ದೇವೀಲಬ್ಧವರಪ್ರಸಾದ ವಿಭವ, ಎಂಬ ಬಿರುದುಗಳನ್ನೂ ಹೇಳಿಕೊಂಡಿದ್ದಾನೆ.

ಇವನ ಗ್ರಂಥ

## ಶೃಂಗಾರರತ್ನಾಕರ.

ಈ ಗ್ರಂಥಕ್ಕೆ ರಸವಿವೇಕ ಎಂಬ ಹೆಸರನ್ನೂ ಹೇಳಿದ್ದಾನೆ; ಇದು ಅಲಂಕಾರ ಶಾಸ್ತ್ರದ ರಸಪ್ರಕ್ರಿಯೆಯನ್ನು ಪ್ರತಿಪಾದಿಸುತ್ತದೆ. ಇದರಲ್ಲಿ ಹಿಂದಣ ಕವಿಗಳು ಹೇಳಿದ ಶೃಂಗಾರವನ್ನು ತಾನು ವಿಸ್ತರಿಸಿ ಬರೆದಂತೆ ಹೇಳುತ್ತಾನೆ.

ಈ ಗ್ರಂಥವು (1) ನವರಸವ್ಯಾವರ್ಣನ, (2) ಭಾವಭೇದನಿರ್ಣಯ, (3) ನಾಯಕನಾಯಿಕಾವಿಕಲ್ಪವಿಸ್ತರ, (4) ಸಖಸಖೀಸಂಭೋಗವಿಪ್ರಲಂಭಪ್ರಮಾವಸ್ಥಾದಿವಿಸ್ತರ ಎಂದು ನಾಲ್ಕು ಪರಿಚ್ಛೇದಗಳಾಗಿ ಭಾಗಿಸಲ್ಪಟ್ಟಿದೆ. ಗ್ರಂಥಾವತಾರದಲ್ಲಿ ಕಾಮದೇವನನ್ನೂ ಸರಸ್ವತಿಯನ್ನೂ 'ಪ್ರಾಕ್ತನಕವಿ' ಗಳನ್ನೂ ಸ್ತುತಿಸಿದ್ದಾನೆ. ಬಳಿಕ, ಪಂಡಿತರು ಶೃಂಗಾರಸಾರವಾದ 'ಭಾವರಸಪ್ರಪಂಚ' ವನ್ನು ಹೇಳಬೇಕೆಂದು ಕೇಳಿಕೊಳ್ಳಲು ಈ ಕೆಳಗಣ ಪದ್ಯದಲ್ಲಿ ಹೇಳಿರುವ ವಿಷಯಗಳನ್ನು ಸೇರಿಸಿ ಶೃಂಗಾರರತ್ನಾಕರವೆಂಬ ಗ್ರಂಥವನ್ನು ಬರೆವೆನೆಂದು ಹೇಳಿ ಗ್ರಂಥವನ್ನು ಆರಂಭಿಸಿದ್ದಾನೆ:—

ಭವಪಾದಾಂಬುಜಷಟ್ಪದಂ ನವರಸವ್ಯಾಪಾರಮುಂ ಭಾವಸಂ।
ಭವನುಂ ನಾಯಕನಾಯಿಕಾಸಖಸಖೀಸಂಭೋಗತದ್ವಿಪ್ರಲಂ ॥
ಭವಿಟಪ್ರಸ್ತುತವೈಶಿಕಾದಿರಸಶಾಸ್ತ್ರೋದ್ಭೂತಸನ್ಮಾರ್ಗವೃ।
ತ್ತಿವಿಕಲ್ಪಂಗಳುಮಂ ಮನಂಗೊಳಿಸಿದಂ ಶೃಂಗಾರರತ್ನಾಕರಂ ॥

ಪರಿಚ್ಛೇದಗಳ ಕೊನೆಯಲ್ಲಿ ಈ ಗದ್ಯವಿದೆ:—

ಇದು ವಿನಮದಮರನಿಕರಮಕುಟಮಣಿಗಣಕಿರಣರಮಣೀಯಚರಣಸರಸೀರುಹ ಶಿವ ಪದಾಂಬುಜಭೃಂಗಾಯಮಾನ ಸರಸ್ವತೀಪ್ರಸಾದಾಸಾದಿತಕವಿತಾಪ್ರಭಾವಂ ಕವಿಕಾಮದೇವ ವಿರಚಿತಮಪ್ಪ ರಸವಿವೇಕನಾಮ ಶೃಂಗಾರರತ್ನಾಕರದೊಳ್.

ಕನ್ನಡದಲ್ಲಿ ರಸಪ್ರಕರಣವನ್ನು ವಿಸ್ತಾರವಾಗಿ ಪ್ರತಿಪಾದಿಸುವ ಗ್ರಂಥಗಳಲ್ಲಿ ಇದೇ ಮೊದಲನೆಯದು. ಈ ಗ್ರಂಥದಿಂದ **ಸಾಳ್ವನು** ತನ್ನ ರಸರತ್ನಾಕರದಲ್ಲಿಯೂ **ತಿಮ್ಮನು** (ಸು. 1600) ತನ್ನ ನವರಸಾಲಂಕಾರದಲ್ಲಿಯೂ ಅನೇಕಲಕ್ಷಣಪದ್ಯಗಳನ್ನು ಉದ್ಧರಿಸಿ ಬರೆದಿದ್ದಾರೆ.

ನಮಗೆ ದೊರೆತ ಒಂದು ಓಲೆಯ ಪ್ರತಿಯಲ್ಲಿ ಶಿವನನ್ನು ಸ್ತುತಿಸುವ ಈ ಮಂಗಳಶ್ಲೋಕವು ಗ್ರಂಥಾವತಾರದಲ್ಲಿದೆ :—

ಉಮೆಯಿಂ ಶೃಂಗಾರಮಾಕೆಯ್ದುಗಳ ಬಳಗದಿಂ ವೀರಮಾರುಂಡಮಾಲಾ ।
. . ದಿಂ ಬೀಭತ್ಸಮಾಪನ್ನಗನಿನತಿಭಯಂ ಭಿಕ್ಷೆ ಕಾರುಣ್ಯಮಾನಾ ॥
ಗಮೆ ಹಾಸ್ಯಂ ಭಾಳನೇತ್ರಾದ್ಭುತಮುಲಿವ ಮರುಳ್ತಂಡದಿಂ ರೌದ್ರಮಾಚಂ ।
ದ್ರಮನಿಂ ಶಾಂತತ್ವಮಾಗಲ್ ನವರಸಭರಿತಂ ಶಂಭು ರಕ್ಷಿಸಕ್ಕೆ ನಮ್ಮಂ ॥

ಈ ಗ್ರಂಥದಿಂದ ಕುಕವಿನಿಂದಾರೂಪವಾದ ಈ ಪದ್ಯವನ್ನು ಉದ್ಧರಿಸಿ ಬರೆಯುತ್ತೇವೆ :—

ವಿಖಿಲಪದಸ್ರಪೂರ್ಣಮಪಶಬ್ದತುಷಾವೃತಮಸ್ತಭಾವಮು ।
ಪ್ರಥಿತಗತಾರ್ಥಶಾಸ್ತ್ರಮಪಹಾಸ್ಯಸಮಾವೃತಮಪ್ಪ ಕಬ್ಬಮಂ ॥
ಗ್ರಥಯಿಸಿ ಗರ್ವದಿಂ ಬೆಜ್ತು ಬಿಜ್ರಿನೆ ಬೀಗಿ ಸರಸ್ವತೀವಿರೋ ।
ವ್ಯಥೆಯನದೇಕೆ ಮಾಡುವರೊ ದುಷ್ಕವಿಗಳ್ ಕಲರೀಧರಿತ್ರಿಯೊಳ್ ॥ 687 ॥

---

## ಬಂಧುವರ್ಮ. ಸು. 1200.

ಈತನು **ಹರಿವಂಶಾಭ್ಯುದಯ**, **ಜೀವಸಂಬೋಧನೆ** ಎಂಬ ಗ್ರಂಥಗಳನ್ನು ಬರೆದಿದ್ದಾನೆ.

ಇವನು ಜೈನಕವಿ; ಜೀವಸಂಬೋಧನೆಯ ಕೊನೆಯ ಪದ್ಯದಲ್ಲಿ "ನುತವೈಶ್ಯೋತ್ತಮ ಬಂಧುವರ್ಮರಚಿತಂ" ಎಂದು ಹೇಳಿಕೊಂಡಿರುವುದರಿಂದ ವೈಶ್ಯ ಜಾತಿಯವನೆಂದು ತಿಳಿಯುತ್ತದೆ. ಇವನ ಗ್ರಂಥಗಳಿಂದ ಈತನ ವಿಷಯವಾಗಿ ಇನ್ನೇನೂ ತಿಳಿವುದಿಲ್ಲ; ಇವನು ತನ್ನ ಗುರುವಿನ ಹೆಸರನ್ನು ಸಹ ಹೇಳಿಲ್ಲ.

**ಕಮಲಭವನು** (ಸು. 1235) ಈತನನ್ನು "ಸಂದ ಬಂಧುವರ್ಮ" ಎಂದು ಸ್ತುತಿಸುವುದರಿಂದ ಇವನು 1235 ಕ್ಕೆ ಹಿಂದೆ ಇದ್ದಿರಬೇಕು; ಎಷ್ಟು ಹಿಂದೆ ಇದ್ದಿರಬಹುದೋ ಅದನ್ನು ನಿಶ್ಚಯಿಸಿ ಹೇಳುವುದಕ್ಕೆ ಆಧಾರವಿಲ್ಲ; ಸುಮಾರು 1200 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ.

ಇವನು ತನಗೆ ಹಿಂದೆ ಇದ್ದ ಆವ ಕವಿಯ ಹೆಸರನ್ನೂ ಹೇಳಿಲ್ಲ

ಈತನನ್ನು **ನಾಗರಾಜ, ಮಂಗರಸ,** ಮೊದಲಾದವರು ಸ್ತುತಿಸಿದ್ದಾರೆ :—

ಕವಿಗಳೊಳ್ ಬಂಧುವರ್ಮಂ । ಕವಿ [ಯಾತನ] ಮುಂದೆ ಕವಿಗಳೆಂಬವರೆಲ್ಲಂ ।
ಛವಿಗೆಟ್ಟಿರ್ಪರ್ ತೊಳಗುವ । ರವಿಯುಂ ಬಳಸಿರ್ದ ಬಹಳಭಗಣಂಗಳವೋಲ್ ॥

[ **ನಾಗರಾಜನ** (1331) **ಪುಣ್ಯಾಸ್ರವ.** ]

ಬಂಧುರಭರತಯಾದವವಂಶವನು ಕೃತಿ । ಬಂಧದೊಳಗೆ ಸೇರಿಸಿದ ।
ಬಂಧುವರ್ಮನನು ನೆನೆದು ನೇಮಿಚರಿತಪ್ರ । ಬಂಧವನಾನುಸಿರುವೆನು ॥

## [ ಮಂಗರಸನ (1508) ನೇಮಿಜೀನೇಶ ಸಂಗತಿ. ]

**ತನ್ನ ಕವಿತಾಚಾತುರಿಯನ್ನು ಈ ಪದ್ಯದಲ್ಲಿ ಹೇಳಿಕೊಂಡಿದ್ದಾನೆ:—**

ರಸದೊಳ್ ಬಿನ್ನಣದೊಳ್ಪು ಕೂಡೆ ಪದಮರ್ಥವ್ಯಕ್ತಿಯಂ ಮಾಡೆ ರಂ ।
ಜಿಸಿ ಪತ್ತಿರ್ದೆಣೆಮಾತು ಬಲ್ಲರೆರ್ದೆಗೊಳ್ವಂತುಂ ಜನಂ ನಾಡೆ ಬೆ ॥
ಕ್ಕಸಮಪ್ಪಂತುವಿದೊಂದೆ ಸಾಲ್ಗುದು ಜಗಕ್ಕೆಂಬಂತುವಿಂ ಪೇಳ್ದಿನೆಂ ।
ದುಸಿರಲ್ ಕಬ್ಬಿಗರಣ್ಮದಂತುವಿದನಾಂ ಪೇಳ್ದಿಂ ಮಹಾಕಾವ್ಯಮಂ ॥

**ದುಷ್ಕವಿಗಳನ್ನು ಈ ಪದ್ಯದಲ್ಲಿ ಧಿಕ್ಕರಿಸಿದ್ದಾನೆ:—**

ಆಲಿಸುತೆ ಜೀಗಮೋಹೋ । ಸಾಲಿಸಿಮೆನೆ ವಿರಸಮಪ್ಪ ಕಬ್ಬಂಬೇಳ್ವೌ ।
ಲೋಲತೆಯಿಂದಂ ಬರೆಬರೆ । ಮೋಲಿಗಳಂಕಿಡಿಸುವಂತು ತಾಬ್ರಿಕೊಳ್ ಪಗೆಯೇ ॥

ಇವನ ಗ್ರಂಥಗಳಲ್ಲಿ

### 1. ಹರಿವಂಶಾಭ್ಯುದಯ.

ಇದು 22 ನೆಯ ತೀರ್ಥಕರನಾದ ನೇಮಿನಾಥನ ಚರಿತವು; 14 ಆಶ್ವಾಸಗಳಾಗಿ ಭಾಗಿಸಲ್ಪಟ್ಟಿದೆ. ಈ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಈ ಪದ್ಯದಲ್ಲಿ ಹೇಳಿದ್ದಾನೆ:—

ಪದ್ಯಾಂಗಿ ವಚನಸನ್ಮುಖಿ । ಗದ್ಯಮುಹಾರಚನೆ ವಿಳಸದುಭಯಾಲಂಕಾ ।
ರೋದ್ಯತ್ಕುಚೆ ಮತ್ಕೃತಿವಧು । ವಿದ್ಯಾವಿಜ್ಞಾನದ ಮನದೊಳಿರೆ ವಿರಚಿಸುವೆಂ ॥

ಗ್ರಂಥಾವತಾರದಲ್ಲಿ ನೇಮಿನಾಥನನ್ನು ಸ್ತುತಿಸಿದ್ದಾನೆ; ಬಳಿಕ ಸಿದ್ಧಾದಿಗಳನ್ನೂ ಯಕ್ಷಯಕ್ಷಿಯರನ್ನೂ ಸರಸ್ವತಿಯನ್ನೂ ಸ್ತುತಿಸಿ ಕಥೆಯನ್ನು ಆರಂಭಿಸಿದ್ದಾನೆ.

ಆಶ್ವಾಸಗಳ ಕೊನೆಯಲ್ಲಿ ಈ ಗದ್ಯವಿದೆ:—

ಇದರ್ಹತ್ಸರ್ವಜ್ಞಪಾದಪದ್ಮವಿರಾಜಿತೋತ್ತಮಾಂಗ ಶ್ರೀಬಂಧುವರ್ಮನಿರ್ಮಿತಮಪ್ಪ ಹರಿವಂಶಾಭ್ಯುದಯದೊಳ್.

ಇವನ ಬಂಧವು ಲಲಿತವಾಗಿಯೂ ಪ್ರಾಸಬದ್ಧವಾಗಿಯೂ ಇದೆ.
ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

#### ನಂದನ.

ತಳಿರ್ಗಳ ಕೆಂಪು ಸಂಪಗೆಯ ಕಂಪು ಮದಾಳಿಯಲಂಪು ಚೆಲ್ವಿನಿಂ ।
ಮಿಳಿರ್ವೆಳಗೊಂಬು ದಂಪತಿಗಳಿಂಬು ಮನೋಭವನಂಬು ಪೂತ ಪೂ ॥

ಗೊಳಗಳ ತಳ್ಪು ತೆಂಕಣೆಲರೊಳ್ಪು ಲತಾಳಿಯ ತಳ್ಪು ಕಾಮುಕ।
ರ್ಕಳಿನಭಿನಂದನಂ ಬಗೆದು ನೋಡಲುಮಿಂತು ಮನೋನುಬಂಧನಂ ॥ 688 ॥

## ಕಾಳಿಯಮರ್ದನ.

ಪಿಡಿದು ತೆಗೆದೆತ್ತಿ ಬೀಸು। ತ್ತಡಸಿ ತಗುಳ್ದಜಿಯಮೇಲೆ ನೀಲಾಂಬರಮಂ।
ಪಿಡಿದೊಗೆವಸಗನ ತೆಱದಿಂ। ಪೊಡೆದಂ ವಿಷಧಾರಿ ಸೊಪ್ಪು ಸೊವಡಪ್ಪಿನೆಗಂ ॥ 689 ॥

## ರುಕ್ಮಿಣಿಯ ಕುರುಳು.

ಕರಿಯವೆನಿಸಿರ್ದು ಪೊಳಿವುವು। ಸುರುಳ್ದು ಕುಸಿದಿರ್ದುಮರಳುತಿರ್ಪುವು ಬೇಱೂ।
ಗಿರುತುಂ ಬಂಬಲೆ ಳ್ಕುವು। ಕುರುಳಂದಮಿದೇಂ ವಿರುದ್ಧಮೋ ಕಾಮಿನಿಯಾ
॥ 690 ॥

## ಶಿಶುಪಾಲಕೃತಕೃಷ್ಣನಿಂದೆ.

ಉಡಿದ್ಪೆ ಭಂಡಿಯನೇನಗುರ್ವೊ ಮಗುಳ್ದುಂ ವಿಕ್ರಾಂತದಿಂ ಕಾಗೆಯುಂ।
ಪಿಡಿದ್ಪೆ ಸಂಕಿಸದೆಲ್ಲ್ರು ಕಲ್ಲ್ತಬಡಗೊಂಟೆಂದಿಂತಿವಂ ನೋವಿನಂ ॥
ಬಡಿದ್ಪೆ ನೀರೊಳಗೊಳ್ಳಿಯುಂ ಮುಡಿಪಿದ್ಪೆ ನೀಂ ಚೋದ್ಯವೋ ಮುತ್ತರ।
ಲ್ಗಡುವಂ ಮಾಣ್ದಿರದೊತ್ತಿದ್ಪೆ ಗಡಮಿದೇನಾಶ್ಚರ್ಯಮೋ ಸಾಹಸಂ ॥ 691 ॥

## ಪೌರುಷ.

ಕೇಡೆಂಬುದು ಪುರುಷನನೀ। ಡಾಡಲುಮಲೆದಲೆದು ಕಾಡಲುಂ ಪುರುಷತೆಯುಂ।
ನೋಡಲುಮೆಂದಾದೊಡೆ ಚಿಃ। ನಾಡೆ ಮನಂಗೆಟ್ಟು ಮಗುಳ್ವಲಕ್ಕುಮೆ ಪೋಪಂ
॥ 692 ॥

## ಪಾತಿವ್ರತ್ಯ.

ಪತಿ ಕಾಗುಮೆ ಪೆಂಡತಿಯುಂ। ಸತಿ ತನ್ನಂ ತಾನೆ ಕಾಗುಮುತ್ತಮಜಾತಿ।
ಸ್ಥಿತಿಯುಂ ಗುಣಸಂತತಿಯುಂ। ಗತಿಯುಂ ತಾಂ ಬಗೆದು ನೆಗಲ್ಚಿ ಪಲ್ಚು ಪೊರ್ದುಗುಮೇ
॥ 693 ॥

## ಅಹಿಂಸೆ.

ಕಾವವರಾರುಮಿಲ್ಲ ದನಮೆಂಬುದು ನೀರನಿತಿಲ್ಲ ದೋಷಮೆಂ।
ಬಾವುದುಮಿಲ್ಲ ಬೆರ್ಚುವುದು ಮೆಯ್ಮುಳಿಸಿಲ್ಲದ ಮೂಗುಜಾತಿಗಳ್ ॥
ಮೇವುದು ಪುಲ್ ಜಲಂ ಕುಡಿವುದಿರ್ಪೆಡೆಯುಂ ಪಟುವಂತುಮಿಷ್ಟಸಂ।
ಸೇವನೆಯಲ್ಲಿ ಮೆಯ್ಯುಱಯದಿರ್ದುವನೇಂ ಗಳ ಕೊಲ್ವುದೊಳ್ಳಿತೇ ॥ 694 ॥

## 2. ಜೀವಸಂಬೋಧನೆ.

ಈ ಗ್ರಂಥದಲ್ಲಿ ಕವಿ ಜೀವನನ್ನು ಸಂಬೋಧಿಸಿ ಜೈನಮತದ ತತ್ವಗಳನ್ನು ಉಪದೇಶಿಸಿದ್ದಾನೆ. ಇದು ಅಧ್ರುವಾಭಿಧಾನ, ಅಶರಣಾಭಿಧಾನ, ಏಕತ್ವಾಭಿಧಾನ, ಅನ್ಯತ್ವಾಭಿಧಾನ, ಸಂಸಾರಾಭಿಧಾನ, ಲೋಕಾಭಿಧಾನ ಅಶುಚಿತ್ವಾಭಿಧಾನ, ಆಸ್ರವಾಭಿಧಾನ, ಸಂವರಾಭಿಧಾನ, ನಿರ್ಜರಾಭಿಧಾನ, ಧರ್ಮಾಭಿಧಾನ, ಬೋಧ್ಯಭಿಧಾನ ಎಂದು 12 ಅಧಿಕಾರಗಳಾಗಿ ಭಾಗಿಸಲ್ಪಟ್ಟಿದೆ.

ಗ್ರಂಥಾವತಾರದಲ್ಲಿ ಜಿನಸ್ತುತಿ ಇದೆ. ಬಳಿಕ ಕವಿ ಸಿದ್ಧಾದಿಗಳನ್ನೂ ಸರಸ್ವತಿಯನ್ನೂ ಸ್ತುತಿಸಿ,

ಅಜುವಿಲ್ಲದೆ ತಕ್ಕೆಡೆಯೊಳ್ । ತಜುಸಲ್ಲದೆ ತೊಡರ್ದು ನಮೆವ ಜೀವಕ್ಕೆಲ್ಲಂ ।
ನಿಜುಯೆ ಹಿತಮೆಂದು ಬಗೆದಿದ । ನಜುಪುವನಜುವಂತು ಜೀವಸಂಬೋಧನೆಯಂ ॥

ಎಂದು ಗ್ರಂಥವನ್ನು ಆರಂಭಿಸಿದ್ದಾನೆ.

ಅಧಿಕಾರಗಳ ಅಂತ್ಯದಲ್ಲಿ

ಇದು ಜಿನಶಾಸನಪ್ರಭಾಸನತೀರ್ಥೋದಿತ[1] ವಿದಿತ ಬಂಧುವರ್ಮನಿರ್ಮಿತಮಪ್ಪ ಜೀವಸಂಬೋಧನಾಗ್ರಂಥಾವತಾರದೊಳ್

ಎಂಬ ಗದ್ಯವಿದೆ.

ಈ ಗ್ರಂಥವು ಲಲಿತವಾಗಿಯೂ ನೀತಿವೈರಾಗ್ಯಬೋಧಕವಾಗಿಯೂ ಇದೆ. ಇದರಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ :—

ಪಲ್ಲಿಯಂ ಬರಿಸದೆ ಪೆಱರಂ । ಪಲ್ಲಿಯದೆ ತನ್ನಳವಿಯಿಂದಮೆಂತುಂ ಧರ್ಮ ।
ಕ್ಕಲ್ಲಿಲದೆ ವಿಶುದ್ಧವೃತ್ತಿಗೆ । ಬಲ್ಲಿಲದೆ ನೆಗಲ್ತ್ತನಘಂಗಳೇಂ ಪೊರ್ದುಗುಮೇ
॥ 695 ॥

ಕುಡಲಾರ್ಪೊಡೊಡೆಯನಪ್ಪುದು । ಕುಡಲಾಜದೆ ಬೇಡಿದವರ್ಗಳಂ ಮಜುಗಿಸುತಿ ।
ರ್ಪೊಡಮೆಯಿನಾರ್ಗಂ ಮಜುಕಮ । ನೊಡರಿಸದಿರ್ಪೊಂದು ಬಡತನಂ ಲೇಸಲ್ತೆಂ
॥ 696 ॥

ಎಲೆ ಎಲೆ ಜೀವರಾಶಿಗಳಿರಾ ಮಜುದಿನ್ನೆಗಮಿರ್ದು ಕೆಟ್ಟ ಗಾ ।
ವಿಲಿಕೆಯೆ ಸಾಲ್ಗುಮಿನ್ನಱಿದು ಬಂಧನಹೇತುಗಳಪ್ಪವೆಲ್ಲಮಂ ॥
ತೊಲಗಿಪುದಾರ್ತು ತಕ್ಕೆಡೆಯೊಳೀವುದು ಕಾವುದು ಸದ್ಗುಣಂಗಳಂ ।
ಸಲಿಸುವುದೀಮನುಷ್ಯಭವಮುಂ ಪಡೆದುಂ ಮಜುದಿರ್ಪುದೊಳ್ಳಿತೇ ॥ 697 ॥

1. ಶೀಲೋದಿತ—ಎಂದು ಪಾಠಾಂತರ.

ಪಟ್ಟಂಗಟ್ಟಿದನೆಂಗುಮೋ ಬಡವನಂ ಪೋ ಬಟ್ಟಿದ್ದ ನಾಣೆಂಗುಮೋ ।
ಕಟ್ಟಾಳೆಂಗುಮೊ ಪಂದೆಯೆಂದು ಕಡೆಗಣ್ಚುತ್ತಿರ್ಕುಮೋ ಲೋಭಿ ನೀಂ ॥
ಮುಟ್ಟಿಂದಿರ್ಕುಮೊ ಜಾತಿ ಮೆಚ್ಚಿದೆನಿವಂ ಬಾಟಿಂಗುಮೋ ಕೆಮ್ಮನೇ ।
ಗೆಟ್ಟತ್ತಿಂಬವೊಲಟ್ಟಿ ಕೊಂದಪನಿವಂ ಮಾಯಾಂತಕಂ ಪಾತಕಂ ॥ 698 ॥

ಧರ್ಮಮನೆ ಕಿಡಿಸಿ ಮೆಯ್ಗಿನಿ । ಸಾರ್ಮವಿದೆಂದಬ್ರಿಸುಕಕ್ಕೆ ಮೋಹಿಸುವುದೆ
ಪೇಬ್ರಿಂ ।
ಪೆರ್ಮರನಂ ಕಡಿದೋವದೆ । ನಿರ್ಮೂಲಂಮಾಡಿ ಪಣ್ಬೆನಲ್ ಬಯಸುವವೋಲ್
॥ 699 ॥

ಸುರಧನುವೆಂತುಟಂತೆ ವಿಳಸಜ್ಜಳಬುದ್ಬುದಮೆಂತುಟಂತೆ ಪೆ ।
ರ್ದೆರೆಯಿರವೆಂತುಟಂತೆ ಕಿಸುಸಂಜೆಯ ರಂಜನೆಯೆಂತುಟಂತೆ ಭೂ ॥
ಧರನದಿಯೆಂತುಟಂತೆ ಮುಗಿಲೊಡ್ಡಣದಾಕೃತಿಯೆಂತುಟಂತೆ ಮ ।
ರ್ತ್ಯರ ತನುವುಂ ಕಳತ್ರಜನಮುಂ ಧನಮುಂ ಬಗೆದೆಂತು ನೋಬ್ರಿಂಪ್ಪಿಡಂ ॥ 700 ॥

ಪಬ್ರಿಯ ಮೊದಲ್ ಪರಾಭವದ ಮೊತ್ತಮೊದಲ್ ಖಿಳಮೋಹರಾಜನೆಂ ।
ಬಬ್ರಿಪನ ಬಾಬ್ರಿಂದಲ್ ಬಳೆದ ಕರ್ಮದ ಬಿಬ್ರಿತ್ತುಮೊದಲ್ ನಿತಾಂತಮುಂ ॥
ದಬ್ರಿಪುವ ಕಾವ ಪೆರ್ಚಿಸುವ ಚಿಂತೆಯನರ್ಥದೊಳುಂಟುಮಾಡದೊ ।
ಳ್ಪಬ್ರಿಯದೆ ಮೋಹಮುಂ ಬಿಸುಟ ಮಾನಸರಿಲಿ ಯೆ ದೇವರಲ್ಲರೇ ॥ 701 ॥

ತನುಬಳವುಂ ವಿಳಾಸದಳವುಂ ಧನಸಂಕುಳವುಂ ವಿನೂತಯೌ ।
ವನಭರವುಂ ಕಳತ್ರದಿರವುಂ ಸುತರಾದರವುಂ ಸರಾಗಿಯ ॥
ಪ್ಪನ ಸಲವುಂ ಲತಾಂಗಿಯೊಲವುಂ ನಿರಿಯೊಳ್ ನಿಲವುಂ ನಿತಾಂತಮುಂ ।
ದಿನಿತುಮನಿತ್ಯಮೆಂದಿವಜಿಗಳ್ಕೆಗೆ ದುಃಖಿಗಳಾಗಲಕ್ಕುಮೇ ॥ 702 ॥

ಅಡಗಿನ ತೋಲ ನೆತ್ತರ ಮಿದುಳ್ಗಳ ಶಲ್ಯದ ಪುಂಜಮೊತ್ತಿ ಬಂ ।
ದಡಸುವ ವಾತಪಿತ್ತಕಫದೋಷಸಮೂಹದೆ ಪತ್ತಿ ನಿಲ್ಪುದೆಂ ॥
ದೊಡೆ ಪೆಜತೇಂ ಕ್ರಿಮಿವ್ಯಜದ ಮೂತ್ರಪುರೀಷದ ಕೊಂಡಮೆಂದೊಡೀ ।
ಯೊಡಲಿದಱಿಂದಮುಂ ಬಗೆದು ಭಾವಿಸಿ ಪೇಸದುದೇಕೆ ಜೀವನೇ ॥ 703 ॥

ಬಗೆ ಗಡ ಗರ್ಭದೊಳ್ ಬಳೆವುದಂ ಬಗೆ ಪುಟ್ಟುವ ಮಿಟ್ಟುಗೊಡ್ಡಮಂ ।
ಬಗೆ ಬಳೆವಂದಿನೇಳಿದಿಕೆಯಂ ಬಗೆ ಕುತ್ತದೊಳಾದವಸ್ಥೆಯಂ ॥
ಬಗೆ ಕಡುಮುಪ್ಪವೌಂಕುವೆಡೆಯಂ ಬಗೆ ಸಾವಿನೊಳಪ್ಪ ಸೇದೆಯಂ ।
ಬಗೆವಡಲೇವುದೆಂದು ನೆಗಟ್ಪಲ್ಲದೊಡೆಲ್ಲಿಯಮಾತೊ ಜೀವನೇ ॥ 704 ॥

## ದೇವಕವಿ. ಸು. 1200.

ಈತನು ಕುಸುಮಾವಳೀಕಾವ್ಯವನ್ನು ಬರೆದಿದ್ದಾನೆ ಇವನು ಬ್ರಾಹ್ಮಣ ಕವಿಯೆಂದು ತೋರುತ್ತದೆ. ತನ್ನ ಹೆಸರನ್ನು ಕಂಠೋಕ್ತವಾಗಿ ಹೇಳಿಕೊಂಡಿಲ್ಲ; ಆದರೆ ಗ್ರಂಥದ ಹದಿನೈದನೆಯ ಆಶ್ವಾಸದಲ್ಲಿ ಸೈನ್ಯದ ಭೇರೀರವವನ್ನು ವರ್ಣಿಸುವಾಗ—

ಕವಿಕಮಳಜಸೂಕ್ತಿಸುಧಾ । ರ್ಣವಸೋಮಂ ದೇವಕವಿ ದಲೆಂದಿನಿತಂ ಸಾ ।
ಱುವವೋಲ್ ಭೇರೀಭಾಂಕೃತಿ । ರವಮೊಗೆದತ್ತುತ್ತರಾಶೆಯೊಳ್ ಮತ್ತಾಗಳ್ ॥

ಎಂಬ ಪದ್ಯವನ್ನು ಬರೆದಿದ್ದಾನೆ. ಇಲ್ಲಿ **ದೇವಕವಿ**ಯೆಂದು ತನ್ನ ಹೆಸರನ್ನೇ ಹೇಳಿಕೊಂಡಿರುವಂತೆ ಕಾಣುತ್ತದೆ. "ಕವಿಕಮಳಜಸೂಕ್ತಿಸುಧಾರ್ಣವಸೋಮಂ" ಎಂಬುದರಿಂದ **ಶಾಂತೀಶ್ವರ**ಪುರಾಣವನ್ನು ಬರೆದ **ಕವಿಕಮಳಭವ**ನಿಗೆ ಗ್ರಂಥ ರಚನೆಯಲ್ಲಿ ಈತನು ಪ್ರೋತ್ಸಾಹಮಾಡಿದಂತೆ ಊಹಿಸಬಹುದಾಗಿದೆ. ಈ ಊಹೆಗೆ ಸಹಕಾರಿಯಾಗಿ ಋತು, **ಸೂರ್ಯಾಸ್ತ**, ಮೊದಲಾದ ವರ್ಣನಾಭಾಗಗಳಲ್ಲಿ ಈತನು ಬರೆದಿರುವ ಪದ್ಯಗಳಲ್ಲಿ ಹಲವು ಅದೇ ಸಂದರ್ಭಗಳಲ್ಲಿ **ಶಾಂತೀಶ್ವರ** ಪುರಾಣದಲ್ಲಿಯೂ ದೊರೆಯುತ್ತವೆ.

ಈತನು ತನ್ನ ಗ್ರಂಥಕ್ಕೆ ಚಿಕ್ಕರಾಜಚಮೂಪ ಎಂಬವನನ್ನು ನಾಯಕನನ್ನಾಗಿ ಮಾಡಿದಂತೆ ಹೇಳುತ್ತಾನೆ. ಈ ಚಿಕ್ಕರಾಜನು ಕಾಶ್ಮೀರಕುಲಜದಲ್ಲಿ ಹುಟ್ಟಿದ ಕೇಶವದಂಡನಾಯಕನ ಪೌತ್ರನೆಂದೂ ಲಕ್ಷ್ಮೀಧರನ ಜ್ಯೇಷ್ಠಪುತ್ರನೆಂದೂ ಇವನಿಗೆ ಏಟ್ಮಲ, ಲಾಹಿದೇವ ಎಂಬ ಇಬ್ಬರು ತಮ್ಮಂದಿರಿದ್ದರೆಂದೂ ಈತನು ಮಂತ್ರಿಯಾಗಿಯೂ ಚಮೂಪನಾಗಿಯೂ ಇದ್ದನೆಂದೂ ಈ ಗ್ರಂಥದಿಂದ ತಿಳಿಯುತ್ತದೆ. ಈ ಚಿಕ್ಕರಾಜನು ಆವ ರಾಜನಲ್ಲಿ ಮಂತ್ರಿಯಾಗಿದ್ದನೋ ತಿಳಿಯದು.

ಈ ಕವಿಗೆ ಕವೀಂದ್ರೋತ್ತಂಸ, ಕೃತಿರತಿರಮಣ, ಭಾರತೀಭೂಷಣ ಎಂಬ ಬಿರುದುಗಳಿದ್ದಂತೆ ತಿಳಿಯುತ್ತದೆ.

ಈತನ ಗ್ರಂಥದಿಂದ **ಮಲ್ಲಿಕಾರ್ಜುನ**ನು (ಸು. 1245) ಪದ್ಯಗಳನ್ನು ಉದ್ಧರಿಸಿ ಬರೆದಿರುವುದರಿಂದ ಇವನು ಅವನ ಕಾಲಕ್ಕೆ ಹಿಂದಣವನು ಎಂಬುದು ವ್ಯಕ್ತವಾಗುತ್ತದೆ. ಈತನು **ರುದ್ರಭಟ್ಟ**ನನ್ನೂ (ಸು. 1180), **ಅಗ್ಗಳ**ನನ್ನೂ (1189) ಸ್ತುತಿಸಿರುವುದರಿಂದ ಅವರ ಕಾಲಕ್ಕೆ ಈಚೆಯವನು ಎಂಬುದೂ ವ್ಯಕ್ತವಾಗುತ್ತದೆ. ಆದುದರಿಂದ ಇವನು ಸುಮಾರು 1200 ರಲ್ಲಿ ಇದ್ದಿರಬಹುದು.[1]

ಈತನು ಪೂರ್ವಕವಿಗಳನ್ನು ಈ ಪದ್ಯಗಳಲ್ಲಿ ಸ್ತುತಿಸಿದ್ದಾನೆ:—

---

1. ಇವನ ಗ್ರಂಥವು ಸಮಗ್ರವಾಗಿ ದೊರೆತಿಲ್ಲ. ಗ್ರಂಥಾಂತ್ಯದಲ್ಲಿ ಇವನು ತನ್ನ ವಿಷಯವಾಗಿ ಇನ್ನೂ ಏನಾದರೂ ಹೇಳಿಕೊಂಡಿದ್ದಾನೆಯೋ ಏನೋ ತಿಳಿಯದು.

ಕವಿನಿರ್ವಾಣಂಗೆ ಬಾಣಂಗವನಿಗೆಸೆವ ಹರ್ಷಂಗೆ ಹರ್ಷಂಗೆ ವಿಖ್ಯಾ ।
ತವಿಜನ್ಮಾಘಂಗೆ ಮಾಘಂಗಖಿಳಸುಕವಿರತ್ನಂಗೆ ರತ್ನಂಗೆ ಸಂದೊ ॥
ಪ್ಪುವಿಳಾರುದ್ರಂಗೆ ರುದ್ರಂಗೊದವಿದ ಪದೆಪಿಂದಗ್ಗಳಂಗಗ್ಗಳಂಗು ।
ತ್ಸವದಿಂದಾವಂ ದಿಟಂ ವಂದಿಸುವದಟನವಂ ಸತ್ಕವೀಂದ್ರಾವತಂಸಂ ॥
ವಿದಿತಕಥಾವಿಚಿತ್ರಮೆಸವೀಕುಸುಮಾವಳಿಯೆಂಬ ನವ್ಯಕಾ ।
ವ್ಯದೊಳಿದು ಸ. ಶೋಭಿ ಶ. ಬಾಣನ ಸೂಕ್ತಿಕಳಾಕಳಾಪಮ ॥
ಗ್ಗದ ಕವಿಮಾಘಹರ್ಷರ ವಚಶ್ಚಿ . . ನತಿ ರುದ್ರಭಟ್ಟನೊಳ್ ।
ಪುದಿದ ಪದಪ್ರಗಲ್ಭಗುಣಮಗ್ಗಳದೇವನ ಭಾವಗಾರವಂ ॥

ತನ್ನ ಕವಿತಾಚಾತುರಿಯನ್ನೂ ಗುಣಗಳನ್ನೂ ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ :—

ವರಶಬ್ದಜ್ಞರನರ್ಥದರ್ಶಿಗಳನುಕ್ತಿಪ್ರೌಢರಂ ಭಾವತ ।
ತ್ಪರರಂ ನೀತಿವಿದರ್ಕಳಂ ರಸಿಕರಂ ಸಾಹಿತ್ಯದೊಳ್ ಸಂದ ಜಾ ॥
ಣರನಾಂದೋಳಶಿರಸ್ಸರೋಜಮುಖರಂ ಮಾಟ್ಪುಕ್ತಿಚಾತುರ್ಯಬಂ ।
ಧುರಮಾವಂಗೆಡೆಗೊಂಡುದಾತನೆ ಕವೀಂದ್ರೋತ್ತಂಸನೀಧಾತ್ರಿಯೊಳ್ ॥
ಸುಕೃತಿಶ್ರೀಭಾಮಿನೀಮಂಗಳಮಣಿಮಯದಾಮಂ ಬುಧಸ್ತುತ್ಯಸಾಹಿ ।
ತ್ಯಕಳಾಸಂದೋಹನೀಮಂ ಸುಕವಿಸುಕರಕೀರಾಸ್ಯಪುಷ್ಪಾವಳೀಕ ॥
ಲ್ಪಕುಜಾರಾಮಂ ಸ್ವಕೀಯಾನ್ವಯಕುವಲಯಸಂಸ್ತೋಮಸೋಮಂ ಸದಾಚಾ ।
ರಕನಲ್ಲಕ್ಷ್ಮೀಲಲಾಮಂ ಕೃತಿರತಿರಮಣಂ ಸಾಹಸೋದ್ದಾಮಭೀಮಂ ॥ [1]

ಇವನ ಗ್ರಂಥ—

## ಕುಸುಮಾವಳಿ.

ಈ ಗ್ರಂಥವು ನೇಮಿಚಂದ್ರನ ಲೀಲಾವತಿಯಂತೆ ಒಂದು ಕಲ್ಪಿತಕಥೆ; ಚಂಪೂರೂಪವಾಗಿದೆ. ನಮಗೆ ದೊರೆತ ಅಸಮಗ್ರ ಪ್ರತಿಯಲ್ಲಿ 15 ಆಶ್ವಾಸಗಳಿವೆ. ಒಟ್ಟು 18 ಆಶ್ವಾಸಗಳಿರಬಹುದೆಂದು ತೋರುತ್ತದೆ.

ಇದರ ಕಥಾಗರ್ಭವನ್ನು ಕೆಳಗೆ ಬರೆಯುತ್ತೇವೆ :—

ಮದನಾವತೀಪುರದ ಮಣಿಕುಂಡಲರಾಜನು ಸ್ವಪ್ನದಲ್ಲಿ ಚಿತ್ರಕೂಟಾದ್ರಿಯ ಬಳಿಯ ಒಂದು ವನದಲ್ಲಿದ್ದ ಕಪಿಲಋಷಿಯ ಪಕ್ಕದಲ್ಲಿ ರೂಪವತಿಯಾದ ಒಬ್ಬ ಸ್ತ್ರೀಯನ್ನು ಕಂಡಂತೆ ಮಂತ್ರಿಗೆ ಹೇಳಲು, ಮಂತ್ರಿ—ಚಿತ್ರಕೂಟದ ಬಳಿಯಲ್ಲಿ ಕಪಿಲಋಷಿಯಿರುವುದು ನಿಜ; ನಾವು ಅಲ್ಲಿಗೆ ಹೋಗಿ ನೋಡಬಹುದು—ಎಂದು ಹೇಳಲು, ಇಬ್ಬರೂ ಹೊರಟು ಋಷಿಯನ್ನು ಕಂಡು ನಮಸ್ಕರಿಸಿ ಆತನ ಬಳಿಯಲ್ಲಿದ್ದ ಅಮೃತಶಿಲಾಪ್ರತಿಮೆಯನ್ನು

1. ಈ ಪದ್ಯವನ್ನು ಕಥಾನಾಯಕನಿಗೂ ಅನ್ವಯಿಸುವಂತೆ ಬರೆದಿರಬಹುದು.

ನೋಡಿ ಅದರ ವೃತ್ತಾಂತವನ್ನು ಕೇಳಿದಾಗ ಋಷಿಯಿಂತೆಂದನು :—ವಿಮಲಾಪುರಿಯ ವಿಶ್ವಂಭರರಾಜನು ಪುತ್ರಕಾಮೇಷ್ಟಿಯನ್ನು ಮಾಡಿ ಕಂದರ್ಪದೇವನೆಂಬ ಮಗನನ್ನು ಪಡೆದು ತದ್ವಿವಾಹಾರ್ಥವಾಗಿ ರಾಜಕನ್ಯೆಯರನ್ನು ಕರೆಯಿಸಿ ತೋರಿದಾಗ ಅವನಾರನ್ನೂ ವರಿಸದೆ, ಒಂದಾನೊಂದು ದಿನ ಉದ್ಯಾನವನದ ಮಾವಿನಮರಕ್ಕೆ ಕಟ್ಟಿದ್ದ ಕುಸುಮಾವಳಿಯ ಚಿತ್ರವನ್ನು ನೋಡಿ ಮೋಹಾವಿಷ್ಟನಾಗಿ ಆ ಸ್ತ್ರೀಯನ್ನು ಹುಡುಕುವುದಕ್ಕೆ ಮಂತ್ರಿಪುತ್ರನಾದ ಮೇಧಾವಳನೊಡನೆ ಪವನಂಜಯವೆಂಬ ಅಶ್ವವನ್ನು ಹತ್ತಿ ಹೊರಟು ಮಾರ್ಗದಲ್ಲಿ ಕೌಶಿಕಮುನಿಯಿಂದ ಅನೇಕದಿವ್ಯಾಸ್ತ್ರಗಳನ್ನು ಪಡೆದು ಪದ್ಮಪುರದರಸು ವಜ್ರಜಂಘನ ವೈರಿಯಾದ ಸಿಂಹಬಲನನ್ನು ಜಯಿಸಿ ವಜ್ರಜಂಘನಿಂದ ಕುಸುಮಾವಳಿಯಿರುವ ದೇಶವನ್ನು ತಿಳಿದುಕೊಂಡು ಚಂದ್ರಕಾವತೀವಿಷಯದ ಚಕ್ರವಾಳಪುರದ ಬಳಿಯ ಉದ್ಯಾನವನದಲ್ಲಿದ್ದನು. ಆ ದೇಶದ ರಾಜನಾದ ಚಂದ್ರಧ್ವಜನ ಮಗಳೇ ಕುಸುಮಾವಳಿ. ಆಕೆ ಕಂದರ್ಪದೇವನ ಚಿತ್ರಪಟವನ್ನು ನೋಡಿ ಮೋಹಗೊಂಡು ವಿರಹಾರ್ತೆಯಾಗಿರಲು ಅವಳ ಸಖಿ ಕಳಭಾಷಿಣಿ ಉದ್ಯಾನವನದಲ್ಲಿದ್ದ ಕಾತ್ಯಾಯನೀದೇವಿಯ ಆಲಯಕ್ಕೆ ಕುಸುಮಾವಳಿಯ ಅಭೀಷ್ಟಸಿದ್ಧಿಗಾಗಿ ಪ್ರಾರ್ಥಿಸಲಿಕ್ಕೆ ಹೋಗಿ ಅಲ್ಲಿದ್ದ ರಾಜಪುತ್ರನನ್ನು ಕಂಡು ಚಿತ್ರಪಟದಲ್ಲಿಯವನು ಈತನೇ ಎಂದರಿತು ಆಶ್ಚರ್ಯಪಟ್ಟು ಕುಸುಮಾವಳಿಯ ವಿಷಯವನ್ನು ಅವನೊಡನೆ ಹೇಳಿ ಅವಳ ಬಳಿಗೆ ಆತನನ್ನು ಕರೆದುಕೊಂಡು ಹೋದಳು. ಕಂದರ್ಪದೇವನು ಮೇಧಾವಳನನ್ನು ಅಲ್ಲಿಯೇ ಬಿಟ್ಟು ಕುಸುಮಾವಳಿಯೊಡನೆ ಕುದುರೆ ಹತ್ತಿಕೊಂಡು ತನ್ನೂರಿಗೆ ಹೊರಟು ದಾರಿಯಲ್ಲಿ ಒಂದು ಕಾಡಿನಲ್ಲಿ ವಿಶ್ರಮಿಸಿಕೊಂಡಿದ್ದಾಗ ಒಂದು ಸಿಂಹವು ಆರ್ಭಟಿಸಿಕೊಂಡು ಬರಲು ಕುದುರೆ ಕಿತ್ತುಕೊಂಡು ಓಡಿಹೋಯಿತು. ಕುಸುಮಾವಳಿ ಕುದುರೆಯನ್ನು ಹಿಡಿವುದಕ್ಕಾಗಿ ಹೋಗಿ ಬೇಡರಗುಂಪಿಗೆ ಸಿಕ್ಕಿ ಅವರಿಂದ ತಪ್ಪಿಸಿಕೊಂಡು ಓಡಿಹೋಗಿ ಕಪಿಲಋಷಿಯನ್ನು ಮರೆಹೊಗಲು ಋಷಿ ಅವಳ ಸಂಗತಿಯನ್ನು ಕೇಳಿ ತದ್ರಕ್ಷಣಾರ್ಥವಾಗಿ ಆಕೆಯನ್ನು ಶಿಲಾಪ್ರತಿಮೆಯನ್ನಾಗಿ ಮಾಡಿದನು. ಅತ್ತ ಕಂದರ್ಪದೇವನು ಸಿಂಹವನ್ನು ಸಂಹರಿಸಿ ಪ್ರಿಯೆಯನ್ನು ಕಾಣದೆ ತಲ್ಲಣಿಸಿ ಕಪಿಲಋಷ್ಯಾಶ್ರಮಕ್ಕೆ ಬಂದು ಋಷಿಯ ಅನುಗ್ರಹದಿಂದ ಮರಳಿ ಸ್ತ್ರೀರೂಪವನ್ನು ಪಡೆದ ತನ್ನ ಪ್ರಿಯೆಯೊಡನೆ ಸೇರಿದನು. ಕುಸುಮಾವಳಿಯ ತಂದೆಯೂ ಕಂದರ್ಪನ ತಂದೆಯೂ ತಂತಮ್ಮ ಮಕ್ಕಳನ್ನು ಹುಡುಕಿಕೊಂಡು ಅದೇ ವನಕ್ಕೆ ಬಂದು ಸೇರಿದರು. ಮಣಿಕುಂಡಲನು ಇದನ್ನೆಲ್ಲಾ ನೋಡಿ ಆಶ್ಚರ್ಯಪಟ್ಟನು.[1]

ಗ್ರಂಥಾವತಾರದಲ್ಲಿ ಕವಿ ವಿಶ್ವನಾಥನನ್ನು ಸ್ತುತಿಸಿ ಬಳಿಕ ಸರಸ್ವತಿಯನ್ನು ಹೊಗಳಿದ್ದಾನೆ.

ಆಶ್ವಾಸಗಳ ಕೊನೆಯಲ್ಲಿ ಈ ಗದ್ಯವಿದೆ :—

ಇದು ಕಮನಕುಧರೇಂದ್ರನಂದನಾಲೋಲಲೋಚನಚಕೋರೀಸುಖಪ್ರದ ಪರಮಾಂಗ ಕಾಂತಿಸಂತಾನಸಾಂದ್ರಚಂದ್ರಿಕಾವಿಭವಶೋಭಾಯಮಾನ ಶ್ರೀವಿಶ್ವನಾಥಚರಣನಖಮಯೂ

1. ಇದೇ ನಮಗೆ ದೊರೆತಿರುವ 15 ಆಶ್ವಾಸಗಳ ಕಥೆ.

ಖೋತ್ಕುಲ್ಲಮಲ್ಲಿಕಾಶೇಖರ ಕಂದರ್ಪದೇವಪ್ರಭಾವಪ್ರಶಂಸೋಲ್ಲಸಿತ ಕುಸುಮಾವಳಿ ಮಹಾಪ್ರಬಂಧದೊಳ್.

ಈತನ ಬಂಧವು ಪ್ರೌಢವಾಗಿಯೂ ನಿರರ್ಗಳವಾಗಿಯೂ ಗಂಭೀರವಾಗಿಯೂ ಇದೆ.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

### ಸೂರ್ಯಾಸ್ತ.

ಮಿಸುಗುವ ಕಾಂಚನಾಚಲದ ಕಾಂತಿಕಳಾಪಮನೆಯ್ದಿ ಪೀರ್ದು ತ ।
ನ್ನೆಸಕದ ತೇಜದುಗ್ರತೆಯಿನಾತಪಮಾತಪನೀಯದೀಧಿತಿ ॥
ಪ್ರಸರಮನಲ್ಪಿಕ್ಕಸಲ್ ನೆಜಿಯದಿಂತು ಮಗುಲ್ಪಿಚ್ಚಿದುದೆಂಬಿನಂ ವಿರಾ ।
ಜಿಸಿದುದು ಪೊಂಬಿಸಿಲ್ ಸದೆಪಿನಿಂದಪರಪ್ರಹರಾರ್ಧಕಾಲದೊಳ್ ॥ 705 ॥

### ಪ್ರಭಾತಮಾರುತ.

ಪನಿಪುಲ್ಲಂಬುಕಣಂಗಳಂ ಕೆದಱುತುಂ ಕೋಕಂಗಳೊಳ್ ರಾಗಮಂ ।
ನನೆವೊಯ್ದುಣ್ಮಿಸುತುಂ' ಪತತ್ರಿಗಳೊಳಿರ್ಪಾತೂಂಕಡಂ ನೂಂಕುತುಂ ॥
ವನಜಕ್ಕೊಯ್ನಲರ್ಕೆಯಂ ಸಮನಿಸುತ್ತೋರಂತ ಮೆಯ್ಗೊರ್ಚಿ ತ ।
ಣ್ಣನೆ ತೀಡಿತ್ತೆನಸುಂ ಪ್ರಭಾತಸಮಯಪ್ರೋದ್ಭೂತವೀತಾನಿಲಂ ॥ 706 ॥

### ಕಬ್ಬು.

ಮಿಡಿಯಲೊಡಂ ಸುರಿವುದು ರಸ|ಮೆಡೆಯುಡುಗದೆನಿಪ್ಪ ನುಡಿಗೆಕಡುಕೆನಿಸಿದವೋಲ್|
ಗುಡುಗುಡಿಸಿ ಗಂಟುಗಂಟುಗ| ಳೆಡೆಯಿಂ ರಸಮುಣ್ಮಿವಿಕ್ಕುವಾಟಿಗಳೆಸೆಗುಂ
॥ 707 ॥

### ಎಳೆಯ ಹುಲ್ಲು.

ಧುರದೊಳ್ ಶಕ್ರನಸೊಕ್ಕಲಿಕ್ಕೆ ನೆಜಿ ಕಪ್ಪಂಗೊಂಡ ಪೀಯೂಷಮಂ ।
ಭರದಿಂದೀಂಟುವಲಂಪಿನಿಂ ಗರುಡನಂತಶ್ಕುದ್ಧಿಯಂ ಮಾಡಲೆಂ ॥
ದಿರದುದ್ಗಾರಿಸಿದೊಂದು ಪಿತ್ತರಸವೆತ್ತಂ ತಳ್ತವೋಲ್ ಪಚ್ಚನಾ ।
ಗಿ ರಸಾವೇಷ್ಟಿತಮುಷ್ಟಿಮಾತ್ರದೆಳವುಲ್ಲಲ್ಲಲ್ಲಿ ವಿಭ್ರಾಜಿಕುಂ ॥ 708 ॥

### ಕತ್ತಲೆ.

ಅಡಿಯಿಡಲುರ್ವಿಯಿಲ್ಲ ತಳರಲ್ ನೆಜಿ ನಾಲ್ದಿಸೆಯಿಲ್ಲ ಕಾಣ್ಕೆಯ ।
ಪ್ಪೊಡೆ ನಯನಕ್ಕದಿಲ್ಲ ತನುವಿರ್ದಪುದಿಲ್ಲೆನುತುಂ ಕರಾಗ್ರದಿಂ ॥
ತಡವರಿಸುತ್ತ ವಿಸ್ಮಯದೆ ಭೂಜನಮಿಂತಿರುತಿರ್ದುದಿರ್ದವೋಲ್ ।
ಮಿಡುಕದೆ ಸುಮ್ಮನಿರ್ಪಿನಮಗುರ್ವಿಸಿ ಪರ್ಬಿತು ಮರ್ಬು ಲೋಕಮಂ ॥709 ॥

ತಿಮಿರಸ್ತೋಮಾಬ್ಧಿಯೊಳ್ ತೊಟ್ಟನೆ ಮುಟ್ಟುಗಿದುದೋ ದುಸ್ತರೋದಸ್ತಮಃಕ ।
ರ್ದಮದೊಳ್ ಕೇಳಲ್ತ್ತಿದೋ ಕಜ್ಜಳಬಹಳರಜೋರಾಶಿಯೊಳ್ ಬಿಟ್ಟಿದೋ ಧ್ವಾಂ ॥
ತಮಹಾಕೂಪೋದರಸ್ಥಾನದೊಳಿಳೆ ದಲಿದೇಂ ನಟ್ಟ್ಗತೋ ನಿಶ್ಚಯಂ ಲೋ ।
ಕವಿದೆಂಬಂತುರ್ಬಿ ಪರ್ಬಿತ್ತತಿನಿಬಿಡತರಾಪೂರಘೋರಾಂಧಕಾರಂ ॥ 710 ॥

## ಚಂದ್ರಿಕೆ.

ತಳತಳಿಸುವ ತನಿವೆಳ್ಪಿಂ । ಗಳ ಬಳಗಮಭಿನ್ನಮಾಗೆ ಪರ್ಬಿದಗುರ್ಬಿಂ ।
ಪೊಳೆವಮೃತಂ ತೀವಿದ ನಿ । ರ್ಮಳಹಿಮಕಿರಣಾಶ್ಮಭಾಂಡಮೆನಿಸಿತಜಾಂಡಂ
॥ 711 ॥

## ಮಾಗಿ.

ಹಗಲಿರುಳ್ಗಳ ಭೇದಂ ನೆ । ಟ್ಟಗೆ ಕೆಟ್ಟಿರೆ ಭುವನಗರ್ಭಕುಹರಂ ತಾನಾ ।
ವಗವಿಡಿದಡಸಿದ ತುಂತುರ । ಹಗವಿದೆನಿಸಿದುದು ಬಿಡದ ಬಡಹದ ಕೊರ್ಬಿಂ
॥ 712 ॥

ಪಜ್ಜಿದಾಗಳ್ ಪನಿಪುಲ್ಲ ಬಿಂದುಗಳ ತಂದಲ್ ರೋಮರೋಮಂಗಳಿಂ ।
ನೆಜ್ಜಿ ಸಾರುತ್ತಿರೆ ಜಾನುಮಧ್ಯಗತಮೂರ್ಧಭ್ರಾಂತವಾಗಿಂತು ಪ ॥
ಲ್ಪಜ್ಜಿಗುಟ್ಟುತ್ತುಮೆ ವಾನರಾಳಿ ನಡುಗುತ್ತಿರ್ದತ್ತು ಶಾಖಾಗ್ರದೊಳ್ ।
ಸೆಜ್ಜಿಗೆಯ್ವಂದದೆ ಮುಂಬಗಲ್ಚರಮದೆತ್ತಂ ಪೋಗದಾವಾಗಿಯೊಳ್ ॥ 713 ॥

## ಪ್ರಭಾತ.

ಒದವಿದ ತೂಂಕಡೋಸರಿಸೆ ಕಣ್ದೆಜ್ಜೆದೀಕ್ಷಿಸಿ ನಿಟ್ಟೆಜಿಂಕೆಯಂ ।
ಬಿದಿರ್ದು ನಿಮಿರ್ಚಿ ಗೋಣ್ಮಜ್ಜೆದೆರಲ್ಕ್ಕಿಲನಂ ಕಮನೀಯಚಂಚುವಿಂ ॥
ಕರ್ದುಕಿ ಕುಲಾಯದಿಂದೆ ಪೊಜಿಮುಟ್ಟು ವಿಹಂಗಮಸಂಗಮಂ ಮಹೀ ।
ಜದ ಬಹುಶಾಖೆಯೊಳ್ ಚಿಲಿಮಿಲಿಧ್ವನಿಗೆಯ್ದುದು ಸುಪ್ರಭಾತದೊಳ್ ॥ 714 ॥

ಎಜಕೆಗಳೊಳ್ ಪೊದಲ್ವ ಪನಿಪುಲ್ಲ ಪಯಃಕಣಮುಂ ಬಿದಿರ್ಚಿ ಕ ।
ಣ್ಣೆಜ್ಜೆದಿದಿರ್ಗೊಂಬಿನೊಳ್ ತೊಡೆದು ಚಂಚುವನಂಟಿ ನಿಮಿರ್ಚಿ ನೀವಿ ನು ॥
ಣ್ಣಜ್ಜುಗಳನೊರ್ಮೊದಲ್ ಚಿಲಿಮಿಲಿಧ್ವನಿಗೆಯ್ದು ವಿಹಂಗಮಂಗಳ ।
ಟ್ಟಿಜ್ಜುಗುಟುಕಂ ಕೊಳಲ್ಕಿರದೆ ಪಾಜ್ಜದುವೆಣ್ದೆಸೆಗಂ ಪ್ರಭಾತದೊಳ್ ॥ 715 ॥

## ಚಕೋರ.

ಅರೆಮುಗಿದಕ್ಷಿಗಳ್ ತೆಜ್ಜೆದ ಚಂಚುಪುಟಂ ನಸುಸೋಂಕೆ ನೀಳ್ದ ಕಂ ।
ಧರಮಿರದಿರ್ಕ್ಕೆಲಂಗಳೊಳೆಲ್ತಿಲ್ಲ ಪತತ್ರಪುಟಂ ಸಡಿಲ್ವ ಮೆಯ್ ॥
ಸರಲತೆವೆತ್ತು ಬಿರ್ಚಿದ ನವಿರ್ ಪರಿರಂಜಿಸಲೀಂಟುತಿರ್ದುದು ।
ಬ್ಬರಿಸಿದ ಚಂದ್ರಿಕಾರಸಮನಂಚಿತಚಾರುಚಕೋರಸಂಚಯಂ ॥ 716 ॥

ಎಮ್ಮೆ

ನಲವಿಂದಂ ಮೇದು ಮೆಲ್ವುಲ್ಲಳನೊದವಿ ಕಡಲ್ವಾಯ್ವಪಾರಾಂಬುವಂ ತ ।
ಮ್ಮೊಲವಿಂ ಪೊಕ್ಕೀಂಟಿ ಮೆಯ್ಯಿಂದಿಬ್ಬಿದು ಪುದಿದೆರಲ್ಬಿನ್ನೆನಲ್ ಕೊರ್ಬಿ ಪಾಲ್ಗಿ ॥
ಚ್ಚಲ ಬಿಣ್ಪಿಂ ಪಾಯ್ವು ಮೆಲ್ಕೊತ್ತುತುಮಿಳೆಯ ಪೊನಲ್ಗೆಯ್ವ ರೋಮಂಥಶೇನಾ ।
ವಲಿ ಗಂಗಾಶ್ರೀಯ ಸೊಂಪಂ ಕುಡುತಿರೆ ಮಹಿಷೀವ್ಯಂದಮಿರ್ದತ್ತದೆತ್ತಂ ॥ 717 ॥

ಗರ್ಭಿಣಿ.

ರಗಣಮನೆ ಪೋಲ್ತು ಪಿರಿದುಂ । ಸೊಗಯಿಪ ದೇವಿಯ ತದೀಯತನುಮಧ್ಯಮದಾ ।
ಜಗಣಮನೆ ಪೋಲ್ತು ಪಿರಿದುಂ । ಸೊಗಯಿಸಿದುದು ಗರ್ಭದರ್ಭಕನ ಕೂರ್ಬುಗೆಯಿಂ
॥ 718 ॥

ಕಂದರ್ಪದೇವನ ಹುಬ್ಬು.

ಮನುಗಳ ದೊರೆ ಚರಿತದೊಳಿಂ । ತನೆನುತ್ತಿರ್ಕೆಯ್ಗಳಿಂ ವಿರಿಂಚಿಯ ಬರೆದೇ ।
ಟ್ಟನೆಯೆರಡುಲೆಕ್ಕಮೆನೆ ನೃಪ । ಮನೋಭವಭ್ರೂಲತಾಯುಗಂ ಸೊಗಯಿಸುಗುಂ
॥ 719 ॥

ಚಿಕ್ಕರಾಜಚಮೂಪ.

ಸುಜನವ್ರಜಪಾಲನದಿಂ । ನಿಜಮಹಿಮೆಯೊಳೀಕವಾಕ್ಯದಿಂದಾಕೃತಿಯಿಂ ।
ದ್ವಿಜನಿಜನಿಜನಿಜನೆನಿಪಂ । ಭುಜಬಳಪವಮಾನಸೂನು ಚಿಕ್ಕಚಮೂಪಂ ॥ 720 ॥

---

## ಕೇಶಿಯಣ್ಣ. ಸು. 1200.

ಈತನು ಸಿಂಹಪ್ರಾಯೋಪಗಮನ ಎಂಬ ಗ್ರಂಥವನ್ನು ಬರೆದುದಾಗಿ **ಪಾರ್ಶ್ವ ಪಂಡಿತನು** (1205) ತನ್ನ **ಪಾರ್ಶ್ವನಾಥಪುರಾಣ**ದೊಳಗೆ **ಕರ್ನಾಟಕ ಕವಿಸ್ತ್ರೀ** ವಾವಸರದಲ್ಲಿ ಬರೆದಿರುವ ಈ ಪದ್ಯದಿಂದ ತಿಳಿಯಬರುತ್ತದೆ:—

ಅಂಹಮನಪಹರಿಸುವ ಗುಣ । ಸಂಹತಿಯಂ ತಳೆದ ಕೇಶಿಯಣ್ಣಂ ಬುಧಬ್ಯಂ ।
ದಂ ಹೊಗಲ್ತಿ ಸುಕೃತಸಿಂಹಂ । ಸಿಂಹಪ್ರಾಯೋಪಗಮನಮಂ ವಿರಚಿಸಿದಂ ॥

ಇವನ ವಿಷಯವಾಗಿ ನಮಗೆ ಇನ್ನೇನೂ ತಿಳಿಯದು; ಇವನ ಗ್ರಂಥವೂ ನಮಗೆ ದೊರೆತಿಲ್ಲ.

---

## ವಾಸುದೇವ. ಸು. 1200.

ಈತನನ್ನು ಪಾರ್ಶ್ವಪಂಡಿತನು (1205) ತನ್ನ ಪಾರ್ಶ್ವನಾಥಪುರಾಣದೊಳಗೆ ಕರ್ಣಾಟಕ ಕವಿಸ್ತವಾವಸರದಲ್ಲಿ ಈ ರೀತಿಯಾಗಿ ಸ್ತುತಿಸಿದ್ದಾನೆ:—

ಶ್ರುತಿನೂತ್ನಾರ್ಥೋತ್ಪಾದನ । ಚತುರತೆಯುಂ ವಿವಿಧಕೀರ್ತಿಲಕ್ಷ್ಮೀಶತೆಯುಂ ।
ಕೃತಿತಳದೊಳ್ ಕಾವ್ಯಕಳಾ । ಚತುರ್ಮುಖಂಗೆಸೆವ ವಾಸುದೇವಂಗರಿದೇ ॥

"ಕಾವ್ಯಕಳಾಚತುರ್ಮುಖಂ" ಎಂದು ವಿಶೇಷಿಸಿ ಹೇಳಿರುವುದರಿಂದ ಈತನು ಪ್ರಸಿದ್ಧಕವಿಯಾಗಿದ್ದಿರಬೇಕು. ಈತನ ಗ್ರಂಥಗಳಾವುವೂ ನಮಗೆ ದೊರೆತಿಲ್ಲ. ಮಹಾಲಕ್ಷ್ಮಿ ಏರಚಿಸಿರುವ ರಾಮಪಟ್ಟಾಭಿಷೇಕದಲ್ಲಿ ಒಬ್ಬ ವಾಸುದೇವಕವಿ ಸ್ತುತನಾಗಿದ್ದಾನೆ; ಇವನೇ ಆಗಿರಬಹುದೋ ಏನೋ ತಿಳಿಯದು.

---

## ಸ್ವಯಂಭುರುದ್ರ. ಸು. 1200.

ಸ್ವಯಂಭುರುದ್ರರ 12,000 ವಚನ ಎಂಬ ಒಂದು **ಗ್ರಂಥವು** ಇರುವಂತೆ ತಿಳಿಯುತ್ತದೆ. ಚೆನ್ನಬಸವಪುರಾಣದಲ್ಲಿ (1584) ಬಸವನು ಕಾಲವಾದ ಮೇಲೆ (1168) ಒಬ್ಬ ರುದ್ರಮುನಿ ಪ್ರಸಿದ್ಧಗುರುವಾಗಿದ್ದಂತೆ ಈ ಪದ್ಯದಿಂದ ತಿಳಿಯುತ್ತದೆ:—

ಬಂದನಿಬರತಿಗೋಪ್ಯದಿಂದಿರುತೆ ರುದ್ರಮುನಿ ।
ತಂದೆ ತನ್ನಯ ಶಿಷ್ಯಮುಕ್ತಿಮುನಿಯೊಡನೆ ನೀ ।
ನಿಂಪ್ಯೆದೆ ಸಕಲದೇಶಂಗಳಂ ಚರಿಸುತಂ ದುಷ್ಟಪರವಾದಿಗಳನು ॥
ಕೊಂದು ಶರಣರ ಪೊರೆವುದೆಂದುಸುರಿ ಕಳುಹಲಾ ।
ನಂದದಿಂದಖಿಳದೇಶಂಗಳಂ ಚರಿಸಿ ತಾಂ ।
ನಿಂದು ಸಿರಿಗಿರಿಯ ಸಿಂಹಾಸನದಿ ಸಕಲಸದ್ಭಕ್ತರಂ ಪಾಲಿಸುವನು ॥ [1]

ಈ ವಚನಗಳನ್ನು ಬರೆದವನು ಈತನೇಯೋ ಏನೋ ತಿಳಿಯದು. ಈಕವಿ ಸುಮಾರು 1200 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ.

---

## ದೇವೇಂದ್ರ ಮುನಿ. ಸು. 1200.

ಈತನು ಬಾಲಗ್ರಹಚಿಕಿತ್ಸೆಯನ್ನು ಬರೆದಿದ್ದಾನೆ. ಇವನು ಜೈನಕವಿ; ಸುಮಾರು 1200 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥವು ಬಹಳಮಟ್ಟಿಗೆ ವಾಕ್ಯರೂಪವಾಗಿದೆ.

---

1. ಕಾಂಡ 5, ಸಂಧಿ 9, ಪದ್ಯ 37.

## ಶುಭಚಂದ್ರ. ಸು. 1200.

ಈತನು ಕಾರ್ತಿಕೇಯಾನುಪ್ರೇಕ್ಷೆಗೆ ಟೀಕೆಯನ್ನು ಬರೆದಿದ್ದಾನೆ. ಇವನು ಜೈನಕವಿ; ತ್ರೈವಿದ್ಯವಿದ್ಯಾಧರ, ಷಡ್ಭಾಷಾಕವಿಚಕ್ರವರ್ತಿ ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ಇವನ ಕಾಲವು ಸುಮಾರು 1200 ಆಗಿರಬಹುದು.

---

## ಬಾಳಚಂದ್ರಕವಿಕಂದರ್ಪ. 1204.

ಇವನು ಜೈನಕವಿ; **ಜನ್ನನ** (1209) ಪತ್ನಿಯಾದ ಲಕುಮಾದೇವಿಯ ಗುರುವೆಂದು ಆ ಕವಿಯ ಅನಂತನಾಥಪುರಾಣದಿಂದ (1230) ತಿಳಿಯುತ್ತದೆ. ಈತನು ಸಕಲಚಂದ್ರನ ಮಗನಾದ ಮಾಧವಚಂದ್ರನ ಶಿಷ್ಯನು. ಇವನು ಪ್ರಸಿದ್ಧನಾವ ಕವಿಯೆಂದು ಜನ್ನನು ಹೇಳುತ್ತಾನೆ. ಪಾರ್ಶ್ವಪಂಡಿತನು (1205),

ವಕ್ರೋಕ್ತಿಭವಯಶೋಜ್ಯೋ। ತ್ಸ್ನಾಕ್ರಾಂತಪರಾವಲೇಪತಿಮಿರಂ ಧರಣೀ।
ಚಕ್ರದೊಳತಿಚಿತ್ರಂ ಕವಿ। ಚಕ್ರಪ್ರಿಯನೆನಿಸಿ ಬಾಳಚಂದ್ರಂ ನೆಗಟ್ಟಂ॥

ಎಂಬ ಪದ್ಯದಲ್ಲಿ ಸ್ತುತಿಸುವ ಬಾಳಚಂದ್ರನು ಇವನೇ ಆಗಿರಬಹುದು. ಈ ಪದ್ಯದಿಂದ ಇವನು ವಕ್ರೋಕ್ತಿಯಲ್ಲಿ ಪ್ರಗಲ್ಭನೆಂದು ತಿಳಿಯುತ್ತದೆ. ಈತನ ಗ್ರಂಥಗಳಾವುವೂ ನಮಗೆ ದೊರೆತಿಲ್ಲ.

ಆದರೆ ಬಾಂಬೆ ಪ್ರೆಸಿಡೆನ್ಸಿಗೆ ಸೇರಿದ ಬೆಳಗಾಮಿನಲ್ಲಿ ಇದ್ದ ಎರಡು ಶಿಲಾಶಾಸನಗಳನ್ನು [1] ಇವನು ಬರೆದುದಾಗಿ ಆ ಶಾಸನಗಳ ಅಂತ್ಯದಲ್ಲಿರುವ ಈ ಭಾಗಗಳಿಂದ ತಿಳಿಯುತ್ತದೆ—

ದೋಷವ್ಯತೀತಮರ್ಥವಿ। ಶೇಷಮಿದೆನೆ ಪೇಳ್ದಿನೊಲ್ದು ಶಾಸನಮಂ ಪೀ।
ಯೂಷಸಮಸೂಕ್ತಿ ಚಾತು। ರ್ಭಾಷಾಕವಿಚಕ್ರವರ್ತಿ ಕವಿಕಂದರ್ಪಂ॥

ಶ್ರೀಮನ್ಮಾಧವಚಂದ್ರತ್ರೈವಿದ್ಯಚಕ್ರವರ್ತಿವಾಕ್ಸುಧಾರಸನಾಭ್ಯುದಿತನಿತ್ಯಸಾಹಿತ್ಯವನಕಮಲಮರಾಳಂ ಬಾಳಚಂದ್ರದೇವಂ ಪೇಳ್ದಿ ಶಾಸನಂ

ಪ್ರಹತಾರಿವ್ರಜಕಾರ್ತವೀರ್ಯಸಚಿವಂ ಶ್ರೀಬೀಚಿರಾಜಂ ಯಶೋ।
ಮಹಿತಂ ಪೇಳ್ದಿನೆನಲ್ಕೆ ಶಾಸನಮನೊಳ್ಪಿಂ ಬಾಳಚಂದ್ರಂ ಗುಣಾ॥
ಗ್ರಹವಿದ್ವಜ್ಜನಸಮ್ಮತಸ್ಫುಟಪದಾರ್ಥಾಳಂಕ್ರಿಯಾಸಂಕುಳಾ।
ವನಮಪ್ಪಂತಿರೆ ಪೇಳ್ದಿನಂತು ಕವಿಕಂದರ್ಪಂ ಬುಧಾಧೀಶ್ವರಂ॥

ಈ ಶಾಸನಗಳು 1204 ರಲ್ಲಿ ಹುಟ್ಟಿದುವು. ಇವುಗಳಲ್ಲಿ ಸೌಂದತ್ತಿಯ ರಟ್ಟರಾಜರಲ್ಲಿ ಒಬ್ಬನಾದ ಕಾರ್ತವೀರ್ಯ(IV)ನ ಶ್ರೀಕರಣಾಗ್ರಗಣ್ಯ ಬೀಚಿ

1. ಈಗ ಈ ಶಾಸನಗಳು ಬ್ರಿಟಿಷ್ ಮ್ಯೂಜಿಯಮ್ಮಿನಲ್ಲಿ ಇವೆ; *Epi. Ind.*, XIII, 15-36.

ರಾಜನು ಬೆಳಗಾಮಿನಲ್ಲಿ ಕಟ್ಟಿಸಿದ ರಟ್ಟಜಿನಾಲಯಕ್ಕೆ ಕಾರ್ತವೀರ್ಯನೂ ಇತರರೂ ದತ್ತಿಯನ್ನು ಬಿಟ್ಟಂತೆ ಹೇಳಿದೆ. ಈ ಶಾಸನಗಳಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

### ಜಿನಸಮಯ.

ಶ್ರೀಜನಸಮಯನವಾಂಬುಧಿ । ರಾಜಸುತಿಕ್ಕ್ಯಮಥನೋರ್ಜಿತಾಮ್ಯುತರತ್ನ ।
ಶ್ರೀಜನನಗೃಹಂ ಸತ್ಪದ । ಯಾಜೀವನಮಪರಿಮಿತಗಭೀರಮಪಾರಂ ॥ 721 ॥

### ಚಂದಲ ದೇವಿ.

ನರಪತಿಲಕ್ಷ್ಮೀದೇವಸತಿ ಚಂದಲದೇವಿ ನಿಜೋದ್ಧಹಸ್ತದಿಂ ।
ಧರೆಗೆಸೆಯಲ್ಕೆ ಸಂಕ್ರಮಣದೊಳ್ ಕುಡೆ ಕಾಂಚನಮಂ ಬೆರಲ್ಗಳೊಳ್ ॥
ಬೆರಸಿದ ಹೇಮಕಾಳಿಕೆಯ ಕರ್ಪೆಸೆದಿರ್ಪುದು ಬಾಹುಕಲ್ಪವ।
ಲ್ಲರಿಯ ತಳಪ್ರವಾಳದ ನಖಿಪ್ರಸವಕ್ಕೆಳಸಿರ್ದ್ದ ತುಂಬಿಪೋಲ್ ॥ 722 ॥

### ಲಕ್ಷ್ಮೀದೇವ.

ವನಿತೆಯರಂ ಮರುಳ್ಚುವಸಮಾಕೃತಿಯಂ ಸುಮನೋಭವೃದ್ಧಿಯಂ ।
ಜನಯಿಪ ಶೀಲದಿಂ ಕುವಲಯಕ್ಕೆ ವಿಕಾಸಮನೀವ ಮೈಮೆಯಿಂ ॥
ಜನನಯನಕ್ಕೆ ಕಾಮನೊ ವಸಂತನೊ ಚಂದ್ರಮನೋ ದಿಟಕ್ಕೆ ಪೇ ।
ಳ್ದಿನೆ ವಿಭು ಲಕ್ಷ್ಮೀದೇವನೆಸೆವಂ ಕವಿಸಂಕುಲಕಲ್ಪಭೂರುಹಂ ॥ 723 ॥

### ಬೀಚಿರಾಜ.

ಅನುಪಮವಿದ್ಯೆಗುದ್ಭವಿನಯಂ ಸಿರಿಗೊಪ್ಪುವ ಚಾಗದೇಳ್ದಿ ಜೌ ।
ವನಕೆ ವಿನಿರ್ಮಲಾಚರಣಮಾಯುಗೆ ವಿಸ್ತೃತಕೀರ್ತಿ ವಾಕ್ಪವ ॥
ತ್ತನೆಗೆ ಋತೋಕ್ತಿ ತನ್ನೆಸಕದಿಂ ಸಲೆ ಮಂಡನಮಾಗೆ ವರ್ತಿಪಂ ।
ಜನಪತಿಕಾರ್ತವೀರ್ಯಸಚಿವೈಕಶಿರೋಮಣಿ ಬೀಚನುರ್ವಿಯೊಳ್ ॥ 724 ॥

---

## ಪಾರ್ಶ್ವಪಂಡಿತ. 1205.

ಈತನು ಪಾರ್ಶ್ವನಾಥಪುರಾಣವನ್ನು ಬರೆದಿದ್ದಾನೆ. ಇವನು ಜೈನಕವಿ; ಇವನ ತಂದೆ ಲೋಕಣನಾಯಕ, ತಾಯಿ ಕಾಮಿಯಕ್ಕ; ಅಗ್ರಜ ನಾಗಣ; ಗುರು "ಶ್ರೀ ಕುಮುದೇಂದುನಿರ್ಮಳಯಶಃಪ್ರಸರಂ ವಾಸುಪೂಜ್ಯಂ."

ತನ್ನ ಗ್ರಂಥವನ್ನು ಶಕ 1144 ರಲ್ಲಿ—ಎಂದರೆ 1222 ರಲ್ಲಿ—ಬರೆದಂತೆ ಹೇಳುತ್ತಾನೆ. "ಜಟ್ಟಾನ್ವಯಕಾರ್ತವೀರ್ಯನಖಿಳೋರ್ವೀಭಾಗಮಂ ಭೋಗಿಪಂ,"

"ಶ್ರೀಕಾರ್ತವೀರ್ಯನೃಪಲ। ಕ್ಷ್ಮೀಕವಿ.....ವಿನೇಯಾ। ನೀಕಶಿರೋಮಣಿ ನೆಗಲ್ದಂ। ಲೋಕಪ್ರಿಯಜಾತಕೀರ್ತಿ ಕವಿಕುಳತಿಳಕಂ॥" ಎಂಬುದರಿಂದ ಸೌಂದತ್ತಿಯ ರಟ್ಟರಾಜವಂಶಕ್ಕೆ ಸೇರಿದ ನಾಲ್ಕನೆಯ ಕಾರ್ತವೀರ್ಯರಾಜನಲ್ಲಿ (1202—1220) ಈತನು ಆಸ್ಥಾನಕವಿಯಾಗಿದ್ದಿರಬಹುದು. ಈ ಕಾರ್ತವೀರ್ಯನ ಮಗನು ಲಕ್ಷ್ಮಣರಾಜನು ಎಂದು ಹೇಳುತ್ತಾನೆ. ಈ ಲಕ್ಷ್ಮಣನು 1229 ರಲ್ಲಿ ಆಳುತ್ತಿದ್ದಂತೆ ಶಾಸನಗಳಿಂದ ತಿಳಿಯುತ್ತದೆ.

ಅಲ್ಲದೆ ಬಾಂಬೆ ಬ್ರಾಂಚ್ ರಾಯಲ್ ಏಷ್ಯಾಟಿಕ್ ಸೊಸೈಟಿ ಜರ್ನಲಿನಲ್ಲಿ ಇರುವ ಒಂದು ಶಾಸನವನ್ನು[1] ಪಾರ್ಶ್ವನೆಂಬ ಕವಿ ಬರೆದಂತೆ ಆ ಶಾಸನದ ಅಂತ್ಯದಲ್ಲಿರುವ—

ಲಳಿತಪದಾರ್ಥಾಳಂಕೃತಿ। ಗಳಿನೊಸರ್ವ ರಸಂಗಳಿಂದೆ ಬುಧರೊಳ್ ಪುಳಕಾ।
ವಳಿಸಸ್ಯನೊಗೆಯಿ ಕವಿಕುಳ। ತಿಳಕಂ ಶಾಸನಮನೊಲ್ದು ಪೇಟ್ದಿಂ ಪಾರ್ಶ್ವಂ॥

ಎಂಬ ಪದ್ಯದಿಂದ ತಿಳಿಯುತ್ತದೆ. ಈ ಶಾಸನವು ಶಕ 1127 ರಲ್ಲಿ—ಎಂದರೆ 1205 ರಲ್ಲಿ—ಬರೆದುದು. ಇದರಲ್ಲಿ ಕೊಂಡಿಮಂಡಲದ ವೇಣುಗ್ರಾಮದಲ್ಲಿ ರಟ್ಟಾನ್ವಯರಾಜರಾದ ಕಾರ್ತವೀರ್ಯ ಮಲ್ಲಿಕಾರ್ಜುನ ಎಂಬ ಸಹೋದರರು ಆಳುತ್ತಿದ್ದಂತೆಯೂ ಕಾರ್ತವೀರ್ಯನು ಮಂಡಲಾಚಾರ್ಯನಾದ ಶುಭಚಂದ್ರಭಟ್ಟಾರಕನಿಗೆ ದತ್ತಿಯನ್ನು ಬಿಟ್ಟಂತೆಯೂ ಹೇಳಿದೆ. ಕವಿ ತನ್ನ ಗ್ರಂಥದಲ್ಲಿ ಸ್ತುತಿಸಿರುವ ಕಾರ್ತವೀರ್ಯನ ಕಾಲದಲ್ಲಿಯೇ ಈ ಶಾಸನವೂ ಹುಟ್ಟಿದೆ. ಮತ್ತು ಕವಿ ಗ್ರಂಥದಲ್ಲಿ ತನಗೆ ಹೇಳಿಕೊಂಡಿರುವ ಕವಿಕುಳತಿಳಕ ಎಂಬ ಬಿರುದೇ ಶಾಸನದ ಕೊನೆಯ ಪದ್ಯದಲ್ಲಿಯೂ ಇದೆ. ಆದುದರಿಂದ ಈತನೇ ಈ ಶಾಸನವನ್ನು 1205 ರಲ್ಲಿ ಬರೆದಿರಬೇಕು.

ಈತನಿಗೆ ಸುಕವಿಜನಮನೋಹರ್ಷಸಸ್ಯಪ್ರವರ್ಷಂ, ವಿಬುಧಜನಮನಃ ಪದ್ಮಿನೀಪದ್ಮಮಿತ್ರಂ, ಕವಿಕುಳತಿಳಕಂ ಎಂಬ ಬಿರುದುಗಳಿದ್ದಂತೆ ತಿಳಿಯುತ್ತದೆ.

ಇವನು—

ಪಂಪನ ನುಣ್ಪುವೆತ್ತ ನುಡಿ ಪೊನ್ನನ ಬಿನ್ನಣದೋಜೆ ರನ್ನನೊ।
ಳ್ಪಂ ಪುದಿದಿರ್ದ ಲಕ್ಷ್ಮಣವಿಚಕ್ಷಣತೋನ್ನತಿ ಕರ್ಣ್ಣಮಯ್ಯನಿಂ॥
ಪಂ ಪುದಿದಿರ್ದ ಗೌರವಗುಣಂ ಗುಣವರ್ಮನ ದೇಸೆವೆತ್ತ ಮಾ।
ತೇಂ ಪರಿಕಪ್ಪೋಡೀಕೃತಿಯೊಳುಂಟೆನೆ ಪೇಟ್ದುದು ಪೇಟಲೊಲ್ದವಂ॥

ಎಂಬೀ ಪದ್ಯದಲ್ಲಿ ಕೆಲವು ಪೂರ್ವಕವಿಗಳನ್ನು ಹೇಳಿರುವುದಲ್ಲದೆ ಧನಂಜಯ, ಭೂಪಾಲದೇವ, ಆಚಣ್ಣ, ಅಗ್ಗಳ, ನಾಗಚಂದ್ರ, ಬೊಪ್ಪಣಪಂಡಿತ,

1. Vol. X, 220.

ಸಿಂಹಪ್ರಾಯೋಪಗಮನಕರ್ತೃವಾದ ಕೇಶಿಯಣ್ಣ, ಸ್ತನಶತಕ ಕರ್ತೃನಾದ ಕವಿಕಾಮ, ನೇಮಿಚಂದ್ರ, ಬಾಳಚಂದ್ರ, ವಾಸುದೇವ—ಈ ಕವಿಗಳನ್ನೂ ಬೇರೆ ಬೇರೆ ಪದ್ಯಗಳಲ್ಲಿ ಸ್ತುತಿಸಿದ್ದಾನೆ.

ಕೆಳಗಣ ಪದ್ಯಗಳಲ್ಲಿ ತನ್ನ ಬಿರುದುಗಳನ್ನೂ ಅವಕ್ಕೆ ಕಾರಣಗಳನ್ನೂ ವಿವರಿಸಿದ್ದಾನೆ:—

ಘನಶಬ್ದಾಡಂಬರೋತ್ಪತ್ತಿಯಿನಖಿಲರಸೋತ್ಪಾದನಪ್ರೌಢಿಯಿಂ ಸ ।
ಜ್ಜನಚೇತಶ್ಚಾತಕಾಸ್ವಾದಿತವಚನಸುಧಾಬಿಂದುಸಂದೋಹದಿಂ ಭೂ ॥
ವಿನುತಶ್ರೀಕೀರ್ತಿವಲ್ಲೀಜನನವಿಭವದಿಂ ದಿಟ್ಟಿಸಲ್ ನೆಟ್ಟನಿಂತೀ ।
ತನೆ ಸಂಪಚ್ಚಾರುಮೇಘಂ ಸುಕವಿಜನಮನೋಹರ್ಷಸಸ್ಯಪ್ರವರ್ಷಂ ॥

ಪ್ರಕಟಪ್ರಜ್ಞೋದಯವ್ಯಾಪೃತವಿಪುಳಪದಾರ್ಥತ್ವದಿಂ ದುಷ್ಪಹೃತ್ಕೌ ।
ಶಿಕದೃಕ್ಸಂಪಾದಿತಾಂಧತ್ವದಿನಮಳತೆಯಿಂ ಲೋಕದೀಪಪ್ರರೂಪಾ ॥
ಧಿಕವಿಖ್ಯಾತತ್ವದೀತಂ ಬಗೆಯೆ ಜಗದೊಳಾನಂದಮುಂ ಭವ್ಯಚಕ್ರಾ ।
ಹ್ವಕುಳಕ್ಕೊಲ್ದೀವ ಪೆಂಪಿಂ ವಿಬುಧಜನಮನಃಪದ್ಮಿನೀಪದ್ಮಮಿತ್ರಂ ॥

ಘನಚಂದನರಸರುಚಿರಂ । ಸುನಿರ್ಮಳಂ ಶೀತಳಂ ಜಗನ್ಮಂಗಳಮು ।
ಮ್ಮನಶೇಷಸುಜನಮುಖಮಂ । ಡನನೆನಿಸುವ ವಿಭವದಿಂದೆ ಕವಿಕುಳತಿಳಕಂ ॥
ಎಂಬನುಪಮನಿಜಗುಣನಾ । ಮಂ ಬುಧನಿಕರಕ್ಕೆ ರತ್ನಕಂಠಿಕೆಯವೊಲೊ ।
ಪ್ಪಂಬೆತ್ತಿರೆ ಕೀರ್ತಿಸುಧಾ । ಬಿಂಬೋದಯದಿಂದೆ ಬೆಳಗಿದಂ ಕುಲಗಿರಿಯಂ ॥

ಇವನ ಗ್ರಂಥ

## ಪಾರ್ಶ್ವನಾಥಪುರಾಣ.

ಇದು 23 ನೆಯ ತೀರ್ಥಕರನ ಚರಿತವು; ಚಂಪೂರೂಪವಾಗಿದೆ; 16 ಆಶ್ವಾಸಗಳಾಗಿ ವಿಭಾಗಿಸಲ್ಪಟ್ಟಿದೆ. ಈ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಈ ಪದ್ಯಗಳಲ್ಲಿ ಹೇಳಿದ್ದಾನೆ:—

ಸತ್ಕೀರ್ತಿಪ್ರಮದಾವಶೀಕರಣಮಂತ್ರಂ ಕಾಂತಿಯುಕ್ತಂ ಮನಃ ।
ಕುತ್ಕೀಲಪ್ರಭವಂ ಪ್ರಸಿದ್ಧಮತಿನಿರ್ದುಷ್ಟಂ ಪರೀಕ್ಷಾಕ್ಷಮಂ ॥
ಮತ್ಕಾವ್ಯಂ ಗುಣರತ್ನಶೋಭಿ ಸರಸಂ ಸಾರಂ ಸುವರ್ಣಂ ಪ್ರಿಯಂ ।
ಹೃತ್ಕರ್ಣಾಭರಣಂ ಸಮಸ್ತಬುಧಬೃಂದಕ್ಕಪ್ಪುದೇನೊಪ್ಪದೇ ॥
ಜಡಮತಿ ಭೀದಿಸಲ್ ನೆಜಿಯದಂತಿರೆ ರೀತಿ ಬೆಡಂಗನೆಯ್ದೆ ನೂ ।
ರ್ಮಡಿಸೆ ವಿಚಿತ್ರಭಿತ್ತಿಯಳವಟ್ಟರೆ ಜಾತಿ ನಿಸರ್ಗಶೋಭೆಯಂ ॥
ಗೆಡೆಗೊಳೆ ಪಾರ್ಶ್ವಪಂಡಿತವಿನಿರ್ಮಿತಕಾವ್ಯದವೋಲ್ ಜನಾಲಯಂ ।
ಸಡೆದು ವಿನೇಯಸಂಪದಮನೇಂ ಪೆಸರ್ವೆತ್ತುದೊ ವಿಶ್ವಧಾತ್ರಿಯೊಳ್ ॥

ಗ್ರಂಥಾವತಾರದಲ್ಲಿ ಪಾರ್ಶ್ವನಾಥಸ್ತುತಿಯಿದೆ. ಬಳಿಕ ಕವಿ, ಸಿದ್ಧರು ಮೊದಲು ಗೊಂಡು ವೀರಣಂದಿಯವರೆಗೆ[1] ಗುರುಗಳನ್ನು ಕ್ರಮವಾಗಿ ಸ್ತುತಿಸಿ ತರುವಾಯ ಪೂರ್ವಕವಿಗಳನ್ನು ಹೊಗಳಿ ಕಥೆಯನ್ನು ಆರಂಭಿಸಿದ್ದಾನೆ.

ಆಶ್ವಾಸಗಳ ಕೊನೆಯಲ್ಲಿ ಈ ಗದ್ಯವಿದೆ :—

ಇದು ವಿದಿತವಿಬುಧಲೋಕನಾಯಕಾಭಿಪೂಜ್ಯ ವಾಸುಪೂಜ್ಯಜಿನಮುನಿಪ್ರಸಾದಾ ಸಾದಿತನಿರ್ಮಳಧರ್ಮ ವಿನುತವಿನೇಯಜನವನಜವನವಿಳಸಿತ ಕವಿಕುಳತಿಳಕಪ್ರಣೂತ ಪಾರ್ಶ್ವ ನಾಥಪ್ರಣೀತಮಪ್ಪ ಪಾರ್ಶ್ವನಾಥಚರಿತದೊಳ್.

ಈತನು 'ಒಗಂಟುವೇಟ್ಪಿ ಕವಿಯುಂ ಕವಿಯೇ' ಎಂಬ ತನ್ನ ಅಭಿಪ್ರಾಯಾನುಸಾರವಾಗಿ ಗ್ರಂಥವನ್ನು ಲಲಿತವಾಗಿ ಬರೆದಿದ್ದಾನೆ.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ :—

ಬೇಸಗೆ.

ಒಡಲಂ ಚಂಡಾಂಶುಚಂಡದ್ಯುತಿ ಕಿಡಿವಿಡುತುಂ ಕೆರ್ಚಿನಂತಟ್ಟಿ ತಾಂ ಘೀ।
ಳಿಡುತುಂ ಕಾಡಾನೆ ನೀರಂ ಮುಟ್ಟುಗೆ ಮಡುವಿನೊಳ್ ಕಾಯ್ದು ಕರ್ಬೊನ್ನ ಬಿಟ್ಟಂ॥
ಬಿಡೆ ತಂದಂದಟ್ಟಿ ದಂತಾಗಳೆ ಜಳಮನಿತುಂ ಬತ್ತಿದತ್ತೆಂದೊಡೇನು।
ಗ್ಗಡಮಾಯ್ತೋ ಧಾತ್ರಿ ನಿರ್ಜೀವನಮೆನಿಸುವಿನಂ ಗ್ರೀಷ್ಮಮತ್ಯಂತಭೀಷ್ಮಂ॥725॥

ಕತ್ತಲೆ.

ವರ್ಣವ್ಯವಸ್ಥೆ ವಾಸ್ತವ। ನಿರ್ಣಯಮಳಂಕಸುಜನವರ್ತನಮಿನಿತುಂ।
ದುರ್ಣಯನೃಪರಾಜ್ಯದೊಳವ। ಕರ್ಣಿತಮಪ್ಪಂತೆ ತಮದೊಳಾದತ್ತಾಗಳ್ ॥726॥

---

1. ಸಿದ್ಧಾದಿಗಳು, ಕೇವಲಿಗಳು, ಅತಿಶಯಕೇವಲಿಗಳು, ಶ್ರುತಕೇವಲಿಗಳು, ಗಣಧರರು, ಕವಿಪರಮೇಷ್ಠಿಗಣಧರರು, ಗಣಿಗಳು, ಉಮಾಸ್ವಾತಿ, ಜಟಾಚಾರ್ಯ, ಕುಂದಕುಂದಾಚಾರ್ಯ, ನೃಪಾಲಸಭೆಗಳಲ್ಲಿ ಗಮಕಿತ್ವವಾದಿತ್ವಗಳನ್ನು ಸಮರ್ಥಿಸಿದ ಸಮಂತಭದ್ರ, ಪರಮೇಷ್ಠಿಸ್ತವನಮಾಡಿದ ಕವಿಪರಮೇಷ್ಠಿ, ಕಲ್ಯಾಣಕಾರಕ ಜೈನೇಂದ್ರ ತತ್ವಾರ್ಥವೃತ್ತಿಗಳನ್ನು ರಚಿಸಿದ ಪೂಜ್ಯಪಾದ, ಅಕಳಂಕ, ವಿದ್ಯಾನಂದ, ಗಣಿತಾನ್ವಿತಬುದ್ಧಿಯೆನಿಸಿದ ವೀರಾಚಾರ್ಯ, ವೀರಸೇನ, ಜಿನಸೇನ, ಆತ್ಮಾನುಶಾಸನವನ್ನು ಬರೆದ ಗುಣಭದ್ರ, ವಾದೀಶ್ವರ ಸೋಮದೇವಮುನಿ, ಕಾವ್ಯತ್ರಯ ತರ್ಕತ್ರಯದ ವಾದಿರಾಜ, ಯಾವಂತಿಗಣಿತಭಾಸ್ಕರಪಾವನ ಮುನಿಚಂದ್ರ, ಕಟಕೋಪಾಧ್ಯಾಯನಾದ ಶ್ರುತಕೀರ್ತಿ, ನೇಮಿಚಂದ್ರಭಟ್ಟಾರಕ, ವಾಸುಪೂಜ್ಯ, ಇವನ ಶಿಷ್ಯ ಶ್ರುತಕೀರ್ತಿ, ಜಾವಳಿಗೆಯ ಮುನಿಚಂದ್ರ, ಮಗ ವೀರಣಂದಿ, ನೇಮಿಚಂದ್ರಸೈದ್ಧಾಂತಿಕ, ಬಲಾತ್ಕಾರಗಣಾಗ್ರಗಣ್ಯ ಉದಯಚಂದ್ರಮುನಿ, ನೇಮಿಚಂದ್ರಭಟ್ಟಾರಕಶಿಷ್ಯ ಭೂನಾಥಪೂಜ್ಯ ವಾಸುಪೂಜ್ಯಮುನಿ, ಅಷ್ಟೋಪವಾಸಿ ರಾಮಚಂದ್ರಮುನಿ, ನಾನಾನೃಪಪೂಜ್ಯ ಶ್ರೀನಂದಿಯೋಗಿ, ಶುಭಚಂದ್ರ, ಕುಮುದಚಂದ್ರ, ಕಮಳಸೇನ, ಮಾಧವೇಂದು, ಶುಭಚಂದ್ರಶಿಷ್ಯ ಲಲಿತಕೀರ್ತಿ, ನಂದಿಯೋಗಿಶಿಷ್ಯ ತರ್ಕವಿದ್ಯಾನಂದ ಪ್ರಭು, ಭಾವಸೇನ, ಕುಮುದಚಂದ್ರನ ಮಗ ವೀರಣಂದಿ.

## ಮಳೆಗಾಲ.

ಪರಿಕೊಂಡತ್ತು ಕಲಂಕುತುಂ ಕುಜುವಮುಂ ಪುಟ್ಟಿದತ್ತು ತೀರಕ್ಕೆ ತಾಂ ।
ಸರಿಯಾದತ್ತಿರಡುಂ ತಟಂಗಳನೆ ವಿಘಾಜಿತ್ತಂಬಿಗರ್ ನಾವೆಯಂ ॥
ಭರದಿಂದಿಕ್ಕಿದ ಮಾಟ್ಲಿಕ್ಕಯಾಯ್ತು ನದಿಯೆಂದೆಂಬನ್ನೆಗಂ ಧಾತ್ರಿ ಭೋ ।
ರ್ಗರೆದೆತ್ತಂ ಕಜ್ಜಿದತ್ತು ಕಾರ ಮಟ್ಲಿ ಝುಂಝೂಮಾರುತಪ್ರೇರಿತಂ ॥ 727 ॥

ಜಡಹೃದಯರನಾಶ್ರಯಿಸಿ । ದೊಡೆ ಮೂಲೋಚ್ಚಿತ್ತಿಯಪ್ಪದೆಂಬಿನೆಗಮೆರ ।
ಟ್ಟಿಡಿವಿಡಿದಿರ್ದ ಮರಂಗಳ । ನಡಿಗೆಡಪಿದುವಿರದೆ ಪರಿವ ಪೂರದೆ ನದಿಗಳ್ ॥ 728 ॥

## ವಸಂತ.

ಲತಿಕಾಲಕ್ಷ್ಮೀವಿಳಾಸಂ ಮಳಯಪವನವಿನ್ಯಾಸಮಬ್ಜಪ್ರಹಾಸಂ ।
ಚತುರಾಶ್ಚಾಸಂ ಸಮುತ್ಪಾದಿತವಿರಹಿಜನತ್ರಾಸಮರ್ಕಪ್ರತಾಪಾ ॥
ಪ್ರತಿಮವ್ಯಾಸಂ ಶಶಾಂಕದ್ಯುತಿವಿಭವವಿಭಾಸಂ ವರಸ್ತ್ರೀವಿಳಾಸಂ ।
ಪ್ರೀತಿಗತ್ಯಾನಂದಮಂ ಸಂದಿಸಿತು ಸುರಭಿಮಾಸಂ ಸ್ಮರಶ್ರೀನಿವಾಸಂ ॥ 729 ॥

ಲಲನಾಲಾವಣ್ಯವಾರಾಶಿಯೊಳೆ ಗುರುಕುಚಂ ಪೊನ್ನ ಬೀಟ್ಗುಂಡು ಶುಂಭ।
ತ್ಪಲಿತಾಮ್ರಂ ಕೂವಕಂಬಂ ವಿಚಕಿಳಮಸೆಳಂ (?) ಚಂದ್ರಮುಂ ಕೂನಕಂಬ ॥
ಕ್ಕಳಿಸಿರ್ಪಂ ಕಂತು ಸಾಂಯಾತ್ರಿಕನೆನಿಸಿ ಮನೋವೇಗದಿಂ ದಕ್ಷಿಣಾಶಾ ।
ನಿಳಸಂಪಚ್ಛ್ರೀದಿತಂ ಬಂದುದು ಸುಖಭರಿತಂ ಚೈತ್ರಮಂ ಪೋಲ್ತು ಚೈತ್ರಂ ॥730॥

## ಮಾವಿನ ಮರ.

ಸೊನೆ ತನಗಿಂಬುವೆತ್ತ ಮದಧಾರೆ ಕವಲ್ತಿಳಗೊಂಬಿ ಕೊಂಬು ಮೆ।
ಲ್ಲನೆ ತೊನೆದಾಡುತಿರ್ಪ ಸೆಳೆಗೊಂಬು ಕರಂ ತಳಿರಗ್ರಪಲ್ಲವಂ ॥
ಧ್ವನಿ ಮಧುಪಸ್ತನಂ ಕುಸುಮಮಂಜರಿ ರಂಜಿಸುತಿರ್ಪ ಕುಂಭಮೆಂ।
ಬಿನವಿದೆ ಬಂದು ಕೊಂದಪುದು ಕಾವಿಗಳಂ ಸಹಕಾರಕುಂಜರಂ ॥ 731 ॥

ಚಿಗುರ್ಗಳನೊರ್ಮೆ ಕರ್ಚಿ ತಳಿರ್ದೊಂಗಲನೊರ್ಮೆ ಕರ್ದುಂಕಿ ಕೋಕಿಳಂ ।
ಮುಗುಳ್ಗಳನೊರ್ಮೆ ಜಕ್ಕುಲಿಸಿ ಪೂಗಳನೊರ್ಮೊದಲೀಂಟಿ ಷಟ್ಪದಂ ॥
ಬಗೆಗೊಳೆ ಬಂದ ಮಾವುಗಳ ಕಾಯ್ಗಳನೊರ್ಮೆ ತುಡುಂಕಿ ತುಂಡದಿಂ ।
ಸೊಗಯಿಪ ಪಣ್ಣನೊರ್ಮೆ ಸವಿದೇಂ ಸುಕಮಂ ಶುಕನೊಲ್ದು ತಾಳ್ದಿತೋ ॥ 732 ॥

## ಬೇಡಿತಿ.

ಬಿಳಿತಿಗೆಗಣ್ಣ ಬೆಳ್ಪಿನೊಳೆ ಕೌಮುದಿಯಿಂ ಪುದಿದಿರ್ದ ಸಸ್ಮಿತೋ ।
ತ್ಪಳಿನಯನುಟ್ಟ ಪಲ್ಲವನಿಕಾಯದೆ ಪಲ್ಲವಭೃತ್ತಮಾಳಕೋ ॥

ಮಳಲತೆಯಂ ನಿರಾಕರಿಸಿ ಪೆರ್ಮೊಲೆ ಪೊಂಗೊಡನಂತಿರೊಪ್ಪೆ ಪ।
ಜ್ಜಳಿಸುವ ನೀಳದಿಂ ಸಮೆದ ಪುತ್ತಳಿಯಂತೆ ಪುಳಿಂದಿಯೊಪ್ಪಿದಳ್ ॥ 733 ॥

## ಭಕ್ಷ್ಯಗಳು.

ನಿಳ್ಪುಂ ಬೆಳ್ಪುಂ ತೆಳ್ಪುಂ। ತಳ್ಪೊಯ್ದಿರೆ ಸುಗ್ಗಿಯಚ್ಚವೆಳ್ದಿಂಗಳನೀ।
ಗಳ್ಪೊರೆಯೆತ್ತಿದರೆಂಬಂ। ತೊಳ್ಪಂ ಗೆಡೆಗೊಂಡು ಸೊಗಯಿಸುವ ಮುಂಡಗೆಯಂ
॥ 734 ॥

ಪೊಂಗಿರ್ದಂಗರವೋಳಿಗೆ। ಯುಂ ರಗರನಪ್ಪ ತುಪ್ಪವುಂ ಸಕ್ಕರೆಯುಂ।
ಪಿಂಗದೆ ಹೂರಣಮೆನಿಸಿ ಮು। ನಂಗೊಳಿಪುವನಮೃತಪೂರಮುಂ ಹೂರಿಗೆಯಂ
॥ 735 ॥

ಪ್ರಣುತಹಿಮವರಸುರಭಿಧಾ। ರಿಣಿಯಂ ಪಂಚೇಂದ್ರಿಯಪ್ರಿಯಾತುಳಸುಖಕಾ।
ರಿಣಿಯಂ ಪೊಸತೆನಿಸುವ ಶಿಖಿ। ರಿಣಿಯಂ ರಸರಸಿಕಜನಮನೋಹಾರಿಣಿಯಂ
॥ 736 ॥

ಲಡ್ಡುಗೆಯನಿನಿದೆನಿಪ ಬಿಡು। ಲಡ್ಡುಗೆಯಂ ತುಪ್ಪದಲ್ಲಿ ತೇಂಕುವ ಕಂಪು।
ಳ್ಳಿಡ್ಡಲಿಗೆಗಳಂ ಬೇಗಂ। ಬಡ್ಡಿಸಿದರ್ ಜಾಣರೆಂಬಿನಂ ಬಾಣಸಿಗರ್ ॥ 737 ॥

## ರಾಜನೀತಿ.

ನಯವಿದನಂ ಸಾಮದಿನಪ। ನಯನಂ ದಂಡದೊಳೆ ಗೆಲ್ವುದೆಂತೆನೆ ಕಟುಕ।
ತ್ರಯದಿಂದಲ್ಲದೆ ಮಧುರ। ಪ್ರಯೋಗದಿಂ ಕಷಮನಾವನುಪಶಮಯಿಸುವಂ
॥ 738 ॥

ಜನಿಯಿಸಿದ ಶೋಷಮನುಲೇ। ಪನದಿಂ ಪೋಗದೊಡೆ ಶಸ್ತ್ರಕರ್ಮಮನೆಸಪಂ।
ತನುನಯಕೊಳಗಾಗದನಂ। ಮೊನೆಯೊಳ್ ದಂಡಿಪುದು ನಯಪರಾಕ್ರಮಯುಕ್ತಂ
॥ 739 ॥

ಇವನು ಬರೆದ ಶಾಸನದಿಂದ ಒಂದು ಪದ್ಯವನ್ನು ಉದ್ಧರಿಸಿ ಬರೆಯುತ್ತೇವೆ :—

## ಕಾರ್ತವೀರ್ಯನ ಕೀರ್ತಿ.

ನೇರು ನಭಸ್ಸ್ಥಳಂ ಜಳಧಿ ಮತ್ವತಿಯುನ್ನತಿಸನ್ಮಹತ್ವಗಂ।
ಭೀರಗುಣಕ್ಕೆ ಮಚ್ಚರಿಪುವೆಂದಮರಾದ್ರಿಯನಿಕ್ಕಿ ಮೆಟ್ಟಿಯಾ ॥
ನೀರದಮಾರ್ಗಮಂ ಪುದಿದು ವಾರಿಧಿಯಂ ವಿಗೆ ದಾಂಟಿ ಕೀರ್ತಿಯಾ।
ಶಾರಮಣರ್ಗ್ಗೆ ಬಣ್ಣಿಪುದು ಪೆಂಪಿನಲಂಪನೆ ಕಾರ್ತವೀರ್ಯನಾ ॥ 740 ॥

## ಕಲ್ಲಯ್ಯ. 1206.

ಈತನು ಚಿತ್ರದುರ್ಗದ 23 ನೆಯ ಶಾಸನವನ್ನು ಹೇಳಿ ಬರೆದನೆಂದೂ ಇವನು ಲಕ್ಕರಸರ ಮಗನೆಂದೂ ಹುಲ್ಲೂರ ಸೇನಬೋವನೆಂದೂ ಆ ಶಾಸನದ ಅಂತ್ಯಭಾಗದಿಂದ ತಿಳಿಯುತ್ತದೆ. ಈ ಶಾಸನವು ವೀರಬಲ್ಲಾಳನ ಆಳಿಕೆಯಲ್ಲಿ 1206 ರಲ್ಲಿ ಬರೆದುದು.

ಇದರಿಂದ ಒಂದೆರಡು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

ಶಿವ.

ಶ್ರೀಮದ್ಬಾಳೇಂದುರುಚಿ । ಸ್ತೋಮಾಲಂಕೃತಕಿರೀಟನಷ್ಟವಿಧ್ವಂಸಂ ।
ಕಾಮಾಂತಕನಗಜಾತಾ । ಪ್ರೇಮಂ ನಮಗೀಗೆ ಪಾಂಛಿತಾರ್ಥಮನೆಂದುಂ ॥ 741 ॥

ಹೊನುಗುಂದದ ವೃತ್ತಿ.

ತಿಳಕತಮಾಳತಾಳವಕುಳಂ ಸಹಕಾರಮಶೋಕಚಂಪಕಂ ।
ಕುಳಿರ್ವ ಸರೋಜಷಂಡಮಲರ್ದೊಪ್ಪುವ ಮಲ್ಲಿಗೆ ಮಾಧವೀಲತಾ ॥
ವಳಿ ತನಿಗೊರ್ಬಿದಿಕ್ಕುವನಮೊಯ್ಯನೆ ತೀಡುವ ಮಂದವಾಯು ಕ ।
ಣ್ಗೊಳಿಸುವುವೆತ್ತ ನೋಡೆ ಹೊನುಗುಂದದ ವೃತ್ತಿಯತೀವಬಂಧುರಂ ॥ 742 ॥

---

## ಜನ್ನ. 1209.

ಈತನು ಯಶೋಧರಚರಿತೆ, ಅನಂತನಾಥಪುರಾಣ ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಅಲ್ಲದೆ ಸ್ಮರತಂತ್ರವೆಂಬ ಗ್ರಂಥವನ್ನೂ ಬರೆದಿರುವಂತೆ ಮೋಹನು ಭವಮುಕುರ (ಸು. 1400) ಎಂಬ ಗ್ರಂಥದಿಂದ ಊಹಿಸಬಹುದಾಗಿದೆ. ಈ ಗ್ರಂಥವು ನಮಗೆ ದೊರೆತಿಲ್ಲ.

ಇವನು ಜೈನಕವಿ; ಕಮ್ಮೆನಂಶದವನು; ಕಾಶ್ಯಪಗೋತ್ರದವನು. ಇವನ ತಂದೆ ಹೊಯ್ಸಳನಾರಸಿಂಹನಲ್ಲಿ(1141–1173)ಕಟಕೋಪಾಧ್ಯಾಯನಾಗಿಯೂ ಸುಮನೋಬಾಣ ಎಂಬ ಬಿರುದುಳ್ಳವನಾಗಿಯೂ ಇದ್ದ ಶಂಕರನು;[1] ತಾಯಿ ಗಂಗಾದೇವಿ. ಈತನು ಆಷಾಢಕೃಷ್ಣ ತ್ರಯೋದಶೀ ರೇವತೀನಕ್ಷತ್ರ ಶಿವ ಯೋಗದಲ್ಲಿ ಹುಟ್ಟಿದವನು. ಇವನ ಪತ್ನಿ "ರಾಯದಂಡಾಧಿನಾಥಕೃತಾಂತಂ ಪೆಸರ್ವೆತ್ತ ಚಾಕಣನಪತ್ಯಂ ರೇಚಯಂ ಪೆತ್ತ ಪುತ್ರಿ" ಲಕುಮಾದೇವಿ; ಗುರು ಕಾಣೂರ್ಗಣದ ಮಾಧವಚಂದ್ರಶಿಷ್ಯನಾದ ಗಂಡವಿಮುಕ್ತರಾಮಚಂದ್ರ ದೇವಮುನಿ. ಜಗದೇಕಮಲ್ಲ (1138–1150) ನಲ್ಲಿ ಕಟಕೋಪಾಧ್ಯಾಯ ನಾಗಿಯೂ ಅಭಿನವಶರ್ವವರ್ಮನೆಂಬ ಬಿರುದುಳ್ಳವನಾಗಿಯೂ ಇದ್ದ ಎರಡನೆಯ

1. ಪುಟ 161.

**ನಾಗವರ್ಮನು**[1] ಇವನಿಗೆ ಉಪಾಧ್ಯಾಯನು; **ಸೂಕ್ತಿಸುಧಾರ್ಣವ**ವನ್ನು ಬರೆದ **ಮಲ್ಲಿಕಾರ್ಜುನನು** (ಸು. 1245) ಈತನ ಸೋದರಿಯ ಗಂಡನು; **ಶಬ್ದಮಣಿ ದರ್ಪಣ**ವನ್ನು ಬರೆದ **ಕೇಶಿರಾಜನು** (ಸು. 1260) ಇವನ ಸೋದರದಳಿಯನು. ಈ ಕವಿ,

ನರಸಿಂಹನ ಚೋಳಕುಲೋ । ದ್ಧರಣನ ಸರ್ವಜ್ಞಭೂಪನೋಲಗದೊಳ್ ನಿಂ ।
ದಿರೆ ದಂಡಾಧೀಶಂ ಕು । ಳ್ಳಿರೆ ಮಂತ್ರಿ ತೊಡಂಕೆ ಕವಿ ಜನಾರ್ದನದೇವಂ ॥

ಎಂದೂ "ನಾಪ್ತಿಭು ಜನಾರ್ದನದೇವಂ" ಎಂದೂ ಹೇಳಿಕೊಂಡಿರುವುದರಿಂದ ಆ ರಾಜನ ಆಸ್ಥಾನಕವಿಯಾಗಿದ್ದುದು ಮಾತ್ರವಲ್ಲದೆ ದಂಡಾಧೀಶಮಂತ್ರಿಪದವಿ ಗಳನ್ನೂ ಕೂಡ ಪಡೆದಿದ್ದಂತೆ ತಿಳಿಯುತ್ತದೆ. ಈತನು ಗಂಡರಾದಿತ್ಯನ ಪೊಳಲಲ್ಲಿ[2] ಅನಂತನಾಥನ ಬಸದಿಯನ್ನು ಕಟ್ಟಿಸಿದಂತೆಯೂ ದ್ವಾರಸಮುದ್ರದಲ್ಲಿ ವಿಜಯ ಪಾರ್ಶ್ವಜಿನೇಶ್ವರನ ಬಸದಿಯ ದ್ವಾರವನ್ನು ಮಾಡಿಸಿದಂತೆಯೂ ಹೇಳುತ್ತಾನೆ. "ತಾನಿತ್ತ ಕೆಯ್ಯಲ್ಲದೊಡ್ಡಿದ ಕೆಯ್ಯಲ್ಲದ ಸೆಂಪು" ಎಂಬುದರಿಂದ ಇವನು ಬಹಳ ಉದಾರಿಯಾಗಿದ್ದಂತೆ ತಿಳಿಯುತ್ತದೆ.

ಕನ್ನರನು ಹೊನ್ನನಿಗೂ ತೈಲಪನು ರನ್ನನಿಗೂ ವೀರಬಲ್ಲಾಳನು ತನಗೂ ಕವಿಚಕ್ರವರ್ತಿ ಎಂಬ ಬಿರುದನ್ನು ಕೊಟ್ಟಂತೆ ಈ ಪದ್ಯದಲ್ಲಿ ಹೇಳಿದ್ದಾನೆ:—

ಕನ್ನರನಾದರದಿಂ ಕುಡೆ । ಹೊನ್ನಂ ಮನಮೊಸೆದು ತೈಲಪಂ ಕುಡೆ ರನ್ನಂ ।
ಮನ್ನಿಸಿ ಬಲ್ಲಾಳಂ ಕುಡೆ । ಜನ್ನಂ ಕವಿಚಕ್ರವರ್ತಿವೆಸರಂ ತಳೆದಂ ॥

ಈ ಪದ್ಯದಲ್ಲಿ ತನ್ನನ್ನು ರನ್ನನಿಗೂ ಹೊನ್ನನಿಗೂ ಹೋಲಿಸಿಕೊಂಡಿದ್ದಾನೆ:—

ರನ್ನಂ ವೈಯಾಕರಣಂ । ಜನ್ನಂ ಮೇಣ್ ಕವಿಗಳೊಳಗೆ ವೈಯಾಕರಣಂ ।
ಪೊನ್ನನಸಹಾಯಕವಿ ಮೇಣ್ । ಜನ್ನಿಗನಸಹಾಯಸುಕವಿ ಕವಿಚಕ್ರಿಗಳೊಳ್ ॥

ಈತನು ತನ್ನ **ಯಶೋಧರಚರಿತೆ**ಯನ್ನು ವೀರಬಲ್ಲಾಳನ (1173-1220) ಆಳಿಕೆಯಲ್ಲಿ ಶುಕ್ಲಸಂವತ್ಸರದಲ್ಲಿ—ಎಂದರೆ 1209 ರಲ್ಲಿ ಬರೆದಂತೆಯೂ[3] ಅನಂತ

1. ಜನನಾಥಂ ಜಗದೇಕನಲ್ಲಿ ಕಟಕೋಪಾಧ್ಯಾಯನಾನಾಗವ ।
ರ್ಮನಿದಾನೀಂತನಶರ್ವವರ್ಮನೆ ಗಡಂ ಜನ್ನಂಗುಪಾಧ್ಯಾಯನಿಂ ॥
ದು ನೃಸಿಂಹಕ್ಷಿತಿಪಾಲನಲ್ಲಿ ಕಟಕೋಪಾಧ್ಯಾಯನಾರೆಂಬ ಸೂ।
ಕ್ತಿನವೀನೋಜ್ಜ್ವಲಬಾಣನಪ್ಪ ಸುಮನೋಬಾಣಂ ಕವಿಶ್ರೇಷ್ಠರೊಳ್ ॥

2. ಕಲಕಿಲದುರ್ಗ.

3 ಶ್ರೀಗಿರಿದುರ್ಗಮಲ್ಲನೃಪರಾಜ್ಯದ ವತ್ಸರಮುತ್ತರೋತ್ತರ।
ಕ್ಕಾಗಿರೆ ಶುಕ್ಲದಾಶ್ವಯುಜ ಕೃಷ್ಣದ ಪಂಚಮಿ ಪೂರ್ಣತಾ॥
ರಾಗುರುವಾಗೆ ಭೂತಳದೊಳೀಕೃತಿ ಪೆತ್ತುದು ಸುಪ್ರತಿಷ್ಠೆಯಂ।
ಜಾಗದ ದಾನದಗ್ಗಳಿಕೆಯುಂ ಪಡೆದಂ ಕವಿಬಾಳಲೋಚನಂ॥

ನಾಥಪುರಾಣವನ್ನು ವೀರಬಲ್ಲಾಳನ ಮಗ ವೀರನರಸಿಂಹನ (1220—1235) ಆಳಿಕೆಯಲ್ಲಿ ವಿಕೃತವರ್ಷದಲ್ಲಿ—ಎಂದರೆ 1230 ರಲ್ಲಿ ರಚಿಸಿದಂತೆಯೂ[1] ತಿಳಿಯುತ್ತದೆ.

ಇವನು ಶಕ 1113 ರಲ್ಲಿ—ಎಂದರೆ 1191 ರಲ್ಲಿ—ಹುಟ್ಟಿದ ಚೆನ್ನರಾಯಪಟ್ಟಣದ 179 ನೆಯ ಶಾಸನವನ್ನೂ ಶಕ 1119 ರಲ್ಲಿ—ಎಂದರೆ 1197 ರಲ್ಲಿ—ಹುಟ್ಟಿದ ತರೀಕೆರೆಯ 45 ನೆಯ ಶಾಸನವನ್ನೂ ಬರೆದುದಾಗಿ ಆ ಶಾಸನಗಳ ಅಂತ್ಯದಲ್ಲಿರುವ "ಜನ್ನಯ್ಯನ ಕವಿತೆ," "ಉದ್ದಂಡಕವಿಭಾಳನೇತ್ರಂ ಸುಕವಿಜನ ಮಿತ್ರಂ ಜನ್ನಯ್ಯನ ಕವಿತೆ" ಎಂಬೀ ವಾಕ್ಯಗಳಿಂದ ತಿಳಿಯುತ್ತದೆ. ಇದರಿಂದ ಈತನು 1191 ರಲ್ಲಿಯೇ ಕವಿತ್ವವಾಡುವುದಕ್ಕೆ ಆರಂಭಿಸಿದುದಾಗಿ ತಿಳಿಯಬಂದರೂ ನಮಗೆ ದೊರೆತಿರುವ ಈತನ ಪ್ರಥಮಗ್ರಂಥವಾದ ಯಶೋಧರ ಚರಿತೆಯ ರಚನಾಕಾಲವನ್ನೇ ಈತನಿಗೆ ಕೊಟ್ಟಿದ್ದೇವೆ.

ಈ ಕವಿಗೆ ಸಾಹಿತ್ಯರತ್ನಾಕರ, ಕವಿಭಾಳಲೋಚನ, ಕವಿಚಕ್ರವರ್ತಿ, ವಿನೇಯಜನಮುಖತಿಲಕ, ರಾಜವಿದ್ವತ್ಸಭಾಕಲಹಂಸ, ಕವಿವೃಂದಾರಕವಾಸವ, ಕವಿಕಲ್ಪಲತಾಮಂದಾರ ಎಂಬ ಬಿರುದುಗಳೂ; ಜನ್ನಮರಸ, ಜನ್ನಯ್ಯ, ಜನ್ನಿಗ, ಜನಾರ್ದನ, ಜಾನಕಿ ಎಂಬ ಹೆಸರುಗಳೂ ಇದ್ದಂತೆ ತಿಳಿಯುತ್ತದೆ.

ಜಿನಪುರಾಣಕರ್ತೃಗಳಾದ ಪೂರ್ವಕವಿಗಳನ್ನು ಈ ಪದ್ಯದಲ್ಲಿ ಸ್ಮರಿಸಿದ್ದಾನೆ:—

ಎನಗನುಕೂಲಮುಕ್ಕೆ ಗುಣವರ್ಮನ ಜಾಣ್ಮುಡಿ ಪಂಪನಿಂಪು ಪೊ।
ನ್ನನ ಬಗೆ ನಾಗವರ್ಮನ ಬಹುಜ್ಞತೆ ರನ್ನನ ಕಾಂತಿ ನಾಗಚಂ॥
ದ್ರನ ರಸಭಾವಮುಗ್ಗಳನ ವಕ್ರತೆ ನೇಮಿಯ ದೇಸೆ ಪುಷ್ಪಬಾ।
ಣನ ಮೃದುಬಂಧವೀಕವಿಗಳೆಲ್ತೆ ಜಿನೇಂದ್ರಪುರಾಣಕರ್ತೃಗಳ್॥

ಈತನನ್ನು **ಆಂಡಯ್ಯ** (ಸು. 1235), **ಕಮಲಭವ** (ಸು. 1235), **ಮಲ್ಲಿಕಾರ್ಜುನ** (ಸು. 1245), **ಕುಮುದೇಂದು** (ಸು. 1275), **ಮಧುರ** (ಸು. 1385), **ಮಂಗರಸ** (1508), **ನಂಜುಂಡ** (ಸು. 1525), **ಬಾಹುಬಲಿ** (ಸು. 1560) ಮೊದಲಾದ ಕವಿಗಳು ಸ್ತುತಿಸಿದ್ದಾರೆ.

---

1. ಶಕಸಂವತ್ಸರಮಂದು ಸಾಸಿರದನೂಱಯ್ವತ್ತಿರಟ್ ಸಲ್ವಿನಂ।
ವಿಕೃತಾಬ್ದಂ ಬರೆ ಚೈತ್ರಶುದ್ಧದಶಮೀದೇವೇಜ್ಯನೊಳ್ ಪುಷ್ಯತಾ॥
ರಕದೊಳ್ ಮಾಡಿಸಿದಂ ಪ್ರತಿಷ್ಠೆಯನನಂತಶ್ರೀಪುರಾಣಕ್ಕೆ ಕ।
ನ್ಮಿಕುಲಾಂಭೋರುಹಭಾನು ಜನ್ನಮರಸಂ ಸಾಹಿತ್ಯರತ್ನಾಕರಂ॥

ತನ್ನ ತಱುವಾಯೆ ಕೃತಿವೇ। ಟ್ಪಿನ್ನಂ ನೀನಲ್ಲದಿಲ್ಲವೆಂದತಿಮುದದಿಂ।
ಮನ್ನಿಸಿ ಸಲಹುಗೆ ಸತ್ಕವಿ। ಜನ್ನಂ ಜಾಣೆಸೆಯಲಿತ್ತು ನುಡಿಗಳನೆನ್ನಂ॥
ಸರ್ವರ ಸಮ್ಮತಮೆನಗಿದು। ಗರ್ವದ ಮಾತಲ್ಲ ಶಾಸ್ತ್ರಲೌಕಿಕಕಲೆಯೊಳ್।
ಬೇರ್ವರಿದ ನೇಮಿಜನ್ನಮ। ರಿರ್ವರೆ ಕರ್ಣಾಟಕೃತಿಗೆ ಸೀಮಾಪುರುಷರ್॥

[ಮಧುರನ ಧರ್ಮನಾಥಪುರಾಣ.]

ಬಲ್ಲಿದ ಕರ್ಣಾಟಕವಿಗಳೆಲ್ಲರ ಗೆಲ್ದು। ಬಲ್ಲಾಳಭೂಮಿಶ್ವರನ।
ನಿಲ್ಲದೆ ಮೆಚ್ಚಿಸಿಕೊಂಡ ಜನ್ನನ ಪದ। ಪಲ್ಲವಗಳಿಗೆಱಗುವೆನು॥

[ನಂಜುಂಡನ ಕುಮಾರರಾಮಕಥೆ.]

ತನ್ನ ಕವಿತಾಚಾತುರಿಯನ್ನೂ ಗುಣಾದಿಗಳನ್ನೂ ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ:—

ಆನ್ಯಪನ ಸಭೆಯೊಳಖಿಳಕ। ಳಾನಿಪುಣರ ನಟ್ಟನಡುವೆ ಬೆಟ್ಟಿತ್ತ ಗೆಲಲ್।
ತಾನೆ ಚತುರ್ವಿಧಪಂಡಿತ। ನೇನೆಂಬುದೊ ಸುಕವಿಭಾಳಲೋಚನನಳವಂ॥
ನವವ್ಯೆಯಾಕರಣಂ ತ। ರ್ಕವಿನೋದಂ ಭರತಸುರತಶಾಸ್ತ್ರವಿಳಾಸಂ।
ಕವಿರಾಜಶೇಖರಂ ಯಾ। ದವರಾಜಚ್ಛತ್ರನಖಿಳಬುಧಜನಮಿತ್ರಂ॥
ಚದುರ ನಿಧಿ ಚಲದ ನೆಲೆ ಚಾ। ಗದ ಸಾಗರಮಗ್ಗಿನಾಗರಂ ಪೆಂಪಿನ ಸಂ।
ಪದಮಾಯದಾಯುವಾರೆಂ। ಬುದೊ ಜನ್ನಂ ಕಮ್ಮೆಕುಲದ ತೊಡವಿನ ರನ್ನಂ॥
ಚಂದನಪಂಕದೊಳ್ ಪರಿಮಳಂ ಮೆಱೆವಂತಿರೆ ಬಂಧದೊಳ್ ರಸ।
ಸ್ಯಂದಿಗಳಾದ ಮಾತು ಮನಮಂ ಸಲೆ ಸೋಲಿಸೆ ಪೇಳ್ದು ಲೋಕದೊಳ್॥
ಸಂದ ಜನಾರ್ದನಂ ಸುಕವಿವಲ್ಲಭನಾತನಮುಂದೆ ಗಣ್ಯರೇ।
ಚಂದದ ಬಳ್ಳಿಸಂಕಲೆಯೊಳಕ್ಕರಮಂ ಸೆಱೆಗೆಯ್ವ ಕಕ್ಕಸರ್॥
ಪಳುಕಿನ ಕಪ್ಪುರವಳುಕಿನ। ಮಳಯಜದಿಂಗಡಲ ಪೊಳೆವ ಮುತ್ತಿನ ಬೆಳ್ದಿಂ।
ಗಳ ಸಿರಿಗೆ ಸರಿಗೆ ವರ್ಪುವು। ಪಳಚನೆ ಕವಿಭಾಳನೇತ್ರನಿಡುವ ಪದಂಗಳ್॥
ಉಭಯಕವಿಚಕ್ರವರ್ತಿಯ। ಸಭೆಯಂ ಪುಗಲಣ್ಮವಲ್ತೆ ಪದವಾಕ್ಯಾರ್ಥ್।
ಪ್ರಭವಕಲಂಕಮಲಂಕಾ। ರಭಾವರಸರೀತಿದೂಷಣಾಭಾಸಂಗಳ್॥
*　　*　　*　　*　　*
*　　*　　*　　ನವಸುಪ್ರಯೋಗತ॥
ತ್ವರತೆಗೆ ಬೇಱೆ ಪಂಡಿತರನಳ್ಕುಱೆ ಕೇಳದ ನೋಡದಾಸೆವ।
ಟ್ಟಿರದಸಹಾಯನಲ್ತೆ ಸಕಳಾನ್ಯಯದೊಳ್ ಕವಿಭಾಳಲೋಚನಂ॥
ಪರಮಶ್ರೀಜಿನಪಾದಪಲ್ಲವನಿತಾಂತಂ ನಿರ್ಮಳಂ ಜೈನಮುಂ।
ದಿರನಿರ್ಮಾಣಧನಂ ವಿನೇಯನಿಧಿ ಗಂಗಾನಂದನಂ ಶೌಚಿ ಶಂ॥

ಕರಪುತ್ರಂ ಕವಿ ಕಮ್ಮೆವಂಶನಧಿಕಜ್ಞಂ ಕಾಶ್ಯಪಂ ಮಾನವೋ ।
ತ್ತರನೆಂದೇವೊಗಟ್ವಿಂ ಕವೀಂದ್ರಪರಿಷದ್ಭಾಳಾಕ್ಷನಂ ಜನ್ನನಂ ॥

ಇವನ ಗ್ರಂಥಗಳಲ್ಲಿ—

## 1. ಯಶೋಧರ ಚರಿತೆ.

ಇದು ವರ್ಣಕಪ್ರಬಂಧವು; ಇದರಲ್ಲಿ ಗದ್ಯಭಾಗವೇ ಇಲ್ಲ; ಸುಮಾರು ಎಂಟುಹತ್ತು ವೃತ್ತಗಳು ಹೊರತು ಉಳಿದುವೆಲ್ಲಾ ಕಂದಪದ್ಯಗಳೇ ಆಗಿವೆ. ಈ ಗ್ರಂಥವು 4 ಅವತಾರಗಳಾಗಿ ಭಾಗಿಸಲ್ಪಟ್ಟಿದೆ; ಇದರಲ್ಲಿ ಒಟ್ಟು ಕಂದ ವೃತ್ತ ಸಹ 311 ಇವೆ. ಮಾರಿದತ್ತನೆಂಬ ರಾಜನು ಮಾರಿಗೆ ಬಲಿಕೊಡುವುದಕ್ಕಾಗಿ ಇಬ್ಬರು ಕುಲೀನರಾದ ಹುಡುಗರನ್ನು ಹಿಡಿದು ತರಿಸಿದಾಗ ಅವರು ಹೇಳಿದ ಪೂರ್ವಕಥೆಯಿಂದ ಪರಹಿಂಸಾಸಕ್ತಿಯನ್ನು ಬಿಟ್ಟು ಅವರನ್ನು ಬಿಡುಗಡೆಮಾಡಿ ತಪಂಬಟ್ಟನು—ಎಂಬುದೇ ಇದರ ಕಥಾಸಾರ. ಇದೇ ಕಥೆಯನ್ನು ಈ ಕವಿಯ ಕಾಲಕ್ಕೆ ಹಿಂದೆ ಇತರಕವಿಗಳು ಸಂಸ್ಕೃತದಲ್ಲಿಯೂ ಪ್ರಾಕೃತದಲ್ಲಿಯೂ ಕನ್ನಡದಲ್ಲಿಯೂ ಬರೆದಿದ್ದರೆಂಬಂಶವು ಈ ಪದ್ಯದಿಂದ ತಿಳಿಯುತ್ತದೆ:—

ಕ್ಷಿತಿಯೊಳ್ ಸಂಸ್ಕೃತದಿಂ ಪ್ರಾ । ಕೃತದಿಂ ಕನ್ನಡದಿನಾದ್ಯರಾರೀಕೃತಿಯಂ ।
ಕೃತಿಮಾಡಿದರವರ್ಗಳ ಸ । ನ್ಮತಿ ಕೆಯ್ಗುಡುಗೆಮುಗೆ ಸರಸಪದಪದ್ಧತಿಯೊಳ್ ॥

ಈ ಗ್ರಂಥದ ರಚನಾವಸರವನ್ನೂ ಪ್ರಾಶಸ್ತ್ಯವನ್ನೂ ಕವಿ ಈ ಪದ್ಯಗಳಲ್ಲಿ ಹೇಳಿದ್ದಾನೆ:—

ಶ್ರಾವಕಜನದುಪವಾಸಂ । ಜೀವದಯಾಷ್ಟಮಿಯೊಳಾಗೆ ಪಾರಣೆ ಕವಿಗ ।
ಳ್ಗೀವಸ್ತುಕಥನದಿಂದು । ದ್ಭಾವಿಸೆ ಕವಿಭಾಳಲೋಚನಂ ವಿರಚಿಸಿದಂ ॥
ಇತಿಹಾಸಮೆಂಬ ವಿಮಳಾ । ಮೃತವಾರ್ಧಿಯೊಳೊಗೆದ ಕಲ್ಪಕುಜದಂತೆ ರಸಾ ।
ನ್ವಿತಮಾದೀಕೃತಿ ಬುಧಸಂ । ತತಿಗಕ್ಷಯಸುಖಮನೀವುದೊಂದಚ್ಚರಿಯೇ ॥

ಗ್ರಂಥಾವತಾರದಲ್ಲಿ 20 ನೆಯ ತೀರ್ಥಕರನಾದ ಮುನಿಸುವ್ರತನನ್ನು ಸ್ತುತಿಸಿ ಬಳಿಕ ಸಿದ್ಧಾದಿಗಳನ್ನೂ, ವೀರಸೇನ, ಜಿನಸೇನ, ಸಿಂಹನಂದಿ, ಕೊಂಡಕುಂದ, ಸಮಂತಭದ್ರ, ಗುಣಭದ್ರ, ಪೂಜ್ಯಪಾದ ಎಂಬಿವರುಗಳನ್ನೂ ಹೊಗಳಿದ್ದಾನೆ. ಅನಂತರ—ಹುಲಿ ಪಾಯೆ ಗುರುಗಳ್ 'ಸಳ ಹೊಯ್' ಎಂದು ಕುಂಚದ ಸೆಳೆಯಂ ಕೊಡಲು ಹುಲಿಯನಟ್ಟಿ ಹೊಯ್ಸಳನಾದನು. ಅವನ ಮಗ ವಿನಯಾದಿತ್ಯ; ಆತನ ಪುತ್ರ ಎರೆಯಂಗ; ಅವನ ಸುತ ಬಿಟ್ಟಿದೇವ; ಆತನ ಮಗ ನರಸಿಂಹ; ಅವನ ಪುತ್ರ ವೀರಬಲ್ಲಾಳ—ಎಂದು ಹೊಯ್ಸಳರಾಜರ ಪರಂಪರೆಯನ್ನು ಹೇಳಿ, ವೀರಬಲ್ಲಾಳನು ತನಗೆ ಸ್ವಾಮಿಯಾದುದರಿಂದ ಅವನನ್ನು ವಿಶೇಷವಾಗಿ ಸ್ತುತಿಸಿದ್ದಾನೆ. ಗ್ರಂಥಾಂತ್ಯದಲ್ಲಿಯೂ "ಅಸಹಾಯಶೂರನ ಭುಜಕ್ಕೆ

ಜಯಂ ಸವಸಲ್ಗೆ" ಎಂದು ವೀರಬಲ್ಲಾಳನನ್ನು ಆಶೀರ್ವದಿಸಿದ್ದಾನೆ. ಅವತಾರಗಳ ಅಂತ್ಯದಲ್ಲಿ ಈ ಗದ್ಯವಿದೆ—

ಇದು ಪರಮಜಿನಸಮಯಕುಮುದಿನೀಶರಚ್ಚಂದ್ರ ಚೈತ್ರಚಂದ್ರಮ ಸದಮಳರಾಮ ಚಂದ್ರಮುನೀಂದ್ರಪದಭಕ್ತಂ ಜಾನಕಿ ಮಾಡಿದ ಯಶೋಧರಚರಿತದೊಳ್.

ಈತನ ಬಂಧವು ಲಲಿತವಾಗಿಯೂ ಮಧುರವಾಗಿಯೂ ಗಂಭೀರವಾಗಿಯೂ ಹೃದಯಂಗಮವಾಗಿಯೂ ಇದೆ. ಈತನನ್ನು ಮಧುರನು 'ಕರ್ಣಾಟಕವಿತೆಗೆ ಸೀಮಾಪುರುಷಂ' ಎಂದು ಹೊಗಳಿರುವುದು ಉಚಿತವಾಗಿ ಕಾಣುತ್ತದೆ. ಈತನ ಪದ್ಯಗಳು ನಿರರ್ಗಳವಾಗಿ ಓಡುವುದನ್ನು ನೋಡಿದರೆ ಆಶ್ಚರ್ಯವುಂಟಾಗುತ್ತದೆ.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

### ಮಾರಿಯಗುಡಿ.

ಶಿಶಿರಮನೆ ಪಿಡಿದು ಪರಕೆಗೆ । ಬಸಂತನಲರ್ದೋದ ಮಾವಿನಡಿಮುಂಚಕೆಯೊಳ್ ।
ಕುಸುರಿದಱಿದಡಗಿನಂತೆವೊ । ಲೆಸೆದುವು ತದ್ವನದೊಳುದಿರ್ದ ಮುತ್ತದ ಮುಗುಳ್ಗಳ್ ॥ 743 ॥

ತಾಳುಗೆಯನುರ್ಚಿ ನೆತ್ತಿಯ । ಗಾಳಂ ಗಗನದೊಳೆಬ್ಬಿಲ್ವ ವಾರಿಯ ಬೀರರ್ ।
ಪಾಳಿಯೊಳೆಸೆದರ್ ಪಾಪದ । ಜೋಳದ ಬೆಳಸಿಂಗೆ ಬೆರ್ಚುಗಟ್ಟಿದ ತೆಱದಿಂ ॥ 744 ॥

ದೆಸೆದೆಸೆಗೆ ನರಶಿರಂ ತೆ । ತ್ತಿಸಿ ಮೆಱೆದುವು ಮಗಿಲೊಳಬ್ಬೆ ಪೇರಡಗಿನ ಪೆ ।
ರ್ಬಸನದೆ ಪೊಱಗಣ ಜೀವ । ಪ್ರಸರಮುಮುಂ ಪಲವು ಮುಖದಿನವಲೋಕಿಪ [ ಪೋಲ್ ॥ 745 ॥

ಮಾರಿ ಮಲಯಾನಿಲಂ ನವ । ನೀರಜವನಮೆಂಬ ಕೆಂಡದೊಳ್ ದಂಡನಮ ।
ಸ್ಕಾರಂ ಬಂದಪನಿತ್ತನ । ಧಾರಿಪುದೆಂಬಂತಿರುಲದುವರಗಿಳಿ ಬನದೊಳ್ ॥ 746 ॥

### ವಸಂತ.

ಬಾಳಲರ್ಗುಡಿ ಪಿಕರುತಿ ಬಾ । ಯ್ಕೇಳಿಕೆ ಮಾಂದಳಿರೆ ಕೆಂಪುದೀವಿಗೆಯೆನೆ ಭೂ ॥
ಪಾಳಂ ಬರೆ ಶೋಧಿಪ ವನ । ಪಾಳನವೋಲ್ ಮುಂದೆ ಬಂದುದಂದು ವಸಂತಂ ॥ 747 ॥

ಪೊಂಬಾಳೆ ಚಾಮರಂ ಚಂ । ದ್ರಂ ಬೆಳ್ಗೊಡೆ ಕೇಳಿಶಿಖರಿ ಸಿಂಹಾಸನಮಾ ।
ಯ್ತಿಂಬಿನಿಗಮುಂಗಜಂ ಮಾ । ವೆಂಬ ಕುಮಾರಂಗೆ ಪಟ್ಟಮಂ ಕಟ್ಟಿಸಿದಂ ॥ 748 ॥

ಉಪ್ಪರಿಗೆ.

ಕಾರಿರುಳೊಳಮೆಳವಿಸಿಲಂ । ಪೂರಂಬಲಿಯಿಪುವು ಬೀದಿಯೊಳ್ ನಿಜರುಚಿಯಿಂ ।
ಹೀರೆಯ ಹೂವಿನ ಬಣ್ಣದ । ನೇರಾಣಿಯ ಕುಸುರಿವೆಸದ ನೆಲೆಮಾಡಂಗಳ್ ॥749॥

ಅರಮನೆ.

ಪರಿಮಳದ ತೂಂಬನೆತ್ತಿದ । ನರಲಂಬಂ ಜನಮನೋವನಕ್ಕೆನೆ ಕಾಳಾ ।
ಗುರುಧೂಮಲತಿಕೆ ಜಾಳಾಂ । ದರದಿಂದೊಗೆದುದು ಕಪೋತಪಕ್ಷಚ್ಛುರಿತಂ ॥750॥

ನವಿಲು.

ನವರತ್ನದ ಪಂಜರದೊಳ್ । ದಿವಿಜಶರಾಸನದ ಮುಱಿಯನಿರಿಸಿದವೋಲ್ ಸು ।
ತ್ತುವ ಸೋಗೆಯ ಸುತ್ತಿನೊಳಾ । ಡುವ ಕೇಕಿಯ ಭಂಗಿ ಲೋಕಮಂ ಸೋಲಿಸುಗುಂ
॥ 751 ॥

ವೀರಬಲ್ಲಾಳ.

ಪರನೃಪರ ರಾಜ್ಯಲಕ್ಷ್ಮ್ಯಾ । ಕುರುಳಾಕರ್ಷಣದೆ ನೀಳ್ದತೋಳ್ ಮೆಜಿವುವು ಪೇ ।
ರುರದೊಳ್ ನೆಲಸಿದ ಲಕ್ಷ್ಮೀ । ಕರಿಣಿಗೆ ಬಾಳಿಸಿದ ರನ್ನದಮಳ್ಗಂಬದವೋಲ್
॥ 752 ॥

ನಿನಗೆ ಶುಭನೆಂದ ವಂದಿಯ । ಮನೆಯಂಗಣದೊಳಗೆ ಪಣ್ತು ಪರ್ವಿದ ಮಂದಾ ।
ರನಮೇರುಪಾರಿಜಾತದ । ಬನದೊಳ್ ನಿರಿ ಮೆಜಿವುದಲ್ತೆ ವನಕೇಳಿಗಳಂ[1]
॥ 753 ॥

ಬಳಿಗೋದುದು ಕೀರ್ತಿ ದಿಶಾ । ಕಳಭಂಗಳ ನಿಗ್ಗವಂಗಳೊಳ್ ರಿಪುಕಾಂತಾ ।
ವಳಿಯನೆ ಭವತ್ಪ್ರತಾಪಂ । ಬಳಿಗಳಿಯಿಸೆ ತಾನದರ್ಕೆ ಮಚ್ಚರಿಸುವವೋಲ್
॥ 754 ॥

## 2. ಅನಂತನಾಥಪುರಾಣ.

ಇದು 14 ನೆಯ ತೀರ್ಥಕರನಾದ ಅನಂತನಾಥನ ಚರಿತವು; 14 ಆಶ್ವಾಸಗಳಾಗಿ ಭಾಗಿಸಲ್ಪಟ್ಟಿದೆ. ಈ ಗ್ರಂಥವನ್ನು ಕವಿ "ಅರುಹನ ಮೂರ್ತಿಯಂತಿರೆ ನಿರಾಭರಣಂ ಮೆಜಿಯಲ್ಕೆ ಪೇಳ್ದಪೆಂ ಚರಿತಪುರಾಣಮಂ" ಎಂಬ ತನ್ನ ಪ್ರತಿಜ್ಞೆಗೆ ಅನುಸಾರವಾಗಿ ವಿಶೇಷವಾಗಿ ಅಲಂಕಾರಗಳಿಲ್ಲದಂತೆ ಬರೆದಿದ್ದಾನೆ. ಈ ಪುರಾಣಕ್ಕೆ ದೋರಸಮುದ್ರದ ಶಾಂತೀಶ್ವರನ ಬಸದಿಯಲ್ಲಿ ಪ್ರತಿಷ್ಠೆಮಾಡಿಸಿದಂತೆ ಹೇಳುತ್ತಾನೆ.

ಗ್ರಂಥಾವತಾರದಲ್ಲಿ ಅನಂತನಾಥನ ಸ್ತುತಿಯಿದೆ. ಬಳಿಕ ಕವಿ ಸಿದ್ಧಾದಿಗಳನ್ನೂ ಸರಸ್ವತಿಯನ್ನೂ ಯಕ್ಷಯಕ್ಷಿಯರನ್ನೂ ಜೈನಶಾಸನವನ್ನೂ ಶ್ರುತಕೇವಲಿ

1. ಈ ಪದ್ಯವು ಸೂಕ್ತಿಸುಧಾರ್ಣವದಲ್ಲಿ ಉದಾಹೃತವಾಗಿದೆ.

ಗಳನ್ನೂ ಹೊಗಳಿ ಅನಂತರ ಗೃಧ್ರಪಿಂಛನಿಂದ ಸ್ವಗುರುವಾದ ಗಂಡವಿಮುಕ್ತರಾಮ ಚಂದ್ರದೇವನ ವರೆಗೆ[1] ಗುರುಗಳನ್ನು ಪರಿವಿಡಿಯಿಂದ ಸ್ತುತಿಸಿದ್ದಾನೆ. ತನ್ನ ಹೆಂಡತಿ ಲಕುಮಾದೇವಿಯ ಗುರುಗಳ ಪ್ರಸಿದ್ಧಾಚಾರ್ಯರೊಳಗೆ—ಜಾವಳಿಗೆಯ ಮುನಿ ಚಂದ್ರ, ಅವನ ಶಿಷ್ಯ ಕುಲಭೂಷಣ; ಸಕಲಚಂದ್ರ, ಇವನ ಮಗ ಮಾಧವಚಂದ್ರ, ಇವನ ಶಿಷ್ಯ ಬಾಲಚಂದ್ರಕವಿಕಂದರ್ಪ—ಇವರುಗಳನ್ನು ಹೊಗಳಿದ್ದಾನೆ. ಗ್ರಂಥಾಂತ್ಯದಲ್ಲಿ "ನರಸಿಂಹಂ ಸ್ಥಿರರಾಜ್ಯೋದ್ಭವಲಕ್ಷ್ಮ್ಯಿಯಿಂದೆ ಸುಖಮಿರ್ಕೆ" ಎಂದು ಈ ಗ್ರಂಥರಚನಾಕಾಲದಲ್ಲಿದ್ದ ತನ್ನ ಸ್ವಾಮಿಯಾದ ವೀರನರಸಿಂಹನನ್ನು (1220—1235) ಆಶೀರ್ವದಿಸುತ್ತಾನೆ. ಆಶ್ವಾಸಗಳ ಕೊನೆಯಲ್ಲಿ ಈ ಗದ್ಯವಿದೆ :—

ಇದು ಪರಮಜಿನಸಮಯವನವಸಂತಸಂತಾನಾರಾಮ ರಾಮಚಂದ್ರಪ್ರಸಾದಾಸಾದಿತರತ್ನತ್ರಯಾಭರಣಕಿರಣಪ್ರಸನ್ನಾಂತಃಕರಣ ಕವಿಚಕ್ರವರ್ತಿಬಿರುದ ಕವಿಭಾಳಲೋಚನ ಜನಾರ್ದನದೇವವಿರಚಿತಮಪ್ಪ ನಂತನಾಥಪುರಾಣದೊಳ್.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ :—

ವಸಂತ.

ನನೆದೋಱುತ್ತಿರ್ಗಂತಿ ಮುಂತೆ ಪನೆಗಳ್ ತೋರ್ಪಂತೆ ತೆಂಗಾಳಿ ಕೆಂ ।
ಗೊನರೊಳ್ ಪಟ್ಟುಡಿಯಿಟ್ಟುದೊಳ್ನಗೆ ಪೊದಳ್ದಿತ್ತಬ್ಜದೊಳ್ ಕೋಕಿಳಂ ॥
ಕೊನರಂ ಕರ್ಚಿ ತೊದಳ್ದರಂಗೆಡೆದುದೆತ್ತಂ ನಂದನಶ್ರೀಯ ನಂ ।
ದನನಾನಂದನನನ್ಯಜಂಗಣುಗನಾಯ್ತಂತಾವಸಂತಾಗಮಂ ॥ 755 ॥

ಬೆಳುದಿಂಗಳು.

ಬಳವೈರಿಯೆಂಬ ಸಾಧಕ । ನಿಳಿಯಂ ಪೊಸಮೂಸೆಮಾಡಿ ಶಶಿಮಂಡಲಮಂ ।
ಗುಳಿಗೆಯಿಡೆ ತಿಮಿರಕಾಳಿಕೆ । ತಿಳಿದಂತಿರೆ ಜಳಕನಾಯ್ತು ಪೊಸವೆಳ್ದಿಂಗಳ್ ॥756॥

ಕುಸುಮಂ ಗಂಧಾನುಮೇಯಂ ಗಮನಕಮನಹಂಸಾಳಿ ಶಬ್ದಾನುಮೇಯಂ ।
ರಸನಾಸ್ವಾದಾನುಮೇಯಂ ಮಧು ಮಲಯರುಹಕ್ಕೌಮಕರ್ಪೂರಮುಕ್ತಾ ॥
ವಿಸರಂ ಸ್ಪರ್ಶಾನುಮೇಯಂ ದಿಟಮೆನೆ ಘಟಿತಂಬೆತ್ತ ಬೆಳ್ದಿಂಗಳಂ ತು ।
ಟ್ಟಿಸೆ ಲೋಕಂ ಚಂದ್ರಕಾಂತೋಪಲದ ಮಯಣದಿಂ ಮಾಡಿದಂತಿರ್ದುದಾಗಳ್ ॥
॥ 757 ॥

1. ಗೃಧ್ರಪಿಂಛ, ಕೊಂಡಕುಂದ, ಜಟಾಸಿಂಹನಂದಿ, ಭೂತಬಲಿ, ಪುಷ್ಪದಂತ, ಜಿನಸೇನ, ವೀರಸೇನ, ಸಮಂತಭದ್ರ, ಗುಣಭದ್ರ, ಪೂಜ್ಯಪಾದ, ಅಕಳಂಕ, ಕಾಣೂರ್ಗಣದ ಇಂದ್ರನಂದಿ, ಗುಣಚಂದ್ರ, ಇವನ ಮುಕ್ಕಳು ಕನಕಚಂದ್ರ ಮಾಧವಚಂದ್ರರು, ಮಾಧವಚಂದ್ರ ಶಿಷ್ಯ ತನ್ನಗುರು ಗಂಡವಿಮುಕ್ತಶಿಖಾಮಣಿ ರಾಮಚಂದ್ರದೇವಮುನೀಂದ್ರ.

ಮುಗಿವ ಸರೋಜಮಾಲೆಗಮರಲ್ಪ ಸಿತೋತ್ಪಲಮಾಲೆಗಂ ಮನಂ ।
ತೆಗೆಬಗೆಯಾಗೆ ಸೈರಿಸದೆ ಷಟ್ಪದಸಂತತಿ ರಾಜಬಾಧೆಯಿಂ ॥
ಸುಗಿವ ನವಪ್ರಸಾದಫಲದಿಂದವಿವಾಪ್ತಜನಕ್ಕೆ ಕೂರ್ತ ಬಂ ।
ಧುಗಳೆಡೆಯಾಡುವಂತಿರೆಡೆಯಾಡಿದುವಂಬುರುಹಾಕರಂಗಳೊಳ್ ॥ 758 ॥

## ಸಂಪಗೆ.

ಸೊಡರ್ಗುಡಿಯುಗೆಯಂ ಪಚ್ಚಿಯ । ಪಡಲಗೆಗಳೊಳಡಕಿಲಿಟ್ಟು ರತಿ ಪೊಯ್ದುವೋಲೇಂ ।
ಜಡಿದುದೊ ಸಂಪಗೆ ನನೆಯಿಂ । ಜಡಿದುದು ಮಧುಲಕ್ಷ್ಮಿ ತೊಟ್ಟ ಪೊಸಪೊಂ
[ದೊಡವಂ ॥ 759 ॥

## ಮಲ್ಲಿಗೆ.

ಮುಳಿದುಲ್ಲಾದೋಪರಳ್ಳಿರ್ದೆ ಪುಗುಟ್ಟುರಿವಂತೆ ಕರಂ ಮುಗುಳ್ತು ನಾ ।
ಣೊಳಗುಸಡಿಲ್ಪಿನಂ ಪೊರೆ ಸಡಿಲ್ದು ಕದಂಪು ಬೆಳರ್ತು ಬಾಡಿ ಪೊ ॥
ಟ್ಟಳಿಸಿ ಬೆಳರ್ತ ಮುದ್ರಿಸಿದ ಬಾಯ್ಗಳಲರ್ ಬಿರಿವಂತು ಕಂಪು ಕೆ।
ಯ್ಕೊಳೆ ಬಿರಿದತ್ತು ತುಂಬಿ ನೆಜೀವಲ್ಲಿಗೆ ಮಲ್ಲಿಗೆ ಸಂತೆಯಂತೆವೋಲ್ ॥ 760 ॥

## ಕೋಗಿಲೆ.

ಎಳಲತೆ ಪೆಕ್ಕಣಕ್ಕೆ ತಳಿರಂ ತೆಗೆದುಟ್ಟಳದರ್ಕೆ ನಟ್ಟುವಂ ।
ಮಳಯಸಮೀರಣಂ ಪನಸರಂಗಳೊಳಿಂತಿವೆ ಪಣ್ಣಿಬಂದ ಮ ॥
ದ್ದಳಿ ಮಧುದೂತಿ ನಾಗಲತೆ ಮಲ್ಲಿಗೆ ಮಾಳತಿ ಬನ್ನಿಮೆಂದು ಸೂ।
ಟ್ಪಿಳನವೊಲೆತ್ತಲುಂ ಕರೆಗುಮಾಬನದೊಳ್ ಕಿಸುಗಣ್ಣಿ ಕೋಕಿಲಂ ॥ 761 ॥

## ಸಿಂಹೀಪ್ರಸವ.

ಕಡೆವಾಯಂ ಬಿರ್ಚಿ ಬೆನ್ನಂ ಕುಸಿದು ನೆಗಪಿ ವಾಲಾಗ್ರಮಂ ಬೀನೆಯಿಂದೂ।
ಳಿಡುತುಂ ಶೈಲಾಗ್ರದೊಳ್ ಕುಕ್ಕುಱಿಸಿ ಮುಱಿಕದಿಂದೀಂಬ ಸಿಂಹೀಕಿಶೋರಂ ॥
ನಡುಸೂಲೊಳ್ ಸಿಲ್ಕಿ ಕಣ್ಣಂ ತೆಱೆದಿಭಸತಿಯಂ ತಾಱಲೊಳ್ ಕಂಡು ಕಾಯ್ವಂ ।
ನಡುವಾಯ್ದಾತಾಯ್ಗೆ ದುಃಖಪ್ರಸವಸಮಯದೊಳ್ ತಂದುದಂತೊಂದಲಂಪಂ
॥ 762 ॥

## ಸೌಂದರ್ಯ.

ಅಲರಂಬಂ ಶಶಿಬಿಂಬದಿಂ ಸಮೆದವೋಲ್ ಕೂರ್ಪಿಂಗಡರ್ಪಾದಕ।
ಣ್ಮಲರ್ಗಳ್ ದರ್ಪಣರತ್ನಮಂ ತಿರುಳ ಮಿಂಚಿಂದೊಪ್ಪವಿಟ್ಟಂತಿರು ॥
ಜ್ಜ್ವಲಿಪಾಸ್ಯಂ ಪೊಸಮುತ್ತನಾಯ್ದುಮರ್ದಿನೊಳ್ ತೊಯ್ದಂತೆ ನೇರ್ಪಟ್ಟ ನಿ।
ರ್ಮಲದಂತಚ್ಛವಿ ಬೀಡಿದರ್ಗ್ಗೆ ವರವೀವಂತಾಯ್ತು ಮಾಕಾಂತೆಯಾ ॥ 763 ॥

## ಕವಿತ್ವದ ಸಹೃದಯಸಾಪೇಕ್ಷತೆ.

ಎನಿತನೊಜಿಲ್ದು ಪೇಟ್ಪಿ ಕವಿಯೇವನದಂ ಪೆಸರಿಟ್ಟುಮೆಚ್ಚಬ।
ಲ್ಲನನಜಿಸಲ್ಕೆ ವೇಱ್ಪುದವನಂ ಜಗದೊಳ್ ಪಡೆಯಲ್ಕೆ ಬಾರದಾ॥
ತನ ಮುಖದಿಂದಮಲ್ಲದು ಸಲ್ಲದು ಕಟ್ಟಿಯುಮೇನೊ ಮಾಲೆಗಾ।
ಜನ ಪೊಸಬಾಸಿಗಂ ಮುಡಿವ ಭೋಗಿಗಳಲ್ಲದೆ ಬಾಡಿಪೋಗದೇ ॥ 764 ॥

ಈತನು ಬರೆದಿರುವ **ಶಾಸನಗಳಲ್ಲಿ**—

## ಚೆನ್ನರಾಯಪಟ್ಟಣ 179. 1191.

ಇದು ತಾವ್ರಶಾಸನವು. ಇದರಲ್ಲಿ ವೀರಬಲ್ಲಾಳನ ಶ್ರೀಕರಣಪ್ರಧಾನನಾದ ಮಾಚಿದೇವನನು ಅಗ್ರಹಾರವನ್ನು ಬಿಡಿಸಿಕೊಟ್ಟಂತೆ ಹೇಳಿದೆ. ಇದರಿಂದ ಒಂದೆರಡು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

### ವರಾಹ.

ಶ್ರೀವಧುವಿಂಗೆ ಪೀಲಿದಲ್ಲಿಯಿರ್ಪವೊಲಿರ್ದುದು ಕೋಡೊಳಿರ್ದ ಧಾ।
ತ್ರೀವಳಯಂ ಸಮುದ್ರಮದು ಝಲ್ಲರಿಯಿರ್ಪವೊಲಿರ್ದುದಾಂತ ದಂ॥
ಷ್ಟ್ರಾವರಶೋಭೆ ತೆತ್ತಿಸಿದ ಮುತ್ತಿನ ಕಾವುಪೊಲಿರ್ದುದಿಂತು ಸ।
ದ್ಭಾವಮನಾಳ್ದ ಸೂಕರವರಂ ಪೊರೆಗೀಗಿರಿದುರ್ಗಮಲ್ಲನಂ ॥ 765 ॥

### ಹೊಯ್ಸಳರ ಧ್ವಜ.

ಅಲಗಿಂ ಸಿಂಗಮನಿಜ್ಜದನ। ಕಲಿತನಮಂ ನಗುವ ತೆಜದೆ ಮೆಜ್ವುದು ಸೆಳೆಯಿಂ।
ಪುಲಿಪೊಯ್ದ ಕುಜುಪು ಪೊಯ್ಸಳ। ಕುಲತಿಲಕರ ಮತ್ತಗಜದ ಟೆಕ್ಕೆಯದೊಳೀಗಳ್
॥ 766 ॥

## ತರೀಕೆರೆ 45. 1197.

ಇದರಲ್ಲಿ ವೀರಬಲ್ಲಾಳನ ದಂಡನಾಯಕನಾದ ಅಮಿತನು ತಾನು ಪ್ರತಿಷ್ಠೆ ಮಾಡಿದ ಅನ್ಯತೇಶ್ವರದೇವರ ಅಂಗಭೋಗಾದಿಗಳಿಗೆ ದತ್ತಿಯನ್ನು ಬಿಟ್ಟಂತೆ ಹೇಳಿದೆ. ಈ ಶಾಸನದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

### ಹರಿಹರ.

ಸಿರಿಯಲರ್ಗಣ್ಣ ಬೆಳ್ದಿಳಗಿನಿಂ ಪುದಿದಂಬುಜನಾಭನೀಶನಂ।
ತಿರೆ ಗಿರಿಜಾಕಟಾಕ್ಷರುಚಿಗಳ್ ಪುದಿದೀಶನುಮಬ್ಜನಾಭನಂ॥
ತಿರೆ ಜನಸಂಸ್ತವಂ ತಮಗೆ ಪಲ್ಲಟಮಪ್ಪಿನಮೊಪ್ಪಿ ತೋಱುವಾ।
ಹರಿಹರದೇವರೊಲ್ದಮಿತನಂ ಪರಿರಕ್ಷಿಸುತಿರ್ಕೆ ಸಂತತಂ ॥ 767 ॥

ಬ್ರಹ್ಮ.

ಸಿರಿಯಂ ಕೌಸ್ತುಭರತ್ನಮಂ ಹರಿಯನಂತಾಶಂಖಮಂ ಚಕ್ರಮಂ।
ಭರದಿಂ ಪೇಱಿ ಬಹಿತ್ರದಂತಿರೆಸೆದಿರ್ದಂ ಶೇಷನಾಕ್ಷೀರಸಾ॥
ಗರದೊಳ್ ದೇವನ ನಾಭಿಪದ್ಮದ ಮೃಣಾಳಂ ಕೂವಕಂಬಂಬೊಲ।
ಚ್ಚರಿಯಾಗಿರ್ದುದು ಕರ್ಣಧಾರನವೊಲಿರ್ದಂ ಪುಟ್ಟಿ ಪದ್ಮೋದ್ಭವಂ ॥ 768 ॥

ಎರೆಯಂಗ.

ನೆಱವಿಂದಂ ವೈರಿವೃಂದಂ ಕವಿವುದುಮನಿತೊಂದಂ ರಣೋತ್ಸಾಹದಿಂದಂ।
ತಱುದೊಟ್ಟಲ್ ಸೀಳ್ದು ಮೆಟ್ಟಲ್ ಯಮಪುರಿಗಿರದಟ್ಟಲ್ ಚಲಂಮುಟ್ಟಿ ಕಟ್ಟಲ್॥
ನೆಱೆದೆತ್ತಂ ಕೆಯ್ದುವೊತ್ತಂ ವಸುಧೆಯೊಳಗೆ ಮತ್ತಂ ಜಸಂಬೆತ್ತನಾಸಂ।
ದೆಱೆಯಂಗಂ ವೀರಗಂಗಂ ರಿಪುತಿಮಿರಪತಂಗಂ ಜಯಶ್ರೀಭುಜಂಗಂ ॥ 769 ॥

ವೀರಬಲ್ಲಾಳ.

ಆರೆಣೆಯೆಂಬೆನಳುಂಬದ। ಬೀರಮನೀಜಗಮನಾವಗಂ ಸುತ್ತಿದ ಮು।
ನ್ನೀರೆಂಬುದು ಬಿರುದಿನ ಬೆ। ಳ್ಳಾರೆನಿಸಿದುದದಟರಾಯಕೋಳಾಹಳನಾ[1] ॥770॥

---

## ನಾಗದೇವ. 1217.

ಕಡೂರು 129 ನೆಯ ಶಾಸನದಲ್ಲಿ (ಶಕ 1129) ಈತನನ್ನು "ಕವಿತಿಳಕ" ಎಂದು ವಿಶೇಷಿಸಿ ಹೇಳಿದೆ. ಈತನು ಗೌತಮಗೋತ್ರದವನು. ಇವನ ತಂದೆ **ನಾಗದೇವ**, ತಾಯಿ ಚಾಮವ್ವೆ. ಈತನು ಆವ ಗ್ರಂಥವನ್ನು ಬರೆದಿದ್ದಾನೆಯೋ ತಿಳಿಯದು.

---

## ಸೋಮರಾಜ. 1222.

ಇವನು **ಶೃಂಗಾರಸಾರ** ಎಂಬ ಗ್ರಂಥವನ್ನು ಬರೆದಿದ್ದಾನೆ. ಇದಕ್ಕೆ **ಉದ್ಭಟ ಕಾವ್ಯ** ಎಂಬ ಹೆಸರೂ ಉಂಟು.

ಈತನು ವೀರಶೈವಕವಿ; ರಾಜನಾಗಿದ್ದಂತೆ ತಿಳಿಯುತ್ತದೆ. ಇವನ ಪ್ರಪಿತಾಮಹನು ಚಂದ್ರವಂಶೋತ್ಪನ್ನನಾದ ತಿರುಮಲರಾಜ, ಪಿತಾಮಹನು

1. ಈ ಪದ್ಯವು ಯಶೋಧರಚರಿತೆಯಲ್ಲಿಯೂ ದೊರೆಯುತ್ತದೆ.

ರಾಯಣರಾಜ, ತಂದೆ ಇಂದುಶೇಖರರಾಜ.[1] ಈ ವಂಶದ ರಾಜರು ಎಲ್ಲಿ ರಾಜ್ಯವಾಳುತ್ತಿದ್ದರೋ ತಿಳಿಯದು. ಆದರೆ ಪಶ್ಚಿಮತೀರದಲ್ಲಿ ಆಳುತ್ತಿದ್ದ ವೀರಶೈವಮತಾವಲಂಬಿಗಳಾದ ಚೌಟರಾಜರಲ್ಲಿ ತಿರುಮಲರಾಯ, ಚಂದ್ರಶೇಖರ ಎಂಬ ಹೆಸರುಗಳು ದೊರೆಯುತ್ತವೆ. ಈ ಕವಿ ಆ ವಂಶದ ದೊರೆಯಾಗಿರಬಹುದೋ ಏನೋ ತಿಳಿಯದು.

ತನ್ನ ಗ್ರಂಥವನ್ನು ರಾಯಸದ ಲಿಂಗರಸನು ಬರೆಯಲು ತಾನು ನಿರ್ಮಿಸಿದಂತೆ ಹೇಳುತ್ತಾನೆ.[2]

ಈ ಗ್ರಂಥವನ್ನು ಶಕ 1144 ನೆಯ ಚಿತ್ರಭಾನುವಿನಲ್ಲಿ–ಅಂದರೆ 1222 ರಲ್ಲಿ–ಬರೆದುದಾಗಿ ಈ ಪದ್ಯದಲ್ಲಿ ಹೇಳಿದ್ದಾನೆ:—

ಜನನಾಥೋತ್ತಮಸೋಮರಾಜನುಸಿರ್ದೀಕಾವ್ಯಂ ವಲಂ ಶಾಲಿವಾ ।
ಘನಶಾಕಾಬ್ದಮದೆಯ್ದೆ ಸಾಸಿರದನೂಱುಂ ಸಂದ ನಾಲ್ವತ್ತುಸಾ ॥
ಳ್ಕನೆಯಾರಂಜತಚಿತ್ರಭಾನುವ ವರಾಶ್ವೀಜೋತ್ತಿತ್ಥೈಕಾದಶೀ ।
ವನಜಾರಾತಿತನೂಜವಾಸರದೊಳಾದತ್ತಲ್ಲಮಂಗರ್ಪಿತಂ ॥

ಪೂರ್ವಕವಿಗಳಾದ **ಹರೀಶ್ವರ** (ಸು. 1165), **ಕೆರೆಯ ಪದ್ಮರಸ** (ಸು. 1165), **ಪಾಲ್ಕುರಿಕೆಸೋಮನಾಥ** (ಸು. 1195) ಇವರನ್ನು ಈ ಪದ್ಯದಲ್ಲಿ ಸ್ತುತಿಸಿದ್ದಾನೆ:—

ಪ್ರಮಥಾನೀಕಕಥಾರ್ಣವೇಂದು ಹರಿದೇವಾಚಾರ್ಯನಂ ಧೈರ್ಯನಂ ।
ಸಮುದಂಚದ್ಭೃಸ್ತವಾಮ್ರಮಹೀಜಾರಾಮನಂ ಸೋಮನಂ ॥
ವಿಮಲಜ್ಞಾನಸುದೀಪಿಕಾಸ್ಫುರಿತಚೇತಸ್ಸದ್ಮನಂ ಪದ್ಮನಂ ।
ಕ್ರಮದಿಂದಂ ಬಲಗೊಂಡು ಪೇೞ್ವೆನೊಸೆದಾನೀಕಾವ್ಯಮಂ ಸೇವ್ಯಮಂ ॥

ತನ್ನ ಕವಿತಾಚಾತುರಿಯನ್ನು ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ:—

ಚಂದ್ರಮರೀಚಿಯಂತೆ ತನಿಮಾವಿನ ಪಣ್ಗಳ ತಂದಲಂತೆ ದೇ ।
ವೇಂದ್ರಮಹೀಜದಂತೆ ಮಲಯಾನಿಲನಂತೆ ವಸಂತನಂತೆ ಸ ॥

---

1. ಬಿಸಜಾರಾತಿಕುಲೋದ್ಭವಂ ತಿರುಮಲಕ್ಷ್ಮೋಣೀಧರಂ ತನ್ನರೇಂ।
ದ್ರಸುಪುತ್ರಂ ನುತರಾಯಣೋರ್ವಿಪತಿ ತದ್ರಾಜನ್ಯರಾಣ್ಮಂದನಂ॥
ವಸುಧೇಶೋತ್ತಮನಿಂದುಶೇಖರನೃಪಂ ತದ್ಭೂಪಜಂ ಸೋಮನೊ।
ಲ್ಲಸದೀಸತ್ಕೃತಿ ಸಜ್ಜನರ್ಕಳ ಮನಕ್ಕಂಟಪ್ಪುದೇಂ ಜೋದ್ಯಮೇ॥

2. ಎನ್ನೆರ್ದೆವಂದ ರಾಯಸದ ಲಿಂಗರಸಂ ಬರೆಯಲ್ ಸಮಂತುಟಾಂ।
ಸನ್ನುತಶಂಭುಭಕ್ತರ ಪದಾಂಬುರುಹಂಗಳನೊಲ್ದು ಪೊತ್ತು ನಿ॥
ರ್ಭಿನ್ನವಿಲಾಸಮಂ ಪಡೆದು ನಿರ್ಮಿಸಿದೀಕೃತಿ.

ದ್ಯುಂಧ್ರಸುಧಾಬ್ಧಿಯಂತೆ ನವಚಂಪಕಮಂಜರಿಯಂತೆ ಸೋಮರಾ ।
ಜೇಂದ್ರನ ಕಬ್ಬದಿಂಪು ಬುಧರಂ ಬಗೆಗೊಳ್ವುದಿಳಾತಳಾಗ್ರದೊಳ್ ॥
ನಲ್ಲಳ ಬೇಟವಾತೊ ಶುಕಚಾರುನಿನಾದಮೊ ವಾಗ್ವಧೂಟಿಕಾ ।
ವಲ್ಲಕಿಯೊಪ್ಪವಿಂಚರಮೊ ಚೈತ್ರಪಿಕಧ್ವನಿಯೋ ಸಮಂತು ಪೂ ॥
ವಿಲ್ಲನ ಚಾಪಸಂಜನಿತಮೋಹನನಾದಮೊ ಸೋಮರಾಜಭೂ ।
ವಲ್ಲಭನಿಂಪುವೆತ್ತ ವಚನಾಮೃತಮೋ ವಿಬುಧಾನುರಾಗಮೋ ॥
ಹಿಮರುಚಿಮಂಡಲಂ ನವಚಕೋರಿಗೆ ಚಾದಗೆಗಂಬುದಾಗಮಂ ।
ವಿಮಲವಸಂತಸಂಪದಮದನ್ಯಭೃತಕ್ಕೆ ಸುಧಾಬ್ಧಿ ಹಂಸೆಗು ॥
ದ್ಗಮಮೆಳದುಂಬಿಗೊಂದಿನಿತರೋಚಕಮಪ್ಪುದೆ ಸೋಮರಾಜಚಂ ।
ದ್ರಮನ ವಚಸ್ಸುಧಾಲಹರಿ ಸಜ್ಜನಸಂತತಿಗೇನಸಹ್ಯಮೇ ॥

ಇವನ ಗ್ರಂಥ

## ಶೃಂಗಾರಸಾರ.

ಇದು ಕುಮಾರಪಾಲ ಭೂಜರ್ಜರನ ಅಥವಾ ಉದ್ಭಟನ ಚರಿತ್ರೆಯಾದು ದರಿಂದ ಇದಕ್ಕೆ ಉದ್ಭಟಕಾವ್ಯ ಎಂಬ ಹೆಸರೂ ಉಂಟು. ಇದು 12 ಆಶ್ವಾಸ ಗಳಾಗಿ ಭಾಗಿಸಲ್ಪಟ್ಟಿದೆ. ಈ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಈ ಪದ್ಯಗಳಲ್ಲಿ ಹೇಳಿದ್ದಾನೆ :—

ವಿಧೃತಾಲಂಕಾರದಿಂದಂ ನವಯುವತಿಯಪೋಲ್ ಲಕ್ಷ್ಮಣಸ್ಫೂರ್ತಿಯಿಂದಂ ।
ವಿಧುಜೃಂಭದ್ವಿಂಬದಂತುಜ್ಜ್ವಲರಸಮಯದಿಂದಂ ಮನೋಜ್ಞೀಕ್ಷ್ವಂತು ॥
ದ್ಬುಧತತ್ವಾನಂದದಿಂದಂ ತ್ರಿದಶಕುಜದಪೋಲ್ ಧಾತ್ರಿಯೊಳ್ ಶೋಭಿಕುಂ ಸ ।
ನ್ಮಧುರಂಬೆತ್ತಿರ್ಪ ಕಾವ್ಯಂ ಸುಜನನಿಕರಸೇವ್ಯಂ ವಿಭಾವ್ಯಂ ಸುನವ್ಯಂ ॥
ಸರಸರ ಚೇತನೋತ್ಪಲಕೆ ಪೂರ್ಣಹಿಮಾಂಶುಮರೀಚಿಯಾಗೆ ಬ ।
ಲ್ಲರ ಕವಿಗಳ್ಗೆ ಮಾಣಿಕದ ಮಂಜರಿಯಾಗೆ ಪಳಂಚದೋದುವ ॥
ಕ್ಕರಿಗರ ಜಿಹ್ವೆಗಿಂಪಮರ್ದ ನೂತ್ನತರಾಮೃತಧಾರೆಯಾಗೆ ಕೂ ।
ರ್ತೊರೆವೆನಪಾರಸಾರಗುಣಬೃಂದಮನೀರುಚಿರಪ್ರಬಂಧಮಂ ॥

ಚಂದ್ರವಂಶದ ದೊರೆಯಾದ ಉದ್ಭಟನು ಭಲ್ಲಕೀಪುರವನ್ನು ಆಳುತ್ತಿದ್ದನು. ಈತನು ದೇವಲಋಷಿಯ ಯಜ್ಞಸಂರಕ್ಷಣಾರ್ಥವಾಗಿ ಹೋಗಿ ಯಜ್ಞವಿಘ್ನಕಾರಿಯಾದ ನಿಘೃರ್ಜಾಸುರನನ್ನು ಸಂಹಾರಮಾಡಿ ಸುಧರ್ಮನೆಂಬ ಚೋಳರಾಜನ ಸೌಂದರ್ಯವತಿ ಯೆಂಬ ಮಗಳನ್ನು ಮದುವೆಮಾಡಿಕೊಂಡು ತನ್ನ ರಾಜಧಾನಿಗೆ ಬಂದುಸೇರಿ ಪತ್ನಿಯೊಡನೆ ಅಕ್ಷಕ್ರೀಡೆಯಾಡುತ್ತಿರುವಾಗ ಆಕಾಶದಲ್ಲಿ ಕೈಲಾಸಕ್ಕೆ ಹೋಗುತ್ತಿದ್ದ ಓಹಿಲನನ್ನು ಕಂಡು ತಾನು ಹೀಯಾಳಿಸಲು ಪತ್ನಿಗೆ ಅಸಮಾಧಾನವಾಗಿ ಇಬ್ಬರಿಗೂ

ವಾಗ್ವಾದವುಂಟಾಯಿತು. ಆಗ ಉದ್ಭಟನು—ಓಹಿಲನು ಏಕಾಕಿಯಾಗಿ ಕೈಲಾಸಕ್ಕೆ ಹೋಗುತ್ತಿದ್ದಾನೆ; ಇದು ವಿಶೇಷವಲ್ಲ; ನಾನು ನಗರವನ್ನೆಲ್ಲಾ ಕರೆದುಕೊಂಡು ಹೋಗುವೆನು—ಎಂದು ಪಂಥಮಾಡಿಕೊಂಡು ಶಿವನನ್ನು ಒಲಿಸಿ ತನ್ನ ಪ್ರತಿಜ್ಞಾನುಸಾರ ನಗರವನ್ನೆಲ್ಲಾ ಕರೆದುಕೊಂಡು ಕೈಲಾಸಕ್ಕೆ ಹೋದನು—ಎಂಬುದೇ ಈ ಕಾವ್ಯದ ಕಥಾಗರ್ಭ.

ಗ್ರಂಥಾವತಾರದಲ್ಲಿ ಕವಿ ವಿರೂಪಾಕ್ಷಲಿಂಗವನ್ನು ಸ್ತುತಿಸಿದ್ದಾನೆ; ಬಳಿಕ ಪಂಪಾಂಬಿಕೆ, ವಿಘ್ನೇಶ್ವರ, ವೀರಭದ್ರ, ಷಣ್ಮುಖ, ಬಸವೇಶ್ವರಮುಖ್ಯಮಹೇಶ ಪೂಜಕರು, ಅಲ್ಲಮ ಎಂಬಿವರನ್ನು ಹೊಗಳಿದ್ದಾನೆ. "ಪಂಪಾನಗರೀಶ್ವರನೀ ಪೆಂಪಮರ್ದಿನಿಗಬ್ಬಕಾಣ್ಮಂ" ಎಂದು ಹೇಳುತ್ತಾನೆ. ಗುರು ಅಲ್ಲಮಾಂಕನ ದಯೆಯಿಂದ ಈ ಕೃತಿಯನ್ನು ಮಾಡಿದಂತೆಯೂ ಅಲ್ಲಮನಾಮಸ್ಮರಣವನ್ನು ಒಂದೊಂದು ನೆವದಿಂದ ಮಾಡುವಂತೆಯೂ ಹೇಳಿ, ಪ್ರತ್ಯಾಶ್ವಾಸದ ಕೊನೆಯ ಪದ್ಯದಲ್ಲಿಯೂ "ಅಲ್ಲಮಪ್ರಿಯ" ಎಂದು ಈಶ್ವರನನ್ನು ಸ್ತುತಿಸಿದ್ದಾನೆ. ಆ ಶ್ವಾಸಗಳ ಕೊನೆಯಲ್ಲಿ ಈ ಗದ್ಯವಿದೆ:—

ಇದು ಸಮಸ್ತಸುರಕದಂಬವಿಜೃಂಭಿತಮಕುಟತಟಘಟಿತನವರತ್ನಪುಂಜಸಂಜಾತಪಿಂ ಜರಿತಮಂಜುಳಮಯೂಖಮಂಜರೀರಂಜಿತ ಶ್ರೀಗುರುನಿರೂಪಾಕ್ಷಪಾವನಪಾದನಖೋಚ್ಚ ಳಿತಸ್ರಭಾನಿಸ್ತಂದ್ರರುಂದ್ರಸಾಂದ್ರಚಂದ್ರಿಕಾಪಟಲಪಟುಲಂಪಟಚಕೋರಾಯಮಾನಮಾನಸ ಶ್ರೀಸೋಮರಾಜೇಂದ್ರವಿರಚಿತಮಪ್ಪ ಕರ್ಣಾಟಕಶೃಂಗಾರಸಾರಮಹಾಪ್ರಬಂಧದೊಳ್.

ಈ ಕವಿಯ ಬಂಧವು ಲಲಿತವಾಗಿದೆ. ಈ ಗ್ರಂಥದಿಂದ ಕೆಲವು ಪದ್ಯ ಗಳನ್ನು ಉದ್ಧರಿಸಿ ಬರೆಯುತ್ತೇವೆ:—

### ವರ್ಷಾಕಾಲ.

ಒಡೆಯೆ ತಟಾಕರಾಜಿ ಹೊನಲೇಱಿ ಧರಿತ್ರಿ ಸಮಸ್ತಸಿಂಧುಗಳ್ ।
ತಡಿಯನೆ ವಿಾಱಿ ತಾಂ ಪರಿಯೆ ಬೆಂಚೆಗಳುರ್ವಿರೆ ನಿರ್ಝರಾಳಿ ಭೋ ॥
ರಿದುತೆ ಮಹೀಧ್ರದಿಂ ಜಗುಱಿ ಡಂಗರಗಳ್ ಪಿರಿದಾಗಿ ತೋರ್ಪ ಕ ॥
ರ್ಮಡು ಕಡುವೆರ್ಚಿ ಕಟ್ಟಿ ಕಱಿದತ್ತು ಸುವೃಷ್ಟಿ ಪೊದಟ್ಟಿ ಧಾತ್ರಿಯೊಳ್
॥ 771 ॥

ಗಗನಾಂಗನೆ ಕುಡುವಿಂಚಿಂ । ಬುಗುರ್ಗೊನೆಯಿಂ ಮುಗಿಲೆನಿಪ್ಪ ಮುಡಿಯಂ
[ಪಿಕ್ಕಲ್ ।
ಮಿಗೆ ಮುಂ ತುಱುಂಬಿದೊಳ್ಳಲ । ರುಗುವವೊಲುದಿರ್ದತ್ತು ಕರಕನಿಕರಮದಿ
[ಳಿಯೊಳ್ ॥ 772 ॥

## ಚಂದ್ರ.

ಸ್ಫುರದುಡ್ಡೀನಮರೀಚಿರಾಜಿ ವಿಲಸತ್ಸೌತ್ರಂಗಳಂದಾಗೆ ಬಂ ।
ಧುರದಂಡಂ ನಭಮಾಗೆ ಕಾಲಮೆನಿಪುದ್ಯತ್ಪ್ರಾಸಪಾತ್ರಂಗಳೊಳ್ ॥
ಸರಸೀಜೋದ್ಭವನಿಂದುವಂ ತರಣಿಯುಂ ತೂಗಲ್ ಖಗಂ ಭಾರದಿಂ ।
ಧರೆಗಲ್ಪಂತಿಲ್ಲಿದಂ ಹಿಮಾಂಶು ಚಿಗಿಯಲ್ ಬೆಳ್ಪಾದನಾನೋವಿನಿಂ ॥ 773 ॥

ಅಂಬುಜಪೀಠನೆಂದೆನಿಪ ಜೋಯಿಸನಾರಜನೀಪ್ರಮಾಣಮಂ ।
ತಾಂ ಬಗೆದೀಕ್ಷಿಸಲ್ ಗಲ್ಲಿಗೆನಟ್ಟಲನಿಕ್ಕಿದ ಬಟ್ಟಲ್ಲಿದೆ ಕಾ ॥
ಲಂಬಡೆದಂದು ನೀರೊಳಿರದಾಟ್ಟವೊಲಟ್ಟಿದು ಪಶ್ಚಿಮಾಬ್ಧಿಯೊಳ್ ।
ತಂಬೆಳಗೋಡೆ ಜೋಡೆ ನಲಿದಾಡೆ ಸಮುಜ್ಜ್ವಳಚಂದ್ರಮಂಡಳಂ ॥ 774 ॥

## ಹಲಸು.

ನುಡಿಗುಡದನಿಶಂ ಸುಮ್ಮನೆ । ಕುಡುವ ಮಹಾದಾನಿಯಂತಿರಲರೇಜಿದ ಸೊಂ ।
ಪಿಡಿದಿನಿವಣ್ಗಳನೆಲ್ಲ । ಗ್ಗೆಡವಿಡದೀಯುತ್ತುವೊಪ್ಪುಗುಂ ಪನಸಕುಜಂ ॥ 775 ॥

## ಚಸ್ಸರ.

ಆಡುವ ನಚ್ಚಣಿಯರ್ಕಳ ಪೆಂಪಿಂ । ಪಾಡುವ ಗೇಯರಸಾಮೃತದಿಂಪಿಂ ।
ನಾಡೆ ಮೃದಂಗನಿನಾದದ ಸೊಂಪಿಂ । ಗಾಡಿಯನಾಂತುದು ಪಂದಲಲಂಪಿಂ
॥ 776 ॥

## ಉದ್ಭಟರಾಜಕೀರ್ತಿಪ್ರತಾಪಗಳು.

ಅವನೀಧ್ರೌಘಂಗಳೆಲ್ಲಂ ಪುರಹರಕುಧರಂ ಸರ್ವರತ್ನಂಗಳೆಲ್ಲಂ ।
ನವಮುಕ್ತಾಸಂಕುಳಂ ಮಂಜುಳತಟಿನಿಗಳೆಲ್ಲಂ ವಿಯದ್ಗಂಗೆ ಸಪ್ತಾ ॥
ರ್ಣವಮೆಲ್ಲಂ ಪಾಲ್ಗಡಲ್ ಸತ್ಸುಮತತಿಗಳನೆಲ್ಲಂ ಸುಮಲ್ಲೀಮತಲ್ಲೀ ।
ನಿವಹಂ ಮೇಣಾದುವಂದುದ್ಭಟವಿಶದಯಶಃಕಾಂತಿಸಂದೋಹದಿಂದಂ ॥ 777 ॥

ವಿದ್ರುಮಮಂಬುರಾಶಿಗೆ ನಭಕ್ಕೆ ವಿಯನ್ಮಣಿ ರತ್ನರಾಜಿ ಶೋ ।
ಣಾದ್ರಿಗೆ ಪೂಗೊಳಕ್ಕೆ ನವಕೋಕನದಂ ದೆಸೆವೆಣ್ಗೆ ಚಾರುಹಾ ॥
ರಿದ್ರವಿಲೇಪನಂ ಫಣಿವರಂಗೆ ಫಣಾಮಣಿಯಾದುದಾವಗಂ ।
ರುದ್ರಪದಾಬ್ಜಷಟ್ಪರಣನುದ್ಭಟನುನ್ನತವಿಕ್ರಮಾನಲಂ ॥ 778 ॥

ನಿರ್ಮೋಕಂಗಳೆದು ಕರಂ । ಘರ್ಮಿಸಿ ಮೆಯ್ಮಱೆವ ಕೃಷ್ಣಫಣಿಯೆನಲೊ
[ರೆಯಿಂ ।
ಕೂರ್ಮೆ ಮಿಗೆ ತೆಗೆದು ಜಡಿಯೆ ಪೊ । ಗರ್ಮಿಗುತುದ್ಭಟನ ಖಡ್ಗಲತೆ ಸೊಗ
[ಯಿಸುಗುಂ ॥ 779 ॥

### ಗಿಳಿ.

ಒಡಲ ಪಸುರ್ ಮೂಗಿನ ಕೆಂ। ಪಡಿಗಳ ಬಿಳ್ಪಮರ್ದ ಕೊರಲ ಕರ್ಪೆಲ್ಲಂ ಸಂ ।
ಗಡಿಸಿರೆ ಸುರಧನುವಿಳೆಯೊಳ್ । ಕೆಡೆವವೊಲಿಟ್ಟಿದತ್ತದೊಂದುಗಿಳಿವಿಂಡರಸಾ ॥ 780 ॥

ಚಪ್ಪರಿದೀಂಟಿ ನೂತ್ನಕಣಿತೋದ್ಭ್ರಸಾರಮನುರ್ಕಿ ಸೊರ್ಕಿ ನು ।
ಣ್ಪುಪ್ಪುಲ್ಲಿನೊಲ್ವಲರ್ಚಿಸುತುಮುಂಚಿತಕುಂಚಿತಚಂಚುಕೋಟಿಯಂ ॥
ತಪ್ಪದೆ ನೆಲ್ಲ ನಿಟ್ಟಿಸಲ್ಕಿಳಿಟ್ಟಲೆದುರ್ಬಿ ಮನೋನ್ನುರಾಗವಾಂ ।
ತೊಪ್ಪಿದುದಂದು ಕುಂದದೆ ವಿರಾಜಿತರಾಜಶುಕಾರ್ಭಕೋತ್ಕರಂ ॥781 ॥

### ಹುಲಿ.

ಕೆಂಪಿಡಿದಕ್ಷಿ ರೌದ್ರವದನಂ ಮಿಗೆ ಪೊಣ್ಮುವ ನಿಷ್ಕುರಸ್ಪನಂ ।
ಕಂಪಿಪ ನಿಸಿ ನೀಡಿ ನಿಮಿರ್ದಿಕ್ಕುವ ಕಾಲ್ ಮಹಿಯಂ ಮಹೋಗ್ರದಿಂ ॥
ದಂ ಪೊಡೆವಗ್ರವಾಲಮಿರದೇಟ್ಟಿ ಕೊಡಂಕೆಗಳಿಂ ನಿಕುಂಜಮಂ ।
ತಾಂ ಪೊಜಮಟ್ಟುದೊಂದು ಪುಲಿ ಗರ್ಜಿಸುತುಂ ಬಿರಿವಂತು ದಿಕ್ಕ್ಷಯಂ ॥ 782 ॥

### ಡೊಂಬರು.

ನೂಲ್ಗಟ್ಟಿ ಪೊಯ್ದು ಪೊಸಗುಡಿ। ಸಲ್ಗಳ್ ತವೆ ನಟ್ಟ ಗಟ್ಟಿಗಳಿರಿಸಿದ ದೋಳ್ಗಳ್ ।
ಕಾಲ್ಗಟ್ಟಿ ಮೇವ ಕಲ್ತ್ತಿಯ। ಸಾಲ್ಗಳಿರಲ್ ಕೊಲ್ಲುಟಿಗರ ಬೀಡೆಸೆದಿರ್ಕುಂ ॥ 783 ॥

### ವೇಶ್ಯಾಗರ್ಹಣ.

ನಿಚ್ಚಂ ನರ್ಮಜಲಮಿರೆ। ಬಚ್ಚಲ ನೀರ್ಗೆಜಿಸ ಕೀಟಕಂಬೋಲ್ ತನ್ನಂ ।
ನಚ್ಚಿದ ಸತಿಯಿರೆ ಬೆಲೆವೆ।ನ್ಗೆಚ್ಚೆಗ್ಗುದು ನೀತಿಯೇ ವಿದಗ್ಧಲಲಾಮಾ ॥ 784 ॥

ಕೇಲ್ಪೊಸಿನಿಸರಶ್ಯಾಂತಮು। ಗುಟ್ಟಿ ಶರಾವಂಬೊಲಮರ್ದ ವೇಶ್ಯಾಧರಮುಂ।
ತಳ್ಕದೆ ಚುಂಬಿಸಿ ನರಕದೊ। ಳಾಟ್ಟಿಪುದೇಂ ನೀತಿಯೇ ವಿದಗ್ಧಲಲಾಮಾ ॥ 785 ॥

ಪಣಮುಳ್ಳನ್ನೆವರಂ ಪೂ। ಗಣಿಯಂ ಮುತ್ತಾವನೆಂಬಳವನಲ್ಲದೆ ಮೇಣ್ ।
ಪಣಮೆಲ್ಲಂ ತಿಂರಲೊಡಂ। ಪೆಣಮೆಂಬಳ್ ಪಣವಧೂಟಿ ಗುಣಮಣಿಹಾರಾ ॥ 786 ॥

ನಾನಾವಿಧದಿಂ ಮಣಿಕನ। ಕಾನೀಕಮನೆಯ್ದಿ ಕವರ್ದು ವಿಟನಂ ಕಡೆಯೊಳ್ ।
ಶ್ವಾನಂಗೆಣೆಮಾಡುವ ಗಣಿ। ಕಾನಾರಿಗೆ ಸೋಲ್ವನಧಮನಲ್ತೆ ಗುಣಾಢ್ಯಾ[1] ॥ 787 ॥

---

1 ಹೀಗೆ ಗುಣಾಢ್ಯ, ವಿದಗ್ಧಲಲಾಮ, ಗುಣಮಣಿಹಾರ, ವಿವೇಕಾಭರಣ, ಎಂದು ಮುಗಿವ ಪದ್ಯಗಳು ಈ ಗ್ರಂಥದಲ್ಲಿವೆ ಇವುಗಳಂತೆಯೇ ಇತರಬಿರುದುಗಳಿಂದ ಮುಗಿವ ನೀತಿಬೋಧಕವಾದ ಅನೇಕ ಕಂದಪದ್ಯಗಳು ಇತರಗ್ರಂಥಗಳಲ್ಲಿಯೂ ದೊರೆಯುತ್ತವೆ. ಕೆಲವು ಸಂದರ್ಭಗಳಲ್ಲಿ ಅವು ಆಆಬಿರುದುಗಳುಳ್ಳ ಕವಿಗಳಿಂದ ರಚಿತವಾಗಿವೆ ಎಂದು ಹೇಳಬಹುದು; ಉಳಿದಕಡೆ ಇದು ಹೀಗೆಯೇ ಸರಿ ಎಂದು ನಿಶ್ಚಯಿಸಲು ಕಷ್ಟವಾಗಿದೆ. ಬೊಪ್ಪಣಪಂಡಿತ, ಕರ್ಣಾಭರಣ, ಮಂಗರಸ 1, ಇವರ ಚರಿತೆಗಳನ್ನು ನೋಡಿರಿ ಸೋಮರಾಜನ ಈ ಗ್ರಂಥದಲ್ಲಿ ಬರುವ ಈ ಬಿರುದುಗಳು ಕಥಾನಾಯಕನಿಗೆ ಅನ್ವಯಿಸುತ್ತವೆ.

## ಪೋಲಾಳ್ವದಂಡನಾಥ. 1224.

ಈತನು ಹರಿಚಾರಿತ್ರ ಎಂಬ ಷಟ್ಪದೀಗ್ರಂಥವನ್ನು ಬರೆದುದಾಗಿ ಶಕ 1145 ರಲ್ಲಿ–ಎಂದರೆ 1224 ರಲ್ಲಿ–ಹುಟ್ಟಿದ ದಾವಣಗೆರೆಯ 25 ನೆಯ ಶಾಸನದಲ್ಲಿರುವ

ಗುರು ಧರ್ಮದ್ವಿತಯಕ್ಕೆ ನೀನೆ ದಿಟದಿಂ ಪೋಲಾಳ್ವ ಕೇಳ್ ಮುನ್ನವಾ।
ದರೊಳಿನ್ನಪ್ಪರೊಳಿಂದು ವರ್ತಿಪರೊಳಾರ್ಗುಂಟಾದುವೀಧರ್ಮಮಾರ್॥
ಹರಿಚಾರಿತ್ರಮನೊಲ್ದುಷಟ್ಪದದೆ ಪೇಟ್ದಿರ್ ನಿನ್ನಪೋಲ್ ನಿನ್ನಪೋಲ್।
ಧರೆ ಜೋದ್ಯಂಬಡುವಂತಿರಾರ್ ಹರಿಹರಶ್ರೀಗೇಹಮಂ ಮಾಡಿದರ್॥

ಎಂಬ ಪದ್ಯದಿಂದ ತಿಳಿಯುತ್ತದೆ. ಇವನ ಹರಿಚಾರಿತ್ರವು ನಮಗೆ ದೊರೆತಿಲ್ಲ.

ಮೇಲೆ ಹೇಳಿದ ಶಾಸನದಿಂದ ಇವನ ವಿಷಯವಾಗಿ ಈಯಂಶಗಳು ತಿಳಿಯುತ್ತವೆ:—

ಈತನ ತಂದೆ ಆಂಧ್ರದೇಶದ ನಾರಣಪುರದ ಅತ್ತಿರಾಜ; ತಾಯಿ ನವಿಲಾಡೆಯಕ್ಕ. ಇವನು ಹೊಯ್ಸಳವೀರಬಲ್ಲಾಳನಲ್ಲಿಯೂ (1173–1220) ಅವನ ಮಗ ವೀರನರಸಿಂಹ (1220–1235) ನಲ್ಲಿಯೂ ಅಮಾತ್ಯನಾಗಿದ್ದನು. ಈತನು ವಿಷ್ಣುಭಕ್ತನು; ಮಹಾ ಪರಾಕ್ರಮಶಾಲಿ; ಶಕ 1145 ನೆಯ ಸ್ವಭಾನುಸಂವತ್ಸರದ ಮಾಘಶುದ್ಧ ಏಕಾದಶೀ ಬೃಹಸ್ಪತಿವಾರದಲ್ಲಿ 115 ಹೊನ್ನ ಕಳಶದಿಂದ ಮೆರೆವಂತಾಗಿ ಹರಿಹರಕ್ಷೇತ್ರದಲ್ಲಿ ಹರಿಹರದೇವರಿಗೆ ದೇವತಾಲಯವನ್ನು ಮಾಡಿಸಿ, ಅಲ್ಲಿಯ 104 ಬ್ರಾಹ್ಮಣರಿಗೆ ಬಾನವಳ್ಳಿಯನ್ನು ಸರ್ವನಮಸ್ಯವಾಗಿ ಕೊಟ್ಟನು; ಬಾನವಳ್ಳಿಯಲ್ಲಿ ಲಕ್ಷ್ಮೀನಾರಾಯಣದೇವಾಲಯವನ್ನು ಕಟ್ಟಿಸಿ, ದೇವಸ್ಥಾನಕ್ಕೆ ನಾಲ್ಕು ವೃತ್ತಿಗಳನ್ನೂ ಬಿಟ್ಟನು.

ಈ ಶಾಸನದಿಂದ ಈತನ ಪ್ರಶಸ್ತಿರೂಪವಾದ ಸ್ವಲ್ಪ ಭಾಗವನ್ನು ತೆಗೆದು ಇಲ್ಲಿ ಬರೆಯುತ್ತೇವೆ:—

ಹೊಯ್ಸಳ ಶ್ರೀ ವೀರನಾರಸಿಂಹದೇವಂ ನಿಜರಾಜಧಾನಿ ದೋರಸಮುದ್ರದೊಳ್ ಸುಖಸಂಕಥಾವಿನೋದದಿಂ ಪೃಥ್ವೀರಾಜ್ಯಂಗೆಯ್ಯುತ್ತುಮಿರ್ದಂ. ಆ ಪ್ರತಾಪಚಕ್ರವರ್ತಿಯ ತೇಜಕ್ಕೆ ಕಾಯ್ವಿನಂತೆ ಕೈದುಗೆ ಕೂರ್ಪಿನಂತೆ ಮಂತ್ರಕ್ಕೆ ಶಕ್ತಿಯಂತೆ ರಾಜ್ಯಕ್ಕೆ ವಜ್ರಸನ್ನಾಹದಂತಭೇದಭಾವದಿಂ ಮನಸಂದು ಮಹಾಪ್ರಧಾನಪದವಿಗಧಿನಾಥನಾದ ತೊಲಗದಕಂಬಮೆಂಬ ಬಿರುದಧ್ವಜಾಡಂಬರಮನವಲಂಬಿಸಿದ ಸಂಗೀತಸಾರನ ಸಜ್ಜನಾಧಾರನ ಕಾವ್ಯಕರ್ತಾರನ ಕೀರ್ತಿಭರ್ತಾರನ ಕವಿಜನಾಭರಣನ ಸೂಕ್ತಿಸುಧಾಕರಣನ ವಿತರಣ ವಿಳಾಸನ ಲಕ್ಷ್ಮೀನಿವಾಸನ ವೈಷ್ಣವಚಕ್ರವರ್ತಿಯ ಜಗನ್ಮೋಹನಮೂರ್ತಿಯ ಸತ್ಯ ಸ್ವಭಾವನ ಪೋಲಾಳ್ವದೇವನ ಪೆರ್ಮೆಯ ವಿಸ್ತಾರಮಂ ಪೇಳ್ಪೊಡೆ,

ಕರುವಿಟ್ಟಂ ಸತ್ಯದಿಂ ಕಣ್ಣಿಜ್ಜಿದನಸಮಸಾಹಿತ್ಯದಿಂ ಬಣ್ಣವಿಟ್ಟಂ।
ಸಿರಿಯಿಂ ಕೂರ್ತಾಯುವೊಯ್ದಂ ಪರಹಿತಚರಿತೋದ್ಯೋಗದಿಂ ಬರ್ಮನೆಂಬಂ॥

ತಿರೆ ಸತ್ಯಜ್ಞಾನಲಕ್ಷ್ಮೀಪರಹಿತಚರಿತೋದ್ಯೋಗದೊಳ್ ತಾನೆ ಧಾತ್ರೀ ।
ಗುರುವಾದಂ ನಾರಸಿಂಹಾಧಿಪನ ಕಟಕದೊಳ್ ಮಂತ್ರಿ ಪೋಲಾಳ್ವದೇವಂ ॥
ಬಗೆಗೇನುಂ ಕವಲಿಲ್ಲ ವಾಕ್ಯಮೆರಡಿಲ್ಲಾದಾರ್ಯದೊಳ್ ಮಾಂದ್ಯಮಿ ।
ಲ್ಲ ಗುಣಪ್ರೀತಿಯೊಳಾತ್ಮಪಕ್ಷಪರಪಕ್ಷಾಸಂಗಮಿಲ್ಲಾಳ್ದನು ॥
ಜ್ಞಗದೊಳ್ ಲಾಭದ ಲೋಭಮಿಲ್ಲ ಸಿರಿಯೊಳ್ ಸೊರ್ಕಿಲ್ಲ ಪೋಲಾಳ್ವನಂ ।
ಪೊಗಲ್ವಿನ್ನನ್ಯರನಣ್ಣ ಪೇಟ್ ಪೊಗಲ್ಪುದೇ ಪಾಲುಂಡು ಮೇಲುಂಬುದೇ ॥

---

## ಕವಿನಾಗದೇವ. 1224.

ಈತನು ಕಡೂರು 95 ನೆಯ ಶಾಸನವನ್ನು ಬರೆದುದಾಗಿ ಆ ಶಾಸನದ ಕೊನೆಯಲ್ಲಿರುವ ಈ ಪದ್ಯದಿಂದ ತಿಳಿಯುತ್ತದೆ:—

ಹರಿಹರವಾಯಿದೇವಿಗಳ ಪುತ್ರನನಿಂದಿತವಾಜಿವಂಶಶೇ ।
ಖರನಕಳಂಕಕೀರ್ತಿ ಕಲಿಕಾಲಬೃಹಸ್ಪತಿ ಸೋಮನಾಥಶಂ ॥
ಕರರಸುಜಂ ಬುಧರ್ ಪೊಗಲ್ವಿ ನಿರ್ಮಿಸಿದಂ ಕವಿನಾಗದೇವನೀ ।
ಸ್ಥಿರತರಮಪ್ಪ ಶಾಸನಮನುತ್ತಮಕಾಶ್ಯಪಗೋತ್ರವರ್ಧನಂ ॥

ಇದರಿಂದ ಈತನು ವಾಜಿವಂಶದ ಕಾಶ್ಯಪಗೋತ್ರದ ಹರಿಹರವಾಯಿದೇವಿಗಳ ಪುತ್ರನೆಂದೂ ಸೋಮನಾಥ ಶಂಕರ ಇವರ ತಮ್ಮನೆಂದೂ ತಿಳಿಯುತ್ತದೆ. ಇವನಿಗೆ ಕಲಿಕಾಲಬೃಹಸ್ಪತಿಯೆಂಬ ಬಿರುದಿದ್ದಂತೆ ತೋರುತ್ತದೆ. ಈ ಶಾಸನವು ಶಕ 1145 ನೆಯ ಸ್ವಭಾನುಸಂವತ್ಸರದಲ್ಲಿ—ಎಂದರೆ 1224 ರಲ್ಲಿ—ಬರೆದುದು. ಇದರಲ್ಲಿ ಚೌಂಡಿಸೆಟ್ಟಿ ವಿಷ್ಣುಸಮುದ್ರದಲ್ಲಿ ಶಂಭುದೇವಸ್ಥಾನವನ್ನು ಕಟ್ಟಿಸಿ, ಆ ದೇವರಿಗೆ ದತ್ತಿಯನ್ನು ಬಿಟ್ಟುದಂತೆ ಹೇಳಿದೆ. ಈ ಶಾಸನದಿಂದ ಒಂದೆರಡು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

### ಆದಿವರಾಹ.

ಧರೆ ರುಚಿರಕೇತಕೇಮಧು । ಕರಿವೋಲ್ ದಂತಾಗ್ರದೊಳ್ ವಿರಾಜಿಸೆ ಮಹಿಮಾ ।
ಕರನಾದಾದಿವರಾಹಂ । ವರಾಹಮುಂ ನಮಗೆ ಕೂರ್ತು ಮಾಟ್ಕುನವರತಂ ॥788॥

### ವಿಷ್ಣುನೃಪ.

ಕಮಠಂ ಭೋಗೀಂದ್ರನಂ ಪನ್ನಗಪತಿ ಧರೆಯುಂ ಧಾತ್ರಿ ತಾರಾದ್ರಿಯುಂ ತಾ ।
ರಮಹೀಧ್ರಂ ಪಾರ್ವತೀವಲ್ಲಭನನಭವನಾಬಾಲಶೀತಾಂಶುವಂ ಶೀ ॥
ತಮಯೂಖಿಂ ಸತ್ಕಳಾಸ್ತೋಮಮನತಿ . . . ತಾಳ್ವುವಂತಾಂತನೀವಿ ।
ಶ್ಮಮಹೀಸಾಮ್ರಾಜ್ಯಲಕ್ಷ್ಮೀಭರಮನುರುಭುಜಾದಂಡದೊಳ್ ವಿಷ್ಣುಭೂಪಂ॥789॥

---

## ಮುನಿಚಂದ್ರ. 1229.

ಈತನು ಜೈನಕವಿ. ಇವನನ್ನು ಇವನ ಶಿಷ್ಯನಾದ ಎರಡನೆಯ **ಗುಣವರ್ಮ**ನು (ಸು. 1235) ತನ್ನ **ಪುಷ್ಪದಂತಪುರಾಣದಲ್ಲಿ** "ಉಭಯಕವಿಕಮಲಗರ್ಭ" ಎಂದು ಸ್ತುತಿಸಿದ್ದಾನೆ; **ಮಹಾಬಲಕವಿ** (1254) ತನ್ನ **ನೇಮಿನಾಥಪುರಾಣದಲ್ಲಿ** "ಅಖಿಲತರ್ಕತಂತ್ರಮಂತ್ರವ್ಯಾಕರಣಭರತಕಾವ್ಯನಾಟಕಪ್ರವೀಣಂ" ಎಂದು ಕೊಂಡಾಡಿದ್ದಾನೆ. "ಉಭಯಕವಿ" ಎಂಬುದರಿಂದ ಇವನು ಕನ್ನಡದಲ್ಲಿ ಬರೆದಿದ್ದರೂ ಇರಬಹುದು; ಆವ ಗ್ರಂಥಗಳನ್ನು ಬರೆದಿದ್ದಾನೆಯೋ ತಿಳಿಯದು.

ಬಾಂಬೆ ಬ್ರಾಂಚ್ ರಾಯಲ್ ಏಷ್ಯಾಟಿಕ್ ಸೊಸೈಟಿ ಜರ್ನಲಿನಲ್ಲಿ ಮುದ್ರಿತವಾಗಿರುವ, ಶಕ 1151 ರಲ್ಲಿ—ಎಂದರೆ 1229 ರಲ್ಲಿ—ಬರೆದ ಸೌಂದತ್ತಿಯ ಶಾಸನದಿಂದ[1] ಈತನು ರಟ್ಟರಾಜನಾದ ಕಾರ್ತವೀರ್ಯನಿಗೆ ಗುರುವಾಗಿದ್ದಂತೆಯೂ ಆ ರಾಜನ ಮಗನಾದ ಲಕ್ಷ್ಮೀದೇವನಿಗೆ ಶಸ್ತ್ರಶಾಸ್ತ್ರಶಿಕ್ಷಾಗುರುವಾಗಿಯೂ ಸಚಿವನಾಗಿಯೂ ಇದ್ದಂತೆಯೂ ಬಹಳ ಪರಾಕ್ರಮಶಾಲಿಯಾಗಿ ಪರರಾಜರನ್ನು ಅಡಗಿಸಿ ರಟ್ಟರಾಜ್ಯಪ್ರತಿಷ್ಠಾಚಾರ್ಯನೆಂಬ ಬಿರುದನ್ನು ವಹಿಸಿದ್ದಂತೆಯೂ ಇವನಲ್ಲಿ ಶಾಂತಿನಾಥ, ನಾಗ, ಮಲ್ಲಿಕಾರ್ಜುನ ಎಂಬವರು ಅಮಾತ್ಯರಾಗಿದ್ದಂತೆಯೂ ತಿಳಿಯಬರುತ್ತದೆ.

ಈತನನ್ನು ಸ್ತುತಿಸುವ ಶಾಸನಪದ್ಯಗಳನ್ನು ಕೆಳಗೆ ಬರೆದಿದ್ದೇವೆ :—

ಕುಮುದಾನಂದತೆಯಿಂದಮೊಂದಿ ಮುನಿಚಂದ್ರಂ ಶತ್ರುಭೂಭೃನ್ಮುಖಾ ।
ಬ್ಜಮನಿರ್ಮೋಡಿಪ ತೇಜದಿಂದೆ ಮುನಿಚಂದ್ರಂ ಜಟ್ಟರಾಜ್ಯಾಬ್ಧಿಯಂ ॥
ಕ್ರಮದಿಂ ದಿಕ್ತಟಮಂ ಪಳಂಚಲೆವಿನಂ ಪೆರ್ಚಿಪ್ಪ ತನ್ನೊಂದು ವಿ ।
ಕ್ರಮದಿಂದಂ ಮುನಿಚಂದ್ರನಿಂತು ಮುನಿಚಂದ್ರಂ ಚಂದ್ರನಾಮಾನ್ವಿತಂ ॥
ಗುರುವಾದಂ ಕಾರ್ತವೀರ್ಯಕ್ಷಿತಿಪತಿಗೆನಸುಂ ಮಂತ್ರದಿಂ ತಾನೆ ಶಿಕ್ಷಾ ।
ಗುರುವಾದಂ ಶಸ್ತ್ರಶಾಸ್ತ್ರಸ್ಥಿರಪರಿಣತಿಯೊಳ್ ಲಕ್ಷ್ಮೀದೇವಂಗೆ ದೀಕ್ಷಾ ॥
ಗುರುವಾದಂ ಪ್ರಾಜ್ಯರಾಜ್ಯಾಪಹರಣದೆ ಪರಕ್ಷ್ಮಾಣಿಪಾಲರ್ಗೆನಲ್ ಕೇಳ್ ।
ಗುರುಶಬ್ದಂ ವಾಚ್ಯಮಾಯ್ತಲ್ಲದೆ ವರಮುನಿಚಂದ್ರಂಗಿದೇಂ ದೇಸೆಗಾಯ್ತೇ ॥

ಈತನ ವಿಷಯವಾಗಿ **ಮಹಾಬಲಕವಿ** ಹೀಗೆ ಬರೆದಿದ್ದಾನೆ :—

ಮತ್ತಮಾಜಗತ್ಪ್ರಯಪವಿತ್ರಮೆನಿಪ ಕಾಣೂರ್ಗಣಾಗ್ರಣಿಗಳೊಳಗ್ರಗಣ್ಯನುಂ ಅಗಣ್ಯಪುಣ್ಯನುಂ ರಾಜಗುರುತಾರಾಜೀವಿನೀವಾ . . ನೀಕಾಂತನುಂ ವಿರೋಧಿಬಲಕೃತಾಂತನುಂ ಶ್ರೀಮದಳಪಟ್ಟತೀರ್ಥಚತುರ್ಮುಖಜನೇಂದ್ರಮಂದಿರಾದ್ಯನೇಕ ಜನಮಂದಿರೋದ್ಧಾರ

1. Vol. X, 260.

ಕನುಂ ಜಟ್ಟರಾಜ್ಯವಿಸ್ತಾರಕನುಮಖಿಲತರ್ಕತಂತ್ರಮಂತ್ರವ್ಯಾಕರಣಭರತಕಾವ್ಯನಾಟಕಪ್ರ
ವೀಣನುಂ ಚರಣಶರಣಾಯಾತಖ್ಯಾತಭೂಪಾಲರಾಜಾವಳಿಕೃತತ್ರಾಣನುಮೆನಿಸಿ

ಪೊಗಟಿ ಜಗಂ ನೆಗಟ್ಟ್ರವಡೆದಂ ಮುನಿಚಂದ್ರನಮಾತ್ಯಮಂಡನಂ।
ನೆಗಟ್ಟಿ ಬಲಂ ಜಗಕ್ಕೆ ಮಿಗಿಲುನ್ನತಿ ಮೇರುವಿನಿಂ ಮಿಗಿಲ್ ಜಯಂ॥
ಮಿಗಿಲಿಭವೈರಿಗಾಶೆಗೆ ನಿಜೋಜ್ಜ್ವಲಕೀರ್ತಿ ಮಿಗಿಲ್ ಕರಂ ಸುರ।
ದ್ರುಗೆ ಮಿಗಿಲರ್ಥನೀತಿ ಮಿಗಿಲಾದಿವಿಜಾಧಿಪಮಂತ್ರಿಗೆಂಬಿನಂ॥

---

## ಮಾದಿರಾಜ. 1229.

ಈತನು ಬಾಂಬೆ ಬ್ರಾಂಚ್ ರಾಯಲ್ ಏಷ್ಯಾಟಿಕ್ ಸೊಸೈಟಿ ಜರ್ನಲಿನಲ್ಲಿ ಕೊಟ್ಟಿರುವ ಸೌಂದತ್ತಿಯ ಶಾಸನವನ್ನು [1] ಬರೆದುದಾಗಿ ಅದರ ಅಂತ್ಯದಲ್ಲಿರುವ

ಎಸೆವೀಶಾಸನಮುಂ ವಿರ। ಚಿಸಿ ಬರೆದಂ ಪೂರ್ವಜನ್ಮದೊಳ್ ಸುಕೃತಮನಾ।
ರ್ಜಿಸಿ ಕೇಶಿರಾಜವಿಭುವಿನ। ನಿಸುವೆನಿಸಿದ ಮಾದಿರಾಜನಾವಿಭುಮತದಿಂ॥

ಎಂಬ ಪದ್ಯದಿಂದ ತಿಳಿಯುತ್ತದೆ.

ಈ ಶಾಸನದಲ್ಲಿ ರಟ್ಟಕುಲಭೂಷಣ, ಮಂಡಲಿಕಗಂಡತಳಪ್ರಹಾರಿ, ಸಾಹಸೋತ್ತುಂಗ, ಬೊಪ್ಪನಸಿಂಗ ಮೊದಲಾದ ಬಿರುದುಗಳುಳ್ಳ ಲಕ್ಷ್ಮೀದೇವರಸನು ವೇಣುಗ್ರಾಮದ ನೆಲೆವೀಡಿನಲ್ಲಿರೆ, ಶಕ 1151 ರಲ್ಲಿ—ಎಂದರೆ 1229 ರಲ್ಲಿ—ಮುನಿಚಂದ್ರನ ನಿಯಾಮದಿಂ ಈ ಕವಿಯ ತಂದೆಯಾದ ಕೇಶವರಾಜನು ಮಲ್ಲಿನಾಥದೇವರಿಗಾಗಿ ದತ್ತಿಯನ್ನು ಬಿಟ್ಟಂತೆ ಹೇಳಿದೆ.

ಈ ಶಾಸನದ ಬಂಧವನ್ನು ನೋಡಿದರೆ ಈ ಮಾದಿರಾಜನು ಒಳ್ಳೆಯ ಕವಿಯೆಂಬುದರಲ್ಲಿ ಸಂಶಯವಿಲ್ಲ. ಈತನ ವಿಷಯವಾಗಿ ಈ ಶಾಸನದಿಂದ ಈ ಯಂಶಗಳು ತಿಳಿಯುತ್ತವೆ:—

ಈತನು ಸಾಮಾಸಿಗಕುಲದ ಅತ್ರಿಗೋತ್ರದ ಬ್ರಾಹ್ಮಣನು. ಈ ವಂಶದ ಮೂಲ ಪುರುಷನು ರುದ್ರಭಟ್ಟಕವೀಂದ್ರನು. ಇವನು ತನ್ನ ಕವಿತೆಯಿಂದ ಕನ್ನರನನ್ನು (939–968) ಮೆಚ್ಚಿಸಿ, ಅವನಿಂದ 18 ಗ್ರಾಮಗಳನ್ನು ಬಹುಮಾನವಾಗಿ ಪಡೆದನು. ಈ ರುದ್ರಭಟ್ಟನು ತನ್ನ ಹೆಸರಿನ 'ಭ' ಎಂಬಕ್ಷರವನ್ನು 1,000 ಹೊನ್ನಿಗೆ ಅಡವಿಟ್ಟು, ಅದನ್ನು ಬಿಡಿಸಿಕೊಳ್ಳುವ ವರೆಗೆ ರುದ್ರಟ ಎಂಬ ಹೆಸರನ್ನು ವಹಿಸಿದ್ದನು.[2] ಈತನ ವಂಶದವರಲ್ಲಿ ಕಲಿದೇವ

---

1. Vol. X, 260.

2. ಇವನೇ ಸಂಸ್ಕೃತದಲ್ಲಿ ಕಾವ್ಯಾಲಂಕಾರವನ್ನು ಬರೆದಿರುವ ರುದ್ರಟನಾಗಿರಬಹುದು ಈ ರುದ್ರಟನ ಚಕ್ರಬಂಧಪದ್ಯದಿಂದ ಉದ್ಧಾರವಾಗುವ ಸ್ವವಿಷಯಕವಾದ ಶ್ಲೋಕದಲ್ಲಿ 'ಸಾಮಾಜಾ' ಎಂಬ ವಿಶೇಷಣವಿದೆ. ಇದು ಇಲ್ಲಿ ಬಂದಿರುವ 'ಸಾಮಾಸಿಗ' ಎಂಬುದಕ್ಕೆ ಪರ್ಯಾಯಶಬ್ದವಾಗಿರಬಹುದೆಂದು ತೋರುತ್ತದೆ.

ನೆಂಬವನು ಪ್ರಸಿದ್ಧನಾಗಿದ್ದನು. ಅವನ ಮಗ ಬನಿಹಟ್ಟಿ ಮೊದಲಾದ 18 ಪುರಗಳಿಗೆ ಪ್ರಭುವಾದ ಶ್ರೀಧರ; ಆತನ ಪುತ್ರ ಮಹದೇವ; ಅವನ ಸುತ ಶ್ರೀಧರ; ಆತನ ಮಗ ಮಹದೇವ ಅಥವಾ ಮಾಯಿದೇವ; ಅವನ ಮಗ ರಾಜಗುರು ಮುನಿಚಂದ್ರನ ಮಂತ್ರಿಯಾಗಿದ್ದ ಮಲ್ಲಿಕಾರ್ಜುನ; ಇವನ ಸುತ ಕೇಶಿರಾಜ, ಇವನ ಹೆಂಡತಿ ಮಾಳಲದೇವಿ; ಇವರ ಮಗನೇ ಈ ಶಾಸನವನ್ನು ಬರೆದ ಮಾದಿರಾಜ. ಈ ಮಾದಿರಾಜನಿಗೆ ಮಲ್ಲಿಕಾರ್ಜುನ ಎಂಬ ಸಹೋದರನಿದ್ದನು. ಇವರಿಬ್ಬರೂ "ಶ್ರೀರಟ್ಟರಾಜ್ಯಪ್ರತಿಷ್ಠಾಚಾರ್ಯನುಂ ಅರಿಬಿರುದಮಂಡಳಿಕಜವರಾಜನುಮಪ್ಪ ಶ್ರೀಮದ್ರಾಜಗುರುಗಳ್ ಮುನಿಚಂದ್ರದೇವರ ನೋಲಗಿಸಿ ಕೂಂಡಿಮೂಱುಸಾಸಿರದ ಬಲ್ಬಾಯ ಬಾಡಂ ಮುನಿಚಂದ್ರದೇವರಾಳ್ಕೆ ವಾಡಂ ಸುಗಂಧವರ್ತಿಯ ಹನ್ನೆರಡುಮಂ ತದಾಜ್ಞೆಯಿಂ ಪ್ರತಿಪಾಳಿಸುತ್ತುಮಿರ್ದರ್."

ಈ ಶಾಸನದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

## ರುದ್ರಭಟ್ಟ.

ತನ್ನಯ ವಂಶಜರ್ಕಳುದಿಂಗಳೊಳುದ್ಭಕವೀಶರಪ್ಪ ವಾ।
ಕ್ಕೋನ್ನತಿಯಿಂ ಸರಸ್ವತಿಯನೂರ್ ಪದಿನೆಂಟಜಳೂಳಂ ಪ್ರಭುತ್ವಮಂ॥
ಕನ್ನರನಿಂದಮುಂದು ಪಡೆದಂ ದೊರೆಯಾರ್ ಕವಿತಾವಿಳಾಸದೊಂ।
ದುನ್ನತಿಯೊಳ್ ಪ್ರಭುತ್ವದ ನೆಗಟ್ಟ್ಯೊಳಾವಿಭುರುದ್ರಭಟ್ಟನೊಳ್ ॥ 790 ॥

## ಕವಿಯ ತಾಯಿ ಮಾಳಲದೇವಿ.

ಮನೆಯೊಳಗೇನುಳ್ಳೊಡಮಿ। ಲ್ಲೆನುತುಂ ಸ್ವಯಮರ್ಥಭೂರಿಯಾಗುತ್ತಿರ್ಪಂ।
ಗನೆಯರ್ ಮಾಳಲದೇವಿಯ। ನಿನಯಾಂಭೋನಿಧಿಯ ಗುಣದೊಳಿಂತೆಣೆಯ
[ಪ್ಪರ್ ॥ 791 ॥

ಮನೆಯೊಳಗುಳ್ಳೊಡಂ ಮಡಗಿ ತತ್ಪತಿಗಂ ಮನೆಮಕ್ಕಳಿಂಗಮೆ।
ಳ್ಕನಿತುಮನಿಕ್ಕಲಾಜಿಪೆ ಕೆಲಂ ಕಡೆಯುಂ ಸುಡೆನಲ್ಕೆ ಜೀವಿಪಂ॥
ಗನೆಯರನೇಂ ಕುಲಾಂಗನೆಯರೆಂದೆನಲಕ್ಕುಮೆ ಕೇಶಿರಾಜನಂ।
ಗನೆ ಪತಿಭಕ್ತೆ ಚಾರುಗುಣಯುಕ್ತೆ ಕುಲಾಂಗನೆ ಭೂತಳಾಗ್ರದೊಳ್ ॥ 792 ॥

ಕುಟಿಲೆ ಕುಮಾರ್ಗೆ ಕುತ್ಸಿತೆ ಕುರೂಪೆ ಕುಭಾಗ್ಯೆ ಕುಶೀಲೆ ಜಿಹ್ಮಲಂ।
ಪಟೆ ಶಠೆ ಧೂರ್ತೆ ದುರ್ಗುಣೆ ದುರನ್ವಿತೆ ದುರ್ಜನೆ ದುಷ್ಟೆ ಕಷ್ಟೆಯೆಂ॥
ಬಟಮಟಕಾರ್ತಿಯರ್ ಸತಿಯರೇ ಗುಣದೊಳ್ ಸಲೆ ಮಾಳಿಯವ್ವೆಯುಂ।
ಗುಟಕೆಣೆಯಾಗರೆಂದೊಡಿತರಾಂಗನೆಯರ್ ಭುವನಾಂತರಾಳದೊಳ್ ॥ 793 ॥

ಪುರುಷರನೇಳಿದಮಂ ಮಾ। ಜ್ಪಿದುಂ ಪಿರಿದಾಗೆ ಬಗೆವ ಪರರಂ ಮಾಯಾ।
ಚರಣದೊಳೆಸಗುವ ಸತಿಯರ್। ದೊರೆಯೇ ಪೇಟ್ಪಿಂ ಮಾಳಿಯವ್ವೆಯೊಳ್ ಕು
[ತ್ಸಿತಿಯರ್ ॥ 794 ॥

ಅಸವನೆಗಂಗಳಕ್ಕೆ ? ತಲೆವಾಗಿಲೆಗಚ್ಚನೆ ನೋಡಲೀಜಲಿಂ ।
ಗೊಸಗೆಗೆ ನೋಂಪಿಗಂಗಡಿಗೆ ಬಾಡಿನ ಸಂತೆಗೆ ಬಾಯಿನಕ್ಕೆ ಹೋ ॥
ಪೆಸಕದೆ ಪಾಣ್ಬರೊಳ್ ನೆರೆವರಂ ಕುಲನಾರಿಯರೆಂಬುದೀ ವಿಚಾ ।
ರಿಸೆ ಪತಿಭಕ್ತಿವೆತ್ತೆಸೆವ ಮಾಳಲದೇವಿಯನಲ್ಲದನ್ಯರಂ ॥ 795 ॥

ಗಾಳುತನದಿಂದೆ ಪುರುಷರ। ನೇಳಿದಮಂ ಮಾಲ್ಪ್ರ ದುಶ್ಚರಿತ್ರೆಯರಂ ವಾ ।
ಚಾಳಿಯರಂ ಕಂಡಘತತಿ । ಮಾಳಲದೇವಿಯ ಗುಣಾನುಕಥನದೆ ಕಿಡುಗುಂ
॥ 796 ॥

ಪತಿ ಬಸದಕ್ಕುಮಿಂತು ತಮಗೆಂದು ದುರೌಷಧಮಂ ಪ್ರಯೋಗಿಪರ್ ।
ಕೃತಕೆಯರಂತಜುಂದೆ ಪುರುಷರ್ ಕ್ಷಯಕಾಮಲೆಪಾಂಡುಗುಲ್ಮದಿಂ ॥
ದತಿಕೃಶರಾಗೆ ಬಿಚ್ಚಟ್ಟಿಸುತಿರ್ಪವರೆಂತೊ ಕುಲಾಂಗನಾಜನಂ।
ಪತಿಹಿತೆ ಮಾಳಿಯವ್ವೆಯೆ ಕುಲಾಂಗನೆ ವಾರ್ಧಿಪರೀತಧಾತ್ರಿಯೊಳ್ ॥ 797 ॥

ಮನೆಗೀಬಂದರೆ ಬಿರ್ದಿನ । ರೆನಲೊಳಯಿಂಕೋಡಿಪೋಗಿಯಡಗುವ ಸಮುಖಿಂ ।
ತನಗಾದೊಡೆ ನೀವಾರೆಂ । ಬನಲೆಯರೀಮಾಳಿಯವ್ವೆಗೆಂತಣೆಯಪ್ಪರ್ ॥ 798 ॥

---

## ಶಿಶುಮಾಯಣ. ?1233.

ಈತನು ತ್ರಿಪುರದಹನಸಾಂಗತ್ಯ, ಅಂಜನಾಚರಿತ್ರೆ ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಇವನು ಜೈನಕವಿ.

ಇವನ ಗ್ರಂಥಗಳಿಂದ ಇವನ ವಿಷಯವಾಗಿ ಈ ಸಂಗತಿಗಳು ತಿಳಿಯ ಬರುತ್ತವೆ :—

ಹೊಯ್ಸಳದೇಶದಲ್ಲಿ ಕಾವೇರಿಯಕಾಲುವೆಯ ಸವಿಾಪದಲ್ಲಿರುವ ನಯನಾಪುರವೆಂಬ ಊರಿನಲ್ಲಿ ದೇವರಾಜನ ಇಷ್ಟಾನುಸಾರವಾಗಿ ರಾಜರಾಜನು ಒಂದು ನೇಮಿಜಿನಾಲಯವನ್ನು ಕಟ್ಟಿಸಿದನು. ಅದೇ ಊರಿನಲ್ಲಿ ಮಾಯಣಸೆಟ್ಟಿಯೆಂಬ ಒಬ್ಬ 'ವಣಿಗ್ವರ' ನಿದ್ದನು. ಅವನ ಹೆಂಡತಿ ತಾಮರಸಿ; ಮಗ ಬೊಮ್ಮಸೆಟ್ಟಿ. ಈತನು—"ಮಾನವಪತಿಗಳ ಸಭೆಯೊಳು ರತ್ನಸಮಾನದೀಪದವೊಲೊಪ್ಪುವನು." ಇವನ ಹೆಂಡತಿ ನೇಮಾಂಬಿಕೆ; ಮಗ ಕವಿ ಶಿಶುಮಾಯಣ. ಇವನ ಗುರು ಕಾಣೂರ್ಗಣದ ಭಾನುಮುನಿ. ಬೆಳುಕೆರೆಯಪುರದರಸಾದ ಗುಮ್ಮಟದೇವನು ಹೇಳಿನಲು ಕವಿ ಅಂಜನಾಚರಿತ್ರೆಯನ್ನು ಬರೆದನು.

ತ್ರಿಪುರದಹನಸಾಂಗತ್ಯವು

ಶಕವರ್ಷದ ಸಾವಿರದನೂಱಱುಳಿ । ತ್ಸಕಲವಾದಾಱುವತ್ಸರದ ।
ಪ್ರಕಟತಪುತ್ರವರ್ಷದ ಮಾಘಶುದ್ಧದಿ । ನಕಳಂಕಪಾಡ್ಯದೊಳಾಯ್ತು ॥

ಎಂದು ಹೇಳಿದೆ. ಪುತ್ರವರ್ಷವೆಂದರೆ ನಂದನವರ್ಷವೆಂದು ತೋರುತ್ತದೆ. ಆದರೆ 1106 ನೆಯ ವರ್ಷವು ಕ್ರೋಧಿಯಾಗುತ್ತದೆ. ಉತ್ಸಕಲ ಎಂಬ ಪದಕ್ಕೆ ವಿಶೇಷಾರ್ಥವೇನಾದರೂ ಇರಬಹುದೋ ಏನೋ ತಿಳಿಯದು. ಶಕ 1100 ವರ್ಷಗಳಾದ ಮೇಲೆ ಪ್ರಭವಾದಿವತ್ಸರ ಗಳಲ್ಲಿ ಮಿಕ್ಕ ಕೊನೆಯ 6 ವರ್ಷಗಳಲ್ಲಿಯ ನಂದನ ಎಂದು ಅರ್ಥಮಾಡಿದರೆ ಶಕ 1154 (1233) ಆಗುತ್ತದೆ. ಕವಿಯ ಆಶಯವು ಇದೇ ಆಗಿರಬಹುದೋ ಏನೋ ತಿಳಿಯದು. ಈತನು ಜನ್ನನನ್ನು (1230) ಸ್ತುತಿಸುವುದರಿಂದ ಸ್ವಲ್ಪ ಹೆಚ್ಚು ಕಡಮೆ ಅವನ ಸಮ ಕಾಲದವನಾಗಿದ್ದಿರಬಹುದು. ಒಬ್ಬ ಬೆಳುಕರೆಯಧಿಪನಾದ ಗುಮ್ಮಟ್ಟನು 1313 ರಲ್ಲಿ ದ್ದಂತೆ ಶ್ರ. ಜಿ. 65 ನೆಯ ಶಾಸನದಿಂದ ತಿಳಿಯುತ್ತದೆ. ಕವಿ ಹೇಳುವ ಗುಮ್ಮಟದೇವನು ಇವನೇ ಆಗಿದ್ದಪಕ್ಷದಲ್ಲಿ ಕವಿಯ ಕಾಲವು ಪದ್ಯದಲ್ಲಿಕೊಟ್ಟಿರುವ ಕಾಲಕ್ಕೆಂತ 80 ವರ್ಷ ಈಚೆಯಾಗುತ್ತದೆ. ಆದುದರಿಂದ ಕವಿ ಹೇಳುವ ಗುಮ್ಮಟನು ಶಾಸನೋಕ್ತನಾದ ಗುಮ್ಮಟ್ಟನ ಪಿತಾಮಹನಾಗಿರಬಹುದೆಂದು ತೋರುತ್ತದೆ.

ಈತನಿಗೆ ಹಸುಳೆವಾಯಣ, ತರಳವಾಯಣ ಎಂಬ ಹೆಸರುಗಳೂ ಉಂಟು. ಈ ಹೆಸರಿಗೆ ಕಾರಣವನ್ನು ಈ ಪದ್ಯದಲ್ಲಿ ಸೂಚಿಸಿದ್ದಾನೆ:—

ವಸುಧೆಯೊಳುಳ್ಳ ಭವ್ಯರುಗಳಿಗೆಲ್ಲರ್ಗ್ಗೆ । ಸಸುವಾಗಿಪ್ಪುದಱಂದ ।
ಉಸುರುವ ಪದಪದ್ಯದೊಳು ತನ್ನ ಪೆಸರನು । ಹಸುಳೆವಾಯಣನೆಂದು ಇಡುವ ॥

ಪೂರ್ವಕವಿಗಳನ್ನು ಈ ಪದ್ಯದಲ್ಲಿ ಸ್ತುತಿಸಿದ್ದಾನೆ:—

ರನ್ನನ ಹೊನ್ನನ ಜನ್ನಮಯ್ಯನ ಚತು । ರೋನ್ನತಕವಿತಾರ್ಣವನ ।
ಸನ್ನುತಕವಿಪಂಪರಾಜಮೊದಲಾದರ । ಚಿನ್ನಡಿಗಳಿಗೆಱಗುವೆನು ॥

ತನ್ನ ಕವಿತಾಚಾತುರಿಯನ್ನು ಈ ಪದ್ಯದಲ್ಲಿ ಹೇಳಿಕೊಂಡಿದ್ದಾನೆ:—

ಹಸುಳೆವಾಯಣನುಸುರಿದ ಕೃತಿಯೊಳು ನವ । ರಸ ಪರಿಪೂರಿತವಾಗಿ ।
ಒಸರುವುದಾರಸಭೇದವನಱಿದು ಸೇ । ವಿಸುವುದು ರಸಿಕಕೋವಿದರು ॥

ಇವನ ಗ್ರಂಥಗಳಲ್ಲಿ—

## 1. ಅಂಜನಾಚರಿತ್ರೆ.

ಇದು ಸಾಂಗತ್ಯವೆಂಬ ಹಾಡಿನ ರೂಪವಾದ ಗ್ರಂಥವು; 15 ಸಂಧಿಗಳಾಗಿ ಭಾಗಿಸಲ್ಪಟ್ಟಿದೆ; ಪದ್ಯ 6,000.

ಅರುಹನ ಮತದೊಳಿಸೆವ ಪದ್ಮಚರಿತವ । ವಿರಚಿಸಿದನು ರವಿಷೇಣ ।
ಪರಮಮುನೀಂದ್ರ ಗೀರ್ವಾಣಭಾಷೆಯೊಳದ । ನೊರೆವೊಡಿನ್ನಾರಳವಹುದು ।
ಅದಱೊಳಂಜನೆಯೆಂಬ ಸುದತಿಯ ಚರಿತೆಯ । ನೊದವಿ ಪೇೞ್ದೆನು ಕನ್ನಡದಿಂ ॥

ಎಂಬುದರಿಂದ ಈ ಗ್ರಂಥವು ರವಿಷೇಣನು ಸಂಸ್ಕೃತದಲ್ಲಿ ಬರೆದಿರುವ ಪದ್ಮಚರಿತ್ರದ ಒಂದು ಭಾಗವೆಂದು ತಿಳಿಯುತ್ತದೆ. ಇದರ ಉತ್ಕೃಷ್ಟತೆಯನ್ನು ಕವಿ ಈ ಪದ್ಯದಲ್ಲಿ ಹೇಳಿದ್ದಾನೆ :—

ಅಂಜನಾಚರಿತವೆಂದೆಂಬ ನಾಮವು ಕೃತಿ । ಗೆಂಜಲಲ್ಲನ್ವರ್ಥಕವು ।
ಕಂಜಭವನ ರಾಣಿಯ ನಯನದೊಳಿಸೆ । ವಂಜನವಾದ ಕಾರಣದಿ ॥

ಗ್ರಂಥಾವತಾರದಲ್ಲಿ 24 ಜಿನರನ್ನು ಸ್ತುತಿಸಿದ್ದಾನೆ. ಬಳಿಕ ಗುಮ್ಮಟೇಶ, ಭುಜಬಲಿಪುರದ ಭುಜಬಲಿ, ಸಿದ್ಧಾದಿಗಳು, ಯಕ್ಷಿಯಕ್ಷರು, ಸರಸ್ವತಿ, ಜ್ವಾಲಾಮಾಲಿನಿ, ಪದ್ಮಾವತಿ, ಬಾಹುಬಲಿಪದಸೇವಕ ಬೇಹುಬ್ರಹ್ಮ ಇವರುಗಳನ್ನು ಸ್ಮರಿಸಿ ತರುವಾಯ ಮಾಘಣಂದಿಯೊದಲುಗೊಂಡು ಪಂಡಿತನವರೆಗೆ ಜೈನಗುರುಗಳನ್ನು ಕ್ರಮವಾಗಿ ಹೊಗಳಿದ್ದಾನೆ.[1]

ನಮಗೆ ದೊರೆತಿರುವ ಸಾಂಗತ್ಯಕವಿಗಳಲ್ಲಿ ಈತನೇ ಮೊದಲನೆಯವನು; ಸಾಂಗತ್ಯದಲ್ಲಿ ಅನೇಕ ಜೈನ ವೀರಶೈವ ಬ್ರಾಹ್ಮಣ ಗ್ರಂಥಗಳು ಹುಟ್ಟಿವೆ. ಸುಮಾರು 13 ನೆಯ ಶತಮಾನದಲ್ಲಿ ಹಾಡಿನ ರೂಪವಾದ ಈ ಸಾಂಗತ್ಯ ಗ್ರಂಥಗಳ ರಚನೆ ಆರಂಭವಾದಂತೆ ತೋರುತ್ತದೆ.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ :—

ಅಡಕೆ.

ಇಳೆಯೆಂಬ ಸತಿಗಜ ಪೊಳೆವ ಪಚ್ಚೆಯ ಚತ್ರ । ಗಳನು ನಿರ್ಮಿಸಿದನೆಂಬಂತೆ ।
ಪಲವು ಹೊಂಬಾಳೆಯ ತಳೆದು ಪೂಗಾಳಿಗ । ಳಲಘುಫಲದಿನೊಪ್ಪತಿಹುವು

॥ 799 ॥

ಬಾಳೆ.

ಕಂದಿನೊಳಗೆ ಹುಟ್ಟಿ ಕಂದರೆಲ್ಲರ ಬಿಟ್ಟು । ಮುಂದಲೆಯನು ಕೊಟ್ಟು ಜನದ ।
ನಿಂದೆಯೊಳೊಂದಿ ಬಾಟುವ ಬಾಲ್ಬಿ ಸುಡಲೆಂದು । ನೊಂದೆಱಿಗಿದ ಬಾಟಿಯಿಹುವು

॥ 800 ॥

---

1. ಮಾಘಣಂದಿ. ಜಿನಸೇನ, ಸಮಂತಭದ್ರ, ನೇಮಿಚಂದ್ರ, ರಾಮಚಂದ್ರ, ಪ್ರಭಾಚಂದ್ರ, ಸೋಮನಜಿದಕಲಂಕಚಂದ್ರ, ಜಿನಚಂದ್ರ, ಭದ್ರಬಾಹು, ಸುಭದ್ರಾರ್ಯ, ಪರವಾದಿಧ್ವಂಸಕಪಂಡಿತಯೋಗಿ, ವಾದಿವಿದ್ಯಾನಂದ, ವರ್ಧಮಾನ, ವೀರಸೇನ, ಕಾಣೂರ್ಗಣದ ದೇವಕೀರ್ತಿ, ಶ್ರುತಕೀರ್ತಿ, ವಿಜಯಸುಕೀರ್ತಿ, ಭೂಭೂಷಣ, ರಾಮಚಂದ್ರ, ಪ್ರಭೇಂದು, ಇಂದುಕೀರ್ತಿ, ಸಾಸಿರಕೀರ್ತಿ, ದೇಶೀಯಗಣದ ಚಂಗದೇಶದ ಪ್ರಭೇಂದು, ಸಮಂತಭದ್ರ, ಕಾಣೂರ್ಗಣದ ಭಾನುಮುನಿ, ಯತಿವರ್ಧಮಾನ, ನೇಮಿಚಂದ್ರ, ಗುಮ್ಮಟದೇವಸೂರಿ, ಪಂಡಿತ.

ಹುಣಿಸೆ.

ಒಮ್ಮೆ ಫಲವನಿತ್ತು ಸುಮ್ಮನೆಯಿಹ ತರು । ವೆಮ್ಮೆಳು ಮಚ್ಚರಿಸಿದೊಡೆ ।
ಹಮ್ಮೆ ಮುಜುವೆಸೆಂಬ ಹುಣಿಸೆಯ ಮರಗಳು । ಸುಮ್ಮಾನದಿ ಬೆಳೆದಿಹುವು ॥ 801 ॥

## 2. ತ್ರಿಪುರದಹನಸಾಂಗತ್ಯ.

ಇದೂ ಸಾಂಗತ್ಯದಲ್ಲಿ ಬರೆದಿದೆ; ಪದ್ಯ 281. ಈ ಗ್ರಂಥದಲ್ಲಿ "ಜನನ ಜರಾಮರಣಗಳೆಂಬ ಪೆಸರಿಂದ ಘನತರವಹ ಮೂಱು ಪುರವನು ಜ್ಯೋತಿ ರೂಪವ ತಳೆದಾದೀಶ್ವರ ಸುಟ್ಟ ಕೌತುಕವನು ಪೇಟುವೆನು" ಎಂದು ಕವಿ ಹೇಳುತ್ತಾನೆ.

ಗ್ರಂಥಾವತಾರದಲ್ಲಿ ಕವಿ ಚಂದ್ರನಾಥನನ್ನು ಸ್ತುತಿಸಿ ಬಳಿಕ ಶಾಂತಿಜಿನ, ನೇಮಿ, ವರ್ಧಮಾನ ಮುಂತಾದ 24 ಜಿನರನ್ನೂ ಬೆಳ್ಗೊಳದ ಭುಜಬಲಿಯನ್ನೂ ಸಿದ್ಧರು, ಆಚಾರ್ಯರು, ಶಾರದೆ, ಭಾನುಮುನಿ ಇವರುಗಳನ್ನೂ ಸ್ಮರಿಸಿದ್ದಾನೆ.

ಈ ಗ್ರಂಥದಿಂದ ಒಂದು ಪದ್ಯವನ್ನು ಉದ್ಧರಿಸಿ ಬರೆಯುತ್ತೇವೆ:—

ಬ್ರಾಹ್ಮಣಪರಿಹಾಸ

ಪದಿನಾಲ್ಕು ಭುವನವೆಲ್ಲವು ಪುರುಷೋತ್ತಮ । ನುದರದೊಳಿರುತಿರ್ದು ತಾನು ।
ಅದಟರಕ್ಕಸನ ಮೇಲಿರದೆ ಸಂಗ್ರಾಮವ । ನೊದನಿದುದಿದು ಚಿತ್ರವಲ್ತೇ ॥ 802 ॥

---

## ಸೋಮನಾಥಪಂಡಿತ. 1234.

ಈತನು ಅರಸಿಯಕೆರೆಯ 123 ನೆಯ ಶಾಸನವನ್ನು ಬರೆದುದಾಗಿ ಆ ಶಾಸನದ ಕೊನೆಯಲ್ಲಿರುವ "ಶ್ರೀಮದಾನಂದಬೋಧಪ್ರಭುಗಳ ದಾಸ ಗ..ಕುಳ ತಿಳಕ ಸುಕವಿಕಂಠಾಭರಣ ಸೋಮನಾಥಪಂಡಿತರು ಪದ್ಯಂಗಳ ಹೇಟ್ದರು" ಎಂಬ ವಾಕ್ಯದಿಂದ ತಿಳಿಯುತ್ತದೆ.

ಈ ಶಾಸನದ ಬಂಧದಿಂದಲೂ "ಸುಕವಿಕಂಠಾಭರಣ" ಎಂಬ ಈತನ ಬಿರುದಿನಿಂದಲೂ ಇವನು ದೊಡ್ಡ ಕವಿಯಾಗಿದ್ದನೆಂಬುದರಲ್ಲಿ ಸಂದೇಹವಿಲ್ಲ.

ಈತನು ಬ್ರಾಹ್ಮಣ ಕವಿ; ಸಿಂದವಿಗೆಯ ಆನಂದಬೋಧಮುನಿಯ ಶಿಷ್ಯನು. ಈ ಶಾಸನವು ಹೊಯ್ಸಳವೀರನಾರಸಿಂಹನ ಆಳಿಕೆಯಲ್ಲಿ ಶಕ 1156 ರಲ್ಲಿ—ಎಂದರೆ 1234 ರಲ್ಲಿ—ಬರೆದುದು. ಇದರಲ್ಲಿ ಸಿಂದವಿಗೆಯ ಸ್ವಾಮಿಯ ಹೆಸರಿನಲ್ಲಿ ಸೋಮನಾಥಪುರದೊಳಗೆ ನರಸಿಂಹದೇವರ ಪ್ರತಿಷ್ಠೆಯಾದುದಾಗಿ ಹೇಳಿದೆ.

ಈ ಶಾಸನದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

### ನಾರಸಿಂಹದೇವರು.

ಶ್ರೀರಾಮಾಲಿಂಗನಾಲೋಕನವಶಜನಿತಾಂತಃಪ್ರಮೋದಪ್ರಕರ್ಷ ।
ಸ್ಫೀರಾಸ್ಯಂ ಪದ್ಮಗರ್ಭಪ್ರಣುತಚರಿತನಾನನ್ಯನಾನಾಮರುತ್ಕೋ ॥
ಟೀರಾಗ್ರೋದ್ಯತ್ಸಮಾನಾರುಣಮಣಿಗಣನೀರಾಜತಾಂಘ್ರಿದ್ವಯಂ ಲೋ ।
ಕಾರಾಧ್ಯಂ ನಾರಸಿಂಹಂ ಕುಡುಗಭಿಮತಮಂ ಸೋವಿದೇವಂಗಜಸ್ಯಂ ॥ 803 ॥

### ಹೊಯ್ಸಳ ನರಸಿಂಹ.

ಕರನಾಳ್ ವಾಸುಗಿ ತೋಳ್‌ಮುಂ । ದರಮಾಗೆ ವಿರೋಧಿಮಗರಬಳಜಳನಿಧಿಯಂ ।
ಭರದಿಂ ಕಡೆದಂ ಪಡೆದಂ । ಕರಿರತ್ನಮನಶ್ವರತ್ನಮಂ ನರಸಿಂಹಂ ॥ 804 ॥

### ಸೋವಿದೇವ.

ಪೊಗಟ್ಪಿಂ ಜಗಜ್ಜನಂ ತಣಿದು ತನ್ನನೆ ಹೊಯ್ಸಳಸೋವಿದೇವನಾ ।
ವಗಮಖಿಳೋರ್ವಿಯಂ ತಳಿದನಿಂ ಕಮತಾಗ್ರಣಿ ರಾಗದಿಂದೆ ಪೊಂ ॥
ಗುಗೆ ತಲೆಯೆತ್ತಿ ಸೈತು ನಿಮಿರ್ದೊಂಡುಗೆ ಪನ್ನಗರಾಜನುರ್ಕೆ ಸೊ ।
ರ್ಮುಗೆ ದಿಗಿಭವ್ರಜಂ ಕುಲನಗಾವಳಿ ಮೇಲ್ಮಳಿಗಂಬರಂಬರಂ ॥ 805 ॥

---

## ಶ್ರೀವಿಜಯರ್ ದಶಕೀರ್ತಿದೇವರ್. 1234.

ಇವರು ಚೆನ್ನಗಿರಿ 52 ನೆಯ ಶಾಸನವನ್ನು ಬರೆದುದಾಗಿ ಆ ಶಾಸನದ ಕೊನೆಯಲ್ಲಿರುವ "ಶ್ರೀವಿಜಯರ್ ದಶಕೀರ್ತಿದೇವರ್ ವಿರಚಿಸಿದರ್ ಸೇವ್ಯಶಾಸನ ಕೃತಿಯಂ" ಎಂಬ ಭಾಗದಿಂದ ತಿಳಿಯುತ್ತದೆ.

ಈ ಶಾಸನವು ಹೊಯ್ಸಳ ವೀರನಾರಸಿಂಹನ ಆಳಿಕೆಯಲ್ಲಿ ಶಕ 1156 ರಲ್ಲಿ—ಎಂದರೆ 1234 ರಲ್ಲಿ—ಬರೆದುದು. ಇದರಲ್ಲಿ ನೆಲ್ಲುದುರೆಯ ಬ್ರಹ್ಮೇಶ್ವರದೇವರಿಗೆ ಊರೊಡೆಯರು ದತ್ತಿಯನ್ನು ಬಿಟ್ಟಂತೆ ಹೇಳಿದೆ.

ಇದರಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

### ಹೊಯ್ಸಳ ನರಸಿಂಹ.

ನರಪತಿನಾರಸಿಂಹನೊಳಿದಿರ್ಚಿದೊಡೆಚ್ಚಜಿದೆಂಬ ಭೀತಿಯಿಂ ।
ಹರಣದ ಹಾನಿಗಂಜಿ ಜವನಂ ಮಜ್ಜೆವೊಕ್ಕು ಬರ್ದುಂಕುವೋಪರಾ ॥
ಯರ ನಡುಬೆನ್ನೊಳುಂಡಿಗೆಯನೊತ್ತುವೆನೆಂದಮೃತಾಂಶು ತಾಳ್ದನೊಂ ।
ದೆರಳೆಯನೆಂದೊಡೇವೊಗಟ್ಪುದುನ್ನತಿಯಂ ಶಶಿವಂಶರತ್ನನಾ ॥ 806 ॥

ಮುದ್ದಲೆ.

ನಯವತಿಯೆಂದು ಶೀಲವತಿಯೆಂದು ಕಳಾವತಿಯೆಂದು ಸದ್ಗುಣಾ ।
ನ್ವಯವತಿಯೆಂದು ಧರ್ಮವತಿಯೆಂದು ದಯಾವತಿಯೆಂದು ಪುಣ್ಯಸಂ ॥
ಚಯವತಿಯೆಂದು ಕೀರ್ತಿಸುವುದೂರೊಡೆಚೋಕನ ಪೆರ್ಮೆವೆತ್ತ ಕಾಂ ।
ತೆಯನೊಲವಿಂದೆ ಮುದ್ದಲೆಮಹಾಸತಿಯಂ ನೆಗಲ್ದ್ವೀ ಜಗಜ್ಜನಂ ॥ 807 ॥

---

## ಚಿದಾನಂದಕವಿ. 1234.

ಈತನು ಮಂಡ್ಯದ 121, 122 ನೆಯ ಶಾಸನಗಳನ್ನು ಬರೆದಂತೆ ಎರಡನೆಯ ಶಾಸನದ ಕೊನೆಯಲ್ಲಿರುವ—

ಧರೆ ಪೊಗಲ್ತೆ ಚಿದಾನಂದಂ । ವಿರಚಿಸಿದಂ ಸತ್ಕವೀಶ್ವರಂ ಶಾಸನಮಂ ।
ಪರಮಪ್ರಕಾಶಯೋಗೀ । ಶ್ವರತನಯಂ ಬ್ರಹ್ಮವಿದ್ಯೆಗಾಸ್ಪದರೂಪಂ ॥

ಎಂಬ ಪದ್ಯದಿಂದ ತಿಳಿಯುತ್ತದೆ. ಇವನು ಪರಮಪ್ರಕಾಶಯೋಗೀಶ್ವರನ ಮಗನೆಂದೂ ಬಹ್ಮವಿದ್ಯಾವೇತ್ತನೆಂದೂ ಸತ್ಕವೀಶ್ವರನೆಂದೂ ಈ ಪದ್ಯದಿಂದಲೇ ವ್ಯಕ್ತವಾಗುತ್ತದೆ. ಈತನು ಬ್ರಾಹ್ಮಣಕವಿ. ಈ ಶಾಸನಗಳಲ್ಲಿ 1 ನೆಯದು ಹೊಯ್ಸಳರಾಜನಾದ 2 ನೆಯ ನಾರಸಿಂಹನ (1220–1235) ಆಳಿಕೆಯಲ್ಲಿ 1234 ರಲ್ಲಿಯೂ 2 ನೆಯದು ಈ ರಾಜನ ಮಗನಾದ ಸೋಮೇಶ್ವರನ (1233–1254) ಆಳಿಕೆಯಲ್ಲಿ 1237 ರಲ್ಲಿಯೂ ಬರೆದುವು. ಇವುಗಳಲ್ಲಿ ಈ ಇಬ್ಬರು ರಾಜರಲ್ಲಿಯೂ ಮಹಾಪ್ರಧಾನನಾಗಿದ್ದ ಅಡ್ಡಾಯದದ ಹರಿಹರದಂಡನಾಯಕನು ಬಸರಾಳಿನಲ್ಲಿ ಮಲ್ಲಿಕಾರ್ಜುನದೇವಸ್ಥಾನವನ್ನು ಕಟ್ಟಿಸಿ ದೇವರಿಗೆ ದತ್ತಿಯನ್ನು ಬಿಟ್ಟಂತೆ ಹೇಳಿದೆ. ಈ ದೇವಸ್ಥಾನವು ಚಿತ್ರಕೆಲಸದಿಂದ ಶೋಭಿತವಾಗಿ ಬಹಳ ರಮಣೀಯವಾಗಿದೆ. ಈ ಶಾಸನಗಳಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ :—

ನಾರಸಿಂಹ.

ಶ್ರೀವಧು ಮುತ್ತಿನೆಕ್ಕಸರದಂತುರದೊಳ್ ನಲಿವಂತು ವಿಕ್ರಮ ।
ಶ್ರೀವಧು ಬಾಹುಪೂರಕದಪೋಲ್ ಭುಜದೊಳ್ ನಲಿವಂತು ಕೀರ್ತಿ ವಿ ॥
ಶ್ವೀವಿಯರೊಳ್ ನಿಜಾಜ್ಞೆವೆರಸಾದರದಿಂ ನಲಿವಂತು ಧರ್ಮಲ ।
ಕ್ಷ್ಮೀವರನಾಗಿ ಪಾಲಿಸದನುರ್ವರೆಯಂ ನರಸಿಂಹಭೂಭುಜಂ ॥ 808 ॥

ನಡೆವನ್ನಂ ನಾರಸಿಂಹಕ್ಷ್ಮಾಪತಿಗವನೀಪಾಳರೆಲ್ಲರ್ದಪರ್ ಬಾ ।
ಳ್ವಡಿವನ್ನಂ ಕ್ಷತ್ರಿಯರ್ ಸಂಗರಸಮಯದೊಳಾರ್ ನಿಂದಪರ್ ದುರ್ಗಮಂ ಪೊ ॥

ಕ್ಕೊದಮುರ್ವೀಪಾಳರಂ ಪೆಣ್ಣುಡೆಯನುಡಿಸುಗುಂ ತನ್ನ ದೋರ್ದಂಡಶೌರ್ಯಂ ।
ಪೊಡೆಗಿಚ್ಚಂ ಕಾಸುತಿಕ್ಕುಂ ಕಡೆಯರಸುಗಳಂ ತನ್ನ ತೇಜಃಪ್ರತಾಪಂ ॥ 809 ॥

## ಸೋಮೇಶ್ವರ.

[1]ಸಿರಿ ವಕ್ಕೊೀರಂಗದೊಳ್ ನರ್ತಿಸೆ ವಿಜಯಭುಜಾದಂಡದೊಳ್ ವಿಕ್ರಮಶ್ರೀ ।
ಯಿರೆ ವಕ್ತ್ರಾಂಭೋಜದೊಳ್ ವಾಗ್ವನಿತೆ ನೆಲಸೆ ತನ್ನಾಜ್ಞೆ ವಿದ್ವಿಷ್ಟಭೂಪಾ ॥
ಳರ ಕೋಟೀರಂಗಳೊಳ್ ವರ್ತಿಸೆ ವಿಶದಯಶಂ ಪರ್ವೆ ವಾರಾಶಿತೀರಂ ।
ಬರಮಾಳ್ವಂ ವಿಶ್ವಧಾತ್ರೀತಳಮನತಿಬಳಂ ರಾಯರೊಳ್ ಸೋಯಿದೇವಂ
॥ 810 ॥

ನೆಲನಂ ಪೊತ್ತೆತ್ತೆ ನಾಳ್ಗರ್ತನದ ಮಹಿಮೆಯಿಂ ಪೊಂಗುವಂ ಕೂರ್ಮರಾಜಂ ।
ತಲೆಯೆತ್ತಿರ್ಪಂ ಫಣೀಶಂ ಮದಮನೆಸಗುವಂ ದಿಗ್ಗಜೇಂದ್ರಂ ನಿತಾಂತಂ ॥
ಬಲಿದಿರ್ಪಂ ಗೋತ್ರಭೂಭೃದ್ವರ. ದೊಸಗೆಯಿಂದುರ್ವಿಯಂ ನಿರ್ವಿಕಾರಂ ।
ಬಲದೋಳೊಳ್ ತಾಳ್ದಿ ಪೆಂಪಂ ತಳೆದತುಳಬಳಂ ರಾಯರೊಳ್ ಸೋವಿದೇವಂ
॥ 811 ॥

## ಅಡ್ಡಾಯದದ ಹರಿಹರದಂಡನಾಥ.

ಚರಿತಂ ಗಂಗಾನದೀಸಂಗಮಸಹಚರಮಾಸ್ಯೇಂದು ಸತ್ಯಾಮೃತಶ್ರೀ ।
ಭರಿತಂ ಲಕ್ಷ್ಮೀವಿಳಾಸಂ ದ್ವಿಜಗುರುಬುಧಗೋತ್ರಾದಿಸದ್ವಾನದೀಕ್ಷಂ ॥
ಗುರುಚಿತ್ತಂ ಪಾರ್ವತೀವಲ್ಲಭಪದಕಮಳಧ್ಯಾನಸಂಧಾನಸಾರಂ ।
ನರಸಿಂಹೋರ್ವೀಶನಡ್ಡಾಯದದ ಹರಿಹರಂ ಲೋಕದೊಳ್ ತಾನೆ ಧನ್ಯಂ ॥ 812 ॥

ಕಡುಪಿಂ ಮುತ್ತಿದ ವೀರಸೇವುಣರ ಸೈನ್ಯಾನೀಕಮಂ ಪೊಕ್ಕು ? ಮೆ ।
ಯ್ದುಡೆ ಕೊಂದಿಕ್ಕಿದನೊಕ್ಕಲಿಕ್ಕೆ ತುಬ್ಬಿದಂ ಬೆನ್ನಟ್ಟಿದಂ ಮೆಟ್ಟಿದಂ ॥
ಪಿಡಿದಂ ಸಾಲೆ ತುರಂಗಮಂ ಹರಿಹರಂ ತನ್ನೊಂದೆ ಜಾತ್ಯಶ್ವದಿಂ ।
ಗಡ ವಿಶ್ವಾವನಿ ಮೆಚ್ಚಿ ಮಂತ್ರಿತಿಲಕಂ ವಿದ್ವಿಷ್ಟವಿದ್ರಾವಣಂ ॥ 813 ॥

## ಮಲ್ಲಿಕಾರ್ಜುನದೇವಾಲಯ.

ಮೊದಲಿಂದಂ ಕಲಶಂಬರಂ ಮೆಱಿವ ನಾನಾಚಿತ್ರಪತ್ರಂಗಳಿಂ ।
ಮುದಮಂ ಬೀಱುವ ಭಾರತಾದಿಕಥೆಯಿಂ ಮೆಯ್ವೆತ್ತ ಕೂಟಂಗಳಿಂ ॥
ದಿದು ಪಾಂಚಾಳಿಕೆ ತಳ್ತ ಮೇರುಗಿರಿಯೋ ಪೇಱ್ದಿಂಬಿನಂ ವಿಭ್ರಮಾ ।
ಸ್ಪದಮಾಗಿರ್ಪುದು ಮಲ್ಲಿಕಾರ್ಜುನ..... ದೇವಾಲಯಂ ॥ 814 ॥

---

1 ಈ ಪದ್ಯವು ಸೂಕ್ತಿಸುಧಾರ್ಣವದಲ್ಲಿ ಅನುವಾದಮಾಡಲ್ಪಟ್ಟಿದೆ.

## ಎರಡನೆಯ ಗುಣವರ್ಮ.[1] ಸು. 1235.

ಈತನು **ಪುಷ್ಪದಂತಪುರಾಣವನ್ನೂ ಚಂದ್ರನಾಥಾಷ್ಟಕವನ್ನೂ** ಬರೆದಿದ್ದಾನೆ.

ಇವನು ಜೈನಕವಿ; ಇವನ ಪೋಷಕನು 'ಅಹಿತಕ್ಷ್ಮಾಭೃದ್ಬೃಹದ್ವಜ್ರ' ನಾದ ಕಾರ್ತವೀರ್ಯರಾಜನ ಕೈಯಕೆಳಗೆ 'ನಾಭ್ರಿಭು' ವಾಗಿದ್ದ ಶಾಂತಿವರ್ಮನು; ಗುರು ಕಾರ್ತವೀರ್ಯನ ಗುರುವಾದ ಮುನಿಚಂದ್ರನು.

ಈತನು ಪೂರ್ವಕವಿಗಳನ್ನು ಸ್ಮರಿಸುವಾಗ **ಜನ್ನ**ನನ್ನು (1230) ಸ್ತುತಿಸಿರುವುದರಿಂದ ಆ ಕವಿಗಿಂತ ಈಚೆಯವನಾಗಿರಬೇಕು; **ಮಲ್ಲಿಕಾರ್ಜುನ**ನು (ಸು. 1245) ಈತನ ಪುಷ್ಪದಂತಪುರಾಣದಿಂದ ಪದ್ಯಗಳನ್ನು ಅನುವಾದಮಾಡಿರುವುದರಿಂದ ಅವನಿಗೆ ಹಿಂದೆ ಇದ್ದಿರಬೇಕು; ಸುಮಾರು 1235 ರಲ್ಲಿ ಇದ್ದಿರಬಹುದೆಂದು ತೋರುತ್ತದೆ.

1229 ರಲ್ಲಿ ಬರೆದ ಸೌಂದತ್ತಿಯ ಶಾಸನದಲ್ಲಿ [2] ಹೇಳಿರುವ ಕಾರ್ತವೀರ್ಯ, ಮುನಿಚಂದ್ರ, ಶಾಂತಿನಾಥ ಎಂಬವರು ಈತನು ಹೇಳುವ ಕಾರ್ತವೀರ್ಯ ಮುನಿಚಂದ್ರ ಶಾಂತಿವರ್ಮರೇ ಆಗಿರಬೇಕೆಂಬುದರಲ್ಲಿ ಸಂದೇಹವಿಲ್ಲ. ಶಾಸನದಲ್ಲಿ ಶಾಂತಿನಾಥನು ಮುನಿಚಂದ್ರನಿಗೆ ಅಮಾತ್ಯನಾಗಿದ್ದಂತೆ ಹೇಳಿದೆ. ಅಲ್ಲದೆ ಇವನನ್ನು 'ಇಷ್ಟಶಿಷ್ಟ ಚಿಂತಾಮಣಿ' ಎಂದು ವಿಶೇಷಿಸಿ ಹೇಳಿದೆ. ಪುಷ್ಪದಂತಪುರಾಣದಲ್ಲಿ ಶಾಂತಿವರ್ಮನನ್ನು 'ಇಷ್ಟ ಶಿಷ್ಟ ಕಲ್ಪಕುಜ' ಎಂದು ಕವಿ ಸ್ತುತಿಸಿದ್ದಾನೆ. ಮೇಲೆ ಹೇಳಿದ ಕಾರ್ತವೀರ್ಯನು 1202 ರಿಂದ 1220 ರ ವರೆಗೆ ಆಳಿದಂತೆ ಶಾಸನಗಳಿಂದ ತಿಳಿಯುತ್ತದೆ. ಈ ರಾಜನ ಸಭೆಯಲ್ಲಿ ಶಾಂತಿವರ್ಮನು ಪುಷ್ಪದಂತಪುರಾಣವನ್ನು ರಚಿಸಹೇಳಲು ಕವಿ ರಚಿಸಿದಂತೆ—

ಎಂದೋರಂತಿರೆ ವಜ್ರದೇವನರನಾಥಾಸ್ಥಾನದೊಳ್ ಕೂರ್ತ ನ।
ಸ್ಪಿಂದಂ ಕೋವಿದರೆಯ್ದಿ ಕೊಂಡುಕೊನೆಯಲ್ ಕೇಳ್ದಬ್ಜಿಜಂ ಶಾಂತಿವ ॥
ರ್ಮಂ ದೀನಾನತವರ್ಮನಾದರಿಸಿ ನೀಂ ಪೇೞ್ದಿಂದೊಡೀಗಳ್ ಮನಂ।
ದಂದಂ ಪಾಲ್ಗಡ ಮರ್ದ್ದನಲ್ ಜನಕಥಾವಿಸ್ತಾರಮಂ ಸಾರಮಂ ॥

ಎಂಬ ಪದ್ಯದಿಂದ ವ್ಯಕ್ತವಾಗುತ್ತದೆ. ಕಾರ್ತವೀರ್ಯನು ಕುಂತಳದೇಶದಲ್ಲಿಯು ಕೂಂಡಿಯನ್ನು ಆಳುತ್ತಿದ್ದಂತೆ ತಿಳಿವುದರಿಂದ ಕೂಂಡಿಯೇ ಕವಿಯ ಸ್ಥಳವಾಗಿದ್ದಿರಬಹುದು. "ಮುನಿಚಂದ್ರಪಂಡಿತದೇವರ್ ಗುರುವಾಗೆ ತನಗೆ ಕವಿತೆ ಬಂದುದು" ಎಂದು ಹೇಳಿಕೊಂಡಿದ್ದಾನೆ.

---

1. ಪುಟ 23. 2. ಪುಟ 346.

ಈತನಿಗೆ ಗುಣಾಬ್ಜವನಕಲಹಂಸ, ಕವಿತಿಲಕ, ಕಾವ್ಯಸತ್ಯಳಾರ್ಣವ ಮೃಗ ಲಕ್ಷ್ಮ ಎಂಬ ಬಿರುದುಗಳಿದ್ದಂತೆ ತೋರುತ್ತದೆ.

ಪೂರ್ವಕವಿಗಳನ್ನು ಈ ಪದ್ಯದಲ್ಲಿ ಸ್ಮರಿಸಿದ್ದಾನೆ :—

ಅನುಗುಣಮಾಗಿ ಕೂಡೆ ಗುಣವರ್ಮನ ಮೆಯ್ಸಿರಿ ಸಂಪನೋಜೆ ಪೊ ।
ನ್ನನ ಪೊಸದೇಸೆ ರನ್ನನ ಗುಣೋನ್ನತಿಯಗ್ಗಳನೊಳ್ಪು ನಾಗವ ॥
ರ್ಮನ ಬಹುರೀತಿ ನೇಮಿಯ ಚಮತ್ಕೃತಿ ಜನ್ನಿಗನಿಂಪು ನಾಗಚಂ ।
ದ್ರನ ರಸವೃತ್ತಿರಂಜಿಸುಗೆ ನಿರ್ಣಯಮೆನ್ನಯ ನವ್ಯಕಾವ್ಯದೊಳ್ ॥

ತನ್ನ ಗುಣಗಳನ್ನೂ ಕವಿತಾಚಾತುರಿಯನ್ನೂ ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ :—

ಸ್ಫೀಕೃತಜಿನಧರ್ಮನನಂ । ಗೀಕೃತಖಿಳವರ್ಮನಮಳವಾಣೀಕರುಣಾಂ ।
ಗೀಕೃತಕವಿತಾವರ್ಮನ । ಸಾಕೃತದುಷ್ಕರ್ಮನಮಮ ಕವಿಗುಣವರ್ಮಂ ॥
ವಿವಿಧಕಳಾಭಿಜ್ಞಂ ಭಾ । ವವಿದಂ ರಸರಸಿಕನುಚಿತಕವಿತಾಚತುರಂ ।
ಸುವಿವೇಕನಿಧಾನಂ ವಿಬು । ಧವತ್ಸಲಂ ಮಾನಮೇರು ನೃಪತಿಮಹಿತಂ ॥
ಪದಮೆ ಪದಮುರ್ಧಮುರ್ಧಂ । ಪುವಿದ ರಸಂ ತೃಪ್ತಿಕರರಸಂ ಭಾವಂ ಪೊ ।
ಣ್ಮಿದ ಸದ್ಭಾವಂ ದನಿಯಿಂ । ಪೊದವಿದ ದನಿಯೆನಿಸಿ ಪೇೞ್ದಿಪಂ ಕವಿತಿಲಕಂ ॥
ರತ ಪದೆದಂತೆ ಚಂದ್ರಕಿರಣಂಗಳ ಪಾಲ್ಗುಡಿದಂತೆ ಮಂದಮಾ ।
ರುತನೊಡಗೂಡಿ ಬಂದ ಸಹಕಾರಪರಾಗದೊಳಾಡಿದಂತೆ ರಾ ॥
ಜತಮಧುಮಾಸದೊಳ್ ಸರಯದಿಂ ಪೊರೆದಂತಬಲಾಕಟಾಕ್ಷ ವಿ ।
ಕ್ಷೇತಮೆನಿಪಂತೆ ಮೋಹಿಸವೆ ಪೇೞ್ದ್ ಗುಣವರ್ಮನ ಸೂಕ್ತಿಸಂಚಯಂ ॥
ನವರಸಮುಂ ನಿಮಿರ್ಚುವ ಬೆಡಂಗನಮರ್ಚುವ ದೋಷಮುಂ ತಳ ।
ರ್ಚುವ ಗುಣಮುಂ ಕೆಳರ್ಚುವಮರ್ದಿಂಸನೊಡರ್ಚುವ ಬಂಧಮುಂ ತೊಡ ॥
ರ್ಚುವ ಕವಿವೊಕ್ಕಲರ್ಚುವೆಳಸುಣ್ಪನೊಡರ್ಚುವ ಕಾವ್ಯಸತ್ಕಳಾ ।
ರ್ಣವಮೃಗಲಕ್ಷ್ಮ ಲಕ್ಷ್ಮ ನ ವಚೋವಧುವಂ ಬುಧರೊಲ್ಪು ವರ್ನಿಕುಂ ॥

ಇವನ ಗ್ರಂಥಗಳಲ್ಲಿ—

## 1. ಪುಷ್ಪದಂತಪುರಾಣ.

ಇದು ಒಂಬತ್ತನೆಯ ತೀರ್ಥಂಕರನಾದ ಪುಷ್ಪದಂತನ ಚರಿತವು ; 14 ಆಶ್ವಾಸಗಳಾಗಿ ಭಾಗಿಸಲ್ಪಟ್ಟಿದೆ. ಈ ಗ್ರಂಥವನ್ನು 'ನಾಭ್ಯುಭುನಭೋಮಣಿ ಶಾಂತಿವರ್ಮನ ಯಶೋಲತೆಗಾಲಂಬನವಾಗೆ' ಬರೆದು ಆತನಿಗೆ ಸಮರ್ಪಿಸಿದಂತೆ ಈ ಪದ್ಯದಲ್ಲಿ ಹೇಳುತ್ತಾನೆ—

ಕ್ಷಿತಿಯೊಳ್ ಮುನ್ನಬ್ಜನೇತ್ರಂ ಮನೆಯಳಿಯನೆನಲ್ ಕ್ಷೀರವಾರಾಶಿಯಿಂ ವಿ।
ಶ್ರುತಲಕ್ಷ್ಮೀದೇವಿಯಂ ಕೌಸ್ತುಭಮಣಿಸಹಿತಂ ಕೊಂಡನೆಂತಂತೆ ತನ್ನಂ ॥
ಸತತಂ ಕೂರ್ತಿತ್ತು ಕೊಂಡಂ ಗುಣನಿಧಿ ಗುಣವರ್ಮಂಗೆ ಕೀರ್ತ್ಯಸ್ಪಿತಂ ಸ।
ತ್ಕೃತಿಲಕ್ಷ್ಮೀಕಾಂತೆಯಂ ರಂಜಿತವಿಬುಧಜನಸ್ವಾಂತೆಯಂ ಶಾಂತಿವರ್ಮಂ ॥

"ಪೂರ್ವದೊಳ್ ಗಣಧರಾದಿಮಹಾಮುನಿಸಶ್ಚಕ್ರವೀಶ್ವರರ್ ಮಾಡಿದ ಪುಷ್ಪದಂತಜಿನನಾಥಪುರಾಣಮನಿಂದು ಕನ್ನಡಂಮಾಡುವೆಂ" ಎಂದು ಹೇಳಿದ್ದಾನೆ.

ಗ್ರಂಥಾವತಾರದಲ್ಲಿ ಪುಷ್ಪದಂತನನ್ನು ಸ್ತುತಿಸಿದ್ದಾನೆ. ಬಳಿಕ ಸಿದ್ಧಾದಿಗಳನ್ನೂ ಸರಸ್ವತಿಯನ್ನೂ ಯಕ್ಷಯಕ್ಷಿಯರನ್ನೂ ಅನುಬದ್ಧಕೇವಲಿ ಶ್ರುತಕೇವಲಿ ದಶಪೂರ್ವಿಗಳನ್ನೂ ಏಕಾದಶಾಂಗಧಾರಿಗಳನ್ನೂ ಆಚಾರಾಂಗಧರರನ್ನೂ ಸ್ಮರಿಸಿ ಅನಂತರ ಕೊಂಡಕುಂದಾಚಾರ್ಯನಿಂದ ಮುನಿಚಂದ್ರದೇವನವರೆಗೆ ಗುರುಗಳನ್ನು[1] ಕ್ರಮವಾಗಿ ಹೊಗಳಿದ್ದಾನೆ.

ಆಶ್ವಾಸಗಳ ಕೊನೆಯಲ್ಲಿ ಈ ಗದ್ಯವಿದೆ :—

ಇದು ಸಮಸ್ತಭುವನಜನಸಂಸ್ತುತಜಿನಾಗಮಕುಮುದ್ವತೀಚಾರುಚಂದ್ರಾಯಮಾನ ಮಾನಿತಶ್ರೀಮದುಭಯಕವಿಕಮಲಗರ್ಭ ಮುನಿಚಂದ್ರಪಂಡಿತದೇವಸುವ್ಯಕ್ತಸೂಕ್ತಿಚಂದ್ರಿಕಾಪಾನಪರಿಪುಷ್ಟಮಾನಸಮರಾಳ ಗುಣವರ್ಮನಿರ್ಮಿತಮಪ್ಪ ಪುಷ್ಪದಂತ ಪುರಾಣದೊಳ್.

ಇವನ ಬಂಧವು ಪ್ರೌಢವಾಗಿಯೂ ಪ್ರಾಸಬದ್ಧವಾಗಿಯೂ ಇದೆ. ಇವನ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ :—

ಗ್ರೀಷ್ಮ.

ಕೆಂಡದ ಮಬ್ಬಿಂ ಕೊಂಡಪ್ಪುದ। ಜಾಂಡದಿನೆಳೆ ದೂವೆಗಿರ್ಚನುಗುಬ್ಬಿಪ್ಪುದು ದಿ।
ಜ್ಮಂಡಳಿ ದಳ್ಳುರಿಗೊಳ್ಳಿಯ। ತಂಡದೆ ಕೇರ್ಗಟ್ಟಿತೆನಿಸಿ ತೋಜು'ತ್ತದಜಿರೊಳ್ ॥ 815 ॥
ತಾಜಿದ ಬಳ್ಳಿ ವಿಸಾಜಿದ ದವಾನಳನಾಜಿದ ಬೆಂಚೆ ತಾಯ್ಮಳ।
ಲ್ದೋಜಿದ ಸಿಂಧು ಬೆಂದೊಡೆದು ಪಾಜಿದ ಬೆಟ್ಟು ಕರಿಂಕುವೋಗಿ ಕ ॥

---

1 ಕೊಂಡಕುಂದ, ಗೃಧ್ರಪಿಂಛ, ಬಲಾಕಪಿಂಛ, ಮಂದರಪಿಂಛ, ಆರ್ಯದ್ವಲಿ, ಭೂತಬಲಿ, ಪುಷ್ಪದಂತ,

ಬಿತ್ತರಮಾಗೆ ಸೂತ್ರಗತಿಯಿಂ ವಿಗೆ ಪನ್ನಿದ ಗಂಧಹಸ್ತಿತೊಂ।
ಬತ್ತಲುಸಾಸಿರಕ್ಕೆ ಶಿವಕೋಟಿಯ ಕೋಟಿವಿಪಕ್ಷ ವಿದ್ಯದು ॥
ನ್ಮತ್ತಗಜಂ ಮದಂಬಜಿತು ಕೆಯ್ಯೆಡೆಗೊಟ್ಟುದೆನಲ್ಕೆ ಪೇಟ್ಟುದೇಂ।
ಮತ್ತೆ ಸಮಂತಭದ್ರಮುನಿರಾಜನುದಾತ್ತಜಯಪ್ರಶಸ್ತಿಯಂ ॥

ಎಂಬ ಪ್ರಶಸ್ತಿಯುಳ್ಳ ಸಮಂತಭದ್ರ, ಅಕಳಂಕ, ಪೂಜ್ಯಪಾದ, ವಿದ್ಯಾನಂದ, 'ಪುರಾಣಪುರುಷ' ನಾದ ಕವಿಪರಮೇಷ್ಠಿ, ವೀರಸೇನ, ಜಿನಸೇನ, ಗುಣಭದ್ರ, ಜಟಾಸಿಂಹನಂದಿಗಳು, ಕಾಲುದಕಮೇಲಾನದಿಯಾದ ಏಲಾಚಾರ್ಯ, ದಿಗಂಬರಕುಲಚಂದ್ರಯೋಗೀಂದ್ರದೇವಚಂದ್ರರು, ಸ್ವಗುರುಮುನಿಚಂದ್ರ.

ಪೆರ್ಜಿದರಣ್ಯಭೂಮಿ ಬೆಮರೇಱಿದ ದೇಹಿಸಮೂಹಮೂಷ್ಮೆಯಂ ।
ಪೇಱಿದ ಭಾನುಭಾನು ಬಿಸುಪೇಱಿದಿಳಾತಳಮಿಲ್ಲದೆಲ್ಲಿಯುಂ ॥ 816 ॥

## ನಂದನ.

ಸಲೆ ನಿಲೆ ಮಾವು ಪೂವು ಬಕುಲಂ ಮುಕುಲಂ ಪೊಸತೆಂಗು ಕೌಂಗು ಕಾ ।
ದಲರೆಲರಂಚೆ ಬೆಂಚೆ ಪುಳಿನಂ ನಳಿನಂ ಗಿಳಿವಿಂಡು ಬಂಡು ಕೋ ॥
ಗಿಲೆ ಗೊಲೆ ತುಂಬಿ ಬಿಂಬಿ ಸುಱ್ಱಿಗೇದಗೆ ಚಾದಗೆ ಕಂಪು ಸೊಂಪಗುಂ ।
ದಲೆಯೆನೆ ರಮ್ಯಮಾವಿಷಯದೂರ್ಗಳ ನಂದನಬೃಂದಮೆತ್ತಲುಂ ॥ 817 ॥

ಒದವಿದ ರಾಳಿ ಗರ್ದೆಗಳ ಪಾಳಿ ಕುಕಿಲ್ದ ಎಕಾಳಿ ತಣ್ಪುವೇ ।
ಜುದ ಸುಱ್ಱಿಗಾಳಿ ಪಾಮರಿಯರೋಳಿ ವಿಟೀವಿಟಕೇಳಿ ಪೂಗಳಿಂ ॥
ಕೆದಱುವ ದೂಳಿ ಪಾಡುವ ಮದಾಳಿ ಪೊದಲ್ದಿಲರೋಳಿಯೆಂಬಿವಂ ।
ಮದನನ ದಾಱ್ಱಿಗೆತ್ತು ಸುಗಿದಿರ್ಪುದು ಪಾಂಥಜನಂ ನರಂತರಂ ॥ 818 ॥

## ರಾರದಾಗಮ.

ಸೊಗಯಿಪ ಕೇತಕೀವಿಭವಸೋಱ್ಱಿಲೆವಾಱ್ಱಿಗೆ ನೀಪವೇಱ್ಱಿಗೆ ಪೊ ।
ನ್ನೆಗೆ ಕುಟಜೋಪಶೋಭಿ ಕುಮುದಕ್ಕೆ ಕದಂಬದ ಸೊಂಪು ನೆಯ್ಪುಲೊ ॥
ಳ್ತಗುಳ್ಳಿ ಮಯೂರದಭ್ರುದಯಮುಂಚಿಗೆ ಚಾದಗೆಯುತ್ಸವಂ ಚಕೋ ।
ರಿಗೆ ತಳರ್ದೊಸ್ಪಲೊಪ್ಪಿದುದು ನೀರದಶಾರದನಿರ್ಗಮಾಗಮಂ ॥ 819 ॥

## ಇರುಳ್.

ಕಳಾರುಂದ್ರಂ ಚಂದ್ರಂ ಜೆಳಗೆ ನಭಮಂ ಕಾಂತಿವಿಸರಂ ।
ಗಳಿಂ ನೆಯ್ದುಲ್ಲೆಯ್ದುಲ್ ಮೊಗಸಿ ನಳಿನೀಬೃಂದದಳಿನೀ ॥
ಕುಳಂ ಕೋಕಂ ಶೋಕಂಬಡೆಯೆ ಮನದೊಳ್ ಪುಟ್ಟಿ ಜನದೊಳ್ ।
ಬಳತಾತ್ಕಾರಂ ಮಾರಂಗದಟಿನ ತಿರುಳ್ ರಂಜಿಸತಿರುಳ್ ॥ 820 ॥

## ನಕ್ಷತ್ರ.

ಸಂಕಳಿತ ಬಹಳತಾರಾ । ಸಂಕುಳದಿಂ ಪೋಲ್ತುದಭ್ರಮಾವೃತತಿಮಿರಂ ।
ತೇಂಕುವ ಮಲ್ಲಿಮುಕುಳದ । ಸಂಕುಳಮಂ ತಳೆದು ನಿಂದ ಜಗುನೆಯ ಮಡುವಂ
॥ 821 ॥

## ದೀಪ.

ಮುನಿದು ತವೆ ಸುಂಗಿ ತಿಮಿರಮ । ನಿನಿತಬ್ಭಿಸಲಾಜದಡರೆ ಕಾಜಿದಪುವಿವೆಂ ॥
ಬನವೆಸೆದುವು ಸೊಡರ್ಗಳ್ ಜಳ । ಕೆನೆ ನಿಜಚೂಳಿಕೆಯನೊಗೆವ ಕಾಳಿಕೆಯಿಂದಂ
॥ 822 ॥

### ಕಾಡು.

ಎಲೆವೆರಸು ಗಾಳಿಯಿಂ ಪಜ್ಜ । ವೆಲವದ ಪಸುರ್ಗಾಯ್ಗಳುರುಳೆ ಮೂಗುಡಿದು ಶುಕಾ ।
ವಳಿ ಬಿರ್ದುವೆಂದು ಬಿಡೆ ನುಂ । ಗಲೊಡರ್ಚುವುವದಜಿ ಪೊದಜಿ ಬಾಳಬಿಡಾಳಂ ॥ 823 ॥

### ಗಜಪ್ರಸವ.

ಬೇನೆಯಿನಕ್ಕೆಗಳ್ ನಸುಮುಗುಳ್ತಿರೆ ಪಿಂತು ಕುನುಂಗಿ ಜೋಲೆ ಪೇ ।
ರಾನೆಯ ಕರ್ಣವಾಯು ಬಿಮರಾಜಿಸೆ ತಾಯ್ವಿಡಿ ನೀವೆ ಹಸ್ತದಿಂ ॥
ತಾನವಳಂಬಿಸಿರ್ದು ವಟಭೂಜದೊಳೊಂದು ಕರೇಣು ಸೂಲಿಸು ।
ತ್ತೇನಣಮಲ್ಲಿ ಮಾಡಿದುದೊ ಬೇಡರೊಳಂ ಕರುಣಾನುಭಾವಮಂ ॥ 824 ॥

### ಸುಜನ.

ಇಲ್ಲದ ಗುಣಮಂ ಪೆಜರೊಳ್ । ಸೊಲ್ಲಿಸುವಂ ತನ್ನೊಳುಳ್ಳ ಗುಣಗಣನುಂ ತಾ ।
ನಿಲ್ಲೆಂದಾಡುವ ಪುಸಿಕಂ । ಗೆಲ್ಲಂದಂ ಬಂದುದಮಮ ಸುಜನತೆ ಚಿತ್ರಂ ॥ 825 ॥

### ಸ್ತ್ರೀಸೌಂದರ್ಯ.

ನಡು ಮಡು ಲೋಕಲೋಚನರ್ಗುಷಕ್ಕೆ ಬಿರಲ್ ಸರಲಂಗಜಂಗೆ ಮೆ ।
ಲ್ಲಡಿ ಪಡಿ ಪಲ್ಲವಕ್ಕೆ ವದನಂ ಸದನಂ ಸಿರಿಗಕ್ಕೆ ಪಕ್ಕೆ ಚೆ ॥
ಲ್ವಿಡಿದಲರ್ವಿಲ್ಗೆ ಸೋಮ್ರುಡಿ ಪಡಿಮ್ರುಡಿ ಸೋಗೆಗೆ ಪುರ್ವು ಕೊರ್ವು ಚೆ ।
ನ್ನೆಡೆಗೆ ನಖಂ ಮುಖಂ ಸವಿಗೆ ತೋಳ್ ಕರವಾಳ್ ಮದನಂಗೆ ಕಾಂತೆಯಾ ॥ 826 ॥

### ಶಾಂತಿವರ್ಮ.

ಗುರುಜನಕಂ ಕವೀಂದ್ರಜನಕಂ ಗುಣವಜ್ಜನಕಂ ಸಮಸ್ತಸಾ ।
ಕ್ಷರಜನಕಂ ಜಗಜ್ಜನಕಮೊಲ್ದುದನಿತ್ತಭಿರಕ್ಷಪಟ್ಟ್ಯಯಿಂ ॥
ಗುರುಜನಕಂ ಕವೀಂದ್ರಜನಕಂ ಗುಣವಜ್ಜನಕಂ ಸಮಸ್ತಸಾ ।
ಕ್ಷರಜನಕಂ ಜಗಜ್ಜನಕನೆಂಬುದು ಮೇದಿನಿ ಶಾಂತಿವರ್ಮನಂ ॥ 827 ॥

ಶ್ರೀಯುತ ಶಾಂತಿವರ್ಮ ಪೆಜಿರಾರ್ಪು ವಿಚಾರಿಪೊಡಂಧವರ್ತಕ ।
ನ್ಯಾಯಮೆ ಬೀರದೆಂಬ್ಗಿ ಪರಿಭಾವಿಪೊಡಂತದು ತಾನಜಾಕೃಪಾ ॥
ಜೀಯಮೆ ನಿಕ್ಕುವಂ ನುಡಿವ ಪೆಂಪು ವಿಚಾರಿಪೊಡುಂತೆ ಕಾಕತಾ ।
ಳೀಯಮೆ ಭಾಪು ನಿನ್ನವೊಲುದಾರರೆ ವೀರರೆ ಸತ್ಯವಾಕ್ಯರೇ ॥ 828 ॥

## 2. ಚಂದ್ರನಾಥಾಷ್ಟಕ.

ಈ ಅಷ್ಟಕವು ಕೊಲ್ಲಾಪುರದ ತ್ರಿಭುವನತಿಲಕಜಿನಾಲಯದ ಚಂದ್ರನಾಥನ ಸ್ತುತಿಯೆಂಬಂಶವು ಗ್ರಂಥದ ಅಂತ್ಯದಲ್ಲಿರುವ ಈ ಪದ್ಯದಿಂದ ತಿಳಿಯುತ್ತದೆ:—

ಬಹುವಿದ್ಯಾನುಂಡನಂ ಪಂಡಿತಮುನಿಪತಿಚಂದ್ರವ್ರತಿಶ್ರೀಪದಾಂಭೋ ।
ರುಹಸೇವಾಸಂಗಭೃಂಗಂ ಕ್ಷಿತಿನುತಗುಣವರ್ಮಂ ವಚೋಮಾಲೆಯಿಂದ ॥
ನ್ಹಹಮಾದಂ ಪೂಜಿಸಲ್ ರಾಜಪ ಜಿನನನಘಂ ಮಾಟ್ಕಿ ಭವ್ಯರ್ಗೆ ಸೌಖ್ಯಾ ।
ವಹಮಂ ಕೊಲ್ವಾ ಪುರಶ್ರೀತ್ರಿಭುವನತಿಲಕಾಲಂಕೃತಂ ಚಂದ್ರನಾಥಂ ॥

ಇದರಲ್ಲಿ ಒಂಬತ್ತು ಪದ್ಯಗಳಿವೆ; ಇವು ಮಹಾಸ್ರಗ್ಧರಾವೃತ್ತದಲ್ಲಿ ಬರೆದಿವೆ; ಪ್ರತಿಪದ್ಯವೂ 'ಚಂದ್ರನಾಥಾ' ಎಂದು ಮುಗಿಯುತ್ತದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

ನೆನೆವಂದಾನಂದದಿಂ ತಣ್ಣನೆ ತಣಿದು ಜಿಗಿಲ್ತುಂ ಮನಂ ಬಂದು ಕಂಡಂ ।
ನೆನಸುಂ ತಣ್ಪೆಂ ಕುಳಿರ್ಕೊಡುಗುವುವರ್ದಿನೊಳಲ್ತ್ರಿಂತೆ ಕಣ್ ಬಣ್ಣಿಸಂದಿಂ ॥
ನಿನಲಂಪಂ ಸೇವಿಪಂತಗ್ಗಲಿಸಿ ನಲಿಗುವಿಾಜಹ್ಪೆಯೆಂದಂದು ನಿನ್ನಂ ।
ನೆನೆದುಂ ಕಂಡುಂ ಪೊಗಲ್ತುಂ ಸುಖಿಯೆನಿಸಿದವಂ ಧನ್ಯನೆ ಚಂದ್ರನಾಥಾ ॥ 829 ॥

ಸುದತೀಲೀಲಾಂಗಮುಂ ಸೋಂಕದ ವರಯುವತೀನ್ನಿಗ್ಗಮುಗ್ಗಾಸ್ಯಮಂ ನೋ ।
ಡದ ಕಾಂತಾಳಾಪಮುಂ ಕೇಳದ ವನಜಮುಖೀವಕ್ತ್ರಸೌರಭ್ಯಮಂ ಕೊ ॥
ಳ್ಳದ ರಾಮಾರಮ್ಯಬಿಂಬಾಧರರಸಮನಡುರ್ತಿರ್ಪಂತೆದಕ್ಕೂಣಮೋಕ್ಷಾ ।
ಸ್ಪದಲಕ್ಷ್ಮೀಸಂಗಸೌಖ್ಯೋನ್ನತಿ ನಿನಗೆ ನಿಜಂ ದೇವರೊಳ್ ಚಂದ್ರನಾಥಾ ॥830॥

ಮೃಗತೃಷ್ಣಾಭೋಗಮುಂ ತಿರ್ದಿದ ನಿಡುಮಡುವೆಂದ್ಕೆದುವಾಭೀಳಕಾಳೋ ।
ರಗನಂ ನೇವಾಳಮೆಂದೆತ್ತುವ ನಿಶಿತಕನತ್ರಡ್ಗಮಂ ನೆಯ್ದುಲೋಳಾ ॥
ನಿಗಮೆಂದಾಂಪಂತೆ ನೀನಲ್ಲದ ಕುಮತರತಭ್ರಾಂತರಂ ದೇವರೆಂದೊ ।
ಲಗಿವೆಗ್ಗಾರ್ದ ಖೇದಂ ನಗಿಸುವುದು ಭವತ್ಕಾಪ್ತರಂ ಚಂದ್ರನಾಥಾ ॥ 831 ॥

---

## ಕಮಲಭವ. ಸು. 1235.

ಈತನು **ಶಾಂತೀಶ್ವರಪುರಾಣವನ್ನು** ಬರೆದಿದ್ದಾನೆ. ಇವನು ಜೈನಕವಿ ಇವನ ಗುರು ದೇಶೀಯಗಣದ ಪುಸ್ತಕಗಚ್ಛದ ಕೊಂಡಕುಂದಾನ್ವಯದ ಮಾಘಣಂದಿ ಪಂಡಿತಯತಿ.

ಈತನು ತನಗೆ ಹಿಂದೆ ಇದ್ದ ಕವಿಗಳಲ್ಲಿ ಜನ್ನನನ್ನು (1230) ಸ್ತುತಿಸುವುದರಿಂದ ಆತನಿಗೆ ಈಚೆಯವನೆಂದು ವ್ಯಕ್ತವಾಗುತ್ತದೆ; ಇವನ ಗ್ರಂಥದಿಂದ ಪದ್ಯಗಳನ್ನು ಉದ್ಧರಿಸಿ **ಮಲ್ಲಿಕಾರ್ಜುನನು** (ಸು. 1245) **ಸೂಕ್ತಿಸುಧಾರ್ಣವದಲ್ಲಿ** ಬರೆದಿರುವುದರಿಂದ ಅವನಿಗಿಂತ ಸ್ವಲ್ಪ ಹಿಂದೆ ಇದ್ದಿರಬೇಕು; ಸುಮಾರು

1235 ರಲ್ಲಿ ಇದ್ದಿರಬಹುದು.[1] **ಕುಸುಮಾವಳಿಯನ್ನು** ಬರೆದ **ದೇವಕವಿ** ಈತನ ಗ್ರಂಥರಚನೆಗೆ ಪ್ರೋತ್ಸಾಹಕನಾಗಿದ್ದಂತೆ ಹಿಂದೆಯೇ ತಿಳಿಸಿದ್ದೇವೆ.[2] **ಕುಸುಮಾವಳಿಯಲ್ಲಿ** ವರ್ಣನಾಭಾಗಗಳಲ್ಲಿ ದೊರಿವ ಕೆಲವು ಪದ್ಯಗಳು **ಕಮಲಭವನ** ಗ್ರಂಥದಲ್ಲಿಯೂ ಇವೆ.

**ಈ ಕವಿಗೆ ಕವಿಕಂಜಗರ್ಭ, ಸೂಕ್ತಿಸಂದರ್ಭಗರ್ಭ** ಎಂಬ ಬಿರುದುಗಳು ಇದ್ದಂತೆ ತೋರುತ್ತದೆ.

**ಪೂರ್ವಕವಿಗಳನ್ನು ಈ** ಪದ್ಯದಲ್ಲಿ ಸ್ಮರಿಸಿದ್ದಾನೆ:—

ಜಿನಸಮಯಪ್ರಕಾಶಕೃತಸತ್ಕವಿಹಂಪನ ಪೆಂಪುವೆತ್ತ ಪೊ ।
ನ್ನನ ಕವಿನಾಗಚಂದ್ರನ ನೆಗಲ್ತ್ತಿಯ ರನ್ನನ ಸಂದ ಬಂಧುವ ॥
ರ್ಮನ ಬುಧನೇಮಿಚಂದ್ರನ ಜಗನ್ನುತಜನ್ನನ ರಂಜಿಪಗ್ಗಳ ।
ಯ್ದನ ಕೃತಿಸೌಂದರೀಸುಭಗಮಾವಗಮಿರ್ಕೆ ಮದೀಯಕಾವ್ಯದೊಳ್ ॥

**ತನ್ನ ಗುಣಗಳನ್ನೂ ಕವಿತಾಚಾತುರಿಯನ್ನೂ ಈ** ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ:—

ವರಶಬ್ದಜ್ಞರನರ್ಥದರ್ಶಿಗಳನುಕ್ತಿಪ್ರೌಢರಂ ಭಾವತ ।
ತ್ಪರರಂ ನೀತಿವಿದರ್ಕಳಂ ರಸಿಕರಂ ಸಾಹಿತ್ಯದೊಳ್ ಸಂದ ಜಾ ॥
ಣರನಾಂದೋಳಶಿರಸ್ಸರೋಜಮುಖರಂ ಮಾಟ್ಪಿಕ್ತಿ ಚಾತುರ್ಯಬಂ ।
ಧುರನೊರ್ವಂ ಕವಿಕಂಜಗರ್ಭನುರುವಾಕ್ಸಂದರ್ಭನಿಂತುರ್ವಿಯೊಳ್[3] ॥

ಸತ್ಕವಿಕಮಳಭವನ ಭಾ । ಸ್ವತ್ಕವಿತಾಕಾಮಧೇನು ತಾನಖಿಳಬುಧೋ ।
ದ್ಗತ್ಕಾಮಿತಾರ್ಥಭಾವರ । ಸೋತ್ಕರಮಂ ಕಱೆವುದಲ್ತೆ ಕಾವ್ಯಸ್ಪರ್ಧಿಯೊಳ್ ॥
**ಕಮಳಭವನ** ಕವಿತಾರಸ । ಮುಮರ್ದಿನ ತನಿವೊನಲನಂಗಮೋಹನಬಾಣಂ ।
ರಮಣೀಯಮಧುರರುತಿ ಬಾ । ಳಮರಾಳದ ನಲ್ಮೆಯಾಟಮಿನಿಯಳ ಕೂಟಂ ॥

ವಿಮಳವಿಭಾಸ್ಪದೇಕಮುಖನುನ್ನತಸನ್ಮತಿಸುಪ್ರಕಾಶನು ।
ತ್ತಮಚರಿತಾಂಚಿತಂ ಸಕಳಜೀವಹಿತಾಗಮವರ್ಧನೀಕೃತೋ ॥
ದ್ಯಮನಮದಾತ್ಮನಪ್ರತಿಹತಂ ದಿಟಮೆಂದೊಲವಿಂದಜಸ್ತ್ರಮೆ ।
ಕಮಲಭವನಾಸ್ಯಪದ್ಮಮನೆ ಪೊರ್ದಿದಳೇಂಗಡ ವಾಣಿ ಜಾಣೆಯೋ ॥

---

1. ಈತನು ಗುರುಪರಂಪರೆಯನ್ನು ಸ್ತುತಿಸುವಾಗ ವಿನಯೇಂದುವ್ರತಿ ಎಂಬ ಒಬ್ಬ ಗುರುವನ್ನು ಸ್ಮರಿಸಿ, ಅವನಿಗೆ "ಸಿಂಹಣೋರ್ವೀಶ್ವರಂ ವಿನಮನ್ಮಸ್ತಕನಾದಂ" ಎಂದು ಹೇಳಿದ್ದಾನೆ. ಈ ಸಿಂಹಣನು ದೇವಗಿರಿಯ ಯಾದವರಾಜರಲ್ಲಿ ಒಬ್ಬನು. ಇವನು 1210 ರಿಂದ 1247 ರ ವರೆಗೆ ಆಳಿದಂತೆ ತಿಳಿಯುತ್ತದೆ.

2 ಪುಟ 314.

3. ಈ ಪದ್ಯವು ಇದೇ ಆನುಪೂರ್ವಿಯಲ್ಲಿ ಕುಸುಮಾವಳಿಯಲ್ಲಿಯೂ ದೊರೆಯುತ್ತದೆ. ಪುಟ 315.

ಇವನ ಗ್ರಂಥ

## ಶಾಂತೀಶ್ವರಪುರಾಣ.

ಇದು ಹದಿನಾರನೆಯ ತೀರ್ಥಕರನಾದ **ಶಾಂತಿನಾಥನ** ಚರಿತವು; 16 ಆಶ್ವಾಸಗಳಾಗಿ ಭಾಗಿಸಲ್ಪಟ್ಟಿದೆ. ಗ್ರಂಥಾವತಾರದಲ್ಲಿ ಕವಿ ಶಾಂತೀಶ್ವರನನ್ನು ಸ್ತುತಿಸಿದ್ದಾನೆ; ಬಳಿಕ ಸಿದ್ಧಾದಿಗಳು, ಕೇವಲಿಗಳು, ಅನುಬದ್ಧಕೇವಲಿಗಳು, ಶ್ರುತ ಕೇವಲಿಗಳು, ಗಣಧರರು, ಯಕ್ಷಯಕ್ಷಿಯರು,- ಸರಸ್ವತಿ, ಇವರನ್ನು ಸ್ಮರಿಸಿ ಅನಂತರ ಕೊಂಡಕುಂದನಿಂದ ಮಾಘಣಂದಿ ಪಂಡಿತಯತಿಯವರೆಗೆ ಗುರುಗಳನ್ನು ಪಾಜ್ಞವಾಗಿ ಸ್ತುತಿಸಿದ್ದಾನೆ.[1]

ಆಶ್ವಾಸಗಳ ಕೊನೆಯಲ್ಲಿ ಈ ಗದ್ಯವಿದೆ :—

ಇದು ವಿನಮದಮರೇಂದ್ರಮೌಳಿಮಣಿಕಿರಣಮಾಲಾಪರಾಗಪರಿರಂಜಿತ ಚರಣಸರಸಿರುಹರಾಜಿತಪರಮಜಿನರಾಜಸಮಯಸಮುದಿತ ಸದಮಳಾಗಮಸುಧಾಶರಧಿಶರದಿಂದು ಶ್ರೀಮಾಘಣಂದಿಪಂಡಿತಮುನೀಶ್ವರಮನೋಜನಿತನಿರುಪಮಮದಯಾಸರಸ್ಸರಸೀಸಂಭೂತಸಂಭವವಾಮಳ ಸುಕವಿಕಮಳಭವವಿರಚಿತಮಪ್ಪ ಶಾಂತೀಶ್ವರಪರಮಪುರಾಣದೊಳ್.

ಈ ಗ್ರಂಥವು ಲಲಿತವಾಗಿದೆ. ಕವಿ ಧಾರಾಳವಾಗಿ ಬರೆಯುತ್ತಾನೆ. ಪದಗಳು ನಿರರ್ಗಳವಾಗಿ ಓಡುತ್ತವೆ. ಕಾವ್ಯದಲ್ಲಿ ವರ್ಣನೀಯಾಂಶಗಳೆಲ್ಲ ಚೆನ್ನಾಗಿ ವರ್ಣಿತವಾಗಿವೆ.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ :—

### ಮಳೆ.

* ಪರಿವ ಜಳಪ್ರವಾಹಕುಳದಿಂ ನೆಜ್ಜಿ ಕಚ್ಚರಿಪ್ಪೋಗೆ ಭೂಧರೋ ।
ತ್ಕರವಿರದೆಯ್ದೆ ಬೇರ್ಕೊಜ್ಜಿದಡಂಗೆಡೆಯುತ್ತಿರೆ ಪೆರ್ಮರಂಗಳು ॥
ರ್ವರೆಯಳುರ್ಪಣಕ್ಕೆಯೆಯನಾಂತುದು ನಾಜಿಯುಮೆಂಬಿನಂ ಕರಂ ।
ಸುರಿದುದು ಭೋರೆನುತ್ತೊಗೆದ ಕಾರ ಮುಗಿಲ್ ಮಳ್ಪಿಯಂ ನಿರಂತರಂ ॥ 832 ॥

---

1. ಕೊಂಡಕುಂದ, ಭೂತಬಲಿ, ಪುಷ್ಪದಂತ, ಜಿನಸೇನ, ವೀರಸೇನ. ಅಕಳಂಕಚಂದ್ರ, ಅರ್ಹದ್ಬಲಿ, ಜಟಾಸಿಂಹನಂದಿ, ಗೃಧ್ರಪಿಂಛ, ಸಮಂತಭದ್ರ, ಕವಿಪರಮೇಷ್ಠಿ. ಪೂಜ್ಯವಾದ, ಕುಲಚಂದ್ರವ್ರತಿ. ಕನಕನಂದಿಮುನಿ, ಶ್ರುತಕೀರ್ತಿ, ನಯಕೀರ್ತಿಮುಮುಕ್ಷು, ಅಭಯಚಂದ್ರಮುನಿ, ವೀರಣಂದಿವ್ರತಿ. ಮಾಘಣಂದಿ, ವರ್ಧಮಾನವ್ರತಿ, ದೇವಚಂದ್ರವ್ರತಿ, ಪದ್ಮನಂದಿವ್ರತಿ, ನೇಮಿಚಂದ್ರ, ಶ್ರುತಕೀರ್ತಿ ಭಟ್ಟಾರಕ, 'ಸಿಂಹಣಂ ವಿನಮನ್ಮಸ್ತಕ' ನಾದ ವಿನಯೇಂದುವ್ರತಿ, ಬಾಳಚಂದ್ರಮುನಿ, ಪದ್ಮಸೇನವ್ರತಿ, ಜಯಕೀರ್ತಿವ್ರತಿ, ಕುಮುದೆಂದುಯೋಗಿಶಿಷ್ಯ ಮಾಘಣಂದಿಮುನಿ. ಜಯಕೀರ್ತಿವ್ರತಿ, ಬಾಳಚಂದ್ರ ಪಂಡಿತಯತಿ, ಪ್ರಭಾಚಂದ್ರಮುನಿ, ಕಾಣೂರ್ಗಣದ ಭಾನುಕೀರ್ತಿಮಲಧಾರಿ, ವಾದೀಭನಜ್ರಾಂಕುಶ ತರ್ಕಜ್ಞ ಹೇಮನಂದಿವ್ರತಿ, ಶ್ರುತಕೀರ್ತಿ, ಸ್ವಗುರು ಮಾಘಣಂದಿಪಂಡಿತಯತಿ.

* ಈ ಚಿಹ್ನೆಯಿರುವ ಪದ್ಯವು ಕುಸುಮಾವಳಿಯಲ್ಲಿಯೂ ಇದೆ.

## ಮಾಗಿ.

* ತನಿವಡಹಕ್ಕೆ ಕೋಡಿ ತನುವೊರ್ಬುಳಿವಂದು ಕೊರಲ್ಕುನುಂಗಿ ಮೇ ।
ಪಿನ ಪುದಿದಿಚ್ಚೆಯಚ್ಚಬ್ರಿ'ದು ಕರ್ಣಮೆಬ್ರಿಲ್ದು ಕರಂ ಕಬ್ರಿಲ್ದು ಕಂ ॥
ಪನಮೆಡೆಗೊಂಡು ಕೆಬ್ರಿಸುಜ್ಜ'ನೆಬ್ರಿದ ನವಿರ್ಗೊನೆಯಿಂದೆ ತಳ್ತು ತ ।
ಣ್ಣನಿವಿಡುತುಂ ಮೃಗಪ್ರಕರಮಿರ್ದುದು ಕಾನನದೊಂದು ನಾನಲೊಳ್ ॥ 833 ॥

* ಪಕ್ಕದಿಜುಂಬಿನೊಳ್ ಮುಜ'ಯನಿಟ್ಟು ಕುಲಾಯಮನೊತ್ತುಗೊಂಡು ಮೆ ।
ಯ್ಯಕ್ಕೆ ಕೊರಲ್ಕುನುಂಗಿ ನವಿರಗ್ದೊಳಾಪನಿಪುಲ್ಲ ಬಿಂದುಗಳ್ ॥
ತೆಕ್ಕನೆ ತೀವೆ ಮುತ್ತಿನ ವಿಪಂಗಮದಂತೆ ವಿಹಂಗಸಂಕುಳಂ ।
ಮೊಕ್ಕಳಮಾಗಿ ಮಾಗಿಯೊಳಗಿರ್ದುದು ಪಾಜಿದೆ ಮುಂಬಗಲ್ಲರಂ ॥ 834 ॥

* ಸಲೆ ನೆಲೆದೋಜಿದಾನದಿಯ ಕರ್ಮಡುವಂ ಪೊಜಿಮಟ್ಟು ಕೋಟಮ ।
ಗ್ಗಲಿಸೆ ಬಿಸಿಲ್ಗೆ ಮೆಯ್ಸ್ನದಮೊಡ್ಡಿ ತದೀಯತಟಂಗಳಲ್ಲಿ ಯಾಂ ॥
ಚಿಲ ಕಡೆಗೊಂಬುಗಳ್ ತುಜುಗಿ ಬಿರ್ದಪೊಲಿರ್ದುವು ಮುಂಬಗಲ್ಲರಂ ।
ತೂಲಗದನಾಕುಳಂ ಮೊಸಳೆಗಳ್ ನೆಜ'ದೊತ್ತರಮಾಗಿ ಮಾಗಿಯೊಳ್ ॥ 835 ॥

## ಕತ್ತಲೆ.

ಮೆಟ್ಟಿದುದಲ್ಲದಿಲ್ಲಬ್ರಿ'ದ ಭೂತಳಮೆಣ್ದೆಸೆಗಳ್ ನಭಸ್ಸ್ಥಳಂ ।
ತೊಟ್ಟನೆ ಮಾಯಮಾಯ್ತು ತನುವಿರ್ದಪುದಿಲ್ಲಿನುತುಂ ಕರಾಗ್ರದಿಂ ॥
ಮುಟ್ಟುತುಮಿರ್ದ ತಾಣದೊಳೆ ಸುಮ್ಮನೆ ವಿಸ್ಮಯದಿಂ ಜನೋತ್ತರಂ ।
ನಟ್ಟಪೊಲಿರ್ಪಿನಂ ನಿಮಿರ್ದು ಪರ್ವಿದುದುರ್ವಿ ಮಹತ್ತಮಂ ತಮಂ ॥ 836 ॥

## ಬಾಳೆ.

ಅರೆವಿರಿದೊಪ್ಪುವ ಪಣ್ಗಳ್ । ಬಿರಸಿದ ಬಿಣ್ಪೊನೆಗಳಿಂದೆ ಪಥಿಕರ ಕಣ್ಗ ।
ಚ್ಚರಿವಡೆದು ಬಿಡದೆ ಬಾಯಂ । ಬಿರಿಯಿಸುತಿಸೆದಿರ್ಪುವಲ್ಲಿ ಬಾಲ್ಗೆಯ ಮರಗಳ್
॥ 837 ॥

## ಬೆಳುದಿಂಗಳು.

* ನಾಡೆ ಬಯಲ್ಗೆ ಬಿಚ್ಚಿದ ತಮಮಂ ತವೆ ನುಣ್ಣನೆ ನುಂಗಿ ಕೆಟ್ಟು ಬಿ ।
ಟ್ಟೋಡಿ ಕುಜಚ್ಛದಂಗಳಿಜುಬಂ ನೆಜ' ಪೊಕ್ಕ ತಮಿಸ್ರಮಲ್ಲಿಯ ॥
ಬ್ರಿಯ್ಕಾಡೆ ಪೊರಳ್ಚಿ ತೂಳ್ದಿ ಕಡುಪಿಂ ಕೆದಜುಟ್ಟಿ ಮಹಾಂಧಕಾರಮಂ ।
ಕೂಡೆ ಗುಹಾಳಿಯಂ ಪುಗಿಸುತಿರ್ದುವು ಚಂದ್ರನ ಸಾಂದ್ರರಶ್ಮಿಗಳ್ ॥ 838 ॥

---

* ಈ ಚಿಹ್ನೆಯಿರುವ ಪದ್ಯಗಳು ಕುಸುಮಾವಳಿಯಲ್ಲಿಯೂ ಇವೆ.

## ಮುಂಜಾನೆಯ ಕೋಳಿ.

* ತನುವಂ ತಳ್ಪೊಯ್ಯ ತಂಗಾಳಿಯ ಪದೆಪಿನೊಳೆಚ್ಚತ್ತು ಪಕ್ಷಂಗಳೊಳ್ ಪ ।
ಟ್ಟನಿತುಂ ಪೋತಂಗಳಂ ವೀಕ್ಷಿಸುತೆಜಿಕೆಗಳಂ ಮೆಲ್ಲನುಚ್ಚರ್ತ್ತೆ ನಿಂದೊ ॥
ಯ್ಯನೆ ಸಾದ್ರ್ರತ್ರೋಟಿಯಿಂ ತೊಟ್ಟೆಡೆದು ಗಜ್ಜುಗಳಂ ನುಣ್ಪವಿರ್ ಬಿರ್ಚಿ ಮೆಯ್ಯಂ ।
ತೊನೆದುದ್ದಂ ನೀಡಿ ಗೋಣಂ ನವದಿನಮುಖದೊಳ್ ಕುಕ್ಕುಟಂ ಕೂಗಿತಾಗಳ್
॥ 839 ॥

## ಚಿನ್ನವರದರು.

ಒರೆಯಂ ನೋಡದೆ ನೋಡೆ ಚಿನ್ನಮನೆ ಕಂಡಾಚಿನ್ನಮಂ ಬಣ್ಣದಂ ।
ತರಮುಂ ತಪ್ಪದೆ ಪೇಟ್ಟಿ ತೂಗದೆನಸುಂ ಕೈತೂಕದಿಂ ತೂಕದಂ ॥
ತರಮುಂ ಪುಟ್ಟಗೆ ಪೇಟ್ಟಿ ನುಚ್ಚಮನೆ ಲೀಲಾಮಾತ್ರದಿಂ ಕಟ್ಟುವ ।
ಚ್ಚರಿಯಿಂದಾಪುರದಲ್ಲಿ ಚಿನ್ನವರದರ್ ತಾವಿಂತು ವಿಖ್ಯಾಜಿಪರ್ ॥ 840 ॥

## ಮುಂಡಗೆ.

ಶರದದ ನವಚಂದ್ರಿಕೆಯುಂ । ಪೊರೆಯೆತ್ತಿದ ತಜಿದೆ ಮಿಜುಪ ಚೆಲ್ವಂ ತೆಲ್ವಂ ।
ಪಿರಿದೆಸೆವ ಮುಂಡಕಾಪರಿ । ಕರಮುಂ ಬಡ್ಡಿಸಿದರಸವಳಂ ಸುರನತಿಯರ್ ॥ 841 ॥

## ಇಡ್ಡಲಿಗೆ.

ಸುರಸಿಂಧುಶ್ಲೇನಪಿಂಡೋ । ತ್ಕರಮಿವೆನಲ್ ಕಾಂತಿವೆತ್ತು ನಗಣದ ತೆಜಿದಿಂ ।
ಪಿರಿದುಂ ಲಘುತ್ವದಿಂ ಬಿ । ತ್ತರಿಪಿದ್ದಲಿಗೆಗಳನಂತವರ್ ಬಡ್ಡಿಸಿದರ್ ॥ 842 ॥

## ಶಾಲ್ಯನ್ನ.

ಕಜ್ಜಗಳಿದ ಶಶಿಯ ತಣ್ಗದಿ । ರ್ದುಜುಂಗಲಂ ನಗುವ ತೆಜಿದ ನೀಳ್ಪಿಂ ಚೆಲ್ವಿಂ ।
ನೆಜ್ಜಿ ಮಿಜುಗುವ ಶಾಲ್ಯನ್ನಮ । ನೆಜಕದಿನಮುಳೀಂದುವದನೆಯರ್ ಬಡ್ಡಿಸಿದರ್
॥ 843 ॥

## ಮೊಸರು.

ಅಧರೀಕೃತಪಾರದನೀ । ರಧರದ್ಯುತಿಯೆನಿಪ ಕೆನೆಯನೊಳಕೆಯ್ದುರ್ವಾ ।
ಮಧುರಾಮ್ಲಮಪ್ಪ ದಧಿಯಂ । ವಿಧುವದನೆಯರೊಸೆದು ನಿಸದಮೆನೆ ಬಡ್ಡಿಸಿದರ್
॥ 844 ॥

## ಪಾಯಸ.

ಪೊಳೆವ ಶರಚ್ಚಂದ್ರಿಕೆಯೊಳ್ । ಮುಟ್ಟುಂಕೆ ನಸುದೋರ್ಪ ತಾರೆಗಳ ತೆಜಿದಿಂ ಕಂ ।
ಗೊಳಿಸಿ ಮಗಮಗಿಪ ಮಣಸರ । ವಳಿಗೆಯ ಪಾಯಸಮನಸವಳಂ ಬಡ್ಡಿಸಿದರ್
॥ 845 ॥

---

* ಈ ಚಿಹ್ನೆಯಿರುವ ಪದ್ಯವು ಕುಸುಮಾವಳಿಯಲ್ಲಿಯೂ ಇದೆ.

## ಆಂಡಯ್ಯ. ಸು. 1235.

ಈತನು ಕಬ್ಬಿಗರಕಾವವನ್ನು ಬರೆದಿದ್ದಾನೆ. ಇವನು ಜೈನಕವಿ. ಇವನ ಅಜ್ಜನು "ಅರುಹಂಗಲ್ಲದೆಜಗದ ಲೆಕ್ಕಿಗರ ಪಿರಿಯನೆನಿಪ" ಆಂಡಯ್ಯ. ಈ ಆಂಡಯ್ಯನಿಗೆ ಸಾಂತ ಗುಮ್ಮಟ ನೈಜಣ ಎಂಬ ಮೂವರು ಮಕ್ಕಳಿದ್ದರು. ಇವರಲ್ಲಿ ಜ್ಯೇಷ್ಠನಾದ ಸಾಂತನ ಹೆಂಡತಿ ಬಲ್ಲವ್ವೆ. ಈ ದಂಪತಿಗಳ ಮಗನೇ ಕವಿ ಆಂಡಯ್ಯ. ಈತನು 'ಲೆಕ್ಕಿಗರರಸಂ'[1] ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ಗ್ರಂಥಾರಂಭದಲ್ಲಿ ದೇಶವರ್ಣನಾವಸರದಲ್ಲಿ 'ಕನ್ನಡಮೆನಿಪ್ಪಾನಾಡು ಚೆಲ್ವಪ್ಪುತ್ತು' ಎಂದು ಹೇಳಿದ್ದಾನೆ; ಗ್ರಂಥಾಂತ್ಯದಲ್ಲಿ ತನ್ನ ಗ್ರಂಥವು "ರಾಯನ ನಾಲ್ಕಿಳಿಕೆರ್ಕೆ ನಿಚ್ಚಮುಂ" ಎಂದು ಬರೆದಿದ್ದಾನೆ. ಕನ್ನಡದೇಶದ ಆವ ಭಾಗದಲ್ಲಿ ಆವ ರಾಯನ ನಾಡಿನಲ್ಲಿ ಇವನು ಇದ್ದನೋ ತಿಳಿಯದು.

ಇವನು ಪೂರ್ವಕವಿಗಳಲ್ಲಿ **ಜನ್ನ**ನನ್ನು (1230) ಸ್ಮರಿಸುವುದರಿಂದ ಆತನಿಗೆ ಈಚೆಯವನಾಗಿಯೂ **ಮಲ್ಲಿಕಾರ್ಜುನ**ನು (ಸು. 1245) ಇವನ ಗ್ರಂಥದಿಂದ ಪದ್ಯಗಳನ್ನು ಅನುವಾದಮಾಡಿರುವುದರಿಂದ ಅವನಿಗೆ ಹಿಂದಣವನಾಗಿಯೂ ಇದ್ದಿರಬೇಕು; ಸುಮಾರು 1235 ರಲ್ಲಿ ಇದ್ದಿರಬಹುದು.

"ಹಿಂದಣ ಕವಿಗಳು ಸಂಸ್ಕೃತಪದಗಳನ್ನು ಬೆರಸದೆ ಕನ್ನಡದಲ್ಲಿ ಕಾವ್ಯವನ್ನು ಬರೆದಿಲ್ಲ. ನೀನು ಇಂಥ ಗ್ರಂಥವನ್ನು ಮಾಡಬೇಕು" ಎಂದು ವಿದ್ವಾಂಸರು ಹೇಳಲು ಅವರ ಬಯಕೆಯನ್ನು ಸಲಿಸುವುದಕ್ಕಾಗಿ 'ಅಚ್ಚಗನ್ನಡ'ದಿಂದ ಈ ಗ್ರಂಥವನ್ನು ಬರೆದಂತೆ ಹೇಳಿಕೊಂಡಿದ್ದಾನೆ.

ಪೂರ್ವಕವಿಗಳನ್ನು ಈ ಪದ್ಯದಲ್ಲಿ ಸ್ಮರಿಸಿದ್ದಾನೆ:—

ಎನ್ನೀಕಬ್ಬದೊಳೆಂದುಂ । ಸನ್ನಿದಮಾಗಿರ್ಕ್ಕೆ ಕಣ್ಣಪಯ್ಯನ ಕಡುಜಾಣ್ ।
ರನ್ನನ ಮೆಯ್ಸಿರಿ ಗಜಗನ । ಬಿನ್ನಣಮಗ್ಗಳನ ಕಾಣ್ಕೆ ಜಿನ್ನಿಗನ ಜಸಂ ॥

ತನ್ನ ಕವಿತಾಚಮತ್ಕೃತಿಯನ್ನು ಈ ಪದ್ಯದಲ್ಲಿ ಸೂಚಿಸಿದ್ದಾನೆ:—

ಸಿಂಗರಮೇಱ್ಪಿಂಯಂ ಪಡೆಯೆ ದೇಸೆ ಪೊದಲ್ದಿರ್ದರೆ ಕೊಂಕು ತೀವೆ ಬ ।
ರ್ದಿರ್ಂಗೊಳಗಾದ ಮಾತಮುರೆ ಬಲ್ಲವರಾ ಎನೆ ಚೆಂದಮೊಂದಿದಾ ॥
ಱಿಂ ಗೆಡೆಗೊಂಡು ತೋಜಿ ನನೆವಿಲ್ಲನ ಬೀರಮನೊಲ್ದು ಪೇಱ್ಪಿನಾಂ ।
ತಿಂಗಳ ಸೊಂಪು ಗುಣ್ಪುವಡೆದೆಣ್ದೆಸೆಗಂ ಪರಿಗೊಂಡುದೆಂಬಿನಂ ॥

---

1. ಇವನ ಅಜ್ಜನಿಗೂ ಈ ವಿಶೇಷಣವಿರುವುದರಿಂದ ಇವರು ಸೇನಬೋವಂಗಿದ್ದಿರಬಹುದೆಂದು ತೋರುತ್ತದೆ.

ಇವನ ಗ್ರಂಥ—

## ಕಬ್ಬಿಗರಕಾವ.

ಈ ಗ್ರಂಥಕ್ಕೆ ಅಕ್ಕರಿಗರು ಸೊಬಗಿನಸುಗ್ಗಿ ಎಂಬ ಹೆಸರನ್ನೂ ಸಂಸ್ಕೃತವನ್ನು ತಿಳಿದವರು ಮದನವಿಜಯ ಎಂಬ ಹೆಸರನ್ನೂ ಕೊಟ್ಟಂತೆ ಹೇಳುತ್ತಾನೆ. ಗ್ರಂಥಾಂತ್ಯದ ಗದ್ಯದಿಂದ ಇದಕ್ಕೆ "ಕಾವನ ಗೆಲ್ಲ" ಎಂಬ ಹೆಸರೂ ಇರುವಂತೆ ತಿಳಿಯುತ್ತದೆ. ಇದಕ್ಕೆ ಸಂಸ್ಕೃತ ಸಹೋದರಿ ಎಂಬ ಹೆಸರೂ ಉಂಟು. ಈ ಗ್ರಂಥದಲ್ಲಿ ಗದ್ಯಪದ್ಯಗಳು ಸುಮಾರು 350 ಇವೆ; ಆಶ್ವಾಸಾದಿವಿಭಾಗಗಳಿಲ್ಲ.

ಶಿವನು ಚಂದ್ರನನ್ನು ಸೆರೆಹಾಕಿದನೆಂದು ಕೇಳಿ ಕುಪಿತನಾದ ಮನ್ಮಥನು ಸೈನ್ಯದೊಡನೆ ಯುದ್ಧಕ್ಕೆ ಹೊರಟು ಶಿವನ ಮೇಲೆ ಬಾಣಪ್ರಯೋಗಮಾಡಿ ಶಿವನಿಂದ ಪತ್ನೀವಿಶ್ಲೇಷರೂಪವಾದ ಶಾಪವನ್ನು ಪಡೆದು ನನೆಯಂಬನಾಗಿ ಒಂದು ದಿನ ಉದ್ಯಾನವನದಲ್ಲಿ ಒಬ್ಬ ಅಪ್ಸರಸ್ತ್ರೀಯಿಂದ ಈ ವೃತ್ತಾಂತವನ್ನು ಕೇಳಿ ಶಾಪದಿಂದ ವಿಮುಕ್ತನಾಗಿ ಪತ್ನಿಯೊಡಗೂಡಿ ಸುಖವಾಗಿದ್ದನು—ಎಂಬುದೇ ಈ ಗ್ರಂಥದ ಕಥಾಗರ್ಭ.

ಈ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಈ ಪದ್ಯಗಳಲ್ಲಿ ಹೇಳಿದ್ದಾನೆ:—

ಒಪ್ಪಂಬೂಸಿದವೋಲ್ ತೆಜಂಬೊಳೆವ ಕೊಂಕುಂ ಪಾಲೊಳೊಂದಿರ್ಪವೋ ।
ಲೊಪ್ಪಂಬೆತ್ತಿನಿದಾದ ಬದ್ದುಗ್ಗನುಡಿಯುಂ ತಳ್ತೋಜೆಯುಂ ನಿಲ್ಲ್ದನಂ ॥
ತಪ್ಪೊಂದುಂ ತಲೆದೋಜದಂತೆ ವಲರೆಲ್ಲರ್ ತಿರ್ದಿದೀಕಬ್ಬಮೆಂ ।
ತಪ್ಪಂಗಂ ಪೊಸಮುತ್ತಿನೆಕ್ಕಸರದಂತೆಂದುಂ ಕೊರಲ್ಗೊಳ್ಳದೇ ॥
ಎಳಗಿಳಿವಿಂಡಿನಂತೆ ವಿಳಿದರ್ದಾಡುವ ತುಂಬಿಯ ಬಂಬಲಂತೆ ಕೆಂ ।
ದಳಿರ್ಗಳ ತೊಂಗಲಂತೆ ನಡೆ ನೋಡುವ ಪೆಂಡಿರ ನೋಟದಂತೆ ಪೂ ॥
ಗಳ ಪೊಸಗಂಪಿನೊಳ್ ಪೊರೆದು ತೀಡುವ ತೆಂಬೆಲರಂತೆ ತೋರ್ಪ ತಿಂ ।
ಗಳ ಸಿರಿಯಂತೆ ಸೋಲಿಸದೆ ಕಾವನ ಕಬ್ಬಮದಾರನಾದೊಡಂ ॥

ಅಲ್ಲದೆ ಈ ಗ್ರಂಥವು 'ದೇಸಿಯ ಗೊತ್ತು' 'ಜಾಣ್ಣುಡಿಯ ತಾಯ್ವನೆ' 'ನುಣ್ಬರುಳೀಟಿಗ್ಗೆ' ಎಂದು ಹೇಳಿ, "ಕನ್ನಡದೊಳ್ಪಿನ ನುಡಿಯಂ ಮುನ್ನಿದ ಜಿನೊಳೆ ನೋಡಿ ತಿಳಿದುಕೊಳ್ವುದು ಚದುರಂ" ಎಂದೂ ಹೇಳಿದ್ದಾನೆ.

ಗ್ರಂಥಾವತಾರದಲ್ಲಿ ಮನ್ಮಥನನ್ನು ಸ್ತುತಿಸಿದ್ದಾನೆ; ಬಳಿಕ ತ್ರಿಮೂರ್ತಿಗಳನ್ನೂ ಸರಸ್ವತಿಯನ್ನೂ ಹೊಗಳಿದ್ದಾನೆ. ಗ್ರಂಥಾಂತ್ಯದಲ್ಲಿ—

ಇದು ಪಸುಳೆವಿಸಿಲ ಮಸಕದಿನೆಸಟ್ಟಿಸಪ ಪೊಸದಾವರೆಯ ಪಸೆಯೊಳಸದಳಮೆಸೆವ ಸರಸತಿಯಡಿದಳಿರ್ಗೆ ತಲೆದುಡಿಗೆಯೆನೆ ಪೆಸರ್ವಡೆದ ಬಿಜ್ಜಿವಲದಿಂ ಸಮೆದ ಕಾವನಗೆಲ್ಲಂ ಮೆಜ್ಜಿಯುತಿರ್ಪುದು

ಎಂಬ ಗದ್ಯವಿದೆ.

ಈ ಗ್ರಂಥವು ತತ್ಸಮಪದಗಳಿಲ್ಲದಂತೆ ತದ್ಭವ ದೇಶ್ಯ ಪದಗಳಿಂದಲೇ ರಚಿತವಾಗಿದೆ. ತದ್ಭವಪದಗಳಿದ್ದರೂ ಕವಿ "ಅಚ್ಚಗನ್ನಡ" ದಿಂದ ಬರೆದಿರುವುದಾಗಿ ಹೇಳುತ್ತಾನೆ. ಈ ವಿಧವಾದ ಮತ್ತಾವ ಗ್ರಂಥವೂ ನಮಗೆ ದೊರೆತಿಲ್ಲ. ಇದರ ಬಂಧವು ಬಹಳ ಲಲಿತವಾಗಿಯೂ ಮಧುರವಾಗಿಯೂ ಇದೆ.

ಈ ಗ್ರಂಥದಿಂದ[1] ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

### ವಸಂತ.

ಬಿರಯಿಗಳಂಜಿ ತಾಜಿ ಪಗಲಾಣ್ಮನ ಮೆಯ್ ಬಿಸುಪೇಜಿ ಮಾಗಿ ಚಿ ।
ಚ್ಚರದೊಳೆ ಪಾಜಿ ನೀರ್ದೆಗೆದು ಬೆಂಚೆಗಳೊಳ್ ಕೆಸಜುಂಜಿ ತುಂಬಿಗಳ್ ॥
ಮೊರೆದಲರತ್ತ ಜಾಜಿ ನನೆಯಂ ತರದಿಂದದಿರ್ಮುತ್ತ ಪೇಜಿ ತಾ ।
ವರೆ ತಲೆದೋಜಿ ತೀಡಿದುದು ತೆಂಕಣ ಗಾಳಿ ಬಸಂತದೇಲ್ಗೆಯೊಳ್ ॥ 846 ॥

### ಗಾಳಿ.

ತಳಿರಂ ಮೆಲ್ಲನೆ ನೂಂಕಿ ಮಾವಿಡಿಗಳಂ ಸೆಂಡಾಡುತುಂ ಕೂಡೆ ಪೂ ।
ಗಳ ದೂಳಿಂ ಪೊರೆಯೇಜುತುಂ ಸೊನೆಗಳೊಳ್ ನೀರಾಟಮಂ ಮಾಡುತುಂ ॥
ಬಲ್ಪಾಯಂ ಕೆಯ್ಮಿಗೆ ಬರ್ಪ ತುಂಬಿಯುಲಿಯಿಂದಂ ಡಂಗುರಂಬೊಯ್ಸುತುಂ ।
ತಳರ್ದೀಂ ಬಂದುದೊ ಕಾವನಾನೆಯವೊಲಾ ತಣ್ಗಾಳಿ ತನ್ನಿಚ್ಛೆಯಿಂ ॥ 847 ॥

### ಮಾವು.

ಕನಗೊನರಿರ್ಕೆ ನುಣ್ದಳಿರ ಬಾಲ್ತಿನೆ ಕೆಂದಳಿರಿರ್ಪ ಬೀದು ಬ ।
ಲ್ಲನೆಯ ಪೊದಲ್ಗು ಮುಗುಳ್ನನೆಯ ಪೆರ್ಮನೆ ಮೊಗ್ಗೆಯ ತಾಣಮಚ್ಚವೂ ॥
ವಿನ ನೆಲೆ ಸಣ್ಣಗಾಯ ಬಲುಗಾಯ ಪೊಲ್ಬಿಲ್ ನಸುದೋರೆವಣ್ಣ ತಾ ।
ಯ್ಕನೆ ಪೊಸವಣ್ಣ ಗೊತ್ತಿದೆನೆ ಕಣ್ಗೆಸೆದಿರ್ದುದದೊಂದು ಮಾಮರಂ ॥ 848 ॥

### ಪುಷ್ಪಬಾಣದ ಮಹಿಮೆ.

ಕಡುಪಿಂ ಪೂವಿನ ಕೋಲ್ಗಳ್ । ಗಡಣಿಸಿ ಕವಿತಂದು ನಾಂಟುವಾಗಳ್ ನಿನ್ನೀ ।
ಜಡೆಯುಂ ತೊವಲುಂ ಪಾವಿನ । ತೊಡವುಂ ಲಾಗುಳಮುಮುಡ್ಡಮೇಂ ಬಂದಪುವೇ ॥ 849 ॥

ಇವು ಮುನ್ನಾರಾರ ಬಲ್ಲಂ ನೆಲೆಗಿಡಿಸವಿವಾರಾರ ತಕ್ಕಂ ನೆಲಕ್ಕೆ ।
ಕ್ಕವಿವಾರಾರುರ್ಕನೊತ್ತಂಬಡೆದು ಕೆಡಿಸವಾರಾರ ಕಾಯ್ಪಿಲ್ಲಮಂ ನೂಂ ॥

---

1 ಈ ಗ್ರಂಥದಲ್ಲಿಯ "ತನಿಸಣ್ಣಂ ಲಂಚವಿಾನೇಂ"—(318) ಎಂಬ ಪದ್ಯವನ್ನು ಭಟ್ಟಾಕಳಂಕನು (1604) ಶಬ್ದಾನುಶಾಸನದಲ್ಲಿ 442 ನೆಯ ಸೂತ್ರದ ಕೆಳಗೆ ಉದಾಹರಿಸಿದ್ದಾನೆ

ಕವಿವಾರಾರೇಜ್ಞಿಯಂ ಕುಂದಿಸಿ ಕಳೆಯವಿವಾರಾರ ಕಲ್ಮೆಯ್ಗಳೊಳ್ ನಾಂ ।
ಟವೆನುತ್ತಂತೆಲ್ಲರುಂ ಬಾಯ್ವಿಡೆ ಗಡಣದೆ ಪೂಗೋಲ್ಗಳೆಯ್ತಂದುವಾಗಳ್

॥ 850 ॥

## ಸತ್ಯವ್ಯ.

ಪುರುಳುಂ ಲಕ್ಕಣಮುಂ ಮೆ । ಯ್ಸಿರಿಯುಂ ತಳ್ತೆಸೆಯೆ ಪೇೞ್ದ ಕಬ್ಬಮದೆಂತುಂ ।
ಪುರುಳುಂ ಲಕ್ಕಣಮುಂ ಮೆ । ಯ್ಸಿರಿಯುಂ ತಳ್ತೆಸೆವ ರನ್ನದಂತೆರ್ದವುಗದೇ

॥ 851 ॥

---

## ಮಲ್ಲಿಕಾರ್ಜುನ. ಸು. 1245.

ಈತನು **ಸೂಕ್ತಿಸುಧಾರ್ಣವ**ವೆಂಬ ಗ್ರಂಥವನ್ನು ಬರೆದಿದ್ದಾನೆ. ಇವನು **ಚೋರಕಥೆ**ಯೆಂಬ ಗ್ರಂಥವನ್ನೂ ಬರೆದಿರಬಹುದೆಂದು ಮೆ॥ ರೈಸ್ ಹೇಳುತ್ತಾರೆ.[1] ಆದರೆ ಈ ಚೋರಕಥೆ ಆಧುನಿಕನಾದ ಒಬ್ಬ **ಮಲ್ಲಿಕಾರ್ಜುನರಾಯ**ನೆಂಬವನಿಂದ ತ್ರಿಪದೀರೂಪವಾಗಿ ಬರೆಯಲ್ಪಟ್ಟಿದೆ. ಈ ಕವಿಗೂ ಆ ಗ್ರಂಥಕ್ಕೂ ಏನೂ ಸಂಬಂಧವಿಲ್ಲ. ಸೂಕ್ತಿಸುಧಾರ್ಣವದಲ್ಲಿ ಕವಿ ಕಾವ್ಯಾಂಗಗಳ ವರ್ಣನಾರೂಪವಾದ ಪದ್ಯಗಳನ್ನು ಪೂರ್ವಕವಿಗಳ ಗ್ರಂಥಗಳಿಂದ ಸಂಗ್ರಹಿಸಿದ್ದಾನೆ. ಆದರೂ 'ಸರಸಕವೀಶ್ವರಸಭೆಯೊಳ್ ಸರಸಕವೀಶಂ' ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿರುವುದರಿಂದ ಈತನು ಸ್ವತಂತ್ರವಾದ ಗ್ರಂಥಗಳನ್ನೂ ಬರೆದಿರಬಹುದು. ನಮಗೆ ಅವುವೂ ದೊರೆತಿಲ್ಲ.

ಇವನು ಜೈನಕವಿ. ಈತನಿಗೆ ಮಲ್ಲಪ, ಮಲ್ಲ, ಚಿದಾನಂದಮಲ್ಲಿಕಾರ್ಜುನ ಎಂಬ ಹೆಸರುಗಳೂ ಉಂಟು. "ಯಾದವಕಟಕಾಚಾರ್ಯಸುಕವಿಸುಮನೋಬಾಣ ಜಾಮಾತೃ" ಎಂಬುದರಿಂದ ಈತನು **ಶಬ್ದಮಣಿದರ್ಪಣ**ವನ್ನು ಬರೆದ **ಕೇಶಿರಾಜ**ನ ತಂದೆಯೆಂದೂ **ಜನ್ನ**ನ ಸೋದರಿಯ ಗಂಡನೆಂದೂ ತಿಳಿಯುತ್ತದೆ. ಹೊಯ್ಸಳವೀರಸೋಮೇಶ್ವರನ "ವಿನೋದಾಕರ್ಣನ ಕೌತುಕೋತ್ಪಾದಿತಮುಂ" ಎಂಬುದರಿಂದ ಆ ದೊರೆಯ ಕಾಲದಲ್ಲಿ ಈ ಗ್ರಂಥವು ಹುಟ್ಟಿದಂತೆ ತಿಳಿಯುತ್ತದೆ. ವೀರಸೋಮೇಶ್ವರನು 1233 ರಿಂದ 1254 ರ ವರೆಗೆ ರಾಜ್ಯವಾಳಿದಂತೆ ತಿಳಿವುದರಿಂದ ಕವಿ ಸುಮಾರು 1245 ರಲ್ಲಿ ಇದ್ದಿರಬಹುದು. "ಮುನಿಗಳ ಸಭೆಯೊಳ್ ಪರಮಮುನಿ" ಎಂಬುದರಿಂದಲೂ, ಕೇಶಿರಾಜನು "ಯೋಗಿಪ್ರವರ ಚಿದಾನಂದ ಮಲ್ಲಿಕಾರ್ಜುನ" ಎಂಬುದರಿಂದಲೂ ಈತನು ಮುನಿಶ್ರೇಷ್ಠನೆಂದು ತಿಳಿಯುತ್ತದೆ.

1 ಶಬ್ದಾನುಶಾಸನದ ಉಪೋದ್ಘಾತ, ಪುಟ 35.

ತಾನು ಅನುವಾದಮಾಡಿರುವ ಪೂರ್ವಕವಿಗಳಲ್ಲಿ ಕೆಲವರ ಹೆಸರನ್ನು ಈ ಪದ್ಯದಲ್ಲಿ ಹೇಳಿದ್ದಾನೆ:—

[1]ಜನ್ನನ ದೇಸೆ ಪಂಪನ ಗುಣಂ ಗುಣನಂದಿಯ ತೊಂಡು ಪೊನ್ನನೊಳ್ ।
ಸನ್ನಿದಮಾದ ಜಾಣ್ಮುಂಡಿ [2]ಗಜಾಂಕುಶರಾಜನ ಚಿತ್ತವೃತ್ತಿ ತಾ ॥
ನುನ್ನತಮಾಗಿ ಸಂದ ಗುಣವರ್ಮನ ಜಾತಿ ಸಮಾನುರಕ್ತಿಯಿಂ ।
ದನ್ನೆಲಸಿರ್ಪುವೀಸುಕವಿಮಲ್ಲನ ಕಾವ್ಯವಿಳಾಸಗೇಹದೊಳ್ ॥

ತನ್ನ ಗುಣಗಳನ್ನೂ ಕವಿತಾಚಾತುರಿಯನ್ನೂ ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ:—

ಸರಸಕವೀಶ್ವರಸಭೆಯೊಳ್ । ಸರಸಕವೀಶಂ ವಿಶಿಷ್ಟಮುನಿಗಳ ಸಭೆಯೊಳ್ ।
ಪರಮಮುನಿ ಬುಧರ ಸಭೆಯೊಳ್ । ಪರಮಬುಧನೆನಿಪ್ಪನೀ ಚಿದಾನಂದಬುಧಂ ॥
ಚದುರೆಸೆವಂತು ಭಾವಮಮರ್ವಂತು ನಯಂ ನಿಮಿರ್ವಂತು ಮಲ್ಲಪಂ ।
ಪದವಿಡೆ ಭಾರತೀವನಿತೆ ಭೋಂಕನೆ ಬಂದು ಮನಸ್ಸರೋಜದೊಳ್ ॥
ಚದುರೆಸೆವಂತು ಭಾವಮಮರ್ವಂತು ನಯಂ ನಿಮಿರ್ವಂತು ಲೀಲೆಯಿಂ ।
ಪದವಿಡುತಿರ್ಪಳಾಹವದ ಮಾರಣಮಂತ್ರ (?) ವಿದಾಗದಿರ್ಕುಮೇ ॥

ಇವನ ಗ್ರಂಥ

**ಸೂಕ್ತಿಸುಧಾರ್ಣವ.**

ಇದರಲ್ಲಿ ಕಾವ್ಯದ ಅಂಗಗಳೆನಿಸಿಕೊಳ್ಳುವ

ವಾರಿಧಿ ಪರ್ವತಂ ಪುರಮಧೀಶ್ವರನುದ್ಯಹನಂ ಕುಮಾರನಂ ।
ಭೋರುಹವೈರಿಮಿತ್ರರುದಯಂ ಋತು ನಂದನಮಂಬು ಸೀಧು ಕಾಂ ॥
ತಾರತಿ ಚಿಂತೆ ಮಂತ್ರಚರಯಾನವಿರೋಧಿಜಯಂಗಳೆಂಬಿವಂ ।
ಸೂರಿಗಳಂಗಮೆಂದು ಕೃತಿಯೊಳ್ ಪದಿನೆಂಟುಮನೆಯ್ದಿ ಬಣ್ಣಿಪರ್ ॥

ಈ ಹದಿನೆಂಟು ವಿಷಯಗಳ ವರ್ಣನಾರೂಪವಾದ ಪದ್ಯಗಳನ್ನು ಪೂರ್ವಕವಿಗಳ ಗ್ರಂಥಗಳಿಂದ ಉದ್ಧರಿಸಿ ಒಂದೊಂದು ಅಂಗವನ್ನು ಒಂದೊಂದು ಆಶ್ವಾಸದಲ್ಲಿ ವಿವರಿಸಿದ್ದಾನೆ. ಈ ವಿಷಯವು "ಮಲ್ಲಿಕಾರ್ಜುನ ಸಂಯೋಜಿತ ಸೂಕ್ತಿಸುಧಾರ್ಣವ" ಎಂಬುದರಿಂದಲೂ ವ್ಯಕ್ತವಾಗುತ್ತದೆ. ಪೀಠಿಕಾಶ್ವಾಸವೂ ಸೇರಿ ಒಟ್ಟು ಹತ್ತೊಂಬತ್ತು ಆಶ್ವಾಸಗಳಿವೆ. ನಮಗೆ ಗ್ರಂಥವು ಸಮಗ್ರವಾಗಿ ದೊರೆತಿಲ್ಲ;

1. ಈ ಪದ್ಯಕ್ಕೆ ಹಿಂದೆ ಶ್ರೀಹರ್ಷ, ಭೋಜ, ಪಜ್ರಹಸ್ತ, ಸರ್ವಜ್ಞಸೋಮೇಶ್ವರ ಎಂಬ ಕವಿಗಳಾದ ರಾಜರ ಹೆಸರನ್ನೂ ಹೇಳಿದ್ದಾನೆ.

2. ಗಜಾಂಕುಶನೊಳ್ಪು ಮನೋಜನೋಜೆಲೋ । ಕೋನ್ನತಮಾಗಿ— ಎಂದು ಪಾಠಾಂತರ.

15 ಆಶ್ವಾಸಗಳು ಮಾತ್ರ ದೊರೆತಿವೆ. ಈ ಗ್ರಂಥಕ್ಕೆ ಕಾವ್ಯಸಾರ ಎಂಬ ಹೆಸರೂ ಉಂಟು. ಪಂಡಿತರು ಕರೆದು ಈ ಗ್ರಂಥವನ್ನು ರಚಿಸು ಎನಲು ರಚಿಸಿದೆನು— ಎಂದು ಕವಿ ಹೇಳುತ್ತಾನೆ. ಇದರ ಉತ್ಕೃಷ್ಟತೆಯನ್ನು ಈ ಪದ್ಯದಲ್ಲಿ ಹೇಳಿದ್ದಾನೆ :—

ಚದುರರ ಮೆಚ್ಚು ಭಾವಕರ ಕೈಪಿಡಿ ಜಾಣರ ಬಯ್ಕೆ ಸತ್ಕಲಾ ।
ವಿದರ ವಿಲಾಸಮುಕ್ಕರಿಗರಾಭರಣಂ ಬುಧರಿಚ್ಛೆಯಚ್ಚು ವೀ ॥
ರದ ಕಣಿ ಕೂರ್ತು ಕೂರಿಸಿದ ನಲ್ಲಳ ಮೆಯ್ಸಿರಿ ತಾನದೆಂದೆ ಸ ।
ನ್ಮದೊಳಿ ಬಣ್ಣಿಪುಂ ಧರಣಿ ಸತ್ಕವಿಮುಲ್ಲನ ಕಾವ್ಯಸಾರಮುಂ ॥

ಗ್ರಂಥಾವತಾರದಲ್ಲಿ ಜಿನಸ್ತುತಿ ಇದೆ. ಅನಂತರ ವಿಷ್ಣು, ಶಿವ, ಗಜಾನನ, ಸರಸ್ವತಿ, ಇವರುಗಳ ಸ್ತೋತ್ರರೂಪವಾದ ಪದ್ಯಗಳಿವೆ. ಬಳಿಕ ಹೊಯ್ಸಳವಂಶದ ರಾಜರ ಸ್ತುತಿಯಿದೆ. ಹೊಯ್ಸಳ ಎಂಬ ಹೆಸರು ಬರುವುದಕ್ಕೆ ಕಾರಣವನ್ನು—

ಸಳನೆಂಬಂ ಶಶಕಾಭ್ಧಾನಪುರದೊಳ್ ವಾಸಂತಿಕಾದೇವಿಯಂ ।
ಬಳನಾರಾಧಿಸುವಾಗಳುಗ್ರತರನೇತ್ರಂ ಘೋರವಕ್ತ್ರಂ ವಿಶ್ವಂ ॥
ಖಳಗಾತ್ರಂ ಪುಲಿಯೆಯ್ದೆ ಕಂಡು ಮುನಿನಾಥಂ ಕುಂಚಮುಂ ಕೊಟ್ಟು ಹೊ ।
ಯ್ಸಳ ಎಂದಂ ಬಲ್ಪಾಯಾಯ್ತು ಹೊಯ್ಸಳವೆಸರ್ ತದ್ವಂಶಜೋರ್ವೀಶರೊಳ್ ॥

ಎಂಬ ಪದ್ಯದಲ್ಲಿ ಹೇಳಿದ್ದಾನೆ. ಹೊಯ್ಸಳರಾಜರ ಪರಂಪರೆ ಈ ರೀತಿಯಾಗಿ ಹೇಳಿದೆ—

ಸಳ, ಮಗ ಏನಯಾದಿತ್ಯ, ಮಗ ವಿರೆಯಂಗ, ಮಗ ಬಿಟ್ಟಿದೇವ ಅಥವಾ ವಿಷ್ಣುವರ್ಧನ, ಇವನ ಹೆಂಡತಿ ಲಕುಮಾದೇವಿ, ಮಗ ವೀರನಾರಸಿಂಹ, ಹೆಂಡತಿ ಅಚಲಾದೇವಿ, ಮಗ ವೀರಬಲ್ಲಾಳ, ಮಗ ಚೋಳರಾಜಪ್ರತಿಷ್ಠಾಚಾರ್ಯ ಮಗಧರಾಜಲಯಕಾಲ ಪಾಂಡ್ಯರಾಜಜೇತೃ ವೀರನರಸಿಂಹ, ಮಗ ಕವಿಯ ಸ್ವಾಮಿಯಾದ ವೀರಸೋಮೇಶ್ವರ ಅಥವಾ ಸೋಯಿದೇವ. ಈ ದೊರೆಗೆ 'ಸರ್ವಜ್ಞಚಕ್ರ ಸೋಮನೃಪಾಲಂ' ಎಂದೂ ಹೆಸರು ಹೇಳಿದ್ದಾನೆ.

ಈ ಗ್ರಂಥವನ್ನು ವೀರಸೋಮೇಶ್ವರನು ಕೇಳಿ ಮೆಚ್ಚಿದನೆಂದು ಈ ಪದ್ಯಗಳಲ್ಲಿ ಹೇಳಿದ್ದಾನೆ :—

ಸದವಿನ್ಯಾಸದ ದೇಸಿ ಮಾರ್ಗದ ವಿಲಾಸಂ ರೂಢಿವೆತ್ತಂಗಹಾ ।
ರದಲಂಕಾರದ ಬಂಧಭಾವದೆಸಕಂ ಮೆಲ್ಪಾಡಿನೊಳ್ ಬಂದು ಕೂ ॥
ಡಿದ ನಾನಾರಸಸಾರದಾನಮೆಸೆದತ್ತಿಂದೊಲ್ದು ಕೆಯ್ಕೊಂಡು ಮೆ ।
ಚ್ಚಿದನಾ ಸೂಕ್ತಿಸುಧಾರ್ಣವಾಧ್ಯಕೃತಿಪಾತ್ರಶ್ರೀಗೆ ಸೋಮೇಶ್ವರಂ ॥

ಓರಂತೆ ಮೆಚ್ಚಿದಂ ಕೃತಿ । ಸಾರಂ ಕೃತಿಶೇಖರಕ್ಕೆ ಹೊಯ್ಸಳವಂಶೋ ।
ದ್ಧಾರಂ ನರಸಿಂಹಸುತಂ । ದೋರಸಮುದ್ರಾಧಿನಾಯಕಂ ಸೋಮನೃಪಂ ॥

ಆಶ್ವಾಸಗಳ ಕೊನೆಯಲ್ಲಿ ಈ ಗದ್ಯವಿದೆ:—

ಇದು ಸಮಸ್ತಭುವನಾನಂದ ಸರಸ್ವತೀಸರ್ವಾಂಗದರ್ಪಣಾಯಮಾನಪ್ರತಿಭಾನ ನೂತನಪುರಾತನಪ್ರಮಾಣಕವಿಪುಂಗವಪ್ರಣೀತ ಮಹಾಪ್ರಬಂಧಸಾರೋದ್ಧಾರಮುಂ ಅಷ್ಟಾ ದಶಸ್ಥಲವರ್ಣನಮಾರ್ಗಮನೋಹರಮುಂ ವೀರಹೊಯ್ಸಳ ಸೋವಿದೇವರಾಯ ವಿನೋದಾ ಕರ್ಣನಕೌತುಕೋತ್ಪಾದಿತಮುಂ ಯಾದವಕಟಕಾಚಾರ್ಯ ಸುಕವಿಸುಮನೋಬಾಣಜಾಮಾತೃ ಪರಮುಚಿದಾನಂದ ಮಲ್ಲಿಕಾರ್ಜುನಮಹಾಕವೀಶ್ವರಸಂಯೋಜಿತಮುಮಪ್ಪ ಸೂಕ್ತಿಸು ಧಾರ್ಣವದೊಳ್.

ಈ ಗ್ರಂಥವು ಮಲ್ಲಿಕಾರ್ಜುನನ ಹಿಂದೆ ಇದ್ದ ಕವಿಗಳನ್ನು ನಿರ್ಧರಿಸುವುದಕ್ಕೆ ಅಮೂಲ್ಯವಾದ ಸಾಧನವಾಗಿದೆ.[1] ಇದರಲ್ಲಿ ಪಂಪ, ಪೊನ್ನ, ರನ್ನ ಇವರ ಗ್ರಂಥಗಳಲ್ಲಿಯ ಪದ್ಯಗಳಲ್ಲದೆ ನಮಗೆ ತಿಳಿದಮಟ್ಟಿಗೆ ಈ ಕೆಳಗೆ ಹೇಳುವ ಕವಿಗಳ ಗ್ರಂಥಗಳಿಂದ ಉದ್ಧೃತವಾದ ಪದ್ಯಗಳೂ ದೊರೆಯುತ್ತವೆ:—

| | |
|---|---|
| ಅಗ್ಗಳನ ಚಂದ್ರಪ್ರಭಪುರಾಣ. | ಕವಿಕಾಮನ ಶೃಂಗಾರರತ್ನಾಕರ. |
| ಅಭಿನವಪಂಪನ ರಾಮಾಯಣ, ಮಲ್ಲಿ | ಗುಣವರ್ಮನ ಪುಷ್ಪದಂತಪುರಾಣ. |
| ನಾಥಪುರಾಣ. | ಚಂದ್ರರಾಜನ ಮದನತಿಲಕ. |
| ಆಂಡಯ್ಯನ ಕಬ್ಬಿಗರಕಾವ. | ದುರ್ಗಸಿಂಹನ ಪಂಚತಂತ್ರ. |
| ಆದಿಗುಣವರ್ಮನ ಶೂದ್ರಕ. | ದೇವಕವಿಯ ಕುಸುಮಾವಳಿ. |
| ಆದಿನಾಗವರ್ಮನ ಕಾದಂಬರಿ. | ನೇಮಿಚಂದ್ರನಲೀಲಾವತಿ, ಅರ್ಧನೇಮಿ. |
| ಉದಯಾದಿತ್ಯನ ಅಲಂಕಾರ. | ರುದ್ರಭಟ್ಟನ ಜಗನ್ನಾಥವಿಜಯ. |
| ಕಮಲಭವನ ಶಾಂತೀಶ್ವರಪುರಾಣ. | ಹರಿಹರನ ಗಿರಿಜಾಕಲ್ಯಾಣ. |

ಈ ಕವಿಯ ಕವಿತಾಶೈಲಿಯನ್ನು ತೋರಿಸುವುದಕ್ಕೆ ಇವನ ಸ್ವಾಮಿಯಾದ ವೀರಸೋಮೇಶ್ವರನ ಸ್ತುತಿರೂಪವಾದ ಎರಡು ಪದ್ಯಗಳನ್ನು ಪೀಠಿಕಾಶ್ವಾಸದಿಂದ ಉದ್ಧರಿಸಿ ಬರೆದು, ಬಳಿಕ ಈ ಗ್ರಂಥದಲ್ಲಿ ನಮಗೆ ದೊರೆತಿರುವ ಉಳಿದ 14 ಆಶ್ವಾಸಗಳಲ್ಲಿ ವರ್ಣಿತವಾಗಿರುವ ಕಾವ್ಯಾಂಗಗಳ ವಿಷಯವಾಗಿ ಒಂದೆರಡು ಪದ್ಯಗಳನ್ನೂ ಒಂದೊಂದು ಆಶ್ವಾಸದ ಆದಿಭಾಗದಲ್ಲಿಯೂ ಅದರಲ್ಲಿ ವರ್ಣಿತವಾಗುವ ಕಾವ್ಯಾಂಗದ ವರ್ಣನೀಯಾಂಶಗಳನ್ನು ಹೇಳುವ ಪದ್ಯವನ್ನೂ ತೆಗೆದು ಬರೆಯುತ್ತೇವೆ:—

1. ಇದರಂತೆಯೇ ಅಭಿನವವಾದಿವಿದ್ಯಾನಂದನ (1533) ಕಾವ್ಯಸಾರವೂ ಅವನಿಗೆ ಹಿಂದೆ ಇದ್ದ ಕವಿಗಳನ್ನು ನಿರ್ಧರಿಸುವುದಕ್ಕೆ ಸಾಧಕವಾಗಿದೆ.

## ಸೋಮೇಶ್ವರಸ್ತುತಿ.

ಹಣಿದಂಬೊಯ್ಯಲ್ ಜವಂ ರಾಯರನೆ ಬಯಸಿ ಬರ್ಪಂತೆ ಸೋಮೇಶ್ವರಂ ತಂ ।
ಕಣ ರಾಯಂ ಬಂದನಾಶಾಜಯಕೆಲೆಲೆ ಮಹಾದೇವ ವಿದ್ವಿಣ್ಣೃಪರ್ಗೆ ॥
ತ್ತಣ ತೋರ್ಪಿನ್ನೆತ್ತಣಾರ್ಪೆತ್ತಣ ಜಯದೊದವಿನ್ನೆತ್ತಣಾಟೋಪಮಿನ್ನೆ ।
ತ್ತಣ ಧಾತ್ರೀಚಕ್ರಮಿನ್ನೆತ್ತಣ ಗಜಘಟೆಯಿನ್ನೆತ್ತಣಾತ್ಮೀಯಸೈನ್ಯಂ ॥ 852 ॥

ಗಿರಿದುರ್ಗಂ ತಿಱಿಕಲ್ ಸಮಗ್ರವನದುರ್ಗಂ ಕರ್ಬುದೋರ್ಂಟಂ ಜಲೋ ।
ದರದುರ್ಗಂ ಕಡುಪಿಂದದಿಂಟಿಮೊಗಮುಂತಾಪೋಶನಂ ಕಾಣ್ಬುದೇ ॥
ಕರಣಂ ಕೇಳ್ ಸರಣಿಲ್ಲ ಬೀಱಿ ನಿಮಗೆಂದುದ್ವೃತ್ತರಂ ಸಾಱಿ ಡಂ ।
ಗುರಿಪಂತಬ್ಬರಿಕುಂ ಜಯೋತ್ಕಟಪಟಹಂ ತ್ರೀಸೋಮಭೂಪಾಲನಾ ॥ 853 ॥

## II. ಸಮುದ್ರ.

ವರ್ಣನೀಯಾಂಶಗಳು :—

ತೆರೆ ನೊರೆ ಬುದ್ಬುದಂ ಸುಱಿ ಜಲಂ ತೆಗೆ ಪೆರ್ಚುಗೆ ಗುಣ್ಪು ಘೋಷಣಂ ।
ವರುಣನಗಂ ವಧೂಟಿಜನನಂ ಮಣಿಗಳ್ ಬಡಬಾಗ್ನಿ ವಾಶ್ಚರಂ ॥
ಹರಿ ಮಱಿಯಾವೆ ವೇಳೆ ತೊಱಿಯಾಶತೆ ನೀರ್ಮೊಗೆವಭ್ರಮುರ್ವರಾ ।
ಪರಿವೃತಿ ನಾಗರಿಕ್ಕೆ ಬಗೆಗಾದೊಡೆ ಸೈತು ಸಮುದ್ರವರ್ಣನಂ ॥ 854 ॥

ಪವಳದ ಬೀಡು ಕಂಬುಗಳ ನಾಡು ಜಲೇಶನ ಜೊಂಡು ನಾಡೆಯುಂ ।
ಕವಿಗಳ ಲೀಲೆ ಗಂಗೆಗಿವಿಯೋಲೆ ವನೇಭವಶಾಲೆ ಪದ್ಮಸಂ ॥
ಭವನ ನೆಗಱ್ತ್ ಪೂರ್ವದ ಪೊಗಱ್ತ್ ಕುದುರ್ಗಳಗಱ್ತ್ ವಿಕ್ಕ ಬಾ ।
ಡವಶಿಖಿಗೋಗರಂ ಮಣಿಗಳಾಗರಮಂದೆಸೆದತ್ತು ಸಾಗರಂ ॥ 855 ॥

ಮೂಲಾಮೂಲಾಪ್ರವಾಳಾವೃತಸುರತರುಶೋಭಾವಹಂ ಭಾವಹಂ ಶೈ ।
ವಾಲಾವಾಲಾಭಿಘಾತಪ್ರಕರಮಕರಕುಂಭೀಕರಂ ಭೀಕರಂ ಜಂ ॥
ಬಾಲಾಬಾಲಾಮೃಣಾಳೋಚ್ಚಲಿತಶಫರಕಂಜಾಕರಂ ಜಾಕರಂ ಕ ।
ಲ್ಲೋಲಾಲೋಲಾಯಮಾನಧ್ವನಿಜನಿತದಿಶಾಭಿತ್ತಿಮುದ್ರಂ ಸಮುದ್ರಂ ॥ 856 ॥

## III. ಪರ್ವತ.

ವರ್ಣನೀಯಾಂಶಗಳು :—

ತರುತತಿ ಬಳ್ಳಿ ಪುಲ್ಲೊದಱು ಪಕ್ಕೆ ಮೃಗಂ ಫಣಿ ಜೀರ್ಮೃಗವ್ಯಮೊ ।
ಜ್ಜರಮೆಸೆವುನ್ನತಿಕ್ಕೆ ಸಿಲೆ ಕೋಡು ಗುಹಾವಳಿ ತಾಪಸಾಶ್ರಮಂ ॥

[1] ದರಿ ಸರಿವಾನೆಗಳ್ ಸರಿಕೆ ಮೆಂವ ಮುಗಿಲ್ ದೊಣೆ ಬಿಲ್ಲಪಳ್ಳಿ ಕೆ ।
ನ್ನರಮಿಥುನಾಳಿಗಳ್ ವಿಷಯಮಾಗಿರೆ ತೀರ್ವುದು ಶೈಲವರ್ಣನಂ ॥ 857 ॥

ಬಹುರತ್ನಚ್ಛಾಯೆಯಿಂ ಪರ್ವಿದುದಖಿಳದಿಶಾಭಿತ್ತಿಯಂ ಚೂಳಿಕಾನೋ ।
ಕಹಶಾಖಾಹಸ್ತದಿಂ ಜಕ್ಕುಲಿಸಿ ರವಿರಥಾಶ್ವಂಗಳಂ ಗಂಡಶೈಲಾ ॥
ಗ್ರಹಟತ್ಕೂಟಂಗಳಿಂದಂ ಧರಿಸಿ ದಿವಮನೇಂ ಪೆಂಪುವೆತ್ತತ್ತೊ ಭೂಭೃ ।
ನ್ಮಹಿತಂ ಶ್ರೀಪರ್ವತಂ ನಿರ್ಝರಜಲಲಹರೀಲಾಸ್ಯಮಾಂಗಲ್ಯರಂಗಂ ॥ 858 ॥

ನಡುವಿಂ ನಾಲ್ವಡಿ ಕೊರ್ವುವೆತ್ತು ಕೊರಲೊಳ್ ಕರ್ಬೊನ್ನ ಬಲ್ಪೂಜಿಗಳ್ ।
ನಡೆ ಬೊಟ್ಟಿಟ್ಟವೊಲುರ್ಬಿ ರೋಮನಿಕರಂ ಕಂಕಾಳಮಂ ರಕ್ಕಸಂ ॥
ಕಡೆವಾಯೊಳ್ ಕುಡಿದೋರ್ಪಿನಂ ನುಡಗಿಮೊಲ್ ದಂಷ್ಟ್ರಾಂಕುರಂ ತೋಜಿಕಣ್ ।
ಕಿಡಿಯುಂ ಸಾಲಡಿ ಹುಂದಿಬಿಂಡೊಡೆದು ಗಂಡಂ ಬೀಜಿ ಪೋಯ್ತೆಕ್ಕಲಂ ॥ 859 ॥

## IV. ಪುರ.

ವರ್ಣನೀಯಾಂಶಗಳು :—

ಬನಮುಂ ಕೆಯ್ಲೊಲಗಾವ ಪಾಮರಿಯರುಂ ಮಾರ್ಗಪ್ರಪಾಪಾಲಿಕಾ ।
ಜನಮುಂ ಗೋಕುಲಮುಂ ಜಲಾಶ್ರಯಮುಮಾರೂಢಾಸ್ತ್ರಶಸ್ತ್ರಶ್ರಮಾ ॥
ವನಿಯುಂ ಕೋಂಟೆಯುಮೆತ್ತಿದಂಗಡಿಗಳುಂ ವಾರಾಂಗನಾವಾಟದೇ ।
ವನ್ಪೆಂದಾಲಯವರ್ಗಮುಂ ವರಪುರವ್ಯಾವರ್ಣನಕ್ಕಾಸ್ಪದಂ ॥ 860 ॥

ಪಾಡುವ ತುಂಬಿ ತುಂಬಿಯೊಳರಲ್ವ ಮುರಲ್ ಮುರಲೊಂದು ಸೊಂಕಿನಿಂ ।
ತೀಡುವ ಗಾಳಿ ಗಾಳಿಗೆ ಬಲ್ಪಿಲ್ವ ತಳಿರ್ ತಳಿರಿಂ ಫಲಂಗಳಿಂ ॥
ದಾಡುವ ರಾಜಕೀರತತಿ ಕೀರಚಯಂಗಳಕೂಡೆ ಜ್ಪೆದು ಜ್ಪೆ ।
ದಾಡುವ ತೊಂಡುವೆಣ್ಣುರುಳ್ ಮಾಡುವುವಾರ್ಗಮನಂಗದಾನಮಂ ॥ 861 ॥

ಬರೆಯಲ್ಬಾರದು ಬರ್ಚಿಸಲ್ಕರಿದು ನೋಡಲ್ಕೂಡದೊಡ್ಡೈಸಲ ।
ಚ್ಚರಿ ಭೂಮಂಡಲಮಧ್ಯದಿಂದೊಡೆದು ಮೂಡಿತ್ತೆಂಬಿನಂ ಚೆಲ್ವನಾ ॥
ಕರುಮಾಡಂ ನವಭೂಮಿಕಾಪ್ರಕಟಿತಂ ವಿಷ್ಕಂಭವಿಸ್ತಾರಬಂ ।
ಧುರಸಂಧಿಪ್ರತಿಭಾನಿ ನಾಟಕದ ಪಾಂಗಿಂ ಚೂಳಿಕಂ ಲಾಳಿಕಂ ॥ 862 ॥

## V. ನಾಯಕಾಭ್ಯುದಯ.

ವರ್ಣನೀಯಾಂಶಗಳು :—

ಮುನಿಸಿಂದಾಂತರನಿಕ್ಕಿ ಭೂವಳಯಮುಂ ನಿಷ್ಕಂಟಕಂಮಾಡಿ ಕೇ ।
ರ್ತಿ ನಿಜಾಜ್ಞಾಸಹಿತಂ ದಿಶಾವಳಯಮುಂ ತಳ್ತೊಪ್ಪೆ ಸಂಗೀತಮಂ ॥

---

1. ಹರಿಮುರಿಯಾನೆಯಂತೆರಗಿ—ಪಾಠಾಂತರ.

ಜನನಾಥರ್ ಮುದದಿಂದಮೋಲಗದೊಳಿತ್ತಂ ಕೇಳ್ದು ತಾಂ ತ್ಯಾಗವ ।
ರ್ಧನಮುಂ ಮಾಟ್ಪುದು ನಾಯಕಾಭ್ಯುದಯಮೆಂಬಂಗಂ ಮಹಾಕಾವ್ಯದೊಳ್
॥ 863 ॥

ಉಂಟು ಭುಜಾಬಲಂ ಪಿರಿದು ಚಾಗದ ಸಂಪದಮೇಟ್ರುವಾರ್ಧಿಯುಂ ।
ದಾಂಟಿತುದಾತ್ತಕೀರ್ತಿ ಕಳಿಯೊಳ್ ಬಿನದಂ ತನಗೆಂದು ನಿಚ್ಚಲುಂ ॥
ಕಂಟಕಿತಾಂಗಿಯಾದಪುದು ಪಂಡಿತಮಂಡಲಿ ರಾಜ್ಯಮುಂತು ನಿ ।
ಷ್ಕಂಟಕಮೆಂಬಿನಂ ಪಡೆದನಚ್ಚರಿಯಂ [1] ನೃಪಧೀರನೊಚ್ಚತಂ ॥ 864 ॥

ನುಡಿ ಸಲೆ ನನ್ನಿಗಿಕ್ಕೆವನೆಯಾದುದು ಜವ್ವನೆ ಬಂದ ನೀಲ್ಕೆ ಕ ।
ನ್ನಡಿಯೆನಿಸಿತ್ತು ಸೊಂಪು ಪಿರಿಯರ್ಗೆಡೆಗೊಟ್ಟುದು ಗಾಡಿ ರೂಢಿಯಂ ॥
ಪಡೆದುದು ಬೀರಮುಗ್ಗಡದ ಸೈರಣೆಗಾಗರಮಾಯ್ತು ನೋಟ್ಪಿಡಿಂ ।
ದಡಿಗಡಿಗೊಲ್ದು ಬಣ್ಣಿಸುವುದಾನೆಲದಾಣ್ಮನನಾವಗಂ ನೆಲಂ ॥ 865 ॥

## VI. ವಿವಾಹ.

ವರ್ಣನೀಯಾಂಶಗಳು :—

ಪಸೆ ಪಂದಲ್ದಟ್ಟಿ [2] ಜಾಗಂ ಜಗಲಿ ಬಿಗಿದ ಭೃಂಗಾರಿ ಮೇಲ್ಕಟ್ಟು ಚಿತ್ರಂ ।
ಪೊಸಕುಂಭಂ ಶಂಕು ನೂಲ್ಪೆರಣಿ ತಳಿರ್ಗಳಸಂ ಸರ್ವಧಾನ್ಯಂ ಮೊಸರ್ ಭ ॥
ಕ್ಷ್ಯಸಹಸ್ರಂ ಲಾಜಿ ಹೋಮಂ ಪಜಿ ಕಡೆ ಗುಡಿ ಪೂದೋರಣಂ ಬಾಸಿಗಂ ಸೇ ।
ಸೆ ಸಮಸ್ತಸ್ತ್ರೀಜನಂ ಕನ್ನಡಿ ಜವಳಿಗಳುದ್ಯಾಹದೊಳ್ ವರ್ಣನೀಯಂ ॥ 866 ॥

ಪೂಗಣೆ ಕರ್ಬುವಿಲ್ ಮಿಳಿರ್ವ ವಿಾಂಗುಡಿ ಮಲ್ಲಿಗೆ ಮಾವು ತೆಂಬೆಲರ್ ।
ಕೋಗಿಲೆ ಜೊನ್ನವಿಂದೊಳದ ನುಣ್ಸನಿ ಸುಗ್ಗಿಯೆನಿಪ್ಪಿವೆಲ್ಲಮೊಂ ॥
ದಾಗಿಯೆ ದರ್ಪಕಂಗೆ ಸಮನಿಪ್ಪ ಜಗಜ್ಜಯದರ್ಪಮಂ ಸಮಂ ।
ತಾಗಿಸಲೊಂದೆ ಸಾಲ್ಗುಮೆನಿಸಿತ್ತು ಕುಮಾರಕೃತಪ್ರಸಾಧನಂ ॥ 867 ॥

ಎಱಕೆಮರಲ್ದು ಗೋಣ್ಮಱಿದು ಚಂಚುಪುಟಂದೆಱಿದಳ್ಳಿಬಾಱಿ ಬಂ ।
ದೆಱಗುವುವಲ್ಲಿ ಚುಂಚುಲೊವೆಯೊಳ್ ಕಡೆಯಿಕ್ಕಿದ ಪಚ್ಚೆ ಸಾರಮುಂ ॥
ಕಿಱುಮುಡಿಗೆತ್ತು ಸಾರಿ ಕಿಟಕಾರಿಯ ಮಾಣಿಕವಟ್ಟಿಯುಂ ಪಿಕಂ ।
ಕಿಱುದಳಿರ್ಗೆತ್ತು ಲಂಬಳದ ಮುತ್ತುಗಳಂ ಮಱಿಗೆತ್ತು ಚಾತಕಂ [3] ॥ 868 ॥

## VII. ಕುಮಾರೋದಯ.

ವರ್ಣನೀಯಾಂಶಗಳು :—

ತನುಭವಲಾಭದೌಹೃದನಿಮಿತ್ತದ [3] ಸಂತತಿ ತಕ್ಕ ನೋಂಪಿ ಮುಂ ।
ಗನಸು ಬಯಕ್ಕೆ ಗೆಂಟುಗೆ ದೃಗುತ್ಸವಕಾರಣಗರ್ಭಚಿಹ್ನಮೊ ॥

---

1. ನೃಸನೇಂ ವಿದಗ್ಧನೋ. 2. ಕುಡ್ಯಂ. 3. ಸಂಗತಿಗಂದು ನೋಂತ.

ಳ್ವಿನ ದಿವಸಂ ಶುಭೋದಯಮಿಳಾದಿಮನೋಹರಭೂತಲಕ್ಷಣಂ ॥
ಜನನುತಜಾತಕರ್ಮವಿನಿತುಂ ಸುತಶೋಭನವರ್ಣನಸ್ಥಳಂ ॥ 869 ॥

ಸೆಣಸಿ ಪಳಂಚಿ ಸಂಚಳಿಸಿ ಮುಂಚಿ ತೆಱಂಬೊಳೆದೊಂದನೊಂದು ಸಂ ।
ದಣಿಸಿ ಪಲರ್ಮೆಯಿಂ ಕರ್ದುಕೆ ಭೋಂಕನೆ ಸೋಂಕೆ ಚಲಂಕೆ ಬಿಂಕದಿಂ ॥
ಮಣಿದು ಕುಲಂಕೆ ತೇಂಕೆ ಪೊಸಲೊಳ್ ಪರಿದಾಡುವ ತನ್ನ ನೀಳ್ದ ಕ ।
ಣ್ಬೊಣರ್ಗೆಣೆಯಪ್ಪ ವಿಾನ್ಬೊಣರನಂಬುಜಲೋಚನೆ ಕೂರ್ತು ನೋಡಿದಳ್ ॥ 870 ॥

ಮಾಣದೆ ಧೂಳಿಕೇಳಿಗೆ ಕಡಂಗುವ ಸಾರ್ಚುವ ತಾಯ ಜಂಘೆಸಿ ।
ಶ್ರೇಣಿವೊಲಾಗೆ ಮೆಟ್ಟಿ ತೊಡೆಯೇಱುವ ಚಿತ್ರದ ಪಣ್ವಳಂಗಳಂ ॥
ಕಾಣಿಸಿ ದಾದಿಯಂ ಬಿಡದೆ ಬೀಡುವ ಕಂಡರ ಹಸ್ತತಾಳಕ ।
ಲ್ಯಾಣರವಕ್ಕೆ ನರ್ತಿಸುವ ಮುದ್ದುಗಳೊಪ್ಪಿದುವಾಕುಮಾರನೊಳ್ ॥ 871 ॥

## VIII. ಚಂದ್ರೋದಯ.

### ವರ್ಣನೀಯಾಂಶಗಳು :—

ಮೊದಲೊಳ್ ನೇಸಱ ಪಕ್ಕೆ ಕೋಕವಿರಹಂ ಸಂಕೋಚಸದ್ಮಂ ತಮಂ ।
ಪುದಿದಾಸಂಜೆಯ ತೂರ್ಯಮಾಕುಲಟಿಯರ್ ತಾರಾಳಿ ದೀಪಂ ಬಟ್ಟಿ ॥
ಕ್ಕುದಯಂ ಕೆಂಪೆಳಗರ್ಪು ಚಂದ್ರಿಕೆ ಚಕೋರಂ ನೆಯ್ದಿಲಿಂದೂಪಳಂ ।
ಮದಿರಾಂದೋಳವಿಹಾರಲೀಲೆಯಿನಿತುಂ ಚಂದ್ರೋದಯಕ್ಕಾಸ್ಪದಂ ॥ 872 ॥

ಕವಿದುವು ಧೇನು ಮುಂಚಿ ತುಱುಗಳ್ ಪೊಲದತ್ತಣಿನೂರ್ಗೆ ಬಾನಲಾ ।
ದುವು ಪಡುವಣ್ಗೆ ಪಾಜಿದುವು ಗೂಡಿನ ಸಾರ್ಕೆಗೆ ಪಕ್ಕಿ ಕೊಂಬುಗೊಂ ॥
ಡುವು ಮೃಗಮೂರ ಪೊರ್ದುಗೆಯ ಬಟ್ಟೆಗೆ ಮೇಪಿನ ಕಾಪಿನಿಂ ಮರ ।
ಳ್ವುವು ದಿನನಾಯಕಂ ವರುಣದಿಙ್ಮುಗಮುಂ ಮಜ್ಜಿಗೊಳ್ಪ ಕಾಲದೊಳ್ ॥ 873 ॥

[1] ವಿತತಪ್ರಾಚ್ಯದ್ರಿಪೀಠಾಗ್ರಿಮದರುಣಶಿಲಾವೃತ್ತಲಿಂಗಂಬೊಲಿಂಬಾ ।
ಯ್ತು ತರಂಗೊಂಡೇಱ್ಪ ಯುಂ ರಾಗದಿನುಪಚಿತಚೇತಶ್ಚಕೋರೀಕದಂಬಂ ॥
ದ್ಯುತಿವಲ್ಲೀಸ್ತಂಭಮುಜ್ಜೃಂಭಿತಕುಮುದಕುಟುಂಬಂ ತಮಶ್ಶೈಲಶಂಬಂ ।
ರತಿಪಾಟೋಪಾವಲಂಬಂ ಜನಿತವಿಟವಿಡಂಬಂ ಸುಧಾಸೂತಿಬಿಂಬಂ ॥ 874 ॥

## IX. ಸೂರ್ಯೋದಯ.

### ವರ್ಣನೀಯಾಂಶಗಳು :—

ಹಳಹಳನಿರ್ದ ತಾರೆ ಕಳೆಗುಂದಿದ ಚಂದ್ರನಲರ್ಕಗುಂದಿದು ।
ತ್ಪಲವನ ಶೈತ್ಯಮಪ್ಪೆಲರು ನಂದುವ ದೀಪಮಗಲ್ದ ಜಾರೆಯರ್ ॥

1. ಜಗನ್ನಾಥವಿಜಯ.

ಗಲ್ಲಿಪುವ ಕೋಟ್ಲಿ ಶಂಖಮುರುಣಚ್ಛವಿ ಕೆಂಪಿನಮಂಡಲಂ ರಶ ।
ಕ್ಕೆಳಸುವ ಕೋಕಮಬ್ಜವಿಕಸಂ ಸಲೆ ಸೂರ್ಯನ ವರ್ಣನಕ್ರಮಂ ॥ 875 ॥

ಜನಿಸಿದ ತಾಣಮೇಂ ಕಿಱಿದೆ ವಾರ್ಧಿ ಸಹೋದರಿಯೇಂ ದರಿದ್ರೆಯೇ ।
ಘನತರಭಾಗ್ಯಲಕ್ಷ್ಮಿಯೊಡಹುಟ್ಟಿದನೇಂ ಲಘುವೇ ಹಿಮಾಂಶು ಭಾ ॥
ವನೆನಿಪನೇನೊ ಜಾವಳನೆ ಕೃಷ್ಣನುಮೆಂಬುದುಕೇಳ್ದು ಮರ್ತ್ಯರೆ ।
ನ್ನನೆ ಮಿಗೆ ಕರ್ಚಿ ಕೊಲ್ಲರೆನುತೂಳ್ಳವೊಲಾರ್ದುದು ಶಂಖಿನಿಸ್ವನಂ ॥ 876 ॥

ಮೂಡಣ ಸಂಜೆ ಕೆಂದಳಿರ ಕಾವಣದಂತಿರೆ ಚಂದ್ರಮಂಡಲಂ ।
ಬಾಡಿದ ಮಾಧವೀಮಧುರಮುಂಜರಿಯಂತಿರೆ ತಾರಕಾಳಿ ನೀ ॥
ರೋಡಿ ಕಲ್ಪಿಲ್ದು ಬಿಲ್ದಿ ಕಲ್ಪಿವೂಗೆಣೆಯಾಗಿರೆ ತಣ್ಣನಪ್ಪಲರ್ ।
ತೀಡೆ ತಪೋವನಂಬೊಲತಿಪಾವನವಾಯ್ತು ನಭಂ ಪ್ರಭಾತದೊಳ್ ॥ 877 ॥

## X. ಋತು.

ವರ್ಣನೀಯಾಂಶಗಳು :—

ತರುಮೃಗಪಕ್ಷಿಮೇಘಜಲವಾಯುದಿಶಾಜವಕಾಯಭೋಗಭಾ ।
ಸ್ಕರವಿಧುರಾತ್ರಿವಾಸರಸುರಾಲಯ ? ಪರ್ಬರತೋಪಚಾರಸಿಂ ॥
ಧುರಮದಜನ್ಮಯಾನಮದನೋದಯಸಸ್ಯವಿಶೇಷಭಾವದೊಳ್ ।
ಪರಿಣತನಪ್ಪವಂಗೆ ಋತುವರ್ಣನವಿಸ್ತರಮೊಪ್ಪಿ ತೋಱುಗುಂ ॥ 878 ॥

ಮದನನ ದಂಡು ಮಲ್ಲಿಗೆಯ ಬಂಡು ಪಿಕಾಳಿಯ ತೊಂಡು ಪೂತ ಚೂ ।
ತದ ತನಿಗೊರ್ಬು ಮಾಧವಿಯ ಪರ್ಬು ತವಾಲದ ಮರ್ಬು ರಾಜಕೇ ॥
ರದ ತನಿಸೊರ್ಕು ಕಾಮಿಜನದುರ್ಕು ವಿಯೋಗಿಯ ಸೆರ್ಕು ಕೂಡ ಬಂ ।
ದುದು ಮಧುವಾಸರಂ ವಿವಿಧಕೇಸರಮುದ್ಧತಧೂಳಿಧೂಸರಂ ॥ 879 ॥

ಪಿಂಗಳಮಾದ ನೆಲ್ಲ ತೆನೆಯುಂ ನಲಿಗರ್ಚಿದ ರಕ್ತಚಂಚು ಪ ।
ಕ್ಷಂಗಳ ಶಾಡ್ವಲಚ್ಛವಿ ಮನಂಗೊಳೆ ಪಾಱುವ ಕೀರಮಾಲೆ ರೋ ॥
ದ್ಯೋಂಗಣಮೆಂಬ ಪಟ್ಟಣದೊಳೊಪ್ಪುವ ಬೆಳ್ಮುಗಿಲೆಂಬ ಬಳ್ಳಿಯಾ ।
ಡಂಗಳ ಪೊನ್ನ ಮಾಣಿಕದ ಪಚ್ಚೆಯ ತೋರಣದಂತೆ ರಂಜಿಕುಂ ॥ 880 ॥

## XI. ವನಕ್ರೀಡೆ.

ವರ್ಣನೀಯಾಂಶಗಳು :—

ವನಪಾಲರ್ ಪೇಟ್ಪಿ ಭೂಪರ್ ತರುಣಿಯರೊಡನಾನಂದನಕ್ಕೆಯ್ದಿ ಪೋಪಾ।
ಬನದೊಳ್ ಪೂಗೊಯ್ದು ಪೂವಿಂ ತುಡಗೆಯನೊಲವಿಂ ಮಾಲ್ಪಿ ತೂಗುಯ್ಯಲಂ ಮಾ ॥
ವಿನೊಳಾಡುತ್ತಿರ್ಪ ಬಿಟ್ಟೋಜುವ ಮುರವಡರ್ದುಂ ಕಾವಣಕ್ಕೊಪ ತಂತ ।
ಮ್ಮಿನಿಯರ್ ತೈತುಂಬುದಂ ವರ್ಣಿಸುಗೆ ಕವಿ ವನಕ್ರೀಡೆಯೊಳ್ ವರ್ಣನೀಯಂ
॥ 881 ॥

ಸ್ಮರರಾಜಂ ವನಪಾಲನಾಗೆ ರತಿಲಾವಣ್ಯಪ್ರವಾಹೋತ್ಕರಂ।
ಪರಿನೀರಾಗೆ ನಿರಂತರಂ ಋತುಗಳಾಱುಂ ಕಾಪಿನಾಳಾಗೆ ಚ್ಕೆ॥
ತ್ರಪೋದ್ಯಾನದ ಚಿಲ್ವಸೊತ್ತರಿಸಿ ಕೇಳೀಶೈಲಕೇಳೀಸರೋ।
ವರಕೇಳೀಗೃಹಮೆಂಬಿವಂ ತಳೆದು ಕೇಳೀನಂದನಂ ರಂಜಿಕುಂ ॥ 882 ॥

ಪರಭಾಗಂ ಪೊಣ್ಮುವನ್ನಂ ತನುಲತೆ ಲತೆಯೊಳ್ ಕೂಡೆ ತುಂಗಸ್ತನಂ ಮಂ।
ಜರಿಯೊಳ್ ಮುಂಡಾಡೆ ಕಜ್ಜಳ್ ಬೆರಸೆ ಕುಸುಮದೊಳ್ ಕುಂತಳಂ ತುಂಬಿ
ಯೊಳ್ ತ[1]॥
ಳ್ತಿರೆ ಪುಷ್ಪಾಮೋದದೊಳ್ ಸುಯ್ಕಲಸೆ ಕರತಳಚ್ಛಾಯೆ ತಟಿಸ್ಕೈಸೆ ಬಾಲಾಂ।
ಕುರಮುಂ ಪೂಗೊಯ್ದುಳೊರ್ವಳ್ ಲತೆ ಲತೆಗೊಲವಿಂ ಬಿರ್ದುವಂದಂ
ತಿರ್ದಳ್ ॥ 883 ॥

## XII. ಜಲಕ್ರೀಡೆ.

ವರ್ಣನೀಯಾಂಶಗಳು:—

ಜಿಮರಂ ವಾರಿವಿಳಾಸಮಂ ಸಲಿಲಧಾರಾಯಂತ್ರವಾರಿಪ್ರವೇ।
ಶಮನಾಲೇಪನಕಂಪಮಂ ಮುಳಿಸುಲೀಲಾಯುದ್ಧಮಂ ಕಾವಿನೀ॥
ಶ್ರಮಮಂ ಮೂಡಿ ಮುಟ್ಟುಂಗುತರ್ಪ ಪರಿಯಂ ಮೆಯ್ಯುರ್ಬುಮಂ ಚೆಲ್ವುಮಂ।
ಕ್ರಮದಿಂದಂ ಪೊಱಮಟ್ಟು ನಿಂದ ನಿಲವಂ ಪೇಟ್ಪಿರ್ ಜಲಕ್ರೀಡೆಯೊಳ್ ॥ 884 ॥

ಇದು ಪಿರಿದುಂ ವಸಂತಸಖಿಯಾವನರತ್ನನಿಧಾನಮಂತಿದ।
ಲ್ತಿದು ಕುಸುಮಾಸ್ತ್ರಶಸ್ತ್ರಚಯಕೋಶಮಹೀಗೃಹಮಂತಿದಲ್ತು ಮು॥
ತ್ತಿದು ರತಿನಾಥಕಲ್ಪಲತಿಕಾಪ್ರಮದೈಕಕೃತಾಲವಾಲಮೆಂ।
ಬುದನೆನಿಸಿತ್ತು ಸಂದಣಿಸಿ ನಿಂದಬಲಾವಳಿಯಿಂದೆ ಪೂಗೊಳಂ ॥ 885 ॥

ಸ್ಫುರಿತಾಂಗಂ ಸೂಸೆ ಲಾವಣ್ಯಮನೆಸೆವಲರ್ಗಣ್ ಚಲ್ಲಮಂ ಸೂಸೆ ಲೀಲಾ।
ದರಹಾಸಂ ಸೂಸೆ ಬೆಳ್ದಿಂಗಳನಲಘುಕುಚಂ ಮೇಲುದಂ ಸೂಸೆ ಚಾವಿಂ॥
ಕರಕಾಂಚೀಮಂಜುಗುಂಜದ್ಧ್ವನಿ ಕೆವಿಗಮರ್ದಂ ಸೂಸೆ ತಳ್ವೊಯ್ಯ ಸುಯ್ಕ।
ತ್ತುರಿಗಂಪಂ ಸೂಸೆ ಲಕ್ಷ್ಮೀಪತಿಯ ತನುವಿನೊಳ್ ಸೂಸಿದಳ್ ನೀರನೊರ್ವಳ್
॥ 886 ॥

## XIII. ಮದ್ಯಪಾನ.

ವರ್ಣನೀಯಾಂಶಗಳು:—

ಮದಿರಾಪಾನವಿಕಾರಮಂ ನವವಯಸ್ಸಂಪತ್ತಿಯಂ ಬಂದು ನೋ।
ಡದವೊಲ್ ನೋಡುವ ನಲ್ಲನಿರ್ದಿರವನತ್ಯುತ್ಸಾಹಮಂ ಮಾಡೆ ಚಿ॥
ತ್ತದೊಳಾಗಲ್ ತನುಮಧ್ಯೆಗಾಯ್ತನಸುಮಾನತ್ಯಂ ಚತುರ್ಥಂಗಿಭೇ।
ದದ ಲೀಲಾನಯನಪ್ರಧಾನವಿಧಿಯಿಂ ಕಾದಂಬರೀಗೋಷ್ಠಿಯೊಳ್ ॥ 887 ॥

ಇರೆ ನವಪದ್ಮರಾಗಚಷಕಂ ನಿಜಹಸ್ತತಳಾಗ್ರದೊಳ್ ಮಸೋ ।
ಹರೆ ತಳಿರ್ದೊಂಗಲಂ ತಳೆದ ಕೋಮಲವಲ್ಲರಿಯಂತೆ ರಕ್ತಪಂ ॥
ಕರುಹಮನಾಂತ ಪಂಕಜಿನಿಯಂತೆ ಸಮೋದಿತಚಂದ್ರಬಿಂಬಮಂ ।
ಧರಿಯಿಸಿದಿಂದ್ರದಿಗ್ವನಿತೆಯಂತಿಸೆದಳ್ ಮಧುಪಾನಗೋಷ್ಠಿಯೊಳ್ ॥ 888 ॥

ಅಲರ್ಗಣ್ ಕೆಂಪಡರಲ್ಕೆ ಪೊಂಗಿದಧರಂ ಬೆಳ್ಪೇಱೆ ರೋಮೋದ್ಗಮಂ ।
ತಳಿರ್ದೋಜಲ್ ಬಿಮರುಣ್ಮೆ ಲಜ್ಜೆ ತೊಲಗಲ್ ನಿತ್ರಾಣವಾಗಲ್ ಮದಂ ॥
ಬಲಯಲ್ಕೆ ಕಣ್ ಮುಗಿಯುತ್ತೆ ಮೂರ್ಛೆ ಮಿಗೆ ತೋಜಿಲ್ಲಂದು ಚೆಲ್ವಾದುದ ।
ಗ್ಗಳಮೆಂಬಂತಿರಲಿನ್ನದೇವೊಗಟಿಸ್ಸೋ ಕಾದಂಬರೀಸಂಗಮಂ ॥ 889 ॥

## XIV. ಸುರತಕ್ರೀಡೆ.

ವರ್ಣನೀಯಾಂಶಗಳು :—

ಪರಿರಂಭಂ ಚುಂಬನಂ ನೀತ್ಕೃತಗಳರುತಿ ದಂತಚ್ಛದಂ ರೇಖೆವೊಯ್ಲ್ ।
ಕರಣಂಗಳ್ ಸಲ್ಲುಟಂ ನಚ್ಚಿನ ಮುಖರತೆ ಸುಯತ್ ಕಂಪನಸ್ವೇದಮುಂಗಾಂ ॥
ತರಪೂರಂ ರೋಮಹರ್ಷಂ ನಯನಮುಕುಳನಂ ಮುಂಚಚಂಚತ್ಸಕುಂತಿ ।
ಸ್ಮರಮೊಪ್ಪಲ್ಕೊಪ್ಪುವನ್ನಂ ಮೆಜ್ಗೆ ಕವಿತೆಯೊಳ್ ನೋಡೆ ಸಂಭೋಗವರ್ಣಂ
॥ 890 ॥

ಬಗೆಯೊಳ್ ಪೊಣ್ಮುವಲಂಪು ಕಾತರಿಕೆಯುಂ ತಂದೀಯೆ ಮೆಯ್ಮೈಯ್ಗೆ ಸಂ ।
ದುಗಳೀನರ್ಪೊಡಮಿಲ್ಲದಂತೆ ಮಿಗಿಲುಂ ತಳ್ತಪ್ಪಿ ಬಾಯ್ಗೂಟದೊಳ್ ॥
ಮಿಗೆ ಪೀರ್ವಂತು ಮನೋನುರಾಗರಸಮಂ ಮೆಯ್ಮರ್ಚಿ ಕಾಡಲ್ಕೆ ಕೈ ।
ಮಿಗುವನ್ನಂ ನೆರೆದರ್ ಮನಃಪ್ರಿಯತಮರ್ ನಾನಾಕಲಾಪ್ರೌಢಿಯಿಂ ॥ 891 ॥

ಸ್ತನಶೈಲೋದ್ಭೂತಗಂಗಾನದಿಯೆನಿಸುವ ಹಾರಾಳಿ ಕಾಳಿಂದಿಯಾದ ।
ತ್ತನೆ ನೈಲ್ಯಂಚಿತ್ತ ರೋಮಾವಳಿಯುಭಯನದೀಸಂಗದಿಂ ಪಾಪವಿಚ್ಛೇ ॥
ದನರೂಪಂಚಿತ್ತ ದೋಷಾಕರನಿದಱೊಳಿ ತಾಂ ಮಜ್ಜನಂಗೆಯ್ದನೆಂದೆಂ ।
ಬಿನೆಗಂ ಚೆಲ್ವಾಯ್ತು ಕಾಂತಾಘನಕುಚಯುಗಳೋನ್ನಧ್ಯಸ್ತ ನಖಾಂಕಂ ॥892॥

## XV. ವಿಪ್ರಲಂಭ.

ವರ್ಣನೀಯಾಂಶಗಳು :—

ಪುರದಿಂ ಮೌನದಿನನ್ಯದೇಶಗಮನವ್ಯಾಸಂಗದಿಂ ಸುವ್ರತಾಂ ।
ತರದಿಂ ಕೂಡಿದ ವಲ್ಲಭರ್ಗೆ ವಿರಹಂ ಪೂರ್ವಾನುರಕ್ತರ್ಗೆ ತಾಂ ॥
ವಿರಹಂ ಸಂದಿಸಿ ಪಾಱಿಯಿಂದೆ ಪಿರಿದುಂ ಬರ್ಕುಂ ದಶಾವಸ್ಥೆಗಳ್ ।
ಹರಿಣಾಂಕಾದಿಗಳಂಜಿಕುಂ ಸರಸಸೇವ್ಯಂ ವಿಪ್ರಲಂಭಸ್ಥಳಂ ॥ 893 ॥

ಇನಿಯಂ ಪ್ರಾಣಮಗಲ್ದು ಪೋಪ ತೆಱದಿಂದೇನಿಂದಗಲ್ದಿರ್ದನಾ।
ತನ ಪೋಗಿಂಗೆನಗಕ್ಕ ನೋವಿನಿಸುಮಿಲ್ಲೀಕೆಂದೊಡೊಂದುಂಟು ನ॥
ಲ್ಲನ ಚಿತ್ತಂ ಪೆಱಪಿಂಗೆ ಪಿಂಗದೆ ತಗುಳ್ವೋರಂತೆ ನಿಷ್ಕಾರಣಂ।
ನೆನೆವೀ ಚಿತ್ತದ ಮಾಯ್ದು ನಾಣಿಲಿತನಕ್ಕಾಂ ನೋಂತೆನಬ್ಜಾನನೇ ॥ 894 ॥

ಮಲ್ಲಿಗೆಯಲ್ಲಿ ಪೂತ ಲತೆಯಲ್ಲಿ ಮುಗಿಲ್ಗಡವಲ್ಲಿ ಮಾಲತೀ।
ವಲ್ಲರಿಯಲ್ಲಿ ಸೋಗೆನವಿಲಲ್ಲಿ ಸುಗಂಧಸಮೀರನಲ್ಲಿ ಮಾ॥
ವಲ್ಲಿ ಮದಾಳಿಯಲ್ಲಿ ಗಿಳಿಯಲ್ಲಿ ಪಿಕಾವಳಿಯೆಲ್ಲವಲ್ಲಿ ಕಾ।
ರಲ್ಲಿ ವಸಂತನಲ್ಲಿಯೆನಿಸೆ ಕೊಲ್ಲದೆ ಕಾಮಿಯನಾವನಂ ವನಂ ॥ 895 ॥

---

## ಚೇರೆಯ ಅಲ್ಲಾಳ ಬುಧ, ದಾಮೋದರ. 1249.

ಇವರು ಚಿಕ್ಕಮಗಳೂರು 20 ನೆಯ ಶಾಸನವನ್ನು ಬರೆದುದಾಗಿ ಆ ಶಾಸನದ ಕೊನೆಯಲ್ಲಿರುವ

ಕವಿ ಕಬ್ಬದ ದಾಮೋದರ।.... ಚಕ್ರೇಶಚೇರೆಯಲ್ಲಾಳಬುಧಂ।
ಸವಿನಯದೆ ಪೇೞ್ದಿರೆನೆ ಪಲ್ಬಿ। ವವನೆಂಬವನಾವ... ಕವಿಗಳ ಕೃತಿಯಂ॥

ಎಂಬ ಪದ್ಯದಿಂದ ತಿಳಿಯುತ್ತದೆ.

ಈ ಶಾಸನವು 1249 ರಲ್ಲಿ ಬರೆದುದು. ಇದರಲ್ಲಿ ಹೊಯ್ಸಳವೀರಸೋಮೇಶ್ವರನು ಆಳುತ್ತಿದ್ದಾಗ ಬಿಟ್ಟರಸದಂಡನಾಯಕನು ಅವ್ಮಳೆಯ ದೇವಸ್ಥಾನಗಳಿಗೆ ದತ್ತಿಯನ್ನು ಬಿಟ್ಟಂತೆ ಹೇಳಿದೆ. ಇದರಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

### ವೀರಸೋಮೇಶ್ವರ.

ನೀರದೊಳಿಂದ್ರಸೂನುಗೆಣೆ ಸಂಗಡಮೀವೆಡೆಯೊಳ್ ದಿನೇಶಜಂ।
ಗೋರಗೆ ವಾರಿನಾಥನೊಳುದಾರಗಭೀರತೆಗುನ್ನತಿಕ್ಕೆಯೊಳ್॥
ಮೇರುಗೆ ಪಾಟಿಯೆಂದೊಡವನೀಶರದಾರ್ ದೊರೆ ಚೋಳರಾಜನಿ।
ಸ್ತಾರಕಸೋಮಭೂಮಿಪನೊಳಪ್ರತಿಮಪ್ರಬಳಪ್ರತಾಪನೊಳ್ ॥ 896 ॥

### ಬಿಟ್ಟರಸನ ತಂದೆ ಕೇಶಿರಾಜ.

ಮುನಿದನೆ ಮೂಜುರಾಯರಿದಿರಾಂತೊಡೆ ಗೆಲ್ದಪನೀವೆನೆಂದು ಪೂ।
ಣ್ದನೆ ಜಗತೀತಳಂ ನೆಜಿಯೆ ಬೀಡಿದೊಡಿತ್ತಪನೊಲ್ದುಕಾವೆನೆಂ॥
ದನೆ ಜವನಟ್ಟಿಕೊಂದಪೆನೆನುತ್ತಿರೆ ಕಾದಪನೆಂದೊಡಿನ್ನದಾರ್।
ತನಗೆಣೆ ವೈರಿವಾರಣವಿದಾರಣಕೇಸರಿಕೇಶಿರಾಜನೊಳ್ ॥ 897 ॥

---

## ಜಯವರ್ಮ, ನಯವರ್ಮ. ಸು. 1250.

**ಕುಮುದೇಂದು** (ಸು. 1275) ತನ್ನ ರಾಮಾಯಣದಲ್ಲಿ ಹಿಂದಣ ಕನ್ನಡ ಕವಿಗಳನ್ನು ಸ್ತುತಿಸುವಾಗ ಈ ಇಬ್ಬರು ಕವಿಗಳ ಹೆಸರನ್ನೂ "ಅನುನಯದಿಂ ಗುಣವರ್ಮನ ಜಯವ। ರ್ಮನ ಗಜಗನ ಗುಣನಂದಿಯ ನಯವ। ರ್ಮನ ಹೊನ್ನನ" ಎಂಬ ಪದ್ಯಭಾಗದಲ್ಲಿ ಹೇಳಿದ್ದಾನೆ. ಇವರು ಆವ ಗ್ರಂಥಗಳನ್ನು ಬರೆದಿದ್ದಾರೆಯೋ ತಿಳಿಯದು.

---

## ಹರಭಕ್ತ. ಸು. 1250.

ಈತನು ಅನೇಕಂಜನೂರಲ್ಲಿ ಆಂಡಿಯಾಗಿದ್ದನೆಂದೂ ನೇದಭಾಷ್ಯವನ್ನು ಬರೆದನೆಂದೂ ಚೆನ್ನಬಸವಪುರಾಣದ ಈ ಪದ್ಯದಿಂದ ತಿಳಿಯುತ್ತದೆ:—

[1] ಹರಭಕ್ತನೆಂಬನೇಕಂಜನೂರಾಂಡಿಯಾ ।
ಪರಮವೇದಂಗಳಿಗೆ ಭಾಷ್ಯಮಂ ಮಾಡಿ ತಾ ।
ನಿರುತಲ್ಲಿ ಸರಸಿಯೊಳಗಳಿಯನಂ ಪುಗಿಸಿ ಮಣಿಕರ್ಣಿಕೆಯೊಳೊಡದೆಬ್ಬಿಸಿ ॥
ಹರುಷದಿಂ ರಂಗನಾಥನ ಕೈಯ ಬಾಗಿಲಂ ।
ತೆಱಸಿ ಮುಮ್ಮೆಯ ತೋಱಿ ಶಿವನ ವರದಿಂ ತನ್ನ ।
ಪುರದುಭಯಕೇರಿಯೊಳಗಿರ್ದರಂ ಕೈಲಾಸಕೊಯ್ದನತಸಂಭ್ರಮದೊಳು ॥

ಇವನ ಭಾಷ್ಯವು ಬಹುಶಃ ಕನ್ನಡದಲ್ಲಿ ಇರಬಹುದೆಂದು ತೋರುತ್ತದೆ. ಚೆನ್ನಬಸವಪುರಾಣದಲ್ಲಿ ಪಾಲ್ಕುರಿಕೆ ಸೋಮನಾಥನ[2] (ಸು. 1195) ಚರಿತಕ್ಕೂ ಪ್ರತಾಪರುದ್ರನ ಕೈಯಕೆಳಗೆ ದಂಡನಾಯಕನಾಗಿದ್ದ ಕಂಪಲನ[2] (ಸು. 1300) ಚರಿತಕ್ಕೂ ನಡುವೆ ಹರಭಕ್ತನ ಚರಿತವು ಬಂದಿರುವುದರಿಂದ ಈತನು ಸುಮಾರು 1250 ರಲ್ಲಿ ಇದ್ದಿರಬಹುದು.

---

## ಮಹಾಬಲಕವಿ. 1254.

ಈತನು ನೇಮಿನಾಥಪುರಾಣವನ್ನು ಬರೆದಿದ್ದಾನೆ. ಇವನು ಜೈನಕವಿ; ಭಾರದ್ವಾಜಗೋತ್ರದವನು; ಇವನ ತಂದೆ ರಾಯಿದೇವ; ತಾಯಿ ರಾಜಿಯಕ್ಕ; ಗುರು ಮೇಘಚಂದ್ರ. ಆಶ್ವಾಸಾಂತ್ಯಗದ್ಯಗಳಲ್ಲಿ "ಮಾಧವಚಂದ್ರತ್ರೈವಿದ್ಯಚಕ್ರವರ್ತಿ ಶ್ರೀಪಾದಪ್ರಸಾದಾಸಾದಿತ ಸಕಲಕಲಾಕಲಾಪ" ಎಂದು ಹೇಳಿಕೊಂಡಿರುವುದರಿಂದ ಮಾಧವಚಂದ್ರನು ಈತನ ವಿದ್ಯಾಗುರುವಾಗಿರಬಹುದು.

1. ಕಾಂಡ 5, ಸಂಧಿ 9, ಪದ್ಯ 63. 2. ಕಾಂಡ 5, ಸಂಧಿ 9, ಪದ್ಯ 5, 91, 77.

ಈ ಗ್ರಂಥವನ್ನು ಶಕ 1176 ಎಂದರೆ, 1254 ರಲ್ಲಿ, ಬರೆದಂತೆ ಈ ಪದ್ಯ ಭಾಗಗಳಲ್ಲಿ ಹೇಳುತ್ತಾನೆ:—

ಷಡಧಿಕಸಪ್ತತಿವತ್ಸರ । ದೊಡಗೂಡಿದ ಶತಸಮಧಿಕವರ್ಷಸಹಸ್ರಂ ।
ಕಡೆಯ ಶಕನೃಪನ ಕಾಲಂ । * * ॥
* * * * ನೆಗಟ್ಟ್ವುದು ಲೋಕೋ ।
ತ್ತಮವಿಖ್ಯಾತಕಾವ್ಯಂ ಭಾವುಕ । ಸಮುದಯಭಾವ್ಯಂ ಜಗಜ್ಜನಶ್ರುತಿಸೇವ್ಯಂ ॥

ಬಂಕನಾಯಕ, ಚೌಡಿಯಕ್ಕ ಇವರಿಗೆ ಕಾಳಯನಾಯಕ, ಕೇತಯನಾಯಕ, ನೇಮ ಎಂಬ ಮೂವರು ಮಕ್ಕಳಿದ್ದರು. ಈ ಕೇತಯನಾಯಕನಿಗೆ ಕ್ಷೇಮಂಕರ ಎಂಬ ಹೆಸರೂ ಉಂಟು. ಈತನು ಕವಿಯಿಂದ ಈ ಗ್ರಂಥವನ್ನು ಮಾಡಿಸಿದನು. ಇವನು ವೀರನಾಗಿಯೂ ಸ್ವತಃ ಕವಿಯಾಗಿಯೂ ಇದ್ದಂತೆ ಈ ಪದ್ಯಗಳಿಂದ ತಿಳಿಯಬರುತ್ತದೆ:—

ನೀತಿವಿದಂ ನಿಯೋಗಕುಶಲಂ ನಿರವದ್ಯಗುಣಾಶ್ರಯಂ ರಣೋ ।
ರ್ವೀತಳರುದ್ರನದ್ರವಿಣಬಾಂಧವ * * * * ॥
ಶ್ರೀತರುಣೀಲಲಾಟದ ಲಲಾಮವಿಲಾಸಮನಾಂತು ಧಾತ್ರಿಯೊಳ್ ।
ಕೇತಯನಾಯಕಂ ಜನನಿರೂಪಿತನಿರ್ಮಳಧರ್ಮನಾಯಕಂ ॥

ಧರೆಯಂ ಪೂರಿಸೆ ತನ್ನ ನಿರ್ಮಲಗುಣಂ ವಿದ್ವಜ್ಜನಕ್ಕಾದಮ ।
ಚ್ಚರಿಯಂ ಪುಟ್ಟಿಸೆ ತನ್ನ ಕಾವ್ಯಕಥನಾಲಾಪಂ ಮನೋಜಾತನೊಳ್ ॥
ಸಿರುತಂ ತಾನೆ ವಿಶೇಷಮೆಂದೆನಿಸೆ ತನ್ನಾಕಾರಮೌದಾರ್ಯಮುಂ ।
ಸುರಭೂಜಪ್ರಕರಕ್ಕೆ . . ಸೆಯಲಾತಂ ಖ್ಯಾತಿಯಂ ತಾಳ್ದಿದಂ ॥

ಈ ಕೇತಯನ ತಂಡತಿ 'ಕರಣದೀಪ' ಶ್ರೀಪತಿಯ ಮಗಳು ಮರುದೇವಿ. ಇವರಿಗೆ ಚೌಡಲೆ ಎಂಬ ಒಬ್ಬ ಮಗಳಿದ್ದಳು. ಇವಳನ್ನು ಕಲದೇವನೆಂಬವನು ಮದುವೆಯಾದನು. ಕೇತಯನಾಯಕನು ಕೋಟಿಬಾಗಯ ಜನಾಲಯದಲ್ಲಿ ವ್ರತಾಚರಣವನ್ನು ಮಾಡಿದನು. ಶ್ರೀಕರಣದ ಶ್ರೀಪತಿಯ ಅಥವಾ ಸಿರಿಗನ ಮಗ ಲಕ್ಷ್ಮ ಎಂಬವನಿಗೆ ಈ ಮಹಾಬಲಕವಿ ಗುರುನಾಗಿದ್ದನು. ಇವನು 'ಸಚಿವ' ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿರುವುದರಿಂದ ಬಹುಶಃ ಈ ಕೇತಯನಾಯಕನಲ್ಲಿಯೇ ಮಂತ್ರಿಯಾಗಿದ್ದಿರಬಹುದು. ತನ್ನ ಗ್ರಂಥವನ್ನು ಶ್ರುತಾಚಾರ್ಯೇ ಮೊದಲಾದವರು ಸಭೆಯಲ್ಲಿದ್ದು ಕೇಳುವಂತೆ ಹೇಳಿದಹಾಗೂ ತನ್ನ ಶಿಷ್ಯ ಲಕ್ಷ್ಮನಿಂದ ಬರಸಿದಹಾಗೂ ಹೇಳುತ್ತಾನೆ.

ಈತನಿಗೆ ಸಹಜಕವಿಮನೋಗೇಹವಾಣಿಕ್ಯದೀಪ, ವಿಶ್ವವಿದ್ಯಾವಿರಿಂಚ ಎಂಬ ಬಿರುದುಗಳು ಇದ್ದಂತೆ ತೋರುತ್ತದೆ.

ಇವನು ತನ್ನ ಹಿಂದೆ ಇದ್ದ ಕವಿಗಳಲ್ಲಿ ಆರ ಹೆಸರನ್ನೂ ಹೇಳಿಲ್ಲ. ತನ್ನ ಪಾಂಡಿತ್ಯವನ್ನೂ ಕವಿತಾಚಾತುರ್ಯವನ್ನೂ ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ:—

ಲೌಕಿಕಪಾರಮಾರ್ಥಿಕವಿಚಾರವಿಚಕ್ಷಣನಿಂದ್ರಚಂದ್ರನೈ।
ಯಾಕರಣಪ್ರಭಾವವಚನಾಗಮವಾಕ್ಪತಿ ತರ್ಕಷಟ್ಕಶಿ॥
ಕ್ಷಾಕರಣೀಯಕರ್ತೃ ಬಹುಭೇದದಲಂಕರಣಾಭಿಧಾನಮಾ।
ಲಾಕುಶಲಂ ಮಹಾಬಳಕವೀಶ್ವರನುತ್ಸವದುಂದುಭಿಸ್ವರಂ॥

ಕುಸಿವನಮರ್ಚ್ಯವುದ್ಧರಸಭಾವವಿದಗ್ಧತೆಯೇಟ್ಗೆ. ದವಿ।
ನ್ಯಸನವಿಳಾಸಮನ್ವಯಿಸುವಚ್ಚರಿಯಾರಮನಕ್ಕಮಟ್ಟಯಂ॥
ಪೊಸೆಯಿಪ ದೇಸೆ.. ಯನುರೂಪದಳಂಕೃತಿ ಕಾವ್ಯದಲ್ಲಿ ರಂ।
ಜಿಸೆ ಕೃತಿವೇಟ್ರು ತತ್ಕೃತಿಚಮತ್ಕೃತಿಯಂ ಪಡೆವಂ ಮಹಾಬಳಂ॥

ಎಳವೆಂಗಳಪಾಂಗಸ್ಪಭೆ। ಮಳಯಸಮೀರಣನ ಸೋಂಕು ಪೊಸಸುಗ್ಗಿಯ ತಿಂ।
ಗಳ ಪೊಳಪು ಮಹಾಬಳಕೃತಿ। ಯೊಳಗಾಗಿಸದಿರವು ಜಗದ ಜಾಣರ ಮನಮುಂ॥

ಇವನ ಗ್ರಂಥ

## ನೇಮಿನಾಥಪುರಾಣ.

ಇದು 22 ನೆಯ ತೀರ್ಥಂಕರನ ಚರಿತವು; ಚಂಪೂಗ್ರಂಥ: 16 ಆಶ್ವಾಸಗಳಾಗಿ ಭಾಗಿಸಲ್ಪಟ್ಟಿದೆ. ಇದರಲ್ಲಿ ಹರಿವಂಶ ಕುರುವಂಶಗಳ ಕಥೆ ಹೇಳಿದೆ.

ಗ್ರಂಥಾವತಾರದಲ್ಲಿ ನೇಮಿನಾಥಸ್ತುತಿಯಿದೆ. ಬಳಿಕ ಕವಿ ಸಿದ್ಧಾದಿಗಳನ್ನೂ ಸರಸ್ವತಿಯನ್ನೂ ಸ್ಮರಿಸಿ ತರುವಾಯ ಭೂತಬಲಿಯಿಂದ ಪುಷ್ಪಸೇನನವರೆಗೆ ಗುರುಗಳನ್ನು [1] ಕ್ರಮವಾಗಿ ಹೊಗಳಿದ್ದಾನೆ. ಆನಂತರ ಕೇತಯನಾಯಕನ ವಿಷಯವನ್ನೂ ಸ್ವವಿಷಯವನ್ನೂ ಹೇಳಿ ಗ್ರಂಥವನ್ನು ಆರಂಭಿಸಿದ್ದಾನೆ.

ಆಶ್ವಾಸಗಳ ಕೊನೆಯಲ್ಲಿ ಈ ಗದ್ಯವಿದೆ :—

ಇದು ಪರಮಪ್ರವಚನಪಯಃಪಾರಾವಾರಶರತ್ಸಾಂದ್ರಚಂದ್ರ ತ್ರೈಮನ್ಮಾಧವಚಂದ್ರ ತ್ರೈವಿದ್ಯಚಕ್ರವರ್ತಿ ಶ್ರೀಪಾದಪ್ರಸಾದಾಸಾದಿತಸಕಲಕಲಾಕಲಾಪ ಸಹಜಕವಿಮನೋಗೇಹ

---

1. ಭೂತಬಲಿ, ಪುಷ್ಪದಂತ, ಜಿನಸೇನ, ವೀರಸೇನ, ಸಮಂತಭದ್ರ, ಕವಿಪರಮೇಷ್ಠಿ, ಪೂಜ್ಯಪಾದ, ಗೃಧ್ರಪಿಂಛ, ಜಟಾಸಿಂಹನಂದಿ, ಅಕಳಂಕ, ಶುಭಚಂದ್ರ, ಕುಮುದೇಂದುಮುನಿ, ಮತ್ತಗಜಂ ಕರದಿಂ ದಘ್ಟುವೆತ್ತಿದ ವಿನಯಚಂದ್ರ, ಪೂಧವಚಂದ್ರ, ರಾಜಗುರು, ಜಟ್ಟರಾಜ್ಯ ವಿಸ್ತಾರಕಮುನಿಚಂದ್ರ, ಬಾಳಚಂದ್ರತ್ರೈವಿದ್ಯ.

ಗದ್ಯೋಪನ್ಯಾಸಮುದ್ಭಾಷಿತಪದಗತವರ್ಗಕ್ಷರತ್ಯಾಗವಿಜಿಷ್ಣು।
ಪದ್ಯೋಪನ್ಯಾಸಮಂತಾಸ್ಯದಿನೊಗೆಯೆ ಸಭಾಮಧ್ಯದೊಳ್ ಭೇರಿಯಂ ವಾ॥
ದೋದೈಶ್ಯೇಗಂಗೆಟ್ಟ ವಾದಿಪ್ರಕರಮೆಜಗೆ ವಾದೀಭವಜ್ರಾಂಕುಶಂ ತ್ರೈ।
ವಿದ್ಯೇಶಂ ಭಾವಸೇನವ್ರತಿ ನೆಗಬ್ದನಿಳಾಚಕ್ರದೊಳ್ ಚಕ್ರಪೂಜ್ಯಂ॥

ಎಂದು ಸ್ತುತನಾದ ಭಾವಸೇನ, ಜಗತೀಪ್ರಸಿದ್ಧಕಾರ್ತಾಂತಿಕವಾದ ಅಭಯವೆಂದು, ಮಾಘಣಂದಿಯತ್ರ, ಪುಷ್ಪಸೇನ.

ಮಾಣಿಕ್ಯದೀಪವಿರಚಿತವುಂ ಸ್ಯಾದ್ವಾದವಿದ್ಯಾಪ್ರಭಾವವಿಧಾಯಕ ಕ್ಷೇಮಂಕರನಾಯಕ ಕಾರಿತಮುಮಪ್ಪ ಶ್ರೀಮನ್ನೇಮಿನಾಥಪುರಾಣದೊಳ್.

**ಈತನ ಬಂಧವು ಪ್ರೌಢವಾಗಿದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—**

### ಮಳೆಗಾಲ.

ಸ್ಫುರಿಯಿಪ ಶಸ್ತ್ರಸಂಹತಿಗಳಂತಿರೆ ಮಿಂಚುವ ಮಿಂಚು ತತ್ಪಯೋ ।
ಧರಘಟೆಯೊಳ್ ಪತಾಕೆಗಳ ಪಾಂಗಿನೊಳಿಂದ್ರಶರಾಸನಂ ಮನೋ ॥
ಹರತೆಯನೀಯೆ ಶಸ್ತ್ರಹತನಾದ ನಿದಾಘನ ಮೆಯ್ಯ ರಕ್ತಶೀ ।
ಕರದಮರೇಂದ್ರಗೋಪತತಿ ಕಣ್ಗೆಸೆದಿರ್ದುವು ಸರ್ವಧಾತ್ರಿಯೊಳ್ ॥ 898 ॥

ಬಿಸಿಲೆಸಕಂ ಮೊಗಂದಿರಿಪೆ ಮಾಳದ ಚೂಳಿಕೆಗಳ್ ಬಿಗುರ್ತು ಪು ।
ಲ್ಲಸುರ ಪಸುರ್ಗೆ ಪಕ್ಕುಗುಡೆ ಕಾನನಮೆಯ್ದೆ ಕದಂಬಭೂರುಹ ॥
ಪ್ರಸವಪರಾಗದಿಂ ಪುದಿಯೆ ಮೊಲ್ಲೆಯ ಪೂಗುಡಿಗಳ್ ಮುಗುಳ್ತು ವಿ ।
ಳ್ಕೆಸಿ ಮಿಳಿರಲ್ಕೆ ಬೀಸಿದುದು ತಣ್ಣನೆ ಪಣ್ಣನೆ ಪಶ್ಚಿಮಾನಿಳಂ ॥ 899 ॥

### ವಸಂತ.

ತಳಿರ ಪಸುರಲರ ಬಿಳ್ಪಳಿ । ಗಳ ಕರ್ಪಂಕುರದ ಕೆಂಪು ಪಣ್ಮೊಂಬಣ್ಣಂ ।
ಗಳಿನೆಸೆವ ನಂದನಾಗ್ರಿಮ । ಮಿಟ್ಟಿಕೆಯ್ವುತ್ತಂಬರಂ ವಿಚಿತ್ರಾಂಬರಮಂ ॥ 900 ॥

### ಮಂದಮಾರುತ.

ವನಜವನಶೀಕರಾರ್ದ್ರಂ । ವನತರುಸುಮನಃಪರಾಗಭರಮಂಧರನೊ ।
ಯ್ಯನೆ ಸುಲ್ದುದು ತಜ್ಜನಪದ । ವನೇಭಮದಗಂಧಬಂಧುರಂ ಗಂಧವಹಂ ॥ 901 ॥

### ಬೆಳುದಿಂಗಳು.

ಪುಗೆ ಮೆಯ್ನಾನದ ಗಂಗಾ । ಪಗೆ ಕುಡಿದೊಡೆ ಪೊಟ್ಟೆ ತೀವದಮೃತಂ ಹರಿಶ ।
ಯ್ಯಗೆ ಬಾರದ ಪಾಲ್ಗಡಲೆನೆ । ಜಗಮಂ ಬಳ್ತಳನೆ ಬಳಸಿದುದು ಬೆಳ್ದಿಂಗಳ್ ॥ 902 ॥

ಚಳರುಚಿಯ ತಿರುಳನಮರ್ದಿಂ । ತೊಳೆದೊರೆದು ಚರಾಚರಕ್ಕೆ ಸಜ್ಜುಗೊಟ್ಟು ದಿಟಂ ।
ಜಳಜಭವಂ ಮಿಂಚಿಟ್ಟವೊ । ಲಿಳೆಯಂ ಪರ್ವಿದುದು ಚಂದ್ರಿಕಾವಿಸ್ತಾರಂ ॥ 903 ॥

### ಕುಂಟಣಿ.

ಬಜಿಡಂ ಪಯನಾಗಿಪ್ಪರ್ । ಕೊಜಿಡಂ ಕೊನರಿಪ್ಪರೀಮುದುಂಕಿಯರಿವರಾ ।
ದರಣಂ ಕಾಮುಕಪಿತೃಧನ । ಹರಣಂ ಭಿಕ್ಷಾವಿಧಾನಜೀವನಕರಣಂ ॥ 904 ॥

## ಗಜಯುದ್ಧ.

ನೂಂಕುವಡಪ್ಪು ಪೊಯ್ವುದಟು ಬಂಚಿಪ ಬಿನ್ನಣವೋರೆವೋಪಿನಂ ।
ಕೂಂಕುವ ಸತ್ತ್ವಮೆರ್ವುವಳವಟ್ಟುವ ಮುಟ್ಟುವ ತಕ್ಕು ಕೆಯ್ಗೆಕೆ ॥
ಯ್ಯಂ ಕುಡುವಾಪ್ಪು ಕೋಡ ಕೊನೆಯಿಂದಿಱಿದೆತ್ತುವ ಪಾಂಗು ಮೆಯ್ಗೆ ಮೆ ।
ಯ್ಯಾಂಕೆಯ ಮೆಯ್ಸಶಂಪೆಯನು (?) ನಿತ್ತುವು ಸಾಮಜ ಸಂಗರೋರ್ವಿಯೊಳ್
॥ 905 ॥

## ಶಿಶುಪಾಲಾದಿಕೃತ ಕೃಷ್ಣಧಿಕ್ಕಾರ.

ಬಡಕಲ್ಪ್ಪಿಯನೊಂದಂ ಪೆ । ರ್ಮಡುವಿನೊಳಿರ್ಪ್ಪೊಳ್ಳೆಯೊಂದನೊಡೆಯರ ದೆಸೆಯಿಂ ।
ನಡೆಗೆಟ್ಟೊಹಣಮೊಂದಂ । ಮುಡಿಪಿದ ಸಾಹಸಮದಿಲ್ಲಿ ಸಲ್ಲದು ಮರುಳೇ ॥906॥

ಜಳಧಿಯೊಳಿರ್ದೊಡಿಂಟಿ ಕುಳಶೈಲದೊಳಿರ್ದೊಡೆ ನುರ್ಗುಗುಟ್ಟಿ ಭೂ ।
ತಳದ ತಳಕ್ಕೆ ಪೊಕ್ಕೊಡದನೆತ್ತಿ ವಿಯದ್ಗತನಾದನಪ್ಪೊದು ॥
ಚ್ಚಳಿಸಿ ವಿರೋಧಿಯುಷ್ಣರುಧಿರಾಂಬುವಿನಿಂ ಸುತೆ ನಿನ್ನ ಕೇಶಮಂ ।
ತೊಳೆಯದೊಡೆನ್ನ ಚಕ್ರವಿದು ಚಕ್ರವೆ ಕೋವರ ಚಕ್ರವಲ್ಲವೇ ॥ 907 ॥

## ಹಲಾಯುಧಪ್ರಲಾಪ.

ಕಡುಗಿಡದಪ್ಪ ಕಾನನದೊಳೆನ್ನನಗಲ್ದೆಲೆ ತಮ್ಮ ನೀನಿದಾ ।
ವಡೆಗಡಿಯಿಟ್ಟಯಿಂತುಜನೆ ನಿನ್ನಸುವಂ ತೆಗೆದುಯ್ದುನಾವನೋ ॥
ನುಡಿಯುಯೆನುತ್ತುಮೆತ್ತಿ ನೊಸಲೊಳ್ ನೊಸಲಂ ಬಿಡೆ ತಾಟಿಸುತ್ತುಮೆ ।
ನ್ನೊಡೆಯನನೆಲ್ಲ ಕಾಣ್ಬೆನೆನುತುಂ ಕಡುದುಃಖದಿನಾಹಳಾಯುಧಂ ॥ 908 ॥

ಗಿರಿಯಂ ಕೆಲ್ಪ್ತೀಟಿಹೋರಾತ್ರದ ಕಡೆವರೆಗಂ ಕೆಯ್ಯೊಳಾಂತಿರ್ದ ದಾರ್ವಿಂ ।
ಕರಶಯ್ಯಾಶಾಙ್ಗಶಂಖಿಂಗಳನವಯವದಿಂದೇಜುವೇಜಪ್ಪ ಪೂರಿ ॥
ಪ್ಪುರುಶೌರ್ಯಾ ಮಲ್ಲರೆಲ್ಲಂ ಮುಸುಜಿ ಮುಳಿದು ಕಂಸಂಗೆ ಕೆಯ್ನೀಡಿ ತಿಜ್ರಂ ।
ತಿರುಪುತ್ತುಂ ಕೊಂದದೋಸ್ಸಾಹಸಿ ನಿನಗೆ ಪುಣುಂಬುರ್ಚಿ ಸಾವಂತುಟಾಯ್ತೀ
॥ 909 ॥

---

## ಕೇಶಿರಾಜ. ಸು. 1260.

ಇವನು ಶಬ್ದಮಣಿದರ್ಪಣವನ್ನು ಬರೆದಿದ್ದಾನೆ. ಈ ಗ್ರಂಥದ ಅಂತ್ಯದಲ್ಲಿರುವ—

ದೊರೆವಡೆದ ಚೋಳಪಾಲಕ । ಚರಿತಂ ಶ್ರೀಚಿತ್ರಮಾಲೆಯಂತೆ ಸುಭದ್ರಾ ।
ಹರಣಂ ಪ್ರಬೋಧಚಂದ್ರಂ । ಕಿರಾತಮಿವು ಕೇಶಿರಾಜವಿರಚಿತಕಂಗಳ್ ॥

ಎಂಬ ಪದ್ಯದಿಂದ ಇವನು ವ್ಯಾಕರಣವಲ್ಲದೆ ಬೇರೆ ಐದು ಗ್ರಂಥಗಳನ್ನು ಬರೆದಿರುವಂತೆ ತಿಳಿಯುತ್ತದೆ. ಈ ಗ್ರಂಥಗಳಾವುವೂ ನಮಗೆ ದೊರೆತಿಲ್ಲ.

ಈತನು ಜೈನಕವಿ. **ಸೂಕ್ತಿಸುಧಾರ್ಣವ**ವನ್ನು ಬರೆದ **ಮಲ್ಲಿಕಾರ್ಜುನ**ನ ಮಗನು; **ಹೊಯ್ಸಳನಾರಸಿಂಹನ**ಲ್ಲಿ (1141—1173) **ಕಟಕೋಪಾಧ್ಯಾಯ**ನಾಗಿದ್ದ **ಕವಿಸುಮನೋಬಾಣ**ನ ದೌಹಿತ್ರನು; **ಜನ್ನ**ನ ಸೋದರದಳಿಯನು. ಇವನ ತಂದೆ 1233 ರಿಂದ 1254 ರ ವರೆಗೆ ಆಳಿದ ಹೊಯ್ಸಳಸೋಮೇಶ್ವರನ ಕಾಲದಲ್ಲಿ ಇದ್ದುದರಿಂದ **ಕೇಶಿರಾಜ**ನು ಸುಮಾರು 1260 ರಲ್ಲಿ ಇದ್ದಿರಬಹುದು.

ತನ್ನ ಗ್ರಂಥಕ್ಕೆ ಈ ಕವಿಗಳ ಗ್ರಂಥಗಳು ಲಕ್ಷ್ಯವೆಂದು ಹೇಳಿದ್ದಾನೆ:—

ಗಜಗನ ಗುಣನಂದಿಯ ಮನ । ಸಿಜನಸಗನ ಚಂದ್ರಭಟ್ಟಗುಣವರ್ಮಶ್ರೀ ।
ವಿಜಯರ ಹೊನ್ನನ ಹಂಪನ । ಸುಜನೋತ್ತಂಸನ ಸುಮಾರ್ಗಮಿದಱೊಳೆ ಲಕ್ಷ್ಯಂ ॥

ಈ ಕವಿಗಳ ಗ್ರಂಥಗಳಿಂದಲ್ಲದೆ ರನ್ನ, ನಾಗಚಂದ್ರ, ನಾಗವರ್ಮ, ನೇಮಿಚಂದ್ರ, ಹಂಸರಾಜ, ಬ್ರಹ್ಮಶಿವ ಮೊದಲಾದವರ ಗ್ರಂಥಗಳಿಂದಲೂ ಉದಾಹೃತವಾದ ಪದ್ಯಗಳು ದೊರೆಯುತ್ತವೆ.

ಈತನನ್ನು **ಕವಿಮಲ್ಲ**ನು (ಸು. 1400) ತನ್ನ **ಮನ್ಮಥವಿಜಯ**ದಲ್ಲಿ—

ಸಿರುತಂ ಕರ್ಣಾಟಕದೊಳ್ । ಪರಿಕಿಸೆ ಶಬ್ದಜ್ಞನಾವನೊರ್ವನೆ ಲೋಕ ।
ಕ್ಕರಿದಲ್ತೆ ಭಾಪು ಕವಿಕುಂ । ಜರ ಕೇಶವರಾಜ ಗೋಚರಿಸು ಮನ್ಮನದೊಳ್ ॥

ಎಂದೂ, ಅಭಿನವಕೇಶಿರಾಜ ಎಂದು ಹೆಸರಿಟ್ಟುಕೊಂಡಿರುವ **ಈಶ್ವರಕವಿ** (ಸು. 1600) ತನ್ನ **ಕವಿಜಿಹ್ವಾಬಂಧನ**ದಲ್ಲಿ "ಲಕ್ಷಣಶಿಕ್ಷಾಚಾರ್ಯ ಸುಲಕ್ಷಣಿ ಕೇಶವ" ಎಂದೂ, ಇನ್ನು ಕೆಲವರು ಬೇರೆ ವಿಧವಾಗಿಯೂ ಸ್ತುತಿಸಿದ್ದಾರೆ.

ತನ್ನ ಪಾಂಡಿತ್ಯವನ್ನು

ನಡೆದುದೆ ಮಾರ್ಗಂ ಪದವಿಡ । ೞೊಡರಿಸಿದುದೆ ಭಂಗಿ ಕೇಶವಂಗಿದಿರುಂಟೇ ।
ತೊಡಗಿದ ಕೃತಿಗಳೊಳಾನೆಯು । ನಡು ಬಡವೇ ತಾನೆ ಲೋಕದೊಳ್ ಲಾಕ್ಷಣಿಕಂ ॥

ಎಂಬ ಪದ್ಯದಲ್ಲಿ ಹೇಳಿಕೊಂಡಿದ್ದಾನೆ.

ಇವನ ಗ್ರಂಥ

**ಶಬ್ದಮಣಿದರ್ಪಣ.**

ಇದು ಕರ್ಣಾಟಕ ವ್ಯಾಕರಣಗ್ರಂಥ. ಇದರಲ್ಲಿ ಸಂಧಿ, ನಾಮ, ಸಮಾಸ, ತದ್ಧಿತ, ಆಖ್ಯಾತ, ಧಾತು, ಅಪಭ್ರಂಶ, ಅವ್ಯಯ ಎಂಬ ಎಂಟು ಸಂಧಿಗಳಿವೆ. ಗ್ರಂಥದ ಕೊನೆಯಲ್ಲಿ "ಪ್ರಯೋಗಸಾರವೆಂಬ ಶಬ್ದಾರ್ಥನಿರ್ಣಯಂ" ಎಂಬ

ಹೆಸರಿನಿಂದ ಒಂಬತ್ತನೆಯ ಸಂಧಿಯೊಂದು ಸೇರಿದೆ. ಇದರಲ್ಲಿ ಪುರಾಣಕವೀಂದ್ರರು ಪ್ರಯೋಗಿಸಿರುವ ಗೂಢಪದಗಳ ಅರ್ಥವನ್ನು ಕೊಟ್ಟಿದ್ದಾನೆ. ಈ ಗ್ರಂಥದಲ್ಲಿ ಕವಿ ಸೂತ್ರಗಳನ್ನು ಕಂದರೂಪವಾಗಿ ಬರೆದು ಅವುಗಳಿಗೆ ತಾನೇ ವೃತ್ತಿಯನ್ನೂ ಬರೆದಿದ್ದಾನೆ. ಲಾಕ್ಷಣಿಕರು ಕರ್ಣಾಟಕ ಲಕ್ಷಣಶಬ್ದಶಾಸ್ತ್ರಮಂ ಪೇಳೆಂದು ಕೇಳಲು ಈ ಗ್ರಂಥವನ್ನು ಬರೆದುದಾಗಿ ಹೇಳುತ್ತಾನೆ. ಗ್ರಂಥದ ಉತ್ಕೃಷ್ಟತೆಯನ್ನು—

ಸರಿಗೀಕ್ಷಿಪ ರಸಚಿತ್ರಂ । ಸರಸತಿಗೆರಡನೆಯ ಬೀಣೆಯೆನೆ ಸೌಭಾಗ್ಯಂ ।
ಕರಮಾದುದೆಂದು ಬುಧರಾ । ದರಿಪರ್ ಮೆಚ್ಚಿಂದೆ ಶಬ್ದಮಣಿದರ್ಪಣಮಂ ॥

ಎಂಬ ಪದ್ಯದಲ್ಲಿ ಹೇಳಿದ್ದಾನೆ.

ಗ್ರಂಥಾವತಾರದಲ್ಲಿ ಸರಸ್ವತಿಯ ಸ್ತುತಿಯಿದೆ. ಸಂಧಿಗಳ ಕೊನೆಯಲ್ಲಿ–

ಇದು ಸಮಸ್ತಶಾಬ್ದಿಕಜನಮನೋಜನಿತ ಶಬ್ದಸಂದೇಹಶಲ್ಯ ಚಾರುಚುಂಬಕಾಯಮಾನಾನೂನ ಕರ್ಣಾಟಕಲಕ್ಷಣವಿಕ್ಪಾಚಾರ್ಯ ಸುಕವಿಕೇಶಿರಾಜ ವಿರಚಿತಮಪ್ಪ ಶಬ್ದಮಣಿದರ್ಪಣದೊಳ್

ಎಂಬ ಗದ್ಯವಿದೆ.

ಶಬ್ದದ ಉತ್ಪತ್ತಿಯನ್ನು ಈ ವಿಧವಾಗಿ ಹೇಳಿದ್ದಾನೆ:—

ಅನುಕೂಲಪವನನಿಂ ಜೀ । ವನಿಷ್ಟದಿಂ ನಾಭಿಮೂಲದೊಳ್ ಕಹಳೆಯ ಪಾಂ ।
ಗಿನವೊಲ್ ಶಬ್ದದ್ರವ್ಯಂ । ಜನಿಯಿಸುಗುಂ ಶ್ಲೇತಮದಱ ಕಾರ್ಯಂ ಶಬ್ದಂ ॥

ಕನ್ನಡಭಾಷೆಯ ಸ್ವರೂಪವನ್ನು ಈ ಪದ್ಯದಲ್ಲಿ ಸಂಕ್ಷೇಪವಾಗಿ ಹೇಳಿದ್ದಾನೆ:—

ಗಮಕಸಮಾಸದಿಂ ಜಟ್ಪಿಕುಳಕ್ಕಳದಿಂ ಶ್ರುತಿಸಹ್ಯಸಂಧಿಯಿಂ ।
ಸಮುಚಿತಮಾಗಿ ಬರ್ಪ ಸತಿಸಪ್ತಮಿಯಿಂ ಸಮಸಂಸ್ಕೃತೋಕ್ತಿಯಿಂ ॥
ವಮಹಪಭೇದದಿಂ ವಿರಹಿತಾವ್ಯಯಸಂಸ್ಕೃತಲಿಂಗದಿಂ ಪದೋ ।
ತ್ತಮಶಿಥಿಲತ್ವದಿಂ ಯತಿವಿಲಂಘನದಿಂದರಿದಲ್ತೆ ಕನ್ನಡಂ ॥

ವ್ಯಾಕರಣಜ್ಞಾನದಿಂದ ಉಂಟಾಗುವ ಫಲವನ್ನು—

ವ್ಯಾಕರಣದಿಂದೆ ಪದಮಾ । ವ್ಯಾಕರಣದ ಪದದಿನರ್ಥಮರ್ಥದೆ ತತ್ತ್ವ ।
ಲೋಕಂ ತತ್ತ್ವಲೋಕದಿ । ನಾಕಾಂಕ್ಷಿಪ ಮುಕ್ತಿಯಕ್ಕುಮದೆ ಬುಧರ್ಗೆ ಫಲಂ ॥

ಎಂಬ ಪದ್ಯದಲ್ಲಿ ಹೇಳಿದ್ದಾನೆ.

**ನೃಪತುಂಗನು** ಕವಿರಾಜಮಾರ್ಗದಲ್ಲಿ ಕನ್ನಡವ್ಯಾಕರಣಕ್ಕೆ ಸಂಬಂಧಿಸಿದ ಕೆಲಕೆಲವಂಶಗಳನ್ನು ಅಲ್ಲಲ್ಲಿ ಹೇಳಿದ್ದಾನೆ. ಆದರೂ ಕರ್ಣಾಟಕವ್ಯಾಕರಣವನ್ನು ಕ್ರಮವಾದ ಆನುಪೂರ್ವಿಯೊಡನೆ ಗ್ರಂಥರೂಪವಾಗಿ ಬರೆದವರಲ್ಲಿ **ನಾಗವರ್ಮ**ನೇ ಮೊದಲನೆಯವನು. ಆತನು ಈ ಶಾಸ್ತ್ರವನ್ನು **ಕಾ**ವ್ಯಾವಲೋಕನದ ಮೊದಲನೆಯ ಅಧ್ಯಾಯವಾದ ಶಬ್ದಸ್ಮೃತಿಯಲ್ಲಿ ಸಂಗ್ರಹವಾಗಿಯೂ ಭಾಷಾಭೂಷಣದಲ್ಲಿ ಅದಕ್ಕಿಂತ ಸ್ವಲ್ಪ ವಿಸ್ತಾರವಾಗಿಯೂ ಉಪಪಾದಿಸಿದ್ದಾನೆ. **ನಾಗವರ್ಮ**ನ ಶಬ್ದಸ್ಮೃತಿಯ ಆನುಪೂರ್ವಿಯನ್ನೇ ಅನುಸರಿಸಿದರೂ **ಕೇಶಿರಾಜ**ನು ಕೆಲವು ಹೊಸ ವಿಷಯಗಳನ್ನೂ ಸೇರಿಸಿ ವಿಸ್ತರಿಸಿ **ಶಬ್ದಮಣಿದರ್ಪಣ**ವೆಂಬ ಗ್ರಂಥವನ್ನು ಬರೆದಿದ್ದಾನೆ. **ನಾಗವರ್ಮ**ನ ಗ್ರಂಥದಲ್ಲಿ ಉದಾಹೃತವಾದ ಪದ್ಯಗಳೇ ಪ್ರಾಯಿಕವಾಗಿ ಇದರಲ್ಲಿಯೂ ಉದಾಹೃತವಾಗಿವೆ. ಕನ್ನಡಭಾಷೆಯಲ್ಲಿ ಕರ್ಣಾಟಕ ಶಬ್ದಶಾಸ್ತ್ರವನ್ನು ವಿಸ್ತಾರವಾಗಿ ಪ್ರತಿಪಾದಿಸುವ ಗ್ರಂಥವು ಇದೊಂದೇ.

---

## ಸಮುದಾಯದ ಮಾಘಣಂದಿ. ಸು. 1260.

ಈತನು **ಶಾ**ಸ್ತ್ರಸಾರಸಮುಚ್ಚಯ, **ಪ**ದಾರ್ಥಸಾರ, ಇವುಗಳಿಗೆ ಕರ್ಣಾಟಕ ಟೀಕೆಯನ್ನು ಬರೆದಿದ್ದಾನೆ. ಇವನು ಜೈನಕವಿ; ಇವನ ಗುರುಪರಂಪರೆ ಹೀಗೆ ಹೇಳಿದೆ:—

ಶ್ರೀಮೂಲಸಂಘದ ಬಲಾತ್ಕಾರಗಣದ ವರ್ಧಮಾನ; ತಿಷ್ಯ ಪದ್ಮನಂದಿ; ಸಧರ್ಮ ಶ್ರೀಧರಾಚಾರ್ಯ; ತಿಷ್ಯ ವಾಸುಪೂಜ್ಯ; ತಿಷ್ಯ ಶುಭಚಂದ್ರ; ತಿಷ್ಯ ಅಭಯನಂದಿ; ತಿಷ್ಯ ಅರ್ಹನಂದಿ; ತಿಷ್ಯ ದೇವಚಂದ್ರ; ತಿಷ್ಯ ಅಸ್ಮೋಪವಾಸಿ ಕನಕಚಂದ್ರ; ತಿಷ್ಯ ನಯಕೀರ್ತಿ; ತಿಷ್ಯ ಮಾಸೋಪವಾಸಿ ರವಿಚಂದ್ರ; ತಿಷ್ಯ ಶ್ರುತಕೀರ್ತಿ; ತಿಷ್ಯ ವೀರಣಂದಿ; ತಿಷ್ಯ ಗಂಡವಿಮುಕ್ತನೇಮಿಚಂದ್ರ; ತಿಷ್ಯ ಗುಣಚಂದ್ರ; ತಿಷ್ಯ ಪಕ್ಷೋಪವಾಸಿ ಜಿನಚಂದ್ರ; ತಿಷ್ಯ ವರ್ಧಮಾನ; ತಿಷ್ಯ ಶ್ರೀಧರ; ತಿಷ್ಯ ವಾಸುಪೂಜ್ಯ; ತಿಷ್ಯ ಉದಯಚಂದ್ರ; ತಿಷ್ಯ ಕುಮುದಚಂದ್ರ; ತಿಷ್ಯ ಮಾಘಣಂದಿ (ಕವಿ).

"ಚತುರನುಯೋಗಕುಶಲ" "ಸಿದ್ಧಾಂತಾಭಿವರ್ಧನಸುಧಾಕರ" ಎಂದು ಕವಿ ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ಇವನ ಸ್ತುತಿರೂಪವಾದ ಎರಡು ಪದ್ಯಗಳನ್ನು ಇಲ್ಲಿ ಬರೆಯುತ್ತೇವೆ:—

ಅರಿವೆಣ್ಣಾದನದೊರ್ವನೊರ್ವನುರಮಂ ಕೂರ್ತಿತ್ತನೊರ್ವಳ್ಕೆ ದೇ।
ವರೊಳೊರ್ವಂ ಮೊಜಗೆಟ್ಟನೆನ್ನೊಳೆದರ್ದೆಂದಂಗೋದ್ಧವಂ ಬಿಂಕಮೇ ॥

ಜ್ಞರೆ ತನ್ನೊಳ್ಗುಣದಿಂದೆ ಕಟ್ಟಿ ವೃಷದಿಂದಂ ಪೆಟ್ಟುಮಂ ಪೂಡಿ ನೋ ।
ಡಿರೆ ಸೈದ್ಧಾಂತಿಕಮಾಘಣಂದಿಯೆಜ್ಞದಂ ಪ್ರೋದ್ಭಾಮನಂ ಕಾಮನಂ ॥
ಮಲ್ಲಿಗೆಯ ನಗೆಮೊಗಂಗಳ್ । ಮೆಲ್ಲನೆ ಬೆಳ್ದೀಜ್ ಮುಂದಮರುತಂ ಭಯದಿಂ ।
ದಲ್ಲಲ್ಲಿಗೆ ಪುಗೆ ಮದನನ । ಬಿಲ್ಲಂ ಶ್ರೀಮಾಘಣಂದಿಯತಿಪತಿ ಮುಱಿದಂ ॥

ಈತನು, 1273 ರಲ್ಲಿ **ದ್ರವ್ಯಸಂಗ್ರಹಸೂತ್ರಟೀಕೆಯನ್ನು** ಬರೆದ **ಬಾಲಚಂದ್ರಪಂಡಿತನ** ಗುರುವಿನ ಗುರುವೆಂದು ಬೇಲೂರ 131 ನೆಯ ಶಾಸನದಿಂದ (1275) ತಿಳಿವುದರಿಂದಲೂ **ರಾಮಾಯಣವನ್ನು** ಬರೆದಿರುವ **ಕುಮುದೇಂದು ಕವಿ** (ಸು. 1275), ಕುಮುದೇಂದುಗುರುವಿನ ಶಿಷ್ಯನಾದ ಈ ಮಾಘಣಂದಿಯನ್ನು ತನ್ನ ಗುರುವೆಂದು ಹೇಳುವುದರಿಂದಲೂ, ಸುಮಾರು 1260 ರಲ್ಲಿ ಇದ್ದಿರಬಹುದು.

**ಶಾಸ್ತ್ರಸಾರಸಮುಚ್ಚಯಟೀಕೆಯಲ್ಲಿ** 4 ಅಧ್ಯಾಯಗಳಿವೆ. ಅಧ್ಯಾಯಗಳ ಆರಂಭದಲ್ಲಿರುವ ಕಂದಗಳಲ್ಲಿ ಒಂದನ್ನು ತೆಗೆದು ಬರೆಯುತ್ತೇವೆ :—

ಸುರನರಕಿನ್ನರನುತನಂ । ಪರಮಶ್ರೀವೀರನಾಥನಂ ನೆನೆದೊಲವಿಂ ।
ವರಭವ್ಯತತಿಗೆ ಪೇಱ್ದಂ । ನಿರುಪಮಚರಣಾನುಯೋಗಮಂ ಕನ್ನಡದಿಂ ॥

**ಪದಾರ್ಥಸಾರಟೀಕೆಯಲ್ಲಿ** 30 ಪರಿಚ್ಛೇದಗಳಿವೆ. ಇದನ್ನು "ಕರ್ಣಾಟದೇಶದ ಜನಂಗಳಱಿವಂತಾಗಿ ಜಡಮತಿಗಳಂ ಕುಱಿತು ವ್ಯಕ್ತಾರ್ಥಮಾಗಿ" ಕವಿ ಬರೆದನು. ಪರಿಚ್ಛೇದಗಳ ಕೊನೆಯಲ್ಲಿ ಈ ವಾಕ್ಯವಿದೆ—

ಇದು ವೀತರಾಗಸರ್ವಜ್ಞಪ್ರಣೀತಮುಂ ಸಪ್ತಭಂಗೀಸಮಾಲಂಗಿತಮುಮಪ್ಪ ಪದಾರ್ಥಸಾರಶಾಸ್ತ್ರದೊಳ್.

## ಮಾಘಣಂದಿಯ ಶ್ರಾವಕಾಚಾರ[1]

ಎಂದು ಒಂದು ಗ್ರಂಥವಿದೆ. ಇದು ಶಕ 1175—ಎಂದರೆ 1253 ರಲ್ಲಿ—ಬರೆದುದು. ಇದನ್ನೂ ಈ ಮಾಘಣಂದಿಯೇ ಬರೆದಿರಬಹುದು. ಇದರಿಂದ ಸ್ವಲ್ಪ ಭಾಗವನ್ನು ಉದ್ಧರಿಸಿ ಬರೆಯುತ್ತೇವೆ :—

ಮತ್ತಮಿಾವರ್ಧಮಾನತೀರ್ಥಕರಕಾಲದೊಳ್ ಗೌತಮಸುಧರ್ಮಜಂಬೂನಾಥರೆಂಬಿವರನುಬದ್ಧಕೇವಳಿಗಳ ಕಾಲಂ ಅಱುವತ್ತೆರಡುವರ್ಷಂ. ನಂದಿನಂದಿಮಿತ್ರಾಪರಾಜಿತಗೋವರ್ಧನಭದ್ರಬಾಹುಗಳೆಂಬಯ್ವರ ಶ್ರುತಕೇವಳಿಗಳ ಕಾಲಂ ನೂಱುವರ್ಷಂ. ಮತ್ತಂ ವಿಶಾಖನುಂ ಪ್ರೋಷ್ಠಿಲನುಂ ಕ್ಷತ್ರಿಯನುಂ ಜಯನುಂ ನಾಗನುಂ ಸಿದ್ಧಾರ್ಥನುಂ ಧೃತಿಷೇಣನುಂ ವಿಜಯನುಂ ಬುದ್ಧಿಲನುಂ ಗಂಗದೇವನುಂ ಸುಧರ್ಮನುಮೆಂಬ ದಶಪೂರ್ವಧರ

1. *Ind. Ant.*, XII, 22.

ರೇಕಾದಶರ ಕಾಲಂ ನೂಱಿಂಬತ್ತುಮೂರುವರ್ಷಮಕ್ಕುಂ. ಮತ್ತಂ ನಕ್ಷತ್ರನುಂ ಜಯ ಪಾಳನುಂ ಪಾಂಡುವುಂ ದ್ರುಮಸೇನನುಂ ಕುಸುಂಬಾಚಾರ್ಯನುಮೆಂದೇಕಾದಶಾಂಗಧರ ಪಂಚಕರ ಕಾಲಪ್ರಮಾಣಮಿನ್ನೂಱಿಪ್ಪತ್ತುವರ್ಷಂ. ಮತ್ತಮಿತೀರ್ಥಕರಸಂತಾನದೊಳ್ ಸುಭದ್ರನುಂ ಯಶೋಭದ್ರನುಂ ಯಶೋಬಾಹುವುಂ ಲೋಹಭದ್ರನಾಮನುಮೆಂಬಾ ಚಾರಾಂಗಧರರಚತುಷ್ಟಯದ ಕಾಲಂ ನೂಱುಹದಿನೆಂಟುವರ್ಷಂ. ಇಂತೀಗೌತಮಾದಿಗಳ ಕಾಲ ಮೆಲ್ಲಂ ಕೂಡಿ ಅಱುನೂಱಿಂಬತ್ತುಮೂಱುವರಿಸಮಕ್ಕುಂ. ಮತ್ತಮಾಚಾರಾಂಗಧರರಿಂ ಬಳಿಕ್ಕೆ ಸಾಸಿರದತೊಂಬತ್ತೇಟನೆಯ ಪರೀಧಾವಿಸಂವತ್ಸರದ ಜ್ಯೇಷ್ಠಶುದ್ಧ ಶ್ರುತ ಪಂಚಮಿಯದಿನಮಿಾಶಾವಕಾಚಾರಶ್ರುತಂ ಪ್ರತಿಷ್ಠಿತಮಾಯ್ತು. ಅಂತು ಸಾಸಿರದೇೞ್ನೂಱಿಂಬತ್ತುವರಿಸಮಕ್ಕುಂ. ಮುಂದಿನ್ನು ವೀರಸ್ವಾಮಿಯ ಕಾಲಂ ಹತ್ತೊಂಬತ್ತು ಸಾಸಿರದಿನ್ನೂಱಿಪ್ಪತ್ತು ವರಿಸಂ ಪ್ರವರ್ತಿಸುಗುಂ.....ಮತ್ತಂ ವೀರಜಿನಂ ಮುಕ್ತನಾದಿಂಬಳಿಕ್ಕಮಱುನೂಱಿಯ್ದುವರಿಸಮಯ್ದುತಿಂಗಳಂದು ಶಕರಾಜಂ ಪುಟ್ಟಿದಂ.

---

## ಗೌರಾರ್ಯ. ಸು. 1270.

**ಪದ್ಮಣಾಂಕ**ನು (ಸು. 1385) ತನ್ನ ಪದ್ಮರಾಜಪುರಾಣದಲ್ಲಿ ಗೌರಾರ್ಯನು **ಕೆರೆಯಪದ್ಮರಸನ** (ಸು. 1165) ಮೊಮ್ಮಗನ ಮಗನೆಂದೂ "ನೂಱೊಂದುಪಾದ ಗದ್ಯವನುಸಿರ್ದು ಪೂವಂ ಪಡೆದ" ನೆಂದೂ ತನಗೆ ಪ್ರಪಿತಾಮಹನೆಂದೂ ಹೇಳಿದ್ದಾನೆ. ಕೆರೆಯಪದ್ಮರಸನ ಮೊಮ್ಮಗನ ಮಗನಾದುದರಿಂದ ಗೌರಾರ್ಯನು ಅವನ ಕಾಲಕ್ಕಿಂತ ಸುಮಾರು ನೂರುವರ್ಷ ಈಚೆ ಎಂದರೆ, ಸುಮಾರು 1270 ರಲ್ಲಿ, ಇದ್ದಿರಬಹುದು. ಇವನ ಗದ್ಯವು ನಮಗೆ ದೊರೆತಿಲ್ಲ.

---

## ಬಾಳಚಂದ್ರ ಪಂಡಿತ. 1273.

ಈತನು **ದ್ರವ್ಯಸಂಗ್ರಹಸೂತ್ರ**ಕ್ಕೆ **ಕರ್ಣಾಟಕಟೀಕೆಯನ್ನೂ ಪಂಚಪರಮೇಷ್ಠಿಗಳ ಬೊಲ್ಲಿಯನ್ನೂ** ಬರೆದಿದ್ದಾನೆ. ಇವನು ಜೈನಕವಿ. ಈ ಟೀಕೆಯನ್ನು ಶಕ 1195 ರಲ್ಲಿ—ಎಂದರೆ 1273 ರಲ್ಲಿ—ಬರೆದುದಾಗಿ ಈ ಪದ್ಯಗಳಲ್ಲಿ ಹೇಳಿದ್ದಾನೆ :—

ಶಕವರ್ಷಂ ಬಾಣಪದಾ । ರ್ಥಕಳಾಧರರೂಪಸಂಖ್ಯೆಯಿಂದೆಸೆಯೆ ಜಗ ।
ತ್ಪ್ರಕಟಾಂಗಿರಸಶರತ್ಕಾ । ರ್ತಿಕಮಾಸವಳರ್ಕ್ಷಪಂಚಮಿವಾಸರದೊಳ್ ॥
ಪಸರಿಸೆ ನಿಜಕೀರ್ತಿ ದ್ರ । ವ್ಯಸಂಗ್ರಹದ ವೃತ್ತಿಯಂ ಸುಲಕ್ಷಣಯುತಮಂ ।
ಮಿಸುಗುವ ಕನ್ನಡದಿಂ ನಿ । ರ್ಮಿಸಿದಂ ಭವ್ಯೈಕಹಿತಮನಾರ್ಯಸ್ತುತಮಂ ॥

ಈತನ ಗುರುಗಳು ನೇಮಿಚಂದ್ರ ಮತ್ತು ಅಭಯಚಂದ್ರ ಎಂಬಂಶವು ಗ್ರಂಥಾಂತ್ಯದ ಈ ಗದ್ಯದಿಂದ ತಿಳಿಯುತ್ತದೆ :—

ಇದು ಸಕಲಾಗಮಸಂಯಮಶ್ರೀಮನ್ನೇಮಿಚಂದ್ರಭಟ್ಟಾರಕಾಭಯಚಂದ್ರಸಿದ್ಧಾಂತ ದೇವ ಶ್ರೀಪಾದಪದ್ಮಪ್ರಸಾದಾಸಾದಿತ ಸಕಲಾಗಮಸಂಯಮಸಂಪನ್ನ ಶ್ರೀಬಾಳಚಂದ್ರ ಪಂಡಿತದೇವರಾಗಮವಿರುದ್ಧಮಾಗದಂತು ದ್ರವ್ಯಸಂಗ್ರಹಸೂತ್ರಾನುಗತಕರ್ಣಾಟಲಘುವೃತ್ತಿ ಯಂ ವಿರಚಿಸಿದರ್.

ಈತನು ಶಕ 1197 ರಲ್ಲಿ—ಎಂದರೆ 1275 ರಲ್ಲಿ—ಗತಿಸಿದಂತೆ ಬೇಲೂರು 131 ನೆಯ ಶಾಸನದ ಈ ಭಾಗದಿಂದ ತಿಳಿಯುತ್ತದೆ :—

ಶ್ರೀಮನ್ನೇಮಿಚಂದ್ರಭಟ್ಟಾರಕದೇವರುಂ ಶ್ರೀಮದಭಯಚಂದ್ರಸಿದ್ಧಾಂತಚಕ್ರವರ್ತಿ ಗಳುಂ ದೀಕ್ಷಾಗುರುಗಳುಂ ಶ್ರುತಗುರುಗಳುಮಾಗೆ ತಪಶ್ಶ್ರುತಂಗಳಿಂ ಜಗದೊಳ್ ವಿಖ್ಯಾ ತಂಬೆತ್ತ ಶ್ರೀಮದ್ಬಾಳಚಂದ್ರಪಂಡಿತದೇವರ್ ಶಕವರ್ಷಂ 1197 ನೆಯ ಭಾವ ಸಂವತ್ಸರದ ಭಾದ್ರಪದ ಶುದ್ಧ 12 ಬುಧವಾರದ ಮಧ್ಯಾಹ್ನಕಾಲದೊಳು ಎಮಗೆ ಸಮಾಧಿಯೆಂದು ಚಾತುರ್ವರ್ಣ್ಯಿಗಳ್ಗಱಿಪಿ ಸೀಮೆಯ್ಯರುಂ ಧಾರ್ಮಿಕರಪ್ಪುದೆಂದು ನಿಯಾಮಿಸಿ ಕ್ಷಮಿತವ್ಯ ಮೆಂದು ಸನ್ಯಸನಪೂರ್ವಕಂ ಸಕಳನಿವೃತ್ತಿಯಂ ಮಾಡಿ ಪಲ್ಯಂಕಾಸನದೊಳಿರ್ದು ಪಂಚಪರ ಮೇಷ್ಠಿಗಳ ಸ್ವರೂಪಮಂ ಧ್ಯಾನಿಸುತ್ತುಂ ಸ್ವಸಮಯಪರಸಮಯಂಗಳುಂ ಮೆಚ್ಚೆ ಉತ್ತಮ ಸಮಾಧಿಯಂ ಪಡೆದರ್.

ಬೇಲೂರು 131 ನೆಯ, 132 ನೆಯ ಶಾಸನಗಳಲ್ಲಿ ಈತನನ್ನು ಸ್ತುತಿಸುವ ಹಲವು ಪದ್ಯಗಳಿವೆ.[1] ಅವುಗಳಿಂದ ಈತನು ದೊಡ್ಡ ಪಂಡಿತನಾಗಿಯೂ ಅನೇಕ ಜೈನಗ್ರಂಥಗಳಿಗೆ ವ್ಯಾಖ್ಯಾನಕರ್ತೃವಾಗಿಯೂ ಇದ್ದಂತೆ ತಿಳಿಯುತ್ತದೆ.

ಇವನ ಗ್ರಂಥ

## ಪಂಚಪರಮೇಷ್ಠಿಗಳ ಬೊಲ್ಲಿ.

ಈ ಗ್ರಂಥವು ಪಂಚಪರಮೇಷ್ಠಿಗಳ—ಎಂದರೆ ಅರ್ಹಂತರು, ಸಿದ್ಧರು, ಆಚಾರ್ಯರು, ಉಪಾಧ್ಯಾಯರು, ಸಾಧುಗಳು ಇವರುಗಳ ಸ್ತುತಿರೂಪವಾದ ಗದ್ಯ ಗ್ರಂಥ. ಆದಿಯಲ್ಲಿ

---

1 ಪೂರ್ವಾಚಾರ್ಯಪರಂಪರಾಗತಜಿನಸ್ತೋತ್ರಾಗಮಾಧ್ಯಾತ್ಮಸ ।
ಚ್ಛಾಸ್ತ್ರಾಣಿ ಪ್ರಥಿತಾನಿ ಯೇನ ಸಹಸಾಭೂವನ್ನಿಲಾಮಂಡಲೇ ॥
ಶ್ರೀಮನ್ನಾಸ್ಯಭಯೇಂದುಯೋಗಿವಿಬುಧಪ್ರಖ್ಯಾತ ತತ್ಪಾನುನಾ ।
ಬಾಳೇಂದುಪ್ರತಿಪೇನ ತೇನ ಲಸತಿ ಶ್ರೀಜೈನಧರ್ಮೋದ್ಧನಾ ॥
ದಕ್ಷೋಯಮಕ್ಷಪಾದಾದಿಸಕ್ಷಮಾವೀಕ್ಷ್ಯ ತತ್ಕ್ಷಣೇ ।
ಪ್ರತ್ಯಕ್ಷಾದಿಪ್ರಮಾಣೇನ ಭೇತ್ತುಂ ಬಾಲೇಂದುಸನ್ನುನಃ ॥

ದ್ರವ್ಯಗುಣಪರ್ಯಯಂಗಳ । ನವ್ಯಗ್ರಕುಶಾಗ್ರಬುದ್ಧಿಯಿಂ ಭಾವಿಸುವಂ ।
ಗವ್ಯವಹಿತನಿಜತತ್ಪಂ । ಶ್ರವ್ಯಮೆನಲ್ ಪಂಚಗುರುಪದಂ ಶ್ರಯಣೀಯಂ ॥

ಎಂಬ ಪದ್ಯವಿದೆ. ಅಂತ್ಯದಲ್ಲಿ ಈ ಪದ್ಯಗಳವೆ—

ಪದಪಂಚಕಮಕ್ಷಯಸಂ । ಪದಹೇತುಕಮೆಂದು ನಂಬಿ ಭಾವಿಸುವಂಗ ।
ಭ್ಯುದಯಾದಿಕಮೇಂ ಗಹನಮೆ । ವಿದಿತಂ ಬಾಲೇಂದುಬುಧನಿರೂಪಿತವಿಧದಿಂ ॥
ಸಿದ್ಧಾಂತವೇದ್ಯಭಯಚಂದ್ರಪದಾರವಿಂದೇ । ಆರಾಧ್ಯ ಪಂಚಗುರುವೋಕ್ಷಪದ
ಸ್ವರೂಪಂ ।
ಬಾಲೇಂದುನಾ ನಿಗದಿತಂ ಸುಜನೋತ್ತಮಾ ಯೇ । ತೇಂ ಭಾವಯಂತು ತರಸಾ
ಸಮತಾಂ ಲಭಂತೇ ॥

---

## ಕುಮುದೇಂದು. ಸು. 1275.

ಇವನು ಒಂದು ರಾಮಾಯಣವನ್ನು ಬರೆದಿದ್ದಾನೆ. ಇದಕ್ಕೆ ಕುಮುದೇಂದು ರಾಮಾಯಣವೆಂದು ವ್ಯವಹಾರವಿದೆ.

ಈತನು ಜೈನಕವಿ. ಇವನ ತಂದೆ "ಸಾಹಿತ್ಯಕುಮುದವನಚಂದ್ರಂ ಚತುರ ಚತುರ್ವಿಧಪಾಂಡಿತ್ಯಕಳಾಶತದಳವಿಕಸನದಿನಮಣಿ ಎನಿಸಾವಾಣಸಕುಲತಿಲಕಂ, ವಾದಿಧರಾಧರಕುಲಿಶಂ ಕವಿಮುಖಮಣಿಮುಕುರಂ" ಆದ ಪದ್ಮನಂದಿವ್ರತಿ; ತಾಯಿ ಕಾಮಾಂಬಿಕೆ; ದೊಡ್ಡಪ್ಪನು "ಪರಮಾಗಮನಾಟಕತರ್ಕವ್ಯಾ । ಕರಣ ನಿಘಂಟುಚ್ಛಂದೋಲಂಕೃತಿ । ಚರಿತಪುರಾಣಷಡಂಗಶ್ರುತಿನೀತಿಸ್ಮೃತಿವೇದಾಂತ ॥ ಭರತಸುರತಮಂತ್ರೌಷಧಿಸಂಹಿತೆ । ನರತುರಗಗಜಮಣಿಗಣ ಪರೀಕ್ಷಾಪರಿಣತಂ ॥" ಎನಿಸಿದ ಅರ್ಹನಂದಿವ್ರತಿ. ಕುಮುದೇಂದುವಿನ ತಂದೆ ದೊಡ್ಡಪ್ಪ ಇವರುಗಳು ದೊಡ್ಡ ಪಂಡಿತರಾಗಿಯೂ ಕವಿಗಳಾಗಿಯೂ ಇದ್ದಂತೆ ತೋರುತ್ತದೆ. ಇವನ ಗುರು ಮಾಘಣಂದಿಮುನಿ.

ಹಿಂದಣ ಕವಿಗಳಲ್ಲಿ ಜನ್ನನನ್ನು (1230) ಸ್ತುತಿಸುವುದರಿಂದ ಕುಮುದೇಂದು ಅವನಿಗಿಂತ ಈಚೆಯವನೆಂಬುದು ವ್ಯಕ್ತವಾಗಿಯೇ ಇದೆ. ಈತನು ತನ್ನ ಗುರುವಾದ ಮಾಘಣಂದಿಮುನಿಯನ್ನು "ಸಿದ್ಧಾಂತತ್ರಯಚಕ್ರೇಶ್ವರಂ", "ಅವನತಹೊಯ್ಸಳರಾಜಮಕುಟಮಣಿಗಣಕಿರಣಂ" ಎಂದು ಹೊಗಳಿದ್ದಾನೆ. 1282 ರಲ್ಲಿ ಬರೆದ ಶ್ರ. ಬೆ. 334 ನೆಯ ಶಾಸನದಲ್ಲಿ "ಶ್ರೀಮನ್ಮಹಾಮಂಡಲಾಚಾರ್ಯರುಂ ಆಚಾರ್ಯವರ್ಯರುಂ ಹೊಯ್ಸಳರಾಯರಾಜಗುರುಗಳುಂ" ಎಂದು ಒಬ್ಬ ಮಾಘಣಂದಿಸಿದ್ಧಾಂತಚಕ್ರವರ್ತಿಯನ್ನು ಸ್ತುತಿಸಿದೆ. ಈ ಮಾಘಣಂದಿಯೇ

ಕುಮುದೇಂದುವಿನ ಗುರುವಾಗಿರಬೇಕು. ಆದುದರಿಂದ ಕವಿ ಸುಮಾರು 1275 ರಲ್ಲಿ ಇದ್ದಿರಬಹುದು.

ಇವನಿಗೆ ಪರವಾದಿಗಿರಿವಜ್ರ, ಸರಸಕವಿತಿಲಕ ಎಂಬ ಬಿರುದುಗಳಿದ್ದಂತೆ ತಿಳಿಯುತ್ತದೆ.

ಪೂರ್ವಕವಿಗಳನ್ನು ಈ ಪದ್ಯದಲ್ಲಿ ಸ್ತುತಿಸಿದ್ದಾನೆ :—

ಅನುನಯದಿಂ ಗುಣವರ್ಮನ ಜಯವ। ರ್ಮನ ಗಜಗನ ಗುಣನಂದಿಯ ನಯನ।
ರ್ಮನ ಹೊನ್ನನ ಹಂಪನ ರನ್ನನ ಸುಮನೋಬಾಣನ ಜನ್ನಯನ॥
ಜನಗುಣಮಣಿಮಯಕಾವ್ಯಕಥಾವ। ರ್ಣನಸಾವರ್ಣಪದಕವೆಮ್ಮಯ ಮತಿ।
ವನಿತೆಗೆ ಕಂಠಾಭರಣತೆಯಂ ತಳೆದಿರ್ಕೆ ಕವೀಂದ್ರಪರಂಪರೆಯಾ॥

ತನ್ನ ಕವಿತಾಚಾತುರಿಯನ್ನೂ ಕಾವ್ಯದ ಉತ್ಕೃಷ್ಟತೆಯನ್ನೂ ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ :—

ಒರೆಯೆ ಸುವರ್ಣಂ ತೀಯೆ ಮಲಯಜಂ। ಬೆರಸೆ ದಶಾಂಗಂ ತೆಗೆಯೆ ಕುಸುಮಮೃತಿ।
ಕರಗಿಸೆ ಸಿದ್ಧರಸಂ ಪಿಂಡಿಸೆ ಪುಂಡ್ರೇಕ್ಷುವ ಕಾಂಡಚಯಂ॥
ಪರಿಮರ್ದಿಸೆ ಹಿಮಕುಂಕುಮಮನ್ಯಗಮದ। ಮೊರಸೆ ಕರಂ ಸಾಂದಿನ ಪುಣುಗಿನ ಘನ।
ಪರಿಮಳಮೆನೆ..... ಮತ್ಕೃತಿಯಂ ಸಂಘರ್ಷಿಸಲು॥
ಎಳಸದರಾರ್ ಶರದಿಂದುವ ಚಂದ್ರಿಕೆ। ಗೆಳಸದರಾರ್ ಹರಿಚಂದನದಣ್ಪಂ।
ಗೆಳಸದರಾರ್ ನವವಿಕಸಿತವಿಚಕಿಲಲತಿಕಾಮಂಜರಿಗೆ॥
ಎಳಸದರಾರ್ ನವಯೌವನಲಕ್ಷ್ಮಿಗೆ। ಯೆಳಸದರಾರ್ ನವಯುವತೀನಿವಹಕೆ।
ಯೆಳಸದರಾರ್ ಕುಮುದೇಂದುಮುನೀಶ್ವರವಿರಚಿತಕಾವ್ಯಕಥಾರಸಕೆ॥

ಇವನ ಗ್ರಂಥ

## ಕುಮುದೇಂದು ರಾಮಾಯಣ.

ಇದು ಷಟ್ಪದೀರೂಪವಾಗಿದೆ. ಇದರಲ್ಲಿ ಎಲ್ಲಾ ಜಾತಿಯ ಷಟ್ಪದಿಗಳೂ ಇವೆ; ಅಲ್ಲಲ್ಲಿ ಕೆಲವು ರಗಳೆಗಳೂ ದೊರೆಯುತ್ತವೆ. ನಮಗೆ ದೊರೆತ ಪ್ರತಿ ಸಮಗ್ರವಾಗಿಲ್ಲದುದರಿಂದ ಗ್ರಂಥದಲ್ಲಿರುವ ಸಂಧಿಗಳ ಸಂಖ್ಯೆ ಇಷ್ಟೆಂದು ಹೇಳಲಾರೆವು. ಇದರಲ್ಲಿ ಜೈನಸಂಪ್ರದಾಯಕ್ಕೆ ಅನುಸಾರವಾಗಿ ರಾಮಾಯಣಕಥೆ ಹೇಳಿದೆ. ಕವಿ ಈ ಗ್ರಂಥವನ್ನು "ವಿತತಸಿದ್ಧಾಂತಪರಿಣತ ಮಾಘಣಂದಿಮುನಿಪತಿಯ ಕಾರುಣ್ಯದಿಂ ಪೇಟ್ಟಿಂ" ಎಂದು ಹೇಳುತ್ತಾನೆ.

ಗ್ರಂಥಾವತಾರದಲ್ಲಿ ಮುನಿಸುವ್ರತನ ಸ್ತುತಿಯಿದೆ. ಬಳಿಕ ಕವಿ ಸಿದ್ಧಾದಿಗಳನ್ನೂ ಸರಸ್ವತಿಯನ್ನೂ ಕೇವಲಿಗಳನ್ನೂ ಸ್ಮರಿಸಿ ಕುಂಡಕುಂದಾಚಾರ್ಯನಿಂದ ಜಿನಚಂದ್ರನವರೆಗೆ ಗುರುಗಳನ್ನು[1] ಕ್ರಮವಾಗಿ ಸ್ತುತಿಸಿದ್ದಾನೆ.

ಇವನ ಬಂಧವು ಲಲಿತವಾಗಿದೆ; ವರ್ಣನಾಭಾಗಗಳಲ್ಲಿ ಪ್ರಾಯಿಕವಾಗಿ ಅಭಿನವಪಂಪನ ರಾಮಾಯಣವನ್ನು ಅನುಸರಿಸಿದ್ದಾನೆ.

ಇವನ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

### ಬೇಸಗೆ (ಕುಸುಮಷಟ್ಪದಿ).

ತೊಱೆಹರಿಯುಡುಗೆ ಕೂಡೆ । ಕೆಜ್ಜೆ ಬತ್ತಿ ಬೀಡೇಱಿ ।
ಬಜವಜಂಬತ್ತೆ ಪಥಿಕರ ಬಾಯ್ಗಳು ।
ಮುಜುಗೆ ತಿಮಿನಿಕರಂಗಳುಜ್ಜಿ ಕಾಯ್ವ ಕೆಸಱಿನೊಳು ।
ಬಿಜುಗಾಳಿ ಬೀಸೆ ಬೇಸಗೆ ಬಂದುದು ॥ 910 ॥

ತರುಗಳೆಲೆಯುಕ್ಕೆದುವು । ಮರುಮರೀಚಿಕೆಗಳಿಗೆ ।
ಹರಿಣಗಳು ನೀರಬ್ಬಿಕ್ಕಯಂ ಪರಿದುವು ।
ಸರಸಿಜಾಕರದೊಳಾ । ದರವುಟ್ಟಿಯೆ ಮಧುಪಂಗ ।
ಳುರಿವರಿಯುತಂದು ಬಂದುದು ಬೇಸಗೆ ॥ 911 ॥

### ವರ್ಷಾಕಾಲ (ಕುಸುಮ).

ಉಲಿಯೆ ಚಾದಗೆಗಳು । ಮ್ಮಳಿಸೆ ಹಂಸೆಗಳು ಬೆಳು । ಸುಟ್ಟುವುಟ್ಟಿಗಟ್ಟಿಕೇತಕಿಗಳಲ್ಲಿ ।
ನಲಿದು ನರ್ತಿಸೆ ಕೇಕಿ । ಕುಳವಲರೆ ಕಡವುಕ । ಣ್ಣಲೆದು ತೀಡಿತ್ತು ಪಶ್ಚಿಮಮಾರುತಂ ॥ 912 ॥

### ನಂದನ (ಪರಿವರ್ಧಿನಿ).

ಅಲರ್ದ ಕಮಲವನಷಂಡಗಳಿಂದು । ಳ್ಕಲರ್ದ ಕುಮುದವನರಾಜಿಗಳಿಂ ಪ ।
ನ್ನೊಲೆಯಿಂ ಬಳುಕುವ ಕೊಂಗುಗಳಿಂ ಕಾಯ್ದುಜುಗಲ ತೆಂಗುಗಳಿಂ ॥
ಸಲೆ ಕತ್ತಲಿಪೆಲೆವಳ್ಳಿಗಳಿಂ ಪ । ನ್ನೊಲವೀಳೆಗಳಿಂ ಬೀರಿಂದಂ ಕಾ ।
ಯ್ದಿಲೆವೆರ್ದಿದ ಪನಸಂಗಳೆನಾನಂದನಮಾನಂದಮನೊದವಿಪುದು ॥ 913 ॥

---

1. ಕುಂಡಕುಂದಾಚಾರ್ಯ, ಸಮಂತಭದ್ರ, ಕವಿಪರಮೇಷ್ಠಿ, ಗುಣಭದ್ರ, ಉಮಾಸ್ವಾತಿ, ಶ್ರೀಸಾವಸ್ಥಾಮಿ, ಪೂಜ್ಯಪಾದ, ಅಕಳಂಕ, ವಿದ್ಯಾನಂದ, ಅನಂತವೀರ್ಯ, ವೀರಸೇನ, ಜಿನಸೇನ, ಭೂತಬಲಿ, ಪುಷ್ಪದಂತ, ಸಿಂಹನಂದಿ, ನ್ಯಾಯಶಬ್ದವಿದ್ಯಾನಿದನಷ್ಟ ಪ್ರಭಾಚಂದ್ರ, ವರ್ಧಮಾನ ಭಟ್ಟಾರಕ, ಶ್ರೀಧರಾಚಾರ್ಯ, ವಾಸುಪೂಜ್ಯ, ಶಿಷ್ಯ ಅಭಯೇಂದು, ಸುಗ ಕುಮುದೇಂದು, ಮಾಧವಚಂದ್ರ, ತಾರ್ಕಿಕಚಕ್ರೇಶ್ವರ ಅಭಯೇಂದು, ಕುಮುದೇಂದುವ್ರತಿಪತಿಸುತ ಹೊಯ್ಸಳರಾಜ ಗುರು ಮಾಘಣಂದಿಮುನಿ (ಕವಿಯ ಗುರು). ಬಾಳೇಂದು, ಜಿನಚಂದ್ರ.

## ಸೂಕಳಾಶ್ವ (ಭಾಮಿನಿ).

ಹೊಳೆವ ದುಂಡಿಸುವೆತ್ತುವೊತ್ತುವ । ಮುಳಿವ ಹೋಗದೆ ನಿಲುವ ಮೆಯ್ಯಂ ।
ಬಲಿವ ಹೊಯ್ಲಂ ಮೇದು ಸುಯ್ಲಂ ನುಂಗುವುರವಣಿಪ ॥
ಮುಳಿವ ಗೋಲ್ಗೆಯಿರ್ಪ ಠಾವಿಂ । ತಳರದಿರ್ವಾಕಡವಗಳ ಬಿಡ ।
ದಳಱಿಸುವ ಸೂಕಳತೆಯಂ ಕ್ಕೆಕೊಂಡುದಾತುರಗ ॥ 914 ॥

## ಸೀತೆಯ ಸಭಾಪ್ರವೇಶ (ಪರಿವರ್ಧಿನಿ).

ಕೆಲಕೆಲಬರ್ ಕೀಲಿಸಿದಂತಿರ್ದರ್ । ಕೆಲಕೆಲಬರ್ ಸ್ತಂಭಿಸಿದಂತಿರ್ದರ್ ।
ಕೆಲಕೆಲಬರ್ ಮೂರ್ಛಿಸಿದಂತಿರ್ದರ್ ವಸುಧಾಪಾಲಕರು ॥
ಕೆಲಕೆಲಬರ್ ಪಾವಡರ್ದಂತಿರ್ದರ್ । ಕೆಲಕೆಲಬರ್ ಮೆಯ್ಮಱೆದಂತಿರ್ದರ್ ।
ಗೆಲೆ ಚಿತ್ರದ ಸಭೆಯಂ ಸಭೆ ಜಾನಕಿ ಪುಗಲು ರತಿಯು ಮಿಗಲು ॥ 915 ॥

## ಸೀತೆಯ ದುಃಖ (ಪರಿವರ್ಧಿನಿ).

ಕರುಣದ ಕರುವೋ ಕಾರ್ಶ್ಯದ ತಿಟ್ಟವೊ। ವಿರಹದ ಬಿದ್ದವೊ ದುಃಖದ ಮೂರ್ತಿಯೊ।
ಪರಿತಾಪದ ರೂಪೋ ಘನವೆಸಿಸಿದ ಭೀತಿಯ ಪುತ್ತಳಿಯೋ ॥
ಉರುಚಿಂತೆಯ ಚಿತ್ರವೊ ನಿರ್ವೇದದ। ಪರಿಚೋ ಮೂರ್ಛೆಯ ವಿತತಾಕೃತಿಯೋ ।
ನಿರುಪಮ ತೀಲದ ಗೃಹವೋ ಎನಲಬ್ರುತಿರ್ದಳು ಧರಣಿಸುತೆ ॥ 916 ॥

## ಚಂದ್ರಿಕೆ (ಭಾಮಿನಿ).

ನೀಲಗಿರಿ ಹಿಮಶೈಲಮೆನಿಸೆ ತ । ಮಾಲಕಾನನಮಮಳಮುಕ್ತಾ ।
ಜಾಲಮಂಟಪಮೆನಿಸೆ ಜಾಹ್ನವಿಯೆನಿಸೆ ಕಾಳಿಂದಿ ॥
ಶೂಲಿಯೆನಿಸೆ ಮುಕುಂದಮೂರ್ತಿ ಮ । ರಾಳಮಾಳೆಯೆನಿಸೆ ಪಿಕಾವಳಿ ।
ಕಾಳಿಕಾಪರಮಾಣುವಿಂ ಚಂದ್ರಿಕೆ ವಿರಾಜಿಸಿತು ॥ 917 ॥

## ವನ (ವಾರ್ಧಕ).

ಸುಲ್ಲಿವ ತೆಂಗಾಳಿಯಿಂ ಪರಿಪಕ್ವಫಲರಸದೆ ।
ಬಳಸಿದ ಸುಗಂಧದಿಂ ಲಲಿತತರುಲತೆಗಳಿಂ ।
ಕಳಕಂಠಕೂಜಿತದೆ ಮೆಯ್ಗೆ ರಸನೆಗೆ ನಾಸಿಕಕ್ಕೆ ಕಣ್ಗಳಿಗೆ ಕಿವಿಗೆ ॥
ನಲವನಿಂಪಂ ಸೊಗಸನಾಶ್ಚರ್ಯಮಂ ಕುತೂ ।
ಹಲತೆಯಂ ಮಾಲ್ಪುದೊದವಿಪುದು ವಿತರಿಪುದು ಸಂ ।
ಗಳಿಪುದೀವುದು ಜಗಂ ಪೊಗಲ್ತಿ ಕೊಂಡಾಡೆ ತಲೆದೂಗೆ ಬಣ್ಣಿಸೆ ಬಯಸೆ ವನಮೆಸ
[ದುದು ॥ 918 ॥

### ಸೂಳೆಯರ ಜಗಳ (ವಾರ್ಧಕ).

ಎಲೆ ಗುಂಡಿ ನೀ ಗುಂಡಿ ಬೀಟ್ಮಾಯೆ ನೀ ನಾಯೆ ।
ಉಲಿಯದಿರು ನೀನುಲಿಯದಿರು ಸಾಯ ನೀಸಾಯ ।
ಉಲುಕದಿರು ನೀನುಲುಕದಿರು ಚಂಡಿ ನೀ ಚಂಡಿ ಸಿಂಬೆ ನೀ ಸಿಂಬಿಯೆಂದು ॥
ತಲೆಯೊತ್ತಿಯೊರ್ವರೊರ್ವರು ಕಚ್ಚಿ ತಾವು ಮುಂ ।
ದಲೆವಿಡಿದು ಹೊದೆದ ಸೀರೆಗಳಜಿಯದೇ ಬಿದ್ದು ।
ರುಳುವ ಜಾವಟಬೇಟಗಾರ್ತಿಯರ ಜಗಳಮುಂ ಕಂಡು ನಗುತಿರ್ದನಣುವ ॥ 919 ॥

---

## ಈಶ್ವರಾರ್ಯ. 1275.

ಈತನು ದಾವಣಗೆರೆ 70 ನೆಯ ಶಾಸನವನ್ನು ಬರೆದುದಾಗಿ ಆ ಶಾಸನದ ಅಂತ್ಯಭಾಗದಲ್ಲಿರುವ

ವಾಚಸ್ಪತಿಗರಿದೆನೆ ಸಂ । ಕೋಚದೆ ಶಾಸನಮನೀಶ್ವರಾರ್ಯಂ ಪೇಟ್ದಂ ॥

ಎಂಬ ಪದ್ಯಭಾಗದಿಂದ ತಿಳಿಯುತ್ತದೆ.

ಈ ಶಾಸನವು ದೇವಗಿರಿಯ ರಾಜನಾದ ರಾಮಚಂದ್ರನ (1271–1309) ಆಳಿಕೆಯಲ್ಲಿ 1275 ರಲ್ಲಿ ಬರೆದುದು. ಇದರಲ್ಲಿ ಈ ರಾಮಚಂದ್ರನ ಪ್ರಧಾನನಾದ ತಿಪ್ಪರಸನು ಬಾನವಳಿಯ ನೂರುನಾಲ್ವರ್ಗೆ ದತ್ತಿಯನ್ನು ಬಿಟ್ಟಂತೆ ಹೇಳಿದೆ. ಇದರಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ :—

### ರಾಮಚಂದ್ರ.

ಕನ್ನರದೇವಂಗುದಯಿಸಿ । ಕೆನ್ನರವಿಳುನಂಗಳಂದೆ ಪಾಡಿಸುವಂ ತ ।
ನ್ನನ್ನರಿಜೀವೀವರುಂ ಕಡು । ಚೆನ್ನರುಮಿಲ್ಲೆನಿಸಿ ರಾಮಚಂದ್ರಮಹೀಶಂ ॥ 920 ॥
ಕಾಮಂ ಖ್ಯಾತಂ ಚಿಲ್ವಂ । ಭೀಮಂ ಭುಜಬಲದಿನಮೃತತನುವಿಂ ಸೋಮಂ ।
ಕಾಮಂ ಭೀಮಂ ಸೋಮಂ । ರಾಮಮಹೀಪತಿಯೆ ತದ್ಗುಣಂಗಳಿಸೆನಿಪಂ ॥ 921 ॥

### ಗುಹಾರಣ್ಯ.

ಗುಹಗಹನದ ಬಹುಮಹಿಮೆಯ । ನಹಮಹಮಿಕೆಯಿಂದಹೀಂದ್ರಜಿಹ್ವೆಗಳೊಳಗಾ ।
ಗಹ ಎಣಿಸಲೆಯ್ವವೆಂದೊಡೆ । ಗಹಗಹಿಸಿಯೆ ನಗಿಸಿಕೊಳ್ಳರೆಣಿಸಿದೊಡನ್ಯರ್ ॥ 922 ॥

---

## ನರಹರಿತೀರ್ಥ. 1281.

ಈತನು ವಿಷ್ಣುಸ್ತುತಿರೂಪವಾದ ಹಾಡುಗಳನ್ನು ಬರೆದಿದ್ದಾನೆ. ಇವನು ಮಾಧ್ವಕವಿ; ಮಧ್ವಗುರುವಿನಿಂದ ಮೂರನೆಯ ಪಟ್ಟದ ಸ್ವಾಮಿಯಾಗಿದ್ದನು.

ಸನ್ಯಾಸಿಯಾಗುವುದಕ್ಕೆ ಮುಂದೆ ಗಂಡಾಂ ಪ್ರಾಂತದಲ್ಲಿ ಅಧಿಕಾರಿಯಾಗಿದ್ದನು. ಚಿಕಾಕೋಲಿನಲ್ಲಿ 1281, 1293 ರಲ್ಲಿ ಹುಟ್ಟಿದ ಈತನ ಶಿಲಾಶಾಸನಗಳು ದೊರೆಯುತ್ತವೆ.[1] ಈತನು 1333 ರಲ್ಲಿ ಗತಿಸಿದನೆಂದು ಹೇಳುತ್ತಾರೆ. ಈತನ ಹಾಡುಗಳಲ್ಲಿ ಒಂದನ್ನು ತೆಗೆದು ಬರೆಯುತ್ತೇವೆ :—

ರಾಗ—ಆನಂದಭೈರವಿ—ಅಟತಾಳ.

ಪಲ್ಲವಿ ॥ ಇಂತು ಮರುಳಾದೆ ॥

ಅನುಪಲ್ಲವಿ ॥ ಇಂತು ಮರುಳಾಗಿ ಬಯಲಿಗೆ ಬಟಲಿದೆ ರಕ್ಷಿಸಯ್ಯ ರಘುಕುಲ . [ತಿಲಕ ॥

ನಾತಿನಲ್ಲಿ ಹರಿದಾಸತನ । ನೀತಿಯಲ್ಲಿ ಬಲುಪ್ರೌಢತನ ।
ಪ್ರೀತಿ ಧನದುರ್ವಿಷಯದಲ್ಲಿ ನಿ । ರ್ಭೀತಿ ದೈವಗುರುದ್ರೋಹದಲಿ ॥ 1 ॥

ಏಕಾಂತದಲಿ ಧನದ ಗೋಷ್ಠಿ । ಲೋಕಾಂತದಲಿ ವೈರಾಗ್ಯದ ಗೋಷ್ಠಿ ।
ಶ್ರೀಕಾಂತನ ಸೇವೆಗೆ ಅನುಮಾನ । ಭೂಕಾಂತನ ಸೇವೆಗೆ ಸನ್ಮಾನ ॥ 2 ॥

ಭಜಿಸು ಬ್ರಹ್ಮಾದಿವಂದಿತಹರಿಯ । ತ್ಯಜಿಸು ಕಾಮಾದಿಶತ್ರುಗಳ ।
ಸುಜನವಂದಿತನಾದ ನರಹರಿಯ । ಭಜಿಸು ಶ್ರೀಹರಿರಘುಪತಿಯ ॥ 3 ॥ 923 ॥

---

## ಬಾಲಚಂದ್ರ (?). 1282.

ಉದ್ಯೋಗಸಾರವೆಂಬ ಒಂದು ಕನ್ನಡ ಗ್ರಂಥವು ದೊರೆಯುತ್ತದೆ. ಗ್ರಂಥದಲ್ಲಿ ಕವಿಯ ಹೆಸರು ಹೇಳಿಲ್ಲ. ಆದರೆ ಕವಿ ತಾನು ನೇಮಿಚಂದ್ರನ ಶಿಷ್ಯನೆಂದು ಹೇಳಿ "ಆತ್ಮಜ್ಞ" ಎಂದು ತನ್ನನ್ನು ವಿಶೇಷಿಸಿಕೊಂಡಿದ್ದಾನೆ. 1282 ರಲ್ಲಿ ಬರೆದ ಶ್ರ. ಬೆ. 334 ನೆಯ ಶಾಸನದಲ್ಲಿ "ಶ್ರೀಮನ್ಮಹಾಮಂಡಲಾಚಾರ್ಯರುಂ ಶ್ರೀಮೂಲಸಂಘದ ಇಂಗಳೇಶ್ವರದೇಶೀಯ ಗಣಾಗ್ರಗಣ್ಯರುಂ ರಾಜಗುರುಗಳುಂ" ಆದ ಒಬ್ಬ ನೇಮಿಚಂದ್ರಪಂಡಿತದೇವನನ್ನು ಹೇಳಿ, ಆತನ ಶಿಷ್ಯನಾದ ಒಬ್ಬ ಬಾಲಚಂದ್ರನನ್ನು ಹೇಳಿದೆ. ಈ ಬಾಲಚಂದ್ರನು ಈ ಗ್ರಂಥವನ್ನು ಬರೆದಿರಬಹುದೋ ಏನೋ ತಿಳಿಯದು.

ಇವನ ಗ್ರಂಥ

### ಉದ್ಯೋಗಸಾರ.

ಇದು ಪ್ರಾಯಿಕವಾಗಿ ಕಂದರೂಪವಾಗಿದೆ; ಅಲ್ಲಲ್ಲಿ ಕೆಲವು ವೃತ್ತಗಳೂ ಗದ್ಯಗಳೂ ಇವೆ. ಈ ಗ್ರಂಥದಲ್ಲಿ ಪ್ರತಿಪಾದಿಸುವ ಉದ್ಯೋಗದ ಸ್ವರೂಪವನ್ನು ಕವಿ ಈ ಪದ್ಯಗಳಲ್ಲಿ ಹೇಳಿದ್ದಾನೆ :—

---

[1] *Madras Epigraphical Reports* for 1896 and 1900.

ಬಯಸೆ ಸುಖಮಾಗದೆಂದುಂ । ನಿಯತಮುರೂದ್ಯೋಗಮಿಲ್ಲದದುವುಂ ರತ್ನ ।
ತ್ರಯಭಾವನಾತ್ಮಕಂ ಸಂ । ಶಯಮಿಲ್ಲದೆ ನೆಗಚ್ಪಿಡಿದನದಕ್ಕುಮವಶ್ಯಂ ॥
ನಿರುಪಾಧಿನಿರ್ವಿಕಲ್ಪಕ । ಪರಮಸಮಾಧಿಸ್ವರೂಪಸಫಲೋದ್ಯೋಗಂ ।
ನಿರವಧಿಸುಖೈಕಬೀಜಂ । ದೊರೆಕೊಳ್ಪುದೇಕೆ ವಿಫಲಪಾಪೋದ್ಯೋಗಂ ॥

ಗ್ರಂಥಾದಿಯಲ್ಲಿ ಈ ಪದ್ಯವಿದೆ—

ಅನಮ್ರಭವ್ಯನಿವಹ । ಶ್ರೀನಂದಿಮುನೀಂದ್ರವಂದ್ಯಜನಪದಪದ್ಮ ।
ಕ್ಕಾನೆಱಗಿ ಭಕ್ತಿಯಿಂದಮ । ನೂನಮನುದ್ಯೋಗಸಾರಮಂ ಪ್ರಕಟಿಸುವೆಂ ॥

ಗ್ರಂಥಾಂತ್ಯದಲ್ಲಿ ಗ್ರಂಥದ ವಿಷಯವಾಗಿಯೂ ತನ್ನ ವಿಷಯವಾಗಿಯೂ ಈ ಪದ್ಯಗಳನ್ನು ಬರೆದಿದ್ದಾನೆ:—

ಉದ್ಯೋಗಸಾರಮಂ ನಿರ । ವದ್ಯಗುಣಂ ಭವ್ಯಹೃದಯವನಜವನಾರ್ಕಂ ।
ವಿದ್ಯಾವಿದಗ್ಧಸಜ್ಜನ । ಹೃದ್ಯಮೆನಲ್ ಪೇೞ್ದಿನಱ್ತಿಯಿಂದಾತ್ಮಜ್ಞಂ ॥
ಸೂಚಿತರತ್ನತ್ರಿತಯಂ । ಸೂಚಿತಪದರಚಿತಮುದಧಿಪರಿವೃತವಿಲಸ ।
ದ್ಭೂಚಕ್ರದೊಳಿದು ಪಸರಿಸು । ಗಾಚಂದ್ರಾರ್ಕಂ ವಿನೇಯಭಾವ್ಯಂ ಕಾವ್ಯಂ ॥
ಶ್ರುತನಿಧಿವಿಮಲದಯಾಂಬುಧಿ । ನಿತತಯಶೋಧಾಮನೇಮಿಚಂದ್ರಯತೀಂದ್ರ
ಶ್ರುತಲಕ್ಷ್ಮೀದ್ವಿತಯಕ್ಕಂ । ಸುತನೆನಿಸಿ ಸುತತ್ಕದರ್ತಿಯೆನಿಸುವುದರಿದೇ ॥

ಈ ಗ್ರಂಥದಲ್ಲಿ ನೀತಿಬೋಧಕವಾದ ಹಲವು ಪದ್ಯಗಳಿವೆ; ಬಂಧವು ಲಲಿತವಾಗಿಯೂ ಧಾರಾಳವಾಗಿಯೂ ಇದೆ. ಇದರಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

ಪುಸಿಯದ ನರಂಗೆ ವಾಕ್ಸತಿ । ಯೊಸೆಗುಂ ನಡನಡನೆ ನಡುಗಿ ನುಡಿಗೇಳಲೊಡಂ ।
ಬೆಸಕೆಯ್ವುಮಖಿಳಲೋಕಂ । ಜಸಮುಂ ದೆಸೆದೆಸೆಗೆ ಕೂಡಿ ಪಸರಿಸಿಯೆಸಗುಂ
॥ 924 ॥

ನೋಡದೆ ನಿಜಗುಣಹಾನಿಯ । ನಾಡಿದೊಡನ್ಯಾಪನಾದನಮುಂ ನಿನಗದಱಂ ।
ದಾಡಿದವಳಾಡಿ ಹೋದಳ್ । ನೋಡಿದವಳ ಮೂಗು ಹೋದುದೆಂಬವೊಲಕ್ಕುಂ
॥ 925 ॥

ಗುಣಿಯೆನಿಪೊಡಖಿಳವಿಬುಧಾ । ಗ್ರಣಿಯೆನಿಪೊಡೆ ಪರಮಮುಕ್ತಿರಮಣೀಮಣಿಭೂ ।
ಷಣಮೆನಿಪೊಡೆ ಕನಸಿನೊಳಂ । ಗಣಿಯಿಸಲಾಗಿತರದೋಷಮಂ ಸ್ವಗುಣಮುಮುಂ
॥ 926 ॥

ಪೊಗೞ್ವೊಡೆ ನಿನಗಿಲ್ಲದ ಗುಣ । ಮೊಗೆಗುಮೆ ಮೇಣುಳ್ಳ ನಿಜಗುಣಂಗಳ್ ಬೇಗಂ ।
ಜಗುಟ್ಟುಮೆ ತೆಗೞ್ವೊಡೆ ಪೆಜರಿಂ । ಪೊಗೞ್ವಿಗಮ ತೆಗೞ್ವಿಗಮ ಸಮತ್ವಮುಂ
ಪಥೆಯನಜಿಂಗಳ್ ॥ 927 ॥

ಮುನಿಸೊಸಗೆಗಳಂ ಮನದೊಳ್ । ಕನಸಿನೊಳಂ ನೆನೆಯದಾರೊಳಂ ಶಾಂತರಸಂ ।
ತನಗೆ ನಿಜಮೆನಿಪ ಮುನಿಪದ। ವನಜಮನನವರತಮಿರಿಪೆನೆನ್ನಯ ನೊಸಲೊಳ್॥928॥

ಪಗರಣಿಗರುಚಿತವಚನರ್ । ಸೊಗಯಿಪ ಪಲತೆಱದ ಜೋಹಮಂ ಪೊತ್ತು ಮನಂ ।
ಬುಗೆ ನಟಯಿಪಂತೆ ದೇಹಿಗ । ಳಗಣಿತಸಂಸಾರರಂಗದೊಳ್ ನಟಯಿಸುವರ್ ॥929॥

ಹೆಣ್ಣೆಂಬ ಹೆಸರ್ಗೆ ಬಿಂಕೆಯ । ಬಿಣ್ಣಿಯವೋಲ್ ಕರಗಿ ಪರಿವ ಬಡಮನದವಸಂ ।
ಸಣ್ಣಿಗೆಯೊಳರೆದು ಭರದಿಂ। ನುಣ್ಣನೆ ನೊಣೆಯನೆ ಮನೋಜನೆಂಬ ಕೃತಾಂತಂ॥930॥

ಗುಣಲೇಶಮುಮಂ ಚಿಂತಾ । ಮಣಿಯಿಂದಂ ವಿಗಿಲೆ ಕಂಡು ಕೊಂಡಾಡಿ ಮನಃ ।
ಪ್ರಣಯದಿನಾರಾಧಿಸುವಂ । ಗಣನೀಯನೆ ಮರ್ತ್ಯರೊಡನಮರ್ತ್ಯಸ್ತುತ್ಯಂ॥ 931 ॥

ಮತ್ತೆನಿಸಿದಖಿಳಸಂಗನಿ । ವೃತ್ತಂ ನಿಶ್ಶಂಕನೆಯ್ದುಗುಂ ನಿರುಪಹತಂ ।
ಚಿತ್ತಹರಮುಕ್ತಿಪುರಮುಂ । ಬತ್ತಲೆವೋಪಂಗೆ ಬಟ್ಟೆಯೊಳ್ ಭಯಮುಂಟೇ ॥932॥

ರಸೆಯುಂ ಪೊಕ್ಕೊಡನೋನಾ । ಗಸಮುಂ ಭರದಿಂದಮುಡರ್ದೊಡಂ ನೆಲನನಿತಂ ।
ಮುಸಗಿ ತೊಲ್ಲೊಡಮಳ್ಕುಮೆ । ಜಸಮರ್ಥಂ ಸೌಖ್ಯಮಕೃತಪುಣ್ಯಂಗೆಂದುಂ॥933॥

---

## ಕವಿರಾಜಸಂಕಣ್ಣ. ಸು. 1287.[1]

ಈತನು ಸೊರಬದ 294 ನೆಯ ಶಾಸನವನ್ನು ಬರೆದಂತೆ ಆ ಶಾಸನದ ಅಂತ್ಯಭಾಗದಿಂದ ತಿಳಯುತ್ತದೆ. ಈ ಶಾಸನವೇನೋ ಪದ್ಯರೂಪವಾಗಿದೆ. ಆದರೂ ಅಕ್ಷರವೆಲ್ಲಾ ಹೋಗಿರುವುದರಿಂದ ಪದ್ಯಗಳನ್ನು ತೆಗೆದು ಬರೆಯಲಿಕ್ಕಾಗಲಿಲ್ಲ.

---

## ಹಸ್ತಿಮಲ್ಲ. 1290.

ಈತನು ಶಕ 1212 ರಲ್ಲಿ ಒಂದು ಆದಿಪುರಾಣವನ್ನು ಬರೆದಿರುವುದಾಗಿ ತಿಳಯಬರುತ್ತದೆ. ಇವನ ಗ್ರಂಥವು ನಮಗೆ ದೊರೆತಿಲ್ಲ. ಆದರೆ ಮೈ॥ ಕೆ. ಬಿ. ಪಾಠಕರು ಇವನ ಗ್ರಂಥವನ್ನು ನೋಡಿರುವಂತೆ ಬರೆದಿದ್ದಾರೆ.

**ದೇವಚಂದ್ರನು** ರಾಜಾವಳೀಕಥೆಯಲ್ಲಿ (1838) ಒಬ್ಬ ಹಸ್ತಿಮಲ್ಲಾ ಚಾರ್ಯನ ಹೆಸರನ್ನು ಹೇಳಿ ಆತನು ಗುಣಭದ್ರಶಿಷ್ಯನಾದ ವೇದಾಗಮಸ್ತೋತ್ರ ವ್ಯಾಖ್ಯಾನ ಕರ್ತೃವಾದ ಗೋವಿಂದಭಟ್ಟನ ಮಗನೆಂದೂ ಮದದ ಅನೆಯನ್ನು

1. ಸೊರಬದ 291 ನೆಯ ಶಾಸನವನ್ನು ನೋಡಿ.

ಅಡಗಿಸಿದುದರಿಂದ ಅವನಿಗೆ ಹಸ್ತಿಮಲ್ಲ ಎಂಬ ಹೆಸರು ಬಂದಿತೆಂದೂ ಆತನಿಗೆ ಪಾರ್ಶ್ವಪಂಡಿತ ಮೊದಲಾದ ಮಕ್ಕಳು ಇದ್ದರೆಂದೂ ಆತನು ಉಭಯಭಾಷಾಕವಿ ಚಕ್ರವರ್ತಿಯೆನಿಸಿದ್ದನೆಂದೂ ಆತನ ಶಿಷ್ಯ ಲೋಕಪಾಲಾರ್ಯನೆಂದೂ ಹೇಳಿದ್ದಾನೆ. ಈತನು ಮೇಲೆಹೇಳಿದ ಆದಿಪುರಾಣಕರ್ತೃವಾಗಿರಲಾರನು.

---

## ರಟ್ಟಕವಿ ಅಥವಾ ಅರ್ಹದ್ದಾಸ. ಸು. 1300.

ಈತನು **ರಟ್ಟಮತ**ವೆಂಬ ಗ್ರಂಥವನ್ನು ಬರೆದ್ದಿದ್ದಾನೆ.

ಇವನು ಜೈನಕವಿ; ಮಾರಸಿಂಹನ ಚಮೂಪತಿಯಾದ ಕಾಡಮರಸನ ವಂಶದಲ್ಲಿ ಹುಟ್ಟಿದವನು. "ಜಿನನಗರಪತಿ," "ಗಿರಿನಗರಾಧೀಶ್ವರ" ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿರುವುದರಿಂದ ಆವುದೋ ನಗರಕ್ಕೆ ಇವನು ಅಧಿಪತಿಯಾಗಿದ್ದಂತೆ ತಿಳಿಯುತ್ತದೆ. ತನ್ನ ವಂಶಪರಂಪರೆಯನ್ನು ಈ ರೀತಿಯಾಗಿ ಹೇಳಿಕೊಂಡಿದ್ದಾನೆ:—

ಬಾರೆಂದುರೆಯನ್ನು ಜಯಿಸಿದ ಮಾರಸಿಂಹರಾಜನ ಮತದಿಂದ, ಜಿನನಗರವಲ್ಲಭನಾದ ದ್ವಿಜವಂಶತಿರೋಮಣಿ ಕಾಡಮರಸನು ತಳಕಾಡು ಕೋಟೆಯನ್ನು ಮುತ್ತಿಕೊಂಡಿದ್ದ ಚಕ್ರವರ್ತಿಯ ದಂಡನ್ನು ನಾಶಮಾಡಿ ಧ್ವಜವನ್ನು ಮುರಿದು ಶತ್ರುಗಳನ್ನು ಕೊಂದು ಹನ್ನೆರಡು ಜನ ಸಾಮಂತರ ಗೆಲಿದು ತನ್ನ ದೊರೆಯನ್ನು ತಣಿಪಿ ದೊರೆಯಿಂದ 25 ಗ್ರಾಮಗಳನ್ನು ಪಡೆದನು. ಕಾಡಮರಸನ ಮಗ ಪ್ರಭುಚೋರ; ಮಗ ಆಯಕ, ಮಗ ಶುಭಾಕರ, ಮಗ ಧಾವ, ಮಗ ಶಿವಮಾರಿದೇವ, ಮಗ ಜನಾರ್ದನ, ಮಗ ಎರಗಂಗ, ಮಗ ಎರೆಯಪ, ಮಗ ಕಲಿವಿಕ್ರಮಾರ್ಯ, ಮಗ ಕಾಡಮರಸ. ಇವನ ಸಂತತಿಯಲ್ಲಿ ಕುಂಚ, ಮೊಮ್ಮಗ ಮಾಚ, ಮಗ ದೋರಯ್ಯ, ಮಗ ತಾರಯ್ಯ, ಮಗ ನಾಗಕುಮಾರ, ಮಗ 'ನಾಲ್ಕು ತ್ರೊಂದೊಕ್ಕಲ ಕುಲಕೆಲ್ಲಂ ತಿಲಕಂ' ಭಾರದ್ವಾಜಗೋತ್ರದ ಚಿಕ್ಕಪಯ್ಯ, ಮಗ ಗಂಗರ ವಿಶ್ವಾಸಕ್ಕೆ ಪಾತ್ರನಾಗಿ ಶಾಸ್ತ್ರಗಳಲ್ಲಿ ಪರಿಣತನಾದ ಕುಂಚತೇಜ ಅಥವಾ ಜಯಬಂಧು. ತ್ರಿಮೂರ್ತಿಗಳಂತೆ ಫಳಿಯಮರ್ಮ, ಜಸನಯ್ಯ, ಮಾಚಮಯ್ಯ ಎಂಬ ಮೂವರು ಪ್ರಭುಗಳಿದ್ದರು.

ಮೇಲೆ ಹೇಳಿದ ನಾಗಕುಮಾರನ ಮಗನೇ ರಟ್ಟವೆಡಂಗ, ಸುಕವಿನಿಧಾನ ಮೊದಲಾದ ಬಿರುದುಗಳುಳ್ಳ **ರಟ್ಟಕವಿ**. ಈತನು, "ಬೂತುಗನಣುಗಂ" ಎಂದು ಹೇಳಿಕೊಂಡಿರುವುದರಿಂದ ನಾಗಕುಮಾರನಿಗೆ ಬೂತುಗ ಎಂಬ ಹೆಸರೂ ಇದ್ದಿರಬಹುದೆಂದು ತೋರುತ್ತದೆ. ಈ ಕವಿ ತನಗೆ ಅನೇಕ ಬಿರುದುಗಳನ್ನು ಹೇಳಿಕೊಂಡಿರುವುದರಿಂದ ಇವನ ನಿಜವಾದ ಹೆಸರು ಇಂಥದೆಂದು ನಿಶ್ಚಯಿಸುವುದು ಕಷ್ಟವಾಗಿದೆ. ಈ ಗ್ರಂಥವನ್ನು ಕನ್ನಡದಲ್ಲಿ ತನ್ನ ಮಗಳಿಗೆ ಹೇಳಿದಂತೆ ತಿಳಿಸುವ

"ನೆಗಟ್ಟಿಭಯಾಂಬುಧಿ ನಿಜಸುತೆಗೆ ಚಂದ್ರಲೇಖೆಗೆ ಪೇಟ್ಟಿಪಂ ಕನ್ನಡದಿಂ" ಎಂಬ ಪದ್ಯಭಾಗದಿಂದ ಈತನ ಹೆಸರು ಅಭಯಾಂಬುಧಿ ಎಂದು ಊಹಿಸಬಹುದಾಗಿದೆ.

ಮಾರಸಿಂಹನೆಂಬ ಗಂಗರಾಜನು 961 ರಿಂದ 974 ರ ವರೆಗೆ ಆಳಿದಂತೆ ತಿಳಿಯುತ್ತದೆ. ಕವಿಯ ವಂಶದ ಮೂಲಪುರುಷನಾದ ಕಾಡಮರಸನು ಇವನ ಬಳಿ ಇದ್ದಿರಬೇಕು. ಈ ಕಾಡಮರಸನಿಂದ ಕವಿಗೆ ಸುಮಾರು 15 ತಲೆಯಾಗುವುದರಿಂದ ಅವನ ಕಾಲದಿಂದ ಬಹುಶಃ ಮುನ್ನೂರು ವರ್ಷ ಈಚೆ ಕವಿ ಇದ್ದಿರಬಹುದು. ಶಕ 14ನೆಯ ಶತಮಾನದಲ್ಲಿದ್ದ ಭಾಸ್ಕರನೆಂಬ ಆಂಧ್ರಕವಿ ಈ ರಟ್ಟ ಮತವನ್ನು ತೆಲುಗಿನಲ್ಲಿ ಭಾಷಾಂತರ ಮಾಡಿದಂತೆ ತಿಳಿವುದರಿಂದ[1] ಈತನು ಅವನಿಗೆ ಹಿಂದೆ ಇದ್ದಿರಬೇಕು. ಆದುದರಿಂದ ಸುಮಾರು 1300 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ.

ತಿಂದಣ ಗ್ರಂಥಗಳನ್ನೂ ಗ್ರಂಥಕರ್ತರನ್ನೂ ಈ ಪದ್ಯಗಳಲ್ಲಿ ಹೇಳಿದ್ದಾನೆ:—

ಚಂದಿರಭಟ್ಟರ[2] ದಯೆಯಿಂ । ಸಂದೆಯಮಣಮಿಲ್ಲದಂತು ಕಲ್ಪುದು ಮಟ್ಟಿಯಂ ॥
ಅತಿಶಯರತ್ನೋಜ್ಜ್ವಲಸಂ । ಕೃತಿಯೊಳ್ ಧನಕೀರ್ತಿಯೊಳ್ ವರಾಹಮಿಹಿರದೊಳ್ ॥
ರತಿಯೊಳ್ ಗಾಗರ್ಗ್ಯಾಚಾರ್ಯನ । ಮತದೊಳ್ ಸಲೆಮೇಘಮಾಲೆಯೊಳ್ ನಯದಿಂದಂ ॥
ಎಸೆವ ಮಟ್ಟಿ[3] ಜಟ್ಟಸೊಳ್ ಜೋ । ಯಿಸಚಕ್ರಿಯೊಳುದಿತಕೀರ್ತಿನಾರಾಯಣನೊಳ್ ॥
ಮಿಸುಪ ಶಕುನಂಗಳೊಳ್ ಭಾ । ವಿಸೆ ಪೇಟ್ಟಿಂ ಮಟ್ಟಿಯಕುಜುಪನೊಳ್ಪಿನ ಜಟ್ಟಂ॥
ನಂದಾಚಾರ್ಯರ್ ಮಾಡಿದರ್ಘಖಂಡಮಂ ಪೇಟ್ಟಿಂ ॥

ತನ್ನ ಗುಣಾದಿಗಳನ್ನು ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ:—

ಜನಕನುರಾಗದೆ ನೆಗಟ್ಟಿಂ । ಜನನುತಗುಣೆ ವಿತತಕೀರ್ತಿರಮಣೀರಮಣಂ ।
ಮನಸಿಜಸನ್ನಿಭನೆನಿಸಿದ । ವಿನಯಗುಣೋತ್ತುಂಗನೆಸೆವ ಜಟ್ಟವೆಡಂಗಂ ॥
ಗುಣಪಕ್ಷಪಾತಿ ಬೂತುಗ । ನಣುಗಂ ವಿನಯಾಂಬುರಾಶಿ ಸುಕವಿನಿಧಾನಂ ।
ಪ್ರಣುತಜಿನಭಕ್ತನೊಪ್ಪಿನ । ಕಣಿ ನಿರ್ಮಳಕೀರ್ತಿನೇಮಿ ಪೃಸಿನರ ಶೂಲಂ ॥

ಇದಲ್ಲದೆ ಅಲ್ಲಲ್ಲಿ ನಯಬಂಧು, ಜಿನದಾಸ, ಅರ್ಹದ್ದಾಸ, ಸಮ್ಯಕ್ತ್ವರತ್ನಾಕರ, ರಟ್ಟಕಂದರ್ಪ, ಕವಿಗಳಾಭರಣ, ರಟ್ಟಕವೀಂದ್ರ, ಕವಿಕಂಜಸಂಭವ, ಜಿನನಗರಪತಿ, ಸಹಜಕವೀಶ್ವರ, ಜಿನಧರ್ಮವತ್ಸಲ, ಗಿರಿನಗರಾಧೀಶ್ವರ ಎಂಬ ವಿಶೇಷಣಗಳು ದೊರೆಯುತ್ತವೆ.

---

1. *Biographical Sketches of Dekkan Poets*, 96. Wilson's *Mackenzie Collection*, 303.
2. ಪುಟ 73.

ಇವನ ಗ್ರಂಥ

## ರಟ್ಟಮತ ಅಥವಾ ರಟ್ಟಸೂತ್ರ.

ನಮಗೆ ದೊರೆತ ಅಸಮಗ್ರಪ್ರತಿಯಲ್ಲಿ ವೃತ್ತ, ಕಂದ, ರಗಳೆ, ಅಕ್ಕರ, ತ್ರಿಪದಿ ಎಲ್ಲಾ ಸೇರಿ ಸುಮಾರು 900 ಇವೆ. ಈ ಭಾಗದಲ್ಲಿ ಈ ವಿಷಯಗಳು ಪ್ರತಿಪಾದಿತವಾಗಿವೆ:—

ಮಳೆಯ ಕುರುಹು, ಆಕಸ್ಮಿಕಲಕ್ಷಣ, ಶಕುನ, ವಾಯುಚಕ್ರ, ಗೋಪ್ರವೇಶ, ಭೂಕಂಪ, ಭೂಜಾತಫಲ, ಮಳೆಯನಯ, ಉತ್ಪಾತಲಕ್ಷಣ, ಪರಿವೇಷಲಕ್ಷಣ, ಇಂದ್ರಧನುರ್ಲಕ್ಷಣ, ಪ್ರಥಮಗರ್ಭಲಕ್ಷಣ, ದ್ರೋಣಸಂಖ್ಯೆ, ಮಿಂಚಿನಲಕ್ಷಣ, ಪ್ರತಿಸೂರ್ಯಲಕ್ಷಣ, ಸಂವತ್ಸರಫಲ, ಗ್ರಹಂಗಳ ಪಗೆಕೆಳೆ, ಮೇಘಗಳ ನಾಮಕುಲವರ್ಣಧ್ವಾನವಿಚಾರ, ದೇಶವೃಷ್ಟಿ, ಮಾಸಫಲ, ರಾಹುಚಕ್ರ, ನಕ್ಷತ್ರಫಲ, ಬಿತ್ತುವ ಶಕುನ, ಉದಕಾರ್ಗಳ, ಸಂಕ್ರಾಂತಿಫಲ.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

ಸ್ವೇದಜಮಂಡಜಬೀಜಜ । ಮಾದರದ ಜರಾಯುಜಂಗಳೆನಿಸಿದ ನಾಲ್ಕುಂ।
ಭೇದದ ಸಸ್ಯೋತ್ಪತ್ತಿಗೆ । ಮೇದಿನಿ ಜಲಮರ್ಕರಶ್ಮಿ ಪವನಂ ಮುಖ್ಯಂ ॥ 934 ॥

ಖರಕರನ ತಾಪದಿಂದಂ । ಧರಣಿತಳಂ ಬೀಡೆವಿಟ್ಟು ತಾಪದೊಳಂ ಭೋ ।
ರ್ಗರೆದು ಮಲ್ಲಿಗಜಯೆ ವಿಶ್ವಂ । ಭರೆ ಬೆಳಿಗುಂ ಮನಕೆ ಬಂದ ಧಾನ್ಯವ್ರಜಮಂ
॥ 935 ॥

ಮಾವು ಬರೆನವಣೆ ಬೆಳಿಗುಂ । ಬೇವಿನೊಳಿಳ್ಳಕ್ಕು ಮೆಸೆವ ಹುಣಿಸೆಗಳೊದವಿಂ ।
ಭಾವಿಸೆ ನೆಲ್ಲುಂ ಬೆಳಿದಪು । ದಾವುದುಮೆಕ್ಕೆಯೊಳಿ ಬೆಳೆವುದೊಳ್ಪಿನಜಿಟ್ಟಾ ॥ 936 ॥

ದಿವಸಕರದೀಪ್ತಿಯುಂದುವಿ । ನವೊಲಿರೆಯುಂ ತಾಂ ಘನಾಳಿ ಕಾಗೆಯ ಬಸಿಱಿಂ ।
ದವನೊಳಕೊಂಡಿರೆಯುಂ ತಿಂ । ಡುವ ಪವನಂ ನಿರುತಿಯೊಳಗೆ ಮಳ್ತಿಯಿಲ್ಲೆಂದಂ
॥ 937 ॥

ಜಲಜಸಖಬಿಂಬಮತ್ತು । ಜ್ವಲಮಪ್ಪೊಡೆ ವಾಯು ಪವನನೊಳ್ ಬೀಸುವೊಡಂ ।
ಜಲದಂಗಳ ರುಚಿಗಳ್ ನಿ । ರ್ಮಳಮಪ್ಪೊಡಮಧಿಕವೃಷ್ಟಿಯಕ್ಕುಂ ಜಿಟ್ಟಾ ॥ 938 ॥

ಕಾಗೆ ಬಿಳಿದಾದೊಡಿರುಳಾ । ದಾಗಳ್ ಸುರಚಾಪಮಾದೊಡಂ ಕಪ್ಪೆಗೆ ಚೆ ।
ಲ್ವಾಗಿಯೆ ಚಂಡಿಕೆ ನೆಗೆದೊಡ । ಮಾಗದು ಮಳ್ತಿ ಡಾವರಂಗಳಕ್ಕುಂ ಜಿಟ್ಟಾ ॥ 939 ॥

ಬಾವಿಯು ಕೇರನಿಟ್ಟಿಗೆಯಿ ಕಟ್ಟಿಸು ಸುಣ್ಣಮನಿಕ್ಕು ಕಲ್ಲೊಳಾ ।
ಪೋ. ಡೆಗೊಳ್ಳದಂತರಿಸೆ ಕಟ್ಟಿಸು ಕರ್ಚಿನೊಳಿಕ್ಕು ಮತ್ತಮಾ ॥
ಬಾವಿಯ ಬಟ್ಟೆ ನೀಳ್ವಗಲೆ ಕಲ್ಲುಗಳನೊಳ್ಳಿತನಿಕ್ಕು ಮತ್ತೆ ನೀಂ ।
ಬಾವಿಯ ಸುತ್ತಲುಂ ಮದಿಲನಿಕ್ಕಿಸು ಮಾಡಿಸುಧೀರ ಭಾಜಿಕಂ (?) ॥ 940 ॥

ನೆಲ್ಲಿಯಸಟ್ಟುಬಾಳಮಸಿತಾಂಜನವೊಳ್ಳಿಹಮುಸ್ತೆಯ. ಕೇ ।
ಡಿಲ್ಲದ ಚಿಲ್ಲಗೊಟ್ಟೆಪೊಸಪೀರೆಯಬಿತ್ತಿನೊಳಾದ ಬೂದಿಯಂ ॥
ನಿಲ್ಲದೆ ಬಾವಿಯೊಳ್ ಕೆಲ ..... ಬಾಜಿದೂಜಿಲೊಳ್ ।
ಪೊಲ್ಲನಿವೆಂಬ ಬಾವಿಗಳ ನೀರಮೃತೋಪಮವಾಗೆ ಜಟ್ಟಿಗಾ ॥ 941 ॥

---

## ಚೌಂಡರಸ. ಸು. 1300.

ಇವನು ಅಭಿನವದಶಕುಮಾರಚರಿತೆಯನ್ನು ಬರೆದಿದ್ದಾನೆ.

ಈತನು ಬ್ರಾಹ್ಮಣಕವಿ; ಭಾರದ್ವಾಜಗೋತ್ರದವನು. "ಉದ್ದಂಡ ಮನೋಹರಪ್ರಚುರಶಿಷ್ಯಂ" ಎಂದು ಹೇಳಿಕೊಂಡಿದ್ದಾನೆ. ಇವನ ತಂದೆ ಮಧುಸೂದನ; ತಾಯಿ ಮಲ್ಲಮ್ಮೆ; ಹೆಂಡತಿ ಲಕ್ಷ್ಮಿ. ತನ್ನ ಅಣ್ಣನು 'ಸರಸಕವೀಶ್ವರ'[1] ಎಂದು ಹೇಳಿದ್ದಾನೆ. ಗ್ರಂಥಾರಂಭದಲ್ಲಿ 'ಪಂಡರೀರಾಯನಭಂಗವಿಟ್ಠಲನಲಂಪಿನೊಳೀಗೆ ಮಗಿಷ್ಟಸಿದ್ಧಿಯಂ' ಎಂದು ಸ್ತುತಿಸಿ, ಹದಿನಾಲ್ಕನೆಯ ಆಶ್ವಾಸದಲ್ಲಿ ಪಂಡರಾಪುರದ ದೇವಸ್ಥಾನವನ್ನು ವರ್ಣಿಸಿ ಕಥಾನಾಯಕಮುಖೇನ ವಿಟ್ಠಲದೇವರನ್ನು ಒಂದು ಅಷ್ಟಕದಿಂದ ಸ್ತೋತ್ರಮಾಡುವುದರಿಂದ ಈತನು ಪಂಡರಾಪುರದವನಾಗಿರಬಹುದು, ಅಥವಾ ವಿಟ್ಠಲದೇವರು ಇವನಿಗೆ ಕುಲದೈವವಾಗಿರಬಹುದು.

ಸಕಲಾಂತರ್ಯಾಮಿ ಜೀವಪ್ರಕರವಿವಿಧಚೈತನ್ಯರೂಪಂ ಜಗದ್ಯಾ ।
ಪಕಭಾವಂ ವಿಷ್ಣುವೆಂದಾಗಮತತಿ ಸತತಂ ಸಾರ್ವ ಸಂಬಂಧದಿಂ ಕೌ ॥
ತುಕದಿಂದಾನಾವುದಂ ಬಣ್ಣಿಸಿದೊಡದು ಪರಿಸ್ತೋತ್ರನೆಂದಿಗಳೀಚಿ ।
ತ್ರಕಥಾವಿಸ್ತಾರಮಂ ಬಣ್ಣಿಸಲೊಡರಿಸಿದೆಂ ಸತ್ಕವಿಶ್ರೇಣಿ ಮೆಚ್ಚಲ್ ॥

ಎಂಬುದರಿಂದ ಈತನು ವಿಷ್ಣುಭಕ್ತನೆಂಬಂಶವು ವ್ಯಕ್ತವಾಗುತ್ತದೆ.

ಪೂರ್ವಕವಿಗಳಲ್ಲಿ ರುದ್ರಭಟ್ಟನನ್ನು (ಸು. 1180) ಸ್ತುತಿಸಿರುವುದರಿಂದ ಕವಿ ಆವನ ಕಾಲಕ್ಕೆ ಈಚೆಯವನು ಎಂಬುದು ವ್ಯಕ್ತವಾಗಿದೆ. ಎಷ್ಟು ಕಾಲ ಈಚೆ ಇದ್ದನು ಎಂದು ನಿರ್ಧರಿಸುವುದಕ್ಕೆ ಸಾಕಾದ ಆಧಾರವು ದೊರೆತಿಲ್ಲ. ಸುಮಾರು 1300 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ.

ಈತನಿಗೆ ಸರಸಕವಿ, ಕವಿರಾಜಶೇಖರ ಎಂಬ ಬಿರುದುಗಳಿದ್ದಂತೆ ತೋರುತ್ತದೆ. ಪೂರ್ವಕವಿಗಳನ್ನು ಈ ಪದ್ಯದಲ್ಲಿ ಸ್ಮರಿಸುತ್ತಾನೆ:—

ಪೊಗಟ್ಪಿಂ ಲಕ್ಷಣಲಕ್ಷ್ಮಿತಾದ್ಭುತವಚೋನಿಷ್ಕಂಪನಂ ಪಂಪನಂ ।
ಜಗತೀಪ್ರೀತಿಕರಪ್ರಸಿದ್ಧಕವಿತಾಸಂಪನ್ನನಂ ಪೊನ್ನನಂ ॥

1. ಈತನು ಆವಗ್ರಂಥಗಳನ್ನು ಬರೆದಿದ್ದಾನೆಯೋ ತಿಳಿಯದು.

ಸುಗಮಾರ್ಥಸ್ಫುಟಶಬ್ದಸುಂದರಕಿರದ್ವಾಕ್ಚಾಂದ್ರನಂ ಚಂದ್ರನಂ ।
ಭಗವದ್ವಿಷ್ಣುಕಥಾವತಾರರಚಿತಶ್ರೀಭದ್ರನಂ ರುದ್ರನಂ ॥

ತನ್ನ ವಿಷಯವನ್ನೂ ಗುಣಾದಿಗಳನ್ನೂ ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ :—

ದ್ವಿಜವಂಶಾಂಬುಧಿಪೂರ್ಣಚಂದ್ರನಸಮಖ್ಯಾತಂ ಭರದ್ವಾಜಗೋ ।
ತ್ರಜನುದ್ದಂಡಮನೋಹರಪ್ರಚುರಶಿಷ್ಯಂ ದಾನಕಲ್ಪದ್ರುಮಂ ॥
ತ್ರಿಜಗನ್ಮಂಗಳಮೂರ್ತಿ ವಿಟ್ಠಲಪದಾಂಭೋಜಾತಭೃಂಗಂ ಗುಣ ।
ವ್ರಜಯುಕ್ತಂ ಕವಿತಾವಿಳಾಸನೆ ವಲಂ ಚಾಂಡಂ ದಯಾಮಂಡನಂ ॥
ವರಮಧುಸೂದನಂ ಜನಕನೊಪ್ಪುವ ಮಲ್ಲವೆ ಮಾತೆಯುಗ್ರಜಂ ।
ಸರಸಕವೀಶ್ವರಂ ತನಗೆ ವಲ್ಲಭೆ ಲಕ್ಷ್ಮಿಯೆನಿಪ್ಪ ಪೆಂಪು ಬಿ ॥
ತ್ತರಿಸುವೊಡಗ್ಗಳಂ ನಿಜಮೆನಲ್ ಮೆಜ್ಜವಂ ಹರಿಪಾದಶೋಣಪಂ ।
ಕರುಹಮಧುವ್ರತಂ ಸುಕವಿಚಾಂದರಸಂ ಕವಿರಾಜಶೇಖರಂ ॥

ಇವನ ಗ್ರಂಥ

## ಅಭಿನವ ದಶಕುಮಾರಚರಿತೆ.

ದಂಡಿಕವೀಶ್ವರನು ಸಂಸ್ಕೃತದಲ್ಲಿ ರಚಿಸಿರುವ ಗ್ರಂಥವನ್ನು ತಾನು ಚಂಪೂರೂಪವಾಗಿ ಕನ್ನಡಿಸಿದಂತೆ

ಮೊದಲೊಳ್ ದಂಡಿಕವೀಶ್ವರಂ ದಶಕುಮಾರಾಖ್ಯಾತಚಾರಿತ್ರಮಂ ।
ಪದಪಿಂ ಸಂಸ್ಕೃತಭಾಷೆಯಿಂ ರಚಿಸಿದಂ ಧಾತ್ರೀಜನಸ್ತೋತ್ರಸ ॥
ಮ್ಮದಮಪ್ಪಂತದನಾಂ ಪ್ರಸಿದ್ಧಿಯವತಾರಾಕಾರಮಂ ನಟ್ಟುವಂ ।
ವಿದಿತಂ ರಂಗದೊಳಾಡಿ ತೋರ್ಪ ತೆಱದಿಂ ಪೇೞ್ವೆಂ ಸುಕರ್ಣಾಟದಿಂ ॥

ಎಂಬ ಪದ್ಯದಲ್ಲಿ ಹೇಳುತ್ತಾನೆ.

ನಮಗೆ ದೊರೆತ ಅಸಮಗ್ರಪ್ರತಿಯಲ್ಲಿ 13 ಆಶ್ವಾಸಗಳೂ 14 ನೆಯ ದರಲ್ಲಿ ಎಪ್ಪತ್ತು ಪದ್ಯಗಳೂ ಇವೆ. ಮಂತ್ರಗುಪ್ತ ನಿರೋಷ್ಯ ಕಥಾವೃತ್ತಾಂತವೆಂಬ 13 ನೆಯ ಆಶ್ವಾಸವನ್ನು ಮಾತೃಕೆಯಲ್ಲಿರುವಂತೆಯೇ ನಿರೋಷ್ಯವಾಗಿ ಬರೆದಿದ್ದಾನೆ.

ಗ್ರಂಥಾವತಾರದಲ್ಲಿ ಪಂಡರೀರಾಯನಾದ ಅಭಂಗವಿಟ್ಠಲನನ್ನು ಸ್ತುತಿಸಿದ್ದಾನೆ. ಬಳಿಕ ಲಕ್ಷ್ಮಿ, ಈಶ್ವರ, ಪಾರ್ವತಿ, ಬ್ರಹ್ಮ, ಸರಸ್ವತಿ, ವಿನಾಯಕ, ಚಂಡಿಕೆ ಇವರನ್ನು ಕ್ರಮವಾಗಿ ಸ್ಮರಿಸಿದ್ದಾನೆ.

ಆಶ್ವಾಸಗಳ ಕೊನೆಯಲ್ಲಿ ಈ ಗದ್ಯವಿದೆ :—

ಇದು ನಿಖಿಲಬುಧಜನಮನೋವನಜವನದಿವಾಕರಕಿರಣಪ್ರತಿಮ ಪ್ರಸನ್ನಶ್ರೀಮದ ಭಂಗವಿಟ್ಠಲಪದಾಂಭೋಜಮತ್ತಮಧುಕರ ಮಧುಸೂದನನಂದನ ಸರಸಕವಿ ಚೌಂಡರಾಜ ವಿರಚಿತಮಪ್ಪ ಅಭಿನವದಶಕುಮಾರಚರಿತದೊಳ್.

ಇವನ ಬಂಧವು ಲಕ್ಷಣಬದ್ಧವಾಗಿಯೂ -ಲಲಿತವಾಗಿಯೂ ಇದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ : —

## ನೆಲ್ಲ ಗದ್ದೆ.

ದೆಸೆಗೆ ಕವಲ್ತು ಗಂಟೊಡೆದು ನುಣ್ಪಸುರಿಂ ಪೊರೆಯೇಱಿ ಕೊರ್ಬಿಯುಂ।
ಬ್ಬಿಸಿ ಪೊಡೆದುಂಬಿ ಪಾಲ್ದೆನೆಗಳುರ್ಬಿ ಕರಂ ತಲೆವಾಗಿ ಬಿಣ್ಪಿನಿಂ ॥
ದೆಸೆವುವು ನೀಳ್ದ ತಮ್ಮ ಮುಖದೊಪ್ಪಮನೊಪ್ಪಿರೆ ನೀರ್ಗಳೊಳ್ ನಿರೀ।
ಕ್ಷಿಸುವವೊಲಾವಗಂ ಕಣಿಶಸಂತತಿಗಳ್ ಕಳಮಪ್ರದೇಶದೊಳ್ ॥ 942 ॥

## ಮಂದಮಾರುತ.

ಅಲರ್ದಲರ್ದೊಂಗಲಂ ಕುಣಿಸುತುಂ ಸೊನೆಸೋನೆಯನೆಯೆ್ದು ಸೂಸುತುಂ।
ತಳಿರ್ಗಳನಿಂಪಿನಿಂ ನುಸುಳುತುಂ ಮಕರಂದಮನಪ್ಪುತುಂ ಕೊಳಂ ॥
ಗಳ ತಡಿಯೊಳ್ ವಿಹಾರಿಸುತೆ ಪಾಡುವ ಸೋಗೆಗಳಂ ಬಿದಿರ್ಚುತುಂ।
ಪಲವು ವಿನೋದದಿಂ ಸುಟ್ಟಿವುದಾಬನದೊಳ್ ವಿಗೆ ಮಂದಮಾರುತಂ ॥ 943 ॥

## ಮಾವು.

ತಳಿರ್ವನೆಯೊಳ್ ಪೊರಳ್ದು ಸೊನೆಬಿಂದುಗಳೊಳ್ ನಸುನಾಂದು ಗಂಡುಗೋ।
ಗಿಲೆಗಿಳಿದುಂಬಿಗಳ್ಗಗಿದು ತಂಕಣಗಾಳಿಗೆ ಕಂಪಿಸುತ್ತೆ ಪೂ ॥
ಗಳನುಜಿ ನೂಂಕೆ ಚೈತ್ರವಿಟನೊಳ್ ವಿರಹಾತುರೆಯಾದ ಕಾಂತೆಪೋಲ್।
ವಿಲಸಿತಮಾಗಿ ಮಾಮರದೊಳಿರ್ದುವು ಮಾವಿನ ಪಣ್ಗಳೋಳಿಗಳ್ ॥ 944 ॥

## ಬಕ್ಕೆವಲಸು.

ಕುಸುಮಂ ತೀವಿ ಪೊರ್ದುಗುಂ ಮಧುಪಸಂಗಕ್ಲೇಶಮೆಂದಂತದಂ।
ಬಿಸುಟತ್ಯದ್ಭುತದಿಂ ಮೊದಲ್ತುದಿವರಂ ಕಾಯ್ತ್ತಿಜ್ಗಳಂ ಪೇಱಿ ಕ ॥
ಣ್ಗಿಸೆದೊಪ್ಪಂಬಡೆದಿರ್ಪ ಬಕ್ಕೆವಲಸಂ ಮುಂ ಕಂಡು ಪದ್ಮೋದ್ಭವಂ।
ರಸವಸ್ತುಪ್ರಕರಂಗಳಂ ಬಟ್ಟಿಕದೇಂ ಮಾಡಲ್ ಮನಂದಂದನೋ ॥ 945 ॥

### ಮಕ್ಕಳ ಬಯಕೆ.

ಚಿಲಿಪಿಲಿಗುಟ್ಟು ನುಣ್ದೊಡೆಳ್ಗಳಿಂ ಕೆವಿಗಿಂಪನೊಡರ್ಚಿ ಗೆಜ್ಜೆಗಳ್।
ಫಲಿಕೆನಿಪಂತಿರೆಯ್ದಿ ಬಿಗಿಯಪ್ಪಿ ಕುಚಂಗಳನುಂದು ಸೋಂಕಿಬೊಳ್॥
ಮಲಗಿ ಮನಕ್ಕೆ ಸಮ್ಮದಮನೀವ ಕುಮಾರಕನಂ ಮದೀಯಸ।
ತ್ಕುಲಗೃಹದೀಪನಂ ಪಡೆವ ಸೈಪಿನ ಸುಗ್ಗಿಯದೆಂದು ಸಾರ್ಗುಮೋ ॥ 946 ॥

### ಕತ್ತಲೆ.

ಸೋಂಕಿಂ ಸ್ಥಾವರಮುಂ ಮಾ। ತಂ ಕೇಳ್ದುದರಿಂದೆ ಜಂಗಮುಂಗಳನಱಿವರ್।
ತಾಂ ಕಾಣ್ಕೆಗರಿದೆನಲ್ ಬಗೆ। ಗೆಂ ಕಡುಮಂದೈಸಿ ನಿಂದುದೋ ಘನತಿಮಿರಂ
॥ 947 ॥

ಬಗಿದು ಪುಗಲರಿದು ನೋಡಲ್। ಬಗೆಯಲಾ ಕಣ್ಗಳ್ಗಮೊಯ್ಯನಡಿಯಿಡೆ ಚಿತ್ತ।
ಕ್ಕೊಗೆಗುಮತಿಭೀತಿಯೆನಲು। ರ್ವಿಗೆ ದಟ್ಟೈಸಿದುದಂಧಕಾರಾಕಾರಂ ॥ 948 ॥

ಪದೆಪಿಂದಂಬರಲಕ್ಷ್ಮಿಯಿಚ್ಚಿಕೊಳಲೆಂದೆತ್ತುಕ್ಕದಿಂ ಕಜ್ಜಳಂ।
ಪುದಿದೊಪ್ಪಿರ್ದ ಕರಂಡಮಂ ತೆಗೆದು ತನ್ನುತ್ತಾಹದಿಂ ನುಚ್ಚುಳಂ॥
ಮುದದಿಂದಂ ತೆಗೆಯುತ್ತುಮಿರ್ಪ ಪದದೊಳ್ ಕೆಯ್ಯಪ್ಪಿ ಬಿಟ್ಟಿಂಜನಂ।
ಕೆದಱುತ್ತಿಂಬಿನಮುರ್ಬಿ ಮರ್ಬು ಪರಿದತ್ತತ್ತಂ ದಿಶಾಭಿತ್ತಿಯೊಳ್ ॥ 949 ॥

### ಧರ್ಮ.

ಗಾಡಿಯೊಳರ್ಥಕಾಮಮೆರಡಂ ಗೞ್ದಿಸಲ್ ಬಗೆದಂದು ಧರ್ಮಮಂ।
ನೋಡಿದೊಡಂತದೆಲ್ಲಿಯದು ಸಂತತನಿರ್ಮಳಮಪ್ಪ ಧರ್ಮಮಂ॥
ಮಾಡುವೊಡರ್ಥಕಾಮಮೆರಡುಂ ಕಿಡವೆಂದಱಿದಿರ್ದು ಧರ್ಮದೊಳ್।
ಕೂಡುವರೇಕೆ ಮಿಕ್ಕ ಪುರುಷಾರ್ಥಮನಜ್ಜರೆಸಿಪ್ಪ ಮಾನವರ್ ॥ 950 ॥

---

## ನಾಚಿರಾಜ. ಸು. 1300.

ಈತನು ಅಮರಕೋಶಕ್ಕೆ ಕನ್ನಡದಲ್ಲಿ ಒಂದು ವ್ಯಾಖ್ಯಾನವನ್ನು ಬರೆದಿದ್ದಾನೆ; ಇದಕ್ಕೆ ನಾಚಿರಾಜೀಯವೆಂದು ವ್ಯವಹಾರವಿದೆ.

ಇವನು ಜೈನಕವಿ; ಶ್ರವಣಬೆಳ್ಗೊಳದ ಮಠದಲ್ಲಿರುವ ಅಮರಕೋಶದ ಒಂದು ಕನ್ನಡವ್ಯಾಖ್ಯಾನದ ಕೊನೆಯಲ್ಲಿ—"ಶಕ 1318 ನೆಯ ಯುವದಲ್ಲಿ (1395) ರಾಯರಾಜಗುರುಮಂಡಲಾಚಾರ್ಯ ರಾಯವಾದಿಪಿತಾಮಹ ಸಕಲ ವಿದ್ವಜ್ಜನಚಕ್ರವರ್ತಿ ನಿಖಿಳಶಾಸ್ತ್ರವ್ಯಾಖ್ಯಾನವಿಚಾರದ ಶ್ರೀಮಲಧಾರಿನಾಗಚಂದ್ರ

ಭಟ್ಟಾರಕರ ಶಿಷ್ಯರಪ್ಪ ಶ್ರೀಧರ್ಮಭೂಷಣ ಶ್ರೀಅಭಯಚಂದ್ರಸೈದ್ಧಾಂತಿಕದೇವರು ಬರೆದ ಶ್ರೀಪಂಚಪರಮೇಷ್ಠಿಗಳ ಸ್ವರೂಪ, ಯೋಗಾವೃತ, ಅಮರಸಿಂಹದ ವೃತ್ತಿ, ನಾಚಿರಾಜ, ಕೌಮಾರವ್ಯಾಕರಣ"—ಎಂದು ಇರುವುದರಿಂದ ನಾಚಿರಾಜನ ಈ ವ್ಯಾಖ್ಯಾನವು ಆ ವರ್ಷಕ್ಕೆ ಹಿಂದೆ ಇದ್ದಿತೆಂಬುದು ಸ್ಪಷ್ಟವಾಗಿಯೇ ಇದೆ. ಮೂಡಬಿದರೆಯಲ್ಲಿರುವ ನಾಚಿರಾಜೀಯದ ಪ್ರತಿಗಳಲ್ಲಿ ಧನಂಜಯ, ರಭಸ, ಇವರುಗಳ ಗ್ರಂಥಗಳನ್ನು ನಾಚಿರಾಜನು ಉಪಯೋಗಿಸಿದಂತೆ ತಿಳಿವುದರಿಂದ ಅವರ ಕಾಲಕ್ಕೆ ಈಚೆ ಇದ್ದಿರಬೇಕು; ಸುಮಾರು 1300 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ.

---

## ಯಶಶ್ಚಂದ್ರ. ಸು. 1300.

ಈ ಜೈನಕವಿಯ ಹೆಸರನ್ನು **ಮಧುರ**ನು (ಸು. 1385) ತನ್ನ **ಧರ್ಮನಾಥ** ಪುರಾಣದಲ್ಲಿಯೂ **ಭಾಸ್ಕರ**ನು (1424) ತನ್ನ **ಜೀವಂಧರಚರಿತ್ರೆ**ಯಲ್ಲಿಯೂ ಹೇಳಿದ್ದಾರೆ. ಭಾಸ್ಕರನು "ಯಶಶ್ಚಂದ್ರನ ಬಹುಜ್ಞತೆ" ಎಂದು ಈತನನ್ನು ಗೌರವಿಸಿದ್ದಾನೆ. ಇವನು ಆವ ಗ್ರಂಥವನ್ನು ಬರೆದಿದ್ದಾನೆಯೋ ತಿಳಿಯದು. ಇವನ ಕಾಲವು ಸುಮಾರು 1300 ಆಗಿರಬಹುದು.

---

## ಪದ್ಮಪ್ರಭ. ಸು. 1300.

ಇವನು **ವಿಂಶತಿಪ್ರರೂಪಣೀಟೀಕೆ**ಯನ್ನು ಬರೆದಿದ್ದಾನೆ. ಈತನು ಜೈನಕವಿ. ಸುಮಾರು 1250 ರಲ್ಲಿ ಹುಟ್ಟಿದ ಮಾಘಣಂದಿ ಶ್ರಾವಕಾಚಾರದಿಂದ ಅನುವಾದ ಮಾಡುವುದರಿಂದ ಆ ಕಾಲಕ್ಕೆ ಈಚೆ ಸುಮಾರು 1300 ರಲ್ಲಿ ಇದ್ದಿರಬಹುದು. ಇವನ ಟೀಕೆಯ ಆದಿಯಲ್ಲಿ ಈ ಪದ್ಯವಿದೆ:—

ತ್ರೀವರ್ಧಮಾನನಾನತ। ದೇವಾಧಿಪಮಕುಟಕಿರಣಘಟ್ಟಿತಚರಣಂ ।
ಕೇವಲಬೋಧವಿಲೋಚನ। ನಾವಿಷ್ಕೃತಸಕಲತತ್ತ್ವನೀಗೆಮಗಜಿ'ವಂ ॥

ಈ ಟೀಕೆಯಿಂದ ಸ್ವಲ್ಪ ಭಾಗವನ್ನು ತೆಗೆದು ಬರೆಯುತ್ತೇವೆ:—

ಅಚ್ಚ್ಯುದಪದೊತ್ತಿ ಅಜೀವಾ.

ಅಜೀವಾ, ಅಂಬಿಲಕೂಬಿನುಂಬರ್. ಅಚ್ಚ್ಯುದಪದೊತ್ತಿ, ಅಚ್ಯುತಕಲ್ಪಪರ್ಯಂತಂ ಪುಟ್ಟುವರ್.[1]

---

1. *Ind. Ant.*, XLI, 89.

## ಅಮೃತನಂದಿ. ಸು. 1300.

ಇವನು ಅಕಾರಾದಿ ವೈದ್ಯನಿಘಂಟುವನ್ನು ಬರೆದಿದ್ದಾನೆ. ಈತನು ಜೈನ ಕವಿ; ಸುಮಾರು 1300 ರಲ್ಲಿ ಇದ್ದಿರಬಹುದೆಂದು ತೋರುತ್ತದೆ. ಇವನ ನಿಘಂಟುವಿನಲ್ಲಿ ಸಂಸ್ಕೃತಪದಗಳಿಗೆ ಕನ್ನಡದ ಪರ್ಯಾಯಶಬ್ದಗಳು ಹೇಳಿವೆ.

---

## ಪ್ರಭಾಚಂದ್ರ. ಸು. 1300.

ಈತನು ಸಿದ್ಧಾಂತಸಾರ, ಚಾರಿತ್ರಸಾರ ಇವುಗಳಿಗೆ ಟೀಕೆಯನ್ನು ಬರೆದಿದ್ದಾನೆ. ಇವನು ಜೈನಕವಿ. ಇವನ ಕಾಲವು ಸುಮಾರು 1300 ಆಗಿರಬಹುದೆಂದು ಊಹಿಸುತ್ತೇವೆ.

---

## ಕನಕಚಂದ್ರ. ಸು. 1300.

ಈತನು ಕೊಂಡಕುಂದಾಚಾರ್ಯನ ಮೋಕ್ಷಪ್ರಾಭೃತ ಅಥವಾ ಸಹಜಾತ ಪ್ರಕಾಶ ಎಂಬ ಗ್ರಂಥಕ್ಕೆ ಕನ್ನಡವ್ಯಾಖ್ಯಾನವನ್ನು ಬರೆದಿದ್ದಾನೆ. ಇವನು ಜೈನಕವಿ; ಸುಮಾರು 1300 ರಲ್ಲಿ ಇದ್ದಿರಬಹುದು.

---

## ನವಿಲ್ಗುಂದದ ಮಾದಿರಾಜ. ಸು. 1300.

ಎರಡನೆಯ ಗುಣವರ್ಮನ (ಸು. 1235) ಪುಷ್ಪದಂತಪುರಾಣದ ಒಂದು ಪ್ರತಿಯ ಕೊನೆಯಲ್ಲಿ ಆ ಗ್ರಂಥವನ್ನು ಈ ಮಾದಿರಾಜನು ಪ್ರತಿಮಾಡಿದಂತೆ ಹೇಳುವ ಈ ಎರಡು ವೃತ್ತಗಳು ದೊರೆಯುತ್ತವೆ:—

ಶಲ್ಯವಿದೂರಬಂಕರಸನಂಕದ ಮಾಚಿಯ ತಂದೆ ನಿತ್ಯಮಾಂ ।
ಗಲ್ಯಸುಶೀಲಯುಕ್ತೆ ಮಹದೇವಿಯ ವಲ್ಲಭನೊಳ್ಪುವೆತ್ತ ಸಾ ॥
ಕಲ್ಯಕ ಲಾಮೃತಾಂಬುನಿಧಿಸೋಮನ ಚಾಮನ ಸೂನುವೊಲ್ದು ಸಾ ।
ಕಲ್ಯಗುಣಾಸ್ಪದಂ ಬರೆದಪಂ ಬುಧಮಾಧವನೀಪ್ರಬಂಧಮಂ ॥

ಬಿಂದುವಿನೊಂದು ಶೋಭೆ ತಲೆಕಟ್ಟಿನ ಪೊಕ್ಕುಬ್ರಿ ಚೆಲ್ವು ಮಾತ್ರೆಯೊಳ್ ।
ನಿಂದ ಬಿಡಂಗು ಬಳ್ಕಿಯೊಳಿಡಂಬಡುತಿರ್ಪ ನಯಂ ವಿಸರ್ಗದೊ ॥
ಳ್ವೊಂದಿರಲಕ್ಕರಕ್ಕೆ ಬರೆವಂ ಚದುರರ್ ಪರಿವರ್ಣಿಸಲ್ ನವಿ ।
ಲ್ಗುಂದದ ಮಾದಿರಾಜವಿಬುಧಂ ವಿಬುಧೋದಿತನವ್ಯಕಾವ್ಯಮಂ ॥

ಈ ಪದ್ಯಗಳನ್ನು ನೋಡಿದರೆ ನವಿಲ್ಗಂದದ ಮಾದಿರಾಜನು ಕವಿಯೆಂಬುದಕ್ಕೆ ಅಡ್ಡಿಯಿಲ್ಲ. ಈ ಪದ್ಯಗಳಿಂದ ಇವನು ಸಾಕಲ್ಯಕುಲದವನು; ಇವನ ತಂದೆ ಚಾಮ, ಹೆಂಡತಿ ಮಹದೇವಿ, ಮಕ್ಕಳು ಬಂಕರಸ ಮತ್ತು ಮಾಚಿ, ಸ್ಥಳ ನವಿಲ್ಗಂದ; ಈತನ ಬರಹವು ಸುಂದರವಾದುದು—ಎಂಬಂಶಗಳು ಗೊತ್ತಾಗುತ್ತವೆ. ಇವನಿಗೆ ಬುಧಮಾಧವ ಎಂಬ ಬಿರುದು ಇದ್ದಂತೆ ತೋರುತ್ತದೆ. ಸುಮಾರು 1235 ರಲ್ಲಿ ಹುಟ್ಟಿದ ಪುಷ್ಪದಂತಪುರಾಣವನ್ನು 'ವಿಬುಧೋದಿತನವ್ಯಕಾವ್ಯಮಂ' ಎಂದು ಹೇಳುವುದರಿಂದಲೂ ಮೇಲೆ ಕೊಟ್ಟಿರುವ ಪದ್ಯಗಳ ಶೈಲಿಯಿಂದಲೂ ಮಾದಿರಾಜನು ಸುಮಾರು 1300 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ.

---

## ಬ್ರಹ್ಮದೇವ. 1320.

ಶಿವಮೊಗ್ಗ 69 ನೆಯ ಶಾಸನವನ್ನು ಈತನು ಬರಸಿದುದಾಗಿ ಆ ಶಾಸನದ ಕೊನೆಯಲ್ಲಿರುವ "ಬರಸಿದಾತ ಕವೀಶ್ವರ ಬ್ರಹ್ಮದೇವ" ಎಂಬ ವಾಕ್ಯದಿಂದ ತಿಳಿಯುತ್ತದೆ. 'ಕವೀಶ್ವರ ಬಹ್ಮದೇವ' ಎಂದು ಹೇಳಿರುವುದರಿಂದ ಈತನು ಕವಿಯಾಗಿದ್ದನೆಂಬುದರಲ್ಲಿ ಸಂಶಯವಿಲ್ಲ; ಆವ ಗ್ರಂಥಗಳನ್ನು ಬರೆದಿದ್ದಾನೆಯೋ ತಿಳಿಯದು.

---

## ಆರ್ಯಸೇನ. ಸು. 1331.

ಈತನು ನಾಗರಾಜನ (1331) ಪುಣ್ಯಾಸ್ರವವನ್ನು ತಿದ್ದಿ ಅಂದಗೊಳಿಸಿದಂತೆ ಆ ಗ್ರಂಥದಲ್ಲಿಯ

ಶ್ರುತವಾರ್ಧಿಯಾರ್ಯಸೇನ। ವ್ರತಿಪತಿ ಕೊಂಡಾಡಿ ತರ್ದಿ ಕನ್ನಡದೊಳ್ಪಂ।
ಪ್ರತಿಪಾದಿಸಿದನೆನಲ್ಕೇ। ಕೃತಿ ಪೆರ್ಮೆಯನಾಂತುದೆಂಬುದೇನಚ್ಚರಿಯೇ॥

ಎಂಬ ಪದ್ಯದಿಂದ ತಿಳಿಯುತ್ತದೆ. ಇವನು ಕವಿಯಾಗಿದ್ದಿರಬೇಕು. ಆವ ಗ್ರಂಥಗಳನ್ನು ಬರೆದಿದ್ದಾನೆಯೋ ತಿಳಿಯದು.

---

## ನಾಗರಾಜ. 1331.

ಇವನು ಪುಣ್ಯಾಸ್ರವವನ್ನು ಬರೆದಿದ್ದಾನೆ. ಈತನು ಜೈನಕವಿ; ಕೌಶಿಕ ಗೋತ್ರದವನು. ಇವನ ತಂದೆ ಸೇಚೆಂಬ ಪುರದಲ್ಲಿ ಜಿನಶಾಸನದೀಪಕನಾದ ವಿವೇಕವಿಟ್ಠಲದೇವ; ತಾಯಿ ಭಾಗೀರಥಿ; ಸಹೋದರ ತಿಪ್ಪರಸ; ಗುರು ಅನಂತ

ವೀರ್ಯ. ಸಗರದ ನಗರದವರು ಕೇಳಿಕೊಳ್ಳಲು ಈ ಗ್ರಂಥವನ್ನು ಸಂಸ್ಕೃತದಿಂದ ಕನ್ನಡಿಸಿ ಬರೆದಂತೆ ಹೇಳುತ್ತಾನೆ. ಆಶ್ವಾಸಾಂತ್ಯಗದ್ಯಗಳಲ್ಲಿ "ಮಾಸಿವಾಳದ ನಾಗರಾಜ" ಎಂದೂ ಉಭಯಕವಿತಾವಿಳಾಸ ಎಂದೂ ಹೇಳಿಕೊಂಡಿದ್ದಾನೆ.

ಈ ಗ್ರಂಥವನ್ನು ಶಕ 1253 ನೆಯ ಪ್ರಜಾಪತಿವರ್ಷದಲ್ಲಿ–ಎಂದರೆ 1331 ರಲ್ಲಿ—ಬರೆದಂತೆ ಗ್ರಂಥಾಂತ್ಯದಲ್ಲಿರುವ "ಪುರಶರಯುಗ್ಮಚಂದ್ರಪರಿಸಂಖ್ಯೆ ಶಕಾಬ್ದಮದಾಗೆ ವತ್ಸರಂ ಸರಸಿಜಗರ್ಭನಾಮಮಳವಟ್ಟರಲ್" ಎಂಬ ಪದ್ಯಭಾಗದಿಂದ ತಿಳಿಯುತ್ತದೆ.

ಈತನಿಗೆ ಸುಲಲಿತಕವಿತಾಕಲ್ಪವಲ್ಲೀವಸಂತ, ಭಾರತೀಭಾಳನೇತ್ರ, ಸರಸ್ವತೀಮುಖತಿಲಕ, ಕವಿಮುಖಮುಕುರ ಎಂಬ ಬಿರುದುಗಳು ಇದ್ದಂತೆ ತೋರುತ್ತದೆ.

ಪೂರ್ವಕವಿಗಳನ್ನು ಈ ಪದ್ಯದಲ್ಲಿ ಸ್ತುತಿಸಿದ್ದಾನೆ:—

ಪೊನ್ನಿಗನೋಜೆ ಪಂಪರಸನೊಪ್ಪುವ ಕಾವ್ಯದ ಕೀರ್ತಿಯಾವಗಂ ।
ಜನ್ನನೊಳೊಪ್ಪುವೆತ್ತ ಪೊಸಮಾತು ಗಜಾಂಕುಶನರ್ಥಗೌರವಂ ॥
ಮುನ್ನಿನ ಬಂಧುವರ್ಮಗುಣವರ್ಮರ ಜಾಣ್ಮುಡಿ ನಾಗಚಂದ್ರನ ।
ತ್ಯುನ್ನತಿವೆತ್ತ ದೇಸೆ ನೆಲಸಿರ್ಕ್ಕ ಮದೀಯಕಥಾಪ್ರಬಂಧದೊಳ್ ॥

ತನ್ನ ಗುಣಾದಿಗಳನ್ನೂ ಕವಿತಾಚಾತುರಿಯನ್ನೂ ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ:—

ಕೌಶಿಕಗೋತ್ರನತ್ಯಧಿಕಪುಣ್ಯಪವಿತ್ರನುದಗ್ರತತ್ವನ ।
ಭ್ಯಾಸಿತಸತ್ಕವಿತ್ವನವನೀತಲವಂದ್ಯನನಿಂದ್ಯನೇನಸಂ ॥
ತ್ಯಾಸನಶೀಲನರ್ಥಿಜನತಾಪ್ರತಿಪಾಲನನಂತವೀರ್ಯಯೋ ।
ಗೀಶಪದಾಬ್ಜಭೃಂಗನಭಿಮಾನಸುರೇಂದ್ರವಿನೂತಭೂಧರಂ ॥
ನಿರವದ್ಯಂ ವಿಶ್ವವಿದ್ಯಾಪತಿ ಸಕಲಗುಣಾಲಂಕೃತಂ ಸೂಕ್ತಿರತ್ನಾ ।
ಕರನರ್ಪತ್ಪಾದಪಂಕೇರುಹಷಟುಚರಣಂ ಕೀರ್ತಿಕಾಂತಾಮನೋಜಂ॥
ಸ್ಮಿರವಾಕ್ಯಂ ಭವ್ಯಸೇವ್ಯಂ ಸರಸಕವಿಜನಾನಂದಮಂದಾರಭೂಜಂ ।
ಧರೆಯೊಳ್ ತಾಂ ಸಂಪುವೆತ್ತಂ ಸುಲಲಿತಕವಿತಾಕಲ್ಪವಲ್ಲೀವಸಂತಂ ॥
ಬಿಜಿಗಂ ಪತ್ತಿಸಿ ಚೀಜಿ'ದೊಂದು ಪದವಿನ್ಯಾಸಂ ಸಮಾಸಂ ಬಲಂ ।
ಮುಜುಕಂ ಪೆತ್ತುದೆನಲ್ಕಲಂಕೃತಿಗಳಿಂ ತಳ್ಪೊಯ್ದು ಚಿತ್ರಾರ್ಥದೊಳ್ ॥
ನೆಜಿದಿಂಪಂ ಪಡೆಯಲ್ಕೆ ಪೇಟ್ಪಿವಿಡೆ ವಲಂ ನಾಗಂ ಕಲಾವಲ್ಲಭಂ ।
ನೆಜಿ ಬಲ್ಲಂ ಬಿಡು ಗರ್ವಮಂ ಕುಳಕಮಂ ಸತ್ಕಾವ್ಯಬಂಧಂಗಳಂ ॥

ತವರಾಜದ ಸಿರಿಯಂತಿರೆ। ಸವಿಯಂ ಸಾಲಿಡುವುದಖಿಳಬುಧತತಿಗೆಲ್ಲಂ।
ಕವಿಯೊಳ್ ನಾಗೇಂದ್ರನ ನಿಜ। ಕವಿತೆಯ ಕನ್ನಡದ ನುಡಿಯ ಬೆಡಗಿನ ಗಡಣಂ॥

ಇವನ ಗ್ರಂಥ

## ಪುಣ್ಯಾಸ್ರವ.

ಇದು ಚಂಪೂಗ್ರಂಥ; 12 ಅಧಿಕಾರಗಳಾಗಿ ಭಾಗಿಸಲ್ಪಟ್ಟಿದೆ. ಇದರಲ್ಲಿ 52 ಕಥೆಗಳಿವೆ. ಸಗರದ ನಗರದವರಿಗೋಸ್ಕರ ತನ್ನ ಗುರು ಅನಂತವೀರ್ಯನ ಆಜ್ಞಾನುಸಾರವಾಗಿ ಈ ಗ್ರಂಥವನ್ನು ಬರೆದಂತೆ ಹೇಳುತ್ತಾನೆ. ಇದರಲ್ಲಿ ಪೂಜೆ, ಗುರೂಪಾಸ್ತಿ, ಸ್ವಾಧ್ಯಾಯ, ಸಂಯಮ, ದಾನ, ತಪಸ್ಸು ಎಂಬ ಸಾಗಾರಧರ್ಮವನ್ನು—ಎಂದರೆ ಗೃಹಸ್ಥಧರ್ಮವನ್ನು—ವಿವರಿಸಿ "ಅಲ್ಲಿ ಒಂದೊಂದಱ ನೆಗಟ್ತೆಯೊಳ್ಗೋರೊರ್ವರ್ ಪ್ರಸಿದ್ಧಿವಡೆದು ಸ್ವರ್ಗಾಪವರ್ಗಂಗಳನೆಯ್ದಿದ ಪುರಾಣಪುರುಷರ ಕಥೆಗಳಂ" ಹೇಳಿದ್ದಾನೆ. ಈ ಗ್ರಂಥವನ್ನು ಆರ್ಯಸೇನನು ತಿದ್ದಿ ಅಂದಗೊಳಿಸಿದನೆಂದು ಹೇಳುತ್ತಾನೆ.

ಗ್ರಂಥಾವತಾರದಲ್ಲಿ ಕವಿ ಜಿನೇಂದ್ರನನ್ನು ಸ್ತುತಿಸಿದ್ದಾನೆ. ಬಳಿಕ ಸಿದ್ಧಾದಿಗಳು, ಪಂಚಪರಮೇಷ್ಠಿಗಳು, ಸರಸ್ವತಿ ಇವರನ್ನು ಸ್ಮರಿಸಿ ಅನಂತರ ವೀರಸೇನನಿಂದ ಅನಂತವೀರ್ಯವ್ರತಿಯ ವರೆಗೆ[1] ಗುರುಗಳನ್ನು ಕ್ರಮವಾಗಿ ಸ್ತುತಿಸಿದ್ದಾನೆ. ಅಧಿಕಾರಗಳ ಅಂತ್ಯದಲ್ಲಿ—

ಇದು ದಿವಿಜರಾಜರಾಜಿತಕಿರೀಟತಟಘಟಿತ ನೂತ್ನರತ್ನಪ್ರತಾನಮರೀಚಿಮಂಜರೀರಂಜಿತಭಗವದರ್ಹತ್ಪರಮೇಶ್ವರಪಾದಾರವಿಂದಾಮಂದಮಕರಂದಮಧುಕರಾಯಮಾನ ಶ್ರೀಮದನಂತ ವೀರ್ಯಮುನೀಂದ್ರ ಪದನಖಮಯೂಖಲೇಖಾಲಲಾಮಂ ಭಾರತೀಭಾಳನೇತ್ರನುಭಯ ಕವಿತಾವಿಳಾಸಂ ಶ್ರೀಮನ್ನಾಸಿವಾಳದ್ನಾಗರಾಜನಿರಚಿತಮಪ್ಪ ಪುಣ್ಯಾಸ್ರವದೊಳ್

ಎಂಬ ಗದ್ಯವಿದೆ.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ :—

### ದುಷ್ಕವಿದೂಷಣ.

ಕುದಿದೆಡೆಯಾಡಿ ನೋಡಿ ಪದನೊಂದೆರಡಂ ಸರಗೋದು ಮೇಲುಗಾ।
ಣದೆ ಬಟ್ಟಿಕಂ ಮನಂಜರಿದು ಜಾನಿಸಿ ಚಿಂತಿಸಿ ಗೂಡುಗೊಂಡುಮಾ॥
ಗದೆ ಮಲೆಯಲ್ಲಿ ಕೇದಗೆಯನೇಱಿದ ಕೋಡಗದಂತೆ ಹಾಸ್ಯಸಂ।
ಪದಕೆಡೆಯಪ್ಪ ದುಷ್ಕವಿಗಳಲ್ಲದೊಡೇನಿಳೆ ಶೂನ್ಯಮಪ್ಪುದೇ ॥951॥

1 ವೀರಸೇನ, ಜಿನಸೇನ, ಸಿಂಹಣಂದಿ, ವೃದ್ಧಗೃಧ್ರಪಿಂಛಾಚಾರ್ಯ, ಕುಂಡಕುಂದಾಚಾರ್ಯ, ಗುಣಭದ್ರ, ಪೂಜ್ಯಪಾದ, ಸಮಂತಭದ್ರ, ಅಕಳಂಕಮುನಿ, ಸೇನಗಣಾಗ್ರಣಿ, ಕುಮಾರಸೇನವ್ರತಿ, ಧರಸೇನದೇವ, ಅನಂತವೀರ್ಯವ್ರತಿ.

## ವಸಂತ.

ಮಾಗಿಯನೊಕ್ಕಲಿಕ್ಕಿ ಮಕರಧ್ವಜನಾಜ್ಞೆಯನಾಂತು ನೆತ್ತಿಯೊಳ್ ।
ಕೋಗಿಲೆಗಿತ್ತು ನಾಲಗೆಯ ಸಂಪದಮಂ ಮದವನ್ಮದಾಳಿಗಳ್ ॥
ರಾಗಿಸಿ ಬಳ್ಳಿಮಾವುಗಳ ಕಾವಣದೊಳ್ ನೆಲೆವೀಡುವಿಟ್ಟು ಚೈ ।
ತ್ರಾಗಮಮೊಪ್ಪಿದತ್ತು ವೀರಹಿಪ್ರಕರಂ ನಡುಗುತ್ತುಮಿರ್ಪಿನಂ ॥ 952 ॥

## ಕಾಡು.

ವಿಕಸಿತಪುಷ್ಪದಂತರಳಿ ಕನ್ನಡಿಗರ್ ಕರೆವಂತೆ ಬನ್ನಿ ಬಂ ।
ಧಕೆಯರ ನಾಮದಂತೊಗೆದ ಪಾದರಿ ರೋಗಿಗಳಂತೆ ತಾಜಿ ಪಾ ॥
ವಕನ ಶರೀರದಂತರುಳಿ ಸುಂಕಿಗನಂತಿರೆ ಚೆಲ್ಲು . . . ।
. . ನ ವಿಯೋಗದಂತೊಗೆದ ಬೊಬ್ಬುಲಿ ಪರ್ವಿದಟವ್ಯಮೊಪ್ಪು ಗುಂ ॥ 953 ॥

## ರಾಜ್ಯ.

ಇಜ್ಜಿಹಂ ದಾಯದೊಳುಷ್ಣ ವಜ್ಜಿಮುಖದೊಳ್ ಯುದ್ಧಂ ದಿಟಂ ಮಲ್ಲರೊಳ್ ।
ಮುಜ್ಜಿಹಂ ಮಿಥ್ಯೆಯೊಳಾವಗಂ ನೆಗಲ್ದಿ . ಶಂಕಾಕುಳಂ ಪುಲ್ಲಿಯೊಳ್ ॥
ತೊಜ್ಜಿಹಂ ಕ್ಷೀಣಮದಂಗಳೊಳ್ ಬಡತನಂ ಸ್ತ್ರೀಮಧ್ಯದೊಳ್ ಕೇಟುಗಂ ।
ದೆಜ್ಜಿಕಂ ಗೋವಿನೊಳಲ್ಲದಿಲ್ಲ ಪೆಜತೇನಾರಯ್ದೊಡಾ ರಾಜ್ಯದೊಳ್ ॥ 954 ॥

## ಮುದುಹಾರುವ.

ಮಿನಿಮಿನಿಗಣ್ ತಜಂಟುದಲೆ ಜೋಲ್ದಿಹ ಮೆಯ್ವೊವಲಬ್ದಿ ಪೊಟ್ಟೆ ಮೂ ।
ಗಿನ ಪನಿ ಬಿರ್ದ ಪುರ್ವು ತೆರೆಗೊಂಡ ಮುಖಂ ನಡುಗುತ್ತುಮಿರ್ಪ ಕೈ ॥
ಕುನುಗಿದ ಬಿನ್ನು ಬೀಡೆವರಿದಿರ್ದ ಮಡಂ ಪೆರೆಗೊಂಡ ಕಾಲ್ಗಳಿಂ ।
ಮನಕೆ ವಿರಕ್ತಿಯಂ ಪಡೆದು ಮುಪ್ಪಿನ ಪಾರ್ವನದೊರ್ವನೊಪ್ಪಿದಂ ॥ 955 ॥

## ಸಂಸಾರ.

ಸುಡಲೀಸಂಸೃತಿಯೆಂಬುದು । ಕಡಲಿನ ತೆರೆ ಮುಗಿಲ ನೆರವಿ ಮುಂಜನ ಪುಂಜಂ ।
ಕುಡುಮಿಂಚಿನ ಸಿರಿ ಗಾಳಿಯ।ಸೊಡರ್ಗುಡಿಸುರಚಾಪದೆಸಕಮೆನೆ ನಚ್ಚುವರೇ॥956॥

## ಎತ್ತು.

ಮೊನೆ ಮುಜ್ಜಿದಿರ್ದ ಸೀಳ್ದ ಕೊನೆಗೋಡುಗಳಿಂ ಮಿಡಿಗೊಂಡ ಬಾಲದಿಂ ।
ಘನತರಮಾಗಿ ಜೋಲ್ವ ಗಳಕಂಬಳದಿಂ ತೆರೆಗೊಂಡ ಪುರ್ಬಿನಿಂ ॥
ತೊನೆವಿಣಿಯಿಂ ಭಯಂಕರಮನಿತ್ತು ಠಣಂಕರಿಸುತ್ತೆ ಬಂದುದೀ ।
ತನ ವೃಷಭೇಂದ್ರದಂತೆ ಮಲೆಯುತ್ತ ಮಹಾಬಳನೊಂದು ಶಾಕ್ವರಂ ॥ 957 ॥

## ಶಿವಕವಿದೇವ. ಸು. 1340.

ಈತನು ವೀರಶೈವಕವಿ; ಬಸವಪುರಾಣವನ್ನು ಬರೆದ ಭೀಮಕವಿಯು (1369) ತಂದೆ. ಇವನನ್ನು ಭೀಮಕವಿ "ವಿಮಳಸದ್ಗುರುಸೇವೆಯಲಿ ಜಂ। ಗಮಭಜನೆಯಲಿ ಲಿಂಗನಿಷ್ಠಾ। ಸಮತೆಯಲಿ ತನುಮನಧನಂಗಳನಿತ್ತ ಭವಭಕ್ತಿ। ಸಮಯವಾರ್ಧಿವಿವರ್ಧನೋಜ್ಜ್ವಲ। ಹಿಮಗು" ಎಂದು ಸ್ತುತಿಸಿದ್ದಾನೆ. ಕವಿಯೆಂದು ವಿಶೇಷಿಸಿ ಹೇಳಿರುವುದರಿಂದ ಇವನು ಏನಾದರೂ ಗ್ರಂಥವನ್ನು ಬರೆದಿರಬೇಕು; ನಮಗೆ ಅವುದೂ ದೊರೆತಿಲ್ಲ.

ಬಸವಲಿಂಗನ (ಸು. 1830) ಶರಣಬಸವರಗಳಿಕಂದದಲ್ಲಿ ಬಾಲಚಂದ್ರನಗರದ ಒಬ್ಬ ಶಿವಕವಿ ವಸ್ತುಕರೂಪವಾದ ಒಂದು ಬಸವಪುರಾಣವನ್ನು ಬರೆದಂತೆ ಹೇಳಿದೆ.[1] ಅಲ್ಲದೆ 'ಚೆನ್ನಬಸವಪುರಾಣದಲ್ಲಿ ಒಬ್ಬ ಶಿವಕವಿ ಬಾಯಿಬಿದರೆಯಲ್ಲಿ ಸುರಿತಾಳನೊಡನೆ ವಾದಿಸಿದಂತೆ "ವರಶಿವಕವೀಶನಂದಾಬಾಯಿಬಿದರೆಯಲಿ। ಸುರಿತಾಳನೊಡನೆ ವಾದಿಸಿ ಸತ್ತ ಕುದುರೆಗಂ। ಹರಣಮುಂ ಪಡೆದು ಸುರಿತಾಳನ ಮಗಂ ಸಾಯಲವನ ಪರಣವನು ಪಡೆವಂ" ಎಂಬ ಪದ್ಯಭಾಗದಲ್ಲಿ[2] ಹೇಳಿದೆ. ಈ ಸುರಿತಾಳನು ಬಹಮನಿರಾಜ್ಯದ ತುರುಷ್ಕರಾಜನಾಗಿರಬಹುದು.

ಆದರೆ ಭೀಮಕವಿಯ ತಂದೆಗೆ ದೇವ ಎಂಬುದೇ ನಿಜವಾದ ಹೆಸರಾಗಿ ಶಿವಕವಿಯೆಂಬುದು ಬರಿಯ ವಿಶೇಷಣವಾಗಿ ಇದ್ದಂತೆ ತಿಳಿಯಬರುವುದರಿಂದ ಮೇಲೆ ಹೇಳಿದ ಈ ಇಬ್ಬರು ಕವಿಗಳೂ ತದ್ಭಿನ್ನರೆಂದು ಹೇಳಬೇಕಾಗಿದೆ.

---

## ಗುರುದೇವ. ಸು. 1350.

ಈತನು ಮಹಿಮ್ನಸ್ತೋತ್ರ, ಮಲ್ಲಣಸ್ತೋತ್ರ, ಮಲೆಯರಾಜಸ್ತೋತ್ರ, ಅನಾಮಯಸ್ತೋತ್ರ, ಹಲಾಯುಧಸ್ತೋತ್ರ, ಭೃಂಗಿಸ್ತವ ಇವುಗಳಿಗೆ ಕನ್ನಡ ವ್ಯಾಖ್ಯಾನವನ್ನು ಬರೆದಿದ್ದಾನೆ.

ಇವನು ವೀರಶೈವಕವಿ; ಮಲ್ಲಿಕಾರ್ಜುನಪಂಡಿತಾರಾಧ್ಯನ (ಸು. 1160) ವಂಶೋದ್ಭವನು. ಸಂಸ್ಕೃತದಲ್ಲಿ ಈತನು ಬರೆದಿರುವ ವೀರಶೈವಾಚಾರಪ್ರದೀಪಿಕೆಯಲ್ಲಿ ತನ್ನ ಪರಂಪರೆಯನ್ನು ಹೀಗೆ ಹೇಳಿಕೊಂಡಿದ್ದಾನೆ—

ದ್ರಾಕ್ಷಾರಾಮದ ಕೋಟಿಪಲ್ಯಾಖ್ಯದೇಶಿಕ; ಮಗ ಭೀಮಪಂಡಿತ, ಅವನ ಹೆಂಡತಿ ಗೌರಮಾಂಬೆ, ಇವರ ಮಗ ಮಲ್ಲಿಕಾರ್ಜುನಪಂಡಿತ, ಇವನು ವೆಲನಾಡುಚೋಳನ

1. Kittel's "Nagavarma's Prosody," LXXX.
2. ಕಾಂಡ 5, ಸಂಧಿ 9, ಪದ್ಯ 72.

ಆಸ್ಥಾನದಲ್ಲಿ ವಾದಿಗಳನ್ನು ಜಯಿಸಿದನು; ಮಗ ಪಂಡಿತಾರಾಧ್ಯ; ಮಗ ವೀರಾರಾಧ್ಯ; ತತ್ಪ್ರತೀಕಸಂಭೂತ ಗುರುಬಸವ; ಮಕ್ಕಳು ಗಂಗಾಧರ, ಬಸವ: ಬಸವನ ಮಕ್ಕಳು ಹಿರಿಯಾರ್ಯ, ಪಂಡಿತಾರ್ಯ; ಪಂಡಿತಾರ್ಯನ ಮಗ ಗುರುಲಿಂಗ: ಮಕ್ಕಳು ಗುರುದೇವ, ಪಂಡಿತಾರ್ಯ, ಬಸವಾರಾಧ್ಯ, ಜಕ್ಕಾರಾಧ್ಯ.

**ಈ ಗುರುದೇವನೇ ವ್ಯಾಖ್ಯಾಕಾರ. ವೀರಶೈವಾಚಾರಪ್ರದೀಪಿಕೆಯನ್ನು ಸಿದ್ಧದೇವನಿಗೋಸ್ಕರ ರಚಿಸಿದಂತೆ ಹೇಳುತ್ತಾನೆ. ಈ ಸಿದ್ಧದೇವನಾರೋ ತಿಳಿಯದು. ಮಲ್ಲಿಕಾರ್ಜುನಪಂಡಿತನಿಂದ 7 ನೆಯ ತಲೆಯವನಾದುದರಿಂದ ಇವನ ಕಾಲವು ಸುಮಾರು 1350 ಆಗಬಹುದು.**

**ಟೀಕೆಯ ಕೊನೆಯಲ್ಲಿ ಈ ಗದ್ಯವಿದೆ—**

ಇತಿ ಶ್ರೀಮದ್ವೇದಾಗಮೋಪನಿಷತ್ಪುರಾಣೋಕ್ತಮಾರ್ಗಪ್ರವರ್ತನಪ್ರವೀಣ ಪಂಡಿತಾರಾಧ್ಯದೇವನಾಮಾಚಾರ್ಯವರ್ಯತನೂಭವಗುರುಲಿಂಗದೇವಾಹ್ವಯದೇಶಿಕೇಂದ್ರಪ್ರತೀಕೋದ್ಭವ ಗುರುದೇವಾಖ್ಯೇನ ಕರ್ಣಾಟಭಾಷಾಕೃತಾ ಟೀಕಾ ಪರಿಸಮಾಪ್ತಾ.

---

## ಪುಷ್ಪದಂತ. ಸು. 1350.

**ಧರ್ಮನಾಥಪುರಾಣವನ್ನು ಬರೆದ ಮಧುರನು (ಸು. 1385) ಕರ್ಣಾಟಕ ಕವಿಸ್ತವಾವಸರದಲ್ಲಿ ಒಬ್ಬ ಪುಷ್ಪದಂತಕವಿಯನ್ನು ಸ್ತುತಿಸಿದ್ದಾನೆ. ಈ ಕವಿ ಆವ ಗ್ರಂಥವನ್ನು ಬರೆದಿದ್ದಾನೆಯೋ ತಿಳಿಯದು. ಇವನು ಮಧುರನಿಗೆ ಹಿಂದೆ ಇದ್ದನೆಂಬುದು ಸ್ಪಷ್ಟವಾಗಿದೆ; ಎಷ್ಟು ಹಿಂದೆ ಇದ್ದನೋ ತಿಳಿಯಲಾಗುವುದಿಲ್ಲ; ಸುಮಾರು 1350 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ.**

---

## ಬಾಹುಬಲಿ ಪಂಡಿತ. 1352.

**ಈತನು ಧರ್ಮನಾಥಪುರಾಣವನ್ನು ಬರೆದಿದ್ದಾನೆ. ನಮಗೆ ಈ ಗ್ರಂಥದ ಕೊನೆಯ ಓಲೆ ಮಾತ್ರ ದೊರೆತಿರುವುದರಿಂದ ಕವಿಯ ವಿಷಯವಾಗಿಯೂ ಗ್ರಂಥದ ವಿಷಯವಾಗಿಯೂ ವಿಶೇಷಾಂಶಗಳನ್ನು ತಿಳಿಸಲು ಅವಕಾಶವಿಲ್ಲದೆ ಇದೆ. ಈತನು ಜೈನಕವಿ; ನಯಕೀರ್ತಿಯ ಶಿಷ್ಯನು. ಈ ಗ್ರಂಥವನ್ನು ಶಕ 1274 ನಂದನದಲ್ಲಿ, ಎಂದರೆ 1352 ರಲ್ಲಿ, ಬರೆದಂತೆ**

ಸ್ವಸ್ತಿ ಶ್ರೀಶಕವತ್ಸರಂ ಸಲೆ ಚತುಸ್ಸಪ್ತದ್ವಯೈಕಾಂಕವಿ।
ನ್ಯಸ್ತಂ ನಂದನವರ್ಷದಲ್ಲಿ ಮಧುಮಾಸಶ್ವೇತಪಕ್ಷಾಷ್ಟಮಿ॥

ವಿಸ್ತಾರೀಕೃತ ಸೋಮವಾರದೊಳಿದಂ ಸಂಪೂರ್ಣಮುಂ ಮಾಡಿದಂ।
ಪ್ರಸ್ತುತ್ಯಪ್ರತಿಭಾಪರಂ ಭುಜಬಲಿಪ್ರಖ್ಯಾತಯೋಗೀಶ್ವರಂ ॥

ಎಂಬ ಪದ್ಯದಿಂದ ತಿಳಿಯುತ್ತದೆ. ಈತನಿಗೆ ಉಭಯಭಾಷಾಕವಿಚಕ್ರವರ್ತಿ ಎಂಬ ಬಿರುದಿದ್ದಂತೆ ತೋರುತ್ತದೆ. ತನ್ನ ಗುಣಾದಿಗಳನ್ನು ಈ ಪದ್ಯದಲ್ಲಿ ಹೇಳಿಕೊಂಡಿದ್ದಾನೆ—

ವಿಂದುಂ ಸಂತೋಷಮುಂ ತಾಳ್ದಿದನತಿಶಯವತ್ಕಾವ್ಯಮುಂ ಮಾಡಿ ತೇಜ।
ಸ್ಫುರಣಂ ವಿದ್ಯಾಸಮುದ್ರಾಮೃತಮಯಕಿರಣಂ ವಂದಿಮುಂದಾರರೂಪಂ ॥
ಸ್ಮರರೂಪಂ ನೀರಜಂ ಬಾಹುಬಲಿ ಸುಕವಿರಾಜಂ ವಿಪಶ್ಚಿತ್ಸಹಾಯಂ।
ಧರಣೀಶೋಲ್ಲಾಲನೀಯಂ ಘನಗುಣನಿವಹಂ ಚಾತುರೀಜನ್ಮಗೇಹಂ ॥

ಇವನ ಗ್ರಂಥ

## ಧರ್ಮನಾಥಪುರಾಣ.

ಇದು ಚಂಪೂರೂಪವಾಗಿದೆ; 16 ಆಶ್ವಾಸಗಳಾಗಿ ಭಾಗಿಸಲ್ಪಟ್ಟಿದೆ. ಇದರಲ್ಲಿ 15 ನೆಯ ತೀರ್ಥಂಕರನಾದ ಧರ್ಮನಾಥನ ಚರಿತವು ಹೇಳಿದೆ. ಆಶ್ವಾಸಗಳ ಅಂತ್ಯದಲ್ಲಿ ಈ ಗದ್ಯವಿದೆ—

ಇದು ಸಕಲಭುವನಜನವಿನೂಯಮಾನಾನೂನಮಹಿಮಾಮಾನನೀಯ ಪರಮಜಿನ ಸಮಯಕಮಳಿನೀಕಳಹಂಸಾಯಮಾನ ಶ್ರೀಮನ್ನಯಕೀರ್ತಿದೇವಪ್ರಸಾದಸಂಪಾದಪಾದನಿ ಧಾನದೀಪವರ್ತಿಯುಭಯಭಾಷಾಕವಿಚಕ್ರವರ್ತಿ ಬಾಹುಬಲಿಪಂಡಿತದೇವಪರಿನಿರ್ಮಿತಮು ಪ್ಪ ಧರ್ಮನಾಥಪುರಾಣದೊಳ್.

---

## ಕೇಶವವರ್ಣಿ. 1359.

ಈತನು **ಗೊಮ್ಮಟಸಾರ, ಅಮಿತಗತಿಶ್ರಾವಕಾಚಾರ** ಇವುಗಳಿಗೆ ಕರ್ಣಾಟಕವೃತ್ತಿಯನ್ನು ಬರೆದಿದ್ದಾನೆ. **ದೇವಚಂದ್ರ**ನು(1838) **ರಾಜಾವಳೀ ಕಥೆ**ಯಲ್ಲಿ ಇವನು ಸಾರತ್ರಯಕ್ಕೂ ಕನ್ನಡವ್ಯಾಖ್ಯಾನಗಳನ್ನು ಬರೆದಿರುವಂತೆ ಹೇಳುತ್ತಾನೆ. **ಮಂಗರಾಜ**ನು 1 (ಸು. 1360) ಈತನನ್ನು 'ಸಾರತ್ರಯವೇದಿ' ಎಂದು ಹೇಳುವುದರಿಂದಲೂ ಕವಿಯೂ ಸಾರತ್ರಯವೇದಿ ಎಂದು ಹೇಳಿಕೊಂಡಿರುವುದರಿಂದಲೂ **ದೇವಚಂದ್ರ**ನು ಹೇಳುವುದು ನಿಶ್ಚಯವಾಗಿರಬಹುದೆಂದು ತೋರುತ್ತದೆ. ಈತನು ಜಿತೇಂದ್ರಮಾಲೆಗೂ ಕನ್ನಡ ಟೀಕೆಯನ್ನು ಬರೆದಿರುವಂತೆ ತಿಳಿಯುತ್ತದೆ.

ಇವನು ಜೈನಕವಿ; ಅಭಯಸೂರಿಸಿದ್ಧಾಂತಚಕ್ರವರ್ತಿಯ ಶಿಷ್ಯನು. ಗೊಮ್ಮಟಸಾರದ ಕರ್ಣಾಟಕವೃತ್ತಿಯನ್ನು ಧರ್ಮಭೂಷಣಭಟ್ಟಾರಕನ ಆಜ್ಞೆಯಿಂದ ಶಕವರ್ಷ 1281 ರಲ್ಲಿ—ಎಂದರೆ 1359 ರಲ್ಲಿ, ಪೂರೈಸಿದಂತೆ ಈ ಪದ್ಯಗಳಿಂದ ತಿಳಿಯುತ್ತದೆ:—

ಪೊಣರ್ದೀ ಧೂರ್ತಜನೋಪಸರ್ಗಮನಿಶಂ ಬೆಂಬತ್ತೆ ಬೆಂಬೀಳ್ದಿದಾ ।
ನೊಣರ್ದೆಂ ಗೊಮ್ಮಟಸಾರವೃತ್ತಿಯನಿದಂ ಕರ್ಣಾಟವಾಕ್ಯಂಗಳಿಂ ॥
ಪ್ರಣುತರ್ ಧೀಧನರುಂ ಬಹುಶ್ರುತರಿದಂ ತಿರ್ದಿಂ ಬುಧರ್ ಧರ್ಮಭೂ ।
ಷಣಭಟ್ಟಾರಕದೇವರಾಜ್ಞೆಯಿನಿದಂ ಸಂಪೂರ್ಣಮುಂ ಮಾಡಿದೆಂ ॥
ನೆರೆದು ಶಕಾಬ್ದಮಿಂದುವಸುನೇತ್ರಶಶಿಪ್ರಮಿತಂಗಳಾಗಿ ಸಂ ।
ದಿರುತಿರೆಯುಂ ವಿಕಾರಿವರವತ್ಸರಚೈತ್ರವಿಶುದ್ಧಪಕ್ಷ ಭಾ ॥
ಸುರತರಪಂಚಮಾದಿವಸದಂದಿದು ಗೊಮ್ಮಟಸಾರವೃತ್ತಿ ಭಾ ।
ಸ್ಕರನೊಗೆದಂ ವಿನೇಯಜನಹೃತ್ಸರಸೀಜಮನುಳ್ಳಲರ್ಚುತುಂ ॥

ಈ ಗೊಮ್ಮಟಸಾರವು, ಜೀವಕಾಂಡ ಕರ್ಮಕಾಂಡ ಎಂದು ಎರಡು ಭಾಗವಾಗಿದೆ. ವೃತ್ತಿಯ ಕೊನೆಯಲ್ಲಿ ಈ ಗದ್ಯವಿದೆ:—

ಇಂತು ಭಗವದರ್ಹತ್ಪರಮೇಶ್ವರಚಾರುಚರಣಾರವಿಂದದ್ವಂದ್ವವಂದನಾನಂದಿತಪುಣ್ಯ ಪುಂಜಾಯಮಾನ ಶ್ರೀಮದಜಿತಸೇನಭಟ್ಟಾರಕಸೇನಾನಿಪ್ರಧಾನ ಸಮರಪರಮಮುಖ ಪ್ರತಿಪಕ್ಷರಾಜಾಧಿರಾಜ ರಾಯರಾಯ ಸೇನಾಪತಿ ಸಮರಧುರಂಧರ ಸಮ್ಯಕ್ತ್ವರತ್ನನಿಲಯ ಸತ್ಯಯುಧಿಷ್ಠಿರ ಸಮಧಿಗತಪಂಚಮಹಾಶಬ್ದ ಮಹಾಮಂಡಲೇಶ್ವರ ರಾಯವಾದಿಪಿತಾಮಹ ಸಕಲವಿದ್ವಜ್ಜನಚಕ್ರವರ್ತಿ ಶ್ರೀಮದಭಯಸೂರಿಸಿದ್ಧಾಂತಚಕ್ರವರ್ತಿ ಶ್ರೀಪಾದಪಂಕಜರಜೋರಂಜಿತಲಲಾಟಪಟ್ಟಂ ಶ್ರೀಕೇಶವವಿರಚಿತ ಗೊಮ್ಮಟಸಾರಕರ್ಣಾಟಕವೃತ್ತಿಜೀವತತ್ವಪ್ರದೀಪಿಕೆಯೊಳ್.

ಅಮಿತಗತಿಶ್ರಾವಕಾಚಾರಕರ್ಣಾಟಕವೃತ್ತಿ 15 ಪರಿಚ್ಛೇದಗಳಾಗಿ ಭಾಗಿಸಿದೆ. ಕೊನೆಯಲ್ಲಿ—

ಇಂತು ಪರಮಜಿನಸಮಯಸಿದ್ಧಾಂತಪೀಯೂಷಾರ್ಣವವರ್ಧಿಷ್ಣುಕುಮುದಬಾಂಧವ ಶ್ರೀಮದಭಯಸೂರಿಸಿದ್ಧಾಂತಚಕ್ರವರ್ತಿಶ್ರೀಪಾದಪದ್ಮಾರಾಧಕನಪ್ಪ ಸಾತತ್ಯವೇದಿ ಕೇಶಣ್ಣವಿರಚಿತಾಮಿತಗತಿಶ್ರಾವಕಾಚಾರವೃತ್ತಿಯೊಳ್

ಎಂಬ ಗದ್ಯವಿದೆ.

---

## ಮಂಗರಾಜ.

### ವಿಚಾರಂ.

ಈ ಹೆಸರಿನವರು ಮೂವರು ಕವಿಗಳಿದ್ದಂತೆ ತಿಳಿಯಬರುತ್ತದೆ. ಮೊದಲನೆಯವನು ಖಗೇಂದ್ರಮಣಿದರ್ಪಣವನ್ನು ಬರೆದಿದ್ದಾನೆ. ಇವನ ಕಾಲಕ್ಕೆ ಈಚೆ ಇದ್ದವನಾದುದರಿಂದ

ಅಭಿನವಮಂಗರಾಜ ಎಂಬ ಹೆಸರನ್ನು ಇಟ್ಟುಕೊಂಡ ಎರಡನೆಯವನು ಮಂಗರಾಜನಿಘಂಟು ಅಥವಾ ಅಭಿನವನಿಘಂಟು ಎಂಬ ಕೋಶವನ್ನು ಬರೆದಿದ್ದಾನೆ. ಮೂರನೆಯವನು ಸಮ್ಯಕ್ತ್ವಕೌಮುದಿ, ಜಯನೃಪಕಾವ್ಯ, ನೇಮಿಜಿನೇಶಸಂಗತಿ, ಪಾಕಶಾಸ್ತ್ರ, ಪ್ರಭಂಜನಚರಿತೆ, ಶ್ರೀಪಾಲಚರಿತೆ ಮೊದಲಾದ ಗ್ರಂಥಗಳನ್ನು ಬರೆದಿದ್ದಾನೆ.

ಮೊದಲನೆಯವನು ಹೊಯ್ಸಳದೇಶದ ದೇವಳಿಗೆಯನಾಡಿನಲ್ಲಿಯ ಮುಗುಳಿಯಪುರದ ಅಧಿಪನೆಂದೂ ಪೂಜ್ಯಪಾದನ ಶಿಷ್ಯನೆಂದೂ ಹೇಳಿಕೊಂಡಿದ್ದಾನೆ. "ಧರೆಗನುರಾಗಮಂ ಹರಿಹರಕ್ಷಿತಿಪಂ ಕುಡುತಿರ್ಪನೊಲ್ಮೆಯಿಂ" ಎಂದು ಹೇಳುವುದರಿಂದ ಈತನು ವಿಜಯನಗರದ ಹರಿಹರರಾಜನ ಕಾಲದಲ್ಲಿ ಇದ್ದಂತೆ ತಿಳಿಯುತ್ತದೆ.

ಎರಡನೆಯವನು ಕಮ್ಮೆಕುಲದ ವಿಶ್ವಾಮಿತ್ರಗೋತ್ರದ ರೆಮ್ಮಾರ್ಯರಾಮರಸನಮಗನು. ಶಶಿಪುರದ ಸೋಮೇಶ್ವರನ ವರಪ್ರಸಾದದಿಂದ ಗ್ರಂಥವನ್ನು ಬರೆದಂತೆ ಹೇಳುತ್ತಾನೆ. ತನ್ನ ನಿಘಂಟುವನ್ನು ಶಕ 1320 ರಲ್ಲಿ—ಎಂದರೆ 1398 ರಲ್ಲಿ, ಬರೆದಂತೆ ಹೇಳಿದ್ದಾನೆ.

ಮೂರನೆಯವನು ಹೊಯ್ಸಳದೇಶದ ಹೊಸವೃತ್ತಿಯ ನಾಡಿನಲ್ಲಿರುವ ಕಲ್ಲಹಳ್ಳಿಯ ಅಧಿಪನೆಂದೂ ಮಹಾಮಂಡಲೇಶ್ವರಚಂಗಾಳ್ವಭೂಮಿಪಾಲನ ಸಚಿವರ ವಂಶದಲ್ಲಿ ಹುಟ್ಟಿದವನೆಂದೂ ಕಲ್ಲಹಳ್ಳಿಯ ಪ್ರಭುವಾದ ವಿಜಯೇಂದ್ರನ ಮಗನೆಂದೂ ತನ್ನ ಗ್ರಂಥಗಳಲ್ಲಿ ಹೇಳಿಕೊಂಡಿದ್ದಾನೆ ಸಮ್ಯಕ್ತ್ವಕೌಮುದಿಯನ್ನು ಶಕ 1431 ರಲ್ಲಿ—ಎಂದರೆ 1508 ರಲ್ಲಿ, ಬರೆದಂತೆ ಹೇಳಿದ್ದಾನೆ.

ಅಲ್ಲದೆ 1432 ರಲ್ಲಿ ಹುಟ್ಟಿದ ಶ್ರ. ಚಿ. 258 ನೆಯ ಸಂಸ್ಕೃತಶಾಸನವನ್ನು ಒಬ್ಬ ಮಂಗರಾಜನು ಬರೆದಂತೆ ಆ ಶಾಸನದ ಅಂತ್ಯಭಾಗದ ಪದ್ಯದಿಂದ [1] ತಿಳಿಯುತ್ತದೆ. ಈತನೂ ಕನ್ನಡದಲ್ಲಿ ಬರೆದಿದ್ದರೂ ಇರಬಹುದು.

---

## ಮಂಗರಾಜ I. ಸು. 1360.

ಈತನು ಖಗೇಂದ್ರಮಣಿದರ್ಪಣವನ್ನು ಬರೆದಿದ್ದಾನೆ. ಇವನು ಜೈನಕವಿ; ಹೊಯ್ಸಳರಾಜ್ಯದಲ್ಲಿಯ ದೇವಳಿಗೆಯೆಂಬ ನಾಡಿನ ಮುಖ್ಯಪಟ್ಟಣವಾದ ಮುಗುಳಿಯಪುರದ ವಿಭು. ಇವನ ಗುರು ಪೂಜ್ಯಪಾದಮುನಿ, ಹೆಂಡತಿ ಕಾಮಲತೆ. ಇವನಿಗೆ ಮೂವರು ಪುತ್ರರಿದ್ದಂತೆ ತಿಳಿಯುತ್ತದೆ.

ಈತನು "ಧರೆಗನುರಾಗಮಂ ಹರಿಹರಕ್ಷಿತಿಪಂ ಕುಡುತಿರ್ಪನೊಲ್ಮೆಯಿಂ" ಎಂಬುದರಿಂದ ವಿಜಯನಗರದ ರಾಜನಾದ ಹರಿಹರನ (1336—1353) ಕಾಲದಲ್ಲಿದ್ದಂತೆ ತಿಳಿಯುತ್ತದೆ; ಕೇಶವವರ್ಣಿಯನ್ನು (1359) ಸ್ಮರಿಸುವುದ

---

[1] ಸ್ವಬಂಧಧ್ವನಿಸಂಬಂಧಾ ಸದ್ಯಾಗೋತ್ಪಾದನಕ್ಷಮಾ।
ಮಂಗರಾಜಕವೇರ್ವಾಣೀ ವಾಣೀನೀಣಾಯತೇ ತರಾಂ॥

ರಿಂದ ಅವನಿಗೆ ಸಮಕಾಲದಲ್ಲಿಯೋ ಸ್ವಲ್ಪ ಈಚೆಯೋ ಇದ್ದಿರಬೇಕು; ಸುಮಾರು 1360 ರಲ್ಲಿ ಇದ್ದಿರಬಹುದೆಂದು ತೋರುತ್ತದೆ.[1]

ಈತನಿಗೆ ಸುಲಲಿತಕವಿಪಿಕವಸಂತ, ವಿಭುವಂಶಲಲಾಮ, ಕವಿಜನೈಕಮಿತ್ರ, ಅಗಣಿತಗುಣನಿಳಯ, ಅಖಿಳವಿದ್ಯಾಜಲನಿಧಿ, ಪಂಚಗುರುಪದಾಂಬುಜಭೃಂಗ ಎಂಬ ಬಿರುದುಗಳಿದ್ದಂತೆ ತೋರುತ್ತದೆ. ಅಲ್ಲದೆ ಕೆಲವು ಪದ್ಯಗಳಲ್ಲಿ ಮನೋಹರ ಚರಿತ, ಕವಿಪದ್ಮಭಾಸ್ಕರ, ಸುಜನವರೇಣ್ಯ, ಬುಧಮಿತ್ರ, ಗುಣಗಣನಿಳಯ, ಅತಿ ಹಿತವಚನ, ಅಹಿಮದಗರುಡ, ಸಾಹಿತ್ಯವೈದ್ಯವಿದ್ಯಾಂಬುನಿಧಿ, ವಿದಗ್ಧಾಭರಣ, ಭಿಷಗ್ವರತಿಲಕ, ಸಕಲಸುಜನಸೇವ್ಯ, ವಿದಗ್ಧಚೂಡಾರತ್ನ, ವಿವೇಕಚೂಡಾರತ್ನ, ಮೊದಲಾದ ಸಂಬೋಧನಗಳು ದೊರೆಯುತ್ತವೆ. ಆರನ್ನು ಸಂಬೋಧಿಸಿ ಈ ಗ್ರಂಥವನ್ನು ಹೇಳಿರಬಹುದೋ ತಿಳಿವುದಿಲ್ಲ. ಆದರೆ ಮೇಲೆ ಹೇಳಿದ ಇವನ ಬಿರುದುಗಳಿಂದಲೂ ಕವಿಗಳು ಸ್ವಕೃತಪದ್ಯಗಳ ಕೊನೆಯಲ್ಲಿ ತಮ್ಮ ಹೆಸರುಬಿರುದುಗಳನ್ನು ಹೀಗೆ ಹೇಳಿಕೊಳ್ಳುವ ಸಂಪ್ರದಾಯವಿರುವುದರಿಂದಲೂ ಈ ಸಂಬೋಧನಗಳು ಕವಿಗೆ ಅನ್ವಯಿಸಬಹುದೆಂದು ತೋರುತ್ತದೆ.

ತನ್ನ ಗುಣಾದಿಗಳನ್ನು ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ:—

ಶ್ರೀಜನಪಾದಪದ್ಮಮಧುಪಂ ಪರಮಾತ್ಮವಿಲೀನಚೇತನಂ।
ಭೋಜದಳೇಕ್ಷಣಂ ಪರಮಲಕ್ಷಣಲಕ್ಷಿತದಿವ್ಯದೇಹದಿಂ॥
ರಾಜಸಮಾನಸಂದ್ರವತಿವೈಭವಸಜ್ಜನಪಾರಿಜಾತನೆಂ।
ದೀಜಗಮಚ್ಚುಯಿಂದೆ ಮಿಗೆ ಬಣ್ಣಿಸುಗುಂ ವಿಭುಮಂಗರಾಜನಂ॥

ಸುರುಚಿರವೃತ್ತರತ್ನಸದನಂ ಜನರಕ್ಷಣದಕ್ಷನಬ್ಜಮಂ।
ದಿರೆಯ ಸುಜನ್ಮಭೂಮಿ ಪುರುಷೋತ್ತಮಸಂಗತನಾವಗಂ ಶುಭಾ॥
ಕರವಿಲಸತ್ಸರಸ್ವತಿ ನಿರಂತರಮಪ್ಪುದಱಂದೆ ಸಿಂಧುಗಂ।
ದೊರೆ ಮುಗುಳೇಪುರಪ್ರಭು ವಿದಗ್ಧಶಿಖಾಮಣಿ ಮಂಗಳೋತ್ತಮಂ॥

ಇವನ ಗ್ರಂಥ

## ಖಗೇಂದ್ರಮಣಿದರ್ಪಣ.

ಇದು ಕಂದವೃತ್ತರೂಪವಾದ ವಿಷವೈದ್ಯಗ್ರಂಥ; 16 ಅಧಿಕಾರಗಳಾಗಿ ಭಾಗಿಸಲ್ಪಟ್ಟಿದೆ. ವಿದ್ವದ್ಗೋಷ್ಠಿಯಲ್ಲಿದ್ದಾಗ ಒಂದು ದಿವಸ "ಕನ್ನಡದಿಂ ಸಮಸ್ತಜನಗೋಚರಮಪ್ಪವೊಲಣ್ಣ ಪೇೞ್ದಿರ್ದು ನೀಂ ನಮಗೆಂದು ಭವ್ಯರೊಸೆದಟ್ಟಿಯೊಳ್

1. ಶ್ರ. ಬೆ. 253 ನೆಯ ಶಾಸನವು (1422) ಒಬ್ಬ ಮಂಗಪದಂಡನಾಥನನ್ನು ಸ್ತುತಿಸುತ್ತದೆ. ಅವನು ಬೇರೆ ಮನುಷ್ಯನೆಂದು ತೋರುತ್ತದೆ.

ಬೆಸಗೊಳೆ" ಈ ಕೃತಿಯನ್ನು ಮಾಡಿದೆನೆಂದು ಹೇಳುತ್ತಾನೆ. ವೈದ್ಯಗ್ರಂಥವನ್ನು ಬರೆದುದಕ್ಕೆ ಕಾರಣವನ್ನೂ ಭೇಷಜವು ಮೋಕ್ಷಸಾಧನವೆಂಬಂಶವನ್ನೂ ಈ ಭಾಗದಲ್ಲಿ ಹೇಳಿದ್ದಾನೆ:—

ಮರನಂ ಗಾಳಿಯ ದೂಳಿಯಂ ರಜನಿಯಂ ನೀರಾಟಮಂ ಬೇಟಮಂ ।
ಸುರೆಯಂ ಸೂಳೆಯರಂ ವಿಟಾಟವಿಕರಂ ಕೊಂಡಾಡಿ ಬಿಂಡಾಗದೀ ॥
ಧರೆಯೊಳ್ ಸರ್ವಜನೋಪಕಾರಮೆನಲೀಮಂತ್ರೌಷಧಿವ್ರಾತಮಂ ।
ನಿರುತಂ ಭಾವಿಸಿ ಪೇಳ್ದಿ ಮಾನವನೆ ತಾಂ ದೇವಂ ಧರಾಚಕ್ರದೊಳ್ ॥

ಎಂದಶೇಷಬುಧಜನೋಪಕಾರಾರ್ಥಂ ಸ್ಥಾವರಜಂಗಮಕೃತ್ರಿಮಪ್ರಭೃತಿ ನಾನಾವಿಷಾಪಹರಣ ಕಾರಣಮಪ್ಪ ಗ್ರಂಥಮಂ ಪೇೞಲೊಡರ್ಚಿದೆಂ.

ನರರ್ಗರುಜತೆ ಭೇಷಜದಿಂ । ದರುಜತೆಯಿಂ ದೇಹ ದೇಹದಿಂದಂ ಜ್ಞಾನಂ ।
ಪರಮಜ್ಞಾನದೆ ಮೋಕ್ಷಂ । ದೊರೆಕೊಳ್ಗುಮದೆಂದು ಪೇೞ್ದಪೆಂ ಭೇಷಜಮಂ ॥

ವೈದ್ಯಗ್ರಂಥಗಳನ್ನು ಬರೆದಿರುವ ಆರ್ಯರ ಹಲವು ಮತಗಳಲ್ಲಿ ತನಗೆ ತಿಳಿದುವನ್ನು ಸಂಗ್ರಹಿಸಿ ಬರೆದುದಾಗಿ ಹೇಳುತ್ತಾನೆ. ಈ ಗ್ರಂಥದಲ್ಲಿ ಸ್ಥಾವರವಿಷಪ್ರಕ್ರಿಯೆಯ ಭಾಗವನ್ನು ಪೂಜ್ಯಪಾದನ ವೈದ್ಯಗ್ರಂಥದಿಂದ ಸಂಗ್ರಹಿಸಿರುವಂತೆ ಈ ಪದ್ಯದಲ್ಲಿ ಹೇಳುತ್ತಾನೆ :—

ಪರಜಿನವಚನಾಂಭೋರಾಶಿಯೊಳ್ ತಮ್ಮ ಧೀಮಂ ।
ದರಸುಮಧನಜಾತಂ ವೈದ್ಯಶಾಸ್ತ್ರಾಮೃತಂ ತ ॥
ದ್ವರಮುನಿಪತಿಯಪ್ಪೀಪೂಜ್ಯಪಾದೋಕ್ತಿಯೊಳ್ ಸ್ಥಾ ।
ವರವಿಷಹರಮುಂ ಸಂಕ್ಷೇಪದಿಂದೊಪ್ಪೆ ಪೇೞ್ದಿಂ ॥

ಈ ಗ್ರಂಥದಲ್ಲಿ ಪ್ರತಿಪಾದಿತವಾದ ವಿಷಯಗಳು ಕೆಳಗಣ ಪದ್ಯಗಳಲ್ಲಿ ಹೇಳಿವೆ :—

ಉರಗಮೃಗಮಾಖು ವೃಶ್ಚಿಕ । ಸುರಿ ಕೀಟಕಮುಂ ಕುಧಾನ್ಯತಂಬುಲಕನಕಂ ।
ನಿರುಪಮಿತಕೃತ್ರಿಮಂಗಳ್ । ಪರಿಕಿಪ್ಪೊಡಿವು ದಶವಿಧಂ ವಿಷಂಗಳೆನಿಕ್ಕುಂ ॥

ಇವಱೊಳ್,

ಸ್ಥಾವರಜಂಗಮಕೃತ್ರಿಮ । ಮಾವಾವ ವಿಷಕ್ಕೆ ತತ್ಪ್ರತೀಕಾರಮುಮಂ ।
ಜೀವಹಿತಮುಪ್ಪುದಂ ಪರಿ । ಭಾವಿಸಿ ಪೇೞ್ವೆಂ ಜಿನಾಗಮೋಕ್ತಕ್ರಮದಿಂ ॥

ಗ್ರಂಥಾವತಾರದಲ್ಲಿ ಕವಿ ಪಾರ್ಶ್ವನಾಥನನ್ನು ಸ್ತುತಿಸಿದ್ದಾನೆ. ಬಳಿಕ ಸಿದ್ಧಾಧಿಗಳು, ಸರಸ್ವತಿ, ಪದ್ಮೈ, ಗಣಧರರು ಇವರನ್ನು ಸ್ಮರಿಸಿ ಸಮಂತಭದ್ರನಿಂದ ಕೇಶವವರ್ಯನವರೆಗೆ [1] ಗುರುಗಳನ್ನು ಕ್ರಮವಾಗಿ ಸ್ತುತಿಸಿದ್ದಾನೆ.

ಆಶ್ವಾಸಗಳ ಕೊನೆಯಲ್ಲಿ ಈ ಗದ್ಯವಿದೆ—

ಇದು ಸಕಲವಿದಮಲಜನೇಂದ್ರೋಕ್ತಸಿದ್ಧಾಂತಪಯಃಪಯೋಧಿಪಾರಗ ಶ್ರೀಪೂಜ್ಯ ಪಾದಮುನೀಂದ್ರಚಾರುಚರಣಾರವಿಂದಗಂಧಗುಣಾನಂದಿತಮಾನಸಂ ಶ್ರೀಮದಖಿಳಕಳಾಗ ಮೋತ್ತುಂಗ ಮಂಗವಿಭುವಿರಚಿತಮಪ್ಪ ಪಗೇಂದ್ರಮಣಿದರ್ಪಣದೊಳ್.

ವಿಷಯವು ವೈದ್ಯವಾದರೂ ಪದ್ಯಗಳು ಲಲಿತವಾಗಿಯೂ ಧಾರಾಳವಾಗಿಯೂ ಇವೆ. ಬಂಧವನ್ನು ನೋಡಿದರೆ ಈತನು ಪ್ರೌಢಕವಿಯೆಂಬುದಕ್ಕೆ ಅಡ್ಡಿಯಿಲ್ಲ. ಈತನ ಬಂಧದ ವಿಷಯವಾಗಿ ಈ ಪದ್ಯವು ದೊರೆಯುತ್ತದೆ:—

ಪ್ರಾಸಂ ಪದಬಂಧಮನು । ಪ್ರಾಸಂ ಯಮಕಂ ರಸಾನುಭಾವಂ ಸಾದರ್ಥ ।
ದೇಸೀಯಂ ಗಣನೀಯಮುಂ । ಭಾಸುರದಿಂ ಮಂಗನುಸಿರ್ವ ಕವಿತೆಗೆ ಸಾಜಂ ॥

ಈ ಸ್ತುತಿಯನ್ನು ನೋಡಿದರೆ ಈತನು ಬೇರೆ ಗ್ರಂಥಗಳನ್ನೂ ಬರೆದಿರಬಹುದೆಂದು ತೋರುತ್ತದೆ. ನಮಗೆ ಅವುಗಳೂ ದೊರೆತಿಲ್ಲ.

ಈ ಗ್ರಂಥದಿಂದ ಚಿಕಿತ್ಸೆ ಮೊದಲಾದ ವಿಷಯಗಳನ್ನು ಹೇಳುವ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

ಓಷಧಿಯ ಅವಯವಗಳ ಗುಣತಾರತಮ್ಯ.

ಪ್ರಸವಕ್ಕೆ ಪತ್ರ ಪತ್ರ । ಕ್ಕೆಸವ ಫಲಂ ಫಲಕೆ ವಲ್ಲಿ ವಲ್ಲಿಗೆ ಪಣ್ಣಂ ।
ತಸದೃಶದ ಪಣ್ಣಿ ಬೇರ್ಗಳ್ । ವಿಶೇಷತರವೀರ್ಯವೃದ್ಧಿಯಕ್ಕೆಂಟುಗುಣಂ ॥ 958 ॥

ಸದ್ವೈದ್ಯ.

ಸ್ಥಿರತರಬುದ್ಧಿ ಭಾವಯುತನನ್ಯಯರುದ್ಧನನೂನಮೂರ್ತಿ ಸ ।
ತ್ಪುರುಷನನೂನವಾಕ್ಯನಮಲಾಂಗನಕುತ್ಸಿತಕರ್ಮನಾಗಳುಂ ॥
ಪರಹಿತವೃತ್ತನೊಳ್ಳಿದನುದಾರಗಭೀರಗುಣಾಢ್ಯನಪ್ಪವಂ ।
ಧರೆಗೆ ಭಿಷಗ್ವರಾಗ್ರಣಿಯೆನಿಪ್ಪನತಂ ಪ್ರನವದ್ಯವರ್ಜಿತಂ ॥ 959 ॥

ವಿಷದೋಷದ ಲಕ್ಷಣ.

ಅತಿಸಾರಂ ಮೂರ್ಛೆ ದಾಹಂ ಮತಿವಿಕಳತೆಯುಂ ಭ್ರಾಂತಿ ಹೃಚ್ಛೂಲೆ ತಾಪಂ ।
ಗತಸತ್ವಂ ನೇತ್ರಮಾಂದ್ಯಂ ಪ್ರಕೃತಿವಿಕೃತಿಯುಂ ಗದ್ಗದಧ್ವಾನಕಂಠಂ ॥

---

1. ಸಮಂತಭದ್ರ, ಪೂಜ್ಯಪಾದ ವೀರಸೇನ, ಕೊಂಡಕುಂದ, ಪೂಜ್ಯಪಾದ, ಭಾನುಕೀರ್ತಿಮಲಧಾರಿ ಮುನಿ, ಸೋಮ, ಧರ್ಮಭೂಷಣ, ಸ್ವಗುರು ಪೂಜ್ಯಪಾದಮುನಿ, ಅಭಿನವಚಂದ್ರಕೀರ್ತಿ, ಲಕ್ಷ್ಮೀಸೇನ, ಮಾಣಿಕ್ಯನಂದಿ, ಶಾಂತಿಷೇಣ ಕೇಶವಸೇನ.

ಗತಿಭಂಗಂ ಶ್ವಾಸಕಾಸಂ ರುಧಿರವಮನಮುಂ ಸ್ವೇದಮತ್ಯಂತಖೇದಂ ।
ಧೃತಕೋಪಂ ತಾಮಿವೆಲ್ಲಂ ವಿಷಮತರಮೆನಿಪ್ಪಂಗಚಿಹ್ನಂಗಳಕ್ಕುಂ ॥960॥

## ಚಿಕಿತ್ಸೆ.

ವಮನೋಪವಾಸಮಂತ್ರ । ಕ್ರಮದಿಂ ಮಾಡಿಸಿ ಮಲಾಪಹರಣಮನಿಂಬಂ ।
ಸಮನಿಸಿ ಬಟ್ಟಕ್ಕಮವರ್ಗಂ । ದು ಮಹಾಭೀಷಜಮನೀಯೆ ವಿಷಹರಮಕ್ಕುಂ
॥ 961 ॥

## ವಮನಪ್ರಯೋಗಾದಿ.

ಮದನಫಲಲೋಧ್ರಮೆಂಬಿವ । ನುದಕದೊಳಂ ಕುಡಿಯೆ ಕುಡುವುದಂತಲ್ಲದೊಡೀ ।
ವುದು ಬಜೆಯೊಳುಪ್ಪುಮಂ ಬೆರ । ಸದು ವಮನಮುದಾಗೆ ಸರ್ವವಿಷಸಂಹರಣಂ
॥ 962 ॥

ಉದಕದೊಳೆ ಬಿಳಿಯ ಬೀರಂ । ಪದನಜಾದೀಯಲ್ಕೆ ವಿಷಮನಬ್ಭಾಗಾವಮನಂ ।
ಅದು ದೊರಕದಂದು ಚುಂಚಿನೊ । ಳೊದವಿದ ಬೀಜಮುಮನರೆದು ಕೊಡುವುದು
[ಬೇಗಂ ॥ 963 ॥

ನೀರೊಳ್ ಮಜ್ಜಿಗೆಸಿ ಕೊಡು ಕಾ । ಬ್ಭೀರೆಯ ಬೀರಂ ಸಮಾಕ್ಷಿಕಂ ಸಘೃತಂಸಂ ।
ಹಾರಿಸುಗುಂ ವಮನಂ ವಿಷ । ದಾರುಣಮಂ ತತ್ಕ್ಷಣಂ ಭಿಷಗ್ವರಮತದಿಂ ॥ 964 ॥

ಮುರದಿಗುಡೆಗೂಡಿ ಕೊತ್ತುಂ । ಬರಿಯಿಂದಂ ಕಳೆವುದಲ್ತೆ ಹಾಲಾಹಲಮಂ ।
ನಿರುತಂ ಗುಡಕಾರ್ಪಾಸದ । ಸುರಸಂಗಳ್ಕಾಲಕೂಟಮಂ ಸಂಹರಿಕುಂ ॥ 965 ॥

ನೀರಿಂದೆ ಬಿಳಿಯಗುಂಜೆಯ । ಬೀರಂ ಬಜೆವೆರಸು ರಾಗದಿಂ ಕುಡಿಸಲೊಡಂ ।
ದಾರುಣವಿಷದಗ್ಧಂ ಸಂ । ಸಾರದೆ ಪೆಜಿತೇಂ ವಿಷಾಪಪಾರಮದಕ್ಕುಂ ॥ 966 ॥

ಜಂಬೀರಪುತ್ರಜೀವಿಯ । ನಿಂಬಿಂ ಕುಡಿಸಲ್ಲದಂದು ಹೆಸಜಾನ ಹೊಸಕ ।
ಟ್ಟಿಂಬುದುಮಂ ಕುಡೆ ಜೇಪಾ । ಳಂಬೊರೆದ ವಿಷಂಗಳಂ ವಲಂ ಸಂಹರಿಕುಂ
॥ 967 ॥

ಕೊಡಸಿಗೆಯ ರಸಂ ಮೆಣಸಂ । ಕುಡುವುದು ಮೇಣ್ ತಕ್ರನಾಗರಂಗಳನೊಲವಿಂ ।
ಕುಡುವುದು ಬಾಲ್ಮೆಯ ಪಣ್ಣಿಂ । ತೊಡರ್ದ ವಿಷಂ ಕೆಡುವುದಲ್ತೆ ಮರಿಚದೊಳೆ ವಿಷಂ
॥ 968 ॥

ನಸುಗುನ್ನಿಯ ತಿನಿಸಿಂಗಂ । ಪಸುವಿನ ಘೃತಮಲ್ಲದಂದು ಭಸಿತಂ ಮೇಣ್ ನೀ ।
ಲಿಸಮೇತಹಂಸಪಾದಿಯು । ಮಿಸೆವ ಸುಗಂಧಿಗಳೆ ಬಗೆಯೆ ನಿರ್ವಿಷಮಕ್ಕುಂ
॥ 969 ॥

ನಜುವಂಜಿನೆಲಾವರಿಕೆಯ । ತುಜುಚೆಯಾಕರಿಯಂ ಜಲಾನ್ವಿತಂ ಪೂಸುಗೆ ಮೇಣ್ ।
ಪಜ್ಜುಗುಂ ಪಂಕವಿಲೇಪದಿ । ನಜ್ಜ ನಸುಗುನ್ನಿಯ ವಿಷಂ ಭಿಷಗ್ವರತಿಲಕಾ ॥ 970 ॥

ಏಲಕ್ಕಿ ಕರುಕುಸಾಲೆಯ । ದಲ್ಲದೊಡೆಳ್ಳಿಣ್ಣೆ ಮಯಣಯುತಮಾದುದಜಂ ।
ದಲ್ಲದೊಡೆ ಮಧುಕಘೃತದಿಂ । ನಿಲ್ಲವು ಭಲ್ಲಾತಕಾಖ್ಯದೊಂದಿದ ಪುಣ್ಗಳ್ ॥ 971 ॥

ನೀರೊಳ್ ನೆಯ್ಯಂ ಪೊಯ್ದುಂ । ಜಾರಿಸಿ ತಳಿಗೆಯೊಳೆ ಬಿಡದೆ ಮೂರ್ಸಾರ್ಟ್ರಿರೆಗಂ ।
ನೀರಿಂದೆ ತೊಳೆದು ಪೂಸೆ ನಿ । ವಾರಿಸುಗುಂ ಗೇರಪುಣ್ಣನಂತಾಕ್ಷಣದೊಳ್ ॥ 972 ॥

ಆದರದಿಂದಳಿಲೆಯನು । ಷ್ಣೋದಕದಿಂ ಕಡೆದ ತಕ್ರದೊಳ್ ಬಿರಸಿಯದಂ ।
ಬಾದೇಂ ಕುಡಿಸಲ್ ಮದ್ಯದೊ । ಳಾದ ಮದಂ ಕೆಡುಗುಮೆಂಬುದದು ಕೇವಳಮೇ
॥ 973 ॥

ನೀರುಮನಾಕಂತಾಂತಂ । ಪೂರಿಸಿದ ನರಂಗಮುಮರ್ದುವಳ್ಳಿಯ ಬೀರಂ ।
ಜಾರಿಸಿ ಕಳಿಯಂ ಕುಡಿಸಲ್ । ಸಾರಿ ಮರಲ್ವೊಡಲಿನಾನರಂ ಜೀವಿಸುಗುಂ
॥ 974 ॥

ಕುಂಬಾಜಿರ ತಿಗುರಿಯೊಳೆ । ಟ್ಟಿಂಬಿನೊಳಂ ತಿರುಪಿ ನೀರೊಳಟ್ಟುವ್ವದರದೊಳಂ ।
ತುಂಬಿದ ನೀರಂ ಕಳೆ ಬಟ್ಟ । ಕಂ ಬಿಡದಗ್ನಿಯೊಳೆ ಕಾಸಿ ಮಾಟ್ಟುವ್ವದು ಮರ್ದಂ
॥ 975 ॥

ಪೂಸುವುದು ಭಸಿತಮುಂ ತಾಂ । ಕಾಸುವುದು ಶರೀರಮುಂ ಚಿಮರ್ವ್ವನ್ನೆಗಮುಪ ।
ವಾಸವಿರಿಸುವುದು ಹಿತಮ । ತ್ಯಾಸಂ ನೀರ್ಗುಡಿದು ಬಸಿಜುಬಾತನ ತನುವಂ
॥ 976 ॥

ಕಲ್ಲುಗಳೊತ್ತಿ ಕಾಲೊಳುಜ್ಜಿ ನೊಂದೊಡೆ ಬಾತು ಸಿಗುರ್ಗಳಿಂದೆ ನೋ ।
ವುಳ್ಳೊಡೆ ಭಾನುದುಗ್ಧಮನೆ ಪೊಯ್ದು ಕರಂ ಸೊಗಸಪ್ಪ ಮಾಜ್ಕೆಯಿಂ ॥
ಮೆಲ್ಲನೆ ಮೆಟ್ಟಿ ಕಾಯ್ಪೊಲೆಯನಾಗಳೆ ಮಾಣ್ಗುಮದರ್ಕೆ ಬಾವಿನಿಂ ।
ಮುಳ್ಳುಸಿಗುರ್ಗಳುಂ ಪೊಱಗಮುಚ್ಚಳಿಕುಂ ವಿಭುಮಂಗನುಕ್ತಿಯಿಂ ॥ 977 ॥

---

## ಅಭಿನವಶ್ರುತಮುನಿ. ಸು. 1365.

ಈತನು ಮಲ್ಲಿಷೇಣರಚಿತವಾದ ಸಜ್ಜನಚಿತ್ತವಲ್ಲಭಕ್ಕೆ ಕರ್ನಾಟಕವ್ಯಾಖ್ಯಾನವನ್ನು ಬರೆದಿರುವಂತೆ ತಿಳಿಯುತ್ತದೆ. ಮದರಾಸ್ ಪ್ರಾಚ್ಯಕೋಶಾಲಯದಲ್ಲಿರುವ ಈ ಗ್ರಂಥದ ಒಂದು ಪ್ರತಿಯ ಕೊನೆಯಲ್ಲಿ "ಕರ್ನಾಟಕವ್ಯಾಖ್ಯಾ—ಚಂದ್ರಕೀರ್ತಿಯಮಿನಶ್ಶಿಷ್ಯೇಣ ಪುಣ್ಯಾತ್ಮನಾ" ಎಂದು ಒಂದೆಡೆಯಲ್ಲಿಯೂ "ಅಭಿನವಶ್ರುತಮುನಿನಾ ಕೃತಾ" ಎಂದು ಮತ್ತೊಂದೆಡೆಯಲ್ಲಿಯೂ ಹೇಳಿದೆ. ಆ ಪ್ರತಿ ಶಕ 1439 ರಲ್ಲಿ ಬರೆದುದು. ಶ್ರವಣಬೆಳ್ಗೊಳದ 254 ನೆಯ ಶಾಸನದಲ್ಲಿ (1398) ಒಬ್ಬ ಅಭಿನವಶ್ರುತಮುನಿಯನ್ನು ವಿಶೇಷವಾಗಿ ಸ್ತುತಿಸಿದೆ.

ಈತನೇ ಕವಿಯಾಗಿರಬಹುದು. ಮೇಲಣ ಶಾಸನವು ಹುಟ್ಟಿದ ಕಾಲಕ್ಕೆ ಸ್ವಲ್ಪ ಹಿಂದೆ ಈತನು ಇದ್ದಹಾಗೆ ತೋರುವುದರಿಂದ ಇವನ ಕಾಲವು ಸುಮಾರು 1365 ಆಗಿರಬಹುದು.

---

## ಭೀಮಕವಿ 1369.

ಈತನು ಬಸವಪುರಾಣವನ್ನೂ ಭೀಮಕವೀಶ್ವರರಗಳೆಯನ್ನೂ ಬರೆದಿದ್ದಾನೆ. ಭೃಂಗಿದಂಡಕವನ್ನೂ ಬರೆದಿರುವಂತೆ **ಸಿದ್ಧನಂಜೇಶನ** (ಸು. 1650) **ರಾಘವಾಂಕ ಚಾರಿತ್ರ**ದಿಂದ ತಿಳಿಯುತ್ತದೆ. ಇವನು ವೀರಶೈವಕವಿ; ಇವನ ತಂದೆ ಶಿವಕವಿದೇವ.[1] ತಾನು ಉಭಯಕವಿತ್ವಸಮರ್ಥನು ಎಂದು ಹೇಳಿಕೊಂಡಿದ್ದಾನೆ. ಬಸವಪುರಾಣವನ್ನು 'ಉಡುದೇವಸಿಧಿನಯನೇಂದು' ಸಂಖ್ಯಾತವಾದ ಸೌಮ್ಯವರ್ಷದಲ್ಲಿ (ಶಕ 1291)—ಎಂದರೆ 1369 ರಲ್ಲಿ, ಮುಗಿಸಿದಂತೆ ಹೇಳುತ್ತಾನೆ. ಇವನ ಇತರ ಗ್ರಂಥಗಳು ನಮಗೆ ದೊರೆತಿಲ್ಲ.

ಕೊಂಡಗೂಳಿಯಕೇಶಿ, ಸಿರಿಪಂಡಿತ, ಶಿವಲೆಂಕಮಂಚಣಪಂಡಿತ, ಗುರು ಮಲ್ಲಿಕಾರ್ಜುನಪಂಡಿತ, ಇವರುಗಳಿತ್ತುದ್ದಂಡಮತಿಯಿಂದ ಬಸವದಂಡನಾಥನ ಕೃತಿಯನ್ನು ಬರೆದೆನು ಎನ್ನುತ್ತಾನೆ. ಪೂರ್ವಕವಿಗಳಲ್ಲಿ **ಹರೀಶ್ವರ ರಾಘವಾಂಕ**ರನ್ನು ಈ ಪದ್ಯದಲ್ಲಿ ಸ್ತುತಿಸಿದ್ದಾನೆ.—

ಸರಸಮ್ಮದುಮಧುರೋಪಮೆಗಳಂ। ಕುರಿಸೆ ವಸ್ತುಕವರ್ಣಕಂಗಳ।
ನೆರಪಿ ಹರನಂ ಹರಗಣಂಗಳನ್ಮೆದೆ ಕೀರ್ತಿಸಿದ ॥
ಧರೆಗುಭಯಕವಿಶರಭಭೀರುಂ। ಡರಸುಕವಿ ಹರಿಬುಧವರನ ತ।
ನ್ಮರಸುತನ ರಾಘವನ ಕೃಪೆಯಿಂ ರಚಿಸುವೆಂ ಕೃತಿಯಾ ॥

ಈತನನ್ನು **ಪದ್ಮಣಾಂಕ** (ಸು. 1385), **ವಿರೂಪಾಕ್ಷಪಂಡಿತ** (1584), **ಷಡಕ್ಷರದೇವ** (1655) ಮೊದಲಾದ ವೀರಶೈವಕವಿಗಳು ಹೊಗಳಿದ್ದಾರೆ.

ತನ್ನ ಕವಿತೆಯ ವಿಷಯವಾಗಿ ಹೀಗೆ ಹೇಳಿಕೊಂಡಿದ್ದಾನೆ:—

ವೈರಿಪದವಪಶಬ್ದವಚಮ। ತ್ಕಾರಮಧಮೋಪಮೆ ವಿಯತಿ ಪದ।
ಪೂರಕಂ ದುಸ್ಸಂಧಿಯನಿಬದ್ಧಂ ವಿರುದ್ಧಾರ್ಥ ॥
ನೀರಸಂ ಶೈಥಿಲ್ಯವರ್ಣಂ। ಕಾರಕವಿರಹಿತಂ ಕ್ರಿಯಾಳಂ।
ಕಾರಹೀನವೆನಿಪ್ಪ ಪೊಳ್ಳಂ ತೂಜ್ಯ ಕಳೆದಿಂತು ॥

1. ರಾಘವಾಂಕಚಾರಿತ್ರದಲ್ಲಿ ಶಿವದೇವ ಎಂದು ಹೇಳಿದೆ.

ಸರಸಮೃದುತರಯಮಕಗಮಕವಿ। ಸರಸಮಾಸಪ್ರಾಸದೇಶೀ।
ಸರಣಿಶಬ್ದಾರ್ಥೋಪಮಾಚಾತುರ್ಯಮಾಧುರ್ಯಂ॥
ಸರಳಪದಶಯ್ಯಾದೃಢವ್ಯಾ। ಕರಣಯುತಲಾಲಿತ್ಯನಿಯಮಾ।
ಕ್ಷರಸಲಕ್ಷಣಭಾವಮಾಗಿರೆ ರಚಿಸುವೆಂ ಕೃತಿಯಾ॥

ಇವನ ಗ್ರಂಥ

## ಬಸವಪುರಾಣ.

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಆಶ್ವಾಸ 8, ಸಂಧಿ 61, ಪದ್ಯ 3621.[1] ಇದರಲ್ಲಿ ಬಸವನ ಚರಿತವೂ ಅವನು ಮಾಡಿದ ಪವಾಡಗಳೂ ಹೇಳಿವೆ. ಅಲ್ಲಲ್ಲಿ ಶಿವಭಕ್ತರ ಕಥಗಳೂ ಹೇಳಿವೆ. "ಬಡಮತಿಯಾದ ನಾನು ಬಸವ ಪುರಾಣವನ್ನು ಹೇಗೆ ರಚಿಸಲಿ" ಎಂದು ಕವಿ ಶಿವಯೋಗನಿದ್ರಾಮುದ್ರಿತ ದೊಳಿರಲು ಪಾಲ್ಕುರಿಕೆಸೋಮೇಶನೂ ಅನಘದೇವಾರ್ಯನೂ ಕನಸಿನೊಳು ಬಂದು "ನಾವು ನಿನ್ನಾತ್ಮದೊಳಗಿದ್ದು ಬಸವಕಥೆಯನ್ನು ವಿರಚಿಸುವೆವು; ಬರೆದು ಕೊಳ್" ಎನ್ನಲು ಅವರಾಜ್ಞೆಯನ್ನು ಶಿರಸಾವಹಿಸಿ ಮತಿವೆತ್ತು "ಅಸಮಲಿಂಗೈಕ್ಯಾನುಭಾವಪ್ರಸರಮತಿ ಕವಿ ಸೋಮನಾಥಂ। ರಸಮೊಸರೆ ಮುನ್ನಿಸಿರ್ದುದನೆ ಕನ್ನಡಿಸಿ ಪೇಟ್ಟಿಂ" ಎಂದು ಹೇಳುತ್ತಾನೆ.

ಗ್ರಂಥಾವತಾರದಲ್ಲಿ ಕವಿ ಬಸವನನ್ನು ಸ್ತುತಿಸಿ ಬಳಿಕ ಸಿದ್ಧವಟಧಾಮನಾದ ಈಶ್ವರನನ್ನು ಹೊಗಳಿದ್ದಾನೆ.

ಆಶ್ವಾಸಗಳ ಕೊನೆಯಲ್ಲಿ ಈ ಪದ್ಯವಿದೆ:—

ಇದು ಸಕಳಮಾಹೇಶ್ವರಾಮಳ। ಪದಪಯೋಜಪರಾಗಮದಷ।
ಟ್ಪದವೆನಿಪ ಪಾಲ್ಕುರಿಕೆಸೋಮೇಶ್ವರನ ಕಾರುಣ್ಯ॥
ಒದಗಿದಖಿಳಕಳಾಪ್ರಪೂರಿತ। ಹೃದಯ ಭೀಮಕವಿಪ್ರಣೀತಾ।
ಭ್ಯುದಯಬಸವಪುರಾಣಕಥೆಯೊಳ್ . . ॥

ಇವನ ಬಂಧವು ಲಲಿತವಾಗಿಯೂ ಧಾರಾಳವಾಗಿಯೂ ಇದೆ.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

---

1. ಗುರುರಾಜಚಾರಿತ್ರದ (ಸು.1650) ಒಂದು ಪ್ರತಿಯ ಗ್ರಂಥಕ್ಕೆ ಸೇರದ ಮೊದಲು ಓಲೆಗಳಲ್ಲಿ ಬಸವಪುರಾಣದ ವಿಷಯವಾಗಿ ಹೀಗೆ ಬರೆದಿದೆ:—ಬಸವಪುರಾಣದ ಪ್ರತಿಗಳಲ್ಲಿ ಷಟ್ಪದಂಗಳು ಸೂತ್ರತಪ್ಪಿ ಹಿಂಚುಮುಂಚಾಗಿಯೂ ಪೂರ್ವಾರ್ಧಪರಾರ್ಧಗಳು ಹಿಂಚುಮುಂಚಾಗಿಯೂ ಕಥೆಯೂ ಕಾಂಡಗಳೂ ಹಿಂಚುಮುಂಚಾಗಿಯೂ ಇವೆ. ಕಾಂಡಗಳಲ್ಲಿ ಬಂದ ನಾಂದಿಯೇ ಪುನರಪಿ ಬಂದಿವೆ. ಕೆಲವು ಪದ್ಯಗಳು ಹೆಚ್ಚಿಗೆ. ಅಂತು ಕಾಂಡಗಳ ಕ್ರಮ ಸಂಧಿ ೬೦ ಕ್ರಮ ಪದ ೭೬೨೧ಕ್ಕೆ ಕ್ರಮ ಹೆಚ್ಚಾಗಿದ್ದರೆ ಹೆಚ್ಚಿಗೆಯೆಂದು ತಿಳಿವುದು, ಕಡಮೆಯಾಗಿದ್ದರೆ ಲೇಖನದೋಷವೆಂದರಿವುದು. ಕೆಲವು ಪದ್ಯಗಳನ್ನು ಸರ್ವಲಕ್ಷಣಪೂರ್ಣವಾಗಿ ತಿದ್ದಿ ನೇರ್ಪಡಿಸಿದರು ನೀಲಕಂಠಾಚಾರ್ಯರು.

## ಕೈಲಾಸ.

ಇಂದುರುಚಿ ಬಲೆದುದೊ ಹರಸ್ಮೇ । ರಂ ದಿವಿಯೊಳಾಕಾರಮಾಯ್ತೊ ಹಿ ।
ಮುಂದಳೆದುದೋ ಕಠಿನಮುಂ ಸುಧೆ ಬೆಳೆದಚಲಮಾಯ್ತೋ ॥
ಕುಂದಚಂದನಮಲ್ಲಿಕಾಹರಿ । ಚಂದನಾಮರಸಿಂಧುಜಲಸಿತ ।
ವೃಂದಮಿಂರೂಪಾದುದೆನೆ ರಜತಾದ್ರಿ ರಂಜಿಪುದು ॥ 978 ॥

## ಭೃಂಗಿ.

ಅಂಗವಂ ನಡುಗಿಸುತೆ ಬಸುಜಂ । ಪೊಂಗಿಸುತಲಕ್ಕುಳಿಸುತುಂ ವಾ ।
ದ್ಯಂಗಳಿಗೆ ಬೆಚ್ಚುತ್ತೆ ಬಿದಜುತೆ ಬಾಯನುಜ್ಜಿಗಿಸುತೆ ॥
ಕಂಗಳಂ ಮೆಳ್ಳಿಸುತೆ ಪಲ್ಲರಿ । ದುಂಗುಟಂಗಳನೂಜಿ ನಡೆಯುತೆ ।
ಭೃಂಗಿ ನಗಿಸುತ್ತೇಡಿಸುತೆ ಶಿವನಿದಿರೊಳಾಡಿದನು ॥ 979 ॥

## ನಾಗಲಾಂಬೆ.

ಕಂದದೆಂದುಂ ದಿನದಿನಕೆ ಕಳೆ । ಗುಂದದೆಂದುಂ ರಾಹುಬಾಧೆಯೊ ।
ಳೊಂದದೆಂದುಂ ಹುಣ್ಣಿಮೆಯ ದಿನದಂದು ಶರದಿಂದು ॥
ಕುಂದಗಂಧಿಯ ವದನರುಚಿಗೊರೆ । ವಂದುದಂದವೆನಿಪ್ಪುದೆಳವೆಜ್ ।
ಯಿಂದವತಿಕಾಂತಿಯೊಳಿಸೆವುದಬಲೆಯ ಮಿಸುಪ ನೊಸಲು ॥ 980 ॥

ಮದಪಿಕಂ ಮುಟ್ಟದ ತಳಿರೊ ಷ । ಟ್ಪದವೆಜಗದರಲೋ ಶುಕಂ ಮು ।
ಟ್ಟದ ಫಳವೊ ಗಜ ಮುಟ್ಟದಂಗಜನಂಬೊ ಕಳಹಂಸೆ ॥
ಕರ್ದುಕದ ಮೃಣಾಳವೊ ಶರಧಿಯು । ಪ್ಪುದಕವೊಂದದ ಮಣಿಯೊ ಫಣಿ ಹಿಡಿ ।
ಯದ ಸುಧಾಕರಬಿಂಬವೋ ಅವಳಿಸೆವ ಕನ್ನಿಕೆಯೋ ॥ 981 ॥

## ಸೂರ್ಯೋದಯ.

ಜಕ್ಕವಕ್ಕಿಗಳಿಕ್ಕೆಗೊಂಡುವು । ಪಕ್ಕಿಗಳು ಗಗನಕ್ಕೆ ನೆಗೆದುವು ।
ಸಿಕ್ಕಿದಳಿ ಹೊಜಿವಂಟುವಬ್ಜಂಗಳ ಬಸುಜಿಳಿದ್ದು ॥
ಉಕ್ಕು ಬಜಿತುದು ಚಂದ್ರಮನ ಮುಸು । ಕಿಕ್ಕಿದುವು ನೆಯ್ದಿಲೆಗಳುಡುಗಳು ।
ದಿಕ್ಕುಗೆಟ್ಟುವು ದೆಸೆದೆಸೆಗೆ ಪದ್ಮಂಗಳರಳಿದುವು ॥ 982 ॥

## ಬಸವ.

ಅಚ್ಚ ಶಿವನೊಂದಚ್ಚು ಭಕ್ತಿಯ । ನಚ್ಚು ಶರಣರ ಮುಚ್ಚು ಹಿರಿಯರ ।
ಮೆಚ್ಚು ಸತ್ಯದ ಕೆಚ್ಚು ಪರವಾದಿಗಳೆದೆಯ ಕಿಚ್ಚು ॥
ಮುಚ್ಚರಿಸುವರ ಭಿಚ್ಚು ಕುಜನರ । ಬೆಚ್ಚು ಶಾಂತಿಯ ಹೆಚ್ಚು ಧೂರ್ತರ ।
ಕೊಚ್ಚು ಕಲಿತನದಚ್ಚು ಸುಖಕಣಿ ಮುಚ್ಚುಮರೆಯಿಲ್ಲ ॥ 983 ॥

### ಬೇಡರು.

ಒಡಲುಗೊಂಡ ತಮಂಧಪಟಲವೊ । ನಡೆವ ನೀಲಾದ್ರಿಗಳೊ ಕೈಕಾ ।
ಲ್ಪಡೆದ ಕಜ್ಜಲಗಿರಿಗಳೋ ಕರ್ಬೊನ್ನ ಭಿತ್ತಿಗಳೋ ॥
ನುಡಿಗಲಿತ ಮಾತಂಗಸಂಘವೊ । ಹೆಡೆಯುಡುಗಿದಸಿತಾಹಿಗಳೊ ಎನ ।
ಲೆಡೆವಿಡದೆ ಸಂದಣಿಸಿ ಬೇಡರು ಬಂದರಾಯೆಡೆಗೆ ॥ 984 ॥

### ಭಕ್ತಿಮಾರ್ಗವನ್ನು ಬಿಟ್ಟು ಕರ್ಮಮಾರ್ಗಾವಲಂಬನೆ.

ಹಟ್ಟಿಯೊಳು ಸುರಧೇನು ಬಂದಳ । ವಟ್ಟರಲು ಗೊಡ್ಡಂ ಪಿಡಿದು ಮತಿ ।
ಗೆಟ್ಟು ಕಜ್ಜದಪೆನೆಂಬವನಪೊಲು ಪಿರಿದು ತವರಾಜ ॥
ಕಟ್ಟಿದಿರೊಳಾಗಳುಮಿರಲ್ಕದ । ಬಿಟ್ಟು ತವುಡಂ ಮುಕ್ಕುವನಪೊಲು ।
ಗಟ್ಟಿವಜ್ರವಿರಲ್ಕೆ ಸುರಗಿಯನರ್ಥಿಸಿದನಪೊಲು ॥ 985 ॥

---

## ಕವಿಪುಟ್ಟಣಾಂಕ ಪಂಡಿತ. ಸು. 1380.

**ಮನ್ಮಥವಿಜಯವನ್ನು** ಬರೆದ **ಕವಿಮಲ್ಲನು** (ಸು. 1400) ಈತನನ್ನು ಹೀಗೆ ಸ್ತುತಿಸಿದ್ದಾನೆ:—

ಚತುರಚತುರ್ಮುಖಂ ಕೃತಕೃತಿಪ್ರಮುಖಂ ವರವೇದಶಾಸ್ತ್ರವಿ ।
ಶ್ರುತಮತಿ ಕಾಮತತ್ವಭರತಾಗಮಶಬ್ದವಿಚಾರಕಾವ್ಯಪ ॥
ದ್ಧತಿರಸಭಾವರಾಗರಮಣೀಯಕರಂ ಕವಿಪುಟ್ಟಣಾಂಕಪಂ ।
ಡಿತನೆನಲಾತನಿಂದಱುವು ಪೊಣ್ಮಿದ ಮಲ್ಲನದೇಂ ಕೃತಾರ್ಥನೋ ॥

ಇದರಿಂದ ಈತನು ದೊಡ್ಡಪಂಡಿತನೂ ಕವಿಯೂ ಆಗಿದ್ದಂತೆಯೂ ಕವಿಮಲ್ಲನಿಗೆ ವಿದ್ಯಾಗುರುವಾಗಿದ್ದಂತೆಯೂ ತಿಳಿಯುತ್ತದೆ. ಆವ ಗ್ರಂಥಗಳನ್ನು ಬರೆದಿದ್ದಾನೆಯೋ ತಿಳಿಯದು. ಇವನು ಸುಮಾರು 1380ರಲ್ಲಿ ಇದ್ದಿರಬಹುದು.

---

## ನೃಸಿಂಹಕವಿ. 1382.

ಈತನು ಮಳವಳ್ಳಿಯ 21 ನೆಯ ಶಾಸನವನ್ನು ಬರೆದುದಾಗಿ ಆ ಶಾಸನದ ಕೊನೆಯ—

ಪದ್ಯಂವಿರಚಿಸಿದಂ ನಿರ ।ವದ್ಯಂ ಸುಕವೀಂದ್ರಲಪನಮಣಿಮಯಮುಕುರಂ ।
ಮಾದ್ಯತ್ಕಂಠೀರವವರ । ನುದ್ಯತ್ತುಹಿನಾಂಶುಕಿರಣಕೀರ್ತಿ ನೃಸಿಂಹಂ ॥

ಎಂಬ ಪದ್ಯದಿಂದ ತಿಳಿಯುತ್ತದೆ.

ಈ ಶಾಸನವು ವಿಜಯನಗರದ ಹರಿಹರರಾಯನ ಆಳಿಕೆಯಲ್ಲಿ 1382 ರಲ್ಲಿ ಬರೆದುದು. ಇದರಲ್ಲಿ ಬಡವಾರಕುಲತಿಲಕ ಲೋಭಿರಾಯಗಜಾಂಕುಶ ಕೀರ್ತಿದೇವತನೂಭವ ಭಟ್ಟರ ಬಾಚಿಯಪ್ಪನು ತುಂಗಭದ್ರಾತೀರದಲ್ಲಿ ಪರಮಪದವನೆಯ್ದಲು ಆತನ ಮಗ ಬುಕ್ಕಣ್ಣನು ಶಾಸನವನ್ನು ಪ್ರತಿಷ್ಠೆಮಾಡಿದಂತೆ ಹೇಳಿದೆ. ಇದರಿಂದ ಒಂದು ಪದ್ಯವನ್ನು ತೆಗೆದು ಬರೆಯುತ್ತೇವೆ:—

ಬಾಚ.

ಶೂರತೆಯಂ ಮೃಗಾಧಿಪನೊಳಾಕ್ಷಮೆಯಂ ಕ್ಷಿತಿಯೊಳ್ ಗಭೀರಮಂ।
ವಾರಿಧಿಯೊಳ್ ಮನೋರಮತೆಯಂ ಮಕರಧ್ವಜನೊಳ್ ಸುಶಾಂತಿಯಂ॥
ವಾರಿಜವೈರಿಯೊಳ್ ಪಡೆದು ಪದ್ಮಜ ನಿರ್ಮಿಸಿದಂತೆ ರಂಜಿತಂ।
ಚಾರುಚರಿತ್ರಕೀರ್ತಿಯ ತನೂಭವ ಬಾಚನುದಾರನುರ್ವಿಯೊಳ್ ॥ 986 ॥

---

## ಮಧುರ. ಸು. 1385.

ಈತನು ಧರ್ಮನಾಥಪುರಾಣವನ್ನೂ ಗುಮ್ಮಟಸ್ತುತಿರೂಪವಾದ ಒಂದು ಅಷ್ಟಕವನ್ನೂ ಬರೆದಿದ್ದಾನೆ.

ಇವನು ಜೈನಕವಿ; ವಾಜಿವಂಶಕ್ಕೆ ಸೇರಿದವನು; ಭಾರದ್ವಾಜಗೋತ್ರದವನು; ಇವನ ತಂದೆ ವಿಷ್ಣು, ತಾಯಿ ನಾಗಾಂಬಿಕೆ, ಪೋಷಕ ಬುಕ್ಕರಾಜಸುತ ಹರಿಹರರಾಯನ ಪ್ರಧಾನನಾದ ಮುದ್ದದಂಡೇಶ. "ಭೂನಾಥಾಸ್ಥಾನ ಚೂಡಾಮಣಿ" ಎಂಬುದರಿಂದ ಈತನು ಹರಿಹರನ ಆಸ್ಥಾನಕವಿಯಾಗಿದ್ದಿರಬೇಕು.

ಧರ್ಮಪುರಾಣರಚನೆಗೆ ಕಾರಣವು ಹೀಗೆ ಹೇಳಿದೆ:—

ಕೊಟ್ಟುಬಾಗೆಯ ವಿಭುವಾದ ಬೊಮ್ಮಿಸೆಟ್ಟಿಗೂ ಬೈಚಾಂಬಿಗೂ ಬ್ರಹ್ಮ,[1] ನಾಗ, ಮಲ್ಲಿಕಾರ್ಜುನ ಎಂಬ ಮೂವರು ಮಕ್ಕಳಿದ್ದರು. ಇವರು ಜೈನರು. ಇವರಲ್ಲಿ ಮಲ್ಲಿಕಾರ್ಜುನನು ಅಥವಾ ಮಲ್ಲಿನಾಥನು ಕೊಂಡಕುಂದಾನ್ವಯದ ಮೂಲಸಂಘದ ದೇಶೀಯಗಣದ, ಬಲ್ಲಾಳರಾಯಜೀವರಕ್ಷಾಪಾಳನೆಂಬ ಬಿರುದುಳ್ಳ ಚಾರುಕೀರ್ತಿಪಂಡಿತನ ಪಟ್ಟಕ್ರಮಾಗತನಾದ, ರಾಜಪೂಜಿತನಾದ, ರಾಜಸಭೆಯಲ್ಲಿ ಜಿನಮಾರ್ಗವೆ ಮಾರ್ಗವೆಂದು ಸ್ಥಾಪಿಸಿದ, ಅಭಿನವಚಾರುಕೀರ್ತಿಪಂಡಿತಾಚಾರ್ಯನ ಅನಂತರದಲ್ಲಿ ಪಟ್ಟಕ್ಕೆ ಬಂದು ಗೋಮಟೇಶ್ವರಸ್ವಾಮಿಗೆ ಅನೇಕಾವೃತ್ತಿ ಅಭಿಷೇಕವನ್ನು ಮಾಡಿಸಿದ, ಪಂಡಿತದೇವನ ಶಿಷ್ಯನು. ಆಹಾರಾಭಯಭೈಷಜ್ಯಶಾಸ್ತ್ರದಾನಗಳಿಂದ ನೆಗಳ್ತೆವಡೆದ ಈ ಮಲ್ಲಿಕಾರ್ಜುನನು ಮಧುರನ ಬಳಿಗೆ

1. ಇವನನ್ನು "ವಿಸುತಾಶೇಷಕಲಾವಿಲಾಸರಚನಾವಿಸ್ತಾರದಿಂ ಬ್ರಹ್ಮಂ" ಎಂದು ಹೇಳಿರುವುದರಿಂದ ಇವನೂ ಕವಿಯಾಗಿದ್ದಿರಬಹುದು.

ಬಂದು ಪ್ರೀತಿಯಿಂದ ನಾನಾವಸ್ತುಪ್ರತಿಪತ್ತಿಯಂ ಸಲಿಸಿ ಅವನನ್ನು ಧರ್ಮಭೂಷಣನ ಹಿಂದೆ ಪಟ್ಟಕ್ಕೆ ಬಂದ ಭಟ್ಟಾರಕ ರಾಜರಾಯಗುರುವೆನಿಸಿದ ವರ್ಧಮಾನಮುನಿಯ ಸನ್ನಿಧಿಗೊಯ್ದು. ಅವನಿಂದ ಹೇಳಿಸಲು ಕವಿ ಈ ಧರ್ಮನಾಥಪುರಾಣವನ್ನು ರಚಿಸಿದನು.

ಬುಕ್ಕರಾಜನ ಮಗನಾದ ಹರಿಹರರಾಯನು 1377 ರಿಂದ 1404 ರ ವರೆಗೆ ಆಳಿದುದಾಗಿ ತಿಳಿವ್ರದರಿಂದ ಆ ರಾಜನ ದಂಡಾಧಿಪನಲ್ಲಿ ಆಶ್ರಿತನಾಗಿದ್ದ ಈ ಕವಿ ಸುಮಾರು 1385 ರಲ್ಲಿ ಇದ್ದಿರಬಹುದು.

**ಈತನಿಗೆ ಕಲಾವಿಲಾಸ, ಕವಿರಾಜಕಲಾವಿಲಾಸ, ಕವಿಮಾಧವ, ಮಧುರ ಮಾಧವ, ಸರಸಕವಿರಸಾಲವಸಂತ, ಭಾರತೀಮಾನಸಕೇಳೀರಾಜಹಂಸ, ವಿಶ್ವ ವಿದ್ಯಾಸಮುದಯಸುಮನಸ್ಸಂಚರಚ್ಚಂಚರೀಕ** ಎಂಬ ಬಿರುದುಗಳಿದ್ದಂತೆ ತೋರುತ್ತದೆ.

ಪೂರ್ವಕವಿಗಳಲ್ಲಿ **ಪಂಪ, ಪೊನ್ನ, ರನ್ನ, ನಾಗಚಂದ್ರ, ನೇಮಿಚಂದ್ರ, ಜನ್ನ** ಇವರನ್ನು ಸ್ತುತಿಸಿದ್ದಾನೆ. ಅಲ್ಲದೆ ತನ್ನ ಕವಿತಾಚಾತುರಿಯನ್ನು ಹೇಳುವ ಈ ಪದ್ಯದಲ್ಲಿ ಶ್ಲೇಷೆಯಿಂದ **ಜನ್ನ, ರನ್ನ, ಪುಷ್ಪದಂತ, ಗಜಾಂಕುಶ, ಮನಸಿಜ, ಶ್ರೀವಿಜಯ, ಸುಜನೋತ್ತಂಸ, ಯಶಶ್ಚಂದ್ರ, ನೇಮಿಚಂದ್ರ** ಇವರುಗಳ ಹೆಸರನ್ನೂ ಹೇಳಿದ್ದಾನೆ:—

ಕವಿತಾಶ್ರೀಗೆ ಜನಾರ್ದನಂ ಪುರುಷರತ್ನಂ ಪುಷ್ಪದಂತಂ ರಿಪು।
ಪ್ರವರೋತ್ತುಂಗಗಜಾಂಕುಶಂ ಮನಸಿಜಾಕಾರಂ ಸಭಾಮಧ್ಯಲ॥
ಬ್ಧವರಶ್ರೀವಿಜಯಂ ಸಮಸ್ತಸುಜನೋತ್ತಂಸಂ ಯಶಶ್ಚಂದ್ರನು।
ತ್ಸವಲೀಲಾರಥನೇಮಿಯೆಂದು ಮಧುರಂ ಪೆತ್ತಂ ಮಹಾಖ್ಯಾತಿಯಂ॥

ಇವನನ್ನು **ಮುಂಗರಸ** 111 (1508) ಮೊದಲಾದ ಕವಿಗಳು ಸ್ತುತಿಸಿದ್ದಾರೆ. ತನ್ನ ಕವಿತಾಚಾತುರಿಯನ್ನೂ ಗುಣಾದಿಗಳನ್ನೂ ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ:—

ನುದನನ ಬಿಲ್ಲು ಬಲ್ಮೆ ಬಲಿದತ್ತು ವಸಂತದ ಮೋಹನಂ ಪೊದ।
ಟ್ಟುದು ಕಡುಗಾಡಿವೆತ್ತಲಿವ ತಂಕಣಗಾಳಿಯ ಸೊಂಕು ಸೊರ್ಕುವೆ॥
ತ್ತುದು ಪುದುವಂದುದಂದು ನೆಲೆವೆರ್ಚಿರೆ ಭಾವರಸಂ ರಸಜ್ಞೆಯೊಳ್।
ಮೃದುಪದವಿಟ್ಟಳಕ್ಕುಮೆನೆ ಭಾರತಿ ಬಂದು ಕಳಾವಿಳಾಸನಾ॥
ಅವ ರಸಾತಿರೇಕವೊ ಕರಾಗ್ರದೊಳೋದುವ ರಾಜಕೀರಲೀ।
ಲಾವಚನಂಗಳೋಗಡಿಸಲುಕ್ಕೆವದಿಂ ಕುಡುಕೆಂದು ತಂದು ಚಂ॥
ಚೂವಿವರಕ್ಕೆ ಮಾಣಿಕದ ಮುದ್ರಿಕೆಯಂ ಪಡಿಗೆತ್ತು ಭಾರತೀ।
ದೇವಿ ನಿರಂತರಂ ಸವಿವಳಾತನ ನವ್ಯವಚೋವಿಳಾಸಮಂ॥

ಕವಿಮಧುರನ ಮಾತುಗಳೇಂ। ಸವಿಯೊ ಮದಸ್ಸವಕೆ ಮೊರೆವ ಮುಜಿ'ದುಂಬಿಗಳಂ।
ತವೆ ತೊಲಗಿಸಿ ತನ್ನಯ ಮೊಜಿ। ಗಿವಿಯುಂ ಮೊಗೆ ಮೊಗೆದು ಸುಮುಖನಾಸ್ವಾದಿಸುವಂ॥
ಪೆಸರೆಸಕದ ಪಾಲಯ್ಯಂ । ಪೊಸತೇನೆಜಿ'ದುಂಬುದಂಬಿಲಂ ಗಡಮೆಂಬೀ ।
ಗಸಣಿಯೊಳೊಂದದೆ ನೆಗಚ್ಚಿ'ಪ್ಪಿ । ಲ್ಪಿಸರುಂ ಮಧುರಂ ದಲವನ ಮಾತುಂ ಮಧುರಂ॥
ಗಣಿದಂಗೊಳ್ಪೊಡೆ ವಿಕ್ಕಿನಕ್ಕರದ ಮಾತಂತಿರ್ಕೆ ತನ್ನಾಣೆಗೋ ।
ಸಣೆ ಸಲ್ಗುಂ ಸುಕವೀಂದ್ರವೃಂದಸಭೆಯೊಳ್ ತಾನೆಂದೊಡಮ್ಮಮ್ಮ ಧಾ॥
ರಿಣಿಯೊಳ್ ಕೇಳ್ದಜಿ'ಯಾ ಜಡಾ ಮಧುರನಂ ನಿರ್ಗೀತಕರ್ಣಾಟಲ।
ಕ್ಷಣಭಾಷಾಕವಿರಾಜನಂ ಪ್ರವಿಲಸದ್ವಾಣೀಮುಖಾಂಭೋಜನಂ ॥
[1]ನೆರೆಯಜಿ'ಯದ ಹೊರೆಯಜಿ'ಯದ। ಬಿರುದುಗಳೇಕೆವುಗೆ ಕೃತಿಯನೀಕ್ಷಿಸಿ ವಿಗೆವು।
ಚ್ಚರಿಸುವ ಕವಿಯೆರ್ದೆ ಬಿಕ್ಕನೆ । ಬಿರಿದಿರ್ದುದೆ ಬಿರುದು ವಿಕ್ಕ ಬಿರುದುಂ ಬಿರುದೇ॥

ಇವನ ಗ್ರಂಥಗಳಲ್ಲಿ

## 1. ಧರ್ಮನಾಥಪುರಾಣ.

ಇದು 15 ನೆಯ ತೀರ್ಥಕರನಾದ ಧರ್ಮನಾಥನ ಚರಿತೆ (ನವುಗೆ ಸಮುಗ್ರವಾದ ಪ್ರತಿ ದೊರೆತಿಲ್ಲವಾದುದರಿಂದ ಇಷ್ಟಾಶ್ವಾಸಗಳಿವೆಯೆಂದು ಹೇಳಲಾರೆವು.) ಈ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಈ ಪದ್ಯಗಳಲ್ಲಿ ಹೇಳಿದ್ದಾನೆ :—

ಬಣ್ಣಣೆಯ ಕುಸುರಿವಾತುಗ। ಳಣ್ಣಂದಿರ ತೆಜಿದಿನನ್ನದಿನ್ನದೆನುತ್ತಾಂ ।
ಬಣ್ಣಿಸಲಜಿ'ಯೆಂ ಕವಿತೆಗೆ । ಕಣ್ಣಿಲ್ಲೆಯಾದುದು ಕಲಾವಿಲಾಸನ ಕಾವ್ಯಂ ॥
ಆದಿಪುರಾಣಂಗಳ್ ಪಲ್ಬಿ । ದಾದುವೆನಲ್ ಮತ್ತೆ ಮಧುರಕವಿತಾಮೃತಮು ।
ತ್ಪಾದಿಸೆ ಚೋದ್ಯಮಿದಭಿನವ । ಮಾದುದು ಧಾರಿಣಿಗೆ ಧರ್ಮನಾಥಪುರಾಣಂ ॥

ಗ್ರಂಥಾವತಾರದಲ್ಲಿ ಕವಿ ಧರ್ಮನಾಥನನ್ನು ಸ್ತುತಿಸಿದ್ದಾನೆ. ಬಳಿಕ ಸಿದ್ಧಾದಿಗಳು, ಯಕ್ಷಿಯಕ್ಷರು, ಸರಸ್ವತಿ, ಅನುಬದ್ಧಕೇವಲಿಗಳು, ಕೇವಲಿಗಳು, ದಶಪೂರ್ವಧರರು, ಏಕಾದಶಾಂಗಧಾರಿಗಳು, ಇವರನ್ನು ಸ್ಮರಿಸಿ ಅನಂತರ ಜಿನಸೇನನಿಂದ ಮಹಾನಂದಿಯೋಗಿಯವರೆಗೆ ಗುರುಗಳನ್ನು[2] ಹೊಗಳಿದ್ದಾನೆ. ಆಶ್ವಾಸಗಳ ಕೊನೆಯಲ್ಲಿ ಈ ಗದ್ಯವಿದೆ :—

ಇದು ಸಕಲಸುಕವಿಜನಮನಸ್ಸುಧಾಕರಕಾಂತಸಂತತದ್ರವೀಕರಣಕಾರಣ ಕರ್ಣಾಟಕವಿತಾಕಲಾವಿಲಾಸವಿಧು ಮಧುರಕವೀಂದ್ರನಿರ್ಮಿತಮಪ್ಪ ಧರ್ಮನಾಥಪುರಾಣದೊಳ್.

---

1. ಈ ಪದ್ಯವು ಶಬ್ದಾನುಶಾಸನದ 121 ನೆಯ ಸೂತ್ರದ ಕೆಳಗೆ ಉದಾಹೃತವಾಗಿದೆ.

2 ಜಿನಸೇನ, ವೀರಸೇನ, ಸಮಂತಭದ್ರ, ಅಕಳಂಕ, ಪೂಜ್ಯಪಾದ, ಗುಣಭದ್ರ, ಕುಂಡಕುಂದ, ಕವಿಪರಮೇಷ್ಠಿ, ಬಲಾತ್ಕಾರಗಣದ ಧರ್ಮಭೂಷಣದೇವ, ಇವನ 'ಸಿಂಹಾಸನವನೆಸಗಿದ' ವರ್ಧಮಾನ ಮುನಿ, ಮಹಾನಂದಿಯೋಗಿ.

ಇವನು ಹದಿನಾಲ್ಕನೆಯ ಶತಮಾನದವನಾದರೂ ಇವನ ಬಂಧುವು ಹಿಂದಣ ಜೈನಕವಿಗಳ ಬಂಧುದಂತೆಯೇ ಪ್ರೌಢವಾಗಿಯೂ ಹೃದಯಂಗಮವಾಗಿಯೂ ಇದೆ. ಇವನ ಗ್ರಂಥಗಳಿಂದ ಕಾವ್ಯಸಾರವನ್ನು ಬರೆದ ಅಭಿನವವಾದಿವಿದ್ಯಾನಂದನೂ (1533) ಶಬ್ದಾನುಶಾಸನವನ್ನು ಬರೆದ ಭಟ್ಟಾಕಳಂಕನೂ (1604) ಪದ್ಯಗಳನ್ನು ಉದ್ಧರಿಸಿ ಬರೆದಿದ್ದಾರೆ.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

### ನೆಲ್ಲುಗದ್ದೆ.

ಮೊಳೆವ ಪದಂ ಮುಡಲಿಜ್ಜುಜ್ಜಿ । ಬೆಳೆವ ಪದಂ ಪೊಡೆಗಳೊಡೆದು ಪಾಲ್ದೆನೆದುಜ್ಜುಗ ।
ಲ್ದೆಳೆವ ಪದಂ ಗಿಳಿವಿಂಡುಗ । ಳಿಟ್ಟ ಪದಂಕೆಯ್ಗಳೊಳ್ ಪದಂಬಡೆದೆಸೆಗುಂ ॥ 987 ॥

### ಉದ್ಯಾನವನ.

ನೀಪೊದವಿದ ನುಣ್ಗೊನೆಯಂ । ತೂಪ ರಸದ್ರಾಕ್ಷೆಗೆಸೆವ ಕುಸುಮದ ರಜದಿಂ ।
ಕಾವುವರಿದೊಸರ್ವ ಸೊನೆಯಿಂ । ತೂಪಿಜ್ಜುವ ರಸಾಲಲತೆಗಳೀನೊಪ್ಪಿದುವೋ ॥ 988 ॥

### ತೆಂಗು.

ನಾರಿಕೇಳಮೆಸೆಗುಂ ಫಳಾಳಿಯಂ । ನಾರಿ ಕೇಳ ನೆಗಳ್ದಿಮ್ಮೊಳಪ್ಪುವಿ ।
ನ್ನೀರದಾವ ಸವಿ ನೋಡಿಮೆಂದಣಂ । ನೀರದಾವಳಿಗೆ ನೀಡುವಂದದಿಂ ॥ 989 ॥

### ದಾಳಿಂಬ.

ಕೆಂಬರಲ್ಗೆಣೆಮಾಡುವರೇ । ಕೆಂಬ ರಸಂಬಡೆದು ರಂಜಿಪೊಳ್ವತ್ತಿನ ದಾ ।
ಳಿಂಬದ ಬನದ ಶುಕಾಳಿಗ । ಳಿಂಬದವಣ್ಗೆಱಗಿ ತಜ್ಜುಗಿದುವು ನೋಡಬಲೇ ॥ 990 ॥

### ಮಂದಮಾರುತ.

ಬಿಡದುಗುವ ಸೊನೆಯ ಸೋನೆಯ । ಕಡುಗೆಸಱೊಳ್ ಸಿಲ್ಕಿ ಬಂದ ಮಾವಿನ ಕೆಯ್ಯಂ ।
ಪಿಡಿದಲ್ಲಿ ಮೆಲ್ಲಮೆಲ್ಲನೆ । ನಡೆವುದು ಕಣ್ಗುರುಡನಂತಿರುಪವನಪವನಂ ॥ 991 ॥

### ದೇಶ.

ನಳಿನೀಗರ್ಭವಿಚಿತ್ರಶಿಲ್ಪಗೃಹಮಪ್ಪಾದೇಶದೊಳ್ ಸಂತತಂ ।
ದಳಿತಾಂಭೋಜಕುಳಂ ಕೊಳಂ ಪರಿಮಿಳದ್ಭೃಂಗಾಳಿ ತಂಗಾಳಿ ನಿ ॥
ರ್ಮಳರತ್ನಾವೃತಕಂದರಂ ದರಮುದಂಚಚ್ಚಂದನಂ ನಂದನಂ ।
ವಿಳಸದ್ಭೂರಿಧನಂ ಜನಂ ಪೃಥುಘಟಾಪೀನಾಕುಲಂ ಗೋಕುಲಂ ॥ 992 ॥

## ಚಂದ್ರಗ್ರಹಣ.

ಬಯ್ಯನೆ ಬಂದಂಬರದೊಳ್ । ಮೆಯ್ಯಂ ಮುಚ್ಚಿಮಾಡಿ ಕಲಸಿದಮೃತದ ತುತ್ತಂ ।
ಸುಯ್ಯದೆಲ್ಲಿದುಂಬ ಕಾಲನ । ಕೆಯ್ಯನೆ ನಿಮಿರ್ದತ್ತು ರಾಹು ಸಸಿವಿಡಿದೆಡೆಯೊಳ್
॥ 993 ॥

## ಅಶೋಕ.

ಮದಕಲಮರಾಳಗಮನೆಯ । ಪದಮುಂ ಪಲ್ಲವದೆ ಪೋಲ್ತೆನೆಂಬನುರಾಗಂ ।
ಪುದಿದಿರ್ದ ಶೋಕವಲ್ಲರಿ । ಸುದತಿಯರೆಡಗಾಲೊಳೊದಸಿಕೊಂಡಪುದಿನ್ನುಂ ॥ 994 ॥

## ಆನೆಯ ಮರಿ.

ಮೊಲೆಗಳನುಂಬ ಪೆಪ್ಪಳಿಸಿ ನೋಡುವ ತಾಯ್ಗಡಿ ಮೆಲ್ವಸಲ್ಲಕೀ ।
ದಲಮನಲಂಪಿನಿಂ ತಗೆದು ಸೂಸುವ ಸುಂಡಲನೆತ್ತಿ ಸುತ್ತೆ ನಾ ॥
ಲ್ಲಿಲದೊಳಡುರ್ದು ಪಾಯ್ದು ಪರಿದಾಡುವನೇಕರಸಾನುಭಾವಮ ।
ಗ್ಗಳಿಸಲದೊಂದು ಪಲ್ಲಮಜ ಲಲ್ಲಿಯ ಚಿಲ್ಲಮನೇನೊಡರ್ಚಿತೋ ॥ 995 ॥

## ಮಾಲೆಗಾರ್ತಿ.

ನೋಡಿದೊಡೀಕೆ ಪೊಚ್ಚಪೊಸನೆಯ್ದಿಲ ಮಾಲೆಗಳಾದುವೋತು ಮಾ ।
ತಾಡಿದೊಡೋವೊ ಬಂದುಗೆಯ ಮಾಲೆಗಳಾದುವು ಮಂದಹಾಸಮಂ ॥
ಮಾಡಿದೊಡಚ್ಚಮಲ್ಲಿಗೆಯ ಮಾಲೆಗಳಾದುವಿದೊಂದು ಚೋದ್ಯಮಂ ।
ನೋಡಿರೆ ಮಾಲೆಗಾರ್ತಿಯೊ ದಿಟಕ್ಕಿವಳಗ್ಗದ ಮಾಯಕಾರ್ತಿಯೋ ॥ 996 ॥

## ರಾಜ.

ಪರಿರಂಭಂಗೆಯ್ವೊಡೊಂದಲ್ಲದೆ ಕರಮೆರಡಿಲ್ಲೋವೊ ದಿಗ್ವಂತಿಗೊಲ್ವಾ ।
ದರದಿಂ ಬಾಯ್ಗೂಡಲಿಚ್ಛೈಪೊಡೆ ಸುಡು ಪಲವುಂ ನಂಜುವಾಯ್ ಪನ್ನಗೇಂದ್ರಂ ॥
ಗೆರೆದಾನೋರಂತೆ ಬಿಂಬತ್ತೆಯುಮೆರ್ದಗುಡದೆಗ್ಗಾದಿಕೂರ್ಮಂಗೆನುತ್ತು ।
ರ್ವರೆ ಬಿಟ್ಟಾವೂವರಂ ಭೂವರನ ಭುಜದೊಳಿರ್ಪಳ್ ಮನೋರಾಗದಿಂದಂ
॥ 997 ॥

## ಪುತ್ರದೋಹದ.

ಮೆಲ್ಲನೆ ಮಲಗಿರೆ ಕದಪಂ । ಮೆಲ್ಲನೆ ಜಕ್ಕುಲಿಸೆ ನಕ್ಕು ಮಗನಗಿದೊದೆಯಲ್ ।
ಮೆಲ್ಲಡಿಗೆ ಸಿಲ್ಕಿ ಹಾರಂ । ಝಲ್ಲನೆ ಪಜ ದೊಕ್ಕ ಮುತ್ತನೆಂದಾಯ್ದುಪೆನೋ
॥ 998 ॥

ಬಿನದದಿನೋಡುತಂದುಗೆಯ ಗೆಜ್ಜೆಯ ಮೆಲ್ಲುಲಿಯುಣ್ಮೆ ಪೊಣ್ಮೆ ಭೋಂ ।
ಕನೆ ಪರಿತಂದು ನುಣ್ಪೊದಳ ಮಾತುಗಳಂ ಕಿಜ ದಾಡಲಾನದೇ ॥

ನೆನೆ ಕಡುನಾಚ್ಚಿ ಪಾಯ್ದು ಕೊರಲಂ ಬಿಗಿಯಪ್ಪಿ ಮರಲ್ದು ಸೋಲ್ಪಿ ನಂ ।
ದನನೆಳಲೋಳಿವಾಯು ಸವಿಮುದ್ದಿನ ಸಮ್ಮದಮೆಂತು ಸಾಗ್ಗುಮೋ ॥ 999 ॥

## ನಾಸ್ತಿಕವಾದ.

ನೆನೆದಿಲ್ಲದ ಪರಸುಖಮಂ । ಕನಸಿನ ಭತ್ತಕ್ಕೆ ಗೋಣಿಯೊಯ್ವೊಲಿಹದೊಳ್ ।
ತನಗತನುಸುಖಮನೀವೀ । ತನುವಂ ತಪಕೊಡ್ಡಿಗೊಡ್ಡುಮಾಡುವನೆಗ್ಗಂ ॥ 1000 ॥

ಕಟ್ಟದಿರ ಸುಖಮನನಿತಂ । ಬಿಟ್ಟೀಗಳಿ ಬರ್ಪುದೆಂದು ಬರೆದಜ್ಞಗುಜ್ಞಪಂ ।
ಕೊಟ್ಟು ಪರಲೋಕದೋಲೆಯ । ನಟ್ಟಿದರಾರಾರ ಪಿತೃಪಿತಾಮಹರರಸಾ ॥ 1001 ॥

ಮೊದಲೊಳ್ ಲಜ್ಜೆಯನೆಯ್ದಿ ಸುಟ್ಟು ಕುರುಳಂ ಕೊಟ್ಟುಟ್ಟುದಂ ಬಿಟ್ಟು ಲೋ ।
ಕದ ಹಾಸ್ಯಕ್ಕೊಳಗಪ್ಪ ಬೂತುಗಳ ಮಾತೇಂ ಸತ್ತು ಕಾಣ್ಪೊಂದು ಸ ॥
ಗ್ಗದಿನಿರ್ದಲ್ಲಿಯೆ ನಾಡೆ ಕಾಣ್ಬ ನರಕಂ ಲೇಸೆಂದು ಮೆಯ್ಸೊಲ್ವ ಲೋ ।
ಕದ ಬಾಯ್ಗಾದೆಯನೆಯ್ದಿ ಕೇಳ್ದುಮೆಲೆ ಧಾತ್ರೀನಾಥ ಬೇಳಪ್ಪುದೇ ॥ 1002 ॥

## ನೀತಿ.

ನವರಂಧ್ರವೆಂಬ ಕನ್ನಂ । ಸವೆದಿರಲೊಡಲೆಂಬ ಮನೆಯನೊಯ್ಯನೆ ಪೊಕ್ಕಾ ।
ಜವನೆಂಬಾರಡಿಗಳ್ಳಂ । ತವಕದಿನಸುವೆಂಬ ವಸುವನೊಯ್ಯದೆ ಮಾಣಂ ॥ 1003 ॥

ಕಟ್ಟೀಗರಮಿಲ್ಲದೆ ಗಡ । ಬಟ್ಟೆಗರಡಿಯೆತ್ತರಡಸಿ ಕಡುನಿಡುವಯಣಂ ।
ಮುಟ್ಟರೆ ಸಂಬಳದನ್ನಂ । ಗಟ್ಟದೆ ಮಜ್ಜುಭವದ ಬಟ್ಟೆವೋಪವನೆಗ್ಗಂ ॥ 1004 ॥

# 2. ಗುಮ್ಮಟಸ್ತುತಿ.

ಇದು ಶ್ರವಣಬೆಳ್ಗೊಳದ ಗೊಮ್ಮಟೇಶ್ವರನ ಸ್ತುತಿರೂಪವಾದ ಅಷ್ಟಕವು ಎಂಬಂಶವು ಈ ಗ್ರಂಥಾಂತದಲ್ಲಿರುವ ಈ ಪದ್ಯದಿಂದ ತಿಳಿಯುತ್ತದೆ:—

ಭೂನಾಥಾಸ್ಥಾನಚೂಡಾಮಣಿ ಮಧುರಕವೀಂದ್ರಂ ವಿನೇಯಾನುಕಂಪಾ ।
ಧೀನಂ ಸದ್ಭಕ್ತಿಯಿಂ ಬಿತ್ತರಿಸಲಭಿನವಪ್ರಾತಿಹಾರ್ಯಂಬೊಲಿಂಬಾ ॥
ದೀನನ್ಯಶ್ರವ್ಯದಿವ್ಯಾಷ್ಟಕಮನೆ ನುಡಿದಗೊಂದಿದಗರ್ಗಾವಗಂ ನಿ ।
ತ್ಯಾನಂದಶ್ರೀಯನೀವಂ ಬೆಳುಗುಳನಗರೀನಾಯಕಂ ಗುಮ್ಮಟೇಶಂ ॥

ಇದರಲ್ಲಿ 9 ವೃತ್ತಗಳಿವೆ. ಪ್ರತಿಪದ್ಯವೂ ಗುಮ್ಮಟೇಶಾ ಎಂದು ಮುಗಿಯುತ್ತದೆ. ಇದರಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

ಶ್ರೀಪಾದಾಂಭೋಜದೊಳ್ ಮುಂಬರಿದೆಱಗುತಮಳ್ವಂಬಿಯಂತಟ್ಟಿಜ್ಞಂ ನಾ ।
ಭೀಪೂರ್ಣಾವರ್ತದೊಳ್ ತತ್ತಳಿಸುತುಮೆಳವಿನಸ್ತೆ ವಕ್ತ್ರೇಂದುವಂ ಸಾ ॥
ರ್ದಾಪೊಲ್ತುಂ ನರ್ತನಂಗೆಯ್ವುದು ಚಟುಳಚಕೋರಾಳಿಯಂತೆನ್ನ ನೇತ್ರಂ ।
ಬಾಪಿನ್ನೆಂತಪ್ಪ ಲಾವಣ್ಯದ ತವನಿಧಿಯೋ ನಿನ್ನ ಮೆಯ್ ಗುಮ್ಮಟೇಶಾ ॥ 1005 ॥

[1] ಮುಟ್ಟಿಗೆಂದುಂ ಕೋಡದುಗ್ರಾತಪಕೆ ಸೆಡೆಯದುದ್ಧ್ಯಮಕ್ಕಳ್ಳದೋರಂ ।
ತೊಲವಿಂ ಸಮ್ಯಕ್ತಪೋಮಾರ್ಗದೊಳೊದವಿದವಂಗಕ್ಷಯಶ್ರೀ ಕರಂ ಕೆ ॥
ಯ್ಯೊಳಗಪ್ಪಳ್ ತಪ್ಪಳಿಂದುರ್ವರೆಗನುವಿಸುವಂತಾವಗಂ ತೋಱುವೀನಿ ।
ಶ್ಚಲಮೂರ್ತಿಶ್ರೀಯ ಸಾಮರ್ಥ್ಯಮನಜಿಮರುಳರ್ ಬಲ್ಲರೇ ಗುಮ್ಮಟೇಶಾ
॥ 1006 ॥

---

## ಪದ್ಮಣಾಂಕ. ಸು. 1385.

ಇವನು **ಪದ್ಮರಾಜಪುರಾಣವನ್ನು** ಬರೆದಿದ್ದಾನೆ. ಈತನು ವೀರಶೈವ ಕವಿ; ಕೆರೆಯಪದ್ಮರಸನ ವಂಶದಲ್ಲಿ ಹುಟ್ಟಿದವನು. ತನ್ನ ವಂಶಪರಂಪರೆಯನ್ನು ಈ ರೀತಿಯಾಗಿ ಹೇಳಿಕೊಂಡಿದ್ದಾನೆ:—

ಶಿವಯೋಗಿಮಲ್ಲರಸ ಅಥವಾ ಮಲ್ಲಿಕಾರ್ಜುನಪಂಡಿತ; ಮಗ ಸಕಳೇಶಮಾದರಸ; ಮಗ ಮಾಯಿದೇವ; ಮಗ ಕೆರೆಯಪದ್ಮಣಾರ್ಯ; ಮಗ ಕುಮಾರಪದ್ಮರಸ; ಮಗ ವಿಶ್ವಾರಾಧ್ಯ; ಮಗ ದೇವಾರಾಧ್ಯ; ಮಗ 'ನೂರೊಂದು ಪಾದ ಗದ್ಯವನುಸರ್ದು ಪೂವಂ ಪಡಿದ' ಗೌರಾರ್ಯ; ಮಗ ದೇವಾರ್ಯ; ಮಗ ವೀರಣಾಚಾರ್ಯ; ಮಕ್ಕಳು ಪದ್ಮಣಾರ್ಯ, ಚಾಮುಂಡಾರ್ಯ; ಪದ್ಮಣಾರ್ಯನ ಮಗ ಕವಿ ಪದ್ಮಣಾಂಕ.

ತನ್ನನ್ನು ಉಭಯಕವಿ ಎಂದು ವಿಶೇಷಿಸಿ ಹೇಳಿಕೊಂಡಿದ್ದಾನೆ.

ಇವನು **ಕೆರೆಯಪದ್ಮರಸ**ನಿಂದ (ಸು. 1165) ಎಂಟನೆಯ ತಲೆಯವನಾದುದರಿಂದ ಅವನ ಕಾಲಕ್ಕೆ ಸುಮಾರು 200 ವರ್ಷ ಈಚೆಯವನಾಗಿದ್ದಿರಬೇಕು; ಸುಮಾರು 1385 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ.

ಪೂರ್ವಕವಿಗಳನ್ನು ಈ ಪದ್ಯದಲ್ಲಿ ಸ್ತುತಿಸಿದ್ದಾನೆ. —

ಪದೆದು ಬುಧರಾಶ್ರಯಿಪ ಬಾಣಂಗಸಿತಕಂಠ ।
ಪದಭಕ್ತನುದ್ಭಟಂಗತುಳಕವಿ ರಾಘವಂ ।
ಗುದಿತಕುಕವಿಮುಖೇಂದುರಾಹು ಭೋಜಂಗೆ ಮಂಗಳಮಯಹರೀಶ್ವರಂಗೆ ॥

ಸದಯದೇವಾರ್ಯಭೀಮಂಗೆ ಗುರುತರಗುಣಾ ।
ಸ್ಪದಮಯೂರಂಗೆ ಜಿತಶುಷಕೇತುರೂಪನೆನಿ ।
ಸಿದ ಮಲುಹಣಂಗೆ ಲೋಕಾಪ್ತಭಾರವಿಗೆಜಿಗುವೆಂ ನವಗ್ರಹಬಲಾರ್ಥಂ ॥

ತನ್ನ ಕವಿತಾಚಾತುರಿಯನ್ನು ಈ ರೀತಿಯಲ್ಲಿ ಇತರರು ಹೊಗಳಿದಂತೆ ಹೇಳಿಕೊಂಡಿದ್ದಾನೆ:—

1. ಇದು ಶಬ್ದಾನುಶಾಸನ ಸೂತ್ರ 140 ರ ಕೆಳಗೆ ಉದಾಹೃತವಾಗಿದೆ.

ರಸದಾಳಿಯೆಸೆವ ಪಾಲ್ಬೊನಲೊ ಸೊಗಯಿಪ ಪೊಚ್ಚ ।
ಪೊಸಜೇನ ಸೋನೆಯೋ ಹುಣ್ಣಿಮೆಯ ಸಸಿಯ ಬ ।
ಟ್ಟೊಸರ್ದು ಪರಿತರ್ಪ ದಿವ್ಯಾಮೃತದ ತೊಜೆಯೊ ಪಾಲ್ಗಡಲುರ್ವಿ ಮೇರೆದಪ್ಪಿ ॥

ಒಸೆದು ದಾಂಗುಡಿಪಿಟ್ಟು ಪಸರಿಸಿತೊ ಈ ಕೃತಿಯ ।
ರಸವೊ ಪೇಟ್ಟಿಂದೆಲ್ಲ ರಸಿಕರಾನಂದಿಪಂ ।
ತಿಸಗುವುದು ತದ್ವಿಧಿಯೊಳಿಸಗದಿರ್ದೊಡೆ ಬಯ್ಗುರೇ ಬಡಿವರೇ ಜಡಿವರೇ ॥

ನುಡಿ ಬೆಡಂಗಂ ಬೀಜ ರೀತಿ ವಿಖ್ಯಾತಿಯಂ ।
ಮಡಲಿಡೆ ಚಮತ್ಕಾರಮಮಮ ಸತ್ಕಾರಮಂ ।
ಸಡಗರಿಸೆ ಮೋಹನಂ ಮೋಹರಿಸೆ ಗಾಡಿ ಪರಿದಾಡಿ ವೋಜವೊಣ್ಮೆ ಸೂಸೆ ॥

ಕಡುಜಾಣ್ಮೆ ಕೈಗಣ್ಮೆ ಮೃದುಪದಂ ಸಂಪದಮ ।
ನಡರೆ ಭಾವಂ ಸತ್ಪ್ರಭಾವಮಂ ಕೈಗ್ಗೆಯೆ ।
ಪಡೆದು ಕೃತಿಯಂ ಶಿವಾರ್ಪಿತವನೆಸಗುವ ನಿನ್ನ ಸೈಪಿಂಗೆ ಸಾಟಿಯುಂಟೇ ॥

ಇವನ ಗ್ರಂಥ

## ಪದ್ಮರಾಜಪುರಾಣ.

ಇದು ಕೆರೆಯ ಪದ್ಮರಸನ ಚರಿತವು; ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಸಂಧಿ 13, ಪದ್ಯ 1266.

ಈ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಈ ಪದ್ಯಗಳಲ್ಲಿ ಹೇಳಿದ್ದಾನೆ :—

[1] ಸತಿಸಪ್ತಮಿಯ ಭೇದಮಂ ಜ್ಞಪ್ತಿಕುಳಕ್ಕಳಮ ।
ನತಿಶಯದ ಗಮಕಕ್ರಿಯಾಸಮಾಸಂಗಳಂ ।
ಶ್ರುತಿಸಹ್ಯಸಂಧಿಯಂ ತದ್ಧಿತಪದಮನಪಭ್ರಂಶದೋಷಿಯಂಗಳಂ ॥

ನುತಮಾಗೆ ಯೋಗಿಪ ಸಮಾಸಮಂ ಸುಸಮಸಂ ।
ಸ್ಕೃತಮಂ ವಿರಹಿತಾವ್ಯಯೋರುಸಂಸ್ಕೃತಲಿಂಗ ।
ಶತಿ ಶಿಥಿಲಪದಮುಖಾದ್ಯುಕ್ತ ಲಕ್ಷಣಮಜವ ಚತುರರೀಕೃತಿಗೊಲಿಯರೇ ॥

ಸರಸತ್ವದಿಂ ಸಲಕ್ಷಣದಿಂ ಪೆಡಂಗಿನಿಂ ।
ಪರಮಸೌಂದರ್ಯದಿಂ ಜಾತಿಯಿಂ ಗುಣದಿನು ।
ತ್ಕರವೃತ್ತಿಯಿಂದಲಂಕಾರದಿಂ ಮೋಹನದೆ ಭಾವದಿಂ ನಿರ್ದೋಷದಿಂ ॥

---

1. ಶಬ್ದಮಣಿದರ್ಪಣದ ಕೊನೆಯಲ್ಲಿ "ಗಮಕಸಮಾಸದಿಂ" ಎಂದಾರಂಭಿಸುವ ಪದ್ಯದೊಡನೆ ಹೋಲಿಸಿ.

ನಿರುಪಮಮ್ಯದೂಕ್ತಿಯಿಂ ಪ್ರೀತಿಯಿಂ ರೀತಿಯಿಂ ।
ವರಗಮಕದೆಸಕದಿಂದೊಳ್ಪಿಂ ಸಕಲಕಲಾ ।
ಸ್ಫುರಣದಿಂದೊಪ್ಪುವೀಕೃತಿಯುವತಿ ಕೋವಿದರನೇಂ ಸೋಲಿಸದೆ ಬಿಡುವಳೀ ॥

ಗ್ರಂಥಾವತಾರದಲ್ಲಿ ಕವಿ ವಿಶ್ವೇಶ್ವರನನ್ನು ಸ್ತುತಿಸಿದ್ದಾನೆ. ಬಳಿಕ ಪಾರ್ವತಿ, ಬಸವ, ಅವನ ಹೆಂಡತಿ ಗಂಗಾಂಬಿಕೆ, ವೀರಭದ್ರ, ಭೃಂಗಿ, ಷಣ್ಮುಖ, ಪ್ರಮಥಗಣ, ಅರುವತ್ತು ಮೂವರು ಇವರುಗಳನ್ನು ಸ್ಮರಿಸಿ ತರುವಾಯ—

ಶ್ರೀ ವಿಶುದ್ಧಪ್ರಕರಣಂಗಳನೆಸಗಿ ವೇದ ।
ಶೈವತಂತ್ರಾವಳಿಗೆ ಭಾಷ್ಯಮಂ ದೀಪಿಕೆಯ ।
ನಾವೃತ್ತಿಯುಂ ವ್ಯಾಖ್ಯೆಯುಂ ಬರೆದ ಬೋಧಾಯನಾರ್ಯನುರುಶಂಕರಾರ್ಯಂ ॥
ಓಲೊ ಹರದತ್ತರ್ ತ್ರಿಲೋಚನಾಘೋರಶಿವ ।
ದೇವಗುಣನಿಲಯಸರ್ವಾತ್ಮ ಶಂಭುಗಳಾನ ।
ತಾವನರ್ ಭೂತಿಕಂಠಾದಿಪೂರ್ವಾಚಾರ್ಯರ್

ವೀರಮಾಹೇಶ್ವರಾಚಾರಸಂಗ್ರಹಶಾಸ್ತ್ರಕಾರನೆನಿಸಿದ ನೀಲಕಂಠನಾಗಾರ್ಯ, ಬಸವರಾಜೀಯಮಂ ನೆಗಳ್ದ ಪಾಲ್ಕುರಿಕೆಸೋಮೇಶ್ವರ, ಸಾರೋದ್ಧಾರಮಂ ಪಡೆದ ಲಕ್ಷ್ಮೀಧರಾರಾಧ್ಯ, ಶಿವಜ್ಞಾನದೀಪಿಕೆಯ ರಚಿಸಿದ ಮಲ್ಲಿಕಾರ್ಜುನಾಚಾರ್ಯ, ಶಿವಲಿಂಕಮಂಚಣ್ಣ, ಮಲ್ಲಿಕಾರ್ಜುನಪಂಡಿತಾರಾಧ್ಯ, ಶ್ರೀಪತಿಪಂಡಿತ—ಇವರುಗಳನ್ನು ಹೊಗಳಿದ್ದಾನೆ.

ಆಶ್ವಾಸಗಳ ಕೊನೆಯಲ್ಲಿ—

ಮದಕುಧರವಿದಳನಭಿಮರ ಪರಮಶಿವಭಕ್ತ ।
ಪದಶತದಳಾದಭ್ರಮಕರಂದಲೀಲಾಪ್ರ ।
ಮದಪರವಶೀಭೂತಮಧುಕರೋಪಮ ಪದ್ಮಣಾಂಕಪ್ರಣೀತಮಾಗಿ ॥
ಸದಮಳಾಖಿಳಶಾಸ್ತ್ರಸಾರಮೆಂದೆನಿಸುವ ।
ಭ್ಯುದಯಕರಪದ್ಮರಾಜಪುರಾಣಕಥೆಯೊಳ್

ಎಂದಿದೆ.

ಈ ಗ್ರಂಥದಲ್ಲಿ ಕೆರೆಯಪದ್ಮರಸನು ಲೋಕಾಯತಿಕಾರ್ಹತ ಬೌದ್ಧ ಮಿಮಾಂಸಕ ಭಾಟ್ಟ ಶಾಕ್ತಮತಗಳನ್ನು ವಾದದಲ್ಲಿ ಖಂಡಿಸಿದಂತೆ ಹೇಳುವ ಭಾಗಗಳಲ್ಲಿ ಕವಿ ಶ್ರುತಿಸ್ಮೃತಿಗಳ ವಾಕ್ಯಗಳನ್ನು ಪದ್ಯಗಳಲ್ಲಿ ಹೊಂದಿಕೆಯಾಗಿ ಸೇರಿಸಿ ಬರೆದಿದ್ದಾನೆ. ಗ್ರಂಥವನ್ನು 'ಪಾಪಕ್ಷಯಾರ್ಥಂ ಭಕ್ತಿಯಿಂ ವಿರಚಿಸಿದೆಂ' ಎಂದು ಹೇಳುತ್ತಾನೆ. ಹೊಯ್ಸಳವಂಶವನ್ನು ಹೇಳುವಾಗ ಹೊಯ್ಸಳಶಬ್ದಕ್ಕೆ ಇತರರು

ಹೇಳುವ ಹಾಗೆಯೇ—ಒಬ್ಬ ಯತಿ ಸಳನಿಗೆ ಸೆಳೆಯನ್ನು ಕೊಟ್ಟು ಹುಲಿಯನ್ನು ಹೊಯ್ಯೆಂದು ಹೇಳಲು ಹೊಯ್ದುದರಿಂದ ಈ ಹೆಸರು ಬಂದಿತೆಂದು ಹೇಳುತ್ತಾನೆ.

ಇವನ ಬಂಧವು ಪ್ರೌಢವಾಗಿಯೂ ಲಕ್ಷಣಬದ್ಧವಾಗಿಯೂ ಇದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

## ವಸಂತ.

ಅಸುಗೆ ನೇಜಿಲ್ ಮಾಮರಂ ಪಲಸು ಮೊದಲಾಗಿ ।
ವಿಸುಪ ಮರಗಳ್ ಕನಗೊನರ್ ಚಿಗುರ್ ಚೆಂದಳಿರ್ ।
ಪೊಸನನೆಗಳುಳ್ಳರಲ್ ಕಸುಗಾಯ್ ಕರಂ ದೋರೆ ತನಿವಣ್ಗಳಾಂತು ಮೆಜ್ಜೆಯೆ ॥
ಒಸೆದವಜ ಸವಿಯನುಜ್ಜಿ ಸವಿದು ಪಡಿಯಜಿವಕ್ಕಿ ।
ಯೆಸೆವರಲ್ಪಕ್ಕಿ ಕನ್ನಡವಕ್ಕಿ ಮೆಲ್ಲುಲಿಯು ।
ನೆಸಗೆ ಝುಂಕೃತಿಗೆಯ್ವ ಸವಿವಾತನಾಡೆ ಕಣ್ಗಿಸೆದುದು ವಸಂತಸಮಯಂ ॥ 1007 ॥

ಪಜ್ಜೆಯೆ ಮದಮಂ ಮಾಗಿ ಕಜ್ಜಿಯೆ ಸೊಗಸಂ ಮಾವು ।
ನೆಜ್ಜಿಯೆ ಕಳಿವೆರ್ಚಿ ಸಸಿ ಮೆಜ್ಜೆಯೆ ಮಾಧವಿ ಪೂತು ।
ತೊಜ್ಜಿಯೆ ಲಜ್ಜೆಯನವನಿ ಜಜ್ಜಿಯೆ ತಪಮಂ ಯಮಿಗಳಿಜ್ಜೆಯೆ ನಸೆಗಣೆಯೋಪರಂ॥
ಮುಜ್ಜೆಯೆ ವಿರಹಿಯಗುಟ್ಟು ಬೆಜ್ಜಿಯೆ ಕುಸುಮೇಷು ಕುಕ್ಕೆ ।
ಲಜ್ಜೆಯೆ ಕೋಕಿಲೆ ದುಃಖವಜ್ಜೆಯೆ ಸುಖಿಜನಕ್ಕೆ ।
ಸ್ವಜ್ಜೆದುದು ವಸಂತಮಾಸಂ ಭೋಗಿತತಿಮುಖವಿಕಾಸಂ ಸುಖೈಕವಾಸಂ ॥ 1008 ॥

## ಸಮುದ್ರ.

ವಿದ್ರುಮವನಾವೃತಂ ವಿದ್ರುಮವನಾವೃತಂ ।
ಭದ್ರಮುಕ್ತಾಶೋಭಿ ಭದ್ರಮುಕ್ತಾಶೋಭಿ ।
ಯುದ್ರಾವಮೈನಾಗವರಶರಣನುದ್ರಾವಮೈನಾಗವರಶರಣಕಂ ॥

ಸದ್ರತ್ನಸಂಘಸತ್ಫೇದ್ರೇಭಶರನಿಚಯ ।
ಸದ್ರತ್ನಸಂಘಸತ್ಫೇದ್ರೇಭಶರನಿಚಯ ।
ಮುದ್ರಿಕ್ತತಾಶೂನ್ಯಮುದ್ರಿಕ್ತತಾಶೂನ್ಯಮಂಭೋಧಿಯುಜ್ಜೃಂಭಿಕುಂ ॥ 1009 ॥

## ಗಂಗೆ.

ಅದೆಯುರ್ಬುತದೆಯೊಡೆಯುತದೆ ತೋಜುತದೆ ಮಿಾಜು ।
ತದೆಯುಣ್ಮುತದೆ ಪೊಣ್ಮುತದೆ ಪೊಂಗುತದೆ ಪೊಳೆಯು ।
ತದೆ ಸುಲ್ಪಿಯುತದೆ ಸೂಸುತದೆ ಪರ್ವುತದೆ ಪರಿಯುತದೆ ಪರಿಕಲಿಸುತಡರುತೆ ॥

ಅದೆ ಹಿಗ್ಗುತದೆ ಪೆರ್ಚುತದೆ ಬುದ್ಬುದಂದೋಜು ।
ತದೆ ನೊರೆಯನೊದವಿಸುತ್ತದೆ ತೆರೆಯನಾಗಿಸು ।
ತ್ತದೆ ಭೋರ್ಗರೆಯುತೆ ಬರುತದೆಯೆಂದು ನೆರೆದ ಸಭೆಯುಲಿಯುತಿರಲ್ಕೆತಂದುದು
॥ 1010 ॥

## ಮೂದೇವಿ.

ಚಂಚಲಾಕ್ಷಿಗಳ ಡಾಳಂ ಬಳ್ಕಿಮಿಂಚಂ ಪ।
ಳಂಚಲೆಯೆ ಕವಿಗಳಾಶ್ರೀಕಾರದಾಕಾರ ।
ಮುಂ ಚುನ್ನವಾಡೆ ಕುಡುವುರ್ವ ಕರ್ವಿನ ಬಿಲ್ಲ ಬಿಂಕಮುಂ ಕೊಂಕುಗೈಯೆ॥
ಪಿಂಚುವ ನೊಸಲ್ ತೊಳಗುವೆಳವೆಜಿಯ ಮೋಹನಕೆ ।
ಪಂಚತ್ವಮುಂ ಸಾರ್ಚೆ ನಗೆಮೊಗಂ ಪೂರ್ಣೇಂದು ।
ವಿಂ ಚೆಲ್ವುದೋಜೆ ಕಾರ್ಮುಗಿಲ ಪೆರ್ಮೆಗೆ ನೂರ್ಮಡಿಸೆ ಮುಡಿಯದೇಂ
ಮೆಜ್ದಳೋ ॥ 1011 ॥

## ಕೆರೆಯಪದ್ಮರಸ.

ಸ್ಫುರಿಸಿ ಲಿಂಗತ್ರಯಮನಾಕ್ರಿಯಾಕಾರಕೋ ।
ತ್ಕರನಾಗಿ ತದ್ಭಿತಮನಜಪಿಯಂತಸ್ಫೋರು ।
ತರವಿಧಿಯನೊರೆದು ವಕ್ತವ್ಯಮಿಂತೆಂದು ಬೋಧಿಸಿಯಾಗಮದ ಹೃದಯಮುಂ ॥
ನಿರವಿಸಿ ಲಸತ್ಪ್ರತ್ಯಯುಂಜೇಟ್ಟು ಮೇಣ್ ಪ್ರಕೃತಿ ।
ಪುರುಷವೃತ್ತಿಯನ್ಪೆದೆ ಕಾಣಿಸುವ ಸೂತ್ರದಿಂ ।
ಚರಿಸಪೋಲೆಸಗಿ ಶಾಬ್ದಿಕರ ಗುರುವೆನಿಪ ಕೆಜಿಪದ್ಮರಸರೋವುಗಿಳೆಯಂ ॥ 1012 ॥

## ಪರಮತಖಂಡನ.

ಕೆಡುವೀಪ್ರಪಂಚಮುಂ ನಿತ್ಯವೆಂದೆಂಬ ಬಾ ।
ಯ್ಬಡಿಕ ವಿಮಾಂಸಕಾ ನೀಂ ಸುಮ್ಮನಿರ್ ಪುಂಸ್ತ್ವ ।
ಜಡಭಾವಪುರುಷಪ್ರಕೃತಿಗಳ ವಿವೇಕಿಸಿಯಜಿಯೆ ಮೋಕ್ಷವೆಂಬ ಸಾಂಖ್ಯಾ ॥
ಉಡುಗು ಷಡ್ವಿಂಶವಿಶ್ವರತತ್ವವೆಂದು ನಿಜ ।
ದೆಡೆಯನಜಿಯದೆ ಭವನಕೆ ಬರ್ಪ ಪಾತಂಜಲನೆ ।
ನುಡಿಯದಿರ್ ಬ್ರಹ್ಮಕ್ಕೆ ಜೀವತೆಯನೊರೆವ ವೇದಾಂತಿ ನಿನಗೇತಜಜಿಮೈ ॥ 1013 ॥

## ಕವಿಮುಖಕವಾಟ ಪದ್ಯ. (ಗತಪ್ರತ್ಯಾಗತಪದ್ಯ)

ವರವಿತನುನಿರಭೀಗಕನತಾವಿಕಭಸಶಿವ ।
ನಿರತತನುವಿರುಚಾರುಚಜರಾತನುಪಶುಪಸು ।
ಸರಸರಸಕಮರಣರತವಿರತಹಿಯತಯಜಕಕುಶಲಕರ ಶಶಕಕರಕ ॥

ಕರಕಕಶಶರಕಲಶಕುಕಜಯುತಯುಹಿತರವಿ।
ತರಣರಮಕಸರಸರಸಸುಪಶುಪನುತರಾಜ ।
ಚರುಚಾರುವಿನುತತರನಿವಶಿಸಭಕವಿತಾನಕಗಭೀರನಿನುತವಿರವ ॥ 1014 ॥

(ಕರ್ಣಾಟವಿಭಕ್ತಿಮಾತ್ರದಲ್ಲಿ ಉಪನ್ಯಾಸಚ್ಛಾಯೆಯಿಂದ ಅನುಲೋಮ ಪ್ರತಿಲೋಮಾರ್ಥದಮಾಗಿ ಮಾಡಿದ ಕವಿಮುಖಕವಾಟಾಖ್ಯಸಾರ್ಥಕಮಾದ ಮಹಾಪ್ರಬಂಧವಿದು.)

---

## ವಜ್ರ. 1393.

ಈತನು ಸೊರಬದ 264 ನೆಯ ಶಾಸನವನ್ನು ಬರೆದಂತೆ ಆ ಶಾಸನದಲ್ಲಿರುವ

ವಪುವಂ ಗೋಪತಿಯುಬಾಯಲ್ । ವಿಪುಳತಂಪರೋಕ್ಷನುತಿಯ ಪೇಟ್ದಿಂ ವಜ್ರಂ
ತಪನಶಶಿಯಿರ್ಪಿನಂ ವ । ರ್ತಿಪ ತೆಜಿದಿಂ ಸದ್ಬುಧಾಳಿ ಪೊಗಟ್ರಲ್ ಕೃತಿಯಂ ॥

ಎಂಬ ಪದ್ಯದಿಂದ ತಿಳಿಯುತ್ತದೆ ಈ ಶಾಸನವು ಶಕ 1315 ರಲ್ಲಿ—ಎಂದರೆ 1393 ರಲ್ಲಿ— ಬರೆದುದು. ಇದರಲ್ಲಿ ಸ್ವರ್ಗಸ್ಥನಾದ ಮಹಾಪ್ರಭು ಕುಪ್ಪಟೂರ ಗೋಪೀನಾಥನ ಸ್ತುತಿರೂಪವಾದ ಪದ್ಯಗಳಿವೆ. ಈ ಶಾಸನದ ಅನೇಕ ಭಾಗವು ಹೋಗಿದೆ. ಅಸಮಗ್ರವಾದ ಒಂದು ಪದ್ಯವನ್ನು ಕೆಳಗೆ ಬರೆಯುತ್ತೇವೆ : —

. . . . . ಮನೋರಥಾರ್ಥಮಂ ।
ಕುಡುವನದಾರೊ ಬಂಧನದಿನಿರ್ವ್ವರನಶ್ರಮದಿಂದೆ ಜೇಗದಿಂ ॥
ಬಿಡಿಸುವರಿಲ್ಲ ಬಂಧುಗಳ ಪಾಲನೆ ಪೋದುದು ಗೋಪಿನಾಥ ಹಾ ।
ಮಡಿದನೆನುತ್ತ ಕಣ್ಣನಿಯು ತಂದುದು ಕುಂದದೆ ಧಾರಿಣೀಜನಂ ॥ 1015 ॥

---

## ಅಭಿನವಮುಂಗರಾಜ. 1398.

ಈತನು ಅಭಿನವನಿಘಂಟು ಅಥವಾ ಕವಿಮುಂಗಾಭಿಧಾನ ಎಂಬ ಗ್ರಂಥವನ್ನು ಬರೆದಿದ್ದಾನೆ. ಚಿಂತಾಮಣಿಪ್ರತಿಪದವೆಂಬ ಗ್ರಂಥವನ್ನೂ ಬರೆದಿರುವುದಾಗಿ ಪ್ರತೀತಿಯಿದೆ. ಇದು ನಮಗೆ ದೊರೆತಿಲ್ಲ.

ಇವನು ಬ್ರಾಹ್ಮಣಕವಿ; ಕಮ್ಮೆಕುಲದವನು; ವಿಶ್ವಾಮಿತ್ರಗೋತ್ರದವನು. ಈತನ ತಂದೆ ರಿವ್ಯಾರ್ಯರಾಮರಸ. ಶಶಿಪುರದ ಸೋಮೇಶ್ವರನ ವರಪ್ರಸಾದದಿಂದ ಈ ನಿಘಂಟುವನ್ನು ಬರೆದಂತೆ ಹೇಳುತ್ತಾನೆ. 'ಸೋಮೇಶನೊಲಿದಿ

ತ್ತನಾಹತಮತಿಯು ಕುಜುಪಿನಭಿನವಮುಂಗ' ಎಂದು ತನ್ನನ್ನು ವಿಶೇಷಿಸಿ ಹೇಳಿ ಕೊಂಡಿದ್ದಾನೆ. ಈ ನಿಘಂಟುವನ್ನು ಶಕ 1320 ರಲ್ಲಿ –ಎಂದರೆ 1398 ರಲ್ಲಿ– ಬರೆದಂತೆ ಹೇಳುತ್ತಾನೆ.

ಇವನಿಗೆ ಬಾಲಶಾರದೆ, ಅಭಿನವಬಾಲಸರಸ್ವತಿ ಎಂಬ ಬಿರುದುಗಳಿದ್ದಂತೆ ತಿಳಿಯುತ್ತದೆ.

ತನಗೆ ಹಿಂದೆ ಇದ್ದ ನಿಘಂಟುಕಾರರನ್ನು ಈ ಪದ್ಯದಲ್ಲಿ ಹೇಳಿದ್ದಾನೆ—

ವರರುಚಿಯು ಜಾಹ್ನೆ ಗೋಪಾಲಕನ ಬಿಡಗು ಭಾ ।
ಗುರಿಯು ಗೂಢತೆ ಧನಂಜಯನ ಪರ್ಯಾಯ ಸುರ ।
ಹರಿಯು ಸುವಿಭಕ್ತಿ ವಿಶ್ವಪ್ರಕಾಶದ ಚದುರು ನಾಗವರ್ಮನ ಕನ್ನಡಂ ॥
ವರವೈಜಯಂತಿಯು ನಯಂ ಹಲಾಯುಧನ ವಿ ।
ಸ್ತರದ ವಚನೋಕ್ತಿಯೆಂಬಿಂತಿವೆಲ್ಲವನು ಸಂ ।
ವರಿಸಿಯಭಿನವಮುಂಗನುಸಿರ್ದಂ ಸ್ಥಿರಪಾಲರಜಿವಂತುಟಭಿಧಾನವುಂ ॥

ತನ್ನ ಪ್ರಶಸ್ತಿಯನ್ನು "ಅಭಿನವಮುಂಗನುಸಿರ್ದ ಸತ್ಕವಿತೆಯಂ ಜಜಿವರಾರ್ ಮಜೀವರಾರ್ ಮಿಕ್ಕರೋಲ್ ಮನುಜಶಿಕ್ಷಾಪೇಕ್ಷೆಯಿಂದಾದನೇ" ಎಂಬ ಪದ್ಯಭಾಗದಲ್ಲಿ ಹೇಳಿಕೊಂಡಿದ್ದಾನೆ.

ಇವನ ಗ್ರಂಥ

## ಅಭಿನವನಿಘಂಟು ಅಥವಾ ಮುಂಗಾಭಿಧಾನ.

ಇವನ ಕಾಲಕ್ಕೆ ಹಿಂದೆ ಇದ್ದ **ನಾಗವರ್ಮನ** ನಿಘಂಟುವನ್ನು ಮನಸ್ಸಿನಲ್ಲಿಟ್ಟುಕೊಂಡು ತನ್ನ ಗ್ರಂಥಕ್ಕೆ ಅಭಿನವನಿಘಂಟು ಎಂದು ಹೆಸರಿಟ್ಟಿರುವಂತೆ ತೋರುತ್ತದೆ.

ಇದು ಉದ್ದಂಡಪಟ್ಟದಿಯಲ್ಲಿ ಎಂದರೆ ನಾರ್ಧಕಪಟ್ಟದಿಯಲ್ಲಿ ಬರೆದಿದೆ. ಇದರಲ್ಲಿ ಸ್ವರ್ಗ, ಭೂ, ಪಾತಾಳ, ಸಾಮಾನ್ಯ, ನಾನಾರ್ಥ ಎಂಬ ೫ ಕಾಂಡಗಳಿವೆ. ಒಂದೊಂದು ಕಾಂಡವೂ ವರ್ಗಗಳಾಗಿ ಭಾಗಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂಸ್ಕೃತ ಶಬ್ದಗಳಿಗೆ ಕನ್ನಡದಲ್ಲಿ ಅರ್ಥವನ್ನು ಕೊಟ್ಟಿದ್ದಾನೆ. ತನ್ನ ಗ್ರಂಥದ ಉತ್ಕೃಷ್ಟತೆಯನ್ನೂ ಪ್ರಯೋಜನವನ್ನೂ ಈ ಪದ್ಯದಲ್ಲಿ ಹೇಳಿದ್ದಾನೆ :—

ಪಡೆದ ತಾಯಂತಲಂಕಾರದಿಂದಮನೀವು ।
ದಡರ್ದ ಪಿತನಂತೆ ಲಕ್ಷಣಸುಶಬ್ದಮನೀವು ।
ದೊಡೆಯನಂತೆ ಪದಾರ್ಥಪಾವುದಂಗನೆಯಂತೆ ಭಾವರಸಗಳನೀವುದು ॥

ಕಡುಗುರುವಿನಂತತಿವಿಭಕ್ತಿಲಿಂಗಮನೀವು ।
ದೊಡನಾಡಿಯುಂತೆ ತಾತ್ಪರ್ಯಾರ್ಥಮಾವುದೆಂ ।
ದೊಡರಿಸಿದನಭಿನವನಿಘಂಟನಭಿನವಮಂಗನಭಿನವವಿಲಾಸದಿಂದೆ ॥

ಗ್ರಂಥಾವತಾರದಲ್ಲಿ ಸೋಮೇಶನನ್ನು ಸ್ತುತಿಸಿ ಬಳಿಕ ಸರಸ್ವತೀವಿನಾಯಕರನ್ನು ಹೊಗಳಿದ್ದಾನೆ.

ಕಾಂಡಗಳ ಕೊನೆಯಲ್ಲಿ—

ಇತಿ ಶಶಿಪುರಾಧಿನಾಥಸೋಮೇಶ್ವರಚಾರುಚರಣಾರವಿಂದಮಧುಸೇವಿತಮಧುಕರಾಯಮಾನ ಸಕಲವಿಬುಧಜನಮಾನಸೋಲ್ಲಾಸನಿವಾಸ ಅಭಿನವಬಾಲಸರಸ್ವತಿ ಮಂಗರಾಜವಿರಚಿತಮಪ್ಪಭಿನವಾಭಿಧಾನದೊಳ್

ಎಂಬ ಗದ್ಯವಿದೆ.

ಈ ಗ್ರಂಥದಿಂದ ಒಂದೆರಡು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

ಕೇಂಕೃತಂ ಪಕ್ಕಿಯೊಳಗೀಂಕೃತಂ ವಾತನೊಳು ।
ರ್ಕುಂಕೃತಂ ತುಂಬಿಯೊಳು ಚೀತ್ಕೃತಂ ರಥಗಳೊಳು ।
ಭೀಂಕೃತಂ ಬಾಣದೊಳು ಫೀಟ್ಕೃತಂ ಕಲಭದೊಳು ಬೃಂಹಿತಂ ಮದಗಜದೊಳು ॥
ಟಂಕೃತಂ ಬಿಲ್ಲಿನೊಳು ಸೀತ್ಕೃತಂ ಸುರತದೊಳು ।
ಹೂಂಕೃತಂ ಧೀರರೊಳು ಮಾಂಕೃತಂ ಪರ್ಣಿಯೊಳು ।
ಝಂಕೃತಂ ಕಟಕದೊಳು ಹೇಷಾಕೃತಂ ವಾಜಿತತಿಯಲ್ಲಿ ವರ್ತಿಸಿಕರ್ಮಂ ॥1016॥

ಕೈಕಾಲುಮೋಟನಾದಂ ಕುಣಿಕನೆನಿಸಿಕರ್ಮ ।
ಕೈಕಾಲು ಕಿಜ್ಜಿದಾಗೆ ವಾಮನೆನಿಸಿಕರ್ಮಮಾ ।
ಕೈಕಿತಂ ಪೃಶ್ನಿಯೆನೆ ಸೂಕ್ಷ್ಮದವನಕ್ಕು ಕುಬ್ಜಂ ಗುಡ್ಡನೆಂದೆನಿಕ್ಕುಂ ॥
ಏಕಪಸ್ತಂ ವಿಕಳಪಾಣಿಯೊಕ್ಕೈಯನ ।
ಕ್ಕೇಕಾಂಘ್ರಿಯೆನೆ ಕುಂಟನಕ್ಕು ಗತನಾಸಿಕಂ ।
ಮೂಕೊಜ್ಜಿಯನಕ್ಕು ಕಿವಿಯಿಲ್ಲದವ ಮೂಟ್ಟಿನಕ್ಕದ್ವಿಜಂ ಬೋಡನಕ್ಕುಂ ॥1017॥

---

## ಆಯತವರ್ಮ. ಸು. 1400.

ಈತನು ಕನ್ನಡರತ್ನಕರಂಡಕವನ್ನು ಬರೆದಿದ್ದಾನೆ. ಇವನು ಜೈನಕವಿ; ವರ್ಧಮಾನಸಿದ್ಧಾಂತದೇವನ ಶಿಷ್ಯನು. ಇವನ ವಿಷಯವಾಗಿ ಇವನ ಗ್ರಂಥದಿಂದ ಇನ್ನೇನೂ ತಿಳಿವುದಿಲ್ಲ. ಇವನ ಕಾಲವನ್ನು ನಿಶ್ಚಯಿಸುವುದಕ್ಕೂ ಸರಿಯಾದ ಆಧಾರವಿಲ್ಲ; ಸುಮಾರು 1400 ರಲ್ಲಿ ಇದ್ದಿರಬಹುದೆಂದು ತೋರುತ್ತದೆ.

ಇವನ ಗ್ರಂಥ

## ಕನ್ನಡ ರತ್ನಕರಂಡಕ.

ಇದು ಚಂಪೂಗ್ರಂಥ; ಸಮ್ಯಗ್ದರ್ಶನಸ್ವರೂಪನಿರೂಪಣ, ಸಮ್ಯಗ್ಜ್ಞಾನ ಸ್ವರೂಪನಿರೂಪಣ, ಸಮ್ಯಕ್ಚಾರಿತ್ರಸ್ವರೂಪನಿರೂಪಣ ಎಂದು 3 ಪರಿಚ್ಛೇದಗಳಾಗಿ ಭಾಗಿಸಲ್ಪಟ್ಟಿದೆ. ಇದರಲ್ಲಿ ಜೈನಮತಕ್ಕೆ ಸಂಬಂಧಪಟ್ಟ ರತ್ನತ್ರಯವೆಂಬ ದರ್ಶನಜ್ಞಾನಚಾರಿತ್ರಗಳು ವರ್ಣಿಸಲ್ಪಟ್ಟವೆ. ಗ್ರಂಥಾವತಾರದಲ್ಲಿ ಚತುರ್ವಿಂಶತಿ ಜಿನಸ್ತುತಿ ಇದೆ. ಗ್ರಂಥಾಂತ್ಯದಲ್ಲಿ ಈ ಗದ್ಯವಿದೆ—

ಇದು ಭಗವದರ್ಹತ್ಪರಮೇಶ್ವರಪರಮಭಟ್ಟಾರಕವೀತರಾಗಸರ್ವಜ್ಞವದನವನಜಸ ಮುದ್ಗತಸದಸದಾತ್ಮಕಪರಮತತ್ತ್ವ ಭಾವನಾಭಾವಿತಸ್ವಾಂತ ಶ್ರೀವರ್ಧಮಾನಸಿದ್ಧಾಂತದೇವ ಚರಣಸರಸೀರುಹಸ್ಮರಣಪರಿಣತಾಂತಃಕರಣಕುಶೇಶಯ ಶ್ರೀಮದಾಯತವರ್ಮವಿರಚಿತಮಪ್ಪ ರತ್ನಕರಂಡಕದೊಳ್.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರಯುತ್ತೇವೆ—

### ರತ್ನತ್ರಯ.

ತತ್ತ್ವದ ರುಚಿ ಸಮ್ಯಕ್ತ್ವಂ । ತತ್ತ್ವಂಗಳೊಳ್ಳಿತಾಗಿಯಱಿವುದು ಬೋಧಂ ।
ತತ್ತ್ವಂ ತನ್ನೊಳ್ನೆಜಿದಿರೆ । ಸತ್ತ್ವಂಗಳನೋವಿಕಾವುದದುವೆ ಚರಿತ್ರಂ ॥ 1018 ॥

### ಸಲ್ಲೇಖನೆ.

ಎಲ್ಲಾ ಪರಿಗ್ರಹಮುಮಣ । ವಿಲ್ಲದ ಮನದೊಡೆಯನಾಗಿ ಸಲೆ ತಪಮಂ ತ।
ಳ್ವಲ್ಲದೆ ಕೆಯ್ಕೊಳ್ವುದು ತಾಂ ।ಸಲ್ಲೇಖನೆಯೆಂದು ಪೇೞ್ದ್ವರಾಚಾರ್ಯರ್ಕಳ್॥1019॥

### ವೈರಾಗ್ಯ.

ಜಳಬುದ್ಬುದದಿಂ ಕ್ಷಣಿಕಂ । ಜಳಧರನಿವಹಂಗಳಿಂದಮಧ್ರುವಮುಳ್ಕಂ ।
ಗಳ ರಂಜನೆಯಂತಚಿರಂ । ಬಳಸಿದ ಬಂಧುಗಳುವೊಡಲುವೊದವೆಯುಮೆಂತುಂ
॥ 1020 ॥

ಚತುರಂಗಬಲಮುಮಾಯುಧ । ತತಿಯುಂ ಬರವಿತ್ತ ದೈವಮುಂ ಬಂಧುಗಳುಂ ।
ಕ್ಷಿತಿಯುಂ ನಿಜಭುಜವೀರ್ಯಮು । ಮತೀತಮಪ್ಪಂದು ಕಾಯಲಾಱವು ನರರಂ
॥ 1021 ॥

ಸಂಸಾರಕಾರಣಂಗಳ್ । ಹಿಂಸಾರುಚಿ ಕಳವು ಪುಸಿ ಪರಸ್ತ್ರೀಗಮನಂ ।
ಮಾಂಸಮಧುಮದ್ಯಸೇವನೆ । ಸಂಸಯಮೇಂ ದುಃಖಕಾರಣಂಗಳಿವಿನಿತುಂ ॥ 1022 ॥

---

## ಚಂದ್ರಕೀರ್ತಿ. ಸು. 1400.

ಈತನು ಪರಮಾಗಮಸಾರವನ್ನು ಬರೆದಿದ್ದಾನೆ. ಇವನು ಜೈನಕವಿ. ಗ್ರಂಥಾಂತ್ಯದಲ್ಲಿರುವ

ಮುನಿಪತಿ ದರ್ಶನಶುದ್ಧಂ । ವಿನುತಯಶಂ ಶೀಲರತ್ನನಚಳಿತಧೈರ್ಯಂ ।
ಮನಸಿಜಮದಕರಿಸಿಂಹಂ । ವಿನಯನಿಧಾನಂ ಸರಸ್ವತೀಮುಖತಿಲಕಂ ॥
ಯಮನಿಯಮಧ್ಯಾನಯುತಂ । ಸಮಚಿತ್ತಂ ತತ್ತ್ವವೇದಿ ವೈರಾಗ್ಯಯುತಂ ।
ಶಮಿತಕಷಾಯಂ ನಿಸ್ಪೃಪ । ಸಮಲಂ ಭವ್ಯಂ ಸರಸ್ವತೀಮುಖತಿಲಕಂ ॥

ಎಂಬ ಪದ್ಯಗಳಲ್ಲಿ ಕವಿ ತನ್ನ ಗುಣಾದಿಗಳನ್ನು ಹೇಳಿಕೊಂಡಿರುವಂತೆ ತೋರುತ್ತದೆ. ಅಲ್ಲದೆ ಆತನಿಗೆ ಸರಸ್ವತೀಮುಖತಿಲಕ ಎಂಬ ಬಿರುದು ಇದ್ದಂತೆಯೂ ತಿಳಿಯುತ್ತದೆ. ಒಂದೆರಡುಪದ್ಯಗಳು ಕವಿಜನಮಿತ್ರ ಎಂದು ಮುಗಿಯುತ್ತವೆ. ಇದೂ ಕವಿಯ ಬಿರುದಾಗಿದ್ದರೂ ಇರಬಹುದು. ಕವಿಯ ಕಾಲವನ್ನು ನಿರ್ಧರಿಸಲು ಆವ ಆಧಾರವೂ ಇಲ್ಲ; ಸುಮಾರು 1400 ರಲ್ಲಿ ಇದ್ದಿರಬಹುದೆಂದು ತೋರುತ್ತದೆ.

ಇವನ ಗ್ರಂಥ

### ಪರಮಾಗಮಸಾರ.

ಇದು ಕಂದವೃತ್ತಗಳಲ್ಲಿ ಬರೆದಿದೆ; ಪದ್ಯಗಳು 132. ಇದರಲ್ಲಿ ಆತ್ಮಸ್ವರೂಪ, ವೈರಾಗ್ಯ ಮುಂತಾದ ವಿಷಯಗಳು ನಿರೂಪಿತವಾಗಿವೆ. ಇವಕ್ಕೆ ಈ ಹೆಸರು ಬರಲು ಕಾರಣವನ್ನು ಕವಿ ಈ ಪದ್ಯದಲ್ಲಿ ಹೇಳುತ್ತಾನೆ—

ಪರಮಜಿನೇಶ್ವರಮತದೊಳ್ । ಪರಿಕಿಸಿ ಸಾರಾಯಮಪ್ಪುವಂ ಕೊಂಡು ಕರಂ ।
ವಿರಚಿಸಿತಪ್ಪುದಱಿಂದಂ । ಪರಮಾಗಮಸಾರಮಾದುದೀಕೃತಿಯಿಂದಂ ॥

ಗ್ರಂಥಾವತಾರದಲ್ಲಿ ಪುರುದೇವಸ್ತುತಿ ಇದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಎನ್ನ ಧನಮೆನ್ನ ಪುತ್ರರಿ । ದೆನ್ನಯ ಗೃಹಮೆನ್ನ ವಸ್ತ್ರವಾಹನಮೆನುತುಂ ।
ತನ್ನ ನಿಜಾತ್ಮನನಱಿಯದೆ । ಮನ್ನಿಸುಗುಂ ಮೂಢಮತಿಯೊಳೊಂದಿದ ಜೀವಂ ॥1023॥

ಧ್ಯಾನಂ ಕಿಚ್ಚಾಗಲಸದ್ । ಜ್ಞಾನಂ ತಿವಿಯಾಗೆ ವೃತ್ತಮೌಷಧವಾಗಲ್ ।
ಜ್ಞಾನಿ ಸುದುಗಾತ್ತಲೋಹಮ । ನೇನುಂ ಮಳವೊಂದು ನಿಲ್ಲದಂತಿರೆ ಮುದದಿಂ

॥1024॥

ನೀರೊಳಗೆ ಪುಟ್ಟಿ ಪದ್ಮಂ । ನೀರೊಳ್ ತಾಂ ಮುಟ್ಟದಂತೆ ನಿಜಶುದ್ಧಾತ್ಮಂ ।
ಸಾರಮಣಮಲ್ಲದೀ ಸಂ । ಸಾರದೊಳೊಂದಿರ್ದುಮೊಂದನಮಳಸಮೂರ್ತಂ ॥1025॥

ಆನಪ್ಪೊಡಘವಿಹೀನಂ । ತಾನಪ್ಪೊಡೆ ಕರ್ಮಜನಿತವಿಾಯೊಡಲೆನುತುಂ ।
ಜ್ಞಾನಿಯದಱಲ್ಲಿ ಮೋಹಮ।ನೇನುಂ ಪೊರ್ದಿಸದೆ ನೆಗಟ್ಟುಮಾತ್ಮೋನ್ನತಿಯೊಳ್
॥ 1026 ॥

ತನು ತನಗೆಂಬ ತನ್ವಿ ತನಗೆಂಬ ಧನಂ ತನಗೆಂಬ ರಾಜ್ಯರಂ ।
ಜನೆ ತನಗೆಂಬ ದರ್ಪಮನದಿರ್ಪಿಯೆ ತನ್ನೊಳೆ ತಾನೆ ಭಾವಿಸಲ್ ॥
ತನು ತನಗಲ್ಲ ತನ್ವಿ ತನಗಲ್ಲ ಧನಂ ತನಗಲ್ಲ ರಾಜ್ಯರಂ ।
ಜನೆ ತನಗಲ್ಲವೆಂದುಱಿದು ನಿಂದುದೆ ಯೋಗಿಗೆ ಯೋಗಿಲಕ್ಷಣಂ ॥ 1027 ॥

---

## ಕವಿಮಲ್ಲ. ಸು. 1400.

ಈತನು **ಮನ್ಮಥವಿಜಯ**ವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣ ಕವಿ; ಕವಿಪುಟ್ಟಣಾಂಕಪಂಡಿತನಿಂದ (ಸು.1380) ವಿದ್ಯೆಯನ್ನು ಕಲಿತಂತೆ ಹೇಳುತ್ತಾನೆ. ಇವನಿಗೆ ಲಕ್ಷಣಕವಿ ಎಂಬ ಬಿರುದಿದ್ದಂತೆ ತಿಳಿಯುತ್ತದೆ. ಇವನಕಾಲವು ಸುಮಾರು 1400 ಆಗಿರಬಹುದು. ಸಂಸ್ಕೃತ ಕವಿಗಳಲ್ಲಿ ಕಾಳಿದಾಸಬಾಣಮಯೂರರನ್ನು ಸ್ಮರಿಸಿ ಕನ್ನಡಕವಿಗಳಲ್ಲಿ ಅಗ್ಗಳ ಮುಂತಾದವರನ್ನು ಈ ಪದ್ಯಗಳಲ್ಲಿ ಸ್ತುತಿಸುತ್ತಾನೆ—

ಇಳೆಯೊಳ್ ಕರ್ನಾಟಭಾಷಾವಿದರೆನಲೆಸೆವೊಳ್ಪಬ್ಬಿಗರ್ ತಾವೆಸಪ್ಪ ।
ಗ್ಗಳದೇವಂ ನೇಮಿಚಂದ್ರಂ ಮನಸಿಜ ಸುಜನೋತ್ತಂಸ ರುದ್ರಾಂಕ ಪೊನ್ನಂ ॥
ಕಳಿಯಾಣ್ಮಂ ನಾಗವರ್ಮಾದ್ಯಸುಪಮಗುಣಿಗಳ್ ನೂತಸಬ್ರಹ್ಮರೆಮ್ಮೆಳ್ ।
ವಿಳಸದ್ಭಾಗ್ಯತ್ತಿಯಂ ಕಾಬ್ಬುರಪೆಸಗುವಿನಂ ಮಾಬ್ಬೆ ಕಾರುಣ್ಯದಿಂದಂ ॥
ನಿರತಂ ಕರ್ನಾಟಕದೊಳ್ । ಪರಿಕಿಸೆ ಶಬ್ದಜ್ಞನಾವಸರ್ವನೆ ಲೋಕ ।
ಕ್ಕರಿದಲ್ತೆ ಭಾಪು ಕವಿಕುಂ । ಜರ ಕೇಶವರಾಜ ಗೋಚರಿಸು ಮನ್ಮನದೊಳ್ ॥

ಇವನ ಗ್ರಂಥ

### ಮನ್ಮಥವಿಜಯ.

ಇದು ಚಂಪೂರೂಪವಾಗಿದೆ. ಗ್ರಂಥಾವತಾರದಲ್ಲಿ ಕವಿ ಕಾಮನನ್ನು ಸ್ತುತಿಸಿದ್ದಾನೆ; ಬಳಿಕ ಈಶ್ವರ, ವಿಷ್ಣು, ಬ್ರಹ್ಮ, ಆದಿಶಕ್ತಿ, ಗಣೇಶ, ಸರಸ್ವತಿ ಇವರುಗಳನ್ನು ಪರಿವಿಡಿಯಿಂದ ಹೊಗಳಿದ್ದಾನೆ. ತನ್ನ ಗ್ರಂಥದ ಹೆಸರು ಮುಂತಾದುದನ್ನು ಈ ಪದ್ಯದಲ್ಲಿ ಹೇಳಿದ್ದಾನೆ—

ಸ್ಮರವಿಜಯಂ ಕೃತಿವೆಸರಾ । ದರಿಪರ್ ಶೃಂಗಾರಸಾರಕೋವಿದರೊಲವಿಂ ।
ವಿರಚಿಸಿದಂ ಲಕ್ಷ್ಮಣಕವಿ । ವರನೆಂದೆನೆ ಮೆಚ್ಚಿ ಕೂರ್ತು ಪೊಗಟ್ಪುದರೊಳರೇ ॥

ಗ್ರಂಥಾಂತ್ಯದಲ್ಲಿ ಈ ಗದ್ಯವಿದೆ—

ಇದು ವಿದಿತಮದನಮುದ್ರಾಂಕಿತವಿದೂರಜನನಿಬಂಧನಕಾರಾಗಾರಮಭಿನವನಾಯಕ ನಾಯಿಕಾಶೃಂಗಾರಸಾರೋದ್ಧಾರಮುಂ ಸಕಲವಿಬುಧಸೇವ್ಯಮಾನಮುಂ ಲಕ್ಷಣಕವೀಂದ್ರ ವಿರಚಿತಮಪ್ಪ ಮನ್ಮಥವಿಜಯದೊಳ್.

ಈ ಗ್ರಂಥದಿಂದ ಸ್ವಪ್ರಶಂಸಾರೂಪವಾದ ಕವಿಯ ಒಂದು ಪದ್ಯವನ್ನು ಉದ್ಧರಿಸಿ ಬರೆಯುತ್ತೇವೆ—

ಚತುರಾಸ್ಯಂ ಜಡಜಸ್ಥನಂಗಜಹರಂ ಕಾಡೊಳ್ ಸಮಂತಿರ್ಪನ ।
ಚ್ಯುತನೆಂದುಂ ನಿರಿಯಿಂದೆ ಗರ್ವಿತನವಂ ಭೂಭಾರಕಜ್ಜಾನಿ ಗೀ ॥
ಷ್ಟತಿ ಪಾಣ್ಬಂ? ಗೊರವಂಕಳಾವಳಿಯನೆಂದಿಂತೆಲ್ಲಿಯುಂ ನಿಲ್ಲದ ।
ಪ್ರತಿಮಳ್ ಸತ್ಕವಿಮಲ್ಲನೊಳ್ ಮೊಗದೆ ನಿಂದಳ್ ವಾಣಿ ಸಲ್ಲೀಲೆಯಿಂ ॥1028 ॥

---

## ನೀಲಕಂಠಶಿವಾಚಾರ್ಯ. ಸು. 1400.

ಈತನು ಬರೆದಿರುವ ಬ್ರಹ್ಮಸೂತ್ರವ್ಯಾಖ್ಯಾನರೂಪವಾದ ಕ್ರಿಯಾಸಾರವೆಂಬ ಸಂಸ್ಕೃತಗ್ರಂಥದ 19 ನೆಯ ಉಪದೇಶದ ಕೊನೆಯಲ್ಲಿರುವ "ಅಥ್ವನಾವುಥ್ವ ಪತೇ ಶ್ರೇಷ್ಮಸ್ಯಾಥ್ವನಃ ಪಾರಮಸೀವೇತಿಮಂತ್ರೇಣ ಕೃತಕಲಾಸನ್ನಿಧಾನಸ್ಯ ಲಿಂಗಸ್ಯ ದೀಕ್ಷಾಪೂರ್ವಕಧಾರಣಮಿತ್ಯಾಗಮಪ್ರಕಾರೋ ಭಾಷಾಪ್ರಬಂಧೇ' ಸ್ಮತ್ಪೃಥೇ' ವಲೋಕನೀಯಃ" ಎಂಬ ಭಾಗದಿಂದ ಇವನು ಒಂದು ಕನ್ನಡಗ್ರಂಥ ವನ್ನೂ ಬರೆದಿರುವಂತೆ ತಿಳಿಯುತ್ತದೆ.

ಈತನು ವೀರಶೈವಕವಿ; ಇವನ ತಂದೆ ಮಲ್ಲಯದೇವ, ತಾಯಿ ಚೆನ್ನ ಮಾಂಬೆ. ಮುಲ್ಲಣಾರ್ಯನ ವೀರಶೈವಾಮೃತಪುರಾಣದಲ್ಲಿ (1530) ಈತನ ಕ್ರಿಯಾಸಾರದಿಂದ ಅನುವಾದಮಾಡಿರುವುದರಿಂದ ಈತನು ಅವನಕಾಲಕ್ಕೆ ಹಿಂದೆ ಇದ್ದಿರಬೇಕು. ಎಷ್ಟು ಹಿಂದೆ ಇದ್ದನೋ ತಿಳಿಯದು; ಸುಮಾರು 1400 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ.

---

## ಅಭಿನವಚಂದ್ರ. ಸು. 1400.

ಇವನು ಅಶ್ವಶಾಸ್ತ್ರವೆಂಬ ಗ್ರಂಥವನ್ನು ಬರೆದಿದ್ದಾನೆ. ಈತನು ಬ್ರಾಹ್ಮಣ ಕವಿ. ಇವನ ತಂದೆ ಕಾಳಪಯ್ಯ, ತಾಯಿ ಅತ್ತಿಮಬ್ಬೆ, ಅಣ್ಣ ಸೋಮದೇವ, ಸ್ಥಳ ಬಾಗೆವಾಡಿ. "ಚಂದ್ರಕವೀಂದ್ರ ವಾಗ್ವಿಲಾಸಂ ನೆಗಲಲ್ ವಾಜಿಶಾಸ್ತ್ರಮುಂ ವಿರಚಿಸು

ವೆಂ" ಎಂಬುದರಿಂದ ಹಿಂದೆ ವಾಜಿಶಾಸ್ತ್ರವನ್ನು ಬರೆದ ಚಂದ್ರಕವಿಯನ್ನು ಅನುಸರಿಸಿ ಕವಿ ಈ ಗ್ರಂಥವನ್ನು ಬರೆದಂತೆ ತೋರುತ್ತದೆ. ಈ ಚಂದ್ರಕವಿ ಮದನತಿಲಕವನ್ನು ಬರೆದ ಚಂದ್ರರಾಜನಾಗಿರಬಹುದು. ಆ ಚಂದ್ರಕವಿಯನ್ನು ಅನುಸರಿಸಿ ಅಭಿನವ ಚಂದ್ರ ಎಂದು ಕವಿ ತನಗೆ ಹೆಸರಿಟ್ಟುಕೊಂಡಿರಬಹುದು. ಇವನ ಕಾಲವನ್ನು ನಿರ್ಧರಿಸುವುದಕ್ಕೆ ಸರಿಯಾದ ಆಧಾರವಿಲ್ಲ; ಸುಮಾರು 1400 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ.

ಇವನಿಗೆ ಸುಕರವಿಳಾಸ, ಬುಧಬಂಧು, ವಿಬುಧದಿನಕರ, ಗುಣರತ್ನ ಎಂಬ ಬಿರುದುಗಳಿದ್ದಂತೆ ತೋರುತ್ತದೆ.

ತನಗೆ ಹಿಂದೆ ಅಶ್ವಶಾಸ್ತ್ರವನ್ನು ಬರೆದವರಲ್ಲಿ ಕೆಲವರ ಮತವನ್ನು ಹೊಸಗನ್ನಡದಿಂದ ಹೇಳುವಂತೆ ಈ ಪದ್ಯದಲ್ಲಿ ಹೇಳಿದ್ದಾನೆ :—

ಅನುಪಮಹಯಶಾಸ್ತ್ರಾಗಮ। ವನಸಿಧಿಯೊಳ್ ಸಂಪದತ್ತ ಕೃತಿಲಕ್ಷಣಮಂ।
ದಿನಕರತನಯನ ರೇವಂ। ತನಮತಮಂ ಪೇೞ್ದೆನೆಸೆಯೆ ಪೊಸಗನ್ನಡದಿಂ॥

ತನ್ನ ಕವಿತಾಚಾತುರಿಯನ್ನು ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ—

ಪ್ರಹಸಿತಸರಸ್ವತೀಮುಖ। ಕುಪರವಿನಿರ್ಗತನುತಪ್ರಸನ್ನಾಳಾಪಂ।
ಸಹಜಮಿದೆಂಬಂತಿರೆ ನಾ। ಬ್ರೂಮೆಯನಾಂ ಮೆಱೆದು ವಿಬುಧರಂ ಮೆಚ್ಚಿಸುವೆಂ॥
ಅರ್ಥಾವಗಾಢಮೆನಿಸಿ। ರ್ದರ್ಥಂ ಬುಧಜನದ ಮನಕೆವರೆ ಪೇೞಿಲ್ಲ।
ನ್ಯರ್ಥಂ ಕವಿತಾಪ್ರಭವಸ। ಮರ್ಥಿಕೆಯಿನಗುಂಟು ಪೇೞ್ದೆನೆನ್ನಜ'ವನಿತಂ॥

ಕುಕವಿಗಳನ್ನು ಈ ಪದ್ಯದಲ್ಲಿ ನಿಂದಿಸಿದ್ದಾನೆ.—

ಅಗಟ್ಟಿಡಪಿ ಪೆಜರ ಕೃತಿಯಂ। ತಗುಳ್ದುಮವಂ ನುಡಿದು ಕೊರಲ ಸೆರೆ ಬಿಗಿವಿನೆಗಂ।
ಬಗುಳ್ದು ಬಟ್ಟ'ಕೆಡದಕಾಲೊಳ್ । ನುಗುಳ್ದು ಮನಮಂಮಗುಟ್ಟು ಮಿಗೆವ ದುಷ್ಕವಿ
ಕವಿಯೇ॥

ಇವನ ಗ್ರಂಥ

## ಅಶ್ವಶಾಸ್ತ್ರ.

ಇದು 16 ಅಧ್ಯಾಯಗಳಾಗಿ ಭಾಗಿಸಲ್ಪಟ್ಟಿದೆ; 888 ಪದ್ಯಗಳನ್ನು ಒಳಕೊಂಡಿದೆ. ಪದ್ಯಗಳು ಪ್ರಾಯಿಕವಾಗಿ ಕಂದಗಳಾಗಿವೆ. ಇದರಲ್ಲಿ ಸರ್ವಾಂಗ ಪರೀಕ್ಷೆ, ವರ್ಣ, ಸುಳಿ, ಹಲ್ಲಿನಿಂದ ವಯಸ್ಸನ್ನು ನಿರ್ಣಯಿಸುವುದು, ಹಯ ವಯೋಲಕ್ಷಣ, ಪೋಷಣವಿಧಿ, ಚಿಕಿತ್ಸೆ ಮೊದಲಾದ ವಿಷಯಗಳು ಹೇಳಿವೆ.

ಗ್ರಂಥಾವತಾರದಲ್ಲಿ ವಿಷ್ಣುಸ್ತುತಿ ಇದೆ. ಬಳಿಕ ಕವಿ ಶಿವ, ಬ್ರಹ್ಮ, ಸೂರ್ಯ, ಗಣಪತಿ, ಲಕ್ಷ್ಮಿ, ಮಹಿಷಾಸುರಮರ್ದಿನಿ ಇವರುಗಳನ್ನು ಸ್ಮರಿಸಿದ್ದಾನೆ.

**ತನ್ನ ಕವಿತಾಶಕ್ತಿಯನ್ನು ತೋರಿಸಲು ಈ ಗ್ರಂಥವನ್ನು ಪದ್ಯರೂಪವಾಗಿ ಬರೆದಂತೆ ಈ ಪದ್ಯದಲ್ಲಿ ಹೇಳಿದ್ದಾನೆ—**

ಕನ್ನಡಕವಿ ನಿಜಕವಿತೆಯ । ಬಿನ್ನಣಮಂ ಮೆಜ್ಜುವುದರಿದೆ ಪದ್ಯದೊಳದಱಂ ।
ಬಿನ್ನಣಮನಱಪಲೆಂದಾ ನೆನ್ನರ್ಥಿಯ ವಾಜಿಶಾಸ್ತ್ರಮಂ ವಿರಚಿಸುವೆಂ ॥

**ಅಧ್ಯಾಯಗಳ ಅಂತ್ಯದಲ್ಲಿ ಗ್ರಂಥಕ್ಕೆ ಚಂದ್ರಮತ ಎಂಬ ಹೆಸರು ಹೇಳಿದೆ.**

ಇದು ವೈದ್ಯಗ್ರಂಥವಾದರೂ ಬಂಧವು ಲಲಿತವಾಗಿದೆ. ಇದರಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ :—

ಅತಿದೂರಂ ಪಯಣಕ್ಕೆ ಜೇಂಟೆಗೆ ವಿನೋದಾರ್ಥಕ್ಕೆ ಸಂದಿಗ್ಧದೂ ।
ರ್ಜಿತಕಾರ್ಯಕ್ಕ ರಸಾಜರಕ್ಕ ಭಟರುಂ ಗಂಧೇಭಮುಂ ಸುತ್ತಿ ಮು ॥
ತ್ತಿ ಪುಱುಂಬಿರ್ದ ಪದಕ್ಕೆ ಚಿಂತಿತಮನೋವಾಕ್ಕಾಯಕರ್ಮಂಗಳೂ।
ರ್ಜಿತಮಪ್ಪಂತು ನಿಜಾಧಿಪಂಗೆ ತುರಗಂ ಮಾಟ್ಟಿಂಸುಮೋಪಾಯಮುಂ ॥ 1029 ॥

ಶ್ರೀಯಂ ಮೆಜ್ಜಿಯಲಾ ನೆಲನಂ। ಕಾಯಲಾ ಮನಮೆಯ್ದುವೆಡೆಯನೆಯ್ದಲ್ ಬಗೆಯಂ।
ಪಾಯಲ್ ಬಯಸುವೊಡಾಜಾ । ನೇಯತುರಂಗಮಮನೆಯ್ದಿ ಪೊರೆವುದು ಭೂಪಂ
॥ 1030 ॥

ವಾಜಿಯೆ ಮೊದಲಾವಿಜಯ । ಕ್ಕಾಜಿಯೊಳರಸಂಗೆ ಬುದ್ಧಿವಂತಂಗದಱಂ ।
ವಾಜಿಗಳನೆಯ್ದಿ ಪೊರೆವುದು । ಪೂಜಿಸುವುದು ವಿಜಯಲಕ್ಷ್ಮಿಯಂ ಬಯಸುವವಂ
॥ 1031 ॥

ತೆರೆಯಿಲ್ಲದೆ ಸೆರೆಯಿಲ್ಲದೆ । ನರೆಯಿಲ್ಲದೆ ಕೆಜ್ಜೆಯುವಾಗಿ ತೆಳ್ಳನೆ ಮೊನೆಯಾ ।
ಗಿರೆ ಕಿವಿಗಳೊಳಗೆ ಸುಣ್ಣಾ । ಗಿರೆ ಕಟಮುಂ ವಿಕಟಮಾಗದಿರೆ ತುರಿ ರುಭದಂ॥ 1032 ॥

ಉರಮುಂ ಲಲಾಟಪಟ್ಟಾಂ । ತರಮುಂ ವಿಸ್ತೀರ್ಣಮಾಗೆ ಕೆಲ್ಬಿಗಣ ಕಡೆವ ।
ಲ್ಲೆರಡುಮತಿಧವಳಮಾಗು । ತ್ತಿರೆ ಪಸ್ನೊಂದನೆಯ ತಿಂಗಳಭಿನವಚಂದ್ರಾ ॥ 1033 ॥

ಪುರಿವುದು ಕಡುಬಿಸಿಯಪ್ಪಂ । ತಿರೆ ಮಳಲಂ ನಾಂದ ನೀರೆಯೊಳ್ ಪೊಯ್ದುನಯಂ ।
ಬೆರಸಿರೆ ಸೇಕಂಗೆಯ್ದುದು । ತುರಗದ ಪೋಷಕ್ಕೆ ಮಳಲಸೇಕಂ ದಿವ್ಯಂ ॥ 1034 ॥

ಪಡುಗುಂ ಪೊರಳ್ದುಮೇಟ್ಟಿಂ । ಸಿಡಿನಿಡಿಯಕ್ಕುಂ ಬೆಮರ್ಗುಮುಮ್ಮಳಿಸುಗುಮಾ ।
ಗಡೆ ತಲೆಯಂ ಕೆಲ್ಬಿಗಿಟ್ಟಪು । ದಡಿಗಡಿಗೆ ಸುಭಿಕ್ಷಶಾಲೆ ಕೆರಳ್ದ ತುರಂಗಂ ॥ 1035 ॥

ಶೃಂಗಿಯ ಬೇರುಂ ವಾಣಿಜ । ದಿಂಗುಂ ಬೆಳ್ಳುಳ್ಳಿ ತಿಗಡೆ ಸ್ಕಂಧವಮಾ ಪಂ ।
ಚಾಂಗಮುಮುಂ ಸಮನಾಗಿ ತು। ರಂಗಕ್ಕೆಕ್ಕುವುದು ಸರ್ವಶೂಲಾಪಹರಂ ॥ 1036 ॥

ತುರಗಕ್ಕೆ ಲವ್ವಿ ಪೊಱಮಡ । ದಿರೆ ಪುಣಿಸೆಯ ಪಣ್ಣ ಬತ್ತಿಯೊಳ್ ಸ್ಕಂಧವಮಂ ।
ಬೆರಸಿ ಗುದನುಮಿದೊಳಿಡ ಬಾ । ಪುರಮಕ್ಕುಂ ಕಠಿನಮಾಗಿ ಬಿಗಿದಿರ್ದ ಮಲಂ॥1037॥

ಅರಿದಾಳಂ ಪೊಸಸುಣ್ಣಮಿಂದ್ರಯವೆಯಂ ಗಂಧೋತ್ಪಲಂ ದಾರು ಸಿಂ।
ಧುರಕಲ್ಲುಪ್ಪು ಕಟುತ್ರಯಂ ರಜನಿ ಸದ್ಯಃಕಾರಮೆಂಬಿಂತಿವಂ।
ಸರಿಗೊಂಡಾವಿನ ದುಗ್ಧದಿಂ ಸಮಸೆಗೊಂಡೆಳ್ಳೆಣ್ಣೆಯಿಂದಟ್ಟು ತಂ।
ದಿರಿಸಿಂಬಾಗಿರೆ ಪೂಸೆ ಕಜ್ಜ ಮೊದಲಾದರ್ಶವ್ರಣಂ ಪಿಂಗುಗುಂ ॥ 1038 ॥

ಬಾಲಂಬೀಸದು ನುಡಿಗಳ। ನಾಲಿಸದಾಹಾರಚಿಂತೆಗೆಯ್ಯದು ಕಿವಿಗಳ್।
ಕೀಲಿಸೆ ಕಂಪಿಸೆ ಜಾಸಿಸೆ। ಕಾಲಮುಖಪ್ರಾಪ್ತಿಯಕ್ಕುಮಭಿನವಚಂದ್ರಾ ॥ 1039॥

---

## ಜಿನಾಚಾರ್ಯ. ಸು. 1400.

**ಶೃಂಗಾರಕವಿಹಂಸರಾಜ**ನು (ಸು. 1600) ತನ್ನ **ರತ್ನಾಕರಾಧೀಶ್ವರ ಶತಕದಲ್ಲಿ** "ಪೊಂಗಿರ್ದರ್ಗಳನೇಮಿರತ್ನಕುಮುದೇಂದು ಶ್ರೀಜಿನಾಚಾರ್ಯ **ಕಾವ್ಯಂಗಳ್ ಮಾಡವೆ** ನೋಹಮಂ ಮುಕುತಿಯಂ" ಎಂಬ ಪದ್ಯಭಾಗದಲ್ಲಿ **ಈತನನ್ನು ಕನ್ನಡಕವಿಗಳಾದ ಅಗ್ಗಳ** (1189), **ನೇಮಿ** (ಸು. 1170), **ರನ್ನ** (993), **ಕುಮುದೇಂದು** (ಸು. 1275) ಇವರ ಗೋಷ್ಠಿಯಲ್ಲಿ ಸೇರಿಸಿರುವುದರಿಂದ ಇವನು ಕನ್ನಡದಲ್ಲೆ ಗ್ರಂಥಗಳನ್ನು ಬರೆದಿರಬೇಕು. ನಮಗೆ ಅವುವೂ ದೊರೆತಿಲ್ಲ. ಈತನು **ಶೃಂಗಾರಕವಿಹಂಸರಾಜನ** ಕಾಲಕ್ಕೆ ಹಿಂದೆ ಇದ್ದಿರಬೇಕೆಂಬುದು ಸ್ಪಷ್ಟವಾಗಿಯೇ ಇದೆ; ಸುಮಾರು 1400 ರಲ್ಲಿ ಇದ್ದಿರಬಹುದೆಂದು **ತೋರುತ್ತದೆ.**

# ಗ್ರಂಥಶುದ್ಧಿ.

| ಪುಟ | ಪಙ್ತಿ | ಅಶುದ್ಧ | ಶುದ್ಧ |
|---|---|---|---|
| 5 | 27 | ಭಾಸು | ಭಾಸುರ |
| 10 | 19 | ಕರ್ತ | ಕರ್ತೃ |
| 11 | 27 | *Ina* | *Ind* |
| 12 | 18 | ಅರ್ಹದ್ದಾಸ | ಅರ್ಹದ್ದಾಸ |
| 14 | 29 | *Ina* | *Ind* |
| 22 | 16 | 'ಭಟ್ಟಾಕಳಂಕನು' ಎಂಬುದರಿಂದ 'ಸ್ತುತಿಸಿದ್ದಾನೆ' ಎಂಬುದರವರೆಗೆ ಬಿಟ್ಟು ಬಿಡಬೇಕು. | |
| 30 | 2 | ಕನ್ನಡದಲ್ಲಿ ಆದಿಪುರಾಣ | ಆದಿಪುರಾಣ |
| 34 | 14 | ಕೊಂಡ | ಕೊಂಡು |
| 37 | 14 | ಬೆಳಿವರ್ಣಯ್ | ಬೆಳವರ್ಣಯ್ |
| 41 | 6 | ನಾದದಿಂ | ನಾದರದಿಂ |
| 50 | 23 | ಬಂದ | ಬಂದು |
| 51 | 1 | ಭವನಂ | ಭುವನಂ |
| 64 | 21 | ವೊಸ | ಪೊಸ |
| 71 | 3 | ನಂದಂಡವ | ವಂದಂದವ |
| 86 | 4 | ವಸ್ತ | ವಸ್ತು |
| 89 | 20 | ಶಾಸ್ತ | ಶಾಸ್ತ್ರ |
| 93 | 11 | ಕೃತಿಯರ್ಧಂ | ಕೃತಿಯರ್ಥಂ |
| 97 | 18 | ಯಶರುತಮರ್ | ಯಶರುತ್ತಮರ್ |
| 99 | 26 | ತೋರ | ತೋರು |
| 107 | 23 | ತೊದವು | ತೊಡವು |
| 108 | 26 | ಪೇಟ್ಟಾಡೆ | ಪೇಟಿಪ್ಪಾಡೆ |
| 109 | 26 | ಪುಗಿಸಿದುವಟ್ಟಿ | ಪುಗಿಸಿದುವಟ್ಟು |

110 ನಾಗಚಂದ್ರನು ಬಿಜಾಪುರದಲ್ಲಿರುವ ಒಂದು ಶಾಸನವನ್ನೂ ಬರೆದಿರಬಹುದೋ ಎಂಬ ಸಂದೇಹಕ್ಕೆ ಅವಕಾಶವಿರುವಂತೆ ತೋರುತ್ತದೆ. ಈ ಶಾಸನವು ಬಿಜಾಪುರದ ಮ್ಯೂಜಿಯಮಿನಲ್ಲಿ ಇಟ್ಟಿದೆ. ಇದಕ್ಕೆ A 23 ಎಂಬ ಅಂಕವನ್ನು ಕೊಟ್ಟಿದ್ದಾರೆ. ಈ ಶಾಸನದ ಕೆಲವು ಪದ್ಯಗಳಿಗೂ ನಾಗಚಂದ್ರನ ಗ್ರಂಥಗಳ ಪದ್ಯಗಳಿಗೂ ಬಹಳ ಮಟ್ಟಿಗೆ ಹೋಲಿಕೆಗಳು ಕಾಣುತ್ತವೆ. ಕೆಲವು ಉದಾಹರಣೆಗಳನ್ನು ಕೊಡುತ್ತೇವೆ:—

## ಶಾಸನದ 2 ನೆಯ ಪದ್ಯ.

ಪಿರಿದಾಯಾಸದಿನಿಸ್ಸೆಗಂ ತಳೆದ ಧಾತ್ರೀಭಾರಮಂ ವಿಕ್ರಮಾ।
ಭರಣಂಗೊಪ್ಪಿಸಿ ಬೇಟ್ಪುದಂ ಪಡೆದುವೆಂತಾನುಂ ದಿಶಾದಂತಿ ದಿ ॥
ಕ್ಕರಿಣೀಪೇಚಕಚುಂಬನೈಕಸುಖಮುಂ ಶೇಷೋರಗಂ ಭೋಗಿನೀ।
ಪರಿರಂಭೋತ್ಸವಮುಂ ಪುರಾಣಕಮಠಂ ನಿದ್ರಾಂಗನಾಸಂಗಮುಂ ॥

**ಪಂಪರಾಮಾಯಣ VI, 84.**

## ಶಾಸನದ 20 ನೆಯ ಪದ್ಯ.

ಆಕ್ಷ್ಮಾಣೀಧರವದುವುಂ (?)। ದಕ್ಷಿಣದಿಙ್ಮುಖದೊಳೆಸೆವ ಶಶಿಖಂಡದಪ್ಪೋ।
ಲೀಕ್ಷಣಸುಖಮಯಮಿರ್ಪುದು। ದಕ್ಷಿಣಭರತಕ್ಷಿತಿಖಂಡದಾರ್ಯಾಖಂಡಂ ॥

**ಪಂಪರಾಮಾಯಣ I, 45.**

## ಶಾಸನದ 1 ನೆಯ ಪದ್ಯ.

ಶ್ರೀಮಚ್ಚಳುಕ್ಯವಂಶಲ। ಲಾಮಂ ಚತುರುದಧಿಮೇಖಳಾಳಂಕೃತಧಾ।
ತ್ರೀಮಂಡಲಮಂ ವಿಕ್ರಮ। ಧಾಮಂ ನಿಜಭುಜಕೃಪಾಣದಿಂ ರಕ್ಷಿಸಿದಂ ॥

**ಪಂಪರಾಮಾಯಣ IX, 39; X, 77.**

ಈ ಶಾಸನದ ಪದ್ಯಗಳ ಸಂಖ್ಯೆ ಮೂವತ್ತು. ಇದರಲ್ಲಿ ಚಾಳುಕ್ಯರಾಜನಾದ ತ್ರಿಭುವನಮಲ್ಲ ವಿಕ್ರಮಾದಿತ್ಯನ (1076—1126) ಆಳಿಕೆಯಲ್ಲಿ ಭಾಯಿಲದಂಡನಾಯಕನು ಒಂದು ದೇವಸ್ಥಾನವನ್ನು ಕಟ್ಟಿಸಿದನೆಂದು ಹೇಳುವಂತೆ ತೋರುತ್ತದೆ.

ಇದರಿಂದ ಇನ್ನೂ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ :—

## ವಿಕ್ರಮಾದಿತ್ಯ.

ಪುದುವಿಲ್ಲಬ್ಬರಂ ನೆಲಕ್ಕೆ ಬೆರಗಿಲ್ಲಾರ್ಪಿಂಗೆ ಕೂರ್ಪಿಂಗೆ ಬೆ।
ಚ್ಚದರಿಲ್ಲಾಜ್ಞೆಗೆ ಸೀಮೆಯಿಲ್ಲ ತಳತಂತ್ರಕ್ಕಂತುಮಿಲ್ಲಾಹವ ॥
ಕ್ಕೆದಿರಿಲ್ಲೋಡಿದ ವೈರಿಗಳ್ಗೆ ಪವಣಿಲ್ಲಾರ್ದೆತ್ತೆ ಕೆಟ್ಟಿತ್ತಿ ಪೋ।
ಗದ ದುರ್ಗತ್ಯಯಮಿಲ್ಲದೇಂ ಪಿರಿಯನೋ ಚಾಳುಕ್ಯಚಕ್ರೇಶ್ವರಂ ॥

## ಮಲ್ಲಿಕಾರ್ಜುನ.

ಮಣಿವೆಸರಂ ಪಡೆದು ನಭೋ। ಮಣಿವೋಲ್ ಬೆಳಗುಗುಮೆ ಶೋಣಮಣಿಗಳ್ ಪೆಸರಿಂ।
ಪೆಣೆಕೆಗೆ ಕುಮಾರರೆನಿಸುವ। ರೆಣೆಯೆನಿಸುವರಾರೊ ಮಲ್ಲಿಕಾರ್ಜುನನೃಪನೊಳ್ ॥

## ಗೋವಿಂದ.

ಶ್ರೀವಧು ವಕ್ಷದೊಳಿರೆ ವಾಕ್। ಶ್ರೀವಧು ಮುಖಕಮಲದೊಳ್ವಿರಾಜಿಸೆ ವಿಜಯ।
ಶ್ರೀವಧು ನಿಲೆ ನಿಜಭುಜದೊಳ್। ಗೋವಿಂದಂ ಕೀರ್ತಿವಧುಗೆ ವಲ್ಲಭನಾದಂ ॥

## ಮೇರು.

ಶರಧಿಸರೋವರಮನಳಂ | ಕರಿಸಿದ ಧರಣೀಸರೋಜಕರ್ಣಿಕೆಯೆಂಬಂ |
ತಿರೆ ಕಪಿಳಕಿರಣದಿಂದಂ | ಬರಮಂ ಪಜ್ಜಳಿಸಿದತ್ತು ಮೇರುನಗೇಂದ್ರಂ ॥

## ನಾರಾಯಣ.

ಮನುಸೂತ್ರಕ್ಕೆಡೆಗೊಟ್ಟ ಮುತ್ತಿನಸರಂ ಚಾರಿತ್ರಮಾಳಾನಿತಂ |
ಬಿನಿಗಾಲೇಪನಸಾಂದ್ರಚಂದನರಸಂ ವಿಖ್ಯಾತವಿದ್ಯಾವಿಳಾ ॥
ನಿನಿಗಾಳೋಕನದರ್ಪಣಂ ಪ್ರ..ಲಕ್ಷ್ಮೀವಲ್ಲಭಂ ಶ್ರೀಪದ |
ಕ್ಕೆ ನಿವಾಸಂ ಮನಮೆಂದೊಡೀವೊಗಜಿಷ್ಣುನಾಂ ನಾರಾಯಣಖ್ಯಾತಿಯಂ॥

---

| ಪುಟ | ಪಙ್ಕ್ತಿ | ಅಶುದ್ಧ | ಶುದ್ಧ |
|---|---|---|---|
| 112 | 13 | ಕುದು | ಕುದುರೆ |
| 113 | ಅಭಿನವದಶಕುಮಾರಚರಿತೆಯನ್ನು ಬರೆದ ಚೌಂಡರಸನು (ಸು. 1300) ತಾನು "ಕವಿತಾವಿಳಾಸನೆ ವಲಂ" ಎಂದು ಹೇಳಿಕೊಳ್ಳುತ್ತಾನೆ (ಪುಟ 404) | | |
| 117 | 18 | ನೈಯಾಯಿಕಾಗ್ರೇಸಂ | ನೈಯಾಯಿಕಾಗ್ರೇಸರಂ |
| 120 | 19 | ಬಂದನೊಜಿಲ್ದ | ಬಂದನೊಜಿಲ್ದು |
| 122 | 7 | ಮಾದಲೊಳ್ | ಮೊದಲೊಳ್ |
| 126 | 16 | ವಸಮತಿ | ವಸುಮತಿ |
| 134 | 24 | ಮುಂತವರಂವ | ಮುಂತವರಂಮು |
| 135 | 10 | ಪೆರ್ಬದುಕೆ | ಪೆರ್ಬಡುಕೆ |
| 147 | 2 | ನಾಲು | ನಾಲ್ಕು |
| 148 | 11 | ಇಪೆ | ಇವೆ |
| 170 | 18 | ದೇವಸ್ಥಾನ | ದೇವಸ್ಥಾನ |
| 176 | 29 | ಹಾಜಿಸಿ | ಹಾಜಿಸಿ |
| ,, | ,, | ಬಿಟ್ಟ | ಬಿಟ್ಟು |
| 219 | 13 | ವನಲಕ್ಮಿ | ವನಲಕ್ಷ್ಮಿ |
| 225 | 22 | ನುತಿಸಿದನು | ನುತಿಸಿದನು'. |
| 233 | 14 | ತೋಳಿವೆಂಬಂ | ತೋಳಿವೆಂಬಂತೆ |

234 ಹರೀಶ್ವರನ ರಕ್ಷಾಶತಕದಲ್ಲಿ 101 ವೃತ್ತಗಳಿವೆ; ಪ್ರತಿ ವೃತ್ತವೂ "ಪಂಪಾಪುರದರಸ ವಿರೂಪಾಕ್ಷ ರಕ್ಷಿಪುದೆನ್ನಂ" ಎಂದು ಮುಗಿಯುತ್ತದೆ. ಈ ಶತಕವು ಭಕ್ತಿವೈರಾಗ್ಯಗಳನ್ನು ಬೋಧಿಸುತ್ತದೆ.

ಇದರಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಮನಮೆನ್ನಂ ದುರ್ವಿಕಾರಕ್ಕೆಟ್ಟಿದಪುದು ಮನಂ ಮಾನಮಂ ನುರ್ಗುಗುಟ್ಟು।
ತ್ತನಸುಂ ತಾಂ ವಹ್ನಿಯೊಳ್ ನೂಂಕಿದಪುದು ಮನವಿಮಾಮಾಯೆಯಂ ಬಿಟ್ಟು ನಮ್ಮಂ ॥
ನೆನೆಯಲ್ ತಾನೀಯದಯ್ಯೋ ಶಿವನೆ ಭವನೆ ಕಾರುಣ್ಯವಾರಾಶಿಯೆನ್ನೀ।
ಮನಮಂ ಸೈತಿಟ್ಟು ಪಂಪಾಪುರದರಸ ವಿರೂಪಾಕ್ಷ ರಕ್ಷಿಪ್ಪುದೆನ್ನಂ ॥
ನವೆದೆಂ ರೋಗಂಗಳಿಂದಂ ಸೆಡೆದೆನನುದಿನಂ ಸೇವೆಯಿಂದಂ ನಿರರ್ಥಂ।
ಸವೆದೆಂ ಕಾಮಂಗಳಿಂದಂ ಬಗೆ ಪರಿಭವದೊಳ್ ಬಿಂದೆನಾನಾಸೆಯಿಂದಂ ॥
ತವಿಲಾದೆಂ ಕೋಪದಿಂದಳ್ಕಿ ಪೆನತಿಮದದಿಂ ಮುಂದುಗೆಟ್ಟಿರ್ದಪೆಂ ಶಂ।
ಭುವೆ ನೀಲಗ್ರೀವ ಪಂಪಾಪುರದರಸ ವಿರೂಪಾಕ್ಷ ರಕ್ಷಿಪ್ಪುದೆನ್ನಂ ॥
ಇದನೊಲ್ಪೆಂ ದೈನ್ಯಮಂ ಸೂಡದೆ ಪರವಧುವಂ ಕೂಡದೇನೊಂದುಮಂ ಬೀ।
ಡದೆಯಾರಂ ಮಿಥ್ಯೆಯಿಂ ನೋಡದೆ ಪರಸುಖದೊಳ್ ಬಾಡದಾಚಾರದೊಳ್ ಕೋ ॥
ಡದೆ ವಿದ್ಯಾಗರ್ವದೊಳ್ ಕೂಡದೆ ಚಪಳತೆಯಿಂ ನೀಡದತ್ಯಾಸೆಯಂ ಮಾ।
ಡದೆ ಬಾಟ್ಪಂತಿತ್ತು ಪಂಪಾಪುರದರಸ ವಿರೂಪಾಕ್ಷ ರಕ್ಷಿಪ್ಪುದೆನ್ನಂ ॥

| ಪುಟ | ಪಙ್ತಿ | ಅಶುದ್ಧ | ಶುದ್ಧ |
|---|---|---|---|
| 238 | 24 | ವರ್ಷಿಷ | ದರ್ಪಿಷ್ಮ |
| 239 | 2 | ವರ್ಣನವಪ್ಪ | ವರ್ಣನಮಪ್ಪ |
| 246 | 17 | ಜಗದಾರಾಧ | ಜಗದಾರಾಧ್ಯ |
| 261 | 20 | ಲ್ಗಡುಕು | ಲ್ಗುಡುಕು |
| 276 | 18 | ಸುತ್ತಿಜೆದ | ಸುತ್ತಿಜಿದ |
| 279 | 22 | ಪದ್ಯಗಳನು | ಪದ್ಯಗಳನ್ನು |
| 287 | 26 | ಸಟಿಗಾಳಿ | ಸುಟಿಗಾಳಿ |
| 303 | 5 | ದಿಟಿಕೆಯ | ದಿಟಿಕೆಯೆ |
| ,, | 14 | ತೋಟಿಲ್ಲು | ತೊಟಿಲ್ಲು |
| 311 | 8 | ಬಂಬಲ್ಗಿಳ್ವವು | ಬಂಬಲ್ಗೊಳ್ವವು |
| 319 | 8 | ಕೂರ್ಬುಗೆಯಿಂ | ಕೊರ್ಬುಗೆಯಿಂ |
| 320 | 8 | ನಂದಳಿಗೆ ಲಕ್ಷ್ಮೀನಾರಣಪ್ಪನು ಶ್ರೀರಾಮಪಟ್ಟಾಭಿಷೇಕವನ್ನು ತನ್ನ ತಾಯಿಯಾದ ಮಹಾಲಕ್ಷ್ಮಿಯ ಹೆಸರಿನಲ್ಲಿ ಬರೆದಿದ್ದಾನೆ. 3 ನೆಯ ಸಂಪುಟದ 219 ನೆಯ ಪುಟವನ್ನು ನೋಡಿ. ರಾಮಪಟ್ಟಾಭಿಷೇಕ ಎಂಬುದು ಶ್ರೀರಾಮಪಟ್ಟಾಭಿಷೇಕ ಎಂದಿರಬೇಕು. | |
| 327 | 6 | ರಗರನಪ್ಪ | ಗರಗರನಪ್ಪ |
| ,, | 7 | ಹೂರಣಮನಿಸಿ | ಹೂರಣಮೆನಿಸಿ |
| 359 | 8 | ಎಕಾಳಿ | ಶುಕಾಳಿ |

| ಪುಟ | ಪಙ್ಕ್ತಿ | ಅಶುದ್ಧ | ಶುದ್ಧ |
|---|---|---|---|
| 371 | 18 | ವಿರೆಯಂಗ | ಎರೆಯಂಗ |
| 375 | 7 | ಸೀಲ್ಕೆ | ಸೀಲ್ಕೆ |
| 383 | 24 | ದರ್ಘ್ಯ | ದರ್ಘ್ಯ |
| 408 | 8 | ಚಾರಿತ್ರಸಾರದ ಟೀಕೆಯನ್ನು ಪ್ರಭಾಚಂದ್ರನು ಮಲಧಾರಿ ಲಲಿತಕೀರ್ತಿಯ ಶಿಷ್ಯ ಕಲ್ಯಾಣಕೀರ್ತಿಗೋಸ್ಕರ ಬರೆದಂತೆ ತಿಳಿಯುತ್ತದೆ. | |
| 408 | 10 | ಸಹಜಾತ | ಸಹಜಾತ್ಮ |
| 412 | 5 | ವೀರಹಿ | ವಿರಹಿ |
| ,, | 14 | ತೊಜಿಹಂ | ತೊಜಿಹಂ |
| 427 | 18 | ಧರ್ಮಪುರಾಣ | ಧರ್ಮನಾಥಪುರಾಣ |
| 430 | 18 | ತಜುಗಿದುವು | ತುಜುಗಿದುವು |
| 441 | 12 | ಬರಯುತ್ತೇವೆ | ಬರೆಯುತ್ತೇವೆ |
| ,, | 21 | ಮೊದವೆ | ಮೊಡವೆ |
| 445 | 28 | ಗ್ರಂಥವತಾರ | ಗ್ರಂಥಾವತಾರ |

## ದ್ವಿತೀಯ ಸಂಪುಟ

17 ವಾಗ್ಜಲ್ಲಕೇಪೈಣಿಕ ಎಂಬುದು ನೇಮಿಚಂದ್ರನ ಬಿರುದುಗಳಲ್ಲಿ ಒಂದು. ಈ ಚಂದ್ರಪ್ರಭಸ್ತುತಿ ಲೀಲಾವತಿಯಲ್ಲಿದೆ.

142 ತೊರವೆ ಎಂಬ ಗ್ರಾಮವು ಸೋಲಾಪುರದ ಜಿಲ್ಲೆಯಲ್ಲಿಲ್ಲ; ಬಿಜಾಪುರದ ಜಿಲ್ಲೆಯಲ್ಲಿದೆ.

## Extracts from
## Opinions of Scholars and the Press
## On Volume I of the Karnataka Kavicharite or
## Lives of Kannada Poets

The work on Kannada literature which is being published by my Assistant Mr R Narasimhachar, M A is the only one of the kind and of the greatest value for the history of the language It may be accepted as a standard authority and is well deserving of the utmost patronage and encouragement of the Governments of those countries in which the Kannada language prevails, as well as of the Universities of Madras, and Bombay.—*Mr. B Lewis Rice, C I E.*

I have read your introduction and looked into some pages of the book itself, with great interest; and I can sincerely congratulate you and your ollaborateur Mr S. G. Narasimhachar on the value of the work that you have turned out—*Dr J F, Fleet, C. I. E.*

I must congratulate you on the completion of what must have been a very heavy task, not without its own delight and reward—*Rev E W. Thompson, M. A.*

I am so glad to be able to congratulate you and your fellow-worker, Mr, S. G. Narasimhacharyar, on this excellant addition you have succeeded in making to Kanarese literature. It is clear in almost every page of the book that it must have cost you both enormous labour and thought in producing it Only those, that have done work of the kind with old manuscripts and unpublished material, can know how trying it must have been to collect the matter, to arrange it well, and to give it the chronological consistency you have so well succeeded in doing,—*Professor M. Rangacharya, M A.*

It is a most useful publication and must have involved immense labour, reading and research. Unless the Government set apart some money for bonuses for such work, I fear that very few would undertake such labour as you have done.—*Mr. M. Shama Rao, M. A.*

There are few persons who take to archeological and historical research This defect they have nobly supplied by this epoch-making work They have really done yeoman's service to the Kannadigas and Kannada literature by supplying them with a long-felt want The illustrative poetical passages have been skilfully selected Several wrong notions have been corrected.—*M R H Desapande, M A.*

I have read your *Kavicharite* more than three times and the more I read the greater is my admiration for it Surely that one book, even if there were nothing else, is enough to give you undying fame.—*Mr B Rama Rao, M. A., L L. B.*

The issue of this book, as the first volume of a series, the title of which means "Lives of Kannada or Kanarese Poets," inaugurates a scheme for exhibiting the history of Kanarese literature from the earliest time to which it can be traced back. Some studies in this line of research have been given to us by the Rev. F Kittel and by Mr. Rice. The present writers, however, aim at a much more exhaustive treatment, and, basing their work on various important collections of manuscripts and also on the inscriptions of Southern India as far as they have been exploited, they have made an excellent start: they have brought the matter in detail down to the end of the fourteenth century A D.

In compiling the present volume, they have succeeded in tracing out and bringing to light a variety of authors and works not previously known. In addition to that, and to the inclusion of many new facts about such writers and works as were already known, they claim to have established the following points. Mr. R. Narasimhachar had already, in the in-

troduction to his edition of the *Kavyavalokana,* published in 1903, brought out clearly the fact that there were two writers named Nagavarma; one belonging to the close of the tenth century, the other to a period about a hundred and fifty years later The authors now show that there were also two Gunavarmas and two Mangarasas They have adduced evidence that the literary activity among the Vira-Saivas or Lingayets began in the middle of the twelfth century, at an appreceably earlier time than had previously been supposed And they have shown that the poet Rudrabhatta, who was previously referred to the sixteenth century, flourished four centuries sooner. We hope that future researches by them may result in the discovery of works dating from before the time to which belongs the earliest Kanarese literary production that is at present known —*Indian Antiquary.*

The publication of the "Lives of Kannada Poets" is an event in the history of Oriental re-search in India, Its authors are to be congratulated on the work they have produced. Its importance is manifest when we remember that so far there has not been available to the literary public a proper guide to Kannada literature There has thus been for a considerable time past a real necessity for a scientifically written history of Kannada Literature, and the Messrs Narasimhachar have laid Oriental students and scholars under an obligation by the publication of the work they have now put forward Though the account before us runs to nearly 400 pages, we are only at the end of the 14th century after Christ. The poets are taken in chronological order, the only intelligible order in a work of this sort It is apparent on the face of it that the authors have not had an easy task Chronology is an idea foreign to earlier poets; nor are they much interested in adding details about their lives They were so far impersonal that they have lost themselves in their works. Hence the lives and times of these have had to be determined mainly from a close and painstaking study of inscriptions,

genealogies of kings, succession lists of *gurus*, numerous works on history and a large number of published and unpublished works in Kannada The authors have not only included many facts not known before, but have endeavoured to remove previous misconceptions about several authors and works, *Madras Mail.*

On the retirement of Mr. Lewis Rice the State was fortunate in securing the services of a local scholar of great ability and profound erudition, whose history of Kanarese Literature, recently published is a monument of research and a mine of information. If a similar work had been written on classical authors, it would have made a world-wide reputation —*Indian Spectator*

Messrs R Narasimhachar, M A and S G Narasimhachar have published the first volume of their Lives of Kannada Poets, over which they were known to have been spending years of patient labour and research. We must congratulate these great scholars on the valuable work they have brought out and as far as we are aware, this is a work of original research, which marks a new era in the literary history of modern Kannada The publication of the Lives of Kannada Poets is so refreshing that we are sure that genuine lovers of the Kannada language and literature will receive it with great exultation The present volume deals with about 200 Kannada poets and poetesses who flourished till about the 14th century As the authors have explained in their preface. the task of collecting facts about the lives of even famous poets is very great as the poets themselves have carefully eluded leaving any trace of their life except their works. The book is written in the form of the histories of English literature in a chronological order with the age and account of the poets and poetesses as far as ascertained, together with the list of their works and specimens of their thought and style. There is no doubt that a labour so vast as this extending over a period of 10 or 15 years has been one of pure love of literature and there could be no suitable recompense for his work except in the grat

itude of the Kannada people and their appreciation of the monumental results of the two celebrated Kannada scholars of the age

There are many interesting and startling facts unearthed concerning the extent and uses of the Kannada authorship and literature which greatly interest students of literature.—

*Mysore Standard.*

---

"ಕರ್ಣಾಟಕ ಕವಿಚರಿತೆ" ಎಂಬ ಒಂದು ಪುಸ್ತಕವನ್ನು ಗ್ರಂಥಕರ್ತರಾದ ಮ|| ರಾ|| ಆರ್. ನರಸಿಂಹಾಚಾರ್ ಎಂ. ಎ. ಅವರು ನಮಗೆ ಕಳುಹಿಸಿಕೊಟ್ಟಿರುವ ದಕ್ಕೆ ವಂದಿಸುತ್ತೇವೆ. ಇದು ಕರ್ಣಾಟಕದೇಶದಲ್ಲಿ ಆದಿಯಿಂದಲೂ ಇದ್ದ ಕವಿಗಳ ಚರಿತ್ರೆಯನ್ನೂ ಅವರ ಬರವಣಿಗೆಯ ಕ್ರಮವನ್ನೂ ತೋರಿಸುವ ಪುಸ್ತಕವಾಗಿರುವದು. ಇಂಥ ಉಪಯೋಗವಾದ ಪುಸ್ತಕವನ್ನು ಈವರೆಗೆ ಯಾರೂ ಹುಡುಕಿ ಒರೆಯಲಿಲ್ಲ. ಅನೇಕವರ್ಷಗಳಿಂದ ಶ್ರಮಪಟ್ಟು ಸಾವಿರಾರು ಗ್ರಂಥಗಳನ್ನು ಶೋಧಿಸಿ, ಪುರಾತನ ಗ್ರಂಥಕರ್ತರ ಚರಿತ್ರೆ ಮೊದಲಾದ ವಿಷಯಗಳನ್ನು ಹುಡುಕಿ ಈ ಹೊಸ ಪುಸ್ತಕವನ್ನು ಬರೆದದ್ದಕ್ಕೆ ಕರ್ನಾಟಕದೇಶದಲ್ಲಿ ಅಭಿಮಾನಿಗಳೆಲ್ಲಾ ಮ|| ರಾ|| ಆರ್. ನರಸಿಂಹಾಚಾರ್ ಮತ್ತು ಮ|| ರಾ|| ಎಸ್. ಜಿ. ನರಸಿಂಹಾಚಾರ್ ಎಂಬವರಿಗೆ ಬಹಳ ಕೃತಜ್ಞರಾಗಿರಬೇಕು. ಇವರು ೧೪ನೇ ಶತಮಾನದವರೆಗೆ ಇದ್ದ ಸುಮಾರು ೨೦೦ ಕವಿಗಳ ಹೆಸರು, ಅವರು ಹುಟ್ಟಿದ ಕಾಲ, ಅವರು ಬರೆದ ಗ್ರಂಥಗಳ ಹೆಸರು, ಬರವಣಿಗೆಯ ಸ್ವರೂಪ ಮೊದಲಾದವುಗಳನ್ನು ೪೦೦ ಪುಟಗಳುಳ್ಳ ಈ ಪುಸ್ತಕದಲ್ಲಿ ಅಡಕಮಾಡಿದ್ದಾರೆ. ಇದು ಮೊದಲನೇ ಭಾಗವು. ಮುಖ್ಯವಾಗಿ ದೇಶಾಭಿಮಾನದಿಂದಲೂ, ಕರ್ಣಾಟಕ ಭಾಷಾಭಿರುಚಿಯಿಂದಲೂ, ಸಾಹಸಪಟ್ಟು ಬರೆದ ಈ ಮುಖ್ಯಗ್ರಂಥವು ಬಹಜನ ಕರ್ನಾಟಕರಿಗೆ ಉಪಯೋಗವಾಗಿ ಇದುವರೆಗೆ ತಿಳಿಯದೆ ಗೂಢವಾಗಿದ್ದ ಬಹು ಸಂಗತಿಗಳನ್ನು ತಿಳಿಯಲಿಕ್ಕೆ ಅನುಕೂಲವಾಗಿದೆ ಎಂದು ಬಹು ಸಂತೋಷಪಡುತ್ತೇವೆ.

ನಡೆಗನ್ನಡ.

ಕವಿಗಳ ವಿಷಯದಲ್ಲಿ ಇದುವರೆಗಿದ್ದ ಹೆಸರಾಂತ ಉದ್ದಾಮ ಕವಿಗಳಾಗಿದ್ದರೂ ಅವರ ಹೆಸರುಕೂಡ ಅನೇಕರಿಗೆ ತಿಳಿದಿರಲಿಲ್ಲವೆಂಬ ಸಂಗತಿಯೂಪ್ರಸಿದ್ಧರಾದ ಕವಿಗಳಗ್ರಂಥಗಳಲ್ಲಿಯೂ ಕೆಲವು ಗ್ರಂಥದ ನಾಮಧೇಯವೂಕೂಡ ಜನಗಳಿಗೆ ಗೊತ್ತಾಗಿರಲಿಲ್ಲವೆಂಬ ಸಂಗತಿಯೂ ಇದರಲ್ಲಿ ಸ್ಪಷ್ಟವಾಗಿರುವುದು. ಹೀಗೆ ಇರತಕ್ಕ ಗ್ರಂಥವೆಲ್ಲವನ್ನೂ, ಆದ್ಯಂತವಾಗಿ ನೋಡುವುದೂ ಸರ್ವಜನರಿಗೂ ವೇದ್ಯವಾಗುವಂತೆ ಅವರವರ ಕಾಲಮುಂತಾದುವುಗಳನ್ನು ಸಮಂಜಸವಾಗಿರುವಂತೆ ನಿರ್ಧರಿಸುವುದೂಕೂಡ ಸಾಮಾನ್ಯವಾದ ಕಾರ್ಯವಲ್ಲವೆಂದು ಎಲ್ಲರೂ ಬಲ್ಲರು. ಇಂಥ ಗ್ರಂಥವನ್ನು ಕನ್ನಡದಲ್ಲಿ ಇದುವರೆಗೆ ಯಾರೂ ಬರೆದಿಲ್ಲ. ಆದ್ಯಂತವಾಗಿ ಈ ಗ್ರಂಥವನ್ನು ನೋಡಿದರೆ ಕರ್ಣಾಟಕ ಗ್ರಂಥಕಾರರು ಇಷ್ಟು ಜನರಿದ್ದರೆಂದಾಗಲಿ ಇಷ್ಟು ಗ್ರಂಥಗಳಿರುವುವೆಂದಾಗಲಿ ಗೊತ್ತಾಗಿರಲಿಲ್ಲವೆಂದೂ ಇದಕ್ಕಾಗಿ ಕರ್ಣಾಟಕ ಭಾಷಾಭಿಮಾನಿಗಳು ಕರ್ಣಾಟಕ ಕವಿಚರಿತ್ರಕಾರರ ವಿಷಯದಲ್ಲಿ ಕೃತಜ್ಞರಾಗಿರಬೇಕಾದುದು ಕರ್ತವ್ಯವಾಗಿರುವುದೆಂದೂ ಗುಣಗ್ರಾಹಿಗಳಾದ ಯಾರಿಗೂ ತೋರದಿರಲಾರದು.

ಧರೆಯೊಳಡಂಗೆ ರತ್ನನಿಕರಂ ತೆಗೆವುಬ್ಬುಗದೊಳಾ ರಸಾತಲಂ |
ಬರೆಗಮಗುಳ್ದು ಬಿನ್ನೆತಿದು ನುಣ್ಣೆತು ಸಗ್ಗೆತು ತೆಳ್ಳೆತೆಂಬಹೋ ||
ಪಿರಿದೆಸಿಪೆಲ್ಲಮಂ ತೆಗೆದು ಕಾಲಕೆ ತಕ್ಕವೊಲೋರಣಕ್ಕೆ ತಂ |
ದಿರಿಸಿ ಜನಕ್ಕೆ ತೋರ್ಪ ಮಣಿಗಾರರ ಜಾಣ್ಮೆಯನಾರೊ ಮೆಚ್ಚದರ್ ||
ಪಿರಿಯರೆಸಿಪ್ಪ ಪೇೞ್ದವಿಗಳಿಕ್ಕೇಮ ಪಾಯ್ತುರೆ ಕಾಲಜಕ್ರಮೀ !
ಧರೆಯೊಳ್ಪುರಾಳ್ದು ಮಾಸಿ ಮಸುಳ್ದುಂ ಸವೆದುಂ ನವೆದಿರ್ದುಕಾಣದಂ'
ತಿರೆ ಕಡಿಸ್ತೋದ ಕಬ್ಬಿಗರುಮುಂ ಸೆರೆ ಕಾಣಿಕುಮಿಾಚರಿತ್ರಮು |
ಚ್ಛರಿಯೆನೆ ಪೇೞ್ವುದೇಂ ಕವಿಗೆ ನೋಳ್ಪೊಡೆ ಕನ್ನಡಿಯಾಗದಿರ್ಕುಮೇ ||

ವಿದ್ಯಾದಾಯಿನಿ.

## EXTRACTS FROM OPINIONS ON VOL. II OF THE KARNATAKA-KAVICHARITE OR LIVES OF KANNADA POETS.

As I may claim to have had a hand in starting this line of inquiry, it is specially gratifying to find that it has been taken up with so much interest and ability. It is sad that the life was cut short of your most valuable collaborator and namesake, but the Kannada people have been placed under a deep debt of gratitude to you for resolving to carry on the work by yourself and bring it to a finish. It will open the eyes of the Kannadigas to the extensive literary treasures existing in their language of which there has been but little knowledge hitherto.

Mr. B. Lewis Rice, C.I.E.

---

It is a most admirable and valuable work. I can well realize the colossal labour of the task which fell upon your unaided shoulders in the midst of so much other work. But it is a *Puṇya* of the first class. I heartily congratulate you on the success that has attended your long and heavy labours.

Dr. L. D. Barnett.

---

Please accept my congratulations on your having been able to make available for the public so large an additional instalment of the harvest of your patriotic researches. Your work places all Kanarese-loving people in your debt.

Rev. E. P. Rice, B.A.

---

You have earned the gratitude of the living and the dead alike by your devoted labour of twenty-five years. You have rescued the memory of many whose works will never see the

light of day if their countrymen do not venture money on printing. You have prospected the field and if the mines are not worked, it will not be your fault. I have nothing but admiration for the scholarship, the perseverance, and the calm, critical judgment to which every page of the volume bears witness.

Mr. H. Narayana Rao, B.A., B.L.

---

From the contents of the book, I see the magnitude of the trouble that you have taken in completing this monumental work. You occupy, most deservedly, the highest place among those who have worked hard to enrich Kannada Literature.

Mr. M. Venkatakrishnaiya.

---

Your laborious work of the last twelve years will for all time mark you out as one of the greatest benefactors of the Kannada language, and therefore, of the Kannada people also.

Mr. B. Rama Rao, M.A., LL.B.

---

The immense amount of labour that your researches in the field of Kannada literature should have involved does credit to your patience and literary enthusiasm.

Rao Bahadur M. Shama Rao, M.A.

---

ತಾವು ಶ್ರೀವೈಷ್ಣವಮತಾವಲಂಬಿಗಳಾಗಿದ್ದರೂ ಶಾಸ್ತ್ರಶೋಧನ ಮೊದಲಾದ ಪ್ರಮುಖಕಾರ್ಯಗಳಲ್ಲಿ ತಾವು ತೋರಿಸಿರುವ ನಿಷ್ಪಕ್ಷಪಾತತೆಯ ಪೂಜ್ಯ ಬುದ್ಧಿಗೆ ನನ್ನ ಆನಂದವನ್ನು ತಮಗೆ ಮಾಲಿಕೆಹಾಕಿರುವೆನು. ತಾವು ಮಹತ್ತಾದ ಸರ್ಕಾರದ ಕೆಲಸದಲ್ಲಿ ಅತ್ಯಂತ ಮಹತ್ತರವಾದ ಈ ಘನ ಕಾರ್ಯವನ್ನು ಕೈಗೊಂಡು ಸುಮಂಗಲವಾಗಿ ಸಾಗಿಸಿರುವುದಕ್ಕೆ ನನ್ನ ಆಶ್ಚರ್ಯದ ತುರಾಯಿಯನ್ನು ಒಪ್ಪಿಸಿರುವೆನು. ಈ ವಿಷಯವಾಗಿ ಎಷ್ಟು ವರ್ಣಿಸಿದರೂ ಸಾಲದು. ನನ್ನ ಸಂತೋಷಕ್ಕೆ ಪಾರವೇ ಇಲ್ಲ. ನನ್ನಲ್ಲಿ ಸ್ವಭಾವಸಿದ್ಧವಾಗಿ ಈ ಸಂಬಂಧವಾಗಿ ಜನಿಸಿರುವ ಅತ್ಯಂತ ಸಂತೋಷ ಸಾಗರವನ್ನು ತಮಗೆ ಒಪ್ಪಿಸುವ ನನ್ನ

ಕೃತಜ್ಞತೆಯನ್ನು ಅಗಸ್ತ್ಯಹಸ್ತವೆಂಬ ತಮ್ಮ ಪವಿತ್ರೋದ್ದೇಶಕ್ಕೆ ಆಪೋಶನ ಮಾಡಿಸಿರುತ್ತೇನೆ.—ಎತ್ತಗದ ಮಠದ ದೊಡ್ಡರಾಮಾರಾಧ್ಯರು.

---

In 1907 appeared the first volume of this monumental work. The death of the admirable scholar who had collaborated with him in the first volume, the vastness of the field to be covered by him in this section of the work, and above all the heavy and continuous labours entailed by the researches of the Archaeological Department of the Mysore Government, furnish more than sufficient reasons for the lapse of time ; indeed, thay make us marvel how the author could find leisure and energy to write at all a book of such size and excellence. It sums up all that is known of some 350 poets who flourished in the period and wrote on all the branches of literature studied in India, and it gives copious extracts from their works. *Mens agitat molem:* the mass of information is clearly arranged and well indexed, the style lucid and concise.

Even where the written books have perished, inscriptions preserve the records of scores of otherwise forgotten scholars who could and did turn verses with all the niceties of classical style ; and it is one of the many excellent features of the present work that it has reaped from epigraphic sources a rich harvest of this fruit. Assuredly the work is a worthy record of that *Sobagina Suggi*, the literature of the Kannada land.

Journal of the Royal Asiatic Society
of Great Britain and Ireland.

---

Rao Bahadur R. A. Narasimhacharya has already contributed much to the resuscitation of the indigenous literature of the past. His latest work in this department is another volume on "The Lives of Kannada Poets" between the 15th and 17th

centuries, based on research into ancient manuscripts, coins and epigraphs of old. He has made the volume as exhaustive as possible, no poet of any repute being left out of account. The works of many poets not known before have been rescued and extracts from the writings are given in the volume. A critical introduction in English is prefixed to the work which is published under the auspices of the Mysore University and dedicated to H. H. the Maharaja of Mysore.

Madras Mail.

---

When the first volume of this great work was published some years ago, it was hailed as an event in the history of Oriental Research in India. The second volume must have entailed no less labour than its predecessor. No wonder if the historian has had to devote twenty-five years to this stupendous undertaking. The present volume mentions the names of about 370 men of letters and covers the period from 1400 to 1700 A.D. The Mysore University is to be sincerely congratulated on the publication of so valuable a mine of research.

Bombay Chronicle.

---

The publication of Part II of the "Lives of Kannada Poets" is a matter of congratulation no less to the Kannada public than to the accomplished author. The period covered by the present volume comprises the 15th, 16th and 17th centuries; and we are introduced to more than four hundred writers—men and also women. The volume before us bears impressive testimony to the vast erudition and careful industry of the author. It pleases us to note that such a valuable work has come to us with the *imprimatur* of the Mysore University.

Karnataka.

---

ಈ ದ್ವಿತೀಯ ಸಂಪುಟದಲ್ಲಿ ೧೫ನೆಯ ಶತಮಾನದಿಂದ ೧೭ನೆಯ ಶತಮಾನದವರೆಗೆ ಯಾವ ಯಾವ ಕವಿಶ್ರೇಷ್ಠರು ಯಾವ ಯಾವ ಗ್ರಂಥಗಳನ್ನು ಬರೆದಿದ್ದಾರೋ ಆ ವಿಷಯವನ್ನು ತಿಳಿಸಿ ಅವರ ಗ್ರಂಥಗಳಿಂದ ಅವರ ಶಕ್ತಿಯನ್ನು ಪ್ರಕಾಶಪಡಿಸುವ ಭಾಗಗಳನ್ನೂ ಉದಾಹರಿಸಿರುತ್ತಾರೆ. ಈ ಗ್ರಂಥವನ್ನು ರಚಿಸುವುದರಲ್ಲಿ ಮ॥ ರಾ॥ ನರಸಿಂಹಾಚಾರ್ಯರವರು ಬಹಳ ಮೆಹನತ್ತು ಮಾಡಿರುವರು. ಕನ್ನಡದ ಮೇಮೆಯನ್ನು ತಿಳಿದುಕೊಳ್ಳಲು ಆಪೇಕ್ಷೆಯುಳ್ಳವರಿಗೆ ಈ ಗ್ರಂಥವು ಅತ್ಯಂತ ಸಾಧವಾಗಿರುವುದು. ಈ ಗ್ರಂಥವನ್ನು ರಚಿಸಿದುದಕ್ಕಾಗಿ ಕನ್ನಡ ಭಾಷಾಭಿಮಾನಿಗಳೆಲ್ಲ ಮ॥ ನರಸಿಂಹಾಚಾರ್ಯರವರಿಗೆ ಕೃತಜ್ಞರಾಗಿರಬೇಕು.

**ಸಾಧ್ವಿ.**

---

ಮ॥ ರಾ॥ ನರಸಿಂಹಾಚಾರ್ಯರವರ ಭಾಷಾವಾತ್ಸಲ್ಯವು ಸ್ತೋತ್ರಾರ್ಹವಾದುದು. ಇಂಥ ಗ್ರಂಥಗಳನ್ನು ಬರೆಯುವುದಕ್ಕೆ ಅವರಿಗೆ ಇರುವ ಅನುಕೂಲ್ಯಗಳು ಮತ್ತಾವುಗಳು? ಅನುಕೂಲ್ಯಗಳಿದ್ದರೂ ಅವರ ದಾರ್ಢ್ಯವೂ ಸಾಮರ್ಥ್ಯವೂ ಇರಕ್ಕವರು ಎಷ್ಟು ಮಂದಿ? ತಮ್ಮ ಬಲಭುಜವಾಗಿದ್ದ ಎಸ್. ಜಿ. ನರಸಿಂಹಾಚಾರ್ಯರು ಸ್ವರ್ಗಸ್ಥರಾಗಿ ತಾವು ಏಕಬಾಹುಗಳಾಗಿದ್ದರೂ ವೃದ್ಧರಾಗಿದ್ದರೂ ಇರ ಸಹಾಯ ನಿರಪೇಕ್ಷರಾಗಿ ಇಂಥ ಮಹತ್ಕಾರ್ಯವನ್ನು ಕೈಗೊಂಡು ದೇಹವನ್ನು ತೇದು ಭಾಷಾಸೇವೆ ಮಾಡುತ್ತಿರುವುದನ್ನು ನೋಡಿ ಕನ್ನಡ ನಾಡೇ ತನ್ನಕೃತಜ್ಞತೆಯನ್ನು ವ್ಯಕ್ತಪಡಿಸುತ್ತಿದೆ. ನಮ್ಮ ಕರ್ಣಾಟಕ ಸಂಘದ ಮಾತೇನು—**ಪ್ರಬುದ್ಧ ಕರ್ಣಾಟಕ.**

---